Registered No M 3618

WANTED one Inspector, two Organisers and Agents in South Kanara. Apply stating previous experience to –
The Bombay Co-operative Insurance Society Ltd.,
Office for Mysore, Coorg & South Kanara
Asiatic Building Kempe Gowda Road
Bangalore City

ನವಯುಗ
NAVAYUGA

ಸಂಸ್ಥಾಪಕರು
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.
FOUNDER
SRI A B SHETTY, M. L. A.
Parliamentary Secretary Govt of Madras
ಸಂಪಾದಕ ಕೆ. ಕೆ. ಶೆಟ್ಟಿ.
ESTD 1921
ಸಹಸಂಪಾದಕ ಕೆ. ಎಚ್. ಶೆಟ್ಟಿ.

ಸಂಪುಟ ೧೯	ಉಡುಪಿ	VOL. 19
ಸಂಚಿಕೆ ೫	ಗುರುವಾರ, ತಾ 5-10-1939	No. 5

Be Ready—War necessitates demand for telegraphists etc Allowance, uniform, passage and quarter Prospectus on annas eight. Director, Royal Tel. and Ry Duties College, Bombay 11

'SERWELL'
RUBBER STAMPS
OFTEN APPEAL,
Since they surely serve well
YOU CAN HAVE ONE
On placing your order with our Representatives in your area
IF UNREPRESENTED
WRITE FOR AGENCY TERMS
Manufacturers —
on the approved list of the Govt of Mysore
YADIKE BROS.
MANUFACTURERS
REPRESENTATIVES
IMPORTERS & ENGINEERS,
BANGALORE CITY

ಚಂದಾದಾರರಲ್ಲಿ ವಿನಂತಿ

ಚಂದಾ ಅವಧಿ ಮುಗಿದವರಿಗೆಲ್ಲ ನೋಟೀಸು ಕೊಟ್ಟು ತಿಳಿಸಲಾಗಿದೆ. ಅವರು ತಮ್ಮ ಬಾಕಿ ಮೊತ್ತ ಚಾಲ್ತಿ ಚಂದಾಹಣವನ್ನು ದಯವಿಟ್ಟು ಕೂಡಲೇ ಕಳಿಸಿ ಕೊಡಬೇಕಾಗಿ ಅಪೇಕ್ಷಿಸಲಾಗುತ್ತದೆ. ಪತ್ರಿಕೆ ಬೇಡವಾದವರು ... ಚಂದಾಹಣ ಕಳಿಸಿ ನಮಗೆ ತಿಳಿಸಬೇಕು ... ಮಾಡಬೇಕು. ಮುಂದಕ್ಕೆ ಚಂದಾ ಹಣ ಮುಂಗಡವಾಗಿ ಕಳುಹಿಸದೆ ಪತ್ರಿಕೆ ಕಳಿಸಲು ಸಾಧ್ಯವಾಗಲಾರದೆಂದು ಈ ಮೂಲಕ ವಿನಂತಿಸಲಾಗುತ್ತದೆ. ಎಲ್ಲಾ ಚಂದಾದಾರರು ಈ ಕಡೆಗೆ ತಮ್ಮ ಗಮನವಿತ್ತು ತಮ್ಮ ಚಂದಾ ಹಣವನ್ನು ಕೂಡಲೇ ಕಳಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

—ಮ್ಯಾನೇಜರ್

ಅದ್ವಿತೀಯ ಗುಣಕಾರಿ
ಆಯುರ್ವೇದ ಶಾಸ್ತ್ರಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿಗುಟಿ
ಆಯುರ್ವೇದ ಋಷಿಮುಂದಿರದ ಆಧಾರಸ್ತಂಭ ... ಭಗವಾನ್ ಧಾನ್ವಂತರಿಯು ಲೋಕ ... ಅನುಗ್ರಹಿಸಿದ ಈ ಮಾತ್ರೆಗಳನ್ನು ... ನಿಮ್ಮ ದಿನನಿತ್ಯದ ಕೆಲಸಗಳನ್ನು ...
ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ ... ಅನುಭವಯುಕ್ತ ವನಸ್ಪತಿಗಳ ... ಪ್ರಸ್ತುತವಾದ ಈ ಗುಟಿಕೆಗಳನ್ನು ... ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಕಫ, ... ಸರ್ವತರದ ದೋಷಗಳನ್ನು ನಿವೃತ್ತಿ ... ಮಕ್ಕಳ ... ಉಪದ್ರವಗಳ ... ಅದ್ವಿತೀಯ ಗುಣಕಾರಿಯಾಗಿದೆ.
ಬೆಲೆ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500 ... 0 0, 1000, 9-0-0.
... 12ಮಾತ್ರೆ (...) ಗಳನ್ನು ಕಳುಹಿಸುತ್ತೇವೆ.
ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕುಂಜಾಲು
ಪೋಸ್ಟ್—ಬ್ರಹ್ಮಾವರ, ದ. ಕ.
... 1 ... ಬ್ರ... ನ್ಯಾಸ್ ಎಂಡ್ ... 2 ... 3 ... ಉಡುಪಿ.

HELP HIM to achievement!

The child is Father to the Man Yet "promise" is never fulfilled without care for the child's future health and happiness For parents whom sheer value is imperative a policy of the TROPICAL is the most effective future care
TROPICAL is helping thousands of families it will help yours too Write to-day!
TROPICAL
INSURANCE COMPANY LIMITED.
NEW DELHI.

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ನ್ಯೂ ಡೆಲ್ಲಿ.
ಪ್ರಗತಿಪರ ದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.
ಎಂ. ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.
ಆಥವಾ
ಕೆ. ರಾಮಮೂರ್ತಿ, ಎಂ. ಎ., ಬ್ರಾಂಚ್ ಸೆಕ್ರೆಟರಿ, ನಂ 160 ಮೌಂಟ್ ರೋಡ್, ಮದ್ರಾಸು.

ತುಳುನಾಡ್ ವೈದ್ಯಶಾಲೆ
ಉದಿಯಾವರ, ದ. ಕ.
ಕೊಟೆರಾ ಫಿಲ್ಸ್ ಕೊಲೆರಾ ರೋಗಕ್ಕೆ ರಾಮಬಾಣ ಔಷಧ
೧೦೦ ಮಾತ್ರೆಗಳಿಗೆ ರೂ 1—...—0.
ಭೈರವ ಮಾತ್ರೆಗಳು— ಚಾಳಿಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ
೧೦೦ ಮಾತ್ರೆಗಳಿಗೆ ರೂ 1—8—0
ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳುದೊರೆಯುತ್ತವೆ
ಯು. ಪಿ. ಮೋಸ್ಸ್, ಗೋಲ್ಡ್ ಮೆಡಲ್ಡ್ ಫಿಸಿಶಿಯನ್

ಇನ್ಕಮ್ ಟೇಕ್ಸ್ ಮತ್ತು ಮಾರಾಟ ಟೇಕ್ಸ್ ವ ಇತರ ವಿಕ್ರಯ ಟೇಕ್ಸ್‌ಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4 '39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟ್‌ಗಳಲ್ಲಿಯೂ ವ್ಯಾಪಾರಸ್ಥರು ತಿಳಿಯಬೇಕಾದ ತೊಡಕಿನ ವಿಷಯಗಳು ಅನೇಕ ಇವೆ ... ಮವಾದ ಜವಾಬ್ದಾರಿ ... ಅದರಿಂದ ತಯಾರಿಸಿದ ... ಸಮಯಗಳಲ್ಲಿ ಟೇಕ್ಸಿನ ಆಫೀಸರರಿಗೆ ... ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ... ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ... ಅನುಭವ ಪಡೆದು ... ಸಮಾಧಾನಪಡಿಸ ... ಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ... ಟೇಕ್ಸ್ ... ಸಂದರ್ಭಗಳಲ್ಲಿ ... ಟೇಕ್ಸ್ ಕೊಡಬೇಕಿಲ್ಲವೆಂದೂ ... ಗಬಹುದು. "ರಿಟರ್ನ್"ಕಳ್ಳಿಯಾಗಿ ... ಟ್ಟು ... 15ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

GET RICH
AND
PROSPEROUS
through Simple Means upheld and pursued by Millions.........!
WRITE NOW WITH STAMP —
K. S. Row,
Worli, BOMBAY.

ಕಂಬನಿ
ಮಿಸೆಸ್ ಬಿ. ಟಿ. ಜಿ. ಕೃಷ್ಣ
ಅವರ ಸಣ್ಣ ಕತೆಗಳ ಸಂಕಲನ.
ಶ್ರೀ. ಬೇಂದ್ರೆಯವರ ಮುನ್ನುಡಿ, ಶ್ರೀ. ದತ್ತಾತ್ರೇಯ ಅವರ 'ನಾನು ಕಂಡ ಗೌರಮ್ಮ' ಇವುಗಳೊಡನೆ.
ಬೆಲೆ ಒಂದು ರೂಪಾಯಿ.
ಶ್ರೀ ಬೇಂದ್ರೆಯವರು ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ
'ಈ ಕನ್ನಡದ ಕತೆಗಳು ಒಂದಿಲ್ಲೊಂದು ವಿಧದಿಂದ ಹೆಣ್ಣುಗಂಡಿನ ಜೀವನದ, ಅದರ ಭಂಗ–ದುರ್ಭಂಗಗಳ, ಅದರ ಪ್ರಣಯದ ... ಗಂಡಿನ ದೌರ್ಜನ್ಯ, ದಾರಿದ್ರ್ಯ ... ದೌರ್ಭಾಗ್ಯ, ಹೆಂಗಸಿನ ... ಸಮಾಜದ ... ಗಳ ಅಂತ ... ಕಥೆಗಳು ... ಹೃದಯ ... ಹೃದಯಬೋಧಕ ... ಗಿದ್ದಾವೆ.'
ಕತೆಗಾರ್ತಿಯ ಭಾವಚಿತ್ರವಿದೆ 'ಅಂಬಿಕಾತನಯದತ್ತ'ರ 'ತಂಗಿ ಗೌರಮ್ಮ' ಎಂಬ ಕವಿತೆ ಇದೆ.
ಮನೋಹರ ಗ್ರಂಥ ಭಾಂಡಾರ, ಧಾರವಾಡ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ — ನವಭಾರತ ಪುಸ್ತಕ ಭಂಡಾರ.

ಸರಸ್ವತಿ
(ಉತ್ತಮ ವರ್ಗದ ಸಚಿತ್ರ ಮಾಸಪತ್ರಿಕೆ)
ಹದಿನೆಂಟನೇ ವರ್ಷದ ವಿಶೇಷ ಸಂಚಿಕೆ ನವರಾತ್ರಿಯ ಹಬ್ಬದ ದಿನ ಪ್ರಕಟವಾಗುವುದು
ಪ್ರಸಿದ್ಧ ಲೇಖಕರ ಉತ್ತಮ ಲೇಖನಗಳಿವೆ
ಬೆಲೆ 4-0, ಅಕ್ಟೋಬರದಿಂದ ಚಂದಾದಾರರಾಗುವವರಿಗೆ ಉಚಿತ, ಏಜಂಟರಿಗೆ ...
ಸರಸ್ವತೀ ಕಾರ್ಯಾಲಯ,
ಬೆಂಗಳೂರು ಸಿಟಿ

THE ASIAN ASSURANCE COMPANY, LTD

ASIAN BUILDINGS - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
„ M. Shivarama Rao, Organizer, Puttur.

Or

Sri. J. A. PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,800/-. Paid up Capital: Rs. 1,82,100/-.

PRINCIPAL OFFICE: COURT ROAD, UDIPI.

OTHER OFFICES:

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively; Interest being payable on the 1st January & 1st July of every year.

For further particulars please address as call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗೂ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾಗಲಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆವಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಚ್ಯವನಪ್ರಾಶ ಲೇಹ ಇದು ಅತ್ಯಂತ ರಕ್ತವರ್ಧಕ ರಸಾಯನ. ಹಸಿವನ್ನು ಹೆಚ್ಚಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ ಉಬ್ಬಸ, ಖಾಸಶ್ವಾಸ, ಎದೆನೋವು ಇತ್ಯಾದಿಗಳಿಗೆ ದಿವ್ಯ ಔಷಧಿ.

ಪೌಂಡ್ ರೂ. 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವಿನ ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಉಡುಪಿ ಸಬ್‌ಏಜೆನ್ಸಿಯವರು —ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್‌ಏಜೆಂಟ್ಸ್ ಉಡುಪಿ

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ಎತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೮೬೪ ಪೇಜುಗಳು ಇರುವ ದೊಡ್ಡ ಪುಸ್ತಕ, ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ, ಮನೆಯಲ್ಲೇ ಈ ಪುಸ್ತಕ ಓದಿರಿ, ಇಂಗ್ಲೀಷ್ ಓದು ಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಬೆಲೆ ರೂ.೧॥

Western Swiss watch Co.
Book-Sellers, Post Box No. 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲಿ ಸರ್ವೋತ್ಕೃಷ್ಟವಾದುದು

ಮೈಸೂರು ಸೇಂಡಲ್ ಸೋಪು

ಜನಸಾಮಾನ್ಯರು ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

— ಜಾಹೀರಾತು —

ದರಗಳು

೧ ಪುಟಕ್ಕೆ ೧ ಸಲಕ್ಕೆ	ರೂ	೨೫
ಅರ್ಧ ಪುಟಕ್ಕೆ ೧ ಸಲಕ್ಕೆ	,,	೧೫
ಕಾಲು ಪುಟಕ್ಕೆ ೧ ಸಲಕ್ಕೆ	,,	೮
ಅರೆಕಾಲು ಪುಟಕ್ಕೆ ೧ ಸಲಕ್ಕೆ	,,	೫
ಇಂಚು ಕಲಮಿಗೆ ೧ ಸಲಕ್ಕೆ	,,	೧

ಕಾಯಂ ಜಾಹೀರಾತು ದರಗಳಿಗೆ ಬರೆಯಿರಿ

ವಾರ ಪತ್ರಿಕೆ

NAVAYUGA
ನವಯುಗ

Kanarese Weekly

—: ಚಂದಾ ವಿವರ :—

೧ ವರ್ಷಕ್ಕೆ	ರೂ	೩—೪—೦
೬ ತಿಂಗಳಿಗೆ	,,	೧—೧೨—೦
೩ ತಿಂಗಳಿಗೆ	,,	೧—೦—೦

ಚಂದಾ ಹಣವನ್ನು ಮುಂಗಡವಾಗಿ ಕಳಿಸಬೇಕಾಗಿದೆ

ಮಾದರಿ ಸಂಚಿಕೆಗೆ ಮೆನೇಜರರಿಗೆ ಬರೆಯಿರಿ

ಪೋಲಂಡಿನ ಪತನ

1½ ಮಿಲ್ಯ ಕಾಲಾಳು, 1 ಲಕ್ಷ ಉತ್ಕೃಷ್ಟ ಅಶ್ವಾರೋಹಿ ಸೇನೆ ಮತ್ತು 500 ವಿಮಾನಗಳಿದ್ದ ಪೋಲೆಂಡನ್ನು ಜರ್ಮನರು ಮೂರು ಪಕ್ಷದೊಳಗೆ ಸದೆಬಡಿಯಲು ಶಕ್ತರಾದರೆಂಬುದು ಅದೊಂದು ವಿಚಿತ್ರವೇ ಸರಿ. ಸೆಪ್ಟಂಬರ ತಾ 30ರಲ್ಲು, ಕೊನೆಯ ತನಕ ಪ್ರಾಣದ ಹಂಗು ತೊರೆದು ಕಾದಾಡಿದ ವಾರ್ಸೋ ಪಟ್ಟಣದ ಸೇನೆಯೂ ಶರಣಾಗತವಾಗಿರುವುದು ಪೂರ್ವದಲ್ಲಿ ರಸ್ಯವು ಧಾಳಿಯಿಟ್ಟು ಬೆಂಗಡೆಯಿಂದ ತಿವಿಯದಿದ್ದರೆ ಪೋಲಂಡು ಇನ್ನೂ ಸ್ವಲ್ಪ ದೀರ್ಘಕಾಲ ಕಾದಾಡುತ್ತಿತ್ತು. ಆದರೆ ಅದರ ಪರಾಜಯವಂತೂ ನಿಶ್ಚಯ. ಪೋಲಂಡಿನ ಸೈನಿಕರು ವೀರರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅವರನ್ನು ನಡೆಸುವ ವೀರ ಅಧಿಕಾರಿಗಳ ತೀವ್ರ ಅಭಾವದಿಂದ ಗೊಂದಲವಾಯಿತು. ಮುಖ್ಯವಾಗಿ ಟ್ಯಾಂಕ ಮೊದಲಾದ ಆಧುನಿಕ ಯುದ್ಧೋಪಕರಣಗಳ ಅಭಾವವು ಅಷ್ಟು ಬೇಗ ಪೋಲಂಡಿನ ಪತನವನ್ನುಂಟುಮಾಡಿತು. ಜರ್ಮನಿಯ ಯಾಂತ್ರಿಕ ಯುದ್ಧೋಪಕರಣಗಳ ಪ್ರಚಂಡ ಧಾಳಿಯನ್ನು ಸಮರಂಗದಲ್ಲಿ ತಡೆಗಟ್ಟಲಾರದೆ ಪೋಲಿಶ್ ಸೇನೆಯು ಧೃತಿಗೆಟ್ಟು ಸಂಘಟಿತ ವಿರೋಧದ ಶಕ್ತಿಯನ್ನೇ ಕಳಕೊಂಡಿತು. ಅಲ್ಲಲ್ಲಿ ಬೆದರಿಹೋದ ಸೇನೆಗೆ ಅನಂತರ ಏಕನಾಯಕತ್ವದ ಕಟ್ಟಳೆಗಾಗಲು ಸಾಧ್ಯವೇ ಆಗಲಿಲ್ಲ. ತಮ್ಮ ಗುಪ್ತ ಚರರ ಮೂಲಕ ಜರ್ಮನರು ಪೋಲಿಶ್ ಸೈನ್ಯಾಧಿಪತಿಗಳ ಚಲನವಲನವನ್ನು ಕಂಡುಕೊಂಡು ಹೋದಹೋದಲ್ಲಿ ಅವರ ಬೆನ್ನಟ್ಟಿ ಕಂಗೆಡಿಸಿದರು. ವಿಮಾನಗಳ ಎಡೆಬಿಡದ ಪ್ರಚಂಡ ಧಾಳಿಯಿಂದ ಸೇನಾಸಂಗ್ರಹವೇ ಅಸಾಧ್ಯವಾಯಿತು. ಸೈನ್ಯಾಧಿಕಾರಿಗಳು ಸೈನಿಕರನ್ನು ಅಪರಪ್ಪಕ್ಕೆ ಬಿಟ್ಟು ತಮ್ಮ ಮತ್ತು ಹೆಂಡತಿ ಮಕ್ಕಳ ರಕ್ಷಿತತೆಗೆ ಗಮನವಿತ್ತು ರಣರಂಗ ಬಿಟ್ಟೋಡಿದರು. ಇಷ್ಟರಲ್ಲಿ ರಸ್ಯವು ಧಾಳಿ ನಡೆಸಿ ಪೋಲಂಡಿನ ಪತನವನ್ನು ಸಂಪೂರ್ಣಗೊಳಿಸಿತು. ಇದರಿಂದಾಗಿ ಪೋಲಿಶ್ ಸೈನಿಕರಿಗೆ ಗೋರಿಲ್ಲ ಯುದ್ಧ ನಡೆಸಲಿಕ್ಕೂ ಅಸಾಧ್ಯವಾಗಿದೆ.

ಪೋಲಂಡಿನ ಗತಿಯೇನು?

1795ರಿಂದ ಪೋಲಂಡು ಮೂರು ಬಾರಿ ಸಲ ತನ್ನ ಸ್ವಾತಂತ್ರ್ಯವನ್ನು ಕಳಕೊಳ್ಳುತ್ತಾ ಪಡೆಯುತ್ತಾ ಬಂದಿದೆ. ಈ ಮೊದಲು ಮೂರು ಸಲ ಅದರ ವಿಭಜನೆಯಾಗಿದೆ. ಈಗಣ ವಿಭಜನೆಯು ನಾಲ್ಕನೆಯದು. ಮುಂದೆ ಪೋಲಂಡಿನ ಗತಿಯಾದರೂ ಏನು? ಒಂದು ವೇಳೆ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳು ಗೆದ್ದರೂ ಈ ಯುದ್ಧದ ಮೊದಲಿದ್ದಂತಹ ಪೋಲಂಡು ಎಂದೂ ಪುನರುಜ್ಜೀವಿತವಾಗಲಾರದು. ಜರ್ಮನಿ ರಸ್ಯಗಳು ಇದೀ ಪೋಲಂಡನ್ನೀಗ ಗೆದ್ದು ಪಾಲುಮಾಡಿಕೊಂಡಿರುವೆ. ಯಾವರೂ ತಮ್ಮ ರಾಜ್ಯಕ್ಕೆ ಈ ವರೆಗೆ ಸೇರಿಸಿಕೊಂಡಿಲ್ಲ. ಮಿತ್ರ ರಾಷ್ಟ್ರಗಳು ರಾಜಿಗೆ ಬಂಬಹುದೆಂಬ ಆಶೆಯನ್ನವು ಕಟ್ಟಿಕೊಂಡಿರುವಂತಿದೆ. ಇಂಗ್ಲೆಂಡು ಮತ್ತು ಫ್ರಾನ್ಸುಗಳು ಎಷ್ಟಕ್ಕೂ ರಾಜಿಗೆ ಸಿದ್ಧವಿಲ್ಲೆಂದಾದರೆ ಜರ್ಮನಿ ಮತ್ತು ರಸ್ಯಗಳು ತಮ್ಮ ರಾಜ್ಯದ ನೆರೆಯ ಪೋಲಂಡಿನ ಭಾಗವನ್ನು ತಾವೇ ಆಕ್ರಮಿಸಿ ಮಧ್ಯ ಪೋಲಂಡಿನಲ್ಲಿ ತಮ್ಮಾಧೀನದ ಪೋಲಿಶ್ ರಾಜ್ಯವನ್ನು ಸ್ಥಾಪಿಸಬಹುದು. ಇಷ್ಟರಲ್ಲೇ ರಸ್ಯವು ತಾನು ಗೆದ್ದ ಪ್ರದೇಶಗಳಲ್ಲಿ ಸೋವಿಯಟ್ ಪದ್ಧತಿಯ ರಾಜ್ಯಭಾರ ಕ್ರಮವನ್ನು ಜ್ಯಾರಿಗೆ ತಂದುಬಿಟ್ಟಿದೆ. ಶ್ರೀಮಂತರನ್ನೂ, ದೊಡ್ಡ ಜಮೀನ್ದಾರರನ್ನೂ ಸೆರೆಹಿಡಿದು ಭೂಮಿಯನ್ನು ಪ್ರತಿಯೊಬ್ಬ ಒಕ್ಕಲಿಗನಿಗೆ ನಾಲ್ಕು ಎಕರೆಗಳಂತೆ ವಿಭಾಗಿಸಿ ಕೊಟ್ಟಿದೆ. ಜನತೆಯು ಉತ್ಸಾಹದಿಂದ ರಸ್ಯನರನ್ನು ಸ್ವಾಗತೀಕರಿಸುತ್ತಿದೆ. ಆಂದಮೇಲೆ ಈ ಭಾಗವು ಪುನಃ ಪೋಲಂಡಿಗೆ ಸೇರುವ ಸಂಭವ ತೋರುವುದಿಲ್ಲ. ಜರ್ಮನಿಯು ನರೆಯ ಭಾಗವನ್ನು ಇದೇ ರೀತಿ ಜರ್ಮನ್ ನಾಝಿಗಳು ಮಾರ್ಪಡಿಸದಿರಲಾರರು. ಆದುದರಿಂದ ಮೊದಲಿನ ಪೋಲಂಡು ನಿರ್ಮಾಣವಾದಂತೆಯೇ ಸರಿ.

ವಾರದ ವಿಮರ್ಶೆ

ಯುದ್ಧದ ಮುಂದಿನ ಸ್ವರೂಪ

ಬ್ರಿಟಿಷ ಮತ್ತು ಫ್ರೆಂಚ್ ಸರಕಾರಗಳು ಎಂದೂ ನಿರೀಕ್ಷಿಸದ ವಿದ್ಯಮಾನಗಳೀಗ ನಡೆದು ಹೋಗಿವೆ. ಪೋಲಂಡು ಒಂದು ತಿಂಗಳೊಳಗೆ ನಿರ್ನಾಮವಾಗುವುದೆಂದು ಅವರೆಂದೂ ನೆನೆಸಿಲ್ಲ. ರಸ್ಯವು ಪೋಲಂಡಿನ ಮೇಲೆ ಧಾಳಿಯಿಟ್ಟು ಮಿತ್ರರಾಷ್ಟ್ರಗಳಿಗೆ ಬದ್ಧ ವಿರೋಧವಾದ ಧೋರಣೆ ವಹಿಸಿದೆ. ರಸ್ಯದ ಧೋರಣೆಯಿಂದಾಗಿ ಈಗ ಮೋಸ್ಕೋ ಪಟ್ಟಣವೇ ಮಧ್ಯ ಮತ್ತು ಪೂರ್ವ ಯುರೋಪಿನ ರಾಜನೈತಿಕ ವ್ಯವಹಾರ ಕೇಂದ್ರವಾಗಿ ಬಿಟ್ಟಿದೆ. ಜರ್ಮನಿಯೇ ರಸ್ಯವು ಹೇಳಿದಂತೆ ನಡೆಯಬೇಕಾಗಿದೆ. ಮಿತ್ರರಾಷ್ಟ್ರಗಳು ರಾಜಿಗೆ ಬರದಿದ್ದಲ್ಲಿ ಜರ್ಮನಿ ಮತ್ತು ರಸ್ಯಗಳು ಒಂದುಗೂಡಿ ಅವನ್ನು ವಿರೋಧಿಸುವವೋ ಎಂಬ ಸಂದೇಹಕ್ಕೀಗ ಆಸ್ಪದವಾಗಿದೆ. ಜರ್ಮನಿಗೆ ಕಚ್ಚಾ ಸಾಮಾನುಗಳ ಸರಬರಾಯಿ ಮಾಡುವ ಹೊಸ ಒಪ್ಪಂದವೊಂದನ್ನು ರಸ್ಯವು ಮಾಡಿರುತ್ತದೆ. ಮಧ್ಯ ಯುರೋಪಿನಲ್ಲೀಗ ಒಳಗಿಂದೊಳಗೆ ಯಾವ ರೀತಿಯ ಸೂತ್ರಚಾಲನೆ ನಡೆಯುತ್ತಿರುವುದೆಂದು ಹೇಳಬರುವುದಿಲ್ಲ. ರಸ್ಯವು ಜರ್ಮನಿಯ ಪಕ್ಷಕ್ಕೆ ಸೇರಿದರೂ, ಮಿತ್ರರಾಷ್ಟ್ರಗಳು ಪೋಲಂಡಿನ ವಿಭಜನೆಯನ್ನೊಪ್ಪಿ ಎಂದೂ ರಾಜಿಮಾಡಿಕೊಳ್ಳಲಾರವು. ಅಂದಮೇಲೆ ದೀರ್ಘಕಾಲದ ವರೆಗಣ ಭಯಂಕರ ಯುದ್ಧವು ನಿಶ್ಚಯವೆಂದೇ ಹೇಳಬಹುದು. ಇದರ ಪರಿಣಾಮವೇನಾಗುವುದೆಂದು ಹೇಳಬರುವುದಿಲ್ಲ. ಹಿಟ್ಲರ್‌ಶಾಹಿಯನ್ನು ನಿರ್ನಾಮಗೊಳಿಸಿಯೇ ಸಿದ್ಧವೆಂದು ಮಿತ್ರರಾಷ್ಟ್ರಗಳು ಪಣ ಹಿಡಿದು ಭಯಂಕರ ಹೋರಾಟವು ಹೆಚ್ಚು ಸಮಯ ನಡೆದರೆ ಬಹುತೇಕ ಯುರೋಪಿನ ಎಲ್ಲಾ ರಾಷ್ಟ್ರಗಳೂ ಅದಕ್ಕೆ ಸೆಳೆಯಲ್ಪಡದಿರಲಾರವು. ಜರ್ಮನಿಯು ರಸ್ಯದ ಸಹಾಯದಿಂದ ಮಧ್ಯಯುರೋಪು, ಬಾಲ್ಕನ್ ಮತ್ತು ಬಾಲ್ಟಿಕ್ ರಾಜ್ಯಗಳನ್ನು ಒಂದುಗೂಡಿಸಿ ಪ್ರತ್ಯೇಕವಾದೊಂದು ರಾಷ್ಟ್ರಕೂಟವನ್ನೇ ಸ್ಥಾಪಿಸಿ ಇಂಗ್ಲೆಂಡ್ ಮತ್ತು ಪ್ರಾನ್ಸುಗಳನ್ನು ಮೂಲೆಗೊತ್ತುವ ಹಂಚಿಕೆ ನಡೆಸುತ್ತಿರುವತಿಂದೆ. ರಸ್ಯಾ, ಇಟೆಲಿಗಳು ಜರ್ಮನಿಯೊಂದಿಗೆ ಸೇರಿದರೆ ಹಂಗೇರಿ, ಯುಗೋಸ್ಲಾವಿಯ, ಬುಲ್ಗೇರಿಯ, ಗ್ರೀಸ್, ಟರ್ಕಿ, ರುಮೇನಿಯ, ಲಿಥುವಾನಿಯ, ಲಟೇವಿಯ, ಲಿಸ್ಟೋನಿಯ ಮೊದಲಾದ ರಾಜ್ಯಗಳು ತಟಸ್ಥವಾಗಿರಲು ಸಾಧ್ಯವೇ ಇಲ್ಲ. ಆಗ ಇಂಗ್ಲೆಂಡ್ ಮತ್ತು ಫ್ರಾನ್ಸುಗಳೆರಡೇ ಈ ರಾಷ್ಟ್ರಗಳನ್ನೆಲ್ಲಾ ವಿರೋಧಿಸಬೇಕಾಗುವುದು. ಬೆಲ್ಜಿಯಮ್ ಹೊಲ್ಲೆಂಡ್ ಮೊದಲಾದ ರಾಜ್ಯಗಳನ್ನೂ ಜರ್ಮನಿಯು ಸದೆಬಡಿದು ಫ್ರಾನ್ಸಿನ ಮೇಲೆ ಧಾಳಿ ನಡೆಸಲು ಮುಂದಾಗಬಹುದು. ಅಮೇರಿಕವು ಈ ಸಲ ಮಿತ್ರರಾಷ್ಟ್ರಗಳಿಗೆ ಸಹಾಯಮಾಡುವ ಹಾಗಿಲ್ಲ. ಜಪಾನು ತಟಸ್ಥ ನಿಂತು ಚೈನದ ಧಾಳಿಯನ್ನೇ ಮುಂದೊತ್ತಬಹುದು. ಇಂತಹ ಪರಿಸ್ಥಿತಿಯಲ್ಲಿ ಮಿತ್ರರಾಷ್ಟ್ರಗಳು ಜಯಶೀಲವಾಗುವುದು ಬಹಳ ಕಷ್ಟವಿದೆ. ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಅದೃಷ್ಟವು ಹೇಗಾಗುವುದೆನ್ನಬರುವುದಿಲ್ಲ. ಅಂತೂ ಮಿತ್ರರಾಷ್ಟ್ರಗಳೀಗ ದೊಡ್ಡ ಸಂದುಕಟ್ಟಿನಲ್ಲಿ ಸಿಕ್ಕಿಬಿದ್ದಿರುತ್ತವೆ. ಪಶ್ಚಿಮ ರಣರಂಗದಲ್ಲಿ ಜರ್ಮನಿಯ ಕೋಟೆಗಳನ್ನು ಭೇದಿಸಿ, ಸೇನೆಯನ್ನು ಪರಾಜಯಗೊಳಿಸಿ, ನೌಕಾ ಮತ್ತು ವಿಮಾನಧಾಳಿಯಿಂದ ಜನತೆಯನ್ನು ಧೃತಿಗೆಡಿಸಿ ತೀವ್ರ ಅತೃಪ್ತಿ ಹುಟ್ಟಿಸಿ ಮುಂದೊತ್ತಿ ನಾಝಿಗಳನ್ನು ಶೀಘ್ರವಾಗಿ ಬಗ್ಗುಬಡೆಯಲು ಶಕ್ತರಾದರೆ ಮಿತ್ರರಾಷ್ಟ್ರಗಳ ಉದ್ದೇಶವು ನೆರವೇರಬಹುದು. ಅದು ಎಷ್ಟರ ಮಟ್ಟಿಗೆ ಸಾಧ್ಯವೆಂದು ಹೇಳಬರುವುದಿಲ್ಲ.

ಅಮೇರಿಕದ ಕಠಿಣ ತಾಟಸ್ಥ್ಯ

ಕಳೆದ ಮಹಾಯುದ್ಧದಲ್ಲಿ ಅಮೆರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ಭಾಗವಹಿಸಿ ಕೈ ಸುಟ್ಟುಕೊಂಡಿದೆ. ಆದುದರಿಂದ ಈ ಸಲ ಅದರ ಗೊಡವೆಯೇ ಬೇಡವೆಂಬ ತಾಟಸ್ಥ್ಯದ ಧೋರಣೆ ವಹಿಸಿದೆ. ಯಾವ ರೀತಿಯಲ್ಲಾದರೂ ತಾನು ಯುದ್ಧಕ್ಕೆ ಸೆಳೆಯಲ್ಪಡದಂತೆ ಮುಂಜಾಗ್ರತೆ ತೆಗೆದುಕೊ

SAVINGS & SPENDING

Every Rupee that you save adds materially to your present wealth for the satisfaction of a future want, while every Rupee that is spent leaves you poorer to that extent. Life's stormy voyage is a smooth sailing only for those who know this difference between **SAVING & SPENDING** and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd] (Incorporated in British India) [1925

Head Office—**UDIPI, (S India).**

THE ASIAN ASSURANCE COMPANY, LTD.

ASIAN BUILDINGS - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,320
1938	3,61,56,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
„ M. Shivarama Rao, Organizer, Puttur.

Or

Sri. J. A. PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,800/-. Paid up Capital: Rs. 1,82,100/-.

PRINCIPAL OFFICE. COURT ROAD, UDIPI.

OTHER OFFICES:

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively; Interest being payable on the 1st January & 1st July of every year.

For further particulars please address as call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ದಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪತ್ತು ವರುಷ ನಮ್ಮ ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಜೀಯ ಟ್ರೇಡ್‌ಮಾರ್ಕುಗಳು, ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸವಾಗಿದೆ.

ಅಮೃತಾಂಜನ ದಿಪೋವಿನ ತ್ರಿವರ್ಣದ "ರೈಸಿಂಗ್ ಸನ್"

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪುಷ್ಟಿಕರ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಖಾಸಕ್ಷಯ ಎಂದಿವುಗಳಿಗೆ ದಿವ್ಯ ಔಷಧಿ.

ಪೌಂಡ್ ರೂ. 2-8-0, ½ ಪೌಂಡಿಗೆ ರೂ. 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನುಭವಯುಕ್ತ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಬಿಟ್ಟಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು. ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲುಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— ಯಂ. ಗಣಪಯ್ಯ ಎಂಡ್ ಸನ್ಸ್,

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.

ಉಡುಪಿ ಸ್ವೀಕೃತದಾರರು—ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್‌ಏಜಂಟ್ಸ್ ಉಡುಪಿ.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ಪ್ರಕಟಿಸಿಲ್ಲ. ಐದು ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು. ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲ ಪ್ರತಿಯೊಬ್ಬರೂ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು. ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿ, ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಬೆಲೆ ರೂ. 1-8-0!!

Western Swiss watch Co.
Book-Sellers, Post Box No. 68
G. P. O. MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68. ಮದರಾಸ್

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳೆಲ್ಲಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

ಜಾಹೀರಾತು ದರಗಳು.

೧ ಪುಟಕ್ಕೆ ೧ ಸಲಕ್ಕೆ	ರೂ	೨೫
ಅರ್ಧ ಪುಟಕ್ಕೆ ೧ ಸಲಕ್ಕೆ	,,	೧೫
ಕಾಲು ಪುಟಕ್ಕೆ ೧ ಸಲಕ್ಕೆ	,,	೮
ಅರೆಕಾಲು ಪುಟಕ್ಕೆ ೧ ಸಲಕ್ಕೆ	,,	೫
ಇಂಚು ಅಲಮಿಗೆ ೧ ಸಲಕ್ಕೆ	,,	೧

ಕಾಯಂ ಜಾಹೀರಾತು ದರಗಳಿಗೆ ಬರೆಯಿರಿ :

ವಾರ ಪತ್ರಿಕೆ

NAVAYUGA
ನವಯುಗ

Kanarese Weekly

: ಚಂದಾ ವಿವರ :

೧ ವರ್ಷಕ್ಕೆ	ರೂ. ೩—೪—೦
೬ ತಿಂಗಳಿಗೆ	,, ೧—೧೨—೦
೩ ತಿಂಗಳಿಗೆ	,, ೧—೦—೦

ಚಂದಾ ಹಣವನ್ನು ಮುಂಗಡವಾಗಿ ಕಳಿಸಬೇಕಾಗಿದೆ

ಮಾದರಿ ಸಂಚಿಕೆಗೆ ಮೆನೇಜರರಿಗೆ ಬರೆಯಿರಿ.

ವಾರದ ವಿಮರ್ಶೆ

ಪೋಲಂಡಿನ ಪತನ

1½ ಮಿಲ್ಯ ಕಾಲಾಳು, 1 ಲಕ್ಷ ಉತ್ಕೃಷ್ಟ ಅಶ್ವಾರೋಹಿ ಸೇನೆ ಮತ್ತು 500 ವಿಮಾನಗಳಿದ್ದ ಪೋಲೆಂಡನ್ನು ಜರ್ಮನರು ಒಂದು ಪಕ್ಷದೊಳಗೆ ಸದೆಬಡಿಯಲು ಶಕ್ತರಾದರೆಂಬುದು ಅದೊಂದು ವಿಚಿತ್ರವೇ ಸರಿ. ಸೆಪ್ಟಂಬರ ತಾ 30ರಲ್ಲಿ, ಕೊನೆಯುಸಿರ ಪ್ರಾಣದ ಹಂಗು ತೊರೆದು ಕಾದಾಡಿದ ವಾರ್ಸೋ ಪಟ್ಟಣದ ಸೇನೆಯೂ ಶರಣಾಗತವಾಗಿರುವುದು ಪೂರ್ವದಲ್ಲಿ ರಸ್ಯವು ಧಾಳಿಯಿಟ್ಟು ಬೆಂಗಡೆಯಿಂದ ತಿವಿಯದಿದ್ದರೆ ಪೋಲಂಡು ಇನ್ನೂ ಸ್ವಲ್ಪ ದೀರ್ಘಕಾಲ ಕಾದಾಡುತ್ತಿತ್ತು. ಆದರೆ ಅದರ ಪರಾಜಯವಂತೂ ನಿಶ್ಚಯ. ಪೋಲಂಡಿನ ಸೈನಿಕರು ವೀರರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅವರನ್ನು ನಡಿಸುವ ವೀರ ಅಧಿಕಾರಿಗಳ ತೀವ್ರ ಅಭಾವದಿಂದ ಗೊಂದಲವಾಯಿತು ಮುಖ್ಯವಾಗಿ ಟಾಂಕಿ ಮೊದಲಾದ ಆಧುನಿಕ ಯುದ್ಧೋಪಕರಣಗಳ ಅಭಾವವು ಇಷ್ಟು ಬೇಗ ಪೋಲಂಡಿನ ಪತನವನ್ನುಂಟುಮಾಡಿತು. ಜರ್ಮನಿಯ ಯಾಂತ್ರಿಕ ಯುದ್ಧೋಪಕರಣಗಳ ಪ್ರಚಂಡ ಧಾಳಿಯನ್ನು ಸಮರಂಗದಲ್ಲಿ ತಡೆಗಟ್ಟಲಾರದೆ ಪೋಲೀಶ್ ಸೇನೆಯು ಧೃತಿಗೆಟ್ಟು ಸಂಘಟಿತ ವಿರೋಧದ ಶಕ್ತಿಯನ್ನೇ ಕಳಕೊಂಡಿತು ಅಲ್ಲಲ್ಲಿ ಚೆದರಿಹೋದ ಸೇನೆಗೆ ಅನಂತರ ಏಕನಾಯಕತ್ವದ ಕಟ್ಟಳೆಗಳಾಗಲಿ ಸಾಧ್ಯವೇ ಆಗಲಿಲ್ಲ ತಮ್ಮ ಗುಪ್ತ ಚರರ ಮೂಲಕ ಜರ್ಮನರು ಪೋಲಿಶ್ ಸೈನ್ಯಾಧಿಪತಿಗಳ ಚಲನವಲನವನ್ನು ಕಂಡುಕೊಂಡು ಹೋದಹೋದಲ್ಲಿ ಅವರ ಬೆನ್ನಟ್ಟಿ ಕಂಗೆಡಿಸಿದರು ವಿಮಾನಗಳ ಎಡೆಬಿಡದ ಪ್ರಚಂಡ ಧಾಳಿಯಿಂದ ಸೈನ್ಯಸಂಗ್ರಹವೇ ಅಸಾಧ್ಯವಾಯಿತು. ಸೈನ್ಯಾಧಿಕಾರಿಗಳು ಸೈನಿಕರನ್ನು ಅವರಷ್ಟಕ್ಕೇ ಬಿಟ್ಟು ತಮ್ಮ ಮತ್ತು ಹೆಂಡತಿ ಮಕ್ಕಳ ರಕ್ಷಿತತೆಗೆ ಗಮನವಿತ್ತು ರಣರಂಗ ಬಿಟ್ಟೋಡಿದರು. ಇಷ್ಟರಲ್ಲಿ ರಸ್ಯವು ಧಾಳಿ ಮಾಡಿ ಪೋಲಂಡಿನ ಪತನವನ್ನು ಸಂಪೂರ್ಣಗೊಳಿಸಿತು. ಇದರಿಂದಾಗಿ ಪೋಲಿಶ್ ಸೈನಿಕರಿಗೆ ಗೋರಿಲ್ಲ ಯುದ್ಧ ನಡಿಸಲಿಕ್ಕೂ ಅಸಾಧ್ಯವಾಗಿದೆ.

ಪೋಲಂಡಿನ ಗತಿಯೇನು?

1795ರಿಂದ ಪೋಲಂಡು ಮೂರು ನಾಲ್ಕು ಸಲ ತನ್ನ ಸ್ವಾತಂತ್ರ್ಯವನ್ನು ಕಳಕೊಳ್ಳುತ್ತಾ ಪಡೆಯುತ್ತಾ ಬಂದಿದೆ. ಈ ಮೊದಲು ಮೂರು ಸಲ ಅದರ ವಿಭಜನೆಯಾಗಿದೆ, ಈಗಿನ ವಿಭಜನೆಯು ನಾಲ್ಕನೆಯದು ಮುಂದೆ ಪೋಲಂಡಿನ ಗತಿಯಾದರೂ ಏನು? ಒಂದು ವೇಳೆ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳು ಗೆದ್ದರೂ ಈ ಯುದ್ಧದ ಮೊದಲಿದ್ದಂತಹ ಪೋಲಂಡು ಎಂದೂ ಪುನರುಜ್ಜೀವಿತವಾಗಲಾರದು. ಜರ್ಮನಿ, ರಸ್ಯಗಳು ಇದೀಗ ಪೋಲಂಡನ್ನೀಗ ಗೆದ್ದು ಪಾಲುಮಾಡಿಕೊಂಡಿರುವ ಭಾಗವನ್ನು ಯಾವರೂ ತಮ್ಮ ರಾಜ್ಯಕ್ಕೆ ಈ ವರೆಗೆ ಸೇರಿಸಿಕೊಂಡಿಲ್ಲ. ಮಿತ್ರ ರಾಷ್ಟ್ರಗಳು ರಾಜಿಗೆ ಬರಬಹುದೆಂಬ ಆಶೆಯನ್ನವು ಕಟ್ಟಿಕೊಂಡಿರುವಂತಿದೆ ಇಂಗ್ಲಂಡು ಮತ್ತು ಫ್ರಾನ್ಸುಗಳು ಎಷ್ಟಕ್ಕೂ ರಾಜಿಗೆ ಸಿದ್ಧವಿಲ್ಲದಿದ್ದರೆ ಜರ್ಮನಿ ಮತ್ತು ರಸ್ಯಗಳು ತಮ್ಮ ರಾಜ್ಯದ ನಡೆಯ ಪೋಲಂಡಿನ ಭಾಗವನ್ನು ತಾವೇ ಆಕ್ರಮಿಸಿ ಮಧ್ಯ ಪೋಲಂಡಿನಲ್ಲಿ ತಮ್ಮಾಧೀನದ ಪೋಲಿಶ್ ರಾಜ್ಯವನ್ನು ಸ್ಥಾಪಿಸಬಹುದು ಇಷ್ಟರಲ್ಲೇ ರಸ್ಯವು ತಾನು ಗೆದ್ದ ಪ್ರದೇಶಗಳಲ್ಲಿ ಸೋವಿಯೆಟ್ ಪದ್ಧತಿಯ ರಾಜ್ಯಭಾರ ಕ್ರಮವನ್ನು ಜ್ಯಾರಿಗೆ ತಂದುಬಿಟ್ಟಿದೆ. ಶ್ರೀಮಂತರನ್ನೂ, ದೊಡ್ಡ ಜಮೀನ್ದಾರರನ್ನೂ ಸೆರೆಹಿಡಿದು ಭೂಮಿಯನ್ನು ಪ್ರತಿಯೊಬ್ಬ ಒಕ್ಕಲಿಗನಿಗೆ ನಾಲ್ಕು ಎಕರೆಗಳಂತೆ ವಿಭಾಗಿಸಿ ಕೊಟ್ಟಿದೆ ಜನತೆಯು ಉತ್ಸಾಹದಿಂದ ರಸ್ಯನರನ್ನು ಸ್ವಾಗತೀಕರಿಸುತ್ತಿದೆ. ಆಂದಮೇಲೆ ಈ ಭಾಗವು ಪುನಃ ಪೋಲಂಡಿಗೆ ಸೇರುವ ಸಂಭವ ತೋರುವುದಿಲ್ಲ ಜರ್ಮನಿಯು ಸೆರೆಯ ಭಾಗವನ್ನು ಇದೇ ರೀತಿ ಜರ್ಮನ್ ನಾಝಿಗಳು ಪೂರ್ವದಿ ಸದಿರಲಾರರು ಆದುದರಿಂದ ಮೊದಲಿನ ಪೋಲಂಡು ನಿರ್ನಾಮವಾದಂತೆಯೇ ಸರಿ.

ಯುದ್ಧದ ಮುಂದಿನ ಸ್ವರೂಪ

ಬ್ರಿಟಿಷ ಮತ್ತು ಫ್ರೆಂಚ್ ಸರಕಾರಗಳು ಎಂದೂ ನಿರೀಕ್ಷಿಸದ ವಿದ್ಯಮಾನಗಳೀಗ ನಡೆದು ಹೋಗಿವೆ. ಪೋಲಂಡು ಒಂದು ತಿಂಗಳೊಳಗೆ ನಿರ್ನಾಮವಾಗುವುದೆಂದು ಅವರೆಂದೂ ನೆನಸಿಲ್ಲ. ರಸ್ಯವು ಪೋಲಂಡಿನ ಮೇಲೆ ಧಾಳಿಯಿಟ್ಟು ಮಿತ್ರರಾಷ್ಟ್ರಗಳಿಗೆ ಬದ್ಧ ವಿರೋಧವಾದ ಧೋರಣೆ ವಹಿಸಿದೆ. ರಸ್ಯದ ಧೋರಣೆಯಿಂದಾಗಿ ಈಗ ಮೋಸ್ಕೋ ಪಟ್ಟಣವೇ ಮಧ್ಯ ಮತ್ತು ಪೂರ್ವ ಯುರೋಪಿನ ರಾಜನೈತಿಕ ವ್ಯವಹಾರ ಕೇಂದ್ರವಾಗಿ ಬಿಟ್ಟಿದೆ. ಜರ್ಮನಿಯೇ ರಸ್ಯವು ಹೇಳಿದಂತೆ ನಡೆಯಬೇಕಾಗಿದೆ ಮಿತ್ರರಾಷ್ಟ್ರಗಳು ರಾಜಿಗೆ ಬರದಿದ್ದಲ್ಲಿ ಜರ್ಮನಿ ಮತ್ತು ರಸ್ಯಗಳು ಒಂದುಗೂಡಿ ಅವನ್ನು ವಿರೋಧಿಸುವವೋ ಎಂಬ ಸಂದೇಹಕ್ಕೀಗ ಆಸ್ಪದವಾಗಿದೆ. ಜರ್ಮನಿಗೆ ಕಚ್ಚಾ ಪದಾರ್ಥಗಳ ಸರಬರಾಯಿ ಮಾಡುವ ಹೊಸ ಒಪ್ಪಂದವೊಂದನ್ನು ರಸ್ಯವು ಮಾಡಿರುತ್ತದೆ ಮಧ್ಯ ಯುರೋಪಿನಲ್ಲೀಗ ಒಳಗಿಂದೊಳಗೆ ಯಾವ ರೀತಿಯ ಸೂತ್ರಚಾಲನ ನಡೆಯುತ್ತಿರುವುದೆಂದು ಹೇಳಬರುವುದಿಲ್ಲ. ರಸ್ಯವು ಜರ್ಮನಿಯ ಪಕ್ಷಕ್ಕೆ ಸೇರಿದರೂ, ಮಿತ್ರರಾಷ್ಟ್ರಗಳು ಪೋಲಂಡಿನ ವಿಭಜನೆಯನ್ನೊಪ್ಪಿ ಎಂದೂ ರಾಜಿಮಾಡಿಕೊಳ್ಳಲಾರವು ಅಂದಮೇಲೆ ದೀರ್ಘಕಾಲದ ವರೆಗಿನ ಭಯಂಕರ ಯುದ್ಧವು ನಿಶ್ಚಯವೆಂದೇ ಹೇಳಬಹುದು. ಇದರ ಪರಿಣಾಮವೇನಾಗುವುದೆಂದು ಹೇಳಬರುವುದಿಲ್ಲ. ಹಿಟ್ಲರ್‌ಶಾಹಿಯನ್ನು ನಿರ್ನಾಮಗೊಳಿಸಿಯೇ ಸಿದ್ಧವೆಂದು ಮಿತ್ರರಾಷ್ಟ್ರಗಳು ಛಲ ಹಿಡಿದು ಭಯಂಕರ ಹೋರಾಟವು ಹೆಚ್ಚು ಸಮಯ ನಡೆದರೆ ಬಹುತೇಕ ಯುರೋಪಿನ ಎಲ್ಲಾ ರಾಷ್ಟ್ರಗಳೂ ಅದಕ್ಕೆ ಳೆಯಲ್ಪಡದಿರಲಾರವು. ಜರ್ಮನಿಯೂ ರಸ್ಯದ ಸಹಾಯದಿಂದ ಮಧ್ಯಯುರೋಪು, ಬಾಲ್ಕನ್ ಮತ್ತು ಬಾಲ್ಟಿಕ್ ರಾಜ್ಯಗಳನ್ನು ಒಂದುಗೂಡಿಸಿ ಪ್ರತ್ಯೇಕವಾದೊಂದು ರಾಷ್ಟ್ರಕೂಟವನ್ನೇ ಸ್ಥಾಪಿಸಿ ಇಂಗ್ಲಂಡ್ ಮತ್ತು ಫ್ರಾನ್ಸುಗಳನ್ನು ಮೂಲೆಗೊತ್ತುವ ಹಂಚಿಕೆ ನಡಿಸುತ್ತಿರುವಂತಿದೆ ರಸ್ಯಾ, ಇಟೆಲಿಗಳು ಜರ್ಮನಿಯೊಂದಿಗೆ ಸೇರಿದರೆ ಹಂಗೇರಿ, ಯುಗೊಸ್ಲಾವಿಯ, ಬುಲ್ಗೇರಿಯ, ಗ್ರೀಸ್, ಟರ್ಕಿ. ರುಮೇನಿಯ, ಲಿಥುವಾನಿಯ, ಲಟ್ವಿಯ, ಎಸ್ತೋನಿಯ ಮೊದಲಾದ ರಾಜ್ಯಗಳು ತಟಸ್ಥವಾಗಿರಲು ಸಾಧ್ಯವೇ ಇಲ್ಲ ಆಗ ಇಂಗ್ಲೆಂಡ್ ಮತ್ತು ಫ್ರಾನ್ಸುಗಳೆರಡೇ ಈ ರಾಷ್ಟ್ರಗಳನ್ನೆಲ್ಲಾ ವಿರೋಧಿಸಬೇಕಾಗುವುದು. ಬೆಲ್ಜಿಯಂ ಹೊಲ್ಲೆಂಡ್ ಮೊದಲಾದ ರಾಜ್ಯಗಳನ್ನೂ ಜರ್ಮನಿಯು ಸದೆಬಡಿದು ಫ್ರಾನ್ಸಿನ ಮೇಲೆ ಧಾಳಿ ನಡಿಸಲು ಮುಂದಾಗಬಹುದು. ಅಮೇರಿಕವು ಈ ಸಲ ಮಿತ್ರರಾಷ್ಟ್ರಗಳಿಗೆ ಸಹಾಯಮಾಡುವ ಹಾಗಿಲ್ಲ ಜಪಾನು ತಟಸ್ಥ ನಿಂತು ಚೈನದ ಧಾಳಿಯನ್ನೇ ಮುಂದೊತ್ತಬಹುದು. ಇಂತಹ ಪರಿಸ್ಥಿತಿಯಲ್ಲಿ ಮಿತ್ರರಾಷ್ಟ್ರಗಳು ಜಯಶೀಲವಾಗುವುದು ಬಹಳ ಕಷ್ಟವಿದೆ. ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಗಳ ಅದೃಷ್ಟವು ಹೇಗಾಗುವುದೆನ್ನಬರುವುದಿಲ್ಲ. ಅಂತೂ ಮಿತ್ರರಾಷ್ಟ್ರಗಳೀಗ ದೊಡ್ಡ ಸಂದಿಗ್ಧದಲ್ಲಿ ಸಿಕ್ಕಿಬಿದ್ದಿರುತ್ತವೆ ಪಶ್ಚಿಮ ರಣರಂಗದಲ್ಲಿ ಜರ್ಮನಿಯ ಕೋಟೆಗಳನ್ನು ಭೇದಿಸಿ, ಸೇನೆಯನ್ನು ಪರಾಜಯಗೊಳಿಸಿ, ನೌಕಾ ಮತ್ತು ವಿಮಾನಧಾಳಿಯಿಂದ ಜನತೆಯನ್ನು ಧೃತಿಗೆಡಿಸಿ ತೀವ್ರ ಅತೃಪ್ತಿ ಹುಟ್ಟಿಸಿ ಮುಂದೊತ್ತಿ ನಾಝಿಗಳನ್ನು ಶೀಘ್ರವಾಗಿ ಬಗ್ಗುಬಡೆಯಲು ಶಕ್ತರಾದರೆ ಮಿತ್ರರಾಷ್ಟ್ರಗಳ ಉದ್ದೇಶವು ನೆರವೇರಬಹುದು. ಅದು ಎಷ್ಟರ ಮಟ್ಟಿಗೆ ಸಾಧ್ಯವೆಂದು ಹೇಳಬರುವುದಿಲ್ಲ.

ಅಮೆರಿಕದ ಕಠಿಣ ತಾಟಸ್ಥ್ಯ

ಕಳೆದ ಮಹಾಯುದ್ಧದಲ್ಲಿ ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಸರಕಾರವು ಭಾಗವಹಿಸಿ ಕೈ ಸುಟ್ಟುಕೊಂಡಿದೆ ಆದುದರಿಂದ ಈ ಸಲ ಅದರ ಗೊಡವೆಯೇ ಬೇಡವೆಂಬ ತಾಟಸ್ಥ್ಯದ ಧೋರಣೆ ವಹಿಸಿದೆ. ಯಾವ ರೀತಿಯಲ್ಲಾದರೂ ತಾನು ಯುದ್ಧಕ್ಕೆಳೆಯಲ್ಪಡದಂತೆ ಮುಂಜಾಗ್ರತೆ ತೆಗೆದುಕೊ

SAVINGS & SPENDING

Every Rupee that you save adds materially to your present wealth for the satisfaction of a future want, while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING & SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd] (Incorporated in British India) [1925.

Head Office—UDIPI, (S India).

ಳ್ಳುವುದಕ್ಕಾಗಿ ಪ್ರೆಸಿಡೆಂಟ್ ರುಸವೆಲ್ಟರು, ಮೊದಲಿದ್ದ ತಾಟಸ್ಥ್ಯದ ಕಾನೂನನ್ನೇ ಬದಲಾಯಿಸುವ ನಿರ್ಧಾರ ಮಾಡಿದ್ದಾರೆ. ಈ ಪ್ರಕಾರ ಅಮೇರಿಕಾನರು ತಮ್ಮ ಹಡಗಗಳ ಮೂಲಕ, ಯುದ್ಧದಲ್ಲಿ ತೊಡಗಿರುವ ಯಾವ ರಾಷ್ಟ್ರಗಳಿಗೂ ಸಾಮಾಗ್ರಿಗಳನ್ನು ಕಳುಹಿಸಕೂಡದು. ಆ ರಾಷ್ಟ್ರಗಳ ಹಡಗುಗಳಲ್ಲಿ ಸಂಚಾರ ಮಾಡಲೂ ಕೂಡದು. ಸಮರದಲ್ಲಿ ಸೇರಿರುವ ರಾಷ್ಟ್ರಗಳು ಅಮೇರಿಕದೊಡನೆ ವ್ಯಾಪಾರ ವಹಿವಾಟುಗಳನ್ನು ನಗದು ಹಣಕೊಟ್ಟು ತಮ್ಮ ಜವಾಬ್ದಾರಿಯಿಂದಲೇ ನಡಿಸಬೇಕಾಗಿದೆ ತಮ್ಮ ಹಡಗುಗಳ ಮೂಲಕವಾಗಿಯೇ ಸಾಮಾನುಗಳನ್ನೊಯ್ಯತಕ್ಕದ್ದು. ಜರ್ಮನಿಗೆ ಅಮೇರಿಕದೊಡನೆ ವ್ಯಾಪಾರ ನಡಿಸಲು ಆಸ್ಪದವಿಲ್ಲ. ಅಲ್ಲಿಂದ ಸಾಮಾನುಗಳನ್ನು ಹೆಚ್ಚಾಗಿ ಕೊಂಡುಹೋಗುವ ರಾಷ್ಟ್ರಗಳೆಂದರೆ ಇಂಗ್ಲೆಂಡು ಮತ್ತು ಫ್ರಾನ್ಸ್‌ಗಳು ಅವುಗಳಿಗೆ ಈ ನಿರ್ಬಂಧಗಳಿಂದ ತೊಡಕೇ ಅಲ್ಲದೆ ಉಪಕಾರವಿಲ್ಲ.

ಹಿಂದೂದೇಶವು ಹೋರಾಡಬೇಕೇಕೆ?

ಯುರೋಪಿನ ಯುದ್ಧವು ಹಿಂದೂದೇಶದಲ್ಲಿ ವಿಶಿಷ್ಟ ಪರಿಸ್ಥಿತಿಯನ್ನುಂಟುಮಾಡಿರುತ್ತದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಪ್ರಕಟಣೆಯು ಹಿಂದೂದೇಶದ ಸ್ವಾತಂತ್ರ್ಯದ ಕುರಿತು ಮಾತ್ರವಲ್ಲದೆ ಇಡೀ ಲೋಕದ ಪುನರ್ವ್ಯವಸ್ಥೆಗಾಗಿ ಹಾತೊರೆಯುವ ಉದಾತ್ತ ಹಾಗೂ ವ್ಯಾಪಕ ಉದ್ದೇಶವುಳ್ಳದಾಗಿದೆ. ಇದು, ಇಂದಿನ ರಾಷ್ಟ್ರನಾಯಕರಾಗಿರುವ ಪಂಡಿತ ಜವಾಹರಲಾಲರ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮನೋವೃತ್ತಿಗಳ ಸಂಯೋಗ ಸಿದ್ಧಿಯೆನ್ನಬಹುದು. ಅಂತರ ರಾಷ್ಟ್ರೀಯ ಅರಾಜಕತೆಯ ಕಗ್ಗತ್ತಲಲ್ಲಿ ಲೋಕದ ನವನಿರ್ಮಾಣದ ಕೈದೀವಿಗೆಯನ್ನೆತ್ತಿ ಹಿಡಿದು ಮುಂದಿನ ದಾರಿ ತೋರಿಸುತ್ತಿದ್ದಾರೆ ಪಂಡಿತ ಜವಾಹರಲಾಲರು. ಹಿಂದೂದೇಶವು ಈ ಯುದ್ಧದಲ್ಲಿ ಯಾಕೆ ಹೋರಾಡಬೇಕೆಂಬುದನ್ನು ಬ್ರಿಟಿಷ್ ಸರಕಾರವು ಸ್ಪಷ್ಟಗೊಳಿಸಬೇಕು.' ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಬಲಗೊಳಿಸಲು ಹಿಂದೀಯರಿಗೆ ರಕ್ತಸುರಿಸಲು ಸಾಧ್ಯವಿಲ್ಲ.

ಲೋಕಶಾಂತಿ ಮತ್ತು ಕಲ್ಯಾಣಕ್ಕೆ ವಿಘಾತಕವಾದ ಹಿಟ್ಲರ್ ಶಾಹಿಯನ್ನು ನಾಶಗೊಳಿಸಿ, ಪ್ರಜಾಶಾಹಿಯನ್ನು ರಕ್ಷಿಸಿ ಲೋಕದಲ್ಲಿ ನವ ವ್ಯವಸ್ಥೆ ಮಾಡುವ ಯಥಾರ್ಥವಾದ ಉದ್ದೇಶದಿಂದ ಇಂಗ್ಲೆಂಡು ಯುದ್ಧ ಹೂಡಿರುವುದಾದರೆ ಹಿಂದೀಯರು ಸಹಾಯಮಾಡಲು ಸಿದ್ಧರೇ ಇರುವರು. ಆ ಯಥಾರ್ಥತೆಯನ್ನದು ಕಾರ್ಯರೂಪದಲ್ಲಿ ತೋರಿಸಬೇಕು. ಪೋಲಂಡಿಗಿಂತ ಎಷ್ಟೋ ವಿಶಾಲವಾದ ಹಿಂದೂದೇಶಕ್ಕೆ ಸ್ವತಂತ್ರವೀಯುವ ವಾಗ್ದಾನವನ್ನು ಮೊದಲಾಗಿ ಕೊಟ್ಟು ಸ್ವತಂತ್ರ ಹಿಂದೂಸ್ಥಾನದ ಸ್ಥಿರ ಮೈತ್ರಿಯನ್ನು ಸಂಪಾದಿಸಿಕೊಳ್ಳಬೇಕೆಂದೇ ಪಂಡಿತರ ವಾದ. ಇಂಗ್ಲೆಂಡು ಗಂಡಾಂತರದಲ್ಲಿ ಸಿಲುಕಿರುವಾಗಲೇ ಹಿಂದೂಸ್ಥಾನವು ಆದಷ್ಟು ಹೆಚ್ಚಿನ ಪ್ರಯೋಜನವನ್ನು ಪಡೆಯಬೇಕೆಂಬ ಸಂಕುಚಿತ ವ್ಯಾಪಾರಿ ದೃಷ್ಟಿಯಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಪ್ರಕಟಣೆ ಹೊರಡಿಸಿಲ್ಲ. ಇಷ್ಟರವರೆಗ ಎಲ್ಲೋ ನಿದ್ದೆಯಲ್ಲಿದ್ದ ಇಂಡಿಯಾ ಸೆಕ್ರಿಟರಿಗಳಾದ ಲೋರ್ಡ್ ಜೆಟ್ಲೆಂಡರು, ಈ ಸಂದರ್ಭದಲ್ಲಿ ಪ್ರಯೋಜನ ಪಡೆಯಲು ಕಾಂಗ್ರೆಸು ಇಂಗ್ಲೆಂಡಿನೊಡನೆ ತರ್ಜಿಗೆ ಹೊರಟಿರುವುದು ಶೋಚನೀಯ. ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಬಿಟ್ಟುಬಿಡುವಂತಾದರೆ ಹಿಂದೂದೇಶಕ್ಕೆ ದೊಡ್ಡ ಹಾನಿಯೇ ಸರಿ. ಈಗ ಯಾವ ತಕರಾರನ್ನೂ ಮಾಡದೆ ಹಿಂದೀಯರು ಬ್ರಿಟನಿಗೆ ಸಹಾಯಮಾಡಬೇಕು. ಕೊನೆಗೆ ಇಂಗ್ಲೆಂಡು ಹಿಂದೀಯರ ಕೃತಜ್ಞತೆಗೆ ತಕ್ಕ ಪ್ರತಿಫಲವೀಯುವುದೆಂದು ಕಾಂಗ್ರೆಸಿನ ಪ್ರಕಟಣೆಗೆ ಉತ್ತರವೇನೂ ಕೊಡದೆ ಅದನ್ನು ಟೀಕಿಸಿದುದು ದೊಡ್ಡ ಅವಿವೇಕವಿದೆ. ಲೋರ್ಡ್ ಜೆಟ್ಲೆಂಡರ ಹೇಳಿಕೆಯನ್ನು ಗಾಂಧಿಜಿಯವರೂ ಕಠಿಣವಾಗಿ ಟೀಕಿಸಿದ್ದಾರೆ. ಸುದೈವದಿಂದ ವಿವೇಕಿಗಳಾದ ವೈಸರಾಯರು ಹಿಂದೀಯರನ್ನೆಲ್ಲಾ ತೃಪ್ತಿಪಡಿಸಿ ಯುದ್ಧಕ್ಕೆ ಸಹಾಯಪಡೆಯಲೆತ್ನಿಸುತ್ತಿರುವುದು ಅಭಿನಂದನೀಯವಿದೆ. ಅವರು ಬಾಬು ರಾಜೇಂದ್ರ ಪ್ರಸಾದ್ ಮತ್ತು ಪಂಡಿತ ಜವಾಹರಲಾಲರೇ ಮೊದಲಾದ ಕಾಂಗ್ರೆಸ್ ಮುಖಂಡರನ್ನು ಡಿಲ್ಲಿಯಲ್ಲಿ ಕಂಡು ಮಾತಾಡುತ್ತಿರುವರು. ಇದರಿಂದ ಸತ್ಪರಿಣಾಮವುಂಟಾಗುವಂತಾಗಲೆಂದೇ ನಮ್ಮ ಹಾರೈಕೆ.

ಮಂಗಳೂರ ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆಗಳು.

(ತಾ. 18-9-39ರಲ್ಲಿದ್ದಂತೆ ಹಜೂರು ಟ್ರೆಜರಿಯಿಂದ)

	ರಿಂದ			ವರೆಗೆ		
1 (a) ಅಕ್ಕಿ ಅವ್ವಲ್ ತರದ ಗುಡ್ಡು	5	0	0	—		
(b) ,, ದುಯಂ ,,	4	12	0	—		
2 (a) ,, ಅವ್ವಲ್ ಸಗ್ಗಿ	5	0	0	—		
(b) ,, ದುಯಂ ,,	4	12	0	—		
3 (a) ತೆಂಗಿನಕಾಯಿ ಸುಲಿದದ್ದು 1000ಕ್ಕೆ	35	0	0	42	8	0
(b) ,, ಸಿಪ್ಪೆಯಿದ್ದದ್ದು ,,	37	8	0	47	8	0
4 ಕೊಬ್ಬರಿ ಬಹೀಸು ಖಂಡಿಗೆ	55	0	0	—		
5 ತೆಂಗಿನ ಎಣ್ಣೆ ಮಣಕ್ಕೆ	3	12	0	—		
6 ಅಡಿಕೆ ಸಿಪ್ಪೆಯಿದ್ದದ್ದು 1000ಕ್ಕೆ	2	8	0	3	8	0
7 ಗೇರುಬೀಜ ಮುಡಿಗೆ	3	6	0	—		
8 ಕಬ್ಬಿನ ಬೆಲ್ಲ ಖಂಡಿಗೆ	47	8	0	52	8	0
9 ಒಳ್ಳೇ ಮೆಣಸು ಹಂಡ್ರೆಡ್ ವೇಟಿಗೆ	16	0	0	17	0	0

ಶ್ರೀ ರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್, ಉಡುಪಿ.

ಬ್ರಾಂಚ್:—ಹೊಸಮಾರ್ಕೆಟಿನ ಬಳಿ, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ.

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡ್ಸ್, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು.

Crown Rubber Stamp Co., Balmat Road, MANGALORE.

Includ by the Mysore Govt Stores, Purchase Committee in the list of approvedfirms

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ

ಇವುಗಳಿಂದ ಕೀರ್ತಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಓರ್ಗನೈಜರ್ ಕೆ. ಆರ್ ಕೆ ಸ್ಟೇಟ್ ಬಿಲ್ಡಿಂಗ್, ಮಿಶ್ಯನ್‌ಹೈಸ್ಕೂಲ್ ರೋಡು.	ಅ ಥ ವಾ	ಎಚ್. ವೆಂಕಟರಾಮಯ್ಯ ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

YOUR AMBITION TO BUILD UP A BRIGHT FUTURE IN YOUR RETIRED LIFE,
YOUR DESIRE TO EDUCATE YOUR CHILDREN SO THAT THEY MAY STAND ON THEIR OWN LEGS,
YOUR ANXITY TO PROVIDE YOUR DEAR WIFE AND CHILDREN WITH A MINIMUM MONTHLY ALLOWANCES,
YOUR MORAL LIABILITY TO PROVIDE FOR THE MARRIAGE OF YOUR DAUGHTERS

may all be only a dream if you do not avail of modern scientific Life Insurance Schemes, which will satisfy your Ambition, Desire, Anxiety and Moral Liability and make the whole thing a reality by small contribution out of your own monthly Savings towards the payment of Premiums in

The Bombay Life

Assurance Co., Ltd.

To Insure or to Represent, please consult—

Messrs. KOCHIKAR BROTHERS LTD.,

MADRAS BRANCH SECRETARIES,

BOMBAY LIFE BUILDING,

GANDHI NAGAR, **UDIPI.**

Or any of their following Offices:—

Puthiyara CALICUT	Car Street, MANGALORE	Viswesvarapuram Circle BANGALORE CITY.
Post Box No 337, Mount Road, MADRAS	Gautam Nivas, Charni Road Girgaum, BOMBAY NO 4	Central Station Road, TRIVANDRUM

ಬ್ರಿಟನಿನ ರಕ್ಷಣೆಯ ಕುರಿತು ಮುಂಜಾಗ್ರತೆ

ಆತ್ಮರಕ್ಷಣೆಯ ಸುಭದ್ರತೆಗೆ ಅಷ್ಟೊಂ
ು ಹೆಚ್ಚಿನ ಗಮನಕೊಡದೆ ಆವೇಶದಿಂದ
ಮ್ಮೆಯೇ ವೈರಿಯ ಮೇಲೇರಿ ಹೋಗಿ
ುಂಚುಧಾಳಿ ನಡಿಸುವುದಕ್ಕಿಂತ, ಸ್ವರಕ್ಷ
ಯ ಕುರಿತು ಮುಂಜಾಗ್ರತೆ ತೆಗೆದು
ುಂಡು ತಾಳ್ಮೆಯಿಂದ ಮತ್ತು ಅತ್ಯಂತ
ುಗರೂಕತೆಯಿಂದ ಹೆಜ್ಜೆ ಹೆಜ್ಜೆಯೆಂಬಂತೆ
ರಿಯನ್ನು ಗೆದ್ದು ತನ್ನ ಸ್ಥಾನವನ್ನು
ಬಪಡಿಸಿ ಮುಂದೊತ್ತುವುದು ದೂರ
ರ್ಶಿತ್ವದ ಯುದ್ಧತಂತ್ರವೆಂಬುದು ಈಗ
ತ್ರರಾಷ್ಟ್ರಗಳ ಮತ್ತು ಜರ್ಮನಿಯ
ಚರಣೆಯಿಂದ ಸಿದ್ಧವಾಗಿದೆ ಪಶ್ಚಿಮ
ಲ್ಲಿ ಅಷ್ಟೊಂದು ಶೀಘ್ರವಾಗಿ ಇಂಗ್ಲೆಂಡು
ತ್ತು ಫ್ರಾನ್ಸುಗಳು ಜರ್ಮನಿಯ ಮೇ
ಂಬರಲಾರವೆಂದು ಹರ್ ಹಿಟ್ಲರರು
ಷ್ಟಿನ ಸೇನೆಯನ್ನೆಲ್ಲಾ ಪೋಲಂಡಿನ
ಲ್ಲಿಗೊಯ್ದು ಮಿಂಚಿನ ವೇಗದಿಂದೇರಿ
ಹೋಗಿ ಅದನ್ನು ಸದೆಯಬಡೆಯಲು ಮುಂ
ದರು. ಫ್ರಾನ್ಸು ಮತ್ತು ಇಂಗ್ಲೆಂಡು
ು ಆವೇಗಗೊಳ್ಳದೆ ತಾಳ್ಮೆಯಿಂದ ಸೇನಾ
ಗ್ರಹ ಮಾಡಿ ಪಶ್ಚಿಮರಣರಂಗದಲ್ಲಿ
ರ್ಮನಿಯ ಮೇಲೇರಿ ಹೋಗಿ ಸಾರ್
ಕೆನಿನ ವರೆಗೆ ಮುಂದುವರಿದು ಈಗ
"ಫ್ರಿಡ್ ಕೋಟೆಯನ್ನು ಭೇದಿಸಲೆತ್ನಿ
ತ್ತಿರುವರು. ಹಿಟ್ಲರರು ಪೋಲಂಡಿನಿಂದ
ರೆ ತಂದು ಫ್ರೆಂಚರನ್ನು ಹಿಂದಕ್ಕಟ್ಟ
ಪ್ಪಿ ಪ್ರಯತ್ನಪಟ್ಟರೂ ನಿಷ್ಫಲವಾಗಿದೆ.
ರಿಂದಾಗ್ ಫ್ರೆಂಚರನ್ನಿಲ್ಲಿ ಹಿಂದಕ್ಕಟ್ಟು
ಆಲೋಚನೆಬಿಟ್ಟು ನೆರೆಯ ತಟಸ್ಥದೇಶ
ಮಾರ್ಗವಾಗಿ ಫ್ರಾನ್ಸಿನ ಮೇಲೇರಿ
ಹೋಗುವ ಆಲೋಚನೆಮಾಡಹತ್ತಿದ್ದಾರೆ.
ರ್ಮನ್ ಸೇನಾನಿಗಳು, 1914ರಲ್ಲಿ ಮಾ
ದ ಈ ಅವಿವೇಕದಿಂದಾಗಿ ಅವರು ಹಿಂಜರಿ
ಯತ್ತಿದ್ದಾರೆ. ಆದರೆ ಉಪಾಯವಿಲ್ಲದಾಗ
ರುಬೆಲ್‌ಜಿಯಂ ಹೊಲ್ಲೆಂಡು ಮೂಲಕ
ನ್ಸಿನ ಮೇಲೇರಿ ಹೋಗುವ ಪ್ರಯತ್ನ
ಮಾಡದಿರಲಾರರು. ಆಗ ಅವರ ಮೇಲಿನ
ಆಕ್ಷೇಪವಾದವು ಮತ್ತಷ್ಟು ಹೆಚ್ಚು
ು, ಮತ್ತು ಅದು 1914ಕ್ಕಿಂತಲೂ
ಅಸಾಧ್ಯವಾಗಬಹುದು. ಹೀಗೆ ಹಿಟ್ಲ
ಒಂದು ತಪ್ಪುಹೆಜ್ಜೆಯಿಂದ ಇಡೀ
ರ್ಮನಿಯನ್ನು ಕಳಕೊಳ್ಳುವ ಸಂಭವ
ಬಹುದೋ ಎಂಬ ಸಂದೇಹಕ್ಕೆಡೆಯಾ
ಅವರು ಅತ್ಯಂತ ತಳಮಳಗೊಂಡು
ಬದ್ಧ ವೈರಿ ಸ್ಟೈಲಿನರ ಆಶ್ರಯಪಡೆ
ದರೂ ಆತ್ಮರಕ್ಷಣೆಮಾಡಿಕೊಳ್ಳುವ ಪ್ರ
ಯತ್ನಮಾಡುತ್ತಿರುವಂತಿದೆ.

ಬ್ರಿಟನಾದರೋ ಅತ್ಯಂತ ಮುಂಜಾ
ಗ್ರತೆಯಿಂದ ಆತ್ಮರಕ್ಷಣೆಯ ಮತ್ತು ತನ್ನ
ವಿಶಾಳವಾದ ಸಮುದ್ರಮಾರ್ಗಗಳ ಸುರ
ಕ್ಷಿತೆಯ ಕುರಿತು ಮೊದಲಾಗಿ ಗಮನ
ು ದೀರ್ಘ ಯುದ್ಧದ ಸಿದ್ಧತೆನಾಡಿ
ಮೇಲೆ ಮಾತ್ರ ತನ್ನ ಸೇನೆಯನ್ನು ಫ್ರಾ
ನ್ಸಿಗೆ ಕಳುಹಿಸತೊಡಗಿದೆ. ನೌಕಾ ಮಂತ್ರಿ
ಚರ್ಚಿಲ್ಲರು ನಿರೂಪಿಸಿದ ಮೇರೆಗೆ
ಸಮುದ್ರಗಳಿಂದೆಲ್ಲಾ ಜರ್ಮನ್ ಯುದ್ಧ
ಹಡಗ ಮತ್ತು ಸಬ್‌ಮೆರೀನುಗಳು ಓಡಿಸ
ಲ್ಪಟ್ಟು ಬಹುಮಟ್ಟಿಗೆ ಜಲಮಾರ್ಗಗಳ
ಸುರಕ್ಷಿತವಾಗಿವೆ. ಮೂರರಲ್ಲಿ ಎರ
ಡು ಪ್ರಾಮುಖ್ಯ ಕಚ್ಚಾಮಾಲುಗಳು
ಹೊರಗಿನಿಂದ ಬರಬೇಕು ಬ್ರಿಟನಿಗೆ.

ಲಂಡನಿನ ಸುತ್ತಲೂ ಬೆಲೂನುಗಳ ಕೋಟೆ

ಸಮುದ್ರ ತೀರದಲ್ಲೆಲ್ಲಾ ನೌಕಾ ಮತ್ತು ವಿಮಾನ ಪಡೆಗಳ ಪಹರೆ!

ಜಲಮಾರ್ಗಗಳು ಅದರ ರಕ್ತನಾಡಿಗಳಂತಿರುತ್ತವೆ. ಆದುದರಿಂದ ಅವುಗಳ ಸುರಕ್ಷಿತತೆಗಾಗಿ ಅನು ಪ್ರಚಂಡ ವ್ಯವಸ್ಥೆಮಾಡಿದೆ. ಮಾತ್ರವಲ್ಲದೆ ಜರ್ಮನಿಗೆ ತಟಸ್ಥ ರಾಷ್ಟ್ರಗಳ ಮೂಲಕ ಸಾಮಾನು ಹೋಗದಂತೆ ಜಯಶೀಲವಾಗಿ ತಡೆಗಟ್ಟಿ ಜರ್ಮನರನ್ನು ಇಷ್ಟರಲ್ಲೇ ತಳಮಳಗೊಳಿಸಿದೆ.

ಸಮುದ್ರ ರಾಣಿಯಾಗಿರುವ ಇಂಗ್ಲೆಂಡಿನ ರಕ್ಷಣಾ ವ್ಯವಸ್ಥೆಯು ಬಹಳ ಜಯಶೀಲವಾಗಿ ನಡೆಸಲ್ಪಟ್ಟಿದೆ. ವೈರಿ ವಿಮಾನಗಳಾಗಲೀ, ಯುದ್ಧ ಹಡಗಗಳಾಗಲೀ ಇಂಗ್ಲೆಂಡನ್ನು ಸಮೀಪಿಸುವುದೇ ಅಸಾಧ್ಯವೆಂಬಂತಾಗಿದೆ. ಬ್ರಿಟನಿನ ಕರಾವಳಿಯಲ್ಲೆಲ್ಲಾ ಅಲ್ಲಲ್ಲಿ ವಿಮಾನ ಪಡೆಗಳು ಕಾದುನಿಂತು ಪಹರೆನಡಿಸುತ್ತಿವೆ. ವೈರಿ ವಿಮಾನಗಳಾಗಲಿ, ಸಬ್ ಮೆರೀನ್ ಅಥವಾ ಯುದ್ಧ ಹಡಗಗಳಾಗಲಿ ಬರುವುದನ್ನು ಅತಿ ದೂರದಲ್ಲೇ ಕಂಡು ಒಡನೆಯೇ ಹಾರಿ ಅವುಗಳ ಮೇಲೆ ಧಾಳಿನಡಿಸುತ್ತಿವೆ. ಯುದ್ಧ ಹಡಗಗಳಂತೂ ಇಂಗ್ಲೆಂಡಿನ ಸುತ್ತಲೂ ನೌಕಾ ಕೋಟೆಯೊಂದನ್ನೇ ಕಟ್ಟಿಬಿಟ್ಟಿವೆ. ಇವುಗಳೊಂದಿಗೆ ವಿಮಾನಗಳೂ ಸಹಕರಿಸುತ್ತಿವೆ. ಕರಾವಳಿಯ ಎತ್ತರ ಪ್ರದೇಶಗಳಲ್ಲೆಲ್ಲಾ ವಿಮಾನ ಛೇದಕ ತೋಪುಗಳಿರಿಸಲ್ಪಟ್ಟಿವೆ. ಆದುದರಿಂದ ಹಿಟ್ಲರರೆಷ್ಟು ಜಂಭಹೊಡೆದರೂ ಜರ್ಮನ್ ಯುದ್ಧನಾವೆಗಳಾಗಲಿ ವಿಮಾನಗಳಾಗಲಿ ಇಂಗ್ಲೆಂಡನ್ನು ಸಮೀಪಿಸಲು ಸಾಧ್ಯವಿಲ್ಲ. ಎಲ್ಲಿಯಾದರೂ ಕಣ್ಣು ತಪ್ಪಿಸಿ ಒಂದೊಂದು ಹೋಗಿಬಿಟ್ಟರೆ ಅವುಗಳ ನಾಶಕ್ಕೆ ಹೆಚ್ಚು ಸಮಯ ಬೇಕಿಲ್ಲ. ಮತ್ತು ಅವುಗಳಿಂದ ಅಂತಹ ಹಾವಳಿಯೇನೂ ಉಂಟಾಗಲಾರದು.

ಇಂಗ್ಲೆಂಡಿನ ಹೃದಯವೆಂದರೆ ಲಂಡನ್ ಪಟ್ಟಣ. ಅದರ ರಕ್ಷಣೆಯ ಕುರಿತು ಬ್ರಿಟಿಷ್ ಸರಕಾರವು ತೆಗೆದುಕೊಂಡಿರುವ ಮುಂಜಾಗ್ರತೆಯು ಆಶ್ಚರ್ಯಕರವಿದೆ. ಲಕ್ಷಾಂತರ ಮಕ್ಕಳು, ಮುದುಕರೇ ಮೊದಲಾದವರೆಲ್ಲಾ ಯುದ್ಧಾರಂಭದಲ್ಲೇ ಲಂಡನಿನಿಂದ ಬೇರೆಬೇರೆ ಕಡೆಗೆ ಕಳುಹಿಸಲ್ಪಟ್ಟಿದ್ದಾರೆ. ಪ್ರಾಮುಖ್ಯ ಕಟ್ಟಡಗಳ ಮಾಡುಗಳ ಮೇಲೆಲ್ಲಾ ಸಾವಿರ ಗಟ್ಟಲೆ ಹೊಯಿಗೆ ಗೋಣಿಗಳನ್ನು ಹಾಸಲಾಗಿದೆ. ಹೊಯಿಗೆಯನ್ನು ತೂರಿ ಗುಂಡುಗಳು ಹೋಗಲಾರವು. ಮತ್ತು ಅವುಗಳು ಕಟ್ಟಡಗಳನ್ನು ಮರೆಮಾಡುವವು. ದೀಪಗಳನ್ನೆಲ್ಲಾ ನೊಂದಿಸುವ ಇಲ್ಲವೆ ಮರೆಮಾಡುವ ನಿಯಮಗಳು ಅನುನಿತ್ಯವೂ ಕಠಿಣವಾಗಿ ಜ್ಯಾರಿಗೆ ತರಲ್ಪಡುತ್ತಿದೆ. ದೀಪಗಳನ್ನು ಮರೆಮಾಡದೆ ಹಚ್ಚಿಸಿಟ್ಟವರಿಗೆ 10-20 ಪವನು ಜುಲ್ಮಾನೆ ವಿಧಿಸಲಾಗುತ್ತದೆ. ಫ್ರೆಂಚ್ ಮತ್ತು ಜರ್ಮನರು ತಮ್ಮ ಎಲ್ಲೆಗಳ ಭದ್ರತೆಗಾಗಿ ವಿಚಿತ್ರ ಮೆಗಿನೊಟ್ ಮತ್ತು ಸಿಗ್‌ಫ್ರಿಡ್ ಕೋಟೆಗಳನ್ನು ಕಟ್ಟಿಕೊಂಡಿರುವಂತೆಯೇ ಬ್ರಿಟನು ತನ್ನ ಪ್ರಧಾನಪಟ್ಟಣದ ಸುತ್ತಲೂ ವಾಯುಬುಟ್ಟಿಗಳ ಗಗನಕೋಟೆಯನ್ನು ಕಟ್ಟಿಕೊಂಡಿದೆ. ಇತರ ಪ್ರಾಮುಖ್ಯವಾದ ಕೆಲವು ಪಟ್ಟಣಗಳಿಗೂ ಈ ರಕ್ಷಣೆಯ ಏರ್ಪಾಡುಮಾಡಲಾಗಿದೆ. ಈ ವಾಯುಬುಟ್ಟಿ ಕೋಟೆಯಲ್ಲಿ ರಹಸ್ಯವೇನೂ ಇರುವುದಿಲ್ಲ.

ಬಾಂಬಿಸುವ ವಿಮಾನಗಳು ಪ್ರಾಮುಖ್ಯ ವೈರಿಪಟ್ಟಣಗಳ ಮೇಲೇರಿ ಬಂದು ಯುದ್ಧಸಿದ್ಧತೆಗಾಗಿ ಕೆಲಸಮಾಡುವ ಕಟ್ಟಡಗಳನ್ನು ಆದಷ್ಟು ಸಮೀಪಿಸಿ ಗುರಿಯಿಟ್ಟು ಬಾಂಬುಗಳ್ನು ಸುರಿಯಲೆತ್ನಿಸುವುದು ಸ್ವಾಭಾವಿಕ. ಇದಕ್ಕಾಗಿ ವಿಮಾನಗಳು ಅತಿ ಕೆಳಗೆ ಹಾರಿಬರಲು ಆಸ್ಪದವಿರಬೇಕು. ಬಹಳ ಮೇಲಿಂದ ಬಾಂಬು ಸುರಿದರೆ ಹೆಚ್ಚಿನ ಹಾನಿಯಾಗಲಾರದು. ಇದು ಹೊರತು ಅತಿ ಎತ್ತರದಲ್ಲಿ ಒಂದೇ ಪ್ರಕಾರ ಹಾರಾಡುವುದೂ ಅಪಾಯಕರ ಯಾಕಂದರೆ ವಿಮಾನಭೇದಕ ಯಾಂತ್ರಿಕರು ದುರ್ಬೀನಿನಿಂದ ಅವನ್ನು ಕಂಡು ಗುರಿಯಿಟ್ಟು ಗುಂಡುಹಾರಿಸಿ ಭೇದಿಸಬಹುದು. ಆದರೆ ಥಕ್ಕನೆ ಒಮ್ಮೆಯೇ ಕೆಳಕ್ಕೆ ಹಾರಿ ಗಿಡುಗದಂತೆ ನಿಶ್ಚಿತ ಸ್ಥಳ ಯಾ ಕಟ್ಟಡದ ಮೇಲೆ ಬಾಂಬು ಸುರಿದು ಆಕ್ಷಣ ಹಾರಿಬಿಟ್ಟರೆ ಈ ಅಪಾಯವಿರಲಾರದು.

ಹೀಗೆ ಒಮ್ಮೆಯೇ ಹಾರಿಬಂದು ಬಾಂಬಿಸಿಯಲಾಗದಂತೆ ಲಂಡನಿನ ಮೇಲೆ 500 ವಾಯು ಬುಟ್ಟಿಯ ಗಗನ ಕೋಟೆಯು ನಿರ್ಮಿಸಲ್ಪಟ್ಟಿದೆ. ಈ ಬೆಲೂನ್ಸ್(ವಾಯು ಬುಟ್ಟಿ) ಗಳು ಅತಿ ಸೂಕ್ಷ್ಮ ಹಾಗೂ ಅತ್ಯಂತ ಗಟ್ಟಿಯಾದ ಉಕ್ಕಿನ ಸರಿಗೆಗಳಿಂದ ನೆಲಕ್ಕೆ ಸಿಕ್ಕಿಸಲ್ಪಟ್ಟಿರುತ್ತವೆ. ಇಡೀ ಪಟ್ಟಣದ ಸುತ್ತಲೆಲ್ಲಾ ಇವು ತೇಲಾಡುತ್ತಾ ಇರುತ್ತವೆ. ಇವುಗಳಿಂದ ಕೆಳಗೆ ಇಳಿದಿರುವ ಸರಿಗೆಗಳು ಲಂಡನಿನ ಸುತ್ತಲೂ ಕೆಲವು ಸಾವಿರ ಅಡಿಗಳ ವರೆಗೆ ಅದೊಂದು ಉಕ್ಕಿನ ಜಾಲವನ್ನೇ ಮಾಡಿವೆ. ಈ ಜಾಲದೊಳಗಿಂದ ವಿಮಾನವು ನುಗ್ಗಿ ಮುರಿಯಲ್ಪಡದೆ ತಪ್ಪಿಸಿಕೊಂಡು ಹೋಗುವುದೆಂದರೆ ಅದೊಂದು ಅದ್ಭುತವೆನ್ನಬೇಕು. ಹಾರಾಡುವ ದೊಡ್ಡ ಗಿಡುಗವೊಂದು ವಿಮಾನಕ್ಕೆ ಬಡಿದು ಅದನ್ನು ಮುರಿಯಬಹುದಾಗಿರುವಾಗ ವಿಮಾನಗಳಿಗೆ ಈ ಸರಿಗೆಗಳನ್ನು ಮುರಿಯಲು ಸಾಧ್ಯವೇ ಇಲ್ಲ. ಅಂದ ಮೇಲೆ ವೈರಿ ವಿಮಾನಗಳು ಅತ್ಯಂತ ಎತ್ತರದಲ್ಲಿ ಹಾರಾಡಬೇಕು. ಅಲ್ಲಿಗೆ ಒಡನೆಯೇ ಧಾವಿಸಿ ಬೆನ್ನಟ್ಟಿ ನಾಶಮಾಡುವ ವಿಮಾನಗಳೇ ಪ್ರತ್ಯೇಕ ಇವೆ. ಇದು ಹೊರತು ವಿಮಾನ ಭೇದಕ ತೋಪುಗಳು ಗುಂಡಿನ ದುರ್ಬಾಣವನ್ನೇ ಅತಿ ಎತ್ತರಕ್ಕೆ ಹಾರಿಸಿಬಿಡುತ್ತವೆ. ರಾತ್ರಿಯಲ್ಲಿ ಸರ್ಚ್ ಲೈಟುಗಳು ಹಾಗೂ ಹಗಲುಬತ್ತಿಗಳಂತೆ ಆಕಾಶವನ್ನೆಲ್ಲಾ ಬೆಳಗಿಬಿಡುತ್ತವೆ. ಅಂದ ಮೇಲೆ ಇಂಗ್ಲೆಂಡಿನ ಮೇಲೆ ಜಯಶೀಲ ವಿಮಾನ ಯಾನೌಕಾಧಾಳಿಯೆಂಬುದು ಜರ್ಮನರ ಬಯಲು ಕಲ್ಪನೆಯೆಂದೇ ಹೇಳಬೇಕು.

THULUNAD BANK
OF SUPPLY AGENCY LIMITED,
ESTD.] UDIPI. [1933.

Current Account are accepted at 3% p. a.

All kinds of Banking business transacted

Write for particulars to:—
The Managing Director.

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
ಕ್ರಮನಂಬ್ರ ೧೯೩೯
ಅಬ್ದುಲ್ ಖಾದರ್ ಹಾಜಿ—ವಾದಿ.
ಮತ್ತು

1 ಅಂದುಮಾನ ಬ್ಯಾರಿ } ಕುನ್ನಿಲ್ } 1, 2ನೇ ಪ್ರತಿವಾದಿ
2 ಮೈದಿಂ ಕುಂಞಿ ಬ್ಯಾರಿ } ಅಬೋಕ್ರ
ಬ್ಯಾರಿಯ ಮಕ್ಕಳು ಕಾಸರಗೋಡು ತಾ
ಲೂಕು ತಳಂಗ್ರೆ ಗ್ರಾಮದಲ್ಲಿರುವವರು.

ತಾ. 11-5-1926ರಲ್ಲಿ ಪ್ರತಿವಾದಿರ ತಂದೆ ವ್ಯತಪಟ್ಟ ಅಬೋಕ್ರ ಬ್ಯಾರಿಯು ವಾದಿಗೆ ಬರಕೊಟ್ಟ ರಿಜಿಸ್ಟ್ರಿ ಅದವು ದಸ್ತ್ರಾವೇಜಿನ ಅಸ್ಲು ಬಡ್ಡಿ ಈ ವಸೂಲಿ ಕುರಿತು ದಾಖಲು ಮಾಡಿದ ಸದರೀ ವ್ಯಾಜ್ಯವು ತಾ. 19-10-1939ರಲ್ಲು ತನ್ನಿಗ ಇಟ್ಟಿದೆ. ಆ ಕುರಿತು ಸದರೀ ಪ್ರತಿವಾದಿರ ಆಕ್ಷೇಪವಿದ್ದಲ್ಲಿ ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು. ತಾ. 30-9-1939 | C. Rama Rao, ವಾದಿ ಕಡೆ ವಕೀಲ್.

ನವೀನ ಪುಸ್ತಕಗಳು.

೧ ಕೆರೆನೀರು—ರವೆ ಕ್ಷೇಪಣ ಕಾದಂಬರಿ ೪೦೦ ಪುಟ ನ.ಮೂಲ್ಯ ಕಾಗದ ಬೆಲೆ ೨ ರೂಪಾ.
೨. ಹೆನ್ನೆ—ಐತಿಹಾಸಿಕ ನಾಟಕ, ಪುಟ ೮೦ ನುಣುಪು ಕಾಗದ, ಬೆಲೆ ೮ ಆಣೆ.
೩. ಬಲಿದಾನ—ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ, ೨೦೬ ಪುಟ ಬೆಲೆ ರೂ ೧-೪-೦.
೪. ಎಚ್ಚಮ್ಮ ನಾಯಕ—ವಿಜಯ ನಗರಕ್ಕೆ ಸಂಬಂಧಿಸಿದ ಕದಾನಕವು ೧೧೮ ಪುಟ ಬೆಲೆ ೮ ಆಣೆ
೫. ಅಮಾತ್ಯ ನಂದಿನಿ—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ, ೩೦೦ ಪುಟ ಬೆಲೆ ರೂ ೧-೮-೦

ವಿಳಾಸ—ಶ್ರೀ ಶೇಷಾಚಲ ಪ್ರೆಸ್, ಪೊ ಆನಂದವನ (ಹಾವೇರಿ) ಧಾರವಾಡ.

ಸಮುದ್ರ ಯುದ್ಧದ ಭೀಕರ ಶಸ್ತ್ರ

ಅತ್ಯಂತ ತೀವ್ರಗತಿಯ ಯುದ್ಧ ಹಡಗವನ್ನೂ ಹಿಂದಿಕ್ಕುವ ಮೋಟರ್ ಟೋರ್ಪೆಡೋ ಬೋಟು.

ಹಡಗಗಳನ್ನು ಭೇದಿಸಲಿಕ್ಕೂ ರಕ್ಷಿಸಲಿಕ್ಕೂ ವಿಚಿತ್ರ ಸಾಧನ.

ನಂಬ್ರ 102ನೇ ಎಚ್. ಎಮ್. ಎಸ್ ಮೋಟರ್ ಟೋರ್ಪೆಡೋ ಎಂಬುದು ಇಂಗ್ಲೆಂಡಿನ ವಿಚಿತ್ರ ಹಾಗೂ ಅತಿ ನವೀನ ಜಲಯುದ್ಧೋಪಕರಣ. ಯಾವ ಯುದ್ಧ ನಾವೆಯನ್ನಾದರೂ ಹಿಂದಿಕ್ಕುವ ವೇಗವುಳ್ಳ ಅತಿ ಚಿಕ್ಕ ಮೋಟರ್ ಬೋಟು. ಅದರ ಉದ್ದ ಕೆಲವೇ ಗಜ. ಹಾರಾಡುವ ಕೊಂಬಚೇಳಿನ ಆಕೃತಿಯಲ್ಲಿದ್ದು ಅದೇ ಲಾಂಛನವನ್ನು ಪಡೆದಿರುವ ಈ ಮೋಟರ್ ಬೋಟು, 10 ಮಿಲ್ಯನವನು ಬೆಲೆಯ ದೊಡ್ಡ ಯುದ್ಧ ಹಡಗವನ್ನು ತನ್ನ ಕೊಂಡಿಗಳಿಂದ ಕಡಿದು ಮುರಿದುಬಿಡಬಲ್ಲುದು. ಎಂತಹ ಬಲಿಷ್ಠ ಬಲಿಮೂರ್ತಿ ಯುದ್ಧನಾವೆಗಳನ್ನೂ ಕ್ಷಣಮಾತ್ರದಲ್ಲಿ ಸಮುದ್ರ ತಳಕ್ಕೆರಗಿಸುವ ಸಮುದ್ರದ ವಾಮನಮೂರ್ತಿಗಳಿವು. ಮುಂದೆ ಜನ್ಮಕ್ಕೆ ಬರಲಿರುವ ಲೋಕದ ಭಯಂಕರ ಹಾಗೂ ಅತಿ ಚಿಕ್ಕ ನೌಕಾಪಡೆಯ ಅಗ್ರಗಾಮಿಯಿದು. ಲೋಕದ ಪ್ರಬಲ ಜಲಶಕ್ತಿವಾನ್ ರಾಷ್ಟ್ರಗಳೆಲ್ಲಾ ಅಸೂಯೆಪಡತಕ್ಕ ಇಂತಹ ಅತಿ ಚಿಕ್ಕ ಮತ್ತು ಅತ್ಯಂತ ವೇಗದ ಮೋಟರ್ ಬೋಟುಗಳ ಪಡೆಯೊಂದನ್ನು ಇಂಗ್ಲೆಂಡು ಅತಿ ಶೀಘ್ರವಾಗಿ ತಯಾರಿಸುತ್ತಿದೆ.

18ರಿಂದ 38 ಟನ್ನುಗಳಷ್ಟರ ಘನವಾದ, ಘಂಟೆಗೆ 60 ಮೈಲು ವೇಗದ ಇಂಜನ್ನುಳ್ಳ ಈ ಮೋಟರ್ ಬೋಟುಗಳಿಗೆ ಅದ್ವಿತೀಯ ಸಮುದ್ರಚಲನಾ ಮತ್ತು ಹಡಗ ಭೇದಕ ಶಕ್ತಿಯಿರುವುದು. ಇದನ್ನು ನಡಿಸಲು ಹೆಚ್ಚು ಜನರೇನೂ ಬೇಕಾಗಿಲ್ಲ. ಒಟ್ಟು ಒಬ್ಬ ಇಲ್ಲವೇ ಇಬ್ಬರು ಅಧಿಕಾರಿಗಳು ಮತ್ತು 6 ಮಂದಿ ಕೆಲಸಗಾರರಿದ್ದರಾಯಿತು. 1000 ಮೈಲು ವಿಸ್ತೀರ್ಣ ಪ್ರದೇಶದ ಬಂದೋಬಸ್ತನ್ನು ಈ ಒಂದೊಂದು ಮೋಟರ್ ಬೋಟುಗಳು ನಡೆಸಬಲ್ಲುವು. ಹೊಗೆಯ ಮುಸುಕಿನೊಳಗೆ ವೈರಿಗಳ ಕಣ್ಮರೆಯಾಗಿ ಚಲಿಸಬಲ್ಲ ಇವುಗಳಲ್ಲಿ ಹಡಗಭೇದಕ ಮತ್ತು ವಿಮಾನಭೇದಕ ಸಾಧನಗಳಲ್ಲದೆ ಎರಡು ದೊಡ್ಡ ಯಾ ನಾಲ್ಕು ಚಿಕ್ಕ ಟೋರ್ಪೆಡೋಗಳಿರುತ್ತವೆ. ಅತ್ಯಂತ ವೇಗವಾಗಿ ಚಲಿಸಬಲ್ಲ ಡಿಸ್ಟ್ರೋಯರ್ ಯುದ್ಧನಾವೆಗಳಿಗಿಂತಲೂ ಹೆಚ್ಚಿನ ವೇಗವುಳ್ಳ ಮೋಟರ್ ಬೋಟುಗಳೀಗ ತಯಾರಾಗುತ್ತಿವೆ. ಕೆಲಕಾಲದೊಳಗೆ ಇಂತಹ ಮೋಟರ್ ಬೋಟುಗಳ ಪಡೆಗಳು ಬ್ರಿಟನಿನ ಪ್ರತಿಯೊಂದು ಸಮುದ್ರಸಂಧಿನಲ್ಲಿಯೂ ಇರಿಸಲ್ಪಡುವುವು. ಇಷ್ಟರಲ್ಲೇ ಕೆಲವನ್ನು ಭೂಮಧ್ಯಸಾಗರಕ್ಕೂ, ಚೀನಕ್ಕೂ ಕಳುಹಿಸಲಾಗಿದೆ. ಇನ್ನು ಕೆಲವು ಸಿಂಗಪ್ಪುರಕ್ಕೆ ಕಳುಹಿಸಲ್ಪಡಲಿವೆ.

ಹೊಸ ವಿಧಾನದ ಈ ಮೋಟರ್ ಬೋಟೊಂದನ್ನು ಇಂಗ್ಲೆಂಡಿನ ಸದೆಮ್ಟನ್ ಬಂದರದ ಬಳಿ ಪರೀಕ್ಷಿಸಿದಾಗ ಅದು 10 ಸೆಕುಂದಗಳಲ್ಲಿ 50 ಮೈಲುಗಳ ತೀವ್ರ ವೇಗ ತಳೆಯಿತು. ಅನಂತರ ಮೂರೇ ಸೆಕುಂದಗಳಲ್ಲಿ ಈ ವೇಗವನ್ನು ನಾಲ್ಕು ಮೈಲುಗಳಿಗಿಳಿಸಿತು. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ವೇಗವನ್ನು ಬಹಳವಾಗಿ ಹೆಚ್ಚಿಸಲೂ ಕಡಿಮೆ ಮಾಡಲೂ ಬಲ್ಲುದದು. ಅತ್ಯಂತ ವೇಗದಿಂದೋಡುತ್ತಿರುವಾಗಲೇ 18 ಸೆಕುಂದಗಳಲ್ಲದು ತನ್ನ ದಿಕ್ಕನ್ನು ಸಂಪೂರ್ಣ ಬದಲಾಯಿಸಿ ಬಿಡಬಲ್ಲುದು. ಬಹಳ ಚಾತುರ್ಯದಿಂದ ವಿಮಾನಗಳಿಂದ ತಪ್ಪಿಸಿಕೊಳ್ಳಬಲ್ಲುವಾದುದರಿಂದ ಅವುಗಳಿಂದಲೂ ಇವನ್ನು ನಾಶ ಮಾಡಲು ಸಾಧ್ಯವಿಲ್ಲ. ಯಾವ ಅಪಾಯವೂ ಇಲ್ಲದೆ 20 ಅಡಿ ದೂರಕ್ಕೆ ಒಮ್ಮೆಯೇ ಹಾರಿಬಿಡಬಲ್ಲವು. ಎಷ್ಟೊಂದು ತಳಮಳಗೊಂಡಿರುವ ಸಮುದ್ರದಲ್ಲಾದರೂ ತೀವ್ರಗತಿಯಿಂದ ಚಲಿಸಿ ತಾನು ನೋಡಸಿಗದೆ ಕೆಲಸಮಾಡುವ ಶಕ್ತಿ ಇದೆ ಅವಕ್ಕೆ. ಆದುದರಿಂದ ಈ ನಾವೆಗಳನ್ನು ಯಾವ ರೀತಿಯಿಂದಲೂ ಭೇದಿಸಲು ಸಾಧ್ಯವಿಲ್ಲ. ಸಂಪೂರ್ಣ ವೇಗದಿಂದ ಹೋಗುವಾಗಲೇ ಫಕ್ಕನೆ ಚಲನೆಯ ಗತಿಯನ್ನು ಯಾವ ದಿಕ್ಕಿಗೆ ಬೇಕಾದರೂ ಬದಲಾಯಿಸಿ ಬಿಡಬಹುದು. ಒಂದು ದಿಕ್ಕಿನಿಂದ ಪ್ರತಿವಿರುದ್ಧ ದಿಕ್ಕಿಗೆ ಕ್ಷಣಮಾತ್ರದಲ್ಲಿ ಚಲಿಸಬಹುದು. ಚಲಿಸುವಾಗ ಯಾವ ಶಬ್ದವೂ ಆಗುವುದಿಲ್ಲ. ಅಕಸ್ಮಾತ್ತಾಗಿ ಒಂದು ರಾತ್ರಿ ಈ ಮೋಟಾರ್ ಬೋಟುಗಳ ಪಡೆಯೊಂದು ವೈರಿ ಯುದ್ಧ ನಾವೆಗಳ ಮೇಲೇರಿ ಬಂದು ಟೋರ್ಪೇಡೋಗಳನ್ನೆಸೆದು 10 ಸೆಕುಂದಗಳಲ್ಲಿ ಗಂಟೆಗೆ 60 ಮೈಲುಗಳ ವೇಗದಿಂದ ಚಲಿಸಿ ಅದೃಶ್ಯವಾಗಿ ಬಿಡುವುದೆಂದರೆ ಅದೊಂದು ಮಾಯಾ ಯುದ್ಧವೇ ಆಗಲಾರದೇ?

ಜರ್ಮನಿಯ ಭೀಕರ ಯುದ್ಧ ರಹಸ್ಯ ಯಾವುದು
ಭಯಂಕರ ಸಾಂಕ್ರಮಿಕ ರೋಗಾಣುಗಳ ಪ್ರಸಾರವೇ?

ಆಗತ್ಯ ಬಂದಲ್ಲಿ ವೈರಿಗಳು ತಮ್ಮೆದುರಾಗಿ ಉಪಯೋಗಿಸಲಾಗದ ಭಯಂಕರ ಯುದ್ಧ ರಹಸ್ಯವೊಂದನ್ನು ತಾವು ಉಪಯೋಗಿಸುವೆವೆಂದು ಹಿಟ್ಲರರು ಡಾನ್ಜಿಗಿನ ತನ್ನ ಭಾಷಣಗಲ್ಲಿ ಬೆದರಿಕೆ ಹಾಕಿರುವರಷ್ಟೆ. ಅದು ಒಣ ಬೆದರಿಕೆ ಮಾತ್ರ. ಇತರರಿಗೆ ತಿಳಿಯದ ಅಂತಹ ರಹಸ್ಯವೇನೂ ಇರುವುದಿಲ್ಲೆಂದು ಮಿತ್ರರಾಷ್ಟ್ರಗಳ ಅಂಬೋಣ. ಆದರೆ ಹಿಟ್ಲರರು ಯುದ್ಧದ ಸಂದರ್ಭದಲ್ಲೂ ಜಂಭ ಹೊಡೆಯುವಷ್ಟರ ಮೂರ್ಖರೇನೂ ಇರಲಾರರು. ಕೆಲಸಮಯದ ಹಿಂದೆ ಜರ್ಮನ್ ಸೇನಾ ಪತ್ರಿಕೆಯೊಂದರಲ್ಲಿ ಯುದ್ಧತಜ್ಞರೊಬ್ಬರು ಸಾಂಕ್ರಮಿಕ ರೋಗಾಣು ಪ್ರಸಾರದ ಕುರಿತು ಈ ಕೆಳಗಣ ಸಾರಾಂಶದ ಲೇಖನವನ್ನು ಪ್ರಕಟಿಸಿ ತನ್ನ ಪೈಶಾಚಿಕ ಮನೋವೃತ್ತಿಯನ್ನು ವ್ಯಕ್ತಪಡಿಸಿರುವರು.

ಮುಂದಿನ ಯುದ್ಧದಲ್ಲಿ ಸಾಂಕ್ರಮಿಕ ರೋಗಾಣುಗಳನ್ನು ಉಪಯೋಗಿಸಲು ನಾವು ತಯಾರು ಮಾಡುವಾಗ ಮೂರು ವಿಷಯಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. 1. ಅತ್ಯಂತ ತೀವ್ರವಾದ ಮತ್ತು ಅಸಹನೀಯವಾದ ಪರಿಣಾಮವನ್ನುಂಟುಮಾಡುವ ಕ್ರಿಮಿಗಳಾವುವು? 2. ಈ ಕ್ರಿಮಿಗಳನ್ನು ಪ್ರಸರಿಸುವ ಉತ್ಕೃಷ್ಟ ಉಪಾಯ ಯಾವುದು? 3. ಅಂಟು ರೋಗವನ್ನು ಶೀಘ್ರವಾಗಿ ಮತ್ತು ಭಯಂಕರವಾಗಿ ಹಬ್ಬಿಸಲು ಅನುಕೂಲವಾದ ವಿದ್ಯಮಾನಗಳಾವುವು? ಒಂದನೇ ಪ್ರಶ್ನೆಯನ್ನು ನಾವು ಅಷ್ಟೇನೂ ಗಮನಿಸಬೇಕಾಗಿಲ್ಲ. ಯೆಲ್ಲೋಫಿವರ್ (ಭಯಂಕರ ಸ್ವರೂಪದ ಜ್ವರ) ಸ್ಪೋಟೆಡ್ ಟೈಫಸ್ (ಒಂದು ಬಗೆಯ ಸನ್ನಿಪಾತ) ಅಥವಾ ಸಿಡುಬನ್ನು ಹಬ್ಬಿಸಬಹುದು. ಇವುಗಳನ್ನು ಪ್ರಬಲವಾಗಿ ಹಬ್ಬಿಸಲು ಆಯಾ ರೋಗದ ಅಂಟಿನಿಂದ ತುಂಬಿದ ಹೇನು ಅಥವಾ ನೊಣಗಳನ್ನು ಯಾವಾಗಲೂ ನಾವು ತುಂಬಾ ಸಂಗ್ರಹಿಸಿಡಬೇಕು. ಆದರೆ ಎಲ್ಲಕ್ಕಿಂತಲೂ ಉತ್ತಮವಾದುದೆಂದರೆ ವೈರಿ ರಾಷ್ಟ್ರದಲ್ಲಿ ಬುಬೋನಿಕ್ ಪ್ಲೇಗ್ ಎಂಬ ಒಂದು ಬಗೆಯ ಪ್ಲೇಗನ್ನು ಹಬ್ಬಿಸುವುದಾಗಿದೆ. ಈ ಪ್ಲೇಗ್ ಕ್ರಿಮಿಗಳನ್ನು ಅತಿ ಸುಲಭವಾಗಿ ಧಾರಾಳವಾಗಿ ತಯಾರಿಸಬಹುದು. ತಣ್ಣಗಿನ ಹವೆಯಲ್ಲಿ ಕೂಡಾ ಅದು ತಪ್ಪದೆ ಪರಿಣಾಮವನ್ನುಂಟುಮಾಡುತ್ತದೆ. ಅದರ ಅಂಟು ನಿಶ್ಚಯವಾಗಿ ಹಬ್ಬುತ್ತದೆ. ಎರಡನೇದಾಗಿ ಪ್ಲೇಗ್ ಕ್ರಿಮಿಗಳನ್ನು ವೈರಿ ರಾಷ್ಟ್ರಗಳ ಸರ್ವಸಾಮಾನ್ಯ ಜನತೆಯ ಮೇಲೆ ನಾವು ಪ್ರಯೋಗಿಸಬೇಕಲ್ಲದೆ ಸೈನಿಕರ ಮೇಲಲ್ಲ. ಯಾಕೆಂದರೆ, ಸೈನಿಕರ ಮೇಲೆ ಪ್ರಯೋಗಿಸಿದರೆ ಅವರಿಂದ ನಮ್ಮ ಸೈನಿಕರಿಗೂ ಹಾವಳಿಯಾಗಬಹುದು. ವಿಮಾನಗಳ ಮೂಲಕ ಈ ವಿಷ ಕ್ರಿಮಿಗಳನ್ನು ಸುಲಭವಾಗಿ ಹಬ್ಬಿಸಬಹುದು. ಅವು ವೈರಿ ರಾಜ್ಯದ ಮೇಲೇರಿಹೋಗಿ ಪ್ಲೇಗ್ ಕ್ರಿಮಿ ತುಂಬಿರುವ ಬಾಂಬುಗಳನ್ನಾಗಲೀ, ಕುಪ್ಪಿಗಳನ್ನಾಗಲೀ ಚೆಲ್ಲಿಬಿಟ್ಟರಾಯಿತು. ಇಲ್ಲವಾದರೆ ಅವುಗಳ ಪ್ರಸಾರಕ್ಕಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟಿರುವ ಉಪಕರಣಗಳನ್ನು ಪ್ರಯೋಗಿಸಬಹುದು. ಮೂರನೇದಾಗಿ ಈ ಪ್ಲೇಗ್ ಕ್ರಿಮಿಗಳ ಮೇಲೆ ಋತುಭೇದ ಮತ್ತು ಹವಾಮಾನಗಳ ಪರಿಣಾಮವೇನಾಗುವುದೆಂಬುದನ್ನು ಪರಿಶೀಲಿಸಿಕೊಳ್ಳಬೇಕು. ಸೆಕೆಕಾಲದಲ್ಲಿ ಕೊಲೇರಾ, ರಕ್ತಹೊರಕಡೆಯೇ ಮೊದಲಾದ ಜೀರ್ಣಕೋಶಕ್ಕೆ ಸಂಬಂಧಪಟ್ಟ ರೋಗಗಳು ಹೆಚ್ಚಾಗಿ ಹಬ್ಬುತ್ತವೆ. ಚಳಿಗಾಲದಲ್ಲಿ ಶ್ವಾಸಕೋಶ ಸಂಬಂಧವಾದ ರೋಗಗಳು ಬೇಗನೆ ಹಬ್ಬುತ್ತವೆ. ಇದು ಹೊರತು ಅಂಟುರೋಗಗಳನ್ನು ಗಾಳಿಯಲ್ಲಿ ಹಬ್ಬಿಸುವ ಮೊದಲು ಮಣ್ಣಿನ ಸ್ವಭಾವ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಪರಿಶೀಲಿಸಿಕೊಳ್ಳಬೇಕು. ಇದರಿಂದ ಭಯಂಕರ ಸಾಂಕ್ರಮಿಕ ರೋಗಾಣುಗಳನ್ನು ವೈರಿ ರಾಜ್ಯಗಳ ಮೇಲೆ ಪ್ರಚಾರಮಾಡುವ ಕುರಿತು ಜರ್ಮನಿಯು ಮೊದಲೇ ಚೆನ್ನಾಗಿ ಆಲೋಚಿಸಿ ಸಿದ್ಧತೆ ಮಾಡಿರಬೇಕೆಂದೂ, ಅದನ್ನೇ ಹಿಟ್ಲರರು ತನ್ನ ಭಾಷಣದಲ್ಲಿ ಪ್ರಸ್ತಾಪಿಸಿರಬಹುದೆಂದೂ ನಂಬಬಹುದಾಗಿದೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಸ್ತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾ ಯಾವನೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ, ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩ ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರಸ್ತೆ, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:— ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತಿ ಡಿಸ್ಪೆನ್ಸರಿ

Sole Manufacturer Dr. D. N. JASANI, Vitalbhai Patel Road, BOMBAY 4

ಪಶ್ಚಿಮ ರಣರಂಗದಲ್ಲಿ ಫ್ರೆಂಚರ ವಿಜಯ

೩೦ ಜರ್ಮನ್ ಹಳ್ಳಿಗಳನ್ನು ಫ್ರೆಂಚರು ಗೆದ್ದಿರುವರು

ಉತ್ತರಸಮುದ್ರದಲ್ಲಿ ಸಬ್‌ಮೆರೀನುಗಳ ಹಾವಳಿ

ಬ್ರಿಟಿಷರ ಜಯಶೀಲ ಸಮುದ್ರಪಹರೆ!

ತಮ್ಮ ಎಲ್ಲೆಯ ೩೦ ಜರ್ಮನ್ ಹಳ್ಳಿಗಳನ್ನೀಗ ಫ್ರೆಂಚ್ ಸೇನೆಯು ಗೆದ್ದಿರುವುದು. ಕಳೆದ ಮಹಾಯುದ್ಧದಿಂದ ಫ್ರೆಂಚ್ ಸೇನಾನಿಗಳು ಪಾಠ ಕಲಿತಿರುತ್ತಾರೆ. ಆದುದರಿಂದ ಈ ಸಲ ನಿಧಾನವಾಗಿ ಮತ್ತು ಸ್ಥಿರವಾಗಿ ಫ್ರೆಂಚ್ ಸೇನೆಯು ಮುಂದೊತ್ತುತ್ತಿದೆ. ಕಳೆದ ಮಹಾಯುದ್ಧದಲ್ಲಿ ಒಂದೇ ದಿನದಲ್ಲಾದ ಪ್ರಾಣ ಹಾನಿ ಕೂಡಾ ಇಷ್ಟರವರೆಗೆ ಆಗಿಲ್ಲ. ಸಂದುಕಟ್ಟಿನ ಪ್ರಾಮುಖ್ಯ ಪಟ್ಟಣವಾದ ಸಾರ್‌ಬ್ರುಕೆನನ್ನು ಬಿಟ್ಟು ಜರ್ಮನ್ ಸೇನೆಯು ಹಿಂದೆ ಸರಿದಿರುತ್ತದೆ. ಈ ಪಟ್ಟಣವನ್ನು ಫ್ರೆಂಚ್ ಸೇನೆಯು ಮೂರು ಕಡೆಗಳಿಂದ ಆವರಿಸಿದೆ. ಪ್ರತಿಧಾಳಿ ನಡಿಸಿ ಫ್ರೆಂಚರನ್ನು ಹಿಂದಕ್ಕಟ್ಟುವುದಂತಿರಲಿ, ತಡೆಗಟ್ಟುವುದರಲ್ಲಿ ಕೂಡಾ ಜರ್ಮನರು ಈ ವರೆಗೆ ಹೆಚ್ಚಿನ ಸಾಮರ್ಥ್ಯವನ್ನೇನೂ ತೋರಿಸಿರುವುದಿಲ್ಲ. ಸಾರ್ ಬ್ರುಕೆನನ್ನು ಜರ್ಮನರಿಗಿನ್ನು ಹೆಚ್ಚು ಸಮಯ ರಕ್ಷಿಸಿಕೊಳ್ಳಲು ಸಾಧ್ಯವಾಗಲಾರದು. ಈ ಪಟ್ಟಣವನ್ನು ಫ್ರೆಂಚರು ಗೆದ್ದರೆ ಜರ್ಮನರ ಪ್ರಾಮುಖ್ಯ ಕೈಗಾರಿಕ ಪ್ರದೇಶದ ಮೇಲೆ ಮತ್ತೆ ಸುಲಭವಾಗಿ ಧಾಳಿ ನಡಿಸಬಹುದು. ಸೆಪ್ಟೆಂಬರ ತಾ. ೩೦ರ ವಾರ್ತೆಯ ಮೇರೆಗೆ ಫ್ರೆಂಚ್ ಸೇನೆಯು ಸಿಗ್‌ಫ್ರಿಡ್ ಕೋಟೆಯ ಮಧ್ಯದ ಮುಂಬದಿಯನ್ನು ಸಮೀಪಿಸುತ್ತಿದೆ. ಜರ್ಮನರೀಗ ಫ್ರೆಂಚ್ ಸೇನೆಯನ್ನು ಪ್ರಬಲವಾಗಿ ವಿರೋಧಿಸಹತ್ತಿದ್ದಾರೆ. ಆದರೆ ಫ್ರೆಂಚರು ಅವರನ್ನು ಹಿಂದಕ್ಕೆ ಸರಿಸಿ ಮುಂದೊತ್ತುತ್ತಿದ್ದಾರೆ. ಎರಡೂ ಕಡೆಯವರೂ ಭೀಷಣ ಫಿರಂಗಿ ಯುದ್ಧ ನಡಿಸುತ್ತಿದ್ದಾರೆ. ಫ್ರೆಂಚರು ಹೀಗೆಯೇ ಮುಂದೊತ್ತಿ ರ್‍ಹೈನ್ ನದಿಯನ್ನು ದಾಟಲು ಶಕ್ತರಾದರೆ ದೊಡ್ಡ ವಿಜಯ ಪಡೆದಂತಾಗುವುದು. ಈ ರಣರಂಗದಲ್ಲಿ ಫ್ರೆಂಚರನ್ನು ತಡೆಗಟ್ಟಲು ಜರ್ಮನರಿಗೆ ಅಸಾಧ್ಯವಾದರೆ ಪಶ್ಚಿಮ ಬದಿಯಿಂದ ಲಕ್ಸೆಂಬರ್ಗ್ ಬೆಲ್ಜಿಯಮ್ ಮತ್ತು ಹೊಲ್ಲೆಂಡುಗಳ ತಾಟಸ್ಥ್ಯವನ್ನು ಮುರಿದು ಫ್ರಾನ್ಸಿನ ಮೇಲೆ ನುಗ್ಗಲೆತ್ನಿಸಬಹುದು. ಸೆಪ್ಟೆಂಬರ ತಾ. ೩೦ರಲ್ಲಿ ಫ್ರೆಂಚ್ ಪ್ರಧಾನ ಮಂತ್ರಿಗಳು ಸೇನಾನಾಯಕರೊಡನೆ ಪ್ರಾಮುಖ್ಯ ಮಾತುಕತೆ ನಡಿಸಿದರು.

ಬ್ರಿಟಿಷ್ ಹಡಗ ಮತ್ತು ವಿಮಾನಗಳ ಜಯಶೀಲವಾದ ಪಹರೆಯಿಂದಾಗಿ ಇಂಗ್ಲೆಂಡಿನ ಸುತ್ತುಮುತ್ತಲಿನ ಸಮುದ್ರಗಳಲ್ಲಿ ಜರ್ಮನ್ ಸಬ್ ಮೆರೀನ್ ಮತ್ತು ಯುದ್ಧ ಹಡಗ ಸಂಚಾರವು ಕಡಿಮೆಯಾಗಿದೆ. ಇಷ್ಟರವರೆಗೆ ಮಿತ್ರ ರಾಷ್ಟ್ರಗಳು ೭ ಸಬ್ ಮೆರೀನ್‌ಗಳನ್ನು ಮುಳುಗಿಸಿರುತ್ತವೆ. ತಮ್ಮ ಹಡಗಗಳು ಸುರಕ್ಷಿತವಾಗಿ ಸಂಚರಿಸುವಂತೆ ತಕ್ಕ ರಕ್ಷಣಾ ವ್ಯವಸ್ಥೆಯು ನಡೆದಿದೆ ಮಾತ್ರವಲ್ಲದೆ ಜರ್ಮನಿಯು ಮತ್ತು ಜರ್ಮನಿಗೆ ಸಾಮಾನುಗಳನ್ನೊಯ್ಯುವ ಇತರ ರಾಷ್ಟ್ರಗಳ ಹಲವು ಹಡಗಗಳನ್ನು ಬ್ರಿಟಿಷರು ಹಿಡಿದು ೬೭,೦೦೦ ಟನ್ನು ಸಾಮಾನುಗಳನ್ನು ವಶಪಡಿಸಿಕೊಂಡಿದ್ದಾರೆ. ಇದು ಹೊರತು ಕೆಲವು ಹಡಗಗಳನ್ನು ಮುಳುಗಿಸಿರುತ್ತಾರೆ. ಇದರಿಂದ ಜರ್ಮನಿಗೆ ದೊಡ್ಡ ಪೆಟ್ಟಾಗಿದೆ. ಈಗ ಜರ್ಮನ್ ಸಬ್ ಮೆರೀನ್ ಮತ್ತು ಯುದ್ಧನಾವೆಗಳು ಉತ್ತರ ಸಮುದ್ರದಲ್ಲಿ ಹೆಚ್ಚಾಗಿ ಸಂಚರಿಸಿ, ಇಂಗ್ಲೆಂಡ್ ಮತ್ತು ಫ್ರಾನ್ಸುಗಳಿಗೆ ಸಾಮಾನುಗಳನ್ನೊಯ್ಯುವ ತಟಸ್ಥ ರಾಷ್ಟ್ರಗಳ ಹಡಗಗಳನ್ನು ಹಿಡಿದು ಸಾಮಾನುಗಳನ್ನು ಕಸಕೊಳ್ಳಹತ್ತಿವೆ. ಸಬ್ ಮೆರೀನುಗಳು ಸ್ವೀಡನ್ ಮತ್ತು ಡೆನ್ಮಾರ್ಕ್ ದೇಶಗಳ ಕೆಲವು ಹಡಗಗಳನ್ನು ಮುಳುಗಿಸಿರುತ್ತವೆ. ಕಳೆದ ಕೆಲವು ದಿನಗಳಲ್ಲಿ ಜರ್ಮನ್ ಯುದ್ಧನಾವೆಗಳು ತಟಸ್ಥ ರಾಷ್ಟ್ರಗಳ ೪೬ ಹಡಗಗಳನ್ನು ಹಿಡಿದು ಅವುಗಳ ಸಾಮಾನುಗಳನ್ನು ವಶಪಡಿಸಿಕೊಂಡಿರುತ್ತವೆ. ಜರ್ಮನ್ ವಿಮಾನಗಳು ಸಬ್ ಮೆರೀನುಗಳೊಂದಿಗೆ ಸಹಕರಿಸುತ್ತವೆ. ಆದುದರಿಂದ ಈಗ ಬಾಲ್ಟಿಕ್ ಸಮುದ್ರ ತೀರದ ದೇಶಗಳು ಉತ್ತರ ಸಮುದ್ರದ ಮೂಲಕ ಸಾಮಾನುಗಳು ಕಳುಹಿಸಿ ವ್ಯಾಪಾರ ವಹಿವಾಟು ನಡಿಸದಂತೆಯೇ ಆಗಿದೆ.

ಜರ್ಮನಿಯು ಮೇಲಿನ ಮಿತ್ರ ರಾಷ್ಟ್ರಗಳ ನೌಕಾ ಮಂತ್ರಿಗೆಯು ತೀವ್ರ ಪರಿಣಾಮಕಾರಿಯಾಗಿದೆ. ಆದುದರಿಂದ, ಇನ್ನು ಮುಂದೆ ಎಚ್ಚರ ಸಹ ಕೊಡದೆ ತಮ್ಮ ಸಬ್ ಮೆರೀನುಗಳು ಮಿತ್ರ ರಾಷ್ಟ್ರಗಳ ಹಡಗಗಳನ್ನು ಮುಳುಗಿಸಿಬಿಡುವವೆಂದು ಜರ್ಮನ್ ಸರಕಾರವು ಸಿಟ್ಟಿನಿಂದ ಎಚ್ಚರಿಸಿರುತ್ತದೆ. ಜರ್ಮನ್ ಸಬ್ ಮೆರೀನ್ ನಾಯಕರು ಕೆಲವರು ಬ್ರಿಟಿಷ್ ಹಡಗಗಳ ಕಪ್ತಾನರಿಬ್ಬರನ್ನು ಅತಿ ವಿನಯದಿಂದ ಕಂಡು, ಅವರ ಹಡಗ ಮುಳುಗಿಸಬೇಕಾಗಿ ಬಂದುದಕ್ಕಾಗಿ ಪಶ್ಚಾತ್ತಾಪ ಸೂಚಿಸಿ, ಅವರಿಗೆ ಕುಡಿಯಲು ಸುರೆ ಮತ್ತು ತಿನ್ನಲು ರೊಟ್ಟಿಕೊಟ್ಟ ವಿದ್ಯಮಾನಗಳು ತಿಳಿದುಬಂದಿದೆ.

ರಾಜಿಯ ಯತ್ನ

ಜರ್ಮನಿಯು ತಿರುಗಿ ರಾಜಿಯ ಪ್ರಯತ್ನ ಮಾಡುತ್ತಲಿದೆ. ಇಟೆಲಿಯ ವಿದೇಶ ಮಂತ್ರಿ ಕೌಂಟ್ ಸಿಯಾನೋರವರು ಬರ್ಲಿನಿಗೆ ಹೋಗಿ ಹೋಗಿರುತ್ತಾರೆ. ಬಾಲ್ಟಿಕ್ ರಾಷ್ಟ್ರಗಳ ಮೇಲೆ ರಸ್ಯದ ಪ್ರಭಾವವು ಹೆಚ್ಚಿದುದರಿಂದ ಇಟೆಲಿಯು ತಳಮಳಗೊಂಡಿದೆ. ಯುದ್ಧವು ದೀರ್ಘಕಾಲ ಮುಂದುವರಿದರೆ ಜರ್ಮನಿಯ ಮೇಲೆಯೂ ರಸ್ಯದ ಹಿಡಿತವು ಬಲವಾಗಿ ಇಟೆಲಿಯು ಮೂಲೆಗೊತ್ತಲ್ಪಡುವುದು ನಿಶ್ಚಯ. ಆದುದರಿಂದ ಯುದ್ಧವನ್ನು ಕೊನೆಗೊಳಿಸುವಂತೆ ಇಟೆಲಿಯು ಸಾಧ್ಯವಾದ ಪ್ರಯತ್ನವನ್ನು ನಡಿಸಬಹುದು. ಇದರಿಂದ ಕೌಂಟ್ ಸಿಯಾನೋರವರ ಬರ್ಲಿನಿನ ಸಂದರ್ಶನವು ಹೆಚ್ಚಿನ ಪ್ರಾಮುಖ್ಯತೆ ಪಡೆದಿದೆ. ಆದರೆ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಈ ಸಂಗತಿಗಳ ಗೊಡವೆಯೇ ಇಲ್ಲದೆ ಪ್ರಬಲ ಹೋರಾಟ ನಡಿಸುವ ಅಚಲ ನಿರ್ಧಾರವುಳ್ಳವಾಗಿವೆ.

ಸೋವಿಯೆಟ್ ಜರ್ಮನ್ ಒಡಂಬಡಿಕೆ

ಸ್ಟೇಲಿನರ ಆಮಂತ್ರಣದ ಮೇರೆಗೆ ಇದೇ ತಾ. ೨೭ರಲ್ಲಿ ಜರ್ಮನ್ ವಿದೇಶ ಮಂತ್ರಿಗಳಾದ ಹರ್. ವಾನ್ ರಿಬಂಟ್ರಫರು ಹರ್. ಫೋರೆಸ್ಟರರೊಂದಿಗೆ ಮೋಸ್ಕೋ ಪಟ್ಟಣಕ್ಕೆ ಹೋಗಿ ಸೋವಿಯೆಟ್ ವಿದೇಶ ಮಂತ್ರಿ ಎಮ್. ಮೊಲೊಟೋವರೊಡನೆ ತಾ. ೨೮ರಲ್ಲಿ ಮಾತುಕತೆ ನಡಿಸಿದರು. ಪೋಲಂಡಿನ ವಿಭಜನೆ, ಶಾಂತಿ ಸ್ಥಾಪನಾಯತ್ನ, ಅದಕ್ಕೆ ಮಿತ್ರ ರಾಷ್ಟ್ರಗಳೊಪ್ಪದಿದ್ದಲ್ಲಿ ಮುಂದಿನ ಧೋರಣೆಯ ಕುರಿತು ಪುನಃ ಮಾತುಕತೆ, ಜರ್ಮನಿಗೆ ರಸ್ಯವು ಕಚ್ಚಾ ಮಾಲುಗಳನ್ನೊದಗಿಸುವಿಕೆಯ ಕುರಿತು ರಸ್ಯ ಮತ್ತು ಜರ್ಮನಿಗಳೀಗ ಒಪ್ಪಂದಮಾಡಿಕೊಂಡಿರುವವು. ಪೋಲಂಡಿನ ಹೊಸ ವಿಭಜನೆಯ ಮೇರೆಗೆ ರಸ್ಯವು ಲುಬ್ಲಿನ್ ಪ್ರಾಂತ ಮತ್ತು ವಿಸ್ಟ್ಯುಲಿ ನದಿಯ ಪ್ರದೇಶವನ್ನು ಸಂಪೂರ್ಣವಾಗಿ ಜರ್ಮನಿಗೆ ಬಿಟ್ಟುಕೊಟ್ಟಿರುವುದು. ತಾ. ೨೯ರಲ್ಲಿ ಸೋವಿಯೆಟ್ ಸೇನಾಧ್ಯಕ್ಷರಾದ ಜನರಲ್ ವರೊಶಿಲೊವರೇ ಮೊದಲಾದವರು ಹರ್ ವಾನ್ ರಿಬಂಟ್ರಫರೇ ಮೊದಲಾದವರ ಸನ್ಮಾನಾರ್ಥವಾಗಿ ದೊಡ್ಡ ಔತಣವೊಂದನ್ನಿತ್ತರು. ಈ ಅತಿಥಿಗಳಲ್ಲಿ ರಸ್ಯದ ಇಬ್ಬರು ಯೆಹೂದ್ಯ ಮಂತ್ರಿಗಳೂ ಇದ್ದರು. ಇದೀಗ ಪ್ರಥಮವಾಗಿ ರಿಬಂಟ್ರಫರು ಯೆಹೂದ್ಯರೊಂದಿಗೆ ಕುಳಿತು ಊಟಮಾಡುವುದಾಗಿದೆ. ಹರ್ ವಾನ್ ರಿಬಂಟ್ರಫರು ಎರಡುವರೆ ಘಂಟೆಗಳ ವರೆಗೆ ಸ್ಟೆಲಿನರೊಡನೆ ಕೂಡಾ ಮಾತುಕತೆ ನಡಿಸಿದರು. ಆದರೆ ರಸ್ಯವು ಜರ್ಮನಿಯೊಡನೆ ಮಿಲಿಟರಿ ಒಪ್ಪಂದವನ್ನೇನೂ ಮಾಡಿಕೊಂಡಿಲ್ಲ. ಅದು ತಟಸ್ಥವಾಗಿಯೇ ಇರುವುದೆಂದೂ ಜರ್ಮನಿಗೆ ಎಣ್ಣೆಯೇ ಮೊದಲಾದ ಅತ್ಯಾವಶ್ಯಕ ಸಾಮಾನುಗಳನ್ನು ಹೆಚ್ಚಾಗಿ ಒದಗಿಸಲು ಅದಕ್ಕೆ ಸಾಧ್ಯವಿಲ್ಲೆಂದೂ ನಂಬಲಾಗಿದೆ.

ಪರದೇಶಗಳಲ್ಲಿ ನಾಝಿ ಮುಖಂಡರ ಹಣ ಠೇವಣಾತಿ

ನಾಝಿಮುಖಂಡರುಗಳಾದ ಡಾಕ್ಟರ್ ಗೊಬೆಲ್ಸರೇ ಮೊದಲಾದವರು ಒಂದುವೇಳೆ ನಾವು ಪರಾಜಿತರಾದರೆ ಮುಂದಿನ ಪೆಚ್ಚಿಕ್ಕಾಗಿ ಹೇರಳ ಹಣವನ್ನು ಪರದೇಶಗಳಲ್ಲಿ ವಿನಿಯೋಗಿಸಿರುವರೆಂಬ ಸುದ್ದಿಯನ್ನು ಡಾಕ್ಟರ್ ಗೋಬೆಲ್ಸರು ಸುಳ್ಳಿನಕಂತೆ ಎಂದು ಅಲ್ಲಗಳೆದಿದ್ದರು. ಆದರೆ ಅಮೇರಿಕಾನಪತ್ರಿಕಾ ವ್ಯವಸಾಯಿಯಾದ ಮಿ. ನಿಕ್ಕರ್‌ಬೊಕರರು ಈ ಕುರಿತಾದ ಎಲ್ಲಾ ವಿವರಗಳನ್ನು ಪ್ರಕಟಿಸಿ, ಸುಳ್ಳುಗಾರರು ಗೊಬೆಲ್ಸರೆಂಬುದನ್ನು ಸಿದ್ಧಗೊಳಿಸಿರುವರು. ಈ ಹಣ ಠೇವಣಾತಿಗೆ ಗೊಬೆಲ್ಸರು ೩ ಮಂದಿ ಏಜಂಟರನ್ನು ನೇಮಿಸಿದ್ದರು. ವಿಲ್‌ಹೆಲ್ಮ್ ಚಿಕ್ಟರ್‌ಬರ್ಗ ಎಂಬವರು ಬ್ಯೂನೊಸ್ ಏರೆಸಿನ ಜರ್ಮನ್ ಕಂಪೆನಿಯೊಂದರ ತಿಜೋರಿಯಲ್ಲಿ ೧,೮೫೦,೦೦೦ ಡೋಲರನ್ನು ಡಿಪೋಜಿಟ್‌ಮಾಡಿರುವರು. ಎರಡನೇದಾಗಿ ಥೋಮಸ್ ಟುಚರರೆಂಬವರು ೨,೧೮೦,೦೦೦ ಬೆಲ್ಗಾಸ್‌ಗಳನ್ನು ಲಕ್ಸೆಂಬರ್ಗಿನ ಒಂದು ಕಂಪೆನಿಯ ಶೇರುಗಳಲ್ಲಿ ಹಾಕಿರುವರು. ಮೂರನೆದಾಗಿ ಪೌಲ್‌ವಾನ್ ಬೊಡ್ಮೆರ್ ಎಂಬವರ ಮೂಲಕ ಜಪಾನಿನ ಬೇಂಕೊಂದರಲ್ಲಿ ೪೬೫,೦೦೦ ಪವನುಗಳನ್ನಿಡಿಸಿರುವರು. ಹರ್‌ವಾನ್ ರಿಬಂಟ್ರಪರು ೧ ೬೫೦,೦೦೦ ಡೋಲರುಗಳನ್ನು ಮೂರು ಏಜಂಟರುಗಳಮೂಲಕ ಬೇರೆ ಬೇರೆ ದೇಶಗಳಲ್ಲಿವಿನಿಯೋಗಿಸಿದ್ದಾರೆ. ಇದೇ ರೀತಿ ಮಾರ್ಶಲ್‌ಗೋರಿಂಗ್ ಡಾಕ್ಟರ್ ಲೇ ಮೊದಲಾದವರೂ ಬೇರೆ ಬೇರೆ ದೇಶಗಳಲ್ಲಿ ಹೇರಳ ಹಣ ಠೇವಣಾತಿ ಮಾಡಿರುವರು. ಹಿಟ್ಲರರ ಅಂಗರಕ್ಷಕರಾಗಿರುವ ಹರ್ ಹಿಮ್ಲರರು ಬೇಂಕುಗಳಲ್ಲಿ ಹಣವನ್ನಿಟ್ಟಿಲ್ಲ ಆದರೆ ದಕ್ಷಿಣ ಅಮೇರಿಕ ಫಿನ್ಲೆಂಡ್ ಮತ್ತು ಜಪಾನಿನ ತಮ್ಮ ಮಿತ್ರರ ವಶ ೨ ಮಿಲ್ಯ ಡೋಲರುಗಳವರೆಗಿರಿಸಿರುತ್ತಾರೆಂದು ನಿಕ್ಕರ್ ಬೊಕರರು ವಿದಿತಗೊಳಿಸಿರುತ್ತಾರೆ.

ಕಾಂಗ್ರೆಸಿನ ಧೋರಣೆಯು ನ್ಯಾಯವಾದುದು

ಯುದ್ಧದ ಸಂಬಂಧವಾದ ಕಾಂಗ್ರೆಸಿನ ಧೋರಣೆಯು ನ್ಯಾಯವಾದುದು. ಇಂಗ್ಲೆಂಡು ಯುದ್ಧಕ್ಕಿಳಿದಿರುವ ಉದ್ದೇಶವೇನು? ಹಿಂದೂದೇಶದ ಸ್ವಾತಂತ್ರ್ಯದ ಮೇಲೆ ಅದರಿಂದ ಎಂತಹ ಪರಿಣಾಮವಾಗುವುದೆಂಬುದನ್ನು ಬ್ರಿಟಿಷ್ ಸರಕಾರವು ಸ್ಪಷ್ಟಪಡಿಸಿ, ಇಂಗ್ಲೆಂಡು ಮತ್ತು ಹಿಂದೂದೇಶಗಳೊಳಗೆ ಗೌರವಪೂರ್ವಕವಾದ ಒಪ್ಪಂದವಾಗುವಂತಾಗಬೇಕು. ಲೋರ್ಡ್ ಜೆಟ್ಲೆಂಡರು ಲೋರ್ಡ್ಸ್ ಸಭೆಯಲ್ಲಿ ತೋರಿಸಿರುವ ಮನೋವೃತ್ತಿಯು ಶೋಚನೀಯವಿದೆ. ಸುದೈವದಿಂದ ವೈಸರಾಯರು ಮುಕ್ತದ್ವಾರನದಿಂದ ವರ್ತಿಸುವವರಿದ್ದು ಲೋರ್ಡ್ ಜೆಟ್ಲೆಂಡರ ಭಾಷಣದಿಂದುಂಟಾದ ದುಷ್ಪರಿಣಾಮವನ್ನು ನಿವಾರಿಸಿ ಹಿಂದೀ ಮುಖಂಡರನ್ನು ಸಮಾಧಾನಪಡಿಸದಿರಲಾರರೆಂದು ಇಂಗ್ಲೆಂಡಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆದಿರುತ್ತದೆ. ಇಂಗ್ಲೆಂಡು ನಿಜವಾಗಿಯೂ ಪ್ರಜಾಸತ್ತೆಗಾಗಿ ಈ ಯುದ್ಧ ಹೂಡಿರುವುದಾದರೆ ಹಿಂದೂದೇಶಕ್ಕೆ ಕೂಡಲೆ ಡೊಮಾನಿಯನ್ ಸ್ಟೇಟಿಸಿನ ಸ್ಥಾನ ಕೊಡಬೇಕು. ಈ ಸಂದರ್ಭದಲ್ಲಿ ಬಲಾತ್ಕಾರದಿಂದ ಹಿಂದೀಯ ಆಕಾಂಕ್ಷೆಗಳನ್ನು ದಬಾಯಿಸಿದರೆ ಲೋಕದ ದೃಷ್ಟಿಯಲ್ಲಿ ನಾವು ಅಪರಾಧಿಗಳಾಗುತ್ತೇವೆ. ಆದುದ

(೨ನೇ ಪುಟಕ್ಕೆ ಮುಂದುವರಿಸಿದೆ)

IN MATTERS OF LOVE

MAN DOES NOT ATTRACT MAN

WOMAN DOES NOT ATTRACT WOMAN

BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited

(Incorporated in British India)

ESTD **1906**

ಚರ್ಚಿಲ್ಲರ ಉಜ್ವಲ ಭಾಷಣ ಜರ್ಮನಿಯು ಎಚ್ಚರಿಸಲ್ಪಟ್ಟಿದೆ

ಆಕ್ಟೋಬರ ತಾ. 1ರಲ್ಲು, ಬ್ರಿಟಿಷ್ ನೌಕಾ ಮಂತ್ರಿಗಳಾದ ಮಿ ಚರ್ಚಿಲ್ಲರು ಕೊಟ್ಟ ರೇಡಿಯೋ ಭಾಷಣದಲ್ಲಿ, ಒಂದು ತಿಂಗಳ ಯುದ್ಧದ ವಿಮರ್ಶೆಯನ್ನವರು ಮಾಡಿರುತ್ತಾರೆ. ಯುದ್ಧದ ತೀವ್ರತೆಯು ಇನ್ನೂ ಉಂಟಾಗಿಲ್ಲ ಹಿಂದೆ 150ವರ್ಷಗಳ ವರೆಗೆ ಪೋಲಂಡನ್ನು ಬಂಧನದಲ್ಲಿರಿಸಿದ್ದ ಜರ್ಮನಿ ಮತ್ತು ರಸ್ಯಗಳು ಇಂದೀಗ ಪುನಃ ಅದರ ಮೇಲೆ ಧಾಳಿ ನಡಿಸಿ ಆಕ್ರಮಣ ಮಾಡಿರುವರು. ಆದರೆ ಪೋಲಂಡಿನ ಆತ್ಮವು ಅವಿನಾಶಿಯಿದ್ದು ಅದು ಪುನಃ ಸ್ವತಂತ್ರವಾಗಿ ತಲೆಯೆತ್ತದಿರಲಾರದು. ಮತ್ತೊಂದು ಪ್ರಾಮುಖ್ಯ ವಿಷಯವೆಂದರೆ, ರಶ್ಯದ ಪ್ರಾಬಲ್ಯ. ರಶ್ಯವು ಕೇವಲ ತನ್ನ ಸ್ವಾರ್ಥಸಾಧನೆಯ ದಾರಿ ಹಿಡಿದಿದೆ. ಆದರೂ ರಶ್ಯದ ವರ್ತನೆಯಿಂದಾಗಿ ಉಕ್ರೈನ್ ಮತ್ತು ಬಾಲ್ಟಿಕ್ ರಾಜ್ಯಗಳ ಮೇಲೆ ಜರ್ಮನಿಯು ಅಧಿಕಾರ ನಡಿಸುವ ಆಟವಿನ್ನು ನಡೆಯಲು ಸಾಧ್ಯವಿಲ್ಲ. ಕಳೆದ ವಾರ ಹರ್ ರಿಬ್ಬೆಂಟ್ರಾಫರು ಮೋಸ್ಕೋ ಪಟ್ಟಣಕ್ಕೆ ಕರೆಯಲ್ಪಟ್ಟದು ಈ ಕುರಿತು ಎಚ್ಚರಿಸಲ್ಪಡಲಿಕ್ಕಾಗಿ. ಇಂದೀಗ ರಶ್ಯದ ಕೈಮೇಲಾಗಿದೆ ಪೂರ್ವಯುರೋಪಿನಲ್ಲಿ. ಜರ್ಮನಿಯು ರುಮೇನಿಯ, ಯುಗೋಸ್ಲಾವಿಯ, ಬಲ್ಗೇರಿಯ ಮತ್ತು ಟರ್ಕಿಗಳನ್ನು ಯುದ್ಧಕ್ಕೆಳೆಯದಂತೆ ಮಾಡುವುದರಲ್ಲಿ ರಶ್ಯ, ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಸಮಾನ ಆಸಕ್ತಿಯುಳ್ಳವಿರುತ್ತವೆ. ಈ ಕೆಲಸವನ್ನು ರಶ್ಯವು ಮಾಡುತ್ತಿರುವಂತಿದೆ

ಸಮುದ್ರಗಳು ಸುರಕ್ಷಿತವಾಗುತ್ತಿವೆ

ಆರಂಭದಲ್ಲಿ ಜರ್ಮನ್ ಸಬ್‌ಮೆರೀನುಗಳು ಕೆಲವು ಬ್ರಿಟಿಷ್ ಹಡಗಗಳನ್ನು ಮುಳುಗಿಸಿಬಿಟ್ಟಿರುತ್ತವೆ 2000 ಬ್ರಿಟಿಷ್ ಹಡಗಗಳು ಪ್ರತಿದಿನ ಸಮುದ್ರಗಳಲ್ಲಿ ಸಂಚರಿಸುತ್ತಿರುವಾಗ ಅದು ಸ್ವಾಭಾವಿಕವೇ ಸರಿ. ಈಗ ಒಂದು ವಾರದಿಂದ ಈ ಹಾವಳಿ ನಿಂತುಹೋಗಿದೆ. ಈಗ ಬ್ರಿಟಿಷ್ ಯುದ್ಧಹಡಗಗಳು ಜರ್ಮನ್ ಸಬ್‌ಮೆರೀನುಗಳನ್ನು ರಾತ್ರಿಹಗಲು ಹುಡುಕಿ ನಾಶಪಡಿಸುತ್ತಿವೆ ಒಂದು ತಿಂಗಳ ಯುದ್ಧದಲ್ಲಿ, ಜರ್ಮನರು ನಮ್ಮ ಹಡಗಗಳಲ್ಲಿ ಮುಳುಗಿಸಿರುವುದಕ್ಕಿಂತ 150,000 ಟನ್ನು ಹೆಚ್ಚಿನ ಅತ್ಯುಪಯೋಗಕರ ಜರ್ಮನ್ ಮಾಲುಗಳನ್ನು ನಾವು ಹಿಡಿದಿರುತ್ತೇವೆ. ಈಗ ಜರ್ಮನರು ನೋರ್ವೆ ಸ್ವೀಡನ್ ಮೊದಲಾದ ತಟಸ್ಥ ರಾಜ್ಯಗಳ ಹಡಗಗಳನ್ನು ಮುಳುಗಿಸಹತ್ತಿರುತ್ತಾರೆ. ಅವುಗಳಿಗೂ ಬ್ರಿಟಿಷ್ ಹಡಗುಗಳ ರಕ್ಷಣೆಯು ಏರ್ಪಾಡು ಮಾಡಬಹುದಾಗಿದೆ. ಆಕ್ಟೋಬರ ಅಂತ್ಯದೊಳಗೆ, ಸಮುದ್ರ ಪಹರೆಯ ಹಡಗಗಳನ್ನು 3ಪಾಲಷ್ಟು ಹೆಚ್ಚಿಸಲಾಗುವುದು. ಆಗ ನಮ್ಮ ವ್ಯಾಪಾರಿ ಹಡಗಗಳು ಹೆಚ್ಚಿನ ಅಪಾಯದ ಭೀತಿಯಿಲ್ಲದೆ ಸಮುದ್ರಗಳಲ್ಲಿ ಸಂಚರಿಸಬಹುದು.

ಇಂದೀಗ ಪ್ರಜಾಪ್ರಭುತ್ವವಾದಿ ಬ್ರಿಟನು ಯಾವ ತಡೆತೊಡರುಗಳಿಲ್ಲದೆ 3 ವರ್ಷಗಳ ವರೆಗೆ ಹೋರಾಡುವ ದೃಢನಿರ್ಧಾರ ಮಾಡಿ ಶಾಂತವಾಗಿ ಸಿದ್ಧತೆ ಮಾಡಿದೆ. ಮುಂದೆ ಆಕಾಶದ ಮೂಲಕ ಇಂಗ್ಲೆಂಡಿಗೆ ಹೆಚ್ಚಿನ ಗಂಡಾಂತರ ಸಂಭವಿಸಬಹುದು. ಅದನ್ನೆಲ್ಲಾ ಇದಿರಿಸಲು ನಾವು ಸಿದ್ಧರೇ ಇದ್ದೇವೆ ನಮ್ಮ ನೌಕಾ ಬಲದಿಂದಾಗಿ ಸಮುದ್ರಗಳು ಸುರಕ್ಷಿತವಾಗಿ ನಮಗೆ ಕೆನಡಾ, ಅಮೇರಿಕ, ಆಫ್ರಿಕ, ಇಂಡಿಯಾ ಮತ್ತು ಆಸ್ಟ್ರೇಲಿಯಗಳಿಂದ ಬೇಕಾದಷ್ಟು ಸಹಾಯ ಸಿಗುವಂತಾಗಿದೆ

ಹಿಟ್ಲರರು ಯುದ್ಧವನ್ನೇನೋ ಆರಂಭಿಸಿರುವರು. ಈಗ ಶಾಂತಿಗಾಗಿ ಹಾತೊರೆಯುತ್ತಿರುವರು. ಯುದ್ಧವನ್ನಾರಂಭಿಸುವುದು ಅವರ ಇಚ್ಛೆಯಾದರೂ ಕೊನೆಗೊಳಿಸುವುದು ಅವರಿಚ್ಛೆಯಲ್ಲ. ಹಿಟ್ಲರ್‌ಶಾಹಿಯು ಅಳಿಯದೆ ಯುರೋಪಿಗೆ ಹಾಗೂ ಇಡೀ ಲೋಕಕ್ಕೆ ಉಳಿಗಾಲವಿಲ್ಲ. ದುಷ್ಟರಾದ ನಾಝಿಗಳ ನಿರ್ನಾಮವಾಗದೆ ಯುದ್ಧವು ಕೊನೆಗೊಳ್ಳುವ ಹಾಗಿಲ್ಲ.

ಯುದ್ಧದ ಭಯಂಕರ ಹಾವಳಿಯನ್ನು ನಿವಾರಿಸುವುದಕ್ಕಾಗಿ ನಾವು ಇಷ್ಟರವರೆಗೆ ಸುಮ್ಮನಿದ್ದುದು. ಅದು ನಮ್ಮ ಹೇಡಿತನವೆಂದು ನಾಝಿಗಳು ಬಗೆದರು. ಈಗ ಅವರು ನಮ್ಮ ಹೋರಾಟದ ಪರಿಯನ್ನರಿಯಬೇಕು. ಇಂಗ್ಲೆಂಡ್ ಮತ್ತು ಫ್ರಾನ್ಸಿನಲ್ಲಿ ಒಟ್ಟು 85 ಮಿಲ್ಯ ಜನರಿರುತ್ತಾರೆ. ಅವರೆಲ್ಲಾ ಈಗ ಒಕ್ಕಟ್ಟಾಗಿ ಒಂದೇ ಮನಸ್ಸಿನಿಂದ ಯುದ್ಧಕ್ಕಿಳಿದಿದ್ದಾರೆ. ಜರ್ಮನಿಯಲ್ಲಿರುವುದು ಒಟ್ಟು 85ಮಿಲ್ಯ ಜನರು. ಆದರೆ ಹೊಸತಾಗಿ ಹಿಟ್ಲರರು ಗೆದ್ದು ಸೇರಿಕೊಂಡಿರುವ ಜೆಕೋಸ್ಲೋವೇಕಿಯ ಮತ್ತು ಆಸ್ಟ್ರಿಯದ 16ಮಿಲ್ಯ ಜನರು ತೀವ್ರ ಅತೃಪ್ತಿಗೊಂಡಿದ್ದಾರೆ ಈಗ ತಾನೇ ಗೆದ್ದ ಪೋಲಂಡನ್ನು ಜರ್ಮನಿಯು ಬಂದೋಬಸ್ತಿನಲ್ಲಿರಿಸಬೇಕಾಗಿದೆ. ನಮಗೆ ಬೇರೆ ಬೇರೆ ಬ್ರಿಟಿಷ್ ವಸಾಹತುಗಳಲ್ಲಿರುವ ನಮ್ಮ 20ಮಿಲ್ಯ ಜನತೆಯ ಬೆಂಬಲವಿದೆ ಹಿಂದೂದೇಶವು ನಮ್ಮ ಕಡೆಗಿದೆ. ಇಡೀ ಲೋಕದ ವಿಶೇಷವಾಗಿ ಅಮೇರಿಕದ ಸಹಾನುಭೂತಿ ಮತ್ತು ಸಹಾಯ ನಮಗಿದೆ.

ನಮ್ಮ ಪರಿಸ್ಥಿತಿಯು 1914ರಕ್ಕಿಂತ ಈಗ ಎಷ್ಟೋ ಉತ್ತಮವಾಗಿದೆ. ಆದರೆ ಜರ್ಮನಿಯ ಪರಿಸ್ಥಿತಿಯು ಬಹಳ ಕಳಕಳಿಯಾಗಿದೆ. ಅಂದು ಜರ್ಮನ್ ಸೇನೆಯು ಪ್ರಚಂಡ ಧಾಳಿಯಿಂದ ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಯು ಮುಗ್ಗರಿಸಿತ್ತು ರಶ್ಯವು ಟಾನ್ನೆನ್‌ಬರ್ಗ್‌ನಲ್ಲಿ ನೆಲಹಿಡಿದಿತ್ತು. ಆಗ ಇಡೀ ಆಸ್ಟ್ರೋ ಹಂಗೇರಿ ಸಾಮ್ರಾಜ್ಯವು ನಮ್ಮೊಡನೆ ಹೋರಾಟಕ್ಕಿಳಿದಿದ್ದಿತು. ಆಗ ವೀರ ಟರ್ಕರು ವೈರಿಪಕ್ಷಕ್ಕೆ ಸೇರಲಿದ್ದರು ಪ್ರಬಲವಾದ ಜರ್ಮನ್ ನೌಕಾಪಡೆಯೊಂದಿಗೆ ಕಾದಾಡಲು ನಾವು ರಾತ್ರಿಹಗಲು ತಯಾರುಮಾಡಿಕೊಳ್ಳಬೇಕಿತ್ತು. ಆಗಲೂ ಇಟೆಲಿಯು ತಟಸ್ಥವಾಗಿತ್ತು

ನಮ್ಮ ಮುಂದಿರುವ ಗಂಡಾಂತರವನ್ನು ನಾವೇನೂ ಕಡಿಮೆಯಾಗಿ ಪರಿಗಣಿಸುವುದಿಲ್ಲ. ಆದರೆ ಇದನ್ನು ಕಡೆಹಾಯ್ದು ಲೋಕದ ಜನಸಾಮಾನ್ಯರು ಸ್ವತಂತ್ರರಾಗಿ ಸುಖದಿಂದ ಬಾಳುವ ನವವ್ಯವಸ್ಥೆಯನ್ನುಂಟುಮಾಡಬಹುದೆಂಬ ವಿಶ್ವಾಸ ನಮ್ಮಲ್ಲಿದೆ."

— ಗರ್ಭ ನಿರೋಧ —

ರಹತ್ ಇದು ಗರ್ಭಧಾರಣೆಯನ್ನು ನಿಶ್ಚಯವಾಗಿಯೂ ತಡೆಗಟ್ಟುವುದು ಇದನ್ನು 3 ದಿವಸ ಉಪಯೋಗಿಸಿದಲ್ಲಿ ಗರ್ಭಧಾರಣೆಯು ಜೀವಾವಧಿಯವರೆಗೆ ನಿವಾರಿತವಾಗುವುದು ಶರೀರಕ್ಕೆ ಯಾವ ತರದ ಹಾನಿಯೂ ಇರುವುದಿಲ್ಲ ಯಾವರೀತಿಯ ಮುಟ್ಟುದೋಷವೂ ಉಂಟಾಗುವದಿಲ್ಲ ಪ್ರತಿಯೊಂದು ಓರ್ಡರಿನೊಂದಿಗೆ ಗ್ಯಾರಂಟೀ ಪತ್ರವಿದೆ ಬೆಲೆ ರೂ. 5-8-0

ರೆಜವ್ ಮುಟ್ಟು ನಿಲ್ಲಿಸಲ್ಪಟ್ಟುದನ್ನು ಪುನಃ ಕ್ರಮವಾಗಿ ಆಗುವಂತೆ ಮಾಡುವುದು ಬೆಲೆ ರೂ 5 8 0 ವಿದೇಶ 10ಶಿಲ್ಲಿಂಗು

ಫೋ. ನಂ. 21343

Dr S H Khan,

42 (N G) Churchgate street

Fort Bombay

ವಾರ್ಸೋ ಪಟ್ಟಣದ ನಾಶ

ಜರ್ಮನ್ ವಿಮಾನಗಳ ಭೀಕರ ಪರಿಣಾಮದಿಂದ ಇಂದೀಗ ಪೋಲಂಡಿನ ಅತಿ ಸುಂದರ ಮುಖ್ಯ ಪಟ್ಟಣವಾದ ವಾರ್ಸೋ ಸಂಪೂರ್ಣ ನಾಶವಾಗಿ ನರಕಸಮಾನವಾಗಿದೆ ಎಷ್ಟೊಂದು ಜನರು ಸತ್ತಿರುವರೆಂದರೆ ಶವಗಳನ್ನು ರಸ್ತೆಬದಿ, ಅಂಗಳ ಉದ್ಯಾವನಗಳಲ್ಲಿ ಹುಗಿಯಬೇಕಾಗಿ ಬಂದಿದೆ ಇನ್ನೂ ಕೆಲವು ಕಟ್ಟಡಗಳು ಉರಿಯುತ್ತಿವೆ ಒಂದೇ ಒಂದು ಕಟ್ಟಡವಾದರೂ ಸರಿ ಇರುವುದಿಲ್ಲ. ವಾರ್ಸೋ ಪಟ್ಟಣದ ಸೇನಾನಾಯಕನು, ಕುಡಿಯಲು ನೀರಿಲ್ಲದೆ ಮತ್ತು ಜನತೆಯ ಯಮಯಾತನೆಯನ್ನು ಸಹಿಸಲಾರದೆ ಶರಣಾಗತನಾದನು. ಜರ್ಮನ್ ವಿಮಾನಗಳು ಬಹಳ ಕೆಳಗಿಳಿದು ಬಂದು, ರಸ್ತೆ ಮೇಲಿನ ಜನರ ಮೇಲೆ ಮಿಶನ್ ತೋಪುಗಳಿಂದ ಗುಂಡುಹಾರಿಸಿ ಕೊಂದುಹಾಕಿದ್ದುವು. ಅನೇಕ ಶಿಶುಗಳು ವಿಮಾನಧಾಳಿ ನಿರೋಧಕ ಗೂಡುಗಳಲ್ಲಿ ಹುಟ್ಟಿದುವು. ಪೋಲರು ಅಸಾಧಾರಣ ಧೈರ್ಯ ಮತ್ತು ಸ್ಥೈರ್ಯ ತೋರಿಸುವರು. ಯಾರಾದರೂ ಗಾಯಗೊಂಡೊಡನೆಯೇ ಪ್ರಾಣದ ಹಂಗು ತೊರೆದು ಹೊರಗೋಡಿ ಅವರನ್ನು ಎತ್ತಿ ತಂದು ಉಪಚರಿಸುತ್ತಿದ್ದರು. ಕಟ್ಟಕಡೆಗೆ 15ರಿಂದ 18 ವರ್ಷಗಳ ವರೆಗಣ ಹುಡುಗರೂ ಜರ್ಮನರೊಡನೆ ಕಾದಾಡಲು ಕರೆಯಲ್ಪಟ್ಟಿದ್ದರು. ಪೋಲಿಜಕೆನ್ ಎಂಬ ಪತ್ರಿಕೆಯು ಜರ್ಮ

(೭ನೇ ಪುಟದಿಂದ)

ರಿಂದ ವೈಸರಾಯರು ಕಾಂಗ್ರೆಸಿನ ಕೇಳಿಕೆಗಳನ್ನು ಮನ್ನಿಸಬೇಕು. ಈಗಣ ಎಸೆಂಬ್ಲಿಯನ್ನು ಕೊನೆಗೊಳಿಸಿ, ಹೊಸ ಚುನಾವಣೆ ನಡಿಸಬೇಕು. ಗಾಂಧಿಜಿಯವರ ನಂತರ ಹಿಂದೂದೇಶದ ಹೆಚ್ಚಿನ ಜನಾದರ ಪಡೆದಿರುವ ಮುಖಂಡರೆಂದರೆ ಪಂಡಿತ ಜವಾಹರಲಾಲರು. ಅವರೇ ಈಗ ಕಾಂಗ್ರೆಸಿನ ನಾಯಕರಾಗಿ ಆರಿಸಲ್ಪಟ್ಟಿದ್ದಾರೆ ಅವರನ್ನೇ ವೈಸರಾಯರು ತನ್ನ ಮುಖ್ಯ ಮಂತ್ರಿಯಾಗಿ ತೆಗೆದುಕೊಂಡು ತನ್ನ ಕೌನ್ಸಿಲಿಗೆ ಇತರ ಹಿಂದೀ ಮಂತ್ರಿಗಳನ್ನು ತೆಗೆದುಕೊಳ್ಳಬೇಕೆಂದು ಲಂಡನಿನ ದಿ. ನ್ಯೂ ಸ್ಟೇಟ್ಸ್‌ಮೆನ್ ಎಂಡ್ ನೇಶನ್ ಪತ್ರಿಕೆಯು ಸ್ಪಷ್ಟವಾಗಿ ಸೂಚಿಸಿರುತ್ತದೆ

ಮಹಾತ್ಮ ಗಾಂಧಿಯವರು

ಸಿಮ್ಲಕ್ಕೆ ಹೋಗಿ ವೈಸರಾಯರೊಡನೆ ಮಾತಾಡಿ ಕೂಡಲೆ ವಾರ್ಧಕ್ಕೆ ಹಿಂತಿರುಗಿ ಬಾಬು ರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಭಾಯಿ ಪಟೇಲರೊಡನೆ, ಮಾತುಕತೆ ನಡೆಸಿರುವರು ಶ್ರೀ ಮಹದೇವ ದೇಸಾಯಿಗಳು ಪಂಡಿತ ಜವಾಹರಲಾಲನೆಹರು ಮತ್ತು ಮೌಲಾನ ಆಜಾದರೊಡನೆ ಲಕ್ನೋದಲ್ಲಿ ಮಾತಾಡಿ ವಾರ್ಧಕ್ಕೆ ಬಂದು ಗಾಂಧಿಯವರಿಗೆ ಅವರ ಅಭಿಪ್ರಾಯ ತಿಳಿಸಿರುವರು. ವೈಸರಾಯರ ಮುಂದೆ ನಿಶ್ಚಿತ ಸೂಚನೆಗಳನ್ನಿರಿಸುವ ವಿಷಯದಲ್ಲಿ ಗಾಂಧಿಯವರು ಇತರ ಪ್ರಮುಖರೊಡನೆ ಆಲೋಚಿಸುತ್ತಿರುವರೆಂದು ನಂಬಲಾಗಿದೆ

ಇದೇ ತಾ 1ರಲ್ಲು ಮಹಾತ್ಮ ಗಾಂಧಿಯವರು, ಕಾಂಗ್ರೆಸ್ ಪ್ರೆಸಿಡೆಂಟರಾದ ಡಾಕ್ಟರ್ ರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಭಾಯಿ ಪಟೇಲ್, ಶ್ರೀ ಮಹದೇವ ದೇಸಾಯಿ ಮತ್ತು ಶ್ರೀ ಪ್ಯಾರಿಲಾಲರೊಂದಿಗೆ ವಾರ್ಧಾದಿಂದ ಡಿಲ್ಲಿಗೆ ಹೊರಟುಹೋಗಿರುವರು. ಪಂಡಿತ ಜವಾಹರಲಾಲರೂ ಅಲಹಾಬಾದಿನಿಂದ ಡಿಲ್ಲಿಗೆ ಹೊರಟುಹೋಗಿರುವರು. ಕಾಂಗ್ರೆಸಿನ ಯುದ್ಧೋಪಸಮಿತಿಯವರು ತಾ 3ರಲ್ಲು ಎಲ್ಲರೂ ಡಿಲ್ಲಿಯಲ್ಲಿ ಸೇರಿ ವೈಸರಾಯರನ್ನು ಕಾಣಬರುವರು. ತಾ. 2ರಲ್ಲಿ ಎಲ್ಲರೂ ಡಿಲ್ಲಿಯಲ್ಲಿ ಸೇರಿ ವೈಸರಾಯರ ಮುಂದಿರಿಸುವ ಸೂಚನೆಗಳ ಕುರಿತು ಆಲೋಚಿಸಲಿರುವರು. ಹೈದರಾಬಾದಿಗೆ ಹೋಗಿರುವ ಮಿ. ಜಿನ್ನಾರವರೂ ತಾ 3ಕ್ಕೆ ಡಿಲ್ಲಿಗೆ ಹೋಗುವರು,

4 ವಾರಗಳ (
= ಮಿ. ಚರ್ಚಿ
ವಾರ್ಸೋ ಪಟ್ಟಣ:
ರೋಮಾಂಚಕ
ಹಿಟ್ಲರರ ಸ

ನ್ ಪ್ರತಿ
ಲಿಂದ ವಾ
ಕರ ದೃಶ್ಯ
ನಾತಾಡಿ
ಕೂತಿದ್ದ
ಕೊಡಾ
ಕೊಡಾ
ತಿದ್ದರು.
ನಲ್ಲಿ ಮೊಡ್ಲಿ
ಹೋರಾಡು
ಶರಣಾಗತ
ಎಂಬವರು
ಯಾಗಿ

ಸಿಗ್
ಮೇ

ಇದೇ ತ
ಯ ಮೇಲ
15 ಜರ್ಮ
ರೋಮಾ
ಬ್ರಿಟಿಷ್
ಟಿ ದಾಟಿ
ಸುವುದರಲ್ಲಿ
ಗಳ ಮೇಲೆ
ಗಳು ಗು
ತಪ್ಪಿಸಿಕೊ
20,000
9 ಜರ್ಮ
200 ಅ
ಯಿಂದ
ದಿಂದ ಮ
ಮಿನಿಟುಗ
ಯಿತು
ಗುರುಳಿ
ಯಬೇಕಾ
ಮಾನಿಕ
ದು ಹಾ
ವಿಮಾನ
ತನಕವೂ
ಸುತ್ತು ಸು
ಲಿಂದ ತಪ್ಪಿ
ತೋಪಿನವ
ನ್ ವಿಮಾ
ಈತನ ಹೆ
ನಗಳು ನ
ದುವು.
ಆತನ ಉ
ರೂ ಬಿ
ಸೇನೆಯ
ದಲ್ಲಿ 80
ಪಟ್ರೋಲ್

ದ್ಧದ ಪರಿಸ್ಥಿತಿ
ಪರಿಶೀಲನೆ =
ನಸಮಾನವಾಗಿದೆ
ನ ಹೋರಾಟ.
ವದ ಹಂಚಿಕೆ

ವಿಮಾನ ಮೇ
ನಾಶದ ಭೀ
ಸ್ತಂಭಿತನಾಗಿ
ವಿಮಾನದಲ್ಲಿ
ಜರ್ಮನರು
ಒಂದು ಶಬ್ದ
ವಾಗಿ ಕುಳಿ
ಪೋಲಂಡಿನ
ಎಂಬಲ್ಲಿ
ಸೈನಿಕರೂ
ಡಾಕ್ಟರ್ ಹೆಸ್
ರಕ್ಷಣಾಧಿಕಾರಿ
ರು.

ಟೆಯ
ಯುದ್ಧ

ಫ್ರಿಡ್ ಕೋಟಿ
ಟಿಷ್ ಮತ್ತು
ಳಿಗೆ ಅತ್ಯಂತ
ನಡೆಯಿತು.
ಫ್ರಿಡ್ ಕೋ
ವನ್ನು ಪರೀಕ್ಷಿ
ವು. ಆಗ ಅವು
ದೇಶ ತೋಪು
ವು. ಅದನ್ನು
ನಾ ನ ಗ ಳು
ದುವು. ಆಗ
ಳು ಮತ್ತೂ
ಡಗಳ ಮರೆ
ವು ಬಲಭಾಗ
ದುವು. 35
ಕದನ ನಡೆ
ನಗಳು ಕೆಳ
ದು ನೆಲಕ್ಕಿಳಿ
2 ಮಂದಿ ವೈ
ಳಿ ಕೊಡೆ ಹಿಡಿ
ಬ್ರಿಟಿಷ್
ನು ಕಡೆಯ
ಕೆಳಗೆ ಮೇಲೆ
ಗಳ ಗುಂಡುಗ
ಈ ವಿಮಾನದ
ಎರಡು ಜರ್ಮ
ರುಳಿಸಿದನು.
ಉಳಿದ ವಿಮಾ
ರಿ ಹಿಂದೆ ಸರಿ
ವಾದರೂ
ರಿದು ಹೋದ
ಬ್ರಿಟಿಷ್
ಈ ವಿಮಾನ
ಗಳಿದ್ದುವು.
ಸಾಮಾಗ್ರಿ

ಗಳೆಲ್ಲಾ ಮುರಿದು ಹೋಗಿದ್ದುವು ಗಡಿ ದಾಟುವಷ್ಟರಲ್ಲಿ ಯಂತ್ರ ನಿಂತು ಹೋಯಿತು ಪೆಟ್ರೋಲೆಲ್ಲಾ ತೂತಿನ ಮೂಲಕ ಹರಿಯಿತು ವೈಮಾನಿಕನು ಕರವಸ್ತ್ರವನ್ನು ತೂತಿಗೆ ಕಟ್ಟಿ ಪೆಟ್ರೋಲನ್ನು ತಡೆದು ನಿಲ್ದಾಣವನ್ನು ಸಮೀಪಿಸಿದನು ನೆಲವನ್ನು ಸಮೀಪಿಸುವಾಗ ವಿಮಾನವು ಒಮ್ಮೆಯೇ ಬಿದ್ದುಬಿಟ್ಟಿತು. ಒಳಗಿದ್ದ ಮೂವರೂ ಕೆಳಗೆ ಬಿದ್ದು ಗಾಯಗೊಂಡರು. ಆದರೂ ಪ್ರಾಣಾಪಾಯವೇನೂ ಆಗಲಿಲ್ಲ

ಶಾಂತಿಯ ಹಂಚಿಕೆ

ಇದೇ ತಾ ೨ರಲ್ಲು ಇಟಲಿಯ ವಿದೇಶ ಮಂತ್ರಿ ಕೌಂಟ್‌ಸಿಯಾನೋರವರು ಹಲಹಲವು ಘಂಟೆಗಳವರೆಗೆ ಹಿಟ್ಲರೊಡನೆ ಮಾತನಾಡಿರುವರು ಮೋಸ್ಕೋದಲ್ಲಿ ನಡೆದ ಮಾತುಕತೆ ಮತ್ತು ಸಂಧಾನದ ಪ್ರಯತ್ನವೇ ಪ್ರಾಮುಖ್ಯ ವಿಷಯವಾಗಿತ್ತೆಂದು ತಿಳಿದುಬರುತ್ತದೆ ಸ್ವತಂತ್ರ ಪೋಲಂಡ್ ರಾಜ್ಯವನ್ನು ಸ್ಥಾಪಿಸುವುದು ಮತ್ತು ರಾಷ್ಟ್ರಗಳ ಪರಿಷತ್ತನ್ನು ಕರೆದು ಮುಂದಿನ ವ್ಯವಸ್ಥೆಯ ಕುರಿತು ಚರ್ಚಿಸುವುದೇ ಹಿಟ್ಲರರ ಸಂಧಿಯ ಸೂಚನೆ ಇರುವುದೆಂದು ಮುಸಲೋನಿಗಳ ಮೂಲಕ ಈ ಸೂಚನೆಗಳು ಮಾಡಲ್ಪಡುವವೆಂದೂ, ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಸಂಧಿಗೊಪ್ಪದಿದ್ದರೆ ಇಟಲಿಯು ಕೂಡ ತನ್ನ ಮುಂದಿನ ಧೋರಣೆಯ ಕುರಿತು ಆಲೋಚಿಸಲಿರುವುದೆಂದು ನಂಬಲಾಗಿದೆ. ಇದೇ ತಾ ೩ ರಲ್ಲು ಹಿಟ್ಲರರು ಜರ್ಮನ್ ಪಾರ್ಲಿಮೆಂಟಿನ ಸಭೆ ಕರೆದು ಜರ್ಮನಿಯ ಮುಂದಿನ ಧೋರಣೆಯ ಕುರಿತು ಭಾಷಣಮಾಡಲಿರುವರು

ಇದೇ ತಾ 2ರಲ್ಲು ಎಮ್. ಡೆಲಾಡಿಯರರು ಜನರಲ್ ಗೆಮೆಲಿನರೇ ಮೊದಲಾದ ಸೇನಾನಿಗಳೊಡನೆ ಮಾತುಕತೆ ನಡಿಸಿದರು ಜರ್ಮನರು ಈಗ ಒಂದೋ ಫ್ರೆಂಚ್ ಮೆಗಿನಟ್ ಕೋಟೆಯಮೇಲೆ ಪ್ರಚಂಡ ಧಾಳಿ ನಡಿಸಬೇಕು. ಈ ಕೋಟೆಯು ಬಹಳ ಭದ್ರವಾಗಿರುವುದರಿಂದ ಜರ್ಮನರು ಹೆಚ್ಚಿನ ಪ್ರಾಣಹಾನಿ ತಕೊಳ್ಳುವ ಸಂದರ್ಭವಿಲ್ಲ ಇಲ್ಲವಾದರೆ ಹೊಲ್ಲಂಡ್ ಯಾ ಬೆಲ್ಜಿಯಂ ಇಲ್ಲವೆ ಎರಡೂ ರಾಷ್ಟ್ರಗಳ ಮಾರ್ಗವಾಗಿ ಫ್ರಾನ್ಸಿನ ಮೇಲೆ ಧಾಳಿಯಿಟ್ಟು ಫ್ರೆಂಚ್ ಸೇನೆಯನ್ನಾವರಿಸಬೇಕು ಇಲ್ಲವೆ ಮಿತ್ರ ರಾಷ್ಟ್ರಗಳು ಸಿಗ್‌ಫ್ರಿಡ್ ಕೋಟೆಯನ್ನು ಮುರಿದು ಮುಂದೊತ್ತುವ ತನಕ ಕಾಯಬೇಕು ಪ್ರಕೃತದ ಸ್ಥಿತಿಯಲ್ಲಿ ಅವರು ಎರಡನೇ ಉಪಾಯವನ್ನು ಕೈಕೊಳ್ಳಬಹುದೆಂದು ನಂಬಲಾಗಿದೆ ಫ್ರೆಂಚ್ ಸೇನೆಯು ಸಾರ್‌ಬ್ರುಕೆನನ್ನು ವಶಪಡಿಸಿಕೊಳ್ಳಲು ಪ್ರಬಲ ಹೋರಾಟನಡಿಸಿ ಮುಂದೊತ್ತುತ್ತಿದೆ ಕಳೆದ ನಾಲ್ಕೈದು ದಿನಗಳಲ್ಲಿ ಜರ್ಮನಿಯ ಸಿಗ್‌ಫ್ರಿಡ್‌ಕೋಟೆಯ ಹಿಂಬದಿಗೆ ಹೆಚ್ಚಿನ ಸೇನೆ ಮತ್ತು ವಿಮಾನಗಳನ್ನು ಕಳುಹಿಸುತ್ತದೆ. ಫ್ರೆಂಚ್ ಸೇನೆಯನ್ನೆದುರಿಸಿ ಕೊಂಡಿರುವ ಸೇನೆಯು ಈಗ ದ್ವಿಗುಣಿತವಾಗಿದೆ

ಸಿಂಧ್ ಕಾಂಗ್ರೆಸ್ ಮುಖಂಡರಿಗೆ ಪೆಟ್ಟು
ಖಾನ್ ಅಬ್ದುಲ್ ಗಾಫರ್ ಖಾನರು ರಕ್ಷಿಸಲ್ಪಟ್ಟರು

ಇದೇ ತಾ. 1ರಲ್ಲು ದಕ್ಷಿಣ ಬಲೂಚಿಸ್ಥಾನದ ಅಸ್ಪೋ ಮುಹಮ್ಮದ್ ಎಂಬ ಸ್ಥಳದಲ್ಲಿ ನಡೆದ ಸಭೆಯಲ್ಲಿ ಖಾನ್ ಅಬ್ದುಲ್ ಗಾಫರ್ ಖಾನರು ಭಾಷಣಕೊಡಲಿದ್ದಾಗ ಕತ್ತಿ, ಕೊಡಲಿಗಳನ್ನು ಹಿಡಿದು 25ಮಂದಿ ಬಲೂಚಿ ಪಂಗಡಿಗರು, ಸಿಂಧಿನ ಕಾಂಗ್ರೆಸ್ ಮುಖಂಡರುಗಳಾದ ಡಾಕ್ಟರ್ ಚೊಯ್ತ್‌ರಾಮ್ ಗಿದ್ವಾನಿ ಮತ್ತು ವಿ. ಮಹಮ್ಮದ್ ಅಮೀನ್ ಖೋಸೋರವರ ಮೇಲೇರಿಬಂದು ಹೊಡೆದು ಗಾಯಗೊಳಿಸಿರುವರು. ಆಮೇಲೆ ಖಾನ್ ಅಬ್ದುಲ್ ಗಾಫರ್ ಖಾನರ ಮೇಲೆ ಬೀಳಲು ಮುಂದುವರಿದಾಗ ಮಿ. ಖೋಸೋ ಮತ್ತು ಅಂಮಾನ್ ಪಟ್ಟಣಿನ ಮೆಂಬರರೊಬ್ಬರು ತಡೆದು ರಕ್ಷಿಸಿದರು. ಹಲವು ಜನರು ಗಾಯಗೊಂಡಿರುವರು ಈ ಅತ್ಯಾಚಾರಿಗಳ ಮೇಲೆ ತಾನೇನೂ ಫಿರ್ಯಾದಿಮಾಡಿ ಪ್ರತೀಕಾರಮಾಡಲಾರೆನೆಂದು ಅಬ್ದುಲ್ ಗಾಫರ್ ಖಾನರೆಂದಿರುವರು.

ಯುದ್ಧೋದ್ದೇಶಸಮಿತಿಯ ಸಭೆ

ಇದೇ ತಾ. 2ರಲ್ಲು ಮಹಾತ್ಮಾ ಗಾಂಧಿ, ಬಾಬು ರಾಜೇಂದ್ರ ಪ್ರಸಾದ್, ಮೌಲಾನ ಆಜದ್, ಸರ್ದಾರ್ ಪಟೇಲ್, ಪಂಡಿತ ನೆಹರುಗಳೇ ಮೊದಲಾದವರು ಡಿಲ್ಲಿಗೆ ಹೋಗಿ, ತಾ 3ರಲ್ಲು ವೈಸರಾಯರಿಗೆ ತಿಳಿಸುವ ಸೂಚನೆಗಳ ಕುರಿತು ಚರ್ಚಿಸಿದರು ಕಾಂಗ್ರೆಸಿನ ಯುದ್ಧೋದ್ದೇಶಸಮಿತಿಯ ಸಭೆಯೂ ನಡೆದಿರುತ್ತದೆ

ಶ್ರೀ ಸುಭಾಸ್‌ಚಂದ್ರಭೋಸರು

ಸಪ್ಟಂಬರ್ ತಾ 29ರಲ್ಲು ಅಲಹಾಬಾದಿಗೆ ಹೋಗಿ ಪಂಡಿತ ಜವಾಹರಲಾಲರ ಅತಿಥಿಗಳಾಗಿದ್ದರು. ಅಲ್ಲಿ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಭಾಷಣವಿತ್ತರು ಅವರು ನಾಗಪುರದಲ್ಲಿ ಸೇರಿಸಲಿದ್ದ ಸಾಮ್ರಾಜ್ಯಶಾಹಿ ನಿಷೇಧಕ ಪರಿಷತ್ತು ಇದೇ ತಾ 8ಕ್ಕೆ ಮುಂದುವರಿಸಲ್ಪಟ್ಟಿದೆ ಶ್ರೀ. ಭೋಸರು ಇದೇ ತಾ 1ರಲ್ಲು ಕಲ್ಕತ್ತಕ್ಕೆ ಹೋಗಿರುವರು.

ಆರೋಪಗಳಿಗೆ ಆಧಾರವಿಲ್ಲ

ಶ್ರೀ ಜಿ ಟಿ. ಕೇವರರೇ ಮೊದಲಾದ 11ಮಂದಿ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ಮೆಂಬರರು ಮಧ್ಯಪ್ರಾಂತದ ಮಂತ್ರಿಗಳಾದ ಪಂಡಿತ ಮಿಶ್ರರ ಮೇಲೆ ಮಾಡಿದ ಆರೋಪಗಳಿಗೆ ಆಧಾರವೇನೂ ಇಲ್ಲೆಂದು ಕಾಂಗ್ರೆಸ್ ಪ್ರೆಸಿಡೆಂಟರು ನಿಶ್ಚೈಸಿ, ಈ ಮೆಂಬರರು ಮಂತ್ರಿಗಳೊಡನೆ ಕ್ಷಮಾಪಣೆ ಕೇಳಬೇಕೆಂದೂ, ಇಲ್ಲವಾದರೆ ಅವರನ್ನು ದಂಡಿಸಲಾಗುವುದೆಂದೂ ಬಾಬು ರಾಜೇಂದ್ರ ಪ್ರಸಾದರು ನಿರ್ಧರಿಸಿರುವರು.

ಗಾಂಧಿ ಜಯಂತಿ
ಅಹಿಂಸೆ ಮತ್ತು ಸೇವೆಯ ಪ್ರವಾದಿ.

ಇದೇ ತಾ. ೨ಕ್ಕೆ ಮಹಾತ್ಮಾ ಗಾಂಧಿಯವರಿಗೆ 70 ವರ್ಷ ತುಂಬಿ 71ನೆ ವರ್ಷ ಆರಂಭವಾಗುವುದು. ಅಕ್ಟೋಬರ ತಾ. ೨ನೇ ದಿನವು ಗಾಂಧಿ ಜಯಂತಿಯಾಗಿ ಇಡೀ ದೇಶದಲ್ಲೆಲ್ಲಾ ಆಚರಿಸಲ್ಪಟ್ಟಿರುವುದು "ಅಕ್ಟೋಬರ ತಾ 2ನೇ ದಿನವು ಹಿಂದೂದೇಶದ ಆನಂದೋತ್ಸವದ ದಿನ". ಮಹಾತ್ಮಾ ಗಾಂಧಿಯವರು ಅಂದಿನ ತನ್ನ 70ನೇ ವರ್ಷವನ್ನೂ ಪೂರ್ಣಗೊಳಿಸುವರು. ಅವರು ಹಿಂದೂ ದೇಶಕ್ಕೂ ಲೋಕಕ್ಕೂ ಮಾಡಿರುವ ಅಮೂಲ್ಯ ಸೇವೆಯ ಬೆಲೆಯನ್ನಳೆಯುವುದು ನನ್ನ ಕೆಲಸದಲ್ಲಿ ಇಂದೀಗ ನಮ್ಮನ್ನು ಪೀಡಿಸುತ್ತಿರುವ ಜೀವನದ ಯಾವ ಪ್ರಶ್ನೆಯನ್ನಾದರೂ ಇತ್ಯರ್ಥಪಡಿಸುವುದರಲ್ಲಿ ಮಹಾತ್ಮರ ಸ್ಥಾನವು ಅಗ್ರಗಣ್ಯ ಹಾಗೂ ಅಪ್ರತಿಮವಿದೆ. ಎಂದಿಗಿಂತಲೂ ಹೆಚ್ಚಾಗಿ ಇಂದು ನಮಗೆ ಅವರ ಬೋಧನೆಗಳು ಬೇಕಾಗಿವೆ ಅವರ ಮಹತ್ವದ ಮತ್ತು ಅತಿ ವಿವೇಕಪರವಾದ ಉಪದೇಶ ಮತ್ತು ಸಲಹೆಗಳು ಹಿಂದೂದೇಶಕ್ಕೆ ಇನ್ನೂ ಅನೇಕ ವರ್ಷ ದೊರೆಯುವಂತೆ ನಾವು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಬೇಕಾಗಿದೆ ಗಾಂಧಿಜಿಯವರು ನಮಗೆ ಮಾದರಿಹಾಕಿಕೊಟ್ಟಿರುವಂತೆ ಸೇವಾದೀಕ್ಷಾ ಬದ್ಧರಾಗುವುದು ನಾವೀಗ ಮಾಡಬಹುದಾದ ಅತಿ ಕಡಿಮೆಯ ಕೆಲಸ"ವೆಂದು ಕಾಂಗ್ರೆಸ್ ಪ್ರೆಸಿಡೆಂಟರು ದೇಶಕ್ಕೆ ಸಂದೇಹವಿತ್ತಿರುವರು. ಇಂದೀಗ ಗಾಂಧಿಜಿಯವರು ತನ್ನದೇ ಆದೊಂದು ಧರ್ಮ, ನೀತಿ ಮತ್ತು ಆಚಾರ ವಿಚಾರಗಳ ಪ್ರಣೇತಾರಾಗಿ ಆದೊಂದು ನವೀನ ಜೀವನಾದರ್ಶದ ಪ್ರತಿ ಮೂರ್ತಿಯಾಗಿರುವರು, ಬುದ್ಧ, ಕ್ರೈಸ್ತರೇ ಮೊದಲಾದ ಧರ್ಮಸ್ಥಾಪಕರಂತೆಯೇ ಅವರ ಹೆಸರು ಚಿರಸ್ಥಾಯಿ ಬೆಳಗಿ ಮಾನವಕೋಟಿಯ ಜೀವನ ಸಮಸ್ಯೆಗಳ ಕಗ್ಗತ್ತಲೆಯಲ್ಲಿ ಕೈದೀವಿಗೆಯಾಗಲಿರುವುದು. ತಾನು ಜೀವಂತವಾಗಿರುವಾಗ ಇಷ್ಟೊಂದು ಲೋಕಮಾನ್ಯರಾಗಿ ಮಾನವಕೋಟಿಯ ಧಾರ್ಮಿಕ ಸಾಮಾಜಿಕ, ಮತ್ತು ರಾಜಕೀಯ ಸಮಸ್ಯೆಗಳನ್ನು ಬಿಡಿಸಿ ಸ್ಪಷ್ಟವಾದ ಹಾದಿತೋರಿಸಿರುವ ಮಹಾತ್ಮರಂತಹ ಮಹಾಪುರುಷರು ಇತಿಹಾಸದಲ್ಲಿ ಯಾರೂ ಇರಲಾರರು. ಇಂತಹ ವಿಭೂತಿಪುರುಷರ ಜನ್ಮದಿನಾಚರಣೆಯು ಆದೊಂದು ಪವಿತ್ರ ಹಬ್ಬವೇ ಸರಿ.

NAVAYUGA ENTERPRISE Ltd.,
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್.

ಉಡುಪಿಯ ಕೆಲವು ಸದ್ಗೃಹಸ್ಥರು ಪ್ರೊಮೋಟರರಾಗಿ ಸೇರಿ 'ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್' ಎಂಬ ಹೊಸ ಲಿಮಿಟೆಡ್ ಸಂಸ್ಥೆಯೊಂದನ್ನು ಸ್ಥಾಪಿಸಿರುತ್ತಾರೆ. ತಾ. 28-9-39ರಲ್ಲಿ ಈ ಸಂಘವು ರಿಜಿಸ್ತ್ರಿಯಾಗಿ ಇನ್ ಕೋರ್ಪರೇಶನ್ ಸರ್ಟಿಫಿಕೇಟು ಪಡೆದಿರುತ್ತದೆ ಪತ್ರಿಕೆ, ಪುಸ್ತಕ ಮೊದಲಾದುವನ್ನು ಪ್ರಕಟಿಸುವುದು, ಅದಕ್ಕೆ ಬೇಕಾದ ಛಾಪಖಾನೆ ಮತ್ತು ಅದಕ್ಕೆ ಸಂಬಂಧಿಸಿದ ವಹಿವಾಟ ನಡೆಸುವುದು ಈ ಕಂಪೆನಿಯ ಪ್ರಥಮ ಉದ್ದೇಶವಾದರೂ ಸರ್ವಸಾಮಾನ್ಯವಾಗಿ ಇತರ ಎಲ್ಲಾ ತರದ ಉದ್ಯಮ, ಏಜನ್ಸಿ, ಕೈಗಾರಿಕೆ, ವ್ಯಾಪಾರ ವ್ಯವಹಾರಗಳನ್ನು ಈ ಕಂಪೆನಿಯು ಕೈಕೊಂಡು ನಡೆಸಬಹುದು. ಉಡುಪಿಯಲ್ಲಿ ಜನ್ಮತಾಳಿ ಕರ್ನಾಟಕದಲ್ಲೆಲ್ಲಾ ವ್ಯಾಪಿಸಿರುವ ಹಲವು ಲಿಮಿಟೆಡ್ ಕಂಪೆನಿಗಳಂತೆ 'ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್' ಕೂಡಾ ಜನಪ್ರೋತ್ಸಾಹ ದೊರೆತು ಬೆಳೆದಂತೆ, ಇಡೀ ಕರ್ನಾಟಕವನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿ ದುಡಿಯುವ ಉದ್ದೇಶವುಳ್ಳದಾಗಿದೆ ಎಂಬುದು ಸಂತೋಷಕರವಿದೆ.

ಪೋಲಂಡಿನ ಹೊಸ ಪ್ರೆಸಿಡೆಂಟರು

ಇಷ್ಟರ ವರೆಗೆ ಪೋಲಂಡಿನ ಪ್ರೆಸಿಡೆಂಟರಾಗಿದ್ದ ಎಮ್. ಮೊಸಿಸ್ಕಿಯವರು ರುಮೇನಿಯದಲ್ಲಿ ಸ್ಥಾನಬದ್ಧರಾಗಿರಿಸಲ್ಪಟ್ಟಿರುವರಷ್ಟೆ. ಅವರೀಗ ತನ್ನ ಸ್ಥಾನಕ್ಕೆ ರಾಜಿನಾಮೆಕೊಟ್ಟು ತನ್ನ ಅಧಿಕಾರವನ್ನು ಪೊಮ್ರೋಜಿನ ಗವರ್ನರರಾಗಿ ಎಮ್. ರೆಜಿವೆಚ್ ಎಂಬವರಿಗೆ ಬಿಟ್ಟುಕೊಟ್ಟು ಅವರನ್ನು ಹೊಸ ಪ್ರೆಸಿಡೆಂಟರಾಗಿ ನೇಮಿಸಿರುತ್ತಾರೆ. ಇವರು ಫ್ರಾನ್ಸಿನಲ್ಲಿದ್ದುಕೊಂಡು ಪೋಲಂಡಿನ ಪ್ರಧಾನ ಮಂತ್ರಿ ಮತ್ತು ಇತರ ಮಂತ್ರಿಗಳನ್ನಾರಿಸಲಿರುವರು. ಜನರಲ್ ಸಿ ಕೊರ್‌ಸ್ಕಿಯವರು ಪೋಲಂಡಿನ ಮುಖ್ಯ ಮಂತ್ರಿ ಮತ್ತು ಯುದ್ಧ ಮಂತ್ರಿಗಳಾಗಿರುವರು ಎಮ್. ಜೆಲೆಸ್ಕಿಯವರು ವಿದೇಶ ಮಂತ್ರಿಯಾಗಿರುವರು.

ಒಂದು ದಿನದ ಗಿರಣಿ ಮುಷ್ಕರ

ಇದೇ ತಾ. ೩ರಲ್ಲು ಬೊಂಬಾಯಿಯ ಗಿರಣಿ ಕೆಲಸಗಾರರು ಒಂದು ದಿನದ ಮುಷ್ಕರ ಹಿಡಿದಿರುವರು. ೩೨ ಗಿರಣಿಗಳ 60,000 ಮಜೂರರು ಮುಷ್ಕರದಲ್ಲಿ ಭಾಗ ವಹಿಸಿರುವರು. ಉಳಿದ ೩೮ ಗಿರಣಿಗಳಲ್ಲಿ ಯಥಾಪ್ರಕಾರ ಕೆಲಸ ನಡೆಯುತ್ತಿತ್ತು. ಶೋಲಾಪುರದಲ್ಲಿ ಮುಷ್ಕರ ನಡೆಸುವ ಪ್ರಯತ್ನ ಫಲಿಸಿರುವುದಿಲ್ಲ. ಕಾನ್ಪುರದಲ್ಲಿ 6000 ಗಿರಣಿ ಆಳುಗಳು ಮುಷ್ಕರ ನಡಿಸಿರುವರು

ಚೀನಾ ಜಪಾನ ಯುದ್ಧ

ಜಪಾನು ಚೈನದಲ್ಲೀಗ ಪ್ರಬಲ ಯುದ್ಧವನ್ನಾರಂಭಿಸಿ ಚಾಂಗ್ಶಾ ಎಂಬ ಪ್ರಾಮುಖ್ಯ ಪಟ್ಟಣವನ್ನು ವಶಪಡಿಸಿಕೊಳ್ಳಲೆಣ್ಣಿಸುತ್ತಿರುವುದು. ಚೀನಿಯರು ಈ ಪಟ್ಟಣದ ಹೊರವಳಯದ ಗುಡ್ಡ ಪ್ರದೇಶದಿಂದ ಜಪಾನರನ್ನು ಪ್ರಬಲವಾಗಿ ವಿರೋಧಿಸುತ್ತಿದ್ದಾರೆ. ಆದರೆ ಚಾಂಗ್ಶಾವು ಜಪಾನರ ಕೈವಶವಾಗುವ ಸಂಭವ ತೋರುತ್ತದೆ. ರಶ್ಯವು ಚೈನಕ್ಕೆ ಯಥಾ ಪ್ರಕಾರ ಸಹಾಯ ಮಾಡುವುದು. ಚೀನವು ಇನ್ನೂ ದೀರ್ಘಕಾಲದ ಯುದ್ಧ ನಡಿಸಲೇಬೇಕಾಗುವುದೆಂದು ಚೀನೀ ಸೈನ್ಯಾಧಿಕಾರಿಗಳ ಅಭಿಪ್ರಾಯ

ಮಂಗಳೂರು

ಸ್ವಂ. ಬಾ. ತಾ 2 10-39

ಗಾಂಧಿ ಸಪ್ತಾಹದ ಸಭೆಗಳು— ಗಾಂಧಿ ಸಪ್ತಾಹದ ಸಭೆಗಳ ಪೈಕಿ ಕಳೆದ ತಾ. 26 ರಲ್ಲಿ ಪಾಂಡೇಶ್ವರದಲ್ಲಿ ಹರಿಜನರ ಸಭೆಯು ಶ್ರೀ ಪಿ ರಾವ ರಾಯರುಳ್ಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೊದಲಿನ ಕಾರ್ಯಕ್ರಮಗಳಂತೆಯೇ ಭಾಷಣಾದಿಗಳು ಇದ್ದುವು. ಕಳೆದ ತಾ 27ರಲ್ಲಿ ಸ್ಥಳೀಯ ಕೆಲ ಶಾಲೆಗಳ ವಿದ್ಯಾರ್ಥಿಗಳೊಳಗೆ ಆಟದ ಸ್ಪರ್ಧೆಯು ಗಾಂಧಿ ಸಪ್ತಾಹದ ಸಂದರ್ಭದಲ್ಲಿ ಜಿ. ಹರಿಜನ ಸೇವಕ ಸಂಘದ ಆಶ್ರಯದಲ್ಲಿ ನಡೆಯಿತು. ಅನೇಕ ಬಾಲಕರು ಭಾಗವಹಿಸಿದ್ದರು. ಶ್ರೀ ಬಿ ವಿ.ಬಾಳಿಗ ಯಂ ಎಲ್ ಎ. ಇವರು ಅಧ್ಯಕ್ಷತೆ ವಹಿಸಿ ಕಾರ್ಯಕ್ರಮಗಳನ್ನು ನೆರವೇರಿಸಿದ್ದಲ್ಲದೆ ಮಕ್ಕಳಿಗೆ ತಿಂಡಿಯನ್ನು ಹಂಚಿದರು ತಾ. 28ರಲ್ಲಿ ಬಜ್ಪೆಯಲ್ಲಿ ಸಭೆ ಜರಗಿತು. ಅಂದು ಶ್ರೀ ಕೆ ಈಶ್ವರ ಯಂ ಎಲ್ ಎ ಇವರು ಅಧ್ಯಕ್ಷತೆ ವಹಿಸಿದ್ದರು.

ಬೆಸೆಂಟ್ ದಿನಾಚರಣೆ— ತಾರೀಕು ೧ ೧೦ ೩೯ ರಲ್ಲಿ ಶ್ರೀ ಸ್ವಾಮಿ ಸುವಿಚಾರಾನಂದರ ಅಧ್ಯಕ್ಷತೆಯಲ್ಲಿ ಬೆಸೆಂಟಮ್ಮನವರ ದಿನಾಚರಣೆಯು ಬೆಸಂಟ ಶಾಲೆಯಲ್ಲಿ ಯಶಸ್ವಿಯಾಗಿ ನಡೆಯಿತು. ಪ್ರಾರ್ಥನೆ, ವಂದಿವಾಚನೆ, ಅಧ್ಯಕ್ಷರ ಭಾಷಣ ಇತ್ಯಾದಿಗಳಾದ ಮೇಲೆ ಶಾಲಾ ಬಾಲಿಕೆಯರು ವಿವಿಧ ವಿನೋದಾವಳಿ, ನಾಟಕ ನರ್ತನಗಳಿಂದ ಸಭಿಕರನ್ನು ಆನಂದಗೊಳಿಸಿದರು. ಶಾಲೆಯು ಬಹಳ ಪ್ರಗತಿಯನ್ನು ಹೊಂದಿದೆಯೆಂಬ ಸಂಗತಿಯು ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಶೋಚನೀಯ ನಿಧನ— ಹರಿಕಥೆ ನಡಸುವುದರಲ್ಲಿ ಹೆಸರು ಪಡೆದಿರುವ ಶ್ರೀ ಯಂ. ಕೆ. ವೈದ್ಯರ ಸುಪುತ್ರಿ ಶ್ರೀಮತಿ ಸೀತಾಬಾಯಿ ಎಂಬ ಸುಮಾರು 10 11. ವರ್ಷ ಪ್ರಾಯದ ಬಾಲಕಿಯು ಕಳೆದ ಶುಕ್ರವಾರ (ತಾ. 29) ಅಕಾಲ ನಿಧನ ಹೊಂದಿದರೆಂದು ತಿಳಿಸಲು ಬಹಳ ವಿಷಾದವಾಗುತ್ತದೆ. ಶ್ರೀಮತಿಯವರು ಒಂದು ವಾರದಿಂದ ಅಸೌಖ್ಯದಿಂದಿದ್ದರು. ಇವರ ನಿಧನದಿಂದ ಕರ್ನಾಟಕಕ್ಕೇನೇ ಒಂದು ನಷ್ಟವಾದಂತಾಯಿತು. ಶ್ರೀಮತಿಯವರ ಮಾತಾಪಿತೃಗಳ ದುಃಖದಲ್ಲಿ ಅಖಿಲಕರ್ನಾಟಕವೇ ಸಹ ಸಂತಾಪವನ್ನು ಸೂಚಿಸುತ್ತದೆ.

ಮಿತ್ರ ಮಂಡಲಿ— ಮಂಗಳೂರಿನ ಮಿತ್ರ ಮಂಡಲಿಯವರು ಈ ಸಾರಿ ಮೂರು ದಿವಸಗಳ ಮಟ್ಟಿಗೆ ನಾಡ ಹಬ್ಬವನ್ನು ಆಚರಿಸುವರು. ಇದಕ್ಕೆ ಹೊರಗಿನಿಂದ ಪ್ರಸಿದ್ಧ ವಿದ್ವಾಂಸರನ್ನು ಕರೆಸುವರೆಂದು ತಿಳಿದು ಬರುತ್ತದೆ.

ಗಣಪತಿ ಹೈಸ್ಕೂಲ್— ಇಲ್ಲಿ ವರ್ಷಂಪ್ರತಿ ಜರಗುವಂತೆ ವಿದ್ಯಾದಶಮಿ ಸಮಾರಂಭವು ತಾ 18ರಿಂದ 22ರ ತನಕ ವಿಜೃಂಭಣೆಯಿಂದ ಜರಗುವುದು, ಸರ್ವರಿಗೂ ಸ್ವಾಗತವಿದೆ ತಾ 21ಕ್ಕೆ ಹಳೆ ವಿದ್ಯಾರ್ಥಿಗಳ ದಿನಾಚರಣೆಯು ಆಚರಿಸಲ್ಪಡುವುದು

ನೋಟೀಸು

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

Os. $\frac{257}{1939}$ R I A. $\frac{850}{1939}$

ವೆಂಕಪ್ಪಯ್ಯ—ವಾದಿ

ಕೃಷ್ಣ ಎಳ್ಳಿತ್ತಾಯ—ಪ್ರತಿವಾದಿ

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಪ್ರತಿವಾದಿಯಿಂದ ವಾದಿಗೆ ಬಹ ಅಡವಿನ ಅದಲು ಬಡ್ಡಿ ಐವಜನ್ನು ಬರಮಾಡುವರೆ ಮೇಲ್ಕಂಡ ದಾವಾದಾಖಲ್ಲುಮಾಡಿ ದಾ. ಆಸ್ತಿಗೆ ರಿಸೀವರ್ ನೇಮಕಮಾಡುವರೆ ಕೂಡಾ ಅರ್ಜಿ ಮಾಡಿರುತ್ತದೆ ಸದರಿ ವ್ಯಾಜ್ಯ ಮುಕ್ಕಮ್ಮ ಅರ್ಜಿ ತಾ 7-10 1939ಕ್ಕೆ ವಾಯಿದೆ ಆಗಿಯದೆ, ಪ್ರತಿವಾದಿಗೆ ಆಕ್ಷೇಪಣೆ ಇದ್ದಪಕ್ಷಕ್ಕೆ ಸದರಿ ವಾಯಿದೆ ದಿವಸ ಪೂರ್ವಾಹ್ನ ಘಂಟೆ11ಕ್ಕೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಉತ್ತರಿಸಿಕೊಳ್ಳತಕ್ಕದ್ದು. ಇಲ್ಲವಾದರೆ ಪ್ರತಿವಾದಿಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಕೋರ್ಟಿನ ಹುಕುಂ ಪ್ರಕಾರ.

S Soorappaya
Vakil for Plaintiff.

ಮೊಕ್ಕಾಂ ಪುತ್ತೂರ, ತಾ. 21-9-39

ಜಿಲ್ಲಾ ಸಮಾಚಾರ

ಸೌತ್ ಕೆನರಾ ಮೋಟರ್ ಎಂಪ್ಲೋಯಿಸ್ ಯೂನಿಯನ್— ಇದರ ಎಲ್ಲಾ ಸದಸ್ಯರೂ ಸಂಘಕ್ಕೆ ಸಪ್ಟಂಬರ ತಿಂಗಳ ಅಂತ್ಯದವರೆಗೆ ಸಲ್ಲಲಿಕ್ಕಿರುವ ಚಂದಾ ಬಾಕಿಯನ್ನು ತಾ 31-10-39ರೊಳಗೆ ಸಂಘದ ಅಧಿಕಾರಿಗಳೊಡನಾಗಲೀ ಅಧಿಕೃತರೊಡನಾಗಲೀ ಪಾವತಿಕೊಟ್ಟು ರಸೀದಿಪಡೆಯಬೇಕಾಗಿ ವಿನಂತಿ ಎಂದು ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ

ಫಲಪುಷ್ಪ ಪ್ರದರ್ಶನೆ— ಫಲಸಹಿತ ಪುಷ್ಪ ಪ್ರದರ್ಶನವು ಗವರ್ನಮೆಂಟ್ ಕಾಲೇಜಿನಲ್ಲಿ ಇದೇ ತಾ 8ರಿಂದ ನಡೆಯುವುದು ಮೈಸೂರು ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲರು ಇದನ್ನು ತೆರೆವ ಸಮಾರಂಭ ಜರಗಿಸುವರು.

ಕುಂದಾಪುರ— ತಾ 9ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ, ಕುಂದಾಪುರ ತಾಲೂಕು ಕಾಂಗ್ರೇಸು ಕಮಿಟಿಯ ಸಭೆಯು, ಕುಂದಾಪುರ ತಾಲೂಕು ಕಾಂಗ್ರೇಸು ಆಫೀಸಿನಲ್ಲಿ ಕೂಡಲಿರುವುದರಿಂದ, ಕಮಿಟಿಯ ಎಲ್ಲಾ ಮೆಂಬರರೂ ತಪ್ಪದೆ ಬರಬೇಕಾಗಿ ಕಾರ್ಯದರ್ಶಿಗಳಾದ ಕಾವು ಸಂಜೀವಶೆಟ್ಟರು ಅಪೇಕ್ಷಿಸುತ್ತಾರೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಈ ಸಂಸ್ಥೆಯು ಕಳೆದ 1936 ವ 1938 ಈ ಇಸವಿಗಳ ಬೆಲೆನ್ಸ್ ಶೀಟುಗಳು ಕಾನೂನು ಪ್ರಕಾರ ಮಾಡಲಿಲ್ಲವಾಗಿ ಇದಕ್ಕೆ ಸಹಿಹಾಕಿದ ಡೈರೆಕ್ಟರರ ವ ಆಫೀಸರ ಮೇಲೆ ಈ ಸಂಸ್ಥೆಯು ಪಾಲುಗಾರರಲ್ಲೊಬ್ಬರಾದ ಶ್ರೀ ಅಂಕೋಲ ಮಾಧವರಾವ ಚಂದ್ರ ಕಾಮತ್ ಬಿ ಎ. ರವರು ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರ ಕೋರ್ಟಿನಲ್ಲಿ ದಾಖಲ್ಮಾಡಿದ ಫಿರ್ಯಾದುಗಳು ತನಿಕೆಯಾಗಿ ಸಿವಿಲ್ ಕೋರ್ಟಿನ 203ನೇ ಸೆಕ್ಶನ್ ವರೆಗೆ ತಳ್ಳಿ ಹಾಕಲ್ಪಟ್ಟಿದೆಯಾಗಿ ತಿಳಿದು ಬರುತ್ತದೆ.

ಮೂಡಬಿದ್ರೆ— ಮೈಸೂರಿನ ದಿವಾನರಾದ ಸರ್, ಮಿರ್ಜಾ ಎಮ್ ಇಸ್ಮಾಯಿಲ್‌ರವರು ಮೂಡಬಿದ್ರೆ ಲೋಕಲ ಫಂಡ್ ಆಸ್ಪತ್ರೆಯ ಒಳರೋಗಿಗಳ ವಸತಿಗೃಹದ 'ಅಸ್ತ್ರವಾರ ವಿಲಾ' ಸ್ಥಾಪನೆಯ ಸಮಾರಂಭವನ್ನು ಇದೇ ತಾ 9 10-39ನೇ ಸೋಮವಾರ ಬೆಳಗ್ಗೆ ಘಂಟೆ 9 30ಕ್ಕೆ ನೆರವೇರಿಸಲಿರುವರು.

ಮೂಲ್ಕಿ— ಹಿಂದೆ ಪ್ರಚುರ ಪಡಿಸಿದ್ದಂತೆ "ಶ್ರೀ ದುರ್ಗಾ ಸ್ಕೂಲ್ ಒಫ್ ಕೊಮ್ಮರ್ಸ್" ಎಂಬ ಶಾಲೆಯು 28 9 39ರಲ್ಲಿ ಶ್ರೀ ಜೆ. ಗಣೇಶರಾವ್ ಬಿ ಎ,ಎಲ್ ಟಿ ರವರ ಸಭಾಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಶ್ರೀ. ಬಿ. ಭೋಜರಾಯರು ಪ್ರಾರಂಭ ಭಾಷಣವಾದ ಶಾಲೆಯನ್ನು ತೆರೆಯುವಂತೆ ಸಭಾಧ್ಯಕ್ಷರನ್ನು ಕೇಳಿಕೊಂಡರು ಡಾಕ್ಟರ್ ಯಂ ಆರ. ಕಾಮತ್, ಶ್ರೀ ಕೆ ನರಸಿಂಗ್ ರಾವ್ ಇವರೇ ಮೊದಲಾದವರು ನೂತನ ಸಂಸ್ಥೆಗೆ ಶ್ರೇಯೋಭಿವೃದ್ಧಿಯನ್ನು ಕೋರಿ ಮಾತನಾಡಿದರು.

ಮೊಗವೀರ ಧರ್ಮೋದ್ಧಾರಕ ಮಂಡಳಿ ಮುಂಬಾಯಿ— ತಾ 24 9. 39ರಲ್ಲಿ ಕೂಡಿದ ಈ ಮಂಡಳಿಯ ಪೂರ್ವ ಆಡಳಿತ ಸಮಿತಿಯ ಸದಸ್ಯರು ಮಂಡಳಿಯ ಕಾರ್ಯ ತಟಸ್ಥವಾಗಿರುವುದಕ್ಕೆ ವಿಷಾದಿಸಿ, ಮುಂದೆ ಸಂಸ್ಥೆಯ ಪುನರುದ್ಧಾರ ಮಾಡಬೇಕೆಂದೂ ಅದಕ್ಕೆ ಸಮ್ಮತಿಸುವ ಎಲ್ಲಾ ಸದಸ್ಯರುಗಳಿಂದ ಇದೇ ಬರುವ ಒಕ್ಟೋಬರ ತಿಂಗಳಿಂದ ತಿಂಗಳಿಗೆ ನಾಲ್ಕಾಣೆಯಂತೆ ಚಂದಾ ವಸೂಲು ಮಾಡಬೇಕೆಂದೂ 3ತಿಂಗಳ ವರೆಗೆ ಪ್ರಚಾರನಡೆಸಿ ಸಂಸ್ಥೆಯ ಏಳಿಗೆಯ ವ್ಯವಸ್ಥೆಗಾಗಿ ಮಹಾಸಭೆಯನ್ನು ಕರೆಯಬೇಕೆಂದೂ ನಿಶ್ಚಯಿಸಲಾಯಿತು.

ಪುತ್ತೂರು— ಎಂದಿನಂತೆ ದಸರಾ ಮಹೋತ್ಸವವು ತಾ. 13 10 39ರತನಕ ಜರಗುವುದು. ಪ್ರತಿದಿನ ಸಾಯಂಕಾಲ 5ಕ್ಕೆ ಹೈಯರ್ ಎಲಿಮೆಂಟರಿ ಹುಡುಗಿಯರ ಶಾಲೆಯಲ್ಲಿ ಉಪನ್ಯಾಸಗಳು 7ಗಂಟೆಗೆ ವಿನೋದಗಳು ಇರುವುವು. 5ರಿಂದ 6ರ ತನಕ ಹುಡುಗರ ಶಾಲೆಯಲ್ಲಿ ವ್ಯಾಯಾಮ ಪ್ರದರ್ಶನವಿರುವುದು, ಈ ಬಾರಿ ಹೊರಗಿನಿಂದ ಶ್ರೀಗಳಾದ ನಾ. ಕಸ್ತೂರಿ ಎಂ. ಎ, ಮೈಸೂರು, ಹನುಮಂತರಾವ್ ಕೊಣ್ಣೂರು, ಎಂ ಎ ಬಿಜಾಪುರ, ಪ್ರೊ. ಕೆ ವಿ ಐಯ್ಯರ್, ಬೆಂಗಳೂರು, ಜಿ. ಪಿ. ರಾಜರತ್ನಂ, ಎ. ಪಿ ಎಚ್, ಸುಬ್ಬ ಜೋಯಿಸ್, ಎಂ. ಎಸ್. ಸಿ ಬೆಂಗಳೂರು, ವಿ. ಸೀತಾರಾಮಯ್ಯ ಎಂ. ಎ, ಬೆಂಗಳೂರು, ಸರ್. ಟಿ ವಿಜಯ ರಾಘವಾಚಾರ್ಯ, ದ ರಾ. ಬೇಂದ್ರೆ, ಎಂ. ಎ. ವಿ ಕೃ. ಗೋಕಾಕ್, ಎಂ. ಎ. ಸಾಂಗ್ಲಿ ಮೊದಲಾದವರು ಬರಲಿರುವರೆಂದು ತಿಳಿದುಬರುತ್ತದೆ

ತಾ. 20 10 39ಕ್ಕೆ ಜರಗಲಿರುವ ಜಿಲ್ಲಾ ಪಂಚಾಯತ ಬೋರ್ಡು ಪರಿಷತ್ತಿನ ಬಗ್ಗೆ ತಾರೀಕು 17 9-39ರಲ್ಲಿ ಪುತ್ತೂರು ಪಂಚಾಯತ ಬೋರ್ಡು ಆಫೀಸಿನಲ್ಲಿ ಶ್ರೀ. ಎಂ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಒಂದು ಸ್ವಾಗತ ಕಮಿಟಿಯನ್ನು ರಚಿಸಲಾಗಿದೆ ಶ್ರೀ ಕೆ ಆರ್. ಕಾರಂತರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿಯೂ ಶ್ರೀಗಳಾದ ಎಂ ಶಿವರಾವ್ ಮತ್ತು ಎಚ್. ಪಿ. ಭಟ್ಟರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ ಪತ್ರವ್ಯವಹಾರವನ್ನು ಶ್ರೀ ಶಿವರಾಯರ ಹೆಸರಿಗೆ ಮಾಡಬೇಕಾಗಿದೆ. ಪ್ರತಿ ಪಂಚಾಯತ ಬೋರ್ಡಿನಿಂದ ಬರುವ ಪ್ರತಿ ನಿಧಿಗಳಿಗೆ ರೂ 1ರಂತೆ ಪ್ರತಿನಿಧಿ ಹಾಸಲು ತೆರಬೇಕಾಗಿದೆ.

ಕಟಪಾಡಿ— ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ 28 9 39ರಂದು "ದಿವಗಂತ ಶ್ರೀ ಪಾಂಗಾಳ ಶ್ರೀನಿವಾಸ ನಾಯಕರ ದಿನಾಚರಣೆ'ಯು ಉಡ್ಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾವ, ಬಿ ಎ ಎಲ್, ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲೆಯ ಸಂಕ್ಷಿಪ್ತ ವರದಿ, ದಿವಂಗತರ ಜೀವನ ಚರಿತ್ರೆಗಳ ವಾಚನವಾದ ತರುವಾಯ ಸಭಿಕರ ಭಾಷಣ, ಭಾಷಣ ಸ್ಪರ್ಧೆಯ ಬಗ್ಗೆ ವಿದ್ಯಾರ್ಥಿಗಳಿಗೆ ಬಹುಮಾನ ಹಂಚೋಣ, ಅಧ್ಯಕ್ಷರ ಭಾಷಣ ಮೊದಲಾದುವುಗಳಾದ ಬಳಿಕ ವಿದ್ಯಾರ್ಥಿನಿಯರಿಂದ ಲೇಜಂ ಡ್ರಿಲ್, ವಿದ್ಯಾರ್ಥಿಗಳಿಂದ 'ಶ್ರೀಕೃಷ್ಣ ಸಂಧಾನ" ಯಕ್ಷಗಾನ ಪ್ರದರ್ಶನಗಳಾಗಿ ಸಭೆಯು ಮುಕ್ತಾಯವಾಯಿತು.

ಉದಿಯಾವರ— 1-10 39ರಲ್ಲು ಇಲ್ಲಿಯ ಯುವಕ ಗ್ರಾಮಶಾಲೆಯ ವಾರ್ಷಿಕೋತ್ಸವವು ಶ್ರೀ. ಯು ಎ. ರಾಮರಾಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು ಯುವಕ ವಿದ್ಯಾರ್ಥಿಗಳು ತಮ್ಮ ಮಾಸ್ತರರಿಗೆ ಪಾರಿತೋಷಕವನ್ನು ಅರ್ಪಿಸಿದರು. ಉಪಹಾರಾನಂತರ ಸಭೆಯು ಮುಗಿಯಿತು

ತಿದ್ದುಪಡಿ

ಕಳೆದ ಸಂಚಿಕೆಯ 9ನೇ ಪುಟದಲ್ಲಿ ಪ್ರಕಟಿಸಿದ ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ O S. 443/37 R I A 1171/39ನೇ ನೋಟೀಸಿನಲ್ಲಿ 5, 6, 7ನೇ ಪ್ರತಿವಾದಿರ ಪಾವಂಜೆ ಕೇಶವ ಭಟ್ಟರ ಮಕ್ಕಳು ಎಂತ ತಪ್ಪಾಗಿ ಪ್ರಕಟವಾಗಿದೆ. ಅದರ ಬದಲಿಗೆ ಪಾವಂಜೆ ವೆಂಕಟೇಶ ಭಟ್ಟರ ಮಕ್ಕಳು ಎಂತ ಆಗಬೇಕಾಗಿದೆ. ಸಂ ನ

ಉಡುಪಿ

ಹರಿಜನವಾರ— ಹರಿಜನ ಸೇವಕಸಂಘದವರು ಏರ್ಪಡಿಸಿದ ಹರಿಜನವಾರದ ಕೊನೆಯ ದಿನ (2-10 39) ಅಜ್ಜರಕಾಡಿನಲ್ಲಿ ಜರಗಿದ ಸಭೆಯಲ್ಲಿ ಶ್ರೀ ಕೆ. ಕೆ ಭಟ್ಟರು ಹರಿಜನರಿಗೆ ಕೆಲವು ಹಿತೋಪದೇಶಗಳನ್ನಿತ್ತರು.

ಮಹಾಸಭೆಗಳು— 958ನೇ ಪರಸ್ಪರ ಸಹಾಯಕ ಸಂಘ ಲಿಮಿಟೆಡ್, ಉಡುಪಿ ಇದರ ವಾರ್ಷಿಕ ಮಹಾಸಭೆಯು ತಾ. 1 10 39ರಲ್ಲಿ ಶ್ರೀ. ಪಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿ ಕೋಪರೇಟಿವ್ ಟೌನ್ ಬೇಂಕಿನ ವಾರ್ಷಿಕ ಮಹಾಸಭೆಯು ತಾ. 1-10 39 ರಲ್ಲು ಶ್ರೀ ಕೆ ಗುರುರಾಜರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಕೂಟದ ಅಧ್ಯಕ್ಷರಾದ ಶ್ರೀ ಕೆ. ಜಿ. ಬಲ್ಲಾಳರೂ ಕಾರ್ಯದರ್ಶಿ ಶ್ರೀ. ಕೆ ಆರ್. ಶೆಣೈ ಮುಂತಾದವರು ಹಾಜರಿದ್ದರು

ಬೆಳ್ಳಿ ಕಳವು— ಶ್ರೀ. ಶೀರೂರು ಮಠದಲ್ಲಿ ಸಾಧಾರಣ ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಬೆಳ್ಳಿ ಪಾತ್ರೆಗಳು ಕಳವಾದವು. ಮಠದ ಕೊಟ್ಟಾರಿಗಳನ್ನು ಕೈದುಮಾಡಿರುತ್ತಾರೆ ಪೋಲೀಸ್ ತನಿಕೆ ನಡೆಯುತ್ತಲಿದೆ.

ಅಪೀಲಿನಲ್ಲಿ ಗುಣವಾಯಿತು— ಆಲಿಪೂರು ಸಹಕಾರ ಸಂಘದ ಅಧ್ಯಕ್ಷರ ಮೇಲೆ ಹೊರಿಸಲ್ಪಟ್ಟ ತಪ್ಪುಸ್ಥಾಪನೆಯು ಮಂಗಳೂರು ಜಿಲ್ಲಾ ಕೋರ್ಟು ಅಪೀಲಿನಲ್ಲಿ ಬಿದ್ದುಹೋಯಿತೆಂದು ತಿಳಿದುಬರುತ್ತದೆ.

ಮಲ್ಪೆ— ಮಲ್ಪೆ ಪಂಚಾಯತ ಬೋರ್ಡಿನ ಆಫೀಸಿನಲ್ಲಿ ಇದೇ ಅಕ್ಟೋಬರ 1 ತಾ 4ರಿಂದ ಸಾರ್ವಜನಿಕ ದರ್ಮಾರ್ಥ ವಾಚನಾಲಯ ಹೊಂದಿ ತೆರೆಯಲ್ಪಟ್ಟಿದೆ. ಸದ್ಯ ಏಳು ಪತ್ರಿಕೆಗಳನ್ನು ತರಿಸಲಾಗುತ್ತಿದೆ.

ಪ್ರಕಟಣೆ

ಉಡುಪಿ ತಾಲೂಕು ಹೆರಗ ಗ್ರಾಮದ ಸೆಟ್ಟಿಬೆಟ್ಟಿನಲ್ಲಿರುವ ಲಕ್ಷ್ಮಿ ಹೆಗ್ಗಡ್ತಿಯವರ ಮಗಳು ನೇತ್ರು ಹೆಗ್ಗಡ್ತಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ—

ನಾನು ಈಗ ಕುಟುಂಬದ ಯಜಮಾನಿಯಾಗಿಯೂ, ಪಟ್ಟೇದಾರಳಾಗಿಯೂ ಇದ್ದು ಕುಟುಂಬದ ಆಸ್ತಿಗಳ ಗೇಣಿ ವಾ ಹೊರಗಿನಿಂದ ಬರತಕ್ಕ ಹಣ ವಗೈರೆ ವಸೂಲುಮಾಡಲಿಕ್ಕೆ ನಾನೇ ಹಕ್ಕುದಾರಳಾಗಿರುತ್ತೇನೆ. ನನ್ನ ವಾಬ್ತು ಯಾವತ್ತೂ ರಿಕಾರ್ಡು ರಶೀದಿ ವಗೈರೆ ಆಗುವುದಾದರೂ ನನ್ನ ತಂದೆ ಬಡಗಬೆಟ್ಟು ರಾಮಯ್ಯ ಹೆಗ್ಗಡೆರ ಸಾಕ್ಷಿ ವಾ ನನ್ನ ಹೆಬ್ಬೆಟ್ಟಿನ ಗುರುತು ವಾ ದಸ್ಕತು ಸಹಿ ಆಗಬೇಕಾಗಿ ನಾನು ಈ ಮೊದಲು ತಾ. 29-12 1938ನೇ ನವಯುಗದಲ್ಲಿ ಪ್ರಕಟಿಸಿರುತ್ತೇನೆ. ಕಾರಣಾಂತರದಿಂದ ಅದನ್ನು ಈಗ ಈ ಮೂಲಕ ರದ್ದುಪಡಿಸಿರುತ್ತೇನೆ. ಇನ್ನು ಮುಂದೆ ಯಾವತ್ತೂ ರಿಕಾರ್ಡು ರಶೀದಿ ವಗೈರೆಗಳಿಗೆ ನನ್ನ ಎಡ ಹೆಬ್ಬೆಟ್ಟಿನ ಗುರುತು ದಸ್ಕತು ಸಹಿ ಮತ್ತು ನನ್ನ ಹಿರೇ ತಮ್ಮನಾದ ಎಸ್. ದಾಸಪ್ಪ ಹೆಗ್ಡೆಯ ಸಾಕ್ಷಿ ಮಾತ್ರ ಬರಹ ಸಹಿ ಪಡೆಯಬೇಕಾಗಿರುತ್ತದೆ. ಅಂಥಾ ಸಂಗತಿಯಲ್ಲಿ ಮಾತ್ರ ಅವುಗಳು ಸಿಂಧು ಆಗತಕ್ಕದ್ದು. ಇದಕ್ಕೆ ವಿರೋಧವಾಗಿ ಆಗುವ ಯಾ ಪಡೆಯುವ ಯಾವತ್ತೂ ರಿಕಾರ್ಡು ರಶೀದಿ ವಗೈರೆಗಳಿಗೆ ನಾನು ಒಪ್ಪತಕ್ಕವಳಲ್ಲ. ಮತ್ತು ಅವು ನನ್ನ ಮೇಲೆ ಲಗಾವು ಆಗತಕ್ಕವೂ ಅಲ್ಲ ಎಂಬ ಸಂಗತಿಯನ್ನು ಈ ಮೂಲಕ ಜಾಹೀರು ಮಾಡಿರುತ್ತೇನೆ

● ಈ ಎಡಕೈ ಹೆಬ್ಬೆಟ್ಟಿನ ಗುರ್ತು ಮತ್ತು ದಸ್ಕತು ನೇತ್ರು ಹೆಗ್ಗಡ್ತಿಯದ್ದಾಗಿರುತ್ತದೆ.

Wit. S Dasappa Hegde,
Son of B Ramayya Hegde,
Heraga, Village.

ತಾರೀಕ, 3-10-1939

Advertisement Tariff

1 Page	Rs. 25/	per insertion		
½	„	Rs. 15/-	„	„
¼	„	Rs 8/	„	„
⅛	„	Rs. 5/-	„	„

Per Single inch col Re. 1 „
Contract rates on application
Manager-**Navayuga UDIPI.**



ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

DEVIKA RANI TEACHES YOU A LESSON ON LOVE!

'Ah, good people, perhaps you do not know what it is to love & lose" she says!

Love between an Untouchable girl and a Brahmin boy-and lose because the girl gives her life to save lives!

She adored him, because he was so kind, and he loved her because she was so serene!

But there were evil eyes and evil tongues with non-stop wagging!

With one voice they cried 'It is sin! It is crime!' Ties of marriage-she with an Untouchable and he with a Brahmin girl dragged them apart, but not their heart!

See Bombay Talkies crowning success of international fame and record run

ACHUT KANYA

inhuman sufferings! Incandescent morality!

featuring: Devika Rani, Ashok Kumar & others

Lilting songs! Sterling performance!

At Sri Ramakrishna Theatre Udipi from 3-10-1939.

See once, and you will always remember it hence!

ದೇವಿಕಾರಾಣಿಯು ನಿಮಗೆ ಪ್ರೇಮದ ಪಾಠವನ್ನು ಕಲಿಸುವಳು.

'ಪ್ರೇಮ ಮತ್ತು ವಿಯೋಗ–ಇದರ ಸ್ವಾರಸ್ಯ ನಿಮಗೆ ತಿಳಿಯದೆ?' ಎನ್ನುತ್ತಿರುವಳವಳು. ಅಸ್ಪೃಶ್ಯಯುವತಿ, ಬ್ರಾಹ್ಮಣ ಯುವಕ ಇವರೊಳಗ ಪ್ರೇಮ! ಜೀವನವನ್ನು ಕಾಯಲು ಜೀವವನ್ನು ತೆತ್ತು, ಆ ಪ್ರೇಮದಲ್ಲಿ ವಿಯೋಗ! ಹೇಗಿರಬೇಕು ಇದರ ವಿಚಾರ?

ನೋಡಿರಿ **ಶ್ರೀರಾಮಕೃಷ್ಣಥಿಯೇಟರಿನಲ್ಲಿ** ತಾರೀಕು 3-10-39 ರಿಂದ

'ಬಾಂಬೇ ಟಾಕೀಸ್'ನವರ ಚಿತ್ರಗಳಲ್ಲಿ ಸರ್ವೋತ್ತಮವೆಂದೆನಿಸಿರುವ, ಜನತೆಯ ಪ್ರಶಂಸೆಗೆ ಪಾತ್ರವಾದ

ಒಂದೇ ಒಂದು ಚಿತ್ರ! ಕಲಾಕೌಶಲ್ಯದ ಬೀಡೆನಿಸಿರುವ ಚಿತ್ರ!

ದೇವಿಕಾರಾಣಿಯ ಮಧುರ ಸಂಗೀತ! ಅಶೋಕ ಕುಮಾರನ ಮೃದು ನುಡಿ!

ಅಚ್ಯುತ್ ಕನ್ಯಾ

ಜಾತಿನೀತಿಯ ಗೊಡವೆಯಿಲ್ಲದೆ ಹೃದಯಗಳು ಒಡನಾಡಿದುವು! ಆದರೆ ಸಮಾಜದ ಕಣ್ಣುಗಳು ಮಿಡುಕಿದವು! ಕೈಗಳು ಸಿಡುಕಿದವು! ಬಾಯಿಗಳು ಬಿರುನುಡಿದವು-ಇದು ಮಹಾ ಪಾಪ! ವಿವಾಹ ಬಂಧನವು ಅವಳನ್ನು ಹೊಲೆಯನೆಡೆಗೆ ಎಳೆಯಿತು! ಇವನನ್ನು ಬ್ರಾಹ್ಮಣ ಹುಡುಗಿ ಎಡೆ ಸೆಳೆಯಿತು—ಏನನ್ನು? —ಅವರ ಹೃದಯ ರಹಿತ ದೇಹವನ್ನು! ಅಂದರೆ ಅವರ ಹೃದಯವು ಏನನ್ನು ಮಾಡಿತು?

— SYNOPSIS —

Premchand wanted to shoot his wife Ramla dead, and both were waiting to pass the gates of Level Crossing No 34 They were disturbed by a mysterious looking figure near a marble memorial singing a plaintive song Premchand wanted to know all about this girl Kasturi, in whose memory the tablet has been erected, and this was the story told by the stranger

"Kasturi an untouchable girl, and Pratap, a Brahmin boy were playmates since childhood, cherishing love for each other Likewise their respective fathers, Dukhia, the Level crossing Gate Keeper and Mohan the village grocer, were great friends as once Dukhia, had risked his own life to save Mohan's life When Pratap's marriage was fixed, Babulal, a village quack, raised a hue and cry, spreading the false news that Kasturi was the bride chosen for Pratap Babulal received a rebuff when it became known that Meera, a Brahmin girl, was the bride Once it so happened that Mohan fell ill, and Dukhia went to his house for nursing him back to health. The villagers at the instigation of Babulal, raided Mohans shop to turn out Dukhia, and set fire to the house Pratap however, rescued Mohan from the burning fire, and Dukhia rushed to the on coming Mail Train to summon a Doctor from the next station for Mohan The guards refused to listen to him and Kasturi came to his side, as his frail body rolled down the embankment A young man Mannu was installed in his place. The loving hearts of Kasturi and Pratap were burning inside Nevertheless, Kasturi exacted a promise from Pratap to forget her, and married Mannu Kajari came to Mannu again to assert her rights as his first wife Though Mannu refused to accept her Kasturi welcomed her rival and pleaded with Mannu on her behalf But Kajari and Meera plotted to bring about the downfall of Kasturi They took her to a fair and leaving her there carried a tale of Kasturi's unfaithfulness to Mannu In the fair, Pratap found Kasturi searching for her companions, and offerd to escort her home Infuriated Mannu went to stab Kasturi Pratap went to her rescue, and they fought a grim battle The mail train loomed prominently around the bend What next?

ಕಥಾಸಾರಾಂಶ:—ಪ್ರೇಮಚಂದ್ರನು ತನ್ನ ಹೆಂಡತಿಯಾದ ರಮಲಳನ್ನು ಪಿಸ್ತೂಲಿಂದ ಹೊಡೆದು ಕೊಲ್ಲಲು ಹೋಗುತ್ತಿದ್ದನು ಅಷ್ಟರಲ್ಲಿ ಒಂದು ಗೋರಿಯ ಬಳಿಯಲ್ಲಿ ಅಪರಿಚಿತ ವ್ಯಕ್ತಿಯೊಂದು ಸುಸ್ವರಪೂರಿತ ಹಾಡನ್ನು ಹಾಡುತ್ತಿತ್ತು ಗೋರಿಯ ಬಳಿಯಲ್ಲಿ 'ಕಸ್ತೂರಿಯ ಸ್ಮಾರಕವಾಗಿ' ಎಂದು ಬರೆದಿತ್ತು ಪ್ರೇಮಚಂದ್ರನಿಗೆ ಕಸ್ತೂರಿಯ ವಿಚಾರ ತಿಳಿಯಲು ಕುತೂಹಲ ಪಡಲು, ವ್ಯಕ್ತಿಯು ಕಥೆಯನ್ನು ಹೇಳತೊಡಗಿತು.

"ಕಸ್ತೂರಿಯು ಹೊಲತಿ ಪ್ರತಾಪನು ಬ್ರಾಹ್ಮಣ ಕುವರ. ಚಿಕ್ಕಂದಿನಿಂದ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು ಕಸ್ತೂರಿಯ ತಂದೆ ದುಕಿಯಾನು ಪ್ರತಾಪನ ತಂದೆ ಮೋಹನನ ಪ್ರಾಣವನ್ನು ಉಳಿಸುವದಕ್ಕಾಗಿ ಅದೊಂದು ಬಾರಿ ತನ್ನ ಜೀವವನ್ನು ತೆರಲು ಸಿದ್ಧನಿದ್ದನು ಆದುದರಿಂದ ಇವರಿಬ್ಬರೂ ಅಜನ್ಮ ಸ್ನೇಹಿತರು. ಇದು ಊರ ಜನರಿಗೆ ಸರಿ ಬೀಳಲಿಲ್ಲ. ಪ್ರತಾಪನ ಮದುವೆಗೆ ಸಿದ್ಧವಾಗುತ್ತಿರುವಾಗ, ಬಾಬುಲಾಲ್ ಎಂಬವನು, ಆರಿಸಿದ ವಧು ಕಸ್ತೂರಿ ಎಂದು ಸುಳ್ಳು ವರ್ತಮಾನ ಹಬ್ಬಿಸುವನು ಆದರೆ ಪ್ರತಾಪನಿಗೆ ಆರಿಸಿದ ವಧುವು ಮೀರಾ ಎಂಬ ಬ್ರಾಹ್ಮಣ ಕುವರಿ ಎಂದು ಖಚಿತವಾಗಲು ಎಲ್ಲವೂ ಶಾಂತವಾಗುವುದು ಮುಂದೆ ಕೆಲವು ದಿನಗಳಲ್ಲಿ ಮೋಹನನು ಕಾಹಿಲೆಯಲ್ಲಿ ಬೀಳುವನು. ಅವನನ್ನು ಉಪಚರಿಸಲು ದುಕಿಯಾನು ಬರುವನು. ಬಾಬುಲಾಲನು ಈ ವಿಷಯವನ್ನು ಗ್ರಾಮದಲ್ಲಿ ಹಬ್ಬಿಸಲು ಜನರು ಕೋಪೋದ್ರೇಕದಿಂದ ಮೋಹನನ ಅಂಗಡಿಯನ್ನು ಮುತ್ತಿ, ದುಕಿಯಾನನ್ನು ಹೊರಗಟ್ಟುವರು. ಮತ್ತು ಮೋಹನನ ಮನೆಗೆ ಕಿಚ್ಚನ್ನು ಹಚ್ಚುವರು. ಪ್ರತಾಪನು ಎಂತೋ ಮೋಹನನನ್ನು ಬೆಂಕಿಯಿಂದ ತಪ್ಪಿಸಿ ತರುವನು. ಮೋಹನನ ಚಿಕಿತ್ಸೆಗಾಗಿ ಡಾಕ್ಟರನ್ನು ಕರೆತರಲು ಮೈಲ್ ಗಾಡಿಯನ್ನು ನಿಲ್ಲಿಸಿ ಗಾರ್ಡ ಕೆಲಸವನ್ನು ದುಕಿಯಾನು ಕಳೆದುಕೊಳ್ಳುವನು. ಇವನ ಸ್ಥಾನದಲ್ಲಿ ಮನ್ನು ಎಂಬವನಿಗೆ ಕೆಲಸ ದೊರೆಯುವುದು.

ಇತ್ತ ಕಸ್ತೂರಿಯು, ತನ್ನನ್ನು ಮರೆಯುವಂತೆ ಪ್ರತಾಪನಿಂದ ಭಾಷೆ ತೆಗೆದುಕೊಳ್ಳುವಳು. ಮತ್ತು ಮನ್ನುವನ್ನು ಮದುವೆಯಾಗುವಳು ಮನ್ನುವಿನ ಪ್ರಥಮ ಹೆಂಡತಿ ಕಜಾರಿ ಮತ್ತು ಪ್ರತಾಪನ ಹೆಂಡತಿ ಮೀರಾ, ಇವರಿಬ್ಬರೂ ಹೇಗಾದರೂ ಕಸ್ತೂರಿಯ ಅಧಃಪತನವನ್ನು ನೋಡಬೇಕೆಂದು ಹೊಂಚು ಹಾಕುತ್ತಿದ್ದರು. ಕಸ್ತೂರಿಯನ್ನು ಪರ ಊರ ಜಾತ್ರೆಗೆ ಕರೆದುಕೊಂಡು ಹೋಗಿ, ಅವಳನ್ನು ಅಲ್ಲಿಯೇ ಬಿಟ್ಟು ಬರುವರು. ಮನ್ನುವಿನೊಡನೆ, ಅವಳು ಪ್ರತಾಪನೊಂದಿಗೆ ಜಾತ್ರೆಯಲ್ಲಿ ಇರುವಳಾಗಿಯೂ, ತಮ್ಮೊಂದಿಗೆ ಬರಲು ಇಷ್ಟಪಡಲಿಲ್ಲವಾಗಿಯೂ ದೂರನ್ನು ಹೇಳುವರು ಇದಕ್ಕೆ ಸರಿಯಾಗಿ ಜಾತ್ರೆಯಲ್ಲಿ ಪ್ರತಾಪನೂ ಅಲ್ಲಲ್ಲಿ ಅಲೆದಾಡುತ್ತಿದ್ದ ಕಸ್ತೂರಿಯನ್ನು ನೋಡಿ, ವಿಷಾದ ತಳೆದು, ಅವಳನ್ನು ಮನೆಯ ತನಕ ಕರೆದು ತಂದು ಬಿಡಲು ಹೊರಡುವನು ಗಾಡಿಯಲ್ಲಿ ಮನ್ನುವು ಇವರಿಬ್ಬರನ್ನು ನೋಡಿ, ಕಸ್ತೂರಿಯನ್ನು ಕತ್ತಿಯಿಂದ ತಿವಿಯ ಬೇಕೆಂದು ಹಾರಿಬೀಳುವನು. ಪ್ರತಾಪನು ಅಡ್ಡ ಬರಲು, ಮಲ್ಲಯುದ್ಧವಾಗುವುದು. ಆಗಲೇ ಮೈಲ್ಗಾಡಿಯು ಬರುತ್ತಿತ್ತು ಮುಂದೇನು' ಪ್ರೇಮಚಂದ್ರನು ಏನು ಮಾಡುವನು ?

ದಾರಿಹೋಕನ ಡೈರಿ

ಜರ್ಮನರು ಹಾಗೆ ಮಾಡಿದರು, ಹೀಗೆ ಮಾಡಿದರೆಂಬ ಕತೆಗಳೇ ಕತೆಗಳು ಜನತೆಯಲ್ಲಿ. ಯಾವ ಪತ್ರಿಕೆಯಲ್ಲಿಯೂ ಪ್ರಕಟವಾಗದ ಯಾವ ರೇಡಿಯೋದಲ್ಲಿಯೂ ಕೇಳದ ಈ ಸುದ್ದಿಗಳು ಯಾವ ಗೂಡಿನಲ್ಲಿ ಹುಟ್ಟಿ ಹೇಗೆ ಹಾರಾಡುವವೆನ್ನಲಾಗುವುದಿಲ್ಲ! ಎಲ್ಲರೂ ರಣರಂಗಗಳ ವಾರ್ತಾವಾಹಕರು; ಯುದ್ಧದ ಭವಿಷ್ಯವಾದಿಗಳು. ಜರ್ಮನಿಯ ಗುಪ್ತಚಾರರು ಎಲ್ಲಿ ಹಳ್ಳಿಗಳಲ್ಲಿ ತಂಗಿರುವರೋ ಎಂದು ಚಕಿತರಾಗಬೇಕು ಸರಕಾರದವರು ಈ ಸುದ್ದಿಗಳೆಲ್ಲಿಯಾದರೂ ಅವರ ಕಿವಿಗೆ ಬೀಳುವಂತಾದರೆ!

○○ ○○ ○○

ಇದೇ ರೀತಿಯ ಸುದ್ದಿಗಳ ಸುಳಿದಾಟವು ಶ್ರೀ. ಭೋಸರನ್ನೂ ಕಾಡಿಬಿಟ್ಟಿತು. ಕಲ್ಕತ್ತಕ್ಕೆ ಹೋದೊಡನೆಯೇ ಅವರನ್ನು ದಸ್ತಗಿರಿ ಮಾಡಲಾಗುವುದೆಂದು ನಾಗಪುರದಲ್ಲಿ ಸುದ್ದಿ ಸುಳಿದು ಶ್ರೀ. ಭೋಸರು ಗಡಿಬಿಡಿಯಾದಂತಿದೆ. ದಸ್ತಗಿರಿ ಮಾಡುವುದಾದರೆ ತಾನು ಕಲ್ಕತ್ತಕ್ಕೆ ಬರುತ್ತೇನೆಂದು ಅವರು ಬಂಗಾಳ ಸರಕಾರಕ್ಕೆ ತಂತಿ ಬಿಡುವಷ್ಟು ಮುಂದುವರಿದುಬಿಟ್ಟರು.

○○ ○○ ○○

ಯುದ್ಧ ಸಂಬಂಧವಾದ ಕಾಂಗ್ರೆಸಿನ ನಿರ್ಧಾರಕ್ಕೆ ಮೂಲ ಕಾರಣರೆಂದರೆ ಪಂಡಿತ ಜವಾಹರಲಾಲರು. ಕಾಂಗ್ರೆಸನ್ನೀಗ ನಡೆಸುವ ಜವಾಬ್ದಾರಿಯನ್ನೆಲ್ಲಾ ಗಾಂಧಿಜಿಯವರು ಪಂಡಿತರ ಮೇಲೆ ಹಾಕಿ ತಾನು ಅವರನ್ನನುಸರಿಸಲು ಸಿದ್ಧರಾಗಿರುವಂತಿದೆ. ಆದರೂ ಶ್ರೀ. ಸತ್ಯಮೂರ್ತಿಗಳೇ ಮೊದಲಾದವರು ಗಾಂಧಿಜಿಯವರ ನಾಯಕತ್ವದ ಪಲ್ಲವಿಯನ್ನೇ ಹಾಡುತ್ತಿರುವ ಗುಟ್ಟೇನು? ತಮ್ಮ ಸುರಕ್ಷಿತತೆಗೆಲ್ಲಿಯಾದರೂ ಧಕ್ಕೆ ಬರುವುದೋ ಎಂಬ ಸಂದೇಹವೇ ಮೂರ್ತಿಗಳೇ ಮೊದಲಾದವರಿಗೆ?

○○ ○○ ○○

ಯುದ್ಧದಲ್ಲಿ ಕಾಂಗ್ರೆಸು ಬ್ರಿಟಿಷ್ ಸರಕಾರಕ್ಕೆ ಸಹಾಯನೀಯುವಂತಿಲ್ಲ. ವಿರೋಧಿಸುವ ಸಂಭವವೇ ಬರಬಹುದೆಂಬಂತಾದಾಗ ಅದನ್ನು ಉಗ್ರವಾಗಿ ನಿಷೇಧಿಸಿ, ಇಂಗ್ಲೆಂಡಿಗೆ ಬಾಯಿಮಾತಿಲ್ಲಿ ತಮ್ಮ ಸರ್ವಸ್ವವನ್ನರ್ಪಿಸಲು ಮುಂದಾದ ಸರ್. ಕೆ. ವಿ. ರೆಡ್ಡಿ, ನಾಯಿಡುಗಳಂಥವರು ಈಗ ಸ್ವಲ್ಪ ಹಿಂದೆಗೆಯುಹತ್ತಿದ್ದಾರೆ. ವೈಸರಾಯರು ಗಾಂಧಿಜಿ, ಪಂಡಿತ ಜವಾಹರಲಾಲರೊಡನೆಲ್ಲಾ ಮಾತುಕತೆ ನಡಿಸುವುದವರಲ್ಲಿ ಮತ್ಸರದ ಕಿಚ್ಚನ್ನೆಬ್ಬಿಸಿದೆ. ಕಾಂಗ್ರೆಸಿನೊಡನೆ ಒಪ್ಪಂದಮಾಡಿಕೊಂಡರೆ ಸಾಲದು, ಅದನ್ನೊಡನೆಯೂ ಕೇಳಿಕೊಳ್ಳಬೇಕು. ಇಲ್ಲವಾದರೆ ಪರಿಣಾಮ ನೆಟ್ಟಗಾಗಲಾರದೆಂದು ಎಚ್ಚರಿಸಹತ್ತಿದ್ದಾರೆ ಅವರು. ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಕೊಡುವಂತಾಗುವದೆಂದು ಮನಸ್ಸಿನ ಮುಂಡಿಗೆ ತಿನ್ನುತಿದ್ದರೋ ಏನೋ ಸರ್. ಕೂರ್ಮ ರೆಡ್ಡಿಗಳು!

○○ ○○ ○○

ಮದೋನ್ಮತ್ತ ಬಸವನು ಗಾಜಿನ ಸಾಮಾನುಗಳಂಗಡಿಗಳಿಗೆ ನುಗ್ಗಿದಂತಾಗಿದೆ ಕಾಂಗ್ರೆಸಿನವರು ಅಧಿಕಾರಕ್ಕೆ ಬಂದೆಂದರು ಮಿ. ಜಿನ್ನಾಸಾಹೇಬರು ಹೈದರಾಬಾದಿನಲ್ಲಿ. ಅರಸಿನಮುಂಡಿಗೆ ರೋಗದವರಿಗೆ ಇಡೀ ಲೋಕವೇ ಅರಸಿನವಾಗಿ ಕಾಣುವುದೇನೂ ಆಶ್ಚರ್ಯವಲ್ಲ. ಇಂಥಹ ದುರಹಂಕಾರಿಗಳ ನಾಯಕತ್ವದಲ್ಲಿರುವ ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸು ಒಂದುಗೂಡಿ ನಡೆಯುವುದಾದರೂ ಹೇಗೆ?

○○ ○○ ○○

ರಷ್ಯದ ಸರ್ವಾಧಿಕಾರಿ ಸ್ಟೆಲಿನರು ಮಾರ್ಕ್ಸ್‌ವಾದಿಯೇನೂ ಅಲ್ಲ. ಸ್ವಪ್ರತಿಷ್ಠಾವಾದಿ. ಹಿಂದೆ ಜರ್ಮನ್ ನಾಝಿಗಳ ಸಂಪರ್ಕದ ಆರೋಪ ಹಾಕಿ ರಷ್ಯದ ಅತ್ಯಂತ ಪ್ರತಿಭಾಶಾಲಿ ಸೇನಾನಿಗಳು ಮತ್ತು ಮುತ್ಸದ್ದಿಗಳನ್ನು ಕೊಲ್ಲಿಸಿದ ಸ್ಟೆಲಿನರೇ ಇಂದೀಗ ನಾಝಿಗಳೊಡನೆ ಹಸ್ತಲಾಘವ ಮಾಡುತ್ತಿದ್ದಾರೆ. ತನ್ನ ಅಧಿಕಾರವನ್ನು ಬಲಪಡಿಸಲು ಏನು ಮಾಡಲಿಕ್ಕೂ ಹೇಸುವವರಲ್ಲ ಅವರೆಂದು ರಷ್ಯದಿಂದ ಗಡಿಪಾರು ಮಾಡಲ್ಪಟ್ಟಿರುವ ಟ್ರಾಸ್ಕಿಯವರು ಸ್ಟೇಲಿನರನ್ನು ನಿಷೇಧಿಸಿರುತ್ತಾರೆ.

○○ ○○ ○○

ಸ್ಟೇಲಿನರು ನಿಜವಾಗಿಯೂ ಹಿಟ್ಲರರ ಮಿತ್ರರಾಗಿ ಹೋಗಿರುವರೇ? ಅಥವಾ ಹಿತಶತ್ರು ಮಾತ್ರವೇ? ಎಂಬುದೀಗ ಪ್ರಶ್ನೆ. ಪೂರ್ವ ಯುರೋಪಿನಲ್ಲಿ ಹಿಟ್ಲರರನ್ನು ಅವರು ಜಯಶೀಲವಾಗಿ ಮೂಲೆಗೊತ್ತಿಬಿಟ್ಟಿದ್ದಾರೆ. ಯುದ್ಧದಲ್ಲಿ ಹಿಟ್ಲರರಿಗೆ ಸಹಾಯ ನೀಯುವ ನಟನೆ ಮಾಡಿ ಜರ್ಮನಿಯು ಸೋತುಹೋದ ಮೇಲೆ ಅಲ್ಲಿಯೂ ಸಮತಾವಾದ ಹಬ್ಬುವಂತೆ ತಂತ್ರ ನಡಿಸುತ್ತಿರುವರೆಂದು ಹಲವರ ಊಹೆ.

○○ ○○ ○○

ಮಧ್ಯ ಪೋಲಂಡಿನಲ್ಲಿ ಸ್ವತಂತ್ರ ಪೋಲಿಷ್ ರಾಜ್ಯವನ್ನು ಸ್ಥಾಪಿಸಲೊಪ್ಪಿ ಹಿಟ್ಲರರು ಮುಸಲೋನಿಯವರ ಮೂಲಕ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳೊಡನೆ ಸಂಧಿಪ್ರಸ್ತಾಪ ಮಾಡುವರೆಂದು ಸುದ್ದಿಯುಂಟಾಗಿದೆ. ಇಟಲಿಯ ವಿದೇಶ ಮಂತ್ರಿ ಕೌಂಟ್ ಸಿಯಾನೋರವರು ಬರ್ಲಿನ್ನಿಗೆ ಕರೆಯಲ್ಪಟ್ಟಿದ್ದಾರೆ. ಒಳಗಿಂದೊಳಗೆ ಏನೋ ಕುದಿ ಏಳುತ್ತಿರುವಂತಿದೆ. ಆದರೆ ಸದ್ಯ ಇಟಲಿಯು ಯುದ್ಧಕ್ಕೆ ಸೇರುವ ಹಾಗೆ ತೋರುವುದಿಲ್ಲ. ಅದು ತನ್ನ ಸ್ಟೀಮರುಗಳನ್ನು ಪರದೇಶದ ಬಂದರುಗಳಿಗೆ ಕಳುಹಿಸಿ ವ್ಯಾಪಾರ ಮಹಿವಾಟನ್ನಾರಂಭಿಸಿದೆ.

○○ ○○ ○○

ಇನ್ನೂ ಪಶ್ಚಿಮ ರಣರಂಗದಲ್ಲಿ ಪ್ರಬಲ ವಿಮಾನಯುದ್ಧ ನಡೆದಿಲ್ಲ. ವಿಮಾನ ಧಾಳಿಯ ಹೊರತು ಜರ್ಮನಿಯನ್ನು ಬೇಗನೆ ಧೃತಿಗೆಡಿಸಿ ಬಗ್ಗುಬಡೆಯಲು ಸಾಧ್ಯವಾಗಲಾರದು ಒಮ್ಮೆ ವಿಮಾನಧಾಳಿನಡೆಯಲಾರಂಭವಾಯಿತೆಂದರೆ ಅದರಿಂದ ಸರ್ವಸಾಮಾನ್ಯನಾಗರಿಕರೇ ಹೆಚ್ಚಾಗಿ ಕೊಲ್ಲಲ್ಪಡುವುದು ಇಂತಹ ಘೋರಅತ್ಯಾಚಾರವನ್ನು ಮೊದಲಾಗಿ ತಾವು ಮಾಡಲಾಗದೆಂದು ಮಿತ್ರರಾಷ್ಟ್ರಗಳು ಸುಮ್ಮನಿರಬಹುದು ತಾವಾಗಿ ಯಾವ ಧಾಳಿಯನ್ನೂ ನಡೆಸಲಾರೆವೆಂದು ಜರ್ಮನರ ಹಂಚಿಕೆಯಿರಬಹುದು. ಇನ್ನು ಸ್ವಲ್ಪ ಸಮಯದಲ್ಲಿ ಹೇಗೂ ಭಯಂಕರ ವಿಮಾನಯುದ್ಧಗಳು ನಡೆಯದಿರಲಾರವು. ನೂರುಗಟ್ಲೆ ಬ್ರಿಟಿಷ್ ಮತ್ತು ಫ್ರೆಂಚ್ ವಿಮಾನಗಳು ಜರ್ಮನ್ ಪಟ್ಟಣಗಳ ಮೇಲೆ ಧಾಳಿಯಿಟ್ಟು ಹಾವಳಿ ಮಾಡಬಹುದು. ಜರ್ಮನ್ ವಿಮಾನಗಳೂ ಪೆರಿಸ್ ಮತ್ತು ಲಂಡನು ಮೊದಲಾದ ಪಟ್ಟಣಗಳಿಗೆ ಬಾಂಬು ಹಾಕಲೆತ್ನಿಸಬಹುದು. ವಿಮಾನ ಯುದ್ಧಗಳ ಮೂಲಕವೇ ಈ ಸಲ ಸೋಲು ಗೆಲುಗಳು ನಿಶ್ಚಯವಾಗಬೇಕು.

○○ ○○ ○○

ಹಿಂದೂದೇಶವು ಇಂಗ್ಲೆಂಡಿನ ಸಹಾಯಕ್ಕೆ ಹೋಗದಿದ್ದರೆ ಅದರ ಸುರಕ್ಷಿತತೆಗೇನೇ ಗಂಡಾಂತರವುಂಟಾಗಬಹುದೆಂಬವರ ಮನೋವೃತ್ತಿಯು ವಿಲಕ್ಷಣವಾದುದು. ಹಿಂದೂದೇಶವು ಬಲಿಷ್ಠವಿದ್ದರೆ ಅದಕ್ಯಾವ ಭೀತಿಯೂ ಇರಲಾರದು. ಅದರ ಗೊಡವೆಗೇನೇ ಯಾರೂ ಬರಲಾರರೆಂಬುದು ಸ್ವಯಂವೇದ್ಯ ವಿಷಯ. ಹಿಂದೂದೇಶಕ್ಕೆ ಅಪಾಯವಿದೆಯೆಂಬುದು ಅರ್ಥವಿಲ್ಲದ ದಿಗಿಲು. ಬ್ರಿಟಿಷರು ತಮ್ಮ ಸುರಕ್ಷಿತತೆಗಾಗಿ ಹೂಡಿರುವ ಯುದ್ಧದಲ್ಲಿ ಹಿಂದೀಯರೇಕೆ ಭಾಗಿಗಳಾಗಬೇಕೆಂಬುದೇ ಪ್ರಶ್ನೆ. ಅದರಿಂದ ಹಿಂದೂ ದೇಶದ ಹಾಗೂ ಇಡೀ ಲೋಕದ ಸ್ವಾತಂತ್ರ್ಯ, ಸೌಹಾರ್ದ ಮತ್ತು ಸುಭಿಕ್ಷೆಗೆ ಆಸ್ಪದವಾಗುವುದಾದರೆ ಮಾತ್ರ ಹಿಂದೀಯರು ಉತ್ಸಾಹದಿಂದ ಬ್ರಿಟನಿಗೆ ಸಹಾಯ ನೀಯಬಹುದು.

—ದಾರಿಹೋಕ.

ನಮ್ಮ ಪ್ರತಿನಿಧಿಗಳ ಸಂಚಾರ

ನಮ್ಮ ಪ್ರತಿನಿಧಿಗಳಾದ ಶ್ರೀಯುತ ಎಂ. ಕೃಷ್ಣಯ್ಯ ಶೆಟ್ಟರು ಈ ವಾರದಿಂದ ಕುಂದಾಪುರ ತಾಲೂಕಿನಲ್ಲಿ ಸಂಚರಿಸಲು ಪ್ರಾರಂಭಿಸಿರುತ್ತಾರೆ. ಮಹಾಜನರು ಇಂದಿನವರೆಗಿನಂತೆ ಪ್ರೋತ್ಸಾಹಿಸಬೇಕಾಗಿಯೂ ಹೊಸ ಚಂದಾದಾರರಾಗಿ ಚಂದಾ ಬಾಕಿಯಿರುವವರು ಅವರೊಡನೆ ಚಂದಾ ಸಲ್ಲಿಸಬೇಕಾಗಿಯೂ ಈ ಮೂಲಕ ಅಪೇಕ್ಷಿಸಲಾಗುತ್ತದೆ.

—ಮೆನೇಜರ್.

ಮೈಸೂರು

ಸ್ವಂ. ಬಾ. ತಾ. 2-10-39.

ಮೈಸೂರಿನಲ್ಲಿ ನವರಾತ್ರಿ ಮಹೋತ್ಸವವನ್ನು ಆಚರಿಸಲು ಕೇವಲ ಹನ್ನೆರಡು ದಿನಗಳುಳಿಯಿತು. ಇದರ ಸಲುವಾಗಿ ರಾಜಧಾನಿಯಲ್ಲಿರುವ ಅರಮನೆ ಮತ್ತು ಅದರ ಮುಂಭಾಗವನ್ನು ಚೆನ್ನಾಗಿ ಅಲಂಕರಿಸಲಾಗುತ್ತಿದೆ. ದೊಡ್ಡ ದೊಡ್ಡ ಕಟ್ಟೋಣಗಳಿಗೆ ಸುಣ್ಣ ಬಣ್ಣ ಹಾಕಲಾಗುತ್ತಿದೆ. ಅತಿಥಿಗಳ ಬಿಡಾರಕ್ಕೆ ತಕ್ಕ ಸೌಲಭ್ಯ ಏರ್ಪಾಡಾಗಿದೆ. ದಸರ ವಸ್ತುಪ್ರದರ್ಶನ ನಡೆಯುವ ಕಟ್ಟೋಣವು ಪೂರ್ತಿಯಾಯಿತು. ದೊಡ್ಡ ಪೇಟೆಯಲ್ಲಿ ಸಾಲುಸಾಲಾಗಿ ವಿದ್ಯುದ್ದೀಪ ಹಾಕಲಾಗಿದೆ. ರಸ್ತೆಗಳನ್ನು ಚೊಕ್ಕಟವಾಗಿಡುವಲ್ಲಿ ಪಾರ್ಕುಗಳಲ್ಲಿ ಹುಲ್ಲು ಬೆಳೆದು ಚಿಕ್ಕ ಚಿಕ್ಕ ಹೂಗಿಡಗಳು ಬಣ್ಣಬಣ್ಣದ ಹೂವಿನಿಂದ ಕೂಡಿ ಎಲ್ಲರಿಗೂ ಆನಂದಗೊಳಿಸಲು ತಯಾರಾಗಿವೆ. ಆದರೆ ಶ್ರೀಮದ್ಯುವರಾಜ ಪಾರ್ಟಿಯವರು ತಮ್ಮ ಯುರೋಪ್ಯ ಪ್ರವಾಸದಿಂದ ಇನ್ನೂ ಹಿಂತಿರುಗಿಲ್ಲವಾಗಿ ಆಗಲೇ ಕೆಲವರಿಗೆ ಕಳವಳವಾಗಿದೆ. ವಿಚಾರಿಸಿದ್ದರಲ್ಲಿ ಹಬ್ಬದ ಹೊತ್ತಿಗೆ ಬರುವರೆಂದು ಹೇಳಲಾಗಿದೆ. ಒಟ್ಟಿನಲ್ಲಿ ನವರಾತ್ರಿ ಮಹೋತ್ಸವವು ಎಂದಿನಂತೆ ವಿಜೃಂಭಣೆಯಿಂದ ನೆರವೇರುವುದಕ್ಕೆ ಯಾವ ಸಂಕೋಚವೂ ಇಲ್ಲ.

ಪಬ್ಲಿಕ್ ಸೆಕ್ಯೂರಿಟಿ ಆಕ್ಟ್— ಮೇಲ್ಕಂಡ ಹೆಸರಿನಲ್ಲಿ ಸರಕಾರದವರು ಒಂದು ಕಾನೂನನ್ನು ಜಾರಿಗೆ ತಂದು ಜನರಿಗಿದ್ದ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದಾರೆ.

ಗಾಂಧಿ ಟೋಪಿ ಧರಿಸಕೂಡದು— ವಕೀಲರುಗಳು ಕೋರ್ಟಿನಲ್ಲಿ ಮುಕದ್ದಮೆ ನಡೆಸಲು ಬರುವಾಗ ತಲೆಗೆ ಗಾಂಧಿ ಟೋಪಿ ಧರಿಸಕೂಡದೆಂದೂ, ರುಮಾಲನ್ನೇ ಹಾಕಬೇಕೆಂದೂ, ಯುರೋಪ್ಯ ರೀತಿಯಲ್ಲಿ ಬಂದರೆ ಬರಿತಲೆ, ಕ್ರಾಪ್‌ಹೆಡ್ಡಿನಲ್ಲಿ ಬರಬಹುದೆಂದೂ, ಹೈಕೋರ್ಟಿನವರು ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. (ಇದರ ಹೆಚ್ಚಿಗೆ ವಿಚಾರವಾಗಿ 'ನವಯುಗ'ದಲ್ಲಿ ಹಿಂದೆ ವರದಿ ಮಾಡಲಾಗಿದೆ)

ಕಾಂಗ್ರೆಸ್ ಚಟುವಟಿಕೆ—ಮೈಸೂರು ಕಾಂಗ್ರೆಸ್ ಚಳುವಳಿಯು ಬಹಳ ಜೋರಾಗಿ ನಡೆಯುತ್ತಿದೆ. ಸಂಸ್ಥಾನದಾದ್ಯಂತವೂ ಹಾಕಿರುವ ಪ್ರತಿಬಂಧಕಾಜ್ಞೆ ಉಲ್ಲಂಘನೆಗೆ ಕಾಂಗ್ರೆಸ್ ಮುಂದಾಳುಗಳ ಮತ್ತು ಸ್ವಯಂ ಸೇವಕರ ದಸ್ತಗಿರಿಮಾಡಿ ಶಿಕ್ಷೆಯಾಗುತ್ತಿದೆ. ರಾಜದ್ರೋಹ ಆಪಾದನೆಗೆ ದಸ್ತಗಿರಿ ನೇಶನಾಲ್ ಜಾಮೀನು ಮುಕದ್ದಮೆ, ಕಾಂಗ್ರೆಸ್ ಕಚೇರಿಗಳ ಶೋಧನೆ ನಡೆಯುತ್ತಿದೆ. ಸತ್ಯಾಗ್ರಹವು ಯಶಸ್ವಿಯಾಗಿ ನಡೆಯುತ್ತಿದೆ. ಇಂಡಿಯ ಡಿಫೆನ್ಸ್ ಆಕ್ಟಿನ ಪ್ರಕಾರ ದಸ್ತಗಿರಿಯಾಗಿದ್ದ ಎ. ಪಿ. ಸಿ. ಸಿ. ಮತ್ತು ಕೆ. ಪಿ. ಸಿ. ಸಿ. ಸದಸ್ಯರಾದ ಶ್ರೀ. ಶಂಕರ ಕುರ್ತಕೋಟಿಯವರಿಗೆ 1 ವರ್ಷ ಕಠಿಣ ಶಿಕ್ಷೆ ಮತ್ತು 700 ರೂ. ಜುಲ್ಮಾನೆ ತಪ್ಪಿದಲ್ಲಿ ಒಂದುವರೆ ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು. ಸರಕಾರದ ಅಪ್ಪಣೆಯಿಲ್ಲದೆ ಕಾಂಗ್ರೆಸ್‌ನವರು ಪ್ರಕಟಿಸುತ್ತಿದ್ದ 'ಕ್ರಾಂತಿ' ಎಂಬ ವೃತ್ತಪತ್ರಿಕೆಯನ್ನು ಸರಕಾರದವರು ವಶಪಡಿಸಿಕೊಂಡರು.

ಮೈಸೂರು ಪೌರಸಭೆಯ ಆಡಳಿತ ವರದಿ. ಮಾನ್ಯ ಡಾ. ಪಿ. ಸುಬ್ರಾಯನ್, ಬಾಬು ಶರತ್‌ಚಂದ್ರ ಬೋಸ್—ಮತ್ತು ಇಂಡಿಯ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗೋರವರಿಗೆ ಮಾನಪತ್ರ ಅರ್ಪಿಸಲಾಯಿತು. ಇವರೆಲ್ಲರ ಪ್ರಿನ್ಸ್ ಜಯಚಾಮರಾಜ ಒಡೆಯರವರು ಪೌರಸಭೆ ಮೀಟಿಂಗಿಗೆ ಹಾಜರಾಗಿ ಅಲ್ಲಿ ನಡೆಯುವ ಕಾರ್ಯಕ್ರಮಗಳನ್ನು ವಿಚಾರಿಸಿದರು. ಮೇಲ್ಕಂಡ ವಿಷಯಗಳಲ್ಲದೆ ಇನ್ನು ಕೆಲವು ಮುಖ್ಯ ವಿಷಯಗಳಿಂದಲೂ ಪೌರಸಭೆಯು ಯಾವ ರೀತಿ ಕೆಲಸಮಾಡುತ್ತಿದೆ ಎಂಬುದನ್ನು ತಿಳಿಸುವ ಮೇಲ್ಕಂಡ ಪೌರಸಭೆಯ 1938 39ನೇ ಸಾಲಿನ ಆಡಳಿತ ವರದಿಯು ತಿಳಿಸುತ್ತದೆ.



ಕೊಪರನ್ ಲಾರ್ಜ್ ಸೈಜು 0 13 0, ಕೊಪರನ್ ಸ್ಟ್ಯಾಂಡರ್ಡ್ ಸೈಜ 0 8 0, ಟಿಂಡರ್ಗನ್ ಸ್ಟ್ಯಾಂಡರ್ಡ್ ಸೈಜು 0 8-0.

Degrees: Books: Medicines.

Free H L M S, H M B H M.D etc Frx Homeo Ayur-Unani Nature degrees by post also—Practioners also get soons Homeo Materiamedica, Rs 5 Homeo Practice book Rs 4. Insanity Cure Pills Rs 10 Inclose 2 annas stamps —

Principal, Indian Homeopathic Institute and Society (Govt Regd)
P. O MAHUVA, (Kathiawar Dt. India

ದುರ್ಭೇದ್ಯ ಚಕ್ರವ್ಯೂಹ ಯಾರದು - - - - ?

ಫ್ರೆಂಚರ ಮೆಗಿನಟೋ? ಜರ್ಮನರ ಸಿಗ್‌ಫ್ರಿಡೋ?

ಇತಿಹಾಸದಲ್ಲೇ ಅತ್ಯಂತ ಭದ್ರವಾದ ಕೋಟೆಗಳ ಸಾಲುಗಳು ಫ್ರೆಂಚ್ ಮತ್ತು ಜರ್ಮನ್ ಎಲ್ಲೆಯಲ್ಲಿವೆ. ಇಲ್ಲಿಯೇ ಕೋಟೆಗಳ ಭೀಕರ ಸಮರ ನಡೆಯಲಿದೆ. ಆದರೆ ಬೇಗನೆ ಭೇದಿಸಲ್ಪಡಲು ಸಾಧ್ಯವಾದುದಾವುದು? ಮೆಗಿನಟ್ ಕೋಟೆಯೋ ಸಿಗ್‌ಫ್ರಿಡೋ ಎಂಬುದನ್ನು ಕೆಳಗಣ ಲೇಖನವು ಸಿದ್ಧಗೊಳಿಸುವುದು

ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಯು ಶಾಂತವಾಗಿ ಮತ್ತು ಸ್ಥಿರವಾಗಿ ಮುಂದೊತ್ತಿ ಜರ್ಮನರ ಸಿಗ್‌ಫ್ರಿಡ್ ಕೋಟೆಯನ್ನು ಸಮೀಪಿಸಿದೆ ಮಾತ್ರವಲ್ಲದೆ ಆ ಕೋಟೆ ಬಳಿಯ ಗುಡ್ಡ ತುದಿಯ ಫ್ರೆಂಚ್ ಫಿರಂಗಿ ಗುಂಡುಗಳ ಎಡೆಬಿಡದ ಧಾಳಿಯ ಧಾವತಿಯನ್ನು ತಡಕೊಳ್ಳಲಾರದೆ ಸಿಗ್‌ಫ್ರಿಡ್ ಕೋಟೆಯು ಒಂದೆಡೆ ಒಡೆದಿದೆಯೆಂಬ ಸುದ್ದಿಯುಂಟಾಗಿದೆಯಷ್ಟೆ. ಇಷ್ಟರಲ್ಲೇ ಸಿಗ್‌ಫ್ರಿಡ್ ಕೋಟೆಯು ಭೇದಿಸಲ್ಪಟ್ಟಿರುವುದೆಂಬುದನ್ನು ನಂಬಲು ಸಾಧ್ಯವಿಲ್ಲ. ಅಂತೂ ಜರ್ಮನ್ ಕೋಟೆಗಳು ಅತ್ಯವಸರದಿಂದ ಕಟ್ಟಲ್ಪಟ್ಟು ಫ್ರೆಂಚ್ ಕೋಟೆಗಳಷ್ಟು ದುರ್ಭೇದ್ಯವಾಗಿಲ್ಲೆಂದು ಹೇಳಬಹುದು.

ತಮ್ಮ ಕೋಟೆಗಳು ವಜ್ರ ಕವಚವೇ ಆಗಿವೆ. ಅವನ್ನು ಯಾವ ರೀತಿಯಲ್ಲಿಯೂ ಭೇದಿಸಲು ಸಾಧ್ಯವಿಲ್ಲೆಂದು ಫ್ರೆಂಚರು ಹೇಳಿಕೊಂಡು ಬಂದಿದ್ದಾರೆ ತಮ್ಮ ಚಕ್ರವ್ಯೂಹವು ಅಭೇದ್ಯ. ಯಾರಿಂದಲೂ ಒಡೆಯಲದನ್ನು ಅಸಾಧ್ಯವೆಂದು ಹಿಟ್ಲರರು ಉದ್ಘೋಷಿಸಿರುತ್ತಾರೆ. ಈ ಎರಡು ವ್ಯೂಹಗಳ ರಚನೆಯೂ ಅದೊಂದು ದೊಡ್ಡ ರಹಸ್ಯವಾದರೂ ಇಡೀ ಲೋಕದಲ್ಲದು ಬಹಳ ಪ್ರಚಾರಕ್ಕೆ ಬಂದ ವಿಷಯವಿದೆ.

ಇತ್ತಲಾಗಿ ಕಳೆದ ವರ್ಷದಿಂದ ಸಿಗ್‌ಫ್ರಿಡ್ ಕೋಟೆಗಳನ್ನು ಕಟ್ಟಲು 5 ಲಕ್ಷ ಮಂದಿ ಕೆಲಸಗಾರರು ದಿನವೊಂದರಲ್ಲಿ 16 ಘಂಟೆಗಳಂತೆ ದುಡಿಯುತ್ತಿದ್ದರು ಜರ್ಮನ್ ರೈಲ್ವೆಗಳು ಪ್ರತಿದಿನ 800 ಗಾಡಿ ಸಾಮಾನುಗಳನ್ನು ಈ ಸ್ಥಳಕ್ಕೆ ತರುತ್ತಿದ್ದವು. ಮತ್ತು ಪ್ರತಿದಿನ 100,000 ಟನ್ನು ಗರಸು ಯಾ ಜಲ್ಲಿ ಉಪಯೋಗಿಸಲ್ಪಡುತ್ತಿತ್ತೆಂಬುದನ್ನು ಹೆರ್ ಹಿಟ್ಲರರೇ ವಿದಿತಪಡಿಸಿದ್ದರು. ಆದರೆ ಫ್ರೆಂಚರ 9 ವರ್ಷಗಳ ಎಡೆಬಿಡದ ಶ್ರಮದಿದಿರಲ್ಲಿ ಇದೇನೂ ವಿಶೇಷವಾಗಿ ತೋರಲಾರದು ಜರ್ಮನರಲ್ಲಿ ಪ್ರಚಂಡ ಶ್ರಮದ ಸಾಹಸವಿದ್ದರೆ ಫ್ರೆಂಚರಲ್ಲಿ ಆ ಶ್ರಮದೊಂದಿಗೆ ಸೂಕ್ಷ್ಮ ವಿವೇಚನೆಯೂ, ದೀರ್ಘ ಕಾಲದ ಪರಿಪಕ್ವ ಪರೀಕ್ಷಣಾ ಅನುಭವವೂ ಮಿಳಿತವಾಗಿವೆ. ಇದು ಹೊರತು ಮೆಗಿನಟ್ ಕೋಟೆಗಳು ವೈರಿಧಾಳಿಯನ್ನು ತಡೆಗಟ್ಟುವ ರಕ್ಷಣಾವ್ಯೂಹಗಳು ಆದರೆ ಸಿಗ್‌ಫ್ರಿಡ್ ಕೋಟೆಗಳು ಧಾಳಿ ಇಕ್ಕುವ ನಿಲಯಗಳು. ಫ್ರೆಂಚರೀಗ ಮುಂದೊತ್ತಿಬಿಟ್ಟಿರುವುದರಿಂದ ಪರಿಸ್ಥಿತಿಯು ಬದ್ಧ ವಿರೋಧವಾಗಿದೆ. ಪ್ರಥಮವಾಗಿ ಧಾಳಿಯಿಕ್ಕುವುದೇ ಉತ್ತಮ ರಕ್ಷಣೋಪಾಯವೆಂಬ ಯುದ್ಧತಂತ್ರದ ಮೇರೆಗೆ ಜರ್ಮನ್ ಕೋಟೆಗಳು ರಚಿಸಲ್ಪಟ್ಟಿವೆ

ಫ್ರೆಂಚ್ ಪ್ರದೇಶದಲ್ಲಿ ದುರ್ಬಿನಿಟ್ಟು ನೋಡಿದರೆ ರೈನ್ ನದಿಯ ಪ್ರದೇಶದಲ್ಲಿ ಸಿಗ್‌ಫ್ರಿಡ್ ಕೋಟೆಗಳ ಸಾಲನ್ನು ನೋಡಬಹುದು ಆದರೆ ಮೆಗಿನೆಟ್ ಕೋಟೆಗಳು ನೆಲದೊಳಗಡಗಿವೆ. ಅವುಗಳಿರುವ ಪ್ರದೇಶದ ಮೇಲೆ ನಡೆದುಹೋದರೂ ನೀಲೇನೂ ತೋರಲಾರದು. ವೈರಿ ಸೇನೆಯ ಧಾಳಿಯನ್ನು ತಡೆಗಟ್ಟಲು 32,000 ಚಿಕ್ಕ ಚಿಕ್ಕ ಕೋಟೆ ಕೊತ್ತಳ, ತುಪಾಕಿ ಗೂಡು ಮೊದಲಾದುವುಗಳನ್ನು ನೆಲದ ಮೇಲೆ ಚಿನ್ನಾಗಿ ತೋರುವಂತೆ ಕಟ್ಟಿರುವರು. ಮನೆಯೊಂದರ ನೆಲಮಾಳಿಗೆಗಿಂತ ಆಳವಾಗಿಲ್ಲ ಈ ಕೋಟೆಗಳು. ಮುವತ್ತು ಮೂವತ್ತಾರು ಮೆಟ್ಟಲಿಳಿದರೆ ನೆಲತಟ್ಟಿಕ್ಕೆ ಹೋಗಬಹುದು. ಆದರೆ ಮೆಗಿನೆಟ್ ಕೋಟೆಗಳು ನೆಲದೊಳಕ್ಕೆ ಬಹಳ ಆಳದ ವರೆಗಿವೆ. ನೆಲವಡಿಯಲ್ಲಿ ಮೂರು ನಾಲ್ಕು ಉಪ್ಪರಿಗೆಗಳಿವೆ. ಅವುಗಳಿಗೆ ಜನರು ಮತ್ತು ಸಾಮಾನುಗಳು ಲಿಫ್ಟುಗಳ ಮೂಲಕ ಒಯ್ಯಲ್ಪಡುತ್ತವೆ ದೊಡ್ಡದೊಡ್ಡ ಫಿರಂಗಿಗಳನ್ನೆತ್ತಿ ಗುಂಡುಹಾರಿಸಿ ಸೈನಿಕರು ಒಡನೆಯೇ ಕೆಳಗಿಳಿದು ಕೆಲವೇ ನಿಮಿಷಗಳಲ್ಲಿ ಅದೃಶ್ಯವಾಗುವಂತೆ ಕೂಡಾ ಕೆಲವು ಲಿಫ್ಟುಗಳು ಉಪಯೋಗಿಸಲ್ಪಡುತ್ತವೆ ಈ ನೆಲಮಾಳಿಗೆಗಳ ಸೈನಿಕರು ಮೇಲಿನ ವಿದ್ಯಮಾನಗಳನ್ನು 'ಪೆರಿಸ್ಕೋಪ್' ಎಂಬ ಬಾಹ್ಯದರ್ಶಕ ಯಂತ್ರದಿಂದ ಪರಿಶೀಲಿಸಿಕೊಳ್ಳುತ್ತಾರೆ

ಒಂದೆಡೆಯಿಂದ ಸಿಗ್‌ಫ್ರಿಡ್ ಕೋಟೆಗಳ ಭಯಂಕರ ಬೆಂಕಿಯನ್ನು ತಪ್ಪಿಸಿಕೊಳ್ಳಲು ಇನ್ನೊಂದೆಡೆ ಸರಿದು, ಹೆಬ್ಬುಲಿಯ ಬಾಯಿಯಿಂದ ತಪ್ಪಿ ಹೆಬ್ಬಾವಿನ ಹಿಡಿತಕ್ಕೆ ಸಿಕ್ಕಿದಂತೆ ಕಳ್ಳ ಕೋಟೆಗಳ ಚಕ್ರವ್ಯೂಹದೊಳಗೆ ಸಿಲುಕಿ ನಾಶವಾಗುವ ತಂತ್ರದ ಆಧಾರದ ಮೇಲೆ ಸಿಗ್‌ಫ್ರಿಡ್ ಕೋಟೆಯು ರಚಿತವಾಗಿದೆ. ಆದರೆ ಎಲ್ಲಾ ಕಡೆಗಳಿಂದಲೂ ಒಡನೆಯೇ ವೈರಿಯು ಮೇಲೆ ಬೆಂಕಿ ಕಾರಿ ಸಂಪೂರ್ಣ ನಾಶಮಾಡಿಬಿಡುವ ತಂತ್ರವು ಮೆಗಿನೆಟ್ ಕೋಟೆಯದಾಗಿದೆ ಎದುರಿನ ಗುರಿ ತಪ್ಪಿಸಲು, ಒಮ್ಮೆಯೇ ಸರಿಯುವಾಗ ಪಕ್ಕನೆ ಸಿಕ್ಕಿಸಿ ಹಾಕಿ ತಿವಿದು ಕೊಲ್ಲುವ ಉಪಾಯ ಜರ್ಮನರದು ವೈರಿಯು ಎದುರಲ್ಲಿಲ್ಲೆಂದು ಮುಂದೊತ್ತುವಾಗ ಫಕ್ಕನೆ ಸುತ್ತಲಿಂದಲೂ ಸುತ್ತಿ ತಿವಿದು ಕೊಲ್ಲುವ ತಂತ್ರ ಫ್ರೆಂಚರದು ಹೀಗೆ ಈ ಎರಡು ಕೋಟೆಗಳ ಯುದ್ಧ ತಂತ್ರವೇ ಬೇರೆಬೇರೆಯಾದುದರಿಂದ ಅವುಗಳ ರಚನೆಯೂ ಭಿನ್ನವಾಗಿದೆ.

ಫ್ರೆಂಚರ ಮಾಯಾಜಾಲ

ಮೆಗನೊಟ್ ಕೋಟೆಗಳ ಸಾಲೆಂಬುದು ಅದೊಂದು ಮಾಯಾಜಾಲ. ಮೇಲಿಂದ ಮೇಣಿ ತೋರುತ್ತಿರುವುದು ಧವಸಧಾನ್ಯ ಬೆಳೆಯುವ ಗದ್ದೆಗಳು, ಮರಮಟ್ಟುಗಳು, ಮತ್ತು ತೋಟಗಳು ಇವುಗಳಲ್ಲಿ ಒಕ್ಕಲಿಗರು ಸರ್ವ ಸಾಮಾನ್ಯ ಬೇಸಾಯ ಕೆಲಸ ಮಾಡುತ್ತಿರುವರು. ಆದರೆ ಪ್ರತಿಯೊಬ್ಬ ಒಕ್ಕಲಿಗನೂ ಒಬ್ಬ ಚತುರ ಫ್ರೆಂಚ್ ಸೈನಿಕ. ಈ ಗದ್ದೆ ತೋಟಗಳಡಿಯಲ್ಲಿ, ಕ್ಷಣಮಾತ್ರದಲ್ಲಿ ವೈರಿಯ ಮೇಲೆ ಬಿದ್ದು ಬೆಂಕಿ ಕಾರಿ ಧ್ವಂಸಗೊಳಿಸುವ ಅತ್ಯಾಧುನಿಕ ಶಸ್ತ್ರ ಸನ್ನದ್ಧ ಸೇನೆಯಿದೆ ಮೆಗಿನೆಟ್ ಕೋಟೆಗಳು 300 ಗಜ ಅಡಿಯಲ್ಲಿರುವ ನಾಗ ನಗರಗಳೇ ಆಗಿವೆ ಅಲ್ಲಿಯೇ ಪಾಕಶಾಲೆ, ಆಸ್ಪತ್ರೆ, ಪವರ್ ಸ್ಟೇಶನು, ಮದ್ದುಗುಂಡು ಸಂಗ್ರಹಾಲಯ, ಎಲ್ಲಾ ತರದ ತೋಪುಗಳು, ರಸ್ತೆ, ರೈಲ್ವೇ ಮೊದಲಾದ ಎಲ್ಲಾ ಅನುಕೂಲತೆಗಳಿವೆ. ಮೇಲಿನ ತೋಟ ಮರಮುಟ್ಟುಗಳೆಂದರೆ ಕೆಳಗಿನ ಕೋಟೆಗಳ ಬಾಗಿಲುಗಳನ್ನು ಮುಚ್ಚುವ ಹಂಚಿಕೆಗಳು ಅವುಗಳಲ್ಲಿ ದುಡಿಯುವ ಬೇಸಾಯಗಾರನು ಸಶಸ್ತ್ರ ವ್ಯಾವಹಾರಿಕ ಸೈನಿಕ.

ಪಶ್ಚಿಮ ಗೋಡೆಯೆಂದು ಕರೆಯಲ್ಪಡುವ ಸಿಗ್‌ಫ್ರಿಡ್ ಕೋಟೆಗಳು 30 ಮೈಲು ಅಗಲವಾಗಿ 350 ಮೈಲು ಉದ್ದವಾಗಿವೆ. ಅವುಗಳೊಳಗೆ ಎರಡನೇ ಮತ್ತು ಮೂರನೇ ರಕ್ಷಣಾ ವ್ಯೂಹಗಳಿರುತ್ತವೆ. ಪ್ರಾಣದ ಹಂಗು ತೊರೆದು ಹಾರಾಡಿ ಅತಿ ಸಾಹಸದಿಂದ ಫ್ರೆಂಚ್ ಸೈನಿಕರು ಜರ್ಮನ್ ಕೋಟೆಯ ಗುಟ್ಟನ್ನು ತಂದಿರುತ್ತಾರೆ ಫ್ರೆಂಚ್ ಗುಪ್ತ ಪೋಲೀಸ್ ಖಾತೆಯವರು ಅದನ್ನು ಪರೀಕ್ಷಿಸಿ ಅದನ್ನೊಡೆಯುವ ವಿಧಾನಗಳನ್ನು ಶೋಧಿಸಿರುತ್ತಾರೆ. ಬೇಕಷ್ಟು ಉತ್ತಮ ಸಾಮಗ್ರಿಗಳು ದೊರೆಯದುದರಿಂದ ಸಿಗ್‌ಫ್ರಿಡ್ ಕೋಟೆ ಕಟ್ಟುವ ಡಾಕ್ಟರ್ ಟೋಡ್ಟರು ಅಲ್ಲಲ್ಲಿ ಅಷ್ಟೊಂದು ಗಟ್ಟಿ ಕಂಕ್ರೀಟ್ ಮತ್ತು ಉಕ್ಕನ್ನುಪಯೋಗಿಸಿಲ್ಲೆಂದೂ, ಆದುದರಿಂದ ಜರ್ಮನ್ ಕೋಟೆಗಳು ಅಷ್ಟೇನೂ ಅಭೇದ್ಯವಿರುವುದಿಲ್ಲೆಂದೂ, ತಿಳಿದುಬಂದಿದೆ. ಆದರೆ ಫ್ರೆಂಚ್ ಕೋಟೆಗಳಲ್ಲಿ ಅಂತಹ ದುರ್ಬಲತೆಯೇನೂ ಇರುವುದಿಲ್ಲ.

9 ವರ್ಷಗಳ ವೈಜ್ಞಾನಿಕ ಶಿಲ್ಪಕಲಾ ಮತ್ತು ಯುದ್ಧ ತಾಂತ್ರಿಕ ಪರಿಪಕ್ವ ಅನುಭವದ ಮೂರ್ತದ ಸ್ವರೂಪವೇ ಮೆಗಿನಟ್ ಕೋಟೆ. ವೈರಿಯು ಪ್ರಥಮವಾಗಿ ಟ್ಯಾಂಕ ದಳದ ಮೂಲಕ ಧಾಳಿ ನಡೆಸಿದನೆಂದು ಭಾವಿಸುವ. ಕೂಡಲೆ ಈ ಸಶಸ್ತ್ರ ಕಾರುಗಳೆಲ್ಲವೂ ಉರುಳಿ ಬೀಳುವವು ಹಲವು ಅದೃಶ್ಯವಾಗಿ ಬೀಳುವವು. ಇವು ಒಂದೋ ಕೃತಕ ಕೆಸರಲ್ಲಿ ಸಿಲುಕುವವು ಇಲ್ಲವೆ ಕಂದಕಗಳಲ್ಲಿ ಬಿದ್ದು ಬಿಡುವವು ಆಗ ಎಲ್ಲಿಂದಲೋ ಯುದ್ಧ ಯಂತ್ರೋಪಕರಣಗಳಿಂದೆಲ್ಲಾ ಸನ್ನದ್ಧ ಸೇನೆಯೊಂದು ಫಕ್ಕನೆ ಬಂದು ಮೇಲೆ ಬೀಳುವುದು. ತಾನು ಎರಡೂ ಕಡೆಗೂ ಸೇರದ ತಟಸ್ಥ ಪ್ರದೇಶದಲ್ಲಿ ಚಲಿಸುತ್ತಿರುವೆನೆಂಬ ಭ್ರಾಂತಿಯಿಂದ ಅಲಕ್ಷ್ಯವಾಗಿ ಮುಂದುವರಿಯುವ ವೈರಿಯು ಆಕಸ್ಮಾತ್ತಾಗಿ ಈ ಪ್ರಚಂಡ ಸೇನೆಯ ಧಾಳಿಗೆ ಸಿಕ್ಕಿ ಧ್ವಂಸವಾಗಿ ಹೋಗುವನು. ಈ ಮಾಯಾ ಸೇನೆಯು ವೈರಿಯನ್ನು ನಾಶಮಾಡಿ ತಿರುಗಿ ತನ್ನ ಬೊಂಬು ನಿರೋಧಕ ಸುರಂಗದೊಳಗಿಳಿದು ಸುರಕ್ಷಿತವಾಗಿರುವುದು. ಸೈನಿಕರು ಫಕ್ಕನೆ ಏರಿ ಬರುವುದೂ ಇಳಿದು ಹೋಗುವುದೂ ತೀವ್ರಗತಿಯ ಲಿಫ್ಟುಗಳ ಮೂಲಕ. ಇದೇ ಮೆಗಿನಟ್ ಕೋಟೆಯ ಬಲ ಈ ಕೋಟೆಯೊಳಗಣ ಸೈನಿಕ ದಳವು ವಿರಾವಣ ವೈರಾವಣ ಯುದ್ಧವನ್ನೇ ನಡಿಸುತ್ತವೆ. ಒಂದೆಡೆ ಫಕ್ಕನೆ ಮೇಲಕ್ಕೇರಿ ಬೆಂಕಿ ಕಾರಿ ಕ್ಷಣಮಾತ್ರದಲ್ಲಿ ಅದೃಶ್ಯವಾಗಿ ಇನ್ನೊಂದೆಡೆ ಏರಿಬರುತ್ತದೆ. ಅತ್ಯಂತ ತೀವ್ರಗತಿಯ ಸುರಂಗ ರೈಲ್ವೆಯ ಮೂಲಕ ಅವರು ವಿಚಿತ್ರವಾಗಿ ಒಂದೆಡೆಯಿಂದೊಂದೆಡೆಗೊಯ್ಯಲ್ಪಡುತ್ತಾರೆ. ಫ್ರೆಂಚ್ ಮೆಗಿನೊಟ್ ಕೋಟೆಯ ಪ್ರವೇಶವಲ್ಲಿ ಎಂಬುದು ಫ್ರೆಂಚ್ ಸೈನಿಕರಿಗೇನೇ ಗೊತ್ತಿಲ್ಲ, ತಾವು ಯಾವಾಗಲೂ ಕಾಣುವ ನೆಲದ ಮೇಲೆ ಚಲಿಸುತ್ತಿದ್ದಂತೆಯೇ ಪಕ್ಕನೆ ಬದಿಯ ರಸ್ತೆಗೊಯ್ಯಲ್ಪಟ್ಟು ಅನಂತರ ಸುರಂಗಮಾರ್ಗವಾಗಿ ಒಯ್ಯಲ್ಪಡುವುದನ್ನು ಮಾತ್ರ ಬಲ್ಲರವರು. ಈ ನೆಲಮಾಳಿಗೆಯಲ್ಲಿನವರು ಚಲಿಸುವುದನ್ನು ಯಾರಿಗೂ ನೋಡಲು ಸಾಧ್ಯವಿಲ್ಲ ವೈರಿಯ ಯಾವ ರೀತಿಯ ಧಾಳಿಯೂ ಹಾವಳಿಯೂ ಅವರಿಗೆ ಅನುಭವವಾಗಿಲ್ಲ.

Hark:-

Only a few pages more are available

FOR

ADVERTISEMENT

IN

THULUNAD

TILAKA PANCHANGA

1940

Apply erriy to: MANAGER

THULUNAD PRESS, UDIPI.

(PROPS.-GENERAL SUPPLIES, LIMITED.)

ಸಿಗ್‌ಫ್ರಿಡ್ ಕೋಟೆಯನ್ನು ದೂರದಿಂದ ನೋಡಬಹುದು. ಆದರೆ ಹತ್ತಿರ ಹೋದರೆ ಪ್ರಾಣವುಳಿವ ಹಾಗಿಲ್ಲ. 30 ಮೈಲು ವಿಸ್ತೀರ್ಣದಲ್ಲಿ ಪ್ರತಿ ಪೊದೆ ಪೊದರುಗಳೊಳಗೆ ಕಾಂಕ್ರೀಟಿನ ಗೂಡುಗಳಿದ್ದು ಅವುಗಳೊಳಗೆ ಯಾವ ಕಡೆಗಾದರೂ ತಿರುಗಿಸಬಲ್ಲ ಮಿಶನ್ ತೋಪುಗಳಿರುತ್ತವೆ. 2ರಿಂದ 8 ಅಡಿಗಳ ವರೆಗಣ ಎತ್ತರದ ಸಾವಿರಾರು ಮುಳ್ಳುಗಲ್ಲಿಗಳಂತಹ ದೊಡ್ಡ ಕಾಂಕ್ರೀಟ್ ಕಂಬಗಳಿವೆ. ಬಂಡೆಕಲ್ಲಿನ ಚಿಕ್ಕ ಪಿರಮಿಡ್ಡು (ಸ್ಥೂಲ ಗೋಪುರ)ಗಳಿರುತ್ತವೆ. ಇವೆಲ್ಲಾ ಬೆಂಕಿ ಕಾರುತ್ತವೆ. ಕೆಲವುಗಳಲ್ಲಿ ಸ್ವಯಂ ಚಾಲಕ ಮಿಶನ್ ತೋಪುಗಳಿರುತ್ತವೆ. ಕಲ್ಲು, ಕಾಂಕ್ರೀಟ್ ಮತ್ತು ಉಕ್ಕಿನ ಗಹನ ಅರಣ್ಯವೇ ಅದು. ಆದರೆ ಮೇಗಿನೊಟ್ ಕೋಟೆಯು ತೋರುವಿಕೆಗೆ ಅದೊಂದು ಮಕ್ಕಳಾಟದ ರಮಣೀಯ ಬಯಲಾಗಿದೆ.

1929ರಲ್ಲಿ ಚತುರ ಯುದ್ಧ ಮಂತ್ರಿಯಾದ ಆಂದ್ರೆ ಮೆಗಿನೋಟರು ಫ್ರೆಂಚ್ ಕೋಟೆಗಳನ್ನು ಕಟ್ಟಿಸಲಾರಂಭಿಸಿದುದರಿಂದ ಅದು ಅವರ ಹೆಸರನ್ನು ಪಡೆದಿದೆ. ಪ್ರಖ್ಯಾತ ಜರ್ಮನ್ ಸಂಗೀತಜ್ಞ ವಾಗ್ನರನು ತನ್ನ ಪದ್ಯಗಳಲ್ಲಿ ಹಾಡಿ ಜನಪ್ರಿಯವಾಗಿ ಮಾಡಿರುವ ಪೌರಾಣಿಕ ಪುರುಷ ಸಿಗ್‌ಫ್ರಿಡನ ಹೆಸರನ್ನು ಕೊಡಲಾಗಿದೆ ಜರ್ಮನ್ ಕೋಟೆಗೆ. ಸಿಗ್‌ಫ್ರಿಡನು ಅಜೇಯ ಯೋಧನಾದರೂ ಆತನ ಭುಜದಲ್ಲೊಂದು ಮರ್ಮಿಕ ದುರ್ಬಲ ಸ್ಥಾನವಿತ್ತು. ವೈರಿಯೊಬ್ಬನ ಈಟಿಯೊಂದು ಆ ಸ್ಥಳದ ಮೇಲೆ ತಿವಿದು ಆತನನ್ನು ಕೊಂದಿತು. ಸಿಗ್‌ಫ್ರಿಡನ ಗತಿಯೇ ಆತನ ಹೆಸರಿನ ಕೋಟೆಗಾಗುವುದೇ? ಅದರ ದುರ್ಬಲತೆಯನ್ನು ತಜ್ಞ ಫ್ರೆಂಚ್ ಸೇನಾನಾಯಕ ಜನರಲ್ ಗೆಮೆಲಿನರು ಅರಿತುಕೊಂಡೇ ಅದನ್ನು ಭೇದಿಸಲು ಮುಂದೊತ್ತುರುವರೇ?

ಮೆಗಿನೊಟ್ ಕೋಟೆಯು ಸಿಗ್‌ಫ್ರಿಡ್ ಕೋಟೆಗಿಂತ ಒಂಭತ್ತು ಪಟ್ಟು ಮಿಗಿಲಾದುದೆಂದು ಫ್ರೆಂಚ್ ಜನರಲರೊಬ್ಬರ ಅಭಿಮತ. ಇದರಲ್ಲಿ ಉತ್ಪ್ರೇಕ್ಷೆ ಇರಬಹುದು. ಆದರೆ ಸಿಗ್‌ಫ್ರಿಡಿಗಿಂತ ಮೆಗಿನೊಟ್ ಕೋಟೆಯು ಮೂರು ಮಡಿ ಬಲವಾದುದೆಂದು ಧೈರ್ಯದಿಂದ ಹೇಳಬಹುದು. ಜರ್ಮನರು ಈ ಕೋಟೆಯನ್ನು ಭೇದಿಸುವ ಗೊಡವೆಯನ್ನೇ ಬಿಟ್ಟು, ಹೊಲ್ಲಂಡ್, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್‌ಗಳ ಮಾರ್ಗವಾಗಿ ಫ್ರಾನ್ಸಿನ ಮೇಲೇರಿ ಹೋಗುವರೋ ಎಂಬ ಸಂದೇಹವು ದಿನೇ ದಿನೇ ಬಲಗೊಳ್ಳುತ್ತಿದೆ.

ಪ್ರಕಟಣೆ:—

ನಾನು ಮಂಗಳೂರಿನ ತೆತ್ತಿರುವ ರುಪಾಯಿ ಹಿಂದಕ್ಕೆ ನನಗೆ ವಾಪಾಸ್ ಕೊಡಬೇಕಾಗಿಯೂ, ನನ್ನ ಅನುಭೋಗದಲ್ಲಿರುವ ಬಾಲಗೇಣಿ ಭೂಮಿಯನ್ನು ಬಿಟ್ಟು ಹಾಕುವದಾಗಿಯೂ, ಕಳೆದ ಸಂ। ೧೯ ಕಾಲಬಣ್ಣಿಗೆ ಯತ್ರಿ ಗೃಹಸ್ಥರ ಸಮಕ್ಷಮ ಹೇಳಿದ್ದಕ್ಕೆ ಕಳೆದ ೧೯೩೪ರನೆ ಇಸವಿಯಲ್ಲಿ ರುಪಾಯಿ ೧೫೦ಕ್ಕೆ ನಾನು ಅವರಿಗೆ ಬರೆ ಕೊಟ್ಟಿರುವ ದಿನಾಂಕದ ಪ್ರಾಮಿಸರಿ ನೋಟಿನ ಅಸಲು ಬಡ್ಡಿ ಐವಜನ್ನು ಸದ್ರಿ ಮಂಗೇಣಿ ಲೆಕ್ಕಕ್ಕೆ ವಜಾ ಮಾಡುವದಾಗಿಯೂ, ಮಿಕ್ಕ ಐವಜನ್ನು ಬಾಕಿ ಸಂಖ್ಯೆ ನನ್ನಿಂದ ಸಲ್ಲತಕ್ಕ ಗೇಣಿಯಲ್ಲಿ ವಜಾ ಕೊಡುವದಾಗಿಯೂ. ಪ್ರಕೃತ ಸಂದಿಕೊರು ಗ್ರಾಮದ ಪಡುಮನೆಯಲ್ಲಿರುವ ನನ್ನ ದಾವೆಗಾರ ಶಿರ್ವ ಗ್ರಾಮದ ಕೆಳಭೂತ ಬೆಟ್ಟು ಅಂತಯ್ಯ ಶೆಟ್ಟರು ಹೇಳಿರುತ್ತಾರೆ. ಪರಂತು ಆ ನೋಟನ್ನು ಈ ತನಕವೂ, ವಾಪಾಸ್ ಕೊಡಲಿಲ್ಲ. ಆದ್ದರಿಂದ ಸದ್ರಿ ಪ್ರೋ. ನೋಟನ್ನು ಯಾರಾದರೂ, ಅವರಿಗೆ ಪ್ರತಿಫಲ ಕೊಟ್ಟು ಗಳೇ ಕೊಡದೆಯಾಗಲೀ ಟ್ರಾನ್ಸ್‌ಫರ್ ಪಡೆದ್ದಾದರೆ ಐವಜು ತೆರಲು ನಾನು ಜವಾಬ್ದಾರನಲ್ಲವೆಂದೂ, ಈ ವಿಷಯ ನಾನು ಸದ್ರಿಯವರಿಗೆ ಅಲ್ಲಾಹುದ ರಿಜಿಸ್ತ್ರಿ ನೋಟೀಸ್ ಮೂಲಕ ತಿಳಿಸಿರುತ್ತೇನೆಂದೂ, ಈ ಮೂಲಕ ಪ್ರಕಟಿಸುತ್ತೇನೆ.

ಸೆಸೆಸೆಟ್ಟಿ—

(ಶಿರ್ವ ಗ್ರಾಮದ ಕೆಳಭೂತ ಬೆಟ್ಟಿನಲ್ಲಿರವ ಬಂದು
ಶಿರ್ವ, ತಾ ೨೩–೯–೧೯೩೯ ಶೆಟ್ಟರ ಮಗ)

ಸ್ವೀಕಾರ ವಿಮರ್ಶೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಕಾರ್ಯಕಲಾಪಗಳ ಇತಿಹಾಸ

ಸಿಂಡಿಕೇಟ್ ಬೇಂಕೆಂಬ ಸಂಕ್ಷಿಪ್ತ ಹೆಸರಿನಲ್ಲಿ ಸರ್ವಸಾಮಾನ್ಯವಾಗಿ ಹೆಸರುಗೊಂಡಿರುವ ಉಡುಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟಡ ಇದು ಬೇಂಕಿಂಗ್ ಸಂಸ್ಥೆಗಳ ಇತಿಹಾಸದಲ್ಲಿ ನವೀನತೆ ಮತ್ತು ವಿಶಿಷ್ಟತೆಯನ್ನುಂಟುಮಾಡಿ ತನ್ನದೇ ಆದೊಂದು ವ್ಯಕ್ತಿತ್ವವನ್ನು ನಿರ್ಮಿಸಿಕೊಂಡು ಗಣನೀಯವಾಗಿದೆ. ಅದು ಇಷ್ಟರ ವರೆಗೆ ಕೆಲವು ದಾಖಲೆಗಳನ್ನು ಮಾಡಿ ಜನಮೆಚ್ಚಿಗೆಗೊಳಗಾದಂತೆಯೇ ಇಂದೀಗ, ತನ್ನ ಜೀವಮಾನದ ಆದೊಂದು ಪ್ರಾಮುಖ್ಯ ಅವಸ್ಥಾಂತರದಲ್ಲಿ, ಹಿಂದಿನ 13 ವರ್ಷಗಳ ತನ್ನ ಸರ್ವರೀತಿಯ ಕಾರ್ಯಕಲಾಪಗಳ ವಿವರಗಳನ್ನೊಳಗೊಂಡ ವಾಚನೀಯವೂ ಅತ್ಯಂತ ರಮಣೀಯವೂ ಆದ ಚಾರಿತ್ರಿಕ ಬೇಂಕಿಂಗ್ ಗ್ರಂಥವೊಂದನ್ನೇ ಪ್ರಕಟಿಸಿ ದಕ್ಷಿಣ ಹಿಂದುಸ್ಥಾನದ ಬೇಂಕಿಂಗ್ ಸಂಸ್ಥೆಗಳಿಗೊಂದು ಹೊಸ ಮಾದರಿಯನ್ನೇ ಹಾಕಿಕೊಟ್ಟಿರುವುದು ಅಭಿನಂದನೀಯವಿದೆ.

ಇಂಡಿಯನ್ ಕಂಪೆನೀಸ್ ಆಕ್ಟಿನಲ್ಲಾದ ತಿದ್ದುಪಡಿಯ ಮೇರೆಗೆ ಸಿಂಡಿಕೇಟ್ ಬೇಂಕಿನ ಜನ್ಮದಾತರೂ ಅಭಿವೃದ್ಧಿ ಸಾಧಕರೂ ಆದ ಉಡುಪಿಯ ಜನಪ್ರಿಯ ಪಿ. ಎ. ಪೈ ಸಹೋದರರು ಬೇಂಕಿನ ತಮ್ಮ ಮೆನೇಜಿಂಗ್ ಏಜೆಂಟತನವನ್ನು ಬಿಟ್ಟುಕೊಡಬೇಕಾಗಿ ಬಂತು ಹೀಗೆ ಕಳೆದ ಜನವರಿ ತಾ 13ರಲ್ಲಿ ಸಿಂಡಿಕೇಟು ತನ್ನ ಜನ್ಮದಾತರ ಆಶ್ರಯವನ್ನು ಬಿಟ್ಟು ಅಗಲಬೇಕಾಯಿತು. ಈ ಸಂದರ್ಭದ ಸ್ಮಾರಕವಾಗಿ ಸಿಂಡಿಕೇಟ್ ಬೇಂಕಿನವರು ಕಳೆದ 13 ವರ್ಷಗಳ ಬೇಂಕಿನ ಇತಿಹಾಸವನ್ನು ಪುಸ್ತಕವಾಗಿ ಪ್ರಕಟಿಸಿರುವರು. ಈ ಪುಸ್ತಕವು ಸಿಂಡಿಕೇಟಿನ ಜೀವನಪ್ರವಾಹದ ಅದೊಂದು ರಮಣೀಯ ಚಿತ್ರವೇ ಆಗಿ ಅತ್ಯಂತ ಮನೋಹರವೂ ಬೋಧಪ್ರದವೂ ಆದ ಬೇಂಕಿನ ಕೈಪಿಡಿಯಂತಾಗಿ ಪ್ರಯೋಜನಕರವೂ ಆಗಿದೆ. ಪುಟಪುಟಗಳಲ್ಲಿ ವಾಚನೀಯ ವಿಷಯಗಳೊಂದಿಗೆ ಸುಂದರ ಛಾಯಾಚಿತ್ರಗಳು ತುಂಬಿವೆ ಬೇಂಕಿನ ಆದಿ, ಪ್ರಗತಿ ಮತ್ತು ಮುಂದಿನ ಗತಿಯ ಚಿತ್ರವನ್ನು ಕಣ್ಣ ಮುಂದೆ ಕಟ್ಟಿಬಿಡುತ್ತದೆ ಸಿಂಡಿಕೇಟ್ ಬೇಂಕಿನ ಇತಿಹಾಸ. ಬೇಂಕಿನ ಮೆನೇಜಿಂಗ್ ಡೈರೆಕ್ಟರರೂ ಸಮಾಜ ಹಿತಚಿಂತಕರೂ, ಜನಪ್ರಿಯರೂ ಆದ ಡಾಕ್ಟರ್ ಟಿ. ಮಾಧವ ಪೈಗಳ ಜೀವನನ್ನು ಶ್ರೀ. ಪಿ. ವಿ. ಕಾಂದೆಯವರು ಅರ್ಥಪೂರ್ಣವಾಗಿ ಚಿತ್ತಾಕರ್ಷಕವಾಗಿ ಚಿತ್ರಿಸಿದ್ದಾರೆ ಈ ಹಾಸದ (?)ದಿಯಲ್ಲಿ ಬೇಂಕಿನ ಎಲ್ಲಾ ಡೈರೆಕ್ಟರುಗಳ, ಶಾಖೆಗಳ, ನೌಕರರು, ಬೇರೆ ಬೇರೆ ಚಟುವಟಿಕೆಗಳು, ವ್ಯವಹಾರಗಳ ವೃತ್ತಾಂತ ಮತ್ತು ಚಿತ್ರಗಳಿವೆ. ಕ್ರೌನ್ 4 ಸೈಜಿನ 104 ಪುಟ ಫೈನ್ ವೈಟ್ ಕಾಗದದ ಚಿತ್ತಾಕರ್ಷಕ ಮತ್ತು ಪ್ರಿಂಟಿಂಗಿನ ಸಿಂಡಿಕೇಟ್ ಬೇಂಕಿನ ಚರಿತ್ರೆ ಅದೊಂದು ಹೊಸ ಮಾದರಿಯೇ ಆಗಿದೆ ಜನ ಬೆಳಗೆ ಪಡೆದು ಬೇಂಕಿನ ಜನಾದರತೆಯನ್ನು ತ್ವರಿತ ಹೆಚ್ಚಿಸಲು ಕಾರಣವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಸಿಂಡಿಕೇಟನ್ನು ಪ್ರತಿಭಾವಂತವಾಗಿ ಬೆಳೆಸಿ 13 ವರ್ಷದಲ್ಲೇ ಸಪ್ರೌಢ ಗಣನೀಯವಾಗುವಂತೆ ಪೋಷಿಸಿದ ಮೆನೇಜಿಂಗ್ ಏಜೆಂಟರಾದ ಪಿ. ಎ. ಪೈ ಸಹೋದರರ ಉದ್ಯಮಶೀಲತೆ, ಜಾಣ್ಮೆ, ಉದಾರತೆ, ವಿನಯಪರತೆ, ದೂರದ ಮುಂಜಾಗ್ರತ ಮತ್ತು ವಿವೇಕಶೀಲತೆಯೇ ಮೊದಲಾದ ಸದ್ಗುಣಗಳಿಗೆ ಈ ಪುಸ್ತಕವು ದಿವ್ಯ ಸ್ಮಾರಕಸ್ತಂಭವಾಗಿದೆ. ಈ ಗ್ರಂಥವನ್ನು ಇಷ್ಟೊಂದು ಸುಂದರವಾಗಿ ಅಚ್ಚುಹಾಕಿರುವ ಮಣಿಪಾಲ ಪವರ್ ಪ್ರೆಸ್ಸಿನವರ ಪ್ರಯತ್ನವು ಪ್ರಶಂಸನೀಯ.

ಸಿಂಡಿಕೇಟಿನ ಮೆನೇಜಿಂಗ್ ಡೈರೆಕ್ಟರರಾದ
ಡಾಕ್ಟರ್ ಟಿ. ಮಾಧವ ಪೈಗಳವರು

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡು ಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ

ಓರಿಯಂಟಲ್‌ನಲ್ಲಿ ಪಡೆಯಿರಿ.

— ಮಕ್ಕಳ ಮುಂದುವರಿಸಲ್ಪಡುವ ವಿಮೆಯು —

ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿವೆ ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ— ಮುಂಬಯಿ.

ಅಥವಾ

ದಿ ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್‌ಪೆರೇಡ್, ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು. ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜಠರ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಅಂಬೆಟ್ಟುವ ನಿಮ್ಮ ಮಕ್ಕಳು ತಿರುಗಿನಿಮ್ಮಕೈಗಸೇರುವುದು
ಸೀಸೆ1ಕ್ಕೆ12 ಆಣೆ, ಟಪ್ಪಾಲ 4 ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು - **ನವಭಾರತ ಬುಕ್‌ಡಿಪೋ. ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ.**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ.** ಸುಖಸೇವನದಿಂದ ಮಧುರವಸ್ತುವಾದ ಈ ರಸಾಯನವು ಜ್ವರ, ಜ್ವರಾಂತಿ ಯ ಭಯ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.
ಬಾಟ್ಲಿಯು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿಸೋರುವುದು, ಸೋರು, ಉರಿಯುವುದು, ಬಿದ್ದುಹೋಗುವುದು, ಕುರಿಗಳು, ಕರು ಅಥವಾ ವಾಸನೆಯುಳ್ಳ, ಕರ್ಣಕೃಮಿ ಬೇನೆ, ಹಿತ ಅಥವಾ ಪೂರಾ ನಿರ್ಮೂಲ ... ಅತ್ಯಂತ ಕಠಿಣ ... ನಮ್ಮ ವಿಚಿತ್ರ 'ಬಧಿರತಾಹರಣ' ... ಕಿವಿಯ ... ಬಾಟ್ಲಿ 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ

ವಿಳಾಸ:—**ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4**

Most Reliable New Model 1939

High Grade Lever Movement. Offered at 50% Reduction

No 517 STRONG & DURABLE
ROUND OR SQUARE



No 401 Chromium Rs. 3 0 0
" **402. Golden Case** " 4 0 0
LEVER MOVT 15 JEWELS
Guaranteed 5 Years
No 517 Chromium Rs. 6 8 0

No 518 Golden Case Rs 8 0 0. **No.561 Chromium** Rs 13 8 0
No 562 Rolled Gold Rs 17 0 0. **Catalogue Free.** As 9/- Extra for postage & packing
(CORRESPONDENCE IN ENGLISH ONLY)

BAPALAL & CO., *101 Abdul Rehman Street,* **Bombay 3**

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್ [ಫೋನ 406]

ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 317 **ಉಡುಪಿ ಆನಂದಭವನ**

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮುನ್ಸಿಪಿಗೆ ಬಂದಲ್ಲಿ **ಮೈಸೂರು ಕೇಪ್** ಬೋರ್ಡಿಂಗ್ ಮತ್ತು ಲೋಜಿಂಗ್.

ಪ್ರೊಪ್ರೈಟರ್.: ಕೆ. ಗುರುರಾಜಾಚಾರ್ಯ.

ಅಚ್ಚಿನ ತರಗತಿ ಬೇಕಾಗುವ ಚಿತ್ರಾಕರ್ಷಕ ನವ ವಿಷಯ ಬ್ಲಾಕು, ಡಿಜೈನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸೈನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನು ಕೈಕೊಳ್ಳಲಾಗುವುದು

ಅನ್ನಪೂರ್ಣ ಪ್ರೆಸ್,
ಆರ್ಟ್ ಪ್ರಿಂಟರ್ಸ್, ಡಿಜೈನರ್ಸ್ & ಎನ್‌ಗ್ರೇವರ್ಸ್, ಹೋಸ್ಪಿಟಲ್ ರೋಡ್, ಉಡುಪಿ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿಸ್ಟರ್ಡ)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance*
CANARA AUTOMOBILES - - - - - **MANGALORE**

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನಿ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಪೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು " ದೇವಾನುಮೋದಿತ ಔಷಧಿ " ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ 'ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್'' ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳು

ಕ್ರಯ ಸೀಸೆ 1ಕ್ಕೆ ರೂ. 2—8—0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ ಮತ್ತು ಪ್ಯಾಕಿಂಗ್ ಮಾಫಿ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1—4—0

ವಿ ಪಿ ಬೇರೆ.

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.

'ಹವನನ್' ಹೆಮೊರೈಡ್ — ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, " ಹವನನ್ " ಎಂಬ ಹೆಮೊರೈಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ 1-4-0 ವಿ ಪಿ ಬೇರೆ

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ, ಸೀಸೆ 1ಕ್ಕೆ ರೂ. 1 0-0 ವಿ. ಪಿ. ಬೇರೆ

ಹಿಂದೂಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B & C I. Ry BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ನಮಗೆ ಏಜಂಟರುಗಳು ಬೇಕಾಗಿದ್ದಾರೆ. .. .. ದಯವಿಟ್ಟು ವಿವರ ಇಂಗ್ಲೀಷಿನಲ್ಲಿಯೇ ಬರೆಯಿರಿ.

PRINTED BY S S KARANTH AT THE THULUNAD PRESS, UDIPI AND PUBLISHED BY K H SHETTY AT NAVAYUGA OFFICE, UDIPI, S. INDIA.

Registered No M 3618

WANTED one Inspector, two Organisers and Agents in South Kanara Apply stating previous experience to –
The Bombay Co-operative Insurance Society Ltd,
Office for Mysore Coorg & South Kanara
Subbarao Building Narasimha Raja Road Bangalore City

'SERWELL'
RUBBER STAMPS
OFTEN APPEAL
Since they surely serve well
YOU CAN HAVE ONE
On placing your order with our Representatives in your area
IF UNREPRESENTED WRITE FOR AGENCY TERMS
Manufacturers —
on the approved list of the Govt of Mysore
YADIKE BROS.
MANUFACTURERS
REPRESENTATIVES
IMPORTERS & ENGINEERS
BANGALORE CITY

ಅದ್ವಿತೀಯ ಗುಣಕಾರಿ
ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿ ಗುಟಿ

ಆಯುರ್ವೇದ ರೋಗಮಂದಿರದ ಆಧಾರಸ್ಥಂಬದಂತಿರುವ ಭಗವಾನ್ ಧಾನ್ವಂತರಿಯು ಲೋಕ ಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಬೆಲೆಬಾಳುವ ದ್ರವ್ಯ ಮತ್ತು ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುಚ್ಚುವ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು. ಹಾಗೂ ಆಲಸ್ಯ ಯಾ ವಾಯು ಗೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 200, 2-0-0, 1000, 9-0-0
5ಆಣೆ ಸ್ಟಾಂಪು ಕಳುಹಿಸಿದರೆ 1/ಮಾತ್ರೆ (ಗುಟಿ) ಗಳನ್ನು ಕಳುಹಿಸುತ್ತೇವೆ

ಸ್ವದೇಶೀ ಔಷಧಿ ಭಂಡಾರ,
(ರಜಿಸ್ಟರ್ಡ್) ಕುಂಜಾಲು.
ಪೋಸ್ಟ್—ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು—1 ಪಿ ಆರ್ ಪ್ರಭು ಪಿ ಕೆನರಾ ಸ್ಟೋರ್ಸ್ ಎಂಡ್ ಬುಕ್ಸ್ ಏಜನ್ಸಿ, ಓಟ ಬಾ ಮಣ್ಣಗುಡ್ಡೆ, ಮಂಗಳೂರು 2 ಜನರಲ ಸಪ್ಲೈಸ್ ಲಿಮಿಟೆಡ್, ಉಡುಪಿ 3 ನವಭಾರತ ಬುಕ್ ಡಿಪೋ, ಉಡುಪಿ

GET RICH
AND
PROSPEROUS
through Simple Means upheld and pursued by Millions.. ... . !
WRITE NOW WITH STAMP —
K. S. Row,
Worli, BOMBAY

NAVAYUGA

ನವಯುಗ

ಸಂಸ್ಥಾಪಕರು
ಶ್ರೀ ಎ ಬಿ ಶೆಟ್ಟರು, ಎಂ ಎಲ್ ಎ

FOUNDER
SRI A B SHETTY M L A,
Parliamentary Secretary Govt of Madras

ಸಂಪಾದಕ ಕೆ ಕೆ ಶೆಟ್ಟಿ ESTD 1921 ಸಹಸಂಪಾದಕ ಕೆ. ಎಚ್. ಶೆಟ್ಟಿ.

ಸಂಪುಟ ೧೯	ಉಡುಪಿ	VOL 19
ಸಂಚಿಕೆ ೬	ಗುರುವಾರ, ತಾ 12-10-1939	No 6

HELP HIM *to achievement!*

The child is Father to the Man Yet promise is never fulfilled without care for the child's future health and happiness For parents whom sheer value is imperative a policy of the TROPICAL is the most effective future care

TROPICAL is helping thousands of families it will help yours too Write to-day

TROPICAL
INSURANCE COMPANY LIMITED.
NEW DELHI.

ಟ್ರೋಪಿಕಲ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ನ್ಯೂ ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ

ಎಂ ಸುಂದರರಾಮ ಶೆಟ್ಟಿ, ಬ್ರಾಂಚ್ ಮ್ಯಾನೇಜರ್, ಹಂಪನಕಟ್ಟೆ—ಮಂಗಳೂರು	ಅಥವಾ	ಕೆ ರಾಮಮೂರ್ತಿ, ಎಂ. ಎ, ಬ್ರಾಂಚ್ ಸೆಕ್ರೆಟರಿ, 160 ಮೌಂಟ್ ರೋಡ್, ಮದ್ರಾಸು

ಕಂಬನಿ

ಮಿಸೆಸ್ ಬಿ ಟಿ ಜಿ ಕೃಷ್ಣ
ಅವರ ಸಣ್ಣ ಕತೆಗಳ ಸಂಕಲನ
ಶ್ರೀ ಬೇಂದ್ರೆಯವರ ಮುನ್ನುಡಿ, ಶ್ರೀ ದತ್ತಾತ್ರೇಯ ಅವರ
'ನಾನು ಕಂಡ ಗೌರಮ್ಮ' ಇವುಗಳೊಡನೆ
ಬೆಲೆ ಒಂದು ರೂಪಾಯಿ.
ಶ್ರೀ ಬೇಂದ್ರೆಯವರು ಮುನ್ನುಡಿಯಲ್ಲಿ
ಹೀಗೆ ಹೇಳಿದ್ದಾರೆ

'ಈ ಹನ್ನೆರಡು ಕತೆಗಳು ಒಂದಿಲ್ಲೊಂದು ವಿಧದಿಂದ ಹೆಣ್ಣುಗಂಡಿನ ಜೀವನದ, ಅದರ ಬಗ್ಗೆ ದುಃಖಾಗ್ನಿಯ, ಅದರ ಪ್ರಣಯ ದ ಆವ್ಯಕ್ತತೆಗಳಾಗಿವೆ ಗಂಡಸಿನ ದೌರ್ಜನ್ಯ, ದಾರಿದ್ರ್ಯ ಕುರೂಪತೆಗಳ ದೌರ್ಭಾಗ್ಯ, ಹೆಂಗಸಿನ ಯುಗಯುಗದ ಭಕ್ತಿ ವಿಲಾಸ, ಸಮಾಜದ ವಿಪರೀತ ದಬ್ಬಾಳಿಕೆ, ಪ್ರೀತಿಯ ವಿರೋಧ ಇವೇ ಮೊದಲಾದ ಕಾರಣಗಳಿಂದ ಸ್ತ್ರೀಯರಿಗಾಗುವ ದುಃಖಕ್ಕಾಗಿ ಗೌರಮ್ಮನವರ ಕರುಳಿನ ತಂತಿಯಿಂದ ಮಿಡಿದು ಬಂದ ಮೂಕ ಶೋಕವು ಹೃದಯಭೇದಕವಾಗಿಯೂ, ಹೃದಯಬೋಧಕವಾಗಿಯೂ ಆಗಿರುವದು'

ಕತೆಗಾರ್ತಿಯ ಛಾಯಾಚಿತ್ರವಿದೆ 'ಅಂಬಿಕಾತನಯದತ್ತ'ರ 'ತಂಗಿ ಗೌರಮ್ಮ' ಎಂಬ ಕವಿತೆ ಇದೆ.

ಮನೋಹರ ಗ್ರಂಥ ಭಾಂಡಾರ, ಧಾರವಾಡ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ —ನವಭಾರತ ಪುಸ್ತಕ ಭಂಡಾರ.

Be Ready—War necessitates demand for telegraphists etc Allowance, uniform, passage and quarter Prospectus on annas eight Director, Royal Tel and Ry Duties College, Bombay 11

ಚಂದಾದಾರರಲ್ಲಿ ವಿನಂತಿ

ಚಂದಾಅವಧಿ ಮುಗಿದವರಿಗೆಲ್ಲ ನೋಟೀಸು ಕೊಟ್ಟು ತಿಳಿಸಲಾಗಿದೆ ಅವರು ತಮ್ಮ ಬಾಕಿ ಮತ್ತು ಚಾಲ್ತಿ ಚಂದಾ ಹಣವನ್ನು ದಯಮಾಡಿ ಕೂಡಲೇ ಕಳಿಸಿ ಕೊಡಬೇಕಾಗಿ ಅಪೇಕ್ಷಿಸಲಾಗಿದೆ. ಪತ್ರಿಕೆ ಬೇಡವಾದವರು ಬಾಕಿ ಬಂದ ಹಣ ಕಳಿಸಿ ನಮಗೆ ತಿಳಿಸುವ ಉಪಕಾರ ಮಾಡಬೇಕು ಮುಂದಕ್ಕೆ ಚಂದಾಹಣ ಮುಂಗಡವಾಗಿ ಕಳುಹಿಸದೆ ಪತ್ರಿಕೆ ಕಳಿಸಲು ಸಾಧ್ಯವಾಗಲಾರದೆಂದು ಈ ಮೂಲಕ ವಿನಂತಿಸಲಾಗುತ್ತದೆ ಎಲ್ಲಾ ಚಂದಾದಾರರು ಈ ಕಡೆಗೆ ತಮ್ಮ ಗಮನವಿತ್ತು ತಮ್ಮ ಚಂದಾ ಹಣವನ್ನು ಕೂಡಲೇ ಕಳಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ — ಮ್ಯಾನೇಜರ್.

ತುಳುನಾಡ್ ವೈದ್ಯಶಾಲೆ
ಉದ್ಯಾವರ, ದ ಕ
ಕೊಲೆರಾ ಫಿಲ್ಸ್ ಕೂರಲಾ ರೋಗಕ್ಕೆ ರಾಮಬಾಣ ಔಷಧ
೧೦೦ ಮಾತ್ರೆಗಳಿಗೆ ರೂ ೩—೮—೦
ಭೈರವ ಮಾತ್ರೆಗಳು— ಬಾಣಂತಿ
ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ
೧೦೦ ಮಾತ್ರೆಗೆ ರೂ. ೩—೮—೦
ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ
ಯು ಪಿ. ನೋಸ್ತ್ರ, ಗೋಲ್ಡ್ ಮೆಡಲ್ಡ್ ಫಿಸಿಶಿಯನ್

ಇನ್ಕಮ್ ಟ್ಯಾಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟ್ಯಾಕ್ಸ್‌ಗಳು.

ಇನ್ಕಮ್ ಟ್ಯಾಕ್ಸಿನ ಕಾಯಿದೆಯಲ್ಲಿ 1 4 '39ರಿಂದ ಬಹಳ ವ್ಯತ್ಯಾಸಗಳಾಗಿವೆ ಹೊಸತಾದ ವಿಕ್ರಯ ಟ್ಯಾಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಹೊಸತಿನ ವಿಷಯಗಳು ಅನೇಕ ಇವೆ ಕುಳವಾರು ಜಮಾ ಖರ್ಚಿನ ಒಪ್ಪಿದಿದ್ದರೂ ಸಾಲದು ಅದರಿಂದ ತಯಾರಿಸಿದ ಸಾರಾಂಶ ಪತ್ರವನ್ನು ಕೆಲವು ಸಂದರ್ಭಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಸಬೇಕಾಗಿದೆ. ಅಂದಾಜು ಬೀಗಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟ್ಯಾಕ್ಸುಗಳನ್ನು ಕೊಡಬೇಕಾಗುವವರು ಕೆಳಗಿನವರಿಂದ ಅನುಭವವಿರುವ ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಆ ಮಾದರಿಯಂತೆ ನಡೆದರೆ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟ್ಯಾಕ್ಸು ಕಡಿಮೆಯಾಗಿ ಕೆಲವು ಸಂದರ್ಭಗಳಲ್ಲಿ ಯಾವ ಟ್ಯಾಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು 'ಅಪೀಲ್' ಕಲ್ಪಿಯಾಗಿ ಹೋಗಿದ್ದರೂ ಹೆದರಬೇಕಿಲ್ಲ. ಸಿಪ್ಪ್ ಹಾಜರು ನೋಟೀಸು 15 ದಿನಗಳ ಒಳಗೆ ಅಥವಾ ಕೇಳಿದ ದಿನಕ್ಕೆ ಮೊದಲು ಕೂಡಲೇ ಪತ್ರವ್ಯವಹಾರ ನಡೆಸಿರಿ.

ಎಸ್ ಎಸ್, ಪ್ರಭಾಕರ್,
ಇನ್ಕಮ್ ಟ್ಯಾಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ಸರಸ್ವತಿ
(ಉತ್ತಮ ವರ್ಗದ ಸಚಿತ್ರ ಮಾಸಪತ್ರಿಕೆ)
ಹದಿನೆಂಟನೇ ವರ್ಷದ ವಿಶೇಷ ಸಂಚಿಕೆ ನವರಾತ್ರಿಯ ಹಬ್ಬದ ದಿನ ಪ್ರಕಟವಾಗುವದು
ಪ್ರಸಿದ್ಧರನೇಕರ ಉತ್ತಮ ಲೇಖನಗಳಿವೆ
ಬೆಲೆ 0 4 0, ಅಕ್ಟೋಬರದಿಂದ ಚಂದಾದಾರರಾಗುವವರಿಗೆ ಉಚಿತ ಬಹುಮಾನಗಳ ಧಾರಾಳ ಕಮಿಶನ್,
ಸರಸ್ವತೀ ಕಾರ್ಯಾಲಯ
ಬೆಂಗಳೂರು ಸಿಟಿ

THE ASIAN ASSURANCE COMPANY, LTD.

ASIAN BUILDINGS - - - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9,24,965	24,50,234
1935	2,52,08,418	18,39,296	42,98,820
1938	3,61,56,761	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
, M Shivarama Rao, Organizer, Puttur

Or

Sri J. A. PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2 02 800/- Paid up Capital Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year.

For further particulars please address as call at any of our offices

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, —— ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಾಟಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಾಟಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ ಕುಂದಾಪುರ, ಕಾರ್ಕಳ, ಮತ್ತು ಕಾಪು.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು ಕೆಮ್ಮು, ಶೀತಬಾಧೆ ಉಬ್ಬಸ, ಖಾಸಶ್ವಾಸ, ಎದೆನೋವ ಇತ್ಯಾದಿಗಳಿಗೆ ದಿವ್ಯ ಔಷಧಿ

ಪೌಂಡ್ ರೂ 2 8 0, ½ ಪೌಂಡಿಗೆ ರೂ 1-5-0.

ಕಸ್ತೂರಿಮಿಶ್ರಣ ದಶಮೂಲ, ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ತಂದು ರಕ್ತಧಾತುವಿನ ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು ಬಾಟ್ಲಿ 1ಕ್ಕೆ ರೂ 1-8-0.

ಕೆಟಲಾಗಿಗೆ ಬರೆಯಿರಿ— **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು

ಎಲ್ಲಾ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ ಕೆಟಲಾಗಿಗೆ ಬರೆಯಿರಿ

ಉಡುಪಿ ಸೆಲ್ಲಿಂಗ್ ಏಜಂಟರು—ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್‌ಏಜಂಟ್ಸ್ ಉಡುಪಿ.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರ ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ ಬಹಳ ಪೇಜುಗಳು ಇರುವ ದೊಡ್ಡ ಪುಸ್ತಕ ಸಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ ಮನೆಯಲ್ಲೇ ಈ ಪುಸ್ತಕ ಓದಿರಿ ಇಂಗ್ಲೀಷ್ ಓದು ಬರಹ ಎಲ್ಲಾ ಸುಲಭವಾಗಿ ಬರುತ್ತ ಪುಸ್ತಕದ ಬೆಲೆ ರೂ 1॥

Western Swiss watch Co
Book Sellers Post Box No 68
G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68 ಮದರಾಸ್

ಶ್ರೀರಂಗಮ್

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ

ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡು

ತ್ತವೆ ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು

ಮೈಸೂರು
ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

: ಜಾಹೀರಾತು :
ದರಗಳು.
೧ ಪುಟಕ್ಕೆ ೧ ಸಲಕ್ಕೆ ರೂ ೨೫
ಅರ್ಧ ಪುಟಕ್ಕೆ ೧ ಸಲಕ್ಕೆ ,, ೧೫
ಕಾಲು ಪುಟಕ್ಕೆ ೧ ಸಲಕ್ಕೆ ,, ೮
ಅರೆಗಾಲು ಪುಟಕ್ಕೆ ೧ ಸಲಕ್ಕೆ ,, ೫
ಇಂಚು ಕಲಮಿಗೆ ೧ ಸಲಕ್ಕೆ ,, ೧
ಕಾಯಂ ಜಾಹೀರಾತು ದರಗಳಿಗೆ ಬರೆಯಿರಿ

ವಾರ ಪತ್ರಿಕೆ

NAVAYUGA
ನವಯುಗ

Kanarese Weekly

: ಚಂದಾ ವಿವರ :
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ,, ೧—೧೨—೦
೩ ತಿಂಗಳಿಗೆ ,, ೧—೦—೦
ಚಂದಾ ಹಣವನ್ನು ಮುಂಗಡವಾಗಿ ಕಳಿಸಬೇಕಾಗಿದೆ.
ಮಾದರಿ ಸಂಚಿಕೆಗೆ ಮ್ಯಾನೇಜರರಿಗೆ ಬರೆಯಿರಿ.

ವಾರದ ವಿಮರ್ಶೆ

ಹಿಟ್ಲರರ ಶಾಂತಿಯ ರೀತಿ

ಇದೇ ತಾ ೬ರಲ್ಲಿ ಹೆರ್ ಹಿಟ್ಲರರು ಜರ್ಮನಿಯ ರೀಚ್‌ಸ್ಟೇಗಿನಲ್ಲಿ ಕೊಟ್ಟ ಭಾಷಣದಲ್ಲಿ, ಯುರೋಪಿನಲ್ಲಿ ಶಾಂತಿ ಸ್ಥಾಪಿಸುವ ಕುರಿತು ಕೆಲವು ಸೂಚನೆಗಳನ್ನಿತ್ತಿರುವರು. ಪೋಲಂಡಿನ ವಿಷಯದಲ್ಲಿ ಯಾರ ತಡೆ ತೊಡಕುಗಳನ್ನಾದರೂ ರಸ್ಯಾ ಮತ್ತು ಜರ್ಮನಿಗಳು ಸಹಿಸಲಾರವು. ಯುರೋಪಿನ ಸುರಕ್ಷತತೆಯೇ ಯುದ್ಧದ ಉದ್ದೇಶ. ಆದಕ್ಕಾಗಿ ಯುರೋಪಿನ ರಾಷ್ಟ್ರಗಳು ಮೊದಲು ಶಸ್ತ್ರತ್ಯಾಗ ಮಾಡಿ ಸಭೆ ಕೂಡಿ ಆಲೋಚಿಸಬೇಕು. ಇಂಗ್ಲೆಂಡ್ ಮತ್ತು ಫ್ರಾನ್ಸುಗಳ ಕುರಿತು ತನಗೇನೂ ಹೇಳಲಿಕ್ಕಿಲ್ಲ. ಜರ್ಮನ್ ವಸಾಹತುಗಳ ಹೊರತು ಬೇರೇನನ್ನೂ ತಾನು ಕೇಳುವದಾಗಿಲ್ಲ. ನ್ಯಾಯವಾಗಿ ಜರ್ಮನಿಯದಾದ ವಸಾಹತುಗಳು ಅದಕ್ಕೆ ರಾಜಿಯಿಂದಲೇ ಕೊಡಲ್ಪಡಬೇಕು. ಜರ್ಮನಿಯು ಎಂದೂ ಇಂಗ್ಲೆಂಡಿನ ಹಿತಕ್ಕೆ ವಿರುದ್ಧವಾಗಿ ನಡೆದಿಲ್ಲ. ಇಂಗ್ಲೆಂಡ್ ಮತ್ತು ಜರ್ಮನಿಗಳು ಒಂದುಗೂಡಿರಬೇಕೆಂದು ತಾನು ತನ್ನ ಇಡೀ ಜೀವಮಾನದಲ್ಲಿ ಪ್ರಯತ್ನಿಸುತ್ತಾ ಬಂದಿರುವೆನು. ಆದರೆ ಇಂಗ್ಲೆಂಡು ಜರ್ಮನಿಗೆ ವಿರೋಧವಾಗಿ ನಡೆಯುತ್ತಾ ಬಂದಿರುವುದು. ವಂಶೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳ ಮೇರೆಗೆ ಜರ್ಮನಿಯ ಗಡಿ ನಿಶ್ಚಯವಾಗಬೇಕು. ಜರ್ಮನ್ ರಾಜ್ಯದಲ್ಲಿರುವ ಮತ್ತು ಈಶಾನ್ಯ ಯುರೋಪಿನ ಬೇರೆ ಬೇರೆ ಜನಾಂಗಗಳನ್ನು ಕ್ರಮಗೊಳಿಸಬೇಕು. ಯೆಹೂದ್ಯ ಪ್ರಶ್ನೆಯನ್ನು ಇತ್ಯರ್ಥಪಡಿಸಲೆತ್ನಿಸಬೇಕು. ಎಲ್ಲಾ ದೇಶಗಳೊಡನೆಯೂ ವ್ಯಾಪಾರ ಸಂಬಂಧವನ್ನು ಪುನಃ ಬೆಳೆಸಬೇಕು. ಶಾಟಸ್ಥಳ ರಕ್ಷಣೆಯ ಜವಾಬ್ದಾರಿಯನ್ನು ಜರ್ಮನಿ ಮತ್ತು ರಸ್ಯಗಳು ಹೊತ್ತು ಪೋಲಿಶ್ ರಾಜ್ಯವೊಂದನ್ನು ಸ್ಥಾಪಿಸಬೇಕೆಂಬವೇ ಹೆರ್ ಹಿಟ್ಲರರ ಸೂಚನೆಗಳು. ಇದನ್ನು ಹಿಟ್ಲರರು ೬ವಾರ ತಡಮಾಡಿ ಸೂಚಿಸಿದರು. ಪೋಲಂಡನ್ನು ಗೆದ್ದು ನಿರ್ನಾಮಗೊಳಿಸಿದ ಮೇಲೆ ಹಿಟ್ಲರರು ರಾಜಿಗಾಗಿ ಆತುರಪಡುವ ಬದಲಿಗೆ ಯುದ್ಧ ಆರಂಭಿಸುವ ಮೊದಲೇ ಹಾಗೆ ಮಾಡುತ್ತಿದ್ದರೆ ಫಲಕಾರಿಯಾಗುವ ಸಂಭವವಿತ್ತು. ಇತರರು ರಾಜಿಗಾಗಿ ರಾತ್ರಿಹಗಲು ಪ್ರಯತ್ನಿಸುವಾಗ ಕಿವಿಗೊಡದೆ ಏಕಾಏಕಿ ಪೋಲಂಡಿನ ಮೇಲೇರಿಹೋಗಿ, ಗೆದ್ದು ವಿಜಯ ದುಂದುಭಿ ಮೊಳಗುತ್ತಾ ರಾಜಿ ಪ್ರಸ್ತಾಪ ಮಾಡಿದರೆ ಮಿತ್ರ ರಾಷ್ಟ್ರಗಳು ಕಿವಿಗೊಡುವವೇ? ಹಿಟ್ಲರ್ ಶಾಹಿಯು ಅಳಿಯದೆ ಅಥವಾ ಹಿಟ್ಲರರು ರಾಜಿನಾಮೆ ಕೊಡದೆ ಶಾಂತಿಯಾಗುವ ಸಂಭವ ತೋರುವುದಿಲ್ಲ.

ನಿರಾಶೆಯ ಚಿಹ್ನೆ

'ಜರ್ಮನಿಯು ಇಂದೀಗ ಇತಿಹಾಸದಲ್ಲೇ ಅಪೂರ್ವವಾದ ಜಯಪಡೆದಿದೆ. ಜರ್ಮನಿಯನ್ನು ನಾಶಮಾಡಲು ಮುಂದಾದ 50ಮಿಲ್ಯ ಜನರನ್ನು ಮತ್ತು 50ದಳ ಸೇನೆಯನ್ನು ಜರ್ಮನ್ ಸೇನೆಯು ಒಂದು ಹಪ್ತೆಯಲ್ಲಿ ಗೆದ್ದುಬಿಟ್ಟಿದೆ. ವಾರ್ಸೋ ಪಟ್ಟಣದ ನಾಶಕ್ಕೆ ಪೋಲಿಶ್ ಸೇನಾನಾಯಕನ ಉದ್ಧಟತನವೇ ಕಾರಣ. ವಾರ್ಸೋದಲ್ಲಿ ಕಾದಾಡಿದ ಸೇನೆಗೂ, ಸ್ಪೈನಿನಲ್ಲಿ ಹಲವು ತಿಂಗಳವರೆಗೆ ಭೀಕರ ಧಾಳಿಯನ್ನಿದಿರಿಸಿ ಹೋರಾಡಿದ ವೀರರಿಗೂ ಸರಿಹೋಲಿಕೆಯೇ ಇಲ್ಲ. ಪೋಲಿಶ್ ಸೈನಿಕರೇನೋ ವೀರರಿದ್ದರು. ಆದರೆ ಅವರ ನಾಯಕರು ಅಶಕ್ತರು, ದುಷ್ಟರು ಮತ್ತು ಬೇಜವಾಬ್ದಾರರು. ಪೋಲಿಶ್ ಯುದ್ಧದಲ್ಲಿ 10,572 ಮಂದಿ ಜರ್ಮನರು ಹತರಾಗಿರುವರು. 30,222 ಮಂದಿ ಗಾಯಗೊಂಡು 3400ಮಂದಿ ಕಾಣೆಯಾಗಿರುವರು. ಜರ್ಮನರಷ್ಟು ಶಾಂತಿಪ್ರಿಯ ಜನರನ್ನೇನಾನು ಕಂಡಿಲ್ಲ. ವರ್ಸಾಯ್ಸ್ ಒಪ್ಪಂದವನ್ನು ಮುರಿದೇ ಸಿದ್ಧವೆಂದು ಜರ್ಮನ್ ಜನಾಂಗಕ್ಕೆ ಮಾತುಕೊಟ್ಟ ಪ್ರಕಾರ ನಾನು ನಡೆದಿರುವೆನು. 694,000 ಪೋಲಿಶ್ ಕೈದಿಗಳೀಗ ಬರ್ಲಿನಿಗೆ ಕರೆತರಲ್ಪಟ್ಟಿದ್ದಾರೆ. ಪೂರ್ವದ ಯುದ್ಧವು ಕೊನೆಗೊಂಡಂತಾಯಿತು. ಪಶ್ಚಿಮದಲ್ಲಿ ವೈರಿಯನ್ನು ಕಾಯುತ್ತಾ ಪ್ರಶಾಂತ ಸಿದ್ಧತೆಯಿಂದ ನಮ್ಮ ಸೇನೆಯು ನಿಂತಿರುವುದು. ಜರ್ಮನ್ ಸೋವಿಯೆಟ್ ಒಪ್ಪಂದದಿಂದ ಎರಡೂ ರಾಷ್ಟ್ರಗಳ ರೀತಿನೀತಿಯಲ್ಲೇನೂ ಬದಲಾವಣೆಯಾಗಿಲ್ಲ. ಮೊದಲು ಶಾಂತಿಯಿಂದಿದ್ದಾಗ ರಸ್ಯ ಮತ್ತು ಜರ್ಮನಿಗಳು ಸುಖವಾಗಿದ್ದುವು. ಜರ್ಮನಿಯ ಮತ್ತು ರಸ್ಯದ ಅಪೇಕ್ಷೆಗಳು ಏಕಪ್ರಕಾರವಾಗಿವೆ. ಅವುಗಳೀಗ ಒಂದುಗೂಡಿ ನಡೆಯುವ ನಿರ್ಧಾರಮಾಡಿವೆ. ಹೇಗಾದರೂ 80ಮಿಲ್ಯ ಜರ್ಮನರು ಜೀವಿಸುವಂತಾಗಬೇಕು. ಜರ್ಮನಿ ಮತ್ತು ಇಂಗ್ಲೆಂಡುಗಳು ಒಡಂಬಡಿಕೆಗೆ ಬಂದಾಗ ಮಾತ್ರ ಯುರೋಪಿನಲ್ಲಿ ಶಾಂತಿಯು ಸಾಧ್ಯವಿದೆ. ಪೋಲಂಡಿಗಾಗಿ ಜರ್ಮನರು ಮತ್ತು ಬ್ರಿಟಿಷರು ಕಾದಾಡುತ್ತಿರುವುದೆಂದು ನಾನು ನಂಬುವುದಿಲ್ಲ. ವರ್ಸಾಯ್ಸ್ ಒಪ್ಪಂದದ ಪೋಲಂಡು ಪುನಃ ಜನ್ಮಕ್ಕೆ ಬರುವ ಹಾಗೆಯೇ ಇಲ್ಲ. ಈ ಸಾಮುದಾಯಿಕ ವಿನಾಶಕ್ಕೆ ಕಾರಣವಾದರೂ ಏನು? ಇಂಗ್ಲೆಂಡ್ ಮತ್ತು ಫ್ರಾನ್ಸಿನವರೇನನ್ನೂ ನಾನು ಕೇಳುವುದಿಲ್ಲ. ನಾಝಿ ಆಳ್ವಿಕೆಯನ್ನು ನಾಶಮಾಡುವುದಕ್ಕಾಗಿ ಈ ಯುದ್ಧವೇ ನಾಲ್ಕೈದು ಅಥವಾ 8ವರ್ಷ ನಡೆದರೂ ಫಲಕಾರಿಯಾಗಲಿಕ್ಕಿಲ್ಲ. ಇದು ಒಂದು ವೇಳೆ ನಲಿಸಿದರೂ ಎರಡನೇ ವರ್ಸಾಯ್ಸಿನಂಥ ಇನ್ನೊಮ್ಮೆ ಕಲಹಕ್ಕೆ ಕಾರಣವಾಗುವುದು. ಶಸ್ತ್ರಶಕ್ತಿಯಾಗಲಿ ದೀರ್ಘ ಕಾಲದ ಯುದ್ಧವಾಗಲಿ ಜರ್ಮನಿಯನ್ನು ಗೆಲ್ಲಲಾರದ. 1918ನೇ ನವಂಬರದಂತಹ ವಿದ್ಯಮಾನಗಳು ಪುನಃ ಎಂದಿಗೂ ನಡೆಯಲಾರವು. ಜರ್ಮನಿಯ ವಿಜಯದ ವಿಷಯದಲ್ಲಿ ನನಗೆ ಸಂದೇಹವೇ ಇಲ್ಲ. ಪಶ್ಚಿಮ ರಣರಂಗದಲ್ಲಿ ಈಗಣ ಪರಿಸ್ಥಿತಿಯೇ ಮುಂದುವರಿಯಲು ಸಾಧ್ಯವಿಲ್ಲ. ಒಂದು ದಿನ ಫ್ರೆಂಚ್ ಸೇನೆಯು ಸಾರ್‌ಬ್ರುಕನನ್ನು ನಾಶಮಾಡುವುದು. ಇದಕ್ಕೆ ಪ್ರತಿಯಾಗಿ ಜರ್ಮನಿಯು ಫ್ರಾನ್ಸಿನ ಮಾಲ್‌ಹೌಸನ್ ಪ್ರದೇಶದ ಮೇಲೆ ಬಾಂಬೆಸೆವುದು. ಮಿಲ್ಯಾಂತರ ಜನರ ರಕ್ತವು ಕೋಡಿ ಹರಿಯುವುದು. ಜರ್ಮನಿಯ ಶಾಂತಿಯ ಸೂಚನೆಗಳು ಗಮನಿಸಲ್ಪಡದಿದ್ದರೆ ಅದು ಹೋರಾಡುವುದು. ಜರ್ಮನಿಯಲ್ಲಿ ಹೊಸ ರಾಜ್ಯಭಾರವನ್ನುಂಟುಮಾಡಲು ಈ ಯುದ್ಧವು ನಡೆಸಲ್ಪಡುವುದಾದರೆ, ಆದರಿಂದಾಗಿ ಇಕ್ಕಡೆಯವರಿಗೂ ಅಪಾರ ಹಾನಿ ನಿಶ್ಚಯ. ಆದರೂ ಜರ್ಮನ್ ಜನತೆ ಮತ್ತೂ ತಲೆಯೆತ್ತದಿರಲಾರದು. ಇನ್ನಾದರೂ ಬ್ರಿಟನ್ ಮತ್ತು ಜರ್ಮನಿಗಳೊಳಗೆ ಒಡಂಬಡಿಕೆಯು ಸಾಧ್ಯವಿದೆ. ರಾಜಿಯಿಂದ ಅದು ಸಾಧ್ಯವಾಗದಿದ್ದರೆ ಬಲದಿಂದಲೇ ನಿಶ್ಚಯವಾಗಬೇಕು" ಎಂಬುದೇ ಹೆರ್ ಹಿಟ್ಲರರ 83ಮಿನಿಟುಗಳ ಭಾಷಣದ ಭಾವಾರ್ಥ. ದೀರ್ಘ ಕಾಲದ ಯುದ್ಧದಲ್ಲಿ ಜರ್ಮನಿಯ ಸೋಲು ನಿಶ್ಚಯವೆಂಬುದನ್ನು ಹಿಟ್ಲರರೂ ತಿಳಿದಿದ್ದಾರೆ. ಅದುದರಿಂದ ಅವರೀಗ ಶಾಂತಿಗಾಗಿ ಹಾತೊರೆಯುತ್ತಿದ್ದಾರೆ. ಇಂಗ್ಲೆಂಡು ಮತ್ತು ಫ್ರಾನ್ಸುಗಳನ್ನು ಗೆಲ್ಲುವ ಭರವಸೆಯು ಅವರಿಗಿದ್ದರೆ ಅವರ ಭಾಷಣದ ರೀತಿಯೇ ಬೇರೆಯಿತ್ತು. ಪಶ್ಚಿಮ ರಣರಂಗದ ಪರಿಸ್ಥಿತಿಯು ಅವರಲ್ಲಿ ತಳಮಳವನ್ನುಂಟುಮಾಡಿದೆ. ಆದುದರಿಂದಲೇ ಅವರು ಸಾರ್‌ಬ್ರುಕನನ್ನು ಫ್ರೆಂಚರು ನಾಶಮಾಡಬಹುದೆಂದು ಮುಂದಾಗಿ ಸೂಚಿಸಿರುತ್ತಾರೆ. ಒಟ್ಟಾರೆ ಹಿಟ್ಲರರ ಭಾಷಣದಲ್ಲಿ ನಿರಾಶೆಯ ಚಿಹ್ನೆಯನ್ನು ಕಾಣಬಹುದಾಗಿದೆ.

ರಸ್ಯದ ಅಧಿಕಾರ ವ್ಯಾಪನೆ

ಇದೇ ಸಂದರ್ಭವೆಂದ ಸೋವಿಯೆಟ್ ರಸ್ಯವು ಪೂರ್ವ ಯುರೋಪಿನಲ್ಲಿ ತನ್ನ ಅಧಿಕಾರವನ್ನು ಬಲಪಡಿಸಲೆತ್ನಿಸುತ್ತಿರುವುದು. ಬಾಲ್ಟಿಕ್ ರಾಜ್ಯಗಳಾದ ಎಸ್ಟೋನಿಯ, ಲಟೇವಿಯ ಮತ್ತು ಲಿಥುವಾನೀಯಗಳು ರಸ್ಯದೊಡನೆ ಒಪ್ಪಂದ ಮಾಡಿಕೊಂಡು ರಸ್ಯನ ನೌಕಾ ಮತ್ತು ವಿಮಾನ ನಿಲಯಗಳನ್ನು ಸ್ಥಾಪಿಸಲು ಸಂದು ಕಟ್ಟಿನ ಸ್ಥಳಗಳನ್ನು ಬಿಟ್ಟುಕೊಡಬೇಕಾಗಿ ಬಂದಿರುವುದು. ಹೀಗೆ ರಸ್ಯವು ಬಾಲ್ಟಿಕ್ ಸಮುದ್ರದ ಕಡೆಗೆ ತನ್ನ ಅಧಿಕಾರವನ್ನು ವ್ಯಾಪಿಸಿರುವುದು. ಇನ್ನು ಬಾಲ್ಕನ್ ರಾಷ್ಟ್ರಗಳು ಕೂಡಾ ರಸ್ಯದ ಪ್ರಭಾವಕ್ಕೊಳಗಾಗಿ ಅದು ಹೇಳಿದಂತೆ ಕೇಳಬೇಕಾಗಿದೆ. ಟರ್ಕಿ, ರುಮೇನಿಯ, ಮೊದಲಾದ ರಾಜ್ಯಗಳಿಗೆ ರಸ್ಯವನ್ನು ಬಿಡಲು ಸಾಧ್ಯವೇ ಇಲ್ಲ. ರುಮೇನಿಯಕ್ಕೆ ಸೇರಿದ ಬಸ್ಸರೇಬಿಯ ಎಂಬ ಕಪ್ಪು ಸಮುದ್ರ ತೀರ ಪ್ರದೇಶದ ಮೇಲೆ ರಸ್ಯವು ಕಣ್ಣು ಹಾಕಿದೆಯೆಂದು ಸುದ್ದಿಯುಂಟಾಗಿದೆ. ಇದರಿಂದ ರುಮೇನಿಯವು ತಳಮಳಗೊಂಡಿದೆ. ಟರ್ಕಿಯ ವಿದೇಶ ಮಂತ್ರಿ ಸರಜೋಗ್ಲುರವರು ಇನ್ನೂ ಮೋಸ್ಕೋದಲ್ಲೇ ಇದ್ದಾರೆ. ಕಪ್ಪು ಸಮುದ್ರ ಭಾಗಕ್ಕೆ ಯುದ್ಧವು ವ್ಯಾಪಿಸದಂತೆ ಟರ್ಕಿ ಮತ್ತು ರಸ್ಯಗಳೊಳಗೆ ಒಪ್ಪಂದವಾಗಲಿರುವುದೆಂದು ತಿಳಿದು ಬರುತ್ತದೆ. ರಸ್ಯವು

(೬ನೇ ಪುಟಕ್ಕೆ ಮುಂದರಿಯುವದು)

WHAT MAKES A MAN RICH?

Luck? - - Very rarely.
Inheritance? - Not often.
Speculation? Once in a blue moon
Gambling? - - Never.
Hard Work? - Very Often.
Hard work and Thrift - Always.

RESOURCES OF A CRORE
ESTD 1906
CANARA BANK LIMITED

ಈ ಸಂದರ್ಭದಲ್ಲಿ

ಬ್ರಿಟನಿನ ಕರ್ತವ್ಯವೇನು ?

ಹಿಂದುದೇಶದ ಕೇಳಿಕೆಯ ಕುರಿತು ಪಂಡಿತ ನೆಹರುಗಳ ಸ್ಪಷ್ಟೀಕರಣ.

ಹಿಂದೂದೇಶದ ಕುರಿತು ಪಂಡಿತ ಜವಾಹರಲಾಲರು ಲಂಡನಿನ ನ್ಯೂಸ್ ಕ್ರೋನಿಕಲ್ ಪತ್ರಿಕೆಗೆ ಕಳುಹಿಸಿರುವ ಸಂದೇಶದ ಸಾರಾಂಶವು ಹೀಗಿದೆ ಭೀಕರ ಹಿಂಸೆ ಮತ್ತು ಅಮಾನುಷ ಕೊಲೆಯು ಇಂದೀಗ ಯುರೋಪಿನಲ್ಲಿ ತಾಂಡವಿಸುತ್ತಾ ಇಡೀ ಲೋಕದ ನಾಗರಿಕತೆಯು ತಳಹದಿಯನ್ನು ಕಂಪಿತಗೊಳಿಸುತ್ತಿರುವುದು. ಶಸ್ತ್ರಗಳ ಈ ಭೀಷಣ ಘರ್ಷಣದ ಹಿಂದಿನಲ್ಲಿ ತತ್ವಗಳ ತಿಕ್ಕಾಟವೂ ನಡೆದು ಇಡೀ ಲೋಕದ ಭವಿಷ್ಯವೇ ತ್ರಾಸಿನಲ್ಲಿ ತೂಗಾಡುತ್ತಿದೆ ಈ ಭಯಂಕರ ಸಮರವು ಮಾನವ ಸ್ವಾತಂತ್ರ್ಯದಲ್ಲೇನೂ ಬದಲಾವಣೆಮಾಡಿ, ಯುದ್ಧ ಮತ್ತು ಮಾನವ ಅಧೋಗತಿಯ ಕಾರಣಗಳನ್ನು ಕೊನೆಗೊಳಿಸಲಿರುವುದೇ ಎಂಬುದೀಗ ಪ್ರಶ್ನೆ. ಹಿಂದೂದೇಶಕ್ಕೆ ಈ ಪ್ರಶ್ನೆಯು ಪ್ರಾಮುಖ್ಯವಾಗಿದೆ. ಫೆಸಿಸ್ಟ್ ಮತ್ತು ನಾಜಿ ತತ್ವ, ರೀತಿ ನೀತಿ ಮತ್ತು ಪಾಶವಿಕ ವರ್ತನೆಯು ಹಿಂದೀಯರಲ್ಲಿ ಜುಗುಪ್ಸೆಯನ್ನುಂಟುಮಾಡಿದೆ. ಹಿಂದೂದೇಶದ ದೃಷ್ಟಿಯಲ್ಲಿ ಲೋಕಶಾಂತಿಯೆಂದರೆ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆ: ಒಂದು ರಾಷ್ಟ್ರದ ಮೇಲಿನ ಇನ್ನೊಂದು ರಾಷ್ಟ್ರ ಅಧಿಕಾರದ ಅಂತ್ಯ. ಆದುದರಿಂದಲೇ ಹಿಂದೂದೇಶವು ಮಂಚೂರಿಯಾ, ಅಬಿಸೀನಿಯ ಮತ್ತು ಜೆಕೋಸ್ಲೋವೇಕಿಯಗಳ ಮೇಲೆ ನಡೆದ ಆಕ್ರಮಣವನ್ನು ನಿಷೇಧಿಸಿದ್ದಿತು ಸ್ಪೈನಿನ ವಿಧ್ವಂಸನ ಮತ್ತು ಪೋಲೆಂಡಿನ ಮೇಲಿನ ಬರ್ಬರ ಧಾಳಿಯಿಂದ ತೀವ್ರ ವೇದನೆಗೊಂಡಿತು. ಅಂದಮೇಲೆ ನವೀನ ವ್ಯವಸ್ಥೆ ಶಾಂತಿ ಮತ್ತು ಸ್ವಾತಂತ್ರ್ಯಕ್ಕಾಗಿ ಹಿಂದೂದೇಶವು ಸಂತೋಷದಿಂದ ತನ್ನ ಶಕ್ತಿಗಳನ್ನೆಲ್ಲಾ ಉಪಯೋಗಿಸದಿರಲಾರದು.

ಇದೇ ಈಗಣ ಯುದ್ಧದ ಉದ್ದೇಶವಾದರೆ ಅದನ್ನು ಸ್ಪಷ್ಟೀಕರಿಸಿ ಆ ಪ್ರಕಾರವಾಗಿಯೇ ಇಂದು ಕಾರ್ಯ ನಡಿಸಬೇಕು. ಹಾಗೆ ಮಾಡದಿದ್ದರೆ ಸಂದೇಹಕ್ಕಾಸ್ಪದವಾಗುವುದು. ಯುದ್ಧಗಳ ಪ್ರಚಂಡ ಸೆರೆಯಲ್ಲಿ ಆದರ್ಶಗಳು ಬಳೆದು ಹೋಗಿ ಕಟ್ಟಕಡೆಗೆ ಸಾಮ್ರಾಜ್ಯ ಶಾಹಿಗಳು ತಮ್ಮ ತಮ್ಮ ಅಧಿಕಾರ ಬಲ ಪಡಿಸಲು ಹೋರಾಟ ನಡಿಸಿ ತಮ್ಮ ಸ್ಥಾನವನ್ನು ಮತ್ತಷ್ಟು ಸ್ಥಿರ ಪಡಿಸಿಕೊಳ್ಳುವುದೆಂಬುದು ಹಿಂದಿನ ಕಹಿ ಅನುಭವವಾಗಿದೆ. ಪ್ರಜಾಶಾಹಿ ಮತ್ತು ಸ್ವಯಂ ನಿರ್ಣಯ ತತ್ವವನ್ನೆತ್ತಿ ಹಿಡಿದು ನಾಜಿ ಆಕ್ರಮಣವನ್ನು ವಿರೋಧಿಸಲು ಈ ಯುದ್ಧ ಹೂಡಲ್ಪಟ್ಟಿರುವುದಾದರೆ ಅವನ್ನು ಆರಂಭದಲ್ಲೇ ಲೋಕ ವಿಶ್ರುತಗೊಳಿಸಬೇಕು. ಈ ಕಾರಣದಿಂದಲೇ ಕಾಂಗ್ರೆಸು, ಬ್ರಿಟಿಷ್ ಸರಕಾರದವರು ತಮ್ಮ ಸಮರ ಮತ್ತು ಶಾಂತಿಯ ಉದ್ದೇಶಗಳನ್ನೂ, ಹಿಂದೂ ದೇಶಕ್ಕೂ ಸಾಮ್ರಾಜ್ಯ ಶಾಹಿಗೂ ಅವು ಹೇಗೆ ಸಂಬಂಧಿಸುವುವೆಂಬುದನ್ನೂ ಸ್ಪಷ್ಟಗೊಳಿಸಬೇಕೆಂದು ಕೇಳಿಕೊಂಡಿರುವುದು ಸಾಮ್ರಾಜ್ಯಶಾಹಿಯ ರಕ್ಷಣೆಯ ಯುದ್ಧದಲ್ಲಿ ಹಿಂದೂ ದೇಶವು ಭಾಗವಹಿಸಲಾರದು ಆದರೆ ಸ್ವಾತಂತ್ರ್ಯಕ್ಕಾಗಿ ನಡೆಯುವ ಸಮರದಲ್ಲದು ಸೇರುವುದು. ಹಿಂದೂದೇಶದ ಜನ ಧನ ಸಂಪತ್ತಿಯು ಅಪಾರವಾದುದು. ಆದರೆ ಅದಕ್ಕಿಂತಲೂ ಪ್ರಾಮುಖ್ಯವಾದುದೆಂದರೆ, ಉದಾತ್ತ ಉದ್ದೇಶಕ್ಕಾಗಿ ಅದರ ಸೌಹಾರ್ದ ಮತ್ತು ನೈತಿಕಬೆಂಬಲ ಪಡೆಯುವುದು ಹೀಗೆ ಮಾಡುವುದರಿಂದ ಒಂದು ಶತಮಾನದ ವರೆಗಣ ಹಿಂದೂದೇಶ ಮತ್ತು ಇಂಗ್ಲೆಂಡುಗಳ ದ್ವೇಷವು ಕೊನೆಗೊಂಡು, ಲೋಕದ ಇತಿಹಾಸದಲ್ಲಿ ಹೊಸಪತ್ರವೊಂದು. ಮಾಪಾರ್ಟವಾಗಿ, ನಾವು ಹೋರಾಡುವ ನವ ವ್ಯವಸ್ಥೆಯನ್ನಾರಂಭಿಸಿದಂತಾಗುವುದು. ಸ್ವತಂತ್ರ ಮತ್ತು ಸಮಾನ ಹಿಂದೂ ಸ್ಥಾನವು ಸ್ವಸಂತೋಷದಿಂದ ಈ ಕಾರ್ಯದಲ್ಲಿ ಸಹಕರಿಸಬಲ್ಲದು. ಈ ಪ್ರಾಮುಖ್ಯ ಮಾರ್ಪಾಟವಾಗುವ ತನಕ. ತಮ್ಮದಲ್ಲದ ಯುದ್ಧದಲ್ಲಿ ಭಾಗವಹಿಸಲು ಹಿಂದೀಯರಲ್ಲಿ ಉತ್ಸಾಹವನ್ನುಂಟುಮಾಡಲು ನಮ್ಮಿಂದಾರಿಂದಲೂ ಸಾಧ್ಯವಿಲ್ಲ. ಜನಪ್ರಿಯ ಯುದ್ಧಕ್ಕೆ ಜನತೆಯ ಬೆಂಬಲಬೇಕು. ಅದರಿಂದ ತಮ್ಮ ಮೇಲೆ ಯಾವ ಪರಿಣಾಮವಾಗುವದೆಂಬುದನ್ನು ಜನರು ತಿಳಿಯುವಂತಾಗಬೇಕು ತಮ್ಮ ಮೇಲೆ ಹೊರಿಸಲ್ಪಡುವ ಯುದ್ಧವು ಜನವಿರೋಧವನ್ನೆಬ್ಬಿಸುವುದು.

ಕೆಲವು ತಲಾಂತರಗಳಿಂದ ಹಿಂದೂದೇಶದಲ್ಲಿ ನಡೆದುಬಂದಿರುವ ಹೋರಾಟದ ಹಿನ್ನೆಲೆಯನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬೇಕು ಈಗಣ ನಮ್ಮ ರಾಜಕೀಯ ಘಟನೆಯೇ ನಮ್ಮ ಮೇಲೆ ಹೊರಿಸಲ್ಪಟ್ಟದ್ದಾಗಿ ಜನತೆಯಲ್ಲಿ ದ್ವೇಷವನ್ನು ಮಸಗಿಸಿದೆ ಅಸ್ಪಷ್ಟ ಆಶ್ವಾಸನೆ, ಮತ್ತು ಅರೆಮನಸ್ಸಿನ ಕೆಲಸಗಳಿಂದ ಈ ದ್ವೇಷವು ಹೋಗಲಾರದು. ತನ್ನ ರಾಜಕೀಯ ಘಟನೆಯನ್ನು ತಾನೇ ನಿಶ್ಚೈಸುವ ಹಕ್ಕುಳ್ಳ ಸ್ವತಂತ್ರ ರಾಷ್ಟ್ರವಾಗಿ ಹಿಂದೂದೇಶವನ್ನು ಅಂಗೀಕರಿಸಲು ಈ ಐತಿಹಾಸಿಕ ಸಂದರ್ಭವನ್ನು ಉಪಯೋಗಿಸಿಕೊಳ್ಳಬೇಕು. ಹಾಗೆ ಮಾಡದಿದ್ದರೆ ಹಿಂದೂದೇಶದಲ್ಲಿ ತಿಕ್ಕಾಟ ಮತ್ತು ವಿರೋಧವು ಕಡಿಮೆಯಾಗಲಾರದು. ಯುದ್ಧ ಮತ್ತು ಶಾಂತಿಯ ಉದ್ದೇಶಗಳ ಕುರಿತು ಹಿಂದೀಯರಲ್ಲಿಯೂ ಇಡೀ ಲೋಕದ ಜನತೆಯಲ್ಲಿಯೂ, ಸಂದೇಹಕ್ಕೆಡೆಯಾಗುವುದು ಬ್ರಿಟಿಷ್ ಸರಕಾರದ ಮಾತಿಗೂ ಆಚರಣೆಗೂ ಅಭ್ಯಂತರವುಂಟಾಗುವುದು

ಆದುದರಿಂದ ಪ್ರಥಮವಾಗಿ ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವೀಯಲ್ಪಡುವುದೆಂಬುದನ್ನು ಶ್ರುತಪಡಿಸಬೇಕು. ಅದನ್ನು ಈಗಲೇ ಸಾಧ್ಯವಾದಷ್ಟು ಕಾರ್ಯಕ್ಕೆ ಹಚ್ಚಿ ಹಿಂದೂದೇಶದ ಆಡಳಿತವನ್ನು ಹಿಂದೀಯರ ಅಧೀನಪಡಿಸಿ ಅವರು ದೇಶದ ಪರವಾಗಿ ಯುದ್ಧದಲ್ಲಿ ಭಾಗವಹಿಸುವಂತಾಗಬೇಕು ಆಗ ಮಾತ್ರ ಈ ಯುದ್ಧಕ್ಕೆ ಬೇಕಾದ ಜನಬೆಂಬಲ ದೊರೆಯುವಂತಾಗುವುದು. ನಿರಂಕುಶ ಆರ್ಡಿನೆನ್ಸ್ ರಾಜ್ಯವು ವಿರೋಧವನ್ನೇ ಹೆಚ್ಚಿಸುವುದು. ಇಷ್ಟರಲ್ಲೇ ತೊಡಕುಗಳುಂಟಾಗಿವೆ. ಸಾರ್ವಜನಿಕ ಕೆಲಸಗಾರರು ದಸ್ತಗಿರಿಮಾಡಲ್ಪಡುತ್ತಿದ್ದಾರೆ. ಸಾರ್ವಜನಿಕ ಮತ್ತು ಮಜೂರ ಕಾರ್ಯಕಲಾಪಗಳ ಮೇಲೆ ಕೆಲವು ಕಡೆ ಕಠಿಣ ನಿರ್ಬಂಧಹಾಕಲಾಗಿದೆ. ಗತಕಾಲದಲ್ಲಿ ನಿರರ್ಥಕವಾಗಿರುವ ಹಳೆಯ ರೀತಿಯಿದು. ಇನ್ನಾದರೂ ಅದು ಯಶಸ್ವಿಯಾಗಲಾರದು.

ಹಿಂದಿನ ವಿರೋಧವನ್ನು ಮರೆತು ಬಂಧುಭಾವದ ಹಸ್ತವನ್ನು ಮುಂದೊಡ್ಡಲೆಳಸುತ್ತಿದೆ ಈಗ ಹಿಂದುಸ್ಥಾನ. ಆದರೆ ಸ್ವತಂತ್ರ ರಾಷ್ಟ್ರವಾಗಿ ಸಮಾನತೆಯಿಂದ ಮಾತ್ರ ಅದು ಹಾಗೆ ಮಾಡಬಲ್ಲದು. ಗತಕಾಲವು ಈಗ ಕೊನೆಗೊಂಡಿರುತ್ತದೆ. ನಾವು ಯುರೋಪಿನಲ್ಲಿ ಮಾತ್ರವಲ್ಲದೆ ಏಸ್ಯಾಖಂಡದಲ್ಲಿಯೂ, ಇಡೀ ಲೋಕದಲ್ಲಿಯೂ ನವೀನ ವ್ಯವಸ್ಥೆಗಾಗಿ ಉದ್ಯಮಿಸುತ್ತಿದ್ದೇವೆಂಬುದು ಹಿಂದೂದೇಶಕ್ಕೀಗ ಖಾತ್ರಿಯಾಗಬೇಕು. ಶಾಂತಿ, ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯಲ್ಲಿ ನಂಬಿಗೆಯಿರುವ ಲೋಕದ ಎಲ್ಲಾ ಜನರ ಪರವಾಗಿ ಹಿಂದೂದೇಶವು ಈಗ ಇಂಗ್ಲೆಂಡಿಗೆ ಆಮಂತ್ರಣವನ್ನಿತ್ತಿದೆ. ಬ್ರಿಟನು ಇದರ ಮಹತ್ವಿಕೆಯನ್ನರಿತುಕೊಂಡು ಯೋಗ್ಯ ಉತ್ತರವೀಯದಿದ್ದರೆ ಅದೊಂದು ದೊಡ್ಡ ದುರಂತವೇ ಸರಿ. ಯೋಗ್ಯ ಉತ್ತರವಿತ್ತಲ್ಲಿ ಅದರಿಂದ ಇಡೀ ಲೋಕದ ಜನತೆಯಲ್ಲಿ ನವ ಉತ್ಸಾಹ ಉಂಟಾಗಿ, ನಾಜಿಗಳಿಗೆ ಅದರಿಂದ ರಣರಂಗಕ್ಕಿಂತಲೂ ದೊಡ್ಡ ಪೆಟ್ಟಾಗುವುದು.

YOUR AMBITION TO BUILD UP A BRIGHT FUTURE IN YOUR RETIRED LIFE,
YOUR DESIRE TO EDUCATE YOUR CHILDREN SO THAT THEY MAY STAND ON THEIR OWN LEGS,
YOUR ANXIETY TO PROVIDE YOUR DEAR WIFE AND CHILDREN WITH A MINIMUM MONTHLY ALLOWANCES
YOUR MORAL LIABILITY TO PROVIDE FOR THE MARRIAGE OF YOUR DAUGHTERS

may all be only a dream if you do not avail of modern scientific Life Insurance Schemes, which will satisfy your Ambition, Desire, Anxiety and Moral Liability and make the whole thing a reality by small contribution out of your own monthly Savings towards the payment of Premiums in

The Bombay Life Assurance Co., Ltd.

To Insure or to Represent, please consult:—

Messrs. KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
GANDHI-NAGAR, UDIPI
Or any of their following Offices —

Puthiyara CALICUT.	Car Street, MANGALORE	Visweswarapuram Circle BANGALORE CITY.
Post Box No. 357, Mount Road, MADRAS	Gautam Nivas Charni Road, Girgaum, BOMBAY No. 4.	Central Station Road, TRIVANDRUM

ನಮ್ಮ ಪ್ರತಿನಿಧಿಗಳ ಸಂಚಾರ

ನಮ್ಮ ಪ್ರತಿನಿಧಿಗಳಾದ ಶ್ರೀಯುತ ಎಂ. ಕೃಷ್ಣಯ್ಯ ಶೆಟ್ಟರು ಈ ವಾರದಿಂದ ಕಾರ್ಕಳ ಮತ್ತು ಪುತ್ತೂರು ತಾಲೂಕುಗಳಲ್ಲಿ ಸಂಚರಿಸಲು ಪ್ರಾರಂಭಿಸಿರುತ್ತಾರೆ. ಮಹಾಜನರು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ಮೊದಲೆ ಚಂದಾದಾರರಾಗಿ ಚಂದಾಬಾಕಿಯಿರುವವರು ಅವರೊಡನೆ ಚಂದಾ ತೆರಬೇಕಾಗಿಯೂ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

—ಮೆನೇಜರ್.

— ಗರ್ಭ ನಿರೋಧ —

ರಹತ್ ಇದು ಗರ್ಭಧಾರಣೆಯನ್ನು ನಿಶ್ಚಯವಾಗಿಯೂ ತಡೆಗಟ್ಟುವದು ಇದನ್ನು 3 ದಿವಸ ಉಪಯೋಗಿಸಿದಲ್ಲಿ ಗರ್ಭಧಾರಣೆಯು ಪೀಡೆಯು ಜೀವಾವಧಿಯವರೆಗೆ ನಿವಾರಿತವಾಗುವುದು. ಶರೀರಕ್ಕೆ ಯಾವ ತರದ ಹಾನಿಯೂ ಇರುವುದಿಲ್ಲ. ಯಾವರೀತಿಯ ಮುಟ್ಟುದೋಷವೂ ಉಂಟಾಗುವದಿಲ್ಲ. ಪ್ರತಿಯೊಂದು ಓರ್ಡರಿನೊಂದಿಗೆ ಗ್ಯಾರಂಟೀ ಪತ್ರವಿದೆ. ಬೆಲೆ ರೂ. 5-8-0.

ರಜವತಿ—ಮುಟ್ಟು ನಿಲ್ಲಿಸಲ್ಪಟ್ಟುದನ್ನು ಪುನಃ ಕ್ರಮವಾಗಿ ಆಗುವಂತೆ ಮಾಡುವುದು ಬೆಲೆ ರೂ. 5 8-0 ವಿದೇಶ 10ಶಿಲ್ಲಿಂಗು.

ಫೋ. ನಂ. 21343.

Dr. S. H. Khan,
42 (N G) *Churchgate street*
Fort Bombay

Degrees. Books: Medicines.

Free H L M S, H M B, H. M. D etc Free Homeo Ayur-Unani Naturo degres. by post also—Practioners also get soons Homeo Materiamedica, Rs 5 Homeo-Practice book Rs 4, Insanity Cure Pills Rs. 10 Enclose 2 annas stamps —

Principal, Indian Homeopathic Institute and Society (Govt Regd)
P. O MAHUVA, (Kathiawar Dt. India.

ಜಪಾನರ ಅತಿ ದೊಡ್ಡ ಅಪಜಯ

ಚೀನೀ ಸ್ವಾತಂತ್ರ ಯುದ್ಧವು ತಲಾಂತರದ ವರೆಗೆ ನಡೆಯಬಹುದು.

೩ ಮಿಲ್ಯ ಸುಸಜ್ಜಿತ ಚೀನೀ ಸೇನೆ

ಯುರೋಪಿನಲ್ಲಿ ಯುದ್ಧ ಆರಂಭವಾದ ಮೇಲೆ ಜಪಾನು, ಮಂಗೋಲಿಯ ಮಂಚೂರಿಯದ ಎಲ್ಲೆಯ ಕಲಹವನ್ನು ರಷ್ಯದೊಡನೆ ರಾಜಿಯಿಂದ ತೀರ್ಮಾನಿಸಿಕೊಂಡು, ಸ್ವಲ್ಪ ಸಮಯ ನಿಲ್ಲಿಸಿದ್ದ ಚೀನಿಯುದ್ಧವನ್ನು ಪುನಃ ಭರದಿಂದ ಮುನ್ನಡೆಸ ಹತ್ತಿರುವುದು. ಇದೇ ತಾ 6ರ ಸುದ್ದಿಯ ನೇರೆಗೆ ಚಾಂಗ್‌ಶಾ ಎಂಬ ಪ್ರಾಂಮುಖ್ಯ ಪಟ್ಟಣವನ್ನು ವಶಪಡಿಸಿಕೊಳ್ಳಲು ಜಪಾನು ಮಾಡಿದ ಪ್ರಯತ್ನವು ನಿಷ್ಫಲವಾಗಿ ಜಪಾನ ಸೇನೆಯು ಅತಿ ದೊಡ್ಡ ಅಪಜಯ ಪಡೆದು ಹಿಂದೆ ಸರಿಯಬೇಕಾಗಿ ಬಂದಿರುತ್ತದೆ ಚೀನಿಯರು 'ಪಿಂಕಿಯಂಗ್' ಮತ್ತು 'ಯಾಂಗ್‌ಟಿಯನ್' ಎಂಬ ಸಂದುಕಟ್ಟಿನ ಸ್ಥಳಗಳನ್ನು ಜಪಾನರಿಂದ ಗೆದ್ದಿರುವರು. ಕಳೆದ ಎರಡು ವರುಷಗಳಲ್ಲಿ ನವೀನ ಚೀನೀ ಸೇನೆಯು ತರಬೇತಿ ಹೊಂದಿ ಅಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತವಾಗಿರುವುದು ಇಂತಹ 3 ಮಿಲ್ಯ ಸೇನೆಯು ಈಗ ಸಿದ್ಧವಾಗಿ ಜಪಾನರೊಡನೆ ಸಮರಂಗ ಯುದ್ಧ ಮಾಡಲಿರುವುದೆಂದು ತಿಳಿದು ಬರುತ್ತದೆ. ಚಾಂಗ್‌ಶಾ ಯುದ್ಧವು ಈ ಸೇನೆಯ ಯೋಗ್ಯತೆಯನ್ನು ವ್ಯಕ್ತಪಡಿಸುತ್ತದೆ. ಎರಡು ದಿನಗಳಲ್ಲಿ ಚೀನೀ ಸೈನಿಕರು ಜಪಾನಸೇನೆಯನ್ನು 38 ಮೈಲು ಹಿಂದಕಟ್ಟಿರುವರು. ಕಡಿಮೆಯೆಂದರೆ 30,000 ಜಪಾನರು ಹತರಾಗಿರುವರು. 6000 ಸಾವಿರ ಜಪಾನರ ಹೆಣಗಳು ರಣರಂಗದಲ್ಲೇ ಬಿದ್ದಿದ್ದುವು ಚೀನೀ ವಿಮಾನ ಪಡೆಯು ಈಗ ಸಂಘಟಿತವಾಗಿರುತ್ತದೆ, ಕಳೆದವಾರ ಕೆಲವುಂದಿ ಚೀನೀ ವೈಮಾನಿಕರು ಹೇಂಕೋ ಪಟ್ಟಣದಮೇಲೆ ಬೋಂಬೆಸೆದರು

ಚೀನೀಯುದ್ಧವು ಎಷ್ಟು ಸಮಯ ನಡೆಯುವುದು?

ಗೋರಿಲ್ಲ ಯುದ್ಧ ಚಾತುರ್ಯದಿಂದ ಜಪಾನ ಸೇನೆಗೆ ಹೆಚ್ಚಿನ ಹಾವಳಿ ಮಾಡಿ, ಗೆದ್ದ ಸ್ಥಳಗಳಲ್ಲಿ ಕೂಡಾ ಅವರು ಶಾಂತಿ ಮತ್ತು ಸುರಕ್ಷಿತವಾಗಿರದಂತೆ ಸದಾ ಪೀಡಿಸುತ್ತಿರುವ ಪ್ರಖ್ಯಾತ ಚೀನೀ ಕಮ್ಯೂನಿಸ್ಟ ಸೇನೆಯಲ್ಲಿ ಗಾಯಗೊಂಡ ಸೈನಿಕರ ಚಿಕಿತ್ಸೆ ನಡಿಸುತ್ತಿದ್ದಾರೆ ಡಾಕ್ಟರ್ ಅಥೋಲರ ಕೈಕೆಳಗೆ ಚೈನಕ್ಕೆ ಹೋಗಿರುವ ಹಿಂದೀ ಶುಶ್ರೂಷಾ ಪಥಕದವರು. ಈ ಪಥಕಕ್ಕೆ ಸೇರಿದ ಡಾಕ್ಟರ್ ಚೋಳ್ಕರರು ಇತ್ತಲಾಗಿ ಸ್ವದೇಶಕ್ಕೆ ಬಂದಿದ್ದು ಚೈನದ ಪರಿಸ್ಥಿತಿಯ ಕುರಿತು ಈ ಕೆಳಗಣ ಅಭಿಪ್ರಾಯವನ್ನಿತ್ತಿರುತ್ತಾರೆ. "ಚೀನೀಯುದ್ಧವು ಎಷ್ಟು ಕಾಲ ನಡಿಯುವದೆಂದು ನಿಶ್ಚಿತವಾಗಿ ಹೇಳಲು ಯಾರಿಗೂ ಸಾಧ್ಯವಿಲ್ಲ. ನಾಲ್ಕೈದು ವರ್ಷ ನಡೆಯಬಹುದೆಂದು ಸರ್ವಸಾಮಾನ್ಯ ಚೀನೀ ಅಧಿಕಾರಿಗಳು ಹೇಳುತ್ತಾರೆ 'ನಾವು ಜಯಶೀಲರಾಗುವ ತನಕ ಹೋರಾಡುವೆವು" ಎನ್ನುತ್ತಾರೆ ಕಮ್ಯೂನಿಸ್ಟ ಸೈನಿಕರು. ಕಮ್ಯೂನಿಸ್ಟ ಸೇನಾನಾಯಕ ಮಾವೋ ಟ್ಸೆ ಟುಂಗರ, ಸ್ವಾತಂತ್ರ್ಯ ರಕ್ಷಣಾಯುದ್ಧ ನಮ್ಮನು.

ಚೈನದಲ್ಲಿ ಹಿಂದೀ ಶುಶ್ರೂಷಾ ಪಥಕದ ಕೆಲಸ.

ಚೈನದಿಂದ ಸ್ವದೇಶಕ್ಕೆ ಬಂದಿರುವ ಡಾಕ್ಟರ್ ಚೋಲ್ಕರರ ಅಭಿಮತ.

ಸಂಪೂರ್ಣ ಸ್ವತಂತ್ರರಾಗುವತನಕ ಹೋರಾಡುವೆವು. ನಾನು ಅಪಜಯ ಹೊಂದಿದರೆ ನನ್ನ ಮಗನೇನೂ ಹಾಗಾಗಲಾರನು. ಒಂದುವೇಳೆ ಅವನು ಜಯಶೀಲನಾಗದಿದ್ದರೆ ನನ್ನ ಮೊಮ್ಮಗನು ವಿಜಯಿಯಾಗುವುದಂತೂ ನಿಶ್ಚಯ ನಾವು ಗುಲಾಮಗಿರಿಯ ನೊಗವನ್ನು ಕಿತ್ತು ಹಾಕುವ ದೃಢ ನಿರ್ಧಾರದಿಂದಿರುವೆವು" ಎಂದು ಹೇಳಿರುವರು 50 ವರುಷ ಪ್ರಾಯದವರಾದರೂ 30 ವರ್ಷದ ಯೌವನಸ್ಥರಂತೆ ಉತ್ಸಾಹಮೂರ್ತಿಯಾದ ಡಾಕ್ಟರ್ ಚೋಳ್ಕರರು, ತಾನೊಬ್ಬ ಚೀನೀಯನೆಂಬಂತೆ ಅತ್ಯಂತ ಹುರುಪಿನಿಂದ ಈ ಮಾತುಗಳನ್ನು ಪತ್ರಿಕಾ ಪ್ರತಿನಿಧಿಯೊಬ್ಬನೊಡನೆಂದರು "ಅರೇಳು ವರ್ಷಗಳವರೆಗಾದರೂ ನಾವು ಹೋರಾಡಿ ನಮ್ಮ ಸ್ವಾತಂತ್ರ್ಯವನ್ನು ಗಳಿಸದೆ ಬಿಡಲಾರೆವು ಒಬ್ಬನೇ ಒಬ್ಬ ಜಪಾನ ಸೈನಿಕನು ಚೀನದ ಪ್ರದೇಶದಲ್ಲಿ ಅಧಿಕಾರ ನಡಿಸುತ್ತಿರುವತನಕ ಜಪಾನರೊಡನೆ ಸಂಧಿಮಾಡಿಕೊಳ್ಳಲಾರೆ"ವೆಂದು ಅಧುನಿಕ ಚೈನದ ಅದೃಷ್ಟನಾಯಕ ಮಾರ್ಶಲ್ ಚ್ಯಾಂಗರು ಕಂಠೋಕ್ತವಾಗಿ ಸಾರಿ ಜಪಾನರ ರಾಜಿಯ ಪ್ರಯತ್ನವನ್ನು ಮಣ್ಣುಗೂಡಿಸಿರುವರು. ಚೀನೀಯರಿಗಿಂದು ಯುದ್ಧವು ನಿತ್ಯಜೀವನ ವಿಷಯವಾಗಿ ಹೋಗಿದ. ಸ್ಥಿರವಾದ ಧೈರ್ಯ ಮತ್ತು ಸ್ಥೈರ್ಯದಿಂದ ಹೋರಾಡುವ ಶಕ್ತಿಯಿಲ್ಲದೆ ಬೆನ್ನಿಗೆ ಕಾಲುಕೊಡುವ ಅಂಜುಗೂಳಿಗಳೆಂದು ಪ್ರಖ್ಯಾತರಾದ ಚೀನೀ ಸೈನಿಕರು ನವನಾಯಕತ್ವದಲ್ಲಿ ನವಹುರುಪಿನಿಂದ ಮಾತೃಭೂಮಿಯ ಸ್ವಾತಂತ್ರ್ಯಸಾಧನೆಗಾಗಿ ಪ್ರಾಣದ ಹಂಗುತೊರೆದು ಹೋರಾಡುವ ಅಜೇಯ ನೈತಿಕ ಬಲಪಡೆದಿರುವರು ಸದಾ ಅಂತಃಕಲಹ, ವಿಶ್ವಾಸ ಘಾತುಕತನ, ಮತ್ತು ಒಳಸಂಚುಗಳಿಂದ ಕೂಡಿದ್ದ ಚೈನವು ಇಂದೀಗ ವಿಚಿತ್ರ ಒಕ್ಕಟ್ಟಿನಿಂದ ಒಂದೇ ಶರೀರ ಮತ್ತು ಮನಸ್ಸಿನಿಂದೆಂಬಂತೆ ಜಪಾನರನ್ನು ಪ್ರತಿಭಟಿಸಲು ಸೊಂಟಕಟ್ಟಿ ನಿಂತಿರುವುದು

ಎಷ್ಟು ಮಂದಿ ಬೇಕಾದರೂ ಸಾಯಲು ತಯಾರು

ಚೀನೀಯರ ದುರ್ಬಲತೆಯೇ ಇಂದೀಗ ಅವರ ಬಲವಾಗಿ ಪರಿಣಮಿಸಿದೆ ಅವರ ತೀವ್ರ ದಾರಿದ್ರ್ಯ ಮತ್ತು ಅಪಾರ ಜನಸಂಖ್ಯೆಯಿಂದಾಗಿ ತೋಪಿನ ಬಾಯಿಗೆ ಬಲಿಯಾಗಲು ಎಷ್ಟು ಬೇಕಾದರೂ ಜನರು ಸಿಗುತ್ತಾರೆ ಬರಗಾಲಪೀಡಿತರಾಗಿ ಹೊಟ್ಟೆಬಟ್ಟೆಗಿಲ್ಲದೆ ಸಾಯುವುದಕ್ಕಿಂತ ಯುದ್ಧದಲ್ಲಿ ಕಾದಾಡಿ ವೀರ ಮರಣ ಹೊಂದುವದು ಲೇಸೆಂದು ಚೀನೀಯರು ಭಾವಿಸಿಕೊಂಡಿರುವಂತಿದೆ ಚೈನದಲ್ಲಿ ಖಡ್ಡಾಯವಾಗಿ ಜನರು ಸೇನೆಗೆ ಸೇರಿಸಲ್ಪಡುತ್ತಾರೆ ಆದರೆ ಶ್ರೀಮಂತರು ತಮ್ಮ ಮಕ್ಕಳ ಬದಲಾಗಿ ಬಡ ಚೀನೀ ಹುಡುಗರನ್ನು ಕ್ರಯಕ್ಕೆ ಪಡೆದು ಸೇನೆಗೊಪ್ಪಿಸುತ್ತಾರೆ ಆರೇಳು ರೂಪಾಯಿಗಳಿಗೆ ಎಷ್ಟು ಮಂದಿ ಚೀನೀಯರು ಬೇಕಾದರೂ ಸಿಗುತ್ತಾರೆ. ಎಷ್ಟು ಮಂದಿ ಸತ್ತರೂ ಚಿಂತೆಯಿಲ್ಲೆಂದು ಚೀನೀಯರೊಬ್ಬರೇ ಡಾಕ್ಟರ್ ಚೋಳ್ಕರರೊಡನೆ ಒಮ್ಮೆ ಹೇಳಿದರಂತೆ.

ಚೀನಾ ಜಪಾನ್ ಯುದ್ಧಾರಂಭದಲ್ಲಿ ಒಬ್ಬ ಜಪಾನನಿಗೆ 10 ಮಂದಿ ಚೀನೀಯರಂತೆ ಕೊಡಲ್ಪಡುತ್ತಿದ್ದರು. ಕಡೆಗೆ ಇದು ೭ಕ್ಕಿಳಿಯಿತು ಇನ್ನು ಮುಂದೆ ಬೇಗನೆ 1 ಮತ್ತು ೬ರ ಪ್ರಮಾಣಕ್ಕಿಳಿಯಬಹುದೆಂದು ನಿರೀಕ್ಷಿಸಲಾಗಿದೆ. ಒಂದಕ್ಕೊಂದು ಪ್ರಮಾಣಕ್ಕೆ ಬರುವಾಗ ವಿಜಯವು ಚೀನೀಯರದಾಗುವುದು. ಹೊರಗಣ ಸಹಾಯ ದೊರೆಯುವವರೆಗೆ ಚೀನವು ಯುದ್ಧವನ್ನು ಸ್ಥಿರವಾಗಿ ಮುಂದೊತ್ತುವುದೆಂದೇ ಡಾಕ್ಟರ್ ಚೋಳ್ಕರರ ಅಭಿಮತ. ಜಪಾನು ರಷ್ಯದೊಡನೆ ಒಪ್ಪಂದಮಾಡಿಕೊಂಡರೂ ರಷ್ಯವು ಚೀನಕ್ಕೆ ಯಥಾಪ್ರಕಾರ ಸಹಾಯಮಾಡುತ್ತಲೇ ಇರುವುದು.

THULUNAD BANK
OF SUPPLY AGENCY LIMITED,
ESTD.] UDIPI. [1933.
Current Account are accepted
at 3% p. a.
All kinds of Banking business transacted
Write for particulars to:—
The Managing Director.

ಬರ್ಮಾ ಕ್ಷಿಮಾರ್ಗವಾಗಿ ಚೈನವು ಈಗ ತನಗೆ ಬೇಕಾದ ಸಾಮಾಗ್ರಿಗಳನ್ನು ತರಿಸಲು ಅನುಕೂಲವಾಗಿರುವುದು.

ತ್ರಿವಿಧ ಚೀನೀ ಸೈನಿಕರು

ಚೀನೀ ಸಂರಕ್ಷಣಾ ಸೇನೆಯಲ್ಲಿ ಮೂರು ವಿಧದ ಸೈನಿಕರಿರುತ್ತಾರೆ. ಮಾರ್ಶಲ್ ಚ್ಯಾಂಗ್ ಕೈಶೆಕ್ಕರ ಕೈಕೆಳಗಿರುವ ಕೇಂದ್ರ ಸೇನೆಯು ಪ್ರಥಮ ಹಾಗೂ ಪ್ರಾಮುಖ್ಯವಾದುದು. ಜರ್ಮನ್ ಸೈನ್ಯಾಧಿಕಾರಿಗಳಿಂದ ಒಳ್ಳೇ ತರಬೇತಿಪಡೆದು, ಚೆನ್ನಾಗಿ ಪೋಷಿಸಲ್ಪಟ್ಟು, ಸಾಕಷ್ಟು ಕೋವಿ ತುಪಾಕಿಗಳಿರುವ ಸುಸಂಘಟಿತವಾದ ಸೇನೆಯಿದು ಎರಡನೆಯ- 'ಎಯ್ಟ್ ರೂಟ್ ಆರ್ಮಿ' ಎಂದು ಪ್ರಖ್ಯಾತವಾದ ಕಮ್ಯೂನಿಸ್ಟ್ ಸೇನೆ. ಕೆಲಸಮಯ ಈ ಕಮ್ಯೂನಿಸ್ಟರು ಚೀನದ ನಾಲ್ಕೈದು ಪ್ರಾಂತ್ಯಗಳಲ್ಲಿ ತಮ್ಮದೇ ಆದ ಸರಕಾರವನ್ನು ಸ್ಥಾಪಿಸಿಕೊಂಡಿದ್ದರು ಆದರೆ 1937ರಿಂದ ಅವರು ಕುಮಿಂಟಾಂಗ (ರಾಷ್ಟ್ರೀಯ ಚೈನ) ಗೊಡನೆ ಸೇರಿ ನಡೆಯುತ್ತಿರುವರು. ಈ ಸೇನೆಯು ಹೆಚ್ಚಿನ ಸಿದ್ಧತೆಯನ್ನೇನೂ ಪಡೆದಿರುವುದಿಲ್ಲ ಅದರಲ್ಲಿ ಫಿರಂಗಿ ವಿಮಾನಗಳೇನೂ ಇಲ್ಲ, ಹುಲ್ಲಿನಿಂದ ತಯಾರಿಸಿದ ಪಾದರಕ್ಷೆಗಳನ್ನು ಧರಿಸುತ್ತಾರೆ ಈ ಸೈನಿಕರು. ಆದರೆ ಗೋರಿಲ್ಲ ಯುದ್ಧದಲ್ಲಿ ಅತ್ಯಂತ ಚತುರರು, ಸಮರಂಗ ಯುದ್ಧವನ್ನು ಸದಾ ತಪ್ಪಿಸಿ, ಹೊಂಚು ಹಾಕಿ ವೈರಿಗಳ ಮೇಲೆ ಅನಿರೀಕ್ಷಿತವಾಗಿ ಮಿಂಚಿನಂತೆ ಎರಗಿ, ಅವರ ಆಹಾರ ಸಾಮಾಗ್ರಿಗಳನ್ನು ತಡೆಗಟ್ಟಿ ಲುಟಾಯಿಸಿ ಈ ಸೇನೆಯು ಕೊಡುತ್ತಿರುವ ಪೀಡೆ ಮತ್ತು ಮಾಡುತ್ತಿರುವ ಹಾವಳಿಯಿಂದಾಗಿ ತಾವು ಗೆದ್ದಿರುವ ಪ್ರದೇಶದಲ್ಲಿಯೂ ಜಪಾನರು ಅಧಿಕಾರನಡಿಸದಂತಾಗಿದೆ. ಈ ಸೇನೆಯ ಮುಖ್ಯ ಸೇನಾನಾಯಕ ಚುಟೇಯವರು ಗೋರಿಲ್ಲಯುದ್ಧ ತಜ್ಞರಿರುತ್ತಾರೆ

ಮೂರನೇದು ಪ್ರತಿಪ್ರಾಂತದಲ್ಲಿ ತರಬೇತಿ ಹೊಂದಿರುವ ಸೇನೆ. ಈ ಮೂರು ಸೇನೆಯೂ ವಿಚಿತ್ರ ಒಕ್ಕಟ್ಟಿನಿಂದಿದ್ದಾಗಿವೆ. ಕಮ್ಯೂನಿಸ್ಟರು, ತಾವು ಮಾರ್ಶಲ್ ಚ್ಯಾಂಗರೊಂದಿಗೆ ಮಾಡಿಕೊಂಡ ಒಪ್ಪಂದಕ್ಕೆ ಯಾವ ರೀತಿಯಲ್ಲಿಯೂ ವಿರೋಧವಾಗಿ ನಡೆಯುವುದಿಲ್ಲ. ಡಾಕ್ಟರ್ ಚೋಳ್ಕರರು, ಮಾವೋ ದಿನಾಚರಣೆಯೊಂದನ್ನು ಕಂಡಿದ್ದರು. ಅದರಲ್ಲಿ ಲೆನಿನ್ ಅಥವಾ ಸ್ಟೇಲಿನನ ಭಾವಚಿತ್ರಗಳೇ ಇದ್ದಿಲ್ಲ.

ಹಿಂದೀ ಶುಶ್ರೂಷಾ ಪಥಕದವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಚೀನೀ ನರ್ಸುಗಳ ಸಹಾಯದಿಂದ ಗಾಯಗೊಂಡ ಸೈನಿಕರ ಚಿಕಿತ್ಸೆ ಮತ್ತು ಆರೈಕೆ ನಡಿಸಿ ಚೀನೀಯರ ಪ್ರೀತಿ ಪಾತ್ರರಾಗಿರುತ್ತಾರೆ. ಈ ಪಥಕದಿಂದಾಗಿ ಹಿಂದೂದೇಶದ ಕುರಿತು ಚೀನೀಯರಿಗೆ ಬಹಳ ಪ್ರೇಮವುಂಟಾಗಿದೆ ಪಂಡಿತ ಜವಾಹರಲಾಲರ ಕುರಿತು ಚೀನೀಯರು ಅಷ್ಟೊಂದು ಆದರ ತೋರಿಸಲು ಈ ಪಥಕ ಕೆಲಸವೇ ಬಹುಮಟ್ಟಿಗೆ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು.

(೩ನೆ ಪುಟದಿಂದ ಮುಂದುವರಿದ ದು)
ಜರ್ಮನಿಗೆ ಕಚ್ಚಾ ಮಾಲುಗಳನ್ನೊದಗಿಸುವುದಾದರೂ ಯುದ್ಧದಲ್ಲಿ ತಟಸ್ಥವಾಗಿಯೇ ಇರುವುದೆಂದು ವ್ಯಕ್ತಪಡಿಸಿರುವುದು ಆದರೆ ಹಿಟ್ಲರರ ಭಾಷಣದಿಂದ ರಷ್ಯವು ಸಂತೋಷಗೊಂಡಿದೆ ಜರ್ಮನಿಯ ಕುರಿತು ಸೋವಿಯೆಟ್ ಸರಕಾರವು ನಿಜವಾಗಿಯೂ ಸ್ನೇಹ ಬಾವ ತಳೆದಿರುವಂತೆ ತೋರುತ್ತದೆ ಆದ ಮೇಲೆ ಕಟ್ಟಕಡೆಗೆ ಇದು ಯುದ್ಧಕ್ಕೆಳೆಯದಿರುವುದಾದರೂ ಹೇಗೆ?

ಹಿಟ್ಲರರು ಯುದ್ಧಕ್ಕಂಜುತ್ತಿರುವರೇ?

ಪೋಲೆಂಡಿನ ಮೇಲಿನ ಧಾಳಿಯ ಹೆಗ್ಗಳಿಕೆಯೇ ಜರ್ಮನಿಯಲ್ಲೆಲ್ಲಾ ತುಂಬಿರುವಾಗ ಪಶ್ಚಿಮ ರಣರಂಗದ ಯುದ್ಧದ ವಿದ್ಯಮಾನಗಳನ್ನು ಜರ್ಮನ್ ಸರಕಾರವು ಇಷ್ಟರವರೆಗೂ ಸರಿಯಾಗಿ ಪ್ರಕಟಿಸಿರುವುದಿಲ್ಲ ಪಶ್ಚಿಮರಣರಂಗದಲ್ಲಿ ಜರ್ಮನ್ ಸೇನೆಯು ವೈರಿಯನ್ನು ಕಾದುನಿಂತಿದೆಯೆಂದಿಷ್ಟೇ ಹಿಟ್ಲರರು ತನ್ನ ಬಾಷಣದಲ್ಲಂದಿರುತ್ತಾರೆ ಸೇಕಡ 90ರಷ್ಟರ ಜರ್ಮನರು, ಪೋಲಂಡು ಜರ್ಮನರ ವಶವಾದುದರಿಂದ ಯುದ್ಧವೇ ನಿಲ್ಲಿಸಲ್ಪಡುವುದೆಂಬ ಅಭಿಪ್ರಾಯವುಳ್ಳವರಾಗಿದ್ದಾರೆಂದು ತಿಳಿದುಬರುತ್ತದೆ ಜರ್ಮನ್ ಸೇನೆಯು ಈ ವರೆಗೆ ಪಶ್ಚಿಮ ರಣರಂಗದಲ್ಲಿ ದೊಡ್ಡ ಹೋರಾಟವನ್ನೇ ನಡೆಸಿರುವುದಿಲ್ಲ. ಹಿಟ್ಲರರು ಇಂಗ್ಲೆಂಡ್ ಮತ್ತು ಪ್ರಾನ್ಸುಗಳೊಡನೆ ಸಂಧಿಮಾಡಿಕೊಳ್ಳಲು ಬಹಳವಾಗಿ ಹಾತೊರೆಯುತ್ತಿರುವರೆಂಬುದನ್ನು ಅವರ ಬಾಷಣವು ವ್ಯಕ್ತಗೊಳಿಸುತ್ತದೆ. ಪೋಲೆಂಡಿನಲ್ಲಿ ರಕ್ತದ ಕಾಲುವೆ ಹರಿಸಿ ವಿಮಾನಧಾಳಿಯಿಂದ ಸ್ತ್ರೀಯರು ಮಕ್ಕಳನ್ನು ಕೊಲ್ಲಿಸಿದ ಹಿಟ್ಲರರು ಈಗ ಪಕ್ಕನೆ ರಕ್ತಪಾತದ ಕುರಿತು ಸಂತಾಪಸೂಚಿಸಹತ್ತಿದ್ದಾರೆ ಶಾಂತಿ, ಶಸ್ತ್ರತ್ಯಾಗ, ವಿಮಾನ ಮತ್ತು ಸಬ್‌ಮೆರೀನ್ ಯುದ್ಧನಿಷೇಧಾದಿ ಸೂಚನೆಗಳನ್ನಿತ್ತು ಲೋಕಶಾಂತಿ ಮತ್ತು ಸಬಿಕ್ಷೆಯ ಪ್ರತಿಪಾದಕರಾಗಿ ಹೋಗಿದ್ದಾರೆ ಇದರಿಂದ ಅವರು, ಮಿತ್ರರಾಷ್ಟ್ರಗಳೊಡನೆ ಯುದ್ಧವನ್ನು ನಿವಾರಿಸಲು ಸಾಧ್ಯವಾದ ಪ್ರಯತ್ನಮಾಡುತ್ತಿರುವರೆಂಬುದು ಸ್ಪಷ್ಟವಾಗುತ್ತದೆ ಫ್ರೇಂಚ್ ಸೇನೆಯ ಸ್ಥಿರವಾದ ಮುನ್ನಡೆಯಿಂದ ಹಿಟ್ಲರರು ತಳಮಳಗೊಂಡಿದ್ದಾರೆ ಅದನ್ನು ಯಾವ ರೀತಿ ತಡೆಗಟ್ಟುವುದೆಂದವರಿಗೆ ತಿಳಿಯದಾಗಿದೆ ತಟಸ್ಥ ರಾಷ್ಟ್ರಗಳ ಮೂಲಕ ಪ್ರಾನ್ಸಿನ ಮೇಲೇರಿಹೋದರೆ ಜರ್ಮನಿಯು ಲೋಕದ ದೃಷ್ಟಿಯಲ್ಲಿ ಮತ್ತೂ ದೊಡ್ಡ ಅಪರಾಧಿಯಾಗುವುದು ಪ್ರಾನ್ಸಿನ ಮೆಗಿನಟ್ ಕೋಟೆಯ ಮೇಲೆ ನೆಟ್ಟಗೆ ದಾಳಿಯಿಡುವುದೆಂದರೆ ಗೋಡೆಗೆ ತಲೆಬಡೆದುಕೊಂಡಂತೆಯೇ ಸರಿ. ಜರ್ಮನ್ ಜನತೆಯಲ್ಲಿ ಹಿಟ್ಲರರ ಕುರಿತು ಇತ್ತಲಾಗಿ ಎರಡು ವರ್ಷಗಳಿಂದ ಅತೃಪ್ತಿಯು ಬೆಳೆಯಹತ್ತಿದೆ "ಬೆಣ್ಣೆಯ ಬದಲಿಗೆ ತುಪಾಕಿ" ಎಂಬ ಉದ್ಘೋಷವು ಜನತೆಯಲ್ಲಿ ಜುಗುಪ್ಸೆಯನ್ನುಂಟುಮಾಡಹತ್ತಿದೆ ಹೊಟ್ಟೆಗೆ ಸಾಕಷ್ಟು ಆಹಾರವಿಲ್ಲದ ದಿನಕ್ಕೆ 16-18 ಘಂಟೆ ದುಡಿಯುವ ಜರ್ಮನ್ ಕೆಲಸಗಾರರಲ್ಲಿ ಅತೃಪ್ತಿಯುಂಟಾಗಿದ ಇಂತಹ ಪರಿಸ್ಥಿತಿಯಲ್ಲಿ ಹಿಟ್ಲರರು ಮಿತ್ರರಾಷ್ಟ್ರಗಳೊಡನೆ ದೀರ್ಘ ಯುದ್ಧನಡೆಸಲು ಅಂಜುತ್ತಿರುವಂತಿದೆ

ದಕ್ಷಿಣ ಕನ್ನಡಕ್ಕೆ ಮೈಸೂರು ದಿವಾನರ ಸಂದರ್ಶನ.

ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಪ್ರಶಂಸೆ.

ಶಿವಪುರ ಮತ್ತು ಕಟೀಲು ಸೇತುವೆಗಳ ಉದ್ಘಾಟನೆ.

ಬಸ್ ಸರ್ವಿಸುಗಳನ್ನು ಜಿಲ್ಲಾ ಬೋರ್ಡಿನವರೇ ನಡಿಸುವ ಯೋಜನೆ

ಮೈಸೂರು ಸಂಸ್ಥಾನದ ದಿವಾನರಾದ ಅಮೀನ್ ಉಲ್ ಮುಲ್ಕ್ ಸರ್. ಮಿರ್ಜಾ ಎಮ್. ಇಸ್ಮಾಯಿಲ್, ಕೆ. ಸಿ ಐ ಇ. ಒ ಬಿ ಇ ಇವರು ಕಾರ್ಕಳ ತಾಲೂಕು ಸೋಮೇಶ್ವರ ಪೆರ್ಡೂರು ಮಾರ್ಗದ ಶಿವಪುರ ಸೇತುವೆಯನ್ನು ತೆರೆಯುವರೆ ಆಗುಂಬೆ ಮಾರ್ಗವಾಗಿ ಹೆಬ್ರಿಗೆ ಬರುವವರಿದ್ದುದರಿಂದ ಈಸಲದ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಸಭೆಯು ಇದೇ ತಾ 7ರಲ್ಲಿ ಹೆಬ್ರಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆಯಿತು. ತಾ 6ನೇ ರಾತ್ರಿ ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿಯ ಸಭೆಯು ಕಾರ್ಕಳ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನಡೆದು ಜಿಲ್ಲೆಯ ಬಸ್ ಸರ್ವಿಸುಗಳನ್ನು ಬೋರ್ಡಿನವರು ನಡಿಸುವ ಕುರಿತು ದೀರ್ಘ ಚರ್ಚೆ ನಡೆಯಿತು. ಕಟ್ಟಕಡೆಗೆ ಬಸ್ ಸರ್ವಿಸುಗಳನ್ನು ಜಿಲ್ಲಾ ಬೋರ್ಡಿನವರು ನಡೆಸಬೇಕೆಂದು ನಿರ್ಧಾರವಾಗಿ, ಆ ಕುರಿತು ಎಲ್ಲಾ ವಿವರಗಳನ್ನೊಳಗೊಂಡ ಯೋಜನೆಯನ್ನು ತಯಾರಿಸಲು 5ಮಂದಿ ಬೋರ್ಡು ಮೆಂಬರರ ಕಮಿಟಿಯೊಂದನ್ನು ಆರಿಸಬೇಕೆಂದಾಯಿತು ಈ ಕಮಿಟಿಮೆಂಬರರನ್ನು ಮುಂದಿನ ಬೋರ್ಡು ಸಭೆಯಲ್ಲಿ ಆರಿಸಬೇಕೆಂದಾಯಿತು ತಾ. 7ನೇ ಶನಿವಾರ ಪೂರ್ವಾಹ್ನ ಘಂಟೆ 10ಕ್ಕೆ ಜಿಲ್ಲಾ ಬೋರ್ಡು ಸಭೆಯ ಪ್ರೆಸಿಡೆಂಟರಾದ ಡಾಕ್ಟರ್ ವಿಠಲಶೆಟ್ಟರ ಅಧ್ಯಕ್ಷತೆಯಲ್ಲಿ ಹೆಬ್ರಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬೋರ್ಡು ಸಭೆ ನಡೆಯಿತು. ಈ ಸಭೆಯಲ್ಲಿ ನಡೆದ ಮುಖ್ಯ ವಿಷಯವು 1938-39ರ ಬೋರ್ಡು ಆಡಳಿತದ ವರದಿಯು ಮಂಜೂರಾತಿ ವರದಿಯು ಸರ್ವಾಂಗ ಅಭಿವೃದ್ಧಿ ಸೂಚಕವಾಗಿ ಪ್ರೆಸಿಡೆಂಟರ ಉತ್ಸಾಹ, ಚಟುವಟಿಕೆ ಮತ್ತು ಜಾಣ್ಮೆಯನ್ನು ವ್ಯಕ್ತಪಡಿಸುತ್ತದೆ ಮಿ ಖಾನ್ ಬಹದ್ದೂರ ಮಹಮ್ಮದ್ ಚಮ್ನಾಡರು, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಡಾಕ್ಟರ್ ವಿಠಲ ಶೆಟ್ರು, ಆಡಳಿತ ಜಾಣ್ಮೆ, ಕಾರ್ಯದಕ್ಷತೆ ಮತ್ತು ಸೇವಾನಿಷ್ಠೆಯನ್ನು ಪ್ರಶಂಸಿಸುವ ಠರಾವನ್ನು ತಂದು, ಪ್ರೆಸಿಡೆಂಟರು ಪದ್ಧತಿಪ್ರಕಾರ ಆಡಳಿತ ಯಂತ್ರವನ್ನು ಸಾಗಿಸುವುದರಲ್ಲಿ ನಿರತವಾಗದೆ, ವಿಶೇಷ ಚಟುವಟಿಕೆ ಮತ್ತು ಚಾತುರ್ಯದಿಂದ ಆಡಳಿತ ನಡಿಸಿ ನವೀನವಾದೊಂದು ಮಾದರಿಹಾಕಿಕೊಟ್ಟುದಕ್ಕಾಗಿ ಅವರನ್ನು ಅಭಿನಂದಿಸಿ ಕೆಲವು ಮಾತುಗಳನ್ನಾಡಿದರು. ಶ್ರೀ ರಾಘವನ್ ನಂಬಿಯಾರರು ಇದನ್ನು ಅನುಮೋದಿಸಿದರು. ಡಾಕ್ಟರ್ ಪಿ. ಜಿ. ಆಚಾರ್ಯರು, ಪ್ರೆಸಿಡೆಂಟರು ಕಾಂಗ್ರೆಸ್ ಪಾರ್ಟಿಯವರಾದರೂ ನಿಷ್ಪಕ್ಷಪಾತಿಯಾಗಿ ಆಡಳಿತ ನಡಿಸಿರುವುದಕ್ಕಾಗಿ ಅವರನ್ನು ಅಭಿನಂದಿಸಿ, ಬೋರ್ಡುಮೆಂಬರರ ಹಕ್ಕುಬಾಧ್ಯತೆಗಳು ಪ್ರೆಸಿಡೆಂಟರ ವಶ ಸುರಕ್ಷಿತವಾಗಿರುವುದೆಂದರು ಪ್ರೆಸಿಡೆಂಟರು ಮೊದಲಾಗಿ ಕಾಂಗ್ರೆಸ್ ಪ್ರೆಸಿಡೆಂಟರಾಗಿ ತನ್ನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸುವರೆಂದರು. ಪುನಃ ಶ್ರೀ ನಂಬಿಯಾರರು ಹರಿಜನ ಮೆಂಬರರಾದ ಶ್ರೀ ರಾಮಚಂದ್ರನವರು, ಹರಿಜನ ವಿದ್ಯಾರ್ಥಿಗಳಿಗೆ ಬೋರ್ಡಿನವರೂ ಪ್ರೆಸಿಡೆಂಟರೂ ಕೊಟ್ಟ ಸಹಾಯಕ್ಕಾಗಿ ಆಭಾರ ಸೂಚಿಸಿದರು ಪ್ರೆಸಿಡೆಂಟರು, ತಾನು, ಪ್ರೆಸಿಡೆಂಟನಾದರೂ ಒಬ್ಬ ಮೆಂಬರನೆಂಬ ಭಾವನಾಪ್ರೇರಿತನಿರುವೆನೆಂದೂ, ಹಳ್ಳಿಗರ ಜೀವನಾನುಕೂಲತೆ ಮತ್ತು ಸೌಕರ್ಯವನ್ನು ಹೆಚ್ಚಿಸಲು ಕೂಡಿದಷ್ಟು ಪ್ರಯತ್ನಿಸಿರುವೆನೆಂದೂ, ಹೇಳಿ ಆಸ್ಪತ್ರೆಗಳಿಗೆ ಮೆಟರ್ನಿಟಿ ವಾರ್ಡುಗಳನ್ನು ಕಟ್ಟಿಸಿ ಕೊಟ್ಟ ಕಾರ್ಕಳದ ಶ್ರೀ. ಶೇಷಗಿರಿ ಪ್ರಭು, ಬೈಂದೂರಿನ ಶ್ರೀ ಸುಬ್ಬಣ್ಣ ಶೆಟ್ರಿಗೂ, ಮೂಡಬಿದ್ರಿ, ಮಂಜೇಶ್ವರ ಮತ್ತು ಶಿರ್ವದಲ್ಲಿ ಮೆಟರ್ನಿಟಿ ವಾರ್ಡುಗಳನ್ನು ತೆರೆಯಲಿಚ್ಛಿಸುವ ಸಾರ್ವಜನಿಕರಿಗೂ, ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಟ್ಟ ಬೆಳ್ವೆಯ ಶ್ರೀ. ಬಿ ಪದ್ಮಯ್ಯ ಹೆಗ್ಡೆ, ನೆಲ್ಲಿಕಾರಿನ ಬಸ್ತಿಯ ಮುಕ್ತೇಸರರು, ನಂಚೂರು ಕೋಪರೇಟಿವ್ ಸೊಸೈಟಿಯವರಿಗೂ ವಂದನೆಯನ್ನರ್ಪಿಸುವ ವರದಿಯಭಾಗವನ್ನು ಓದಿಹೇಳಿದರು ಅನಂತರ ಆಡಳಿತ ವರದಿಯು ಮಿ. ಚಮ್ನಾಡರ ಠರಾವಿನ ಸಮೇತವಾಗಿ ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು ಎಜೆಂಡದ ಉಳಿದ ವಿಷಯಗಳನ್ನು ಚರ್ಚಿಸುವಾಗ ವೈಸ್ ಪ್ರೆಸಿಡೆಂಟರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಅಧ್ಯಕ್ಷತೆ ವಹಿಸಿದರು

ಹೆಬ್ರಿಯಲ್ಲಿ ಮನವಿಗಳು

ತಾ. 8ನೇ ಬೆಳಗ್ಗೆ ಬೋರ್ಡ್ ಪ್ರೆಸಿಡೆಂಟರು ಮತ್ತು ಮೆಂಬರರೇ ಮೊದಲಾದವರು ಆಗುಂಬೆಯ ವರೆಗೆ ಹೋಗಿ ದಿವಾನರನ್ನು ಸ್ವಾಗತೀಕರಿಸಿ ಹೆಬ್ರಿಗೆ ಕರಕೊಂಡು ಬಂದರು. ಹೆಬ್ರಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಭೆ ಸೇರಿ ಹನುಮಾನ್ ಬಸ್ ಕಂಪೆನಿಯವರ ಟೀಪಾರ್ಟಿ ಸತ್ಕಾರ ನಡೆಯಿತು ಅನಂತರ ಹೆಬ್ರಿ ಪಂಚಾಯತ ಬೋರ್ಡಿನವರ ದಸ್ತೈಯೊಂದನ್ನು ತೆರೆದು ಅದರ ಪ್ರೆಸಿಡೆಂಟರಾದ ಶ್ರೀ ಎಚ್. ಭುಜಂಗ ಬಲ್ಲಾಳರೂ ಬೈಂದೂರಿನ ಚೈತನ್ಯಸೇವಾ ಮಿಶನಿನ ವ್ಯವಸ್ಥಾಪಕರಾದ ಶ್ರೀ ಸಾಧು ಕೃಷ್ಣ ಚೈತನ್ಯ ಸ್ವಾಮಿಯವರೂ, ಬೈಂದೂರು ಸರ್ಕಲಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಶ್ರೀ ಬಿ. ಸುಬ್ಬಣ್ಣ ಶೆಟ್ರು ದಿವಾನರಿಗೆ ಮಾನಪತ್ರವನ್ನರ್ಪಿಸುವಾಗ ದಿವಾನರು ಕನ್ನಡದಲ್ಲಿ ಉತ್ತರವನ್ನಿತ್ತರು ಶ್ರೀ. ಸುಬ್ಬಣ್ಣ ಶೆಟ್ರ ಮನವಿಯಲ್ಲಿ, ಬೈಂದೂರಿನಿಂದ, ಗಂಗಾನಾಡ್, ಕರ್ನಿವ ತ್ತುಕಾರೂರು ಮಾರ್ಗವಾಗಿ ಸಾಗರಕ್ಕೆ ರಸ್ತೆ ಮಾಡುವುದು ಅತ್ಯಾವಶ್ಯಕವೆಂಬುದನ್ನು ವಿವರಿಸಲ್ಪಟ್ಟಿತು ಆ ಕುರಿತು ಮೈಸೂರು ಸರಕಾರವು ಸಾಧ್ಯವಾದ ಸಹಾಯ ಮಾಡುವುದೆಂದು ದಿವಾನರು ಹೇಳಿದರು

ಶಿವಪುರ ಸೇತುವೆಯ ಉದ್ಘಾಟನೆ

ಅನಂತರ ಪೂರ್ವಾಹ್ನ ಘಂಟೆ 11-30ಕ್ಕೆ ಹೆಬ್ರಿಯಿಂದ 6 ಮೈಲು ದೂರದಲ್ಲಿ ನೂತನವಾಗಿ ಜಿಲ್ಲಾ ಬೋರ್ಡಿನವರಿಂದ 78,000 ರೂಗಳ ವೆಚ್ಚದಿಂದ ಕಟ್ಟಲ್ಪಟ್ಟಿರುವ ಸೇತುವೆಯ ಉದ್ಘಾಟನಾ ಸಮಾರಂಭವು ಮೈಸೂರಿನ ಸುಪ್ರಸಿದ್ಧ ದಿವಾನರಾದ ಸರ್. ಮಿರ್ಜಾ ಎಂ ಇಸ್ಮಾಯಿಲರ ಅಮೃತಹಸ್ತದಿಂದ ನೆರವೇರಿಸಲ್ಪಟ್ಟಿತು!

ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಮಾನ್ಯ ಡಾ। ವಿಟ್ಠಲಶೆಟ್ಟಿಯವರು ಮದ್ರಾಸ್ ಸರಕಾರದ ಮಾನ್ಯ ಪ್ರಧಾನರಿಂದಲೂ ಇನ್ನಿತರ ಮಂತ್ರಿಗಳಿಂದಲೂ ಬಂದಿದ್ದ ಸಂದೇಶಗಳನ್ನು ಸಭೆಯ ಮುಂದೆ ಓದಿದರು ಅನಂತರದಲ್ಲಿ ಈ ಸೇತುವೆಯ ಇತಿಹಾಸವನ್ನು ಸ್ವಲ್ಪದಲ್ಲಿ ತಿಳಿಸಿ ಅದು ಹೇಗೆ ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಮತ್ತು ವ್ಯಾಪಾರದ ಅಭಿವೃದ್ಧಿಗೆ ಮುಖ್ಯವೆಂಬುದನ್ನು ತಿಳಿಸಿದರು.

ದಿವಾನ್ ಸಾಹೇಬರು ತಮ್ಮನ್ನೇ ಕಾರ್ಯವನ್ನು ನಿರ್ವಹಿಲು ಆಮಂತ್ರಿಸಿದ್ದಕ್ಕಾಗಿ ವಂದನೆಗಳನ್ನರ್ಪಿಸಿ, ಈ ಜಿಲ್ಲೆಯಲ್ಲಿ ಇತ್ತೀಚೆಗೆ ಅನೇಕ ಸೇತುವೆಗಳು ಕಟ್ಟಲ್ಪಟ್ಟವೆಯೆಂದೂ, ಕಳೆದ 19 ವರ್ಷಗಳಲ್ಲಿ 13,64 ಲಕ್ಷ ರೂಪಾಯಿಗಳ ವೆಚ್ಚದಿಂದ 17 ಸೇತುವೆಗಳನ್ನು ಕಟ್ಟಿಸಿರುವುದು ಬಹಳ ಮಹತ್ವದ ಕೆಲಸವೆಂದೂ, ಸಂಚಾರದ ಸೌಕರ್ಯಗಳನ್ನು ಹೆಚ್ಚಿಸುವುದು ದೇಶ ಪ್ರಗತಿಯನ್ನು ಸೂಚಿಸುವುದೆಂದೂ, ಇದರಿಂದ ಜಿಲ್ಲೆಯು ಹೆಮ್ಮೆ ಪಡಬಹುದಾಗಿದೆಯೆಂದೂ ಹೇಳಿದರು. ಪ್ರಕೃತದ ಯುದ್ಧದ ವಿಷಯವನ್ನೆತ್ತಿ ಬ್ರಿಟಿಷರು ನಮಗೆ ಶಾಂತಿಯನ್ನು ಕೊಟ್ಟಿದ್ದಾರೆಂದು ಹೇಳಿ, ಅವರಿಗೆ ನಮ್ಮ ಕೈಲಾದ ಸಹಾಯವನ್ನು ಕೊಡಬೇಕೆಂದರು ಮತ್ತು ಬ್ರಿಟಿಷರ ಜಯವನ್ನು ಹಾರೈಸಬೇಕೆಂದರು ಮತ್ತೊಮ್ಮೆ ತಮಗೀ ಸ್ವಾಗತವನ್ನು ಕೊಟ್ಟುದಕ್ಕಾಗಿ ವಂದನೆಗಳನ್ನರ್ಪಿಸಿ ಸೇತುವೆಯನ್ನು ಉದ್ಘಾಟನೆ ಮಾಡಿದರು.

(೧೧ನೇ ಪುಟಕ್ಕೆ ಮುಂದರಿಯುತ್ತದೆ.)



ಉಡುಸಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

ಸ್ವೀಕಾರ-ವಿಮರ್ಶೆ.

ಫ್ರೋರ್ಟ ಆರ್ಯ ಸಮಾಜ ಮುಂಬಯಿ—ಇದರ ಹನ್ನೆರಡನೇ ವಾರ್ಷಿಕ ವರದಿಯು (1938) ನಮ್ಮ ಬಳಿಗೆ ಬಂದಿದೆ. ಇದರಲ್ಲಿ ವರದಿಯ ವರ್ಷದ ಕಾರ್ಯಕಲಾಪಗಳು ವಿವರಿಸಲ್ಪಟ್ಟಿವೆ. ಸಾಪ್ತಾಹಿಕ ಅಧಿವೇಶನ, ವಿಶೇಷ ದಿನಾಚರಣೆ, ಸಂವಾದ ವರ್ಣನ ಸಭೆ ಮೊದಲಾದವನ್ನು ಸಂಘವು ವ್ಯವಸ್ಥೆಯಿಂದ ನಡೆಸುತ್ತದೆ. ವೈದಿಕ ಧರ್ಮ ಪ್ರಚಾರ ಸಮಿತಿಯನ್ನು ಏರ್ಪಡಿಸಿಕೊಂಡಿದೆ. ಆರ್ಯ ವೀರ ಸೇನಾದಳವನ್ನು ಸ್ಥಾಪಿಸಿಕೊಂಡಿದೆ. ಅಂತೂ ಜನಹಿತವಾದ ಹಲವು ಕಾರ್ಯಗಳನ್ನು ಮಾಡಿ ಸಂಘವು ಜನಪ್ರಿಯವಾಗಿದೆ. ಇದಕ್ಕಾಗಿ ಆಡಳಿತ ಮಂಡಳಿಯನ್ನು ಅಭಿನಂದಿಸುವೆವು.

ಮದಾರಿ ಪಿಲ್ಸ್ (Madery Pills) ಮುಂಬಯಿಯ ಇಂಪೀರಿಯಲ್ ಕೆಮಿಸ್ಟ್ ಕಂಪೆನಿಯವರ ಈ ಗುಳಿಗೆಗಳು ರಿಜಿಸ್ಟರಾಗಿದ್ದು ಸನ್ನಿ, ಅಪಸ್ಮಾರ ಮೊದಲಾದುವಕ್ಕೆ ಅತ್ಯುತ್ತಮವಾಗಿವೆಯೆಂದು ತಿಳಿದು ಬರುತ್ತದೆ. ನಿದ್ರಾಭಂಗ, ನಪುಂಸಕತ್ವ, ಸ್ಮೃತಿನಾಶ, ಮುಟ್ಟು, ಉನ್ಮಾದ, ಸ್ವಪ್ನಸ್ಖಲನ, ಬಾಲಗ್ರಹ ಮೊದಲಾದ ರೋಗಗಳನ್ನು ನಿವಾರಿಸುವ ಉತ್ತಮ ಔಷಧವೆಂದು ಸರ್ಟಿಫಿಕೆಟುಗಳಿಂದ ಗೊತ್ತಾಗುತ್ತದೆ. 50 ಗುಳಿಗೆಗಳಿಗೆ ಕ್ರಯ 3-8-0 ಮಾತ್ರ.

ಹರಿಜನ ಸೇವಾ ಸಂಘ, ಕಾರ್ಕಳ—ಇದರ 38-39ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ವರದಿಯ ವರ್ಷದಲ್ಲಿ ಸಂಘವು ಸಮಾಧಾನಕರವಾದ ಅಭಿವೃದ್ಧಿಯನ್ನು ಹೊಂದಿದೆ ಎಂಬುದು ಸಂತೋಷದ ವಿಷಯವಿದು. ಪ್ರಕೃತ ಸಂಘಕ್ಕೆ 75 ಮಂದಿ ಸದಸ್ಯರಿರುವರು. ಶ್ರೀ. ಕೆ. ಮಹಾಬಲ ಹೆಗ್ಡೆ, ವಕೀಲ್ ಇವರು ಅಧ್ಯಕ್ಷರಾಗಿರುವ ಶ್ರೀ. ಕೆ. ಪಿ. ಕಾಮತ್, ವಕೀಲ್ ಇವರು ಕಾರ್ಯದರ್ಶಿಯಾಗಿರುವ ಮತ್ತು ಇತರ 5 ಜನರಿರುವ ಸಮರ್ಥ ಆಡಳಿತೆ ಮಂಡಳಿಯಿದೆ. ಹರಿಜನ ವಿದ್ಯಾರ್ಥಿಗಳ ಶಿಕ್ಷಣ ವ್ಯವಸ್ಥೆ, ಉಡಿಗೆ ವಸ್ತ್ರ ಹಂಚೋಣ, ಭೋಜನ ವ್ಯವಸ್ಥೆ ಮೊದಲಾದುವನ್ನು ಚೆನ್ನಾಗಿ ಮಾಡಿರುತ್ತದೆ. ಹರಿಜನ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹಕೊಡಲಾಗಿದೆ. ಹರಿಜನ ಸಪ್ತಾಹವನ್ನು ನಡೆಸಿರುತ್ತದೆ. ಹರಿಜನ ಗರ್ಭಿಣಿಯರಿಗೆ ಅವರ ಹೆರಿಗೆಕಾಲದಲ್ಲಿ ತಕ್ಕ ವಸತಿಯನ್ನು ಒದಗಿಸಿ ಅವರಿಗೆ ಸಹಾಯಮಾಡಿದೆ. ಅಂತೂ ಈ ಸಂಘವು ಗಣನೀಯ ಕಾರ್ಯಕಲಾಪಗಳನ್ನು ಮಾಡುತ್ತಿರುವುದು ಅಭಿನಂದನೀಯ. ವರದಿಯ ವರ್ಷದಲ್ಲಿ ಉಚಿತಾರ್ಥ, ಮೆಂಬರರ ವಂತಿಗೆ, ಗ್ರಾಂಟು ಮೊದಲಾದುವುಗಳಿಂದ ರೂ 1486-15-9 ಜಮೆಯಾಗಿ ಊಟ, ವಸ್ತ್ರ, ವಿದ್ಯೆ ಮೊದಲಾದುವುಗಳ ಖರ್ಚು ಕಳೆದು ಕೋಓಪರೇಟಿವ ಸೊಸೈಟಿಯಲ್ಲಿ ರೂ 100 ಡಿಪಾಜಿಟ್ ಇಡಲಾಗಿದ. 369 ರೂಪಾಯಿ ಖರ್ಚು ಮಾಡಿ ಸ್ವಂತ ಕಟ್ಟೋಣವನ್ನು ನಿರ್ಮಿಸಿಕೊಳ್ಳಲಾಗಿದೆ. ರೂ 90-5-10 ಕೈಯಲ್ಲಿ ಶಿಲ್ಕು ಇದೆ. ರೂ 45/ರ ಸಾಲವನ್ನು ಮರುಪಾವತಿ ಮಾಡಿ ಆರ್ಥಿಕ ಪರಿಸ್ಥಿತಿಯಲ್ಲಿಯೂ ಸುಧಾರಣೆ ಆಗಿದೆ. ಈ ಸಂಘವು ಇನ್ನಷ್ಟು ಉತ್ತಮ ಕೆಲಸವನ್ನು ಮಾಡಿ ಜಿಲ್ಲೆಗೇ ಆದರ್ಶವಾಗಲೆಂದು ಹಾರೈಸುವೆವು.

ಲೇಖಕ ಮತ್ತು ಬಾತ್ಮೀದಾರರಿಗೆ

ನವಯುಗದಲ್ಲಿ ಪುಟಗಳನ್ನು ಇಳಿಸಿರುವುದರಿಂದ ಇನ್ನು ಮುಂದೆ ಲೇಖನ ಬಾತ್ಮಿಗಳನ್ನು ಪ್ರಕಟಿಸಲು ಸಾಧ್ಯವಾಗಲಿಕ್ಕಿಲ್ಲ. ಯುದ್ಧದ ಮತ್ತು ಪ್ರಮುಖ ಸಮಾಚಾರಗಳನ್ನಷ್ಟೇ ಸಂಕ್ಷೇಪವಾಗಿ ಕೊಡಲಾಗುವುದು. —ಮ್ಯಾನೇಜರ್

ಪ್ರಕಟಣೆ

ಕಟ್ಪಾಡಿ ಶ್ರೀ ವೆಂಕಟರಮಣದೇವರ ಸನ್ನಿಧಿಯಲ್ಲಿ

ಇದೇ ಬರುವ ಪ್ರಮಾಥಿ ನಾಮ ಸಂವತ್ಸರದ ಆಶ್ವೀಜ ಶು ೧೦ ಯು ರವಿವಾರ ಆರಂಭವಾಗಿ ಆಶ್ವೀಜ ಬ ೧ ಯ ರವಿವಾರದ (22-10-39ರಿಂದ 29-10-39ರ) ವರೆಗೆ ಏಳು ದಿನ ಅಹೋರಾತ್ರಿ ಭಜನೆ ಸಪ್ತಾಹವು ಶ್ರೀ ದೇವರ ಅನುಗ್ರಹದಿಂದಲೂ ಇಹಪರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರಹಸ್ತದಿಂದ ಮಾಡಿದ ದ್ರವ್ಯಸಹಾಯದಿಂದಲೂ ಎಂದಿನಂತೆ ಸರ್ವವಿನಿಯೋಗಗಳೊಂದಿಗೆ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಅಗತ್ಯವಾಗಿ ಬಂದು ಶ್ರೀದೇವರ ಪ್ರಸಾದವನ್ನು ಸ್ವೀಕರಿಸಿ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ಶ್ರೀ ದೇವರ ಸನ್ನಿಧಿಯಲ್ಲಿ ನಡಿಸಬಹುದಾದ ಸದ್ವಿನಿಯೋಗಗಳ ವಿವರ: (೧) ರಾತ್ರಿಕಾಲದ ಪೂಜೆ ಸಪ್ತಾಹಕ್ಕೆ ರೂ 10-0-0, (೨) ಪೂಜೆ ಸಪ್ತಾಹಕ್ಕೆ ರೂ 5-0-0, (೩) ದೀಪಾರಾಧನೆ ರೂ 2-0-0, (೪) ಪಂಚಕಜ್ಜಾಯ ರೂ 0-8-0, (೫) ಕರ್ಪೂರಾರತಿ ರೂ 0-2-3, (೬) ತುಲಸೀಹಾರ ರೂ 0-1-3, (೭) ಅಹೋರಾತ್ರಿಯ ಪೂರ್ಣ ವಿನಿಯೋಗ ರೂ 25-0-0

ಕಟಪಾಡಿ, ತಾ 2-9-38 } ಪಿ. ಅಣ್ಣಪ್ಪನಾಯಕ್, ಪ್ರಕೃತ ಪ್ರೆಸಿಡೆಂಟು

ಪ್ರಕಟಣೆ.

ಕೋವಿ ಮೊದಲಾದ ಆಯುಧಗಳ ನಿಯಮಪ್ರಕಾರ ಎಲ್ಲಾ ಲೈಸನ್ಸ್‌ದಾರರೂ ತಮ್ಮ ಲೈಸನ್ಸನ್ನು ನವೀಕರಿಸಲು ಫೀಸನ್ನು ಹತ್ತಿರದ ಸಬ್‌ಟ್ರೆಜರಿಗೆ ಪಾವತಿ ಮಾಡಬೇಕು. ಇಲ್ಲವೇ ಜಿಲ್ಲಾ ಮೆಜಿಸ್ಟ್ರೇಟರಿಗೆ ಮನಿಯಾರ್ಡರ್ ಮೂಲಕ ಕಳುಹಿಸಬೇಕು. ಈಗ ಜ್ಯಾರಿಯಲ್ಲಿರುವ ನಿಯಮಗಳ ಮೇರೆಗೆ, ಹಾಗೆ ಹಣ ಪಾವತಿ ಮಾಡಿದ ಬಗ್ಗೆ ರಶೀದಿಗಳನ್ನು ಲೈಸನ್ಸ್ ನವೀಕರಣದ ಅರ್ಜಿಗಳೊಂದಿಗೆ ಲಗ್ತೀಕರಿಸತಕ್ಕದ್ದು. ನವೀಕರಣ ಫೀಸಾಗಿ ನೋಟ್ ಅಥವಾ ಸಿವಿಲ್ ಸ್ಟಾಂಪ್ ಪೇಪರನ್ನು ಸ್ವೀಕರಿಸಲಾಗುವುದಿಲ್ಲ. ಪ್ರತಿ ನವೀಕರಣ ಅರ್ಜಿಗೆ 2 ಆಣೆ ಕೋರ್ಟು ಫೀಸಿನ ಲೇಬಲನ್ನು ಅಂಟಿಸಬೇಕು. ಇತ್ತೀಚಿನಿಂದ ನವೀಕರಣ ಅರ್ಜಿಯನ್ನು ದಕ್ಷಿಣಕನ್ನಡ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಕಳುಹಿಸಬಹುದು. ಅರ್ಜಿ ಹಾಕುವ ಕೊನೆಯ ತಾರೀಕು 31-12-'39

ಸಹಿ, ಸಿ. ಕೆ. ಪಿ. ಕರುಣಾಕರ ಮೆನನ್,
ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್.
ಮಂಗಳೂರು, ತಾ 7-10-39

Advertisement Tariff

1 Page	Rs	25/	per insertion
½ „	Rs	15/	„ „
¼ „	Rs	8/	„ „
⅛ „	Rs	5/	„ „

Per Single inch col Re 1 „
Contract rates on application
Manager Navayuga UDIPI

ದಾರಿಹೋಕನ ಡೈರಿ

ಜೀವನ್ಮೃತಾವಸ್ಥೆಯಲ್ಲಿದ್ದರೂ ಬಹಳ ಸ್ವಾರಸ್ಯವಿದೆ ದಕ್ಷಿಣಕನ್ನಡ ಕಾಂಗ್ರೆಸಿನ ರೀತಿನೀತಿ. ಮೈಸೂರು ದಿವಾನ್ ಸರ್. ಮಿರ್ಜಾರವರಿಗೆ ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಾರ್ಟಿಯ ಆಮಂತ್ರಣ ಮತ್ತು ಸ್ವಾಗತ. ಅದಕ್ಕಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿಷಾದ. ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಮಹಾಶಯರು ಅಲ್ಲೂ ಇದ್ದಾರೆ ಇಲ್ಲೂ ಇದ್ದಾರೆ! ಅಲ್ಲೂ ಅವರ ಕೈವಾಡವಿದೆ, ಇಲ್ಲೂ ಅವರ ಒಳಕೈಯಿದೆ. ಅಂತೂ ಜಿಲ್ಲಾ ಕಾಂಗ್ರೆಸಿನ ಹೆಸರು ಚೆನ್ನಾಗಿ ಕೆಸರಾಗುತ್ತಾ ಬರುತ್ತಿದೆ. ಕೆಲವೊಂದು ವ್ಯಕ್ತಿಗಳ ಕುಟಿಲ ನೀತಿಯಿಂದ ಇಡೀ ಕಾಂಗ್ರೆಸಿನವರ ಮೇಲೆ ಜನರಿಗೆ ಕೈಬತ್ತಿ ಹಿಡಿಯಲಾರಂಭಿಸಿದ್ದಾರೆ. ಜನರು ಅಷ್ಟೊಂದು ದುರ್ವಾಸನೆ ಹಬ್ಬಿದೆ.

ooo ooo ooo

ಮೊದಲು ಆಗಾಗ ಜಿಲ್ಲೆಗೊಂದಿಬರುತ್ತಿದ್ದ ಡಾಕ್ಟರ್ ಹರ್ಡೀಕರರ ಸುಳಿವೇ ಇಲ್ಲ. ಈಗ ಕೆ. ಪಿ. ಸಿ. ಸಿ.ಯ ಜನರಲ್ ಸಕ್ರೆಟರಿಗಳಾದ ಮೇಲೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಂಗತಿಯೂ ಅಷ್ಟಕ್ಕಷ್ಟೆ. ಒಟ್ಟಾರೆ ಇಡೀ ಪ್ರಾಂತದಲ್ಲೇ 'ಕಾಂಗ್ರೆಸು ಕಟ್ಟಿ ಹೋಗಿದೆ' ಅಧಿಕಾರಲಾಲಸೆ, ಅದಕ್ಕಾಗಿ ಸೂತ್ರಚಾಲನೆಯ ಹೊರತು ಮತ್ತಾವ ಕಾರ್ಯವೂ ನಡೆಯುವಂತಿಲ್ಲ. ಅಲ್ಪ ಸಂಖ್ಯಾಕ ಸಮಾಜಗಳು ಕೆಲವರು ಅಧಿಕಾರವನ್ನು ಭದ್ರವಾಗಿರಿಸಲು ಚಡಪಡಿಸಿ ನಾನಾ ಕಪಟ ನಾಟಕಗಳನ್ನು ನಡಿಸುತ್ತಿದ್ದಾರೆ. ಇದರಿಂದಾಗಿ ಕಾಂಗ್ರೆಸಿನ ಕುರಿತು ಜನಸಾಮಾನ್ಯರಿಗಿದ್ದ ಆದರವು ಕಳೆದುಹೋಗುತ್ತಿದೆ. ಪರಿಸ್ಥಿತಿಯು ಇದೇ ರೀತಿ ನಡೆದಲ್ಲಿ ಇಡೀ ಪ್ರಾಂತ್ಯದಲ್ಲಿ ಕಾಂಗ್ರೆಸಿನ ವರ್ಚಸ್ಸು ಬೆಳೆಯುವ ಬದಲಿಗೆ ಅಳಿಯುವ ದಿನ ದೂರವಿರಲಾರದು.

ooo ooo ooo

ಮೈಸೂರು ದಿವಾನರು ಮತ್ತು ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಶ್ರೀ ಡಾಕ್ಟರ್ ವಿಠಲ ಶೆಟ್ಟಿ ದೊಡ್ಡ ದೋಸ್ತಿಗಳಾಗಿ ಹೋಗಿದ್ದಾರೆ. ಈ ದೋಸ್ತಿಯಿಂದಾಗಿ ಮೈಸೂರು ಮತ್ತು ದಕ್ಷಿಣ ಕನ್ನಡಿಗರೊಳಗಣ ಸ್ನೇಹವೂ ಬೆಳೆಯಲನುಕೂಲವಾಗಿದೆ. ಇದರಿಂದ ಮೈಸೂರವರಿಗೂ ದಕ್ಷಿಣ ಕನ್ನಡಿಗರಿಗೂ ಬಹಳ ಪ್ರಯೋಜನವಾಗಲಿದೆ.

ooo ooo ooo

ಕೈಗಾರಿಕೆ ಕಲಾಪಗಳಲ್ಲಿ ಬಹಳವಾಗಿ ಅಭಿವೃದ್ಧಿ ಹೊಂದುತ್ತಿದೆ ಮೈಸೂರು. ವ್ಯಾಪಾರವೇ ಮುಖ್ಯ ಜೀವನಾಶಯವಾಗಿರುವ ದಕ್ಷಿಣ ಕನ್ನಡದ ಕರಾವಳಿಯ ಜನರಿಗೆ ಪ್ರಕೃತದ ಸಾಂಪತ್ತಿಕ ಮತ್ತು ತ್ಯಾಗರಿಕ ಮುಗ್ಗಟ್ಟಿನಿಂದ ದೊಡ್ಡ ಪೆಟ್ಟಾಗಿದೆ. ಮೈಸೂರಿಗೆ ಸಮುದ್ರ ಕರಾವಳಿ ಇಲ್ಲ. ದಕ್ಷಿಣ ಕನ್ನಡಕ್ಕೆ ಹೆಚ್ಚಿನ ವ್ಯಾಪಾರ ವಹಿವಾಟಿನ ಒಳಪ್ರದೇಶವಿಲ್ಲ. ಮೈಸೂರು ದಕ್ಷಿಣ ಕನ್ನಡಿಗರೊಂದು ಗೂಡಿದರೆ ಇಕ್ಕಡೆಯವರಿಗೂ ಬಹಳ ಅನುಕೂಲ ಬಹಳ ಪ್ರಯೋಜನ.

ooo ooo ooo

ಇದನ್ನೇ ಮಾಡುತ್ತಿರುವಂತಿದೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಮತ್ತು ಮೈಸೂರು ದಿವಾನರು. ಕನ್ನಡ ನಾಡಿನ ಸಿರಿವಂತವಾದ ಮೈಸೂರಿನ ಸಾಮಾನುಗಳನ್ನು, ದೂರದ ಮಲಯಾಳದ ಕೊಚ್ಚಿಯ ಮೂಲಕ ಏಕೆ ರಫ್ತುಮಾಡಬೇಕು? ನೆರೆಯ ಕನ್ನಡ ನಾಡಾದ ದಕ್ಷಿಣಕನ್ನಡಕ್ಕೂ ರೈಲ್ವೇ ಮಾರ್ಗವನ್ನೇರ್ಪಡಿಸಿದರೆ ಈಗ ಕಣ್ಣುಗೂರುತ್ತಿರುವ ದಕ್ಷಿಣ ಕನ್ನಡದ ಬಂದರುಗಳು ಅಭಿವೃದ್ಧಿಹೊಂದಲಾರವೇ? ದಕ್ಷಿಣ ಕನ್ನಡದ ಸಂಪತ್ತು ಬಹಳವಾಗಿ ಹೆಚ್ಚುವಂತಾಗಲಾರದೇ?

ooo ooo ooo

(೮ನೇ ಪುಟಕ್ಕೆ ಮುಂದರಿಯುವುದು.)

ಲೈಬ್ರೆರಿ ಮತ್ತು ಸ್ಕೂಲ್‌ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ

ಪಿ. ಎ. ಉಪಾಧ್ಯಾಯ,
ಬುಕ್‌ಸೆಲ್ಲರ್ ಅಂಡ್ ಪಬ್ಲಿಷರ್,
ಎ. ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ

ನವೀನ ಪುಸ್ತಕಗಳು.

೧ ಕಣ್ಣೀರು—ಸಾಮಾಜಿಕ ಕಾದಂಬರಿ ೪೦೦ ಪುಟ ನ ಜುಸ್ತು ಕಾಗದ ಬೆಲೆ ೨ ರೂ.
೨ ಪತ್ನಿ—ಐತಿಹಾಸಿಕ ನಾಟಕ, ಪುಟ ೬೦ ನಜುಸ್ತು ಕಾಗದ, ಬೆಲೆ ೬ ಆಣೆ
೩ ಬಲಿದಾನ—ಬುದ್ಧಕಾಲೀನ ಐತಿಹಾಸಿಕ ಕಾದಂಬರಿ, ೨೫೦ ಪುಟ ಬೆಲೆ ರೂ ೧-೪-೦
೪ ಎಚ್ಚಮ್ಮ ನಾಯಕ—ವಿಜಯನಗರಕ್ಕೆ ಸಂಬಂಧಿಸಿದ ಕಥಾನಕವು ೧೨೨ ಪುಟ ಬೆಲೆ ೫ ಆಣೆ
೫ ಅಮಾತ್ಯ ನಂದಿನಿ—ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ, ೩೦೦ ಪುಟ ಬೆಲೆ ರೂ ೧-೮-೦

ವಿಳಾಸ—ಶ್ರೀ ಶೇಷಾಚಲ ಪ್ರೆಸ್,
ಪೋ. ಆನಂದವನ (ಸಾವೇರಿ) ಧಾರವಾಡ

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೆಟ್ಟಿಗೆಗಳ ಬೀಜ, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು.



Crown Rubber Stamp Co, Balmat Road, MANGALORE
Includ by the Mysore Govt Stores Purchase Committee in the list of approved firms

ಶ್ರೀ ರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್, ಉಡುಪಿ.

ಬ್ರಾಂಚ್—ಕೊಡಿಯಾಲಬೈಲು ಮಹಾತ್ಮಾಗಾಂಧಿ ರೋಡು, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು,
ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ
ಅನುಕೂಲ ಹಾಗೂ ಕೇಂದ್ರಸ್ಥಳ ಎಚ್. ರಾಮಚಂದ್ರನಾಯಕ್, ಪ್ರೊಪ್ರೈಟರ್

IN MATTERS OF LOVE

MAN DOES NOT ATTRACT MAN
WOMAN DOES NOT ATTRACT WOMAN
BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY

The Canara Banking Corporation Limited

(Incorporated in British India)

ESTD 1906

ದಾರಿ ಹೋಕನ ಡೈರಿ

(೨ನೆ ಪುಟದಿಂದ)

ಮೈಸೂರಿನ ಗಡಿಯ ವರೆಗೆ ರೈಲ್ವೆಯನ್ನು ತರಲು ಮೈಸೂರಿನ ದಿವಾನರು ಸಿದ್ಧರಿದ್ದಾರೆ. ಸರಕಾರವು ಇಷ್ಟರ ವರೆಗೆ ದಕ್ಷಿಣ ಕನ್ನಡದಿಂದ ಹಣವನ್ನು ಎತ್ತಿದ ಹೊರತು ಅದಕ್ಕೆ ರೈಲ್ವೆಯಿಗೆ ನಾಲ್ಕಾಣೆಯಷ್ಟರ ಪ್ರಯೋಜನವೂ ದೊರೆತಿಲ್ಲ. ಈಗಲಾದರೂ ಪ್ರಾಂತೀಯ ಸರಕಾರವು ಕೇಂದ್ರ ಸರಕಾರವನ್ನು ಒತ್ತಾಯಪಡಿಸಿ ದಕ್ಷಿಣ ಕನ್ನಡದಲ್ಲಿ ರೈಲ್ವೆ ಲೈನು ಸ್ಥಾಪಿಸುವಂತೆ ನೋಡಬಾರದೇಕೆ? ಈ ಕುರಿತು ಇಷ್ಟರಲ್ಲೇ ದಿವಾನರೂ ಡಾಕ್ಟರ್ ಸುಬ್ಬರಾಯನ್ ಪ್ರಯತ್ನ ನಡೆಸಿರುವುದು ತಿಳಿದಿದೆ. ಮದ್ರಾಸಿನ ಪ್ರಧಾನ ಮಂತ್ರಿಗಳೂ ಈ ಸಂಬಂಧವಾಗಿ ತನ್ನಿಂದ ಕೂಡಿದ ಪ್ರಯತ್ನ ಮಾಡಲಿರುವರಂತೆ.

೦೦೦ ೦೦೦ ೦೦೦

ದಕ್ಷಿಣಕನ್ನಡ ಕಾಂಗ್ರೆಸು ಯಾರ ಪ್ರತಿನಿಧಿತ್ವವನ್ನು ಪಡೆದಿಲ್ಲ. ಒಬ್ಬನೆ ಒಬ್ಬ ಮಹಾಶಯರ ಕೈಗೊಂಬೆಯದು. ಆದುದರಿಂದ ದಕ್ಷಿಣಕನ್ನಡ ಜಿಲ್ಲೆಯ ಪರವಾಗಿ ಕಾಂಗ್ರೆಸಿನ ಅಭಿಪ್ರಾಯ ಜನಾಭಿಪ್ರಾಯವಲ್ಲ. ನಿಜವಾದ ಜನಾಭಿಪ್ರಾಯ ಪಡೆಯಬೇಕಾದರೆ ನನ್ನನ್ನು ಆಮಂತ್ರಿಸಿ ಭೆಟಿ ಕೂಡಬೇಕೆಂದು ನನಗೂ ವೈಸರಾಯರಿಗೊಂದು ತಂತಿಬಿಡವ ಮನಸ್ಸಾಗಿದೆ. ತಂತಿ ಕಳುಹಿಸಿದವರನ್ನೆಲ್ಲಾ ವೈಸರಾಯರು ಕರೆದು ಭೆಟಿಕೊಡುತ್ತಾ ಹೋದರೆ ಅದಕ್ಕೊಂದು ಅಂತ್ಯವೇ ಇರಲಾರದು.

೦೦೦ ೦೦೦ ೦೦೦

ಬ್ರಿಟಿಷ್ ಸರಕಾರವು ಬಹಳ ಕೆಟ್ಟ ಕುಟಿಲ ಧೋರಣೆ ವಹಿಸಿರುವುದೇ? ಅದವಾ ವೈಸರಾಯರೇ ಯಥಾರ್ಥವಾಗಿ ನಿಜವಾದ ಜನಾಭಿಪ್ರಾಯ ಪಡೆಯಲು ಪ್ರಯತ್ನಿಸುತ್ತಿರುವರೋ? ಎಂಬುದೀಗ ಪ್ರಶ್ನೆ. ಲಾರ್ಡ್ ಲಿನ್ಲಿತ್ ಗೋವರು ಎಲ್ಲರ ಅಭಿಪ್ರಾಯ ಕೇಳಿ ಸಮಯ ಕಳೆಯುತ್ತಾ ಹೋದರೆ ಕಾಂಗ್ರೆಸ್ ತಾಳ್ಮೆಗೆಟ್ಟು ಯಾರಿಗೆ ಜನಬೆಂಬಲವಿದೆ? ಯಾರು ನಿಜವಾದ ಜನಪ್ರತಿನಿಧಿಗಳೆಂದು ತೋರಿಸಲು ಬೇರೆ ವಿಧವನ್ನನುಸರಿಸಬೇಕಾದೀತು.

೦೦೦ ೦೦೦ ೦೦೦

ವೈಸರಾಯರೊಡನೆ ಮಾತುಕತೆ ನಡೆಸಲಿಕ್ಕಾದರೂ ಏನಿದೆ? ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆಯಬೇಕು ಇಲ್ಲವಾದರೆ ಹಿಂದೂಸ್ಥಾನವು ಬ್ರಿಟಿಷರಿಗೆ ಸಹಾಯ ನೀಡಲಾರದೆಂದು ಕಂಠೋಕ್ತವಾಗಿ ಹೇಳಿದ್ದಾರೆ. ಶ್ರೀ ಸುಭಾಸಚಂದ್ರರು ನಾಗಪುರದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಪರಿಷತ್ತಿನ ಅಧ್ಯಕ್ಷ ಭಾಷಣದಲ್ಲಿ ಶ್ರೀ ಸತ್ಯಮೂರ್ತಿಯವರನ್ನು ವೈಸರಾಯರು ಮಾತಾಡಲು ಕರೆದಿದ್ದಾರೆ. ಸ್ವತಃ ಮಾತಾಡಿದ ಮೇಲ ತಿಳಿಯಬೇಕಲ್ಲವೇ ಏನು ಮಾತನಾಡಲಿದೆಯೆಂದು? ಮೊದಲೇ ದುಡುಕುವಲವೇನ?

೦೦೦ ೦೦೦ ೦೦

ಅಧಿಕಾರ ಮೋಹವೆಂಬುದು ಯಾರನ್ನೂ ಬಿಟ್ಟಿಲ್ಲ. ನಿಸ್ಪೃಹ ಸನ್ಯಾಸಿಯಾದರೂ ಅಧಿಕಾರ, ಧನ ದೌಲತ್ತಿನ ಮೋಹಕ್ಕೆ ಕಟ್ಟಿಬಿದ್ದನೆಂದರೆ ಮತ್ತದನ್ನು ಮರಿದೋಗೆಯುವುದು ಬಹಳ ಪ್ರಯಾಸ ಕೆಲಸ. ಕಾಂಗ್ರೆಸ್ ಮಂತ್ರಿಗಳಿಗೆ ಹಾಗೆಯೇ ಆಗಿದೆಯೆನ್ನಬಹುದು. ಈಗ ಕಾಂಗ್ರೆಸ್ ಮಂತ್ರಿಗಳಿಗೆ ರಾಜಾಜಿಯವರಿಗೂ ಅಧಿಕಾರ ಬಿಟ್ಟುಬರಲು ಮನಸ್ಸಿಲ್ಲ. ಆದುದರಿಂದಲೇ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಗಳೆಂದರೆ ಈಗ ಕಾಂಗ್ರೆಸ್ ಮಂತ್ರಿಗಳ ಸೂತ್ರಚಾಲನೆಯು ಕಳವಾಗಿಹೋಗಿವೆ.

೦೦೦ ೦೦೦ ೦೦೦

ಸೇನಾಬಲದಲ್ಲ ಲೋಕದಲ್ಲಿ ಐದನೇ ಸ್ಥಾನ ಪಡೆದಿದ್ದ ಪೋಲೆಂಡನ್ನು ಎರಡೇ ವಾರಗಳಲ್ಲಿ ಜರ್ಮನ್ ಸೇನೆಯು ಸೋಲಿಸಿಬಿಟ್ಟುದು ದೊಡ್ಡದೊಂದು ವಿಚಿತ್ರ. ಇದಕ್ಕೆ ಪೋಲೆಂಡಿನ ಸೇನಾನಿ ರಾಜ್ಯಭಾರ ಮತ್ತು ಸೈನ್ಯಾಧಿಕಾರಿಗಳ ಹೇಡಿತನವೇ ಕಾರಣ. ಪೋಲಿಶ್ ಸರಕಾರದ ಕುರಿತು ಜನಸಾಮಾನ್ಯರಿಗೆ ಆದರವಿರಲೇ ಇಲ್ಲ. ಪೋಲಿಶ್ ಸೇನಾನಾಯಕರ, ಪ್ರಥಮ ಅಪಜಯದಿಂದಲೇ ಕಂಗೆಟ್ಟು ಸೈನಿಕರನ್ನ ಅವರ ರಾಷ್ಟ್ರಕ್ಕೆ ಬಿಟ್ಟು ತಮ್ಮ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಪಲಾಯನ ಮಾಡಿದರು. ಮುಖ್ಯ ಪೋಲಿಶ್ ಸೇನಾನಾಯಕ ಮಾರ್ಶಲ್ ಸ್ಮಿಗ್ಲಿಯ ವರೆ ಸುದ್ದಿಯೇ ಇಲ್ಲ. ಹೀಗೆ ಪೋಲಿಶ್ ಸೈನ್ಯಾಧಿಕಾರಿಗಳೇ ಪೋಲೆಂಡಿನ ಪತನಕ್ಕೆ ಕಾರಣ. ಇವರನ್ನು ನಂಬಿ ಮುಂದುವರಿದುದೇ ಮಿತ್ರ ರಾಷ್ಟ್ರಗಳು ಮಾಡಿದ ದೊಡ್ಡ ಅವಿವೇಕ.

೦೦೦ ೦೦೦ ೦೦೦

ಜೆಕ್ಕರೀಗ ಜರ್ಮನ್ ಆಳ್ವಿಕೆಯನ್ನು ಗಾಂಧಿಜಿಯವರ ಸತ್ಯಾಗ್ರಹ ವಿಧಾನದಿಂದ ವಿರೋಧಿಸುತ್ತಿರುವಂತಿದೆ. ಅವರು ಜರ್ಮನ್ ಟ್ರಾಮು ಗಾಡಿಗಳಲ್ಲಿ ಸಂಚರಿಸುವುದನ್ನೇ ನಿಲ್ಲಿಸಿಬಿಟ್ಟಿರುವರು. ಇದಕ್ಕಾಗಿ 700ಮಂದಿ ಜೆಕ್ಕರು ಕೈದುಮಾಡಲ್ಪಟ್ಟಿದ್ದಾರೆ. ಮೊದಲಿನ ಜೆಕೋಸ್ಲೋವಾಕಿಯಕ್ಕೆ ಸೇರಿದ ಬೊಹೆಮಿಯ ಮತ್ತು ಮೊರೇವಿಯಗಳಲ್ಲಿ ತೀವ್ರ ಅತೃಪ್ತಿಯುಂಟಾಗಿದೆ. ಅಲ್ಲಿ ಶಾಂತಿ ಸ್ಥಾಪಿಸಲು ಜರ್ಮನ್ ಸೇನೆಯು ಕಳುಹಿಸಲ್ಪಟ್ಟಿದೆ.

೦೦೦ ೦೦೦ ೦೦೦

ಹಿಟ್ಲರರು ಪೋಲೆಂಡಿನ ಮೇಲೆ ಧಾಳಿಯಿಡುವ ಮೊದಲು, ಶಾಂತಿಯನ್ನು ಕಾಪಾಡಬೇಕೆಂದು ಅವರೊಡನೆ ಅತ್ಯಾಗ್ರಹದಿಂದ ಬಹಳ ಕಳಕಳಿಯಿಂದ ಕೇಳಿಕೊಂಡವರಾದರೂ ಅದೆಷ್ಟು ಮಂದಿ! ಪ್ರೆಸಿಡೆಂಟ್ ರೂಸ್‌ವೆಲ್ಟರು, ಜೊರ್ಜ ಚಕ್ರವರ್ತಿಗಳು, ಮಹಾತ್ಮಗಾಂಧಿಯವರೇ ಮೊದಲಾದ ಮಹಾ ಪುರುಷರು ಮಾಡಿಕೊಂಡ ವಿನಂತಿಗೆ ಸೊಪ್ಪು ಹಕಲಿಲ್ಲ. ಹರ್ ಹಿಟ್ಲರರ ಆಗ. ಆರು ವಾರಗಳಲ್ಲೇ ಕಾಲಚಕ್ರವು ಸಂಪೂರ್ಣ ಮಾರ್ಪಟ್ಟಿದೆ. ಈಗ ಹಿಟ್ಲರರು ಶಾಂತಿಗಾಗಿ ಬೊಬ್ಬೆಹಾಕುತ್ತಿದ್ದಾರೆ. ಸಂಧಿಪ್ರಸ್ತಾಪದ ಮಧ್ಯಸ್ಥಿಕೆಗೆ ಯಾರಾದರೂ ಸಿಕ್ಕುವರೋ ಎಂದು ಹುಡುಕುತ್ತಿದ್ದಾರೆ. ಎಂತಹ ವಿಧಿ ವಿಲಾಸ!

೦೦೦ ೦೦೦ ೦೦೦

ಜರ್ಮನರು ರೇಡಿಯೋ ಯುದ್ಧವನ್ನು ಆರಂಭಿಸುವಂತಿದೆ. ಪೋಲೆಂಡಿನಲ್ಲಿ ಈ ಕುತಂತ್ರವನ್ನವರು ನಡಿಸಿ ಜಯಶೀಲರಾಗಿದ್ದಾರೆ. ವಾರ್ಸೋ ಪಟ್ಟಣದ ಸದ್ದಿಯೆಂದು, ತಾವೇ ಪೋಲಿಶ್ ರಾಷ್ಟ್ರಗೀತೆ ಮತ್ತು ಇತರ ಹಾಡುಗಳನ್ನು ಹಾಡಿ ಅನಂತರ, "ಪೋಲಿಶ್ ಸೇನೆಯ ಪರಾಜಿತವಾಯಿತು. ಪೋಲಿಶ್ ಸೇನಾನಾಯಕರು ವಾರ್ಸೋ ಬಿಟ್ಟುಹೋದರು. ವಾರ್ಸೋ ಪಟ್ಟಣವು ಮೂರುಕಡೆಗಳಿಂದ ಆವರಿತವಾಗಿದೆ. ಇನ್ನು ಹೋರಾಡಿ ಫಲವಿಲ್ಲ" ಎಂದೆಲ್ಲಾ ಪ್ರಕಟಗೊಳಿಸಿ ಪೋಲರನ್ನು ಕಂಗೆಡಿಸಿದ್ದರು. ಈಗ ಫ್ರಾನ್ಸಿನಲ್ಲಿಯೂ ಅವರು ಈ ಆಟವನ್ನಾರಂಭಿಸಿರುವಂತಿದೆ. ಪೆರಿಸ್ ಸ್ಟೇಶನಿನಿಂದೆಂದು ಅವರು ನಾನಾ ಸುಳ್ಳು ವಾರ್ತೆ ಪ್ರಚಾರಮಾಡಹತ್ತಿದ್ದಾರೆ.

ದಾರಿಹೋಕ

ಸಿಗ್‌ಫ್ರಿಡ್ ಕೋಟೆಯು [illegible] ಸಂಪೂರ್ಣವಾಗಲಿಲ್ಲ

ಬ್ರಿಟಿಷ್ ವೈಮಾನಿಕನು ಕಂಡ ನೋಟ

ಸಾಹಸಿ ಬ್ರಿಟಿಷ್ ವೈಮಾನಿಕರು ಬಹಳ ಕೆಳಗಿಳಿದು ಹೋಗಿ ಜರ್ಮನರ ಸಿಗ್‌ಫ್ರಿಡ್ ಕೋಟೆಯನ್ನು ಚೆನ್ನಾಗಿ ಪರಿಶೀಲಿಸದಾಗ, ಅದು ಕೆಲವೆಡೆ ಇನ್ನೂ ಸಂಪೂರ್ಣಗೊಳಿಸಲ್ಪಟ್ಟಿಲ್ಲೆಂಬ ಆಶ್ಚರ್ಯಕರ ವಿಷಯವು ತಿಳಿದುಬಂದಿದೆ. ಹಲವು ಕಡೆಗಳಲ್ಲಿ ಹೊಸತಾಗಿ ಅಗೆದು ಹಾಕಿದ ಮಣ್ಣಿನ ರಾಶಿಗಳಿದ್ದುವು. ಆದರೆ ಯಾರೂ ಕೆಲಸಮಾಡುವುದು ತೋರಿಬರಲಿಲ್ಲ. ಒಂದು ಕಡೆ ಕೆಲವರು ಬಣ್ಣದ ಡಬ್ಬಿಹಿಡಿದು ಕೋಟೆಯೊಂದಕ್ಕೆ ಬಣ್ಣ ಹಚ್ಚುವ - ಮರೆಯಿಸುವ ಕೆಲಸಮಾಡುತ್ತಿದ್ದರು. ಅವರು ವಿಮಾನಗಳನ್ನು ಕಂಡು ದಂಗುಬಡೆದು ಚಲಿಸದಾದರು. ಈ ವೈಮಾನಿಕರು ಹಲವು ಹಳ್ಳಿಗಳನ್ನು ಹಾದುಹೋದರೂ ಒಬ್ಬನೇ ಒಬ್ಬ ಹಳ್ಳಿಗನಾದರೂ ಅವರ ಕಣ್ಣಿಗೆ ಬೀಳಲಿಲ್ಲ. ರಸ್ತೆಗಳೆಲ್ಲಾ ನಿರ್ಜನವಾಗಿದ್ದುವು. ಈ ವಿಮಾನಗಳ ಮೇಲೆ ಯಾರೂ ಗುಂಡೆಸೆಯಲಿಲ್ಲ. ತಮ್ಮ ಕೋಟೆಗಳ ಹಿಂಬದಿಯ ರಹಸ್ಯಗಳನ್ನು ಮರೆಮಾಡಲು ಜರ್ಮನರೇನೂ ಪ್ರಯತ್ನಮಾಡುತ್ತಿರುವಂತೆ ತೋರಲಿಲ್ಲ. ಹಳ್ಳಿಗಳ ಹೊರಗಣ ಗದ್ದೆಗಳಲ್ಲಿ ದೊಡ್ಡ ದೊಡ್ಡ ದಿನ್ನೆ ಹೊಂಡ, ಕಾಂಕ್ರೀಟ್ ಬರುಟು ಮತ್ತು ಕಟ್ಟಡಗಳನ್ನು ಕಂಡು ವೈಮಾನಿಕರು ಆಶ್ಚರ್ಯಪಟ್ಟರು. ಇವು ನಕಲಿ ಹಳ್ಳಿಗಳಿರಬಹುದೆಂದು ವೈಮಾನಿಕರ ಊಹೆ. ಬ್ರಿಟಿಷ್ ವೈಮಾನಿಕರು ಗುಪ್ತವಾದೊಂದ ಸ್ಥಳದಲ್ಲಿ ತಮ್ಮ ವಿಮಾನ ನಿಲಯವನ್ನು ಸ್ಥಾಪಿಸಿ ಪ್ರತಿದಿನವು ಸಿಗ್‌ಫ್ರಿಡ್ ಕೋಟೆಗಳ ಮತ್ತು ಅವುಗಳಾಚೆಯ ವೈರಿಪ್ರದೇಶಗಳ ಮೇಲೆ ಹಾರಿ ಫೋಟೋ ತೆಗೆದುಕೊಂಡು ಬರುತ್ತಿದ್ದಾರೆ. 100 ಅಡಿ ಎತ್ತರದಿಂದ ಸಿಗ್‌ಫ್ರಿಡ್ ಕೋಟೆಯ ಭಾವಚಿತ್ರಗಳನ್ನು ಕೆಲವುಮಂದಿ ವೈಮಾನಿಕರು ತೆಗೆದಿರುತ್ತಾರೆ. ಲಕ್ಸೆಂಬರ್ಗಿನ ಉತ್ತರದಲ್ಲಿ ಬೆಲ್ಜಿಯಮಿನ ಎಲ್ಲೆಯ ಪ್ರದೇಶವನ್ನು ಜರ್ಮನರು ಭದ್ರಪಡಿಸುತ್ತಿದ್ದಾರೆ. ಇಲ್ಲಿ 300 ಅಡಿ ಎತ್ತರದ ಕಾಂಕ್ರೀಟ್ ಕೋಟೆಯೊಂದರಡಿಯಲ್ಲಿ, ವೈರಿಗಳ ಮೇಲೆ ಪ್ರಯೋಗಿಸಲು ವಿಷವಾಯು ಸಂಗ್ರಹಿಸಲ್ಪಟ್ಟಿದೆಯೆಂದು ನಂಬಲಾಗಿದೆ.

ಜರ್ಮನರ ಯುದ್ಧದ ಹಂಚಿಕೆ.

ಫ್ರೆಂಚ್ ಸೇನೆಯು ಸಾರ್ ಬ್ರುಕೆನಿನ ಮಾರ್ಗವಾಗಿ ಮುಂದೊತ್ತುವಾಗ ಜರ್ಮನರು ಇನ್ನು ಮುಂದೆ ಹಚ್ಚು ಸಮಯ ತಾಳಿಕೊಂಡು ಸುಮ್ಮನಿರಲಾರರು. ಆದುದರಿಂದ ಅವರು [illegible] ಬೇಗನೆ ಪ್ರಬಲವಾಗಿ [illegible] ಯುದ್ಧವು ನಡೆಯ[illegible] ಕನ್‌ಸ್ಟೆನ್ಸ್ ಸರೋವರದಿಂದ [illegible] ವರೆಗಣ ರೈನ್ ನದಿ ಸ್ರ[illegible] ನರು ಅತಿ ಹೆಚ್ಚಿನ ಸಂ[illegible] ತ್ತಿರುವರು. ರೈನ್ ನದಿ[illegible] ಬಳಿ 16 ಮೈಲುಗಳ ವರೆಗಿ[illegible] ಜನರೆಲ್ಲಾ ಬಿಟ್ಟು ಹೋ[illegible] ಜರ್ಮನ್ ಪಹರೆಗಾರ [illegible] ಸೇನೆಯು ಎಲ್ಲಿ ದಾಟ[illegible] ವನ್ನು ಎಡೆಬಿಡದೆ ಸ[illegible] ನರಾಗಿರುವರು. [illegible] ಪ ಯುನ್ನವ ಪರಿಣಾಮ[illegible] ವನ್ನು ಜರ್ಮನ [illegible] ಸುತ್ತಿದೆ. ಅದು ನಿರ[illegible] ಪಶ್ಚಿಮ ರಣರಂಗ[illegible] ಸಮರ ನಡೆಯಲಿರುವುದು[illegible] ದ ಸಿದ್ಧತೆಯನ್ನು ಜರ್ಮ[illegible] ತ್ತಿರುವರು.

THE [illegible]US

DEFORMITIES ARTIFICIAL LIMBS SPLINTS BELTS [illegible] HOSPITAL

K. CH[illegible] & CO
SANDHURST [illegible] BOMBAY 4

ಯೈನ್ ನದಿ ಪ್ರದೇಶದಿಂದ [illegible] ನರು ಮುಂದೊತ್ತುವರು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ

ಹಿಂದೀ ಮುಖಂಡರ [illegible] ವೈಸರಾಯರ ಬೇಟಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಇದೇ ತಾ 7ನೇ ಅಪರಾಹ್ನ ಸೇರಿತು. ಮಹಾತ್ಮ ಗಾಂಧಿಯವರು ಹಾಜರಿದ್ದು ವೈಸರಾಯರಿಗೂ ತನಗೂ ನಡೆದ ಮಾತುಕತೆಗಳ ವಿಷಯವನ್ನು ತಿಳಿಸಿದರು. ತಾ 8ರಲ್ಲೂ ಸಭೆಸೇರಿ ಆಲೋಚಿಸಿ ತಾ 9ರಲ್ಲಿ ವರ್ಕಿಂಗ್ ಕಮಿಟಿಯವರು ಆಲ್ ಇಂಡಿಯ ಕಾಂಗ್ರೆಸ್ ಕಮಿಟಿಯ ಮುಂದಿಡಲು ತಯಾರಿಸಿದ ನಿರ್ಣಯಗಳ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ. 'ಯುದ್ಧವು ಲೋಕದಲ್ಲಿ ಮತ್ತು ಹಿಂದೂಸ್ಥಾನದಲ್ಲಿ ಅತ್ಯಂತ ವಿಷಮ ಪರಿಸ್ಥಿತಿಯನ್ನುಂಟುಮಾಡಿದೆ. ಈ ಸಂದಿಗ್ಧ ಸಮಯದಲ್ಲಿ ಕಾಂಗ್ರೆಸಿನ ನಿರೂಪಣೆ ಮತ್ತು ತತ್ವಗಳ ದೃಷ್ಟಿಯಿಂದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಹಿಂದೀಯರ ವಹಿಸಬೇಕಾದ ಧೋರಣೆಯನ್ನು ನಿಶ್ಚೈಸಿರತ್ತಾರೆ. ಹಿಂದೀ ಜನತೆಯ ಸಂಪೂರ್ಣ ಸ್ವಾತಂತ್ರ್ಯ, ಅಲ್ಪ ಸಂಖ್ಯಾಕರ ನ್ಯಾಯವಾದ ಹಕ್ಕುಬಾಧ್ಯತೆಗಳನ್ನೆತ್ತಿ ಹಿಡಿದು ಹಿಂದೂದೇಶದಲ್ಲಿ ಸ್ವತಂತ್ರ ಪ್ರಜಾಸತ್ತಾತ್ಮಕ ಸರಕಾರವನ್ನು ಸ್ಥಾಪಿಸುವ ಉದ್ದೇಶದಿಂದ ಕಾಂಗ್ರೆಸು ಪ್ರೇರಿತವಾಗಿದೆ. ಅದು ಶಾಂತರೀತಿಯಿಂದ ಹೋರಾಟ ನಡಿಸಿ ಹಿಂಸಾತ್ಮಕ ಯುದ್ಧವನ್ನು ಭೀಕರವಾಗಿ ಕಂಡು ಅದು ನಾಗರಿಕತೆ ಮತ್ತು ಪ್ರಗತಿಗೇನೇ ವಿರೋಧವಾದುದೆಂಬ ಅಭಿಪ್ರಾಯಪಡುತ್ತದೆ. ವಿಶೇಷವಾಗಿ ಸಾಮ್ರಾಜ್ಯ ಶಾಹಿಯು ನಡಿಸುವ ಯಾವ ಯುದ್ಧಕ್ಕಾದರೂ ಕಾಂಗ್ರೆಸು ತನ್ನ ವಿರೋಧವನ್ನು ವ್ಯಕ್ತಗೊಳಿಸಿದೆ. ಆದರೂ ಬ್ರಿಟಿಷ್ ಸರಕಾರವು ಹಿಂದೀಯರ ಸಮ್ಮತಿ ವಿನಹ ಹಿಂದೂದೇಶವನ್ನು ಯುದ್ಧಕ್ಕೆಳೆದು ಪ್ರಾಂತಿಕ ಸರಕಾರಗಳ ಅಧಿಕಾರದ ಮೇಲೆ ಆಕ್ರಮಣಮಾಡುವ ಕಾನೂನುಗಳನ್ನು ಮಾಡಿದೆ. ಈ ಕುರಿತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಅವಸರದ ಧೋರಣೆಯನ್ನೇನೂ ವಹಿಸುವುದಿಲ್ಲ. ಬ್ರಿಟಿಷ್ ಸರಕಾರದ ಯುದ್ಧ ಮತ್ತು ಶಾಂತಿಯ ಉದ್ದೇಶಗಳೇನೆಂಬುದು ಸ್ಪಷ್ಟವಾಗಬೇಕಾಗಿದೆ. ಯುದ್ಧದ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಹೊರಡಿಸಿರುವ ಹೇಳಿಕೆಯನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಒಪ್ಪುತ್ತದೆ. ಕಮಿಟಿಯು ಫ್ಯಾಸಿಸ್ಟ್ ಮತ್ತು ನಾಜಿ ಆಕ್ರಮಣವನ್ನು ನಿಷೇಧಿಸುವಾಗ ಸಾಮ್ರಾಜ್ಯ ಶಾಹಿಯ ಅಧಿಕಾರವೂ ಕೊನೆಗೊಂಡು ಲೋಕದ ಸಂಬಂಧಿತ ರಾಷ್ಟ್ರಗಳೆಲ್ಲಾ ಸ್ವಾತಂತ್ರ್ಯ ಪಡೆಯಬೇಕೆಂದು ನಿರ್ಧರಿಸುತ್ತದೆ. ವಿಶೇಷವಾಗಿ ಹಿಂದೂದೇಶವನ್ನು ಸ್ವತಂತ್ರರಾಷ್ಟ್ರ ನಿರೂಪಿಸಿ, ಹಚ್ಚಿನ ಸ್ವಾತಂತ್ರ್ಯವನ್ನು ಈಗಣ ಆಡಳಿತದಲ್ಲೇ ಕೊಡಬೇಕು. ಈ ಕುರಿತು ಬ್ರಿಟಿಷ್ ಸರಕಾರವು ಬೇಗನೆ ತನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸುವುದೆಂದು ಕಮಿಟಿಯು ನಂಬುತ್ತದೆ. ಹಿಂದೀ ಸ್ವಾತಂತ್ರ್ಯವು ಪ್ರಜಾಸತ್ತಾತ್ಮಕ ಐಕ್ಯದ ಮೇಲೆ ಆಧರಿಸಿಕೊಂಡಿರಬೇಕು. ಆದರಲ್ಲಿ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳು ಸಂಪೂರ್ಣವಾಗಿ ಅಂಗೀಕರಿಸಲ್ಪಡಬೇಕೆಂದು ಕಮಿಟಿಯು ಪುನಹ ನಿರೂಪಿಸುತ್ತದೆ.' ಈ ಠರಾವು ಇದೇ ತಾ 9ರಲ್ಲು ವಾರ್ಧದಲ್ಲಿ ಸೇರಿದ ಆಲ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಮಂಜೂರಾಗಿದೆ.

ಕಾಂಗ್ರೆಸಿನ ಅಧಿವೇಶನ ಮುಂದುವರಿಸಲ್ಪಟ್ಟಿತು

ಪ್ರಕೃತದ ಅಸ್ಥಿರ ರಾಜಕೀಯ ಪರಿಸ್ಥಿತಿಯ ದೃಷ್ಟಿಯಿಂದ ಬಿಹಾರಿನ ರಾಜನಗರದಲ್ಲಿ ಬರುವ ದಶಂಬರದಲ್ಲಿ ಜರಗಲಿದ್ದ ಕಾಂಗ್ರೆಸಿನ ಅಧಿವೇಶನವನ್ನು ಬರುವ ಮಾರ್ಚ ತಿಂಗಳಿಗೆ ಮುಂದುವರಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಿರ್ಧರಿಸಿದ್ದಾರೆ. ಅಗತ್ಯ ಬಿದ್ದರೆ ವಿಶೇಷ ಅಧಿವೇಶನವೊಂದು ದಶಂಬರದಲ್ಲಿ ಜರಗಲಿರುವುದು.

ವೈಸರಾಯರ ಮಾತುಕತೆ

ವೈಸರಾಯರು ಡಿಲ್ಲಿಯಲ್ಲಿ ಹಿಂದೀ ಮುಖಂಡರೊಡನೆ ಇನ್ನೂ ಮಾತುಕತೆ ನಡೆಸುತ್ತಲೇ ಇದ್ದಾರೆ. ಹಿಂದೂ ಮಹಾಸಭೆಯ ಪ್ರೆಸಿಡೆಂಟರಾದ ಸಾವರ್ಕರರೂ, ಶ್ರೀ ಸುಭಾಸಚಂದ್ರ ಭೋಸರೂ, ಬಂಗಾಳದ ಪ್ರಧಾನ ಮಂತ್ರಿಗಳೂ, ಮದ್ರಾಸಿನ ಸರ್. ಏ. ಟಿ. ಪನ್ನೀರ್ ಸೆಲ್ವಮರೂ, ಡಾಕ್ಟರ್ ಅಂಬೇಡ್ಕರರೇ ಮೊದಲಾದವರೂ ವೈಸರಾಯರೊಡನೆ ಮಾತಾಡಲು ಆಮಂತ್ರಿತರಾಗಿರುವರ. ಮಂದ ಪಕ್ಷೀಯರ ಪರವಾಗಿ ಶ್ರೀ ಎ. ಎನ್. ಸಪ್ರುಗಳು ಆಮಂತ್ರಿಸಲ್ಪಟ್ಟಿದ್ದಾರೆ. ಹೀಗೆ ಪ್ರತಿಯೊಂದು ಪಕ್ಷ ಮತ್ತು ಜಾತೀಯ ಸಂಸ್ಥೆಗಳ ಪ್ರತಿನಿಧಿಗಳನ್ನು ವೈಸರಾಯರು ಕರೆದು ಮಾತಾಡುವ ನಿರ್ಧಾರ ಮಾಡಿರುವಂತಿದೆ.

"ಕಾಂತಿ"

[illegible]ಲೆಟ್ ಸೋಪ್

[illegible]ರ ಅಚ್ಚುಮೆಚ್ಚಿನದಾಗಿದೆ.

ಹೀಗಿರುವಾಗ ನೀವೂ ಇದನ್ನೇ ಏಕೆ ಉಪಯೋಗಿಸಬಾರದು?

•

ಅತಿ ಕಡಿಮೆ ಕ್ರಯಕ್ಕೆ ಅತ್ಯುತ್ತಮ ಟ್ಯೊಲೆಟ್ ಸೋಪೆಂದರೆ ಇದೊಂದೇ.

ಎಲ್ಲೆಲ್ಲೂ ಮಾರಲ್ಪಡುತ್ತದೆ.

82

NAVAYUGA ENTERPRISE Ltd.,

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್.

ಉಡುಪಿಯ ಕೆಲವು ಸದ್ಗೃಹಸ್ಥರು ಪ್ರೊಮೋಟರರಾಗಿ ಸೇರಿ 'ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್' ಎಂಬ ಹೊಸ ಲಿಮಿಟೆಡ್ ಸಂಸ್ಥೆಯೊಂದನ್ನು ಸ್ಥಾಪಿಸಿರುತ್ತಾರೆ. ತಾ **28 9-39**ರಲ್ಲಿ ಈ ಸಂಘವು ರಿಜಿಸ್ಟ್ರಿಯಾಗಿ ಇನ್ ಕೋರ್ಪರೇಶನ್ ಸರ್ಟಿಫಿಕೇಟು ಪಡೆದಿರುತ್ತದೆ. ಪತ್ರಿಕೆ, ಪುಸ್ತಕ ಮೊದಲಾದುವನ್ನು ಪ್ರಕಟಿಸುವುದು, ಅದಕ್ಕೆ ಬೇಕಾದ ಛಾಪಖಾನೆ ಮತ್ತು ಅದಕ್ಕೆ ಸಂಬಂಧಿಸಿದ ವಹಿವಾಟ ನಡೆಸುವುದು ಈ ಕಂಪೆನಿಯ ಪ್ರಥಮ ಉದ್ದೇಶವಾದರೂ ಸರ್ವಸಾಮಾನ್ಯವಾಗಿ ಇತರ ಎಲ್ಲಾ ತರದ ಉದ್ಯಮ, ಏಜನ್ಸಿ, ಕೈಗಾರಿಕೆ, ವ್ಯಾಪಾರ ವ್ಯವಹಾರಗಳನ್ನು ಈ ಕಂಪೆನಿಯು ಕೈಕೊಂಡು ನಡೆಸಬಹುದು. ಉಡುಪಿಯಲ್ಲಿ ಜನ್ಮತಾಳಿ ಕರ್ನಾಟಕದಲ್ಲೆಲ್ಲಾ ವ್ಯಾಪಿಸಿರುವ ಹಲವು ಲಿಮಿಟೆಡ್ ಕಂಪೆನಿಗಳಂತೆ ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್ ಕೂಡಾ ಜನಪ್ರೋತ್ಸಾಹ ದೊರೆತು ಬೆಳೆದಂತೆ, ಇಡೀ ಕರ್ನಾಟಕವನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿ ದುಡಿಯುವ ಉದ್ದೇಶವುಳ್ಳದಾಗಿದೆ ಎಂಬುದು ಸಂತೋಷಕರವಿದೆ.

ರಾಜಧಾನಿಯಲ್ಲಿ ದಸರಾ ಮಹೋತ್ಸವ.

ಫೋನ್ ನಂ **406**

ಗಾರ್ಡನ್ ಹೋಟೆಲ್

ಬ್ರಾಹ್ಮಣ ಭೋಜನಶಾಲಾ ಮತ್ತು ವಸತಿ ಗೃಹ,

ದೊಡ್ಡಗಡಿಯಾರದ ಎದುರು, ಮೈಸೂರು

ಆಧುನಿಕ ಸೌಕರ್ಯ, ಅಂದವಾದ ರೂಮುಗಳು, ರುಚಿಕರವಾದ ಭೋಜನ
ಮೈಸೂರಿನಲ್ಲಿ ನಡೆಯತಕ್ಕ ದಸರಾ ಮಹೋತ್ಸವಕ್ಕೆ ಪರಸ್ಥಳಗಳಿಂದ
ಬರುವ ಮಹನೀಯರುಗಳಿಗೂ,
ವ್ಯಾಪಾರಸ್ಥರಿಗೂ, ಅರಮನೆ, ಪೋಸ್ಟಾಫೀಸು, ರೇಸ್‌ಕೋರ್ಸ
ಮತ್ತು ಎಲ್ಲಾ ವ್ಯವಹಾರಸ್ಥಳಗಳಿಗೂ, ಸಮೀಪವಿದ್ದು
ವಿಶಾಲವಾದ ಕಾಂಪೌಂಡಿನಲ್ಲಿ, ಅಂದವಾದ ಗಾರ್ಡನಿನಲ್ಲಿ
ರೇಡಿಯೋ ಸಂಗೀತದಿಂದ ನೂತನ ಏರ್ಪಾಡುಗಳಿಂದ
ಏರ್ಪಡಿಸಿದ ಸಿಂಗಲ್ ಮತ್ತು ಫ್ಯಾಮಿಲಿ ರೂಮುಗಳು,
ಫರ್ನೀಚರ್ ಸಹಿತ ದೊರೆಯುತ್ತದೆ

--- ಇದಕ್ಕೆ ಸೇರಿದ ಬ್ರಾಂಚ್ ---

ಉಡುಪಿ ಆನಂದ ಭವನ ರೆಸ್ಟೋರೆಂಟ್ ಫೋನ್ ನಂ **347**
ದೊಡ್ಡ ಗಡಿಯಾರದ ಎದುರು, ಮೈಸೂರು,
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು
ಕೃಷ್ಣರಾಜಸಾಗರ ರೆಸ್ಟೋರೆಂಟ್, ಬೃಂದಾವನ

ವಿ ಸೂ — ವಿಜಯ ದಶಮಿದಿನ ಶ್ರೀಮನ್ಮಹಾರಾಜರವರ ಮೆರವಣಿಗೆ ನೋಡಲು ಸೀಟಿನ ಅನುಕೂಲತೆಗಳನ್ನು ಮುಂಚಿತವಾಗಿ ತಿಳಿಸಿದ್ದಲ್ಲಿ ಏರ್ಪಡಿಸಲಾಗುತ್ತದೆ

ಕೆ ಗುರುರಾಜಾಚಾರ್,
ಪ್ರೊಪ್ರೈಟರ್

ಬಿಲ್ಲವರ ಸಂಘಗಳ ಕೇಂದ್ರಸಮಿತಿ ಮುಂಬಾಯಿ

ಈ ಮೇಲಿನ ಕಮಿಟಿಯಲ್ಲಿ ಪ್ರತಿನಿಧಿತ್ವವುಳ್ಳ ಸಂಸ್ಥೆಗಳಾದ ಬಿಲ್ಲವರ ಅಸೋಸಿಯೇಶನ್ ವಿದ್ಯಾದಾಯಿನಿ ಸಭಾ ದಾದರ್, ಬಿಲ್ಲವರ ಚಾರಿಟೆಬಲ್ ಸಂಘ, ಕೆನರಾ ಬಿಲ್ಲವರ ಅನಾಥ ಸಂಘ ಮತ್ತು ಬಿಲ್ಲವ ಯುವಕ ಸಂಘ ಇವುಗಳ ನೇತೃತ್ವದಲ್ಲಿ ಪೂಜ್ಯ ಬ್ರಹ್ಮಶ್ರೀ ನಾರಾಯಣ ಗುರುದೇವರ ಪುಣ್ಯಸ್ಮರಣೆಯ ಮಹಾಸಮಾರಾಧನೆ ದಿನವನ್ನು ಅಕ್ಟೋಬರ್ ತಿಂಗಳ ತಾ 22ನೇ ರವಿವಾರ ಅಪರಾಹ್ಣ ಘಂಟೆ 3½ ಕ್ಕೆ ಕೋಟೆಯೊಳಗಣ ಟೋಪಿ ಬಜಾರ್ ರಸ್ತೆಯಲ್ಲಿರುವ ಮಾರ್ವಾಡಿ ವಿದ್ಯಾಲಯದಲ್ಲಿ ಶ್ರೀಮಾನ್ ಜೆ. ಆರ್. ನಾಯ್ಡು ಬಿ. ಎ. ಎಲ್. ಎಲ್. ಬಿ. (ಅಡ್ವೊಕೇಟ್) ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಗುವುದು.

ಕುಂದಾಪುರ—ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯ ಸಭೆಯು ಶ್ರೀ ಎ. ಕೃಷ್ಣರಾಯ ಕೊಡ್ಗಿಯವರ ಅಧ್ಯಕ್ಷತೆಯಲ್ಲಿ ತಾ 9 10 39ರಲ್ಲಿ ಕಮಿಟಿ ಆಫೀಸಿನಲ್ಲಿ ಜರಗಿತು. [illegible] ವಿಚಾರವ ನಂತರ [illegible] ಹೋಬಳಿಯ [illegible] ಸುಮಾರು 40 ಮಂದಿ [illegible] ಬಾಲಕಿಯರಿಗೆ [illegible] ಪತ್ತೆ [illegible] ಗಳ ಅಧ್ಯಕ್ಷತ್ವದಿಂದ [illegible] ಕಾರ್ಯಕ್ರಮಗಳನ್ನು ನಮ್ಮ ಕಮಿಟಿಯಿಂದ ಕೊಡಬೇಕೆಂದು ನಿರ್ಣಯಿಸಲಾಯಿತು.

ಜಿಲ್ಲಾ ಸಮಾಚಾರ

ಮಂಗಳೂರು

ಸಂ ಎ ತಾ 9 10 39

ಲೇಬರ್ ಯೂನಿಯನುಗಳ ಸಂಯುಕ್ತ ಮಂಡಲಿ—ಜಿಲ್ಲೆಯಲ್ಲಿನ ಬೀಡಿ, ಪ್ರೆಸ್, ಸಂಗ್ಹ ಮತ್ತು ಮೋಟಾರ್ ಯೂನಿಯನುಗಳ ಕಾರ್ಯಕಾರಿ ಮಂಡಲಿಗಳ ಸದಸ್ಯರು ಕಳೆದ ತಾ 3ನೇ ಸ ಯಂಕಾಲ ಶ್ರೀ ಎಸ್ ಎ ಸಾಲ್ಡಾನರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನೇಲಸ ಎಲ್ಲಾ ಯೂನಿಯನುಗಳನ್ನು ಒಂದುಗೂಡಿಸಿ ಒಂದು ಸಂಯುಕ್ತ ಯೂನಿಯನನ್ನು ಮಾಡಬೇಕೆಂದು ನಿರ್ಧರಿಸಿದರು ಈ ಬಗ್ಗೆ ಬೇಕಾದ ನಿಬಂಧನೆಗಳನ್ನು ಸಿದ್ಧಪಡಿಸ ನರಿ ಒಂದು ಸನಿ ತಿ ನೇಮಿಸಲ್ಪಟ್ಟಿತು ಶ್ರೀ ಕೇಶವ ಬಾಪುತರು ಈ ಸಮಿತಿಯ ಕನ್ವೀನರಾಗಿ ಆರಿಸಲ್ಪಟ್ಟರೆ

ವಿದ್ಯಾಮಂತ್ರಿಗಳು—ಮದ್ರಾಸ್ ಸರಕಾರದ ವಿದ್ಯಾಂಗದ ಮಂತ್ರಿಗಳಾದ ಮಾನ್ಯ ಸಿ ಜೆ ವರ್ಕಿಯವರು ಕಳೆದ ತಾ. 5ನೇ ಸಾಯಂಕಾಲ ಮಂಗಳೂರಿಗೆ ಚಿತ್ತೈಸಿದವರು ಆ ದಿನ ಸಾಯಂಕಾಲ ಸೆ ಎ ಕಾಲೇಜಿನಲ್ಲಿ ನಡೆದ ಬಹುಮಾನ ವಿತರಣೆಯ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದು ಕಾಲೇಜು ವಿದ್ಯಾಪ್ರಸಾರದಲ್ಲಿ ಮಾಡುತ್ತಿರುವ ಪ್ರಯತ್ನವನ್ನು ಬಹಳವಾಗಿ ಹೊಗಳಿದರ

ಫಲಪುಷ್ಪ ಪ್ರದರ್ಶನ—ನಿನ್ನೆಯ ದಿವಸ ಸಾಯಂಕಾಲ 5 ಘಂಟೆಗೆ ಸರಿಯಾಗಿ ಮೈಸೂರಿನ ದಿವಾನರಾದ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಸಾಹೇಬರು ಗವರ್ನಮೆಂಟ್ ಕಾಲೇಜಿನಲ್ಲಿ ಫಲಪುಷ್ಪಪ್ರದರ್ಶನ ತೆರೆದರು

ಗಾಂಧೀಜಿಯವರ ವರ್ಧಂತಿ—ನಿನ್ನೆಯ ದಿನ ಸಾಯಂಕಾಲ ಮೈದಾನದಲ್ಲಿ ಗಾಂಧೀಜಿಯವರ ವರ್ಧಂತಿಯ ಪ್ರಯುಕ್ತ ಸಭೆ ಸೇರಿತು ಶ್ರೀ ಕೆ ಬಿ ಜಿನರಾಜ ಹೆಗ್ಡೆ ಯಂ ಎಲ್ ಎ (ಕೇಂದ್ರ) ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ ಈಶ್ವರ ಯಂ ಎಲ್ ಎ, ಎ ಬಾಲಕೃಷ್ಣ ರಾವ್, ಜನಾರ್ದನ ಪೈ, ಎಸ್ ಪೊಳ್ಳರೇ ಮೊದಲಾದವರು ಮಹಾತ್ಮರ ಆದರ್ಶ ಜೀವನದ ಕುರಿತು ಭಾಷಣ ಮಾಡಿದರು ಅಧ್ಯಕ್ಷರು ಮಹಾತ್ಮರ ಜೀವನದ ಮುಖ್ಯ ವಿಷಯಗಳನ್ನೆತ್ತಿಕೊಂಡು ಭಾಷಣ ಮಾಡಿದ್ದಲ್ಲದೆ ಮಹಾತ್ಮರಿಗೆ ಭಗವಂತನು ಚಿರಾಯುರಾರೋಗ್ಯವನ್ನು ಕರುಣಿಸಲೆಂದೂ ಬಯಸಿ ಭಾಷಣ ಮಾಡಿದರು ಜಯಘೋಷದೊಂದಿಗೆ ಸಭೆ ಮುಕ್ತಾಯವಾಯಿತ

ಹರಿಜನ ವಾರ ಸಮಾರಂಭ—ತಾ 24 9 39ರಿಂದ 2–10 39ರ ತನಕ ವಿಶೇಷ ಕಾರ್ಯಕ್ರಮದೊಂದಿಗೆ ಜರಗಿತು ತಾ. 30ರಲ್ಲಿ ಕೆನರಾಹೈಸ್ಕೂಲ್ ಹಾಲಿನಲ್ಲಿ ಶ್ರೀ ಮಹಾಬಲ ನೋರ್ಂಡರ ಓದುವಿಕೆಯಿಂದ ಮತ್ತು ಶ್ರೀ N S ಕಿಲ್ಲೆಯವರ ಆರ್ಥ ವಿವರಣೆಯಿತ್ತು

ತಾ 1ರಲ್ಲಿ ಕೂಟರ್ ಪೇಟೆಯಲ್ಲಿ ಸಭೆ ಭಾಷಣಗಳಿದ್ದುವು ತಾ 2ರಲ್ಲಿ ಮೈದಾನದಲ್ಲಿ ಗಾಂಧಿ ಜಯಂತಿ ಆಚರಣೆ ನಡೆಯಿತು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ ಕೆ ವಿಟ್ಠಲ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಶ್ರೀ N S ಕಿಲ್ಲೆ ಕೆ ಆರ್ ಕಾರಂತ್, ಯಂ ಆರ್ ಶಾಸ್ತ್ರಿ. ಗೋಪಾಲಕೃಷ್ಣರಾವ್, ಇವರ ಸಂದರ್ಭೋಚಿತವಾಗಿ ಮಾತನಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು 9ದಿವಸಗಳಲ್ಲಿ ಸುಮಾರು ರೂ 200 ಹಣ ಸಂಗ್ರಹಿಸಲಾಗಿದೆ

ವೈ ಎಸ್ ಎಸ್ ಎ—ಈ ಸಮಿತಿಯ ಆಶ್ರಯದಲ್ಲಿ ಕಳೆದ ತಾ 8–10 39ರಲ್ಲಿ ಗುಬ್ಬಿನಾಬಡೆದಲ್ಲಿ ಮಹಾತ್ಮ ಗಾಂಧಿಯವರ ಜನ್ಮೋತ್ಸವ ಸಮಾರಂಭವು ಶ್ರೀ N S ಕಿಲ್ಲೆಯವರ ಅಧ್ಯಕ್ಷತೆಯಲ್ಲಿ ಜರಗಿತು

ಪ್ರಾರ್ಥನೆಯಿಂದ ಸಭಾಕಾರ್ಯವು ಆರಂಭಗೊಂಡಿತು, ಅನಂತರ ಸಭಿಕರಲ್ಲಿ ಹಲವರು ಮಹಾತ್ಮಾಜಿಯವರ ಜೀವನ ವಿಶಿಷ್ಟತೆಯ ಕುರಿತಾಗಿ ಸುರಸ ಭಾಷಣವಿತ್ತರು, ಅಧ್ಯಕ್ಷರು ತಮ್ಮ ಉಜ್ವಲ ಭಾಷಣದಲ್ಲಿ ಗಾಂಧೀಜಿಯವರ ಜೀವನ ರಹಸ್ಯವನ್ನು ಹೃದಯಂಗಮವಾಗಿ ಮನ ಮುಟ್ಟುವಂತೆ ವಿವರಿಸಿ ಸುದೀರ್ಘ ಭಾಷಣವಿತ್ತರು ಸಮಿತಿಯ ಪರವಾಗಿ ಶ್ರೀ ಎಸ್. ಎಸ್. ಶೆಟ್ಟರು ಧನ್ಯವಾದಗಳನ್ನರ್ಪಿಸಿದ ಬಳಿಕ ಲಘು ಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು ಬುಬ್ಬಿನಾಬಡದ ಮಾಲೀಕರಾದ ಶ್ರೀ. ವಾಸುದೇವ ನಾಯ್ಕರು ಸಮಿತಿಯ ಇಂಥಾ ಕಾರ್ಯಭಾಗಗಳಲ್ಲಿ ತೋರಿಸುವ ಸಹಾನುಭೂತಿ ಸಹಕಾರವು ಶ್ಲಾಘನೀಯವಿದೆ

ಅಳಿಯಸಂತಾನ ಸಮಾಜ ಸುಧಾರಣೆ ಪರಿಷತ್ತು ಪ್ರತಿನಿಧಿ ಚುನಾವಣೆ—ತಾ 5 11 39ನೇ ದಿನ ಮಂಗಳೂರಲ್ಲಿ ಜರಗಲಿರುವ ಜಿಲ್ಲಾ ಅಳಿಯಸಂತಾನ ಪರಿಷತ್ತಿಗೆ ನಮ್ಮ ಮಂಗಳೂರು ತಾಲೂಕಿನಿಂದ ಈ ಮೊದಲು ಆರಿಸಲಾದ ಪ್ರತಿನಿಧಿಗಳ ಪೈಕಿ ಕೆಲವರು ತಮ್ಮ ಪ್ರತಿನಿಧಿತ್ವವನ್ನು ಕೊಡದಿರುವ ಕಾರಣ ಅಂಥವರ ಸ್ಥಾನಗಳಲ್ಲಿ ಬೇರೆಯವರನ್ನು ಆರಿಸುವ ಅಗತ್ಯವಿರುತ್ತದೆ ಆದುದರಿಂದ ತಾ 13 10 39ನೇ ಶುಕ್ರವಾರ ಮಂಗಳೂರು ತಾಲೂಕಿನ ಎಲ್ಲಾ ಜಿಲ್ಲಾ ಬೋರ್ಡುಪಿರ್ಕಾಗಳ ಮತ್ತು ಟೌನಿನ ಪರವಾಗಿ ಪ್ರತಿನಿಧಿ ಚುನಾವಣೆ ಬಗ್ಗೆ ಸಭೆ ಕೂಡಲಿಕ್ಕಿದೆ ಮಹನೀಯರೆಲ್ಲರೂ ಆ ಸಭೆಯಲ್ಲಿ ಭಾಗ ವಹಿಸಬೇಕಾಗಿಯೂ ಉಮೇದ್ವಾರರು ತಮ್ಮ ಪ್ರತಿನಿಧಿ ಫಾರಂನ್ನು ಸಭೆಗೆ ಒದಗಿಸಬೇಕಾಗಿ ಕೂಡ ಈ ಮೂಲಕ ಅಪೇಕ್ಷಿಸಲಾಗಿದೆ ಸಭೆಯು ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರ ಸಭಾಭವನದಲ್ಲಿ ಮಧ್ಯಾಹ್ನ ಘಂಟೆ ಕ್ಕೆ ಜರಗಲಿಕ್ಕಿದೆ

(*Sd*) K Narayana Bhandary
N S Killa
ಮಂಗಳೂರು, 7 10 39

ಜಿಲ್ಲಾ ಪಂಚಾಯತುಗಳ ಪರಿಷತ್ತು—ಈ ಮೊದಲ ತಿಳಿಸಿದಂತೆ ಇಬ್ಬರನ್ನು ಪ್ರತಿನಿಧಿಗಳಾಗಿ ಪಂಚಾಯತ ಬೋರ್ಡಿನವರು ಕಳಿಸುವುದು ಪಂಚಾಯತ ಸಂಘಕ್ಕೆ ನಷ್ಟಕರವಾದ್ದರಿಂದ ಪ್ರೆಸಿಡೆಂಟರೊಬ್ಬರೇ ಡೆಲಿಗೇಟರಾಗಿ ಬಂದರೆ ಸಾಕು, ಸ್ವಂತ ಖರ್ಚಿನಿಂದ ಯಾರೂ ಬರಬಹುದ, ಒಬ್ಬ ಡೆಲಿಗೇಟರ ಖರ್ಚು ಕೊಡ ಗವರ್ನಮೆಂಟಿನಿಂದ ಸೆಂಕ್ಷನ್ ಆಗಬೇಕಾಗಿದೆ ಡೆಲಿಗೇಟರರು ಅವರವರ ಪಂಚಾಯತ ಕ್ಷೇತ್ರಗಳಲ್ಲಾಗತಕ್ಕ ಸಾರ್ವಜನಿಕ ಕೆಲಸಗಳ ರೂಪರೇಖೆಯನ್ನು ತರಬೇಕು. ಡೆಲಿಗೇಟರರು ರೂ 1 ಡೆಲಿಗೇಟ್ ಫೀತೆರಬೇಕು ಎಂದು ಜಿಲ್ಲಾ ಪಂಚಾಯತ ಆಫೀಸರರು ತಿಳಿಸುತ್ತಾರೆ

ಕಾರ್ಕಳ—ಇಲ್ಲಿ ದಕ್ಷಿಣಭಾರತದಲ್ಲಿ ಆಚರಿಸಲ್ಪಡುವಂತೆ ಇಲ್ಲಿಯೂ ಜನಾಬ್ ಎಚ್. ಎಸ್. ಹುಸ್ಸೇನ ಸಾಹೆಬರವರ ಅಧ್ಯಕ್ಷತೆಯಲ್ಲಿ ಸ್ಪರ್ಧೆ, ಮೆರವಣಿಗೆ, ಸಾರ್ವಜನಿಕ ಸಭೆ ಹಿಂದೀ ಪ್ರೇಮಿಗಳ ಭಾಷಣ, ಸಂಗೀತ, ಬಹುಮಾನ ವಿತರಣೆ ಇತ್ಯಾದಿ ಮನೋರಂಜಕ ಮತ್ತು ಬೋಧಪ್ರದ ಕಾರ್ಯಕ್ರಮಗಳೊಂದಿಗೆ ಹಿಂದೀ ಪ್ರಚಾರ ಸಪ್ತಾಹವು ತಾ 1 10 39ರಿಂದ ಆಚರಿಸಲ್ಪಟ್ಟಿತು

ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ತಾ 7 10 39 ರಲ್ಲಿ ಶ್ರೀ ವೆಂಕಟರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಬಿ ವಿ ರಮಣ್ಣ ಬಿ.ಎ.ಎಲ್.ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು

ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ ಪಿ ನರಸಿಂಹ ವೆಂಕಟೇಶ ಶೆಣ್ಯೆಯವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಸಭೆ ಕೂಡಿ, ವಿರಾಮ ಹಂಚುವದ, ಮಹಾತ್ಮರ ಜೀವನ ಮತ್ತು ತತ್ವಗಳ ಕುರಿತ ವಿದ್ವಾನ್ ಶ್ರೀ ಕಮಲ್ ಗಣಪತಿ ರವರ ಭಾಷಣ ಇತ್ಯಾದಿ ಕಾರ್ಯಕ್ರಮದೊಂದಿಗೆ ಗಾಂಧಿ ಜಯಂತಿಯು ಆಚರಿಸಲ್ಪಟ್ಟಿತು

ಮೈಸೂರು ದಿವಾನರಾದ ಸರ್. ಮಿರ್ಜಾ ಎಂ ಇಸ್ಮಾಯಿಲರವರು ತಾ 8 10 39ರ ದಿನ ಸ್ಥಳೀಯ ಲೋಕಲ ಬೋರ್ಡು ಆಸ್ಪತ್ರೆಗೆ ಹೊಂದಿಕೊಂಡು ಹೊಸತಾಗಿ ಕಟ್ಟಿಸಿದ ಹೆರಿಗೆ ಮನೆಯನ್ನು ಸಂದರ್ಶಿಸಿ ಲಘು ಉಪಹಾರವನ್ನು ಮುಗಿಸಿಕೊಂಡು ಮಂಗಳೂರಿಗೆ ಪ್ರಯಾಣಮಾಡಿದರು

ತಾ 30 9 39ರಲ್ಲಿ 'ಶಬರೀ' ಆಶ್ರಮದಲ್ಲಿ ಹರಿಜನ ಬಾಲಕರ ಪಂದ್ಯಾಟ ನಡೆದ ಗೆದ್ದವರಿಗೆ ರೂ. 4 ಬಹುಮಾನ ಕೊಡಲಾಯಿತು ತಾ 1 10 39 ರಲ್ಲಿ ಕಾರ್ಕಳ ಹರಿಜನ ಸೇವಾ ಸಂಘದ ವತಿಯಿಂದ ರೂ 67 12 0 ನಿಧಿ ಸಂಗ್ರಹಮಾಡಲಾಯಿತು ತಾ 2ರಲ್ಲಿ ಶಬರೀ ಆಶ್ರಮದ ಮಕ್ಕಳಿಗೆ ಸಂಘದ ಅಧ್ಯಕ್ಷರಾದ ಶ್ರೀ ಕೆ ಮಹಾಬಲ ಹೆಗ್ಡೆಯವರ ಲೆಕ್ಕಕ್ಕೆ ಭೋಜನವಾಗಿ ಸಂಜೆ ಮೈನ್ ಶಾಲೆಯಲ್ಲಿ ವಕೀಲ ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು, ಭಾಷಣಗಳಿದ್ದುವು

ಉಡುಪಿ

ತಿದ್ದುಪಡಿ—ಕಳೆದ ಸಂಚಿಕೆಯಲ್ಲಿ ಅಜೆಕಾರು ಸಂಘದ ಮಾಜಿ ಅಧ್ಯಕ್ಷರ ಮೇಲಣ ತಪ್ಪು ಸ್ಥಾಪನೆಗಳು ಅಪೀಲಿನಲ್ಲಿ ಪೂರ್ಣ ಗುಣವಾಯಿತೆಂದು ಪ್ರಕಟವಾಗಿತ್ತಷ್ಟೆ. ಆದರೆ ನಾಲ್ಕು ಚಾರ್ಜುಗಳ ಪೈಕಿ ಮೂರರಲ್ಲಿ ಕ್ರಿಮಿನಲ್ ಶಿಕ್ಷೆ ಕಾಯಮಾಗಿ ಒಂದು ಚಾರ್ಜು ಮಾತ್ರ ಬಿದ್ದು ಹೋಯಿತಾಗಿ ತಿಳಿದು ಬರುತ್ತದೆ

ಕ್ರಿಕೆಟ್ ಪಂದ್ಯಾಟ—ಮುನಿಸಿಪಲ್ ಚೇರ್ಮ್ಯಾನ್ ಕಮಿಟಿಯ ಆಶ್ರಯದಲ್ಲಿ ವರ್ಷಂಪ್ರತಿ ನಡೆದು ಬರುತ್ತಲಿದ್ದ ಇಂಟರ್ ಸ್ಕೂಲ್ ಕ್ರಿಕೆಟ್ ಪಂದ್ಯಾಟ ಆರಂಭವಾಗಿದೆ

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿ—ಇದರ ಮಹಾಸಭೆಯು ಇದೇ ತಾ 15ನೇ ಆದಿತ್ಯವಾರ ಮಧ್ಯಾಹ್ನ 2ಗಂಟೆಗೆ ಬಾರಕೂರು ಕಾಂಗ್ರೆಸ್ ಆಫೀಸಿನಲ್ಲಿ ಸೇರುವುದು ಆ ದಿನದ ಮಹಾಸಭೆಯಲ್ಲಿ 1937 1938ರ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ನೋಡಿ ಮಂಜೂರುಮಾಡುವುದು ಮತ್ತು ಇನ್ನಿತರ ಕೆಲವು ಪ್ರಾಮುಖ್ಯ ವಿಷಯಗಳ ಚರ್ಚಿಸಿ ನಿರ್ಣಯ ಮಾಡತಕ್ಕದಿದೆ ಇನ್ನುಮುಂದೆ ತಾಲೂಕು ಕಮಿಟಿಗಳ ಸ್ಥಾನದಲ್ಲಿ ಸರ್ಕಲ್ ಕಮಿಟಿಗಳಾಗುವುದರಿಂದ ಸರ್ಕಲ್ ಕಮಿಟಿಯ ವಿಷಯವಾದ ಮಾಹಿತಿಯನ್ನು ಕೊಡಲಾಗುವುದು ತಾಲೂಕು ಕಮಿಟಿಯ ಸದಸ್ಯರಿಗೆಲ್ಲಾ ನೋಟೀಸು ಕಳಹಿಸಲಾಗಿದೆ ಎಕ್ಸ್ ಆಫೀಸಿಯೋ ಮತ್ತು ಎಲ್ಲಾ ಹಿಂದಿನ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಕಾರ್ಯದರ್ಶಿಯರೂ ಈ ಸಭೆಗೆ ಬರುವಂತೆ ನನ್ನ ಆಗ್ರಹದ ವಿನಂತಿ ಎಂದು ಕಾರ್ಯದರ್ಶಿ ಶ್ರೀ ಬಿ ಗೋಪಾಲಕೃಷ್ಣ ಕಾಮತರು ತಿಳಿಸುತ್ತಾರೆ

ಜಾನುವಾರು ಜಾತ್ರೆ—ಹೆಬ್ರಿ ಸೀತಾನದಿ ರಸ್ತೆಯ ಮಂಗಳೂರು ಆಗುಂಬೆ ರಸ್ತೆಗೆ ಕೂಡುವಲ್ಲಿ ಸೋಮೇಶ್ವರ ಘಾಟಿಯ ಬುಡದಿಂದ ಮೂರು ಮೈಲು ಕೆಳಗೆ ಸೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ಈ ಹಿಂದೆ ಆದ ನಿರ್ಣಯದ ಮೇರೆಗೆ ವರ್ಷಂಪ್ರತಿ ಪೈಕ ಏಕಾದಶಿ ದಿನ ಪ್ರಾರಂಭವಾಗಿ 10 ದಿನಗಳ ತನಕ ಜರಗುವುದು ಈ ವರ್ಷ ಅದು ಇದೇ 1939ನೇ ದಶಂಬರ 22ನೇ ಶುಕ್ರವಾರ ಬೆಳಿಗ್ಗೆ 8ಘಂಟೆಗೆ ಪ್ರಾರಂಭವಾಗುವುದು ಕುಲ್ಯಾಡಿಕ್ಕೆ ಒಂದಜನುದ ರು ವ್ಯಾಪಾರಿಗಳು ಅಲ್ಲಿಯ ಜಾತ್ರೆಯು ಮುಗಿದ ಬಳಿಕ ಅನುಕೂಲವಾಗಿ ಈ ಜಾತ್ರೆಗೆ ಮುಟ್ಟಬಾಗುವಂತೆ 10 ದಿನ ದಾಟಿ ಈ ಜಾತ್ರೆಯು ಪ್ರಾರಂಭವಾಗುವುದು

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರಕುವಂತೆ ಎಲ್ಲಾ ಏರ್ಪಾಡುಗಳನ್ನೂ ಮಾಡಲಾಗುವುದು ಜಾತ್ರೆಯ ಸ್ಥಳವು ಸೀತಾನದಿ ಹೊಳೆಯಿಂದ 2 ಫರ್ಲಾಂಗಿನೊಳಗಿದ್ದು ಹತ್ತಿರವಿರುವ ರಿಜರ್ವ ಕಾಡಿನಲ್ಲಿ ಕೆಲವು ಹುಲ್ಲುಗಾವಲು ದೊರಕುತ್ತದೆ ಜಾತ್ರೆಗೆ ಬರುವ ಜಾನುವಾರುಗಳ ಮೇಲೆ ಈ ವರ್ಷ ಜಾನುವಾರು ಒಂದರ ಒಂದಾಣೆಯಂತೆ ಫೀಸು ವಸೂಲು ಮಾಡಲಾಗುವುದು ಜಾತ್ರೆಗೆ ಬರತಕ್ಕ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದ ಎಣಿಸಲ್ಪಡುವ ಜಾನುವಾರುಗಳ ಬಗ್ಗೆ ಇನಾಮುಗಳನ್ನು ಕೊಡುವ ಯೋಚನೆ ಇರುತ್ತದೆ

ಮೈಸೂರು ದಕ್ಷಿಣ ಕನ್ನಡ ಮ ಇತರ ಎಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ

ಎಂ ವರದರಾಜುಲು ನಾಯುಡು,
ರೆವಿನ್ಯು ಡಿವಿಜನಲ್ ಆಫೀಸರ್,
ಕುಂದಾಪುರ, 29 9 39

ಮೈಸೂರು

ಸ್ವಂ ಬಾ ತಾ. 9 10 39.

ಛಾಯಾಚಿತ್ರ ಅನಾವರಣ—ಮಹಾತ್ಮಾ ಗಾಂಧಿಯವರ 70ನೆಯ ವರ್ಷ ವರ್ಧಂತಿಯನ್ನು ಸಂಸ್ಥಾನದ ಅದ್ಯಂತವೂ ಆಚರಿಸಲಾಯಿತಲ್ಲದೆ, ದಿವಾನ್ ಕಮಿಷನರ್ ಮಿ| ಅಬ್ದುಲ್ ವಾಜಿದ್‌ರವರು, ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜು ಸಂಘದ ಶ್ರಯದಲ್ಲಿ ಮಹಾತ್ಮರ ಭಾವ ಚಿತ್ರ ಅನಾವರಣ ಮಾಡಿ ಅವರ ಸೇವೆ ಮತ್ತು ಗುಣಗಾನ ಮಾಡಿದರು.

ಮೈಸೂರು ದಸರಾ ಮಹೋತ್ಸವಕ್ಕೆ ಇಂಡಿಯ ವೈಸರಾಯರ ಪುತ್ರಿ, ಮದ್ರಾಸ್ ಗೌರ್ನರು ಮತ್ತು ಅವರ ಧರ್ಮಪತ್ನಿ ಮುಂಬೈನಲ್ಲಿರುವ ಇಟಾಲಿಯನ್ ಮತ್ತು ಅಮೆರಿಕನ್ ಕೌನ್ಸಲ್ ಮತ್ತು ಅನೇಕ ಭಾರತೀಯ ಅತಿಥಿಗಳು ಬರುವರು.

ಸಿಯಾ ಸನ್ನಿಗಳ ವಿಚಾರದಲ್ಲಿ ಶಾಂತಿ-ಸ್ಥಾಪನೆ ನಡೆಸಲು ತೊಡಗಿರುವ ಕಾಂಗ್ರೆಸ್ ಮುಂದಾಳುಗಳಾದ ಮೌಲಾನ ಅಬುಲ್ ಕಲಂ ಆಜಾದರವರಿಗೆ ಮೈಸೂರು ದಿವಾನರೊಂದು ಪತ್ರಬರೆದು ಅವರನ್ನು ಹರಸಿದ್ದಾರೆ

ಮುಂದಿನ ಮಾಹೆ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಅಖಿಲ ಭಾರತ ವಿಶ್ವವಿದ್ಯಾನಿಲಯದ ಪ್ರತಿನಿಧಿಗಳ ಒಂದು ಚರ್ಚಾಗೋಷ್ಠಿಯು ಏರ್ಪಡಿಸಲಾಗಿದೆ ಇದರಲ್ಲಿ ಚರ್ಚಿಸಲು ವಿಷಯವನ್ನು ಗೊತ್ತುಮಾಡಲು ಮಿ ಜಿನ್ನಾ ಸರ್ ಮಿರ್ಜಾ, ಡಾ ಸಿ ಆರ್ ರೆಡ್ಡಿ ಮತ್ತು ಪಂ ನೆಹರೂರವರನ್ನು ಕೇಳಿಕೊಳ್ಳಲಾಗಿದೆ

'ನವಯುಗದಲ್ಲಿ'ಹಿಂದ ಇಂಗ್ಲೆಂಡಿನ ಲಂಡನ್ ಪಟ್ಟಣದಲ್ಲಿರ ಮೈಸೂರು ಯುವರಾಜರವರ್ತಿಯಲ್ಲಿ ಯುವರಾಣಿಯವರು ಏನೇ ಉಳಿದವರೆಲ್ಲರೂ(ಶ್ರೀಮದ್ಯುವರಾಣಿ ಮೂರ ಹೆಣ್ಣು ಮಗ್ಗಳೂ, ಸತ್ಯಪ್ರೇಮ ದೇವಿ ಮತ್ತು ಪ್ರಿನ್ಸ್ ಜಯಚಾಮ ರಾಜಪ್ರೊಡೆಯರವರು) ಒಂದು ವಿಶೇಷ ವಿಮಾನದಲ್ಲಿ ಹೊರಟು ತಾ 13ರ ಶುಕ್ರವಾರ ನವರಾತ್ರಿ ಹೊತ್ತಿಗೆ ಮೈಸೂರಿಗೆ ಬರುತ್ತಾರೆ ಇವರ ಆಗಮನದಿಂದ ಮೈಸೂರು ಆನಂದ ಸಾಗರದಲ್ಲಿ ಮುಳುಗಿದೆ

ಕೊಡಗನ್ನು ಮೈಸೂರಿಗೆ ಸೇರಿಸಲು ಎಲ್ಲಾ ಪ್ರಯತ್ನಗಳೂ ಮಾಡಲಾಗುತ್ತಿದೆ ಇವರ ಬಗ್ಗೆ ನಾಳೆ ಒಂದು ಸಭೆ ನಡೆಯುವುದು, ಸರ್ ಮಿರ್ಜಾರವರು ಚರ್ಚೆನಡೆಸುತ್ತಾರಂತೆ

ದಸರಾ ವಸ್ತು ಪ್ರದರ್ಶನ ನಡೆಸಲು ಎಲ್ಲಾ ಏರ್ಪಾಡುಗಳು ಪೂರ್ತಿಯಾಯಿತು ಸುಮಾರು 300 ಸ್ಟಾಲ ಗಳಲ್ಲಿ ಅನೇಕ ಉಪಯುಕ್ತವಾದ ವಸ್ತುಗಳ ಪ್ರದರ್ಶನ ನಡೆಯುತ್ತದೆ

ಮೈಸೂರು ಕಾಂಗ್ರೆಸಿನವರ ಚಳವಳ ಮುಂದುವರಿದು ಯಥಾಪ್ರಕಾರ ಆಜ್ಞೋಲ್ಲಂಘನೆ ಮಾಡುವವರಿಗೆ ದಸ್ತಗಿರಿಗೆ ಸಂಸ್ಥಾನ ದಾದ್ಯಂತವೂ ಜೀವಕ ಬಿರುಸಿನಿಂದ ನಡೆಯುತ್ತಿದೆ ಮಾತನಾಡಿದರೆ ಸಾಕು ದಸ್ತಗಿರಿ ಕಾಂಗ್ರೆಸ್ ಮುಂದಾಳುಗಳನ್ನು ಬಂಧಿಸಿ ಊರಿನಾಚೆ ಬಿಡುವುದು, ರಾಜದ್ರೋಹ ನೆಸ್‌ಚಾರ್ ಜಾಮೀನು ಮಾಳಕದಮೆ ನಡೆಯುತ್ತಿದೆ ಸರಕಾರದ ದಬ್ಬಾಳಿಕೆ ಎಹುಕಾಲ ನಡೆಯಲಾರದೆಂದು ಇಲ್ಲಿ ವದಂತಿ

ತಾ. 13ನೇ ಶುಕ್ರವಾರ ಮೈಸೂರು ಸಂಸ್ಥಾನದ ಚರಿತ್ರೆಯಲ್ಲಿ ಮುಖ್ಯದಿನ ನವರಾತ್ರಿ ಮಹೋತ್ಸವವು ಪ್ರಾರಂಭವಾಗುತ್ತೆ ಬಹು ಅಟ್ಟಹಾಸದಿಂದ ನಡೆಯುತ್ತದೆ ಶ್ರೀಮದ್ಯುವರಾಣಿಯವರು ಇಂಗ್ಲಾಂಡಿನಿಂದ ವಿಮಾನದಲ್ಲಿ ಹಾರುತ್ತಾರೆ, ಹೀಗೆ ವಿಮಾನದಲ್ಲಿ ಬರುವುದರಲ್ಲಿ ಮೈಸೂರು ರಾಜಮನೆತನದಲ್ಲಿ ಇವರೇ ಮೊಟ್ಟಮೊದಲನೆಯ ಹೆಂಗಸು ಇವರೊಂದಿಗೆ ಅವರ ಅವರ ಮಕ್ಕಳುಗಳೂ ಹಾರುತ್ತಾರೆ

ಇಂಗ್ಲೆಂಡಿನಿಂದ ವಿಮಾನದಲ್ಲಿ ಪ್ರಯಾಣ ಬೆಳೆಸಿದ ಶ್ರೀಮದ್ಯುವರಾಣಿ ಮತ್ತು ಅವರ ಮಕ್ಕಳು ತಕ್ಕ ಪರಿವಾರದವರು ಉತ್ತರ ಆಫ್ರಿಕದ ಟ್ಯೂನಿಸ್ಸಿಗೆ ಬಂದಿರುತ್ತಾರೆಂದೂ ತಾ 10ಕ್ಕೆ ಕಲ್ಕತ್ತೆಗೆ ಬಂದು ತಾ 13 ಬೆಳಿಗ್ಗೆ ಮೈಸೂರಿಗೆ ಬರುತ್ತಾರೆಂದೂ ಇಲ್ಲಿಗೆ ಕೇಬಲ್ ಬಂದಿದೆ ಇಷ್ಟಲ್ಲದೆ ಶ್ರೀಮದ್ಯುವರಾಜ ಪಾರ್ಟಿಯವರ ವಿಷಯವಾಗಿ ಇಟಾಲಿಯನ್ ಪತ್ರಿಕೆಗಳಲ್ಲಿ ಕೆಲವು ಸ್ವಾರಸ್ಯವಾದ ವಿಷಯಗಳನ್ನು ಹೇರಳವಾಗಿ ವರದಿ ಮಾಡಿರುತ್ತಾರೆಂದು ತಿಳಿದು ಬಂದಿದೆ.

ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಪ್ರಶಂಸೆ.

(೬ನೇ ಪುಟದಿಂದ)

ಡಾಕ್ಟರ್ ವಿಠಲಶೆಟ್ರಿ ಪ್ರಶಂಸೆ

ಶಿವಪುರ ಸೇತುವೆಯನ್ನು ತೆರೆದ ಮೇಲೆ ದಿವಾನ್ ಸಾಹೇಬರು ಕಾರ್ಕಳಕ್ಕೆ ತೆರಳಿ, ಶ್ರೀ ಶೇಷಗಿರಿ ಪ್ರಭು, ಬಿ. ಎ. ಇವರು ಕೊಟ್ಟ ಟೀಪಾರ್ಟಿಯನ್ನು ಸ್ವೀಕರಿಸಿ ಮೂಡಬಿದ್ರಿಗೆ ಹೋಗಿ ಅಲ್ಲಿಯ ಲೋಕಲ್‌ಫಂಡ್ ಡಿಸ್ಪೆನ್ಸರಿಯ ಮೆಟರ್ನಿಟಿ ವಾರ್ಡಿನ ಶಂಕುಸ್ಥಾಪನೆಮಾಡಿದರು. ಈ ಸಂದರ್ಭದಲ್ಲಿ ಮೂಡಬಿದ್ರಿಯ ಮಹಾಜನರು ದಿವಾನರಿಗೆ ಬಿನ್ನವತ್ತಳೆಯನ್ನೊಪ್ಪಿಸಿದರು. ಸರ್. ಮಿರ್ಜಾರವರು ಮೂಡಬಿದ್ರಿಯ ಜನತೆಗೆ ವಂದನೆಯನ್ನರ್ಪಿಸಿ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಡಾಕ್ಟರ್ ವಿಠಲಶೆಟ್ರನ್ನು ಬಹಳವಾಗಿ ಪ್ರಶಂಸಿಸಿದರು. ಕಾರ್ಯದಕ್ಷರೂ ಸಹೃದಯರೂ, ಮೇಧಾವಿಗಳೂ, ಅನುಭವಸ್ಥರೂ ಆದ ಡಾಕ್ಟರ್ ವಿಠಲಶೆಟ್ಟಿಯವರು ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾಗಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಅದೃಷ್ಟ. ಅವರಂತಹ ದೇಶಾಭಿಮಾನಿಗಳೂ, ಜನಾನುರಾಗಿಗಳೂ, ಉತ್ಸಾಹಿಯೂ ಕಾರ್ಯದಕ್ಷರೂ ಆದವರು ಸ್ಥಳೀಯ ಸಂಸ್ಥೆಗಳಿಗೆ ಸುಯೋಗ ವಶದಿಂದ ಪ್ರೆಸಿಡೆಂಟರಾಗಿ ಲಭಿಸಿದರೆ ಎಷ್ಟು ವಿಚಕ್ಷಣತೆಯಿಂದ ಕೆಲಸ ನಡಿಸಬಹುದೆಂದು ವರ್ಣಿಸಬೇಕಾದುದೇ ಇಲ್ಲೆಂದರು.

ಪುಷ್ಪ ಪ್ರದರ್ಶನಾ ರಂಭೋತ್ಸವ

ಸರ್ ಮಿರ್ಜಾರವರು ತಾ. ೩ನೇ ದಿನ ಸಂಜೆ ಮಂಗಳೂರಿನ ಗವರ್ನಮೆಂಟ್ ಕೋಲೇಜಿನಲ್ಲಿ ಸೌತ್ ಕೆನರಾ ಡಿಸ್ಟ್ರಿಕ್ಟ್ ಎಡ್ವಾನ್ಸ್ ಮೆಂಟ್ ಎಸೋಸಿಯೇಶನಿನವರು ಏರ್ಪಡಿಸಿದ್ದ ಪುಷ್ಪ ಪ್ರದರ್ಶನವನ್ನು ತೆರೆಯುವ ಸಮಾರಂಭವನ್ನು ಸಂಭ್ರಮದಿಂದ ನಡಿಸಿದರು. ವೃಕ್ಷಗಳು, ಪುಷ್ಪಗಳು, ಉದ್ಯಾನಗಳು ಮತ್ತು ಜಲಧಾರಾ ಯಂತ್ರಗಳು ನನ್ನ ಮನಸ್ಸನ್ನು ಸೆಳೆದು ನಿಲ್ಲಿಸುತ್ತದೆ. "ಭಗವಂತನು ಪ್ರಸನ್ನನಾಗಿರುವನೆಂಬುದನ್ನು ಸೂಚಿಸುವಂತಿರುವ ಎಳೆಬಿಸಿಲಿನ ಸುಖ ಸ್ಪರ್ಶದಿಂದಲೂ, ಪಕ್ಷಿಗಳ ಕಲರವ ಮೋಹನ ಗಾನದಿಂದಲೂ, ತುಂಬಿ ಕಳಕಳಿಸುವ ಉದ್ಯಾನಕ್ಕಿಂತ ಮಿಗಿಲಾದ ಹೃದಯ ಸಂತೋಷವು ಮತ್ತಾವುದೂ ಈ ಭೂಮಂಡಲದಲ್ಲಿಲ್ಲ" ಎಂದು ಕವಿಯೊಬ್ಬನು ಕೊಂಡಾಡಿದ್ದಾನೆ. ದೊಡ್ಡ ಪಟ್ಟಣವೆಂದೊಡನೆಯೇ ಚಿತ್ರವಸ್ತು ಶಾಲೆಗಳೂ ಉದ್ಯಾನಗಳೂ ಇದ್ದೇ ತೀರಬೇಕು. ಮಕ್ಕಳೂ ದೊಡ್ಡವರೂ ಉಲ್ಲಾಸಪಟ್ಟು ವಿಶ್ರಮಿಸಿ ಕೊಳ್ಳಲು ಅಲ್ಲಿ ಅನುಕೂಲಿಸಬೇಕು. ಪೌರ ಸಭೆಗಳೆಂಬ ಹೆಸರು ಸಾರ್ಥಕವಾಗಿರುವ ಸಂಸ್ಥೆಗಳೆಲ್ಲಾ ತಮ್ಮ ಪಟ್ಟಣಗಳನ್ನು ಈ ಸೌಕರ್ಯ ಕಲ್ಪನೆಯಿಂದ ಶೃಂಗರಿಸುವುದು ಪ್ರಥಮ ಕರ್ತವ್ಯವಾಗಿರಬೇಕು. ಉದ್ಯಾನಗಳು ಜೀವನದ ಸೊಬಗನ್ನು ವೃದ್ಧಿಗೊಳಿಸಿ ಸೊಗಸು ತುಂಬುತ್ತವೆ. ಗಿಡಗಳು ಪ್ರಕೃತಿ ಸೌಂದರ್ಯದ ಆಗರ. ಅವುಗಳನ್ನು ನೋಡುವುದೇ ಜೀವನದ ದೊಡ್ಡದೊಂದು ಸೌಖ್ಯ. ನಾನು ನನ್ನದೆಂಬ ಅಲ್ಪ ವಿಚಾರಕ್ಕೆ ಆಸ್ಪದವಿಲ್ಲದಂತೆ ನಮ್ಮ ಮನಸ್ಸನ್ನು ಅವು ವಿಶಾಲಗೊಳಿಸುತ್ತವೆ. ನಾವು ಪ್ರಕೃತಿ ಸಂಪತ್ತನ್ನು ಒದಗಿಸಿದ ಪರಮಾತ್ಮನ ಮಹಿಮೆಯನ್ನು ಕುರಿತು ಚಿಂತಿಸಿ ಮೈಮರೆಯುವಂತೆ ಮಾಡುತ್ತಾನೆ. ನಾವುಗಳು ನಮ್ಮ ಮಕ್ಕಳ ಮನಸ್ಸಿನಲ್ಲಿ ಪ್ರಕೃತಿ ಪ್ರೇಮವನ್ನು ತುಂಬ ಸುತ್ತಲೂ ಇರುವ ಸೌಂದರ್ಯ ನಿಧಿಗಳಾದ ಹೂ ಬಳ್ಳಿಗಳನ್ನೂ ಗಿಡ ಮರಗಳೇ ಮುಂತಾದುವುಗಳನ್ನೂ ಕಂಡು ನಲಿದಾಡುವಂತೆ ಮಾಡಬೇಕು. ಹಾಗೆ ಮಾಡಿದಲ್ಲಿ ನಮ್ಮ ಮಕ್ಕಳು ದೊಡ್ಡವರಾದಾಗ ಅವರಿಗೆ ದೊಡ್ಡ ಲಾಭವುಂಟಾಗುತ್ತದೆ. ಎಂದೂ ಬತ್ತಿಹೋಗದಿರುವ ಆನಂದದ ಮತ್ತು ಸೌಖ್ಯದ ದೊಡ್ಡ ಚಿಲುಮೆಯೇ ಅವರ ಹೃದಯದಲ್ಲಿ ನೆಲಸಿ ಉಕ್ಕಿ ಹರಿಯುವಂತಾಗುತ್ತದೆ" ಎಂದು ಸರ್. ಮಿರ್ಜಾರವರ. ಬೋಧಪರ ಭಾಷಣವಾಡಿದರು. ಇದಾದ ನಂತರ ಮಂಗಳೂರಿನ ಮುಸಲ್ಮಾನ ವಿದ್ಯಾಸಂಘದ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದರು.

ತಾ. ೨ನೇ ಪೂರ್ವಾಹ್ನ ದಿವಾನರು ಮಂಗಳೂರು ತಾಲೂಕಿನ ಕಟೀಲು ಸೇತುವೆಯನ್ನು ತೆರೆಯುವ ಸಮಾರಂಭ ನಡಿಸಿದರು. "ನಾವೆಲ್ಲಾ ಒಂದೇ ನಾಡಿನವರಾಗಿ ಒಬ್ಬಳೇ ದೇಶಮಾತೆಯ ಭಕ್ತರಾಗಿ ಒಟ್ಟು ಕೂಡಿದ್ದೇವೆಂಬ ಅಂಶವನ್ನು ತಮ್ಮ ಕಾರ್ಯವು ಅತ್ಯಂತ ಮನದಟ್ಟುಮಾಡಿಕೊಡುತ್ತದೆ. ಭರತಖಂಡದ ಮುಂದಿನ ಮಂಗಳದ ಗುರಿಯೇ ಐಕ್ಯಮತ್ಯ ಸಾಧನೆ. ಭೂವಿವರವನ್ನೇ ನೋಡಲಿ, ನಾನಾ ಪ್ರದೇಶಗಳಿಗೂ ಸಮಾನವಾಗಿರುವ ಅಪಾಯಗಳ ದೃಷ್ಟಿಯಿಂದಲೇ ನೋಡಲಿ, ಹೇಗಾದರೂ ಪರಿಣಾಮದಲ್ಲಿ ಪೂರ್ಣವಾಗಿ ಐಕಮತ್ಯ ಹುಟ್ಟಿ ಕೆಲಸನಡೆದಲ್ಲದೆ ನಿರ್ವಾಹವೇ ಇಲ್ಲವೆಂಬ ಸ್ಥಿತಿಯೇ ಬರುತ್ತದೆ. ಭರತಖಂಡದ ನದಿಗಳು, ಪ್ರಾಂತಭೇದವಾಗಲೀ ಅಥವಾ ಸಂಸ್ಥಾನಭೇದವಾಗಲೀ, ಇಲ್ಲವೆ ಹುಟ್ಟಿ ಹರಿದು ಏರಿ ಇಳಿದು ಸಮುದ್ರ ಸೇರುತ್ತವೆ. ಬೆಟ್ಟಗಳು ಸಂಚಾರಕ್ಕೆ ಅಡ್ಡಿಯಾಗಿದ್ದು ದುರ್ಗಗಳಂತಿರಬೇಕಾಗಿದ್ದ ಕಾಲವೂ ಕಳೆದುಹೋಯಿತು. ನೂತನ ಕಲ್ಪನೆಗಳು ಯಾವುದೊಂದು ದೇಶಭೇದವೂ ಇಲ್ಲದೆ ಒಟ್ಟು ಮನುಷ್ಯವರ್ಗಕ್ಕೆ ಪ್ರಯೋಜನವನ್ನುಂಟುಮಾಡತಕ್ಕವುಗಳಾಗಿವೆ. ವಿಜ್ಞಾನ ಸಂಶೋಧದಿಂದ ಹೊರಬಿದ್ದ ಯಂತ್ರಸಾಧನಗಳನ್ನೆಲ್ಲಾ ಯಾವ ದೇಶಭೇದವೂ ಇಲ್ಲದೆ ಒಟ್ಟು ಮನುಷ್ಯವರ್ಗಕ್ಕೆ ಉಪಯೋಗವಾಗುವಂತೆ ಕುಣಿಕುಣಿದು ಹಾರಿ ಹಾರಿ ಎಲ್ಲ ಕಡೆಗಳಿಗೂ ಓಡಿಬರುತ್ತಿವೆ. ತಾವು ನನ್ನನ್ನು ಬರಮಾಡಿ ಆದರ ತೋರಿಸಿರುವ ಇಂತಹ ಸನ್ನಿವೇಶಗಳು ನಮ್ಮ ಮನಸ್ಸನ್ನು ಅಂಥವುಗಳಿಲ್ಲಕ್ಕಿಂತಲೂ ಇನ್ನೂ ಹೆಚ್ಚಾಗಿ ಸೆಳೆದು ಸ್ನೇಹದಿಂದ ಒಟ್ಟುಗೂಡಿಸುತ್ತವೆ" ಎಂದು ದಿವಾನರು ಹೃದಯಂಗಮವಾಗಿ ಮಾತಾಡಿದರು.

ದಕ್ಷಿಣಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾಕ್ಟರ್ ವಿಠಲಶೆಟ್ರಿ ಕೇಳಿಕೊಂಡ ಮೇರೆಗೆ ದಿವಾನರು ಆಗುಂಬೆ ಘಾಟಿಯ ಮೈಸೂರು ಸಂಸ್ಥಾನದ ಭಾಗವನ್ನು ಸರಿಪಡಿಸಲು ಸುಮಾರು ರೂ. 40,000 ಮಂಜೂರುಮಾಡಿರುವರೆಂದೂ ಕೆಳಗಣ ಭಾಗವನ್ನು ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನವರು ಸರಿಪಡಿಸಿ ಈ ಘಾಟಿ ಮಾರ್ಗವಾಗಿ ಬಸ್ ಲೋರಿಗಳು ಹೋಗುವಂತಾಗುವುದೆಂದೂ ತಿಳಿದುಬರುತ್ತದೆ. ಸಾಗರದಿಂದ ಬೈಂದೂರಿನವರೆಗೂ ರಸ್ತೆಯನ್ನೂ ಸರಿಮಾಡುವ ಆಶ್ವಾಸನೆಕೊಟ್ಟಿರುವಂತಿದೆ. ಇದು ಹೊರತು ಮೈಸೂರಿನಿಂದ ದಕ್ಷಿಣಕನ್ನಡಕ್ಕೆ ರೈಲ್ವೇ ಲೈನನ್ನು ಸ್ಥಾಪಿಸಲು ದಿವಾನರು ಬಹಳ ಆತುರದಿಂದಿರುವರು. ಮೈಸೂರು ಸಾಮಾನುಗಳನ್ನು ಕೊಚ್ಚಿ ಬಂದರ ಮೂಲಕ ರಫ್ತುಮಾಡಲು ಅವರಿಗೆ ಆಷ್ಟೊಂದು ಮನಸ್ಸಿರುವಂತಿಲ್ಲ. ಕನ್ನಡಾಭಿಮಾನಿಗಳಾದ ಅವರು ದಕ್ಷಿಣಕನ್ನಡ ಮತ್ತು ಮೈಸೂರಿಗೆ ನಿಕಟ ಸಂಬಂಧ ಬೆಳೆಸಲು ಹಾತೊರೆಯುತ್ತಿರುವರೆಂದೂ ತಿಳಿದುಬರುತ್ತದೆ. ದಕ್ಷಿಣಕನ್ನಡದ ಅಭಿವೃದ್ಧಿಗೂ ಇದು ಬಹಳ ಸಹಾಯವಾಗದಿರಲಾರದು.

ದ. ಕ. ಜಿಲ್ಲಾ ಬೋರ್ಡಿನ ವರ್ತನೆಯ ಖಂಡನೆ

ಇದೇ ತಾ 9ನೇ ಸೋಮವಾರ ಸಂಜೆ ಮಂಗಳೂರು ಮೈದಾನಿನಲ್ಲಿ, 'ಲೀಗ್ ಆಫ್ ರೇಡಿಕಲ್ ಕಾಂಗ್ರೆಸ್ ಮೆನ್' ಸಂಘದ ಆಶ್ರಯದಲ್ಲಿ ಶ್ರೀ. ಕೆ. ಆರ್. ಕಾರಂತ್, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆದು. ಮೈಸೂರು ಸಂಸ್ಥಾನದಲ್ಲಿ ಕಠಿಣ ದಬ್ಬಾಳಿಕೆ ನಡಿಯುತ್ತಿರುವಾಗ ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನವರು ಮೈಸೂರಿನ ದಿವಾನರನ್ನು ಬರಮಾಡಿಕೊಂಡು ಉಪಚರಿಸುವುದು ಖಂಡನೀಯವಿದೆ. ಮೈಸೂರಿನಲ್ಲಿ ಕ್ರೂರ ದಬ್ಬಾಳಿಕೆಗೊಳಗಾಗಿರುವ ಕಾಂಗ್ರೆಸ್ ಕೆಲಸಗಾರರ ಕುರಿತು ಈ ಸಭೆಯು ಅನುತಾಪಗೊಳಿಸುತ್ತದೆ. ಇನ್ನು ಮುಂದೆ ಮೈಸೂರು ಅಧಿಕಾರಿ ವರ್ಗದವರನ್ನು ದಕ್ಷಿಣಕನ್ನಡ ಜಿಲ್ಲೆಗೆ ಆಮಂತ್ರಿಸಿ ಗೌರವಿಸಬಾರದೆಂದು ಈ ಸಭೆಯು ನಿರ್ಧರಿಸುತ್ತದೆಂಬ ನಿರ್ಣಯಗಳಾದವು. ಡಿಸ್ಟ್ರಿಕ್ಟ್ ಎಸೆಂಬ್ಲಿ ಮೆಂಬರರಾದ ಶ್ರೀ ಕೆ. ಬಿ ಜಿನರಾಜ ಹೆಗ್ಡೆಯವರು ಈ ಸೂಚನೆಗಳನ್ನು ಸಭೆಯ ಮುಂದಿಟ್ಟರು. ಶ್ರೀಗಳಾದ ಕೆ. ಎನ್ ಪೈ, ಕೆ ಕೃಷ್ಣರಾಯರು ಪುಷ್ಟೀಕರಿಸಿದರು. ಸರ್. ಮಿರ್ಜಾರವರನ್ನು ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನವರು ಆಮಂತ್ರಿಸಿದುದನ್ನು ನಿಷೇಧಿಸುವ ಸೂಚನೆಯನ್ನು ಶ್ರೀ ಜಿ ಎಸ್ ಏಕಳರು ತಂದು ಶ್ರೀ ಕೆ ರಮಾನಾಥ ಪಡಿಯಾರರು ಅನುಮೋದಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ಶ್ರೀ ವಿದ್ಯಭೂಷಣ ವಿ ಎನ್. ಸಂಜೀವರಾಯರು ಕೂಡಾ ಮಾತಾಡಿದರು.

ದ್ವಿಮುಖ ಧೋರಣೆ

ಮೈಸೂರಿನ ದಿವಾನರನ್ನು ಡಿಸ್ಟ್ರಿಕ್ಟ್ ಬೋರ್ಡ್ ಕಾಂಗ್ರೆಸ್ ಪಾರ್ಟಿಯವರು ಆಮಂತ್ರಿಸಲು ಸರ್ವಸಮ್ಮತಿಯಿಂದೊಪ್ಪಿದಾಗ, ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರೂ ಡಿಸ್ಟ್ರಿಕ್ಟ್ ಬೋರ್ಡು ಕಾಂಗ್ರೆಸ್ ಪಾರ್ಟಿಯ ಎಕ್ಸ್ ಆಫಿಸಿಯೋ ಮೆಂಬರರೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಜೋಯಿಂಟ್ ಸೆಕ್ರೆಟರಿಗಳೂ ಆದ ಶ್ರೀ ಯು. ಶ್ರೀನಿವಾಸ ಮಲ್ಯರು ಹಾಜರಿದ್ದರೆಂದು ತಿಳಿದುಬರುತ್ತದೆ. ಅವರೇನೂ ಆಕ್ಷೇಪಿಸಲಿಲ್ಲ. ಮಾತ್ರವಲ್ಲದೆ ಅವರ ಪ್ರೋತ್ಸಾಹವೇ ಇದ್ದಂತೆ ತೋರುತ್ತದ. ನನ್ನ ಮಟ್ಟಿಗೆ ಆಕ್ಷೇಪಿಸುವೆನೆಂದವರು ಶ್ರೀ. ಎಸ್ ಎನ್. ಹೊಳ್ಳರು ಮಾತ್ರ. ಆ ಮೇಲೆ ಶ್ರೀ. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲೇ ನಡೆದ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯಲ್ಲಿ, ಮೈಸೂರು ದಿವಾನರನ್ನು ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷೀಯರು ಆಮಂತ್ರಿಸಿದುದಕ್ಕಾಗಿ ವಿಷಾದ ಸೂಚಿಸುವ ನಿರ್ಣಯವೊಂದು ಮಂಜೂರಾಗಿರುವುದು. ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟರ ಈ ದ್ವಿದಳ ಧೋರಣೆಗೆ ಅರ್ಥವೇನೋ ತಿಳಿಯದು. ತಮ್ಮ ಅಧೀನ ಸಂಸ್ಥೆಯಾದ ಜಿಲ್ಲಾಬೋರ್ಡು ಕಾಂಗ್ರೆಸ್ ಪಾರ್ಟಿಯವರ ವರ್ತನೆಯ ಕುರಿತು ವಿಷಾದ ಸೂಚಿಸುವಷ್ಟರ ದುರ್ಬಲತೆಯನ್ನೋ ಕುಟಿಲತನವನ್ನೋ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ತೋರಿಸಿ ಜನತೆಯ ಕಣ್ಣಿಗೆ ಮಣ್ಣು ಹಾಕಿರುವಂತಿದೆ. ಮೊಲನೊಂದಿಗೆ ಓಡಿ ಬೇಟೆನಾಯಿಯೊಂದಿಗೆ ಬೆನ್ನಟ್ಟುವ ಈ ಚಾಣಾಕ್ಯತಂತ್ರದಿಂದಲೇ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕುರಿತು ಜನತೆಗೆ ತೀವ್ರ ಜುಗುಪ್ಸೆಯುಂಟಾಗಿದೆ.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಟ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಸರ್, ಕೆ. ಆರ್ ಕೆ ಶೆಟ್ ಬಿಲ್ಡಿಂಗ್, ಮಿಶ್ಶನ್ ಹೈಸ್ಕೂಲ್ ರೋಡು. ● ಅಥವಾ ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಇಕ್ಕಟ್ಟೇ ಸ್ವಾತಂತ್ರ್ಯ ಸಾಧನೆಗೆ ದೊಡ್ಡ ತೊಡಕು.

ಇಂದಾದರೂ ಹಿಂದೀಯರೆಲ್ಲರೂ ಒಂದಾಗುವರೇ?

ಇಂದೀಗ ಸಂಧಿಗ್ಧ ಪರಿಸ್ಥಿತಿಯು ಉಪಸ್ಥಿತವಾಗಿರುವುದು ಹಿಂದೀಯರೆಲ್ಲರೂ ಒಂದಾಗಿ ಈ ಸಂದರ್ಭದ ಸದುಪಯೋಗ ಮಾಡಿದರೆ ಹಿಂದೀ ಸ್ವಾತಂತ್ರ್ಯಸಾಧನೆಯಲ್ಲಿ ದೊಡ್ಡ ಹೆಜ್ಜೆಯೊಂದನ್ನು ಮುಂದಿಡಲು ಸಾಧ್ಯವಾಗುವುದು. ಆದರೆ ಈ ಸಂಧಿಕಾಲದಲ್ಲಿ ಭಾರತೀಯರೆಲ್ಲರೂ ಒಂದುಗೂಡಿ ನಡೆಯುವರೇ ಎಂಬುದೀಗ ಪ್ರಶ್ನೆ. ಸಂಕುಚಿತ ಸ್ವಾರ್ಥಪರತೆಯು ಇಕ್ಕಟ್ಟು ಮತ್ತು ದ್ವೇಷಸಾಧನೆಯ ಒಡಕೇ ಹಿಂದಿನಿಂದಲೂ ಹಿಂದೂದೇಶದ ಅಧೋಗತಿಗೆ ಕಾರಣವಾಗಿರುವುದೆಂದು ಹಿಂದೀ ಇತಿಹಾಸವು ಸಿದ್ಧಪಡಿಸುತ್ತದ ಲಂಡನಿನ ಕೊನೆಯ ರೌಂಡ್ ಟೇಬ್ಲ್ ಪರಿಷತ್ತಿನಲ್ಲಿ, ತಾವು ಪ್ರಥಮವಾಗಿ ಭಾರತೀಯರು, ಅನಂತರ ಮುಸಲ್ಮಾನರು, ಹರಿಜನರು ಸಿಖ್ಖರೇ ಮೊದಲಾದವರೆಂಬುದನ್ನು ಮರೆತು ತಮ್ಮ ಜಾತೀಯ ಸ್ವಾರ್ಥದ ಕಡೆಗೇನೇ ಮೊದಲಾಗಿ ಗಮನಕೊಟ್ಟು, ತಮ್ಮೊಳಗಿನ ಸೌಹಾರ್ದ ಬಿಕ್ಕಟ್ಟು ಮತ್ತು ಸಹಕಾರದಿಂದ ಆದಷ್ಟು ಹೆಚ್ಚಿನ ರಾಜಕೀಯ ಹಕ್ಕು ಬಾಧ್ಯತೆಗಳನ್ನು ಬ್ರಿಟಿಷರಿಂದ ಕಸಕೊಳ್ಳ ಬೆತ್ನಿಸುವ ಬದಲಿಗೆ ಅವರ ಆಶ್ರಯಪಡೆದು, ತಮ್ಮ ತಮ್ಮ ಸಮಾಜಗಳಿಗೆ ಆದಷ್ಟು ಹೆಚ್ಚಿನ ಪ್ರಯೋಜನ ದೊರಕಿಸಿಕೊಳ್ಳ ಬೇಕೆಂಬ ಸಂಕುಚಿತ ಮನೋವೃತ್ತಿಯಿಂದ ಹಿಂದೀ ಪ್ರತಿನಿಧಿಗಳು ಪರಸ್ಪರ ಕಚ್ಚಾಡಿಕೊಂಡುದರಿಂದ ಇಂಗ್ಲೆಂಡಿಗೆ ತನ್ನಿಚ್ಛೆಯ ರಾಜ್ಯಾಂಗ ರಚನೆಯನ್ನು ಹಿಂದೂದೇಶದ ಮೇಲೆ ಹೊರಿಸಲನುಕೂಲವಾಯಿತು. ಇಂದೀಗ ಭಾರತೀಯರ ಪರೀಕ್ಷೆಯ ಇನ್ನೊಂದು ಸಂದರ್ಭ ಬಂದಿರುವುದು. ಇತ್ತಲಾಗಿನ ವಿದ್ಯಮಾನಗಳನ್ನು ನೋಡಿದರೆ ರೌಂಡ್ ಟೇಬ್ಲ್ ಪರಿಷತ್ತಿನ ಇತಿಹಾಸವೇ ಪುನರಾವರ್ತಿತವಾಗುವುದೋ ಎಂಬ ಸಂದೇಹಕ್ಕಾಸ್ಪದವಾಗಿದೆ.

ಇಂಗ್ಲೆಂಡು ಜರ್ಮನಿಯೊಡನೆ ಯುದ್ಧ ಹೂಡಿ, ಹಿಂದೂದೇಶವನ್ನೂ ಅದಕ್ಕೆಳೆದ ಕೂಡಲೇ ಹಿಂದೀ ಮಂದಪಕ್ಷೀಯರು, ಮುಸ್ಲಿಮ್ ಲೀಗಿನವರು, ಹರಿಜನರೇ ಮೊದಲಾದವರು, ಬ್ರಿಟನಿಗೆ ತಾವಂಗಿ ಸಹಾಯದ ಆಶ್ವಾಸನೆ ಕೊಡುವ ಮೇಲಾಟವನ್ನೇ ನಡಿಸಿಬಿಟ್ಟರು. ಆದರೆ ಕಾಂಗ್ರೆಸಿನವರು ಮಾತ್ರ ಹಾಗೇನೂ ಮಾಡದೆ, ಬ್ರಿಟನು ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವ ಭರವಸೆಕೊಟ್ಟು, ಅದರ ಸೂಚನಾರ್ಥವಾಗಿ ಕೇಂದ್ರ ಸರಕಾರದ ಆಡಳಿತದಲ್ಲಿ ಬದಲಾವಣೆ ಮಾಡಲೊಪ್ಪದೆ ತಮಗೆ ಸಹಕಾರವೀಯಲು ಸಾಧ್ಯವಿಲ್ಲೆಂದು ಹೇಳಿದರು. ಅಂದಮೇಲೆ ಕಾಂಗ್ರೆಸಿನವರ ಅಭಿಮತವನ್ನು ಸ್ಪಷ್ಟವಾಗಿ ತಿಳಿದುಕೊಂಡು ಅವರನ್ನು ಸಮಾಧಾನಪಡಿಸಲು ವೈಸರಾಯರು ಪ್ರಯತ್ನಿಸಿರುವುದು. ಸ್ವಾಭಾವಿಕವಾಗಿದೆ ಮುಸ್ಲಿಮ್ ಲೀಗಿನವರು ಕೂಡಾ ಕೆಲವೊಂದು ಶರ್ತಗಳಿಂದ ಸಹಕಾರವೀಯುವ ನಿರ್ಣಯಮಾಡಿರುತ್ತಾರೆ ಆದುದರಿಂದ ವೈಸರಾಯರು ಲೀಗಿನ ಪ್ರೆಸಿಡೆಂಟರನ್ನೂ ಕರೆದು ಮಾತಾಡುವ ಅವಶ್ಯ

ಹಿಂದೂ ಮುಸಲ್ಮಾನ ಐಕ್ಯ ಸ್ಥಾಪನೆಯ ಕುರಿತು ಗಾಂಧಿಜಿಯವರ ಕಾತರ.

ಸಂಕುಚಿತ ಸ್ವಾರ್ಥ ಸಾಧಕರ ಅಪಸ್ವರ !

ಬಂತು. ಆ ಪ್ರಕಾರ ಲೋರ್ಡ್ ಲಿನ್ಲಿತ್ ಗೋರವರು, ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಮುಖಂಡರೊಡನೆ ಇತ್ತಲಾಗಿ ಮಾತುಕತೆ ನಡಿಸಿರುವರು. ಇಷ್ಟು ಮಾತ್ರದಿಂದ ಕೆಲವಂದಿ ಮಂದಗಾಮಿ ಮುಖಂಡರುಗಳೂ, ಹರಿಜನ ಮತ್ತು ಬ್ರಾಹ್ಮಣೇತರ ಮುಂದಾಳುಗಳೂ ಒಸೂಯೆಗೊಂಡು, ಕಾಂಗ್ರೆಸಿನ ಮೇಲೆ ಉರಿಕಾರ ಹತ್ತಿದ್ದಾರೆ ವೈಸರಾಯರು ಕೇವಲ ಕಾಂಗ್ರೆಸಿನವರನ್ನು ಕರೆದು ಮಾತಾಡಿದರೆ ಸಾಲದು ಅವರೇನೂ ತಮ್ಮ ಪ್ರತಿನಿಧಿಗಳಾಗಲಾರರು ತಮ್ಮನ್ನೂ ಕರೆದು ಅಭಿಪ್ರಾಯ ಕೇಳಬೇಕೆಂಬ ಕೂಗನ್ನೆಬ್ಬಿಸಹತ್ತಿದ್ದಾರೆ ಈ ಸ್ವಪ್ರತಿಷ್ಠಾಕಾಮಿಗಳು ಬ್ರಿಟಿಷ್ ಸರಕಾರಕ್ಕೆ ವಿಧೇಯರಾಗಿರುವ ತಮ್ಮನ್ನು ಬಿಟ್ಟು ಸದಾ ವಿರೋಧವಿರುವ ಕಾಂಗ್ರೆಸು ಹೇಳುವಂತೆ ಸರಕಾರವು ಕೇಳಿ ಕೇಂದ್ರಾಡಳಿತದಲ್ಲೇನಾದರೂ ಬದಲಾವಣೆ ಮಾಡಿದರೆ ತಾವು ಅದಕ್ಕೊಪ್ಪಲಿಕ್ಕಿಲ್ಲೆಂದು ಈ ಮುಖಂಡರುಗಳು ಎಚ್ಚರವೀಯಹತ್ತಿದ್ದಾರೆ ಮಿ. ಜಿನ್ನಾರವರನ್ನು ಕಾಂಗ್ರೆಸಿನ ಎದುರಾಗಿ ಎತ್ತಿ ಕಟ್ಟುತ್ತಿದ್ದಾರೆ ಇದರಿಂದ ಬ್ರಿಟಿಷ್ ಸರಕಾರಕ್ಕೆ ಬಹಳ ಪ್ರಯೋಜನವಾಗುವಂತಾಗಿದೆ.

ಹಿಂದು ಮುಸಲ್ಮಾನ ಐಕ್ಯದ ಆಶೆ

ಪಂಜಾಬಿನ ಪ್ರಧಾನ ಮಂತ್ರಿಗಳಾದ ಸರ್. ಸಿಕಂದರ್ ಹಾಯತ್ ಖಾನರು ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳೊಳಗೆ ಐಕ್ಯವನ್ನುಂಟುಮಾಡಲು ಹಾತೊರೆಯುತ್ತಿರುವಂತಿದೆ. ಪಂಡಿತ ಜವಾಹರಲಾಲರು ಮತ್ತು ಮಿ. ಜಿನ್ನಾರವರು ಡಿಲ್ಲಿಯಲ್ಲಿ ಒಟ್ಟುಗೂಡಿ ಮಾತಾಡಿರುವುದರಿಂದ ಲೀಗ್ ಮತ್ತು ಕಾಂಗ್ರೆಸುಗಳು ಈ ಸಂದರ್ಭದಲ್ಲಿ ಒಂದುಗೂಡಬಹುದೋ ಎಂಬ ಆಶೋದಯವುಂಟಾಗಿದೆ ಲೀಗ್ ಮತ್ತು ಕಾಂಗ್ರೆಸುಗಳೊಂದಾದುವೆಂದರೆ ದೇಶದ ಸ್ವಾತಂತ್ರ್ಯ ಸಾಧನಾಮಾರ್ಗದ ದೊಡ್ಡ ತೊಡಕೊಂದು ನಿವಾರಿತವಾದಂತಾಗುವುದು ಕಾಂಗ್ರೆಸ್ ಮತ್ತು ಮುಸಲ್ಮಾನ ಮುಖಂಡರುಗಳು, ಹಿಂದಿನ ಸಂಗತಿಗಳನ್ನೆಲ್ಲಾ ಮರೆತು ಮುಂದಿನ ತಮ್ಮ ಹಿತದ ದೃಷ್ಟಿಯಿಂದ ವ್ಯಾಪಕ ಧೋರಣೆ ವಹಿಸಿ, ಒಂದುಗೂಡಿದರೆ, ದೇಶದಲ್ಲಿ ತಾಂಡವವಾಡುತ್ತಿರುವ ಜಾತೀಯ ಭೂತವನ್ನೇ ಉಚ್ಚಾಟನೆಮಾಡಿದಂತಾಗುವುದು.

ಗಾಂಧಿಜಿಯವರ ಅಂತಃಕರಣ ಪೂರ್ವಕವಾದ ವಿನಂತಿ

ಹಿಂದು ಮುಸಲ್ಮಾನ ಐಕ್ಯದ ಕುರಿತು ಗಾಂಧಿಜಿಯವರು ಹರಿಜನದಲ್ಲಿ ಪ್ರಕಟಿಸಿರುವ ಲೇಖನವು ಆ ಕುರಿತು ಅವರೆಷ್ಟು ಕಾತರಪಡುತ್ತಿದ್ದಾರೆಂಬುದನ್ನು ಶ್ರುತಗೊಳಿಸುತ್ತದೆ. "ಮುಸ್ಲಿಮ್ ಲೀಗ್ ಮತ್ತು ಅದರ ಮುಂದಾಳುಗಳನ್ನು ಕಾಂಗ್ರೆಸ್ ಪಕ್ಷೀಯರಾಗಲಿ, ಪತ್ರಿಕೆಗಳಾಗಲಿ ಉಗ್ರವಾಗಿ ಟೀಕಿಸಿ ನಿಷೇಧಿಸುವುದು ತಪ್ಪು. ಮುಸ್ಲಿಮ್ ಲೀಗು ಮಹತ್ವಾದದೊಂದು ಸಂಸ್ಥೆ ಅದರ ಅಧ್ಯಕ್ಷರು ಒಂದು ಕಾಲದಲ್ಲಿ ಉಜ್ವಲ ಕಾಂಗ್ರೆಸ್ ಭಕ್ತರಾಗಿದ್ದರು. ಲೋರ್ಡ್ ವಿಲ್ಲಿಂಗ್ಡನರೊಡನೆ ಅವರು ನಡಿಸಿದ ಹೋರಾಟಗಳನ್ನು ಮರೆಯಲು ಸಾಧ್ಯವಿಲ್ಲ ಬೊಂಬಾಯಿ ಜಿನ್ನಾಹೋಲು ಅದರ ಮೂರ್ತಸ್ವರೂಪವಾಗಿದೆ. ಖಿಲಾಫತ್ ಚಳವಳದ ಸಂದರ್ಭದಲ್ಲಿ ಕಾಂಗ್ರೆಸಿನಲ್ಲಿದ್ದ ಹಲವು ಮಂದಿ ಮುಖಂಡರೀಗ ಲೀಗಿನಲ್ಲಿದ್ದಾರೆ. ನಿನ್ನೆಯ ತಮ್ಮ ಸಹೋದ್ಯೋಗಿ ಬಂಧುಗಳನ್ನು ಇಂದವರು ಅಷ್ಟೊಂದು ದ್ವೇಷಿಸಲಾರರು. ಆದುದರಿಂದ ಕಾಂಗ್ರೆಸ್ ಪಕ್ಷೀಯರಾಗಲಿ ಪತ್ರಿಕೆಗಳಾಗಲಿ ಅವರನ್ನು ಟೀಕಿಸಿ ದ್ವೇಷಿಸುವುದರಲ್ಲಿ ಅರ್ಥವಿಲ್ಲ ಅವರೆ ಅಹಿಂಸಾತ್ಮಕ ಧೋರಣೆಗದು ದೊಡ್ಡ ಕುಂದು. ಆದಷ್ಟು ಬೇಗನೆ ಒಂದಲ್ಲೊಂದು ದಿನ ನಿಜವಾದ ಮತ್ತು ಭದ್ರವಾದ ಜಾತೀಯ ಐಕ್ಯವುಂಟಾಗುವುದೆಂಬುದನ್ನು ಕಾಂಗ್ರೆಸ್ ವಾದಿಗಳು ಮರೆಯ ಕೂಡದು."

"ದಿವಂಗತ ಮೌಲಾನ ಶೌಕತಾಲಿಗಳ ಪುತ್ರ ಜಾಹಿದರು ಸಿಮ್ಲಾದಲ್ಲಿ ನನ್ನನ್ನು ಕಂಡವರು ಹೀಗೆ ಹೇಳಿದರು. "ನಾವು ಕಚ್ಚಾಡಬಾರದು ರಕ್ತವು ಯಾವಾಗಲೂ ನೀರಿಗಿಂತ ದಪ್ಪವಾದುದು ನಮ್ಮೆಲ್ಲರ ಧಮನಿಯಲ್ಲಿಯೂ ಬಂಧುತ್ವದ ರಕ್ತವು ಹರಿಯುತ್ತಿದೆ, ನೀವು ಹಿಂದು ಮುಸಲ್ಮಾನ ಬಾಂಧವ್ಯಕ್ಕಾಗಿ ದುಡಿಯಬೇಕು" "ನೀವು ಐಕ್ಯವನ್ನು ಮಾಡಬೇಕು ನಿಮ್ಮಿಂದ ಮಾತ್ರ ಅದು ಸಾಧ್ಯವಿದೆ ನಿಮ್ಮ ಜೀವನ ಕಾಲದಲ್ಲಿ ನಮ್ಮೊಳಗೆ ಐಕ್ಯ ಸ್ಥಾಪನೆಯಾಗದಿದ್ದರೆ ದೇವರೇ ಗತಿ!" ಎಂದು ದಾರಿಯಲ್ಲಿ ನನ್ನನ್ನು ಕಂಡ ಹಲವು ಮುಸಲ್ಮಾನ ಮಿತ್ರರಂದರು. ನನ್ನ ಹಲವು ಮುಸಲ್ಮಾನ ಮಿತ್ರರು ಯಥಾರ್ಥವಾಗಿ ಆಶಿಸಿದಂತೆ ನನಗೆ ದೇವರು ಶಕ್ತಿಯನ್ನೀಯುತ್ತಿದ್ದರಾಗುತ್ತಿತ್ತು. ಅನುದಿನವೂ ನಾನು ಹಿಂದೂಮುಸಲ್ಮಾನ ಐಕ್ಯಕ್ಕಾಗಿ ಪ್ರಾರ್ಥಿಸುತ್ತಿರುವೆನು ಇಚ್ಛಾಶಕ್ತಿ ಮತ್ತು ಪ್ರಯತ್ನದ ಅಭಾವದಿಂದ ಇಂದೀಗ ಇಷ್ಟೊಂದು ದ್ವೇಷಾಸೂಯೆ ಹಬ್ಬಿ ಹಾವಳಿ ಮಾಡುತ್ತಿರುವುದಲ್ಲ ಹಿಂದು ಮುಸಲ್ಮಾನರೊಳಗೆ ಮಾತ್ರ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ॥ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ ೩. ವಿ. ಪಿ ಖರ್ಚು ೦ ೬ ೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಲ್ಲಿ ಸ್ಟಾಕಿಸ್ಟರ :—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ವಲ್ಲದೆ, ದೇಶದ ಎಲ್ಲಾ ಸಮಾಜದೊಳಗೂ ಐಕ್ಯ ಸ್ಥಾಪಿತವಾಗುವುದನ್ನು ಕಾಣುವ ವರೆಗೆ ನಾನು ಬದುಕಿರುವೆನೆಂಬ ಆಶೆಯು ನನಗಿದೆ"

ಇಸ್ಲಾಮ್ ಎಂದರೆ ಶಾಂತಿ

"ಅಹಿಂಸೆಯೇ ಈ ಐಕ್ಯಕ್ಕೆ ಅತಿ ಸಮೀಪದ ಮತ್ತು ನಿಶ್ಚಯವಾದ ಹಾದಿ. ವಿಶುದ್ಧ ಅಹಿಂಸಾವಾದಕ್ಕೆ ಮುಸಲ್ಮಾನರು ಎಂದೂ ಒಪ್ಪಲಾರರೆಂದು ನನ್ನ ಕೆಲವು ಮುಸಲ್ಮಾನ ಮಿತ್ರರ ವಾದ. ಅಹಿಂಸೆಯಷ್ಟೇ ಹಿಂಸೆಯೂ ಅವರಿಗೆ ಅವಶ್ಯ ಮತ್ತು ನ್ಯಾಯವಾದುದಂತೆ. ಇಂದೀಗ ಲೋಕದಲ್ಲಿ ಅಮಿಶ್ರ ವಿಶುದ್ಧ ಅಹಿಂಸೆಯೆಂಬುದೇ ಇಲ್ಲ. ಹಿಂಸೆಯ ಮತ್ತು ಅಹಿಂಸೆಗಳೆರಡರ ಪ್ರಯೋಗವನ್ನೂ ಕೊರಾನು ಬೋಧಿಸುತ್ತದೆಂದು ನಾನು ಕೇಳಿದ್ದೇನೆ. ಪ್ರತೀಕಾರಕ್ಕಿಂತ ಸಹನೆಯು ಹೆಚ್ಚಿನದೆಂದು ಅದು ಗಣಿಸುತ್ತದೆ. ಖೋರಾನ್ ಎಂಬ ಶಬ್ದಾರ್ಥವೇ ಶಾಂತಿ, ಅಂದರೆ ಅಹಿಂಸೆ. ಪ್ರತಿದಿನವೂ ತಪ್ಪದೆ ನಮಾಜ್ ಮಾಡುವ ನಿಷ್ಠಾವಂತ ಮುಸಲ್ಮಾನರಾದ ಖಾನ್ ಅಬ್ದುಲ್ ಗಾಫರ್ ಖಾನರು ಅಹಿಂಸೆಯನ್ನು ತನ್ನ ಜೀವನ ತತ್ವವಾಗಿ ಅಂಗೀಕರಿಸುತ್ತಾರೆ. ಒಬ್ಬರೊಬ್ಬರೊಡನೆ ಶಾಂತಿಯಿಂದ ಜೀವಿಸುವುದು ಅತ್ಯಂತ ಸ್ವಾಭಾವಿಕವಾದುದು. ಆದರೆ ಇಕ್ಕಡೆಯವರೂ ಹಿಂಸಾತ್ಮಕ ಹೋರಾಟ ನಡಿಸಲು ಸಮಬಲರಾಗಿದ್ದು ಶಾಂತಿಯುಂಟಾಗುವುದಾದರೆ ಅಂತಹ ಶಾಂತಿಯು ನನ್ನ ಜೀವಮಾನದಲ್ಲಿ ಬರಲಾರದು. ಒಂದು ವೇಳೆ ಬಂದರೂ ಅದಕ್ಕೆ ನಾನು ಗಣ್ಯಮಾಡಲಾರೆನು. ಅದು ಸಶಸ್ತ್ರಶಾಂತಿಯಾಗಿದ್ದು ಯಾವ ಕ್ಷಣವಾದರೂ ಭಂಗವಾಗಬಹುದು. ಯುರೋಪಿನಲ್ಲಿ ಇಂತಹ ಶಾಂತಿಯೇ ನೆಲೆಗೊಂಡಿತ್ತು. ಅಂತಹ ಶಾಂತಿಯು ಬೇಡಬೇಡವೆಂದೆನಿಸಲು ಪ್ರಕೃತದ ಯುದ್ಧವೇ ಸಾಲದೇ?

ಹಿಂದೂ ಮುಸಲ್ಮಾನ ಐಕ್ಯ ಸ್ಥಾಪನೆಗಾಗಿ ನನ್ನ ಅಂತಃಕರಣದ ಆತುರವನ್ನು ಈಗ ನನ್ನ ಮುಸಲ್ಮಾನ ಸ್ನೇಹಿತರು ಮನಗಂಡುಕೊಳ್ಳದಿರಲಾರರು. ಖಿಲಾಫತ್ ಚಳವಳದ ಸಂದರ್ಭದಲ್ಲಿ ಆಲಿ ಸಹೋದರರು ಬಂದಿದ್ದ ಸ್ಥಾನಕ್ಕೆ ಮುಸಲ್ಮಾನರನ್ನು ತರುವ ತನಕ ಹಿಂದುಗಳಿಗೇನೇ ನಾನು ಅಹಿಂಸಾ ವಿಧಾನವನ್ನು ಬೋಧಿಸುತ್ತಿರಬೇಕಾಗಿದೆ. "ನಮ್ಮ ಹಿಂದೂ ಸಹೋದರರು ನಮ್ಮನ್ನು ಚೂರುಚೂರಾಗಿ ಕಡಿದು ಹಾಕಿದರೂ ನಾವವರನ್ನು ಪ್ರೀತಿಸುವೆವು. ಅವರು ನಮ್ಮ ಬಂಧುಬಳಗದವರು" ಎಂದು ಆಲಿ ಸಹೋದರರು ಹೇಳುತ್ತಿದ್ದರು. "ನಮ್ಮ ಇತಿಹಾಸದ ಈ ಸಂದಿಗ್ಧ ಸಂದರ್ಭದಲ್ಲಿ ಹಿಂದುಗಳು ನಮಗೆ ನಿಸ್ಸಂಕೋಚವಾಗಿ ಮತ್ತು ನಿಶ್ಶರ್ತವಾಗಿ ಕೊಟ್ಟ ಸಹಾಯವನ್ನು ಹಿಂದೂಮುಸಲ್ಮಾನರು ಎಂದೂ ಮರೆಯಲಾರರು" ಎಂದು ಕೀರ್ತಿಶೇಷ ಮೌಲಾನ ಅಬ್ದುಲ್ ಬಾರಿಯವರೆನ್ನುತ್ತಿದ್ದರು. ಇಂದಿನ ಹಿಂದೂಮುಸಲ್ಮಾನರು ಅಂದಿನವರೇ ಆಗಿರುವರೆಂಬ ವೃಥಾ ನನಗಿದೆ. ಆದರೆ ಕಾಲ ಮಾತ್ರ ಬದಲಾಗಿದೆ. ಅದರೊಂದಿಗೆ ನಮ್ಮ ನಡಾವಳಿಯೂ ಬದಲಾಗಿದೆ. ಒಂದು ದಿನ ನಮ್ಮ ಹೃದಯಗಳೊಂದುಗೂಡುವವೆಂಬ ದರಲ್ಲಿ ನನಗೆ ಸಂದೇಹವೇ ಇಲ್ಲ. ಇಂದು ನಮಗೆ ಅಸಾಧ್ಯವಾಗಿ ತೋರುವುದನ್ನು ದೇವರು ನಾಳೆ ಸಾಧ್ಯಗೊಳಿಸುವನು. ಆ ದಿನವನ್ನು ಹಾರೈಸಿಕೊಂಡು ನಾನು ಜೀವಿಸುತ್ತಿದ್ದೇನೆ, ದುಡಿಯುತ್ತಿದ್ದೇನೆ, ಪ್ರಾರ್ಥಿಸುತ್ತಿದ್ದೇನೆ" ಎಂಬುದೇ ಗಾಂಧೀಜಿಯವರ ಹೃದಯಸ್ಪರ್ಶಿ ಲೇಖನದ ಸಾರಾಂಶ.

ಮೈಸೂರು ಸಂಸ್ಥಾನದ ರೈತರಲ್ಲಿ ನವಸ್ಫೂರ್ತಿ.

ಅಲ್ಲೊಂದು ಇಲ್ಲೊಂದು ಸೋಶಲಿಸ್ಟರ ಆಂದೋಲನದವರಿಂದ ಕೆಲವು ಉದ್ಯಮಗಳಿಗೆ ಸ್ಪರ್ಧಿಸುವುದರಿಂದ ಅಥವಾ ಸ್ವತಂತ್ರಲಿನ ಪ್ರದೇಶವನ್ನು ಗ್ರಾಮಸ್ಥರಿಂದ ಬೇರ್ಪಡಿಸಿಟ್ಟುದರಿಂದ ಮಾತ್ರವೇ ಗ್ರಾಮಪುನರುಜ್ಜೀವನ ಕೆಲಸ ಕಾರ್ಯಗಳು ತೃಪ್ತಿಕರವಾಗಿ ನೆರವೇರಿದಂತಾಗಲಿಲ್ಲ. ಗ್ರಾಮಸ್ಥರ ಮನಸ್ಸಿನಲ್ಲಿ ತಮ್ಮ ಜೀವನದ ಅಂತಸ್ತನ್ನು ಹೆಚ್ಚಿಸಿಕೊಳ್ಳಬೇಕೆಂಬ ತೀವ್ರಾಭಿಲಾಷೆಯುಂಟಾಗುವಂತಾಗಬೇಕು. ಗ್ರಾಮಸ್ಥರಿಗೆ ವರ್ಷದ ಎಲ್ಲಾ ಕಾಲದಲ್ಲಿಯೂ ಮಾಡಲು ತಕ್ಕಷ್ಟು ಕೆಲಸವಿರಬೇಕು. ಮಾಡಿದ ಕೆಲಸಕ್ಕೆ ಕೂಲಿಯು ದೊರೆಯಬೇಕು.

ಸಂಸ್ಥಾನದಲ್ಲಿ ರೇಷ್ಮೆಯ ವ್ಯವಸಾಯವು ರೈತರಿಗೆ ಬಹು ಮುಖ್ಯವಾದ ಉಪಕಸಬಾಗಿದೆ. ಸರ್ಕಾರದವರು ಈ ಉಪಕಸಬಿನಿಂದ ರೈತರಿಗೆ ತಕ್ಕಷ್ಟು ವರಮಾನವು ಬರುವಂತೆ ಮಾಡಲು ಹಲವು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಕೊಳ್ಳೇಗಾಲದ ಗ್ರಾಮಾಭಿವೃದ್ಧಿ ಕೇಂದ್ರದ ಪ್ರದೇಶದಲ್ಲಿ ಕಳೆದ ಮೂರು ತಿಂಗಳುಗಳಲ್ಲಿ 1,71,504 ರೋಗರಹಿತವಾದ ರೇಷ್ಮೆಯ ಗೂಡುಗಳನ್ನು ಸರಬರಾಯಿ ಮಾಡಲಾಗಿದೆ. 2,292 ಉಪ್ಪುನೇರಳೆ ಗಿಡಗಳನ್ನು ಹೊಸದಾಗಿ ಹಾಕಿ ಬೆಳೆಯಿಸಲಾಗಿದೆ. ಈ ಉಪ್ಪುನೇರಳೆಯ ಸಸಿಗಳಿಗೆ ಈ ಪ್ರದೇಶದಲ್ಲಿ ಬಹಳ ಹೆಚ್ಚಿನ ಗಿರಾಕಿಯಿದೆ. ಈಗಾಗಲೇ 80 ಸಸಿಗಳನ್ನು ರೈತರು ತಮ್ಮ ತಮ್ಮ ಮನೆಯ ಹಿತ್ತಲುಗಳಲ್ಲಿಯೇ ಹಾಕಿ ಬೆಳೆಯಿಸುತ್ತಿದ್ದಾರೆ.

ಉಪ್ಪುನೇರಳೆಯ ವ್ಯವಸಾಯವು ಹೆಚ್ಚಿದಂತೆಲ್ಲಾ ಉತ್ತಮ ತರಹದ ಚಂದ್ರಿಕೆಗಳಿಗೂ ಸಹ ಗಿರಾಕಿಯು ಹೆಚ್ಚಿದೆ. ಕೊಳ್ಳೇಗಾಲದ ಕೇಂದ್ರವೊಂದರಲ್ಲಿಯೇ 300 ಚಂದ್ರಿಕೆಗಳನ್ನು ದಾಸ್ತಾನು ಮಾಡಿದೆ. ಗ್ರಾಮ ಪಂಚಾಯತಿಗಳವರು ಅವನ್ನು ರೇಷ್ಮೆ ವ್ಯವಸಾಯಗಾರರಿಗೆ ಸರಬರಾಯಿ ಮಾಡಿ ಅವರಿಂದ ಪಡೆದ ಮೊಬಲಗನ್ನು ಇಲಾಖೆಯವರಿಗೆ ರವಾನೆ ಮಾಡಲು ಒಪ್ಪಿರುತ್ತಾರೆ.

ಹೊಸ ನಮೂನೆಯ ಚರಕವೂ ಸಹ ಜನರಲ್ಲಿ ಹೆಚ್ಚಾಗಿ ಬಳಕೆಗೆ ಬರುತ್ತಾ ಇದೆ. ಇದನ್ನು ಅಲ್ಲಲ್ಲಿ ಪ್ರದರ್ಶಿಸುತ್ತಾ ಇವೆ. ಗ್ರಾಮಸ್ಥರು ಗೂಡುಗಳನ್ನು ತಂದು ಈ ಚರಕಗಳ ಮೂಲಕ ಅವುಗಳನ್ನು ನೂತ ರೇಷ್ಮೆಯನ್ನು ಸಂತೆಯಲ್ಲಿ ತೆಗೆದುಕೊಂಡು ಹೋಗಿ ಮಾರುತ್ತಾರೆ. ಒಂದು ದಿನ ನೂತ ರೇಷ್ಮೆಯನ್ನು ಕೆಲವರು ಪೌಂಡು ಒಂದಕ್ಕೆ 5ರಿಂದ 5 12 0 ರೂಪಾಯಿಗಳಿಗೆ ಮಾರಿರುತ್ತಾರೆಂದು ತಿಳಿದುಬಂದಿದೆ. ಕೊಳ್ಳೇಗಾಲದಲ್ಲಿ ರೇಷ್ಮೆಗೂಡುಗಳ ಮಾರ್ಕೆಟ ಜನಾದರಣೀಯವಾಗಿದೆ. ಕಳೆದ ಮೂರು ತಿಂಗಳುಗಳಲ್ಲಿ 27,992 ಪೌಂಡುಗಳಷ್ಟು ಗೂಡುಗಳನ್ನು ಮಾರಲಾಗಿದೆ. ಇದರ ಬೆಲೆ 6,145 ರೂಪಾಯಿಗಳು.

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಸೋರುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ (ಮಾಲಕರು —ಮಗನಭಾಯಿ ಅಮೀನ್ ಅಂಡ್ ಕಂಪನಿ ಮುಂಬಯಿ

ಕೊಪರಸ್ ಲಾರ್ಜ ಸೈಜ 0 13 0, ಕೊಪರಸ ಸ್ಟ್ಯಾಂಡರ್ಡ ಸೈಜು 0 8 0, ಟೆಂಡರಗಮ್ ಸ್ಟ್ಯಾಂಡರ್ಡ ಸೈಜು 0 8 0

Every Policyholder is a Member
IN
The Canara Mutual
ASSURANCE COMPANY, LTD.
(Head Office:- UDIPI, S. India.)

Everyday the Membership increases
The Company issues all the well-known plans of Assurance
Female lives accepted.

JOIN ITS EVER INCREASING MEMBERSHIP.

ದ್ವೇಷ ಸಾಧಕ ಯುದ್ಧದ ನಿರರ್ಥಕತೆ.

ಇಂಗ್ಲೆಂಡು ಉದಾತ್ತ ಉದ್ದೇಶ ಪ್ರೇರಿತವಾಗಿ ಹೋರಾಡಬೇಕು.

ನವೀನ ಲೋಕ ವ್ಯವಸ್ಥೆಯ ಉದ್ದೇಶವನ್ನು ಸ್ಪಷ್ಟವಾಗಿ ನಿರೂಪಿಸಬೇಕು.

ಹಿಟ್ಲರಿಸ್ಮನ್ನು ನಾಶಮಾಡುವ ರಷ್ಯವನ್ನು ದ್ವೇಷಿಸುವ ಕೂಗೆಬ್ಬಿಸುವುದರಲ್ಲಿ ಅರ್ಥವಿಲ್ಲ.

ಪೋಲೆಂಡು ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಒಪ್ಪಂದಗಳನ್ನು ಮುರಿದೊಗೆದಿವೆ.

ಯುದ್ಧದ ಆವೇಶದಲ್ಲಿ ವಿಚಾರ ವಿವೇಕಗಳಿಗೆ ಒಂದಿಷ್ಟೂ ಆಸ್ಪದವಿರುವುದಿಲ್ಲ ದ್ವೇಷ ಮತ್ತು ಪ್ರತೀಕಾರೋನ್ಮತ್ತತೆಯಿಂದ ಪ್ರೇರಿತನಾದ ಮಾನವನು ಪ್ರತ್ಯಕ್ಷ ದಾನವನೇ ಆಗಿಹೋಗುವನು ಕಳೆದ ಯುದ್ಧದಲ್ಲಿ ವಿಜಯ ಹೊಂದಿದವರ ಉಗ್ರ ಹಾಗೂ ದ್ವೇಷಸಾಧಕ ಮನೋವೃತ್ತಿ ಮತ್ತು ಘೋರಣೆಯೇ ಇಂದಿನ ಯುದ್ಧಕ್ಕೆ ಕಾರಣವೆನ್ನಬಹುದು. ಹಿಟ್ಲರರು ವರ್ಸೈಲ್ಸಿನ ಒಪ್ಪಂದವನ್ನೇ ಮುರಿದೊಗೆಯುವ ಉದ್ಘೋಷದಿಂದ ಜರ್ಮನ್ ಜನಾಂಗದ ಹೃದಯವನ್ನಾಕರ್ಷಿಸಿದನು. ಈಗಣ ಯುದ್ಧದಲ್ಲಿಯೂ ಹಿಟ್ಲರ್ ಶಾಹಿಯನ್ನು ಮುರಿದು ಹಾಕಬೇಕೆಂಬ ದ್ವೇಷಸಾಧನೆಯೇ ಬಲವಾಗಿ ಇತರ ಉದಾತ್ತ ಉದ್ದೇಶಗಳು ಮೂಲೆ ಗುಂಪಾಗುವಂತೆ ತೋರುತ್ತಿದೆ. ಈ ಸಂದರ್ಭದಲ್ಲಿ ವಿಚಾರಶಾಲಿಗಳಾದ ಬ್ರಿಟಿಷರು ಕೆಲವರು ಇಂಗ್ಲೆಂಡಿಗೆ ಕೊಟ್ಟಿರುವ ಎಚ್ಚರವು ಮನನೀಯವಿದೆ ಪಂಡಿತ ಜವಾಹರಲಾಲರ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ಘೋಷಣೆಯನ್ನು ಈ ಅಭಿಪ್ರಾಯಗಳು ಸಮರ್ಥಿಸುತ್ತಿವೆ

ರಷ್ಯವು ತಪ್ಪುಮಾಡಿರುವುದೇ?

"ಹಿಟ್ಲರ್ ಮತ್ತು ಹಿಟ್ಲರ್ ಶಾಹಿಯನ್ನು ನಿಷೇಧಿಸಿ ಫಲವಿಲ್ಲ ಅದರಿಂದ ಜರ್ಮನ್ ಜನತೆಯ ಮೇಲೆ ಏನೂ ಪರಿಣಾಮವಾಗಲಾರದು. ಇಂದೀಗ ಇಂಗ್ಲೆಂಡು ತಾನು ಯಾವ ಉದ್ದೇಶದಿಂದ ಯುದ್ಧ ಹೂಡಿರುವುದೆಂಬುದನ್ನು ಸ್ಪಷ್ಟವಾಗಿ ನಿರೂಪಿಸಬೇಕು ಪೋಲೆಂಡಿನ ಕುರಿತಾದ ನಮ್ಮ ಸಹಾನುಭೂತಿಯು, ಅದರ ಆಂತರಿಕ ದುರ್ಬಲತೆ, ಸೈನ್ಯಾಧಿಕಾರಿಗಳ ಅಳ್ವಿಕೆ ಮತ್ತು ಜನತೆಯಲ್ಲಿ ಅವರಕುರಿತಿದ್ದ ಅನಾದರದ ಕಡೆಗೆ ನಮ್ಮನ್ನು ಕುರುಡುಗೊಳಿಸಬಾರದು ಕಳೆದ ಸಪ್ಟಂಬರದಲ್ಲಿ ಜೆಕೋಸ್ಲೊವೇಕಿಯದ ಮೇಲೆ ಜರ್ಮನಿಯು ಆಕ್ರಮಣಮಾಡಿದಾಗ, ಪೋಲಂಡು ಕೂಡಾ ಅದರ ಕೆಲಭಾಗವನ್ನು ಆಕ್ರಮಿಸಿ ವಶಪಡಿಸಿಕೊಳ್ಳಲು ಮುಂದಾಗಿದ್ದಿತೆಂಬುದನ್ನು ಕೂಡಾ ಮರೆಯಕೂಡದು. ಪೋಲೆಂಡು ಜೆಕೋಸ್ಲೊವೇಕಿಯದ ಮೇಲೆ ದಾಳಿನಡಿಸಿದರೆ, ರಷ್ಯವು ಪೋಲಂಡಿನೊಡನೆ 1932 ರಲ್ಲಿ ಮಾಡಿರುವ ಪರಸ್ಪರ ಅನಾಕ್ರಮಣ ಒಪ್ಪಂದವು ಕೊನೆಗೊಂಡಂತಾಗುವುದೆಂದು ಎಚ್ಚರಿಸಿದುದರಿಂದ ಪೋಲಿಶ್ ಸರಕಾರವು ಹಿಂದ ಸರಿಯಿತು ಅಂದಿನಿಂದ ಈ ಒಪ್ಪಂದಕ್ಕೇನೂ ಬೆಲೆಯಿಲ್ಲೆಂದು ಹೇಳಬಹುದು ಆದುದರಿಂದ ಒಪ್ಪಂದ ಮುರಿದಿರುವುದೆಂದು ರಷ್ಯದ ಮೇಲೆ ಅಪವಾದ ಹೊರಿಸುವುದರಲ್ಲಿ ಹುರುಳಿಲ್ಲ ರಷ್ಯದ ಕುರಿತಾದ ದ್ವೇಷದಿಂದಾಗಿ ಅವರೊಡನೆಯೂ ನಾವು ವೈರತ್ವಕಟ್ಟಿಕೊಳ್ಳುವಂತಾದರೆ ದೊಡ್ಡ ಅನಾಹುತವೇ ಸರಿ ಕಳೆದ ವರ್ಷ ಸಪ್ಟಂಬರದಲ್ಲಿ ರಷ್ಯವು ಜೆಕೋಸ್ಲೊವೇಕಿಯವನ್ನು ರಕ್ಷಿಸಲು ಮುಂದಾದಾಗ ನಾವು ಅಲಕ್ಷ್ಯಿಸಿ ಅದನ್ನು ಬಿಟ್ಟು ಹಿಟ್ಲರರೊಡನೆ ಒಪ್ಪಂದ ಮಾಡಿಕೊಂಡೆವು ಪ್ರೇಗ್ ಪಟ್ಟಣದಲ್ಲಿ ಯುರೋಪಿನ ರಾಷ್ಟ್ರಗಳ ಪರಿಷತ್ತೊಂದನ್ನು ಕರೆಯಬೇಕೆಂಬ ರಷ್ಯದ ಸೂಚನೆಗಳನ್ನು ನಾವು ಕಡೆಗಣಿಸಿದವು ಬಾಲ್ಟಿಕ್ ರಾಜ್ಯಗಳ ಮೂಲಕ ರಷ್ಯದ ಮೇಲೆ ಆಕ್ರಮಣ ನಡೆವರೆ ಸಹಾಯಮಾಡುವ ಭರವಸೆಯನ್ನು ನಾವು ಕೊಡಲೊಪ್ಪಲಿಲ್ಲ. ಪೋಲಂಡು ರಷ್ಯದ ಸಹಾಯವನ್ನು ಕೇಳಿಕೊಂಡು ಆಕ್ರಮಣದಕಾಲದಲ್ಲಿ ಅದರ ಸೇನೆಯನ್ನು ಪೋಲಂಡಿಗೆ ಪ್ರವೇಶಿಸಬಿಡಲೊಪ್ಪುವಂತೆ ನಾವು ಮಾಡಲಿಲ್ಲ ಇಂತಹ ವಿದ್ಯಮಾನಗಳಲ್ಲಿ ಜರ್ಮನಿಯನ್ನು ಪೋಲಂಡಿನಮೇಲೆ ಸಂಪೂರ್ಣ ಅಧಿಕಾರ ನಡಿಸಬಿಡದೆ ಅದರ ಪ್ರಾಮುಖ್ಯ ಭಾಗವನ್ನು ವಶಪಡಿಸಿಕೊಂಡುದರಲ್ಲಿ ರಷ್ಯದ ತಪ್ಪೇನ? ಅದು ಸುಮ್ಮನಿದ್ದುದೇ ಆದರೆ ದೊಡ್ಡ ಅವಿವೇಕವಾಗುತ್ತಿತ್ತು. ಇಂದೀಗ ಅವರ ತಾಟಸ್ಥ್ಯವನ್ನು ನಾವು ಸ್ವಾಗತೀಕರಿಸಬೇಕು ಇಂದೀಗ ಒಪ್ಪಂದಗಳನ್ನು ಮುರಿದವರನ್ನು ನಾವೀಗ ನಿಷೇಧಿಸುವಾಗ, 1935ರಲ್ಲ ಫ್ರಾನ್ಸು ಅಬಿಸೀನಿಯಕ್ಕೆ ಮಾಡಿದ ದ್ರೋಹವನ್ನು ಮರೆಯಬಾರದು ವರ್ಸೈಲ್ಸಿನ ಒಪ್ಪಂದಕ್ಕೆ ವಿರೋಧವಾಗಿ ಜರ್ಮನಿಯನ್ನು ನಾವೇ ಸಬ್ ಮೆರೀನ್ ಕಟ್ಟಬಿಡಲಿಲ್ಲವೇ? ಇಟಲಿಯ ಮೇಲಿನ ಸಾಂಪತ್ತಿಕ ಬಹಿಷ್ಕಾರವನ್ನು ಬಿಟ್ಟು ಅಬಿಸೀನಿಯದ ಆಕ್ರಮಣವನ್ನು ನಾವು ಅಂಗೀಕರಿಸಲಿಲ್ಲವೇ? ಫ್ರಾನ್ಸಿನೊಂದಿಗ ಸೇರಿ ನಾವು ಜೆಕೋಸ್ಲೊವೇಕಿಯವನ್ನು ಬಿಟ್ಟುಹಾಕಲಿಲ್ಲವೇ? ನಮ್ಮ ಅಂತರರಾಷ್ಟ್ರೀಯ ನೀತಿಯ ಮಟ್ಟಕ್ಕಿಂತ ಮೇಲಿನದನ್ನು ಇತರರಿಂದ ನಾವು ನಿರೀಕ್ಷಿಸುವುದಾದರೂ ಹೇಗೆ? ಸುಡೆಟನ್ ಜರ್ಮನ್ ಪ್ರದೇಶವನ್ನು ಜರ್ಮನಿಗೆ ಬಿಟ್ಟುಕೊಡಲೊಪ್ಪಿದ ಇಂಗ್ಲೆಂಡು ಡಾನ್ಜಿಗಿನ ಮೇಲೆ ಪೋಲೆಂಡಿನ ಅಧಿಕಾರವಿರಬೇಕೆಂದು ಸಾಧಿಸುವುದರಲ್ಲಿ ಅರ್ಥವಿಲ್ಲ ಹೆಚ್ಚಾಗಿ ಜರ್ಮನ್ ಸಂಖ್ಯೆ ಇರುವ ಪೋಲೆಂಡಿನ ಭಾಗವನ್ನ ಜರ್ಮನಿಯು ಪುನಃಪಡಕೊಳ್ಳುವ ಕುರಿತು ಆಕ್ಷೇಪಿಸಲು ಸಾಧ್ಯವಿಲ್ಲ ರಷ್ಯದೊಂದಿಗೆ ಸೇರಲಿಚ್ಛಿಸುವ ಪೋಲೆಂಡಿನ ಭಾಗವನ್ನು ನಾವು ಬಿಟ್ಟುಬಿಡಬೇಕು ಪೋಲಿಶ್ ಸರಕಾರದ ಬದಲಿಗೆ ಸೋವಿಯೆಟ್ ಸರಕಾರವನ್ನಪೇಕ್ಷಿಸುವವರು ಪೋಲೆಂಡಿನಲ್ಲಿ ಅನೇಕರಿರಬಹುದು ಆದುದರಿಂದ ನಾವು ನಮ್ಮ ಉದ್ದೇಶದ ಪುನರ್ನಿರೂಪಣೆಮಾಡಿ ಜರ್ಮನ್ ಜನತೆಯ ನಿಜವಾದ ಹಿತಸಾಧಕರು ಮತ್ತು ಜಾಗತಿಕ ನವವ್ಯವಸ್ಥೆ, ಶಾಂತಿ ಮತ್ತು ಸುಭಿಕ್ಷಗಳ ಪ್ರತಿಪಾದಕರೆಂಬುದನ್ನು ಲೋಕವಿಶ್ರುತಗೊಳಿಸಬೇಕು ಮಾನವ ಪಾರ್ಲಿಮೆಂಟು, ಜಾಗತಿಕ ಸಂಯುಕ್ತ ರಾಜ್ಯಾಂಗರಚನೆಯೇ ಮುಂದಿನ ಉದ್ದೇಶವಾಗಬೇಕು. ಹಾಗಾದರೇನೇ ಇಡೀ ಲೋಕದ ಸಹಾನುಭೂತಿ ಮತ್ತು ಉತ್ಸಾಹಪರ ಸಹಾಯವು ಇಂಗ್ಲೆಂಡಿಗೆ ದೊರೆಯಬಹುದೆಂದು ಮಿಸಸ್ ಲಿಂಡ್ಸೆ ಮತ್ತು ಮಿ ಬೆರಿಡೇಲ್ ಕೈಥರು ಮೆಂಚೆಸ್ಟರ್ ಗಾರ್ಡಿಯನ ಪತ್ರಿಕೆಯಲ್ಲಿ ಬರೆದಿರುವರು

ನವೀನ ಅಂತರರಾಷ್ಟ್ರೀಯ ವ್ಯವಸ್ಥೆ

"ಈಗೊಮ್ಮೆ ಹಿಟ್ಲರ್ ಶಾಹಿಯು ಅಳಿಯದೆ ಲೋಕಕ್ಕೆ ಉಳಿಗಾಲವಿಲ್ಲವೆಂಬುದು ನಿಶ್ಚಯ ಆದರೆ ಇನ್ನು ಮುಂದೆ ನವ ಹಿಟ್ಲರ್ ಶಾಹಿಯು ತಲೆಯೆತ್ತದಂತೆ, ಅಂತರರಾಷ್ಟ್ರೀಯ ವ್ಯವಸ್ಥೆಯ ಏರ್ಪಾಡನ್ನು ಮಾಡಬೇಕು ರಾಜಕೀಯವಾಗಿ ಮಾತ್ರವಲ್ಲದೆ ಸಾಂಪತ್ತಿಕವಾಗಿಯೂ ನ್ಯಾಯವಾದೊಂದು ವ್ಯವಸ್ಥೆಯ ಅವಶ್ಯಕತೆಯಿದೆ ಕಚ್ಚಾಮಾಲುಗಳೆಲ್ಲಾ ಲೋಕದಲ್ಲಿ ಸರಿಯಾಗಿ ಹಂಚಲ್ಪಡಬೇಕು ರಾಜಕೀಯ ಮತ್ತು ಸಾಂಪತ್ತಿಕ ವ್ಯವಹಾರ ವಹಿವಾಟುಗಳಲ್ಲಿ ಇಡೀ ಲೋಕವು ಒಂದಾಗಬೇಕು ಇದಕ್ಕಾಗಿ ಅಂತರರಾಷ್ಟ್ರೀಯ ಸಂಯುಕ್ತ ಆಡಳಿತ ಯಂತ್ರವು ಸ್ಥಾಪಿಸಲ್ಪಟ್ಟು, ಅದಕ್ಕೆ ಅವಶ್ಯವಾದ ಸೇನೆ ಮತ್ತು ಪೋಲೀಸ್ ಬಲವಿರಬೇಕು. ಇತರ ರಾಷ್ಟ್ರಗಳೆಲ್ಲಾ ಶಸ್ತ್ರತ್ಯಾಗಮಾಡಿ ಸೇನೆಗಳನ್ನು ತೆಗೆದುಹಾಕಬೇಕು ಕಲಹಗಳನ್ನು ಇತ್ಯರ್ಥ ಪಡಿಸಲು ಅಂತರರಾಷ್ಟ್ರೀಯ ಕೋರ್ಟು ಸ್ಥಾಪಿಸಲ್ಪಡಬೇಕೆ"ಂದು ಪ್ರೊಫೆಸರ್ ಜೂಲಿಯನ್ ಹಕ್ಸ್ಲೆಯವರು ಲಂಡನ್ ಟೈಮ್ಸ್ ಪತ್ರಿಕೆಯಲ್ಲಿಸೂಚಿಸಿರುವರು.

ಎಚ್.-ಜಿ. ವೆಲ್ಸರ ಹೊಸ ಲೋಕ

"ಮಾನವ ವ್ಯವಹಾರದಲ್ಲಿ ದೊಡ್ಡ ಕ್ರಾಂತಿಯೊಂದುಂಟಾಗುವುದೆಂದು ಕಳೆದ ಮಹಾಯುದ್ಧದಲ್ಲಿಯೂ ಭಾವಿಸಲಾಗಿತ್ತು. ಯುದ್ಧವನ್ನೇ ಕೊನೆಗೊಳಿಸುವ ಮಹಾ ಯುದ್ಧವೆಂದಾಗ ಉದ್ಘೋಷಿಸಲ್ಪಟ್ಟಿತು. ಆದರೆ ಆ ಕ್ರಾಂತಿಯು ಒಸ್ಸತಾಳಲೇ ಇಲ್ಲ. ಸಶಸ್ತ್ರ ಹೋರಾಟವನ್ನು ಬಹಿಷ್ಕರಿಸಿ ಮಾನವ ಕೋಟಿಯ ಜೀವನದಲ್ಲಿ ನವ ವ್ಯವಸ್ಥೆಯನ್ನು ಮಾಡಲು 'ಲೀಗ್ ಆಫ್ ನೇಶನ್ಸ್, ದುರ್ಬಲ ಹಾಗೂ ನಿರರ್ಥಕ ಉಪಕರಣವಾಗಿ ಪರಿಣಮಿಸಿತು. ಮಾನವ ಜೀವನದ ರೀತಿ ನೀತಿಗಳ ಪುನರ್ಘಟನೆಯಾಗದೆ ಲೋಕದಲ್ಲಿ ಶಾಂತಿ ಮತ್ತು ಸುರಕ್ಷಿತತೆಯು-ನೆಲೆಗೊಳ್ಳಲಾರದು ಕಳೆದ 20 ವರ್ಷಗಳಲ್ಲಿ ನಾವು ಮಾಡಿರುವ ತಪ್ಪಿನಿಂದಾಗಿ 1914 ಕ್ಕಿಂತಲೂ ಭಯಂಕರ ಪರಿಸ್ಥಿತಿಯು ಇಂದೀಗ ಲೋಕದಲ್ಲುಂಟಾಗಿರುತ್ತದೆ. ಈ ಯುದ್ಧದಿಂದಾದರೂ ಲೋಕ ಕ್ರಾಂತಿಯುಂಟಾಗಿ ಮಾನವ ಕುಟುಂಬದ ನವ ವ್ಯವಸ್ಥೆಯಾಗುವುದೇ ಎಂಬುದೀಗ ಪ್ರಶ್ನೆ ರಷ್ಯದ ನವೀನ ಪ್ರಯೋಗದ ಮಾದರಿಯು ಈಗ ನಮ್ಮ ಮುಂದಿದೆ ಖಾಸಗಿ ಸ್ವಾರ್ಥ ಮತ್ತು ಲಾಭವು ಅಂತ್ಯವಾಗಿ ಸಾಮಾಜಿಕ ಸಮಾನತೆ ಮತ್ತು ನ್ಯಾಯವನ್ನೆತ್ತಿಹಿಡಿಯುವ ಅಂತರರಾಷ್ಟ್ರೀಯ ಸುವ್ಯವಸ್ಥೆಯಿಂದ ಮಾತ್ರವೇ ಚಿರ ಲೋಕಶಾಂತಿ ಮತ್ತು ಸುಭಿಕ್ಷೆಯು ಸಾಧ್ಯವಿದೆಯೆಂಬುದೇ ಸೋವಿಯೆಟ್ ಸಮಾಜ ಪದ್ಧತಿಯಿಂದ ನಾವು ಕಲಿಯತಕ್ಕ ಪಾಠ ನಿಜವಾದ ಲೀಗ್ ಒಫ್ ನೇಶನ್ಸು 1918-19ರಲ್ಲಿ ಲೋಕವನ್ನೊಂದು ಹೊಸ ಹಾದಿ ಹಿಡಿಸುತ್ತಿತ್ತು. ಮಾನವ ಕೋಟಿಯ ಫೆಡರೇಶನಿನಿಂದ ಮುಂದೆ ಲೋಕದಲ್ಲಿ ನವ ವ್ಯವಸ್ಥೆಯನ್ನುಂಟುಮಾಡಬಹುದು ಆದರೆ ಇದಕ್ಕೀಗಲೇ ಕಾರ್ಯತಃ ಸಿದ್ಧತೆನಡೆಯಬೇಕು ಕೇವಲ ಬಾಯಿಮಾತಿನಿಂದ ಉದಾತ್ತ ತತ್ವಗಳನ್ನು ಸಾರಿಬಿಟ್ಟರೆ ಸಾಲದು ಎಂದಿನಂತಹ ಅಪ್ರಾಮಾಣಿಕತನ, ಕಣ್ಣುಕಟ್ಟು ವಂಚನೆ ಮತ್ತು ಒಳಸಂಚುಗಳ ಕುಟಿಲ ರಾಜನೀತಿಯೇ ಮುಂದೆಯೂ ನಡೆಯುವಂತಾದರೆ ಮಾನವಕೋಟಿಯ ನಾಶದ ಹೊರತು ಅಭ್ಯುದಯದ ಆಶೆಯೇ ತೋರುವುದಿಲ್ಲೆಂದು ಮಿ ಎಚ್. ಜಿ ವೆಲ್ಸರು ಟೈಮ್ಸ್ ಪತ್ರಿಕೆಯಲ್ಲಿ ಬರೆದಿರುವರು.

Hark:-

Only a few pages more are available

FOR

ADVERTISEMENT

IN

THULUNAD

TILAKA PANCHANGA

1940

Apply early to: MANAGER

THULUNAD PRESS, UDIPI.

(PROPS GENERAL SUPPLIES, LIMITED)

ಸ್ಥಾಪನೆ] **ಕೆನರಾ ಛಾಪಖಾನೆ** [1920
(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)
ಹಂಪನಕಟ್ಟೆ, ಮಂಗಳೂರು.
ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ಸಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.
ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

DAIMONDS! DAIMONDS!
K. R. K. SHET
Opposite Govt College, Hampankatte, MANGALORE
SHOW-ROOM & WORK SHOP.
SUPERFINE UP TO DATE CUTTING! **ವಜ್ರಗಳು** BEST BRILLIANCY !!
ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಕ್ಸ್‌ಸ್ಟ್ರ ದಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ ಇವರ ಶಾಪ್ ಯೊಂದನ್ನು ಗವರ್ನಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ
ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.
ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಬಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸ್ವಾಗತ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು
M. R. Punja, *President & Manager,* ಯಂ. ಆರ್. ಪೂಂಜ, ಪ್ರಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು
ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೂಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಅಳಬಿಟ್ಟಿರುವ ನಿತ್ಯ ಮಕ್ಕಳು ತಿರುಗಿನಿತ್ಯ ಕೈಗಸಾರುವುದು. ಸೀಸಾಕ್ಕೆ 12ಆಣೆ, ಟಪಾಲ 3ಆಣೆ
ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ;
ಉಡುಪಿ ಸ್ಟಾಕಿಸ್ಟ್ರು - ನವಭಾರತ ಬುಕ್‌ಡಿಪೋ ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ
ಸೂತಿಕಾ ರಸಾಯನ
ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. ಶೋಧನ ಗುಣ —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಒಗ್ಗಿಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು **ಸುಖಸೇವನ** ಸುಖಸೇವನದಿಂದ ಮಧುರರುಚಿ ಹರವಾದಕಾರಸಾಯನವೃಚಾಣಂತಿಯರಅರುಚಿ,ಅಗ್ನಿಮಾಂದ್ಯ,ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.
ಒಟ್ಟಲು ಬಾಣಂತಿಗೆ ಎರಡು ಬಟ್ಟಿ ಬೇಕಾಗುವದು ಕ್ರಯ ಬಾಟ್ಲಿ 1ಕ್ಕೆ ರೂ2-0-0
ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ

ಮೂಲವ್ಯಾಧಿ
ಸಾಧ್ಯ ಪ್ರಾಚೀನ ಸಿದ್ಧಿಯಾಗಿರುವ ವಿಚಿತ್ರ ಹಗೂ ಅಪೂರ್ವ ಔಷಧಿ
ಅರ್ಶ-ಮಾರಾ (ರಜಿಸ್ಟರ್ಡ)

ರಕ್ತ ಸ್ರವಿಯುವ ಅಥವಾ ಬೇರೆ ಗಿರುವ ಹಳೆಯ ಅದವಾ ಹೊಸದಾದ ಬಗೆಗಿನ ಅಥವಾ ಜೀರಾಗಿನ ಯಾವ ಸ್ಥಿತಿಯ ಪೈಲ ಅರ ಮೂಲವ್ಯಾಧಿಯು 'ಅರ್ಶಮಾರಾ' ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವದು ನೋವ ತುರಸುವಿಕೆ, ಉರಿಯು, ಬಿಕ್ಕೆ, ರಕ್ತಸ್ರಾವ,ಗುವ್ವದನ್ನು ಕೂಡಲೆ ನಿಲ್ಲಿಸಿಬಿಡುವದು ಕೇವಲ 3 ದಿನ
ಹತ್ತು ವರ್ಷ ಯಾವ ತರದ ಔಷಧಿ ಹಲವು ಸೇವಿಸಿದ ಮೂಲವ್ಯಾಧಿ ಅಥವಾ ಫಿಸ್ಟುಲಾ ರೋಗಿಗಳು ಈ ಔಷಧಿಯಿಂದ ಗುಣಹೊಂದಿ ಆರೋಗ್ಯ ಹೊಂದಿರುತ್ತಾರೆ ರಸು ಮಾಡುತ್ತಿದ್ದಾರೆ ಗುಣವಾಗದಿದ್ದಲ್ಲಿ ಹಣ ವಾಪಸ್ಸು ಬೆಲೆ ರೂ 2 0 0
ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

Most Reliable New Model 1939
High Grade Lever Movement. Offered at 50% Reduction
No 517 STRONG & DURABLE
ROUND OR SQUARE

No 401 Chromium Rs 3 0 0
, 402 Golden Case ,, 4 0 0
LEVER MOVT 15 JEWELS
Guaranteed 5 Years
No 517 Chromium Rs 6 8 0
No 518 Golden Case Rs 8 0 0 **No 561 Chromium** Rs 13 8 0
No 562 Rolled Gold Rs 17 0 0 **Catalogue Free** As 9/-
Extra for postage & packing
(CORRESPONDENCE IN ENGLISH ONLY)
BAPALAL & CO., *101 Abdul Rehman Street*, **Bombay 3**

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.
ಗಾರ್ಡನ್ ಹೋಟೆಲ್ [ಫೋನ್ 406] ಜಗ ಪ್ರಸಿದ್ಧಿ ಹೊಂದಿದ ಮೈಸೂರು.
ಅರಮನೆಯ ಎದುರು ಫೋನ್ ನಂಬ್ರ 347
ಉಡುಪಿ ಆನಂದಭವನ
ಬನ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ ರೆಸ್ಟೋರೆಂಟ್ ಕನ್ನಂಬಾಡಿ ಮೈಸೂರು
ಸುಪ್ರಸಿದ್ಧ ಬಂದಲ್ಲಿ **ಮೈಸೂರು ಕೇಪ್** ಬೋರ್ಡಿಂಗ್ ಮತ್ತು ಲೋಜಿಂಗ್
ಪ್ರೊಪ್ರೈಟರ್ .ಕೆ. ಗುರುರಾಜಾಚಾರ್ಯ.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ಪದ್ಧತಿಯ ಬ್ಲಾಕುಗಳು, ಡಿಸೈನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಟಾಂಪ್ ಬೋರ್ಡ್ ಪ್ರಿಂಟಿಂಗ್ ವಗೈರೆ ಕೆಲಸಗಳನ್ನು ಕೈಕೊಳ್ಳಲಾಗುವುದು.
ಅನ್ನಪೂರ್ಣ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಸೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ

Transport & Car Owners

ARE SPECIALLY INVITED TO VISIT
OUR SHOW ROOM *for economical transport maintenance*
CANARA AUTOMOBILES - - - - - MANGALORE

ಇಂದು ಮಿಲಿಯಗಟ್ಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್‌ಪೌಡರ್ (ರಜಿಸ್ಟರ್ಡ)
ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, **ಮಂಗಳೂರು.**

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ' ಔಷದಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರೆಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳೂ ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ 'ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳು

ಪ್ರಯ ಸೀಸೆ 1ಕ್ಕೆ ರೂ. 2—8—0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ ಮತ್ತು ಪ್ಯಾಕಿಂಗ್ ಮಾಫಿ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1—4—0

ವಿ ಪಿ ಬೇರೆ

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ ಪಿ. ಮತ್ತು ಪ್ಯಾಕಿಂಗ್ ಮಾಫಿ

'ಹವನನ್' ಹೆಮೊರೊೈಡ್ — ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೊರೊೈಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ 1-4-0 ವಿ ಪಿ ಬೇರೆ

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಬಲಿಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ 1-0-0 ವಿ. ಪಿ ಬೇರೆ.

ಹಿಂದುಸ್ಥಾನದ ಪ್ರಮುಖ ಏಜಂಟರು,

The Eclipse Distributing Agency,

Dahanu Road B. B & C I. Ry BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ನಮಗೆ ಏಜಂಟರುಗಳು ಬೇಕಾಗಿದ್ದಾರೆ. ... ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S S KARANTH AT THE THULUNAD PRESS, UDIPI AND PUBLISHED BY B H SHETTY AT NAVAYUGA OFFICE, UDIPI, S. INDIA.

Be Ready—War necessitates demand for telegraphists etc Allowance, uniform, passage and quarter Prospectus on annas eight Director, Royal Tel and Ry Duties College, Bombay 11.

WANTED one Inspector, two Organisers and Agents in South Kanara. Apply stating previous experience to –
The Bombay Co-operative Insurance Society Ltd,
Office for Mysore, Coorg & South Kanara
Sabuvani Building Narashima Raja Road Bangalore City

ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

FOUNDER
SRI A. B SHETTY, M L A,
Parliamentary Secretary Govt of Madras

ಸಂಪಾದಕ: ಕೆ. ಕೆ. ಶೆಟ್ಟಿ. ಸಹಸಂಪಾದಕ: ಕೆ. ಎಸ್. ಶೆಟ್ಟಿ.

ಸಂಪುಟ ೧೯	ಉಡುಪಿ	VOL 19
ಸಂಚಿಕೆ ೭	ಗುರುವಾರ, ತಾ 19-10-1939.	No. 7

'SERWELL'
RUBBER STAMPS
OFTEN APPEAL,
Since they surely serve well.
YOU CAN HAVE ONE
On placing your order with our Representatives in your area
IF UNREPRESENTED WRITE FOR AGENCY TERMS
Manufacturers.—
on the approved list of the Govt. of Mysore
YADIKE BROS.
MANUFACTURERS
REPRESENTATIVES,
IMPORTERS & ENGINEERS,
BANGALORE CITY.

ರಾಜಧಾನಿಯಲ್ಲಿ ದಸರಾ ಮಹೋತ್ಸವ.
ಫೋನ್ ನಂ 406
ಗಾರ್ಡನ್ ಹೋಟೆಲ್
ಬ್ರಾಹ್ಮಣ ಭೋಜನಶಾಲಾ ಮತ್ತು ವಸತಿ ಗೃಹ,
ದೊಡ್ಡ ಗಡಿಯಾರದ ಎದುರು, ಮೈಸೂರು.

ಆಧುನಿಕ ಸೌಕರ್ಯ, ಅಂದವಾದ ರೂಮುಗಳು, ರುಚಿಕರವಾದ ಭೋಜನ
ಮೈಸೂರಿನಲ್ಲಿ ನಡೆಯತಕ್ಕ ದಸರಾಮಹೋತ್ಸವಕ್ಕೆ ಪರಸ್ಥಳಗಳಿಂದ
ಬರುವ ಮಹನೀಯರುಗಳಿಗೂ,
ವ್ಯಾಪಾರಸ್ಥರಿಗೂ, ಅರಮನೆ, ಪೋಸ್ಟಾಫೀಸು, ರೇಸ್‌ಕೋರ್ಸ್
ಮತ್ತು ಎಲ್ಲಾ ವ್ಯವಹಾರಸ್ಥಳಗಳಿಗೂ, ಸಮೀಪವಿದ್ದು
ವಿಶಾಲವಾದ ಕಂಪೌಂಡಿನಲ್ಲಿ, ಅಂದವಾದ ಗಾರ್ಡನಿನಲ್ಲಿ
ರೇಡಿಯೋ ಸಂಗೀತದಿಂದ ನೂತನ ಏರ್ಪಾಡುಗಳಿಂದ
ಏರ್ಪಡಿಸಿದ ಸಿಂಗಲ್ ಮತ್ತು ಫ್ಯಾಮಿಲಿ ರೂಮುಗಳು,
ಫರ್ನಿಚರ್ ಸಹಿತ ದೊರೆಯುತ್ತದೆ

— ಇದಕ್ಕೆ ಸೇರಿದ ಬ್ರಾಂಚ್ —
ಉಡುಪಿ ಆನಂದ ಭವನ ರೆಸ್ಟೋರೆಂಟ್ ಫೋನ್ ನಂ 347
ದೊಡ್ಡ ಗಡಿಯಾರದ ಎದುರು, ಮೈಸೂರು,
ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು
ಕೃಷ್ಣರಾಜಸಾಗರ ರೆಸ್ಟೋರೆಂಟ್, ಬೃಂದಾವನ
ವಿ. ಸೂ — ವಿಜಯದಶಮಿದಿನ ಶ್ರೀಮನ್ಮಹಾರಾಜರವರ ಮೆರವಣಿಗೆ ನೋಡಲು ಸೀಟಿನ ಅನುಕೂಲತೆಗಳನ್ನು ಮುಂಚಿತವಾಗಿ ತಿಳಿಸಿದ್ದಲ್ಲಿ ಏರ್ಪಡಿಸಲಾಗುತ್ತದೆ

ಕೆ. ಗುರುರಾಜಾಚಾರ್,
ಪ್ರೊಪ್ರೈಟರ್

ದ್ವಾರಾವತೀಂ ಸಕಲಭಾಗ್ಯವತೀಮುಪೇಕ್ಷ್ಯ
ಗೋಪಾಲಬಾಲಲಲನಾಕರಪೂಜನಂ ಚ ।
ಪಾರ್ಥಿಂ ವಧೂಗೃಹಮುತೀತ್ಯ ಸ ಮಧ್ವನಾಥೋ
ಯತ್ರಾಸ್ತಿ ತದ್ರಜತಪೀಠಪುರಂ ಗರೀಯಃ ॥

ಉಡುಪಿ
ಶ್ರೀ ಕೃಷ್ಣನ ಸನ್ನಿಧಿಯಲ್ಲಿ
ಇದೇ ಬರುವ ತಾ. 23—11—1939ರಿಂದ
26—11—1939ರ ತನಕ
ಪ್ರಮಾಥಿ ಸಂ|ರದ ಕಾರ್ತಿಕ ಶು. (ಉತ್ಥಾನ) ದ್ವಾದಶಿಯಿಂದ ಆರಂಭಿಸಿ
ಹುಣ್ಣಿಮೆಯ ವರೆಗೆ ನಾಲ್ಕು ರಾತ್ರಿಗಳಲ್ಲಿ
ಲಕ್ಷದೀಪೋತ್ಸವವು
ಜರಗಲಿರುವುದು.

ಶ್ರೀಮನ್ಮಧ್ವಾಚಾರ್ಯರವರ ಅವತಾರಸ್ಥಾನವಾಗಿದ್ದು, ಮುಕ್ತಿಪ್ರದವಾದ ಸಪ್ತಕ್ಷೇತ್ರಗಳಲ್ಲಿ ಮುಖ್ಯವಾದ ಉಡುಪಿಯು ಶ್ರೀಮದಾಚಾರ್ಯರ ದಿವ್ಯಹಸ್ತದಿಂದ ಪ್ರತಿಷ್ಠಿತನಾದ, ಕಡಗೋಲು ನೇಣನ್ನು ಕೈಗಳಲ್ಲಿ ಹಿಡಿದುಕೊಂಡು ನಿಂತಿರುವ, ರುಕ್ಮಿಣೀಕರಾರ್ಚಿತ ದಿವ್ಯ ಬಾಲಕೃಷ್ಣನ ಸನ್ನಿಧಾನದಿಂದ ಅತಿ ಪವಿತ್ರವೆಂದು ಹೆಸರುಗೊಂಡಿದೆ ಈ ಸುಂದರ ಮೂರ್ತಿಯ ದರ್ಶನ ಮಾತ್ರದಿಂದ ಭಕ್ತರ ಹೃದಯದಲ್ಲಿ ಅಪೂರ್ವ ಭಕ್ತಿಸ್ರೋತವು ಉಕ್ಕಿ ಪ್ರವಹಿಸುವುದರಲ್ಲಿ ಆಶ್ಚರ್ಯವಿಲ್ಲ ಸಾವಿರಾರು ಆಸ್ತಿಕಭಕ್ತರು ಈ ಪರಮಾತ್ಮನ ಮತ್ತು ಗುರುಗಳಾದ ಮಧ್ವಾಚಾರ್ಯರ ಸೇವಾ-ದರ್ಶನಾದಿಗಳಿಂದ ತಂತಮ್ಮ ಅಭೀಷ್ಟಸಿದ್ಧಿ ಪಡೆದಿರುತ್ತಾರೆ.

ಇದಲ್ಲದೆ ಉಡುಪಿ ಕ್ಷೇತ್ರವೂ ಸುತ್ತುಮುತ್ತಲಿನ ರಮಣೀಯವಾದ ಪ್ರಾಕೃತಿಕ ದೃಶ್ಯಗಳಿಂದ ಕೂಡಿದ ಮನೋಹರ ಮತ್ತು ಸ್ವಾಸ್ಥ್ಯಪ್ರದವಾದ ಪ್ರದೇಶದಲ್ಲಿರುವುದು

ಏಕಕಾಲದಲ್ಲಿ ಶ್ರೀಹರಿಗುರುಗಳ ದರ್ಶನ-ಸೇವಾದಿಗಳ ಲಾಭ ದೊರೆಯುವ ಈ ಪುಣ್ಯಕ್ಷೇತ್ರವನ್ನು ಕಾರ್ತಿಕ ಲಕ್ಷದೀಪೋತ್ಸವ ಕಾಲದಲ್ಲಿ ಸಮಸ್ತ ಭಜಕರೂ ಅವಶ್ಯ ನೋಡಬೇಕಾಗಿದೆ ರಥೋತ್ಸವಕ್ಕೆ ಮೊದಲು ತೆಪ್ಪೋತ್ಸವವೂ, ನಾಲ್ಕು ಬೀದಿಗಳಲ್ಲಿಯೂ ಬೆಳಗಿಸುವ ಲಕ್ಷಗಟ್ಟಳೆಯ ದೀಪಮಾಲೆಗಳ ವೈಭವವೂ ಅತಿ ಪ್ರೇಕ್ಷಣೀಯವಾಗಿವೆ

ಹೆಚ್ಚಿನ ಅನುಭವಕ್ಕೂ, ವಸತಿ ಮೊದಲಾದ ಸೌಕರ್ಯಗಳಿಗೂ ಪತ್ರ ಬರೆದು ಕೇಳಿರಿ.
ಏಜಂಟ್. **ಪರ್ಯಾಯ ಶ್ರೀಫಲಿಮಾರು ಮಠ, ಉಡುಪಿ, ದ. ಕ.**

ಲೈಬ್ರೆರಿ
ಮತ್ತು
ಸ್ಕೂಲ್‌ಗಳಿಗೆ
ಬೇಕಾದ ಎಲ್ಲಾ ತರದ
ಪುಸ್ತಕಗಳು ನಮ್ಮಲ್ಲಿ
ದೊರೆಯುತ್ತವೆ.

ಕೆಟಲಾಗ್ ಬರೆಯಿರಿ.
ಪಿ. ಎ. ಉಪಾಧ್ಯಾಯ,
ಬುಕ್‌ಸೆಲ್ಲರ್ ಅಂಡ್ ಪಬ್ಲಿಷರ್,
ಎ. ಎಸ್ ಸ್ಟ್ರೀಟ್,
ಬೆಂಗಳೂರು ಸಿಟಿ.

THULUNAD BANK
OF SUPPLY AGENCY LIMITED,
ESTD.] UDIPI. [1933.

Current Account are accepted at 3% p. a.

All kinds of Banking business transacted

Write for particulars to —
The Managing Director.

— ಗರ್ಭ ನಿರೋಧ —
ರಹತ್ ಇದು ಗರ್ಭಧಾರಣೆಯನ್ನು ನಿಶ್ಚಯವಾಗಿಯೂ ತಡೆಗಟ್ಟುವುದು ಇದನ್ನು 3 ದಿವಸ ಉಪಯೋಗಿಸಿದರೆ ಗರ್ಭಧಾರಣೆಯ ಪೀಡೆಯು ಜೀವಾವಧಿಯವರೆಗೆ ನಿವಾರಿಸುವುದು ಶರೀರಕ್ಕೆ ಯಾವ ವಿಧದ ಹಾನಿಯೂ ಇರುವುದಿಲ್ಲ ಯಾವರೀತಿಯ ಮುಟ್ಟುದೋಷವೂ ಉಂಟಾಗುವದಿಲ್ಲ. ಪ್ರತಿಯೊಂದು ಓರ್ಡರಿನೊಂದಿಗೆ ಗ್ಯಾರಂಟೀ ಪತ್ರವಿದೆ ಬೆಲೆ ರೂ, 5-8 0
ರಜವತಿ-ಮುಟ್ಟು ನಿಲ್ಲಿಸಲ್ಪಟ್ಟುದನ್ನು ಪುನಃ ಕ್ರಮವಾಗಿ ಆಗುವಂತೆ ಮಾಡುವುದು ಬೆಲೆ ರೂ 5 8-0 ವಿದೇಶ 10ಶಿಲ್ಲಿಂಗು
ಫೋ. ನಂ. 21343
Dr. S. H. Khan,
42 (*N. G*) *Churchgate street*
Fort Bombay

THE ASIAN ASSURANCE COMPANY, LTD.

ASIAN BUILDINGS — BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40 601	9,24,965	24,50 234
1935	2,52,08,418	18 39 296	42,98 820
1938	3,61,36,764	22 34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc.

Sri B Narayan Shetty, Organizer Brahmavar
„ M Shivarama Rao, Organizer, Puttur

Or

Sri J. A. PUTRAN,
Branch Manager MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2 02 800/- Paid up Capital Rs 1 82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year.

For further particulars please address or call at any of our offices.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪ್ರೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾದಲಾಗಿದೆ

ಅಮೃತಾಂಜನ ಡಿಪ್ರೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷದ ತಯಾರಿಯಲ್ಲಿ ಯಾ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ರೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ
ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು
ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.
ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ
ನಾವು ಕೈಹಾಕುತ್ತಿರುವೆವು
ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರ
ವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು
ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ ಹಸಿವನ್ನು ಕೆರಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು ಕೆಮ್ಮು, ಶೀತಬಾಧೆ ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯ ಔಷಧಿ
ಪೌಂಡ್ ರೂ 2 8 0, ½ ಪೌಂಡಿಗೆ ರೂ 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ಕೊಡುವ ಶಕ್ತಿ ಧಾತುವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಪೋಷಕವಾಗಿ ಆರೋಗ್ಯವಂತೆ ಮಾಡುವುದು ಬಾಟ್ಲಿ 1ರ ರೂ 1-8-0.

ಕೆಟಲಾಗಿಗೆ ಬರೆಯಿರಿ — **ಯಂ. ಗಣಪಯ್ಯ ಎಂಡ್ ಸನ್ಸ್**

ನಂಬ್ರ 11 ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳ ನಮ್ಮಲ್ಲಿ ದೊರೆಯುತ್ತವೆ ಕೆಟಲಾಗಿಗೆ ಬರೆಯಿರಿ.

ಉಡುಪಿ ಸಬ್ಏಜೆಂಟರು—ನವಯುಗ ಬುಕ್ ಡಿಪ್ರೋ ಮತ್ತು ಕೊರಗಪ್ಪ ಸ್ಟೋರ್ಸ್ ಏಜಂಟ್ಸ್ ಉಡುಪಿ

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1 8-0



ಕನ್ನಡ ಓದಲಿಕ್ಕೆ ತಿಳಿದವರ ಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ ಮಾತಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕವನ್ನು ಇಲ್ಲಿವರೆಗೆ ಯಾರೂ ತಯಾರಿಸಿಲ್ಲ ಪೇಜುಗಳು ಇರುವ ದೊಡ್ಡ ಪುಸ್ತಕ ಅಲ್ಪ ಪ್ರತಿಗಳು ಮಾತ್ರ, ಇರುವುದು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ಇದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ ಮನೆಯಲ್ಲೇ ಈ ಪುಸ್ತಕ ಓದಿ ಇಂಗ್ಲೀಷ್ ಓದ ಬರಹ ಎಲ್ಲ ಸುಲಭವಾಗಿ ಬರುತ್ತ ಪುಸ್ತಕದ ಬೆಲೆ ರೂ 1॥

Western Swiss watch Co
Book Sellers Post Box No 68
G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68 ಮದರಾಸ್

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು
ನುಣುಪಾಗಿಯೂ ನಯವಾ
ಗಿಯೂ ಇರಿಸುವ ಮತ್ತು
ದೇಹ ಸೌಂದರ್ಯವನ್ನು
ಬೆಳಗಿಸುವ ಸಾಬೂನುಗಳಲ್ಲೇ
ಸರ್ವೋತ್ಕೃಷ್ಟವಾದುದು
ಮೈಸೂರು
ಸೇಂಡಲ್ ಸೋಪು
ಜನಮನರಂಜನೆಯ ಈ ಸಾಬೂನನ್ನ
ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಖದ್ದರು ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಸ್ವೈಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

: ಜಾಹೀರಾತು :
ದರಗಳು.
೧ ಪುಟಕ್ಕೆ ೧ ಸಲಕ್ಕೆ ... ರೂ. ೨೫
ಅರ್ಧ ಪುಟಕ್ಕೆ ೧ ಸಲಕ್ಕೆ ... ,, ೧೫
ಕಾಲು ಪುಟಕ್ಕೆ ೧ ಸಲಕ್ಕೆ ... ,, ೮
ಅರೆಕಾಲು ಪುಟಕ್ಕೆ ೧ ಸಲಕ್ಕೆ ,, ೫
ಇಂಚು ಕಲಮಿಗೆ ೧ ಸಲಕ್ಕೆ ... ,, ೧
ಕಾಯಂ ಜಾಹೀರಾತು
: ದರಗಳಿಗೆ ಬರೆಯಿರಿ :

ವಾರ ಪತ್ರಿಕೆ

NAVAYUGA
ನವಯುಗ

Kanarese Weekly

: ಚಂದಾ ವಿವರ :
೧ ವರ್ಷಕ್ಕೆ ... ರೂ. ೩—೪—೦
೬ ತಿಂಗಳಿಗೆ ... ,, ೧—೧೨—೦
೩ ತಿಂಗಳಿಗೆ ... ,, ೧—೦—೦
ಚಂದಾ ಹಣವನ್ನು ಮುಂಗಡವಾಗಿ ಕಳಿಸಬೇಕಾಗಿದೆ.
ಮಾದರಿ ಸಂಚಿಕೆಗೆ
: ಮೆನೇಜರರಿಗೆ ಬರೆಯಿರಿ :

...ಟ್ಲರರಿಗೆ ಡೆಲಾಡಿಯರರ ಉತ್ತರ

...ಹಿಟ್ಲರರು ಜರ್ಮನ್ ರೀಚ್‌ಸ್ಟೇಗಿನಲ್ಲಿ ...ಮಾಡಿದ ಶಾಂತಿಯ ಟೊಳ್ಳು ಉದ್ಘೋ... ...ಕ್ಕೆ ಫ್ರೆಂಚ್ ಪ್ರಧಾನಮಂತ್ರಿ ಎಮ್. ...ಡಾಡಿಯರರು ಇದೇ ತಾ. 10ರಲ್ಲಿ ...ಡಿಯೋ ಭಾಷಣದಲ್ಲಿ ತಕ್ಕ ಉತ್ತರ ...ತ್ತಿರುವರು. "ಬಲಾತ್ಕಾರದಿಂದ ನೆರೆಯ ...ಷ್ಟ್ರವೊಂದನ್ನು ಭೂಪಟದಿಂದಲೇ ಅಳಿಸಿ ...ಡುವಾಗ ಲೋಕದಲ್ಲಿ ಸುರಕ್ಷಿತತೆಯಿರು... ...ದಾದರೂ ಹೇಗೆ? ಪ್ರತಿ 6 ತಿಂಗಳಿಗೊ... ...ಮ್ಮೆ ಕೊಟ್ಟ ಮಾತನ್ನು ಉಲ್ಲಂಘಿಸಿ, ಸ್ವತಂತ್ರ... ...ಗಿ ಮತ್ತು ಸ್ವಾವಲಂಬಿಯಾಗಿರಲು ...ಮಾನ ಹಕ್ಕಿರುವ ಇನ್ನೊಂದು ಜನಾಂಗ... ...ವನ್ನು ವಶಪಡಿಸಿಕೊಳ್ಳುವ ಅಥವಾ ವಿಭಾ... ...ಸುವ ಆಕ್ರಮಣ ಶೀಲತೆಯ ಎದುರಲ್ಲಿ ...ಯಾವ ಜನಾಂಗ ತಾನೇ ಸುರಕ್ಷಿತಭಾವ... ...ದಿಯುಂದಿದ್ದೀತು? ಜರ್ಮನಿಯ ಅಧಿಕಾ... ...ರವು ಯುರೋಪಿನ ಮೇಲೆ ಬಲಾತ್ಕಾರ ...ಂಟ ಹೊರಿಸಲ್ಪಡುವುದನ್ನು ನಿರೋಧಿ... ...ಸುವುದಕ್ಕಾಗಿ ಫ್ರಾನ್ಸ್ ಮತ್ತು ಇಂಗ್ಲೆಂಡು ...ಗಳು ಹೋರಾಡಬೇಕಾಗಿದೆ. 'ನಾನು ಪೋ... ...ಲೆಂಡನ್ನು ಜೈಸಿದ್ದೇನೆ. ಈಗ ನನಗೆ ಸಮಾ... ...ಧಾನವಾಗಿದೆ. ಇನ್ನು ಯುದ್ಧ ನಿಲ್ಲಿಸಿ ಶಾಂ... ...ತಿಯ ವ್ಯವಸ್ಥೆ ಮಾಡುವ' ಎಂಬುದೇ ಹಿಟ್ಲ... ...ರರ ಭಾಷಣದ ಅರ್ಥ. ಇಂತಹ ಭಾಷಣ... ...ಗಳನ್ನು ನಾವು ಮೊದಲು ಹಲವು ಬಾರಿ ...ಕೇಳಿರುತ್ತೇವೆ. ಪ್ರತಿ ಭಾಷಣದಲ್ಲಿ ಕೊಟ್ಟ ...ವಚನವು ಕಾರ್ಯದಲ್ಲಿ ಉಲ್ಲಂಘಿಸಲ್ಪಟ್ಟ... ...ದುದನ್ನು ಕಂಡು ಅನುಭವಶಾಲಿಗಳಾಗಿ ...ದ್ದೇವೆ. ಇಂತಹ ಬಲಾತ್ಕಾರವನ್ನು ಒಂ... ...ದೊಮ್ಮೆ ಸಂಪೂರ್ಣ ಮುರಿದು ಹಾಕದೆ ...ಗತ್ಯಂತರವಿಲ್ಲ. ಪ್ರತಿ 6 ತಿಂಗಳಿಗೊಮ್ಮೆ ...ಹಾಯಕ್ಕೊಳಗಾಗದ ಸ್ಥಿರವಾದ ಸುರಕ್ಷಿ... ...ತತೆಯು ಸ್ಥಾಪಿತವಾಗುವ ಭರವಸೆಯುಂ... ...ಟಾಗುವ ತನಕ ನಾವು ಶಸ್ತ್ರವನ್ನು ಕೆಳ... ...ಗಿಡಲಾರೆವು. ಆ ವರೆಗೆ ನಾವು ಹೋರಾ... ...ಡುತ್ತಾ ಹೋಗುವೆವು" ಎಂದು ಡೆಲಾಡಿ... ...ಯರರು ಹಿಟ್ಲರರ ಅಹಂಭಾವ ಗುಳ್ಳೆಯ... ...ನ್ನೇ ಒಡೆದು ಬಿಡುವಷ್ಟು ಕಠಿಣತೆಯನ್ನು ...ತೋರಿಸಿರುವರು. ಫ್ರಾನ್ಸು ಮತ್ತು ಇಂ... ...ಗ್ಲೆಂಡುಗಳು ಅತ್ಯಂತ ಒಕ್ಕಟ್ಟಿನಿಂದಿದ್ದು ...ಜಯಶೀಲವಾಗುವ ತನಕ ಕಾದಾಡಿಯೇ ...ರುವೆವೆಂದು ದೃಢನಿರ್ಧಾರವಮಾಡಿರುವವು. ...ಇಂಗ್ಲೆಂಡ್ ಫ್ರಾನ್ಸುಗಳು ಸಮುದ್ರರಾಣಿ... ...ಯರು. ಸಮುದ್ರವನ್ನಾಳುವವರು ಯಾ... ...ವಾಗಲೂ ಜಯಶಾಲಿಗಳಾಗುವವರೆಂಬು... ...ದನ್ನು ಇತಿಹಾಸವು ಸ್ಪಷ್ಟಪಡಿಸುತ್ತದೆ. ...ಇಂಗ್ಲೆಂಡು, ಜಲ ಮತ್ತು ವಿಮಾನಪಡೆಯ ...ಸಹಾಯವನ್ನು ಮಾತ್ರವಲ್ಲದೆ, ತನ್ನ ಉ... ...ತ್ಕೃಷ್ಟ ಸೇನೆಯನ್ನು ಕಳುಹಿಸಿ ಫ್ರಾನ್ಸಿ... ...ನೊಂದಿಗೆ ಭುಜಕ್ಕೆ ಭುಜಕೊಟ್ಟು ನಿಂತಿದೆ ...ಯೆಂದು ಡೆಲಾಡಿಯರರು ಬ್ರಿಟನನ್ನು ...ಪ್ರಶಂಸಿಸಿ, ಫ್ರೆಂಚ್ ರಕ್ತದಿಂದ ಇಂಗ್ಲೆಂ... ...ಡು ಯುದ್ಧನಡೆಸುತ್ತಿದೆ ಎಂಬ ಜರ್ಮ...

ವಾರದ ವಿಮರ್ಶೆ

...ನಿಯ ಭೇದೋಪಾಯದ ಕುಟಿಲ ನೀತಿಯು ಮೂಲೋತ್ಪಾಟನೆ ಮಾಡಿದ್ದಾರೆ.

ಬೆದರಿಕೆಗೆ ಸೊಪ್ಪು ಹಾಕುವದಾಗಿಲ್ಲ

ಇದೇ ತಾ. 3ರಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಗಳು ಯುದ್ಧದ ೬ನೇ ವಾರದ ವಿಮರ್ಶೆಯನ್ನು ಪಾರ್ಲಿಮೆಂಟಿನ ಮುಂದೆ ಮಾಡುವಾಗ, ಜರ್ಮನಿ ಮತ್ತು ರಷ್ಯ ಗಳು, ಪೋಲಂಡನ್ನು ಹಂಚಿಕೊಂಡು ತಮ್ಮೊಳಗೆ ಮಾಡಿಕೊಂಡಿರುವ ಒಪ್ಪಂದ ದಿಂದ, ಯುದ್ಧವನ್ನು ಯಥಾಪ್ರಕಾರ ಮುಂದೊತ್ತುವ ಮಿತ್ರರಾಷ್ಟ್ರಗಳ ನಿರ್ಧಾರವು ಒಂದಿಷ್ಟೂ ಬದಲಾಗಿರುವುದಿಲ್ಲೆಂದು ಸ್ಪಷ್ಟಪಡಿಸಿದರು. "ಪೋಲಂಡು ಯುದ್ಧಕ್ಕೊಂದು ಕಾರಣವಾಗಿದ್ದಿತೇ ಹೊರತು ಅದೇನೂ ಮೂಲಕಾರಣವಾಗಿರಲಿಲ್ಲ. ಯುರೋಪಿನ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಒದಗಿರುವ ಅಪಾಯ ಮತ್ತು ಅವರ ರಕ್ಷಣೆಗಾಗಿ ಈಗಾಗ ಅವುಗಳು ಮಾಡಬೇಕಾದ ಸೇನಾ ಸಿದ್ಧತೆಯ ಅಸಹನೀಯ ಪರಿಸ್ಥಿತಿಯೇ ಈ ಹೋರಾಟದ ಮುಖ್ಯ ಕಾರಣ. ಯಾವ ತರದ ಬೆದರಿಕೆಯಾದರೂ ಬ್ರಿಟನ್ ಮತ್ತು ಫ್ರಾನ್ಸುಗಳು ಈ ಹೋರಾಟವನ್ನು ತೊಡಗಿದ ಉದ್ದೇಶದಿಂದ ಅವನ್ನು ವಿಚಲಿತಗೊಳಿಸಲಾರವು" ಎಂದು ಮಿ. ಚೇಂಬರ್ಲೇನರು ಕಂಠೋಕ್ತವಾಗಿ ಹೇಳಿ, ಹಿಟ್ಲರರ ಶಾಂತಿಯ ಆಶೆಯನ್ನು ಮೂಲೆಗೊತ್ತಿ ಮುರಿದುಬಿಟ್ಟಿರುವರು. ಪೋಲೆಂಡು ನಿರ್ನಾಮವಾದರೂ ಜರ್ಮನಿ ಮತ್ತು ರಷ್ಯಗಳೊಂದಾಗಿ ಮಿತ್ರ ರಾಷ್ಟ್ರಗಳನ್ನಿದಿರಿಸು ವಂತಾದರೂ, ಇಂಗ್ಲೆಂಡು ಮತ್ತು ಫ್ರಾನ್ಸ್ ಅಂಜದೆ ಕೊನೆಯ ವಿಜಯದ ತನಕ ಯುದ್ಧವನ್ನು ಮುಂದೊತ್ತುವವೆಂಬುದೀಗ ನಿಸ್ಸಂದೇಹವಾಗಿ ನಿಶ್ಚಯವಾದಂತಾಗಿದೆ. ಮಿ. ಚೇಂಬರ್ಲೇನರಾಗಲಿ, ಎಮ್. ಡೆಲಾಡಿಯರರಾಗಲಿ ಶಾಂತಿಯ ದ್ವಾರವನ್ನೇ ಬಂದುಮಾಡಿಬಿಟ್ಟಿಲ್ಲ. ಅನಾವಶ್ಯಕವಾಗಿ ಒಂದೇ ಒಂದು ದಿನವಾದರೂ ಬ್ರಿಟಿಷ್ ಪ್ರಧಾನ ಮಂತ್ರಿಗಳು ಮುಂದುವರಿಸ ಲಾರರು. ಆದರೆ ಬರಿಯ ನ್ಯಾಯವೆಂಬ ಪಾಶವಿಕ ಮನೋವೃತ್ತಿಯ ಸರಕಾ...ರವು ಅಧಿಕಾರದಲ್ಲಿರುವ ತನಕ ಅದು ಸಾಧ್ಯವಿಲ್ಲ. ಅದನ್ನು ಇಷ್ಟರ ವರೆಗೆ ಸಹಿಸಿಕೊಂಡುದರಿಂದಲೇ ಇಂದೀಗ ಈ ಅನಾ... ...ಹುತವುಂಟಾಗಿದೆ. ಶಾಂತಪರ ಮಧ್ಯಸ್ಥಿಕೆಯಿಂದ ಕಲಹಗಳ ತೀರ್ಮಾನದ ಬದಲಿಗೆ ಬಲಾತ್ಕಾರ ಪ್ರಯೋಗವು ಬಲಗೊಂಡು ಅಂತರ ರಾಷ್ಟ್ರೀಯ ಅರಾಜಕತ್ವ ನೆಲೆಗೊಂಡಿದೆ. ಲೋಕದ ನಾಗರಿಕತೆ ಸಂಸ್ಕೃತಿ ಮತ್ತು ಸಭ್ಯತೆಗಳೇ ಧಕ್ಕೆಯುಂಟಾಗಿದೆ. ಇನ್ನು ಮುಂದೆ ಹಿಟ್ಲರರ ಭರವಸೆ ಮತ್ತು ವಾಗ್ದಾನಗಳ ಮೇಲೆ ವಿಶ್ವಸಿಸಲು ಸಾಧ್ಯವಿಲ್ಲ. ಮಿತ್ರರಾಷ್ಟ್ರಗಳಿಗೆ ಜರ್ಮನ್ ಜನತೆಯ ಮೇಲೇನೂ ದ್ವೇಷವಿಲ್ಲ. ಅವರಿಗೆ ಅಪಮಾನ ತರುವಂತಹದೇನನ್ನೂ ತಾವು ಮಾಡಲಿಕ್ಕಿಲ್ಲ. ಆದರೆ ಈ ಯುದ್ಧದಿಂದಾಗಿ ಇನ್ನೊಂದು ವರ್ಸೇಲ್ ಒಪ್ಪಂದವು ಜರ್ಮನ್ ಜನಾಂಗದ ಮೇಲೆ ಹೊರಿಸಲ್ಪಡಲಿಕ್ಕಿಲ್ಲ. ಆದರೆ ಹಿಟ್ಲರ್ ಶಾಹಿಯು ಸಂಪೂರ್ಣ ನಾಶಗೊಳಿಸಲ್ಪಡಬೇಕು. ಬಲಾತ್ಕಾರ ಮತ್ತು ಆಕ್ರಮಣಗಳ ಧೂರ್ತ ಮನೋವೃತ್ತಿಯೇ ಅಳಿಯಬೇಕು. ಜರ್ಮನಿಯು ಪೋಲರ ಮತ್ತು ಜೆಕ್ಕರ ಸ್ವಾತಂತ್ರ್ಯವನ್ನು ಮನ್ನಿಸಬೇಕು. ಕಲಹಗಳನ್ನು ... ...ಜೆಯಿಂದ ಇತ್ಯರ್ಥಪಡಿಸಿಕೊಳ್ಳುವ ವ್ಯ... ...ಸ್ಥೆಯಾಗಿ ರಾಷ್ಟ್ರಗಳೆಲ್ಲಾ ಒಟ್ಟುಸೇ... ...ಶಸ್ತ್ರತ್ಯಾಗಮಾಡಿ ಶಾಂತಿ ಸೌಹಾರ್ದದಿಂ... ...ದಿರುವ ವ್ಯವಸ್ಥೆಮಾಡಿಕೊಳ್ಳಬೇಕು. ...ಲೋಕದ ಜನರು ಸ್ವಾತಂತ್ರ್ಯ ಸು... ...ರಕ್ಷಿತತೆ ಮತ್ತು ಸುಭಿಕ್ಷೆಯಿಂದಿರುವಂತಾ... ...ಗಬೇಕೆಂದೇ ಬ್ರಿಟಿಷ್ ಪ್ರಧಾನ ಮಂತ್ರಿ... ...ಗಳ ಮಹತ್ವದ ಭಾಷಣ ಸಾರಾಂಶ. ಬ್ರಿ... ...ಟಿಷ್ ಲೇಬರ್ ಪಕ್ಷದ ನಾಯಕರಾದ ...ಮೇಜರ್ ಅಟ್ಲೀಯವರೂ, ಲಿಬರಲ್ ಪ... ...ಕ್ಷದ ನಾಯಕ ಸರ್. ಸಿಂಕ್ಲೇರರೂ, ಮಿ. ...ಲ್ಲೊಯ್ಡ್ ಜೋರ್ಜರೂ, ಮಿ. ಚೇಂಬರ್ಲೇ... ...ನರ ಅಭಿಪ್ರಾಯಗಳನ್ನೇ ಮತ್ತಷ್ಟು ಬಿ... ...ಸಾಗಿ ಪ್ರತಿಧ್ವನಿಸಿರುವರು. ಆದುದರಿಂ... ...ಹಿಟ್ಲರರು ತನ್ನ ರೀತಿನೀತಿಗಳನ್ನು ಸಂಪೂ... ...ರ್ಣವಾಗಿ ಬದಲಾಯಿಸದೆ ಶಾಂತಿಯು ...ಸಂಭವನೀಯವಲ್ಲ.

ಹಿಟ್ಲರರ ನಿರಾಶೆ

ಮಿ. ಚೇಂಬರ್ಲೇನರ ಭಾಷಣವು ಲೋ... ...ಕದ ಪಶ್ಚಿಮ ರಾಷ್ಟ್ರಗಳಲ್ಲಿ ಒಳ್ಳೇ ಪರಿಣಾ... ...ಮವನ್ನುಂಟುಮಾಡಿದೆ. ಇಟಲಿಯು ಕ... ...ಡಾ ಅದರಿಂದ ಸಂತೃಪ್ತವಾಗಿದೆ. ಆದ... ...ಜರ್ಮನ್ ಪತ್ರಿಕೆಗಳು ಚೇಂಬರ್ಲೇನ... ...ನ್ನು ಮನ ಬಂದಂತೆ ಬೈದು ಭಂಗಿಸತೊ... ...ಡಗಿವೆ. ತನ್ನ ಶಾಂತಿಯ ಸೂಚನೆಗಳನ್ನು ...ಯಾರೂ ಗಣ್ಯ ಮಾಡಿಲ್ಲೆಂದು ಹ... ...ಹಿಟ್ಲರರು ತೀವ್ರ ನಿರಾಶೆಪಟ್ಟಿರುವಂತಿ... ...ಅವರು ಮಿ. ಚೇಂಬರ್ಲೇನರ ಭಾಷಣ... ...ಲಿ ನಿವರ್ಣರಾಗಿ ಹೋದರೆಂದು ತಿಳಿದು ...ಬರುತ್ತದೆ. ಶಾಂತಿಗಾಗಿ ಮಧ್ಯಸ್ಥಿಕೆ ಮ...



YOU MEANT TO TAKE OUT A POLICY — YOU HAD DISCUSSED ONE WHICH WOULD HAVE BROUGHT YOU SUFFICIENT INCOME — BUT WRITING WAS TOO MUCH TROUBLE FOR YOU. THEN AN ACCIDENT HAPPENED... NOW YOUR FAMILY IS LEFT — PENNILESS. A SAD STORY ...... BUT, ALAS HOW COMMON! YOU ARE IN DANGER AT EVERY MOMENT. SAFEGUARD TO-DAY. INSURE WITH TROPICAL. WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE?

Quotations for all ages and amounts to suit all circumstances.

TROPICAL

ಟ್ರೋಪಿಕಲ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ನ್ಯೂ ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.

ಎಂ. ಸುಂದರರಾವ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.	ಆರ್. ಕೆ. ರಾಮಮೂರ್ತಿ, ಎಂ. ಎ., ಬ್ರಾಂಚ್ ಸೆಕ್ರೆಟರಿ, ನಂ. 160 ಮೌಂಟ್‌ರೋಡ್, ಮದ್ರಾಸು.

ಡುವುದಕ್ಕೂ ಈಗ ಯಾರೂ ಮುಂದೆ ಬರುವುದಿಲ್ಲ ಇಟಲಿಯು ಮೌನ ವ್ರತವನ್ನೇ ಹಿಡಿದುಬಿಟ್ಟಿದೆ, ಅಮೇರಿಕವು ತಣ್ಣಗಿದೆ ಇಡೀ ಲೋಕವೇ ವಿನಂತಿ ಮಾಡಿಕೊಂಡರೂ ಹಿಟ್ಲರರು ಕೇಳದೆ ಪೋಲಂಡಿನ ಮೇಲೆ ಧಾಳಿ ನಡಿಸಿಬಿಟ್ಟರು. ಈಗ ಅವರು ಅದೇ ಲೋಕದೊಡನೆ ಶಾಂತಿಗಾಗಿ ವಿನಂತಿ ಮಾಡಿಕೊಳ್ಳುವಾಗ ಅದು ಕಿವಿಗೊಡುವ ಹಾಗಿಲ್ಲ ಹಿಟ್ಲರರಿಗೆ ಬೇಕಾದಂತೆ ಲೋಕವು ನಡೆವಹಾಗಿಲ್ಲ ಲೋಕಕ್ಕೆ ಬೇಕಾದಂತೆ ಅವರು ನಡೆಯಬೇಕು ಇನ್ನಾದರೂ ಹಿಟ್ಲರರು ಈ ಪಾಠ ಕಲಿತರೆ ಶಾಂತಿಯು ಸಾಧ್ಯವಿದೆ, ಇಂದೀಗ ಹಿಟ್ಲರರ ಶಾಂತಿಯ ಯತ್ನವು ನಿರರ್ಥಕವಾದುದರಿಂದ ನಾಝಿ ನಾಯಕರಲ್ಲಿ ಮತ್ತು ಜರ್ಮನ್ ಸೈನ್ಯಾಧಿಕಾರಿಗಳಲ್ಲಿ ತಳಮಳವುಂಟಾಗಿದೆ ಪ್ರಚಾರ ಖಾತೆಯ ಮಂತ್ರಿ ಡಾಕ್ಟರ್ ಡೀಬ್ರಿಚರು, ಪ್ರೆಸಿಡೆಂಟ್ ರುಸವೆಲ್ಟರು ಮಾತ್ರ ಈಗ ಸಂಧಿ ಮಾಡಲು ಶಕ್ತರೆಂದು ಮಾಡಿಕೊಂಡ ವಿನಂತಿಯನ್ನು ಜರ್ಮನ್ ಸರಕಾರವು ನಿರಾಕರಿಸಿರುವುದು. ಪಶ್ಚಿಮ ರಣರಂಗದಲ್ಲಿ ಯುದ್ಧವನ್ನು ಹೇಗೆ ಮುಂದುವರಿಸುವುದೆಂಬುದೇ ನಾಝಿಗಳಿಗೊಂದು ಸಮಸ್ಯೆಯಾಗಿದೆ ಇಲ್ಲವಾದರೆ, ಫ್ರೆಂಚ್ ಸೇನೆಯು ಜರ್ಮನಿಯ ಪ್ರದೇಶವನ್ನಾಕ್ರಮಿಸಿ ಸ್ಥಿರವಾಗಿ ಮುಂದೊತ್ತುವುದನ್ನು ಸಹಿಸಿಕೊಂಡು ಹಿಟ್ಲರರಂತಹ ಉಜ್ವಲ ಅಭಿಮಾನಿಯು ಸುಮ್ಮನಿರುತ್ತಿದ್ದಿಲ್ಲ. ಇನ್ನು ಮುಂದೆ ನಿಜವಾದ ಯುದ್ಧ ನಡೆಯಲಿರುವುದೆಂದು ಹಿಟ್ಲರರು ಒಂದು ರೀತಿಯ ಬೆದರಿಕೆ ಹಾಕಿದ್ದಾರೆ. ಆದರೆ ಅವರು ಯಾವ ರೀತಿಯಲ್ಲಿ ಹೋರಾಟ ನಡಿಸುವರೆಂದು ತಿಳಿದಿಲ್ಲ ಅಂತೂ ದೀರ್ಘಕಾಲದ ಯುದ್ಧವನ್ನು ತಾಳಿಕೊಳ್ಳುವಷ್ಟರ ಶಕ್ತಿ ಜರ್ಮನಿಗಿಲ್ಲ ಆದುದರಿಂದ ನಾಝಿಗಳ ವಿದ್ಯುದ್ವೇಗದ ಯುದ್ಧದ ಸಿದ್ಧತೆಯು ಭರದಿಂದ ನಡೆದಿರುವುದು ಮಧ್ಯದಲ್ಲಿ ಫ್ರೆಂಚ್ ಸೇನೆಯ ಮೇಲೆ ಪ್ರಚಂಡ ದಾಳಿ ನಡಿಸಿ, ಬಲ ಮತ್ತು ಎಡ ಬದಿಗಳಿಂದ ಲಕ್ಸೆಂಬರ್ಗ ಮತ್ತು ಸ್ವಿಸರ್ಲೆಂಡ್‌ಗಳ ಮೂಲಕ ಫ್ರಾನ್ಸಿನ ಮೇಲೇರಿಹೋಗುವ ಹಂಚಿಕೆ ನಡೆಯುತ್ತಿರುವಂತಿದೆ ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಯು ಯಾವ ರೀತಿಯ ಯುದ್ಧಕ್ಕಾದರೂ ಸಿದ್ಧವೇ ಇದೆ

ಜರ್ಮನಿಯ ಸಾಂಪತ್ತಿಕ ಸಂಕಷ್ಟ

ಜರ್ಮನಿಯು ಹೆಚ್ಚೆಂದರೆ ಏಳೆಂಟು ತಿಂಗಳು ಮಾತ್ರ ಹೋರಾಡಬಲ್ಲುದೆಂದು ಅದರ ಸ್ಥಿತಿಗತಿಗಳನ್ನು ಚೆನ್ನಾಗಿ ಪರಿಶೀಲಿಸಿ ಅನುಭವಮಾಡಿಕೊಂಡವರ ಅಭಿಮತ. ಇಟಲಿಯಿಂದ ಜರ್ಮನಿಗೆ ಹೆಚ್ಚಿನ ಪ್ರಯೋಜನವೇನೂ ದೊರೆಯುವ ಹಾಗಿಲ್ಲ ಈಗಣ ವಿದ್ಯಮಾನಗಳನ್ನು ನೋಡಿದರೆ ಇಟಲಿಯು ಜರ್ಮನಿಯನ್ನು ಅದರ ಪಕ್ಷಕ್ಕೇನೇ ಬಿಟ್ಟುಬಿಡುವ ಸಂಭವತೋರುತ್ತದೆ. ತನಗೆ ನಷ್ಟಮಾಡಿಕೊಂಡು ಸಾಮಾನುಗಳನ್ನು ಜರ್ಮನಿಗದು ಒದಗಿಸುವಂತಿಲ್ಲ ಆ ಸ್ಥಿತಿಯಲ್ಲೂ ಅದು ಇರುವುದಿಲ್ಲ. ಸ್ಪೈನಿನಲ್ಲಿ ಜನರಲ್ ಫ್ರೆಂಕೋರವರು ಜರ್ಮನಿಗೆ ವಿರುದ್ಧವಾದ ಧೋರಣೆ ವಹಿಸಿರುವರು. ಯುಗೋಸ್ಲಾವಿಯ ಮತ್ತು ಟರ್ಕಿಗಳು ಕೂಡಾ ಜರ್ಮನಿಯೊಡನೆ ವ್ಯಾಪಾರನಡಿಸದಂತಹ ಪರಿಸ್ಥಿತಿಯುಂಟಾಗಿದೆ ಬೆಲ್ಜಿಯಮ್, ಹಾಲೆಂಡ್, ಡೆನ್ಮಾರ್ಕ್, ಸ್ವೀಡನ್ ಮೊದಲಾದ ರಾಜ್ಯಗಳ ಹಡಗಗಳು ಕೆಲವನ್ನು ಜರ್ಮನಿಯು ಮುಳುಗಿಸಿ, ಇನ್ನು ಕೆಲವನ್ನು ಹಿಡಿದು ವಿರೋಧಿಗಳನ್ನಾಗಿ ಮಾಡಿದೆ. ಈಗ ಹಿಟ್ಲರರು ಅವಲಂಬಿಸಿರುವುದೆಂದರೆ ಸೋವಿಯೆಟ್ ರಶ್ಯದ ಮೇಲೆ ಶೀಘ್ರವಾಗಿ ರಶ್ಯಕ್ಕೆ ಹೆಚ್ಚಿನ ಸಹಾಯ ಮಾಡಲು ಸಾಧ್ಯವಾಗಲಾರದು 1931 ಮತ್ತು 1938ರಲ್ಲಿ ರಶ್ಯದಿಂದ ಜರ್ಮನಿಗೆ ರಫ್ತಾಗಿರುವ ಸಾಮಾನುಗಳ ಮೌಲ್ಯವು 30ಮಿಲ್ಯ ಪವನುಗಳಿಂದ 4ಮಿಲ್ಯಕ್ಕಿಳಿದು ಹೋಗಿದೆ. ಜರ್ಮನಿಯಿಂದ ರಶ್ಯಕ್ಕೆ ಹೋಗುವ ಸಾಮಾನು ಕೂಡಾ 47ಮಿಲ್ಯ ಪವನುಗಳಿಂದ ಕೇವಲ 2 ಮಿಲ್ಯಕ್ಕಿಳಿದಿದೆ ಇದು ಹೊರತು ಕಳದ ವರ್ಷ ರಶ್ಯದಲ್ಲಿ ದೊರೆತ ತಾಮ್ರ, ಸೀಸ, ಅಲುಮಿನಿಯಮ್ ಸತುವು, ತವರ ಮತ್ತು ನಿಕ್ಕಲ್ ಸೋವಿಯೆಟ್ ಸರಕಾರದ ಉಪಯೋಗಕ್ಕೇನೇ ಸಾಕಷ್ಟಿರಲಿಲ್ಲ ಜರ್ಮನ್ ತಜ್ಞರ ನೇತೃತ್ವದಲ್ಲಿ ರಶ್ಯದ ಅಪಾರ ಸಂಪತ್ತನ್ನು ಉಪಯೋಗಿಸಿಕೊಳ್ಳಲಾಗುವುದೆಂದು ನಂಬಲಾಗಿದೆ ಇದಕ್ಕೆ ಹೆಚ್ಚು ಸಮಯ ಹಿಡಿದೀತು ಅಷ್ಟರೊಳಗೆ ಜರ್ಮನಿಯು ಕಚ್ಚಾಮಾಲುಗಳ ತೀವ್ರ ಅಭಾವದಿಂದ ತೊಡಕಿಗೊಳಗಾಗಬೇಕಾದೀತು. ಇಂಗ್ಲೆಂಡಿನ ನೌಕಾಮುತ್ತಿಗೆ ಮತ್ತು ಜರ್ಮನಿಗೆ ಸಾಮಾನೊಯ್ಯುವ ಹಡಗಗಳ ಜಪ್ತಿಯು ಜರ್ಮನ್ ಸರಕಾರಕ್ಕೆ ಕಷ್ಟನಷ್ಟವನ್ನುಂಟುಮಾಡಿದೆ ಇಷ್ಟರಲ್ಲೇ ಬ್ರಿಟನು ಜರ್ಮನಿಗೆ ಹೋಗುವ 40,000ಟನ್ನು ಪೆಟ್ರೋಲ್ ಮತ್ತು ಹೆಚ್ಚಿನ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡಿದೆ ಜರ್ಮನ್ ಜನತೆಯಲ್ಲಿ ಅತೃಪ್ತಿಯುಂಟಾಗಹತ್ತಿದೆ ಪೋಲಂಡಿನಲ್ಲಿ ಜರ್ಮನಿಯು 20ದಳ ಸೇನೆಯನ್ನಿರಿಸಬೇಕಾಗಿ ಬಂದಿದೆ. ಜೆಕ್ಕರು ಜರ್ಮನರೆದುರಾಗಿ ಅಪಕಾರ ಚಳವಳ ಹೂಡಿರುತ್ತಾರೆ. ಸ್ತ್ರೀಯರು ಮಕ್ಕಳು ಕೂಡಾ ಇ...ವರಿಗೆ ಯಾವ ರೀತಿಯ ಸಹಾಯವನ್ನೂ ಮಾಡಲಾರರು ಎಂತಹ ಪೀ...ಯಿತ್ತರೂ ಜರ್ಮನರ ಯಾವ ಕೆಲ...ವನ್ನೂ ಅವರು ಮಾಡಲಾರರು. ಹೋ...ಲುಗಳಿಗೆ ಜರ್ಮನರು ಬಂದರೆ ಕೂಡ... ಜೆಕ್ ಕೆಲಸಗಾರರು ಎದ್ದು ಹೊರಹೋ... ಬಿಡುವರು ಸ್ಲೊವೇಕಿಯವು ಜರ್ಮ...ರನ್ನು ಸಂಘಟಿತವಾಗಿ ವಿರೋಧಿಸುತ್ತಿ... ಆದುದರಿಂದ ಹಿಟ್ಲರರ ಅದೃಷ್ಟವು ಪ... ಮರಣರಂಗದ ಪ್ರಚಂಡ ಯುದ್ಧದ ಮೇ... ಹೊಂದಿಕೊಂಡಿದೆ. ಪ್ರಥಮದಲ್ಲೇ ಅವ... ದೊಡ್ಡ ಅಪಜಯ ಪಡೆದರೆ ಶೀಘ್ರವಾ... ಅವರ ಪತನ ನಿಶ್ಚಯವೆಂದೇ ಹೇ... ಬಹುದು.

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance*
CANARA AUTOMOBILES ----- MANGALORE



KOPRAN *Tooth Paste*

ಹಿಂದೂದೇಶದ ಜನಪ್ರೀತ ದಂತಾಂಜನ

ಜಾಲಿಗಿಡದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ ತೀವ್ರಸತ್ವವುಳ್ಳದ್ದು, ವಿಷಹಾರಕವಾದದ್ದು.

KOPRAN CHEMICAL CO. BOMBAY

ಕೊಪರನ್ ಲಾರ್ಜ್ ಸೈಜು 0 13 0, ಕೊಪರನ್ ಸ್ಟ್ಯಾಂಡರ್ಡ್ ಸೈಜು 0 8 0, ಡೆಂಡರ್ಗರ ಸ್ಟ್ಯಾಂಡರ್ಡ್ ಸೈಜು 0 8 0

SAVINGS & SPENDING

Every Rupee that you save adds materially to your present wealth for the satisfaction of a future want, while every Rupee that is spent leaves you poorer to that extent Life's stormy voyage is a smooth sailing only for those who know this difference between **SAVING & SPENDING** and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd.] (Incorporated in British India) [1925

Head Office—**UDIPI, (S India).**

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ

ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ ಕರುಣಾಕರ ಹೆಗ್ಡೆ ಆರ್ಗನೈಜರ್
ಕೆ. ಆರ್ ಕೆ ಶೇಟ್ ಬಿಲ್ಡಿಂಗ್,
ಮಿಶನ್ ಹೈಸ್ಕೂಲ್ ರೋಡು

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿ
ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Lt

ಮೈಸೂರು ದಸರಾ ಮಹೋತ್ಸವ

ಶ್ರೀಮದ್ಯುವರಾಣಿ ಸಾರ್ಟೆಯವರ ಆಗಮನ

ದಸರಾ ವಸ್ತುಪ್ರದರ್ಶನದ ಆರಂಭ!

(ನವಯುಗದ ಮೈಸೂರು ಬಾತ್ಮೀದಾರರಿಂದ)

ಮಾಧರಿ ಮೈಸೂರಿನ
ಶ್ರೀಮನ್ಮಹಾರಾಜರವರು

ಮೈಸೂರು ಸಂಸ್ಥಾನದ ಚರಿತ್ರೆಯ ಇತಿಹಾಸದಲ್ಲಿ ಕಳೆದ ಶುಕ್ರವಾರ ತಾ 13 ಬಹು ಮುಖ್ಯ ದಿನ ಆ ದಿನ ನಾಡುಹಬ್ಬ ನವರಾತ್ರಿಯು ಪ್ರಾರಂಭವಾಯಿತು ಇದೆಲ್ಲಕ್ಕಿಂತಲೂ ಹೆಚ್ಚಾಗಿ ಮೈಸೂರು ಪ್ರಜೆಗಳು ಆನಂದ ಸಾಗರದಲ್ಲಿ ತೇಲಾಡುತ್ತಿದ್ದಾರೆ. ಕಾರಣವೇನೆಂದರೆ, ಯೂರೋಪು ಪ್ರವಾಸಕ್ಕೆ ಹೊರಟಿದ್ದ ಮೈಸೂರು ರಾಜವಂಶದ ಸದಸ್ಯರಾದ ಶ್ರೀಮದ್ಯುವರಾಣಿಯವರು, ತಮ್ಮ ಮೂವರು ಮುದ್ದು ಹೆಣ್ಣು ಮಕ್ಕಳು, ಸೊಸೆ ಮತ್ತು ಪ್ರಿನ್ಸ್ ಜಯರೊಡನೆ ಯುದ್ಧದ ಭೀತಿಯಿಂದ ವಾಪಾಗಿ ಬಂದರು 'ನವಯುಗ'ದ ಪರವಾಗಿ ಇವರಿಗೆ ಸ್ವಾಗತವೀಯಲು ನನಗೆ ತುಂಬ ಸಂತೋಷ

ಮೈಸೂರು ನಗರಕ್ಕೆ ಸುತ್ತ ಮುತ್ತಲು ಪ್ರದೇಶದಿಂದ ಲಕ್ಷಾಂತರ ಪ್ರಜೆಗಳು ಬಂದು ಶ್ರೀಮನ್ಮಹಾರಾಜರಿಗೆ ರಾಜಭಕ್ತಿ ಸೂಚಿಸಲು ಸಿದ್ಧರಿದ್ದಾರೆ ಎಲ್ಲಿ ನೋಡಿದರೂ ಜನ ಸಮೂಹವೇ ಎದ್ದೆದ್ದು ಕಾಣುತ್ತಿದೆ, ದೊಡ್ಡ ದೊಡ್ಡ ಕಟ್ಟೋಣಗಳು ತೇಜೋಮಯವಾಗಿವೆ

ಅರಮನೆಯಲ್ಲಿ

ಮೈಸೂರು ಸಿಟಿಯನ್ನು ಬಹು ಚೊಕ್ಕಟವಾಗಿಟ್ಟು ಅಲಂಕರಿಸಿ-ವಾಗ್ಗೆ ಅರಮನೆಯ ಮುಂಬಾಗವನ್ನು ಬಣ್ಣಬಣ್ಣದ ಬಾವುಟ ಮತ್ತು ವಿದ್ಯುದ್ದೀಪದ ಬೆಳಕಿನಿಂದ ಶೃಂಗರಿಸುತ್ತಾರೆ ಮೈಸೂರಿನಲ್ಲಿರುವ ಪ್ರತಿ ಹಿಂದೂ ಮನೆಗೂ ಮಾವಿನ ತೋರಣ ಕಟ್ಟಿ ಮನೆಯ ಮುಂದೆ ರಂಗವಲ್ಲಿ ಹಾಕಲಾಗಿದೆ ವನೆಯ ಯಜಮಾನರು ಅಷ್ಟು ಹೊತ್ತಿಗೆ ಎದ್ದು ಸ್ನಾನಮಾಡಿ ದೇವತಾಪೂಜೆ, ಪಾರಾಯಣ ಮಾಡುವಾಗ್ಗೆ ಅತಿ ಚೆಲುವಾದ ಹೆಣ್ಣು ಹುಡುಗಿಯರು ಬಣ್ಣಬಣ್ಣದ ಸೀರೆಗಳನ್ನುಟ್ಟು ವೈಯಾರದ ಬೆಡಗಿನಿಂದ ಕೂಡಿ ಬೊಂಬೆ ಪೂಜೆಗೆ ತಯಾರಾದರು ಇತ್ತಲಾಗಿ ಮಹಾಪ್ರಭುಗಳು ಮುಂಜಾನೆ ಎದ್ದು ತಮ್ಮ ದಿನಚರಿಯ ಕೆಲಸ ಮುಗಿಸಿದ ಮೇಲೆ ಸಿಂಹಾಸನ ತೈಲದ ಅಭ್ಯಂಜನ ಮಾಡಿ, ತಮ್ಮ ಕುಲದೇವತೆಯಾದ ಶ್ರೀ ಚಾಮುಂಡಾಂಬಿಕೆಯನ್ನು ಪೂಜಿಸಿ ಕಂಕಣ ಕಟ್ಟಿದರು.

ದರ್ಬಾರ್

ಸುಮಾರು ನಾಲ್ಕು ಘಂಟೆ ಹೊತ್ತಿಗೆ ಶ್ರೀಮದ್ಯುವರಾಣಿ ಪಾರ್ಟಿಯವರು ರೈಲಿನಿಂದ ಆಗಮಿಸಲು ಪ್ರಭುಗಳು ಅವರೊಂದಿಗೆ ಸ್ವಲ್ಪ ಕಾಲ ಸಂಭಾಷಣೆ ನಡೆಸಿ, ದರ್ಬಾರ್ ನಡೆಸಲು ಸಿದ್ಧರಾದರು ನಿರ್ದಿಷ್ಟ ಕಾಲಕ್ಕೆ ಸರಿಯಾಗಿ, ಮಹಾಪ್ರಭುಗಳು ಆಸ್ಥಾನಯೋಗ್ಯವಾದ ಉಡುಪನ್ನು ಧರಿಸಿ, ದರ್ಬಾರ ಹಾಲಿಗೆ ಆಗಮಿಸಲು ವರುಕ್ಕ ಭೋಗೀರಿಯ ತ್ರಿತ್ತು ಸದ್ಧತಿಯಂತೆ ಪ್ರಭುಗಳು ನವಗ್ರಹ ಪೂಜೆ ಮತ್ತು ಸಿಂಹಾಸನದ ಪೂಜೆ ನಡೆಸಲು, ರಾಜ ಮರ್ಯಾದೆಯೊಡನೆ ಬಂದಿದ್ದ ಶ್ರೀ ಪರಕಾಲ ಸ್ವಾಮಿಗಳು, ಪ್ರಭುಗಳಿಗೆ ಆಶೀರ್ವದಿಸಿ ಫಲವ ಂತ್ರಾಕ್ಷತೆಯನ್ನರ್ಪಿಸಿದರು.

ದರ್ಬಾರ್ ಹಾಲಿನೊಳಗೆ

ದರ್ಬಾರ್ ಹಾಲಿನಲ್ಲಿರುವ ಅತಿ ಸುಂದರವಾದ ಸಿಂಹಾಸನವು ರತ್ನವೈಡೂರ್ಯಾದಿಂದ ಕೂಡಿ ಒಹಳ ಬೆಲೆ ಬಾಳುವುದಾಗಿದೆ, ಮಂತ್ರಿವರ್ಯರಾದ ಸರ್ ಮಿರ್ಜಾರವರು ನಾಲ್ಕು ಕುದುರೆ ಸಾರೋಟಿನಲ್ಲಿ, ತಕ್ಕ ಮರ್ಯಾದೆಯೊಡನೆ ಅರಮನೆಗೆ ಆಗಮಿಸಿದರು

ಮಹಾ ಪ್ರಭುಗಳು ಸಿಂಹಾಸನವನ್ನೇರಿದ ಕೂಡಲೆ ಇದನ್ನು ಸೂಚಿಸಲು ಅರಮನೆ ಬತೇರಿಯಿಂದ ಕುಶಾಲ ತೋಪುಗಳನ್ನು ಹಾರಿಸಲಾಯಿತು ಪ್ರಭುಗಳ ಬಲಭಾಗದಲ್ಲಿ ಬೆಳ್ಳಿಯ ಆಸನದ ಮೇಲೆ ಪ್ರಿನ್ಸ್ ಜಯಚಾಮರಾಜ ಒಡೆಯರು ಕುಳಿತರು ಪ್ರಭುಗಳ ಅಕ್ಕಪಕ್ಕದಲ್ಲಿ ಅಂಗರಕ್ಷಕರು ಶಿಸ್ತಿನಿಂದ ನಿಂತರು ಅನೇಕ ದಬಾರಿಗಳೂ, ಸ್ತ್ರೀಯರುಗಳೂ ಬಂದು ತಮ್ಮ ಆಸನದಲ್ಲಿ ಕುಳಿತರು ದಿವಾನರೂ, ಪ್ರಥಮ ಮತ್ತು ದ್ವಿತೀಯ ಸಚಿವರುಗಳೂ, ಸರ್ಕಾರದ ಉನ್ನತಾಧಿಕಾರಿಗಳೂ ಮತ್ತು ಕಾಸಾ ಭಾವ ಮೈದುನರುಗಳೂ, ಮಿಲಿಟರಿ ಅಧಿಕಾರಿಗಳೂ ಪ್ರಭುಗಳಿಗೆ ನಜರ್ ಒಪ್ಪಿಸಿದರು, ದರ್ಬಾರ್ ಹಾಲು ಸುವಾಸನೆ ಗಂಧ ಯರೋಪ್ಯರಿಗೆ ದರ್ಬಾರ್ ನಡೆಯುತ್ತದೆ ಆ ದಿನ ಬ್ರಿಟಿಷ್ ರೆಸಿಡೆಂಟರೂ ಬರುತ್ತಾರೆ ಪ್ರಭುಗಳು ಇವರಿಗೆ ಹಸ್ತಲಾಘವ ಕೊಟ್ಟು ದರ್ಬಾರ್ ಹಾಲಿಗೆ ಕರೆದುಕೊಂಡು ಬಂದು ಸಿಂಹಾಸನದ ಪಕ್ಕದಲ್ಲಿ ಹಾಕಲಾಗುವ ವಿಶೇಷ ಆಸನದಲ್ಲಿ ಕುಳ್ಳಿರಿಸುವರು ಅನೇಕ ಯರೋಪ್ಯರು ಬರುವರು ದರ್ಬಾರ್ ನಡೆವ ಪ್ರತಿಯೊಬ್ಬರಿಗೂ ಒಂದೊಂದು ಹೂವಿನ ದಂಡೆ (ಹಾರ) ಮತ್ತು ಸ್ತ್ರೀಯರುಗಳಿಗೆ ಪರಿಮಳ(ಸೆಂಟ್) ನೀಡಿ ಕೊಡಲಾಗುತ್ತದೆ

ಮೈಸೂರಿನಲ್ಲಿ ಇಂದು ಸ್ಥಳವೇ ಇಲ್ಲ ಎಲ್ಲಿ ನೋಡಿದರೂ ಜನರ ಗಲಾಟೆ, ಅನೇಕ ಸಮ್ಮೇಳನಗಳು ನಡೆಯುತ್ತಿವೆ, ಯುವಕರಿಗೆ ಕಾಲ ಕಳೆಯಲು ಆದ

ಪ್ರಗತಿಪರ ಮೈಸೂರಿನ ಆದರ್ಶ ದಿವಾನರು

ದಿಂದ ತುಂಬಿತ್ತಲ್ಲದೆ, ಅರಮನೆ ವಿದ್ವಾಂಸರುಗಳಾದ ಸಂಗೀತಗಾರರ ಗಳು ಬಹು ಇಂಪಾದ ಗಾನ ಮಾಡಿದರು ಅರಮನೆಯ ಮುಂದೆ ಅತ್ತಲಾಗಿ, ಪ್ರಭುಗಳ ಬಳಿಯಿರುವ ಸಮಸ್ತ ಸೈನ್ಯ ದಳದವರೂ ಇತರರೂ ತಮ್ಮ ನಿರ್ದಿಷ್ಟ ಉಡುಪಿನೊಡನೆ ಬಂದು ಶಿಸ್ತಿನಿಂದ ತಮ್ಮ ಜಾಗದಲ್ಲಿ ನಿಂತರು ಮೈಸೂರ ರಾಷ್ಟ್ರಗೀತೆ ಹಾಡಿಸಲಾಯಿತು

ದರ್ಬಾರ್ ನಡೆಯುವಾಗ್ಗೆ ನರ್ತಕಿಯರ ನರ್ತನ ನಡೆಯಿತು ಅರಮನೆಯ ಹೆಂಗಸರ, ಆಹ್ವಾನಿಸಿದ್ದ ಹೆಂಗಸರಿಗೆ ಗಂಧ ತಾಂಬೂಲ ದಯಪಾಲಿಸಿದರ, ಸ್ವಲ್ಪ ಹೊತ್ತು ದರ್ಬಾರ್ ನಡೆದ ಮೇಲೆ, ಪ್ರಭುಗಳ ಪಟ್ಟದಾನೆ ಕುದುರೆ ಬಂದು ಪ್ರಭುಗಳಿಗೆ ನಮಸ್ಕರಿಸಿದವು ಈ ದೃಶ್ಯಗಳನ್ನು ನೋಡುತ್ತಾ ಅರಮನೆಯ ಮುಂಭಾಗದಲ್ಲಿ ಜನರು ಕಿಕ್ಕಿರಿದಿದ್ದರು ಶಾಂತ ವಾತಾವರಣದಲ್ಲಿ ಪ್ರಭುಗಳಿಗೆ ರಾಜಭಕ್ತಿ ಅರ್ಪಿಸಲು ಬೇಗ್ಗಿನ ಕಾರ್ಯಕ್ರಮ ಮುಗಿಯಿತು.

ಸಂಜೆ ಪುನಃ ದರ್ಬಾರ್ ನಡೆದು ಆನೆ, ಕುದುರೆಗಳು ಸೋಮೇಶ್ವರ ದೇವಾಲಯದಿಂದ ವಿಜಯಮಾಡಿಸಿದವು ಇದೇ ರೀತಿ ಪ್ರತಿ ನಿತ್ಯವೂ, ತಾ 21ರವರೆಗೆ ಸಂಜೆ ದರ್ಬಾರ್ ನಡೆಯುತ್ತದೆ

ತಾ. 21 ಶನಿವಾರ ಬೆಳಗ್ಗೆ ಅರಮನೆ ಮುಂಭಾಗದಲ್ಲಿ, ಪ್ರಭುಗಳ ಬಳಿಯಿರುವ ಪಟ್ಟದಾನೆ, ಕುದುರೆ, ಕತ್ತಿ ಮತ್ತು ಇತರ ವಸ್ತುಗಳಿಗೆ ಪೂಜೆಯನ್ನು ಪ್ರಭುಗಳು ನೆರವೇರಿಸುತ್ತಾರೆ, ಪ್ರತಿದಿನ ಸಂಜೆ ಚಪ್ಪಳಗ ನಡೆಯುತ್ತೆ, ಅದೇ ಶನಿವಾರ ಸಂಧ್ಯಾಕಾಲ ಗಳನ್ನು ಏರ್ಪಡಿಸಲಾಗಿದೆ ಬೃಂದಾವನದ ವಿದ್ಯುದ್ದೀಪದ ವೈಖರಿ ನಡೆಸಲಾಗುತ್ತದೆ

ಅಂತೂ ಮೈಸೂರ ರಾಜಧಾನಿಯ ನಾಡಹಬ್ಬವನ್ನು ಸಾಗತಿಾ ಅತಿ ವಿಜೃಂಭಣೆಯಿಂದ ನೆರವೇರಿಸಲಾಗುತ್ತದೆ ಉತ್ಸವವು ಯಶಸ್ವಿಯಾಗಿ ನೆರವೇರುವುದಕ್ಕೆ ಯಾವ ಸಂದೇಹವೂ ಇಲ್ಲ ಮೈಸೂರು ದಸರಾ ಮಹೋತ್ಸವ ನೋಡಲು ಎಲ್ಲರಿಗೂ ಸುಲಭವಾಗಿ ಆಗಲಾರದು ಆದರೆ 'To write more about Mysore Dasara is like gilding the Gold '

ತಾ 22ನೇ ಭಾನುವಾರ ಸಂಜೆ 4 ಘಂಟೆಗೆ ಮಹಾಪ್ರಭುಗಳ ಮೆರವಣಿಗೆ ನಡೆಯುತ್ತದೆ ಇದು ಬಹಳ ಚಿತ್ತಾಕರ್ಷಣವಾದುದು

ಮೈಸೂರು ದಸರಾ ವಸ್ತುಪ್ರದರ್ಶನದ ಪ್ರಾರಂಭ! ಕಟ್ಟಡದ ಒಳಗಿರುವ ವಾಚನಾಲಯದಲ್ಲಿ "ನವಯುಗ" ಪ್ರದರ್ಶನ

ಮೈಸೂರು ದಸರಾ ವಸ್ತು ಪ್ರದರ್ಶನವು ಇಂದು ಪ್ರಾರಂಭವಾಯಿತು ಸುಮಾರು 300 ಸ್ಟಾಲ ಗಳವೆ ಮೈಸೂರು ಸರ್ಕಾರದವರ ತಮ್ಮಲ್ಲಿ ತಯಾರಿಸುವ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕಿಟ್ಟಿದ್ದಾರೆ ಅನೇಕ ಸಂಸ್ಥಾನಗಳಿಂದ ವಿಚಿತ್ರ ವಸ್ತುಗಳನ್ನೂ ಉಪಯುಕ್ತವಾದ ಪದಾರ್ಥಗಳನ್ನೂ ಇಡಲಾಗಿದೆ, ವಸ್ತು ಪ್ರದರ್ಶನದಲ್ಲಿ ಬಣ್ಣಬಣ್ಣದ ಬಾವುಟ ಮತ್ತು ವಿದ್ಯುದ್ದೀಪ ಹಾಕಲಾಗಿದೆ ನೋಗಸಾದ ಪಾರ್ಕ್ ಮಾಡಿ ಸಾರ್ವಜನಿಕರು ಕೂಡಲು ಆಸನ ಹಾಕಲಾಗಿದೆ ಒಂದು ಕಲಾಭಾಗ(Art Section) ತೆರೆಯಲಾಗಿದೆ ಇದರಲ್ಲಿ ಅನೇಕ ತೈಲಚಿತ್ರಗಳ ಬಣ್ಣದಲ್ಲಿ ಬರೆದ ಚಿತ್ರಗಳ ಪ್ರದರ್ಶನವಲ್ಲದೆ, ಸುಪ್ರಸಿದ್ಧ ರಷ್ಯಾ ಕಲಾವಿದರಾದ ಪ್ರೊ॥ ರೋರಿಚ್‌ರವರು ಬರೆದಿರುವ ಚಿತ್ರಗಳನ್ನು ಡಾ॥ ಕಸಿನ್ಸ್‌ರವರು ತಂದು ಪ್ರದರ್ಶಿಸಿದ್ದಾರೆ ಸಾರ್ವಜನಿಕರಿಗಾಗಿ ಒಂದು ಉಚಿತ ವಾಚನಾಲಯ ತೆರೆಯಲಾಗಿದೆ, ಇಲ್ಲಿ 'ನವಯುಗ' ಪತ್ರಿಕೆಯೂ ಪ್ರದರ್ಶಿಸಲಾಗಿದೆ. ನವಯುಗದ ಅಭಿಮಾನಿಗಳು ಇದನ್ನು ನೋಡಿ, ತಮ್ಮ ಸ್ನೇಹಿತರುಗಳಿಗೆ ಪತ್ರಿಕೆಯ ಪರಿಚಯ ಮಾಡಿಕೊಡಲು ಎಲ್ಲರೂ ಅನಂದವಾಗಿದ್ದರು. ಯುವತಿಯರು ಮುದ್ದಾದ ವ ವಿವಿಧ ಕೂಡಿ ಬಣ್ಣಬಣ್ಣದ ಸೀರೆಯುಟ್ಟು ವೈಯ್ಯಾರದ ಬೆಡಗಿನಿಂದ ಚಲಿಸುತ್ತಿರುವರು ಮಧ್ಯಾಹ್ನದ ಮೈಸೂರು ಕೈಗಾರಿಕಾ ಶುದ್ಧ ಚ ತಿಂಡಿತೀರ್ಥ ಒದಗಿಸುತ್ತಿದ್ದಾರೆ ಪ್ರದರ್ಶನವು ಇನ್ನೂ 15 ದಿನ ನಡೆಯುವುದು

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಅದರ ಅಧ್ಯಕ್ಷರಾದ ಸರ್ ಮಿರ್ಜಾರವರ ಅಧ್ಯಕ್ಷತೆಯಲ್ಲಿ ಈ ದಿನ ಪ್ರಾರಂಭವಾಯಿತು, ಕಾಂಗ್ರೆಸ್ ನಿರ್ಣಯದಂತೆ ಕಾಂಗ್ರೆಸ್ ಸದಸ್ಯರುಗಳು ರಾಜಿನಾಮೆ ಕೊಟ್ಟಿರುವುದರಿಂದ ಅವರುಗಳು ಬಂದಿರಲಿಲ್ಲವಾಗಿ ಸಭೆಯಲ್ಲಿ ಲವಲವಿಕೆಯೇ ಇರಲಿಲ್ಲ. ಸಭೆಗೆ ಅನೇಕ ಆಹ್ವಾನಿತರುಗಳೂ, ಪರರ ಅತಿಥಿಗಳೂ, ಮಾನ್ಯ ಮಹಿಳೆಯರೂ ಮತ್ತು ಪ್ರೇಕ್ಷಕರುಗಳೂ ಒಂದು ಗ್ಯಾಲರಿ ಮೇಲೆ ಕುಳಿತಿದ್ದರು ನಿರ್ದಿಷ್ಟ ಕಾಲಕ್ಕೆ ಸರಿಯಾಗಿ ಸರ್ ಮಿರ್ಜಾರವರು ಆಗಮಿಸಲು ಸಭೆಯ ಸದಸ್ಯರೆಲ್ಲರೂ ಎದ್ದು ನಿಂತು ಅವರಿಗೆ ಸ್ವಾಗತವಿತ್ತ ಮೇಲೆ ತಮ್ಮ ಆಸನದಲ್ಲಿ ಕುಳಿತರು ಇವರ ಉಭಯ ಪಾರ್ಶ್ವಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸಚಿವರುಗಳೂ, ಸರ್ಕಾರದ ಮುಖ್ಯಾಧಿಕಾರಿಗಳೂ ತಮ್ಮ ತಮ್ಮ ಆಸನದಲ್ಲಿ ಕುಳಿತರು ಇವರ ಹಿಂಭಾಗದಲ್ಲಿ ಸಭೆಯನ್ನು ವರದಿ ಮಾಡಿಕೊಳ್ಳಲು ಸರ್ಕಾರದ ರಿಪೋರ್ಟರುಗಳೂ ಮತ್ತು ಪತ್ರಿಕೆಗೆ ವರದಿ ಮಾಡಲು ಪತ್ರಿಕೋದ್ಯೋಗಿಗಳೂ ಕುಳಿತರು.

ಸಭೆಯು ಪ್ರಾರಂಭವಾಗಲು ಅಧ್ಯಕ್ಷರು ತಮ್ಮ ಆಸನದಿಂದದ್ದು, ಗಂಭೀರಧ್ವನಿಯಲ್ಲಿ ಮೈಕ್ರೋಫೋನಿನ ಮುಂದೆ ಅಧ್ಯಕ್ಷ ಭಾಷಣ ಮಾಡಿದರು ಭಾಷಣದಲ್ಲಿ ಮುಖ್ಯ ಅಂಶಗಳೇನೆಂದರೆ, ಇಂದು ಉಂಟಾಗಿರುವ ಅಂತರ್ರಾಷ್ಟ್ರೀಯ ಪರಿಸ್ಥಿತಿ, ಯುದ್ಧದ ವಿಚಾರ, ಮೈಸೂರು ಸಂಸ್ಥಾನದಲ್ಲಿ ಉಂಟಾಗಿರುವ ಚಳುವಳಿ ಅಲ್ಲದೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಯಾವ ರೀತಿ ಕೆಲಸ ಮಾಡಲಾಗುತ್ತಿದೆ ಮುಂತಾದ ಇದೇ ವಿಷಯಗಳಿಂದ ಕೂಡಿದ್ದಲ್ಲದೆ ದೇಶದ ಉನ್ನತಿಗೆ ಸಾರ್ವಜನಿಕರು ಸರ್ಕಾರದೊಂದಿಗೆ ಕಲೆತು ಸಹಾಯ ಮಾಡಲು ಯತ್ನಿಸಬೇಕೆಂದೂ ಇದರಿಂದ ಸರ್ವರಿಗೂ ಕ್ಷೇಮವೆಂದೂ ತಿಳಿಸಲಾಗಿದೆ", ಅಧ್ಯಕ್ಷರ ಇಂಗ್ಲಿಷ್ ಭಾಷಣದ ಕನ್ನಡದ ತರ್ಜುಮೆಯನ್ನು ಸರ್ಕಾರದ ಕನ್ನಡ ಟ್ರಾನ್ಸ್‌ಲೇಟರ್ ಶ್ರೀ ಸಿ ಕೆ ವೆಂಕಟರಾಮಯ್ಯನವರು ಓದಿದರು, ತರುವಾಯ ಕೆಲವು ಸದಸ್ಯರುಗಳ ಅಧ್ಯಕ್ಷರನ್ನು ವಂದಿಸಿ ಭಾಷಣ ಮಾಡಿದ ಮೇಲೆ ಕೆಲವು ವಿಷಯ ಚರ್ಚೆಗೆ ಬಂದು ಸುಮಾರು ಎರಡು ಘಂಟೆ ಹೊತ್ತಿಗ ಸಭೆಯು ಫಲಾಹಾರಕ್ಕೆದ್ದಿತು

ಸಭೆಯು ಫಲಾಹಾರವಾದ ಮೇಲೆ ಅನೇಕ ವಿಷಯಗಳ ಮೇಲೆ ಚರ್ಚೆ ನಡೆದ ಮೇಲೆ, ನಾಳೆಗೆ ಸಭೆಯನ್ನು ಮುಂದು ಹಾಕಲಾಯಿತು

ಸಭೆಯಲ್ಲಿ ಚರ್ಚಿಸಲು ಅನೇಕ ನಿರ್ಣಯಗಳು ಅಂಕಗಳು ಮತ್ತು ಪ್ರಶ್ನೆಗಳು ಬಂದಿವೆ ಮೈಸೂರು ಸರಕಾರದವರು ಕಾಂಗ್ರೆಸ್ ಸಂಸ್ಥೆಯನ್ನು ಒಪ್ಪಿರುವುದರಿಂದ ಪಬ್ಲಿಕ್ ಸೆಕ್ಯೂರಿಟಿ ಕಾಯಿದೆಯನ್ನು ಸರ್ಕಾರದವರು ಹಿಂದಕ್ಕೆ ತೆಗೆದುಕೊಳ್ಳಬೇಕೆಂತಲೂ ಓರ್ವ ಸದಸ್ಯರು ಸೂಚಿಸಿದ್ದಾರೆ ಇಕ್ಕಲ ದೇಸಭೆಯಲ್ಲಿರುವ ಸದಸ್ಯರುಗಳು ಅವರವರ ರಾಜೀನಾಮೆಗಳನ್ನು ಕಂಡ ಚರ್ಚಿಸಲು ಅಧಿಕಾರವಿರುವುದರಿಂದ ಅಂತಹವುಗಳು ಏನಾದರೂ ಬಂದರೂ ಬರಬಹುದು.

ಲೇಖಕರ ಮತ್ತು ಬಾತ್ಮೀದಾರರಿಗೆ

ನವಯುಗದಲ್ಲಿ ಪುಟಗಳನ್ನು ಇಳಿಸಿರುವುದರಿಂದ ಇನ್ನು ಮುಂದೆ ಲೇಖನ ವಾರ್ತೆಗಳನ್ನು ಪ್ರಕಟಿಸಲು ಸಾಧ್ಯವಾಗಲಾರದು ಯುದ್ಧದ ಮತ್ತು ಪ್ರಾಮುಖ್ಯ ಸಮಾಚಾರಗಳನ್ನೇ ಸಂಕ್ಷೇಪವಾಗಿ ಕೊಡಲಾಗುವುದು.

—ಮೆನೇಜರ್

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

S. C No 223/1939 S. I. A 22/1939

ನರ್ಸ ಶೆಟ್ಟಿ—ವಾದಿ

ಮತ್ತು

ಶಾಂತಿರಾಜ ಪೂವಣಿ ಸದಾ—ಪ್ರತಿವಾದಿರು.

ಪ್ರತಿವಾದಿಯು—

1. ಶಾಂತಿರಾಜ ಪೂವಣಿ, ಧರ್ಮರಾಜ ಹೆಗ್ಗಡೆರ ಮಗ, 2 ಚಂದ್ರರಾಜ, ಧರ್ಮರಾಜ ಹೆಗ್ಗಡೆರ ಮೈನರ ಮಗ. ಇವನ ಗಾರ್ಡಿಯಾನ ಅಣ್ಣ 1ನೇ ಪ್ರತಿವಾದಿ 2ನೇ ಗಾರ್ಡಿಯಾನ ಮಾವ ರಗುಚಂದ್ರ ಪೂವಣಿ, ಪುತ್ತೂರ ತಾಲೂಕ. ರಾಯಿಗ್ರಾಮದ ಸಿರ್ಣಯೆಂಬಲ್ಲಿರುವವರು

ಈ ಮೂಲಕ ಸದ್ರಿಯವರಿಗೆ ತಿಳಿಯಪಡಿಸುವದೇನೆಂದ್ರೆ—1-2ನೇ ಪ್ರತಿವಾದಿರ ತಂದೆ, 3ನೇ ಪ್ರತಿವಾದಿ ಶಾಂತಿರಾಜ ಒಲ್ಲಾಳರ ಅಣ್ಣ ಹಾಲಿ ವೃತಪಟ್ಟಿರುವ ಧರ್ಮರಾಜ ಹೆಗ್ಗಡೆರು ವಾದಿಗೆ ತಾರೀಕು 26-6-1936ರಲ್ಲು ರೂ. 225-0-0ಕ್ಕೆ ಬರ್ಸಿ ಕೊಟ್ಟ ಡಿ ಪ್ರೊ ನೋಟಿನ ಅಸ್ಲು ಬಡ್ಡಿ ಖರ್ಚುಗಳನ್ನು ಬಸವೂಡಿಕೊಳ್ಳುವರೆ ವಾದಿಯು ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು, ಮತ್ತು ಮೈನರ 2ನೇ ಪ್ರತಿವಾದಿಗೆ ಗಾರ್ಡಿಯಾನ ನೇಮಕವಾದ ಬೇಕಾಗಿ ವಾದಿಯು ಕೊಟ್ಟ ಅರ್ಜಿ ಕೂಡಾ ತಾ. 23-10-39ಕ್ಕೆ ಇಟ್ಟಿರುವದ್ರಿಂದ ಆ ಕುರಿತು ನಿಮಗೆ ಏನಾದ್ರೂ ಆಕ್ಷೇಪಯಿದ್ರೆ, ಸದ್ರಿ ತಾರೀಕು ದಿವ್ಸ ಬೆಳಿಗ್ಗೆ 10ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಉದಾಹರಿಸಲಿಕ್ಕೆ ತಪ್ಪಿದ್ರೆ ನಿಮ್ಮನ್ನು ಶಿವಾಯಿಮಾಡಿ ಕೋರ್ಟಿನವರಿಗೆ ಯುಕ್ತಕಂಡ ರೀತಿ ತೀರ್ಮಾನಿಸಲಾಗುತ್ತದೆ

ಕಾರ್ಕಳ 10 10 39 | **P Shamba Shetty,**
Vakil for Plaintiff

ಜಾನುವಾರು ಜಾತ್ರೆ.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲಾಗುಂಡದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಜಾತ್ರೆಯು ಈ ವರ್ಷ 1939ನೇ ಇಸವಿ ನವಂಬ್ರ ತಿಂಗಳ 26ನೇ ತಾರೀಕಿನಿಂದ ದಶಂಬ್ರ ತಿಂಗಳ 10ನೇ ತಾರೀಕಿನ ವರೇಗೆ ಜರಗುವದು. ಅಂದರೆ ಜಾತ್ರೆಯು ಕಾರ್ತಿಕ ಪೌರ್ಣಮಿ ದಿವಸ ಪ್ರಾರಂಭವಾಗಿ ಕಾರ್ತಿಕ ಅಮಾವಾಸ್ಯೆಯ ದಿವಸ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ದಿವಸದ ಪರ್ಯಂತ ಜರಗುವದು ಸಂತೆಗೆ ತರಲ್ಪಡಬಹುದಾದ ಪ್ರತಿಯೊಂದು ಜಾನುವಾರಿನ ಮೇಲೆ ಎರಡಾಣೆ ಫೀಸು ವಸೂಲು ಮಾಡಲಾಗುವದು.

(*Sd*) **K. Krishnayya,**
Revenue Divisional Officer,
11-10 39 Puttur.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸ್‌ಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4 '39ರಿಂದ ಬದಲ ವ್ಯತ್ಯಾಸಗಳಾಗಿವೆ ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯ ಉಪ್ಪ್ರಾವಿಷನ್ಸ ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು, ಅದರಿಂದ ತಯಾರಿಸಿದ ಸಾರಾಂಶದ ನಿಜತ್ವವು ಕೆಲವೇ ನಿಮಿಷಗಳಲ್ಲಿ ಟೇಕ್ಸಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು, ಅಂತಾ ಬೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವದು ಸಂದರ್ಭಾನುಸಾರ ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್"ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಲೆಖ್ಖ ಹಾಜರುಮಾಡುವ 15ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪೈರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ಲಿಮಿಟೆಡ್ ಕಂಪೆನಿಗಳ ಆವಶ್ಯಕತೆ.

ವ್ಯಾಪಕ ಮನೋವೃತ್ತಿ, ಉದ್ದೇಶ ಮತ್ತು ಕಾರ್ಯಕ್ಷೇತ್ರದ ಉದ್ಯಮ ಯುಗವಿದು. ಈಗಣ ವ್ಯಾಪಾರೋದ್ಯಮಗಳು ಕೇವಲ ಕೆಲವು ವ್ಯಕ್ತಿ, ಒಂದು ಹಳ್ಳಿಯಾ ತಾಲೂಕಿಗೆ ಅನ್ವಯಿಸದೆ ಒಂದಲ್ಲೊಂದು ರೀತಿಯಿಂದ ಇಡೀ ದೇಶ ಹಾಗೂ ಲೋಕಕ್ಕೇನೇ ಸಂಬಂಧಿಸುವುದಾಗಿದೆ. ಇಂಗ್ಲೆಂಡು ಜಾಪಾನು ಮೊದಲಾದ ಚಿಕ್ಕ ಚಿಕ್ಕ ರಾಷ್ಟ್ರಗಳು ಇಂದೀಗ ಪ್ರಭಾವಶಾಲಿಯಾಗಿ ಬೆಳೆದು ಅಗ್ರಗಾಮಿಗಳಾಗಲು, ಅವುಗಳ ಜನರ ಇಡೀ ಲೋಕ ವ್ಯಾಪಕ ಅತ್ಯಂತ ಸಾಹಸಪರ ಸಾಮೂಹಿಕ ವ್ಯಾಪಾರೋದ್ಯಮಗಳೇ ಮುಖ್ಯ ಕಾರಣ ಅವುಗಳ ಒಂದಲ್ಲೊಂದು ಲಿಮಿಟೆಡ್ ಕಂಪೆನಿಯ ವ್ಯಾಪನೆ ಇಲ್ಲದ ಪ್ರಮುಖ್ಯ ಪಟ್ಟಣವಾವುದೂ ಲೋಕದಲ್ಲಿರಲಾರದೆಂದೇ ಹೇಳಬಹುದು. ಸಾಮೂಹಿಕ ಉದ್ಯಮಶೀಲತೆಯ ಕೊರತೆ ಮತ್ತು ಆ ಸಂಬಂಧವಾದ ಸಂಕುಚಿತ ಬುದ್ಧಿಯೇ ಹಿಂದೀಯರ ಸಂಪದಭ್ಯುದಯಕ್ಕೆ ದೊಡ್ಡ ತೊಡಕಾಗಿದೆ ಒಬ್ಬನಲ್ಲಿ ಬಹಳ ಬುದ್ಧಿವಂತಿಕೆ ಇರಬಹುದು, ಇನ್ನೊಬ್ಬನಲ್ಲಿ ಸಂಘಟನಾ ಶಕ್ತಿಯಿರಬಹುದು; ಮತ್ತೊಬ್ಬನಲ್ಲಿ ವ್ಯಾಪಾರ ವ್ಯವಹಾರ ಚಾತುರ್ಯವಿರಬಹುದು. ಆದರೆ ಇವೆಲ್ಲವನ್ನೂ ಪೋಷಿಸಿ ಬೆಳೆಸುವ ಆಧಾರವಾದ ಧನಾಭಾವದಿಂದ ಅವು ಮೊಳಕೆಯಲ್ಲೇ ಮುರುಟಿ ಹೋಗಬಹುದು. ಬೇರೆ ಬೇರೆ ಜನರ ವಿಧ ವಿಧ ಬುದ್ಧಿಶಕ್ತಿ ಮತ್ತು ಚಾತುರ್ಯಗಳನ್ನು ಸಂಚಯಿಸಿ ಉಪಯೋಗಿಸಿ ಬೆಳೆಸಿ ಸಮಾಜದ ಸಂಪದಭಿವೃದ್ಧಿಗೊಳಿಸುವ ಸಾಮೂಹಿಕ ಉದ್ಯಮಗಳು ಹಿಂದೂದೇಶದಲ್ಲೀಗ ಹೆಚ್ಚೆಚ್ಚಾಗಿ ಜನ್ಮಕ್ಕೆ ಬರಬೇಕು ತನ್ನ ಹಣವನ್ನು ತಾನೇ ಉಪಯೋಗಿಸಿ ತಾನೊಬ್ಬನೇ ಅದಷ್ಟು ಹೆಚ್ಚಿನ ಲಾಭ ಪಡೆಯಬೇಕೆಂಬ ಸಂಕುಚಿತ ಮನೋವೃತ್ತಿಯಿಂದ ಸಾಮೂಹಿಕ ಸುಖಸಂಪದಭಿವೃದ್ಧಿಗೆ ಹೆಚ್ಚಿನ ಪ್ರಯೋಜನವಾಗಲಾರದು. ಇದು ಹೊರತು, ಸಮಾಜಹಿತಸಾಧಕವಾದಂತಹ ಕೆಲಸಗಳನ್ನು ವೈಯಕ್ತಿಕವಾಗಿ ನಡಿಸುವ ಜವಾಬ್ದಾರಿಯು ಬಹಳ ಕಷ್ಟವಾಗಿದೆ ಆದರೆ ಸಾಮೂಹಿಕವಾಗಿ ಅವು ಸುಲಭಸಾಧ್ಯವೂ ಹೆಚ್ಚು ಪ್ರಯೋಜನವೂ ಆಗುತ್ತವೆ

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್

ಇದು ಉಡುಪಿಯ ಕೆಲವು ಸದ್ಗೃಹಸ್ಥರು ಪ್ರೊಮೋಟರರಾಗಿ ಸೇರಿ ಹೊಸತಾಗಿ ಸ್ಥಾಪಿಸಿದ ಲಿಮಿಟೆಡ್ ಸಂಸ್ಥೆ ಇದು ತಾ 28-9-39 ರಲ್ಲಿ ರಿಜಿಸ್ಟ್ರಿಯಾಗಿ ಇನ್ ಕೋರ್ಪರೇಶನ್ ಸರ್ಟಿಫಿಕೇಟು ಪಡೆದಿರುತ್ತದೆ. ವರ್ತಮಾನ ಪತ್ರಿಕೆ, ಪುಸ್ತಕ ಮೊದಲಾದುವನ್ನು ಪ್ರಕಟಿಸುವುದು, ಅದಕ್ಕೆ ಬೇಕಾದ ಛಾಪಖಾನೆ, ಮತ್ತು ಅದಕ್ಕೆ ಸಂಬಂಧಿಸಿದ ವಹಿವಾಟ ನಡೆಸುವುದು, ಸರ್ವಸಾಮಾನ್ಯವಾಗಿ ಎಲ್ಲಾ ತರದ ಉದ್ಯಮ, ಏಜನ್ಸಿ, ಕೈಗಾರಿಕ, ವ್ಯಾಪಾರ ವ್ಯವಹಾರಗಳನ್ನು ಕೈಕೊಳ್ಳುವುದು ಈ ನೂತನ ಕಂಪೆನಿಯ ಉದ್ದೇಶವಾಗಿದೆ.

ಈ ಕಂಪೆನಿಯ ಡೈರೆಕ್ಟರರೇ ಮೊದಲಾದವರು ಜಿಲ್ಲೆಯ ಬೇರೆಬೇರೆ ಪೇಟೆ, ಪಟ್ಟಣ, ಹಳ್ಳಿ ಕೇರಿಗಳಲ್ಲಿ ಪಾಲುಗಳ ಮಾರಾಟಕ್ಕಾಗಿ ಸಂಚರಿಸ ತೊಡಗಿರುತ್ತಾರೆ ಎಲ್ಲರೂ ತಮ್ಮ ತಮ್ಮ ಶಕ್ತ್ಯನುಸಾರ ಪಾಲುಗಳನ್ನು ಪಡೆದು ಈ ಹೊಸ ಸಂಸ್ಥೆಯನ್ನು ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

THE
BOMBAY LIFE ASSURANCE
Company Limited.

[ESTD. 1908]

COMPARE

Your Life Assurance with any other property you possess what is its guaranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs	1,44,91,000
Life Assurance Fund	Rs	1,17,69,748
Total Assets . .	Rs	1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING
Sir Lalubhai Samaldas Road,
GANDHI NAGAR, **UDIPI**

Post Box No 337, Mount Road MADRAS	Visweswarapuram Circle BANGALORE CITY	Charni Road, Girgaum, BOMBAY No. 4.
Car Street MANGALORE.	Puthiyara, CALICUT.	Central Station Road, TRIVANDRUM

NOTICE.

ಕಾರ್ಕಳ

ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P (O. S No.

ವೆಂಕಮ್ಮ ಸೆಡ್ತಿ —ಅರ್ಜಿದಾರ

ರಾಮ ಪೂಜಾರಿ ಸಹಾ —ಎದ್ರಿ

2ನೇ ಎದ್ರಿ-ದೇವಪ್ಪ ಯಾನೆ ಮಂಜುನಾಥ ಗುರ್ಪುರ ಲಕ್ಷ್ಮಣ ಪೈ ಮಗ, ಹಾಲಿ ಮಂಗಳೂರು ಹಂಪನಕಟ್ಟೆ ಬಳಿಯಲ್ಲಿರುವವ—

ಸದ್ರಿ ಎದ್ರಿಗೆ ಈ ಮೂಲಕ್ಕ ತಿಳಿಸುವದೇನೆಂದರೆ ಅರ್ಜಿದಾರಳು 2ನೇ ಎದ್ರಿಯ ಬಾಬ್ತು ಸ್ಥಿರಾಸ್ತಿಗಳನ್ನು ಏಲಂಗೆ ಅಪೇಕ್ಷಿಸಿ ಬರಕೊಂಡ ಏಲಂ ಇಸ್ತಿಹಾರಿನ ಶರ್ತಗಳನ್ನು ನಿಶ್ಚಯಿಸುವ ಬಗ್ಗೆಯೂ ಮತ್ತು ಏಲಂ ಕಾಲದಲ್ಲಿ ಅರ್ಜಿದಾರಳಿಗೆ ಬಿಡ್ ಮಾಡುವರೆ ಪರ್ಮಿಶನ್ ಕೊಡಬೇಕಾಗಿಯೂ ಬಿಡ್ ಆದ ಐವೇಜು ಡಿಕ್ರಿ ಐವೇಜನಲ್ಲಿ ಮಜ್ರೆಮಾಡಿ ಕೊಡುವ ರಶೀದಿ ಮಂಜೂರು ಮಾಡಬೇಕಾಗಿ ಕೂಡಾ ಹುಕುಂ ಕೇಳಿ ಕೊಟ್ಟ ಅರ್ಜಿಯು ಕೂಡಾ ತಾರೀಕು 3-11-1939ಕ್ಕೆ ಇಟ್ಟಿರುವುದರಿಂದ ಸದ್ರಿ ಇಸ್ತಿಹಾರಿನ ವ ಬಿಡ್ ಅರ್ಜಿಯ ಕುರಿತು ಆಕ್ಷೇಪಣೆಗಳು ಇದ್ದಲ್ಲಿ ಅವನ್ನು ತಾ 3-11-1939 ಹಗಲು ಗಂಟೆ 10ಕ್ಕೆ ನೀವು ಮೇಲ್ಕಂಡ ಕೋರ್ಟ ಮುಂದೆ ಖುದ್ದಾಗಲೀ ವಕೀಲರ ದ್ವಾರಾಲೀ ಹಾಜ್ರಾಗಿ ತಿಳಿಸಿಕೊಳ್ಳತಕ್ಕದ್ದು, ಹಾಗೆ ತಪ್ಪಿದ್ದರೆ ಅರ್ಜಿಗಳನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವದು

(ಕೋರ್ಟಿನ ಹುಕುಂ ಪ್ರಕಾರ)

Karkal 12 10 39 | **K. Mahabala Hegde**
ಅರ್ಜಿದಾರಳ ವಕೀಲ್.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ಋಷಿಮಂಡಲದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯಗಳು ಇನ್ನಿತರ ಅನುಭವಯುಕ್ತ ವನಸ್ಪತಿಗಳ ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುಚ್ಚುವ ಯಾ ... ಯುವ ಸರ್ವತರದ ದೋಷಗಳನ್ನು ನಿವೃತ್ತಿಸುವದು, ಹಾಗೂ ಆಲಸ್ಯ ಯಾ ವಾಯು... ಳೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50. 0-13-0, 100, 1-5-0, 500, ... 1000, 9-0-0

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗು... ಗಳನ್ನು ಕಳುಹಿಸುತ್ತೇವೆ.

ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕುಂಜಾಲು.
ಪೋಸ್ಟ್—ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು-1 ಪಿ. ಆರ್. ಪ್ರಭು, ಬಿ ಕೆ ... ಸನ್ಸ್ ಎಂಡ ಬುಕ್ಸ್ ಏಜನ್ಸಿ, ಬಟ್ಟೆವಾಲಾ ಮೆನ್ಶನ್, ಮಂಗ್ಳೂರು 2 ಜನರಲ್ ಸಪ್ಲೈಸ್ ಲಿಮಿಟೆಡ್. ಉಡುಪಿ 3. ನವಭಾರತ ಬುಕ್‌ಡಿಪೋ, ಉಡುಪಿ.

ನಮ್ಮ ಪ್ರತಿನಿಧಿಗಳ ಸಂಚಾರ

ನಮ್ಮ ಪ್ರತಿನಿಧಿಗಳಾದ ಶ್ರೀಯುತ ಎಂ. ಕೃಷ್ಣಯ್ಯ ಶೆಟ್ಟರು ಈ ವಾರದಿಂದ ಕಾರ್ಕಳ ಮತ್ತು ಪ್ರಾಂತ್ಯದ ತಾಲೂಕುಗಳಲ್ಲಿ ಸಂಚರಿಸಲು ಪ್ರಾರಂಭಿಸಿರುತ್ತಾರೆ, ಮಹಾಜನರು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ಮೊದಲ ಚಂದಾದಾರರಾಗಿ ಚಂದಾ ಬಾಕಿಯಿರುವವರು ಅವರೊಡನೆ ಚಂದಾ ಕೊಡಬೇಕಾಗಿಯೂ ಈ ಮೂಲಕ ಅಪೇಕ್ಷಿಸಲಾಗುತ್ತದೆ,

—ಮೆನೇಜರ್,

ಸಂಧಿಯಾಗುವ ಸಂಭವವಿದೆಯೇ?

ಜರ್ಮನ್ ಜನತೆಯಲ್ಲಿ ತೀವ್ರ ಅಶಾಂತಿ.

ಇತ್ತಲಾಗಿ ಪಶ್ಚಿಮ ರಣರಂಗದಲ್ಲಿ ದೊಡ್ಡ ಯುದ್ಧವೇನೂ ನಡೆದಿಲ್ಲ. ಹಿಟ್ಲರರ ಶಾಂತಿಸ್ಥಾಪನೆಯ ಸೂಚನೆಯನ್ನು ಇಂಗ್ಲೆಂಡು ಮತ್ತು ಫ್ರಾನ್ಸಗಳು ನಿರಾಕರಿಸಿರುತ್ತವೆ. ಯುನೈಟೆಡ್ ಸ್ಟೇಟ್ಸಿನ ಪ್ರೆಸಿಡೆಂಟ್ ರುಜ್‌ವೆಲ್ಟರು ಮಾತ್ರ ಮಧ್ಯಸ್ಥಿಕೆ ಮಾಡಿ, ಭಯಂಕರ ಮಾನವ ಮಾರಣದಿಂದ ಯುರೋಪನ್ನು ರಕ್ಷಿಸಲು ಶಕ್ತರೆಂದು ನಾಝಿ ಪ್ರಚಾರ ಖಾತೆಯ ಮುಖ್ಯಾಧಿಕಾರಿಯಾದ ಹರ್ ಒಟ್ಟೋರವರು ಸೂಚಿಸಿರುವರು. ಜರ್ಮನಿಯು ಈಗ ಅಮೇರಿಕದ ಸಹಾಯ ಪಡೆಯಲು ಹಾತೊರೆಯುತ್ತಿರುವಂತಿದೆ ಅಮೇರಿಕವು ಸಹಾಯ ಮಾಡದಿದ್ದರೆ ಜರ್ಮನಿಯನ್ನು ಮಿತ್ರರಾಷ್ಟ್ರಗಳಿಗೆ ಗೆಲ್ಲಲು ಸಾಧ್ಯವಿಲ್ಲೆಂಬ ವಿಶ್ವಾಸವು ನಾಝಿಗಳಲ್ಲಿರುವಂತಿದೆ. ಹಿಟ್ಲರರ ಮಾತನ್ನು ನಂಬಲು ಸಾಧ್ಯವಿಲ್ಲ ವಚನಭ್ರಷ್ಟರವರು ತನ್ನ ಮಾತನ್ನು ಪಾಲಿಸುವೆನೆಂಬುದಕ್ಕವರು ಗ್ಯಾರಂಟಿ ಕೊಡಬೇಕು ಪೋಲಂಡಿನಿಂದ ಸೇನೆಯನ್ನು ಹಿಂತೆಗೆಯಬೇಕು ವಿಜಯದುಬ್ಬಿನ ಬಲಾತ್ಕಾರದ ಶಾಂತಿಗೆ ತಾವೆಂದೂ ಒಪ್ಪಲಿಕ್ಕಿಲ್ಲ ಜರ್ಮನ್ ಜನತೆಯ ಕುರಿತು ತಮಗೇನೂ ದ್ವೇಷವಿಲ್ಲ, ಅವರಿಗೇನಾದರೂ ಅಪಮಾನಕರ ರೀತಿಯಲ್ಲಿ ತಾವು ನಡೆಯಲಿಕ್ಕಿಲ್ಲ ಆದರೆ ಬಲಾತ್ಕಾರ ನಡಿಸುವ ಹಿಟ್ಲರ್‌ಶಾಹಿಯು ಅಳಿಯಬೇಕೆಂದೇ ಫ್ರೆಂಚ್ ಮತ್ತು ಬ್ರಿಟಿಷ್ ಪ್ರಧಾನ ಮಂತ್ರಿಗಳ ಸ್ಪಷ್ಟೋಕ್ತಿ ನ್ಯಾಯವಾದ ಸಂಧಿಗೆ ತಾವೇನೂ ವಿರೋಧವಿಲ್ಲೆಂಬುದನ್ನು ಇಬ್ಬರೂ ನಿರೂಪಿಸಿರುವರು.

ಮುಸಲೋನಿಯವರ ಉಭಯಸಂಕಟ

ಹಿಟ್ಲರರಿಗೆ ಪಶ್ಚಿಮ ರಣರಂಗದಲ್ಲಿ ಯುದ್ಧವನ್ನು ಮುಂದೊತ್ತಲು ಮನಸ್ಸಿರುವಂತೆ ತೋರುವುದಿಲ್ಲ ಇಟೆಲಿಯು ದಿನೇ ದಿನೇ ಜರ್ಮನಿಯಿಂದ ದೂರವಾಗುತ್ತಿರುವಂತಿದೆ ಮುಸಲೋನಿಯವರ ಸುದ್ದಿಯೇ ಇಲ್ಲ, ಅವರು ಅಗೋಸ್ತು ೩೧ರಲ್ಲಿ, ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ ಮತ್ತು ಪೋಲಂಡುಗಳು ಸೇರಿ ಸಪ್ಟಂಬರ ತಾ ೫ರಲ್ಲಿ ಪರಿಷತ್ತು ನಡಿಸಿ ಕಲಹದ ಪ್ರಶ್ನೆಯನ್ನು ರಾಜಿಯಿಂದ ತೀರ್ಮಾನಿಸುವ ಸೂಚನೆ ಮಾಡಿದ್ದರು ಇಂಗ್ಲೆಂಡು ಮತ್ತು ಫ್ರಾನ್ಸಗಳು ಇದಕ್ಕೊಪ್ಪುವಾಗ ಎರಡು ದಿವಸ ತಡವಾಯಿತು, ಹಿಟ್ಲರರು ಪೋಲಂಡಿನ ಮೇಲೇರಿ ಹೋದರು, ಪರಿಷತ್ತಿಗೆ ಇಂಗ್ಲೆಂಡ್ ಮತ್ತು ಫ್ರಾನ್ಸಗಳೊಪ್ಪಿರುತ್ತವೆ ಹಿಟ್ಲರರು ಧಾಳಿ ನಿಲ್ಲಿಸಿದರೆ ಇನ್ನಾದರೂ ಸಂಧಿಯು ಸಾಧ್ಯವಿದೆಯೆಂದು ಮುಸಲೋನಿಯವರು ಸೆಪ್ಟಂಬರ ತಾ ೨ರಲ್ಲಿ ಹಿಟ್ಲರರಿಗೆ ತಿಳಿಸಿದರು ಫ್ರಾನ್ಸ ಮತ್ತು ಇಂಗ್ಲೆಂಡುಗಳು ಜರ್ಮನಿಗೆ ಯುದ್ಧದ ಎಚ್ಚರವಿತ್ತು ಬೆದರಿಸಿರುವಾಗ ಸಂಧಿಯು ಸಾಧ್ಯವಿಲ್ಲೆಂದು ಹಿಟ್ಲರರು ಧಾಳಿಯನ್ನೆ ಮುಂದುವರಿಸಿಬಿಟ್ಟರು ಇದರಿಂದ ಮುಸಲೋನಿಯವರು ಸಂತಾಪಗೊಂಡಿರಬೇಕು. ಇಟಲಿಯಿಂದ ಯಾವ ಸಹಾಯವೂ ದೊರೆಯುವುದಿಲ್ಲೆಂದು ನಿಶ್ಚಯವಾಗಿ ತಿಳಿದುಕೊಂಡೇ ಹಿಟ್ಲರರು ರಶ್ಯದೊಡನೆ ನಿಕಟಸಂಬಂಧವನ್ನು ಬೆಳೆಸಿಕೊಂಡುದಾಗಿದೆ ಹೀಗೆ ಮುಸಲೋನಿಯವರು ಏಕಾಕಿಯಾಗಿ ಹೋಗಿ ಉಭಯ ಸಂಕಟದಲ್ಲಿ ಬಿದ್ದಿದ್ದಾರೆ ಅವರು ಜರ್ಮನಿಯ ಕಡೆಯಿಂದ ಇನ್ನೊಮ್ಮೆ ಮಧ್ಯಸ್ತಿಕೆ ಮಾಡಲು ತಯಾರಿಲ್ಲ. ಆದುದರಿಂದಲೇ ನಾಝಿಗಳೀಗ ಅಮೆರಿಕದ ಆಶ್ರಯ ಪಡೆಯಲು ಹಾತೊರೆಯುತ್ತಿದ್ದಾರೆ ಪ್ರೆಸಿಡೆಂಟ್ ರುಜವೆಲ್ಟರು ಪ್ರಯತ್ನಿಸಿದರೆ ಸಂಧಿಯಾಗಬಹುದು ಆದರೆ ಸದ್ಯ ಅವರು ಪ್ರಯತ್ನ ಮಾಡುವ ಸಂಭವ ತೋರುವದಿಲ್ಲ

ಇಂದೀಗ ಪರಿಸ್ಥಿತಿಯು ಮಿತ್ರರಾಷ್ಟ್ರಗಳಿಗೂ ಅನುಕೂಲವಿಲ್ಲ ರಶ್ಯದ ತಂತ್ರದಿಂದ ಮಿತ್ರರಾಷ್ಟ್ರಗಳ ಮುಂದಿನ ದಾರಿಯು ಬಹಳ ತೊಡಕುಗಳಿಂದ ತುಂಬಿದೆ. ಒಂದೊಮ್ಮೆ ಜರ್ಮನಿಯು ಸೋತರೂ ಹಿಂದಿನ ಪೋಲಂಡನ್ನು ಪುನರುಜ್ಜೀವಿಸಲು ಸಾಧ್ಯವೇ ಇಲ್ಲ ಜರ್ಮನಿಯು ಸೋವಿಯೆಟ್ ತತ್ವವನ್ನನುಸರಿಸಿಬಿಟ್ಟರೆ ಮಿತ್ರ ರಾಷ್ಟ್ರಗಳ ದಾರಿಯು ಮತ್ತೂ ಬಿಕ್ಕಟ್ಟಾಗುತ್ತದೆ. ಆದುದರಿಂದ ಬರುವ ಚಳಿಗಾಲದೊಳಗೆ ಸಂಧಿಯಾಗಲೂ ಬಹುದೆಂದು ತೋರುತ್ತದೆ ಹಿಟ್ಲರರು ಅದಕ್ಕಾಗಿ ಒಳಗಿಂದೊಳಗೆ ಪ್ರಯತ್ನಿಸುವಂತೆ ತೋರುತ್ತದೆ, ಮುಸಲೋನಿಯವರನ್ನು ಮೊದಲೇ ಅವರು ನಿರಾಶೆಗೊಳಿಸಿರುವುದರಿಂದ ಯುರೋಪಿನಲ್ಲಿ ಅವರು ಗೌರವಪೂರ್ವಕವಾಗಿ ಮಧ್ಯಸ್ತಿಕೆಗಾಗಿ ಆಶ್ರೈಸುವ ಇನ್ನೊಂದು ಜನಾಂಗವಿಲ್ಲ ಪ್ರೆಸಿಡೆಂಟ್ ರೂಸವೆಲ್ಟರ ಮಾತನ್ನು ಮಿತ್ರರಾಷ್ಟ್ರಗಳೂ ಅಲ್ಲಗಳೆಯಲಾರವು ಆದುದರಿಂದಲೇ ಈಗ ಪ್ರೆಸಿಡೆಂಟ್ ರೂಸವೆಲ್ಟರಿಗೆ ಜರ್ಮನಿಯ ಪತ್ರಿಕೆಗಳು ವಿನಂತಿಮಾಡಿಕೊಳ್ಳಹತ್ತಿವೆ.

ಸ್ತ್ರೀಯರ ಅಸಹನೀಯ ಯಾತನೆ.

ಜರ್ಮನಿಯು ಸೋವಿಯೆಟ್ ತತ್ವವನ್ನನುಸರಿಸುವುದೇ?

"ನೀವು ನಮಗೆ ಕೊಡುವ ಸ್ವಾತಂತ್ರ್ಯಕ್ಕಾಗಿ ನಾವೀಗ ಕಾದುಕೊಂಡಿರುತ್ತೇವೆ' ಎಂದು ಜರ್ಮನಿಯ ಕೆಲಸಗಾರ ಸೈನಿಕರು, ಇಂಗ್ಲೆಂಡಿನ ಲೇಬರ್ ಪಕ್ಷದ ಉಪನಾಯಕರಾದ ಮಿ ಗ್ರೀನ್‌ವುಡ್ಡರಿಗೊಂದು ವಿನಂತಿ ಕಳುಹಿಸಿರುವರು. "ಜರ್ಮನಿಯ ಸೇಕಡ ೬೦ರಷ್ಟು ಜನರು ಹಿಟ್ಲರ್ ಶಾಹಿಯ ಬಂಧನದಿಂದ ಸ್ವಾತಂತ್ರ್ಯವನ್ನು ಹಾರೈಸಿಕೊಂಡಿರುವರು ಆದರೆ ಅವರು ಭೀಕರ ದಬ್ಬಾಳಿಕೆಯ ಉಪಟಳಕ್ಕೊಳ್ಳಗಾಗಬೇಕಾಗಿದೆ. ಎಲ್ಲಿಗೆ ಕೋವಿಯ ಗುರಿಯಿಡಬೇಕೆಂಬುದನ್ನು ಜರ್ಮನಿಯ ಕೆಲಸಗಾರ ಸೈನಿಕನು ಚೆನ್ನಾಗಿಬಲ್ಲನು. ಮಾನವಕೋಟಿಯು ನ್ಯಾಯವಾದ ಶಾಂತಿಯನ್ನು ಪಡೆಯುವಂತೆ ಹೋರಾಡುವ ನಿಮ್ಮ ಮೇಲೆ ಅವನು ಗುಂಡುಹಾರಿಸಲಾರನು. ಯುರೋಪಿನ ಸುಹೃದಯರಾದ ಎಲ್ಲಾ ಜನರ ಸ್ವಾತಂತ್ರ್ಯ ಶಾಂತಿಗಾಗಿ ನಾವು ಹೋರಾಡುತ್ತಿದ್ದೇವೆ" ಎಂಬುದೇ ಈ ವಿನಂತಿಯ ಸಾರಾಂಶ "ಜರ್ಮನಿಯಲ್ಲಿ ಜನರು ಬಹಳ ನಿರುತ್ಸಾಹಗೊಂಡಿದ್ದಾರೆ. ಆಸ್ಟ್ರಿಯದ ನಿರಾಶ್ರಿತ ಜನರು ಜರ್ಮನಿಯ ಮೇಲೆ ಪ್ರತೀಕಾರದ ಪ್ರತಿಜ್ಞೆ ಕೈಕೊಂಡಿದ್ದಾರೆ ಬೆಣ್ಣೆ, ಚರ್ಬಿ, ಮತ್ತು ಎಣ್ಣೆಯು ಸಿಕ್ಕುವುದೇ ಇಲ್ಲ ಹಸಿ ಮಾನನ್ನು ಪಡೆಯುವುದೇ ಕಷ್ಟ ೧೪-೧೫ವರ್ಷ ಪ್ರಾಯದ ಹಿಟ್ಲರ್ ಯುವಕ ಸಂಘದವರು ಹಾಗೆಮಾಡಬೇಕು, ಹೀಗೆ ಮಾಡಬೇಕೆಂದು ಅನುಜ್ಞೆ ಕೊಡುತ್ತಾ ಓಡಾಡುತ್ತಿದ್ದಾರೆ ಸೈನಿಕರೆಲ್ಲರೂ ಯುದ್ಧಕ್ಕೆ ಕರೆಯಲ್ಪಟ್ಟಾಗ ಸ್ತ್ರೀಯರ ಗೋಳಂತೂ ಹೃದಯವಿದಾರಕವಾದುದು. ಅನೇಕ ಸ್ತ್ರೀಯರು ತಮ್ಮ ಗಂಡಸರನ್ನು ಹೋಗಬಿಡಲೇ ಇಲ್ಲ ನಡು ರಸ್ತೆಯಲ್ಲೇ ತಡೆದು ನಿಲ್ಲಿಸಿ ಗೋಳಿಡುತ್ತಿದ್ದರು. ಬಲಾತ್ಕಾರದಿಂದ ಸೈನಿಕರನ್ನೊಯ್ಯಬೇಕಾಗಿರುವುದು ಅನೇಕರು ಸೈನ್ಯಕ್ಕೆ ಬಂದು ಸೇರಲು ತಪ್ಪಿದರು. ಅವರನ್ನು ಕೈದುಮಾಡಿ ಎಲ್ಲಿಗೋ ಒಯ್ಯಲಾಗಿದೆ. ಅವರೆಲ್ಲಿರುವರೆಂದು ಅವರ ಕುಟುಂಬಿಕರಿಗೇನೇ ತಿಳಿಯದು. ಒಂದು ಚಿಕ್ಕ ಪಟ್ಟಣದಲ್ಲಿ ಒಬ್ಬ ಸ್ತ್ರೀಯ ಗಂಡನನ್ನು ಕರದೊಯ್ಯಲು ಪೋಲೀಸರು ಬಂದಾಗ ಆವಳು ಹುಚ್ಚಳಾಗಿಬಿಟ್ಟಳು. ಹಳ್ಳಿಯೊಂದರಲ್ಲಿ ಗರ್ಭಿಣಿ ಸ್ತ್ರೀಯೋರ್ವಳ ಗಂಡನು ಒಯ್ಯಲ್ಪಟ್ಟಾಗ ಅವಳು ನೀರಿಗೆ ಹಾರಿ ಪ್ರಾಣಕಳಕೊಂಡಳು ಕಳೆದ ಮಹಾಯುದ್ಧದಲ್ಲೊಬ್ಬನು ೪ವರ್ಷಗಳನಕ ರಣರಂಗದಲ್ಲಿ ಹೋರಾಡಿದವನು ಈಸಲ ಸೈನ್ಯಕ್ಕೆ ಸೇರಲು ನಿರಾಕರಿಸಿದನು, ಅವನನ್ನು ಕೈದುಮಾಡಿ ಕೂಡಲೇ ಗುಂಡುಹೊಡೆದು ಕೊಲ್ಲಲಾಯಿತು ಯುದ್ಧದಲ್ಲಿ ಎಷ್ಟು ಮಂದಿ ಹತರಾಗಿರುವರೆಂಬುದನ್ನು ಪ್ರಕಟಿಸುವುದೇ ಇಲ್ಲ ಮರಣದುಃಖ ಸೂಚಕ ಚಿಹ್ನೆಗಳನ್ನು ಯಾರೂ ಧರಿಸಿಕೊಳ್ಳಲಿಕ್ಕಿಲ್ಲ" ಎಂದು ಪಶ್ಚಿಮ ಜರ್ಮನಿಯ ನಿವಾಸಿಯೊಬ್ಬನು ಲಂಡನ್ನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಗೆ ಬರೆದಿರುವನು

ಪೋಲಂಡಿನ ಯುದ್ಧದಲ್ಲಿ ೯೧೦೦೦ ಜರ್ಮನರು ಹತರಾಗಿರುವರೆಂದು ತಿಳಿದುಬರುತ್ತದೆ ಪಶ್ಚಿಮ ರಣರಂಗದಲ್ಲಿ ಇನ್ನೂ ಯುದ್ಧ ಆರಂಭವಾಗಿರುವಂತಿಲ್ಲ. ಹಿಟ್ಲರರು ಸ್ವತಃ ರಣರಂಗಕ್ಕಿಳಿದು ಮಿಂಚಿನ ವೇಗದಿಂದ ಧಾಳಿ ನಡಿಸುವ ನಿರ್ಧಾರ ಮಾಡಿರುವರೆಂದು ತಿಳಿದುಬರುತ್ತದೆ. ಜರ್ಮನ್ ಸೇನೆಯು ಫ್ರೆಂಚರ ಮೆಗಿನೊಟ್ ಕೋಟೆಯ ಮೇಲೆ ಪ್ರಚಂಡ ಧಾಳಿ ನಡಿಸಿದರೆ ಒಂದು ಮಿಲ್ಯ ಜರ್ಮನರಾದರೂ ರಣರಂಗದಲ್ಲಿ ಮಡಿಯಲು ಸಿದ್ಧರಾಗಬೇಕಾದೀತು. ಸ್ಥಿರವಾಗಿ ಮುಂದೊತ್ತಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿರುವ ಫ್ರೆಂಚ್ ಸೇನೆಯನ್ನು ಹಿಂದಕ್ಕಟ್ಟುವುದು ಕಷ್ಟಸಾಧ್ಯ ಒಂದುವರೆ ಲಕ್ಷಕ್ಕೂ ಮಿಕ್ಕಿದ ಬ್ರಿಟಿಷ್ ಸೇನೆಯು ಫ್ರೆಂಚ್ ಸೇನೆಯೊಂದಿಗೆ ಬಂದು ಸೇರಿದೆ ಹೊಲ್ಲೆಂಡ್, ಲಕ್ಸೆಂಬರ್ಗ್ ಮತ್ತು ಸ್ವಿಜರ್ಲೆಂಡ್‌ಗಳ ಮೂಲಕ ಫ್ರಾನ್ಸಿನ ಮೇಲೆ ಧಾಳಿ ನಡೆಸುವುದೂ ಬಹಳ ಪ್ರಯಾಸ. ಲಕ್ಷಾಂತರ ಸೈನಿಕರು ಹತರಾಗಿ ರಕ್ತದ ಕಾಲುವೆ ಹರಿಯದೆ ಒಂದೊಮ್ಮೆ ಸೋಲು ಗೆಲುವಾಗಲಾರದು. ಈ ಭೀತಿಯಿಂದಲೇ ಹಿಟ್ಲರರೀಗ ಪಶ್ಚಿಮ ರಣರಂಗದಲ್ಲಿ ಹೋರಾಡಲು ಹಿಂದೆಗೆಯುತ್ತಿರುವರು. ಶಾಂತಿಗಾಗಿ ಹಾತೊರೆಯುತ್ತಿರುವುದು.

WHAT MAKES A MAN RICH?

Luck? - - Very rarely.
Inheritance? - Not often.
Speculation? Once in a blue moon
Gambling? - - Never.
Hard Work? - Very Often.
Hard work and Thrift - Always.

RESOURCES OF A CRORE

ESTD 1906
CANARA BANK LIMITED



IN MATTERS OF LOVE

MAN DOES NOT ATTRACT MAN
WOMAN DOES NOT ATTRACT WOMAN
BY NATURE, LIKE THINGS DO NOT ATTRACT.

BUT

Remember

MONEY DOES ATTRACT MONEY.

The Canara Banking Corporation Limited
(Incorporated in British India)
ESTD· **1906**

ನವಯುಗ

ಉಡುಪಿ, ಗುರುವಾರ ತಾ. ೧೯-೧೦-೩೯

ಪ್ರಗತಿಪರ ಮೈಸೂರು

ದಸರವು ಕರ್ನಾಟಕದ ನಾಡಹಬ್ಬ. ಮೈಸೂರಿನ ರಾಷ್ಟ್ರೀಯ ಉತ್ಸವ. ದಸರೆಯ ಸಂದರ್ಭದಲ್ಲಿ ದೇಶಪರದೇಶಗಳ ದೃಷ್ಟಿಯು ಒಮ್ಮೆ ಮೈಸೂರಿನ ಕಡೆಗೆಳೆಯಲ್ಪಡುವುದು. ಅಖಿಲ ಹಿಂದುಸ್ಥಾನದಿಂದ ಮತ್ತು ಹೊರಗಣ ದೇಶಗಳಿಂದ ಕೂಡಾ ಅತಿಥಿಗಳು ಆಮಂತ್ರಿಸಲ್ಪಟ್ಟು ದಸರೆಯ ಉತ್ಸವ ಮೆರವಣಿಗೆ ಪ್ರದರ್ಶನಾದಿಗಳನ್ನು ಕಂಡು ಆನಂದಿಸುವರು ಮೈಸೂರಿನಕೀರ್ತಿಯನ್ನು ದಿಗಂತವ್ಯಾಪಿಯಾಗಿ ಮಾಡಿರುವುದರಲ್ಲಿ ದಸರೆಯ ಪಾಲೇನೂ ಕಡಿಮೆಯಲ್ಲ. ಅಷ್ಟೊಂದು ಪ್ರೇಕ್ಷಣೀಯವಾಗಿ ಜರಗುತ್ತದೆ 9 ದಿನಗಳ ಹಬ್ಬ ಮೈಸೂರಲ್ಲಿ ಮೈಸೂರವರ ಕ್ರಿಸ್‌ಮಸ್ ಹಬ್ಬವದು ಧಾರ್ಮಿಕ, ಸಾಮಾಜಿಕ, ಸಾಂಪತ್ತಿಕ ಮತ್ತು ರಾಜಕೀಯ ಅಂಗಗಳೆಲ್ಲಾ ಸೇರಿ ಸರ್ವಾಂಗಸುಂದರವಾಗಿ ಒಂದಲ್ಲೊಂದು ರೀತಿಯಿಂದ ಸರ್ವರಿಗೂ ಆಸಕ್ತಿಯ ಮತ್ತು ಸಂತೋಷದ ಉತ್ಸವವಾಗಿದೆ. ಮೈಸೂರಿನ ದಸರೆ ಮಾತ್ರವಲ್ಲದೆ ಮೈಸೂರಿನ ಸರ್ವತೋಮುಖವಾದ ಅಭಿವೃದ್ಧಿಯ ಉಜ್ವಲ ಚಿತ್ರವೂ ಆಗಿದ ಈ ವರ್ಷವೂ ಅದು ಯಥಾಪ್ರಕಾರ ವಿಜೃಂಭಣೆಯಿಂದ ಜರಗಿರುವುದು. ಅದು ಹೇಗೆ ಆಚರಿಸಲ್ಪಡುವುದೆಂಬ ವಿವರವನ್ನು ನಮ್ಮ ಮೈಸೂರಿನ ಬಾತ್ಮಿದಾರರು ಇನ್ನೊಂದೆಡೆ ಚೆನ್ನಾಗಿ ವಿವರಿಸಿರುವರು.

ದಿವಾನರ ಭಾಷಣ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ತಾ. 10ನೇ ಅಪರಾಹ್ನ ಜಗನ್ಮೋಹನ ಅರಮನೆಯಲ್ಲಿ ಜರಗಿತು. ದಿವಾನರಾದ ಸರ್. ಮಿರ್ಜಾ ಇಸ್ಮಯೀಲರು ಈ ಸಂದರ್ಭದಲ್ಲಿ ಮಾಡಿದ ಭಾಷಣವು ಮೈಸೂರಿನ, ಹಿಂದೂದೇಶದ ಮತ್ತು ಇಡೀ ಲೋಕದ ಹಿಂದಿನ ಸಿಂಹಾವಲೋಕನೆ, ಇಂದಿನ ವಿಮರ್ಶೆ ಮತ್ತು ಮುಂದಿನ ಕಲ್ಪನೆಯನ್ನೊಳಗೊಂಡಿರುವುದು. ಮಿತ್ರರಾಷ್ಟ್ರಗಳು ಯುದ್ಧ ಹೂಡಿರುವ ಕಾರಣ, ಅವುಗಳಿಗೆ ಸಹಾಯ ಮಾಡುವ ಅವಶ್ಯಕತೆ, ಲೋಕದಲ್ಲಿ ನ್ಯಾಯ ನೀತಿ ಮತ್ತು ಶಾಂತಿ ಸುಭಿಕ್ಷಗಳು ನೆಲೆಗೊಳ್ಳುವಂತೆ ಜಾಗ್ರತಿಕ ರಾಷ್ಟ್ರಗಳ ಸಂಯುಕ್ತ ರಾಜ್ಯಾಂಗ ರಚನೆಯ ಸ್ವರೂಪ, ಹಿಂದೀಯರೆಲ್ಲರೂ ಈ ಸಂದರ್ಭದಲ್ಲಿ ತಮ್ಮ ಸಂಕುಚಿತ ಭಿನ್ನಭೇದಗಳನ್ನು ಮೂಲೆಗೊತ್ತಿ ಒಂದಾಗಿ ಬ್ರಿಟಿಷ್ ಸಾಮ್ರಾಜ್ಯದಾಶ್ರಯದಲ್ಲಿ ಸ್ವತಂತ್ರ್ಯಾಡಳಿತ ಪಡೆಯಲು ಮಾಡಬೇಕಾದ ಕೆಲಸ ಮತ್ತು ಆಡಳಿತದ ಪ್ರತಿಯೊಂದು ಭಾಗದಲ್ಲಿಯೂ ಮೈಸೂರಿನ ಮುನ್ನಡೆಯ ಉಜ್ವಲ ಚಿತ್ರವನ್ನು ದಿವಾನರು ಸಂಕ್ಷೇಪವಾಗಿ ಹಾಗೂ ಹೃದಯಂಗಮವಾಗಿ ತನ್ನ ಭಾಷಣದಲ್ಲಿ ಕೊಟ್ಟಿರುತ್ತಾರೆ.

ಒಂದು ಆಶ್ಚರ್ಯ ಸಂಗತಿಯೆಂದರೆ ಮೈಸೂರಿನ ರಾಜಕೀಯ ಸುಧಾರಣಾ ಕಮಿಟಿಯವರು ತಮ್ಮ ವರದಿಯನ್ನು ತಯಾರಿಸಿರುವರಾದರೂ ಆ ಕುರಿತು ಯಾವ ಪ್ರಸ್ತಾಪವನ್ನೂ ದಿವಾನರು ಈ ಸಂದರ್ಭದಲ್ಲಿ ಮಾಡದುದು. ಕೆಲಜನರ ಸಂಘಟಿತ ಬೇಕಾಯಿದೇಶೀರತನದಿಂದ ಮೈಸೂರು ಪಬ್ಲಿಕ್ ಸೆಕ್ಯೂರಿಟಿ ಆಕ್ಟನ್ನು ಜ್ಯಾರಿಗೆ ತರಬೇಕಾಗಿ ಬಂದುದು ಶೋಚನೀಯ ಆದರೆ ಅದನ್ನು ಅತ್ಯಗತ್ಯವಾದಲ್ಲಿ ಮಾತ್ರ ಉಪಯೋಗಿಸಲಾಗುವುದು ಮೈಸೂರಿಗೆ ರಾಜಕೀಯ ಸುಧಾರಣೆಯನ್ನು ದೊರಕಿಸುವುದು ತಪ್ಪು ದಾರಿ ಹಿಡಿದಿರುವ ಈ ದೇಶಾಭಿಮಾನಿಗಳ ಉದ್ದೇಶವಾದರೆ ನ್ಯಾಯ ಮಾರ್ಗದಿಂದನ್ನು ಸಾಧಿಸಬೇಕಲ್ಲದೆ ಪುಂಡಾಟಿಕೆಯಿಂದಲ್ಲವೆಂದು ಸರ್ ಮಿರ್ಜಾರವರು ಮೈಸೂರಲ್ಲಿ ಈಗ ನಡೆಯುತ್ತಿರುವ ಕಾಯಿದೆ ಭಂಗ ಚಳವಳದ ಕುರಿತು ತನ್ನ ಜುಗುಪ್ಸೆ ಮತ್ತು ತಿರಸ್ಕಾರ ಸೂಚಿಸಿರುವರು. ಮೈಸೂರು ಸ್ಟೇಟ್ ಕಾಂಗ್ರೆಸಿನವರು ತಪ್ಪು ದಾರಿ ಹಿಡಿದಿರಬಹುದು. ಅವರು ಕಾಯಿದೆ ಭಂಗ ಚಳವಳ ಹೂಡಿದುದು ಅವಿವೇಕ ಮತ್ತು ಅಚಾತುರ್ಯವಿರಬಹುದು. ಆದರೆ ಅದಕ್ಕೆ ಕಾರಣ ಮೈಸೂರು ಸರಕಾರದ ಅಧಿಕಾರಿಗಳ ಉದ್ಧಟತನ ವರ್ತನೆಯೆಂಬುದನ್ನು ಮರೆಯಲು ಸಾಧ್ಯವಿಲ್ಲ. ಸ್ವಾಭಿಮಾನಿಗಳಾದ ಮೈಸೂರು ಸ್ಟೇಟ್ಸ್ ಕಾಂಗ್ರೆಸ್ ಮುಖಂಡರಿಗದು ಅಸಹನೀಯವಾಗಿ ಅವರು ಮಾಡಿರುವ ಚಳವಳವನ್ನು ಪುಂಡಾಟಿಕೆಯೆಂದು ದಿವಾನರು ಕರೆದಿರುವುದು ಅವರ ಅವಿವೇಕ ಮತ್ತು ಉದ್ಧಟತನವೆಂಬುದನ್ನು ನಾವು ಸೂಚಿಸದಿರಲಾರೆವು. ಹಿಂದೂದೇಶದ ಸ್ವಾತಂತ್ರ್ಯ ಮತ್ತು ಜಾಗ್ರತಿಕ ಶಾಂತಿ ಸುಭಿಕ್ಷೆಯನ್ನು ಹಾರೈಸುವ ದಿವಾನರು ಮೈಸೂರಿನ ಪ್ರಜೆಗಳ ಸ್ವಾತಂತ್ರ್ಯ, ಶಾಂತಿ ಮತ್ತು ಸುಭಿಕ್ಷೆಯನ್ನು ಕಡೆಗಣಿಸಲು ಸಾಧ್ಯವಿಲ್ಲ. ಇಂದೀಗ ಲೋಕವಿಪ್ಲವಕ್ಕೆ ಹಿಟ್ಲರನ ನಿರಂಕುಶತನವು ಕಾರಣವಾದರೆ ಚಿಕ್ಕ ಕ್ಷೇತ್ರಗಳಲ್ಲಿ ಅಂತಹ ನಿರಂಕುಶ ಪ್ರಭುತ್ವವೇ ನೆಲೆಗೊಂಡಿವೆ. ಹಿಂದೀ ದೇಶೀಯ ಸಂಸ್ಥಾನಗಳಲ್ಲಿ ಪ್ರಗತಿ ಮಾರ್ಗ ಹಿಡಿದಿರುವ ಮೈಸೂರಾದರೂ ಅದಕ್ಕೆ ಅಪವಾದವಾಗಿರುವುದಿಲ್ಲ. ಉದಾರಿಗಳೂ ವಿವೇಕಶಾಲಿ ಮುತ್ಸದ್ದಿಯೂ ಆದ ಮೈಸೂರು ದಿವಾನರು ಇದನ್ನು ಮನಗಂಡು ಮೈಸೂರು ಆದಷ್ಟು ಬೇಗನೆ ಜವಾಬ್ದಾರಿ ರಾಜ್ಯಭಾರ ಪಡೆಯುವಂತೆ ತನ್ನಿಂದ ಸಾಧ್ಯವಾದ ಪ್ರಯತ್ನ ಮಾಡಬೇಕು. ಆಗ ಮಾತ್ರ ಮೈಸೂರಿನ ಧವಳ ಕೀರ್ತಿಗೆ ಕಳಂಕ ತರುವ ಈಗಣ ಅಶಾಂತಿಯು ಪ್ರಜೆಗಳಲ್ಲಿ ತಲೆದೋರದಂತಾಗುವುದು. ದಸರೆಯ ಸಂದರ್ಭದಲ್ಲಿ ಒಂದು ದಿನ ಸ್ಟೇಟ್ ಕಾಂಗ್ರೆಸಿನವರು ಸತ್ಯಾಗ್ರಹ ನಿಲ್ಲಿಸಿದುದು ಶುಭ ಚಿನ್ಹೆಯಾಗಿದೆ. ಬೆಂಗಳೂರು ಶ್ರೀ. ವೆಂಕಟಪತಿಯ್ಯನವರೇ ಮೊದಲಾದ ಮುಖಂಡರು ಸ್ಟೇಟ್ ಕಾಂಗ್ರೆಸ್ ಮತ್ತು ಮೈಸೂರು ಸರಕಾರಗಳೊಳಗೆ ರಾಜಿ ಮಾಡುವ ಪ್ರಯತ್ನ ನಡೆಸುತ್ತಿದ್ದು ಆ ಸಂಬಂಧವಾಗಿ ಜೈಲಲ್ಲಿ ಶ್ರೀ. ದಾಸಪ್ಪನವರೇ ಮೊದಲಾದವರೊಡನೆ ಮಾತಾಡಿ ಈಗ ಗಾಂಧಿಜಯವರ ಸಲಹೆ ಪಡೆಯಲು ವಾರ್ಧಕ್ಕೆ ಹೋಗಿರುತ್ತಾರೆ. ಅವಸರದ ದುಡುಕಿನಿಂದ ಯಾವ ಚಳವಳವನ್ನಾದರೂ ಆರಂಭಿಸಿ ಮುನ್ನಡೆಸಿ ಫಲವಿಲ್ಲ. ಈ ಸಲದ ಚಳವಳವು ಮೈಸೂರು ಸ್ಟೇಟ್ ಕಾಂಗ್ರೆಸಿಗೆ ಯಶಸ್ಸನ್ನು ತಂದಿಲ್ಲೆಂದು ನಮ್ಮ ಅಭಿಮತ. ಮಹಾತ್ಮಾ ಗಾಂಧಿಯವರ ಮಧ್ಯಸ್ಥಿಕೆಯಿಂದಾಗಿ ಈ ಚಳವಳವು ಬೇಗನೆ ನಿಲ್ಲಿಸಲ್ಪಟ್ಟು ಮೈಸೂರಲ್ಲಿ ಶಾಂತಿಯು ನೆಲೆಗೊಂಡು ಹೊಸ ಸುಧಾರಣೆಯು ಜ್ಯಾರಿಗೆ ತರುವಂತಾಗುವುದೆಂದು ಹಾರೈಸುತ್ತೇವೆ.

ಸಾಂಪತ್ತಿಕ ಮತ್ತು ಕೈಗಾರಿಕಾಭಿವೃದ್ಧಿಯಲ್ಲಿ ನಿಜವಾಗಿಯೂ ಮೈಸೂರು ಇಡೀ ದೇಶಕ್ಕೊಂದು ಮಾದರಿಯಾಗಿದೆ. ಪಟ್ಟಣದ ಅನುಕೂಲತೆಯನ್ನು ಹಳ್ಳಿಗೊಯ್ದು ಹಳ್ಳಿಯ ಸೊಬಗನ್ನು ಪಟ್ಟಣಕ್ಕೆ ತಂದು ಅದೊಂದು ವಿಶಿಷ್ಟ ನಿರ್ಮಾಣವನ್ನೇ ಮಾಡಿರುವ ನವಜೀವನ ಕಲ್ಪೋಪಾಸಕರಾದ ಸರ್. ಮಿರ್ಜಾರವರಿಗೆ ಮೈಸೂರು ಚಿರಋಣಿಯಾಗಿರಲೇ ಬೇಕು. ಮೈಸೂರಿನಷ್ಟು ಸರ್ವಾಂಗವ್ಯಾಪಕ ಸಾಂಪತ್ತಿಕ ಅಭಿವೃದ್ಧಿಸಾಧನಾ ಉದ್ಯಮಗಳನ್ನು ಜಯಶೀಲವಾಗಿ ಕೈಗೊಂಡು ಪ್ರಯೋಜನ ಹೊಂದಿದ ಸಂಸ್ಥಾನವು ಇಡೀ ದೇಶದಲ್ಲಿ ಇನ್ನೊಂದಿರಲಾರದು. ಕಬ್ಬಿಣ ಇಲೆಕ್ಟ್ರಿಕ್ ಸಾಮಾನುಗಳು, ಸಕ್ಕರೆ, ಕಾಗದ ಸಿಲ್ಕ್ ಮೊದಲಾದ ದೊಡ್ಡ ಕೈಗಾರಿಕೆಗಳ ಕಾರ್ಖಾನೆಗಳಂತೆಯೇ ಸಾಮಾನು, ಮಣ್ಣಿನ ಪಾತ್ರೆಗಳು, ಹುರಿಹಗ್ಗ ಮತ್ತು ಚಾಪೆ ಹೆಣೆಯುವುದೇ ಮೊದಲಾದ ಚಿಕ್ಕ ಪುಟ್ಟ ಗೃಹಕೈಗಾರಿಕೆಗಳ ಅಭಿವೃದ್ಧಿಗೂ ಮೈಸೂರು ವಿಶೇಷ ಗಮನವಿತ್ತಿದೆ. ಅಲ್ಲಲ್ಲಿ ಖಾದಿಕೇಂದ್ರಗಳನ್ನು ಸ್ಥಾಪಿಸಿ ಪ್ರೋತ್ಸಾಹಿಸಿದೆ. ಇತರ ಪ್ರಾಂತಗಳು ಪರದೇಶಗಳಿಂದ ತರಿಸುವ ಹಲವು ಸಾಮಾನುಗಳನ್ನು ಮೈಸೂರು ತಾನೇ ತಯಾರಿಸುತ್ತಿದೆ. ಹಳ್ಳಿಯ ಜನತೆಯ ಉನ್ನತಿ ಸಾಧನೆಗಾಗಿ ಸರಕಾರವು ವಿಶೇಷ ಲಕ್ಷ್ಯಕೊಟ್ಟು 248 ಗ್ರಾಮೋನ್ನತಿ ಸಾಧನಾ ಕೇಂದ್ರಗಳನ್ನು ಸ್ಥಾಪಿಸಿದೆ. ಹಿಂದುಳಿದಿರುವ ಹರಿಜನೋದ್ಧಾರಕಾರ್ಯವನ್ನು ವ್ಯವಸ್ಥಿತವಾಗಿ ಕೈಗೊಂಡಿದೆ. ಇನ್ನು ಮೂರುವರ್ಷಗಳಲ್ಲಿ 1000 ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವ ಯೋಜನೆಯನ್ನು ಕೈಕೊಂಡಿದೆ. ಮುಂದೆ ವೃತ್ತಿ ಶಿಕ್ಷಣಕ್ಕೇನೇ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ದಿವಾನರ ಪ್ರಯತ್ನವಿದೆ ಸರಕಾರವು ರೈತರಿಗೆ ಆಗಾಗ ಭೂಕಂದಾಯ ರಿಯಾಯಿತಿಯನ್ನಿತ್ತಿದೆ. ಆದರೆ ಇಂತಹ ರಿಯಾಯಿತಿಗಳಿಂದ ತಾತ್ಕಾಲಿಕ ಪ್ರಯೋಜನವಾಗಬಹುದು. ಮೈಸೂರಿನ ಬೇಸಾಯಗಾರರ ಜೀವನವು ಸುಧಾರಿಸ ಬೇಕಾದರೆ, ಈಗಣ ಭೂಕಂದಾಯ ಮತ್ತು ಪದ್ಧತಿಗಳನ್ನೇ ಸಂಕಾರವು ಬದಲಾಯಿಸಬೇಕು. ಸದಾ ಕಗ್ಗತ್ತಲು ಕವಿದಂತಿರುವ ಹಳ್ಳಿಯ ಜನಸಾಮಾನ್ಯರ ಜೀವನದಲ್ಲಿ ಬೆಳಕುಂಟಾಗುದಾದರೆ ಮಾತ್ರ ಮೈಸೂರಿನ ಆಧುನಿಕ ಕೈಗಾರಿಕೋದ್ಯಮಿಗಳ ಪರಿಣಾಮವಾದ ಸಂಪತ್ಸಮೃದ್ಧಿಯೂ ಸಾರ್ಥಕವಾದಂತಾಗುವುದು.

ಪ್ರಕಟಣೆ

ಈ ಮಲೆಕ ಸರ್ವ ಪ್ರಯಾಣಸ್ಥರಿಗೆ ತಿಳಿಯಪಡಿಸ ಬೇಕೆನಂದರೆ—ಮೈಸೂರು ಪ್ರಾಂತ್ಯದ ಹಾಸನ ಮತ್ತು ಕಡೂರು ಜಿಲ್ಲೆಗಳಲ್ಲಿ ಪ್ಲೇಗುರೋಗವು ಹಬ್ಬಿಕೊಂಡಿರುತ್ತದೆ ಎಂತ ನಮ್ಮ ತಿಳುವಳಿಕೆಗೆ ಬಂದಿರುವುದರಿಂದ ಸದ್ರಿ ರೋಗವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಹಬ್ಬದಂತೆ ಏರ್ಪಾಡುಮಾಡುವ ಸಂಬಂಧವಾಗಿ ಸದ್ರಿ ಕಡೂರು ಮತ್ತು ಹಾಸನ ಜಿಲ್ಲೆಗಳಿಂದ ಬರುವಂಥಾ ಪ್ರಯಾಣಸ್ಥರನ್ನು ಮತ್ತು ಅವರ ಸಾಮಾನುಗಳನ್ನು ಪರೀಕ್ಷೆ ಮಾಡುವ ಉದ್ದಿಶ್ಯವೂ ಈ ಜಿಲ್ಲೆಯ ಗಡಿಯೊಳಗೆ ತರುವಂತಹ ದವಸ ಧಾನ್ಯಗಳ ಹೊರೆಗಳನ್ನು ಬಿಡಿಸಿ ಬಿಸಿಲಿನಲ್ಲಿ ಒಣಗಿಸುವ ಉದ್ದಿಶ್ಯವೂ ಈ ಜಿಲ್ಲೆಯ ಸೋಮೇಶ್ವರ ಚಾರ್ಮಾಡಿ ಮತ್ತು ಶಿರಾಡಿಯೆಂಬ ಸ್ಥಳಗಳಲ್ಲಿ ಒಂದೊಂದು ತನಖಿ ಸ್ಟೇಷನನ್ನು ತೆರೆಯಲಾಗಿಯದೆ. ಸರ್ವರೂ ಸಂಬಂಧಪಟ್ಟ ಸರಕಾರಿ ನೌಕರರಿಗೆ ಅಗತ್ಯವುಳ್ಳ ಸಹಾಯ ಮಾಡಬೇಕಾಗಿ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರವರು ಅಪೇಕ್ಷಿಸುತ್ತಾರೆ.

GET RICH
AND
PROSPEROUS
through Simple Means upheld and pursued by Millions........!
WRITE NOW WITH STAMP —
K. S. Row,
Worli, BOMBAY.

ತುಳುನಾಡ್ ವೈದ್ಯಶಾಲೆ
ಉದಿಯಾವರ, ದ.ಕ.
ಕೊಲೆರಾ ಫಿಲ್ಸ್ ಕೊಲೆರಾ ರೋಗಕ್ಕೆ ರಾಮಬಾಣ ಔಷಧ
೧೦೦ ಮಾತ್ರೆಗಳಿಗೆ ರೂ ೩—೮—೦.
ಭೈರವ ಮಾತ್ರೆಗಳು— ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦
ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ಔಷಧಗಳುದೊರೆಯುತ್ತವೆ
ಯು ಪಿ. ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಸಿಸಿಯನ್

ಯುದ್ಧಕ್ಕೆ 9 ಲಕ್ಷ ಜರ್ಮನ್ ಸೇನಾಸಂಗ್ರಹ

ಜರ್ಮನ್ ಸೇನಾ ನಾಯಕರ ಬಂಧನ

ಪ್ರೆಸಿಡೆಂಟ್ ರೂಸ್‌ವೆಲ್ಟರು ಮಧ್ಯಸ್ತಿಕೆ ಮಾಡಲು ಸಿದ್ಧರಿರುವರು.

ಟರ್ಕಿ ಮತ್ತು ಫಿನ್ಲೆಂಡ್‌ಗಳ ಮೇಲೆ ರಸ್ಯದ ಒತ್ತಾಟ.

ಪಶ್ಚಿಮ ರಣರಂಗದಲ್ಲಿ ಮಳೆ ಬಂದು ಹವಾ ಗುಣವು ಕೆಟ್ಟುಹೋಗಿದೆ. ಆದುದರಿಂದ ಹೋರಾಟವೇನೂ ನಡೆದಿಲ್ಲ. ವಸಂತ ಕಾಲವು ಬರುವ ತನಕ ಯುದ್ಧಕ್ಕೆ ಹವಾ ಗುಣವು ಅನುಕೂಲವಿಲ್ಲ. ಹಿಟ್ಲರರು ಆವರಿಗೆ ಆಕಾಶ ಮತ್ತು ನೇವಿ ಯುದ್ಧ ನಡಿಸುತ್ತಾ ಕಾಯುವರೆಂದು ಕೆಲವರ ಊಹೆ. ಸಬ್‌ಮೆರೀನ್ ಮತ್ತು ಯುದ್ಧ ವಿಮಾನಗಳ ಮೂಲಕವಾಗಿ ಬ್ರಿಟನಿನ ಸಮುದ್ರ ಬಲವನ್ನು ಮುರಿದು ಹಾಕಬೇಕೆಂದು ಜರ್ಮನಿಯು ದೃಢ ನಿರ್ಧಾರ ಮಾಡಿದೆ ಜರ್ಮನಿಗೆ ರಸ್ಯವು ಸಾಕಷ್ಟು ಸಬ್‌ಮೆರೀನುಗಳನ್ನು ಸಂಗ್ರಹಿಸಲೊಪ್ಪಿದೆಯೆಂದು ತಿಳಿದುಬಂದಿದೆ

ಜರ್ಮನ್ ಸೇನಾನಿಗಳ ಬಂಧನ

ಮೊದಲು ಜರ್ಮನಿಯ ಮುಖ್ಯ ಸೇನಾನಾಯಕರಾಗಿದ್ದ ಜನರಲ್ ವಾನ್ ಫ್ರಿಚರು, ಹಿಟ್ಲರರ ಧಾಟಿಯ ಧೋರಣೆಯನ್ನು ವಿರೋಧಿಸಿದುದರಿಂದ ಅವಮಾನಿಸಲ್ಪಟ್ಟಿದ್ದು ವಾರ್ಸೋದ ರಣರಂಗದಲ್ಲಿ ಕೊಲ್ಲಲ್ಪಟ್ಟಿರುವರೆಂದು ಸುದ್ದಿಯುಂಟಾಗಿರುವುದಷ್ಟೆ. ಹಿಟ್ಲರ್ ಪಕ್ಷಪಾತಿ ಸೈನಿಕನೊಬ್ಬನು ಇವರನ್ನು ಹಿಂದಿನಿಂದ ಗುಂಡೆಸೆದು ಕೊಂದನೆಂದು ಈಗ ಪ್ರಕಟವಾಗಿದೆ ಫೀಲ್ಡ್ ಮಾರ್ಶಲ್ ವಾನ್ ಬ್ಲೊಂಬರ್ಗ ಇತರ 10ಮಂದಿ ಮುಖ್ಯ ಸೈನ್ಯಾಧಿಕಾರಿಗಳನ್ನು ಲೇಂಡ್ಸ್‌ಬರ್ಗ ಎಂಬ ಕೋಟೆಯಲ್ಲಿ ಬಂಧನದಲ್ಲಿರಿಸಲಾಗಿದೆಯೆಂದು ತಿಳಿದುಬರುತ್ತದೆ ಹಿಟ್ಲರರ ರೀತಿ ನೀತಿಗಳನ್ನು ವಿರೋಧಿಸಿದುದಕ್ಕಾಗಿ ಕಳೆದ ವರ್ಷ ಫೆಬ್ರವರಿ ತಾ. 5 ರಲ್ಲಿ ಫ್ರಿಚ್ಚ್ ಮತ್ತು ಬ್ಲೊಂಬರ್ಗರನ್ನು ಇತರ 7ಮಂದಿ ಸೈನ್ಯಾಧಿಕಾರಿಗಳೊಂದಿಗೆ ಬಿಡ್ಡಿಯವಾಗಿ ನಿವೃತ್ತರನ್ನಾಗಿ ಮಾಡಲಾಯಿತು. ಬ್ಲೊಂಬರ್ಗರು ಹಿಟ್ಲರ್ ಮಂತ್ರಿ ಮಂಡಲದಲ್ಲೇ ದೇಶ ಸಂರಕ್ಷಣಾ ಮಂತ್ರಿಯಾಗಿದ್ದು ಸೇನೆಯನ್ನು ಸಂಘಟಿಸಿ ಫೀಲ್ಡ್ ಮಾರ್ಶಲ್ ಪದವಿ ಪಡೆದವರು ಫ್ರಿಚ್ಚರು ಜರ್ಮನ್ ಸೇನಾ ಬಲದ ಮುಖ್ಯ ನಾಯಕರಿದ್ದರು.

ಜರ್ಮನರಿಗೆ ಇನ್ನೂ ಶಾಂತಿಯ ಆಶೆಯಿದೆ

ಇಂಗ್ಲೆಂಡು ಫ್ರಾನ್ಸು ಮತ್ತು ಜರ್ಮನಿಗಳು ಕೇಳಿಕೊಂಡ ಪಕ್ಷದಲ್ಲಿ ಪ್ರೆಸಿಡೆಂಟ್ ರುಸವೆಲ್ಟರು ಮಧ್ಯಸ್ತಿಕೆ ಮಾಡಬಹುದೆಂದು ಯುನೈಟೆಡ್ ಸ್ಟೇಟ್ಸ್ ಸರಕಾರದ ಸ್ಟೇಟ್ ಸೆಕ್ರೆಟರಿಗಳಾದ ಮಿ. ಕೋರ್ಡೆಲ್ ಹಲ್ಲರು ಅಭಿಪ್ರಾಯಪಟ್ಟಿರುವರೆಂದು ಇಟಲಿಯ ರೇಡಿಯೋ ವಾರ್ತೆ. ಅಮೇರಿಕದಿಂದೇನೂ ಈ ಸಂಗತಿ ತಿಳಿದುಬಂದಿಲ್ಲ ಪಶ್ಚಿಮ ರಣರಂಗದಲ್ಲಿ ದೊಡ್ಡ ಸಂಗ್ರಾಮವನ್ನು ನಿವಾರಿಸುವ ಆಶೆಯು ಜರ್ಮನಿಗೆ ಇನ್ನೂ ಹೋಗಿಲ್ಲ ಸಂಧಿಯಾಗಲಿ ಪ್ರಚಂಡ ಯುದ್ಧವಾಗಲಿ ಬರುವ ವಾರ ನಿಶ್ಚೈಸಲ್ಪಡುವುದು. ಪಶ್ಚಿಮ ರಣರಂಗದಲ್ಲಿ ಯುದ್ಧವ ನಿವಾರಿಸಲ್ಪಟ್ಟಲ್ಲಿ ಜರ್ಮನಿಗೆ ಬಹಳ ಸಂತೋಷವಾಗುವುದು ಅದನ್ನು ಜರ್ಮನ್ ಜನತೆಯು ಅತ್ಯಾನಂದದಿಂದ ಸ್ವಾಗತೀಕರಿಸುವುದೆಂದು ಟೆಲಿಗ್ರಾಫ್ ಎಂಬ ಪತ್ರಿಕೆಯ ಬರ್ಲಿನ್ ಬಾತ್ಮಿದಾರನು ಬರೆದಿರುವನು.

ಫಿನ್ಲೆಂಡಿಗೆ ರಸ್ಯದ ಶರ್ತ.

ಫಿನ್ಲೆಂಡಿನ ಕೆಲವು ದ್ವೀಪಗಳನ್ನು ಬಿಟ್ಟುಕೊಡಬೇಕು ಅದಕ್ಕ ಪ್ರತಿಯಾಗಿ ರಸ್ಯದ ಪೂರ್ವ ಕರೇಲಿಯದ ಕೆಲವು ಭಾಗವನ್ನು ಫಿನ್ಲೆಂಡಿಗೆ ಬಿಟ್ಟುಕೊಡಲಾಗುವುದು ಆಲೆಂಡ್ ದ್ವೀಪಗಳಲ್ಲಿ ಫಿನ್ಲೆಂಡು ಕೋಟೆಗಳನ್ನು ಕಟ್ಟಬಾರದು ರಸ್ಯವು ಅವುಗಳನ್ನು ಪರೀಕ್ಷಿಸುತ್ತಿರುವಂತಾಗಬೇಕು. ಫಿನ್ಲೆಂಡು ರಸ್ಯದೊಡನೆ ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳಬೇಕಂಬುದೇ ಸೋವಿಯೆಟ್ ಸರಕಾರವು ಫಿನ್ಲೆಂಡಿಗಿತ್ತಿರುವ ಶರ್ತಗಳಾಗಿವೆ ನಾಲ್ಕನೆಯ ಶರ್ತವು ಏನೆಂದು ತಿಳಿದಿಲ್ಲ ಈ ಸಂಬಂಧವಾಗಿ ತನ್ನ ಸರಕಾರದ ಅಭಿಮತ ಪಡೆಯಲು ಫಿನ್ಲೆಂಡಿನ ವಿದೇಶ ಮಂತ್ರಿ ಎರ್ಕೋ ಪಾಸಿಕಿವಿಯವರು ಹಿಂತಿರುಗಿ ಹೋಗಿದ್ದಾರೆ ರಸ್ಯವು ಫಿನ್ಲೆಂಡಿನ ಮೇಲೇನೂ ಬಲಾತ್ಕಾರದ ಬೆದರಿಕೆ ಹಾಕಿಲ್ಲ ಎರ್ಕೋ ಪಾಸಿಕಿವಿಯವರು ಕೆಲವು ದಿನಗಳಲ್ಲಿ ಮೋಸ್ಕೋ ಪಟ್ಟಣಕ್ಕೆ ಹೋಗಿ ಒಪ್ಪಂದದ ಪ್ರಸ್ತಾಪ ಮಾಡಲಿರುವರು ತನ್ನ ಸ್ವಾತಂತ್ರ್ಯ, ಗೌರವ ಮತ್ತು ಭದ್ರತೆಗೆ ಭಂಗ ತರುವ ಯಾವ ಶರ್ತಗಳನ್ನಾದರೂ ಫಿನ್ಲೆಂಡು ವಿರೋಧಿಸಲು ಸಿದ್ಧವೇ ಇರುವುದು. ಅದಕ್ಕೆ ಸ್ವೀಡನ್ ಡೆನ್ಮಾರ್ಕ ಮೊದಲಾದ ರಾಷ್ಟ್ರಗಳ ಮತ್ತು ಅಮೆರಿಕದ ಸಹಾನುಭೂತಿ ಇರುತ್ತದೆ ಅದುಕಾರಣ ಫಿನ್ಲೆಂಡು ಸೇನಾ ಸಿದ್ಧತೆಯನ್ನು ಭರದಿಂದ ನಡಿಸುತ್ತದೆ. ಅರ್ಧ ಮಿಲ್ಯ ಸೇನೆಯನ್ನು ಸಂಗ್ರಹಿಸಿರುತ್ತದೆ ಆದರೆ ರಸ್ಯವು ರಾಜಿಯಿಂದಲೇ ಫಿನ್ಲೆಂಡನ್ನು ಒಪ್ಪಿಸಿಕೊಂಡು ಒಡಂಬಡಿಕೆಯಾಗುವ ಸಂಭವವಿದೆ ಫಿನ್ಲೆಂಡಿನ ನಾಝಿ ಪಕ್ಷೀಯರು, ಫಿನ್ನಿಶ್ ಪ್ರಶ್ನೆಯ ಕುರಿತು ಹಿಟ್ಲರರೊಡನೆ ಮಾತಾಡಲು ಜರ್ಮನಿಗೆ ಹೋದಾಗ ಅವರಾಗಲಿ ಹರ್ ವಾನ್ ರಿಬೆಂಟ್ರಪರಾಗಲಿ ಅವರಿಗೆ ಮಾತಾಡಲಾಗಲಿಲ್ಲ. ಕೇವಲ ಸಹಾನುಭೂತಿಯನ್ನಷ್ಟೇ ತೋರಿಸಿ ಅವರು ಹಿಂದೆ ಕಳುಹಿಸಲ್ಪಟ್ಟರು.

ಟರ್ಕಿಯ ವಿದೇಶ ಮಂತ್ರಿ ಸರ್. ಜೊಗ್ಲರವರು ಸೆಪ್ಟಂಬರ ತಾ. 26ಕ್ಕೆ ಮೋಸ್ಕೋ ಪಟ್ಟಣಕ್ಕ ಹೋದವರು ಈ ವರೆಗೂ ಅಲ್ಲಿಯೇ ಇದ್ದಾರೆ. ಜರ್ಮನಿಗೆ ಸೇನಾಸಹಾಯವನ್ನೀಯ ಲಾಗದಿಲ್ಲೆಂದು ರಸ್ಯವು ಟರ್ಕಿಗೆ ಭರವಸೆ ಕೊಟ್ಟಿರುವುದೆಂದು ತಿಳಿದುಬರುತ್ತದೆ. ರುಮೇನಿಯ ಮತ್ತು ಟರ್ಕಿಗಳು ಬಾಲ್ಕನ್ ಪ್ರದೇಶದಲ್ಲಿ ರಸ್ಯದ ಪ್ರಭಾವ ಒಪ್ಪಿದರೆ ಮತ್ತು ಟರ್ಕಿಯ ಕಪ್ಪು ಸಮುದ್ರವು ಭೂಮಧ್ಯ ಸಮುದ್ರಕ್ಕೆ ಸೇರುವ ಸಂದಿಯಲ್ಲಿರುವ ಡಾರ್ಡನೆಲ್ಸ್ ಬಂದರವನ್ನು ಮುಟ್ಟದಿರೆ, ರುಮೇನಿಯ ಮತ್ತು ಟರ್ಕಿಗಳ ಸುರಕ್ಷಿತತೆಯ ಜವಾಬ್ದಾರಿಯನ್ನು ಸೋವಿಯೆಟ್ ಸರಕಾರವು ಹೊರಲು ಸಿದ್ಧವಿರುವುದೆಂದು ತಿಳಿದುಬಂದಿದೆ. ಸರ್ ಜೋಗ್ಲುರವರು ಇದೇ ತಾ 15ರಲ್ಲಿ ಮೋಸ್ಕೋ ಪಟ್ಟಣದಿಂದ ಹೊರಟು ರುಮೇನಿಯಕ್ಕೆ ಹೋಗಿ ಅಲ್ಲಿಯ ವಿದೇಶ ಮಂತ್ರಿಗಳನ್ನು ಕಂಡು ಮಾತಾಡಲಿರುವರು ಈರ ವೇನಿಯಾ ಮತ್ತು ಹಂಗೇರಿಗಳೊಳಗೆ ಒಡಂಬಡಿಕೆಯಾದುದರಿಂದ ಹಂಗೇರಿಯ ಎಲ್ಲೆಯಲ್ಲಿದ್ದ 4 ವನ ಸೇನೆಯನ್ನು ರುಮೇನಿಯವು ರಸ್ಯದ ಎಲ್ಲೆಯಿಂದ ಬೆಟರೇಬಿಯಕ್ಕೊಯ್ದದ

ರಸ್ಯವು ಬಾಲ್ಟಿಕ್ ಸಮುದ್ರ ಪ್ರದೇಶದಲ್ಲಿ ಅಧಿಕಾರ ವ್ಯಾಪಿಸಲೆತ್ನಿಸಿದುದರಿಂದ ಸ್ವೀಡನ್ ಡೆನ್ಮಾರ್ಕ ಮೊದಲಾದ ದೇಶಗಳಲ್ಲಿ ತಳಮಳವೆದ್ದಿದೆ ಸ್ವೀಡಿನಿನ ಅರಸರು ಬಾಲ್ಟಿಕ್ ಸಮುದ್ರ ತೀರದ ಕೆಲವು ರಾಷ್ಟ್ರಗಳ ಸಭೆ ಕರೆದಿದ್ದಾರೆ. ಬಾಲ್ಟಿಕ್ ಪ್ರದೇಶದಲ್ಲಿಯೂ ರಸ್ಯವು ಅಧಿಕಾರ ಸ್ಥಾಪಿಸಲೆತ್ನಿಸುತ್ತಿದೆ ಇದರಿಂದ ಜರ್ಮನಿಯು ಕಳವಳಗೊಂಡಿರುವುದಾದರೂ ಉಪಾಯವಿಲ್ಲದೆ ಸುಮ್ಮನಿರಬೇಕಾಗಿದೆ. ಇಟೆಲಿಯ ಧೋರಣೆ ಏನೆಂಬದು ಈ ವರೆಗೂ ತಿಳಿದಿಲ್ಲ ರಸ್ಯವು ಪೋಲೆಂಡಿನ ಈಶಾನ್ಯ ಭಾಗ ಮತ್ತು ಸ್ಲೊವೇಕಿಯದ ಎಲ್ಲೆಯಲ್ಲಿ ಹೆಚ್ಚಿನ ಸೇನೆ ಮತ್ತು ಯುದ್ಧ ಸಾಮಾಗ್ರಿಗಳು ಸಂಗ್ರಹಿಸುವುದೆಂದು ತಿಳಿದುಬಂದಿದೆ.

ಯನಿಗೆ ಆಕಸ್ಮಿಕ ಭೇಟಿ ಇತ್ತರು ಅನೇಕ ಯುವಕರುಗಳು ಯೂನಿಯನ್ ಬಳಿಯಿರುವ ಹೋಟೆಲ್‌ನಲ್ಲಿ ಕಾಫಿ ಕುಡಿಯುತ್ತಿದ್ದರು. ಇವರುಗಳನ್ನು ನೋಡಿ ದಿವಾನರು ಅನೇಕರೊಂದಿಗೆ ಬಹು ಸರಳ್ಯವಾಗಿ ಮಾತಾಡಿ ಹಸ್ತಲಾಘವ ಇತ್ತರು. ನಂತರ ದಿವಾನರು ಯುವಕರಿಗೆ ಕೆಲವು ಹಿತೋಕ್ತಿ ರೀತಿಯಲ್ಲಿ ಮಾತಾಡಿ ತೆರಳಿದರು

ಕಾಂಗ್ರೆಸ್ ಸುದ್ದಿಗಳು— ಮೈಸೂರು ಕಾಂಗ್ರೆಸ್ ಚಳುವಳಿ ಮೂಲದ ಪರಿದು ಅನೇಕ ದಸ್ತಗಿರಿಗಳು ನಡೆದವು ಕಾಂಗ್ರೆಸಿಗೂ ಸರ್ಕಾರಕ್ಕೂ ಒಪ್ಪಂದ ಮಾಡುವ ಸಲುವಾಗಿ ಕೆಲವು ಖಾಸಗಿ ಮುಖಂಡರು ಪ್ರಯತ್ನಿಸುತ್ತಿದ್ದಾರೆ ನಾಡಪ್ಪವು ಪ್ರಾರಂಭವಾಗಿ ಬಿಟ್ಟಿತು ಸತ್ಯಾಗ್ರಹ ಮುಂತಾದವು ಇಂತಿಲ್ಲ ಆದರೆ ರಾಜಧಾನಿ ಟೌನ್ ಹಾಲ್ ಬಳಿ ನಡೆಯುತ್ತಿರುವ ಸತ್ಯಾಗ್ರಹವನ್ನು ತಾ. 13 ಶುಕ್ರವಾರ ನಿಂಡಬ್ಬದ ಪ್ರಯುಕ್ತ ಒಂದು ದಿನ ನಿಲ್ಲಿಸಿದ್ದರು ಪುನಃ ಪ್ರಾರಂಭವಾಗಿದೆ ಶೀಘ್ರದಲ್ಲಿ ಪದವಿಗೆ ತೆರಳಲಿರುವ ಸರ್ ಮಿರ್ಜಾರವರು ರಾಜಕೀಯ ವಿಚಾರವಾಗಿ ಮೈಸೂರಿಯರೊಂದಿಗೆ ಚರ್ಚಿಸುತ್ತಾರೆಂದು ಪ್ರಕಟವಾಗಿದೆ

ಮೈಸೂರು ಪ್ರಜಾ ಪರಿಷತ್— ಮೇಲ್ಕಂಡ ಪರಿಷತ್ತಿನ ಸಭೆಯೊಂದು ಗುಂಡ್ಲುಪೇಟೆಯಲ್ಲಿ ನಡೆದು ಮೈ॥ ಕಾಂ॥ ಚಳುವಳಿ ಖಂಡಿಸಿ ಸರ್ಕಾರವನ್ನು ಪ್ರಶಂಸಿಸುವ ಠರಾವೊಂದನ್ನು ಮಾಡಲಾಯಿತು ಶ್ರೀಮತಿ ಡಿ ಸಾಕಮ್ಮನವರು ಸಭೆಯಲ್ಲಿ ಮಾತಾಡಿದರು. ಮೈಸೂರು ದಿ ಬೋ. ಪ್ರೆಸಿಡೆಂಟರು ಅಧ್ಯಕ್ಷತೆ ವಹಿಸಿದ್ದರು. ಸುಮಾರು ಒಂದು ಸಾವಿರ ಜನ ಹಾಜರಿದ್ದರು

PROGRESSIVE & STRONG

OPPORTUNITY KNOCKS

Applications are invited from well connected and experienced field workers on lucrative terms at all important Commercial centres in Maharashtra and Karnatak

Please apply immediately – H O or

PADUBIDRI BROS.,
73, Narayanwal Bansilal Mansions,
Lamingtons Rd., Bombay 4

A life insurance policy of a first rate company like EAST & WEST means a positive protection against emergencies and a dependable guarrantee of retirement income with complete protection & peace of mind.

EAST & WEST
INSURANCE CO., LTD.,
55, Apollo Street, Fort, BOMBAY

ಮಂಗಳೂರು

ಶೋಚನೀಯ ಆತ್ಮಹತ್ಯೆ—ಸ್ಥಳೀಯ ಸ್ಟ. ಎ ಕಾಲೇಜಿನ ಜೂನಿಯರ್ ಇಂಟರ್ ಮಿಡಿಯೆಟ್ ಕ್ಲಾಸಿನಲ್ಲಿ ಓದುತ್ತಿದ್ದ ಶ್ರೀ ಯಂ ನಾರಾಯಣ ರಾವ ಎಂಬ ವಿದ್ಯಾರ್ಥಿಯು ತಾನು ಬಿಡಾರ ಮಾಡಿಕೊಂಡಿದ್ದ ಸಬ ರಿಜಿಸ್ಟ್ರಾರ್ ಶ್ರೀ ಶ್ಯಾಮ ರಾಯರ ಮನೆಯ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡನು. ತಾನು ಪರೀಕ್ಷೆಯಲ್ಲಿ ತೇರ್ಗಡೆಹೊಂದಲಿಲ್ಲವೇ ಬುದರಿಂದ ದು:ಖಿತನಾಗಿ ಈ ರೀತಿ ಮಾಡಿರುವುದಾಗಿ ಊಹಿಸಲಾಗಿದೆ

ಕದ್ರಿಯಲ್ಲಿ ನಾಡಹಬ್ಬ—ನಿನ್ನೆಯ ದಿನ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಭೆಯ ಆಶ್ರಯದಲ್ಲಿ ಶ್ರೀ ಕದ್ರಿ ದೇವಸ್ಥಾನದ ಕಲ್ಯಾಣಮಂಟಪದಲ್ಲಿ ದಸರಾ ಹಬ್ಬವು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು ಶ್ರೀ ಕೆ ಆರ್ ಆಚಾರ್, ಯಂ. ಎ ಎಲ್ ಎಲ್ ಬಿ, ಇವರು ಅಧ್ಯಕ್ಷತೆವಹಿಸಿದ್ದರು, ವಿವಿಧವಿನೋದಾವಳಿ ಯಕ್ಷಗಾನ ಇತ್ಯಾದಿಗಳಾದ ಮೇಲೆ ಶ್ರೀಗಳಾದ ಕೆ ಕೃಷ್ಣರಾಯರೂ, ವಿದ್ವಾನ್ ಎಸ್ ಕೃಷ್ಣಭಟ್ಟರೂ ನಾಡಹಬ್ಬವು ಕನ್ನಡನಾಡಿನಲ್ಲಿ ಎಷ್ಟು ಮಾನ್ಯವಾದುದು ಎಂಬದನ್ನು ವಿವರಿಸಿ ಕದಿರೆಯಲ್ಲಿ ಈ ಹಬ್ಬವನ್ನು ಬಹಳ ಯಶಸ್ವಿಯಾಗಿ ಆಚರಿಸಿಕೊಂಡು ಬರುತ್ತಿರುವುದು ಸ್ತುತ್ಯವೆಂದು ಹೇಳಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಈ ಹಬ್ಬವನ್ನು ಕರ್ನಾಟಕದ ರಾಜಕೀಯ ಉನ್ನತಿಗೆ ಹೇಗೆ ಉಪಯೋಗಿಸಬೇಕೆಂಬುದನ್ನೂ, ಈ ಹಬ್ಬವನ್ನು ಆಚರಿಸುವಾಗ ಏಕೀಕರಣದ ಉದ್ದೇಶವನ್ನು ಪ್ರಧಾನವಾಗಿ ನಮ್ಮ ಮುಂದಿರಿಸಿಕೊಳ್ಳಬೇಕೆಂದೂ ಹಲವು ಹಿತ ಸೂಚನೆಗಳನ್ನಿತ್ತು ಕದಿರೆ ಯಕ್ಷಗಾನ ಸಭೆಯು ಮಾಡುತ್ತಿರುವ ಭಾಷಾ ಸೇವೆ, ದೇಶ ಸೇವೆಗಳಿಗಾಗಿ ತಮ್ಮ ಸಂತೋಷವನ್ನು ಸೂಚಿಸಿದರು

ಉಡುಪಿ

ಶ್ರೀ ವಿಶ್ವಮಾನ್ಯ ತೀರ್ಥರ ನಿಧನ—ಅಷ್ಟ ಮಠಗಳಲ್ಲೊಂದಾದ ಶ್ರೀ ಪೇಜಾವರ ಮಠದ ಶ್ರೀ ವಿಶ್ವಮಾನ್ಯ ತೀರ್ಥ ಸ್ವಾಮಿಗಳವರು ಸಂಚಾರದಲ್ಲಿದ್ದವರು ಧಾರವಾಡದಲ್ಲಿ ಈ ವಾರದ ಆರಂಭದಲ್ಲಿ ನಿಧನ ಹೊಂದಿರುವರೆಂಬ ಶೋಚನೀಯ ವಾರ್ತೆ ಬಂದಿದೆ, ಇದರ ವಿವರವೇನೆಂದು ಸರಿಯಾಗಿ ತಿಳಿದುಬಂದಿಲ್ಲ ಈ ಆಕಸ್ಮಿಕ ಮರಣದ ಸುದ್ದಿ ಕೇಳಿ ಚಿಕ್ಕಪಟ್ಟ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಪೇಜಾವರದಿಂದ ಉಡುಪಿಗೆ ಬರಲಿದ್ದ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ ಶ್ರೀ ಮಾಯಾಳ ನರಸಿಂಹಾಚಾರ್, ಶ್ರೀ, ಅರೂರು ಲಕ್ಷ್ಮೀನಾರಾಯಣರಾವ್ ಮೊದಲಾದವರು ಧಾರವಾಡಕ್ಕೆ ಹೋಗಿರುವರು

ಉಡುಪಿಯ ಹರಿಜನರಲ್ಲಿರುವ ಇಕ್ಕಟ್ಟನ್ನು ಬಗೆಹರಿಸಿ ಒಕ್ಕಟ್ಟನ್ನುಂಟುಮಾಡುವರೆ ಹರಿಜನರ ಸಭೆಯೊಂದು ಕಳೆದ ಆದಿತ್ಯವಾರ ಮೋಡನ್ ಫ ಹಾಲ್ ಶಾಲೆಯಲ್ಲಿ ಜರಗಿತು ವಕೀಲ್ ಶ್ರೀ ಕೆ ಬಿ ಬಲ್ಲಾಳ್, ಬಿ ಎ ಎಲ್ ಎಲ್ ಬಿ ಯವರು ಅಧ್ಯಕ್ಷತೆ ವಹಿಸಿದ್ದರು ಪ್ರಕೃತ ಉಡುಪಿಯಲ್ಲಿರುವ 2 ಹರಿಜನ ಮೋರ್ಚಿಂಗುಗಳು ಒಂದಾಗಬೇಕೆಂದು ವಕೀಲ ಶ್ರೀ ವಿಠಲ ಕಾಮತರು ಸೂಚಿಸಿದುದು ಮಾನ್ಯವಾಯಿತು. ಮುಂದಿನ ವ್ಯವಸ್ಥೆ ಬಗ್ಗೆ ಸಬ್‌ಕಮಿಟಿಯು ನೇಮಕವು ಬರುವ ರವಿವಾರ ನಡೆಯಲಿರುವುದು

ಮೂಲ್ಕಿ—ಗಾಂಧಿ ಜಯಂತಿ ವಾರವು ಯಶಸ್ವಿಯಾಗಿ ಜರಗಿತು, ತಾ 2 10 39ರಲ್ಲಿ ಎಲ್ಲಾ ಶಾಲಾ ಮಕ್ಕಳು ಮೆರವಣಿಗೆಯಿಂದ ಗಾಂಧಿ ಮೈದಾನಿಗೆ ಬಂದರು ಅಲ್ಲಿ ಸಭೆ ಭಾಷಣಗಳಾದುವು, ಹೈಸ್ಕೂಲ್ ವಿದ್ಯಾರ್ಥಿಗಳು ತಾ 7 ಮತ್ತು 8ರಲ್ಲಿ ಗ್ರಾಮಗಳಲ್ಲಿ ತಿರುಗಾಡಿ ಸಭೆ ಭಾಷಣ ಮಾಡಿದರು ತಾ 10ರಲ್ಲಿ ಹೈಸ್ಕೂಲಲ್ಲಿ ಸಭೆ ಜರಗಿತು ಸಭೆಯಲ್ಲಿ ವಿದ್ಯಾರ್ಥಿಗಳು ಖಾದಿ ಧರಿಸಬೇಕು ಇತರರೂ ಧರಿಸುವಂತೆ ಉತ್ತೇಜನ ಕೊಡಬೇಕು ಮದ್ಯಪಾನ ಕಾನೂನು ಜಾರಿಗೆ ಬರುವಂತಾಗಬೇಕು ಅಸ್ಪೃಶ್ಯತೆಯು ನಿವಾರಣೆಯಾಗಬೇಕು ಮಧುರೆಯ ಮೀನಾಕ್ಷಿ ದೇವಸ್ಥಾನದ ಮಾದರಿಯನ್ನು ನಮ್ಮ ದೇವಸ್ಥಾನಗಳೂ ಅನುಸರಿಸಬೇಕು, ಮಹಾತ್ಮ ಗಾಂಧಿಯವರಿಗೆ ದೀರ್ಘಾಯುಷ್ಯ ದೊರೆತು ಅವರು ಕೈಕೊಂಡ ಕಾರ್ಯಗಳು ಫಲಪ್ರದವಾಗಬೇಕು ಯುದ್ಧಭಯವು ಶಾಶ್ವತವಾಗಿ ನಿರ್ಮೂಲವಾಗಬೇಕು ಮೊದಲಾದ ರೀತಿಯಲ್ಲಿ ಪರಸ್ಪರ ಅಭಿಪ್ರಾಯ ವಿನಿಮಯಗಳಿಗಾಗಿ ಪ್ರತಿ ತಿಂಗಳು ಸಭೆ ಜರಗಿಸಬೇಕೆಂದು ಯೋಚಿಸಿ ಇದಕ್ಕಾಗಿ ಶ್ರೀ. ಜಿ ಪರಸ್ಪರ ಪ್ರೋತ್ಸಾಹವನ್ನು ಕಾರ್ಯದರ್ಶಿಗಳಾಗಿ ಚುನಾಯಿಸಲಾಯಿತು

ಬೊಂಬಾಯಿ

ಗಾಂಧೀ ಜಯಂತಿ—ಮುಂಬಯಿ ಜನರು ಭಾರತದ ಸ್ವಾತಂತ್ರ್ಯಕ್ಕಾಗಿ ತನ್ನ ಸರ್ವಸ್ವವನ್ನು ಬಲಿಯಾಗಿತ್ತು, ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿ, ಮುದಿತನವನ್ನೆಣಿಸದೆ ಹೋರಾಡುತ್ತಿರುವ ಮಹಾತ್ಮಾಜಿಯವರ ಎಪ್ಪತ್ತೊಂದನೆಯ ದಿನಾಚರಣೆಯನ್ನು ವಿಜೃಂಭಣೆಯಿಂದ ನೆರವೇರಿಸಿದರು ಹಲವಾರು ಕಡೆಗಳಲ್ಲಿ ಸಭೆಗಳು ನಡೆದು ಮುಖ್ಯಮಂತ್ರಿಗಳೇ ಮೊದಲಾದವರು ಗಾಂಧಿಯವರ ಜೀವನ ಚರಿತ್ರೆಯನ್ನು ಜನರಿಗೆ ತಿಳಿಯ ಹೇಳಿದರು, ಬಿ. ಪಿ ಸಿ ಸಿ ಯವರು ಹರಿಜನರಿಗಾಗಿ ಬೋಂಬೇ ಟಾಕೀಸಿನವರ "ದುರ್ಗಾ" ಎಂಬ ಚಿತ್ರಪಟವನ್ನು ತೋರಿಸಿ ಮಿತ್ರಭೋಜನವನ್ನಿತ್ತರು, ಇದು ಹರಿಜನರಿಗೆಂದು ಪ್ರಚಾರಪಡಿಸಿದ್ದರು ಕೇವಲ 75 ಮಂದಿ ಇತರ ಜನರೇ ಇದರ ಪ್ರತಿಫಲ ಅನುಭವಿಸಿದರೆಂದು ಕಂಡು ಬರುತ್ತದೆ ಬಿ. ಪಿ ಸಿ ಸಿ ಯಲ್ಲಿ ಎಸ್ ಕೆ ಪಾಟೀಲರಂಥ ಚಕ್ರವರ್ತಿಗಳಿರುವ ತನಕ ಇಂಥ ಸಂಗತಿಗಳು ಜರಗುವದೇನೂ ವಿಶೇಷವಲ್ಲ

ಯುದ್ಧಕ್ಕೆ ವಿರೋಧ ಸಂಪು—ಮುಂಬಯಿ ಕಾಮಗಾರರು ಯುದ್ಧಕ್ಕೆ ತಮ್ಮ ವಿರೋಧವನ್ನು ತೋರ್ಪಡಿಸಲಿಕ್ಕಾಗಿ ಮಾಡಿದ ಸಂಪು ಸಂಪೂರ್ಣ ವಿಜಯಯಾಯಿತು, ಅನರ್ಥಕವಾದ ಒಂದೇ ಒಂದು ಘಟನೆಯೂ ಕೂಡ ಜರಗಲಿಲ್ಲ 80 000 ಕಾಮಗಾರರು ಗಿರಣಿಗೆ ಹೋಗದೆ ಸಂಪು ಹೂಡಿದ್ದರು 40 ಗಿರಣಿಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದ್ದವು ಇದು ಕಾಮಗಾರರ ಸಹಿಷ್ಣುತೆಯನ್ನು ತೋರಿಸುವದಿಲ್ಲವೇ?

ಆರ್ ಎಸ್ ನಿಂಬಕರರವರು—ಭಾರತದ ಲೇಬರ್ ಪ್ರತಿನಿಧಿಯಾಗಿ ಜಿನೇವಕ್ಕೆ ಹೋಗಿದ್ದ ಶ್ರೀ ಆರ್ ಎಸ್ ನಿಂಬಕರರವರು, ಪ್ರಶ್ಯಾ ಮೊದಲಾದ ಸಾಮ್ರಾಜ್ಯದ ದೇಶಗಳನ್ನು ಸುತ್ತಿ, ಮೊನ್ನೆ ಶನಿವಾರ ಮುಂಬಯಿಗೆ ಹಿಂದಿರುಗಿರುವರು ಮೊನ್ನೆ ರವಿವಾರ ಕಾಮಗಾರ ಮೈದಾನದಲ್ಲಿ ಜರಗಿದ ಸಭೆಯಲ್ಲಿ ಇವರು ಸಾಮ್ರಾಜ್ಯವಾದದ ಮುಖ್ಯ ಉದ್ದೇಶವಾದ ರಹಸ್ಯದಲ್ಲಿಯ ಜನಜೀವನವನ್ನು ಚೆನ್ನಾಗಿ ವಿವರಿಸಿ ಭಾರತೀಯರು ಈ ಯುದ್ಧದಿಂದ ಒದಗಿದ ಸುಸಂದರ್ಭವನ್ನು ಕಳಕೊಳ್ಳದೆ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧರಾಗಬೇಕೆಂದು ಹೇಳಿದರು

ದಿ ಕೆನರಾ ಬಿಲ್ಲವರ ಅನಾಥ ಸಂಘ ಮುಂಬಾಯಿ—ಈ ಸಂಸ್ಥೆಯು 1937ನೇ ಇಸವಿಯಲ್ಲಿ ಸ್ಥಾಪಿತವಾಗಿ ಈಗಲೀಗ ಮುಂದೊತ್ತುತ್ತಿರುವುದು ಎಲ್ಲರಿಗೂ ವಿದಿತವಾದ ಸಂಗತಿ ಆದರೆ ಬಾಲ್ಯಪ್ರಾಯದಲ್ಲಿ ಸಂಸ್ಥೆಯನ್ನು ಸಂಸ್ಥೆಯಿಂದಲೇ ಕಳವಳಗೊಳಿಸುವ ಹಲವಾರು ಗಂಡಾಂತರಗಳು ಬಂದಿದ್ದರೂ ಸಂಸ್ಥೆಯು ತನ್ನ ಪ್ರಗತಿಗಿರುವ ಬರುವ ವಿಘ್ನಗಳಿಗೆ ಲೇಶವಾತ್ರವೂ ಎದೆಗುಂದದೆ ನಿರ್ಭೀತಿಯಿಂದ ಇದಿರಿಸಿ ತನ್ನ ತಲೆಯನ್ನು ಮೇಲಕ್ಕೆತ್ತಿ ಉದಯವಾಗಿರುವ ಮತ್ತು ಆಗಲಿರುವ ಬಿಲ್ಲವ ಸಮಾಜಕ್ಕೆ ಶಿಕ್ಷಣವನ್ನು ಒದಗಿಸುವುದಕ್ಕೋಸ್ಕರ ಸಂಸ್ಥೆಯು ಕಾರ್ಯಕಾರಿ ಮಂಡಳಿಯು ಪಡುವ ಪ್ರಯತ್ನಗಳಿಗೆ, ಹಲವು ಮಹನೀಯರ ಕರುಣಾದೃಷ್ಟಿಯಿಂದಲೂ ಮೆಂಬರರ ಪ್ರೋತ್ಸಾಹದಿಂದಲೂ ಬಡಸಂಸ್ಥೆಯು ಮುಂದು ,ಮುಂದೆ ಹೆಜ್ಜೆ ಇಟ್ಟು ಕಳೆದ ಸಪ್ಟಂಬರ್ ತಿಂಗಳ 22ರಲ್ಲು ಸೊಸೈಟಿ ಆಕ್ಟ್ ಪ್ರಕಾರ (Societies act XXI of 1860) ರಿಜಿಸ್ಟರ್ಡ್ ಆಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿರುವುದು, ಈ ಸಂಘದ ಮೇಲೆ ಹೆಚ್ಚಿನ ಬಿಲ್ಲವರು ಸಂತುಷ್ಟರಾಗುವುದಾದರೆ ಈ ನಮ್ಮ ಅಲ್ಪ ಸೇವೆಯು ಸಾರ್ಥಕವಾದಂತಾಗುವುದು ಮಾತ್ರವಲ್ಲದೆ ಇನ್ನೂ ಮುಂದೆಯೂ ನಮ್ಮ ಸಂಘದ ಅಭ್ಯುದಯಕ್ಕಾಗಿ ಕರುಣಾ ಹೃದಯರಾದ ನಮ್ಮ ಜಾತಿ ಬಾಂಧವರು ಮುಂದೆ ಬಂದು ನಾವು ಮಾಡಿದ ಅಲ್ಪಸೇವೆಗಿಂತಲೂ ಇಮ್ಮಡಿ ಪರಿಶ್ರಮವನ್ನು ತೆಗೆದುಕೊಂಡು ಸಂಘವನ್ನು ಉತ್ತೀರ್ಣತೆಗೆ ತರುವರೆ ಮುಂದೆ ಬರಬೇಕಾಗಿ ಆಗ್ರಹವಿನಂತಿ

ಈ ಸಂಸ್ಥೆಯ ಮೇಲ್ಮೆಯನ್ನು ಬಯಸಿ ಉದಾರ ಮನಸ್ಸಿನಿಂದ ಕೆಲವು ಡಾಕ್ಟರರೂ ಆಫೀಸರರೂ ಮತ್ತು ಹೋಟೆಲು ಮಾಲೀಕರು 100ಕ್ಕಿಂತಲೂ ಹೆಚ್ಚಿದ ಮಹಾನುಭಾವರು ಅವರವರ ಶಕ್ತ್ಯನುಸಾರ ಧನಸಹಾಯವನ್ನು ಮಾಡಿರುವರು ಅವರಿಗೆ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸುವೆವು ಮಾತ್ರವಲ್ಲದೆ ಸದಾ ಅವರಿಗೆ ಭಗವಂತನು ಮಂಗಳವನ್ನುಂಟುಮಾಡಲೆಂದು ಹರಸುವೆವು ಇತಿ ಕಾರ್ಯಕಾರಿ ಸಮಿತಿಯ ಅನುಮತಿ ಮೇರೆಗೆ—

ಯಂ. ಎ ಸಾಲಿಯಾನ್, ಯು.ಕೆ ಬಂಗೇರ,
ಗೌ ಕಾರ್ಯದರ್ಶಿಗಳು

The Pangal Nayak Bank Ltd , Mangalore.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಲ್ಲಿ ನಗದು ಈಡಿನ ಮೇಲೆ ಸಾಲ ಪಡಕೊಂಡು ಕ್ಲುಪ್ತ ಮಾಯದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸುಗಳು ಕೆಲವು ಜಾರಿಯಾಗಿಯೂ ಕೆಲವು ಜಾರಿಯಾಗದೆ ಬಂದಿರುವುದರಿಂದಲೂ, ಒಬ್ಬನು ಮೃತನಾಗಿದ್ದರಿಂದಲೂ, ಸದರಿಯವರು ಆಯಾಯ ಲೋನನಲ್ಲಿ ಅಡವಿಟ್ಟ ಚಿನ್ನಾಭರಣ ವಗೈರೆಯನ್ನು ಇದೇ ತಿಂಗಳ ತಾರೀಕು 28ನೇ ಶನಿವಾರ ಮಧ್ಯಾಹ್ನ 1 ಘಂಟೆಗೆ ಅಥವಾ ಬೇಂಕಿಗೆ ಯುಕ್ತ ತೋರುವ ಬೇರೆ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವೆವು

ಜಂಜ್ಯಾ ನಂಬ್ರ	ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ರೂಪ್ಯಾ
1	1949 36	ಸಿ. ಎಸ್ ನಂಜುಂಡಯ್ಯ, ಶಿರಸ್ತೆದಾರ, ಸಬ್ ಜಡ್ಜರ ಕೋರ್ಟು ಮಂಗಳೂರು	50/
2	88 37	ಡಾಕ್ಟರ್ ಬಿ ಸೇಕ್ ಹುಸೈನ್, ರಿಟೈರ್ಡ್ ಅಸಿಸ್ಟೆಂಟ ಸರ್ಜನ್, ಬೋಳಾರ, ಮಂಗಳೂರು.	25/-
3	887 37	do, do do.	40/-
4	2353 37	do do. do	50/
5	440 38	do do do	20/
6	970 37	ಕೆ ಅಮುಂಞ ಬ್ಯಾರಿ, ಮ್ಯಾನೆ ಬ್ಯಾರಿಗಳ ಮಗ, ಅಂಗಡಿ ಮ್ಯಾನೆಜರ್, ಶಿರ್ವರ್ ಗ್ರಾಮ, ಬನಕಲ್ ಪೋಸ್ಟ್, ಕಡೂರು ಜಿಲ್ಲೆ.	200/-
7	1093 37	ರಾಮ ಚೌಟ, ಅಪ್ಪಯ್ಯ ಭಂಡಾರಿಗಳ ಅಳಿಯ, ಪಟೇಲ ಮಿಂಜಾಗ್ರಾಮ, ಮಂಗಲಪಾಡಿ ಪೋಸ್ಟು.	200/
8	1171 37	ಹನಿಯೇಲ ಕೆರಿಯಪ್ಪ, ಓಬಣ್ಣರ ಮಗ, ಶಂಕರವಿಠಲ್ ಮೋಟರ್ ಕಂಪೆನಿ, ಮಂಗಳೂರು	75/
9	1575-37	ಕೋಯಿಸಾನ ಬ್ಯಾರಿ, ಮೊಯಿದಿನ ಬ್ಯಾರಿಗಳ ಮಗ, ಬಾಳೆಪುಣಿ ಮಾಗಣೆ, ಕೈರಂಗಳ ಗ್ರಾಮ, ಪಾಲಿ, ಮಂಜೇಶ್ವರ ಪೋಸ್ಟ್	60/
10	2022 37	ಸೂಫುಂಞ ಬ್ಯಾರಿ, ಮೊಯಿದಿನ್ ಬ್ಯಾರಿಗಳ ಮಗ, ಅಂಗಡಿ ಯೆಂಜಿರಾ ಗ್ರಾಮ, ಸುಬ್ರಮಣ್ಯ ಮಾಗಣೆ, ಕಡಬಾ ಪೋಸ್ಟ್, ಉಪ್ಪಿನಂಗಡಿ ತಾಲೂಕು,	40/-
11	158 38	ಉಮ್ಮಪ್ಪ, ದೂಮ ಪೂಜಾರಿ ಅಳಿಯ, ಬಡಗು ಯೆಕ್ಕಾರು ಗ್ರಾಮ, ಮೂಲ್ಕಿ ಪೋಸ್ಟ್.	7/-
12	379 38	ಪಾರೂಕು ಹಾಜಿ ಅಬ್ದುಲ್ ಸತಾರ, ವ್ಯಾಪಾರ, ಗೋಳಿಕಟ್ಟು ಬಜಾರು, ಮಂಗಳೂರು.	200/
13	1000 38	do do do	30/
14	444 38	ಇದ್ದಿ ಬ್ಯಾರಿ, ಪಕ್ಕಿ ಬ್ಯಾರಿಗಳ ಮಗ, ವ್ಯಾಪಾರ, ಬೋಳಂಗಿಲ ಮನೆ, ಪೆರ್ಮನೂರು ಗ್ರಾಮ, ಉಳ್ಳಾಲ ಪೋಸ್ಟ್	35/
15	795 38	ಕೆ ಲಕ್ಷ್ಮಣ, ಸೋಮಯ್ಯ ಮೈಲಿ ಮಗ, ಮುನಿಸಿಪಲ ಆಫೀಸು, ಮಂಗಳೂರು	40/-
16	1178 38	ಶಿಬಿ ಮೊಂತೆರೊ, ಮಿಂಗೆಲ ಮೊಂತೆರೊರವರ ಮಗ, ಅನ್ನೊಡಿಗುತ್ತು, ಪಣಂಬೂರು ಗ್ರಾಮ, ಪಣಂಬೂರು ಪೋಸ್ಟ್	135 -
17	1288 38	ಇಸ್ಮಾಯಿಲ್ ಮುಕ್ರಿ ಬ್ಯಾರಿ, ಹಸನ್ ಕುಂಞ ಬ್ಯಾರಿಗಳವರ ಮಗ, ವ್ಯಾಪಾರ, ಕಲ್ಮಂಜೆ ನರಂಗಾನ ಗ್ರಾಮ, ಮಂಜೇಶ್ವರ ಪೋಸ್ಟ್.	40/
18	1681 38	ಚೆರಿಯಪ್ಪ ಬೆಳ್ಚಪ್ಪ, ಕಂಡಪ್ಪ ಬೆಳ್ಚಾಡರ ಮಗ, ಹೊಟೇಲು, ಉಚ್ಚಿಲ, ಸೋಮೇಶ್ವರ ಗ್ರಾಮ, ಉಳ್ಳಾಲ ಪೋಸ್ಟ್.	16/
19	2225 38	ಚಾರ್ಲ್ಸ ಫರಾಯಸ್, ಇ. ಜೆ. ಫರಾಯಸ್‌ರ ಮಗ, ಮಂಗಳೂರು ಓಟೋಮೊಬೈಲ್ಸ್, ಲಿಮಿಟೆಡ್ ಮಂಗಳೂರು.	10/
20	2346 37	ಉಳ್ಳಾಲ ವಾಸುದೇವ ಭಟ್ಟ, ದಾಸ ಭಟ್ಟರ ಮಗ, ಜಮೀನುದಾರ, ಉಳ್ಳಾಲ ಕಸಬಾ, ಉಳ್ಳಾಲ ಪೋಸ್ಟ್	30/
21	1672 38	do do do	50/-
22	1800 38	do do do	50/-
23	2106 38	do do do	70/
24	S L 2 38	ಕೊಟ್ಟಿಕಾರ್ ವಾಸುದೇವ ಪೈ, ಜುವಲರ್, ಉಡುಪಿ	2200/

Office of the Bank Mangalore 16—10—1939

U G Bhandarkar,
Agent.

ಚಂದಾದಾರರಲ್ಲಿ ವಿನಂತಿ

ಚಂದಾ ಅವಧಿ ಮುಗಿದವರಿಗೆಲ್ಲ ನೋಟೀಸು ಕೊಟ್ಟು ತಿಳಿಸಲಾಗಿದೆ, ಅವರು ತಮ್ಮ ಬಾಕಿ ಮತ್ತು ಚಾಲ್ತಿ ಚಂದಾಹಣವನ್ನು ದಯವಿಟ್ಟು ಕೂಡಲೇ ಕಳಿಸಿ ಕೊಡಬೇಕಾಗಿ ಅಪೇಕ್ಷಿಸಲಾಗುತ್ತದೆ. ಪತ್ರಿಕೆ ಬೇಡವಾದವರು ಹಾಗೆ ಬಾಕಿ ಹಣ ಕಳಿಸಿ ನಮಗೆ ತಿಳಿಸುವ ಉಪಕಾರಮಾಡಬೇಕು. ಮುಂಗಡ ಚಂದಾ ಹಣ ಮುಂಗಡವಾಗಿ ಕಳುಹಿಸದೆ ಪತ್ರಿಕೆ ಕಳಿಸಲು ಸಾಧ್ಯವಾಗಲಾರದೆಂದು ಈ ಮೂಲಕ ವಿನಂತಿಸಲಾಗುತ್ತದೆ. ಎಲ್ಲಾ ಚಂದಾದಾರರು ಈ ಕಡೆಗೆ ತಮ್ಮ ಗಮನವಿತ್ತು ತಮ್ಮ ಚಂದಾ ಹಣವನ್ನು ಕೂಡಲೇ ಕಳಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ. —ಮೆನೇಜರ್.

ಮಹಾತ್ಮಾ ಗಾಂಧಿಯವರ ಏಕಾಂತ ಪಥ !

ದೇಶ ರಕ್ಷಣೆಗಾದರೂ ಹಿಂಸೆಯನ್ನುಪಯೋಗಿಸ ಕೂಡದು.

ಹಿಂದೂದೇಶವು ಹಿಂಸೆಯನ್ನು ಸಂಪೂರ್ಣ ತ್ಯಜಿಸಿಬಿಡುವುದು ಮೇಲು ತನ್ನ ಎಲ್ಲೆಗಳ ರಕ್ಷಣೆಗಾದರೂ ಹಿಂಸೆಯನ್ನವು ಉಪಯೋಗಿಸಕೂಡದೆಂದು ಪ್ರತಿಪಾದಿಸಿ ಗಾಂಧಿಜಿಯವರು ಹರಿಜನದಲ್ಲಿ ಈ ಕೆಳಗಣ ಲೇಖನ ಬರೆದಿರುವರು "ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರ ಅಹಿಂಸಾವಾದವು ಬ್ರಿಟಿಷ್ ಸರಕಾರದೊಡನೆ ಹೋರಾಡಲದನ್ನು ಉಪಯೋಗಿಸುವುದಕ್ಕಿಂತ ಮುಂದೆ ಹೋಗಿಲ್ಲೆಂಬುವನ್ನು ನಾನು ಕಂಡುಕೊಂಡೆನು ಬ್ರಿಟಿಷ್ ಸಾಮ್ರಾಜ್ಯದೊಡನೆ ಹೋರಾಡಲು ಮಾತ್ರವಲ್ಲದೆ ಹೊರಗಣ ಧಾಳಿಯಿಂದ ದೇಶವನ್ನು ರಕ್ಷಿಸುವುದಕ್ಕೂ ಅಹಿಂಸೆಯನ್ನುಪಯೋಗಿಸಲು ಸಾಧ್ಯವಿದೆಯೋ ಎಂಬ ಪ್ರಶ್ನೆಯು ಇಷ್ಟರ ತನಕ ಕಾಲ್ಪನಿಕವಾಗಿತ್ತು. ಬ್ರಿಟಿಷ್ ಸರಕಾರವು ಕಾಂಗ್ರೆಸ್ಸಿನ ಕೇಳಿಕೆಯನ್ನು ಮನ್ನಿಸಲಿ, ಮನ್ನಿಸದಿರಲಿ, ಇಂದೀಗ ಈ ಪ್ರಶ್ನೆಯು ದೇಶದ ಮುಂದೆ ಬಂದಿದೆ. ಹಿಂದೂದೇಶದ ಮೇಲೆ ಧಾಳಿನಡಿಸುವ ಸೇನೆಯನ್ನು ವಿರೋಧಿಸಲು ಕಾಂಗ್ರೆಸು ಹಿಂಸೆಯನ್ನುಪಯೋಗಿಸುವುದೋ ಅಹಿಂಸೆಯನ್ನೋ ಎಂಬುದನ್ನೀಗ ಸ್ಪಷ್ಟಪಡಿಸುವ ಸಂದರ್ಭ ಬಂದಿದೆ.

ಹಿಂದೂದೇಶದ ಮೇಲಿನ ಸಶಸ್ತ್ರಧಾಳಿಯನ್ನು ಅಹಿಂಸಾತ್ಮಕವಾಗಿ ನಿರೋಧಿಸಲು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ತಯಾರಿರುವಂತಿಲ್ಲ. ಇದು ಅತ್ಯಂತ ವಿಷಾದಕರ ವಿಷಯ. ವೈರಿಯನ್ನು ಮನೆಯಿಂದ ಹೊರಹಾಕಲು ಉಪಯೋಗಿಸಿದ ವಿಧಾನದಿಂದಲೇ ಅವನನ್ನು ಮನೆಗೆ ಪ್ರವೇಶಿಸದಂತೆಯೇ ತಡೆಗಟ್ಟಬಹುದು. ಒಂದನೇದಕ್ಕಿಂತ ಎರಡನೇದೇ ಸುಲಭ. ಆದರೆ ನಮ್ಮ ಹೋರಾಟವು ಬಲಶಾಲಿಯ ಅಹಿಂಸಾತ್ಮಕ ನಿರೋಧವಾಗಿರಲಿಲ್ಲ. ದುರ್ಬಲನ ಶಾಂತಪರನಿರೋಧವಾಗಿದ್ದಿತು. ಆದುದರಿಂದಲೇ ಅಹಿಂಸೆಯ ಸಲಕರಿತ್ವದ ಕುರಿತು ಅವಿನಾಶಿ ವಿಶ್ವಾಸ ಪ್ರೇರಿತವಾದ ಸ್ವಯಂಸ್ಫೂರ್ತಿಯು ಇಂದಿನಂತಹ ಸಂದಿಗ್ಧ ಕಾಲದಲ್ಲಿ ನಮ್ಮ ಹೃದಯದಲ್ಲುಂಟಾಗಿರುವುದಿಲ್ಲ. ಹಿಂದೂದೇಶದ ಸಶಸ್ತ್ರರಕ್ಷಣೆಯಲ್ಲಿ ವಿಶ್ವಾಸವಿರುವವರೊಂದಿಗೆ ಕಾಂಗ್ರೆಸಿನವರೂ ಒಂದುಗೂಡುವುದಾದರೆ, ಕಳೆದ ೨೦ ವರ್ಷಗಳಲ್ಲಿ, ಸಶಸ್ತ್ರ ಯುದ್ಧ ಕಲೆಯನ್ನು ಅಭ್ಯಾಸಿಸುವುದರಲ್ಲಿ ಕಾಂಗ್ರೆಸಿನವರು ತಮ್ಮ ಕರ್ತವ್ಯ ಬಾಹಿರರಾಗಿರುವರೆಂದೇ ಹೇಳಬೇಕು. ಅಹಿಂಸಾತ್ಮಕ ಹೋರಾಟದ ಸೇನಾನಾಯಕನಾದ ನನ್ನ ಜವಾಬ್ದಾರಿಯೇ ಇದರಲ್ಲಿ ಹೆಚ್ಚಿನದು. ಇತಿಹಾಸವು ನನ್ನ ಮೇಲೆ ಅಪವಾದ ಹೊರಿಸುವುದು. ರಾಷ್ಟ್ರವು ಬಲಶಾಲಿಯ ಅಹಿಂಸೆಯನ್ನಲ್ಲ, ಕೇವಲ ದುರ್ಬಲನ ಅಸಹಾಯಕ ಶಾಂತಪರತೆಯನ್ನು ಅಭ್ಯಾಸಿಸುತ್ತಿದ್ದುದೆಂಬುದನ್ನು ನಾನು ಮೊದಲೇ ತಿಳಕೊಳ್ಳಬೇಕಿದ್ದಿತೆಂದು ಮುಂದಿನ ಇತಿಹಾಸಕಾರನು ಹೇಳದಿರಲಾರನು. ಆದುದರಿಂದ ನಾನು ಕಾಂಗ್ರೆಸಿನವರ ಸೈನಿಕ ತರಬೇತಿಗಾಗಿ ತಕ್ಕ ಏರ್ಪಾಡು ಮಾಡಬೇಕಾಗಿತ್ತು.

ಸ್ವತಂತ್ರ ಹಿಂದೂಸ್ಥಾನಕ್ಕೆ ವೈರಿಗಳಿರಲಾರರು.

ಲೋಕವು ಹಿಂದೂಸ್ಥಾನದಿಂದ ನವೀನ ಹಾಗೂ ಅಪೂರ್ವ ವಿಧಾನವನ್ನು ನಿರೀಕ್ಷಿಸುತ್ತದೆ.

ಅಹಿಂಸೆಯಲ್ಲಿ ಅಚಲವಿಶ್ವಾಸ

ಹೇಗಾದರೂ ಹಿಂದೂದೇಶವು ಅಹಿಂಸೆಯನ್ನರಿತುಕೊಳ್ಳುವುದೆಂಬ ಭಾವನಾಭಿಭೂತನಾದ ನನಗೆ ಸಶಸ್ತ್ರ ರಕ್ಷಣೆಯ ಸಿದ್ಧತೆಯನ್ನು ಮಾಡಿಕೊಳ್ಳಿರೆಂದು ನನ್ನ ಸಹೋದ್ಯೋಗಿಗಳಿಗೆ ತಿಳಿಸುವ ಯೋಚನೆಯೇ ಉಂಟಾಗಲಿಲ್ಲ. ಇದಕ್ಕೆ ಪ್ರತಿಯಾಗಿ ನಾನು ಖಡ್ಗ ಕವಾಯತು ಮತ್ತು ದೊಡ್ಡ ಲಾಠಿಪ್ರದರ್ಶನವನ್ನು ನಿರೋಧಿಸಿದ್ದೆನು. ಈಗಲೂ ನಾನು ಅದಕ್ಕಾಗಿ ಪಶ್ಚಾತ್ತಾಪಪಡುವುದಿಲ್ಲ. ಲೋಕದ ಎಲ್ಲಾ ದೇಶಗಳ ಪೈಕಿ ಹಿಂದೂದೇಶವೊಂದೇ ಅಹಿಂಸಾತ್ಮಕ ಹೋರಾಟದ ಕಲೆಯನ್ನು ಕಲಿಯಬಲ್ಲುದೆಂಬ ಅಚಲವಿಶ್ವಾಸವು ನನ್ನಲ್ಲಿದೆ. ಈಗಲೇ ಬೇಕಾದರೆ ಆ ಪರೀಕ್ಷೆ ನಡೆಯಲಿ, ತಮ್ಮ ಪೀಡಕರ ಕುರಿತು ಯಾವ ತರದ ದ್ವೇಷಭಾವನೆಯೂ ಇಲ್ಲದೆ ಸ್ವೇಚ್ಛೆಯಿಂದ ಪ್ರಾಣಬಲಿದಾನವೀಯುವ ಹಿಂದೀ ಸ್ತ್ರೀಯರು ಮತ್ತು ಪುರುಷರು ಸಾವಿರಾರು ಮಂದಿ ಇರಬಹುದು. ಕಳೆದ ಉಪ್ಪಿನ ಸತ್ಯಾಗ್ರಹದಲ್ಲಿ ಸಶಸ್ತ್ರ ಸೈನಿಕರು ಸಹಿಸಬೇಕಾದಷ್ಟೇ ಕಷ್ಟಗಳಿಗೆ ಸಾವಿರಾರು ಹಿಂದೀ ಸ್ತ್ರೀಪುರುಷರು ಸಂತೋಷದಿಂದ ಒಳಗಾಗಿರಲಿಲ್ಲವೇ? ಹಿಂದೂದೇಶದ ಮೇಲೆ ನಡಿಸಲ್ಪಡುವ ಧಾಳಿಯನ್ನು ವಿರೋಧಿಸುವುದಕ್ಕೆ ಕೂಡಾ ಬೇಕಾದುದು ಇಂತಹದೇ ಆದ ಶಕ್ತಿ. ಆದರೆ ಅದು ಮಾತ್ರ ವಿಶಾಲ ವ್ಯಾಪಿಯಾಗಬೇಕು.

ಒಂದು ವಿಷಯವನ್ನು ಮಾತ್ರ ಮರೆಯಬಾರದು. ನಿರಸ್ತ್ರ ಹಿಂದೂಸ್ಥಾನವನ್ನು ನಾಶಪಡಿಸಲು ವಿಷವಾಯು ಅಥವಾ ಬೋಂಬು ಬೇಕಾಗಿಲ್ಲ. ಮೆಗಿನೋಟ್ ಕೋಟೆಯಿಂದಾಗಿ ಸಿಗ್‌ಫ್ರಿಡ್ ಕೋಟೆಯ ಆವಶ್ಯಕತೆಯುಂಟಾಯಿತು. ಹಿಂದೂದೇಶವು ಬ್ರಿಟನಿನ ಒಂದು ಅಂಗವಾಗಿರುವುದರಿಂದ ಇಂದೀಗ ಪ್ರಕೃತದ ರೀತಿಯಲ್ಲಿ ಅದರ ರಕ್ಷಣಾ ವ್ಯವಸ್ಥೆಯು ಆವಶ್ಯವಾಯಿತು. ಸ್ವತಂತ್ರ ಹಿಂದೂಸ್ಥಾನಕ್ಕೆ ವೈರಿಗಳಾರೂ ಇರಲು ಸಾಧ್ಯವಿಲ್ಲ. 'ಕೂಡದು' ಎಂದು ದೃಢನಿರ್ಧಾರದಿಂದ ಹೇಳುವ ಮತ್ತು ಅದರಂತೆ ನಡೆವ ಕಲೆಯನ್ನು ಹಿಂದೀಯರು ಕಲಿತರೆ, ಅದರ ಮೇಲೆ ಧಾಳಿನಡಿಸುವ ಇಚ್ಛೆ ಯಾರಿಗೂ ಇರಲಾರದೆಂದು ನಾನು ಧೈರ್ಯದಿಂದ ಹೇಳುವೆನು. ಹೊರಗಣ ಯಾವ ಸೂರೆಗಾರನನ್ನೂ ಆಕರ್ಷಿಸದ ರೀತಿಯಲ್ಲಿ ನಮ್ಮ ಸಾಂಪತ್ತಿಕ ವ್ಯವಸ್ಥೆಯಾಗತಕ್ಕದ್ದು.

"ಹಿಂದೂದೇಶದ ಎಲ್ಲೆಯೊಳಗೇನೇ ಹಲವು ಯುದ್ಧಪ್ರಿಯ ಜನಾಂಗಗಳಿರುತ್ತವೆ. ನಮ್ಮಂತೆಯೇ ಅವರದೂ ಆಗಿರುವ ಮಾತೃಭೂಮಿಗಾಗಿ ಅವರು ಸಶಸ್ತ್ರರಾಗಿ ಹೋರಾಡಲು ಹಾರೈಸದಿರಲಾರರು"ಎಂದು ಕೆಲ ಮಂದಿ ಕಾಂಗ್ರೆಸ್‌ವಾದಿಗಳನ್ನಬಹುದು. ಅದು ಸಂಪೂರ್ಣ ನಿಜವಾದುದು. ಆದುದರಿಂದಲೇ ಪ್ರಕೃತ ನಾನು ಕಾಂಗ್ರೆಸ್ ವಾದಿಗಳ ಕುರಿತಾಗಿ ಮಾತ್ರ ಮಾತಾಡುತ್ತಿರುವುದು. ಹಿಂದೂದೇಶದ ಮೇಲೆ ಧಾಳಿನಡೆದ ಪಕ್ಷದಲ್ಲಿ ಅವರು ಹೇಗೆ ನಡಕೊಳ್ಳುವರು? ನಾವು ಒಂದು ತತ್ವಕ್ಕಾಗಿ ಪ್ರಾಣವನ್ನಾದರೂ ಕೊಡಲು ಸಿದ್ಧರಿರದಿದ್ದರೆ ಇಡೀ ಹಿಂದುಸ್ಥಾನವು ಅದನ್ನೊಪ್ಪುವಂತೆ ಮಾಡಲು ಸಾಧ್ಯವೇ ಇಲ್ಲ. ಸಶಸ್ತ್ರ ವಿರೋಧವು ನನ್ನನ್ನು ಭಯಚಕಿತನನ್ನಾಗಿ ಮಾಡುವುದು. ಇಷ್ಟರಲ್ಲೇ ಹೆಚ್ಚಿನ ಹಿಂದೀ ಸೇನೆಯು ಉತ್ತರದ ಮುಸಲ್ಮಾನರು, ಸಿಖ್ಖರು ಮತ್ತು ಗೂರ್ಖರಿಂದ ತುಂಬಿದೆ. ದಕ್ಷಿಣ ಮತ್ತು ಮಧ್ಯಹಿಂದುಸ್ಥಾನದ ಜನತೆಯು ಸೇನಾತರಬೇತಿಪಡೆಯಲಿಚ್ಛಿಸಿದರೆ ಅವರ ಪ್ರತಿನಿಧಿ ಸಂಸ್ಥೆಯಾಗಿರುವ ಕಾಂಗ್ರೆಸು ಅವರಿಗೆ ಬೇಕಾದ ಸೈನಿಕತರಬೇತಿಯನ್ನೀಯಲೇ ಬೇಕು. ಆಗ ಅಪಾರ ಸೇನಾವ್ಯಯಕ್ಕೆ ಕಾಂಗ್ರೆಸು ಒಪ್ಪಬೇಕಾಗುವುದು.

ಲೋಕವು ಹಿಂದೂಸ್ಥಾನದಿಂದ ಏನಾದರೂ ನವೀನ ಹಾಗೂ ಅಪೂರ್ವವಾದುದನ್ನು ನಿರೀಕ್ಷಿಸುತ್ತಿದೆ. ಇಂದೀಗ ಲೋಕವು ಧರಿಸಿಕೊಂಡಿರುವ ಜೀರ್ಣವಾದ ಹಳೆಯ ಕವಚವನ್ನೇ ಕಾಂಗ್ರೆಸು ಕೂಡಾ ಹಾಕಿಕೊಂಡಲ್ಲಿ ಅದು ಗುಂಪಿನೊಂದಿಗೆ ಗೋವಿಂದಹಾಕಿದಂತಾಗುವುದು. ಅಹಿಂಸೆಯನ್ನು ಉದಾತ್ತ ರಾಜಕೀಯ ಶಸ್ತ್ರವಾಗಿ ಮಾಡಿರುವುದರಿಂದಲೇ ಕಾಂಗ್ರೆಸಿಗೆ ಹೆಸರು ಬಂದಿದೆ. ಅಹಿಂಸೆಯ ಪ್ರತಿನಿಧಿಯಾಗಿ ಕಾಂಗ್ರೆಸು ಮಿತ್ರ ರಾಷ್ಟ್ರಗಳಿಗೆ ಸಹಾಯವಿತ್ತರೆ ಯುದ್ಧದ ಕಟ್ಟಕಡೆಯ ಅದೃಷ್ಟವನ್ನು ನಿರ್ಣಯಿಸುವುದರಲ್ಲಿ ಅಮೂಲ್ಯವಾಗುವ ಪ್ರತಿಷ್ಠೆ ಮತ್ತು ಬಲವನ್ನವುಗಳ ಪಕ್ಷಕ್ಕೆ ತಂದಂತಾಗುವುದು. ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಹಾಗೇನೂ ಮಾಡಿಲ್ಲ. ಆದುದರಿಂದ ನಾನು ನನ್ನೊಬ್ಬನ ಧೋರಣೆಯ ಕುರಿತು ಮಾತ್ರ ಮಾತಾಡುವೆನು. ನನ್ನ ಏಕಾಂತ ಪಥದಲ್ಲಿ ಇನ್ನೊಬ್ಬ ಸಂಗಾತನಾದರೂ ಇರುವನೋ ಎಂದು ನಾನು ಕಂಡುಕೊಳ್ಳಬೇಕು. ನಾನು ಏಕಾಕಿಯು ಅಲ್ಪಸಂಖ್ಯಾಕನಾದಲ್ಲಿ ಇತರರನ್ನು ಮತಾಂತರಪಡಿಸಲೆತ್ನಿಸಬೇಕು. ಆದರೆ ನಾನೊಬ್ಬನಾಗಿರಲಿ, ನನ್ನ ಜೊತೆಗೆ ಅನೇಕರಿರಲಿ, ಹಿಂದೂದೇಶವು ಹಿಂಸೆಯನ್ನು ಸಂಪೂರ್ಣವಾಗಿ ತ್ಯಜಿಸಿಬಿಡಬೇಕು. ಅದರ ಎಲ್ಲೆಗಳನ್ನು ರಕ್ಷಿಸುವುದಕ್ಕಾದರೂ ಹಿಂಸೆಯನ್ನುಪಯೋಗಿಸಬಾರದೆಂಬ ನನ್ನ ಶ್ರದ್ಧೆಯನ್ನು ನಾನು ನಿರೂಪಿಸಬೇಕು. ಯಾಕೆಂದರೆ ಸಶಸ್ತ್ರಸಿದ್ಧತೆಯ ಪ್ರತಿಸ್ಪರ್ಧೆಯಲ್ಲಿ ಹಿಂದೂದೇಶವು ಸೇರುವುದೆಂದರೆ ಆತ್ಮಘಾತಮಾಡಿಕೊಂಡಂತೆಯೇ ಸರಿ. ಹಿಂದೂದೇಶವು ಅಹಿಂಸೆಯಿಂದ ವಿಮುಖವಾದರೆ ಲೋಕದ ಕೊನೆಯ ಆಶೆಯೂ ಹೋಗಿಬಿಡುವುದು. ಕಳೆದ ಅರ್ಧಶತಮಾನದಿಂದ ಆಚರಿಸಿ ಬೋಧಿಸಿಕೊಂಡು ಬಂದಿರುವ ತತ್ವಕ್ಕನುಗುಣವಾಗಿ ನಾನು ನಡೆಯತಕ್ಕದ್ದು ಮತ್ತು ಹಿಂದೂದೇಶವು ಅಹಿಂಸೆಯನ್ನು ತನ್ನ ತತ್ವವಾಗಿ ಸ್ವೀಕರಿಸಿ, ಮಾನವ ಗೌರವವನ್ನುಳಿಸಿ, ಅವನು ಯಾವ ಕಾಡುತನದಿಂದ ಮೇಲಕ್ಕೇರಿದನೋ ಅದೇ ಗತಿಗೆ ಪುನಃ ಇಳಿಯುವಂತೆ ತಡೆಯುವುದೆಂಬ ಆಶೆಯನ್ನು ಕೊನೆಯ ಶ್ವಾಸದತನಕವೂ ನಾನು ಕಟ್ಟಿಕೊಂಡಿರುವೆನು.

Hark:-

Only a few pages more are available

FOR

ADVERTISEMENT

IN

THULUNAD

TILAKA PANCHANGA

1940

Apply early to: MANAGER

THULUNAD PRESS UDIPI.

(PROPS GENERAL SUPPLIES LIMITED.)

ನವೀನ ಪುಸ್ತಕಗಳು.

೧ ಕಣ್ಣೀರು–ರಮ್ಯ ಬಂಗಾಳಿ ಕಾದಂಬರಿ [illegible]

೨. ಪಕ್ಷಿ–ಐತಿಹಾಸಿಕ ನಾಟಕ, [illegible]

೩ ಬಲಿದಾನ–[illegible]

೪ ಎಚ್ಚೆತ್ತ ನಾಯಕ–[illegible]

೫ ಅಮಾತ್ಯ ನಂದಿನಿ–[illegible] ೧-೮-೦

ಸಿಗುವ–ಶ್ರೀ ವೆಂಕಟಾಚಲ ಪ್ರೆಸ್, [illegible]

ಸೋವಿಯೆಟ್ ರಸ್ಯದ ಉದ್ದೇಶವೇನು?

20ವರ್ಷಗಳ ಮೊದಲು ಕಳಕೊಂಡ ಅಧಿಕಾರವನ್ನದು 3ವಾರಗಳಲ್ಲಿ ಸಂಪಾದಿಸಿದೆ

ಪೋಲೆಂಡ್ ಜೆಕೋಸ್ಲೋವೇಕಿಯಗಳ ಜನತೆಯ ಬದಲಾವಣೆ

ಕಳೆದ ಮಹಾಯುದ್ಧದ ಮೊದಲು, ರಸ್ಯವು ಈಗ ವಶಪಡಿಸಿಕೊಂಡಿರುವ ಪೋಲೆಂಡಿನ ಹೆಚ್ಚಿನ ಪ್ರದೇಶ ಮತ್ತು ಈಗಣ ಲಿಥುವಾನಿಯ, ಲಟೇವಿಯ, ಎಸ್ಟೋನಿಯ ಮತ್ತು ಫಿನ್ಲೆಂಡ್ ರಾಜ್ಯಗಳು ಝಾರ್ ಸಾಮ್ರಾಜ್ಯಕ್ಕೆ ಸೇರಿದ್ದುವು. ಸೋವಿಯೆಟ್ ರಸ್ಯವು 20ವರ್ಷಗಳ ಹಿಂದೆ ಕಳಕೊಂಡ ಅಧಿಕಾರವನ್ನು ಇಂದೀಗ ಮೂರೇ ವಾರಗಳಲ್ಲಿ ಅನಾಯಾಸವಾಗಿ ಸಂಪಾದಿಸಿಕೊಂಡಿದೆ. ಕಳೆದ ಸೆಪ್ಟಂಬರ ತಾ. 17ರಲ್ಲಿ ಸೋವಿಯೆಟ್ ಸೇನೆಯು ಪೋಲಂಡನ್ನು ಪ್ರವೇಶಿಸಿತು ಅಂದಿನಿಂದ ಸೋವಿಯೆಟ್ ರಸ್ಯವು ಮಿಂಚಿನ ವೇಗದಿಂದೆಂಬಂತೆ ಬಾಲ್ಟಿಕ್ ಸಮುದ್ರ ಮತ್ತು ಕಪ್ಪು ಸಮುದ್ರ ಪ್ರದೇಶಗಳ ಮೇಲೆ ಸಂಪೂರ್ಣವಾಗಿ ಅಧಿಕಾರವನ್ನು ಸ್ಥಾಪಿಸಿಬಿಟ್ಟಿದೆಯೆನ್ನಬಹುದು. ನಾಝಿ ಜರ್ಮನಿಯ 'ಲೆಬನ್ಸ್ರವ್' ಅಂದರೆ ಜರ್ಮನ್ ಸಾಮ್ರಾಜ್ಯವನ್ನು ಮಧ್ಯ, ಪೂರ್ವ ಮತ್ತು ಈಶಾನ್ಯ ಯುರೋಪಿನಲ್ಲೆಲ್ಲಾ ವ್ಯಾಪಿಸುವ ಆಕಾಂಕ್ಷೆಯು ಮೂಲಗುಂಪಾಗಿದೆ ರಸ್ಯದ ತಾಟಸ್ಥ್ಯ ಮತ್ತು ಸಹಾಯಕ್ಕಾಗಿ ಹಿಟ್ಲರರು ತನ್ನ ಹಿಂದಿನ ಆಶೆ ಆಕಾಂಕ್ಷೆಗಳನ್ನೆಲ್ಲಾ ಬಲಿಕೊಟ್ಟು ನವೀನ ಧೋರಣೆಯನ್ನು ಕೈಕೊಳ್ಳಬೇಕಾಗಿ ಬಂದಿದೆ. ಅವರೀಗ, ಬೇರೆ ಬೇರೆ ರಾಜ್ಯಗಳಲ್ಲಿರುವ ಜರ್ಮನರನ್ನೆಲ್ಲಾ ಒಂದೇ ಕಡೆಗೆ ತಂದು ಜರ್ಮನ್ ಜನಾಂಗದ ಬಲ, ಐಕ್ಯ ಮತ್ತು ಪ್ರಭಾವವನ್ನು ಹೆಚ್ಚಿಸುವ ಹೊಸ ಯೋಜನೆಯನ್ನು ಕೈಕೊಂಡಿರುವಂತಿದೆ ಜರ್ಮನಿಯ ನೆರೆಯ ಜೆಕೋಸ್ಲೋವೇಕಿಯ ಮತ್ತು ಪೋಲೆಂಡಿನ ಪ್ರದೇಶಗಳಲ್ಲಿ ಲಿಥುವಾನಿಯ, ಲಟೇವಿಯ, ಎಸ್ಟೋನಿಯ ಮತ್ತು ರಸ್ಯಗಳಲ್ಲಿ ವಾಸಿಸಿಕೊಂಡಿದ್ದ ಜರ್ಮನರು ಬಂದು ವಾಸಿಸುವ ಏರ್ಪಾಡು ನಡೆದಿದೆ ಸಾವಿರಾರು ಜರ್ಮನರು ಇಷ್ಟರಲ್ಲೇ ಕರೆಸಲ್ಪಟ್ಟಿದ್ದಾರೆ ಜೆಕ್ಕರು ರಸ್ಯಕ್ಕೆ ಕಳುಹಿಸಲ್ಪಡುತ್ತಿದ್ದಾರೆ. ಹೀಗೆ ಜನತೆಯನ್ನೇ ಒಂದು ಪ್ರದೇಶದಿಂದ ಇನ್ನೊಂದಕ್ಕೆ ಬಗಲಾಯಿಸುವ ಈ ಪ್ಲೇನಿನಿಂದ ಮುಂದೆ ಪೋಲಂಡು ಜೆಕೋಸ್ಲೋವೇಕಿಯಗಳ ಸ್ವಾತಂತ್ರ್ಯ ಸಾಧನೆಯು ಅಸಾಧ್ಯವೆಂಬಂತಾಗಿದೆ

ರಸ್ಯವು ಗೆದ್ದ ಪೋಲೆಂಡಿನ ಪ್ರದೇಶಗಳಲ್ಲಿ ಇಷ್ಟರಲ್ಲೇ ಸೋವಿಯೆಟ್ ರಾಜ್ಯಭಾರ ಕ್ರಮವು ಜ್ಯಾರಿಗೆ ತರಲ್ಪಟ್ಟಿದೆ ಕೈಗಾರಿಕೆ, 'ವ್ಯಾಪಾರೋದ್ಯಮಾದಿಗಳನ್ನೆಲ್ಲಾ ಸರಕಾರವು ಖಾಸಗಿ ಜನರಿಂದ ಕಸಕೊಂಡು ಸಾರ್ವಜನಿಕವಾಗಿ ಮಾಡಿದೆ ದೊಡ್ಡ ಭೂಮ್ಯಾಲಕರ ಮತ್ತು ಶ್ರೀಮಂತರ ಆಸ್ತಿ ಪಾಸ್ತಿಗಳನ್ನು ವಶಪಡಿಸಿಕೊಂಡು ಜನ ಸಾಮಾನ್ಯರೊಳಗೆ ಅದನ್ನು ಸರಿಯಾಗಿ ಹಂಚಿದೆ. ಪ್ರತಿಯೊಬ್ಬನಿಗೆ 4 ಎಕ್ರೆ ಜಮೀನು ಮತ್ತು ಒಂದು ದನ ಕೊಡಲ್ಪಟ್ಟಿದೆ ಪೋಲೆಂಡಿನ ಉಕ್ರೈನ್ ಪ್ರದೇಶವನ್ನು ರಸ್ಯದ ಉಕ್ರೈನಿನೊಂದಿಗೇನೇ ಸೇರಿಸಿ ಸೋವಿಯೆಟ್ ಸರಕಾರಾಧೀನವಾದ ರಾಜ್ಯವೊಂದು ಸ್ಥಾಪಿಸಲ್ಪಡುತ್ತದೆ ಈ ಸಂಬಂಧವಾಗಿ ಪ್ರಾಯಸ್ಥರಿಗೆಲ್ಲಾ ಓಟಿನ ಅಧಿಕಾರವಿತ್ತು ಗುಪ್ತ ಮತದಾನ ಕ್ರಮದಿಂದ ಸದ್ಯದಲ್ಲೇ ಚುನಾವಣೆ ನಡೆದು ಪ್ರಜಾಪ್ರತಿನಿಧಿಗಳು ಆರಿಸಲ್ಪಟ್ಟು ಸರಿಯಾದ ರಾಜ್ಯಭಾರ ವ್ಯವಸ್ಥೆಯಾಗುವುದು

ಪೂರ್ವ ಮತ್ತು ಈಶಾನ್ಯ ಯುರೋಪಿನಲ್ಲಿ ರಸ್ಯದ ಪ್ರಭಾವ

ಮೊದಲು ಜರ್ಮನಿಯ ಆಶ್ರಯವನ್ನಾಶಿಸುತ್ತಿದ್ದು ರಸ್ಯವನ್ನು ಕಡೆಗಣಿಸಿಕೊಂಡಿದ್ದ ಪೂರ್ವ ಮತ್ತು ಮಧ್ಯಯುರೋಪಿನ ರಾಷ್ಟ್ರಗಳೆಲ್ಲಾ ಈಗ ಥಕ್ಕನೆ ರಸ್ಯವನ್ನೊಲಿಸಿಕೊಂಡು ಅದರ ಆಶ್ರಯಪಡೆಯುತ್ತಿವೆ ಕೆಲವೇ ವಾರಗಳ ಮೊದಲು ಜರ್ಮನಿಯು ಹೇಳಿದಂತೆ ಕೇಳಿ, ಸಾಂಪತ್ತಿಕವಾಗಿ ಅದರೊಂದಿಗೆ ಸೇರಿಹೋಗದೆ ಗತ್ಯಂತರವಿಲ್ಲದ ಬಲ್ಗೇರಿಯವು ಇಂದೀಗ ರಸ್ಯವನ್ನಾಶ್ರೈಸಿ ಅದರ ಎಲ್ಲಾ ಸಾಮಾನುಗಳನ್ನೂ ರಸ್ಯವು ಕೊಂಡುಕೊಂಡು ಅವುಗಳೊಳಗೆ ಪರಸ್ಪರ ಮೈತ್ರಿ ಬೆಳೆದಿದೆ. ಹಂಗೇರಿಯಲ್ಲಿ ತಲೆಯೆತ್ತಿದ ಸೋವಿಯೆಟ್ ರಾಜ್ಯಭಾರವನ್ನು ನಿರ್ಮೂಲಿಸಿ 20 ವರ್ಷಗಳ ಮೊದಲು ಅಧಿಕಾರಕ್ಕೆ ಬಂದ ಹಂಗೇರಿಯದ ಹೋರ್ದಿ ಸರಕಾರವು ಸೋವಿಯೆಟ್ ರಸ್ಯವೆಂದರೆ ಕೆರಳುತ್ತಿತ್ತು. ಜರ್ಮನಿಯೊಡನೆ ಅತ್ಯಂತ ನಿಕಟ ಸಂಬಂಧ ಬೆಳೆಸಿಕೊಂಡಿತ್ತು ಆದರೆ ಝಾರಶಾಹಿಯ ಪತನದ ನಂತರ ಈಗ ಪ್ರಥಮವಾಗಿ ಸೋವಿಯೆಟ್ ಸರಕಾರವನ್ನು ಮಾನಿಸಿ ಅದರೊಡನೆ ಸಂಬಂಧ ಬೆಳೆಸಿದೆ ಯುಗೋಸ್ಲಾವಿಯವೂ ರಸ್ಯದ ವರ್ಚಸ್ಸಿಗೊಳಗಾಗಿದ ಟರ್ಕಿಯ ವಿದೇಶ ಮಂತ್ರಿ ಸರ್ ಜೋಗ್ಲುರವರು ಹಲವು ದಿನಗಳಿಂದ ಈಗ ಮೋಸ್ಕೋ ಪಟ್ಟಣದಲ್ಲಿದ್ದು ಸೋವಿಯೆಟ್ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ ರುಮೇನಿಯವು ಜರ್ಮನಿಗೆ ಪ್ರಾಮುಖ್ಯವಾಗಿ ಬೇಕಾದುದು. ರಸ್ಯಕ್ಕೂ ಪ್ರಯೋಜನಕರವಾದುದು ಆದರೆ ರುಮೇನಿಯದ ತಾಟಸ್ಥ್ಯ ರಕ್ಷಣೆಯ ಆಶ್ವಾಸನೆಯನ್ನು ರಸ್ಯವು ಕೊಟ್ಟಿರುವುದರಿಂದಲೂ, ಬೆಸ್ಸರೇಬಿಯ ಎಂಬ ರಸ್ಯದ ಗಡಿಯ ಸ್ಥಳವನ್ನು ಈ ವರೆಗೂ ವಶಪಡಿಸದಿರುವುದರಿಂದಲೂ, ರಸ್ಯವು ಕರಿಸಮುದ್ರ ಪ್ರದೇಶದ ರಾಜ್ಯಗಳ ಮೇಲೆ ಅಧಿಕಾರ ನಡಿಸಲು ಆತುರಪಡುವುದೇ ಹೊರತು ರುಮೇನಿಯದ ಮೇಲೆ ಕಣ್ಣಿಟ್ಟಿಲ್ಲೆಂದು ಹೇಳಬಹುದು

ಬಾಲ್ಟಿಕ್ ಸಮುದ್ರ ಪ್ರದೇಶದ ಚಿಕ್ಕಪುಟ್ಟ ರಾಷ್ಟ್ರಗಳ ಮೇಲೆ ಅಧಿಕಾರ ನಡಿಸಲು ರಸ್ಯವು ಹಿಟ್ಲರರ ರೀತಿ ನೀತಿಯನ್ನನುಸರಿಸಿರುವುದೆಂದು ಹೇಳಬಹುದು. ಅವುಗಳ ಸಮೀಪ ಹೆಚ್ಚಿನ ಸೇನೆ ಸಂಗ್ರಹಿಸಿ, ವಿಮಾನ ಪಡೆಗಳನ್ನು ಹಾರಾಡಿಸಿ, ಯುದ್ಧ ನಾವೆಗಳನ್ನು ಕಳುಹಿಸಿ ಬೆದರಿಕೆ ಹಾಕಿ ತಾನು ಹೇಳಿದಂತೆ ಕೇಳುವ ಹಾಗೆ ಮಾಡಿದೆ ಹೀಗೆ ಎಸ್ಟೋನಿಯ, ಲಟೇವಿಯ, ಮತ್ತು ಲಿಥುವಾನಿಯಗಳು ರಸ್ಯದೊಡನೆ ಒಪ್ಪಂದ ಮಾಡಿಕೊಂಡಿವೆ. ಪೋಲಂಡಿಗೆ ಸೇರಿದ್ದ ವಿಲ್ನಾವನ್ನು ಸೋವಿಯೆಟ್ ಸರಕಾರವು ಲಿಥುವಾನಿಯಕ್ಕೆ ಬಿಟ್ಟುಕೊಟ್ಟಿದೆ. ಈಗ ಫಿನ್ಲೆಂಡು ಕೂಡಾ ಇದೇ ರೀತಿಯ ಒಪ್ಪಂದ ಮಾಡಿಕೊಳ್ಳುವಂತೆ ರಸ್ಯವು ಒತ್ತಾಯ ಪಡಿಸುತ್ತದೆ ಆದರೆ ಫಿನ್ಲೆಂಡು ಇಂತಹ ಬಲಾತ್ಕಾರವನ್ನು ವಿರೋಧಿಸುವ ಸಿದ್ಧತೆ ಮಾಡಿ ಅಮೆರಿಕಕ್ಕೆ ಮೊರೆಯಿಟ್ಟಿದೆ. ಇಡೀ ಬಾಲ್ಟಿಕ್ ಸಮುದ್ರದ ಮೇಲೆ ಅಧಿಕಾರ ನಡಿಸಬೇಕೆಂದೇ ರಸ್ಯದ ಉದ್ದೇಶ. ಈಗಣ ಲೆನಿನ್‌ಗ್ರಾಡ್ ಬಂದರಿನಿಂದ ರಸ್ಯವು ಸಂತೃಪ್ತವಾಗಿಲ್ಲ. ಅದು ವರ್ಷದಲ್ಲಿ 6 ತಿಂಗಳು ಹಿಮಗಡ್ಡೆಯಿಂದ ಮುಚ್ಚಿ ಹೋಗುತ್ತದೆ ಹೀಗೆ ಬಾಲ್ಟಿಕ್ ಮತ್ತು ಕರಿಸಮುದ್ರಗಳೆರಡನ್ನೂ ತನ್ನ ಸರೋವರಗಳನ್ನಾಗಿ ಮಾಡಿಕೊಂಡು, ಹೊರಗಣ ವ್ಯಾಪಾರ ವಹಿವಾಟುಗಳನ್ನು ನಿರಾತಂಕವಾಗಿ ನಡಿಸುವ ಅನುಕೂಲತೆ ಪಡೆದು ಇಡೀ ಯುರೋಪಿನಲ್ಲಿ ತನ್ನ ಪ್ರಭಾವವನ್ನು ನೆಲೆಗೊಳಿಸುವುದೇ ರಸ್ಯದ ಸ್ಪಷ್ಟ ಉದ್ದೇಶವಿರುತ್ತದೆ. ಈ ಸಂಬಂಧವಾಗಿ ಜರ್ಮನಿ ಮತ್ತು ರಸ್ಯಗಳು ಒಡಂಬಡಿಕೆ ಮಾಡಿಕೊಂಡಂತಿದೆ ಹೀಗೆ ಕೆಲವೇ ಹಪ್ತಗಳಲ್ಲಿ ಯುರೋಪಿನ ಭೂಗೋಳಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಪತ್ತಿಕ ಇತಿಹಾಸವೇ ಮಾರ್ಪಟ್ಟು ಹೋಗಿದೆ ಒಂದೊಮ್ಮೆ ಜರ್ಮನಿಯು ಯುದ್ಧದಲ್ಲಿ ಸೋತರೂ ಹಿಂದಿನ ಇತಿಹಾಸವನ್ನು ಪುನರುಜ್ಜೀವಿಸಲು ಸಾಧ್ಯವೇ ಇಲ್ಲ ಆದುದರಿಂದ ಮಿತ್ರರಾಷ್ಟ್ರಗಳು ಕೇವಲ ಪೋಲಂಡು ಮತ್ತು ಜೆಕೋಸ್ಲೋವೇಕಿಯದ ಸ್ವಾತಂತ್ರ್ಯಕ್ಕಾಗಿ ಭೀಷಣಯುದ್ಧ ನಡಿಸುವುದರಲ್ಲಿ ಅರ್ಥವಿಲ್ಲ

Advertisement Tariff

1 Page	Rs. 25/	per insertion	
½ ,,	Rs. 15/-	,,	,,
¼ ,,	Rs 8/	,,	,,
⅛ ,,	Rs 5/	,,	,,
Per Single inch col	Re 1	,,	

Contract rates on application
Manager-Navayuga UDIPI

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಪರ್ಫ್ಯೂಮ್ಡ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳದಲ್ಲೂ ಸ್ವದೇಶ ಅಥವಾ
ವಿದೇಶದ ಯಾವ
ಕೂದಲೆಣ್ಣೆಯನ್ನಾದರೂ ಸೋಲಿಸುವ
ಅತ್ಯುತ್ತಮವಾದ ಹೇರ್
ಆಯಿಲ್ ಎಂದು.
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ
83

ಮೈಸೂರು ದಿವಾನರ ಸಂದರ್ಶನದ ಕುರಿತು

ಶ್ರೀ। ಡಾಕ್ಟರ್ ವಿಠಲ ಸೆಟ್ಟಿ ಹೇಳಿಕೆ.



ಶಿವಪುರ ಮತ್ತು ಕಟೀಲ್ ಸೇತುವೆಗಳನ್ನು ತೆರೆಯಲು ಮೈಸೂರು ದಿವಾನರನ್ನು ಆಮಂತ್ರಿಸಿದ ಡಿಸ್ಟ್ರಿಕ್ಟ್ ಬೋರ್ಡಿನ ವರ್ತನೆಯನ್ನು ನಿಷೇಧಿಸಿ ಇದೇ ಕಳೆದ ತಾ. 9ರಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಸಾರ್ವಜನಿಕ ಸಭೆಯೊಂದು ನಡೆದಿರುವುದೆಂದೂ ಈ ಸಂಬಂಧವಾಗಿ ಜಿಲ್ಲೆಯ ಕೆಲವು ಕಾಂಗ್ರೆಸ್ ಬಂಧುಗಳೊಂದು ಹೇಳಿಕೆಯನ್ನು ಈ ಮೊದಲು ಹೊರಡಿಸಿದ್ದರೆಂದು ತಿಳಿಯುತ್ತೇನೆ. ಆದುದರಿಂದ ದಿವಾನರನ್ನು ಆಮಂತ್ರಿಸಿದ ವಿದ್ಯಮಾನಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನ ಪರವಾಗಿ ನಾನು ಜನತೆಯ ಮುಂದಿರಿಸಲಿಚ್ಛಿಸುತ್ತೇನೆ

ಶಿವಪುರ ಮತ್ತು ಕಟೀಲ್ ಸಂಕಗಳನ್ನು ತೆರೆಯಲು ಅನುಕ್ರಮವಾಗಿ ಮೈಸೂರು ದಿವಾನರನ್ನು ಮತ್ತು ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರ್ಯರನ್ನು ಆಮಂತ್ರಿಸಬೇಕೆಂದು ನಾನು ಕಳೆದ ಆಗೋಸ್ತು ತಿಂಗಳ ತಾ 13ರಲ್ಲಿ ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಮೆಂಬರರಿಗೆ ಸೂಚಿಸಿದೆ ಮೈಸೂರು ಮತ್ತು ದಕ್ಷಿಣಕನ್ನಡದೊಳಗಣ ವ್ಯಾಪಾರವಹಿವಾಟು ಚಲಾವಣೆ ಮತ್ತು ಪ್ರಯಾಣಾನುಕೂಲತೆಗೆ ಈಗಿರುವ ತೊಡಕು ಮೈಸೂರು ದಿವಾನರ ಮತ್ತು ಪ್ರಧಾನ ಮಂತ್ರಿಗಳ ಅವಗಾಹನೆಗೆ ತಂದು ಅವುಗಳನ್ನು ನಿವಾರಿಸಲೆತ್ನಿಸುವುದೇ ನನ್ನ ಉದ್ದೇಶವಿದ್ದಿತು ಶಿವಪುರ ಸೇತುವೆ ತೆರೆಯುವ ಸಂದರ್ಭದಲ್ಲಿ ನಾನು ಮಾಡಿದ ಭಾಷಣದಲ್ಲದನ್ನು ಸ್ಪಷ್ಟಪಡಿಸಿರುವೆನು ಮೈಸೂರು ಸರಕಾರವು ಈಗ ಕೊಚ್ಚಿ ಬಂದರದೊಡನೆ ಸಂಬಂಧ ಬೆಳೆಸಿ ಆ ಮೂಲಕ ತಮ್ಮ ಸಾಮಾನುಗಳನ್ನು ರಫ್ತು ಮಾಡುವ ಯೋಚನೆ ನಡೆಸಿದೆ ಅದನ್ನು ಬಿಟ್ಟು ದಕ್ಷಿಣಕನ್ನಡದೊಡನೆ ಸಂಬಂಧ ಬೆಳೆಸಿ ಮಲ್ಪೆ ಅಥವಾ ಮಂಗಳೂರು ಇಲ್ಲವೆ ಎರಡರ ಮೂಲಕವೂ ಅವರು ತಮ್ಮ ಸಾಮಾನುಗಳನ್ನು ಹೊರಗೆ ಕಳುಹಿಸಲು ತಯಾರಿದ್ದಾರೆ ಮೈಸೂರಿನ ಎಲ್ಲೆಯ ವರೆಗೆ ರೈಲ್ವೆ ತರಲು ಅವರು ಸಿದ್ಧರಿದ್ದಾರೆ ದಕ್ಷಿಣಕನ್ನಡದಲ್ಲಿ ರೈಲ್ವೆ ಸ್ಥಾಪಿಸಿದರೆ ಸರಿ ಈ ಕುರಿತಾದ ಸರ್ವೆಯು 1911ರಲ್ಲೇ ನಡೆದಿದೆ ಇದಕ್ಕೆ ಪ್ರಾಂತಿಕ ಸರಕಾರದವರೇನೂ ವೆಚ್ಚ ಮಾಡಬೇಕಿಲ್ಲ ಕೇಂದ್ರ ಸರಕಾರ ಮಾಡತಕ್ಕ ವೆಚ್ಚವಿದು, ಪ್ರಧಾನಮಂತ್ರಿಗಳು ಸ್ವಲ್ಪ ಮೆಹನತಿನಿಂದ ಕೆಲಸಮಾಡಿದರೆ ದಕ್ಷಿಣಕನ್ನಡಕ್ಕೆ ಬಹಳ ಪ್ರಯೋಜನವಾದಂತಾಗುವುದು. ಈ ದೃಷ್ಟಿಯಿಂದ ದಿವಾನರನ್ನು ಮತ್ತು ಪ್ರಧಾನ ಮಂತ್ರಿಗಳನ್ನು ಆಮಂತ್ರಿಸಲು ಶ್ರೀ ಎನ್ ಎಸ್. ಹೊಳ್ಳರ ಹೊರತು ಕಾಂಗ್ರೆಸ್ ಪಾರ್ಟಿಯ ಎಲ್ಲಾ ಮೆಂಬರರೂ ಒಪ್ಪಿದರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿಯೂ ಅದು ಶ್ರೀ. ಹೊಳ್ಳರೊಬ್ಬರ ಆಕ್ಷೇಪದ ಹೊರತು ಸರ್ವಸಮ್ಮತಿಯಿಂದ ಮಂಜೂರಾಯಿತು. ಈ ಸಂಗತಿಯು ಸ್ಥಳೀಯ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಯಿತು ಆಗೋಸ್ತು ತಾ 13 ಯಾ 14 ರಲ್ಲು ಮೈಸೂರಲ್ಲಿ ಕಾಯಿದೆ ಭಂಗ ಚಳವಳ ಹೂಡಲ್ಪಟ್ಟದನ್ನು ಪತ್ರಿಕೆಗಳಲ್ಲಿ ಓದಿದ ನೆನಪು ನನಗಿಲ್ಲ ಆಗೋಸ್ತು ತಾ. 16 ರಲ್ಲಿ ದಿವಾನರು ಮತ್ತು ಮುಖ್ಯ ಮಂತ್ರಿಗಳಿಗೆ ಸೇತುವೆ ತೆರೆಯಲು ಆಮಂತ್ರಣ ಹೋಯಿತು ನನ್ನ ಕೇಳಿಕೆಯಂತೆ ಶ್ರೀ ಎ ಬಿ ಶೆಟ್ಟಿ ಈ ಸಂಬಂಧವಾಗಿ ಪ್ರಧಾನ ಮಂತ್ರಿಗಳನ್ನು ಕೇಳಿಕೊಂಡಾಗ ಅವರು ನಾನು ಸ್ವತಃ ಮದ್ರಾಸಿಗೆ ಬರಬೇಕೆಂದು ಅಪೇಕ್ಷಿಸಿದರು ನಾನು ಸೆಪ್ಟಂಬರ ತಾ 11ರಲ್ಲು ಮದ್ರಾಸಿಗ ಹೋಗಿ ಪ್ರಧಾನ ಮಂತ್ರಿಗಳನ್ನು ಕಂಡು ಸಂಗತಿಗಳನ್ನೆಲ್ಲಾ ತಿಳಿಸಿದೆನು ಅಂತರರಾಷ್ಟ್ರೀಯ ಪರಿಸ್ಥಿತಿ ಮತ್ತು ವಾರ್ಥಾ ನಿರ್ಣಯದ ಅನಿಶ್ಚಿತತೆಯಿಂದಾಗಿ ಆಗ ಯಾವುದನ್ನೂ ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ ಕಟೀಲ್ ಸೇತುವೆಯನ್ನೂ ದಿವಾನರಿಂದಲೇ ತೆರೆಯಿಸುವುದೊಳ್ಳೇದು. ತಾನು ಸಾಧ್ಯವಾದರೆ ಅತಿಥಿಯಾಗಿ ಬರುತ್ತೇನೆ ಸೇತುವೆ ತೆರೆಯುವ ಸಮಾರಂಭವನ್ನು ಅಕ್ಟೋಬರ ತಾ. 8 ಮತ್ತು 10ರೊಳಗೆ ನಡಿಸಬೇಕೆಂದು ಪ್ರಧಾನ ಮಂತ್ರಿಗಳು ಅಭಿಪ್ರಾಯಪಿತ್ತರು.

ಮೈಸೂರು ದಿವಾನರನ್ನೂ ಮುಖ್ಯ ಮಂತ್ರಿಗಳನ್ನೂ ಸೇತುವೆ ತೆರೆಯಲು ಆಮಂತ್ರಿಸಿದಾಗ ಮೈಸೂರಲ್ಲಿ ಕಾಯಿದೆ ಭಂಗ ಆರಂಭವಾದಂತೆ ತೋರುವುದಿಲ್ಲ. ಮತ್ತು ಮಿತ್ರ ರಾಷ್ಟ್ರಗಳು ಯುದ್ಧ ಹೂಡಿದ್ದೂ ಇಲ್ಲೆಂಬುದು ಮೇಲಿನ ಸಂಗತಿಗಳಿಂದ ವೇದ್ಯವಾಗುವುದು.

ಜಿಲ್ಲಾ ಬೋರ್ಡಿನ ಮುಖ್ಯವಾದೊಂದು ಉದ್ದೇಶವೆಂದರೆ ಜಿಲ್ಲೆ ಮತ್ತು ಪ್ರಾಂತಗಳೊಳಗಣ ವಾಹನ ಸಂಚಾರಾನುಕೂಲತೆಯನ್ನು ಹೆಚ್ಚಿಸುವುದು, ಇಲ್ಲವಾದರೆ ವ್ಯಾಪಾರ ವಹಿವಾಟುಗಳಿಗೆ ತೊಡಕಾಗುವುದು.

ಪ್ರಧಾನ ಮಂತ್ರಿಗಳ ಸಮೇತ ಮದ್ರಾಸ್ ಮಂತ್ರಿಗಳೂ ಅವರ ಪಾರ್ಲಿಮೆಂಟರಿ ಸೆಕ್ರಿಟರಿಗಳೂ, ಸೇತುವೆ ತೆರೆಯುವ ಕುರಿತು ಜಿಲ್ಲಾ ಬೋರ್ಡನ್ನು ಅಭಿನಂದಿಸಿ ಸಂದೇಶ ಕಳುಹಿಸಿದ್ದರೆಂಬುದನ್ನು ತಿಳಿಸಲೆಳಸುತ್ತೇನೆ

(ಸ್ಥಳಾಭಾವದಿಂದ ಈ ಹೇಳಿಕೆಯ ಸಾರಾಂಶ ಮಾತ್ರ ಪ್ರಕಟಿಸಲಾಗಿದೆ)

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಮಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವ ವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲ್ಯಾಫ್ ಆಫೀಸು,
ಮೈನ್ ರೋಡ್, ಮಡಿಕೇರಿ, (ಕೊಡಗು)

ಅಥವಾ

ಬ್ರಾಂಚ್ ಸೆಕ್ರಿಟರಿ,
ಓರಿಯಂಟಲ್ ಲ್ಯಾಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

ಅಳಿಯ ಸಂತಾನ ಮಸೂದೆ ನವಂಬರ ತಾ. 5ಕ್ಕೆ ಕೊನೆಯ ಪರಿಷತ್ತು.

ಕೆಲವು ಆಕ್ಷೇಪಗಳ ಪರಿಶೀಲನೆ.

ಅಳಿಯ ಸಂತಾನ ಸುಧಾರಣಾ ಪರಿಷತ್ತು ಬರುವ ನವಂಬರ ತಾ. 5ನೇ ಆದಿತ್ಯವಾರ ಪೂರ್ವಾಹ್ನ ಘಂಟೆ 11ಕ್ಕೆ ಮಂಗಳೂರು ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗಲಿರುವುದು. ಅಳಿಯಸಂತಾನ ಸುಧಾರಣಾ ಕಮಿಟಿಯವರು ತಯಾರಿಸಿದ ಮಸೂದೆಯನ್ನು ಈ ಪರಿಷತ್ತಿನಲ್ಲಿ ಆಲೋಚಿಸಿ ಕೊನೆಯ ಸಲ ಬೇಕಾದ ತಿದ್ದುಪಡಿಗಳಾದ ಮೇಲೆ ಮಂಜೂರು ಮಾಡಲಾಗುವುದು.

ಅಳಿಯ ಸಂತಾನ ಸುಧಾರಣಾ ಕಮಿಟಿಯವರ ಕೆಲಸ (ಉದ್ದೇಶ ಮತ್ತು ಅವರು ತಯಾರಿಸಿರುವ ಮಸೂದೆಯ ರೀತಿ) ಕೆಲವರಿಗೆ ಕೆಲವು ಶಂಕೆಗಳು ತಪ್ಪುಭಾವನೆಗಳು ಹುಟ್ಟುತ್ತವೆ. ಆದರೆ ಜನರಲ್ಲಿರುವ ಅಭಿಪ್ರಾಯದಿಂದ ಮಸೂದೆಗೆ ಹೆಚ್ಚಿನ ಅಳಿಯಕಟ್ಟಿನವರ ಬೆಂಬಲ ದೊರೆತಿರುವುದೆಂಬುದರಲ್ಲಿ ಸಂದೇಹವೇ ಇಲ್ಲ.

ಇಂತಹದೇ ಸುಧಾರಣೆ ಆಗಬೇಕು, ಈ ರೀತಿಯೇ ಮಸೂದೆ ತಯಾರಿಸಲ್ಪಡಬೇಕೆಂಬ ಪೂರ್ವಾಗ್ರಹದಿಂದ ಅಳಿಯ ಸಂತಾನ ಕಮಿಟಿಯವರು ಪ್ರೇರಿತರಾಗಿ ಕೆಲಸ ಮಾಡಲಿಲ್ಲ. ಈಗ ಆಚರಣೆಯಲ್ಲಿರುವಂತೆ ಅಳಿಯಕಟ್ಟಿನಲ್ಲಿ ಸುಧಾರಣೆಯು ಅವಶ್ಯವೆಂಬ ಅಭಿಪ್ರಾಯವು ಸಾರ್ವತ್ರಿಕವಾಗಿ ತೋರಿಬಂದುದರಿಂದ ಕಮಿಟಿಯವರು ಬಹುಜನಮತ ಪಡೆದು ಯಾವ ರೀತಿಯ ಸುಧಾರಣೆಯಾಗಬೇಕೆಂದು ನಿಶ್ಚೈಸಲು ಪ್ರಯತ್ನಪಟ್ಟರು(?). ಈಗ ತಯಾರಿಸಲ್ಪಟ್ಟಿರುವ ಮಸೂದೆಯನ್ನು ಬೇರೆ ಬೇರೆ ದೃಷ್ಟಿಯಿಂದ ವಿರೋಧಿಸುವ ಕೆಲವರಾದರೂ ಯಾವ ಸುಧಾರಣೆಯೂ ಅವಶ್ಯವಿಲ್ಲವೆಂದೇನೂ ಹೇಳುವುದಿಲ್ಲ. ಅಂದ ಮೇಲೆ ಅವರು ಅಳಿಯ ಸಂತಾನ ಸುಧಾರಣಾ ಕಮಿಟಿಯವರೊಂದಿಗೆ ಸಹಕರಿಸಬಹುದಿತ್ತು. ಅದರ ಬದಲಿಗೆ ಸಹಕರಿಸದೆ ಈಗ ಇಡೀ ಮಸೂದೆಯನ್ನೇ ವಿರೋಧಿಸುವ ಧೋರಣೆ ವಹಿಸುವುದು ವಿಷಾದಕರವಾಗಿದೆ. ಈಗಲಾದರೂ ಕಮಿಟಿಯವರು ತಯಾರಿಸಿರುವ ಮಸೂದೆಯಲ್ಲಿ ಬೇಕಾದ ತಿದ್ದುಪಡಿ ಮಾಡಲು ಸಾಧ್ಯವಿದೆ. ಇನ್ನಾದರೂ ಈ ಮಹನೀಯರು ತಮ್ಮ ಸೂಚನೆಗಳನ್ನು ಕಳುಹಿಸಿದರೆ ಅವುಗಳು ಪರಿಗಣಿಸಲ್ಪಡುತ್ತವೆ.

ಅಳಿಯಕಟ್ಟನ್ನೇ ನಾಶಮಾಡಿಸಿ ಮಕ್ಕಳಕಟ್ಟನ್ನು ಜ್ಯಾರಿಗೆ ತರುವುದು ಸುಧಾರಣಾ ಕಮಿಟಿಯವರ ಉದ್ದೇಶವಲ್ಲ. ಮತ್ತು ಅಳಿಯಕಟ್ಟಿನ ಬಹುಸಂಖ್ಯಾತರ ಅಭಿಮತದಂತೆ ತಯಾರಾಗಿ ಎಸೆಂಬ್ಲಿಯ ಮುಂದೆ ಬರುವ ಮಸೂದೆಯು ಅಲ್ಲಿ ಮತ್ತೆ ಇನ್ನೊಂದು(?) ಬದಲಾಯಿಸಲ್ಪಡುವದಾಗಿಲ್ಲ. ಈ ಭಯಕ್ಕೆ ಲೇಶಮಾತ್ರವೂ ಆಸ್ಪದವಿರುವುದಿಲ್ಲ.

ಹೆಚ್ಚು ಕಡಿಮೆ ಸರ್ವಸಮ್ಮತಿಯ ಮಸೂದೆಯೊಂದನ್ನು ತಯಾರಿಸಿ ಎಸೆಂಬ್ಲಿಯ ಮುಂದಿಡಬೇಕೆಂಬ ಉದ್ದೇಶದಿಂದಲೇ ಅಳಿಯ ಸಂತಾನ ಸುಧಾರಣಾ ಕಮಿಟಿಯವರು ಪ್ರಥಮದಲ್ಲಿ ಶ್ರೀ ದಿವಾನ್ ಬಹದೂರು ಹೆಗ್ಗಡೆಯವರನ್ನೇ ಪರಿಷತ್ತಿನ ಅಧ್ಯಕ್ಷರಾಗಲು ಕೇಳಿಕೊಂಡರು. ಅವರು ಮೊದಲು ಒಪ್ಪಿ, ಅನಂತರ ಅನಾರೋಗ್ಯ ಮತ್ತು ಇತರ ಕೆಲವು ಕಾರಣಗಳಿಂದ ಸಮ್ಮತಿಸಲಿಲ್ಲ(?). ಆದರೆ ಜನರೊಪ್ಪಿಗೆಯಿದ್ದಲ್ಲಿ ಸುಧಾರಣೆಗೆ ತಮ್ಮದೇನೂ ಆಕ್ಷೇಪವಿಲ್ಲವೆಂದು ಹೇಳಿದ್ದರು. ಶ್ರೀ. ಕೆ. ಬಿ. ಬಲ್ಲಾಳರು, ತಾನು [illegible] ಎನ್ನುವವರಿದ್ದರೆ(?) ಎತ್ತಿ [illegible] ಧಾರಣೆ ಬೇಕೆಂಬ ಅಭಿಪ್ರಾಯವೇ ಒಳ್ಳೆಯದಾಗಿ(?) ಸರಿಗೊಂಡಿತು.

ಈಗ ಅಳಿಯ ಸಂತಾನ ಸುಧಾರಣಾ ಕಮಿಟಿಯವರು ತಯಾರಿಸಿರುವ ಮಸೂದೆಯೇ ಸರಕಾರದ ಮಸೂದೆಯೆಂದು ಕೆಲವರು ಭಾವಿಸಿರುವಂತಿದೆ. ಒಂದು ಮಸೂದೆಯು ಸರಕಾರದ ಮುಂದೆ ಬರುವ ಮೊದಲೇ ಅದನ್ನು ಸರಕಾರ [illegible] ಇಲ್ಲ. ಮೊದಲು ಖಾಸಗಿ ಮಸೂದೆಯೊಂದನ್ನು [illegible] ಅನಂತರ ಆ ಕುರಿತು [illegible] ಮಸೂದೆಯು ಇನ್ನು ಮುಂದೆ ಎಸೆಂಬ್ಲಿಯ ಮುಂದೆ ತರಲ್ಪಡುವುದು(?). ಆ ಕುರಿತು ಅಭಿಪ್ರಾಯ ಸಂಗ್ರಹಿಸುವುದು. ಆಗ ಜನರು ತಮ್ಮ ಅಭಿಮತವನ್ನು ಸರಕಾರಕ್ಕೆ ಬೇಕಾದ ರೀತಿಯಲ್ಲಿ ತಿಳಿಸಬಹುದು.

ಶ್ರೀ. ಕೆ. ಬಿ. ಬಲ್ಲಾಳರ ಅಭಿಮತ

ಮಸೂದೆಗೆ ಗಣನೀಯವಾದ ವಿರೋಧ ಬಂದಿರುವುದು ಶ್ರೀ. ಕೆ. ಬಿ. ಬಲ್ಲಾಳರಿಂದ. ಅವರು ಅಳಿಯಕಟ್ಟಿನ ಆದರ್ಶಗಳನ್ನು ಉಜ್ವಲವಾಗಿ ಚಿತ್ರಿಸುತ್ತಾರೆ. ಆದರೆ ಆದರ್ಶವನ್ನು ಆಚರಣೆಯಲ್ಲಿ ಹಗಲು ರಾತ್ರಿಯನ್ನು ಬಿಟ್ಟು [illegible] ಆದರ್ಶವಾಗಬಹುದೇ? ಅಳಿಯಸಂತಾನದ ಆದರ್ಶವು [illegible] ಸ್ತ್ರೀಯರ ಸ್ವಾತಂತ್ರ್ಯವನ್ನು ಹೊಗಳಬಹುದು. ಸಮಾಜಶಾಸ್ತ್ರಜ್ಞರು(?) ಅದನ್ನು ಶ್ರೇಷ್ಠತರವಾಗಿ ಸ್ವಾಗತಿಸಿದ್ದಾರೆ(?). ಆದರೆ ಇಂದಿನ ಅಳಿಯಕಟ್ಟಿನ ಆಚರಣೆಯು ಹೇಗಿದೆ? ವಾಸ್ತವಿಕವಾಗಿ ಕುಟುಂಬಗಳ ಪಾಡೇನಾಗಿದೆ? 'ಕಟ್ಟೆಗೆಲ್ಲ ಕೆಲ್ಲೆರಿಗೆ [illegible]' ಎಂಬ ಉದಾತ್ತ-ಉದಾರತತ್ವದ ಬದಲಿಗೆ '[illegible]' ಎಂಬ ವೈಯಕ್ತಿಕತೆಯೇ ತೋರಿಬರುತ್ತಿಲ್ಲವೇ? ಒಂದು ಕುಟುಂಬದಿಂದ ಹೊರಗೆ ಮದುವೆಯಾಗಿ ಹೋದ ವ್ಯಕ್ತಿಗಳು ಬೇರೆಬೇರೆ ಸ್ಥಿತಿಗತಿಗಳಿಂದ ಬಂದ ಬಂದ ಕುಟುಂಬಕ್ಕೆ ಸೇರಿದವರು. ಅಳಿಯಕಟ್ಟಿನ ಮೂಲ ವಿಶೇಷತೆಯೇ ಇದಲ್ಲವೇ? ಕೊಡಲಿ ನಾಲ್ಕು ಮಂದಿ ಹೆಂಗಸರಲ್ಲಿ ಒಬ್ಬಳಿಗೆ ಗಂಡನು 500 ಮುಡಿ ಅಕ್ಕಿ ಕೊಡುತ್ತಾನೆ. ಇನ್ನೊಬ್ಬಳಿಗೆ ಗಂಡನಿಂದ ಏನೂ ಸಿಕ್ಕುವುದಿಲ್ಲ. ಮತ್ತೊಬ್ಬಳಿಗೆ 100 ಮುಡಿ ಅಕ್ಕಿ ಸಿಕ್ಕುತ್ತದೆ. ಮಗದೊಬ್ಬಳಿಗೆ ಹೇರಳ ಧನ ಮತ್ತು ಚಿನ್ನಾಭರಣ ದೊರಕುತ್ತದೆ. ಆಗ ಒಂದೇ ಕಡೆ ಇರುವ ಅಕ್ಕತಂಗಿಯರ ಮಕ್ಕಳೊಳಗೆ ಘರ್ಷಣೆಯಾಗುತ್ತದೆ. ಕುಟುಂಬದ ಹೆಂಗಸರು ಹೊರಗಿನಿಂದ ತಂದ ಆಸ್ತಿ, ಹಣ, ಚಿನ್ನಾಭರಣಗಳು ಎಲ್ಲ ಸಮಷ್ಟಿ ಕುಟುಂಬದ್ದಾಗಿ ಮಾಡಲ್ಪಟ್ಟ ಪಕ್ಷದಲ್ಲಿ ಅಳಿಯಕಟ್ಟಿನ ಕುಟುಂಬಗಳಲ್ಲಿನ ವೈಷಮ್ಯವು ಕಡಿಮೆಯಾದೀತು. ಇದು ಸ್ವಭಾವಾರ್ಯವಲ್ಲ(?). ರಷ್ಯಾ(?) ವಶಪಡಿಸಿಕೊಂಡಿರುವ ಪೋಲೆಂಡಿನ ಪ್ರದೇಶದಲ್ಲಿ ಪ್ರತಿಯೊಬ್ಬನಿಗೆ 4 ಎಕ್ರೆ ಜಮೀನು ಮತ್ತು ಒಂದು ದನ ಹಂಚಲ್ಪಟ್ಟಿರುತ್ತದೆ. ಕೆಲವೇ ದಿನಗಳಲ್ಲಿ ಎಂತಹ ಅದ್ಭುತ ಮಾರ್ಪಾಟವಾಗಿದೆ ಅಲ್ಲಿ! ಅಂತಯೇ ಇಂದಿನ ಪರಿಸ್ಥಿತಿಗಳು ಮುಂಚಿನಂತೆ ಬದಲಾಯಿಸುತ್ತಿವೆ. ಹಿಂದೂದೇಶದಲ್ಲಿಯೂ ಯಾವಾಗ ಎಂತಹ ಪರಿಸ್ಥಿತಿಯು ಬರುವುದೆಂದು ಹೇಳಬರುವುದಿಲ್ಲ. ಪ್ರಚಂಡ ಮಾರ್ಪಾಟದ ಮಹಾಪ್ರವಾಹದಲ್ಲಿ ನಮ್ಮ ಅಳಿಯಕಟ್ಟು ಅದೊಂದು ಹುಲ್ಲಿನಂತೆ ಬಳಿದು ಹೋಗದಿರಲಾರದು.

ಸ್ಥಳಾಭಾವದಿಂದ ಶ್ರೀ ಬಲ್ಲಾಳರಿಗೆ ವಿವರವಾದ ಉತ್ತರವೀಯಲು ಅಸಾಧ್ಯವಾಗಿದೆ. ಅವರು ಪ್ರತಿಪಾದಿಸಿರುವ ರೀತಿಯಲ್ಲಿ ಅಳಿಯಕಟ್ಟಿನ ಕುಟುಂಬಗಳು ಪತ್ರಗಳಲ್ಲಿ(?) ಒಂದು [illegible] ಮಟ್ಟಿಗಾದರೂ ನಡೆಯುವದಾದರೆ ಇಂದಿನ ಸುಧಾರಣೆಯ ಕುರಿತು ಕೂಗೇಳುತ್ತಿದ್ದಿಲ್ಲ. ಯಜಮಾನರ ಅಧಿಕಾರವನ್ನು ನಿಯಂತ್ರಿಸುವ ವಿಷಯದಲ್ಲಿ ಸುಧಾರಣೆ ಬೇಕೆಂದು ಶ್ರೀ ಬಲ್ಲಾಳರ ಅಭಿಪ್ರಾಯ. ಅವರು ಕೊಟ್ಟಿರುವ ಸೂಚನೆಗಳನ್ನೊಳಗೊಂಡ ಸ್ಕೀಮೊಂದನ್ನು ಅವರು ತಯಾರಿಸಿ ಪ್ರಕಟಿಸುತ್ತಿದ್ದರೆ ಉತ್ತಮವಾಗಿತ್ತು. ಇನ್ನಾದರೂ ಅವರು ತಮ್ಮ ಸ್ಕೀಮನ್ನು ತಯಾರಿಸಿ ಅಳಿಯಸಂತಾನ ಕಮಿಟಿಯವರ ಮುಂದಿರಿಸಿ ಅದರಿಂದ ಹೆಚ್ಚಿನ ಅಳಿಯಕಟ್ಟಿನವರು ತೃಪ್ತಿಗೊಂಡ ಪಕ್ಷದಲ್ಲಿ ಕಮಿಟಿಯವರು ತಮ್ಮ ಮಸೂದೆಯನ್ನು ಮೂಲೆಗೊತ್ತಿ ಶ್ರೀ ಬಲ್ಲಾಳರ ಸ್ಕೀಮನ್ನು ಸ್ವೀಕರಿಸಲು ಹಿಂಜರಿಯಲಾರರು.

ಶ್ರೀ ಬಸ್ರೂರು(?) ಹಿರಿಯಣ್ಣ ಶೆಟ್ರೇ ಮೊದಲಾದವರು [illegible] ಹೊರಡಿಸಿರುವ ಪ್ರಕಟಣೆಯಲ್ಲಿ ಆಡಂಬರದ ಹೊರತು ತಿರುಳೇನೂ ಇರುವಂತಿಲ್ಲ. ಅನಾವಶ್ಯಕವಾಗಿ ಸುಧಾರಣಾಕಮಿಟಿಯವರ ಮೇಲೆ ಇವರು ಏನೆಲ್ಲಾ ಆರೋಪ ಹೊರಿಸಿರುತ್ತಾರೆ. ನಾನಾಪರಿಯಾಗಿ ಅವರನ್ನು ನಿಂದಿಸಿ ದೂಷಿಸಿರುತ್ತಾರೆ. ಇವರು ಕೊನೆಯಲ್ಲಿ ಕೊಟ್ಟಿರುವ ಸೂಚನೆಗಳನ್ನು ಸುಧಾರಣಾಪರಿಷತ್ತಿನವರು ಪರ್ಯಾಲೋಚಿಸಲಿದ್ದಾರೆ. ಮತ್ತು ಜನಮತ ಪಡೆಯಲು ಓಟಾತೆಗೆಯಬೇಕೆಂಬ ಸೂಚನೆಯು ಮನೋರಂಜಕವಿದೆ. ಶ್ರೀ ಹಿರಿಯಣ್ಣ ಶೆಟ್ರೇ ಮೊದಲಾದ ದೊಡ್ಡ ದೊಡ್ಡ [illegible] ಸೇರಿ ತಮ್ಮ ಸಾರ್ವಜನಿಕ ಅಧಿಕಾರದಿಂದ(?) ಕರ್ಚುವೆಚ್ಚವನ್ನು(?) ಸುಧಾರಣಾಕಮಿಟಿಯವರಿಗೆ ಸಂಗ್ರಹಿಸಿ ಕೊಟ್ಟಲ್ಲಿ ಕಮಿಟಿಯವರು ಓಟಿನ ಮೂಲಕವೇ ಮತ ಪಡೆಯಲು ಸಿದ್ಧರೇ ಇದ್ದಾರೆ. ಇಲ್ಲವಾದರೆ ಪರೋಕ್ಷ [illegible]ಕ್ಕಿಂತ ಓಟು ಪಡೆಯಬೇಕೆಂದು ಹಾರೈಸುವ ಅವರೇ ಅದಕ್ಕೆ ತಕ್ಕ ವ್ಯವಸ್ಥೆ ಮಾಡಿ ಸುಧಾರಣಾಕಮಿಟಿಯವರಿಗೆ ಜನ ಬೆಂಬಲವಿಲ್ಲೆಂದು ಸಿದ್ಧಪಡಿಸಬಾರದೇಕೆ?

ಜನತೆಯಲ್ಲಿ ವಿನಂತಿ

ನವಂಬರ ತಾ. 5ರಲ್ಲಿ ನಡೆಯುವ ಪರಿಷತ್ತು ಮಹತ್ವದ್ದಾಗಿದೆ. ಆದುದರಿಂದ ಪ್ರತಿನಿಧಿಗಳೆಲ್ಲರೂ ಆಯಾ ತಾಲೂಕಿನ ಕಮಿಟಿ ಮೆಂಬರರಿಗೆ ತಮ್ಮ ಪ್ರತಿನಿಧಿ ಹಾಕಲು ಕಳುಹಿಸಿ ತಪ್ಪದೆ ಪರಿಷತ್ತಿಗೆ ಬರಬೇಕಾಗಿ ವಿನಂತಿ. ಪ್ರತಿನಿಧಿಗಳಲ್ಲದೆ ಪ್ರೇಕ್ಷಕರೂ ಬಂದು ತಮ್ಮ ಸೂಚನೆ ಸಲಹೆಗಳನ್ನೀಯಬಹುದು. ಮಸೂದೆಯ ಕುರಿತು ಮುಂದಿನ ಕೆಲಸ ಮಾಡಲು ಕಾಯಮಾಗಿ ಕಮಿಟಿಯೊಂದನ್ನೋ ಸಂಘವನ್ನೋ ಸ್ಥಾಪಿಸಿ ಕೆಲಸ ಮಾಡುವ ಆವಶ್ಯಕತೆಯಿದೆ. ಜನತೆಯು ಉತ್ಸಾಹದಿಂದ ಸುಧಾರಣಾಕಮಿಟಿಯವರಿಗೆ ಬೆಂಬಲವಿತ್ತು ಪ್ರೋತ್ಸಾಹಿಸಿದರೆ ಮಸೂದೆಯು ಬೇಗನೆ ಎಸೆಂಬ್ಲಿಯ ಮುಂದೆ ತರಲ್ಪಡಲು ಅನುಕೂಲವಾಗುವುದು.

ಕಾರ್ಯದರ್ಶಿ,
ಅಳಿಯ ಸಂತಾನ ಸುಧಾರಣಾ ಕಮಿಟಿ, ಮಂಗಳೂರು.

ಮಂಗಳೂರ ಪೇಟೆಯ ದವಸಧಾನ್ಯ ವಸ್ತುಗಳ ಧಾರಣೆಗಳು.

(ತಾ 9-10-39ರಲ್ಲಿದ್ದಂತ ಬಜಾರು ಪ್ರೈಜರಿಯಿಂದ)

	ರಿಂದ			ವರೆಗೆ		
1 ಭತ್ತ ಅವ್ವಲ್ ತರದ ಗುದ್ದು ಮುಡಿಗೆ	1	9	0	—		
2 (a) ಅಕ್ಕಿ ಅವ್ವಲ್ ತರದ ಗುದ್ದು ಮುಡಿಗೆ	4	14	0	5	0	0
(b) ,, ದುಯಂ ,,	4	10	0	4	12	0
3 (a) ,, ಅವ್ವಲ್ ಸುಗ್ಗಿ	4	12	0	4	13	0
(b) ,, ದುಯಂ ,,	4	8	0	4	10	0
4 (a) ತೆಂಗಿನಕಾಯಿ ಸಣ್ಣದು 1000ಕ್ಕೆ	37	8	0	47	8	0
(b) ,, ಸಿಪ್ಪೆಯಿದ್ದದ್ದು ,,	40	0	0	50	0	0
5 ಕೊಬ್ಬರಿ ಒಣಗಿಸಿದ್ದು ಖಂಡಿಗೆ	57	8	0	—		
6 ತೆಂಗಿನ ಎಣ್ಣೆ ಮಣಕ್ಕೆ	3	14	0	—		
7 ಅಡಿಕೆ ಸಿಪ್ಪೆಯಿದ್ದದ್ದು 1000ಕ್ಕೆ	2	8	0	3	8	0
8 ಗೇರುಬೀಜ ಮುಡಿಗೆ	3	8	0	4	8	0
9 ಕಪ್ಪಿನ ಬೆಲ್ಲ ಖಂಡಿಗೆ	35	0	0	50	0	0
10 ಒಳ್ಳೇ ವಾಸು ಹಂಪ್ಪದ್ ಮೂಟೆಗೆ	16	8	0	17	8	0

Degrees. Books. Medicines

Free H L M S, H M B H, M D etc Free Homeo Ayur Unani Naturo degrees, by post also—Practioners also get soons Homeo Materiamedica, Rs 5 Homeo-Practice book Rs 1 Insanity Cure Pills Rs 10 Enclose 2 annas stamps —

Principal, Indian Homeopathic Institute and Society (Govt Regd)
P O MAHUVA, (Kathiawar Dt. India

ತಾಳಿದ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

“ಗೊನೊಕಿಲರ್” (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ್' ಎನ್ನುವುದನ್ನೂ ಗಮನಿಸಿರಿ

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇಂಜೆಕ್ಷನ್ ಮೊದಲಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರತೋಂದರೆ(?)ಯಾಗಿದ್ದರೂ, ಗೊನೊರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಹುಳಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3. ವಿ ಪಿ ಖರ್ಚು 0-9-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತಿ ಡಿಸ್‌ಪೆನ್ಸರಿ.

Sole Manufacturer Dr. D. N. JASANI, Vitalbhai Patel Road, BOMBAY 4

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಸದಸ್ಯರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,

Hampankatte, MANGALORE

DAIMONDS! DAIMONDS!

K R. K. SHET

Opposite Govt College Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಜುನ್ನಾತ (first quality, selected) ಎಕ್ಸ್‌ಸ್ಟ್ರಾ ದಿಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟೆಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಪ್ ಯೊಂದನ್ನು ಗವರ್ನಮೆಂಟ್ ಕೊಲ್ಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡೆ7 ವ 8ರ ದರದಲ್ಲಿ ಸಾಲಕೊಡಲಾಗುವುದು

ನಿರಖು ಠೇವಣಾತಿ ಸೇಕಡೆ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮದ್ದು ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ಕಾಂತಿ, ಹೆಚ್ಚುವುದು ಇದು ಮಧುರವಾಗಿದೆ ಆಡಿಬೆಳ್ಳುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸಿಕ್ಕುವುದು. ಸೀಸೆ1ಕ್ಕೆ12ಆಣೆ, ಡಿ ಖರ್ಚು ಕೆ

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟರು - ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದರ್ಶನೂಲವಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. ಶೋಧನ ಗುಣ.—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಚಿತ್ತವನ್ನು ಹೊರಗೆ ಹಾಕಿ ಪ್ರಸೂತಿವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು ಸುಖಸೇವನ ಸುಖಸೇವನದಿಂದನುಧಾರವುಸೋಲ ಹೆರವಾದಕಳಶಾಯನವೃಜಾಣಂತಿಯರಜ್ವರ,ಅಗ್ನಿಮಾಂದ್ಯ,ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ.2-0-0

ಎಸ್. ವಿ. ಶಾಸ್ತ್ರಿ, ಆಯುರ್ವೇದ ಔಷಧ ಮಂಗಳೂರು, ದ, ಕ

ಮೈಸೂರು ಸ್ಟೇಟಿನ ಏಜಂಟರು - ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

[illegible]

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

Most Reliable New Model 1939

High Grade Lever Movement Offered at 50% Reduction

No 517 STRONG & DURABLE ROUND OR SQUARE



No 401. Chromium Rs 5 0 0

" 402 Golden Case " 4 0 0

LEVER MOVT 15 JEWELS

Guaranteed 5 Years

No 517 Chromium Rs 6 8 0

No 518 Golden Case Rs 8 0 0 No 561 Chromium Rs 13 8 0

No 562 Rolled Gold Rs 17 0 0 Catalogue Free Rs 9/-

Extra for postage & packing

(CORRESPONDENCE IN ENGLISH ONLY)

BAPALAL & CO., *101 Abdul Rehman Street,* Bombay 3

ಶ್ರೀ ರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್, ಉಡುಪಿ.

ಬ್ರಾಂಚ್.—ಕೊಡಿಯಾಲಬೈಲು ದುರ್ಗಾದೇವಿ ರೋಡು, ಮಂಗಳೂರು.

ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ವರ್ಗದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವನಿಸುವಂತ ಕನಿಷ್ಠ ಹಾಗೂ ಕ್ರಾಂತ್ಯಸ್ಥಳ. ಎಚ್ ರಾಮಚಂದ್ರನಾಯಕ್, ಪ್ರೊಪ್ರೈಟರ್

ಸ್ಥಾಪನ 1926

18 ಬಸ್ತರ ರಸ್ತೆ, ಮಂಗಳೂರು.

ಯಾವದಕ್ಕೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಾದ ಎಲ್ಲ ತರದ ರಬ್ಬರ ಮೊಹರುಗಳು, ಸ್ಟೆನ್ಸಿಲ್, ಕೊಡಿಗೆ ಬೇಕಾದ ಬೆಳ್ಳಿ ಮೊಹರುಗಳು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವುದು

Crown Rubber Stamp Co., Balmat Road, MANGALORE

[illegible]

ಜಾಹೀರಾತ ಗಳಿಗೆ ಬೇಕಾಗುವ ಚಿತ್ರ ಕರಣ ನವ ವಿನೆಯ ಬ್ಲೋಕು, ಡಿಜೈನು, ಸ್ಟ್ರಾಂಗ್ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯ ಸುಲಭ ದರದಲ್ಲಿ ಮಾಡಿಕೊಡಲಾಗುವದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ರೀನ್ ಬೋರ್ಡ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವದು,

ಅಮೃತಕಲಾ ಪ್ರೆಸ್,

ಆರ್ಟ್ ಪ್ರಿಂಟರ್ಸ್ ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತು ನೆಂಜರ

ನಂಜನಗೂಡು ಟೂತ್‌ಪೌಡರ್ (ರಿಜಿಸ್ಟರ್ಡ್)

ಸದ್ವೈದ್ಯಶಾಲಾ, (ಬ್ರಾಂಚ್) ರಥಬೀದಿ, ಮಂಗಳೂರು.

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ನಿಮದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಪಾರಿಯವರ ಇವರಲ್ಲಿಗೆ ಬನ್ನಿರಿ

[illegible]

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದಾಗಿದೆ ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಆ ರೋಗಗಳ ಮೂಲವನ್ನೇ ಕಿತ್ತುಹಾಕುವದು ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲು, ಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅದವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ 'ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್' ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳು

ಕ್ರಯ ಸೀಸೆ 1ಕ್ಕೆ ರೂ. 2—8—0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ ಮತ್ತು ಪ್ಯಾಕಿಂಗ್ ಮಾಫಿ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1—4—0

ವಿ ಪಿ ಬೇರೆ

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ ಪಿ ಮತ್ತು ಪ್ಯಾಕಿಂಗ್ ಮಾಫಿ.

'ಹವನನ್' ಹೆಮೊರ್ರೊಯ್ಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳೆದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರ್ರೊಯ್ಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಲ್ಗರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ 1-4-0 ವಿ ಪಿ. ಬೇರೆ

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು, ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿರಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿ ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ 1-0-0 ವಿ. ಪಿ ಬೇರೆ.

ಹಿಂದುಸ್ಥಾನದ ಪ್ರಮುಖ ಏಜಂಟರು

The Eclipse Distributing Agency,

Dahanu Road, B. B & C I. Ry BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ನವಾಗ ಏಜಂಟರುಗಳು ಬೇಕಾಗಿದ್ದಾರೆ, ... ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S. S. KARANTH AT THE …

Be Ready—War necessitates demand for telegraphists etc Allowance, uniform, passage and quarter. Prospectus on annas eight. Director, Royal Tel and Ry Duties College, Bombay 11

WANTED one Inspector, two Organisers and Agents in South Kanara Apply stating previous experience to:-
The Bombay Co-operative Insurance Society Ltd,
Office for Mysore, Coorg &South Kanara
Sabuvani Building, Narasimha Raja Road Bangalore City

NAVAYUGA
ನವಯುಗ

ಸಂಸ್ಥಾಪಕರು
ಶ್ರೀ. ಎ ಬಿ ಶೆಟ್ಟಿ ರು, ಎಂ ಎಲ್ ಎ

FOUNDER
SRI A B SHETTY, M L A,
Parliamentary Secretary Govt of Madras

ಸಂಪಾದಕ ಕೆ. ಕೆ ಶೆಟ್ಟಿ

1921

ಸಹಸಂಪಾದಕ ಕೆ. ಎಚ್. ಶೆಟ್ಟಿ.

ಸಂಪುಟ ೧೯ ಸಂಚಿಕೆ ೮	ಉಡುಪಿ ಗುರುವಾರ, ತಾ 26-10-1939	VOL 19 No. 8

'SERWELL'
RUBBER STAMPS

OFTEN APPEAL,
Since they surely serve well
YOU CAN HAVE ONE

On placing you order with our Representatives in your area

IF UNREPRESENTED, WRITE FOR AGENCY TERMS

Manufacturers —
on the approved list of the Govt of Mysore

YADIKE BROS.
MANUFACTURERS
REPRESENTATIVES
IMPORTERS & ENGINEERS,
BANGALORE CITY

NO ONE IS SAFE!

NATURAL CAUSE *may deprive your family*

YOU MEANT TO TAKE OUT A POLICY YOU HAD DISCUSSED ONE WHICH WOULD HAVE BROUGHT YOU SUFFICIENT INCOME
BUT WRITING WAS TOO MUCH TROUBLE FOR YOU
THEN AN ACCIDENT HAPPENED NOW YOUR FAMILY IS LEFT PENNILESS.
A SAD STORY BUT ALAS HOW COMMON YOU ARE IN DANGER AT EVERY MOMENT SAFEGUARD TO DAY INSURE WITH **TROPICAL.**
WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE?

Quotations for all ages and amounts to suit all circumstances

TROPICAL INSURANCE COY., LTD.
NEW DELHI

ಟ್ರೊಪಿಕಲ್

ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್,

ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ

ಎಂ. ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.	ಆಥವಾ ಕೆ ರಾಮಮೂರ್ತಿ, ಎಂ ಎ, ಬ್ರಾಂಚ್ ಸೆಕ್ರೆಟರಿ, 160 ಮೌಂಟ್‌ರೋಡ್, ಮದ್ರಾಸು.

ಧ್ಯಾನಾವಶೀಂ ಸಕಲಭಾಗ್ಯವಶೀನುಪೇಕ್ಷ್ಯ
ಗೋಪಾಲಬಾಲಲಲನಾಕರಪೂಜನಂ ಚ ।
ತೀರ್ಥಂ ಪದೂಗ್ರಹಮುತೀಕ್ಷ್ಯ ಸ ಮಧ್ವನಾಥೋ
ಯತ್ರಾಸ್ತಿ ತತ್ರ ಜತಕೇವಪುರಂ ಗರೀಯಃ ॥

ಉಡುಪಿ
ಶ್ರೀ ಕೃಷ್ಣನ ಸನ್ನಿಧಿಯಲ್ಲಿ

ಇದೇ ಬರುವ ತಾ 23—11—1939ರಿಂದ
26—11—1939ರ ತನಕ

ಪ್ರಮಾಥಿ ಸಂ||ರದ ಕಾರ್ತಿಕ ಶು. (ಉತ್ಥಾನ) ದ್ವಾದಶಿಯಿಂದ ಆರಂಭಿಸಿ
ಹುಣ್ಣಿಮೆಯ ವರೆಗೆ ನಾಲ್ಕು ರಾತ್ರಿಗಳಲ್ಲಿ

ಲಕ್ಷದೀಪೋತ್ಸವವು

ಜರಗಲಿರುವುದು.

ಶ್ರೀಮನ್ಮಧ್ವಾಚಾರ್ಯರವರ ಅವತಾರಸ್ಥಾನವಾಗಿದ್ದು,
ಮುಕ್ತಿಪ್ರದವಾದ ಸಪ್ತಕ್ಷೇತ್ರಗಳಲ್ಲಿ ಪ್ರಮುಖವಾದ ಉಡುಪಿಯು ಶ್ರೀಮದಾಚಾರ್ಯರ ದಿವ್ಯಹಸ್ತದಿಂದ ಪ್ರತಿಷ್ಠಿತನಾದ, ಕಡಗೋಲು ನೇಣನ್ನು ಕೈಗಳಲ್ಲಿ ಹಿಡಿದುಕೊಂಡು ನಿಂತಿರುವ, ರುಕ್ಮಿಣೀಕರಾರ್ಚಿತ ದಿವ್ಯ ಬಾಲಕೃಷ್ಣನ ಸನ್ನಿಧಾನದಿಂದ ಅತಿ ಪವಿತ್ರವೆಂದು ಹೆಸರುಗೊಂಡಿದೆ ಈ ಸುಂದರ ಮೂರ್ತಿಯ ದರ್ಶನ ಮಾತ್ರದಿಂದ ಭಕ್ತರ ಹೃದಯದಲ್ಲಿ ಅಪೂರ್ವ ಭಕ್ತಿಸ್ರೋತವು ಉಕ್ಕಿ ಪ್ರವಹಿಸುವುದರಲ್ಲಿ ಆಶ್ಚರ್ಯವಿಲ್ಲ ಸಾವಿರಾರು ಆಸ್ತಿಕಭಕ್ತರು ಈ ಪರಮಾತ್ಮನ ಮತ್ತು ಗುರುಗಳಾದ ಮಧ್ವಾಚಾರ್ಯರ ಸೇವಾ-ದರ್ಶನಾದಿಗಳಿಂದ ತಮ್ಮ ಅಭೀಷ್ಟಸಿದ್ಧಿ ಪಡೆದಿರುತ್ತಾರೆ

ಇದಲ್ಲದೆ ಉಡುಪಿ ಕ್ಷೇತ್ರವು ಸುತ್ತುಮುತ್ತಲಿನ ರಮಣೀಯವಾದ ಪ್ರಾಕೃತಿಕ ದೃಶ್ಯಗಳಿಂದ ಕೂಡಿದ ಮನೋಹರ ಮತ್ತು ಸ್ವಾಸ್ಥ್ಯಪ್ರದವಾದ ಪ್ರದೇಶದಲ್ಲಿರುವುದು

ಏಕಕಾಲದಲ್ಲಿ ಶ್ರೀಪರಗುರುಗಳ ದರ್ಶನ-ಸೇವಾದಿಗಳ ಲಾಭ ದೊರೆಯುವ ಈ ಪುಣ್ಯಕ್ಷೇತ್ರವನ್ನು ಕಾರ್ತಿಕ ಲಕ್ಷದೀಪೋತ್ಸವ ಕಾಲದಲ್ಲಿ ಸಮಸ್ತ ಭಜಕರೂ ಅವಶ್ಯ ನೋಡಬೇಕಾಗಿದೆ ರಥೋತ್ಸವಕ್ಕೆ ಮೊದಲು ತೆಪ್ಪೋತ್ಸವವೂ, ನಾಲ್ಕು ಬೀದಿಗಳಲ್ಲಿಯೂ ಬೆಳಗಿಸುವ ಲಕ್ಷಗಟ್ಟಲೆಯ ದೀಪಮಾಲೆಗಳ ವೈಭವವೂ ಅತಿ ಪ್ರೇಕ್ಷಣೀಯವಾಗಿವೆ.

ಹೆಚ್ಚಿನ ಅನುಭವಕ್ಕೂ, ವಸತಿ ಮೊದಲಾದ ಸೌಕರ್ಯಗಳಿಗೂ ಪತ್ರ ಬರೆದು ಕೇಳಿರಿ.
ಏಜಂಟ್ ಪರ್ಯಾಯ ಶ್ರೀಫಲಿಮಾರು ಮಠ, ಉಡುಪಿ, ದ. ಕ.

ಲೈಬ್ರೆರಿ
ಮತ್ತು
ಸ್ಕೂಲ್ ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಕೆಟಲಾಗಿಗೆ ಬರೆಯಿರಿ.
ಸಿ. ಎ. ಉಪಾಧ್ಯಾಯ,
ಬುಕ್‌ಸೆಲ್ಲರ್ ಅಂಡ್ ಪಬ್ಲಿಷರ್,
ವಿ. ಎಸ್ ಸ್ಟ್ರೀಟ್,
ಬೆಂಗಳೂರು ಸಿಟಿ

THULUNAD BANK
OF SUPPLY AGENCY LIMITED,

ESTD.] UDIPI. [1933.

Current Account are accepted at 3% p. a.

All kinds of Banking business transacted

Write for particulars to —
The Managing Director,

— ಗರ್ಭ ನಿರೋಧ —

ರಹತ್ ಇದು ಗರ್ಭಧಾರಣೆಯನ್ನು ನಿಶ್ಚಯವಾಗಿಯೂ ತಡೆಗಟ್ಟುವುದು ಇದನ್ನು 3 ದಿವಸ ಉಪಯೋಗಿಸಿದ್ದಾಗ ಗರ್ಭಧಾರಣೆಯು ಜೀವಿಯು ಜೀವಮಾನದವರೆಗೆ ನಿವಾರಿತವಾಗುವುದು, ಶರೀರಕ್ಕೆ ಯಾವ ತರದ ಹಾನಿಯೂ ಇರುವುದಿಲ್ಲ ಯಾವರೀತಿಯ ಮುಟ್ಟು ದೋಷವೂ ಉಂಟಾಗವದಿಲ್ಲ ಪ್ರತಿಯೊಂದು ಔಷಧಿನೊಂದಿಗೆ ಗ್ಯಾರಂಟೀ ಪತ್ರವಿದೆ ಬೆಲೆ ರೂ. 5-8-0

ರಿಪವತಿ—ಮುಟ್ಟು ನಿಲ್ಲಿಸಲ್ಪಟ್ಟುದನ್ನು ಪುನಃ ಕ್ರಮವಾಗಿ ಆಗುವಂತೆ ಮಾಡುವುದು ಬೆಲೆ ರೂ 5 8 0 ವಿಶೇಷ 10ಶಿಲ್ಲಿಂಗು

ಫೋ ನಂ. 21343

Dr S. H. Khan,
42 (N G) *Churchgate street*
Fort Bombay

THE ASIAN ASSURANCE COMPANY, LTD.

ASIAN BUILDINGS - - - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9,24,965	24,50,234
1935	2,52,08,418	18 39 296	42 98,820
1938	3,61,56,764	22,34,301	67 66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
„ **M Shivarama Rao,** Organizer, Puttur

Or

Sri J A PUTRAN
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2,02 800/- Paid up Capital Rs 1,82 100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year

For further particulars please address or call at any of our offices

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗೂ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸವಾಗಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಒಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ ಹಣವನ್ನು ತೀವ್ರ ರೋಗ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು ಕೆಮ್ಮು, ಶೀತಬಾಧೆ, ಉಬ್ಬಸ, ಮಾಸಸ್ರಾವ, ಎದೆನೋವು ಇವುಗಳಿಗೆ ದಿವ್ಯ ಔಷಧಿ.

ಪೌಂಡ್ ರೂ 2-8-0, ½ ಪೌಂಡಿಗೆ ರೂ 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವುದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲುಸಿಕ್ಕುವಂತೆ ಮಾಡುವುದು ಬಾಟ್ಲಿ 1ರ ರೂ 1-8-0.

ಕೆಟಲಾಗಿಗೆ ಬರೆಯಿರಿ — **ಯಂ. ಗಣಪಯ್ಯ ಎಂಡ್ ಸನ್ಸ್,**

ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ ಕೆಟಲಾಗಿಗೆ ಬರೆಯಿರಿ

ಉಡುಪಿ ಸಬ್‌ಏಜಂಟರು—ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನಾಯಕ್ ಏಜಂಟ್ಸ್ ಉಡುಪಿ

ಹೊಸ ಪುಸ್ತಕ! **ಈಗಲೇ ಪ್ರಿಂಟಾಗಿದೆ!!**

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ ಮಾತನಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ ೮೦೦ ಪೇಜುಗಳು ಇರುವ ದೊಡ್ಡ ಪುಸ್ತಕ ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ ಮನೆಯಲ್ಲೀ ಈ ಪುಸ್ತಕ ಓದಿರಿ ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ ಪುಸ್ತಕದ ಬೆಲೆ ರೂ ೧॥

Western Swiss watch Co.
Book Sellers Post Box No 68
G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68 ಮದರಾಸ್

ಚರ್ಮವನ್ನು
ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳೆಲ್ಲಾ ಸರ್ವೋತ್ಕೃಷ್ಟವಾದುದು "ಮೈಸೂರು" ಸೇಂಡಲ್ ಸೋಪು. ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

ಶೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. . ಶುದ್ಧ ಖಾದಿ ಮತ್ತು ಸಿಲ್ಕ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

: ಜಾಹೀರಾತು ದರಗಳು.
೧ ಪುಟಕ್ಕೆ ೧ ಸಲಕ್ಕೆ .. ರೂ ೨೫
ಅರ್ಧ ಪುಟಕ್ಕೆ ೧ ಸಲಕ್ಕೆ ,, ೧೫
ಕಾಲು ಪುಟಕ್ಕೆ ೧ ಸಲಕ್ಕೆ ,, ೮
ಅರೆಕಾಲು ಪುಟಕ್ಕೆ ೧ ಸಲಕ್ಕೆ ,, ೫
ಇಂಚು ಕಲಮಿಗೆ ೧ ಸಲಕ್ಕೆ ,, ೧
ಕಾಯಂ ಜಾಹೀರಾತು ದರಗಳಿಗೆ ಬರೆಯಿರಿ.

ವಾರ ಪತ್ರಿಕೆ

NAVAYUGA
ನವಯುಗ

Kanarese Weekly

: ಚಂದಾ ವಿವರ :
೧ ವರ್ಷಕ್ಕೆ ರೂ ೩—೪—೦
೬ ತಿಂಗಳಿಗೆ ,, ೧—೧೨—೦
೩ ತಿಂಗಳಿಗೆ ,, ೧—೦—೦
ಚಂದಾ ಹಣವನ್ನು ಮುಂಗಡವಾಗಿ ಕಳಿಸಬೇಕಾಗಿದೆ
ಮಾದರಿ ಸಂಚಿಕೆಗೆ ಮೆನೇಜರರಿಗೆ ಬರೆಯಿರಿ:

ವಾರದ ವಿಮರ್ಶೆ

ಮುತ್ಸದ್ದಿತನದ ದಿವಾಳಿಗಿರಿ

ಇದೇ ತಾ. 17ರಲ್ಲಿ ವೈಸರಾಯರಾದ ಲೋರ್ಡ್ ಲಿನ್ಲಿತ್ ಗೋರವರು ಹಿಂದೂದೇಶದ ಸಂಬಂಧವಾದ ಬ್ರಿಟಿಷ್ ಸರಕಾರದ ಧೋರಣೆಯ ಕುರಿತು ಹೊರಡಿಸಿರುವ ನಿರೂಪಣೆಯು ಕೇವಲ ಹಿನ್ನೋಟವಲ್ಲದೆ ಮುನ್ನೋಟವಲ್ಲ. ಹತ್ತು ಹದಿನೈದು ವರ್ಷಗಳ ಹಿಂದಿನ ಕೇಂದ್ರ ಎಸೆಂಬ್ಲಿಯಲ್ಲಿ ಎಗ್ಜಿಕ್ಯೂಟಿವ್ ಕೌನ್ಸಿಲರುಗಳ ಭಾಷಣಗಳನ್ನದು ನೆನಸಿಗೆ ತರುತ್ತದೆ. 1919ರ ವರೆಗೆ ಹಿಂದೆ ಹೋದ ಲೋರ್ಡ್ ಲಿನ್ಲಿತ್ ಗೋರವರು ವಿಕ್ಟೋರಿಯ ರಾಣಿಯವರ ಪ್ರಕಟಣೆಯನ್ನೇಕೆ ಮರೆತರೋ? ಯುದ್ಧದ ಉದ್ದೇಶವನ್ನು ಈಗ ಸ್ಪಷ್ಟಗೊಳಿಸಲು ಸಾಧ್ಯವಿಲ್ಲ. ಯುದ್ಧದ ಗತಿಯೇನಾಗುವುದೆಂದು ಹೇಳಬರುವುದಿಲ್ಲ. ಯುದ್ಧ ಮುಗಿದ ಮೇಲೆ ಹಿಂದೂದೇಶದ ಹಲವು ಪಕ್ಷಗಳ, ಜಾತಿಗಳ, ಸಂಘಗಳ ಮತ್ತು ದೇಶೀಯ ಸಂಸ್ಥಾನಾಧಿಪತಿಗಳ ಪ್ರತಿನಿಧಿಗಳ ಪರಿಷತ್ತೊಂದನ್ನು ಕರೆದು ಅವರ ಸಹಕಾರದಿಂದ ಅಪೇಕ್ಷಣೀಯವಾದ ಬದಲಾವಣೆಗಳನ್ನು ರಾಜಕೀಯ ಘಟನೆಯಲ್ಲಿ ಮಾಡಲಾಗುವುದು. ಅಗತ್ಯ ಕಂಡುಬಂದಲ್ಲಿ ಫೆಡರೇಶನಿನಲ್ಲಿ ಬದಲಾವಣೆ ಮಾಡಲಾಗುವುದು ಆ ಮೊದಲು ಯುದ್ಧದ ಕುರಿತು ಜನಮತದ ಬೆಂಬಲಪಡೆದು ಕೆಲಸಮಾಡಲು ಎಲ್ಲಾ ಪಕ್ಷಗಳ ಮತ್ತು ದೇಶೀಯ ರಾಜರುಗಳ ಪ್ರತಿನಿಧಿಗಳನ್ನೊಳಗೊಂಡ ಸಲಹೆಗಾರ ಗುಂಪೊಂದನ್ನು ವೈಸರಾಯರು ತನ್ನ ಅಧ್ಯಕ್ಷತೆಯಲ್ಲೇ ನೆರೆಯಿಸುವರು. 1919ರ ಆಕ್ಟಿನ ಪೀಠಿಕೆಯಲ್ಲಿ 1929ರಲ್ಲಿ ಇಂಡಿಯಾ ಸೆಕ್ರೆಟರಿಗಳು ಕೊಟ್ಟ ಹೇಳಿಕೆಯಲ್ಲಿ ಮತ್ತು 1935ನೇ ಇಸ್ವಿ ಫೆಬ್ರವರಿ ತಾ. 6ರ ಪಾರ್ಲಿಮೆಂಟಿನ ಹೇಳಿಕೆಯಲ್ಲಿ ಹಿಂದೀ ಸ್ವಾತಂತ್ರ್ಯದ ಕುರಿತು ಅಡಕವಾದ ಉದ್ದೇಶ ಮತ್ತು ಇಚ್ಛೆಗಳನ್ನು ಬ್ರಿಟನು ಕಡೆಗಣಿಸದೆ ಪಾಲಿಸುವುದು. ಕ್ರಮೇಣ ಹಿಂದೂದೇಶಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೀಯಲಾಗುವುದು. ಹಿಂದೀಯರು ತಮ್ಮೊಳಗೆ ಒಕ್ಕಟ್ಟನ್ನುಂಟುಮಾಡಲು ಈ ಸಂದರ್ಭವನ್ನು ಉಪಯೋಗಿಸಬೇಕು. ವೈಸರಾಯರು ಇತ್ತಲಾಗಿ ಕಂಡು ಮಾತನಾಡಿದ 52ಮಂದಿ ಹಿಂದೀ ಮುಖಂಡರುಗಳಲ್ಲಿ ಕಂಡುಬಂದಿರುವ ಮನೋವೃತ್ತಿ, ಅಭಿಪ್ರಾಯ, ಉದ್ದೇಶ ಮತ್ತು ಗುರಿಯ ಭಿನ್ನತೆಯು ಬಿಕ್ಕಟ್ಟೇ ಹಿಂದೂದೇಶದ ರಾಜಕೀಯ ಪ್ರಗತಿಗೆ ದೊಡ್ಡ ತೊಡಕು. ಆದುದರಿಂದ ಈ ಸಂಧಿಕಾಲದಲ್ಲಿ ಹಿಂದೀಯರು ಕೇವಲ ಶಬ್ದಗಳ ಆಗ್ರಹಕ್ಕೆ ಕಟ್ಟುಬೀಳದೆ ವಾಸ್ತವ ಪರಿಸ್ಥಿತಿಯನ್ನು ಮನಗಂಡು ಒಕ್ಕಟ್ಟನ್ನುಂಟುಮಾಡಲೆತ್ನಿಸಬೇಕೆಂದೇ ಲೋರ್ಡ್ ಲಿನ್ಲಿತ್ ಗೋರವರ ಹೇಳಿಕೆಯ ಸಾರಾಂಶ. ಬೇಕಾಗಿದ್ದರೆ ವೈಸರಾಯರು ಇನ್ನೂ ಸ್ವಲ್ಪ ವಿಳಂಬಿಸಿ 52ರ ಬದಲಿಗೆ 520ಮಂದಿಗೆ ಭೇಟಿಕೊಟ್ಟು ಭಿನ್ನತೆಯನ್ನು ಮತ್ತಷ್ಟು ಹೆಚ್ಚಿಸಲು ಸಾಧ್ಯವಿತ್ತು. ವಿದೇಶೀಯರ ಅಧಿಕಾರವಿರುವನಕ ಅವರ ಕಟಾಕ್ಷ ಮತ್ತು ಆಶ್ರಯ ಪಡೆದು ತಮ್ಮ ಸ್ವಾರ್ಥ ಸಾಧಿಸಲು ಹಾತೊರೆಯುವ ದಾಸ್ಯ ಮನೋವೃತ್ತಿಯ ಜನರು ಸದಾ ಇದ್ದೇ ಇರುತ್ತಾರೆ. ಯುದ್ಧ ಮುಗಿದನಂತರ ಕರೆಯಲ್ಪಡುವ ಪರಿಷತ್ತಿನ ಅವಸ್ಥೆಯಾಗುವುದಾದರೂ ಹಿಂದಿನ ರೌಂಡ್ ಟೇಬ್ಲ್ ಪರಿಷತ್ತಿನಂತೆಯೇ. ಪದ್ಧತಿಯಂತೆ ಬ್ರಿಟಿಷರ ಭೇದನೀತಿಯು ಮತ್ತು ಸಾಮ್ರಾಜ್ಯ ಸ್ವಾರ್ಥಸಾಧನೆಯ ಮನೋವೃತ್ತಿಯು ವೈಸರಾಯರ ಭಾಷಣದಲ್ಲಿ ಒಡೆದು ಕಾಣುತ್ತಿದೆ. ಬ್ರಿಟಿಷ್ ಸರಕಾರದ ಮುತ್ಸದ್ದಿತನದ ದಿವಾಳಿಗಿರಿಯ ದ್ಯೋತಕವಾಗಿರುವ ಈ ನಿರೂಪಣೆಯು ನಿಜವಾದ ದೇಶಾಭಿಮಾನಿ ಹಿಂದೀಯರಲ್ಲೆಲ್ಲಾ ತೀವ್ರ ನಿರಾಶೆಯನ್ನುಂಟುಮಾಡಿದೆ.

ಹಾಡಿದ್ದೇ ಹಾಡು

ಇದೇ ತಾ. 18ರಲ್ಲು ಹಿಂದೀ ಪ್ರಶ್ನೆಯ ಕುರಿತು ಬ್ರಿಟಿಷ್ ಸರಕಾರವು ಇಂಗ್ಲೆಂಡಿನಲ್ಲಿ 'ವೈಟ್ ಪೇಪ'ರೊಂದನ್ನು ಪ್ರಕಟಿಸಿ ಇಂಡಿಯಾ ಸೆಕ್ರೆಟರಿಗಳು ಲೋರ್ಡ್ಸ್ ಸಭೆಯಲ್ಲಿ, ವೈಸರಾಯರ ನಿರೂಪಣೆಯನ್ನೇ ಪ್ರತಿಧ್ವನಿಸಿ ಹೇಳಿಕೆಯೊಂದನ್ನಿತ್ತಿರುವರು. ಅತಿ ಹೆಚ್ಚಿನ ಜನಸಂಖ್ಯೆಯ ಬೆಂಬಲ ಪಡೆದಿರುವ ಅತ್ಯಂತ ಪ್ರಭಾವಶಾಲಿ ಸಂಸ್ಥೆಯು ಕಾಂಗ್ರೆಸೆಂಬುದನ್ನು ಲೋರ್ಡ್ ಜೆಟ್ಲೆಂಡರೊಪ್ಪುತ್ತಾರೆ. ಮಹಾತ್ಮ ಗಾಂಧಿಯವರ ವ್ಯಕ್ತಿತ್ವದ ಕುರಿತು ಬಹಳ ಮಾನ್ಯತೆ ತೋರಿಸಿರುತ್ತಾರೆ ಆದರೆ ಕಾಂಗ್ರೆಸಿನವರು ಮಹಾತ್ಮ ಗಾಂಧಿಯವರ ಕೇಳಿಕೆಯ ಪ್ರಶ್ನೆ ಬರುವಾಗ, ಇತರ ಪಕ್ಷಗಳ ಮತ್ತು ಸಮಾಜಗಳ ಸುರಕ್ಷಿತತೆಗಾಗಿ ಬ್ರಿಟಿಷ್ ಸರಕಾರವು ಹಿಂದೂದೇಶದ ಮೇಲೆ ಶಾಶ್ವತವಾಗಿ ಅಧಿಕಾರ ನಡಿಸಬೇಕೆಂಬ ಮನೋವೃತ್ತಿಯನ್ನು ತೋರಗೊಡವಿರುತ್ತಾರೆ. ಯಾವ ಜಾತಿ ಮತ್ತು ಪಕ್ಷಕ್ಕೆ ಸೇರಿದ ಹಿಂದೀಯರಾದರೂ ಮಾತೃಭೂಮಿಯ ಪ್ರೇಮದೆರಕದಿಂದ ಒಂದಾಗಿರುವರೆಂಬುದನ್ನು ಇಂಡಿಯಾ ಸೆಕ್ರೆಟರಿಗಳು ಮರೆತಂತಿದೆ. ಅವರು ಸೂಚಿಸುವಂತೆ ರಚಿಸಲ್ಪಡುವ ವೈಸರಾಯರ ಸಲಹೆಗಾರ ಸಂಗಡವೆಂಬುದು ಪುನಃ ವೈಷಮ್ಯ ಮತ್ತು ಕಚ್ಚಾಟದ ಬೀಜವಾಗಿ ಪರಿಗಣಿಸದಿರಲಾರದು. ಕಾಂಗ್ರೆಸಿನ ಕೇಳಿಕೆಯಿಂದ ಯುದ್ಧಾರಂಭದಲ್ಲೇ ಬ್ರಿಟಿಷರ ನಿಜವೇಷವು ಹೊರಬೀಳುವಂತಾಗಿದೆ. ಪೋಲೆಂಡಿನ ಸ್ವಾತಂತ್ರ್ಯದ ನೆವನದಿಂದ ಅವರು ಪ್ರಚಂಡ ಲೋಕಯುದ್ಧವನ್ನಾರಂಭಿಸಿರುವುದು ಯುರೋಪಿನಲ್ಲಿ ತಮ್ಮ ಪ್ರಭಾವವನ್ನು ನೆಲೆಗೊಳಿಸುವುದಕ್ಕಾಗಿ ತಮ್ಮ ಸಾಮ್ರಾಜ್ಯ ಬಲವನ್ನು ಸ್ಥಿರಪಡಿಸುವುದಕ್ಕಾಗಿ ತಮ್ಮ ಸ್ವಾರ್ಥ ಸಾಧನೆಗೆ ಅಡ್ಡವಾಗಿ ಬಂದಿರುವ ಗಂಡಾಂತರವನ್ನು ನಿವಾರಿಸುವುದಕ್ಕಾಗಿ. ಹೊರತು ಲೋಕದ ನವ ವ್ಯವಸ್ಥೆ, ಪ್ರಜಾ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಗಾಗಿಯಲ್ಲ. ಇಂತಹ ಯುದ್ಧದಲ್ಲಿ ಹಿಂದೂದೇಶವು ಯಾಕೆ ಭಾಗವಹಿಸಬೇಕೆಂಬ ಪ್ರಶ್ನೆಯು ಹಿಂದೀಯರಲ್ಲುಂಟಾಗುವುದು ಸ್ವಾಭಾವಿಕ. ಅವರ ಸುರಕ್ಷಿತತೆಗೆ ಅಪಾಯವುಂಟಾಗಿರುವುದೆಂಬ ಸುಳ್ಳು ಕೂಗಿನಿಂದ ಯಾರೂ ವಂಚಿತರಾಗಲಾರರು. ಬ್ರಿಟಿಷ್ ಸಾಮ್ರಾಜ್ಯದ ಬೆಂಬಲಕ್ಕೆ ನಿಂತು ಯುದ್ಧದಲ್ಲಿ ಭಾಗವಹಿಸುವುದರಿಂದಲೇ ಹಿಂದೂದೇಶಕ್ಕೆ ಅಪಾಯದ ಸಂಭವ ಹೆಚ್ಚು. ಕಾಂಗ್ರೆಸಿನ ಧೋರಣೆಯಂತೂ ಹರಿಪುರ ಮತ್ತು ತ್ರಿಪುರಿಗಳಲ್ಲೇ ಸ್ಪಷ್ಟಗೊಳಿಸಲ್ಪಟ್ಟಿದೆ ಸಾಮ್ರಾಜ್ಯ ಶಾಹಿಯ ಸ್ವಾರ್ಥ ಸಾಧನೆಯ ಯುದ್ಧದಲ್ಲಿ ಅದೆಂದಿಗೂ ಭಾಗವಹಿಸಲಾರದು. ಹಾಡಿದ್ದನ್ನೇ ಹಾಡುವ ಇಂಡಿಯಾ ಸೆಕ್ರೆಟರಿಗಳಂತಹ ಅಧಿಕಾರಿಗಳ ಭಾಷಣವು ಹಿಂದೀಯರಲ್ಲಿ ಒಂದಿಷ್ಟಾದರೂ ಉತ್ಸಾಹವನ್ನುಂಟುಮಾಡಲಾರದು

ಯಾವುದಕ್ಕಾಗಿ ಯುದ್ಧ?

ಯಾವ ಉದ್ದೇಶದಿಂದ ಇಂಗ್ಲೆಂಡೀಗ ಯುದ್ಧಕ್ಕೆ ತೊಡಗಿರುವುದು? ಯಾವ ದೇಶವನ್ನಾದರೂ ವಶಪಡಿಸಿ ಅಧಿಕಾರ ವ್ಯಾಪಿಸಿಕೊಳ್ಳಲಿಕ್ಕಲ್ಲೆಂದು ಮಿ. ಚೇಂಬರ್ಲೇನರು ಉದ್ಘೋಷಿಸಿರುತ್ತಾರೆ. ಹಾಗಾದರೆ ನಾಜಿಸ್ಮ್ ಮತ್ತು ಬೋಲ್ಶೆವಿಸ್ಮನ್ನು ನಾಶಪಡಿಸಿ ಬ್ರಿಟಿಷ್ ಪದ್ಧತಿಯ ರಾಜ್ಯಭಾರ ಕ್ರಮವನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಈ ಯುದ್ಧ ಹೂಡಲ್ಪಟ್ಟಿರುವುದೇ? ಹಾಗಾಗಬೇಕಾದರೆ 30 ವರ್ಷ ಹೋರಾಡಬೇಕಾದೀತು. ಇಂತಹ ಭ್ರಾಂತಿಯಿಂದೇನೂ ಫಲವಿಲ್ಲ. ಈಗಿನ ಹೋರಾಟವನ್ನೊಮ್ಮೆ ನಿಲ್ಲಿಸಿ ಹಿಟ್ಲರ್ ಮತ್ತು ಸ್ಟೇಲಿನರನ್ನು ಆಮಂತ್ರಿಸಿ ಪರಿಷತ್ತೊಂದನ್ನು ಕರೆದು ರಾಜಿ ಮಾಡಲೆತ್ನಿಸಬೇಕು. ಯಾವುದಕ್ಕಾಗಿ ತಾವು ಹೋರಾಡುವುದೆಂಬುದನ್ನು ಸ್ಪಷ್ಟವಾಗಿ ಲೋಕದ ಮುಂದಿರಿಸಿ ಆ ಕುರಿತು ರಾಜಿಯು ಸಾಧ್ಯವಿದೆಯೋ ಎಂದು ಪ್ರಯತ್ನ ಮಾಡಿ ನೋಡಿ ಅದು ಅಸಾಧ್ಯವಾದರೆ ಹಿಟ್ಲರರನ್ನು ತಪ್ಪಿನಲ್ಲಿ ಹಾಕಿ ಆ ನಂತರ ಬೇಕಾದರೆ ಪುನಃ ಯುದ್ಧ ಮಾಡಬಹುದೆಂದು ಮಿ. ಬೆರ್ನಾರ್ಡ್ ಶೋರವರು ಸೂಚಿಸಿರುವರು. ಮಿ ಲ್ಲೊಯ್ಡ್ ಜೋರ್ಜರೂ ಇದೇ ರೀತಿ ಅಭಿಪ್ರಾಯಪಟ್ಟಿರುವರು. ರಷ್ಯದ ವೈತ್ರಿಯನ್ನು ಗಳಿಸಲು ಮಿತ್ರರಾಷ್ಟ್ರಗಳು ಸಾಧ್ಯವಾದ ಪ್ರಯತ್ನ ನಡಿಸಬೇಕು. ಟರ್ಕಿಯ ಒಪ್ಪಂದವು ಇಂಗ್ಲೆಂಡಿನ ದೊಡ್ಡದಾದೊಂದು ರಾಜ ನೈತಿಕ ವಿಜಯ. ರಷ್ಯದೊಡನೆಯೂ ಸ್ನೇಹಾಚಾರದಿಂದಿರುವ ಟರ್ಕಿಯ ಮೂಲಕ ಸೋವಿಯೆಟ್ ಸರಕಾರದ ಒಲವನ್ನು ಪಡೆಯಲೆತ್ನಿಸಬೇಕು. ಒಂದೊಮ್ಮೆ ಯುದ್ಧ ನಿಲ್ಲಿಸಿ ಹಿಟ್ಲರರನ್ನು ಆಮಂತ್ರಿಸಿ ಪರಿಷತ್ತು ಕರೆಯಬೇಕು ಆ ನಂತರ ಪುನಃ ಯುದ್ಧವಾದ ಪಕ್ಷದಲ್ಲಿ ಮಿತ್ರರಾಷ್ಟ್ರಗಳ ಕಡೆಗೆ ಲೋಕದ ಸಹಾನುಭೂತಿ ಮತ್ತು ಬೆಂಬಲವು ಮತ್ತಷ್ಟು ದೊರೆಯುವಂತಾಗುವುದೆಂದೇ ಲ್ಲೊಯಿಡ್ ಜೋರ್ಜರ ಸಲಹೆ. ಇದಕ್ಕೆ ಬ್ರಿಟಿಷ್ ಸರಕಾರವು ಕಿವಿಗೊಡುವ ಸಂಭವ ತೋರುವುದಿಲ್ಲ.

WHAT MAKES A MAN RICH?

Luck?	- -	Very rarely.
Inheritance?	-	Not often.
Speculation?	Once in	a blue moon
Gambling? -	-	Never.
Hard Work?	-	Very Often.
Hard work and Thrift	-	Always.

RESOURCES OF A CRORE

ESTD 1906
CANARA BANK LIMITED

ಪಶ್ಚಿಮ ರಣರಂಗದ ಪರಿಸ್ಥಿತಿ.

ಟರ್ಕಿಶ್ ಒಪ್ಪಂದದ ಪರಿಣಾಮ.

ನಾಝಿ ಸೋವಿಯೆಟ್ ಮೈತ್ರಿಯು ದೀರ್ಘ ಕಾಲ ಬಾಳುವುದೇ ?

ಯುದ್ಧವು ದೀರ್ಘ ಕಾಲ ನಡಿಯುವುದೇ?

ಮಳೆ ಮತ್ತು ಹವಾಗುಣದ ನಿಮಿತ್ತ ಪಶ್ಚಿಮ ರಣರಂಗದಲ್ಲಿ ದೊಡ್ಡ ಯುದ್ಧವೇನೂ ನಡೆದಿರುವುದಿಲ್ಲ. ಆದರೆ ಹಿಟ್ಲರರು ಇನ್ನು ಹೆಚ್ಚು ದಿನ ಸುಮ್ಮನಿರುವಹಾಗಿಲ್ಲ ಒಂದು ಮಿಲ್ಯ ಸೇನೆಯನ್ನಾದರೂ ಬಲಿಗೊಟ್ಟು ಫ್ರೆಂಚರ ಮೆಗಿನೋಟ್ ಕೋಟೆಯನ್ನು ಮುರಿಯುವ ನಿರ್ಧಾರವನ್ನವರು ಮಾಡಿರುವರೆಂದು ತಿಳಿದು ಬಂದಿದೆ ಅದಕ್ಕೆ ಬೇಕಾದ ಸಿದ್ಧತೆಯು ಭರದಿಂದ ನಡೆಯುತ್ತಿದೆ ಜರ್ಮನ್ ಪ್ರದೇಶವನ್ನಾಕ್ರಮಿಸಿದ್ದ ಫ್ರಂಚ್ ಸೇನೆಯೆಲ್ಲಾ ಹಿಂದಕ್ಕೋಡಿಸಲ್ಪಟ್ಟಿರುವುದು. ಯುದ್ಧದ ಪ್ರಥಮ ಪರಿಚ್ಛೇದವು ಕೊನೆಗೊಂಡಿದೆ ೬೦ ವೈರಿ ವಿಮಾನಗಳು ನಾಶಗೊಳಿಸಲ್ಪಟ್ಟವೆ ಯೆಂಬರ್ಲಿನಿನ ಸುದ್ದಿ. ಆದರೆ ಉದ್ದೇಶಪೂರ್ವಕವಾಗಿಯೇ ಫ್ರೆಂಚ್ ಸೈನಿಕರು ಹಿಂದೆ ಸರಿದಿರುತ್ತಾರೆಂದು ಪೆಂಸಿನ ಸುದ್ದಿ ವ್ಯರ್ಥ ಪ್ರಾಣಹಾನಿಯಾಗದಂತೆ ಫ್ರೆಂಚ್ ಸೇನಾನಾಯಕರು ಬಹಳ ಜಾಗ್ರತೆಯಿಂದಿದ್ದಾರೆ 1914ರ ಮಹಾಯುದ್ಧದಿಂದ ಅಮೂಲ್ಯ ಪಾಠಕಲಿತಿದ್ದಾರೆ ಬ್ರಿಟಿಷ್ ಮತ್ತು ಫ್ರೆಂಚ್ ವಿಮಾನಗಳು ಜರ್ಮನ್ ಪ್ರದೇಶದ ಮೇಲೆ ಯುದ್ಧಪ್ರಕಾರಹಾರಾಡಿ ಪರೀಕ್ಷಿಸುವ ಕೆಲಸ ನಡಿಸುತ್ತಿವೆ ಬ್ರಿಟಿಷ್ ನೌಕಾ ನಿಲಯಗಳ ಮೇಲೆ ಧಾಳಿನಡಿಸಿ ಹಾವಳಿಮಾಡುವ ಸಾಹಸ ಮಾಡುತ್ತಿವೆ. ಸ್ಕೋಟ್‌ಲೆಂಡಿನ ಬಳಿ ಎರಡು ಸಲ ನಡಿಸಲ್ಪಟ್ಟ ಧಾಳಿಯಿಂದ ಹೆಚ್ಚಿನ ಹಾವಳಿಯೇನೂ ಆಗಲಿಲ್ಲ. ಬ್ರಿಟಿಷ್ ಹಡಗುಗಳು ಸಬ್ ಮೆರಿನುಗಳನ್ನು ಹುಡುಕಿ ನಾಶಮಾಡುವ ಕೆಲಸವನ್ನು ಎಡೆಬಿಡದೆ ನಡಿಸುತ್ತಿವೆ. ಇಷ್ಟರವರೆಗೆ ಒಟ್ಟು ೩೨ರ ವರೆಗೆ ಜರ್ಮನ್ ಸಬ್ ಮೆರೀನುಗಳ ಮುಳುಗಿಸಲ್ಪಟ್ಟಿರುವವೆಂದು ತಿಳಿದು ಬಂದಿದೆ

ನಾಝಿಸ್ಮ್ ಪರಾಜಿತವಾದರೆ?

ರಷ್ಯ ಮತ್ತು ಜರ್ಮನಿಗಳೊಳಗೆ ದಿನೇ ದಿನೇ ನಿಕಟ ಸಂಬಂಧ ಬೆಳೆಯುತ್ತಿರುವಂತಿದೆ ರಷ್ಯವು ಜರ್ಮನಿಗೆ ಸಬ್‌ಮೆರೀನುಗಳನ್ನೊದಗಿಸುವುದೆಂದು ತಿಳಿದುಬಂದಿದೆ. ಇದ್ದಲು ಮತ್ತು ಚಿನ್ನವನ್ನು ರಷ್ಯವು ಜರ್ಮನಿಗೆ ಇಷ್ಟರಲ್ಲೇ ಕಳುಹಿಸಿ ಸಹಾಯವಮಾಡಿದೆ. ಹಿಟ್ಲರರು ಈಗ ಹೆಚ್ಚಾಗಿ ಸೋವಿಯೆಟ್ ಸರಕಾರದ ಮೇಲೆ ಅವಲಂಬಿಸಹತ್ತಿದ್ದಾರೆ ಈ ಯುದ್ಧದಲ್ಲಿ ನಾಝಿಸ್ಮ್ ಜಯಶೀಲವಾದಲ್ಲಿ ಯುರೋಪಿನ ಪರಿಸ್ಥಿತಿಯು ಏನಾಗುವುದೆಂದು ಊಹಿಸುವುದೇನೂ ಕಷ್ಟವಲ್ಲ ಆದರೆ ಅದು ಪರಾಜಿತವಾದರೆ? ಜರ್ಮನಿಯಲ್ಲಿ ನಾಝಿಸ್ಮ್ ಪ್ರಾಬಲ್ಯಕ್ಕೆ ಬರುವಮೊದಲು ಕಮ್ಯೂನಿಸ್ಮ್ ಪ್ರಬಲವಾಗಿ ನೆಲೆಗೊಂಡಿತ್ತು. ಅದೀಗ ನೆಲದಡಿ ಸೇರಿರುವುದೇ ಹೊರತು ಸತ್ತು ಹೋಗಿಲ್ಲ ಅದು ಪುನಃ ತಲೆಯೆತ್ತಿ ಮಿಲ್ಯಾಂತರ ಜರ್ಮನರು ಪುನಃ ಮಾರ್ಕ್ಸ್‌ವಾದಿಗಳಾಗಬಹುದು ಸ್ಟೇಲಿನರ ಅದೃಷ್ಟವು ಈಗ ಬಹಳ ಉನ್ನತ ಸ್ಥಾನದಲ್ಲಿರುವಾಗ ಜರ್ಮನಿಯು ಎಲ್ಲಿಯ ಪೋಲಂಡಿನಲ್ಲೇ ಸೋವಿಯೆಟ್ ಸಮಾಜರಚನೆ ಮತ್ತು ರಾಜ್ಯಭಾರವು ಸ್ಥಾಪಿತವಾಗಿರುವಾಗ ಯುದ್ಧ ಪರಾಜಿತ ಜರ್ಮನಿಯು ರಷ್ಯದ ಹಾದಿ ಹಿಡಿದರೆ ಯುರೋಪಿನಲ್ಲಿ ರಷ್ಯದ ಪ್ರಭಾವವು ಮತ್ತಷ್ಟು ಬೆಳೆಯುವಂತಾಗದಿರುವುದೇ?

ಬಾಲ್ಟಿಕ್ ರಾಜ್ಯಗಳನ್ನು ರಷ್ಯವು ಬಹುಮಟ್ಟಿಗೆ ತನ್ನ ಅಧೀನಪಡಿಸಿಕೊಂಡಿರುವುದು. ಬಾಲ್ಕನ್ ಪ್ರದೇಶದ ಮೇಲಿನ ಅದರ ವರ್ಚಸ್ಸಿಗೆ ಟರ್ಕಿಯು ಮಿತ್ರ ರಾಷ್ಟ್ರಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಯು ತೊಡಕಾಗಿರುವುದು. ಆದರೆ ಒಳಗಿಂದೊಳಗೆ ಟರ್ಕಿ ಮತ್ತು ರಷ್ಯಗಳೊಳಗೆ ಏನು ಮಾತುಕತೆ ನಡೆದಿರುವುದೆಂದು ತಿಳಿದಿಲ್ಲ. ಒಂದುವೇಳೆ ರಷ್ಯವು, ರುಮೇನಿಯಕ್ಕೆ ಸೇರಿದ ಬೆಸ್ಸರಬಿಯವನ್ನು ವಶಪಡಿಸಿಕೊಂಡರೆ, ಬ್ರಿಟನ್, ಫ್ರಾನ್ಸ್ ಮತ್ತು ಟರ್ಕಿಗಳು ರುಮೇನಿಯದ ಸಹಾಯಕ್ಕೆ ಹೋಗುವವೆ? ಮಿತ್ರ ರಾಷ್ಟ್ರಗಳು ರಷ್ಯದೊಡನೆ ಯುದ್ಧ ಹೂಡಿದರೆ ಟರ್ಕಿಯ ಧೋರಣೆಯೇನು? ಅದು ಮೋಂಟ್ರಿಯೋ ಒಪ್ಪಂದದ ಪ್ರಮಾಣದಲ್ಲಿ ಕರಿಸಮುದ್ರವನ್ನು, ಹೋರಾಟದಲ್ಲಿ ತೊಡಗಿರುವ ರಾಷ್ಟ್ರಗಳಿಗೆ ತೆರೆದು ಹಾಕಿ ಸುಮ್ಮನೆ ತಟಸ್ಥವಾಗಿರುತ್ತದೇ? ಯಾವಾಗಲೂ ಬಿಕ್ಕಟ್ಟಿಗೆ ಕಾರಣವಾಗಿರುವ ಯುರೋಪಿನ ಬಾಲ್ಕನ್ ಪ್ರದೇಶದ ಪ್ರಶ್ನೆಯು ಬಹಳ ಕಿಕ್ಕಿರಿದಾಗಿದೆ.

ತನ್ನ ನೆರೆಗೇನೇ ಈಗ ರಷ್ಯವು ತನ್ನ ರಾಜ್ಯಭಾರವನ್ನು ವ್ಯಾಪಿಸಿರುವುದರಿಂದ ಭೂಮಿಯ ಮೇಲೆ ಹಕ್ಕಿಲ್ಲದ 3 ಮಿಲ್ಯ ಬೇಸಾಯಗಾರರಿಗೆ ಎಲ್ಲಿ ಬೋಲ್ಶೆವಿಕ್ ತತ್ತ್ವದ ಗಾಳಿ ತಾಗಿಬಿಡುವುದೋ ಎಂಬ ಹೆದರಿಕೆಯು ಹಂಗೇರಿಗುಂಟಾಗಿದೆ ಹಂಗೇರಿಯು ಇಷ್ಟರವರೆಗೆ ಸೋವಿಯೆಟ್ ಸರಕಾರದ ಬದ್ಧ ವಿರೋಧಿಯಾಗಿದ್ದಿತು. ಆದರೆ ಇನ್ನು ಮುಂದೆ ಸ್ಟೇಲಿನರು ಅದಕ್ಕೆ ತಕ್ಕ ಶಾಸ್ತಿ ಮಾಡದಿರಲಾರರು ಹಂಗೇರಿಯು ಭರದಿಂದ ಸೇನಾ ಸಿದ್ಧತೆಮಾಡುತ್ತಿದೆ. ಆದರೆ ಅದು ರಷ್ಯವನ್ನೆದುರಿಸಲೆಳೆದೆಗೊಂಡರೆ ಪೋಲಂಡಿಗಿಂತಲೂ ಕೆಟ್ಟ ಪಾಡಿಗೊಳಗಾಗಬೇಕಾದೀತು. ರುಮೇನಿಯವು ಇಂಗ್ಲೆಂಡು ಮತ್ತು ಫ್ರಾನ್ಸುಗಳ ಮೇಲೆ ಸುರಕ್ಷಿತತೆಯ ಒಪ್ಪಂದಮಾಡಿಕೊಂಡಿದೆ. ಆದರೆ ರಷ್ಯವು ರುಮೇನಿಯದ ಮೇಲೆ ಬಿದ್ದರೆ ಮಿತ್ರ ರಾಷ್ಟ್ರಗಳು ಅದಕ್ಕೆ ಸಹಾಯಮಾಡುವುದಾದರೂ ಹೇಗೆ? ರಷ್ಯಕ್ಕೂ ಮಿತ್ರ ರಾಷ್ಟ್ರಗಳಿಗೂ ಯುದ್ಧ ಆರಂಭವಾದರೆ ರುಮೇನಿಯದ ಗತಿಯೇನು? ರಷ್ಯದೊಡನೆ ಯುದ್ಧ ಹೂಡದೆ ಪೋಲಂಡಿನ ಸ್ವಾತಂತ್ರ್ಯ ರಕ್ಷಣೆಯಾಗುವುದಾದರೂ ಹೇಗೆ? ಜರ್ಮನಿಯು ರಷ್ಯವನ್ನು ಯುದ್ಧಕ್ಕೆಳೆಯಲೆತ್ನಿಸುತ್ತಿದೆ. ಆದರೆ ಮಿತ್ರ ರಾಷ್ಟ್ರಗಳು ಬಹಳ ಜಾಗರೂಕರಾಗಿದ್ದಾರೆ ರಷ್ಯವನ್ನು ಕೆಣಕದಂತೆ ಜರ್ಮನಿಯ ಅಧಿಕಾರವು ಕರಿ ಸಮುದ್ರ ಪ್ರದೇಶದ ಮೇಲೆ ವ್ಯಾಪಿಸದಂತೆ ರಷ್ಯವು ತಡೆಹಾಕಿದುದರಿಂದ ಯುಗೊಸ್ಲೋವಿಯವು ಸಂತೋಷಗೊಂಡಿದೆ. ಆದರೆ ಅದು ರಷ್ಯದ ಸಖ್ಯ ಬೆಳೆಸುವುದು ಸಂದೇಹಕರ 5ರಿಂದ 6 ಮಿಲ್ಯದ ವರೆಗಣ ಸೇನೆಯನ್ನು ಯುಗೊಸ್ಲೋವಿಯ ಸಿದ್ಧಮಾಡಿಕೊಂಡಿದೆ

(೭ನೇ ಪುಟಕ್ಕೆ ಮುಂದರಿಯುವುದು)

ಟರ್ಕಿಯ ಒಪ್ಪಂದದ ಪರಿಣಾಮ

ನಿರೀಕ್ಷಿಸಲ್ಪಟ್ಟಂತೆ ಟರ್ಕಿ ಮತ್ತು ಸೋವಿಯಟ್ ರಷ್ಯಗಳೊಳಗೆ ಒಪ್ಪಂದವಾಗುವ ಬದಲಿಗೆ ಇದೇ ತಾ ೧೯ರಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ಟರ್ಕಿಗಳೊಳಗೆ ಪರಸ್ಪರ ಸಹಾಯದ ಒಪ್ಪಂದವಾಗಿದೆ ಟರ್ಕಿ ಮತ್ತು ರಷ್ಯಗಳೊಳಗೆ ಒಪ್ಪಂದವಾಗದಿರಲು ಜರ್ಮನಿಯೇ ಕಾರಣವೆಂದು ನಂಬಲಾಗಿದೆ ಕರಿ ಸಮುದ್ರವು ಸೋವಿಯೆಟ್ ಸರಕಾರದ ಕೊಳದಂತಾಗಿ, ಬಾಲ್ಟಿಕ್ ರಾಜ್ಯಗಳಂತೆ ಬಾಲ್ಕನ್ ರಾಷ್ಟ್ರಗಳ ಮೇಲೂ ರಷ್ಯದ ಪ್ರಭಾವವು ವ್ಯಾಪಿಸುವಂತೆ ಮಾಡಿ ಮಿತ್ರರಾಷ್ಟ್ರಗಳ ಬೇಳೆಯೇನೂ ಈ ಭಾಗದಲ್ಲಿ ಬೇಯದಂತೆ ತಡೆ ಹಾಕುವುದೇ ಜರ್ಮನಿಯ ಉದ್ದೇಶವಿದ್ದಿತು. ಇದರಿಂದ ಇಟೆಲಿಯೂ ತಟಸ್ಥವಾಗಿದ್ದು ಒಳಗಿಂದೊಳಗೆ ಜರ್ಮನಿಗೆ ಸಹಾಯವೀಯುವಂತಾಗುತ್ತಿತ್ತು ಆದರೆ ಜರ್ಮನಿಯ ಪ್ರೇರಣೆಯಿಂದ ಸೋವಿಯಟ್ ರಷ್ಯವು ಮಾಡಿದ ಈ ಸೂಚನೆಗಳನ್ನು ಟರ್ಕಿಯು ಪ್ರಬಲವಾಗಿ ವಿರೋಧಿಸಿತು. ಮಾಸ್ಕೋದಲ್ಲಿದ್ದ ಕೂಡಲೇ ಮಿತ್ರರಾಷ್ಟ್ರಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಬಿಟ್ಟಿತು. ಈ ಒಡಂಬಡಿಕೆ ಪ್ರಕಾರ ಟರ್ಕಿಯ ಮೇಲೇನಾದರೂ ಆಕ್ರಮಣ ನಡೆದ ಪಕ್ಷದಲ್ಲಿ ಇಂಗ್ಲೆಂಡು ಮತ್ತು ಫ್ರಾನ್ಸುಗಳು ಸಹಾಯ ಮಾಡತಕ್ಕದ್ದು ಈ ಮೂರು ರಾಷ್ಟ್ರಗಳು ಸುರಕ್ಷಿತತೆಯ ಒಪ್ಪಂದ ಮಾಡಿಕೊಂಡಿರುವ ಇನ್ನೊಂದು ರಾಷ್ಟ್ರದ ಮೇಲೆ ಆಕ್ರಮಣ ನಡೆದಾಗ ಕೂಡಾ ಅವು ಒಟ್ಟಾಗಿ ನಡೆಯುವಂತೆ ಮಾತುಕತೆ ನಡೆಯಬೇಕು. ಇದರಿಂದ ಟರ್ಕಿ ಮಾತ್ರವಲ್ಲದೆ ಅದರೊಂದಿಗೆ ಒಪ್ಪಂದ ಮಾಡಿಕೊಂಡಿರುವ ರುಮೇನಿಯ, ಗ್ರೀಸ್ ಮತ್ತು ಯುಗೊಸ್ಲೋವಿಯಗಳಿಗೂ ಒಂದು ರೀತಿಯ ಸುರಕ್ಷಿತತೆ ದೊರೆವಂತಾಗಿರುವುದು. ಈ ಒಪ್ಪಂದಕ್ಕೆ ರಷ್ಯದ ಅಸಮ್ಮತಿ ಇರುವಂತಿಲ್ಲ ಯಾಕಂದರೆ ಟರ್ಕಿ ಮತ್ತು ಸೋವಿಯೆಟ್ ಸರಕಾರಗಳೊಳಗಣ ಮೈತ್ರಿಯು ಯಥಾಪ್ರಕಾರ ಉಳಿದಿರುತ್ತದೆ. ಇಟೆಲಿಯೂ ಇನ್ನು ಮುಂದೆ ಹೆಚ್ಚೆಚ್ಚಾಗಿ ಮಿತ್ರರಾಷ್ಟ್ರಗಳ ಕಡೆಗೊಲಿಯಲೇ ಬೇಕಾಗದ ಈ ಒಪ್ಪಂದದಿಂದ ಜರ್ಮನಿಯ ರಾಜತಂತ್ರವು ದೊಡ್ಡ ಅಪಜಯ ಪಡೆದಿದೆ. ಹಿಟ್ಲರರು ಇದರಿಂದ ತಳಮಳಗೊಂಡು, ಟರ್ಕಿಯ ಮತ್ತು ರಷ್ಯದ ತನ್ನ ರಾಯಭಾರಿಗಳನ್ನು ಕರೆದು ಆಲೋಚಿಸುತ್ತಿದ್ದಾರೆ

GET RICH
AND
PROSPEROUS
through Simple
Means upheld and
pursued by
Millions. . . . . !
WRITE NOW WITH
STAMP —
K. S. Row,
Worli, BOMBAY

Hark:-
Only a few pages more are available
FOR
ADVERTISEMENT
IN
THULUNAD
TILAKA PANCHANGA
1940
Apply early to: MANAGER
THULUNAD PRESS, UDIPI.
(PROPS GENERAL SUPPLIES, LIMITED)

ಚಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜೈನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಲ್ಯಾಬ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು
ಅಮೃತಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಸೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ ರೋಡ್, ಉಡುಪಿ

Degrees Books Medicines.
Free H L.M S, H M B H M D etc Free Homeo Ayur Unani Naturo degrees by post also —Practioners also get soon Homeo Materiamedica, Rs 5 Homeo Practice book Rs 4 Insanity Cure Pills Rs. 10 Enclose 2 annas stamp —
Principal Indian Homeopathic Institute and Society (Govt Regd)
P O MAHUVA (Kathiawar Dt. India

ಅಲ್ಪ ಸಂಖ್ಯಾಕರ ಅಪಾಯದ ಸುಳ್ಳು ಕೂಗು

ಇಡೀ ರಾಷ್ಟ್ರದ ಪರವಾಗಿ ಮಾತಾಡಲು ಹಕ್ಕುಳ್ಳ ಸಂಸ್ಥೆ ಕಾಂಗ್ರೆಸು.

ಬ್ರಿಟಿಷ್ ಸರಕಾರದ ವಿಷಾದಕರ ಧೋರಣೆ.

'ಕಾಲ್ಪನಿಕ ಬಹುಪಕ್ಷ' ಎಂಬ ಶಿರೋನಾಮೆಯಿಂದ ಗಾಂಧಿಜಿಯವರು ಹರಿಜನ ಪತ್ರಿಕೆಯಲ್ಲಿ ಈ ಕೆಳಗಣ ಲೇಖನ ಬರೆದಿರುವರು. ಕಾಂಗ್ರೆಸು ಸೂಚಿಸಿರುವ ನಿರೂಪಣೆಯನ್ನು ಮಾಡಲು ಬ್ರಿಟಿಷ್ ಸರಕಾರ ಮತ್ತು ಪತ್ರಿಕೆಗಳು ಹಿಂದೂದೇಶದ ಅಲ್ಪ ಸಂಖ್ಯಾಕರ ಪ್ರಶ್ನೆಯನ್ನು ಮುಂದೊಡ್ಡುವುದು ಚಿತ್ತವೇಧಕವಿದೆ. ಕಾಂಗ್ರೆಸಿನ ಸೂಚನೆಯ ಪ್ರಚಂಡ ಶಕ್ತಿಯ ಅನುಭವವು ಸರಕಾರಕ್ಕೆ ಆಗಿಲ್ಲವಾದ ಪಕ್ಷದಲ್ಲಿ ಅದು ನಿರೂಪಣೆಯನ್ನೀಯಲಾರದು. ಹಾಗಾದರೆ ಕಾಂಗ್ರೆಸ್ ವಾದಿಗಳೇನೂ ನಿರುತ್ಸಾಹಗೊಳ್ಳಬೇಕಾಗಿಲ್ಲ. ಅರ್ಹತೆಯು ಬಂದಾಗ ಸ್ವಾತಂತ್ರ್ಯವನ್ನು ಪಡೆದೇ ಪಡೆಯುವೆವು. ಆದರೆ ಪ್ರಕೃತದ ಪರಿಸ್ಥಿತಿಯಲ್ಲಿ ಅಲ್ಪಸಂಖ್ಯಾಕ ಪ್ರಶ್ನೆಯನ್ನು ನಮ್ಮ ಮುಖದ ಮುಂದೊಡ್ಡದಿರುವುದು ಬ್ರಿಟಿಷ್ ಸರಕಾರಕ್ಕೆ ಮತ್ತು ಮಿತ್ರರಾಷ್ಟ್ರಗಳ ಉದ್ದೇಶಕ್ಕೆ ಒಳ್ಳೇದಿತ್ತು. ಅದಕ್ಕಿಂತ ಇನ್ನೂ ಕೆಲಕಾಲ ಹಿಂದೂದೇಶವನ್ನು ತಾವು ಅಧೀನವಿರಿಸಿಕೊಳ್ಳುವೆವೆಂದು ಬ್ರಿಟಿಷರು ಯಥಾರ್ಥವಾಗಿ ಹೇಳುವುದೊಳ್ಳೇದಿತ್ತು. ಅಂತಹ ಅಪೇಕ್ಷೆಯೇನೂ ತಪ್ಪಲ್ಲ. ಹಿಂದೂದೇಶವು ಜೈಸಲ್ಪಟ್ಟ ರಾಜ್ಯ. ಗೆಲ್ಲಲ್ಪಟ್ಟವರು ಜಯಶೀಲ ಬಂಡಾಯವೆಬ್ಬಿಸದಿದ್ದರೆ ಅದು ಬಿಟ್ಟುಕೊಡಲ್ಪಡುವಂತಾಗಿಲ್ಲ. ಅಥವಾ ಗೆದ್ದವರಲ್ಲಿ ತಮ್ಮ ಕೃತ್ಯದ ಕುರಿತೇನಾದರೂ ಪಶ್ಚಾತ್ತಾಪವುಂಟಾಗಬೇಕು. ಇಲ್ಲವೆ ಅದರಿಂದ ಪ್ರತಿಫಲ ದೊರೆಯದಿರಬೇಕು. ಬ್ರಿಟಿಷರು ಯುದ್ಧದಿಂದ ಬೇಸತ್ತು, ಪ್ರಕೃತದ ಯುದ್ಧದಲ್ಲಾಗುವ ಕುಚ್ಚು ಕೊಲೆಯಿಂದ ಜಿಗುಪ್ಸೆಗೊಂಡು, ಹಿಂದೂದೇಶದ ಸಂಬಂಧವಾಗಿ ಕೂಡ ಪ್ರತಿಯೊಂದು ವಿಷಯದಲ್ಲಿಯೂ ತಾವು ದೋಷರಹಿತರೆನಿಸಿಕೊಂಡು ಯುದ್ಧವನ್ನು ಆದಷ್ಟು ಬೇಗ ಕೊನೆಗೊಳಿಸಲು ಹಾರೈಸುವರೆಂದು ನಾನು ಆಶಿಸಿದ್ದೆನು. ಇನ್ನೂ ಆಶಿಸುವೆನು. ಹಿಂದೂದೇಶವನ್ನು ಬಂಧನದಲ್ಲಿಟ್ಟುಕೊಂಡಿರುವ ತನಕ ಅವರಿಗದು ಸಾಧ್ಯವಿಲ್ಲ.

ಕಾಂಗ್ರೆಸಿನ ಉದ್ದೇಶ

ಹಿಂದೂದೇಶದ ಎಲ್ಲಾ ಜನತೆಯ ಪರವಾಗಿ ಮಾತಾಡುವ ಹಕ್ಕು ಕಾಂಗ್ರೆಸಿಗಿರುವುದೆಂಬ ನನ್ನ ಪ್ರತಿಪಾದನೆಯಿಂದ ಅನೇಕರು ಸಿಟ್ಟುಗೊಂಡಿರುತ್ತಾರೆ. ಅದೇನೂ ಅಹಂಕಾರದ ವಿಡಂಬನೆಯಲ್ಲ. ಕಾಂಗ್ರೆಸಿನ ಮೂಲ ಉದ್ದೇಶದಿಂದಲೇ ಅದು ಸ್ಪಷ್ಟವಿದೆ. ಇಡೀ ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಕೆಲಸಮಾಡುವ ಸಂಸ್ಥೆ ಕಾಂಗ್ರೆಸು. ಅದು ಬಹುಮತೀಯರ ಅಥವಾ ಅಲ್ಪಮತೀಯರ ಪರವಾಗಿ ಮಾತಾಡುವುದಿಲ್ಲ. ಯಾವ ಭಿನ್ನ ಭೇದವೂ ಇಲ್ಲದೆ ಹಿಂದೀಯರೆಲ್ಲರ ಪ್ರತಿನಿಧಿತ್ವವನ್ನು ಪಡೆಯಲಿಚ್ಛಿಸುತ್ತದೆ. ಆದುದರಿಂದ ಸ್ವಾತಂತ್ರ್ಯದ ಪ್ರತಿಪಾದನೆಯನ್ನೊಪ್ಪುವ ಪಕ್ಷದಲ್ಲಿ ಕಾಂಗ್ರೆಸಿನ ವಿರೋಧಕರು ಗಣನೀಯರಲ್ಲ. ಈ ಪ್ರತಿಪಾದನೆಯನ್ನು ಸಮರ್ಥಿಸುವವರಂತೂ ಕಾಂಗ್ರೆಸಿಗೆ ಮತ್ತಷ್ಟು ಬಲವನ್ನೀಯುವರು.

ಬ್ರಿಟನು ಹಿಂದೂದೇಶವನ್ನು ಆಳಿಕೊಂಡಿರಬೇಕು. ಅದು ಪಕ್ಷ ಪ್ರತಿಪಕ್ಷಗಳೊಳಗಣ ಕಲಹವನ್ನು ಇತ್ಯರ್ಥಿಸುವ ಮಧ್ಯಸ್ಥಿಕೆ ಮಾಡಲು ಅವಶ್ಯವಾಗಿ ಬೇಕೆನ್ನುವ ಹಿಂದೀಯರನ್ನು ಲೋಕದ ಮುಂದೊಡ್ಡಿ ಇಂಗ್ಲೆಂಡು ಈ ವರೆಗೆ ಹಿಂದೂದೇಶವನ್ನು ಅಧೀನವಲ್ಲಿರಿಸಿಕೊಂಡಿರುವುದು. ಇಂತಹ ಹಿಂದೀಯರು ಯಾವಾಗಲೂ ಇದ್ದೇ ಇರುವರು. ಇಂಗ್ಲೆಂಡು ಹಿಂದೂದೇಶವನ್ನು ಬಂಧನದಲ್ಲಿರಿಸಲು ಈ ವೈಷಮ್ಯಗಳನ್ನು ಕಾರಣವಾಗಿ ಕೊಡುವುದು ನ್ಯಾಯವಾದುದೇ? ಅಥವಾ ತನ್ನ ತಪ್ಪನ್ನೀಗ ಕಂಡುಕೊಂಡು, ಅದು ತನಗೆ ಬೇಕಾದ ಸರಕಾರವನ್ನು ಸ್ಥಾಪಿಸಿಕೊಳ್ಳುವಂತೆ ಬಿಟ್ಟುಬಿಡಬೇಕೇ? ಎಂಬುದೀಗ ಪ್ರಶ್ನೆ.

ಈ ಅಲ್ಪಸಂಖ್ಯಾಕರಾದರೂ ಯಾರು? ಅವರನ್ನು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ವಿಂಗಡಿಸಬಹುದು. ಹೀಗೆ ಮುಸಲ್ಮಾನರು, (ಧಾರ್ಮಿಕ) ದೇಶೀಯ ರಾಜರುಗಳು, (ಸಾಮಾಜಿಕ) ಬ್ರಾಹ್ಮಣರು, (ಸಾಮಾಜಿಕ) ಲಿಂಗಾಯತರು, (ಸಾಮಾಜಿಕ) ಸಿಖ್ಖರು, (ಸಾಮಾಜಿಕ) ಪ್ರೊಟೆಸ್ಟೆಂಟರು ಮತ್ತು ಕೆಥೊಲಿಕರು (ಧಾರ್ಮಿಕ) ಬ್ರಾಹ್ಮಣೇತರರು, (ಸಾಮಾಜಿಕ) ಜೈನರು, (ಸಾಮಾಜಿಕ) ಜಮೀನ್ದಾರರು, (ರಾಜಕೀಯ) ಮುಸಲ್ಮಾನರಲ್ಲಿ ಶಿಯಾ ಪಂಥದವರು ಪ್ರತ್ಯೇಕವಾದ ಅಸ್ತಿತ್ವವನ್ನಾಶಿಸುವರು. ದುರ್ದೈವಿ ಹಿಂದೂಸ್ಥಾನದ ದುರದೃಷ್ಟವಶಾತ್ ಮುಸಲ್ಮಾನರಲ್ಲಿಯೂ ಬಿಕ್ಕಟ್ಟಿರುವುದು. ಕ್ರೈಸ್ತರಾದರೂ ಇದೇ ರೀತಿ. ಈ ಗೊಂದಲದಲ್ಲಿ ಬಹುಪಕ್ಷೀಯರಾದರೂ ಯಾರು? ಸಾಕಷ್ಟು ಕೂಗೆಬ್ಬಿಸಿ ಗಲಾಟೆ ಮಾಡುವ ಪ್ರತಿಯೊಂದು ತಂಡವನ್ನೂ ಅಂಗೀಕರಿಸುವುದು ಬ್ರಿಟಿಷ್ ಸರಕಾರದ ಯುಕ್ತಿಯಾಗಿದೆ. ಅಲ್ಪಸಂಖ್ಯಾಕರ ಕಾಲ್ಪನಿಕ ಚಿತ್ರವನ್ನೇನೂ ನಾನು ರೂಪಿಸಿರುವುದಿಲ್ಲ. ಜೀವನದಲ್ಲಿ ಸಹಜವಾಗಿ ಕಾಣಬರುವವವು. ನಾನು ಸೂಚಿಸಿರುವ ಎಲ್ಲಾ ತಂಡಗಳೊಂದಿಗೆ ಕಾಂಗ್ರೆಸು ಕೂಡಾ ವ್ಯವಹರಿಸಬೇಕಾಗಿ ಬಂದಿದೆ. ಅಲ್ಪಸಂಖ್ಯಾಕರ ಪಟ್ಟಿಯನ್ನು ಇನ್ನು ಎಷ್ಟು ಬೇಕಾದರೂ ಬೆಳೆಸಬಹುದು.

ಹಿಂದುಗಳು ಬಹುಸಂಖ್ಯಾಕ ಸಮಾಜವೆಂದು ಮಾತಾಡುವುದು ಈಗಣ ರೀತಿಯಾಗಿಹೋಗಿದೆ. ಆದರೆ ಹಿಂದೂಧರ್ಮವೆಂದರೇನೆಂಬುದನ್ನು ನಿಷ್ಕರ್ಷಿಸಲು ಸಾಧ್ಯವಿಲ್ಲ. ಯಾವ ರೂಪಕ್ಕಾದರೂ ಎಳೆಯಲು ಸಾಧ್ಯವಾಗುವ ಪಟ್ಟವದು. ಮುಸಲ್ಮಾನರು ಮತ್ತು ಕ್ರೈಸ್ತರಂತೆ ಹಿಂದುಗಳೆಲ್ಲರೂ ಒಂದಾಗಿರುವವರಲ್ಲ. ಹಿಂದೂದೇಶದಲ್ಲಿ ರಾಜಕೀಯ ಪಕ್ಷಗಳು ಮಾತ್ರವಲ್ಲದೆ ಬಹುಮತೀಯ ಮತ್ತು ಅಲ್ಪಮತೀಯ ಸಮಾಜಗಳೆಂದಿರಲು ಸಾಧ್ಯವೇ ಇಲ್ಲ. ಬಹುಪಕ್ಷೀಯರ ಪೀಡೆಯೆಂಬುದು ಕೇವಲ ಕಾಲ್ಪನಿಕವಾದುದು.

ಮಿ. ಜಿನ್ನರಿಗೆ ಕಾಂಗ್ರೆಸ್ ಪ್ರೆಸಿಡೆಂಟರ ಸೂಚನೆ

ಕಾಂಗ್ರೆಸ್ ಸರಕಾರಗಳ ಕುರಿತಾದ ಮುಸ್ಲಿಮ್ ಲೀಗಿನ ಸಂಕಷ್ಟಗಳ ಪ್ರಶ್ನೆಯನ್ನು ವಿಚಾರಿಸಲು ನಿಷ್ಪಕ್ಷಪಾತಿ ನ್ಯಾಯಾಧೀಶರನ್ನು ನೇಮಿಸಬಹುದೆಂದು ಕಾಂಗ್ರೆಸ್ ಪ್ರೆಸಿಡೆಂಟರು ಜನಾಬ್ ಜಿನ್ನಾ ಸಾಹೇಬರಿಗೆ ಸೂಚಿಸಿದಾಗ ಅವರು ಆ ವಿಷಯವನ್ನು ವೈಸರಾಯರ ಮುಂದಿರಿಸಿ ಆ ಕುರಿತು ಕೂಡಲೆ ವಿಚಾರಣೆ ನಡೆಸಬೇಕೆಂದು ಕೇಳಿಕೊಂಡಿರುವರೆಂದು ಉತ್ತರವಿತ್ತಿರುವರಾಗಿ ತಿಳಿಯುತ್ತೇನೆ. ಈಗ ಆ ವಿಷಯವು ಮಾನ್ಯ ವೈಸರಾಯರ ವಿಚಾರಣೆಗೊಳಪಟ್ಟಿದೆ. ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣೆಯ ಜವಾಬ್ದಾರಿಯು ವೈಸರಾಯರು ಮತ್ತು ಗವರ್ನರರದ್ದಾಗಿದೆ. ಆದುದರಿಂದ ಕಾಂಗ್ರೆಸ್ ಮಂತ್ರಿಗಳು ಆಡಳಿತ ನಡೆಸುವ ಪ್ರಾಂತಗಳಲ್ಲಿ ಮುಸಲ್ಮಾನರಿಗೇನಾದರೂ ಅನ್ಯಾಯವಾಗಿದ್ದರೆ ಆ ಕುರಿತು ವಿಚಾರಿಸಿ ಅವರ ಸಂಕಷ್ಟಗಳನ್ನು ನಿವಾರಿಸಿ ಸುರಕ್ಷಿತತೆಯನ್ನೀಯಲು ಅರ್ಹರಾದವರೆಂದರೆ ವೈಸರಾಯರೇ. ಬಾಬು ರಾಜೇಂದ್ರ ಪ್ರಸಾದರ ನ್ಯಾಯವಾದ ಸೂಚನೆಯನ್ನು ಮಿ. ಜಿನ್ನರು ನಿರಾಕರಿಸಿದುದು ದುರ್ದೈವವೇ ಸರಿ. ಅದು ಹೇಗೂ ಇರಲಿ. ಕಾಂಗ್ರೆಸ್ ಮಂತ್ರಿಗಳ ಮೇಲೆ ಮಾಡಲ್ಪಟ್ಟಿರುವ ಆರೋಪಗಳ ಕುರಿತು ವೈಸರಾಯರು ವಿಚಾರಿಸಿ ತೀರ್ಮಾನಿಸಲು ಯಾರೂ ಆಕ್ಷೇಪಿಸಲಾರರು. ಅವರು ಬೇಗನೆ ವಿಚಾರಣೆ ನಡೆಸುವರೆಂದು ನಿರೀಕ್ಷಿಸುವ. ಮುಸಲ್ಮಾನರು ಅಲ್ಪ ಸಂಖ್ಯಾಕರಾಗಿ ಪರಿಗಣಿಸಲ್ಪಟ್ಟರೂ ಪಡದಿದ್ದರೂ ಅವರ ಮತ್ತು ಇತರ ಯಾವುದೇ ಸಮಾಜದ, ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಹಕ್ಕುಬಾಧ್ಯತೆಗಳು ಪವಿತ್ರವಾಗಿ ಪರಿಗಣಿಸಲ್ಪಟ್ಟು ಸುರಕ್ಷಿತವಾಗಿರಬೇಕು. ಹಿಂದೂದೇಶದ ಸ್ವಾತಂತ್ರ್ಯದಿಂದ ಅವಕ್ಕೆ ಯಾವ ರೀತಿಯ ಹಾನಿಯೂ ಆಗಲಾರದು. ರಾಷ್ಟ್ರದ ಪ್ರತಿನಿಧಿಗಳು ಸ್ವಾತಂತ್ರ್ಯ ಶಾಸನವನ್ನು ತಯಾರಿಸುವಾಗ, ಮುಸಲ್ಮಾನರು ಮತ್ತು ಇತರ ಕಾಲ್ಪನಿಕ ಅಲ್ಲವೆ ನಿಜವಾದ ಅಲ್ಪ ಸಂಖ್ಯಾಕರಿಗೆ ಅದರಲ್ಲಿ ಮುಖ್ಯಸ್ಥಾನವಿದ್ದು ಅವರಿಗೆ ಇಂದಿಗಿಂತಲೂ ಹೆಚ್ಚಿನ ರಕ್ಷಣೆ ದೊರೆಯದಿರಲಾರದು.

ಒಕ್ಕನೆ ಬ್ರಿಟಿಷರು ಹಿಂದೂದೇಶವನ್ನು ಬಿಟ್ಟುಹೋಗಿ, ಬೇರೆ ಹೊರಗಣ ಆಕ್ರಮಣವೇನೂ ನಡೆಯದಿದ್ದ ಪಕ್ಷದಲ್ಲಿ ಹಿಂದೂದೇಶದ ಪರಿಸ್ಥಿತಿಯೇನಾಗಬಹುದೆಂದು ಒಂದು ಕ್ಷಣ ಆಲೋಚಿಸುವ. ಪಂಜಾಬಿಗಳು, ಅವರು ಮುಸಲ್ಮಾನರಾಗಲಿ, ಸಿಖ್ಖರಾಗಲಿ, ಇನ್ನಾರೇ ಆಗಲಿ, ಹಿಂದೂ ದೇಶ

THE

BOMBAY LIFE ASSURANCE

Company Limited.

[ESTD. 1908]

COMPARE

Your Life Assurance with any other property you possess what is its guaranteed value

If you live–today–a few years more–when you are old?

If you die–to your family and dependants?

REMEMBER THAT If you live, Life Insurance takes the place of your professional income during your old age.

If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,

BOMBAY LIFE BUILDING,

Sir Lalubhai Samaldas Road,

GANDHI NAGAR, UDIPI.

Post Box No. 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ದೇಶದ ಮೇಲೆ ಧಾಳಿ ಇಡುವರು ಗೂರ್ಖರೂ ಪಂಜಾಬಿಗಳೊಂದಿಗೆ ಸೇರಬಹುದು. ಹೆಚ್ಚಾಗಿ ಹಿಂದುಗಳಿಂದ ಕೂಡಿರುವ ಕಾಂಗ್ರೆಸ್ ವಾದಿಗಳಾದರೂ ಆಗ ಎಲ್ಲಿರುವರು? ಅಗಲೂ ಅವರು ನಿಜವಾದ ಅಹಿಂಸಾವಾದಿಗಳಾಗಿದ್ದ ಪಕ್ಷದಲ್ಲಿ ಪಂಜಾಬಿ ಯೋಧರು ಅವರಿಗೇನೂ ಮಾಡಲಾರರು. ಈ ಯೋಧರೊಡನೆ ಅಧಿಕಾರವನ್ನು ವಿಭಾಗಿಸಿಕೊಳ್ಳಲು ಕಾಂಗ್ರೆಸ್‌ವಾದಿಗಳೇನೂ ಅಪೇಕ್ಷಿಸಲಾರರು ಆದರೆ ಅವರ ನಿರಸ್ತ್ರ ದೇಶ ಬಂಧುಗಳನ್ನು ಸೂರೆಮಾಡ ಬಿಡಲಾರರು. ಬಲಶಾಲಿಗಳ ಧಾಳಿಯಿಂದ ತಮ್ಮನ್ನು ಕಾಪಾಡಿಕೊಳ್ಳಲು ಬ್ರಿಟಿಷ್ ಆಳ್ವಿಕೆಯನ್ನಿರಿಸಿಕೊಳ್ಳಲು ಯಾರಿಗಾದರೂ ಕಾರಣವಿರುವುದಾದರೆ ಅದು ಕಾಂಗ್ರೆಸ್ ವಾದಿಗಳಾದ ಹಿಂದುಗಳಿಗೆ. ಸಂಖ್ಯೆಯಲ್ಲಿ ಹೆಚ್ಚೆಂಬುದಲ್ಲ, ಯಾರು ಹೆಚ್ಚು ಬಲಶಾಲಿ ಎಂಬುದೇ ಮುಖ್ಯವಾಗಿ ಗಣಿಸತಕ್ಕ ವಿಷಯವಾಗಿದೆ. ಇದಕ್ಕೆ ಒಂದೇ ಒಂದು ಉತ್ತರ ಮಾತ್ರವಿದೆ ಅಲ್ಪ ಸಂಖ್ಯಾಕರ ಅಪಾಯದ ಕೂಗೆಬ್ಬಿಸುವವರು, ಕೇವಲ ಎಣಿಕೆಯ ಮಟ್ಟಿಗೆ ಬಹುಸಂಖ್ಯಾಕರಾಗಿರುವವರಿಂದ ತಮಗೆ ಗಂಡಾಂತರವುಂಟಾಗುವುದೆಂದೇನೂ ಹೆದರಬೇಕಾಗಿಲ್ಲ ಯಾಕಂದರೆ ಈ ಬಹುಸಂಖ್ಯೆಯು ಕಾಗದಮಾತ್ರದ್ದಿದ್ದು ದುರ್ಬಲವಿರುವುದರಿಂದ ಅಪಾಯಕರವಾದುದನ್ನೇನೂ ಮಾಡಲಾರದಾಗಿದೆ.

ಬಲವೇ ನ್ಯಾಯವೆಂಬ ತತ್ವ

ದುರ್ಬಲ ಬಹುಪಕ್ಷಕ್ಕೆ ಬ್ರಿಟಿಷ್ ಬೆಯೊನೆಟ್ಟಿನ ಬೆಂಬಲವಿರುವನಕ ಅಲ್ಪಸಂಖ್ಯಾಕರ ಬೆದರಿಕೆಯಲ್ಲೇನಾದರೂ ಹುರುಳಿರಬಹುದು. ಇದು ವಿರೋಧಾಭಾಸವೆಂದು ತೋರಿದರೂ ಸತ್ಯವಾದುದು. ಬ್ರಿಟಿಷ್ ಸರಕಾರವು ತನಗೆ ಬೇಕಾಗುವ ವರೆಗೆ ಜಯಶೀಲವಾಗಿ ಒಂದು ತಂಡವನ್ನು ಇನ್ನೊಂದರೆದುರಾಗಿ ಎತ್ತಿಕಟ್ಟಿ, ತನಗೆ ಇಚ್ಛೆ ತೋರುವ ಹೆಸರಿಂದ ಅದನ್ನು ಕರೆದು ತನ್ನ ಬೇಳೆಬೇಯಿಸದಿರಲಾರದು. ಈ ವಿಧಾನವು ಅಪ್ರಾಮಾಣಿಕವಾಗಿರಬೇಕೆಂದೇನೂ ಇಲ್ಲ. ಹಿಂದೂದೇಶದಲ್ಲಿ ತಂಡ ವಿತಂಡಗಳಿರುವನಕ ಈ ತಂಡಗಳೊಳಗೆ ತ್ರಾಸನ್ನು ಸಮತೂಕವಾಗಿರಿಸುವ ದೈವದತ್ತ ಜವಾಬ್ದಾರಿಯನ್ನು ತಮಗೆ ಬಿಟ್ಟು ಬಿಡಲು ಸಾಧ್ಯವಿಲ್ಲೆಂದವರು ನಂಬಿಕೊಂಡಿರಬಹುದು. ಆದರೆ ಅದು ಪ್ರಜಾಸತ್ತೆಯ ರೀತಿ-ನೀತಿಯಲ್ಲ. ಫೆಸಿಸ್ಟ್, ನಾಸಿಸ್ಟ್, ಬೋಲ್ಶೆವಿಸ್ಟ್ ಮತ್ತು ಇಂಪೀರಿಯಲಿಸ್ಟನ ರೀತಿಯದು ಬಲವೇ ನ್ಯಾಯವೆಂಬ ಒಂದೇ ಒಂದು ತತ್ವದ ಬೇರೆ ಬೇರೆ ರೂಪಗಳವು. ಈ ಯುದ್ಧವು ಅಳತೆಕೋಲನ್ನೇ ಬದಲಾಯಿಸಿಬಿಡುವುದೆಂದು ನನ್ನ ಆಶೆ. ಹಿಂದೂದೇಶವು ಸ್ವತಂತ್ರವಾಗಿ ಅಂಗೀಕರಿಸಲ್ಪಟ್ಟು, ರಾಜಕೀಯದಲ್ಲಿ ವಿಶುದ್ಧ ಅಹಿಂಸಾವಾದವನ್ನು ಪ್ರತಿಬಿಂಬಿಸುವಂತಾದರೆ ಮಾತ್ರ ಅದು ಸಾಧ್ಯವಾಗುವುದು.



— ವಿದೇಶಗಳಲ್ಲಿನ ಭಾರತೀಯರು —

ದೇಶ	ಜನಸಂಖ್ಯೆ.
ಸಿಂಹಳದ್ವೀಪ	೬,೭೮,೧೨೦
ಮಲಯದ್ವೀಪ	೬,೪೦,೦೦೯
ಮಾರಿಷಸ್ ದ್ವೀಪ	೨,೬೮,೮೭೦
ದಕ್ಷಿಣ ಆಫ್ರಿಕಾ	೧,೬೫,೫೦೦
ಟ್ರಿನಿಡಾಡ್	೧,೩೮,೯೬೪
ಬ್ರಿಟಿಷ್ ಗೈಯಾನ	೧,೩೦,೫೪೦
ಫಿಜೀ ದ್ವೀಪಗಳು	೭೫,೧೧೭
ಕೆನಿಯಾ	೩೯,೬೪೪
ಟಾಂಗನೈಕ	೨೩,೪೪೨
ಜಮೈಕ	೧೭,೫೯೯
ಜಾಂಜೀಬಾರ್	೧೫,೨೪೬
ಯುಗಾಂಡ	೧೧,೬೧೩
ಇಂಗ್ಲೆಂಡ್	೭,೧೨೮
ಬ್ರಿಟಿಷ್ ದ್ವೀಪಗಳು	೨,೧೧೫
ಹಾಂಗ್ ಕಾಂಗ್	೪,೭೪೫
ಡಚ್ ಈಸ್ಟ್ ಇಂಡೀಸ್	೩೫,೦೦೦
ಡಚ್ ಗಯಾನ	೩೪,೦೦೦
ಮಡಗಾಸ್ಕರ್	೭,೫೦೦
ಅಮೆರಿಕ ಸಂಯುಕ್ತ ಸಂಸ್ಥಾನ	೫,೦೦೦
ಪಾರ್ಸಿಸ್ಥಾನ	೩,೯೦೦
ಇರಾನ್	೨,೩೬೨
ಅಫಘಾನಿಸ್ಥಾನ	೪೦,೬೮
ಇತರ ಕಡೆಯಲ್ಲಿ	೧೦,೫೦೦

ಆಯಾ ರಾಷ್ಟ್ರಗಳ ಒಬ್ಬೊಬ್ಬ ಪ್ರಜೆಯ ವಾರ್ಷಿಕ ಉತ್ಪನ್ನ

ಒಕ್ಕಲತನದಿಂದ

	ರೂ
ಅ. ಸಂ-ಸಂಸ್ಥಾನ	೨೮೬
ಕೆನಡಾ	೪೬೪
ಸಂಯುಕ್ತ ರಾಜ್ಯ	೮೦
ಸ್ವೀಡನ್	೧೭೯
ಜಪಾನ್	೧೨೯
ಭಾರತ	೬೭

ಉದ್ಯೋಗದಿಂದ

ಸಂಯುಕ್ತ ಸಂ.	೧,೩೮೦
ಕೆನಡಾ	೧,೦೯೭
ಸಂಯುಕ್ತ ರಾಜ್ಯ	೮೦೮
ಸ್ವೀಡನ್	೩೪೮
ಜಪಾನ್	೧೨೦
ಭಾರತ	೧೩

ನೋಟೀಸು.

ಉಡುಪಿ ಡಿ. ಮು ಕೋರ್ಟಿನಲ್ಲಿ

ಕ್ರಮ ನಂಬ್ರ 27/1938

ದಿ ಚರ್ಚ್ ಆಫ್ ಅವರ್ ಲೇಡಿ ಆಫ್ ಡೋಲರ್ಸ್, ಉಡುಪಿ ಇದರ ಪ್ರಕೃತ ಆಡಳಿತದಾರ ತೋಮಸ್ ಸುಲ್ದಾಂಞಾ ವಾದಿ,—

ಮತ್ತು

1. ವೆಂಕಪ್ಪ ಪೂಜಾರಿ-ಬಾಬು ಪೂಜಾರಿ ಅಳಿಯ
2. ಸೋಮಯ್ಯ ಪೂಜಾರಿ-1ನೇ ಪ್ರತಿವಾದಿಯ ಅಳಿಯ, ಉಡುಪಿ ತಾಲೂಕು ಕಿದಿಯೂರು ಗ್ರಾಮ ಪ್ರತಿವಾದಿಗಳು—

ಮೇಲಿನ ವ್ಯಾಜ್ಯದ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ,

ಮೇಲ್ಕಂಡ ವಾದಿಯು ಮೇಲೆ ಹೆಸರು ಕಾಣಿಸಿದ ಪ್ರತಿವಾದಿರ ಮೇಲೆ ಚಾಲಗೇಣಿ ಗೇಣಿ ಬಾಕಿಗೆ ಮತ್ತು ಆಸ್ತಿ ಸ್ವಾಧೀನತೆಗೆ ಹಾಕಿದ ವ್ಯಾಜ್ಯವು ಬರುವ ನವಂಬರ ತಿಂಗಳ ತಾರೀಕು 15ಕ್ಕೆ ತನಿಖೆ ಬಗ್ಗೆ ಇಟ್ಟಿಗೆ ಸದರಿ ತಾರೀಕಿಗೆ 2ನೇ ಪ್ರತಿವಾದಿಯ ಸ್ವತಃ ವ ವಕೀಲರ ಮುಖಾಂತರ ಹಾಜರಾಗಲಿಕ್ಕೆ ತಪ್ಪಿದ್ರೆ ಮೇಲಿನ ವ್ಯಾಜ್ಯದಲ್ಲಿ ಆತನನ್ನು ಏಕಪಕ್ಷ ಮಾಡಿ ಸದ್ರಿ ವ್ಯಾಜ್ಯವು ತೀರ್ಮಾನವಾಗುವದು.

Gratian C. Rego,
Pleader for Plaintiff

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S. India.)

Everyday the Membership increases

The Company issues all the well-known plans of Assurance

Female lives accepted.

JOIN ITS EVER INCREASING MEMBERSHIP.

ಕಳೆದ ಮಹಾ ಯುದ್ಧದ ಅಪಾರ ನಷ್ಟ

ಯುರೋಪಿನ ಅವನತಿ.

1914ರಿಂದ 18ರವರೆಗೆ ನಡೆದ ಯುರೋಪಿನ ಮಹಾಯುದ್ಧದಲ್ಲಿ ಒಟ್ಟು 85 ಲಕ್ಷ ಜನರು ಕೊಲ್ಲಲ್ಪಟ್ಟರು. 3 ಕೋಟಿ 75 ಲಕ್ಷ ಜನರು ಗಾಯಗೊಂಡರು ಉಪಯೋಗಿಸಲ್ಪಟ್ಟ ಯುದ್ಧೋಪಕರಣಗಳ ವೆಚ್ಚ 800 ಕೋಟಿ ಪವನೆಂದು ಅಂದಾಜು ಮಾಡಲಾಗಿದೆ. ಈ 800 ಕೋಟಿ ಪವನುಗಳಿಂದ, 500 ಪವನು ಬೆಲೆಯ ಮನೆಗಳನ್ನೂ 200 ಪವನು ಬೆಲೆಯ ಮನೆ ಸಾಮಾನುಗಳನ್ನೂ, ಎಕ್ರೆಗೆ 20 ಪವನಿನಂತೆ 5 ಎಕ್ರೆ ಜಮೀನನ್ನೂ, ಯುನೈಟೆಡ್ ಸ್ಟೇಟ್ಸ್, ಕೆನಡಾ, ಆಸ್ಟ್ರೇಲಿಯ, ಇಂಗ್ಲೆಂಡ್, ವೇಲ್ಸ್, ಅಯರ್ಲೆಂಡ್, ಸ್ಕಾಟ್‌ಲೆಂಡ್, ಫ್ರಾನ್ಸ್ ಬೆಲ್‌ಜಿಯಮ್ ಜರ್ಮನಿ ಮತ್ತು ರಶಿಯ ದೇಶಗಳ ಪ್ರತಿಯೊಂದು ಸಂಸಾರಕ್ಕೆ ಒದಗಿಸಿಕೊಡಬಹುದಿತ್ತು. ಇಷ್ಟೇ ಅಲ್ಲದೆ ಉಳಿಯುವ ಹಣದಿಂದ 20 ಸಾವಿರ ಜನಸಂಖ್ಯೆಯುಳ್ಳ ಪ್ರತಿಯೊಂದು ನಗರದಲ್ಲಿ ವಾಚನಾಲಯಗಳನ್ನೂ ವಿಶ್ವವಿದ್ಯಾಲಯವನ್ನೂ ಸ್ಥಾಪಿಸಬಹುದು. ಇಷ್ಟು ವ್ಯಯ ಮಾಡಿದ ಮೇಲೆ ಮತ್ತೂ ಉಳಿಯುವ ಹಣದಿಂದ ಫ್ರಾನ್ಸ್ ಮತ್ತು ಬೆಲ್‌ಜಿಯಮುಗಳ ಎಲ್ಲಾ ಜಮೀನು, ಮನೆ, ಫೇಕ್ಟರಿ, ಚರ್ಚ್, ರೈಲ್ವೆ, ದೊಡ್ಡ ರಸ್ತೆಯೇ ಮೊದಲಾದ ಎಲ್ಲಾ ವಸ್ತುಗಳನ್ನೂ ಕೊಂಡುಕೊಳ್ಳಬಹುದಾಗಿತ್ತು.

ಕಳೆದ ಮಹಾ ಯುದ್ಧವು, ಲೋಕದಲ್ಲಿ ಲಕ್ಷ್ಮೀನಿಲಯವೇ ಆಗಿದ್ದ ಯುರೋಪು ಮತ್ತು ಅಮೆರಿಕಗಳನ್ನು ತೀವ್ರ ಸಾಂಪತ್ತಿಕ ಮುಗ್ಗಟ್ಟಿನಲ್ಲಿ ಕೆಡಹಿಬಿಟ್ಟಿತು ಇಡೀ ಲೋಕದ ಸಾಂಪತ್ತಿಕ ಸ್ಥಿತಿಯಮೇಲೆ ಅದರಿಂದ ತೀವ್ರದುಷ್ಪರಿಣಾಮವಾಯಿತು ನಾಗರಿಕತೆಯ ತುತ್ತತುದಿಗೇರಿದ್ದ ಪಾಶ್ಚಾತ್ಯ ಜನಾಂಗಗಳು ಒಂದೊಂದಾಗಿ ಕೆಳ

ಇಂದಿನ ಯುದ್ಧದ ಭಯಂಕರ ಹಾವಳಿ.

ಗುರುಳ ಹತ್ತಿದವು. ಪೂರ್ವದ ಜನಾಂಗಗಳು ಅಭಿವೃದ್ಧಿ ಹೊಂದಿ ತಲೆಯೆತ್ತಲಾರಂಭಿಸಿದುವು, ಪಾಶ್ಚಾತ್ಯ ನಾಗರಿಕತೆ ಮತ್ತು ರೀತಿ ನೀತಿಗಳ ಕಟ್ಟು ಶಿಥಿಲವಾಗಹತ್ತಿತು ಈಗಣ ಯುದ್ಧವು ಪಾಶ್ಚಾತ್ಯ ರಾಷ್ಟ್ರಗಳ ಮತ್ತು ನಾಗರಿಕತೆಯ ದಿವಾಳಿಗಿತನವನ್ನು ಲೋಕವಿಖ್ಯಾತಗೊಳಿಸಿರುವುದು. ಇದರಿಂದ ಯುರೋಪಿನ ಪತನವಂತೂ ನಿಶ್ಚಯವೆಂದೇ ಹೇಳಬಹುದು. ಒಂದೇ ಒಂದು ವರ್ಷ ಈ ಯುದ್ಧವು ನಡೆಯುವಂತಾದರೆ ಕಳೆದ ಸಲ 4 ವರ್ಷ ನಡೆದ ಯುದ್ಧಕ್ಕಿಂತಲೂ ಈ ಸಲ ಎಷ್ಟೋ ಹೆಚ್ಚಿನ ಹಾವಳಿ ಮತ್ತು ನಷ್ಟವಾಗದಿರಲಾರದು. ಇಷ್ಟರಲ್ಲೇ ಜರ್ಮನಿಯು ಪೋಲಂಡಿನ ಯುದ್ಧದಲ್ಲಿ 1,60,000 ಸೈನಿಕರನ್ನೂ, ಹಲವು ವಿಮಾನ ಮತ್ತು ಯುದ್ಧೋಪಕರಣಗಳನ್ನೂ ಕಳಕೊಂಡಿರುವುದು ಕೆಲವು ಲಕ್ಷ ಮಂದಿ ಪೋಲರ ನಾಶಹೊಂದಿರಬೇಕು ಲೋಕದ ಅತಿ ಸುಂದರ ಪಟ್ಟಣಗಳಲ್ಲೊಂದಾದ ವಾರ್ಸೋವು ಸಂಪೂರ್ಣ ನಾಶವಾಗಿರುವುದು ಅದನ್ನಿನ್ನು ಕಟ್ಟಲು ಎಷ್ಟೋ ವರ್ಷ ಹಿಡಿದೀತು ಅಭಿವೃದ್ಧಿ ಹೊಂದುತ್ತಿದ್ದ ಪೋಲಿಶ್ ರಾಷ್ಟ್ರವೇ ಒಮ್ಮೆಗೆ ನಿರ್ನಾಮವಾಗಿರುವುದು

ಪಶ್ಚಿಮ ರಣರಂಗದ ರಾಷ್ಟ್ರಗಳು ಪ್ರತಿಯೊಂದು ವಿಷಯದಲ್ಲಿಯೂ ಬಹುತೇಕ ಸಮಬಲವಿರುತ್ತವೆ ಅಲ್ಲಿ ಈ ವರೆಗೂ ಯುದ್ಧ ಆರಂಭವಾಗಿಲ್ಲೆಂದೇ ಹೇಳಬಹುದು ಜಲ ಯುದ್ಧ ಮಾತ್ರ ಆರಂಭವಾಗಿರುವುದು. ದೊಡ್ಡ ವಿಮಾನ ಯುದ್ಧವು ಈ ವರೆಗೆ ನಡೆದಿಲ್ಲ ಇನ್ನು ಒಂದೇ ಸಮನೆ ನೆಲ ಜಲ ಮತ್ತು ಆಕಾಶ ಯುದ್ಧ ಆರಂಭವಾಯಿತೆಂದರೆ ಎಷ್ಟೊಂದು ಪ್ರಾಣ ಮತ್ತು ಸೊತ್ತು ನಾಶವಾಗುವುದೆಂದು ಹೇಳಬರುವುದಿಲ್ಲ ಸಿಗ್‌ಫ್ರಿಡ್ ಮತ್ತು ಮೆಗಿನೊ ಕೋಟೆ ಕಟ್ಟುವುದಕ್ಕೇನೇ ಕೋಟಿಗಟ್ಲೆ ಹಣ ವ್ಯಯವಾಗಿದೆ. ಅವುಗಳನ್ನು ಮುರಿಯಲು ಲಕ್ಷಾಂತರ ಸೈನಿಕರು ಪ್ರಾಣ ಬಲಿಕೊಡಬೇಕಾಗುವುದು ಗಣಿತವಿಲ್ಲದೆ ಮದ್ದು, ಗುಂಡು, ತೋಪು, ಫಿರಂಗಿಗಳು ಪುಡಿಯಾಗಲಿರುವವು.

ಎರಡೂ ಕಡೆಯ ವಿಮಾನಗಳೂ ಈ ವರೆಗೆ ವೈರಿ ಪಟ್ಟಣಗಳ ಮೇಲೆ ಬೋಂಬೆಸೆಯುವ ಪೈಶಾಚಿಕ ಕೃತ್ಯವನ್ನಾರಂಭಿಸಿರುವುದಿಲ್ಲ ಯುದ್ಧದ ಕಾವೇರಿ ವೈರಿಗಳಿಗೆ ಆದಷ್ಟು ಹೆಚ್ಚಿನ ಹಾವಳಿ ಮಾಡಿ ಜೈಸಬೇಕೆಂಬ ಉನ್ಮತ್ತತೆ ಉಂಟಾಯಿತೆಂದರೆ ನಿರ್ದೋಷೀ ಪ್ರಜೆಗಳು ಎಂತಹ ಭೀಕರ ಹಾವಳಿಗೊಳಗಾಗಬೇಕೆಂದು ಹೇಳಬರುವುದಿಲ್ಲ ಪೋಲೆಂಡಿಗೆ ಇಂಗ್ಲೆಂಡ್ ವಿಷವಾಯು ಕಳುಹಿಸಿದ್ದಿತೆಂದು ಜರ್ಮನಿಯು ಸುಳ್ಳು ಆರೋಪಹಾಕತೊಡಗಿದೆ. ಹೀಗೆ ನೆವನವನ್ನು ಮುಂದೊಡ್ಡಿ ಜರ್ಮನಿಯು ವಿಷವಾಯುವನ್ನು ಉಪಯೋಗಿಸಬಹುದೆಂಬ ಸಂದೇಹವುಂಟಾಗಿದೆ. ಕಳೆದ ಯುದ್ಧದಲ್ಲಿ ಅದು ಇದೇ ರೀತಿ ಮಾಡಿತ್ತು

ಇಷ್ಟರವರೆಗೆ ಕೆಲವು ಮಿಲ್ಯ ಬೆಲೆಯ ಇಂಗ್ಲೆಡಿನ ಎರಡು ಅತಿದೊಡ್ಡ ಯುದ್ಧ ಹಡಗುಗಳು ಮುಳುಗಿಸಲ್ಪಟ್ಟವೆ ಒಟ್ಟಿಗೆ 60ಕ್ಕಿಂತಲೂ ಮಿಕ್ಕಿದ ವ್ಯಾಪಾರದ ಹಡಗಗಳು ಮುಳುಗಿರುತ್ತವೆ. ಕೆಲವು ಜರ್ಮನ್ ಯುದ್ಧದ ಹಡಗುಗಳನ್ನೂ ಮುಳುಗಿಸಲಾಗಿದೆ ಒಟ್ಟು ಇಷ್ಟರವರೆಗೆ 23 ಜರ್ಮನ್ ಸಬ್‌ಮೆರಿನುಗಳು ಮುಳುಗಿಸಲ್ಪಟ್ಟವೆ ಎಂದು ನಂಬಲಾಗಿದೆ. ಒಂದೊಂದು ಸಬ್‌ಮೆರಿನ್ ಕಟ್ಟಲು ಸುಮಾರು 2ವರುಷ ಬೇಕಾಗುವುದು 2 ಲಕ್ಷ ಪವನು ತಾಗುವುದು ಒಂದೊಂದರಲ್ಲಿ 40 ಜನ ನಾವಿಕರಿರುವರು ಕಳೆದ ಮಹಾಯುದ್ಧದಲ್ಲಿ 200ಕ್ಕಿಂತಲೂ ಮಿಕ್ಕಿದ ಜರ್ಮನ್ ಸಬ್ ಮೆರಿನುಗಳು ಮುಳುಗಿಸಲ್ಪಟ್ಟಿದ್ದವು.

ಈ ಯುದ್ಧವೇ ಯುರೋಪಿಗೊಂದು ಪ್ರಳಯವಾಗಿ ಪರಿಣಮಿಸಲಿದೆ ಹಿಟ್ಲರನೇ ಕಾಳಭೈರವನಾಗಿದ್ದಾನೆ ಇದರಿಂದ ಯುರೋಪಿನ ಪತನವಂತೂ ನಿಶ್ಚಯ ಆತ್ಮನಾಶಕವಾದ ಈ ಮಹಾ ಸಂಗ್ರಾಮವಾದರೂ ಯಾವುದಕ್ಕಾಗಿ ಮಾನವನು ಎಷ್ಟೊಂದು ನಾಗರಿಕನಾದರೂ ಕಾಡುಜನದ ದ್ಯೋತಕವಾದ ಈ ಯುದ್ಧವನ್ನು ನಿವಾರಿಸಲು ಸಾಧ್ಯವೇ ಇಲ್ಲವೇ? ಅಥವಾ ಮಾನವಾತೀತವಾದ ವಿಧಿಯ ಇಚ್ಛೆಯಂತೆ ಭೂಭಾರವನ್ನಿಳಿಸುವುದಕ್ಕಾಗಿ ಈ ನರಹತ್ಯಾಖಾಂಡವು ಆಗಾಗ ನಡೆಯಬೇಕು ಎಂಬೀ ಪ್ರಶ್ನೆಗಳು ವಿಚಾರಿ ಮಾನವನಲ್ಲಿ ತರಂಗ ತರಂಗವಾಗಿ ಎದ್ದು ಅವನನ್ನು ನಿರಾಶೆಯ ಕತ್ತಲಲ್ಲಿ ಕೆಡಹಿಬಿಡುವುವು.

ತಮ್ಮ ಜನಾಂಗವೇ ಮೇಲು, ತಮ್ಮ ಸಂಸ್ಕೃತಿ ಮತ್ತು ನಾಗರಿಕತೆಯೇ ಹೆಚ್ಚಿನದು, ತಾವೇ ಲೋಕವನ್ನಾಳತಕ್ಕವರೆಂಬ ಅಹಂಕಾರದಿಂದ ಲೋಕದ ಇತರ ದುರ್ಬಲ ಜನಾಂಗಗಳ ಮೇಲೆ ನಾನಾರೀತಿಯ ಬಲಾತ್ಕಾರ ನಡೆಸಿ ತಮ್ಮ ಸ್ವಾರ್ಥಸಾಧನೆ ಮಾಡಿಕೊಂಡಿದ್ದ ಪಾಶ್ಚಾತ್ಯ ಜನಾಂಗಗಳ ಪತನದ ದಿನವು ಇನ್ನು ಬಹಳ ದೂರವಿರು

ನಾಗರಿಕತೆಯ ದಿವಾಳಿಗಿರಿ.

ವಂತಿಲ್ಲ. ಸಾಮ್ರಾಜ್ಯದಾಹ, ಜನಾಂಗ ಸ್ವಾರ್ಥ, ಮಾನವ ಮಾನವರೊಳಗೆ ಭಿನ್ನ ಭೇದಾದಿಗಳು ಅಳಿದು ಇಡೀ ಮಾನವ ಕೋಟಿಯು ಒಂದು ಜನಾಂಗ, ಇಡೀ ಲೋಕವು ಒಂದು ರಾಷ್ಟ್ರವೆಂಬ ನವಮನೋವೃತ್ತಿ ಮತ್ತು ನವ ರಚನೆಯಾಗುವ ತನಕ ರಾಷ್ಟ್ರ ರಾಷ್ಟ್ರಗಳೊಳಗಣ ಯುದ್ಧದ ಈ ಅನಾಹುತವು ತಪ್ಪುವಹಾಗಿಲ್ಲ. ನಿಜವಾದ ನಾಗರಿಕತೆ ಮತ್ತು ಸಂಸ್ಕೃತಿಯು ಸಾರ್ಥಕವಾಗಬೇಕಾದರೆ ಇಡೀ ಮಾನವ ಕೋಟಿಯ ಬಾಂಧವ್ಯವುಂಟಾಗಬೇಕು. ವೈಯಕ್ತಿಕ ಹಾಗೂ ಸಾಮೂಹಿಕ ಕ್ಷುದ್ರ ಸ್ವಾರ್ಥವು ಮೂಲೆಗುಂಪಾಗಬೇಕು ಅಧಿಕಾರ ಮತ್ತು ಮ್ಹಾಲಕತ್ವದ ದಾಹವು ಅಳಿಯುವಂತಾಗಬೇಕು. ಆಗ ಮಾತ್ರ ಲೋಕದಲ್ಲಿ ಶಾಂತಿ, ಸೌಹಾರ್ದ ಮತ್ತು ಸುಭಿಕ್ಷೆಯುಂಟಾಗಬಹುದು.

—A JOB—

YOU WOULD LIKE

because you would be proud to represent a company like "East & West" whose policies have unquestionable safety and unusually low rates

Strong & Progressive

ESTD 1913

The East And West Insurance Co, Ltd invites applications from well connected and experienced persons for the posts of Inspectors and district organisers in Karnatak, Mysore State, South and North Kanara Districts

Attractive contracts & liberal terms Please communicate immediately with our official representative Mr H S Nayak of this paper

OR

EAST & WEST INSURANCE CO, LTD

East & West Bldg.

Apollo St, Fort BOMBAY

ಯುದ್ಧವು ದೀರ್ಘಕಾಲ ನಡೆಯುವುದೇ ?

೪ನೇ ಪುಟದಿಂದ ಮುಂದರಿಸಿದ್ದು)

ಹೆರ್ ಹಿಟ್ಲರರು ದೊಡ್ಡಗೊಂದಲದಲ್ಲಿ ಬಿದ್ದಿರುತ್ತಾರೆ ಮೊದಲು ನಿರೀಕ್ಷಿಸಿದುದಕ್ಕಿಂತಲೂ ದೊಡ್ಡಗಂಡಾಂತರದಿಂದ ಯುರೋಪನ್ನು ತಪ್ಪಿಸಲು ಈಗ ಶಕ್ತಿಯುಳ್ಳ ಒಬ್ಬನೇ ಒಬ್ಬವ್ಯಕ್ತಿ ಎಂದರೆ ಸೀನರ್ ಮುಸಲೋನಿಯವರು ಬಾಲ್ಕನ್ ಪ್ರದೇಶದಲ್ಲಿ ಅವರು ಮುಂದಾಳಾಗಿ ನಿಂತು ನಾಝಿ ಮತ್ತು ಬೋಲ್ಶೆವಿಕ್ ಅಧಿಕಾರ ವ್ಯಾಪನೆಯನ್ನು ತಡೆಗಟ್ಟುವರೇ? ನಾಝಿ ಫೆಸಿಸ್ಟ ಬಾಂಧವ್ಯದ ಮಾತೇ ಇಲ್ಲ ಸ್ಟೇಲಿನರು ಹಿಟ್ಲರರ ಸವಿಾಪ ಬಂದಂತೆ ಮುಸಲೋನಿಯವರು ದೂರವಾಗುತ್ತಿರುವರೇ? ನಾಝಿ ಬೋಲ್ಶೆವಿಕ್ ಒಪ್ಪಂದವು ಹಿಟ್ಲರರನ್ನು ದೊಡ್ಡ ಪಚೀತಿಯಲ್ಲಿ ಹಾಕಿಬಿಟ್ಟಿದೆ ಎಸ್ಟೋನಿಯ ಲಿಟೇವಿಯ ಮೊದಲಾದ ಬಾಲ್ಟಿಕ್ ರಾಜ್ಯಗಳ ಜರ್ಮನರು ಎಷ್ಟೋ ವರ್ಷಗಳಿಂದ ತಮ್ಮ ಮನೆಮಾರು ಬಿಟ್ಟು ಎದ್ದು ಹೋಗಬೇಕಾಗಿದೆ ಇದರಿಂದ ಈ ಜರ್ಮನ್ ಜನರಲ್ಲಿ ತೀವ್ರ ಅತೃಪ್ತಿಯುಂಟಾಗಿದೆ. ಲಿಥುವಾನಿಯದಲ್ಲಿನ ಜರ್ಮನರನ್ನು ಕರೆಸುವುದನ್ನು ನಿಲ್ಲಿಸಲಾಗಿದೆ.

ವಿದ್ಯಮಾನಗಳನ್ನೆಲ್ಲಾ ಆಳವಾಗಿ ವಿಚಾರಿಸುವಾಗ, ಈ ಬಾರಿಯ ಯುದ್ಧವು ದೀರ್ಘವಾಗಿ ನಡೆಯುವ ಸಂಭವತೋರುವುದಿಲ್ಲ ರಶ್ಯದ ಮೈತ್ರಿ ಮತ್ತು ಪ್ರಾದುರ್ಭಾವದಿಂದ ಹಿಟ್ಲರರು ಬುದ್ಧಿ ಕಲಿಯಬಹುದು ಹೇಗಾದರೂ ರಾಜಿಮಾಡುವಂತೆ ಮುಸಲೋನಿಯವರು ಹಿಟ್ಲರರನ್ನು ಒತ್ತಾಯಪಡಿಸಬಹುದು ಜರ್ಮನಿ ಮತ್ತು ರಶ್ಯಕ್ಕೆ ವೈಷಮ್ಯವುಂಟಾಗುವ ದಿನವು ದೂರವಿರಲಾರದೆಂದು ವಿಚಾರಿಗಳು ಕೆಲವರ ಊಹನೆ, ಜರ್ಮನಿಯ ಬೇರೆಬೇರೆ ಜಿಲ್ಲೆಗಳ ಜನ ಮುಖಂಡರನ್ನು ಹಿಟ್ಲರರು ಬರ್ಲಿನಿಗೆ ಕರೆದು ಅಭಿಮತಪಡೆಯುವ ವಿಶಿಷ್ಟ ಘೋರಣೆಯ ಅಂತರ್ಯವೇನೆಂದು ತಿಳಿದಿಲ್ಲ ಇನ್ನು ಕೆಲವೇ ದಿವಸಗಳಲ್ಲಿ ಯಾವುದಾದರೂ ನಿಶ್ಚಯವಾಗಬಹುದು. ಜರ್ಮನಿ ಮತ್ತು ರಶ್ಯಗಳೊಂದುಗೂಡಿ ಇಟೆಲಿಯು ದೂರವಾದರೆ ದೀರ್ಘಕಾಲ ಭೀಕರ ಯುದ್ಧ ನಡೆಯುವುದು ನಿಶ್ಚಯ. ಇಡೀ ಯುರೋಪಿನಲ್ಲೇ ಆಗ ದೊಡ್ಡ ಪ್ರಳಯವೇಳಬಹುದು.

ಚಂದಾದಾರರಲ್ಲಿ ವಿನಂತಿ

ಚಂದಾ ಅವಧಿ ಮುಗಿದವರಿಗೆಲ್ಲ ನೋಟೀಸು ಕೊಡಲ್ಪಟ್ಟಿದೆ ಅವರು ತಮ್ಮ ಚಂದಾ ಮತ್ತು ಬಾಕಿ ಚಂದಾಹಣವನ್ನು ದಯವಿಟ್ಟು ಕೂಡಲೇ ಕಳುಹಿಸಬೇಕೆಂದು ಆಪೇಕ್ಷಿಸಲಾಗುತ್ತದೆ ಪತ್ರಿಕೆ ಜೀವಂತವಾಗಿರಲು ಬಾಕಿ ಚಂದಾ ಹಣ ಕಳಿಸುವುದು ಅವಶ್ಯ, ಚಂದಾ ಹಣ ಬಾರದೆ ಪತ್ರಿಕೆ ಕಳಿಸಲು ಸಾಧ್ಯವಾಗಲಾರದೆಂದು ಈ ಮೂಲಕ ವಿನಂತಿಸಲಾಗುತ್ತದೆ. ಎಲ್ಲಾ ಚಂದಾದಾರರು ಈ ಕಡೆಗೆ ತಮ್ಮ ಗಮನವಿತ್ತು ತಮ್ಮ ಚಂದಾ ಹಣವನ್ನು ಕೂಡಲೇ ಕಳಿಸಿ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

—ಮೆನೇಜರ್.

AN INVITATION

to avail best facilities.

With the experience of 33 years and with a net-work of Branches and Agencies, the Corporation presents efficient service and caters to all the needs of the public. Transmission of funds to various places undertaken with maximum safety and minimum cost.

Enquiries in the matter promptly attended to at all times

The Canara Banking Corporation Limited.

(Incorporated in British India)

ಉಡುಪಿ, ಗುರುವಾರ ತಾ. ೨೬-೧೦-೩೯

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರ

ವೈಸರಾಯರ ನಿರೂಪಣೆಯು ತೀರಾ ಅತೃಪ್ತಿಕರ ಮಾತ್ರವಲ್ಲದೆ ಇಡೀ ರಾಷ್ಟ್ರಕ್ಕೆ, ವಿಶೇಷವಾಗಿ ಕಾಂಗ್ರೆಸಿಗೆ ದೊಡ್ಡ ಅಪಮಾನವಿರುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಎಂತಹ ನಿರ್ಣಯಕ್ಕೆ ಬರುವುದೆಂಬುದು ಮೊದಲೇ ತಿಳಿದಿತ್ತು. ಕಳೆದ 20 ವರ್ಷಗಳಿಂದ ಬ್ರಿಟನನ್ನು ಎಡೆಬಿಡದೆ ಪ್ರಬಲವಾಗಿ ವಿರೋಧಿಸಿಕೊಂಡು ಬಂದಿದ್ದ ದೇಶದ ಏಕಮಾತ್ರ ರಾಷ್ಟ್ರೀಯ ಹಾಗೂ ಜನಸಾಮಾನ್ಯ ಸಂಸ್ಥೆಯು ಮುಂದೊಡ್ಡಿದ ಮೈತ್ರಿಯ ಹಸ್ತವನ್ನು ವೈಸರಾಯರು, ಒಣ ನೆವನಗಳನ್ನೊಡ್ಡಿ ನಿರಾಕರಿಸಿರುವಾಗ ಕಾಂಗ್ರೆಸು ಸಹಕಾರವೀಯುವುದಾದರೂ ಹೇಗೆ? ಅದು ತನ್ನ ಹಿಂದಿನ ಧೋರಣೆಗನುಸಾರವಾಗಿ ಮುಂದುವರಿಯುವುದಾದರೆ, ಬ್ರಿಟನಿಗೆ ಸಹಕಾರವನ್ನು ನಿರಾಕರಿಸುವುದು ಮಾತ್ರವಲ್ಲದೆ, ಇಷ್ಟರಲ್ಲೇ ಬದ್ಧ ವಿರೋಧವನ್ನೊಡ್ಡಬೇಕಿತ್ತು. ಆದರೆ ಅದು ಹಾಗೇನೂ ಮಾಡಿರುವುದಿಲ್ಲ ಮಹಾತ್ಮಾ ಗಾಂಧಿಯವರಂತಹ ಅತ್ಯಂತ ವಿವೇಕಪರ ಹಾಗೂ ಮಂದಗಾಮಿ ಧೋರಣೆ ವಹಿಸಿದೆ ಇನ್ನಾದರೂ ರಾಜಿಯ ಬಾಗಿಲನ್ನು ತೆರೆದೇ ಇಟ್ಟಿದೆ. ಹೀಗೆ ಕಾಂಗ್ರೆಸನ್ನು ಪ್ರಬಲ ವಿರೋಧದ ಅಗ್ನಿಕುಂಡಕ್ಕೆಳೆಸುವ ಜವಾಬ್ದಾರಿಯನ್ನದು ಬ್ರಿಟಿಷ್ ಸರಕಾರದ ಮೇಲೆ ಹಾಕಿದೆ. ಇನ್ನು ಮೇಲಾದರೂ ಬ್ರಿಟಿಷರಲ್ಲಿ ವಿವೇಕೋದಯವಾಗಲಿರುವುದೋ ನೋಡಲಿದೆ ಈಗ ಎಲ್ಲಲ್ಲಿಯೂ ಕತ್ತಲೆಯೇ ಕವಿದಿದೆ ಗಾಂಧೀಜಿಯವರು ವೈಸರಾಯರ ನಿರೂಪಣೆ ಹೊರಡಿಸಿದ ಕೂಡಲೆ ಹೇಳಿದಂತೆ, ಕಾಂಗ್ರೆಸು ಇನ್ನೊಮ್ಮೆ ಅಗ್ನಿಪರೀಕ್ಷೆಗೊಳಗಾಗದೆ ಗತ್ಯಂತರವಿರುವಂತೆ ತೋರುವುದಿಲ್ಲ ಆದರೆ ಅದನ್ನದು ಹಾರೈಸುತ್ತಿರುವುದಿಲ್ಲ ಇಂಗ್ಲೆಂಡು ಯುದ್ಧದ ಗಂಡಾಂತರದಲ್ಲಿ ಸಿಲುಕಿರುವ ಸಂದರ್ಭನೋಡಿ ತಮ್ಮ ಕಾರ್ಯ ಸಾಧಿಸಬೇಕೆಂಬ ಮನೋವೃತ್ತಿಯು ಕಾಂಗ್ರೆಸ್ ಹ್ಯಾಕಮಾಂಡನವರಲ್ಲಿ ಸ್ವಲ್ಪವೂ ಇಲ್ಲ ಬ್ರಿಟನಿಗೆ ಇನ್ನೊಂದು ಸಂದರ್ಭ ವೀಯಲಾಗಿದೆ. ಅದನ್ನು ಉಪಯೋಗಿಸಿಕೊಂಡು ಹಿಂದೂದೇಶದ ಮೈತ್ರಿಯನ್ನು ಸಂಪಾದಿಸಿಕೊಳ್ಳುವಷ್ಟರ ಮುತ್ಸದ್ದಿತನವು ಬ್ರಿಟಿಷ್ ಸರಕಾರಕ್ಕಿರುವುದೇ ಎಂಬುದು ಸಂದೇಹಕರ.

ಹುರುಳಿಲ್ಲದ ವಾದ

ಯುರೋಪು ಆಗಾಗ ಆಕ್ರಮಣಗಳ ಭೀತಿಯಿಂದ ತಲ್ಲಣಗೊಳ್ಳುವಂತಾಗಲಾರದು. ಮುಂದಿನ ಜನಾಂಗಗಳಾದರೂ ಘೋರ ಸಂಗ್ರಾಮದ ರಕ್ತಪಾತದಿಂದ ವಿಮುಕ್ತವಾಗಬೇಕು, ಯುರೋಪಿನ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಸುರಕ್ಷಿತತೆಗೆ ಧಕ್ಕೆಯು ತಪ್ಪಿ ಶಾಂತಿ ಮತ್ತು ಸುಭದ್ರತೆಯು ನೆಲೆಗೊಳ್ಳಬೇಕು ಲೋಕದಲ್ಲಿ ಪ್ರಜಾಸತ್ತೆ ಮತ್ತು ಪ್ರಜಾ ಸ್ವಾತಂತ್ರ್ಯವು ನೆಲೆಗೊಂಡು ಶಾಂತಪರ ಮಧ್ಯಸ್ತಿಕೆಯಿಂದ ಉಭಯ ರಾಷ್ಟ್ರಗಳೊಳಗಣ ಕಲಹಗಳು ಇತ್ಯರ್ಥವಾಗುವಂತಾಗಬೇಕೆಂಬ ಉದಾತ್ತ ಧ್ಯೇಯದಿಂದ ಬ್ರಿಟಿಷ್ ಸರಕಾರವು ಯುದ್ಧಕ್ಕಿಳಿದಿರುವುದೆಂದು ಮಿ. ಚೇಂಬರ್ಲೇನರು ಕಂಠೋಕ್ತವಾಗಿ ಹೇಳಿರುವರು. ಈ ಉದಾತ್ತ ತತ್ವಗಳು ಇಡೀ ಲೋಕಕ್ಕೇನೇ ಅನ್ವಯಿಸಬೇಕಲ್ಲವೇ? ಅಂದಮೇಲೆ ಆದೊಂದು ಭೂಖಂಡವೇ ಆಗಿರುವ ಹಿಂದೂದೇಶವು 6000ಮೈಲು ದೂರದ ಆದೊಂದು ಚಿಕ್ಕ ರಾಷ್ಟ್ರ ಮತ್ತು ಜನಾಂಗದ ಅಧೀನವಾಗಿರುವುದಾದರೂ ಯಾವ ನ್ಯಾಯ? ತನ್ನ ನೆರೆಯ ಮತ್ತು ತನ್ನ ರಾಜ್ಯದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿದ್ದ ಪೋಲಂಡನ್ನು ಜರ್ಮನಿಯು ಆಕ್ರಮಿಸಿದುದು ತಪ್ಪಾದರೆ, ಬ್ರಿಟಿಷರು ಅತಿ ದೂರದ, ಹಿಂದೂದೇಶವನ್ನು ಆಕ್ರಮಿಸಿ ಸುಮಾರು 4000 ಮಿಲ್ಯ ಜನತೆಯನ್ನು ಸದಾ ತಮ್ಮ ಅಧೀನವಿರಿಸಿಕೊಳ್ಳಲೆಳಸುವುದು ಸರಿಯೇ? ಹಿಂದೀಯರು ಒಂದಲ್ಲೊಂದು ದಿನ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಟ ನಡಿಸದಿರುವರೇ? ಆಗ ಲೋಕ ಶಾಂತಿ ಭಂಗವಾಗುವುದಿಲ್ಲವೇ? ಅಲ್ಪ ಸಂಖ್ಯಾಕರ ಪ್ರಶ್ನೆಯನ್ನು ಮುಂದೊಡ್ಡಿ ಇಂಗ್ಲೆಂಡು ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸುವುದರಲ್ಲಿ ನ್ಯಾಯವಿರುವುದಾದರೆ, ಪೋಲಂಡಿನ ಅಲ್ಪಸಂಖ್ಯಾಕರಾದ ಜರ್ಮನರ ಬಳಿ ರಶ್ಯಾನರ ಮತ್ತು ಉಕ್ರೇನಿಯನರ ಪ್ರಶ್ನೆಯನ್ನೆತ್ತಿ ಜರ್ಮನಿ ಮತ್ತು ರಶ್ಯಗಳು ಅದನ್ನಾಕ್ರಮಿಸಿ ಸ್ವಾಧೀನಪಡಿಸಿಕೊಂಡುದು ಅನ್ಯಾಯವಾಗುವುದಾದರೂ ಹೇಗೆ? ಈ ಸಂದರ್ಭದಲ್ಲಿ ಬ್ರಿಟನು ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸಿದ ಪಕ್ಷದಲ್ಲಿ ಲೋಕದ ದೃಷ್ಟಿಯಲ್ಲಿ ಅದು ಅಪರಾಧಿಯಾಗುವುದು. ಅದು ಕೇವಲ ತನ್ನ ಸಾಮ್ರಾಜ್ಯ ಸ್ವಾರ್ಥಕ್ಕಾಗಿ, ಹಿಟ್ಲರ್ ಶಾಹಿಯನ್ನು ಸದೆಬಡಿದು ತನ್ನ ಅಧಿಕಾರ ಸ್ಥಾಪಿಸಲಿಕ್ಕಾಗಿ ಯುದ್ಧ ಹೂಡಿರುವುದೆಂದು ಸಿದ್ಧವಾಗುವುದು.

ಅಲ್ಪ ಸಂಖ್ಯಾಕ ಪ್ರಶ್ನೆ

ಕಾಂಗ್ರೆಸು ಸ್ವಾತಂತ್ರ್ಯವನ್ನು ಕೇಳುವುದು ಇಡೀ ದೇಶಕ್ಕಾಗಿ. ಪ್ರತಿಯೊಂದು ಪಕ್ಷ, ಜಾತಿ, ಮತ, ಮತ್ತು ವರ್ಗಕ್ಕೆ ಸೇರಿರುವ ಎಲ್ಲಾ ಹಿಂದೀಯರಿಗಾಗಿ. ಅಂತಹ ಸ್ವಾತಂತ್ರ್ಯವು ನಿಜವಾದ ಪ್ರಜಾಸತ್ತೆಯಿಂದ ಮಾತ್ರ ಸಾಧ್ಯವಿದೆ ಅಲ್ಪ ಸಂಖ್ಯಾಕರ ಹಿತವನ್ನು ಬ್ರಿಟಿಷ್ ಸರಕಾರಕ್ಕಿಂತಲೂ ಹೆಚ್ಚಾಗಿ ಮತ್ತು ಒಳ್ಳೇ ರೀತಿಯಿಂದ ಕಾಪಾಡುವ ಭರವಸೆಯನ್ನು ಕಾಂಗ್ರೆಸು ಕೊಟ್ಟಿರುತ್ತದೆ, ಮುಸ್ಲಿಮ್ ಲೀಗ್ ಹಿಂದೂ ಮಹಾಸಭೆಯೇ ಮೊದಲಾದುವುಗಳು ತಮ್ಮ ಸಂಕುಚಿತ ಸ್ವಾರ್ಥ ಸಾಧನೆಗಾಗಿ ಮಾತ್ರ ಹೆಣಗಾಡುವ ಜಾತೀಯ ಸಂಸ್ಥೆಗಳು. ಇಡೀ ದೇಶದ ಮತ್ತು ಹಿಂದೀಯರೆಲ್ಲರ ಹಿತಸಾಧನೆಯ ಜವಾಬ್ದಾರಿಯಾಗಲಿ ಉದ್ದೇಶವಾಗಲಿ ಅವುಗಳಿಗಿರುವುದಿಲ್ಲ. ಹಿಂದೂದೇಶವನ್ನು ವಿಭಾಗಿಸಿ ಆಳುವ ಮನಸ್ಸು ಬ್ರಿಟಿಷ್ ಸರಕಾರಕ್ಕೆ ಇಲ್ಲವಾದರೆ, ಇಡೀ ಹಿಂದೂಸ್ಥಾನವು ಸಂಯುಕ್ತವಾಗಿ ಒಂದೇ ಕೇಂದ್ರ ರಾಜ್ಯಾಂಗ ರಚನೆಯಲ್ಲಿ ಸೇರಿ, ನಿಜವಾದ ಸ್ವಾತಂತ್ರ್ಯ ಪಡೆದು ಬ್ರಿಟಿಷ್ ಮಾದರಿಯ ಪ್ರಜಾಸತ್ತಾತ್ಮಕ ರಾಜ್ಯಭಾರ ಪಡೆದು ಮುಂದುವರಿಯಬೇಕೆಂಬ ಸದಿಚ್ಛೆಯಿಂದ ಬ್ರಿಟನು ಪ್ರೇರಿತವಾಗಿರುವುದಾದರೆ, ಅದು ಮುಸ್ಲಿಮ್ ಲೀಗ್, ಹಿಂದೂ ಮಹಾಸಭೆಗಳ ಬೆನ್ನು ತಟ್ಟಿ ಎತ್ತಿಕಟ್ಟುವುದನ್ನು ಬಿಟ್ಟು ಕಾಂಗ್ರೆಸಿನ ಸಹಕಾರವನ್ನು ಪಡೆಯಲೆತ್ನಿಸಬೇಕು ಈ ಸಂದರ್ಭದಲ್ಲಿ ಮಿ. ಜಿನ್ನಾ, ಡಾಕ್ಟರ್ ಸಾವರ್ಕರ್, ಡಾಕ್ಟರ್ ಅಂಬೇಡ್ಕರ್, ಶ್ರೀ ಎಮ್. ಸಿ ರಾಜ, ಸರ್ ಕೆ.ವಿ. ರೆಡ್ಡಿ, ಸರ್. ಪನ್ನೀರ್ ಸೆಲ್ವಮರೇ ಮೊದಲಾದವರು, ತಮ್ಮ ಕೈಯಿಂದ ಅಧಿಕಾರ ತಪ್ಪಿ ಕಾಂಗ್ರೆಸಿನ ಕೈ ಸೇರಿದುದರಿಂದ ಅಸೂಯೆಗೊಂಡು ಬ್ರಿಟಿಷ್ ಸರಕಾರದ ಆಶ್ರಯ ಪಡೆದು ಕಾಂಗ್ರೆಸಿನ ಮೇಲೆ ಸೇಡು ತೀರಿಸುವ ಕ್ಷುದ್ರ ಮನೋವೃತ್ತಿಯುಳ್ಳವರು ವರೆಂಬುದು ಸ್ವಯಂ ವೇದ್ಯವಿದೆ ಇಂತಹ ಸ್ವಾರ್ಥ ಸಾಧಕರಿಗೆ ಬ್ರಿಟಿಷ್ ಸರಕಾರವು ಹೆಚ್ಚೆಚ್ಚು ಇಂಬು ಕೊಡುತ್ತಾ ಹೋದರೆ ಕಾಂಗ್ರೆಸ್ ಪ್ರಚಂಡ ಚಳವಳ ಹೂಡಿ ಹಿಂದೂದೇಶದಲ್ಲಿ ದೊಡ್ಡ ವಿಪ್ಲವವೆದ್ದು ಕ್ರಾಂತಿಯುಂಟಾಗದಿರಲಾರದು. ಅಂತಹ ಜನತಾ ಆಂದೋಲನದ ಮಹಾಪ್ರವಾಹದಲ್ಲಿ ಈ ಸಂಕುಚಿತ ಸ್ವಾರ್ಥ ಸಾಧಕರೆಲ್ಲಾ ಬ್ರಿಟಿಷ್ ಸರಕಾರದೊಂದಿಗೆ ತೇಲಿ ಹೋಗದಿರಲಾರರು.

ಕಾಂಗ್ರೆಸಿನ ಕರ್ತವ್ಯ

ಈ ಸಂಧಿ ಕಾಲದಲ್ಲಿ ಕಾಂಗ್ರೆಸಿನ ಮೇಲಿನ ಜವಾಬ್ದಾರಿಯು ಮಹತ್ವದ್ದಿದೆ. ಕಾಂಗ್ರೆಸು ಅಧಿಕಾರ ಸ್ವೀಕರಿಸಿ ಆಡಳಿತ ನಡಿಸಿದುದರಿಂದ ಅದಕ್ಕೆ ಕೆಲಮಟ್ಟಿನ

ಕಾಂಗ್

ವೈಸರಾಯರ ನಿರೂಪಣೆ ಅತೃಪ್ತಿಕರ

ಇದೇ ತಾ. ೨೨ರಲ್ಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು, ವೈಸರಾಯರ ನಿರೂಪಣೆಯ ಕುರಿತು ಸರ್ವಸಮ್ಮತಿಯಿಂದ ಈ ಕೆಳಗಣ ನಿರ್ಣಯಮಾಡಿರುವರು. ಮಹಾತ್ಮ ಗಾಂಧಿಯವರೂ ಪಂಡಿತ ಜವಾಹರಲಾಲರೂ ಒಟ್ಟಾಗಿ ಈ ನಿರ್ಣಯವನ್ನು ತಯಾರಿಸಿದರೆಂದು ತಿಳಿದುಬರುತ್ತದೆ. ಬ್ರಿಟನರು ಯುದ್ಧದ ಉದ್ದೇಶವನ್ನು ಸ್ಪಷ್ಟಪಡಿಸಬೇಕೆಂಬ ಕಾಂಗ್ರೆಸಿನ ಕೇಳಿಕೆಗೆ ವೈಸರಾಯರು ಕೊಟ್ಟಿರುವ ನಿರೂಪವು ಸಂಪೂರ್ಣವಾಗಿ ಅತೃಪ್ತಿಕರವಿದ್ದು, ಹಿಂದೂದೇಶದ ಸ್ವಾತಂತ್ರ್ಯ ಸಾಧಿಸಲು ಆತುರಪಡುವ ಹಿಂದೀಯರೆಲ್ಲರಲ್ಲಿ ಕ್ರೋಧವನ್ನುಂಟುಮಾಡದಿರಲಾರದು. ಯುದ್ಧ ಮತ್ತು ಹಿಂಸೆಯಿಂದಲೂ, ರಾಷ್ಟ್ರಗಳನ್ನು ಸೂರೆಮಾಡಿ ಯುದ್ಧಕ್ಕೆ ಮೂಲಕಾರಣವಾಗುವ ಫೆಸಿಸ್ಟ ಮತ್ತು ಇಂಪೀರಿಯಲಿಸ್ಟ ಪದ್ಧತಿ ಜುಗುಪ್ಸೆಗೊಂಡು ಲೋಕದ ನವವ್ಯವಸ್ಥೆ, ಶಾಂತಿ ಮತ್ತು ಸ್ವಾತಂತ್ರ್ಯಕ್ಕಾಗಿ ಹಾತೊರೆಯುವ ಹಿಂದೂದೇಶದ ಮತ್ತು ಹೊರಗಣ ಮಿಲ್ಯಾಂತರ ಜನತೆಯ ಪರವಾಗಿ ಬ್ರಿಟಿಷ್ ಸರಕಾರವನ್ನು ಕಾಂಗ್ರೆಸು ಆಮಂತ್ರಿಸಿದ್ದಿತು

ಜನ ವಿರೋಧವುಂಟಾಗದೆ ಕಾಂಗ್ರೆಸಿನೊಳಗೇನೇ ತಂಟೆ ವಿತಂಡಗಳುಂಟಾಗಿವೆ. ಇಂದಿನ ಪರಿಸ್ಥಿತಿಯನ್ನೆದುರಿಸಲು ಕಾಂಗ್ರೆಸು ಸಿದ್ಧವಾಗಿರುವುದಿಲ್ಲ ಈಗ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆಕೊಟ್ಟು ಹೊರಬರುವರಾದುದರಿಂದ, ಉಜ್ವಲ ದೇಶಾಭಿಮಾನಿಗಳಾದ ಅವರ ಕುರಿತು ಜನತೆಯು ಯಾವ ತರದ ವಿರೋಧವನ್ನೂ ಕಟ್ಟಿಕೊಳ್ಳಬಾರದು. ಅವರು ದೇಶಹಿತದೃಷ್ಟಿಯಿಂದ ಕಲಸ ಮಾಡಿರುವರೇ ಹೊರತು ಯಾವ ತರದ ಸ್ವಾರ್ಥದಿಂದಲೂ ಪ್ರೇರಿತರಾಗಿರುವುದಿಲ್ಲ, ತಾತ್ವಿಕ ಭೇದದಿಂದ ಕಾಂಗ್ರೆಸಿನೊಳಗೆ ಉಂಟಾಗಿದ್ದ ವೈಷಮ್ಯವನ್ನು ಈಗ ಮೂಲೆಗೊತ್ತಿ ಎಲ್ಲರೂ, ಒಂದುಶರೀರ, ಒಂದೇ ಹೃದಯವೆಂಬಂತೆ ದೇಶದ ಸ್ವಾತಂತ್ರ್ಯಸಾಧನೆಗಾಗಿ ಕಟಿಬದ್ಧರಾಗಬೇಕು

ಕಾಂಗ್ರೆಸ್ ಹ್ಯಾಕಮಾಂಡಿನವರಾದರೂ ಯಾವ ರೀತಿಯ ಆಗ್ರಹಗಳಿಗಾದರೂ ಕಟ್ಟುಬೀಳದೆ ರಾಷ್ಟ್ರೀಯ ಧ್ವಜದಡಿಯಲ್ಲಿ ಎಲ್ಲಾ ಪಕ್ಷ ಮತ್ತು ಪಂಗಡಗಳ ಹಿಂದೀಯರೂ ಒಂದಾಗಿ ಸೇರುವಂತೆ ಸಾಧ್ಯವಾದ ಪ್ರಯತ್ನಮಾಡಬೇಕು. ಕಾಂಗ್ರೆಸ್ ಮಂತ್ರಿಗಳು ಅಧಿಕಾರಬಿಟ್ಟು ಹೊರಬಂದ ಮೇಲೆ ಅದಕ್ಕೆ ಮತ್ತಷ್ಟು ಅನುಕೂಲ ವಾತಾವರಣವುಂಟಾಗುವುದು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಭಾರತೀಯರೆಲ್ಲರೂ ಮಾತೃಭೂಮಿಯ ಬಂಧವಿಮೋಚನೆಯ ಪ್ರಶ್ನೆಯ ಕಡೆಗೆ ಮೊದಲಾಗಿ ಗಮನವಿತ್ತು, ತಮ್ಮೊಳಗಣ ಭಿನ್ನಭೇದ, ವೈಷಮ್ಯಗಳನ್ನೆಲ್ಲಾ ಮೂಲೆಗೊತ್ತಿ ಒಂದಾಗದಿದ್ದರೆ, ಸ್ವಾತಂತ್ರ್ಯಸಾಧನೆಯ ಅದೊಂದು ಸುವರ್ಣಸಂಧಿಯನ್ನು ಕಳಕೊಳ್ಳುವಂತಾಗುವುದು.

ಮಂತ್ರಿಗಳ ರಾಜಿನಾಮೆಯ ನಿರ್ಧಾರ

...ರು ಇನ್ನೊಂದು ಹೇಳಿಕೆ ಹೊರಡಿಸುವರೇ?

...ಲಿನರು ಹಿಟ್ಲರರಿಗೆ ಸೇನಾ ಸಹಾಯ ನಿರಾಕರಿಸಿರುವರು.

...ಹಳೆಯ
...ಯ ಸುಸ್ಪ
...ತ್ತದೆ. ಬ್ರಿ
...ವನ್ನು ಮರೆ
...ಶದ ಹಲವು
...ಭಿಪ್ರಾಯ
...ವರ್ಕಿಂ
...ಸು. ಹಿಂದೂ
...ರಣೆಯು
...ಸ್ವಾತಂತ್ರ್ಯ
...ವು ಯಥಾ
...ಸಲು ಕಾಂ
...ನ್ನು ಕೇಳಿ
...ಕ್ಷ್ಯಗಳನ್ನು
...ಸದಾ ಪ್ರತಿ
... ಕೇಳುವ
...ಗ್ರೆಸಿಗೆ ಅಧ
...ಪಕ್ಷ ಯಾ
...ಪದೆ, ಇಡೀ
...ಬಲ್ಲಾ ಪಕ್ಷ
...ವಾಗುವಂತ
...ಸಸಂದರ್ಭ
...ನ್ನು ಕಾಂ
...ವ ವೈಸರಾ
...ಬೆಂದು ರೀತಿ
...ಪುತ್ತದೆ
...ಗ್ರೇಟ್‌ಬ್ರಿ
...ವನ್ನೀಯುವುದ
...ವಿಲ್ಲ ಹಾಗೆ
...ವ ಸಾಮ್ರಾ
...ಸುವ ನಿರ್ಧಾ

ಜರ್ಮನಿಯ ಮುಖಂಡರೊಡನೆ ಹಿಟ್ಲರರ ಮಾತುಕತೆ

ರವನ್ನು ಹಿಂದೆ ಮಾಡಿಕೊಂಡು ಬಂದಿರುವದೋ ಅದನ್ನೇ ಅಲ್ಲಗಳೆದಂತಾಗುವುದು. ಈ ದೃಷ್ಟಿಯಿಂದ ಮೊದಲಿನ ಹೆಜ್ಜೆಯಾಗಿ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಡಬೇಕೆಂದು ವರ್ಕಿಂಗ್ ಕಮಿಟಿಯು ನಿರ್ಧಾರ ಮಾಡುತ್ತದೆ ರಾಷ್ಟ್ರದ ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಇಡೀ ರಾಷ್ಟ್ರವು ಅಂತಃಕಲಹಗಳನ್ನೆಲ್ಲಾ ಕೊನೆಗೊಳಿಸಿ, ಹಿಂದೂ ದೇಶದ ಸ್ವಾತಂತ್ರ್ಯಸಾಧನೆಗಾಗಿ ಒಕ್ಕಟ್ಟಿನಿಂದ ನಡೆಯಬೇಕೆಂದು ವರ್ಕಿಂಗ್ ಕಮಿಟಿಯು ಆಗ್ರಹದಿಂದ ವಿನಂತಿ ಮಾಡಿಕೊಳ್ಳುತ್ತದೆ

ಕಾಂಗ್ರೆಸ್ ಕಮಿಟಿ ಮತ್ತು ಕಾಂಗ್ರೆಸ್ ವಾದಿಗಳು ಮುಂದೆ ಉಂಟಾಗಬಹುದಾದ ಎಂತಹ ಪರಿಸ್ಥಿತಿ ಮತ್ತು ವಿದ್ಯಮಾನಕ್ಕಾದರೂ ಸಿದ್ಧರಾಗಿದ್ದು, ದೇಶದ ಗೌರವ ಮತ್ತು ಕಾಂಗ್ರೆಸಿನ ತತ್ವಗಳಿಗ ಭಂಗ ಬರುವ ರೀತಿಯಲ್ಲಿ ಏನಾದರೂ ನಡೆಯದಂತೆ ಮಾತಿನಲ್ಲಿಯೂ ಕಾರ್ಯದಲ್ಲಿಯೂ ಸಂಯಮ ಮತ್ತು ಶಿಸ್ತನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತದೆ ಕಾಯಿದೆಭಂಗ, ರಾಜಕೀಯ ಮುಷ್ಕರವೇ ಮೊದಲಾದುವೇನನ್ನಾದರೂ ಕಾಂಗ್ರೆಸಿನವರು ಅವಸರದಿಂದ ನಡಿಸಬಾರದೆಂದು ವರ್ಕಿಂಗ್ ಕಮಿಟಿಯು ಎಚ್ಚರವೀಯುತ್ತದೆ ಕಮಿಟಿಯು ದೇಶದ ಪರಿಸ್ಥಿತಿ ಮತ್ತು ಬ್ರಿಟಿಷ್ ಸರಕಾರದ ಚಟುವಟಿಕೆಗಳನ್ನು ಎಚ್ಚರದಿಂದ ನೋಡಿಕೊಂಡಿದ್ದು, ಆಗತ್ಯ ಬಂದಾಗ ಮುಂದೇನು ಮಾಡತಕ್ಕದ್ದೆಂಬುವನ್ನು ದೇಶಕ್ಕೆ ತಿಳಿಸಲು ಹಿಂದೆಗೆಯಲಾರದು. ದೇಶದ ಮುಂದಿರುವ ಪ್ರಶ್ನೆಯ ಮಹತ್ವಿಕಗನುಗುಣವಾದ ನಿರೋಧದ ಕಾರ್ಯಕ್ರಮವನ್ನು ಕೈಕೊಂಡು ನೆರವೇರಿಸಬೇಕಾದರೆ ಕಾಂಗ್ರೆಸಿನೊಳಗೆ ಸಂಪೂರ್ಣ ಶಿಸ್ತು ಮತ್ತು ಕಾಂಗ್ರೆಸ್ ಸಂಸ್ಥೆಗಳನ್ನು ಬಲಪಡಿಸುವುದು ಅತ್ಯಾವಶ್ಯಕವೆಂಬುದನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾಂಗ್ರೆಸ್‌ವಾದಿಗಳ ಮನಗಾಣಿಸಲೆಳಸುತ್ತದೆ ಹಿಂದೆ ಕಾಂಗ್ರೆಸು ಹೂಡಿರುವ ಅಹಿಂಸಾತ್ಮಕ ನಿರೋಧವು ಕೆಲವು ವೇಳೆ ಹಿಂಸೆಯಿಂದ ಕೂಡಿತ್ತೆಂಬುದನ್ನು ಕಮಿಟಿಯು ಮನಗಂಡಿರುತ್ತದೆ ಆದುದರಿಂದ ಇನ್ನು ಮುಂದೆ ಹೂಡಲ್ಪಡುವ ಯಾವ ನಿರೋಧದಲ್ಲಾದರೂ ಹಿಂಸಗೆ ಸ್ವಲ್ಪವೂ ಅಸ್ಪದ ದೊರೆಯಕೂಡದೆಂಬುದನ್ನು ಕಮಿಟಿಯು ಒತ್ತಿ ಹೇಳುತ್ತದೆ ಈ ಕುರಿತು 1931ನೇ ಇಸ್ವಿಯಲ್ಲಿ ಅಹಮ್ಮದಾಬಾದ ಕಾಂಗ್ರೆಸಿನಲ್ಲಿ ಮತ್ತು ಅನಂತರದ ಅಧಿವೇಶನಗಳಲ್ಲಿ ಕಾಂಗ್ರೆಸ್‌ವಾದಿಗಳು ಕೈಕೊಂಡಿರುವ ಅಹಿಂಸೆಯ ಪ್ರತಿಜ್ಞೆಯನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು

ಕಾಂಗ್ರೆಸ್ ಮಂತ್ರಿಗಳೆಲ್ಲಾ ಈ ತಿಂಗಳ ಅಂತ್ಯದೊಳಗೆ ರಾಜಿನಾಮೆ ಕೊಡುವರು.

ಮಧ್ಯಪ್ರಾಂತ ಮತ್ತು ಒರಿಸ್ಸ ಎಸೆಂಬ್ಲಿಗಳ ಅಧಿವೇಶನವು ನವಂಬರ ಆರಂಭದಲ್ಲಿ ನಡೆಯಲಿರುವುದರಿಂದ ಆ ಪ್ರಾಂತಗಳ ಮಂತ್ರಿಗಳು ಅನಂತರ ರಾಜಿನಾಮೆಕೊಡುವರು. ಈಗ ಮಂತ್ರಿಗಳು ಮತ್ತು ಪಾರ್ಲಿಮೆಂಟರಿ ಸೆಕ್ರೆಟರಿಗಳು ಮಾತ್ರ ರಾಜನಾಮೆ ಕೊಡುವರು. ಎಸೆಂಬ್ಲಿಯ ಸ್ಪೀಕರ್ ಮತ್ತು ಡಿಪ್ಯುಟಿ ಸ್ಪೀಕರುಗಳೂ, ಕೌನ್ಸಿಲ್ ಪ್ರೆಸಿಡೆಂಟ್ ಮತ್ತು ಡಿಪ್ಯುಟಿ ಪ್ರೆಸಿಡೆಂಟರೂ, ಎಸೆಂಬ್ಲಿ ಮೆಂಬರರೂ ಪ್ರಕೃತ ರಾಜಿನಾಮೆಕೊಡಬೇಕಾಗಿಲ್ಲ ಈಗಣ ಪರಿಸ್ಥಿತಿಯ ದೃಷ್ಟಿಯಿಂದ ಪ್ರತಿಯೊಂದು ಎಸೆಂಬ್ಲಿಯು ಮುಂದೆ ತರಲ್ಪಡುವ ಇಂಗ್ಲೆಂಡಿನ ಯುದ್ಧದ ಉದ್ದೇಶದ ಸಂಬಂಧವಾದ ನಿರ್ಣಯಗಳಲ್ಲಿ ಬದಲಾವಣೆಮಾಡಲ್ಪಡುವುದು

ಕಾಂಗ್ರೆಸ್ ಮಂತ್ರಿಗಳು ಅಧಿಕಾರಕ್ಕೆ ಬಂದು ಈಗ 27ತಿಂಗಳುಗಳಾದುವು ಹಿಂದೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಾರ್ಧದಲ್ಲಿ ಅಧಿಕಾರ ಸ್ವೀಕಾರದ ನಿರ್ಣಯಕ್ಕೆ ಬಂದಾಗ ಜೋರು ಮಳೆ ಬಂದಂತೆ ಈ ಸಲವೂ ಬಂದಿದ್ದಿತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಈಸಲ ಬಹಳ ಸ್ವಲ್ಪ ಸಮಯ ಮಾತ್ರ ಸಭೆ ಸೇರಿ ಹೆಚ್ಚಿನ ಚರ್ಚೆಯೇನೂ ಇಲ್ಲದೆ ನಿರ್ಣಯವನ್ನು ಮಂಜೂರುಮಾಡಿರುವುದು.

ಸ್ಟೇಲಿನರ ದೃಢ ನಿರ್ಧಾರ

ಹಿಟ್ಲರರು ಸ್ಟೇಲಿನರಿಂದ ಸೇನಾ ಸಹಾಯವನ್ನು ಕೇಳಿರುವರೆಂದು ತಿಳಿದು ಬಂದಿದೆ ಪ್ರಕೃತ 2000 ವಿಮಾನಗಳನ್ನು ಕೇಳಿರುವರಂತೆ ತಟಸ್ಥ ರಾಷ್ಟ್ರಗಳ ಪತ್ರಿಕೆಗಳಲ್ಲಿ ಪ್ರಕಟವಾದಂತೆ ಸ್ಟೇಲಿನರು ಯಾವ ಸೇನಾ ಸಹಾಯ ಮಾಡಲು ಸಾಧ್ಯವಿಲ್ಲೆಂದು ಹಿಟ್ಲರರಿಗೆ ಉತ್ತರವಿತ್ತಿರುವರೆಂದು ತಿಳಿದು ಬರುತ್ತದೆ ರಷ್ಯದ ಧೋರಣೆಯನ್ನು ಸ್ಪಷ್ಟಪಡಿಸಿ ಸ್ಟೇಲಿನರು ಹಿಟ್ಲರರಿಗೊಂದು ಪತ್ರ ಬರೆದಿರುವರೆಂದೂ, ಇದರಿಂದ ಹಿಟ್ಲರರು ತೀವ್ರ ನಿರಾಶೆಗೊಂಡಿರುವರೆಂದೂ ಪ್ರಕಟಿಸಲ್ಪಟ್ಟಿದೆ. ಇದರಿಂದ ರಷ್ಯವು ಸಂಪೂರ್ಣವಾಗಿ ಜರ್ಮನಿಯ ಪಕ್ಷಹಿಡಿದಿಲ್ಲೆಂಬುದು ಸ್ಪಷ್ಟವಾಗುವುದು ರಷ್ಯವನ್ನೂ ತನ್ನೊಂದಿಗೆ ಯುದ್ಧಕ್ಕೆಳೆಯಲು ಜರ್ಮನಿಯು ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡಿಸದಿರಲಾರದು. ಆದರೆ ಸ್ಟೇಲಿನರು ಆ ಬಲೆಗೆ ಬೀಳುವ ಹಾಗಿಲ್ಲ ಯುರೋಪಿನ ರಾಜಕೀಯದ ಅನುಭವವನ್ನು ಅವರು ಚೆನ್ನಾಗಿ ಮಾಡಿಕೊಂಡಿದ್ದಾರೆ. ಆದುದರಿಂದ ಅವರು ತನ್ನದೇ ಆದ ಸ್ವತಂತ್ರಧೋರಣೆಯನ್ನವಹಿಸಿ ರಷ್ಯದ ಶಕ್ತಿ ಮತ್ತು ಅಧಿಕಾರವನ್ನು ಬೆಳೆಸುವ ರೀತಿಯಲ್ಲಿ ವರ್ತಿಸುವರೆಂದು ನಿರೀಕ್ಷಿಸಲಾಗಿದೆ.

ನಾಝಿ ಮುಖಂಡರ ಸಭೆ

ಹರ್ ಹಿಟ್ಲರರು, ನಾಝಿ ಜಿಲ್ಲಾ ಮುಖಂಡರು ಮತ್ತು ಸ್ಟೇಟ್ ಗವರ್ನರರುಗಳನ್ನೂ, ಟರ್ಕಿ ಇಟೆಲಿ ಮತ್ತು ರಷ್ಯದ ರಾಯಭಾರಿಗಳನ್ನೂ ಕರೆದು ಮಾತುಕತೆ ನಡಿಸುತ್ತಿದ್ದಾರೆ ಇದರ ಉದ್ದೇಶವೇನೆಂದು ಸ್ಪಷ್ಟವಾಗಿ ತಿಳಿದು ಬಂದಿರುವುದಿಲ್ಲ. ಸೇನಾನಾಯಕರು ಮತ್ತು ನೌಕಾಪಡೆಯ ನಾಯಕರುಗಳೂ ಈ ಮಾತುಕತೆಯಲ್ಲಿ ಭಾಗವಹಿಸಿರುತ್ತಾರೆ. ಕಳೆದ ಶನಿವಾರ ಇಡೀ ದಿನ ಈ ಸಭೆ ನಡೆಯಿತು ಪೋಲೆಂಡಿನ ಮೇಲೆ ಯುದ್ಧ ಆರಂಭಿಸುವ ಪೂರ್ವದಲ್ಲಿಯೂ ಇಂತಹದೇ ಆದೊಂದು ಪರಿಷತ್ತು ನಡೆದಿದ್ದಿತು. ಈ ಪರಿಷತ್ತಿನಲ್ಲಿ ನಡೆದ ಚರ್ಚೆಯ ವಿಷಯವು ಅತಿರಹಸ್ಯವಾಗಿರಿಸಲ್ಪಟ್ಟಿದೆ. ಶಾಂತಿಯ ಆಶೆಯನ್ನೆಲ್ಲಾ ಹಿಟ್ಲರರು ಈಗ ಬಿಟ್ಟು ಬಿಟ್ಟು ಮುಂದೆ ಯಾವ ರೀತಿಯಲ್ಲಿ ಹೋರಾಟವನ್ನು ನಡಿಸುವುದೆಂಬುದನ್ನು ನಿಶ್ಚೈಸುವುದಕ್ಕೇನೆ ಹಿಟ್ಲರರು ಪರಿಷತ್ತು ಕರೆದಿರಬೇಕೆಂದು ನಂಬಲಾಗಿದೆ ಪ್ರಥಮವಾಗಿ ಬ್ರಿಟನಿನ ಮೇಲೆ ಪ್ರಬಲ ವಿಮಾನ ಧಾಳಿ ನಡೆಸಲ್ಪಡುವುದೆಂದೂ, ಪ್ರಕೃತ ಪಶ್ಚಿಮ ರಣರಂಗದ ಯುದ್ಧವನ್ನು ನಿಲ್ಲಿಸಲಾಗುವುದೆಂದೂ ಸುದ್ದಿಯುಂಟಾಗಿದೆ ಜರ್ಮನ್ ಪ್ರದೇಶವನ್ನಾಕ್ರಮಿಸಿದ್ದ ಫ್ರೆಂಚ್ ಸೇನೆಯೆಲ್ಲಾ ಈಗ ಹಿಂದೆಸರಿದು ಮೆಗಿನೋಟ್ ಕೋಟೆಯನ್ನು ಮರಿಯಲೆತ್ನಿಸುವಂತೆ ಆಕರ್ಷಿಸಿ ಜರ್ಮನ್ ಸೇನೆಯು ಮುಂದಾಗುವಂತೆ ಮಾಡುವುದೇ ಫ್ರೆಂಚರ ಪ್ಲೇನಾಗಿದೆ ಆದರೆ ಹಿಟ್ಲರರು ಪಶ್ಚಿಮ ರಣರಂಗದಲ್ಲಿ ಹೋರಾಟವನ್ನೇನೂ ಮಾಡದೆ ಫ್ರೆಂಚ್ ಮತ್ತು ಬ್ರಿಟಿಷ್ ಸೇನಗಳೇ ಜರ್ಮನರ ಮೇಲೆ ಬೀಳಬೇಕೆಂಬ ಧೋರಣೆ ವಹಿಸಿರುವಂತಿದೆ ಮಿತ್ರರಾಷ್ಟ್ರಗಳು ಎಷ್ಟು ದೀರ್ಘಕಾಲ ಬೇಕಾದರೂ ಕಾಯಲು ಸಿದ್ಧವಿರುವವು ಆದರೆ ಹಿಟ್ಲರರಿಗೆ ಸಾಧ್ಯವಿದೆಯೇ?

ಪುತ್ತೂರಲ್ಲಿ ಖಾದಿ ಮಾರಾಟ

"ಗಾಂಧಿ ಸಪ್ತಾಹ"ದ ಸಂಬಂಧ ಪುತ್ತೂರಲ್ಲಿ ಈ ತಿಂಗಳಲ್ಲಿ ಖಾದಿಮಾರಾಟ ನಡಿಸಬೇಕೆಂಬ ಉದ್ದೇಶದಿಂದ ಪುತ್ತೂರಿನ ಸಿ ಪಿ ಸಿ ಆಫೀಸಿನ ಮುಖಾಂತರ ಅಖಿಲಭಾರತ ಚರಕಾ ಸಂಘದ ಮಂಗಳೂರು ಶಾಖೆಯಿಂದ ನವ ಖಾನಾರು ಖಾದಿವಸ್ತ್ರಗಳನ್ನು ತರಿಸಿ ಸುಮಾರು ರೂಪಾಯಿ 200ಕ್ಕೆ ವಿಕ್ರಿಯಾದ ವಾರ್ತೆ ಟವಾಗಿರುತ್ತದೆ ಪುತ್ತೂರಿನ ಮಹಾಜನರು ಸಿ. ಪಿ. ಸಿ. ಗೆ ವಿಶೇಷ ಪ್ರೋತ್ಸಾಹ ಕೊಟ್ಟಿರುವರು.

ಸಮ್ಮೇಳನದ ಪುತ್ತೂರಲ್ಲಿ ಖಾದಿಯ ಶಾಖೆ ಒಂದು ತೆರೆಯಲ್ಪಡುವುದಯಾಗಿ ನಂಬತ್ತೇನೆ. ಈ ಬಗ್ಗೆ ಶ್ರೀ ಮೊಳಹಳ್ಳಿ ಶಿವರಾಯರೂ, ಶ್ರೀ ಸದಾಶಿವರಾಯರೂ ಬೇಕಾದ ಧನಸಹಾಯವನ್ನು ಮಾಡಿಸಿ ಕೆಲ್ಸ ಏರ್ಪಾಡನ್ನ ಮಾಡತ್ತೇನಯಾಗಿ ಭರವಸೆ ಕೊಟ್ಟಿರುತ್ತಾರೆ ಹೆಚ್ಚಿನ ಪ್ರೋತ್ಸಾಹ ಇರುವ ಪುತ್ತೂರು ಶಹರಿನಲ್ಲಿ ಖಾದಿಯಂಗಡಿಯ ಅವಶ್ಯಕತೆ ಇದಿಯೆಂದೂ ಅದು ಕೆಲಕಾಲ ತೆರೆಯಲ್ಪಡಬೇಕೆಂದೂ ಹಾರೈಕೆ.

ಯಂ ಬಿ. ನರಸಪ್ಪ

ವೈಸರಾಯರು ಇನ್ನೊಂದು ಹೇಳಿಕೆ ಕೊಡಬಹುದು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮಿತವಾದ ನಿರ್ಣಯವು ಸಂಧಾನದ ದ್ವಾರವನ್ನು ಇನ್ನೂ ತೆರೆದೇ ಇಟ್ಟಿರುವದು. ಉದ್ದೇಶಪೂರ್ವಕವಾಗಿ ವರ್ಕಿಂಗ್ ಕಮಿಟಿಯು ಅತ್ಯಂತ ಸೈರಣೆ ತೋರಿಸಿದೆ ಇದನ್ನು ಸಂಬಂಧಪಟ್ಟವರೆಲ್ಲಾ ಮನಗಂಡು ಪ್ರಶಂಸಿಸಲೇಬೇಕು ವೈಸರಾಯರ ಹೇಳಿಕೆಯು ಶೋಚನೀಯವಾದರೂ ಇಷ್ಟಾದರೂ ಪರಿಸ್ಥಿತಿಯು ಕೈಮೀರಿಹೋಗಿಲ್ಲೆಂದು ಗಾಂಧಿಜಿಯವರು ಎಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯೊಡನೆ ಹೇಳಿರುವರು. ವೈಸರಾಯರು ಇನ್ನೊಮ್ಮೆ ಮಹಾತ್ಮ ಗಾಂಧಿಯವರನ್ನು ಕರೆದು ಮಾತಾಡಬೇಕೆಂಬ ಅಭಿಪ್ರಾಯವು ಹಲವರಲ್ಲುಂಟಾಗಿದೆ ವೈಸರಾಯರ ಹೇಳಿಕೆಯ ಕುರಿತು ಉಂಟಾಗಿರುವ ವಿರೋಧದಿಂದ ಅಧಿಕಾರಿಗಳಲ್ಲಿ ಆಶ್ಚರ್ಯವುಂಟಾಗಿದೆ. ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಕೊಟ್ಟರೆ ಮುಂದೇನು ಮಾಡುವುದೆಂಬುದು ಸಮಸ್ಯೆಯಾಗಿದೆ. ಹಿಂದೂದೇಶದ ಕುರಿತು ಬ್ರಿಟಿಷ್ ಸರಕಾರದ ಧೋರಣೆಯಿಂದ ಬ್ರಿಟಿಷ್ ಲೇಬರ್ ಪಕ್ಷದಲ್ಲಿ ಬಹಳ ಅತೃಪ್ತಿಯುಂಟಾಗಿದೆ ಲೇಬರ್ ಪಕ್ಷದ ನಾಯಕರಾದ ಮೇಜರ್ ಎಟ್ಲಿಗಳೇ ಮೊದಲಾದವರು ಹಿಂದೀ ಪ್ರಶ್ನೆಯನ್ನು ಇದೇ ತಾ 26 ರಲ್ಲಿ ಪಾರ್ಲಿಮೆಂಟಿನ ಮುಂದ ತಂದು ಚರ್ಚಿಸಲಿದ್ದಾರೆ ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ತನ್ನ ಧೋರಣೆಯನ್ನು ಸ್ಪಷ್ಟೀಕರಿಸಬೇಕಾಗುವುದು. ವೈಸರಾಯರೂ ಕೂಡಾ ತಾ 26ರಲ್ಲಿ ಇನ್ನೊಂದು ಹೇಳಿಕೆಯನ್ನು ಹೊರಡಿಸಲಿರುವರೆಂಬ ಸುದ್ದಿಯು ಡಿಲ್ಲಿಯಲ್ಲುಂಟಾಗಿದೆ

ಮಂದಪಕ್ಷೀಯರ ನಿರ್ಧಾರ.

ಆಲ್ ಇಂಡಿಯಾ ಲಿಬರಲ್ ಫೆಡರೇಶನಿನ ಕೌನ್ಸಿಲಿನ ಸಭೆಯು ಇದೇ ತಾ. 21 ಮತ್ತು 22ರಲ್ಲಿ ಬೊಂಬಾಯಿಯಲ್ಲಿ ಸೇರಿ ಇಂಗ್ಲೆಂಡಿನ ಧೋರಣೆಯ ಕುರಿತು ವಿಷಾದ ಸೂಚಿಸುವ ಇಂತಿಷ್ಟೇ ಅವಧಿಯೊಳಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೀಯುವುದೆಂಬುದನ್ನು ಸ್ಪಷ್ಟೀಕರಿಸಬೇಕೆಂಬ ಮತ್ತು ಕೇಂದ್ರದಲ್ಲಿ ಈಗಲೇ ಅಧಿಕಾರವನ್ನು ಟ್ರೇನ್ಸ್‌ಫರ್ ಮಾಡಬೇಕೆಂಬ ನಿರ್ಣಯವಾಗಿರುವುದು ವೈಸರಾಯರ ಹೇಳಿಕೆಯು ಮಂದಪಕ್ಷೀಯರನ್ನೂ ತೃಪ್ತಿಪಡಿಸಿರುವುದಿಲ್ಲ ಯುದ್ಧ ಸಂಬಂಧವಾದ ಸಲಹೆಯ ಕೂಟವು ಯಾವ ಜವಾಬ್ದಾರಿಯೂ ಇಲ್ಲದೆ ಅಪ್ರಯೋಜಕವಾದುದೆಂದು ಲಿಬರಲ್ ಫೆಡರೇಶನಿನ ಅಭಿಮತ ಈ ಸಂದರ್ಭದಲ್ಲಿ ಇಡೀ ಲೋಕದ ಸ್ವಾತಂತ್ರ್ಯಸಾಧನೆಯ ದೃಷ್ಟಿಯಿಂದ ಹಿಂದೀಯರೆಲ್ಲರೂ ತಮ್ಮ ವೈಷಮ್ಯ ಮತ್ತು ಅಭಿಪ್ರಾಯಗಳನ್ನು ಮೂಲೆಗೊತ್ತಿ ಒಂದಾಗಿ ನಡದು ಸಮಭಾರತವು ನಿರ್ವಿಘ್ನವಾಗುವಂತೆ ಪ್ರಯತ್ನಿಸಬೇಕೆಂದೇ ಲಿಬರಲ್ ಫೆಡರೇಶನಿನ ವಿನಂತಿ. ಡಾಕ್ಟರ್ ಅಂಬೇಡ್ಕರರೂ ವೈಸರಾಯರ ಹೇಳಿಕೆಯಿಂದ ಅಸ್ಪೃಶ್ಯರಿಗೆ ತೃಪ್ತಿಯಾಗಿರುವುದಿಲ್ಲ ಸಲಹೆಯ ಕೂಟವು ಅಪ್ರಯೋಜಕವೆಂದೇ ಅವರೂ ಅಭಿಪ್ರಾಯಪಟ್ಟಿರುವರು

...ಜನರಲ್
...ಕಂಪನಿ
...ದ್ರಾಸು
...ಟ್ ಏಜಂಟ
...ಟ್ಟಾರು ಸೀನ
...ಟ್ ಒರ್ಗ
...ಗಿರುತ್ತದೆ
...ಲು ರಾವು
...ಏಜಂಟರಾಗಿ
...ಯ ಮಂಗ
...ಪುತ್ತೂರು,
...ಲೂಕುಗಳಿಗ
...ಸ್ಪೆಷಲ್
...ಗಿರುತ್ತಾರೆ
...ರಂಟಿ ಕೊ
...ಮಾಹಿತಿ
...ಕೆಳಗಿನ
...HEGDE,
...uth Kanara
...A.

ಮಂಗಳೂರು

ಸ್ವಂ ಬಾ ತಾ 22-10-39.

ನಾಡಹಬ್ಬ—ಮಂಗಳೂರು ಮಿತ್ರಮಂಡಲಿಯ ಆಶ್ರಯದಲ್ಲಿ ಕಳೆದ ತಾ 18ರಿಂದ 21ರ ವರೆಗೆ ಸಾಹಿತ್ಯ ಉತ್ಸವವು ಕೆನರಾ ಹೈಸ್ಕೂಲು ಭವನದಲ್ಲಿ ಆಚರಿಸಲ್ಪಟ್ಟಿತು. ತಾ 18ನೇ ಸಂಜೆ ಡಾ ಕೆ ವಿಟ್ಠಲ ಶೆಟ್ಟಿಯವರ ಸಮಾರಂಭದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ಈ ಕೆಲವು ವರ್ಷಗಳಿಂದಲೂ ಮಿತ್ರಮಂಡಲಿಯು ಮಾಡುತ್ತಿರುವ ಸಾಹಿತ್ಯ ಸೇವೆಯನ್ನು ಕೊಂಡಾಡಿ ಅವರ ಸದುದ್ದೇಶಕ್ಕೆ ಮಹಾಜನರ ಸರ್ವಾಯ ಸಹಾನುಭೂತಿಗಳನ್ನು ಕೋರಿದರು. ಅನಂತರ ಬೆಂಗಳೂರಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಎಲ್ ಗುಂಡಪ್ಪನವರು "ಕನ್ನಡದಲ್ಲಿ ಗ್ರೀಕ್ ನಾಟಕಗಳು" ಎಂಬ ವಿಷಯವನ್ನೆತ್ತಿಕೊಂಡು ಪುರಾತನ ಗ್ರೀಕರ ರಂಗಭೂಮಿ, ಕಥಾವಿಷಯ, ಪಾತ್ರಗಳು, ಇವುಗಳಿಗೂ ಪುರಾತನ ಹಿಂದೂಗಳ ರಂಗಭೂಮಿಗೂ, ಕಥಾಭಾಗಕ್ಕೂ ಇರತಕ್ಕ ಸಾಮ್ಯಗಳನ್ನು ತೋರಿಸಿಕೊಟ್ಟು ಈಚೆಗೆ ಕನ್ನಡದಲ್ಲಿ ಬರೆಯಲ್ಪಟ್ಟಿರುವ "ಅಶ್ವತ್ಥಾಮ"ವೆಂಬ ನಾಟಕದ ಕೆಲ ಅಂಶಗಳನ್ನು ಓದಿದರು ಎಂಟಿಗನಿ ಎಂಬ ನಾಟಕದ ಕಥಾಭಾಗವನ್ನು ಹೇಳಿದರು. ಅನಂತರ 'ಯಮನ ಸೋಲು' ಎಂಬ ನಾಟಕವಾಗಿ ಧನ್ಯವಾದಗಳೊಂದಿಗೆ ಸಭಾಮುಕ್ತಾಯವಾಯಿತು.

ತಾ. 19ನೇ ದಿನ ಸಾಯಂಕಾಲ ವಕೀಲ್ ಶ್ರೀ ಕೆ. ಆರ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರೊಫೆಸರರಾದ ಶ್ರೀ ಎಚ್ ಸುಬ್ಬಾ ಜೋಯಿಸ್ ಯಂ ಎಸ್. ಸಿ. ಅವರು "ಇಂಗಾಲದ ಮಹಿಮೆ" ಎಂಬ ವಿಷಯವಾಗಿ ಮಾತಾಡಿದರು. ಇಂಗಾಲದ ಪ್ರಯೋಜನಗಳನ್ನು ವಿವರಿಸಿ ಗ್ಯಾಸ್ ಮಾಸ್ಕ್ ರಚನೆಯಲ್ಲಿ ಅದರ ಉಪಯೋಗವನ್ನು ತಿಳಿಸಿದರು. ಅಧ್ಯಕ್ಷರು ಕನ್ನಡದಲ್ಲಿ ಇಷ್ಟು ಗಹನವಾದ ವಿಷಯಗಳನ್ನು ಹೇಳಿದ ಪ್ರೊಫೆಸರರ ಪಾಂಡಿತ್ಯವನ್ನು ಕೊಂಡಾಡಿ, ಕನ್ನಡದಲ್ಲಿ ವಿಜ್ಞಾನ ವಿಷಯಗಳನ್ನು ಕಲಿಸಿದರೆ ಅದರಿಂದ ಬಹಳ ಪ್ರಯೋಜನವಾಗಬಹುದೆಂದರು. ನಾಟಕಪ್ರದರ್ಶನವಾಗಿ ಸಭಾಮುಕ್ತಾಯವಾಯಿತು.

ತಾರೀಕು 20ರಲ್ಲು ವಿದ್ವಾನ್ ಟಿ ನಾರಾಯಣ ಭಟ್ಟರು ಕನ್ನಡಸೇವೆ ಎಂಬುದರ ಕುರಿತು ಸ್ವಾರಸ್ಯವಾದ ಭಾಷಣಮಾಡಿದರು. ಶ್ರೀ. ಬಿ. ಎ. ಬಾಳಿಗ ಯಂ ಎಲ್ ಎ ಯವರು ಅಧ್ಯಕ್ಷತೆ ವಹಿಸಿದ್ದರು. ಸರಕಾರವು ದೇಶಭಾಷೆಗೆ ಸರಿಯಾದ ಪ್ರೋತ್ಸಾಹ ಕೊಡಲಿಲ್ಲ. ಹಾಗಿರುವಾಗ ಕನ್ನಡಭಾಷಾ ಸೇವೆಮಾಡಲು ಮಿತ್ರಮಂಡಳಿಯವರು ಪ್ರಯತ್ನಿಸುತ್ತಿರುವುದು ಸ್ತುತ್ಯವೆಂದರು. ನಾಲ್ಕನೆಯ ದಿವಸದ ಕಾರ್ಯಕ್ರಮವೂ ಯಶಸ್ವಿಯಾಗಿ ನೆರವೇರಿತು.

ಸರ್. ಟಿ. ವಿಜಯರಾಘವಾಚಾರ್ಯರು—ಪುತ್ತೂರಿನ ಪಂಚಾಯತ ಪರಿಷತ್ತನ್ನು ಉದ್ಘಾಟನೆಮಾಡುವ ಬಗ್ಗೆ ಬಂದಿದ್ದ ಸರ್. ಟಿ ವಿಜಯರಾಘವಾಚಾರ್ಯರು ತಾ. 19ರಲ್ಲಿ ಕಲ್ಚರಲ್ ಅಸೋಸಿಯೇಶನಿನ ಆಶ್ರಯದಲ್ಲಿ ಜೀವನವನ್ನು ಸುಖಮಯವಾಗಿ ಮಾಡುವ ಬಗೆ ಎಂಬ ವಿಷಯವಾಗಿ ಮಾತಾಡಿದರು. ನಿನ್ನೆಯ ದಿನ(ತಾ 21)ಗವರ್ನಮೆಂಟ್ ಕಾಲೇಜಿನಲ್ಲಿ ನರೆದ ಸಭೆಯಲ್ಲಿಯೂ ಕೂಡ ಅದೇ ವಿಷಯವನ್ನೆತ್ತಿಕೊಂಡು ಜನರು ತಾವು ತಮ್ಮ ಜನಾಂಗಮಾತ್ರವೆ ನಾಗರಿಕವೆಂಬುದಾಗಿ ತಿಳಿಯಬಾರದೆಂದೂ, ಸಕಲರಲ್ಲಿಯೂ ವಿಶಾಲ ದೃಷ್ಟಿಯಿಂದ ವರ್ತಿಸಬೇಕೆಂದೂ, ಜೀವನದಲ್ಲಿ ಬರುವ ಸುಖಕಷ್ಟಗಳನ್ನು ಸಂತೋಷದಿಂದ ಎದಿರಿಸಬೇಕೆಂದೂ ಈ ಪ್ರಕಾರ ಜೀವನವನ್ನು ಸುಖಮಯವಾಡಬಹುದೆಂದೂ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಎ ಶ್ರೀನಿವಾಸಪ್ಪನವರು ಉಪನ್ಯಾಸಕರ ಪರಿಚಯಮಾಡಿಕೊಟ್ಟರು.

ದಿ ಪ್ರೊಪ್ರೈಟರಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್—ಈ ಕಂಪೆನಿಯು 1938ರ ಇನ್ಶೂರೆನ್ಸ್ ಆಕ್ಟ್ ಪ್ರಕಾರ ರಿಜಿಸ್ಟ್ರೇಶನ್ ಸರ್ಟಿಫಿಕೇಟು ಪಡೆದಿರುವುದೆಂದು ಕೇಳುತ್ತೇವೆ.

ಉಡುಪಿ

ನಗರಸಭೆ—ಇದೇ ತಾ 18ನೇ ಬುಧವಾರ ಸಂಜೆ ಸ್ಥಳೀಯ ನಗರಸಭೆಯ ಸಾಮಾನ್ಯ ಮೀಟಿಂಗು ಶ್ರೀ ಎಲ್ ಎಸ್. ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು ನಗರರಚನಾ ಪ್ಲಾನ ಗಳನ್ನು ತಯಾರಿಸುವರೆ ರೂಪಾಯಿ 40ರ ತಲಬಿನ ಮೇಲೆ ಓವರ್ಸಿಯರು ನೇಮಿಸಲ್ಪಟ್ಟಿದ್ದು ಕಾರಣ ತಲಬನ್ನು ರೂ 50/- ಕ್ಕೆ ಏರಿಸಬಹುದೆಂದಾಯಿತು. ಪ್ರೊವಿಡೆಂಟ್ ಫಂಡಿನಿಂದ ರೂಪಾಯಿ 2500ನ್ನು ಮದ್ರಾಸ್ ಸೆಂಟ್ರಲ್ ಲೇಂಡ್ ಮೋರ್ಗೇಜ್ ಬೇಂಕಿನ ಡಿಬೆಂಚರುಗಳ ಮೇಲೆ ಠೇವಣಿಸುವರೆ ಮಂಜೂರಾತಿ ದೊರೆಯಿತು. ಮುನಿಸಿಪಲ್ ಪುಸ್ತಕಭಂಡಾರದಲ್ಲಿರುವರೆ ವಕೀಲ್ ಶ್ರೀ. ವಿಠಲ ಕಾಮತರು ಕೊಡಲಿರುವ ಮಹಾತ್ಮಾಜೀಯವರ ಪ್ರತಿಮೆಯನ್ನು ಧನ್ಯವಾದ ಪೂರ್ವಕ ಸ್ವೀಕರಿಸಬಹುದೆಂದಾಯಿತು.

ಕೋಪರೇಟಿವ್ ರಿಜಿಸ್ಟ್ರಾರರ ಮೊಕ್ಕಾಂ—ಮದ್ರಾಸು ಸಂಸ್ಥಾನದ ಕೋಪರೇಟಿವ್ ರಿಜಿಸ್ಟ್ರಾರರಾದ ಶ್ರೀ ಎಸ್ ಎ. ವೆಂಕಟ್ರಾಮನ್ ಐ ಸಿ ಎಸ್ ಅವರು ಇದೇ ತಾ 19ನೇ ಗುರುವಾರ ಸಂಜೆ ಉಡುಪಿಗೆ ಬಂದು ಕಲ್ಯಾಣಪುರದಲ್ಲಿಯ ಎಗ್ರಿಕಲ್ಚರಲ್ ಎಂಡ ಇಂಡಸ್ಟ್ರಿಯಲ್ ಸಂಘವನ್ನು ಸಂದರ್ಶಿಸಿದರು. ಆ ಬಳಿಕ ಉಡುಪಿ ಕೋಪರೇಟಿವ್ ಯೂನಿಯನ್, ಉಡುಪಿ ಟೌನ್ ಬೇಂಕ್, ಬಡಗಬೆಟ್ಟು ಸಂಘ, ಉಡುಪಿ ಸಂಘ, ಉಡುಪಿ ಲೇಂಡ್ ಮೋರ್ಗೇಜ್ ಬೇಂಕ್ ಮೊದಲಾದ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯ ಕುರಿತು ಹಾಜರಿದ್ದ ಡೈರೆಕ್ಟರರ ಕೂಡೆ ಮಾತುಕತೆ ನಡಿಸಿದರು. ಸಾಧಾರಣ 20,000 ಜನಸಂಖ್ಯೆಯುಳ್ಳ ಉಡುಪಿಗೆ ಮೂರು ಪ್ರತ್ಯಪ್ರತ್ಯೇಕ ಸಂಘಗಳ ಆವಶ್ಯಕತೆಯೇನಿದೆ? ಚಿನ್ನಾಭರಣದ ಜವಾಬ್ದಾರಿಯ ಸಾಲಗಳನ್ನೇಕೆ ಪ್ರಾರಂಭಿಸಬಾರದು? ಕೂಲಿಗಾರರಲ್ಲಿ ಮಿತವ್ಯಯವನ್ನು ಬೋಧಿಸುವರೆ ರಿಕರಿಂಗ್ ಡಿಪಾಜಿಟುಗಳನ್ನು ಪ್ರೋತ್ಸಾಹಿಸಬೇಕು. ತನ್ನ ಅನುಭವದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ವೈಶಿಷ್ಟ್ಯವು ಎರಡುವಿಧದಲ್ಲಿ ಕಂಡುಬಂದುವು. ಅವೇನೆಂದರೆ ಉಡುಪಿಯಲ್ಲಿ ಒಂದು ಟೌನ್‌ಬೇಂಕಿನ ಬದಲಾಗಿ ಮೂರುಸಂಘಗಳ ಸ್ಥಾಪನೆ. ಇನ್ನೊಂದು ಮಂಗಳೂರಲ್ಲಿ ಮುನಿಸಿಪಲ್ ಕೂಲಿಗಳಿಗೂ ಮುನಿಸಿಪಲ್ ಜಾಡಮಾಲಿಗಳಿಗೂ ಪ್ರತ್ಯೇಕ ಎರಡು ಸಂಘಗಳ ಸ್ಥಾಪನೆ. ಇದರಿಂದ ಐಕ್ಯತೆಯನ್ನು ಪ್ರದರ್ಶಿಸುವ ಬದಲಾಗಿ ನಿಮ್ಮಲ್ಲಿಯ ದುರ್ಬಲತೆಯನ್ನು ಪ್ರಕಟಿಸಿದಂತಾಯಿತು ಎಂಬಿತ್ಯಾದಿ ರಿಜಿಸ್ಟ್ರಾರರ ಗಂಭೀರ ಮಾತುಗಳು ಹೊರಟವು.

ಅನಂತರ ಸಂಘಕೂಟದ ಕಡೆಯಿಂದ ಟೀಪಾರ್ಟೀಸತ್ಕಾರ ನಡೆಯಿತು. ರಾತ್ರಿ ಡಿನ್ನರ್ ಪಾರ್ಟಿಯೊಂದನ್ನು ಮುನಿಸಿಪಲ್ ಬಂಗ್ಲೆಯಲ್ಲಿ ಪರ್ಯಾಯ ಪೀಠಸ್ಥರಾದ ಶ್ರೀ ಫಲಿಮಾರುಮಠದ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರು ಏರ್ಪಡಿಸಿದರು.

ಶ್ರೀ. ವಿಶ್ವಮಾನ್ಯತೀರ್ಥರ ನಿಧನ—ಶ್ರೀಗಳವರು ಲೋಂಡಾ ಸ್ಟೇಶನಿನಿಂದ ಧಾರವಾಡ ಬಂಗ್ಲೆಗೆ ಬಂದು ರಾತ್ರಿ ಉಳಕೊಂಡಿದ್ದರು. ಕಾವಲಿನವರು ಪರಿಚಯ ಕೇಳಿದಾಗ ತಾನೀಗ ದಣಿದಿರುವೆನೆಂದು ಎಲ್ಲಾ ವಿವರ ಬೆಳಗ್ಗೆ ಹೇಳುವೆನೆಂದು ನನ್ನನ್ನು ಬೇಗನೆ ಎಬ್ಬಿಸೆಂದೂ ಹೇಳಿ ಮಲಗಿದರಂತೆ. ಮರುದಿನ ವಾಚರನು ಎಬ್ಬಿಸಹೋದಲ್ಲಿ ಬಾಗಿಲು ತೆರಿಕೊಂಡಿದ್ದರಂತೆ. ಪೋಲೀಸರಿಗೆ ತಿಳಿಸಲಾಗಿ ಬಾಗಿಲುತೆರೆದು ನೋಡಲು ಕುತ್ತಿಗೆಗೆ ಶಾಲಿ ಸುತ್ತಿ ಆತ್ಮಹತ್ಯೆಮಾಡಿಕೊಂಡಿದ್ದರೆಂದು

ತಾ. 29 9 39ರಲ್ಲು ಅಕಾಲವಾಗಿ ದೈವವಶರಾದ ಕುಮಾರಿ ಸೀತಾಬಾಯಿಯ ವಿಷಯದಲ್ಲಿ ಸಂತಾಪಸೂಚಕ ತಂತಿಪತ್ರಗಳನ್ನು ಕಳುಹಿಸಿದ ಬಾಂಧವರೆಲ್ಲರಿಗೂ ತನ್ನ ಕೃತಜ್ಞತೆಯನ್ನು ಈ ಮೂಲಕವಾಗಿ ಅರ್ಪಿಸುತ್ತೇನೆಂದು ಶ್ರೀ ಎಂ. ಕೆ ವೈದ್ಯರು ತಿಳಿಸುತ್ತಾರೆ.

ಶ್ರೀ. ತೋನ್ಸೆ ಪೀನಪ್ಪ ಹೆಗ್ಡೇರು—ಮಂಗಳೂರು ಗ ಹಾ. ಎ ಟ್ರೈನಿಂಗ್ ಶಾಲೆಯ ಮೊಡೆಲ್ ಸ್ಕೂಲ್ ಸೆಕ್ಷನಿನ ಉಪಾಧ್ಯಾಯರಾದ ಶ್ರೀ ಪೀನಪ್ಪ ಹೆಗ್ಡೇರು ಇದೇ ಕಳೆದ ಸಪ್ಟಂಬರದಲ್ಲಿ B O L. ಡಿಗ್ರಿ (ಮದ್ರಾಸ್ ಯೂನಿವರ್ಸಿಟಿ) ಸಂಪೂರ್ಣ ಪಾಸಾಗಿರುವರೆಂಬುದು ಸಂತೋಷಕರವಿದೆ ದಕ್ಷಿಣಕನ್ನಡದಲ್ಲಿಯೂ ಬಂಟಸಮಾಜದಲ್ಲಿಯೂ ಈ ಪರೀಕ್ಷೆ ಪಾಸಾದವರು ಇವರೇ ಮೊದಲಿನವರಾಗಿದ್ದಾರೆ.

ತಿಳಿದುಬರುತ್ತದೆ. ಶವವನ್ನು ಕಣ್ವತೀರ್ಥಕ್ಕೆ ತಂದು ಸಮಾಧಿಮಾಡಲಾಯಿತು.

ಶ್ರೀಕೃಷ್ಣಮಠದಲ್ಲಿ ನವರಾತ್ರಿ ಮಹೋತ್ಸವ—ಪರ್ಯಾಯ ಪೀಠಾಂಕಿತರಾದ ಶ್ರೀ ಫಲಿಮಾರು ಸ್ವಾಮಿಯವರ ನೇತೃತ್ವದಲ್ಲಿ ಶ್ರೀ ಕೃಷ್ಣ ಮಠದಲ್ಲಿ ನವರಾತ್ರಿ ಮಹೋತ್ಸವವು ಬಹು ಯಶಸ್ವಿಯಾಗಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಮೂಲಾನಕ್ಷತ್ರ ದಿನ ಮೊದಲ್ಗೊಂಡು ವಿಜಯದಶಮಿ ಪರ್ಯಂತ ವಸಂತಮಹಲಿನಲ್ಲಿ ವಿವಿಧ ಕಸರತ್ತುಗಳ ಪ್ರದರ್ಶನ ಏರ್ಪಾಡು ಮಾಡಲಾಗಿತ್ತು. ಕಸರತ್ತುಗಾರರಿಗೆ ಪರ್ಯಾಯ ಶ್ರೀಗಳವರು ಶಾರದಾ ಸರಸ್ವತೀ ಪ್ರಸಾದರೂಪದ ಬಹುಮಾನಗಳನ್ನಿತ್ತರು. ಶ್ರೀ ಫಲಿಮಾರು ಸ್ವಾಮಿಗಳು ತನ್ನ ಪರ್ಯಾಯ ಕಾಲದಲ್ಲಿ ಕೆಲವು ನವೀನತೆಯನ್ನು ರೂಢಿಗೆ ತಂದ ಮಾದರಿಯು ಕಾಲೋಚಿತವೂ ಜನಪ್ರಿಯವೂ ಆಗಿರುವುದು ಸಂತೋಷಕರ.

ಹರಿಜನ ಬೋರ್ಡಿಂಗ್ ಸ್ಥಾಪನೆಯ ಯೋಜನೆ—ಇದೇ ತಾ. 21ರಲ್ಲಿ ಜರಗಿದ ಹರಿಜನರ ಹಾಗೂ ಹರಿಜನ ಬಂಧುಗಳ ಸಭೆಯಲ್ಲಿ ಹರಿಜನ ಅನಾಥಾಲಯ ಮತ್ತು ಹರಿಜನ ವಿದ್ಯಾರ್ಥಿ ಭವನಗಳನ್ನು ಒಂದುಗೂಡಿಸಿ ನವಂಬರ 1ನೇ ತಾರೀಕಿನಿಂದ ಹರಿಜನ ಬೋರ್ಡಿಂಗ್ ಸ್ಥಾಪಿಸಬೇಕೆಂದು ನಿರ್ಣಯವಾಯಿತು ತತ್ಸಂಬಂಧ ಶ್ರೀಗಳಾದ ವಕೀಲ್ ಕೆ. ಜಿ. ಬಲ್ಲಾಳ್ (ಪ್ರೆಸಿಡೆಂಟ್) ಗೋಪಾಲಸಾಲಿನ್ನ ಮತ್ತು ರಾಮಚಂದ್ರ (ಜತೆಕಾರ್ಯದರ್ಶಿಗಳು) ವಾಸುದೇವ ಶೆಣೈ, ನಾಗಪ್ಪ ಕಾಮತ್, ಅಂತಯ್ಯ ಶೆಟ್ಟಿ, ವಾಮನ ಮೆಸ್ತ್ರಿ ಕನ್ನವೆಸ್ತ್ರಿಯವರಿಂದ ಕೂಡಿದ ಆಡಳಿತ ಮಂಡಳಿಯ ರಚನೆಯಾಯಿತು.

ಕಟ್ಪಾಡಿಬೀಡು ದೊರೆಬಲ್ಲಾಳರಿಗೆ ಗೌರವ—ಉಡುಪಿ ತಾಲೂಕು ಕಟ್ಪಾಡಿಬೀಡು ಶ್ರೀ ಸೀತಾರಾಮ ದೊರೆಬಲ್ಲಾಳರು ಸ್ಥಳೀಯ ಬೆಂಚ್ ಕೋರ್ಟಿನ ಗೌರವಾರ್ಥ ಪರ್ಸ್ಯಕ್ಲಾಸ್ ಬೆಂಚ್ ಮೆಜಿಸ್ಟ್ರೇಟರಾಗಿ ನೇಮಕಹೊಂದಿರುವರು. ಕಲ್ಯಾಡಿ ಶ್ರೀ ರಾಮರಾಯರೂ ತದ್ವಿತಿ ಪುನರಾವರ್ತಿ ನೇಮಿಸಲ್ಪಟ್ಟಿರುವರು.

ಉಡುಪಿ ತಾಲೂಕು ಕೋಂಗ್ರೆಸ ಕಮಿಟಿ ಸಭೆಯು—ತಾ 15-10-39ರಲ್ಲಿ ಬಾರಕೂರು ಕೋಂಗ್ರೆಸ ಕಮಿಟಿಯ ಆಫೀಸಿನಲ್ಲಿ ಶ್ರೀ ಜೆ ಸಿ. ಸಿಕೇರ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದಿನ ಸಭೆಯ ವರದಿ, ತಾಲೂಕಿನಲ್ಲಿ ನಡೆದ ಕಾರ್ಯದ ವರದಿಯು 1938ರ ಆಡಿಟ್ ರಿಪೋರ್ಟು ಓದಿ ಮಂಜೂರುಮಾಡಲಾಯಿತು. ಕಮಿಟಿಯ ಪುಸ್ತಕಭಂಡಾರದ ಪುಸ್ತಕಗಳನ್ನು ಉಡುಪಿ ಮುನಿಸಿಪಲ್ ಲೈಬ್ರರಿಗೆ ಕೊಡಬೇಕೆಂದಾಯಿತು. ಮಹಾಸಭೆಗೆ ಕೋರಂ ಇರಲಿಲ್ಲ.

ಸಂಪಾಜೆ—ಇದೇ ತಾ 13ರಲ್ಲಿ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಸರಸ್ವತೀ ಪೂಜೆಯು ಶ್ರೀ ಸಂಪಾಜೆ ಶೀನಪ್ಪ ರೈ ದೇಶಕೋಡಿಕಾರರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಶ್ರೀಮತಿ ನೀಲಮ್ಮ ಮತ್ತು ಇನ್ನಿತರ ಮಹನೀಯರ ಭಾಷಣಗಳಿದ್ದುವು.

ಬೆಳ್ತಂಗಡಿ—ಇದೇ ತಾ 20ನೇ ಪೂರ್ವಾಹ್ನದಲ್ಲಿ ಇಲ್ಲಿಯ ಬೆಳ್ತಂಗಡಿ ಸಹಕಾರಿ ಸಂಘದ ರಜತ ಮಹೋತ್ಸವ ಸಮಾರಂಭವು ಸರ್. ಟಿ. ವಿಜಯರಾಘವಾಚಾರ್ಯರ್, ಕೆ. ಟಿ ಬಿ. ಬಿ ಇ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಇದೇ ಸಂದರ್ಭದಲ್ಲಿ ಸಂಘದ ಕಟ್ಟೋಣದ ಶಂಕುಸ್ಥಾಪನೆಯು ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಎಸ್. ಎ ವೆಂಕಟ್ರಾಮನ್, ಯಂ. ಎ ಐ ಸಿ ಯಸ್ ಇವರಿಂದ ನೆರವೇರಿಸಲ್ಪಟ್ಟಿತು. ಸಂಘದ ಕಡೆಯಿಂದ ಮಾನಪತ್ರಗಳು ಅಧ್ಯಕ್ಷರಿಗೂ ರಿಜಿಸ್ಟ್ರಾರರಿಗೂ ಅರ್ಪಿಸಲ್ಪಟ್ಟು ನಂತರ ಸಂಘದ ವರದಿಯು ಓದಲಾಯಿತು. ಸಹಕಾರ ಕಾರ್ಯಕ್ಷೇತ್ರದಲ್ಲಿ ಈ ಜಿಲ್ಲೆಯು ಮೊನ್ನೆ ಮೊಳಹಳ್ಳಿ ಶಿವರಾಯರ ನೇತೃತ್ವದಲ್ಲಿ ಹೇಗೆ ಮುಂದುವರಿಯುವುದೆಂದೂ ಈ ಜಿಲ್ಲೆಯಲ್ಲಿ ಅನೇಕ ವಿಧದ ಜಾತಿಗಳು ಇದ್ದು ಒಂದು ರೀತಿಯ ಜಾತಿಗಳ ಪ್ರದರ್ಶನಾಲಯವೆಂತಲೇ ಹೇಳಬಹುದೆಂದೂ, ಆದಾಗ್ಯೂ ಇಂಥಾ ಸಹಕಾರಿ ಸಂಘಗಳು ಸೌಹಾರ್ದದಿಂದ ಕೆಲಸಮಾಡುತ್ತಿರುವುದು ತನಗೆ ಸಂತೋಷದ ವಾರ್ತೆಯೆಂದೂ ಈ ಸಂಘದ ವಯೋವೃದ್ಧ ಅಧ್ಯಕ್ಷರಾದ ಶ್ರೀ. ಭಡೆ ಕೃಷ್ಣಭಟ್ಟರ ಅನೇಕ ವರುಷಗಳ ಅವಿಶ್ರಾಂತ ಕೆಲಸವು ಬಹಳ ಶ್ಲಾಘನೀಯವೆಂದೂ, ಇದೇ ರೀತಿ ಈ ಸಂಘವು ಇನ್ನಷ್ಟು ಅಭಿವೃದ್ಧಿಯಾಗಲೆಂದೂ, ವಗೈರೆ ವಿವಿಧ ಸಮಯೋಚಿತ ಬೋಧಪ್ರದವಾದ ಭಾಷಣಗಳನ್ನು ಅಧ್ಯಕ್ಷರೂ, ರಿಜಿಸ್ಟ್ರಾರರೂ ಮಾಡಿದರು. ನಂತರ ಪಾನ್‌ಸುಪಾರಿ ವಗೈರೆ ಕಾಲೋಚಿತ ಸತ್ಕಾರದಿಂದೊಡಗೂಡಿ ಧನ್ಯವಾದಗಳನ್ನು ಅರ್ಪಿಸಲಾಗಿ ಸಮಾರಂಭವು ಕೊನೆಗೊಂಡಿತು.

ಮಲ್ಪೆ—ಸ್ಥಳೀಕ ಫಿಶ್ಯರೀಸ್ ಶಾಲೆಯ ಬಡಮಕ್ಕಳ ಸಹಾಯಾರ್ಥವಾಗಿ, ಶ್ರೀಗಳಾದ ಕೆ. ಯಂ ಸೋಮ, ಯಂ ಅಂಬಾದಾಸ್, ಸಂಕೇತ ಶೇಷ, ಕುಂದಾಪುರ ಕೈರಂಪಣಿಯವರು ಹಾಗೂ ಇನ್ನಿತರರ ಸೌಹಾರ್ದದಿಂದ 80 ಮಕ್ಕಳಿಗೆ ಉಡುಪುಗಳನ್ನು **ಸದ್ರಿ ಶಾಲೆಯ ಬಡವಿದ್ಯಾರ್ಥಿ ಸಂಘದ** ಕಾರ್ಯದರ್ಶಿ ಶ್ರೀ. ರಾಜು ಪಿ. ಕರ್ಕೇರರು ಒದಗಿಸಿಕೊಟ್ಟದ್ದಕ್ಕಾಗಿಯೂ **ಮಲ್ಪೆ ಮೊಗವೀರ ತರುಣ ಸಂಘ, ಬೊಂಬಾಯಿ** ಇವರು ಕಳುಹಿಸಿಕೊಟ್ಟ ರೂಪಾಯಿ ಇಪ್ಪತ್ತನ್ನು (20 0-0) ಶಾಲಾಮಕ್ಕಳಿಗೆ ಸ್ಲೇಟು ಪುಸ್ತಕ ವಗೈರೆಯನ್ನು ಪಾರಿತೋಷಕದ ಮೂಲಕ ಮಲ್ಪೆ ಪಂಚಾಯತ್‌ಬೋರ್ಡ್ ಪ್ರೆಸಿಡೆಂಟ್ ಯು. ಬಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಹಂಚುವ ಏರ್ಪಾಡು ಮಾಡಿಕೊಟ್ಟದ್ದಕ್ಕಾಗಿಯೂ, ಸದ್ರಿ ಸಹಾಯ ಧನವಿತ್ತ ಮಹನೀಯರಿಗೆ ತಾನು ಕೃತಜ್ಞನಾಗಿದ್ದೇನೆಂದು ಹೆಡ್ಮಾಸ್ಟರರು ತಿಳಿಸುತ್ತಾರೆ.

ಕಾರ್ಕಳ—ಕಾರ್ಕಳ ಪರಸ್ಪರ ಸಹಕಾರ ಸಂಘದ ಕಡೆಯಿಂದ ಅದರ ಸ್ಥಾಪನೆ ಮೊದಲುಗೊಂಡು ದಿವಂಗತರಾಗುವ ತನಕ ಅಧ್ಯಕ್ಷರಾಗಿದ್ದ ಶ್ರೀ. ವಕೀಲ ಇತ್ಯ ವಾಸುದೇವಯ್ಯನವರ ಛಾಯಾಚಿತ್ರ ಅನಾವರಣ ಸಮಾರಂಭವು ತಾ 19 10 39ರ ದಿನ ಸ್ಥಳೀಯ ಬೋರ್ಡು ಹ್ಯಾಸ್ಕೂಲಿನಲ್ಲಿ ಮದ್ರಾಸ್ ಸಹಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀ. ಯಂ. ಎ ವೆಂಕಟರಾಮನ್ ಯಂ. ಎ ಐ ಸಿ ಯಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಪ್ರಸ್ತುತ ಅಧ್ಯಕ್ಷರಾದ ಡಾಕ್ಟರ ಯನ್. ಯಮ್. ಅಡ್ಯಂತಾಯರು ಸ್ವಾಗತ ಭಾಷಣಮಾಡಿ ಅಭಿನಂದನ ಪತ್ರವನ್ನು ಒಪ್ಪಿಸಿದ ಅನಂತರ ಶ್ರೀ ಕೆ. ಯಲ್. ಕುಡ್ವರು ಶ್ರೀ. ವಾಸುದೇವಯ್ಯನವರ ಗುಣಕಥನಮಾಡಿ, ಅವರ ಛಾಯಾಚಿತ್ರದ ಅನಾವರಣ ಮಾಡುವಂತೆ ರಿಜಿಸ್ಟ್ರಾರರವರನ್ನು ಕೇಳಿಕೊಂಡರು. ರಿಜಿಸ್ಟ್ರಾರರು ಸಂದರ್ಭೋಚಿತ ಕೆಲವು ಮಾತುಗಳೊಂದಿಗೆ ಛಾಯಾಚಿತ್ರದ ಅನಾವರಣ ಕಾರ್ಯವನ್ನು ಮಾಡಿದ ಬಳಿಕ ಲಘು ಉಪಹಾರ, ಧನ್ಯವಾದ ಸಮರ್ಪಣೆಗಳೊಂದಿಗೆ ಸಮಾರಂಭವು ಮುಗಿಯಿತು.

ವರ್ಷಂಪ್ರತಿ ನಡೆಯುವ ಪ್ರಕಾರ ಈ ವರ್ಷ ಕೂಡ ದಸರಾ ಮಹೋತ್ಸವವು ಸ್ಥಳೀಯ ಕೋಸ್ಮೊಪೊಲಿಟಿನ್ ಕ್ಲಬ್ಬಿನಲ್ಲಿ13-10-39ರಿಂದ ಆರಂಭವಾಗಿ 10ದಿನ ವಿವಿಧ ಆಟ ವಿನೋದಗಳ ಪ್ರದರ್ಶನ, ಹಲವು ಪ್ರಚಲಿತ ವಿಷಯಗಳ ಮೇಲೆ ಮಹನೀಯರ ಭಾಷಣ, ಗಾಯನ ಇತ್ಯಾದಿ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು.

ನೀಲಾವರ—ಇಲ್ಲಿಯ ಶ್ರೀ ಮಹಿಷಮರ್ದಿನಿ ಶಾಲೆಯಲ್ಲಿ ತಾ 13 10 39ರಲ್ಲಿ ಶಾಲಾ ವರ್ಧಂತ್ಯುತ್ಸವವು ಶ್ರೀ. ಎಚ್. ಸಂಜೀವ ರಾವ್ B. A. L T. ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಪ್ರಾರ್ಥನೆ, ಯಕ್ಷಗಾನ, ಶಾರದಾ ಪೂಜೆ, ಶಾಲಾವರದಿ ಭಾಷಣ ಇತ್ಯಾದಿಗಳಾದ ತರುವಾಯ ಅಧ್ಯಕ್ಷರು ಈ ಶಾಲೆಯು 21 ವರ್ಷಗಳಿಂದ ಲಕ್ಷಣವಾಗಿ ನಡೆದುಬಂದಿದ್ದರೂ ಈ ವರ್ಷ ಆಕಸ್ಮಿಕವಾಗಿ ಕಡಿತ ಬಿದ್ದುದು ಅನ್ಯಾಯವೆಂದು ನೊಂದುಕೊಂಡು ಮುಂದೆ ಒಳ್ಳೇ ಸ್ಥಿತಿಗೆ ಬರಲೆಂದು ಹಾರೈಸಿ ಸುರಸವಾಗಿ ಭಾಷಣವನ್ನಿತ್ತರು ಹಾಗೂ ಫಲಾಹಾರ ಇತ್ಯಾದಿ ಆದೊಡನೆ ಈ ಶಾಲೆಯ ಸಹಾಯಕ ಉಪಾಧ್ಯಾಯರು ಶ್ರೀ. ಎ. ಎಂ. ಪಟ್ಟಾಭಿರಾಮರಾಯರು ಬರೆದ "ಶನಿ ಮಹಾತ್ಮೆ ಎಂಬ ನಾಟಕವನ್ನು ಬಾಲಕ ಬಾಲಕಿಯರಿಂದ ಅಭಿನಯಿಸಿ ತೋರಿಸಿದರು ಧನ್ಯವಾದವರ್ಪಣೆಯಾಗಿ ಸಭಾಮುಕ್ತಾಯವಾಯಿತು.

ಇನ್ನಂಜೆ—ಸ್ಥಳೀಕ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಾರದಾಪೂಜಾದಿಗಳು ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿದವು.

ಕರ್ನಾಟಕದ ಕಲುಷಿತ ರಾಜಕೀಯ ವಾತಾವರಣ

ದಕ್ಷಿಣ ಕನ್ನಡದ ಮತ್ತು ಇಡೀ ಕರ್ನಾಟಕದ ಕಾಂಗ್ರೆಸ್ ರಾಜಕೀಯಕ್ಕೆ ಹೆಚ್ಚಿನ ಭೇದವಿರುವಂತೆ ತೋರುವುದಿಲ್ಲ. ದಕ್ಷಿಣ ಕನ್ನಡದಲ್ಲಿ ಒಬ್ಬ ವ್ಯಕ್ತಿಯ ಕುಟಿಲ ಕ್ಷುದ್ರ ಮನೋವೃತ್ತಿಯಿಂದಾಗಿ ಕಾಂಗ್ರೆಸಿನ ವಾತಾವರಣವು ಕೆಟ್ಟು ವಾಸನೆ ಹುಟ್ಟಿರುವುದಾದರೆ, ಅಖಿಲ ಕರ್ನಾಟಕದಲ್ಲಿ ಕೆಲವು ವ್ಯಕ್ತಿಗಳ ಕುತಂತ್ರ ಕುಹಕತನದಿಂದಾಗಿ ಕಾಂಗ್ರೆಸು ನಾಮಾವಶೇಷವಾಗುವಂತಿದೆ. ಅತ್ಯಂತ ನಿರಾಶಾಜನಕ ಸಂಗತಿಯೆಂದರೆ, ಈ ದುಃಸ್ಥಿತಿಯಿಂದ ಕರ್ನಾಟಕವನ್ನು ಪಾರುಮಾಡುವ ಒಬ್ಬನೇ ಒಬ್ಬ ಸಮರ್ಥ ಮುಖಂಡನು ಕರ್ನಾಟಕದಲ್ಲಿಲ್ಲದಿರುವುದು. ಕೆಲವೇ ವ್ಯಕ್ತಿಗಳು ತಮ್ಮ ಕೈಯೊಳಗಣ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ನಾನಾ ಸೂತ್ರ ಚಾಲನೆ ನಡಿಸುತ್ತಿರುವ ಪರಿಣಾಮವಾಗಿ ಇಡೀ ಕರ್ನಾಟಕದ ಕಾಂಗ್ರೆಸ್ ವಾತಾವರಣವು ಕಲುಷಿತವಾಗಿದೆ.

ಕಾಂಗ್ರೆಸ್ ಮುಖಂಡರು ಎಲ್ಲಾ ಸಮಾಜಗಳ ವಿಶ್ವಾಸಕ್ಕೆ ಪಾತ್ರರಾಗಿರುವಂತೆ ಯಾವ ಕೆಲಸವನ್ನಾದರೂ ಮಾಡಬೇಕು. ಕಾಂಗ್ರೆಸಿಗಾಗಿ ಮೊದಲಾಗಿ ಹೆಚ್ಚಿನ ತ್ಯಾಗಮಾಡಿದವರು ಮುಂದುವರಿದ ಅಲ್ಪ ಸಂಖ್ಯಾಕ ಜಾತಿಗಳಿಗೆ ಸೇರಿದವರು. ಹಿಂದುಳಿದ ಸಮಾಜಗಳವರಲ್ಲ ಹೆಚ್ಚಿನ ಜಾಗ್ರತಿಯುಂಟಾಗದಿದ್ದಾಗ ಈ ಜನರು ತಮ್ಮ ತ್ಯಾಗ ಮತ್ತು ಸೇವೆಯ ಬಲದಿಂದ ಸರ್ವರ ವಿಶ್ವಾಸ ಮತ್ತು ಪ್ರೀತಿಗ ಪಾತ್ರರಾಗಿದ್ದರು. ಆದರೆ ಈಗ ಹಿಂದುಳಿದ ಬಹುಸಂಖ್ಯಾಕ ಸಮಾಜಗಳವರಲ್ಲಿಯೂ ರಾಜಕೀಯ ಜಾಗೃತಿಯುಂಟಾಗಿದೆ. ತಮ್ಮ ಹಕ್ಕು ಬಾಧ್ಯತೆಗಳೇನೆಂಬುದನ್ನು ಅವರು ಚೆನ್ನಾಗಿ ಅರಿತುಕೊಳ್ಳಹತ್ತಿದ್ದಾರೆ. ಆದುದರಿಂದ ಅಲ್ಪ ಸಂಖ್ಯಾಕ ಸಮಾಜಗಳಿಗೆ ಸೇರಿದ ಕಾಂಗ್ರೆಸ್ ಮುಖಂಡರುಗಳು ಹಿಂದುಳಿದ ಸಮಾಜಗಳ ಮುಖಂಡರ ವಿಶ್ವಾಸಕ್ಕೆ ಪಾತ್ರರಾಗಿಯೇ ಕಾಂಗ್ರೆಸಿನ ಮತ್ತು ಸಾರ್ವಜನಿಕ ಕೆಲಸಗಳನ್ನು ಮಾಡಬೇಕಾಗಿದೆ. ತಾವಾಗಿ ಸ್ಥಾನ ಮತ್ತು ಅಧಿಕಾರಕ್ಕಾಗಿ ಯಾವ ರೀತಿಯ ಮೇಲಾಟವನ್ನೂ ನಡಿಸದೆ ತಮ್ಮ ಬಂಧುಗಳ ಪ್ರೀತಿ ಮತ್ತು ವಿಶ್ವಾಸದ ಪರಿಣಾಮವಾಗಿ ಸ್ವಾಭಾವಿಕವಾಗಿ ಬರುವ ಸ್ಥಾನವನ್ನು ಸಂತೋಷದಿಂದ ಸ್ವೀಕರಿಸಿಕೊಳ್ಳಬೇಕು. ಅದು ಬಿಟ್ಟು ಅವರು ಹಿಂದಿನಂತೆಯೇ ಯಾವಾಗಲೂ ಅಧಿಕಾರವು ತಮ್ಮ ಹಸ್ತಗತವಾಗಿಯೇ ಇರಬೇಕು. ಮೊದಲಾಗಿ ಸೇವೆ ಮತ್ತು ತ್ಯಾಗಮಾಡಿದವರು ನಾವು. ಆದುದರಿಂದ ಕಾಂಗ್ರೆಸಿನೊಳಗಣ ಯಾವ ಸ್ಥಾನಕ್ಕಾದರೂ ಪ್ರಥಮ ಹಕ್ಕುದಾರರು ತಾವೇ ಎಂಬ ಮನೋವೃತ್ತಿಯುಳ್ಳವರಾಗಿ ಅದಕ್ಕಾಗಿ ನಾನಾ ಸೂತ್ರ ಚಾಲನೆ ನಡಿಸಿದರೆ ಪರಿಣಾಮವು ಎಂದೂ ನೆಟ್ಟಗಾಗಲಾರದು. ಇಡೀ ಕರ್ನಾಟಕದ ಕಾಂಗ್ರೆಸ್ ರಾಜಕೀಯವು ಕಲುಷಿತವಾಗಿ ಹೋಗಲು ಇದೇ ಮೂಲಕಾರಣವೆನ್ನಬಹುದು.

ದಕ್ಷಿಣಕನ್ನಡದ ದೃಷ್ಟಾಂತ

ಮಂಗಳೂರು ಮುನಿಸಿಪಾಲಿಟಿಯಲ್ಲಿ ಜಯಶೀಲವಾಗಿ ಸೂತ್ರಚಾಲನೆ ನಡಿಸಿದ ವ್ಯಕ್ತಿಗಳು ಕೆಲವರು ಜಿಲ್ಲಾ ಬೋರ್ಡಿನಲ್ಲಿಯೂ ಅದೇ ರೀತಿಯ ಆಟನಡಿಸಲು ಮುಂದಾಗಿದ್ದರು. ಇಷ್ಟರಲ್ಲಿ ಇಡೀ ಜಿಲ್ಲೆಯಲ್ಲಿ ದಿಗಿಲೆದ್ದು ಬಿಟ್ಟಿತು. ಕಾಂಗ್ರೆಸಿನೊಳಗೆ ಕೆಲವಂದಿ ಹಿಂದುಳಿದ ಸಮಾಜಗಳವರು ಈ ಆಟವನ್ನು ನಡೆಯಬಿಡದೆ ಕಠಿಣ ಧೋರಣೆ ವಹಿಸಿದುದರಿಂದ ಆ ವ್ಯಕ್ತಿಗಳ ತಂತ್ರವು ಜಿಲ್ಲಾ ಬೋರ್ಡಿನೊಳಗೆ ನಡೆಯದಾಯಿತು. ಒಂದು ವೇಳೆ ನಡೆಯುತ್ತಿದ್ದರೆ ಇಡೀ ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷವು ಒಡೆದು ಹೋಗುತ್ತಿತ್ತು. ಕಾಂಗ್ರೆಸಿನ ಹೆಸರಿಗೆ ಒಳ್ಳೇ ಕೀರ್ತಿ ಬರುತ್ತಿತ್ತು. ಕೆಲವಂದಿ ವ್ಯಕ್ತಿಗಳ ತಂತ್ರದಿಂದಾಗ ಇಂದೀಗ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸಂಬುದು ನಿರ್ಜೀವವಾಗಿದೆ. ಯಾವ ಜನಬೆಂಬಲವೂ ಇಲ್ಲದೆ ಅದು ಕೆಲವೇ ವ್ಯಕ್ತಿಗಳ ಕಿಸೆಯೊಳಗಣ ವಸ್ತುವಾಗಿ ಹೋಗಿದೆ. ಪವಿತ್ರ ಕಾಂಗ್ರೆಸಿನ ಹೆಸರಲ್ಲಿ ಕ್ಷುದ್ರಜಾತೀಯತೆಯ ಆಟವು ನಡೆಸಲ್ಪಡುತ್ತಿರುವ ಪರಿಣಾಮವಾಗಿ ಜಿಲ್ಲೆಯಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ರಾಷ್ಟ್ರೀಯತೆಯು ಮೂಲೆಗುಂಪಾಗಿ ಜಾತೀಯತೆಯೇ ಮುಂದೆಬಂದು ನಿಲ್ಲಹತ್ತಿದೆ.

ರಾಮದುರ್ಗ ದುರಂತದ ದುಷ್ಪರಿಣಾಮ

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ನಾಡಹಬ್ಬದ ಗಲಾಟೆ.

ಎಲ್ಲೆಲ್ಲಿಯೂ ಜಾತೀಯತೆಯ ಪ್ರಾದುರ್ಭಾವ

ಕರ್ನಾಟಕದ ವಿಷಾದಕರ ಪರಿಸ್ಥಿತಿ

ಕರ್ನಾಟಕದಲ್ಲಿಯೂ ಇದೇ ಅವಸ್ಥೆಯುಂಟಾಗಿದೆ. ಕಾಂಗ್ರೆಸ್ ರಾಜಕೀಯದ ಪರಿಣಾಮವು ಈ ವರ್ಷದ ನಾಡಹಬ್ಬ ದಿನಾಚರಣೆಯ ಮೇಲೂ ಆಗಿದೆ. ನಾಡಹಬ್ಬಕ್ಕೂ ಕರ್ನಾಟಕ ಕಾಂಗ್ರೆಸಿನ ರಾಜಕೀಯಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ ಜಾತೀಯತೆಯು ಒಮ್ಮೆ ಉದ್ರೇಕಿಸಲ್ಪಟ್ಟಿತೆಂದರೆ ಮತ್ತದು ಸಿಕ್ಕಿ ಸಿಕ್ಕಿದುದರ ಮೇಲೆಲ್ಲಾ ಬಿದ್ದು ಹಾವಳಿ ಮಾಡುವುದು. ಇದಕ್ಕೆ ದೂರಬೇಕಾದುದು ಕರ್ನಾಟಕದ ರಾಜಕೀಯ ಮುಖಂಡರನ್ನು. ಅವರು ಕಾಂಗ್ರೆಸ್ಸಿಗಾಗಿ ಹೆಚ್ಚಿನ ತ್ಯಾಗಮಾಡಿ ಜನಮಾನ್ಯರಾದವರೆಂಬುದೇನೋ ನಿಜ. ಅಷ್ಟು ಮಾತ್ರದಿಂದಲೇ ಕಾಂಗ್ರೆಸ್ಸಿನೊಳಗಣ ಅಧಿಕಾರವೆಲ್ಲಾ ಅವರಿಗೇನೇ ಸಿಗಲೇಬೇಕೆಂದೇನೂ ಇಲ್ಲ. ಅವರು ವಿವೇಕಶಾಲಿಗಳಾಗಿದ್ದರೆ, ಅಧಿಕಾರಕ್ಕಾಗಿ ಯಾವ ತರದ ಪ್ರಯತ್ನ ಮತ್ತು ಸೂತ್ರಚಾಲನೆಯನ್ನೂ ನಡಿಸದೆ ಅದಕ್ಕಾಗಿ ಹಾತೊರೆಯುವವರಿಗಾಗಿ ಅದನ್ನು ಬಿಟ್ಟು ತಾವು ಯಥಾಪ್ರಕಾರ ಸೇವೆ ಸಲಿಸುತ್ತಾ ಹೋಗಬೇಕಿತ್ತು. ಹೇಗಾದರೂ ಅಧಿಕಾರ ಪಡೆದು ಅದನ್ನು ಬಲಪಡಿಸಲೆತ್ನಿಸಿದುದರಿಂದಲೇ ಇಂದೀ ಕರ್ನಾಟಕದ ರಾಜಕೀಯವು ಒಳಗಿಂದೊಳಗೆ ನಾರಹತ್ತಿರುವುದು. ಅಲ್ಪಸಂಖ್ಯಾಕರು ಬಹುಸಂಖ್ಯಾಕರ ಮೇಲೆ ಸದಾ ಕುದುರೆ ಸವಾರಿ ಮಾಡಲೆತ್ನಿಸುವ ಸ್ವರೂಪ ಒಂದಿರುವುದು ಅದಕ್ಕೆ.

ರಾಮದುರ್ಗದ ಪ್ರಶ್ನೆ

ಬಹುಸಂಖ್ಯಾಕರಲ್ಲಿ ಒಳಗಿಂದೊಳಗೆ ಹೊಗೆಯಾಡುತ್ತಿದ್ದ ವೈಷಮ್ಯ ಮತ್ತು ಅತೃಪ್ತಿಯು ರಾಮದುರ್ಗದ ದುರಂತದಿಂದ ಕಾಡ್ಗಿಚ್ಚಿನಂತೆದ್ದು ನಾಡಹಬ್ಬವನ್ನು ಆವರಿಸಿಬಿಟ್ಟಿರುವುದು. ರಾಮದುರ್ಗದ ಪ್ರಜೆಗಳು ಲೂಟಿ ಗಲಾಟೆ ನಡಿಸಿದುದೇ ಯಾದರೆ ಅವನ್ನು ನಿಷೇಧಿಸಿ ತಪ್ಪು ದಾರಿ ಹಿಡಿದವರನ್ನು ಸರಿದಾರಿಗೆ ತರುವ ಧೋರಣೆ ವಹಿಸುವುದು ನ್ಯಾಯವಾದುದು. ಸಾಮುದಾಯಿಕ ಚಳವಳವು ಯಾವಾಗ ಯಾವ ಸ್ವರೂಪ ತಾಳುವುದೆಂದು ಹೇಳಬರುವುದಿಲ್ಲ. ಅಹಿಂಸಾವತಾರಿ ಗಾಂಧೀಜಿಯವರಂತಹ ಮುಖಂಡರ ನಾಯಕತ್ವದ ಕೆಳಗೆ ಕೂಡಾ ಆಕಸ್ಮಿಕವಾಗಿ ಹಿಂಸಾತ್ಮಕ ಕೃತ್ಯಗಳು ನಡೆದಿರುತ್ತವೆ. ಅದನ್ನು ಪ್ರತೀಕಾರ ಬುದ್ಧಿಯಿಂದ ದಂಡಿಸಹೋಗುವುದು ಮತ್ತೊಂದು ಹಿಂಸೆ. ರಾಮದುರ್ಗದ ಪ್ರಜೆಗಳು ಹಿಂಸೆ ಮಾಡಿದರೆ ರಾಜಾಸಾಹೇಬರು ವಹಿಸಿದ ಧೋರಣೆಯು ಸರಿಯೆಂದಾಗುವುದಿಲ್ಲ. ಕರ್ನಾಟಕದ ಕಾಂಗ್ರೆಸ್ ಮುಖಂಡರು ಅದನ್ನು ಸಮರ್ಥಿಸಹೋದುದು ದೊಡ್ಡ ತಪ್ಪು. ಜಾತೀಯತೆಯ ವಿಷವು ತಲೆಯೆತ್ತಿದೊಡನೆಯೇ ಕಾಂಗ್ರೆಸ್ ಮುಖಂಡರು ರಾಮದುರ್ಗದ ಪ್ರಶ್ನೆಯಿಂದ ದೂರಸರಿದು ಸುಮ್ಮನಿರಬೇಕಿತ್ತು. ಇಲ್ಲವೆ ಜಾತೀಯತೆಯನ್ನು ನಿವಾರಿಸುವ ರೀತಿಯಲ್ಲಿ ನಡೆಯಬೇಕಿತ್ತು. ಅವರ ವರ್ತನೆಯಿಂದ ರಾಮದುರ್ಗದ ಪ್ರೇತವು ಇಡೀ ಕರ್ನಾಟಕದಲ್ಲೆಲ್ಲಾ ಬಾಧೆ ಕೊಡುವಂತಾಗಿದೆ. ಬ್ರಾಹ್ಮಣ ಲಿಂಗಾಯತ ಪ್ರಶ್ನೆಯು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಉಗ್ರ ಸ್ವರೂಪ ತಾಳಿದೆ. ಈ ಸಂದರ್ಭದಲ್ಲಿ ಕರ್ನಾಟಕದ ಕಾಂಗ್ರೆಸ್ ಮುಖಂಡರೆಲ್ಲಾ ಆತ್ಮ ಶೋಧನೆ ಮಾಡಬೇಕು. ಸ್ಥಾನಮಾನಕ್ಕಾಗಿ ಪ್ರತಿಸ್ಪರ್ಧೆ ಮತ್ತು ಸೂತ್ರ ಚಾಲನೆ ಮಾಡಿಸುವುದನ್ನು ನಿಲ್ಲಿಸಬೇಕು. ತಮ್ಮ ತ್ಯಾಗ ಮತ್ತು ಸೇವೆಯಿಂದ ಮಾನ್ಯರಾದ ಮುಖಂಡರು ಕಾಂಗ್ರೆಸಿನೊಳಗಣ ತಮ್ಮ ಸ್ಥಾನಗಳಿಗೆಲ್ಲಾ ರಾಜೀನಾಮೆಯಿತ್ತು ಅವುಗಳನ್ನು ಬಹುಸಂಖ್ಯಾಕರೆನಿಸುವವರಿಗೆ ಬಿಟ್ಟುಕೊಡಲೇಬೇಕು. ಅವರು ವಿಶ್ವಾಸ ಮತ್ತು ಪ್ರೀತಿಯಿಂದ ಒಪ್ಪಿಸಿದರೆ ಮಾತ್ರ ಅದನ್ನು ಸ್ವೀಕರಿಸಬೇಕು. ಇದರಲ್ಲಿಯೇ ನಿಜವಾದ ನಿಸ್ಪೃಹತೆಯಿದೆ. ಮತ್ತು ಆಗಲೇ ಕರ್ನಾಟಕದ ಕಲುಷಿತ ರಾಜಕೀಯವು ಸ್ವಲ್ಪ ಶುದ್ಧವಾಗಬಹುದೆಂದು ನಿರೀಕ್ಷಿಸಬಹುದು.

ನಮ್ಮ ಪ್ರತಿನಿಧಿಗಳ ಸಂಚಾರ

ನಮ್ಮ ಪ್ರತಿನಿಧಿಗಳಾದ ಶ್ರೀಯುತ ಎಂ. ಕೃಷ್ಣಯ್ಯ ಶೆಟ್ಟರು ಈ ವಾರದಿಂದ ಕಾರ್ಕಳ ಮತ್ತು ಪುತ್ತೂರು ತಾಲೂಕುಗಳಲ್ಲಿ ಸಂಚರಿಸಲು ಪ್ರಾರಂಭಿಸುತ್ತಾರೆ. ಮಹಾಶಯರು ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿಯೂ ಮೊದಲ ಚಂದಾದಾರರಾಗಿ ಚಂದಾ ಬಾಕಿಯಿರುವವರು ಅವರೊಡನೆ ಚಂದಾ ತೆರಬೇಕಾಗಿಯೂ ಈ ಮೂಲಕ ಅಪೇಕ್ಷಿಸಲಾಗುತ್ತದೆ.

—ಮೆನೇಜರ್.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಹಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3 ವಿ. ಪಿ. ಖರ್ಚು 0 8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯ ಪಟೇಲ್ ರೋಡ್, ಮುಂಬಯಿ 4

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್ ಹೆಸರನ್ನೂ ಗಮನಿಸಿರಿ

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪಥ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಡುವರು.

ಅನಿರೀಕ್ಷಿತವಾದುದೇನೂ ಸಂಭವಿಸದಿದ್ದಲ್ಲಿ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಕೊಡುವುದು ನಿಶ್ಚಯವೆಂಬಂತೆ ತೋರುತ್ತದೆ. ಆಶಾವಾದದಿಂದ ತುಂಬಿಪ್ಪುದಾಗಿದ್ದ ಗಾಂಧಿಜಿಯವರ ಮನಸ್ಸೀಗ ನಿರಾಶಹೊಂದಿ ಕಠಿಣವಾಗುತ್ತಿರುವಂತಿದೆ. ರೊಟ್ಟಿ ಕೇಳಿದಾಗ ಕಲ್ಲು ಕೊಡಲ್ಪಟ್ಟಿದೆ. ತಮಗೆ ಸಾಧ್ಯವಾಗುವನಕ ಹಿಂದೂದೇಶವನ್ನು ಬಂಧನದಲ್ಲಿರಿಸಿಕೊಂಡು ಸ್ವಾತಂತ್ರ್ಯವನ್ನು ನಿರಾಕರಿಸುವ ಮನೋವೃತ್ತಿಯೇ ವೈಸರಾಯರ ಭಾಷಣದಲ್ಲಿ ಒಡೆದು ಕಾಣುತ್ತಿದೆ. ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವ ಮನಸ್ಸೇ ಅವರಲ್ಲಿ ತೋರುವುದಿಲ್ಲ. ಇನ್ನೆಷ್ಟು ಸ್ಪಷ್ಟೀಕರಿಸಿದರೂ ಕಾಂಗ್ರೆಸನ್ನದು ತೃಪ್ತಿಪಡಿಸುವಹಾಗಿಲ್ಲ. ಕಾಂಗ್ರೆಸು ಇನ್ನೊಮ್ಮೆ ಅಗ್ನಿ ಪರೀಕ್ಷೆಗೊಳಗಾಗಿ ಸ್ವಾತಂತ್ರ್ಯಕ್ಕೆ ತನ್ನ ಅರ್ಹತೆಯನ್ನು ಸಿದ್ಧಪಡಿಸಬೇಕಾಗುವುದೆಂದೇ ಗಾಂಧಿಯವರ ಅಭಿಮತ. ಇನ್ನು ಮುಂದೆ ಕಾಂಗ್ರೆಸ್ ಮಂತ್ರಿಗಳು ಅಧಿಕಾರದಲ್ಲಿರಲು ಸಾಧ್ಯವಿಲ್ಲ. ಬ್ರಿಟಿಷ್ ಸರಕಾರವು ತಾನೇ ಹಿಂದೀಯರಲ್ಲಿ ಭೇದವನ್ನು ಬೆಳೆಸಿ ಸ್ವಾತಂತ್ರ್ಯಕ್ಕೆ ಅದನ್ನು ತಡೆಯಾಗಿ ಮುಂದೊಡ್ಡಿದೆ. ಹಿಂದೂದೇಶದ ಕುರಿತು ಬ್ರಿಟಿಷ್ ಸರಕಾರದ ಧೋರಣೆಯು ಯಥಾಪ್ರಕಾರದಂತೆಯೇ ಇರುವುದೆಂಬುದರಲ್ಲಿ ಸಂದೇಹವೇ ಇಲ್ಲೆಂದು ಬಾಬು ರಾಜೇಂದ್ರಪ್ರಸಾದರೆಂದಿರುವರು. ಕಾಂಗ್ರೆಸು ಮುಂದೊಡ್ಡಿರುವ ಮೈತ್ರಿಯ ಹಸ್ತವನ್ನು ವೈಸರಾಯರು ನಿರಾಕರಿಸಿದ್ದಾರೆ. ಕಾಂಗ್ರೆಸಿನ ಮುಂದೀಗ ಒಂದೇ ಮಾರ್ಗವಿದೆ. ಮುಂದೆ ನಡೆಯಬಹುದಾದ ಹೋರಾಟಕ್ಕದು ಸಿದ್ಧತೆಮಾಡಬೇಕೆಂದು ಪಂಡಿತ ಜವಾಹರಲಾಲರು ಎಚ್ಚರಿಸಿರುತ್ತಾರೆ. ತಾನು ಹೇಳಿದ ಪ್ರಕಾರವೇ ಆಯಿತೆಂದು ಸಂತೋಷಗೊಂಡಿದ್ದಾರೆ ಶ್ರೀ ಸುಭಾಷಚಂದ್ರರು.

ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಡುವುದಂತೂ ನಿಶ್ಚಯ. ಯಾವಾಗ ಮತ್ತು ಹೇಗೆಂಬುದೇ ಈಗ ಪ್ರಶ್ನೆ. ಗವರ್ನರರು ಅವರನ್ನು ಡಿಸ್‌ಮಿಸ್‌ಮಾಡುವ ತನಕ ಆಡಳಿತ ನಡಿಸುವುದೇ? ಅಥವಾ ಈಗಲೇ ರಾಜಿನಾಮೆ ಕೊಡುವುದೇ? ಎಂಬುದು ನಿಶ್ಚಯವಾಗಬೇಕಾಗಿದೆ. ಕಾಂಗ್ರೆಸ್ ಮಂತ್ರಿಗಳೆಲ್ಲಾ ರಾಜಿ ಕೊಡಲು ಸಿದ್ಧರಾಗುತ್ತಿದ್ದಾರೆ. ಶ್ರೀ ಎ ರಾಜಗೋಪಾಲಾಚಾರ್ಯರು ರಾಜಿನಾಮೆ ಕೊಟ್ಟ ಮೇಲೆ ಮುಂದೆ ಕೈಕೊಳ್ಳತಕ್ಕ ಕೆಲಸವನ್ನೂ ನಿಶ್ಚೈಸಿಕೊಂಡಿದ್ದಾರೆ. ಅವರು ವಾರ್ಧಾ ಶಿಕ್ಷಣ ಪದ್ಧತಿಯನ್ನು ಜ್ಯಾರಿಗೆ ತರುವ ಆವಶ್ಯಕವಾಗುವ ನಿರ್ಧಾರ ಮಾಡಿದ್ದಾರೆ. ಅವರು ಕೈಕೊಂಡಿರುವ ಕೆಲಸವೆಲ್ಲಾ ಅರ್ಧದಲ್ಲೇ ನಿಂತು ಹೋಗುವಂತಾಗಿದೆ.

ಕಾಂಗ್ರೆಸು ಮುಂದೇನು ಮಾಡುವುದು? ಕೂಡಲೇ ಕಾಯಿದೆ ಭಂಗ ಹೂಡುವುದೇ? ಈ ಮಹಾ ಯುದ್ಧದಲ್ಲಿ ಇಂಗ್ಲೆಂಡಿಗೆ ಯಾವ ಸಹಾಯವನ್ನೂ ಕೊಡದೆ ತಟಸ್ಥವಾಗಿದ್ದು ಸರಕಾರವು ತಾನಾಗಿ ಕಾಂಗ್ರೆಸಿಗೆ ಸಡ್ಡು ಹೊಡೆಯುವ ವರೆಗೆ ಜನತೆಯಲ್ಲಿ ಜಾಗ್ರತಿ ಸಂಘಟನೆ ಮತ್ತು ಒಕ್ಕಟ್ಟನ್ನುಂಟು ಮಾಡುವುದೇ? ಉಗ್ರ ಹೋರಾಟವನ್ನೇನಾದರೂ ಆರಂಭಿಸಲು

ಕಾಂಗ್ರೆಸು ಕಾಯಿದೆಭಂಗ ಚಳವಳ ಹೂಡುವುದೇ?

ದೇಶವು ಇನ್ನೊಂದು ಅಗ್ನಿಪರೀಕ್ಷೆಗೀಗ ತಯಾರು ಮಾಡಲ್ಪಟ್ಟಿರುವುದೇ?

ದೇಶವನ್ನು ಕಾಂಗ್ರೆಸು ತಯಾರುಮಾಡಿರುವುದಿಲ್ಲ. ಇದಕ್ಕೆ ರೈಟಿಸ್ಟರ ಮನೋವೃತ್ತಿ ಮತ್ತು ಕಾಂಗ್ರೆಸ್ ಮಂತ್ರಿಗಳ ಆಡಳಿತದ ರೀತಿಯೇ ಕಾರಣ ಈ ಕುರಿತು ಲೆಫ್ಟಿಸ್ಟರು ಮಾಡಿರುವ ಟೀಕೆಗಗಳು ಈಗ ಸರಿಯಾಗಿ ತೋರುತ್ತಿವೆ. ತಾವು ಹಲವು ವರ್ಷ ಅಧಿಕಾರದಲ್ಲಿರುವೆವೆಂಬ ಭಾವನೆಯಿಂದ ಕಾಂಗ್ರೆಸ್ ಮಂತ್ರಿಗಳು ಆಡಳಿತ ನಡಿಸಿಕೊಂಡು ಬಂದಿರುವರು. ಇಂದೋ ನಾಳೆಯೋ ಎಂಬಂತೆ ಉಂಟಾಗಲಿರುವ ಹೋರಾಟಕ್ಕೆ ಜನತೆಯನ್ನು ಸಿದ್ಧಗೊಳಿಸುವ ರೀತಿಯಲ್ಲಿ ವರ್ತಿಸದೆ ನಾಲ್ಕೈದು ವರ್ಷ ಅಧಿಕಾರದಲ್ಲಿರುವುದಂತೂ ಖಂಡಿತವೆಂಬ ಭರವಸೆಯಿಂದ ಆಡಳಿತವನ್ನು ಸಾಗಿಸಿರುತ್ತಾರೆ. ಸಾಮೂಹಿಕ ಚಳವಳದ ಸಿದ್ಧತೆಗೆ ಪ್ರೋತ್ಸಾಹವೀಯುವ ಬದಲಿಗೆ ಅದನ್ನು ತಡೆಗಟ್ಟಿರುತ್ತಾರೆ. ಮಜೂರ ಮತ್ತು ಕೃಷಿಕ ಚಳವಳಗಳನ್ನು ಅಣಗಿಸಲೆತ್ನಿಸಿ ಈ ಜನತೆಯಲ್ಲಿ ಅತೃಪ್ತಿ ಹುಟ್ಟಿಸಿರುತ್ತಾರೆ. ವಿಶೇಷವಾಗಿ ಮದ್ಯಪಾನ ನಿಷೇಧದ ನಾಲ್ಕೈದು ವರ್ಷದ ಕಾರ್ಯಕ್ರಮವನ್ನು ಕೈಕೊಂಡು, ಅದಕ್ಕಾಗಿ ಜನತೆಯ ಮೇಲೆ ಬೇರೆ ಬೇರೆ ರೀತಿಯ ತೆರಿಗೆಗಳನ್ನು ಹಾಕಿ ಜನ ವಿರೋಧವನ್ನುಂಟುಮಾಡಿದ್ದಾರೆ. ಕಾಂಗ್ರೆಸ್ ಮಂತ್ರಿಗಳು ಆಡಳಿತಕ್ಕೆ ಬರುವಾಗ ಜನತೆಯಲ್ಲಿದ್ದ ಉತ್ಸಾಹವನ್ನು ಪೋಷಿಸಿ ಬೆಳೆಸುವ ಬದಲಿಗೆ ತಣಿಸಿ ಬಿಟ್ಟಿದ್ದಾರೆ. ಕಾಂಗ್ರೆಸ್ಸನ್ನು ಬಲಗೊಳಿಸುವುದನ್ನು ಬಿಟ್ಟು ಕಾಂಗ್ರೆಸಿನ ವಿರೋಧಿಗಳನ್ನೊಲಿಸಿಕೊಳ್ಳಲೆತ್ನಮಾಡಿರುತ್ತಾರೆ. ಕಾಂಗ್ರೆಸಿನೊಳಗೆ ಕೂಡಾ ಇದೇ ರೀತಿಯ ಮನೋವೃತ್ತಿಯು ಬೆಳೆಯುವಂತೆ ಮಾಡಿ ತೀವ್ರಗಾಮಿಗಳಲ್ಲಿ ತೀವ್ರ ಅತೃಪ್ತಿಯನ್ನುಂಟುಮಾಡಿದ್ದಾರೆ.

ಅಧಿಕಾರಕ್ಕೆ ಬಂದ ಕೂಡಲೆ ಮಹಾತ್ಮ ಗಾಂಧಿಯವರನ್ನೊಲಿಸಲು ಮದ್ಯಪಾನ ನಿಷೇಧ, ಹರಿಜನ ದೇವಸ್ಥಾನ ಪ್ರವೇಶ, ಬಡ್ಡಿಯ ಹಿಂದೀ ಪ್ರಚಾರವೇ ಮೊದಲಾದ ಕಾರ್ಯಕ್ರಮವನ್ನು ಕೈಕೊಳ್ಳುವ ಬದಲಿಗೆ ರೂಪಾಯಿಯಲ್ಲಿ ನಾಲ್ಕಾಣೆಯಾದರೂ ಕಂದಾಯ ರಿಯಾಯಿತಿಮಾಡಿ, ಬಡ್ಡಿ ದರವನ್ನು ಮಿತಕ್ಕೆ ತಂದು, ಕೃಷಿಕ ಮತ್ತು ಮಜೂರ ಹಿತಸಾಧಕ ಕಾನೂನುಗಳನ್ನು ಮಾಡಿ. ಕಾಂಗ್ರೆಸ್ ಕಮಿಟಿಗಳು ಬಲಗೊಳ್ಳುವಂತೆ ಅವುಗಳನ್ನು ಮನ್ನಿಸಿ ಕಾಂಗ್ರೆಸ್ ಮಂತ್ರಿಗಳು ಆಡಳಿತ ನಡಿಸುತ್ತಿದ್ದರೆ ದೇಶವು ಇಂದೀಗ ಹೆಚ್ಚಿನ ಉತ್ಸಾಹದಿಂದ ತುಂಬಿ ಇನ್ನೊಂದು ಹೋರಾಟಕ್ಕೆ ಸಾಕಷ್ಟು ಸಿದ್ಧವಾಗುತ್ತಿತ್ತು. ಇನ್ನೊಂದು ಹೋರಾಟವು ನಡೆಯುವ ಹಾಗಿಲ್ಲ ಇದೇ ರೀತಿ ಶಾಂತವಾಗಿಯೇ ಅಧಿಕಾರವು ಕಾಂಗ್ರೆಸಿನ ಹಸ್ತಗತವಾಗುತ್ತದೆಂಬ ಮನೋವೃತ್ತಿಯು ಬೆಳೆದು ಕಾಂಗ್ರೆಸಿನೊಳಗಣ ಹೋರಾಟದ ಹುರುಪೇ ಅಳಿದುಹೋಗಿದೆ. ಹೆಚ್ಚಿನ ಕಾಂಗ್ರೆಸ್ ಕಮಿಟಿಗಳು ಶ್ರೀಮಂತ ವರ್ಗದವರ ಅಧಿಕಾರಲಾಲಸೆಯ ಸೂತ್ರಚಾಲನೆಗೊಳಗಾಗಿ ಸತ್ವಹೀನವಾಗಿಹೋಗಿವೆ. ಜನತೆಗೆ ಅವುಗಳ ಕುರಿತು ಮೊದಲಿದ್ದ ವಿಶ್ವಾಸ ಮತ್ತು ಅಭಿಮಾನವು ಕುಂದಿಹೋಗಿದೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸು ಈಗಲೇ ಬ್ರಿಟಿಷ್ ಸರಕಾರದೊಡನೆ ಹೋರಾಟಕ್ಕೆ ಸಿದ್ಧವಿರುವುದೆಂದು ಹೇಳಬರುವುದಿಲ್ಲ. ಆದುದರಿಂದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರೂ ಹಿಂದು ಮುಂದೆ ನೋಡಿಕೊಂಡು ಚೆನ್ನಾಗಿ ಆಲೋಚಿಸಿ ಮುಂದಿನ ಧೋರಣೆಯನ್ನು ನಿಶ್ಚೈಸತಕ್ಕದ್ದು.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತಮಾದ ಈ ಗುಟಿಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಬಿಕ್ಕಳಿ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯಾ ವಾಯುಗಳಿಂದ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0 4-0, 25, 0-7-0, 50, 0-13 0, 100, 1-5-0, 500, ೨ 0 0, 1000, 9 0-0.

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ)ಗಳನ್ನು ಕಳುಹಿಸುತ್ತವೆ.

ಸ್ವದೇಶೀ ಔಷಧಿ ಭಂಡಾರ,

(ರಿಜಿಸ್ಟರ್ಡ್) ಕುಂಜಾಲು.

ಪೋಸ್ಟ್—ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು—1 ವಿ ಆರ್ ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ಸ್ ಏಜನ್ಸಿ, ಬಟಾಟಾವಾಲಾ ಮೆನ್ಶನ್, ಮುಂಬೈ 2 ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ 3 ನವಭಾರತ ಬುಕ್ ಡಿಪೋ, ಉಡುಪಿ



ಸ್ವಸ್ತಿಕ "ಕಾಂತಿ"
ಟೊಯ್ಲೆಟ್ ಸೋಪ್
ಪ್ರತಿಯೊಬ್ಬರ ಅಚ್ಚುಮೆಚ್ಚಿನದಾಗಿದೆ.
ಹೀಗಿರುವಾಗ ನೀವೂ
ಇದನ್ನೇ ಏಕೆ
ಉಪಯೋಗಿಸಬಾರದು?
ಅತಿ ಕಡಿಮೆ ಕ್ರಯಕ್ಕೆ
ಅತ್ಯುತ್ತಮ ಟೊಯ್ಲೆಟ್
ಸೋಪೆಂದರೆ
ಇದೊಂದೇ.
ಎಲ್ಲೆಲ್ಲೂ ಮಾರಲ್ಪಡುತ್ತದೆ.

ದಾರಿಹೋಕನ ಡೈರಿ

ದಾರಿಹೋಕನ ಟೀಕೆಗಾಗಿ ನವಯುಗದ ಸಂಪಾದಕರ ಮೇಲೆ ಮುನಿದುಬಿದ್ದಿದ್ದರೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಮಲ್ಯ ಮಹಾಶಯರು ಅವರು ದ್ವೇಷಸಾಧಿಸುತ್ತಿರುವುದಂತೆ. ಅವರೆಬ್ಬಿಸಿದ ವಾಸನೆಯೇ ಅವರ ಮೂಗಿಗೆ ಬರುವುದಂತೆ. ಇಡೀ ಜಿಲ್ಲೆಯ ಜನರೆಲ್ಲಾ ಮೂಗುಮುಚ್ಚುವಂತೆ ಹಬ್ಬಿ ಪ್ರಾಂತದವರೆಗೂ ಪಸರಿಡೆ ದುರ್ವಾಸನೆ ಸಾಲದೇ? ಅಲ್ ಇಂಡಿಯಕ್ಕೂ ಸ್ವಲ್ಪ ಸ್ವಲ್ಪ ತಗಲಿದೆ

೦೦ ೦೦ ೦೦

ಶ್ರೀ ಕೆ ಕೆ ಶೆಟ್ಟರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಗಳಾಗಿದ್ದಾಗ ತನ್ನ ಕೈಗೊಂಬೆಯಾಗಿ ಕುಣಿಯಲಿಲ್ಲೆಂದು ಒಳಗಿಂದೊಳಗೆ ಅವರು ಎಡ್ಯುಕೇಶನಲ್ ಸ್ಟೇಂಡಿಂಗ್ ಕಮಿಟಿಯ ಮೆಂಬರಿಕಗೆ ಅಡ್ಡಗಾಲು ಹಾಕಿ ದ್ವೇಷಸಾಧಿಸಿದವರಾರು? ಆಮೇಲೆ ಅವರ ಮೇಲೆ ಶಿಸ್ತಿನ ಜ್ಯಾರಿಯ ದಂಡವೆತ್ತಿಹಿಡಿದು ಸೇಡುತೀರಿಸಲು ಮುಂದಾಗಿ ಮೂಗುಮುರಕೊಂಡವರಾರು? ಕ್ಷುಲ್ಲಕ ಆರೋಪದಿಂದ ಶ್ರೀ.ಕೆ ಆರ್. ಕಾರಂತರ ಮೇಲೆ ಸೇಡುತೀರಿಸುವ ತಂತ್ರನಡಿಸಿ ಮುಖಕ್ಕೆ ಮಂಗಳಾರತಿಮಾಡಿಕೊಂಡವರಾರು? ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಫೋಟೋಹಿಟ್ಲರರೇ? ನವಯುಗದ ಸಂಪಾದಕ ಕೆ ಕೆ ಶೆಟ್ರೇ?

೦೦ ೦೦ ೦೦

ದಕ್ಷಿಣ ಕನ್ನಡ ಜಿಲ್ಲೆಗೆ ಮೈಸೂರು ದಿವಾನರ ಸಂದರ್ಶನದ ವಿಷಯದಲ್ಲಿ ಮಲ್ಯ ಮಹಾಶಯರ ವಿರೋಧವಿತ್ತಂತೆ! ಎಲ್ಲಿ? ಜಿಲ್ಲಾ ಬೋರ್ಡ್ ಪ್ರೆಸಿಡೆಂಟರು ಸರ್. ಮಿರ್ಜಾರನ್ನು ಆಮಂತ್ರಿಸುವ ಕುರಿತು ಪ್ರಸ್ತಾಪಿಸಿದಾಗ ಅವರ ಬೆನ್ನು ತಟ್ಟುವ ಹಿನ್ನೆಲೆಯಲ್ಲಿಯೋ? ಸಿ. ಪಿ. ಸಿ ಕಂಪೆನಿಯವರು ಸಂಭ್ರಮದ ಔತಣ ನೀಯುವಾಗ ಪರದೆಯ ಮರೆಯಲ್ಲಿಯೋ?

೦೦ ೦೦ ೦೦

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧೀನ ಸಂಸ್ಥೆಯಾದ ಜಿಲ್ಲಾ ಬೋರ್ಡ್ ಕಾಂಗ್ರೆಸು ಪಾರ್ಟಿಯು ದಿವಾನರನ್ನು ಆಮಂತ್ರಿಸುವ ಆಲೋಚನೆ ಮಾಡಿದಾಗ ಅದನ್ನು ನಿಲ್ಲಿಸುವ ಶಕ್ತಿ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್, ಕೆ. ಪಿ ಸಿ. ಸಿ. ಜೊಯಿಂಟ್ ಸೆಕ್ರೆಟರಿ ಫೋಟೋ ಹಿಟ್ಲರರಿಗಿಲ್ಲವೇ? ಆ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ವಿಷಾದಸೂಚಿಸುವ ಬದಲಿಗೆ ವಿರೋಧ ಸೂಚಿಸಿ, ದಿವಾನರನ್ನು ಆಮಂತ್ರಿಸಬಾರದೆಂದು ಅನುಜ್ಞೆಕೊಡಬಾರದಿತ್ತೇ? ಆ ಅನುಜ್ಞೆಯನ್ನುಲ್ಲಂಘಿಸಿದ್ದರೆ, ಯಾರಿದ್ದರ ಮೇಲೆಲ್ಲಾ ಮನಬಂದಂತೆ ಉಪಯೋಗಿಸುವ ಶಿಸ್ತಿನ ದಂಡವಿದ್ದಿಲ್ಲವೇ ಉಪಯೋಗಿಸಲಿಕ್ಕೆ? ಅದನ್ನು ದುರುಪಯೋಗ ಮಾಡಿ ಮೊಂಡುಮಾಡುವುದಕ್ಕಿಂತ ಸದುಪಯೋಗೊಳಿಸಿ ಹರಿತಮಾಡಬಾರದಿತ್ತೇ?

೦೦ ೦೦ ೦೦

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಮಹಾಶಯರು ಮೈಸೂರಿನ ಕೆ. ಪಿ. ಸಿ ಸಿ. ಮೆಂಬರರಲ್ಲವೇ? ಮೈಸೂರು ಸ್ಟೇಟ್ ಕಾಂಗ್ರೆಸಿನವರು ಕಾಯಿದೆಭಂಗ ಚಳವಳಹೂಡಿದ ವಾಗ ಅವರಲ್ಲಿ ಭಾಗವಹಿಸುವುದು ಇವರ ಕರ್ತವ್ಯವಾಗಿದ್ದಿಲ್ಲವೇ? ಬಂದರ ಮತ್ತು ಬೀಜದ ಕಾರ್ಖಾನೆಗಳಿಂದ ಒಂದು ದೊಡ್ಡ ಜಾಥಾವನ್ನಾದರೂ ಇವರು ಮೈಸೂರಿಗೆ ಒಯ್ಯಬಾರದಿತ್ತೇ? ಸ್ಥಾನಕ್ಕೆ ಮಾತ್ರ ಮೈಸೂರು ಬೇಕು. ಜವಾಬ್ದಾರಿಗೆ ಬೇಡವೇ?

೦೦ ೦೦ ೦೦

ತನಗೆ ಬೇಕಾಗಿದ್ದರೆ ಈ ಫೋಟೋ ಹಿಟ್ಲರರಿಗೆ ಯಾವ ಪ್ಲೇನನ್ನಾದರೂ ಮಾಡಿ, ಒಂದು ರಾತ್ರಿ ಹಗಲೊಳಗೆ ಜಿಲ್ಲೆಯಲ್ಲೆಲ್ಲಾ ಅಡ್ಡಾಡಿ ದಿವಾನರ ಆಮಂತ್ರಣವೇ ಕೇನ್ಸಲ್ ಮಾಡಿಸಲು ಸಾಧ್ಯವಿದ್ದಿಲ್ಲವೇ? ಸಿ ಪಿ ಸಿ ಯ ಔತಣವನ್ನಾದರೂ ನಿಲ್ಲಿಸಲು ಅಸಾಧ್ಯವಾಗುತ್ತಿತ್ತೇ? ಈ ಉಪ್ಪುಚಪ್ಪಿಯ ವರ್ತನೆಯಿಂದ ವಂಚಿಸುವುದಾದರೂ ಯಾರನ್ನು?

೦೦ ೦೦ ೦೦

ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಡಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಿರ್ಧರಿಸಿದ್ದಾರೆ. ಎರಡು ಹತ್ತು ವರ್ಷದ ಪ್ರೋಗ್ರಾಮ್ ಹಾಕಿಕೊಂಡ ನಡಿಸಿದ ಆಡಳಿತವೆಲ್ಲಾ ಗಡಕ್ಕನೆ ನಿಂತುಹೋಗುವಂತಾಗಿದೆ. ಮಂತ್ರಿಗಳು, ಪಾರ್ಲಿಮೆಂಟರಿ ಸೆಕ್ರೆಟರಿಗಳೆಲ್ಲಾ ಪೆಟ್ಟಿಗೆ ಕಟ್ಟತೊಡಗಿದ್ದಾರೆ. ಮುಂದೇನು? ಮುಂದೇನು? ಎಂಬ ಪ್ರಶ್ನೆ ಎಲ್ಲಾ ಕಡೆಗಳಿಂದಲೂ ಕೇಳಬರುತ್ತಿದೆ.

೦೦ ೦೦ ೦೦

ಕಾಂಗ್ರೆಸು ಇನ್ನೊಮ್ಮೆ ಹೋರಾಟವನ್ನಾರಂಭಿಸಿದರೆ ಈಗ ಎಸೆಂಬ್ಲಿ, ಡಿಸ್ಟ್ರಿಕ್ಟ್ ಬೋರ್ಡ್, ಮುನಿಸಿಪಾಲಿಟಿಗಳ ಕಾಂಗ್ರೆಸ್ ಮೆಂಬರರುಗಳಲ್ಲೆಲ್ಲಾ ಎಷ್ಟು ಮಂದಿ ಇದ್ದಾರೋ ಜೈಲಿಗೆ ಹೋಗುವವರು? ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳಲ್ಲೇ ಬಾಲ ಮುಗುಚಿ ಬಿಡುವವರೆಷ್ಟು ಮಂದಿಯೋ? ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಫೋಟೋ ಹಿಟ್ಲರರು ರಾತೋರಾತ್ರಿ ಮೋಟಾರು ಕಾರಿನಲ್ಲಿ ಎರಡು ಸುತ್ತು ಓಡಾಡಿಬಿಟ್ಟರ ದಳದಳವೇ ಸಿದ್ಧವಾಗದಿರಲಿಕ್ಕಿಲ್ಲ ಕಾಯಿದೆ ಭಂಗಕ್ಕೆ! ದಾರಿ ಹೋಕನಂತೂ ಸೇಫ್. ಅವನು ಈ ಸಲ ನಾಲ್ಕಾಣೆ ಕಾಂಗ್ರೆಸ್ ಮೆಂಬರ ಕೂಡಾ ಅಲ್ಲ

೦೦ ೦೦ ೦೦

ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳು, ಮೆಂಬರರು, ಜಿಲ್ಲಾ ಬೋರ್ಡ್ ಮತ್ತು ಮುನಿಸಿಪಾಲಿಟಿಯ ಕಾಂಗ್ರೆಸ್ ಪಕ್ಷದ ಮೆಂಬರರು, ನಾಲ್ಕಾಣೆ ಮೆಂಬರರೇ ಮೊದಲಾದವರೆಲ್ಲಾ ಮುಂದಾಗಿ ಜೈಲಿಗೆ ಹೋದ ಮೇಲೆ ಅನಂತರ ಮೆಲ್ಲಗೆ ಹಿಂದಿನಿಂದ ಹೋದರೆ ಸರಿ.

—ದಾರಿ ಹೋಕ.

Advertisement Tariff

1 Page	Rs 25/	per insertion	
½ „	Rs 15/	„	„
¼ „	Rs 8/	„	„
⅛ „	Rs. 5/	„	„

Per Single inch col. Re. 1 „
Contract rates on application
Manager **Navayuga UDIPI.**

ಮೈಸೂರು ದಿವಾನರ—ಸಂದರ್ಶನ ವಿಚಾರ

ದಕ್ಷಿಣ ಕನ್ನಡ ಜಿಲ್ಲೆಗೆ ಮೈಸೂರು ದಿವಾನರ ಸಂದರ್ಶನದ ವಿರೋಧದ ಕುರಿತು ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಡಾಕ್ಟರ್ ವಿಠಲ ಶೆಟ್ರೊಂದು ಹೇಳಿಕೆ ಹೊರಡಿಸಿ, ತನ್ನ ಧೋರಣೆಯನ್ನು ಸ್ಪಷ್ಟಪಡಿಸಿರುತ್ತಾರೆ ಆದರೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಮಹಾಶಯರು, ನವಯುಗದ ದಾರಿಹೋಕನು ನಾನಾಗಿ ಕಲ್ಪಿಸಿಕೊಂಡು ಕೊಟ್ಟಿರುವ ಉತ್ತರವು, ಅವರ ಕುಹಕತನವು ಇಷ್ಟರವರೆಗೆ ಬಟ್ಟಬಯಲಾಗಿರದಿದ್ದರೆ ಅದನ್ನು ಮತ್ತಷ್ಟು ಬೆಳಕಿಗೆ ತಂದಿದೆ. ನಾನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾದ್ದಾಗ ಈ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ವ್ಯಕ್ತಿಯ ಕೈಗೊಂಬೆಯಾಗಿ ಕುಣಿಯಲಿಲ್ಲೆಂದು, ನನ್ನ ಜಿಲ್ಲಾ ಬೋರ್ಡ್ ಸ್ಟೇಂಡಿಂಗ್ ಕಮಿಟಿಯ ಉಮೇದ್ವಾರಿಕೆಗೆ ಒಳಗಿಂದೊಳಗೆ ಅಡ್ಡಗಾಲು ಹಾಕಿ ದ್ವೇಷ ಸಾಧಿಸಿ ಆ ನಂತರ ನನ್ನ ಮೇಲೆ ಶಿಸ್ತು ಜಾರಿಮಾಡಿಸಿ ಸೇಡು ತೀರಿಸಲು ಮುಂದಾಗಿದ್ದರು. ಆ ಮೇಲೆ ಶ್ರೀ ಕಾರಂತರ ಮೇಲೆ ಸೇಡು ತೀರಿಸಲೆತ್ನಿಸಿದ್ದರು

ಮೈಸೂರಿನ ದಿವಾನರನ್ನು ಆಮಂತ್ರಿಸಿದ ವಿಷಯದಲ್ಲಿ ಸರ್ವ ಜವಾಬ್ದಾರಿಯನ್ನು ಡಾಕ್ಟರ್ ವಿಠಲ ಶೆಟ್ರ ಮೇಲೆ ಹಾಕಿ ಹಿಂದಿನಿಂದ ಅವರನ್ನು ನಾನಾ ಪರಿ ಗೇಲಿ ಮಾಡಿ ಅವರ ಹೆಸರು ಕೆಡಿಸುವುದರಲ್ಲಿ ಚತುರನಾಗಿರುವ ಶ್ರೀ ಮಲ್ಯ ಮಹಾಶಯರಿಗೆ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರೂ ಪರಮಾಪ್ತರೇ ಆಗಿದ್ದಾರೆ ಅಷ್ಟೊಂದು ಸ್ನಿತಿಮಾಪಕಗುಣ ವಿಭೂತರಿರುವಂತಿದೆ ಇಬ್ಬರೂ. ಮುಖಂಡತ್ವದ ವಿಶಿಷ್ಟತೆಯೊಂದಾಗಿರಬಹುದದು ಅದೇಕಿರಲಿ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಜೊಯಿಂಟ್ ಸೆಕ್ರೆಟರಿಗಳೂ, ಮೈಸೂರಿಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಆರಿಸಲ್ಪಟ್ಟ ಸದಸ್ಯರೂ ಆದ ಶ್ರೀ ಶ್ರೀನಿವಾಸ ಮಲ್ಯರು ಮೈಸೂರಿನ ಸತ್ಯಾಗ್ರಹದಲ್ಲಿ ಭಾಗವಹಿಸಿ, ದಕ್ಷಿಣ ಕನ್ನಡದಿಂದ ಅಲ್ಲಿಗೊಂದು ಜಾಥಾವನ್ನೊಯ್ಯಬೇಕಿತ್ತು ಅಂತಹ ಪುರುಷಾರ್ಥದ ಕಾರ್ಯವು ಅವರಿಗೆ ಹೇಳಿದ್ದಲ್ಲವನ್ನುವ. ತನ್ನ ಅಧೀನ ಸಂಸ್ಥೆಯು ಮೈಸೂರು ದಿವಾನರನ್ನು ಆಮಂತ್ರಿಸಿ, ಅವರಿಂದ ಸೇತುವೆಗಳನ್ನು ತೆರೆಯಿಸಿ ಸ್ವಾಗತೀಕರಿಸುವಾಗ ಅವನ್ನು ತಡೆಯುವ ಶಕ್ತಿಯಾದರೂ ಇಲ್ಲವಾಯಿತೇ ಮಲ್ಯ ಮಹಾಶಯರಿಗೆ? ಹಾಗಾದರೆ ಅವರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುವುದು ಅಧ್ಯಕ್ಷರೆಂದು ಸ್ವತಂತ್ರ ಭಾರತದಲ್ಲಿ ಪ್ರಕಟಿಸಿ ಹೊರಡಿಸಲಿಕ್ಕಾಗಿ ಮಾತ್ರವೇ?

ದಿವಾನರ ಸಂದರ್ಶನದ ವಿಷಯವನ್ನು ಡಾಕ್ಟರ್ ವಿಠಲ ಶೆಟ್ರು ಶ್ರೀ ಶ್ರೀನಿವಾಸ ಮಲ್ಯರಿಗೆ ತಿಳಿಸಿರುವರೆಂದೂ ಅವರು ಆ ಕುರಿತು ಸಂತೋಷ ಸೂಚಿಸಿರುವರೆಂದೂ ನಾನು ಕೇಳಿರುತ್ತೇನೆ, ದಿವಾನರ ಸಂದರ್ಶನದ ವಿಷಯದಲ್ಲಿ ಶ್ರೀ ಹೊಳ್ಳರೊಬ್ಬರ ಆಕ್ಷೇಪವಿದ್ದಿತೆಂದು ಸ್ಪಷ್ಟವಾಗಿ ತಿಳಿದುಬಂದಿದೆ. ಶ್ರೀಮಲ್ಯರ ವಿರೋಧವಿದ್ದುದಾದರೂ ಎಲ್ಲಿ?

ಮುದ್ರಾಡಿಯಂತಹ ಚಿಕ್ಕ ಊರೊಂದು ಹಳ್ಳಿಯಲ್ಲಾದರೂ ಮೈಸೂರು ದಿವಾನರ ಸಂದರ್ಶನದ ಕುರಿತು ಕರಿಧ್ವಜ ಪ್ರದರ್ಶನ ನಡೆಯಿತು. ಮೈಸೂರು ಕೆ ಪಿ ಸಿ. ಸಿ ಮೆಂಬರರಾದ ಮಲ್ಯ ಮಹಾಶಯರು ಅಧ್ಯಕ್ಷರಾಗಿರುವ ಜಿಲ್ಲಾ ಕಾಂಗ್ರೆಸ್ ಕಮಿಟಿಯು, ತನ್ನ ಕೈಕೆಳಗಿನ ಸಂಸ್ಥೆಯ ವರ್ತನೆಯ ಕುರಿತು ಕೇವಲ ವಿಷಾದ ಸೂಚಿಸುವುದೆಂದರೆ ಎಂತ ಹಾಸ್ಯಾಸ! ಬೇಕಾಗಿದ್ದರೆ ಏನಾದರೂ ತಂತ್ರಮಾಡಿ ದಿವಾನರ ಸಂದರ್ಶನದ ಕಾರ್ಯಕ್ರಮವನ್ನೇ ನಿಲ್ಲಿಸಿಬಿಡುವ ಶಕ್ತಿ ಮಲ್ಯ ಮಹಾಶಯರಿಗಿಲ್ಲವೇ? ಜಿಲ್ಲಾ ಕಾಂಗ್ರೆಸ್ ಕಮಿಟಿಯು ದಿವಾನರ ಆಮಂತ್ರಣವನ್ನು ರದ್ದುಮಾಡಬೇಕೆಂದೇಕೆ ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಾರ್ಟಿಗೆ ಅನುಜ್ಞೆಕೊಡಬಾರದಿತ್ತು? ಈ ಉಪ್ಪುಚಪ್ಪಿಯ ಧೋರಣೆಯಿಂದ ಜನತೆಯ ಕಣ್ಣಿಗೆ ಮಣ್ಣು ಹಾಕಿ ತಾನು ಸಂಭಾವಿತ ಸುಭಗನೆಂದು ನಂಬಿಸುವ ಕಲ್ಪನೆಯು ಶ್ರೀ ಮಲ್ಯರಲ್ಲಿದ್ದರೆ ಅವರು ಭ್ರಾಂತರೆಂದೇ ಹೇಳಬೇಕು

—ಕೆ ಕೆ. ಶೆಟ್ಟಿ

ತುಳುನಾಡ್ ವೈದ್ಯಶಾಲೆ

ಉದಿಯಾವರ, ದ ಕ

ಕೊಲೆರಾ ಫಿಲ್ಸ್ ಕೊಲೆರಾ ರೋಗಕ್ಕೆ ರಾಮಬಾಣ ಔಷಧ

೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು- ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ

೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ ಮೋಸ್ಸ, ಗೋಲ್ಡ್ ಮೆಡಲ್ಡ್ ಫಿಸಿಷಿಯನ್

Transport & Car Owners

ARE SPECIALLY INVITED TO VISIT
OUR SHOW ROOM *for economical transport*
CANARA AUTOMOBILES - - - - - MANGALORE

ಬೊಂಬಾಯಿ

20-10-39

ನಾಡಹಬ್ಬ—ಮುಂಬಯಿ ಕನ್ನಡಿಗರು ತಮ್ಮ ಪ್ರಥಮ ಬಾರಿಯ ನಾಡಹಬ್ಬವನ್ನು ಕಳೆದ ರವಿವಾರ ವಿಜೃಂಭಣೆಯಿಂದ ಜರಗಿಸಿದರು. ಮುಂಬಯಿ ಸರಕಾರದ ಮುಖ್ಯ ಮಂತ್ರಿಯವರಾದ ಶ್ರೀಯುತ ಬಿ. ಜಿ. ಖೇರರವರು ಅಧ್ಯಕ್ಷ ಪದವಿಯನ್ನು ವಹಿಸಿಕೊಂಡು ಕನ್ನಡಭಾಷೆಯಲ್ಲೇ ಭಾಷಣವನ್ನಿತ್ತರು. "ನಾನು ಕನ್ನಡನಾಡಿನಲ್ಲಿ ಜನ್ಮತಾಳದಿದ್ದರೂ, ಕನ್ನಡಿಗರಲ್ಲಿರುವಷ್ಟು ಅಭಿಮಾನ ನನಗೆ ಬೇರೆಯವರಲ್ಲಿ ಇಲ್ಲ. ಮುಂಬಯಿಯ ಕನ್ನಡಿಗರೂ ಹೀಗೆ ಮುಂದೊತ್ತುತ್ತಿರುವುದನ್ನು ಕಂಡು ನನಗೆ ಸಂತೋಷವಾಗುತ್ತದೆ. ಮುಂಬಯಿಯಲ್ಲಿ 50 ಕ್ಕಿಂತಲೂ ಮಿಕ್ಕಿ ಕನ್ನಡ ಸಂಘಗಳಿವೆ. ಇವುಗಳನ್ನೆಲ್ಲ ಒಟ್ಟಿಗೆ ಸೇರಿಸಿ ದಲಿತ ಕನ್ನಡಿಗರನ್ನು ಒಂದೆಡೆ ಸೇರಿಸಿ ಕರ್ನಾಟಕದ ಉನ್ನತಿಗಾಗಿ ಪ್ರಯತ್ನಿಸಬೇಕು. ನನ್ನ ಸಹಕಾರವು ಸದಾಕಾಲವೂ ಕನ್ನಡಿಗರಲ್ಲೇ ಇದೆ" ಎಂದರು.

ಬಂಟರಯಾನೆ ನಾಡವರ ಸಂಘ ಮುಂಬಾಯಿ.—ಇದರ ವಾರ್ಷಿಕ ಮಹಾಸಭೆಯು ತಾ. 8-10-39ರಲ್ಲಿ ಸಂಘದ ಉಪಾಧ್ಯಕ್ಷರಾದ ಶ್ರೀಯುತ ಪಾಂಗಾಳ ಮಹಾಬಲ ಶೆಟ್ಟಿ ಅಧ್ಯಕ್ಷತೆಯಲ್ಲಿ, ಫೋರ್ಟ್ ಮಾಂಗ್ರೋಲ್ ಹೋಲಿನಲ್ಲಿ ಜರಗಿತು.

ಸಂಘದ ಲೆಕ್ಕಪತ್ರಗಳನ್ನು ಚರ್ಚಿಸಿ ಮಂಜೂರು ಮಾಡಲಾಯಿತು. ಶ್ರೀ ಡಿ. ಜಿ. ಶೆಟ್ರಿಂದ ರೂ. 120/-ಕ್ಕೆ ಮಾತ್ರ ಹೊಸ ಬೋರ್ಡನ್ನು ಬರಿಸಿ ಕೊಳ್ಳಬೇಕೆಂದಾಯಿತು. ಡಾಕ್ಟರ್ ಎಮ್. ವೆಂಕಟ್ರಾಯ ಶೆಟ್ಟಿ ಜೆ. ಪಿ. ಯವರು ಅಧ್ಯಕ್ಷತೆಗೂ ಆಜೀವಸದಸ್ಯತೆಗೂ ಕೊಟ್ಟ ರಾಜೀನಾಮೆಗಳನ್ನೂ ಸ್ವೀಕರಿಸದೆ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿ ಆ ವಿಷಯ ಮಾತನಾಡಲು ಶ್ರೀಗಳಾದ ಕಾಂತಪ್ಪ ಶೆಟ್ಟಿ, ಪಾಂಗಾಳ ಮಹಾಬಲ ಶೆಟ್ಟಿ, ಬಿ. ನಾರಾಯಣ ಶೆಟ್ಟಿ B.A., ಮೂಲ್ಕಿ ಕಾಳು ಶೆಟ್ಟಿ ಮತ್ತು ಸೂಡ ವೀರಪ್ಪ ಶೆಟ್ಟಿ ಇವರನ್ನ ಕಳುಹಿಸಬೇಕೆಂದಾಯಿತು.

ಈ ವರುಷದ ಆಡಳಿತ ಮಂಡಳಿಗೆ ಈ ಕೆಳಗಿನ 31ಜನ ಸದಸ್ಯರು ಚುನಾಯಿಸಲ್ಪಟ್ಟಿರುವರು. ಡಾಕ್ಟರ್. ಎಮ್. ವೆಂಕಟ್ರಾಯ ಶೆಟ್ಟಿ ಜೆ. ಪಿ. (ಅಧ್ಯಕ್ಷರು) ಶ್ರೀಗಳಾದ ಮೂಲ್ಕಿ ದೊಂಬ ಶೆಟ್ಟಿ (ಉಪಾಧ್ಯಕ್ಷರು) ಸಂಜೀವ ಪಿ. ಶೆಟ್ಟಿ, ಸೂಡ ವೀರಪ್ಪ ಶೆಟ್ಟಿ, (ಗೌರವ ಜೊತೆ ಕಾರ್ಯದರ್ಶಿಗಳು) ಎಸ್. ಎನ್. ಶೆಟ್ಟಿ, ರುಕ್ಮಯ್ಯ ಶೆಟ್ಟಿ (ಗೌರವ ಜೊತೆ ಕೋಶಾಧಿಕಾರಿಗಳು) ಬಿ. ಮುದ್ದಣ್ಣ ಶೆಟ್ಟಿ, ಕೆ. ದೊಡ್ಡಣ್ಣ ಶೆಟ್ಟಿ, ಯಸ್ ಸಂಜೀವ ಶೆಟ್ಟಿ, ಬಿ. ಬಾಬು ಶೆಟ್ಟಿ, ಕುತ್ತೆತ್ತೂರು ರಾಮಣ್ಣ ಶೆಟ್ಟಿ, ಯನ್ ನಾರಾಯಣ ಶೆಟ್ಟಿ, ಕಟ್ಟಿಂಗೇರಿ ಪುಕ್ಕ ಶೆಟ್ಟಿ, ಕರ್ನಿರೆ ವಾಸು ಶೆಟ್ಟಿ, ಪುತ್ರಯ್ಯ ಕೃಷ್ಣ ಶೆಟ್ಟಿ, ಪಾವೂರು ಕೃಷ್ಣ ಶೆಟ್ಟಿ, ಸಂಡಳಿಕೆ ನಾರಾಯಣ ಶೆಟ್ಟಿ, ಮುಡುಂಬು ಉಷ್ಣಣ್ಣ ಶೆಟ್ಟಿ, ಮೂಳೂರು ಶೀನ ಶೆಟ್ಟಿ, ಅಚ್ಚಣ್ಣ ದೋಕಯ್ಯ ಶೆಟ್ಟಿ, ಮೂಲ್ಕಿ ಕಾಳು ಶೆಟ್ಟಿ, ರಾಮಣ್ಣ ಬಿ. ಶೆಟ್ಟಿ, ಪಡುಬಿದ್ರೆ ಪೂವು ಶೆಟ್ಟಿ, ಪಾದೂರು ರಾಜು ಶೆಟ್ಟಿ, ಶಿಬಾರ್ ದೇಜು ಶೆಟ್ಟಿ, ಲಿಂಗು ಶೆಟ್ಟಿ, ಸಂಜೀವ ಅಂತಯ್ಯ ಶೆಟ್ಟಿ, ಪೂಳ್ಯ ಬರ್ಗೆ ಕೊರಗ ಶೆಟ್ಟಿ, ಟೆಲ್ಕನ್ ಕಾಂತು ಶೆಟ್ಟಿ, ಉಪ್ಪೂರು ಕೃಷ್ಣ ಶೆಟ್ಟಿ, ಪಾದೂರು ಅಚ್ಚಣ್ಣ ಶೆಟ್ಟಿ, ಯಸ್ ತಾಂಪಣ್ಣ ಶೆಟ್ಟಿ, (ಕಮಿಟಿ ಸದಸ್ಯರು) ಇಂದಿನ ಅಧ್ಯಕ್ಷರ ಭಾಷಣವಾದ ಬಳಿಕ ಶ್ರೀ ಹರಿ ಪಂತ್ ಇವರ ಇಂಪಾದ ಕೊಳಲು ಗಾಯನ ಟೀ ಪಾರ್ಟಿ ಮುಂತಾದುವುಗಳಿಂದ ಸಭೆಯು ಕೊನೆಗೊಂಡಿತು.

ಸಸಿಹಿತ್ಲು ಶ್ರೀಭಗವತಿ ದೇವಸ್ಥಾನ ಸಂಘ ಮುಂಬಯಿ—ತಾ. ೨೪-೯-೩೯ರಲ್ಲು ಈ ಸಂಘದ ೧೧ನೇ ವಾರ್ಷಿಕ ಮಹಾಸಭೆಯು ಪಿ. ಏ. ಚೋರೋರ್ವಜಿ ಕಂಪೆನಿಯ ವಠಾರದಲ್ಲಿ ಸಂಘದ ಅಧ್ಯಕ್ಷರಾದ ರಾ. ದೂಮ. ಅಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಜರಗಿ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ತಾ. ೩೧-೮-೩೯ಕ್ಕೆ ಅಂತ್ಯವಾಗುವ ಒಂದು ವರ್ಷದ ಆಯವ್ಯಯದ ಪಟ್ಟಿಯನ್ನೊಳಗೊಂಡ ವರದಿಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು ಮತ್ತು ಸಂಘದ ಕ್ರಮ ನಿಬಂಧನೆಯಂತೆ ಮುಂದಿನ ವರ್ಷದ ಹೊಸ ಕಾರ್ಯ ನಿರ್ವಾಹಕ, ಮಂಡಳಿಗೆ ಸದಸ್ಯರುಗಳನ್ನು ಸರ್ವಾನುಮತದಿಂದ ಆರಿಸಲಾಯಿತು. ಕಡೆಗೆ ಸವಿಕರ, ಮತ್ತು ಅಧ್ಯಕ್ಷರ ಭಾಷಣಗಳಾದ ನಂತರ ಶ್ರೀ ದೇವಿಯ ಪ್ರಾರ್ಥನೆಯೊಂದಿಗೆ ಸಭೆಯು ಕೊನೆಗೊಂಡಿತು.

ತಿದ್ದುಪಡಿಯ ಸ್ಪಷ್ಟತೆ—ತಾರೀಕು 14-9-39ನೇ ನವಯುಗ ಸಂಚಿಕೆಯ 16ನೇ ಪುಟದ ತಿದ್ದುಪಡಿಯಲ್ಲಿ, "ಶ್ರೀ. ಕಾಡಿಪಟ್ನದ ಚೆಂದು, ಎ. ಮಾಸ್ತರರು ಮಂಡಳಿಯ ಸ್ಥಾಪಕರಲ್ಲೋರ್ವರೆಂಬುದು ನಿಜವಲ್ಲ ಎಂದು ಮೊಗವೀರ ವ್ಯವಸ್ಥಾಪಕ ಮಂಡಳಿಯವರಿಂದ ತಿಳಿಸಲಾಗಿದೆ' ಯಷ್ಟೆ. ಇದರ ವಿವರವನ್ನು ಸ್ಪಷ್ಟಗೊಳಿಸುವುದುತ್ತಮವೆಂದು ತೋರುತ್ತೇನೆ, ಮಂಡಳಿ ಸ್ಥಾಪನೆ ಆಗಾಯ್ತು ಮಂಡಳಿಯ ಸ್ಥಾಪಕರೆಂದು ಪ್ರಸಿದ್ಧ ಪಡೆದವರು ಶ್ರೀ ಮಾಸ್ತರರು ಒಬ್ಬರೇ ಆಗಿರುತ್ತಾರೆ. ಆದ್ದರಿಂದ ತಾ. 17-8-39ನೇ ಸಂಚಿಕೆಯ 20ನೇ ಪುಟದಲ್ಲಿ ಶ್ರೀ ಮಾಸ್ತರರ ವಿಷಯಕವಾದ ಲೇಖನದಲ್ಲಿರುವ, ಮಂಡಳಿಯವರಿಂದಲೇ ತಾ. 2-7-39ನೇ ಬೋಂಬೆ ಕ್ರೋನಿಕಲ್ ಪತ್ರಿಕೆಯ ರವಿವಾರದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ವಿವರಣೆಯಲ್ಲಿ ಮಂಡಳಿಯ ಸ್ಥಾಪಕರಲ್ಲಿ "ಓರ್ವರು" ಎಂಬುದು ನಿಜವಲ್ಲದಿರುವುದರಿಂದ ಶ್ರೀ. ಕಾಡಿಪಟ್ನದ ಚೆಂದು ಎ. ಮಾಸ್ತರು "ಮಂಡಳಿಯ ಸ್ಥಾಪಕರು" ಎಂದು ದುರುಸ್ತಿಯಿಂದ ಓದಬೇಕಾಗಿ ವಿನಂತಿ ಎಂದು ಶ್ರೀ. T. K. A. P. ಯವರು ತಿಳಿಸುತ್ತಾರೆ.

ಮೈಸೂರು

ಸ್ವ. ಬಾ. ತಾ. 25-10-39.

ಮೈಸೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭ

ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ (Convocation) ವು ಈ ದಿನ ವೇಳೆಗ್ಗೆ ಜಗನ್ಮೋಹನ ಬಂಗಲೆಯಲ್ಲಿ ಜರಗಿತು. ಪದವೀ ಪಡೆವ ಪದವೀಧರರುಗಳು ಬಂದು ತಮ್ಮ ತಮ್ಮ ನಿರ್ದಿಷ್ಟ ಕಾಲಕ್ಕೆ ಸರಿಯಾಗಿ ಛಾನ್ಸಲರ್ ಆದ ಮಹಾಪ್ರಭುಗಳು ಅರಮನೆಯಿಂದ ಹೊರಟು ಕುದುರೆ ಸಾರೋಟಿನಲ್ಲಿ ಬಂದರು. ಇವರು ಛಾನ್ಸಲರಿ (ಕೆಂಪು ನಿಲುವಂಗಿ) ಉಡುಪನ್ನು ಧರಿಸಿದ್ದರು. ಪ್ರಭುಗಳು ಬಂದೊಡನೆ ಅರಮನೆ ಬ್ಯಾಂಡಿನವರು ಸಂಗೀತ ನುಡಿಸಲು ಪ್ರಭುಗಳು ಗಂಭೀರ ನಡಿಗೆಯಲ್ಲಿ ನಡೆದು ವಿಶೇಷಾಸನದಲ್ಲಿ ಕುಳಿತರು. ನಂತರ ಮೈಸೂರು ಮಹಾರಾಜ ಕಾಲೇಜಿನ ಮುಖ್ಯಾಧಿಕಾರಿಗಳು ಬೆಳ್ಳಿಯ ದಂಡ (Mace) ಹಿಡಿದು ನಡೆಯಲು ಇವರ ಹಿಂಭಾಗದಲ್ಲಿ, ವಿಶ್ವವಿದ್ಯಾನಿಲಯದ ಸೆನೇಟ್ ಸದಸ್ಯರುಗಳು ಒಬ್ಬರಿಂದೊಬ್ಬರು ನಡೆದು ತಮ್ಮ ತಮ್ಮ ಆಸನದಲ್ಲಿ ಕುಳಿತರು.

ಎಲ್ಲ ಪದವೀಧರರೂ ಒಟ್ಟಿಗೆದ್ದುನಿಂತು ಪ್ರತಿಜ್ಞಾವಚನ ಸ್ವೀಕರಿಸಿದ ಮೇಲೆ, ಬಹುಮಾನ ಪಡೆದವರಿಗೆ ಪ್ರಭುಗಳು ಬಹುಮಾನ ಹಂಚಿದರು. ವಿವಿಧ ಕಾಲೇಜಿನ ಅಧಿಕಾರಿಗಳು ಪದವೀಧರರ ಹೆಸರನ್ನು ಹೇಳಿದಾಗ ಅವರು ತಮ್ಮ ತಮ್ಮ ಆಸನದಿಂದೆದ್ದು ಪ್ರಭುಗಳಿಗೆ ತಲೆಬಾಗಿ ನಮಸ್ಕರಿಸಿದರು. ಪದವೀಧರರಿಗೆ ಪದವಿ ದಯಪಾಲಿಸಲಾಗಿದೆಯೆಂದು ಪ್ರಭುಗಳು ಉಚ್ಚರಿಸಿದ ಮೇಲೆ ಇಂಡಿಯಾ ಸರಕಾರದ ನಿವೃತ್ತ ಲಾ ಸದಸ್ಯರಾದ ಸರ್. ನೃಪೇಂದ್ರನಾಥ ಸರ್ಕಾರ್‌ರವರು, ಪದವೀಧರರಿಗೆ ವಿಚಾರಗರ್ಭಿತ ಹಿತೋಪದೇಶ ಭಾಷಣಮಾಡಿದರು. ಮತ್ತೆ ಪ್ರಭುಗಳೂ, ಸೆನೇಟ್ ಸದಸ್ಯರುಗಳೂ ಮೆರವಣಿಗೆ ಹೊರಟರು. ಅರಮನೆ ಬ್ಯಾಂಡಿನವರು ಮತ್ತೆ ಮೈಸೂರು ರಾಷ್ಟ್ರಗೀತೆ ನುಡಿಸಿದರು. ಪ್ರಭುಗಳು ಅರಮನೆಗೆ ತೆರಳಿದ ಮೇಲೆ ಸಭೆ ಮುಗಿಯಿತು. ಈ ಬಾರಿ ಬಹುಮಂದಿ ಮಹಿಳೆಯರು ಪದವೀ ಪಡೆದದ್ದು ಗಮನಾರ್ಹವಾದದ್ದು.

ದಸರಾ ಮಹೋತ್ಸವವು ಮುಕ್ತಾಯಗೊಂಡಿತು.

ಚರಿತ್ರಾರ್ಹವಾದ ರಾಜಮೆರವಣಿಗೆ

ಹಿಂದೆ ತಿಳಿಸಿದ್ದಂತೆ ಮೈಸೂರಿನಲ್ಲಿ ಅತ್ಯಹಾಸದಿಂದ ನಡೆಯುತ್ತಿದ್ದ ನಾಡಹಬ್ಬ ನವರಾತ್ರಿ ಮಹೋತ್ಸವವು ಶ್ರೀಮನ್ ಮಹಾರಾಜರವರ ಚರಿತ್ರಾರ್ಹವಾದ ಮೆರವಣಿಗೆಯೊಂದಿಗೆ ಮುಕ್ತಾಗೊಂಡಿತು. ಮೈಸೂರು ನಗರವನ್ನು ಬಲು ಸುಂದರವಾಗಿ ಬಣ್ಣದ ಬಾವುಟಗಳಿಂದ ಅಲಂಕರಿಸಲಾಗಿತ್ತು. ಮಹಾಪ್ರಭುಗಳೂ, ಪ್ರಿನ್ಸ್ ಜಯಚಾಮ ರಾಜೇಂದ್ರ ಒಡೆಯರವರೂ ಅಪ್ಯಾಯಮಾನವಾದ ಉಡುಪನ್ನು ಧರಿಸಿ ಅಂದವಾಗಿ ಅಲಂಕೃತ ಮಾಡಿದ್ದ ಅಂಬಾರಿ ಆನೆಯ ಮೇಲೆ ಕುಳಿತು ನಿರ್ದಿಷ್ಟ ಶುಭ ಮುಹೂರ್ತ ಕಾಲದಲ್ಲಿ ಮೆರವಣಿಗೆ ಹೊರಟರು. ರಾಜಬೀದಿಗಳಲ್ಲಿ ನಡೆದ ಈ ಮೆರವಣಿಗೆಯ ದೃಶ್ಯವನ್ನು ಸುವರ್ಣಾಕ್ಷರಗಳಲ್ಲಿ ಬರೆಯಬಹುದಲ್ಲದೆ, ಲಕ್ಷೋಪಲಕ್ಷ ಪ್ರಜೆಗಳು "ರಾಜಾ ಪ್ರತ್ಯಕ್ಷ ದೇವತಾ" ಎಂಬಂತೆ ಪ್ರಭುಗಳ ದರ್ಶನ ಪಡೆದು ಸಂತೃಪ್ತರಾದರು.

ಬನ್ನಿ ಮಂಟಪದಲ್ಲಿ ಪ್ರಭುಗಳು ಶಮೀಪೂಜೆ ಮಾಡಿದ ಮೇಲೆ, ಉಡುಪನ್ನು ಬದಲಾಯಿಸಿ, ಉಪಕಾರ ಸ್ವೀಕರಿಸಿ ಸೈನ್ಯ ಪರೀಕ್ಷೆ ಮಾಡಿದರು. ಸಿಪಾಯಿಗಳು ಮೂರು ಬಾರಿ ಸುರುಟು ಹಾರಿಸಿ ರಾತ್ರಿ ಮೆರವಣಿಗೆಗೆ ಸಿದ್ಧರಾದರು.

ಮಹಾತ್ಮಾಗಾಂಧಿ– ಮೈಸೂರು ದಿವಾನ್ ಭೇಟಿಯೆ?

ವೈಸರಾಯರ ಆಹ್ವಾನದಂತೆ ಅವರ ಭೇಟಿಗೆ ಹೋಗಲಿರುವ ಮೈಸೂರು ದಿವಾನ್ ಸರ್. ಮಿರ್ಜಾರವರು ಮಾರ್ಗದಲ್ಲಿ ಮಹಾತ್ಮಾಗಾಂಧಿಯವರನ್ನೂ ಮುಂಬೈನಲ್ಲಿ ಸರ್ದಾರ್ ಪಟೇಲರನ್ನೂ, ಇನ್ನೂ ಕೆಲವು ಕಾಂಗ್ರೆಸ್ ಮುಂದಾಳುಗಳನ್ನೂ ಭೇಟಿ ಮಾಡುತ್ತಾರೆಂದು ಇಲ್ಲಿ ಹೇಳಲಾಗಿದೆ. ಮೈಸೂರು ಕಾಂಗ್ರೆಸ್ ವಿಚಾರವಾಗಿ ಮಹಾತ್ಮಾಗಾಂಧಿಯವರಿಗೆ ತಿಳಿಸಲು ಕೆಲವು ಮುಂದಾಳುಗಳನ್ನು ವಾರ್ಧಾಕ್ಕೆ ಕಳುಹಲಾಗಿದೆ.

ನವೀನ ಪುಸ್ತಕಗಳು.

೧ **ಕರಿನೀರು**–ರಮ್ಯ ಭೀಷಣ ಕಾದಂಬರಿ ೪೦೦ ಪುಟ ನುಣುಪು ಕಾಗದ ಬೆಲೆ ೨ ರೂಪಾಯಿ.

೨. **ಚನ್ನೆ**–ಐತಿಹಾಸಿಕ ನಾಟಕ, ಪುಟ ೪೧ ನುಣುಪು ಕಾಗದ, ಬೆಲೆ ೬ ಆಣೆ

೩ **ಬಲಿದಾನ**–ಬುದ್ಧ ಕಾಲೀನ ಐತಿಹಾಸಿಕ ಕಾದಂಬರಿ, ೨೧೬ ಪುಟ ಬೆಲೆ ರೂ ೧-೪-೦.

೪. **ಎಚ್ಚಮ್ಮ ನಾಯಕ**–ವಿಜಯನಗರಕ್ಕೆ ಸಂಬಂಧಿಸಿದ ಕಥಾನಕವು ೧೨೮ ಪುಟ ಬೆಲೆ ೮ ಆಣೆ

೫ **ಅಮಾತ್ಯ ನಂದಿನಿ**– ಚಂದ್ರಹಾಸನ ಕಾಲದ ಪೌರಾಣಿಕ ಕಾದಂಬರಿ, ೩೦೦ ಪುಟ ಬೆಲೆ ರೂ ೧-೮-೦

ವಿಳಾಸ –**ಶ್ರೀ ಶೇಷಾಚಲ ಪ್ರೆಸ್,**
ಪೊ ಆನಂದವನ (ಹಾವೇರಿ) ಧಾರವಾಡ.
ಉಡುಪಿಯ ಸ್ಟಾಕಿಸ್ಟರ,
ನವಭಾರತ ಪುಸ್ತಕ ಭಂಡಾರ, ಉಡುಪಿ.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು. **ಡಬ್ಬಿ 1ರ ಕ್ರಯ: ರೂ. 1**

ಮದನಮಂಜರಿ ಫಾರ್ಮಸಿ,
184 ಚೈನಾಬಜಾರ್ ರೋಡ್, ಮದ್ರಾಸ್.
ನಿಮ್ಮ ಊರಿನ ಔಷದ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು

ಗಾರ್ಡನ್ಸ್ ಹೋಟೆಲ್ ಫೋನ್ 406 ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347 **ಉಡುಪಿ ಆನಂದಭವನ**

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ **ಮೈಸೂರು ಕೇಫ್** ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್:-**ಕೆ. ಗುರುರಾಜಾಚಾರ್ಯ.**

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು – ಕೋಪ್ರಾನ್ ಕೆಮಿಕಲ್ ಕಂ. (ಮಾಲಕರು —ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ)
ಕೊಪರನ್ ಲಾರ್ಜ್ ಸೈಜು 0 13 0, ಕೊಪರನ್ ಸ್ಟ್ಯಾಂಡರ್ಡ್ ಸೈಜು 0 8 0, ಟೆಂಡರ್ಗಮ್ ಸ್ಟ್ಯಾಂಡರ್ಡ್ ಸೈಜು 0 8 0.

ಮಿತ ದರದಲ್ಲೇ ಹೊಸ ಯೋಜನೆಗಳಿಗೆ ಆಸ್ಪದವೀಯುವ ಸಲುವಾಗಿ ಗಟ್ಟಿಯಾಗಿ ಯಾ ಹೆಚ್ಚು ಕಾಲ ಬಾಳಿಕೆ ಬರುವಂತಹ ಸ್ವಿಸ್ ತಯಾರಿಯ ಉರುಟು ಅಥವಾ ಚಚ್ಚೌಕ ರಿಸ್ಟ್‌ವಾಚುಗಳು.

ಮಾರಾಟ.

ನಂಬ್ರ 401 ಕ್ರೋಮಿಯಮ್ ರೂ. 3-12-0, 402 ಗೋಲ್ಡನ್ ಕೇಸು ರೂ. 4 12 0, 517 ಕ್ರೋಮಿಯಮ್ ಕೇಸು 6 8 0, 518 ಗೋಲ್ಡನ್ ಕೇಸು 8-0 0, ಜುವೆಲ್ಸ್ ಚಲನೆಯುಳ್ಳ, ನಂಬ್ರ 409 ಕ್ರೋಮಿಯಮ್ 9 8 0, ನಂಬ್ರ 410 ಗೋಲ್ಡನ್ ಕೇಸು 10 8 0, 411 ರೋಲ್ಡ್‌ಗೋಲ್ಡ್ 15 0-0.

ಪ್ಯಾಕಿಂಗ್ ಮತ್ತು ಪೋಸ್ಟೇಜು ಖರ್ಚು 0-9 0 ಅಲಾಯಿದ.
(ಪತ್ರವ್ಯವಹಾರ ಇಂಗ್ಲಿಷಿನಲ್ಲಿ)

ಬಾಪಲಾಲ್ ಎಂಡ್ ಕೋ., ಅಬ್ದುಲ್ ರೆಹಮಾನ್ ಸ್ಟ್ರೀಟ್, ಬೊಂಬಾಯಿ 3

Bapalal & Co.,
101 Abdul Rehman Street,
BOMBAY 3.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್. ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, MANGALORE.

DAIMONDS! DAIMONDS!

K. R. K. SHET

Opposite Govt. College, Hampankatte MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ಸಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಅಂಬೆಗಾಲಿಕ್ಕುತ್ತಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು ಸೀಸೆ1ಕ್ಕೆ 12ಆಣೆ, ಟಪಾಲು ೯ಆಣೆ.

ಎನ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. ಶೋಧನ ಗುಣ.—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ.** ಸುಖಸೇವನದಿಂದ ಮಧುರವೂ ಸೊಗಸಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎನ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – **ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.**

ಮೂಲವ್ಯಾಧಿ

ಸಾಧುಪುಂಗವನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ

ಅರ್ಶ-ಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಿದ್ದಿಗಿರುವ ಹಳೆಯ ಅಥವಾ ಹೊಸತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯು 'ಅರ್ಶಮಾರ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವುದು. ತೀವ್ರ ಚುರಿಸಾಟ, ಉರಿಯುವಿಕೆ, ಕೀವು, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು, ಕೇವಲ 3 ದಿನ ಹಚ್ಚಿದರೆ ಯಾವ ತರದ ಉಪಚಾರವೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0

ಆರೋಗ್ಯ ಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ

ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳೀಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಸರ್, ಕೆ. ಆರ್. ಕೆ ಶೇಟ್ ಬಿಲ್ಡಿಂಗ್, ಮಿಶ್ಯನ್‌ಹೈಸ್ಕೂಲ್ ರೋಡು.
ಅಥವಾ
ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಶ್ರೀ ರಾಮಾ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್, ಉಡುಪಿ.

ಬ್ರಾಂಚ್:— ಕೊಡಿಯಾಲಬೈಲು ಮಹಾತ್ಮಾಗಾಂಧಿ ರೋದು, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿಯ ಏರ್ಪಾಡು, ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ. ಎಚ್. ರಾಮಚಂದ್ರನಾಯಕ್, ಪ್ರೊಪ್ರೈಟರ್.

ಸ್ಥಾಪನೆ **ಕ್ರಾನ್ ರಬ್ಬರ್ ಸ್ಟಾಂಪ್ ಕಂಪನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್, ಪೇಡೆಗಳ ಬೀಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು

Crown Rubber Stamp Co., Balmat Road, MANGALORE
Included in the Madras Govt. Stores Purchase Committee's list of approved firms

---

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು, ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ "ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳು

ಕ್ರಯ ಸೀಸೆ 1ಕ್ಕೆ ರೂ. 2—8—0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1—4—0.

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.

'ಹವನನ್' ಹೆಮೊರೋಯ್ಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹಂದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೊರೋಯ್ಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ.ಪಿ. ಬೇರೆ.

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವಣತ್ವವುಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಬಲಕೊಟ್ಟು ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು. ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು;

The Eclipse Distributing Agency,

Dahanu Road, B. B. & C. I. Ry. BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ನಮಗೆ ಏಜಂಟರುಗಳು ಬೇಕಾಗಿದ್ದಾರೆ. ... ... ದಯವಿಟ್ಟು ವಿಚಾರ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT NAVAYUGA OFFICE, UDIPI, S. INDIA.

tered No. M. 3618

2-11-1939

ನವಯುಗ
NAVAYUGA

ದ್ವಾರಾವತೀಂ ಸಕಲಭಾಗ್ಯವತೀಮುಪೇಕ್ಷ್ಯ
ಗೋಪಾಲಬಾಲಲಲನಾಕರಪೂಜನಂ ಚ ।
ಸಾರ್ಧಂ ವಧೂಗೃಹಮುಪೇತ್ಯ ಸ ಮಧ್ವನಾಥೋ
ಯತ್ರಾಸ್ತಿ ತದ್ರಜತಪೀಠಪುರಂ ಗರೀಯಃ ॥

ಉಡುಪಿ ಶ್ರೀ ಕೃಷ್ಣನ ಸನ್ನಿಧಿಯಲ್ಲಿ

ಇದೇ ಬರುವ ತಾ. 23—11—1939ರಿಂದ 26—11—1939ರ ತನಕ

ಪ್ರಮಾಥಿ ಸಂ||ರದ ಕಾರ್ತಿಕ ಶು. (ಉತ್ಥಾನ) ದ್ವಾದಶಿಯಿಂದ ಆರಂಭಿಸಿ ಹುಣ್ಣಿಮೆಯ ವರೆಗೆ ನಾಲ್ಕು ರಾತ್ರಿಗಳಲ್ಲಿ

ಲಕ್ಷದೀಪೋತ್ಸವವು

ಜರಗಲಿರುವುದು.

ಶ್ರೀಮನ್ಮಧ್ವಾಚಾರ್ಯರವರ ಅವತಾರಸ್ಥಾನವಾಗಿದ್ದು,

ಮುಕ್ತಿಪ್ರದವಾದ ಸಪ್ತಕ್ಷೇತ್ರಗಳಲ್ಲಿ ಮುಖ್ಯವಾದ ಉಡುಪಿಯು ಶ್ರೀಮದಾಚಾರ್ಯರ ದಿವ್ಯಹಸ್ತದಿಂದ ಪ್ರತಿಷ್ಠಿತನಾದ, ಕಡಗೋಲು ನೇಣನ್ನು ಕೈಗಳಲ್ಲಿ ಹಿಡಿದುಕೊಂಡು ನಿಂತಿರುವ, ರುಕ್ಮಿಣೀಕರಾರ್ಚಿತ ದಿವ್ಯ ಬಾಲಕೃಷ್ಣನ ಸನ್ನಿಧಾನದಿಂದ ಅತಿ ಪವಿತ್ರವೆಂದು ಹೆಸರುಗೊಂಡಿದೆ. ಈ ಸುಂದರ ಮೂರ್ತಿಯ ದರ್ಶನ ಮಾತ್ರದಿಂದ ಭಕ್ತರ ಹೃದಯದಲ್ಲಿ ಅಪೂರ್ವ ಭಕ್ತಿಸ್ರೋತವು ಉಕ್ಕಿ ಪ್ರವಹಿಸುವುದರಲ್ಲಿ ಆಶ್ಚರ್ಯವಿಲ್ಲ. ಸಾವಿರಾರು ಆಸ್ತಿಕ ಭಕ್ತರು ಈ ಪರಮಾತ್ಮನ ಮತ್ತು ಗುರುಗಳಾದ ಮಧ್ವಾಚಾರ್ಯರ ಸೇವಾ-ದರ್ಶನಾದಿಗಳಿಂದ ತಂತಮ್ಮ ಅಭೀಷ್ಟ ಸಿದ್ಧಿ ಪಡೆದಿರುತ್ತಾರೆ.

ಇದಲ್ಲದೆ ಉಡುಪಿ ಕ್ಷೇತ್ರವೂ ಸುತ್ತುಮುತ್ತಲಿನ ರಮಣೀಯವಾದ ಪ್ರಾಕೃತಿಕ ದೃಶ್ಯಗಳಿಂದ ಕೂಡಿದ ಮನೋಹರ ಮತ್ತು ಸ್ವಾಸ್ಥ್ಯಪ್ರದವಾದ ಪ್ರದೇಶದಲ್ಲಿರುವುದು.

ಏಕಕಾಲದಲ್ಲಿ ಶ್ರೀಹರಿಗುರುಗಳ ದರ್ಶನ-ಸೇವಾದಿಗಳ ಲಾಭ ದೊರೆಯುವ ಈ ಪುಣ್ಯಕ್ಷೇತ್ರವನ್ನು ಕಾರ್ತಿಕ ಲಕ್ಷದೀಪೋತ್ಸವ ಕಾಲದಲ್ಲಿ ಸಮಸ್ತ ಭಜಕರೂ ಅವಶ್ಯ ನೋಡಬೇಕಾಗಿದೆ. ರಥೋತ್ಸವಕ್ಕೆ ಮೊದಲು ತೆಪ್ಪೋತ್ಸವವೂ, ನಾಲ್ಕು ಬೀದಿಗಳಲ್ಲಿಯೂ ಬೆಳಗಿಸುವ ಲಕ್ಷಗಟ್ಟಳೆಯ ದೀಪಮಾಲೆಗಳ ವೈಭವವೂ ಅತಿ ಪ್ರೇಕ್ಷಣೀಯವಾಗಿವೆ.

ಹೆಚ್ಚಿನ ಅನುಭವಕ್ಕೂ, ವಸತಿ ಮೊದಲಾದ ಸೌಕರ್ಯಗಳಿಗೂ ಪತ್ರ ಬರೆದು ಕೇಳಿರಿ.

ಏಜಂಟ್:
ಪರ್ಯಾಯ ಶ್ರೀಫಲಿಮಾರು ಮಠ, ಉಡುಪಿ.

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61 56,764	22,34,301	67,66,528

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B. Narayan Shetty, Organizer, Brahmavar
„ **M. Shivarama Rao,** Organizer, Puttur.

Or

Sri J. A. PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves. Rs. 2,02,800/-. **Paid up Capital· Rs 1,82,100/-.**

PRINCIPAL OFFICE: COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively; Interest being payable on the 1st January & 1st July of every year.

For further particulars please address or call at any of our offices.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಹಸಿವನ್ನು ತೀವ್ರಗೊಳಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಕ್ಷಯ, ಶೀತಬಾಧೆ, ಉಬ್ಬಸ, ಖಾಸಶ್ವಾಸ, ಎದೆನೋವು ಇವುಗಳಿಗೆ ದಿವ್ಯ ಔಷಧಿ.
ಪೌಂಡ್ ರೂ 2-8-0, ½ ಪೌಂಡಿಗೆ ರೂ 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲುಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು.

ಎಲ್ಲಾ ನಮೂನೆಯ ಔಷದಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ.
ಉಡುಪಿ ಸ್ಟೋಕಿಸ್ಟರು—ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್ ಏಜಂಟ್ಸ್ ಉಡುಪಿ

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್

ಫೋನ್ 406 — ಹಳೆ ಪೋಸ್ಟಾಫೀಸು ರೋಡು ಮೈ ಸೂ ರು.

ಅರಮನೆಯ ಎದುರು ಫೋನ್ ನಂಬ್ರ 347

ಉ ಡು ಪಿ ಆ ನಂ ದ ಭ ವ ನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಪ್

ಬೋರ್ಡಿಂಗ್ ಮತ್ತು ಲೋಟಿಂಗ್

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಹೊಸ ಯೋಜನೆಗಳಿಗೆ ಅಸ್ಪದವೀಯುವ ಸಲುವಾಗಿ

ಮಿತ ದರದಲ್ಲೇ ಮಾರಾಟ.

ಗಟ್ಟಿಯಾಗಿ ಯಾ ಹೆಚ್ಚು ಕಾಲ ಬಾಳಿಕೆ ಬರುವಂತಹ ಸ್ವಿಸ್ ತಯಾರಿಯ ಉರುಟು ಅಥವಾ ಚಚ್ಚೌಕ ರಿಸ್ಟುವಾಚುಗಳು

ನಂಬ್ರ 401 ಕ್ರೋಮಿಯಮ್ ರೂ. 3-12-0, 402 ಗೋಲ್ಡನ್ ಕೇಸು ರೂ. 4 12 0, 517 ಕ್ರೋಮಿಯಮ್ ಕೇಸು 6 8 0, 518 ಗೋಲ್ಡನ್ ಕೇಸು 8-0 0, ಜ ವೆಲ್ಡ್ ಚಲನೆಯುಳ್ಳ, ನಂಬ್ರ 409 ಕ್ರೋಮಿಯಮ್ 9 8-0, ನಂಬ್ರ 410 ಗೋಲ್ಡನ್ ಕೇಸು 10 8 0, 411 ರೋಲ್ಡ್ ಗೋಲ್ಡ್ 15 0 0

ಪ್ಯಾಕಿಂಗ್ ಮತ್ತು ಪೋಸ್ಟೇಜು ಬಗ್ಗೆ 0-9-0 ಅಲಾಯಿದ.
(ಪತ್ರವ್ಯವಹಾರ ಇಂಗ್ಲಿಷಿನಲ್ಲೇ)

ಬಾಪಲಾಲ್ ಎಂಡ್ ಕೊ, ಅಬ್ದುಲ್ ರೆಹಮಾನ್ ಸ್ಟ್ರೀಟ್, ಬೊಂಬಾಯಿ 3.

Bapalal & Co., 101 Abdul Rehman Street, BOMBAY 3.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನು, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ತಿಂಗಳಲ್ಲಿ ಕಲಿತುಕೊಳ್ಳಬಹುದು, ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ, ಹಲವು ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ. ಮನೆಯಲ್ಲೇ ಈ ಪುಸ್ತಕ ಓದಿರಿ ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ. ಪುಸ್ತಕದ ಬೆಲೆ ರೂ ೧॥

Western Swiss watch Co.
Book-Sellers, Post Box No 68
G P.O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68, ಮದರಾಸ್

Transport & Car Owners

ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

ಶೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಸಿಲ್ಕ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD 1921 ಸ್ಥಾಪನೆ

FOUNDER
SRI. A B SHETTY, M. L. A,
Parliamentary Secretary Govt of Madras
ಸಂಸ್ಥಾಪಕರು
ಶ್ರೀ ಎ. ಬಿ ಶೆಟ್ಟರು, ಎಂ ಎಲ್ ಎ

ಸಂಪಾದಕ
ಕೆ. ಕೆ ಶೆಟ್ಟಿ.

NAVAYUGA ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ 3—4—0
6 ತಿಂಗಳಿಗೆ – ರೂ 1-12-0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೯

ಉಡುಪಿ, ಗುರುವಾರ, ೨—೧೧—೧೯೩೯.
UDIPI, THURSDAY, 2-11-1939.

VOL. 19
No. 9

ವಾರದ ವಿಮರ್ಶೆ

ಜಪಾನಿನ ಸೇನಾನಿಗಳಿಗೆ ಬುದ್ಧಿ ಬಂತು

ಜಪಾನಿನಲ್ಲಿ ಇತ್ತಲಾಗಿ ಸೇನಾನಿಗಳ ಕೈ ಮೇಲಾಗಿದ್ದಿತು. ಚೀನಾ ಯುದ್ಧಕ್ಕೆ ಕಾರಣವೇ ಅವರ ಉಗ್ರ ಧೋರಣೆ. ಅಸಹಿಷ್ಣು ತರುಣ ಸೇನಾಧಿಕಾರಿಗಳು ಕೆಲವರು ಹಿಂದೊಮ್ಮೆ ಜಪಾನ ಪ್ರಧಾನ ಮಂತ್ರಿಗಳನ್ನೂ ರಾಜಕೀಯ ಮುಖಂಡರನ್ನೂ ಕೊಲ್ಲುವ ಮತ್ತು ಹಿಂಸಿಸುವ ಅತ್ಯಾಚಾರ ನಡೆಸುತ್ತಿದ್ದರು. ಇತ್ತಲಾಗಿ ಮೂರು ಮಂತ್ರಿಮಂಡಲವಾಯಿತು ಬದಲಾವಣೆಯಾದುದು. ರಾಜಕೀಯ ಪಕ್ಷಗಳನ್ನು ಮೂಲೆಗೊತ್ತಿ ಸೇನಾನಿಗಳೇ ತಮ್ಮಿಚ್ಛೆಯಂತೆ ರಾಜ್ಯಭಾರ ನಡೆಸುತ್ತಿದ್ದರು. ಇಂದೀಗ ಅವರಲ್ಲಿ ವಿವೇಕೋದಯವಾಗಿದೆ. ಚೀನಾಯುದ್ಧವು ಅವರಿಗೆ ಬುದ್ಧಿ ಕಲಿಸಿದೆ. ಕೇವಲ ಮೂರು ತಿಂಗಳಲ್ಲಿ ಚೀನವನ್ನು ಸದೆಬಡಿದು ಅಧೀನಗೊಳಿಸಬಹುದೆಂದವರು ಬಗೆದಿದ್ದರು. ಈಗ ಎರಡೂವರೆ ವರ್ಷವಾದರೂ ಚೀನವು ಜೈಸಲ್ಪಟ್ಟಿಲ್ಲ. ಬದಲಿಗೆ ದಿನೇ ದಿನೇ ಬಲಗೊಳ್ಳುತ್ತಿದೆ. ಹೊಸ ಸೇನೆಯನ್ನು ತಯಾರಿಸುತ್ತಿದೆ. ಯುದ್ಧದ ಅಪಾರ ವೆಚ್ಚದಿಂದಾಗಿ ಜಪಾನಿನ ಸಾಂಪತ್ತಿಕ ಸ್ಥಿತಿಯು ತೀರಾ ಕೆಟ್ಟುಹೋಗಿದೆ. ಪ್ರತಿನಿತ್ಯ ಸುಮಾರು 10 ಲಕ್ಷ ಪವನುಗಳನ್ನು ಜಪಾನು ಈಗ ಯುದ್ಧಕ್ಕಾಗಿ ವೆಚ್ಚಮಾಡಬೇಕಾಗಿದೆ. ಅದಕ್ಕೆ 60 ಕೋಟಿ ಪವನು ಸಾಲವಾಗಿದೆ. ಇದ್ದ ಚಿನ್ನವನ್ನೆಲ್ಲಾ ಇಷ್ಟರಲ್ಲೇ ಕಳಕೊಂಡಿದೆ. ಯುದ್ಧಸಿದ್ಧತೆಗಾಗಿ ಪೆಟ್ರೋಲ್, ಲೋಹ, ರಬ್ಬರು ಮೊದಲಾದುವನ್ನು ತರಿಸಲು ಜಪಾನು ಕೋಟ್ಯಂತರ ಪೌಂಡುಗಳಷ್ಟರ ಚಿನ್ನವನ್ನು ಹೊರದೇಶಗಳಿಗೆ ಕಳುಹಿಸಬೇಕಾಯಿತು. ಸರಕಾರದ ವೆಚ್ಚವೂ ವಿಪರೀತ ಬೆಳೆಯಿತು. ಅರ್ಥಿಕ ದುರ್ವ್ಯವಸ್ಥೆಯನ್ನು ಸರಿಪಡಿಸಲು ಜಪಾನು ತನ್ನ ನಾಣ್ಯದ ಚಿನ್ನವನ್ನು ಸಹ ಕಡಿಮೆಮಾಡಿರುವುದು. ಅವರ ವ್ಯಾಪಾರ ವಹಿವಾಟು ಬಹಳ ಬಿದ್ದುಹೋಗಿದೆ. ಇಂದು ಜಪಾನಿನ ಅರ್ಥಿಕಸ್ಥಿತಿಯು ಅತ್ಯಂತ ಸಂಕಟಮಯವಾಗಿದೆ. ಈ ಬಿಕ್ಕಟ್ಟಿನಿಂದ ಪಾರಾಗಲು ಅರ್ಥಸಚಿವರು ರಾಷ್ಟ್ರೀಯ ಸಾಲವನ್ನು ಪಡೆದರು. ನಾಣ್ಯದ ಪ್ರಮಾಣವನ್ನಿಳಿಸಿದರು. ಜನತೆಯ ಮೇಲೆ ಹೊಸ ಹೊಸ ಕರಹೇರಿದರು. ಕೂಲಿಗಾರರ ಮತ್ತು ಕೃಷಿಕರ ಸ್ಥಿತಿಯು ತೀರಾ ಕೆಟ್ಟುಹೋಗಿ ಅತೃಪ್ತಿಯುಂಟಾಗಹತ್ತಿದೆ. ಜಪಾನಿನೊಡನೆ ಗೆಳೆತನ ಬೆಳೆಸಿ ಸಹಾಯ ಮಾಡುತ್ತಿದ್ದ ಜರ್ಮನಿಯು ಅದರ ಬದ್ಧ ವೈರಿ ರಷ್ಯದೊಡನೆ ಒಪ್ಪಂದಮಾಡಿಕೊಂಡುದರಿಂದ ಅದು ಚಕಿತವಾಗಿ ತನ್ನ ರಾಜಕೀಯ ಧೋರಣೆಯನ್ನೇ ಬದಲಾಯಿಸಿಬಿಟ್ಟಿದೆ. ಈಗಣ ಪ್ರಧಾನಮಂತ್ರಿಗಳಾದ ಜನರಲ್ ಅಬೆಯವರು, ಬ್ರಿಟನು, ಫ್ರಾನ್ಸ್ ಮತ್ತು ಅಮೇರಿಕಾಗಳನ್ನು ಧಿಕ್ಕರಿಸಿ ವಿರೋಧಿಸುವ ಧೋರಣೆಯನ್ನು ನಿಲ್ಲಿಸಿ ಅವುಗಳೊಂದಿಗೆ ಮೈತ್ರಿ ಬೆಳೆಸುವ ಪ್ರಯತ್ನದಲ್ಲಿದ್ದಾರೆ. ತಾವು ಗೆದ್ದ ಚೈನದ ಭಾಗದಲ್ಲಿ ಚೀನೀ ರಾಜ್ಯಭಾರವೊಂದನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ವಿದೇಶೀಯರ ವ್ಯಾಪಾರಕ್ಕೆ ಬಂದುಮಾಡಲ್ಪಟ್ಟಿದ್ದ ಯಾಂಗ್‌ಟ್ಸಿ ಮೊದಲಾದ ಚೀನೀ ನದಿಗಳು ಪುನಃ ತೆರೆದುವು. ಮಾತ್ರವಲ್ಲದೆ ಜನರಲ್ ಅಬೆಯವರು ಜಪಾನಿನ ರಾಜಕೀಯ ಪಕ್ಷಗಳನ್ನು ಪುನರುಜ್ಜೀವಿಸಿ ಅವರ ನಾಯಕರುಗಳನ್ನು ಮಂತ್ರಿಮಂಡಲದಲ್ಲಿ ಸೇರಿಸಿ ಜನಮತವನ್ನು ಮನ್ನಿಸಿ ರಾಜ್ಯಭಾರಮಾಡಲು ಯತ್ನಮಾಡುತ್ತಿದ್ದಾರೆ.

ಯುದ್ಧಕ್ಕೆ ಇಂಗ್ಲೆಂಡು ಕಾರಣ?

ಅಕ್ಟೋಬರ ತಾ 24ರಲ್ಲಿ ಡಾನ್ಜಿಗಿನಲ್ಲಿ ಜರಗಿದ ದೊಡ್ಡ ಪ್ರದರ್ಶನವೊಂದರಲ್ಲಿ ಜರ್ಮನಿಯ ವಿದೇಶ ಮಂತ್ರಿ ಹರ್ ವಾನ್ ರಿಬೆಂಟ್ರಪರ ಭಾಷಣವು, ಡಾಕ್ಟರ್ ಗೊಬ್ಬೆಲ್ಸರ ಪ್ರಚಾರದ ಮಾದರಿಯನ್ನನುಸರಿಸಿದೆ. ಯದಾರ್ಥವಾಗಿಯಾದರೂ ಜರ್ಮನಿಯ ಮೇಲೆ ಹೊರಿಸಲ್ಪಟ್ಟಿರುವ ಯುದ್ಧವಿದು. ಹಿಟ್ಲರರ ಅತ್ಯುದಾರ ರಾಜಿಯ ಶರ್ತಗಳಿಗೆ ಪೋಲೆಂಡು ಒಪ್ಪದಿರಲು ಇಂಗ್ಲೆಂಡೇ ಕಾರಣ. ಜರ್ಮನ್ ಪೋಲೀಶ್ ವೈಷಮ್ಯ ಮತ್ತು ಹೋರಾಟದ ಸರ್ವ ಜವಾಬ್ದಾರಿಯೂ ಪೋಲೆಂಡಿನದು. ಇನ್ನು ಪೋಲೆಂಡನ್ನು ನ್ಯಾಯವಾದ ರೀತಿಯಲ್ಲಿ ವಿಭಾಗಿಸಿ ಶಾಂತಿಯನ್ನು ನೆಲೆಗೊಳಿಸಲಾಗುವುದು. ಪೂರ್ವ ಯುರೋಪಿನಲ್ಲಿ ಸುವ್ಯವಸ್ಥೆ ಮತ್ತು ಶಾಂತಿಯನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಸೋವಿಯೆಟ್ ರಷ್ಯ ಮತ್ತು ಜರ್ಮನ್ ರೀಚ್ ವಹಿಸಿರುವುದು. ಜರ್ಮನಿಯೊಂದಿಗೆ ರಾಜಿಯಿಂದಿರಲು ಬ್ರಿಟಿಷರಿಗೆ ಮನಸ್ಸೇ ಇರಲಿಲ್ಲ. ಹಿಟ್ಲರರು ಅದನ್ನು ಬಹಳವಾಗಿ ಹಾರೈಸಿ ಪ್ರಯತ್ನಿಸಿ ಕಡೆಗೆ ನಿರಾಶರಾಗಿಬಿಟ್ಟರು. ಇಂದೀಗ ಜರ್ಮನಿ ಮತ್ತು ರಷ್ಯಗಳೊಳಗೆ ನಿಕಟಸಂಬಂಧವುಂಟಾಗಿದೆ. ಅದರಿಂದಾಗಿ ಪರಸ್ಪರ ವ್ಯಾಪಾರ ವಹಿವಾಟು ಬಹಳವಾಗಿ ಹೆಚ್ಚಲಿದೆ. ಅವುಗಳೊಳಗಿನ್ನು ರಾಜ್ಯ ಸಂಬಂಧವಾಗಿ ಎಂದೂ ಕಲಹವುಂಟಾಗುವ ಹಾಗಿಲ್ಲ. ಫ್ರೆಂಚರಿಗೆ ಈ ಯುದ್ಧ ಬೇಕಾಗಿಲ್ಲೆಂಬುದರಲ್ಲಿ ಸಂದೇಹವಿಲ್ಲ. ನಾಳೆಗಿಂತ ಇಂದೇ ಸಂಧಿ ಮಾಡಿಕೊಳ್ಳಲು ಅವರು ಹಾರೈಸುತ್ತಿದ್ದಾರೆ. ಅವರನ್ನು ಯುದ್ಧಕ್ಕೆಳೆದುದು ಬ್ರಿಟನು. ಈ ಯುದ್ಧಕ್ಕಾಗಿ ಬ್ರಿಟಿಷ್ ಸರಕಾರವು ಹಲವು ವರ್ಷಗಳಿಂದ ಗುಪ್ತ ಸಿದ್ಧತೆ ಮಾಡಿಕೊಂಡಿದ್ದಿತು. ಮಿ ಚೇಂಬರ್ಲೇನರು ಮ್ಯೂನಿಚಿಗೆ ಹೋದುದು ಯುದ್ಧವನ್ನು ನಿವಾರಿಸಲಿಕ್ಕಲ್ಲ, ಮುಂದೆ ಹಾಕಲಿಕ್ಕೆ. ಜರ್ಮನಿಯು ಇಡೀ ಲೋಕದ ಮೇಲೆ ಅಧಿಕಾರನಡಿಸಲೆಣ್ಣಿಸುತ್ತದೆಂಬ ಬ್ರಿಟಿಷರ ಮಾತು ತೀರಾ ಸುಳ್ಳು. ಹಿಟ್ಲರರನ್ನು ನಿಂದಿಸಿ, ಜರ್ಮನ್ ಜನತೆಯನ್ನು ಅವರಿಂದ ಪ್ರತ್ಯೇಕಿಸಲೆತ್ನಿಸುವ ಬ್ರಿಟಿಷರ ಕುಟಿಲತನವು ಒಂದಿಷ್ಟೂ ಜಯಶೀಲವಾಗಲಾರದು. ಜರ್ಮನಿ ಮತ್ತು ಇಂಗ್ಲೆಂಡುಗಳು ಎಂದೂ ಪರಸ್ಪರ ಯುದ್ಧ ಮಾಡಿಕೊಳ್ಳಲಾರವೆಂದು ಚೇಂಬರ್ಲೇನರು ಹಿಟ್ಲರರೊಡನೆ ಮಾಡಿಕೊಂಡ ಒಡಂಬಡಿಕೆಯನ್ನು ಮುರಿದು ಹಾಕಿರುವರು. ಜರ್ಮನ್ ಜನತೆಯ ಮೇಲೆ ಇಂತಹ ಧಾಳಿಯು ಇನ್ನು ಎಂದಿಗೂ ನಡೆಯಲು ಅಸಾಧ್ಯವೆಂದಾಗುವ ತನಕ ಎಷ್ಟು ಮಾತ್ರಕ್ಕೂ ಶಾಂತಿಗೆ ಜರ್ಮನರೊಪ್ಪುವ ಹಾಗಿಲ್ಲ. ನ್ಯಾಯವು ನಮ್ಮ ಕಡೆಗಿದೆ. ಈ ಯುದ್ಧವನ್ನು ನಿವಾರಿಸಲು ಕಡೆಯ ಸಕವೂ ನಾವು ಸಾಧ್ಯವಾದ ಪ್ರಯತ್ನವನ್ನೆಲ್ಲಾ ನಡೆಸಿರುತ್ತೇವೆ. ಅದೀಗ ನಮ್ಮ ಮೇಲೆ ಹೂಡಿಸಲ್ಪಟ್ಟಿದೆ. ನಾವು ನಮ್ಮ ಸಂಪೂರ್ಣ ಶಕ್ತಿ ಮತ್ತು ಉತ್ಸಾಹದಿಂದ ಹೋರಾಡುವೆವು. ಕಟ್ಟಕಡೆಯಲ್ಲಿ ಜರ್ಮನಿಗೆ ದೊಡ್ಡ ವಿಜಯವಾಗುವುದು. ನಮ್ಮ ರಾಷ್ಟ್ರದ ಶಕ್ತಿಯಿಂದ ಮತ್ತು ಮಹಾಪುರುಷರಾದ ನಮ್ಮ ಫ್ಯೂಹರರ ಮೇಲಿನ ನಮ್ಮ ವಿಶ್ವಾಸಬಲದಿಂದದು ನಿಶ್ಚಯವೆಂಬುದೇ ರಿಬೆಂಟ್ರಪರ ಭಾಷಣದ ಸಾರಾಂಶ. ಇದರಿಂದ ಲೋಕದ ರಾಷ್ಟ್ರಗಳ ಮೇಲೆ ಒಂದಿಷ್ಟೂ ಪರಿಣಾಮವಾಗಿರುವುದಿಲ್ಲ. ಯುದ್ಧಕ್ಕೆ ಕಾರಣ ಇಂಗ್ಲೆಂಡು, ಫ್ರಾನ್ಸಿಗದು ಬೇಕಾಗಿರಲಿಲ್ಲೆಂದು ಅಂಗ್ಲೋ

YOU MEANT TO TAKE OUT A POLICY. YOU HAD DISCUSSED ONE WHICH WOULD HAVE BROUGHT YOU SUFFICIENT INCOME. BUT WRITING WAS TOO MUCH TROUBLE FOR YOU. THEN AN ACCIDENT HAPPENED. NOW YOUR FAMILY IS LEFT PENNILESS. A SAD STORY. BUT ALAS HOW COMMON! YOU ARE IN DANGER AT EVERY MOMENT. SAFEGUARD TODAY. INSURE WITH TROPICAL.
WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE?

Quotations for all ages and amounts to suit all circumstances

TROPICAL INSURANCE COY. LTD. NEW DELHI.

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಿಗೆ ಬಯಸುವವರು ಬರೆಯಿರಿ

ಎಂ ಸುಂದರರಾವು ಶೆಟ್ಟಿ, ಬ್ರಾಂಚ್ ಮನೇಜರ್, ಹಂಪನಕಟ್ಟೆ— ಮಂಗಳೂರು.

ಅಥವಾ

ಕೆ ರಾಮಮೂರ್ತಿ, ಎಂ. ಎ, ಬ್ರಾಂಚ್ ಸೆಕ್ರೆಟರಿ, 160 ಮೌಂಟ್‌ರೋಡ್, ಮದ್ರಾಸು

ಫ್ರೆಂಚರನ್ನು ವಿಭಾಗಿಸುವ ಕುತಂತ್ರವು ಅಪಹಾಸ್ಯಕರವಿದೆ. ಎಂತಹ ತರ್ಕದಿಂದಾದರೂ ರಾತ್ರಿಯನ್ನು ಹಗಲಾಗಿ ತೋರಿಸಲು ಸಾಧ್ಯವಿಲ್ಲ ಹಾಗೆ ಮಾಡಲು ಯಾರಾದರೂ ಪ್ರಯತ್ನಿಸಿದ ಪಕ್ಷದಲ್ಲಿ ಅವನು ನಗೆಗೀಡಾಗುವನು. ಜರ್ಮನ್ ವಿದೇಶ ಮಂತ್ರಿಗಳ ಭಾಷಣವು ಇದೇ ರೀತಿಯಾಗಿದೆ. ಆದರಿಂದ ಜರ್ಮನಿಗೆ ಒಂದಿಷ್ಟಾದರೂ ಲೋಕದ ಸಹಾನುಭೂತಿ ದೊರೆಯುವ ಹಾಗಿಲ್ಲ. ಅದು ಮುಖ್ಯತಃ ಜರ್ಮನ್ ಜನತೆಗಾಗಿಯೇ ಮಾಡಲ್ಪಟ್ಟಿರುವ ಭಾಷಣ. ಇಂಗ್ಲೆಂಡಿನ ಮೇಲೆ ಉಗ್ರ ಸಮರ ಹೂಡಲು ಜರ್ಮನರನ್ನು ಹುರಿಗೊಳಿಸುವುದೇ ಅವರ ಉದ್ದೇಶ

ಕಾಂಗ್ರೆಸ್ ಮತ್ತು ಅಲ್ಪಸಂಖ್ಯಾಕರ ಪ್ರಶ್ನೆ.

ಹಿಂದಿನಿಂದಲೂ ಹಿಂದೂದೇಶದ ದೊಡ್ಡ ದುರ್ದೈವವೆಂದರೆ, ಪರಸ್ಪರ ಬಂಧುಪ್ರೇಮ ಮತ್ತು ವಿಶ್ವಾಸದಿಂದ ಭಿನ್ನಭೇದಗಳನ್ನು ಮೂಲೆಗೊತ್ತಿ ಅನ್ಯರಿಗೆ ಆಶ್ರಯವೀಯದೆ ಒಂದುಗೂಡಿ ಬಾಳಬೇಕಾಗಿರುವ ಭಾರತೀಯರು ಕೇವಲ ತಮ್ಮ ಸಂಕುಚಿತ ಸ್ವಾರ್ಥಸಾಧಕರಾಗಿ ಪರಕೀಯರ ಆಶ್ರಯ ಪಡೆದು ತಮ್ಮ ಬಂಧುಗಳಿಗೇನೇ ದ್ರೋಹ ಬಗೆಯುವುದಾಗಿದೆ. ಇಂದೀಗ ದೇಶದಲ್ಲುಂಟಾಗಿರುವ ಪರಿಸ್ಥಿತಿಯು ಇದೊಂದು ಮಹತ್ತಾದ ದುರಂತವಾಗಿ ರಾಷ್ಟ್ರಾಭಿಮಾನಿ ಹಿಂದೀಯರೆಲ್ಲರಲ್ಲಿ ಅತ್ಯಂತ ಸಂತಾಪವನ್ನುಂಟುಮಾಡದಿರಲಾರದು. ಹಿಂದೂದೇಶವು ಸ್ವತಂತ್ರವಾಗುವ ಸುಯೋಗದಲ್ಲಿ ಹಿಂದೀಯರಲ್ಲಿ ಒಕ್ಕಟ್ಟಿನ ಬದಲಿಗೆ ಇಕ್ಕಟ್ಟು ಬಲವಾಗಿ, ಬ್ರಿಟಿಷ್ ಸರಕಾರವು ಅದನ್ನು ಮಹತ್ವದ ಕಾರಣವಾಗಿ ಮಾಡಿಕೊಂಡು ಹಿಂದೀಯರು ಸ್ವತಂತ್ರಪಡೆಯಲು ಅನರ್ಹರೆಂದು ಉದ್ಘೋಷಿಸುವಂತಾಗಿರುವುದಕ್ಕಿಂತ ದೊಡ್ಡ ದುರ್ವಿಧಿಯಾವದರೂ ಇನ್ನೇನು? ಸ್ವಯಂ ವೇದ್ಯವಿರುವ ಬ್ರಿಟಿಷರ ಈ ಕುಟಿಲತನವಾದರೂ ಹಿಂದೀಯರಲ್ಲಿ ಒಕ್ಕಟ್ಟು ಮಾಡಲಾರದೆ? ಮಿ. ಜಿನ್ನಾ, ಮಿ. ಫಜಲ್ ಹಕ್ ಮೊದಲಾದವರ ವರ್ತನೆಯನ್ನು ನೋಡಿದರೆ ಕಾಂಗ್ರೆಸಿನ ಮೇಲೆ ಸೇಡು ತೀರಿಸುವುದಕ್ಕೇನೇ ಅವರು ಮುಂದಾಗಿರುವಂತಿದೆ.

ಸ್ವಾತಂತ್ರ್ಯವನ್ನು ನಿರಾಕರಿಸಲು ಬ್ರಿಟಿಷ್ ಸರಕಾರವು ಮುಂದೊಡ್ಡಿರುವ ಅಲ್ಪಸಂಖ್ಯಾಕ ಪ್ರಶ್ನೆಯ ಕುರಿತು ಕಾಂಗ್ರೆಸಿನ ಧೋರಣೆಯನ್ನು ಪಂಡಿತ ಜವಾಹರಲಾಲರು, ಅಕ್ಟೋಬರ ತಾ 25ರಲ್ಲಿ ಬೊಂಬಾಯಿಯಲ್ಲಿ ಪತ್ರಿಕಾಪ್ರತಿನಿಧಿಗಳ ಸಭೆಯಲ್ಲಿ ಸ್ಪಷ್ಟಪಡಿಸಿರುವರು. ಕಾಂಗ್ರೆಸು ಇಡೀ ದೇಶದ ಪ್ರತಿನಿಧಿ ಸಂಸ್ಥೆಯಲ್ಲೆಂಬುದು ನಿಜ ಅದರೆ ಅದು ಇಡೀ ಹಿಂದೂದೇಶದ ಪರವಾಗಿ ಮಾತಾಡುವ ಹಕ್ಕುಳ್ಳುದಾಗಿದೆ ಯಾಕೆಂದರೆ ದೇಶದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯೆಂದರೆ ಕಾಂಗ್ರೆಸೊಂದೇ. ಇದಕ್ಕಾರಾದರೂ ಆಕ್ಷೇಪಿಸುವರೆಂದು ನಾನೆಣಿಸುವುದಿಲ್ಲ. ಹಿಂದೂದೇಶದಲ್ಲಿ ಪ್ರಜಾಸತ್ತಾತ್ಮಕ ಸ್ವತಂತ್ರ ರಾಜ್ಯಭಾರವನ್ನು ಸ್ಥಾಪಿಸಬೇಕೆಂದೇ ಕಾಂಗ್ರೆಸಿನ ಕೇಳಿಕೆ. ಈ ಪ್ರಜಾಸತ್ತೆಯಲ್ಲಿ ಅಲ್ಪಸಂಖ್ಯಾಕರು ತಮ್ಮ ಹಕ್ಕು ಬಾಧ್ಯತೆಗಳನ್ನು ಬೇಕಾದ ರೀತಿಯಲ್ಲಿ ರಕ್ಷಿಸಿಕೊಳ್ಳಬಹುದು. ಆದರೆ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ಕಾರಣದಿಂದ ಪ್ರಜಾಸತ್ತೆಯನ್ನೇ ಮೂಲೆಗೊತ್ತುವುದರಲ್ಲಿ ಅರ್ಥವಿಲ್ಲ. ಹಿಂದೂದೇಶದಲ್ಲಿ ಪ್ರಜಾಸತ್ತೆಯು ಸ್ಥಾಪಿಸಲ್ಪಡದಿದ್ದಲ್ಲಿ ಫೆಸಿಸ್ಟ್ ಅಥವಾ ಬೋಲ್ಶೆವಿಸ್ಟ್ ಸ್ಥಾಪಿಸಲ್ಪಡಬೇಕು. ಇಲ್ಲವೆ ಅದು ಪರದಾಸ್ಯದಲ್ಲಿರಬೇಕು. ಫೆಸಿಸ್ಟ್ ಹಿಂದೀಯರಿಗಾರಿಗೂ ಬೇಕಾಗಿಲ್ಲ. ವಿದೇಶೀ ರಾಜ್ಯಭಾರವನ್ನು ಯಾರೂ ಆಶಿಸಲಾರರು. ಮತ್ತುಳಿದುದೊಂದು ಸೋವಿಯೆಟ್ ರಾಜ್ಯಭಾರ ಕ್ರಮ. ಅದು ಪ್ರಜಾಸತ್ತೆ ಆಗಲೂಬಹುದು ಆಗದಿರಲೂಬಹುದು. ಹಿಂದೂದೇಶಕ್ಕೆ ನಿಜವಾದ ಪ್ರಜಾಸತ್ತೆಯ ಹೊರತು ಬೇರೆ ಯಾವುದೂ ಸರಿಹೋಗಲಾರದು. ಅಲ್ಪಸಂಖ್ಯಾಕರಿಗೆ ನ್ಯಾಯವಾದ ರಕ್ಷಣೆಕೊಟ್ಟಲ್ಲಿ ಪ್ರಜಾಸತ್ತೆಯಿಂದ ಎಲ್ಲರಿಗೂ ನ್ಯಾಯ ದೊರೆಯುವಂತಾಗುವುದು. ಬಹುಸಂಖ್ಯಾಕರು ಬಹುಸಂಖ್ಯಾಕರಾಗಿಯೇ ಉಳಿಯುವರು. ಫೆಸಿಸ್ಟ್ ಅಥವಾ ಸೈನಿಕ ಆಳ್ವಿಕೆಯಿಂದ ಅದು ಸಾಧ್ಯ. ಮುಸಲ್ಮಾನರನ್ನು ಅಲ್ಪಸಂಖ್ಯಾಕರ ಸ್ಥಾನಕ್ಕೆ ಸೇರಿಸುವುದು ಸರಿಯಲ್ಲ. 70ಮಿಲ್ಯ ಜನಸಂಖ್ಯೆಯುಳ್ಳ ಸಶಕ್ತ ಧಾರ್ಮಿಕ ಪಂಗಡವನ್ನು ಅಲ್ಪಸಂಖ್ಯಾಕವಾಗಿ ಪರಿಗಣಿಸಲು ಸಾಧ್ಯವಿಲ್ಲ. ಹಿಂದೂದೇಶದಲ್ಲಿ ಎಲ್ಲಾ ಪ್ರಾಂತಗಳಲ್ಲಿಯೂ ಮುಸಲ್ಮಾನರು ಮತ್ತು ಹಿಂದುಗಳು ಹೆಚ್ಚುಕಡಿಮೆ ಚೆದರಿರುವುದರಿಂದ ಮುಸಲ್ಮಾನರು ಹಿಂದುಗಳನ್ನಾಗಲಿ, ಹಿಂದುಗಳು ಮುಸಲ್ಮಾನರನ್ನಾಗಲಿ ಪೀಡಿಸುವುದೆಂಬುದು ಸಾಧ್ಯವೇ ಇಲ್ಲ. ಕಾಂಗ್ರೆಸ್ ಸರಕಾರಗಳು ಮುಸಲ್ಮಾನರ ಹಕ್ಕುಬಾಧ್ಯತೆಗಳನ್ನು ತುಳಿದು ಅವರ ಹಿತವಿಘಾತುಕವಾಗಿ ನಡೆದಿರುವವೆಂಬ ಆರೋಪಗಳು ಕಳೆದ ಒಂದೆರಡು ವರ್ಷಗಳಿಂದ ಮಾಡಲ್ಪಡುವುದು ಅತ್ಯಂತ ವಿಷಾದಕರವಿದೆ. ಕಾಂಗ್ರೆಸು ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ಕುರಿತು ಬಹಳ ಜಾಗರೂಕತೆಯಿಂದ ನಡೆದಿದೆ. ಜಾತೀಯ ಅಥವಾ ಅಲ್ಪಸಂಖ್ಯಾಕ ಪ್ರಶ್ನೆಯನ್ನು ಯಾವ ರೀತಿಯಿಂದಾದರೂ ತೀರ್ಮಾನಿಸಲು ಕಾಂಗ್ರೆಸು ಸಿದ್ಧವೇ ಇದೆ ಆದರೆ ಹಿಂದೂದೇಶದ ಐಕ್ಯ, ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ ಆದರ್ಶಗಳಿಗೆ ವಿಘಾತುಕವಾಗಿ ಅದು ಏನುಮಾಡುವುದಕ್ಕೂ ಸಿದ್ಧವಿಲ್ಲ. ಕಾಂಗ್ರೆಸಿನ ಹೋರಾಟವು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರೋಧವಾಗಿ. ನಮ್ಮ ಬಂಧುಗಳೊಡನೆ ಅಥವಾ ಅವರ ಸಂಸ್ಥೆಗಳೊಡನೆ ಕಾಂಗ್ರೆಸು ಹೋರಾಡಲು ಸಿದ್ಧವಿಲ್ಲ.

ಈ ಸಂದರ್ಭದಲ್ಲಿ ಹಿಂದೀ ಸಂಸ್ಥೆಗಳಾಗಲಿ, ಹಿಂದೀಯರಾಗಲಿ, ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಸೇರಿದರೆ ಅದು ಹಿಂದೂದೇಶದ ಅತಿದೊಡ್ಡ ದುರ್ದೈವ. ಆದರೆ ಆ ದುರ್ದೈವದಿಂದ ಹಿಂದೂದೇಶವು ಪಾರಾಗುವುದೆಂಬ ದೃಢನಿಶ್ಚಯವು ತನಗಿದೆಯೆಂದೇ ಪಂಡಿತರ ಅಭಿಪ್ರಾಯ. ಮುಸ್ಲಿಮ್ ಲೀಗ್ ಹಿಂದೂಮಹಾಸಭೆಯೇ ಮೊದಲಾದ ಜಾತೀಯ ಸಂಸ್ಥೆಗಳು ಆಯಾಸಮಾಜಗಳ ನಿಜವಾದ ಪ್ರತಿನಿಧಿಸಂಸ್ಥೆಗಳೆಂದಾದರೆ, ಅಲ್ಪಸಂಖ್ಯಾಕ ಸ್ಥಾನದಲ್ಲುಳಿಯುವುದೆಂದರೆ ಕಾಂಗ್ರೆಸು. ಹಿಂದೂದೇಶವನ್ನು ಹಿಂದೂ ಇಂಡಿಯಾ ಮುಸಲ್ಮಾನ ಇಂಡಿಯಾ, ಕ್ರೈಸ್ತ ಇಂಡಿಯಾ ಎಂದೆಲ್ಲಾ ವಿಭಾಗಿಸಲು ಸಾಧ್ಯವೇ ಇಲ್ಲ. ಮೊಗಲರ ರಾಜ್ಯಭಾರದ ಕಾಲದಲ್ಲಿಯೂ ಹಿಂದೂದೇಶವು ಒಂದೇ ರಾಷ್ಟ್ರವಾಗಿದ್ದಿತು. ಪಂಜಾಬಿನ ಮುಸಲ್ಮಾನರು ಅಲ್ಲಿಯ ಸಿಖ್ಖರು ಮತ್ತು ಹಿಂದುಗಳಿಗಿಂತ ಭಿನ್ನರಾಗಿರುವುದಿಲ್ಲ. ತಾನು ಜೀವಿಸಿ ಪರರನ್ನು ಜೀವಿಸಬಿಡುವ ಅಥವಾ ಪರಸ್ಪರ ಸಹಿಷ್ಣುತೆ ಮತ್ತು ತಾಳ್ಮೆಯೇ ಜೀವನ ತತ್ವವಾಗಬೇಕು. ಒಂದು ದೇಶದ ಉಪ್ಪನ್ನು ತಿಂದು ಒಂದೇ ದೇಶದ ನೀರು ಹವೆಯಲ್ಲಿ ಬೆಳೆದವರೆಲ್ಲಾ ಒಂದು ರಾಷ್ಟ್ರವಾಗಿ ಬೆಳೆಯಬೇಕೆಂದು ಮಹಾತ್ಮಾ ಗಾಂಧಿಯವರು, ಮುಸಲ್ಮಾನರು ಬೇರೆ, ಹಿಂದುಗಳು ಬೇರೆಯೆಂದು ಸೂಚಿಸಿರುವ ಮುಸಲ್ಮಾನ ಲೇಖಕರೊಬ್ಬರಿಗೆ ಮನನೀಯ ಉತ್ತರವಿತ್ತಿರುವರು.

'SERWELL'
RUBBER STAMPS

OFTEN APPEAL,
Since they surely serve well
YOU CAN HAVE ONE

On placing your order with our Representatives in your area

IF UNREPRESENTED
WRITE FOR AGENCY
TERMS

Manufacturers —
on the approved list of the Govt of Mysore

YADIKE BROS.
MANUFACTURERS
REPRESENTATIVES
IMPORTERS & ENGINEERS,
BANGALORE CITY

THE
BOMBAY LIFE ASSURANCE Company Limited.
[ESTD 1908]

COMPARE
Your Life Assurance with any other property you possess what is its guaranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	**Rs**	**1,44,91,000**
Life Assurance Fund	**Rs**	**1,17,69,748**
Total Assets	**Rs**	**1,31,28,998**

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI

Post Box No. 337, Mount Road, MADRAS	Visweswarapuram Circle, BANGALORE CITY	Charni Road Gugaum, BOMBAY No 4.
Car Street MANGALORE	Puthiyara CALICUT.	Central Station Road, TRIVANDRUM

WANTED one Inspector, two Organisers and Agents in South Kanara. Apply stating previous experience to –
The Bombay Co-operative Insurance Society Ltd ,
Office for Mysore, Coorg & South Kanara
Subvarnt Building Narashima Raja Road Bangalore City

Wanted District working partners for the Districts of Belgaum, Bijapur, Dharwar, North and South Kanara Only those who can guarantee Rs 20,000/— befors 30th December 1939 need apply, Padubidri Bros, Bombay 8"

ತುಳುನಾಡ್ ವೈದ್ಯಶಾಲೆ
ಉಧಿಯಾವರ, ದ.ಕ.
ಕೊಲೆರಾ ಫಿಲ್ಸ್ ಕೊಲೆರಾ ರೋಗಕ್ಕೆ ರಾಮಬಾಣ ಔಷಧ
೧೦೦ ಮಾತ್ರೆಗಳಿಗೆ ರೂ ೧—೮—೦.
ಭೈರವ ಮಾತ್ರೆಗಳು— ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೨—೮—೦
ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ
ಯು. ಪಿ ಮೇಸ್ತ್ರ, ಗೋಲ್ಡ್ ಮೆಡಲ್ಡ್ ಫಿಸಿಶಿಯನ್

Degrees Books Medicines.
Free H L M S, H M B H M.D etc Free Homeo Ayur-Unani Naturo degrees by post also—Practioners also get soon Homeo Materia-medica, Rs 5 Homeo Practice book Rs 4, Insanity Cure Fill Rs. 10 Enclose 2 annas stamp —
Principal Indian Homeopathic Institute and Society (Govt Regd)
P O MAHUVA, (Kathiawar Dt, India

ನಿಮ್ಮ ಜಾಹಿರಾತನ್ನು ನವಯುಗದಲ್ಲೇ ಕೊಡಿರಿ!

ಹಿಂದೀ ಸ್ವಾತಂತ್ರ್ಯದ ಕುರಿತು ಲೋಕದ ಆಸಕ್ತಿ

ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರಕ್ಕೆ ಹಿಂದೀಯರು ನಿಶ್ಶರ್ತವಾದ ಸಹಕಾರ ನೀಯಬೇಕು. ಪೋಲರು ಜರ್ಮನಿಯ ಅನ್ಯಾಯವಾದ ಆಕ್ರಮಣದ ವಿರೋಧವಾಗಿ ಹೂಡಿರುವ ಹೋರಾಟವನ್ನು ಅಹಿಂಸಾತ್ಮಕ ಸಮರವೆಂದೇ ಹೇಳಬಹುದು. ಲಂಡನ್ ಪಟ್ಟಣ, ಪಾರ್ಲಿಮೆಂಟ್ ಸದನ, ಬಕ್ಕಿಂಗಾಮ್ ಅರಮನೆ ಮೊದಲಾದುವುಗಳ ಮೇಲೆ ವಿಮಾನಘಾತಿ ನಡೆಸಲ್ಪಡುವ ಕಲ್ಪನೆಯು ತನ್ನನ್ನು ದುಃಖಪರವಶನಾಗಿ ಮಾಡಿಬಿಟ್ಟಿತೆಂದು ಶ್ರೀ ಮಹಾತ್ಮ ಗಾಂಧಿಯವರು ಪ್ರಥಮವಾಗಿ ವೈಸರಾಯರನ್ನು ಕಂಡು ಹೊರಡಿಸಿದ ಹೇಳಿಕೆಯಿಂದ ಬ್ರಿಟಿಷ್ ಸರಕಾರವು ಬಹಳ ಸಂತೋಷಗೊಂಡಿತು. ಕೂಡಲೆ ಗಾಂಧಿಜಿಯವರ ಅಭಿಪ್ರಾಯವು ರೇಡಿಯೋ ಮೂಲಕ ಲೋಕದಲ್ಲೆಲ್ಲಾ ಧ್ವನಿಪ್ರತಿಧ್ವನಿತವಾಯಿತು. ಅಷ್ಟರ ವರೆಗೆ ಮಿಸ್ಟರ್ ಗಾಂಧಿಯಾಗಿದ್ದವರು ಸರಕಾರದ ದೃಷ್ಟಿಯಲ್ಲಿಯೂ ಮಹಾತ್ಮ ಗಾಂಧಿಯವರಾಗಿ ಬಿಟ್ಟರು. ಬ್ರಿಟಿಷ್ ಪತ್ರಿಕೆಗಳೂ, ಅಧಿಕಾರಿಗಳೂ ಮಹಾತ್ಮರನ್ನು ಕೊಂಡಾಡತೊಡಗಿದರು. ಮೊದಲಿನ ಸಲದಂತೆಯೇ ಈ ಸಲವೂ ಗಾಂಧಿಯವರನ್ನು ತಾವು ಸುಲಭವಾಗಿ ಬಗಲೊಳಗೆ ಹಾಕಿದೆವೆಂದು ಬ್ರಿಟಿಷ್ ಸರಕಾರವು ಅತಿ ಸಂತೋಷಗೊಂಡಿತು. ಬ್ರಿಟಿಷ್ ಸರಕಾರದೊಡನೆ ಸಹಕರಿಸಿಕೊಂಡು ಶಾಂತರೀತಿಯಿಂದಲೇ ಹಿಂದೂದೇಶದ ಸ್ವಾತಂತ್ರ್ಯ ಸಾಧಿಸಬೇಕೆಂದು ಹಾತೊರೆಯುತ್ತಿದ್ದ ಸತ್ಯಮೂರ್ತಿಗಳಂತಹ ಕಾಂಗ್ರೆಸ್ ಮುಖಂಡರುಗಳೂ ಆನಂದ ತುಂದಿಲಾಂತರಂಗರಾದರು. ಹಿಂದೂದೇಶದ ಸಂರಕ್ಷಿತತೆಗೂ ಗಂಡಾಂತರ ಬಂದಿದೆ. ರಷ್ಯದ ಧಾಳಿಯ ಅಪಾಯವಿದೆ. ವಿಮಾನಧಾಳಿಯ ಹಾವಳಿಯ ಭೀತಿಯಿದೆ. ಜರ್ಮನಿಗಿಂತ ಬ್ರಿಟಿಷ್ ಸರಕಾರವು ಸಹಸ್ರಪಾಲು ಮೇಲೆಂದೆಲ್ಲಾ ಶ್ರೀ ಮೂರ್ತಿಗಳಂಥವರು ಮನಬಂದಂತೆ ಭಾಷಣಮಾಡತೊಡಗಿದರು. ಯುದ್ಧದ ಗಂಡಾಂತರದ ಸಂದರ್ಭದಲ್ಲಿ ಬ್ರಿಟಿಷರೊಡನೆ ಹಿಂದೀ ರಾಜಕೀಯ ಸ್ವಾತಂತ್ರ್ಯದ ಪ್ರಶ್ನೆಯೆತ್ತುವುದು ಅನುಚಿತವೆಂದು ಅಧಿಕಾರದ ರುಚಿ ಹಿಡಿದಿರುವ ಶ್ರೀ ರಮಾನಾಥನರಂತಹ ಕಾಂಗ್ರೆಸ್ ಮಂತ್ರಿಗಳೂ ಪಾರ್ಲಿಮೆಂಟರಿ ಸೆಕ್ರೆಟರಿಗಳೇ ಮೊದಲಾದವರೂ ಉದ್ಘೋಷಿಸತೊಡಗಿದರು. ಈ ಗಂಡಾಂತರದ ಸಂದರ್ಭದಲ್ಲಿ ಬ್ರಿಟಿಷ್ ಸರಕಾರದೊಡನೆ ಹಿಂದೂದೇಶದ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದೊಡ್ಡುವುದು ಸರಿಯಲ್ಲೆಂದು ಚೀನಾ ಪ್ರವಾಸದಿಂದ ಸ್ವದೇಶಕ್ಕೆ ಧಾವಿಸಿ ಬರುತ್ತಿದ್ದ ಪಂಡಿತ ಜವಾಹರಲಾಲರೂ ಅಭಿಪ್ರಾಯಪಟ್ಟ ಮೇಲಂತೂ ವಾರ್ಧದಲ್ಲಿ ಅತಿ ದೀರ್ಘಾಲೋಚನೆಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಬ್ರಿಟಿಷ್ ಸರಕಾರದೊಡನೆ ಸಹಕರಿಸುವ ನಿರ್ಧಾರವನ್ನೇ ಮಾಡುವರೆಂಬ ಸಂದೇಹವು ಬಲವಾಗಿದ್ದಿತು. ಶ್ರೀ ಬೋಸ, ಶ್ರೀ ಎಮ್. ಎನ್. ರೈಗಳೇ ಮೊದಲಾದವರು ಕಾಂಗ್ರೆಸನ್ನು ಕಠಿಣವಾಗಿ ಟೀಕಿಸುತ್ತಿದ್ದರು.

ಲೋಕದ ಪತ್ರಿಕೆಗಳಲ್ಲೆಲ್ಲಾ ಮಹಾತ್ಮರ
— ಸಂದೇಶ ಪ್ರಕಟಣೆ —
ಜರ್ಮನಿಯ ಪ್ರಚಾರದ ಪರಿಣಾಮ
ಬ್ರಿಟಿಷ್ ಸರಕಾರದ ಉಭಯಸಂಕಟ

ಆದರೆ ಪಂಡಿತ ಜವಾಹರಲಾಲರು ಚೀನದಿಂದ ವಾರ್ಧಕ್ಕೆ ಬರುವವರೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಯಾವ ನಿರ್ಧಾರವನ್ನೂ ಮಾಡದೆ ಅವರನ್ನೇ ಕಾದುಕೊಂಡಿದ್ದರು. ಪಂಡಿತರು ಸೆಪ್ಟಂಬರ 10ಕ್ಕೆ ನೆಟ್ಟಗೆ ವಾರ್ಧಕ್ಕೆ ಹೋಗಿ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಅಗ್ರಭಾಗವಹಿಸಿದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮತ್ತೂ ದೀರ್ಘವಾಗಿ ಆಲೋಚಿಸಿ, ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯಕ್ಕಾಗಿ ಯುದ್ಧ ಹೂಡಿರುವ ಬ್ರಿಟಿಷರ ನಿಜವಾದ ಉದ್ದೇಶವನ್ನು ಒರೆಗೆ ಹಚ್ಚಿ ಪರೀಕ್ಷಿಸುವ ಮಹತ್ತಾದ ಪ್ರಕಟಣೆಯೊಂದನ್ನು ಹೊರಡಿಸಿದರು. ಪಂಡಿತ ಜವಾಹರಲಾಲರ ಅಮೂಲ್ಯ ಅಂತರ ರಾಷ್ಟ್ರೀಯ ಅನುಭವ ಮತ್ತು ದೃಷ್ಟಿಯು ಈ ಸಂದರ್ಭದಲ್ಲಿ ಬಹಳ ಪ್ರಯೋಜನಕ್ಕೆ ಬಿತ್ತು. ಅವರು ತಯಾರಿಸಿರುವ ಪ್ರಕಟಣೆಯು ಇಡೀ ಲೋಕಕ್ಕೇನೇ ಬೋಧಪ್ರದವಾದ ಉದಾತ್ತ ತತ್ವಪ್ರೇರಿತವಾಗಿರುವುದು. ಗಾಂಧಿಜಿಯವರೂ ಅದಕ್ಕೆ ಮೆಚ್ಚಿಹೋಗಿ ಪಂಡಿತ ಜವಾಹರಲಾಲರಿಗೇನೇ ಯುದ್ಧ ಸಂದರ್ಭದಲ್ಲಿ ಕಾಂಗ್ರೆಸನ್ನು ನಡಿಸುವ ನಾಯಕತನದ ಪಟ್ಟ ಕಟ್ಟಿಬಿಟ್ಟರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಈ ಪ್ರಕಟಣೆಯು ಬ್ರಿಟಿಷ್ ಸರಕಾರವನ್ನು ದಂಗುಗೊಳಿಸಿತು. ಅದು ಇಂಗ್ಲೆಂಡಿನಲ್ಲಿ ಪ್ರಕಟವಾಗಲೇ ಇಲ್ಲ. ಟೈಮ್ಸ್ ಮೊದಲಾದ ಪತ್ರಿಕೆಗಳು ಅದರ ಸುದ್ದಿಯನ್ನೆತ್ತಲೇ ಇಲ್ಲ. ವರ್ಕಿಂಗ್ ಕಮಿಟಿಯ ಪ್ರಕಟಣೆಯನ್ನು ಸಂಪೂರ್ಣವಾಗಿ ಸಮರ್ಥಿಸಿದ ಮಹಾತ್ಮ ಗಾಂಧಿಯವರು, ಸರಕಾರದ ದೃಷ್ಟಿಯಲ್ಲಿ ಕೂಡಲೆ ಮಿಸ್ಟರ್ ಗಾಂಧಿಯಾಗಿಬಿಟ್ಟರು. ಡೆಲ್ಲಿ ರೇಡಿಯೋ ಸ್ಟೇಶನಿನಿಂದ ಯಥಾ ಪ್ರಕಾರ ಮಿಸ್ಟರ್ ಗಾಂಧಿಯೆಂದು ಮಹಾತ್ಮರನ್ನು ಸಂಬೋಧಿಸಲಾಯಿತು. ಇಂಡಿಯಾ ಲೀಗಿನವರು ಮಾತ್ರ ವರ್ಕಿಂಗ್ ಕಮಿಟಿಯ ಪ್ರಕಟಣೆಯನ್ನು ಇಂಗ್ಲೆಂಡಿನಲ್ಲಿ ಸಾಧ್ಯವಾದಷ್ಟು ಮಾಡಿದರು.

ಕಾಂಗ್ರೆಸಿನ ಘೋಷಣೆಯಿಂದ ಜರ್ಮನಿಯು ಬಹಳ ಸಂತೋಷಗೊಂಡು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಘೋಷಣೆಯನ್ನು ರೇಡಿಯೋ ಮತ್ತು ಪತ್ರಿಕೆಗಳ ಮೂಲಕ ಇಡೀ ಲೋಕದಲ್ಲೆಲ್ಲಾ ಪ್ರಚಾರಮಾಡಿಬಿಟ್ಟಿತು. ಕಾಂಗ್ರೆಸು, ಬ್ರಿಟಿಷ್ ಇಂಪೀರಿಯಲಿಸ್ಮಿಗಿಂತಲೂ ಹೆಚ್ಚಾಗಿ ನಾಝಿಸ್ಮನ್ನು ವಿರೋಧಿಸುತ್ತಿದೆಂಬುದನ್ನು ನಾಝಿ ಜರ್ಮನಿಯು ಮರೆತು, ಹಿಂದೂದೇಶವು ಬ್ರಿಟಿಷರಿಗೆ ಬದ್ಧ ವಿರೋಧವಿದೆಯೆಂದು ಲೋಕದಲ್ಲೆಲ್ಲಾ ಉದ್ಘೋಷಿಸಿಬಿಟ್ಟಿತು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಪ್ರಕಟಣೆಗೆ ಬಹಳ ಪ್ರಾಮುಖ್ಯತೆ ಬಂತು. ಬ್ರಿಟಿಷ್ ಪತ್ರಿಕೆಗಳು ಕಾಂಗ್ರೆಸನ್ನು ದೂರಹತ್ತಿದವು. ಘೋಸ್ ತಂಡದ ವರ್ಚಸ್ಸಿನಿಂದಾಗಿ ಹೀಗಾಯಿತು. ಮಹಾತ್ಮಗಾಂಧಿ ಮತ್ತು ಪಂಡಿತ ಜವಾಹರಲಾಲರೊಳಗೆ ಭಿನ್ನಾಭಿಪ್ರಾಯವುಂಟಾಗಿದೆಯೆಂದೆಲ್ಲಾ ಕತೆಗಳನ್ನು ಕಲ್ಪಿಸಿ ಟೈಮ್ಸ್‌ನಂತಹ ಪತ್ರಿಕೆಗಳು ಪ್ರಕಟಿಸಹತ್ತಿದವು. ವೈಸರಾಯರು ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಮುಖಂಡರನ್ನು ಮಾತ್ರವಲ್ಲದೆ, ಕಾಂಗ್ರೆಸು ತನ್ನ ಪ್ರತಿನಿಧಿ ಸಂಸ್ಥೆಯಲ್ಲೆಂದು ದೂರ ತಂತಿ ಬಿಟ್ಟು ಭೇಟಿ ಕೇಳಿದ ಸಿಕ್ಕ ಸಿಕ್ಕವರನ್ನೆಲ್ಲಾ ಮಾತಾಡಿಕರೆದು, ಭೇದದ ಬೀಜವನ್ನು ಬಿತ್ತಿದಂದಿನಿಂದಂತೂ ಕಾಂಗ್ರೆಸಿನ ಕುರಿತು ಅಪಪ್ರಚಾರ ನಡೆಸಲು ಬಹಳವಾಗಿ ಹಸಿದಿದ್ದ ಬಾಯಿಗೆ ಬೇಕಷ್ಟು ಆಹಾರ ದೊರೆಯಿತು.

ಜರ್ಮನಿಯ ಪ್ರಚಂಡ ಪ್ರಚಾರದಿಂದಾಗಿ ಹಿಂದೂದೇಶದ ನಿಜವಾದ ಪರಿಸ್ಥಿತಿಯೇನಿರುವುದೆಂದು ತಿಳಿಯುವ ಆಸಕ್ತಿಯು ಇಡೀ ಲೋಕದ ಬೇರೆ ಬೇರೆ ರಾಷ್ಟ್ರಗಳಲ್ಲುಂಟಾಗಿದೆ. ಹಿಂದೀ ಸ್ವಾತಂತ್ರ್ಯ ಪ್ರಶ್ನೆಯು ಇಷ್ಟೊಂದು ಲೋಕದ ದೃಷ್ಟಿಯ ಮುಂದೆ ಬಂದುದು ಇದೇ ಪ್ರಥಮವೆನ್ನಬಹುದು. ಇಂದೀಗ ಇಂಗ್ಲೆಂಡು ಜಾಗತಿಕ ಲೋಕಮತದ ಮುಂದೆ ಪರೀಕ್ಷಿಸಲ್ಪಡುತ್ತಿದೆ. ಅಮೇರಿಕ ಮೊದಲಾದ ದೇಶಗಳಲ್ಲಿ ಹಿಂದೂದೇಶದ ಕುರಿತು ತುಂಬಾ ಸಹಾನುಭೂತಿಯುಂಟಾಗಿದೆ. ವೈಸರಾಯರ ನಿರೂಪಣೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರ, ಮತ್ತು ಪಾರ್ಲಿಮೆಂಟಿನ ಚರ್ಚೆಯು ಹಿಂದೀ ಪ್ರಶ್ನೆಯನ್ನು ಮತ್ತಷ್ಟು ಲೋಕದ ಮುಂದೆ ತಂದಿರುತ್ತವೆ. ಅಮೇರಿಕದ ನ್ಯೂಯೋರ್ಕ್ ಟೈಮ್ಸ್, ಲಂಡನಿನ ಡೈಲಿ ಹೆರಾಲ್ಡ್, ಫ್ರಾನ್ಸಿನ ಪೇರಿಸ್ ಸ್ವಾರ್, ಇಟಲಿಯ ಪೊಪೊಲೊ ಡಿ' ಇಟಾಲಿಯ ಜೆಟ್ಲೆಂಡಿನ ನೆಶನಲ್ ಟೈಡೆಂಡ್, ಡೆನ್ಮಾರ್ಕಿನ ಆಫ್ಟನ್ ಪೋಸ್ಟನ್ ಮತ್ತು ಟೆಲಿಗ್ರಾಫ್, ರಷ್ಯದ ಟಾಸ್ ನ್ಯೂಸ್ ಏಜೆನ್ಸಿ, ಸ್ಪೈನಿನ ಅಬಿಜ, ಸ್ವೀಡನಿನ ಡಗೆನ್ಸ್ ನಿದರ್, ಸ್ವಿಸರ್ಲೆಂಡಿನ ಸ್ವಿಸ್ ನ್ಯೂಸ್ ಏಜೆನ್ಸಿ, ಜಪಾನಿನ ಯೊಮುರ್ಯ ಶಿಂಬನ್, ಫಿನ್ಲೆಂಡಿನ ಯೂಸಿ ಸೋಮಿ, ಬೆಲ್ಜಿಯಮಿನ ನೇಶನ್ ಬೆಲ್ಜ್, ದಕ್ಷಿಣ ಅಮೇರಿಕದ ಲಾನೈಕೊನ್ ಮೊದಲಾದ ಲೋಕದ ಎಲ್ಲಾ ಭಾಗದ ಪತ್ರಿಕೆ ಮತ್ತು ನ್ಯೂಸ್ ಏಜೆನ್ಸಿಗಳು ಮಹಾತ್ಮಾ ಗಾಂಧಿಯವರಿಂದ ಸಂದೇಶವನ್ನು ಕೇಳಿ ಪ್ರಕಟಿಸಿರುತ್ತವೆ.

"ಯುದ್ಧದ ಸಮಯದಲ್ಲಿ ಕಾಂಗ್ರೆಸಿನವರೇನೂ ರಾಜ್ಯಾಂಗರಚನಾ ಬದಲಾವಣೆಯನ್ನು ಕೇಳಿರುವುದಿಲ್ಲ. ಯುದ್ಧ ಮುಗಿದ ಮೇಲೆ ನಡೆವ ಚುನಾವಣೆಯಲ್ಲಿ ಆರಿಸಲ್ಪಡುವ ಹಿಂದೀಪ್ರತಿನಿಧಿಗಳು ತಯಾರಿಸುವ ಶಾಸನಕ್ಕನುಗುಣವಾದ ಹಿಂದೀ ಸ್ವಾತಂತ್ರ್ಯದಾನವು ಬ್ರಿಟಿಷರ ಯುದ್ಧದ ಉದ್ದೇಶದಲ್ಲಡಕವಾಗಿರುವುದೆಂಬುದನ್ನು ಸ್ಪಷ್ಟಪಡಿಸಬೇಕೆಂದೇ ಕಾಂಗ್ರೆಸಿನ ಕೇಳಿಕೆ. ಯುದ್ಧದ ಸಮಯದಲ್ಲಿ ಅದನ್ನು ಸಾಧ್ಯವಾದ ಮಟ್ಟಿಗೆ ಆಚರಣೆಯಲ್ಲಿ ತರಬೇಕು. ಅಲ್ಪಸಂಖ್ಯಾಕ ಪ್ರಶ್ನೆಯೆಂಬುದು ಅದೊಂದು ಸುಳ್ಳು ಕೂಗು. ಆ ಪ್ರಶ್ನೆಯು ಹಿಂದೂಸ್ಥಾನದಲ್ಲಿ ಇಲ್ಲವೆಂದಲ್ಲ. ಆದರೆ, ಜನತೆಯಿಂದ ಚುನಾಯಿತ ಪ್ರತಿನಿಧಿಗಳು ಒಟ್ಟುಸೇರಿ ಮಾತ್ರ ಅದನ್ನು ಸರಿಯಾಗಿ ತೀರ್ಮಾನಿಸಲು ಸಾಧ್ಯವಿದೆ. ಹಿಂದೂಮುಸಲ್ಮಾನ ಪ್ರಶ್ನೆಯು ಬ್ರಿಟಿಷ್ ಆಳ್ವಿಕೆಯ ಪರಿಣಾಮವೆಂದು ಹಿಂದೀಯರ ಅಭಿಮತ. ಈ ಸಂದರ್ಭದಲ್ಲಿ ಕಾಂಗ್ರೆಸಿನವರು ಮಾಡುವ ಅತಿ ಕಡಿಮೆಯ ಕೆಲಸವೆಂದರೆ ಪ್ರಾಂತಿಕ ಆಡಳಿತಗಳಿಂದ ಕಾಂಗ್ರೆಸ್ ಮಂತ್ರಿಗಳನ್ನು ಹಿಂದೆ ಕರೆಯುವುದು. ಪ್ರಕೃತ ಪರಿಸ್ಥಿತಿಯನ್ನು ಬ್ರಿಟಿಷರು ಬಗೆಹರಿಸುವ ರೀತಿಯ ಮೇಲೆ ಕಾಂಗ್ರೆಸು ಇನ್ನು ಮುಂದೆ ಕೈಕೊಳ್ಳತಕ್ಕ ಕೆಲಸವು ಅವಲಂಬಿಸಿಕೊಂಡಿದೆ. ಕಾಂಗ್ರೆಸು ಬಾಗಿಲನ್ನು ತೆರೆದಿಟ್ಟಿದೆ. ತಮ್ಮ ತಪ್ಪನ್ನು ಸರಿಪಡಿಸುವ ಭಾರವು ಬ್ರಿಟಿಷರ ಮೇಲಿದೆ" ಎಂಬುದೇ ಗಾಂಧಿಜಿಯವರು ಮೇಲಿನ ಪತ್ರಿಕೆಗಳಿಗಿತ್ತಿರುವ ಸಂದೇಶ.

WHAT MAKES A MAN RICH?

Luck? - - Very rarely.
Inheritance? - Not often.
Speculation? Once in a blue moon
Gambling? - - Never.
Hard Work? - Very Often.
Hard work and Thrift - Always.

RESOURCES OF A CRORE

ESTD 1906
CANARA BANK LIMITED

ಇಡೀ ಲೋಕದಲ್ಲಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯು ನೆಲೆಗೊಂಡು ಹಿಟ್ಲರ್ ಶಾಹಿಯಂತಹ ನಿರಂಕುಶತೆಯು ನಾಶವಾಗಬೇಕು. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ನಡಿಸಲ್ಪಡುವ ಧಾಳಿ ಮತ್ತು ಆಕ್ರಮಣವು ತಡೆಗಟ್ಟಲ್ಪಡಬೇಕು. ಶಾಂತಪರ ಮಧ್ಯಸ್ಥಿಕೆಯಿಂದ ರಾಷ್ಟ್ರ ರಾಷ್ಟ್ರಗಳೊಳಗಣ ಕಲಹಗಳು ಇತ್ಯರ್ಥವಾಗಬೇಕು. ಲೋಕದಲ್ಲಿ ಶಾಂತಿ ಮತ್ತು ಸುಭಿಕ್ಷೆಯು ಸದಾ ನೆಲೆಗೊಳ್ಳುವ ನವ ವ್ಯವಸ್ಥೆಯಾಗಬೇಕು ಇದಕ್ಕಾಗಿಯೇ ತಾವು ಯುದ್ಧ ಹೂಡಿರುವುದೆಂದು ಉದ್ಘೋಷಿಸುತ್ತಾ ಬಂದಿರುವ ಬ್ರಿಟಿಷ್ ಸರಕಾರವು ತನ್ನಾಧೀನದ ಹಿಂದೂದೇಶವು ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯನ್ನು ಕೇಳುವಾಗ ನಿರಾಕರಿಸುವುದಾದರೂ ಹೇಗೆ? ಮಹಾತ್ಮಾ ಗಾಂಧಿ ಮತ್ತು ಪಂಡಿತ ಜವಾಹರಲಾಲರಂಥ ಮಹಾ ವ್ಯಕ್ತಿಗಳಿಂದಾಗಿ ಹಿಂದೀ ಸ್ವಾತಂತ್ರ್ಯದ ಪ್ರಶ್ನೆಯು ಈಗ ಇಡೀ ಲೋಕದ ಮುಂದೆ ಪ್ರಾಮುಖ್ಯವಾಗಿ ತರಲ್ಪಟ್ಟು, ಬ್ರಿಟಿಷರ ಯುದ್ಧದ ಉದಾತ್ತ ಉದ್ದೇಶದ ಹುರುಳು ಪರೀಕ್ಷಿಸಲ್ಪಡುವಂತಾಗುವಾಗ ಅವರು ಮಾಡುವುದಾದರೂ ಏನು? ತಾವೇನೂ ಹಿಂದೀ ಸ್ವಾತಂತ್ರ್ಯಕ್ಕೆ ವಿರೋಧವಿಲ್ಲ ಆದರೆ ಜಾತೀಯ ಮತ್ತು ಅಲ್ಪಸಂಖ್ಯಾಕ ಪ್ರಶ್ನೆಯಿಂದಾಗಿ ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯಲು ತೊಡಕಾಗಿದೆಯೆಂಬುದನ್ನು ಬ್ರಿಟಿಷ್ ಸರಕಾರವು ದೊಡ್ಡ ವಾದವಾಗಿ ಮುಂದೊಡ್ಡಿರುವುದು. ಇದಕ್ಕೆ ಕಾಂಗ್ರೆಸ್ ಮುಖಂಡರು ತಕ್ಕ ಉತ್ತರವಿತ್ತಿರುವರು ಬ್ರಿಟಿಷರು ಈಗಲೇ ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯಬೇಕಾಗಿಲ್ಲ. ಯುದ್ಧ ಮುಗಿದ ಮೇಲೆ, ಹಿಂದೂದೇಶದ ಬೇರೆ ಬೇರೆ ಸಮಾಜಗಳವರೂ, ಅಲ್ಪ ಸಂಖ್ಯಾಕರೂ ಒಂದುಗೂಡಿ ಕೇಳುವ ಸ್ವಾತಂತ್ರ್ಯವನ್ನು ಕೊಟ್ಟರೆ ಸಾಕು ಆ ಆಶ್ವಾಸನೆಯನ್ನೀಗ ಕೊಡಬೇಕು ಆ ದೃಷ್ಟಿಯಿಂದ ಸಾಧ್ಯವಾದ ಮಟ್ಟಿಗೆ ಕೇಂದ್ರ ಸರಕಾರದ ಆಡಳಿತ ನಡಿಸಬೇಕು ಆಗ ಮಾತ್ರ ಈ ಯುದ್ಧದಲ್ಲಿ ಹಿಂದೂದೇಶವು ಆಸಕ್ತಿಯಿಂದ ಭಾಗ ವಹಿಸುವುದು, ಬ್ರಿಟಿಷರ ಉದ್ದೇಶದಲ್ಲಿ ಹಿಂದೀಯರಿಗೆ ವಿಶ್ವಾಸವುಂಟಾಗುವುದೆಂದು ಕಾಂಗ್ರೆಸ್ ಮುಖಂಡರ ವಾದ ಇದಕ್ಕೆ ಬ್ರಿಟಿಷರು ಸಮರ್ಪಕವಾದ ಉತ್ತರವೀಯಲಾರದ ಉಭಯಸಂಕಟದಲ್ಲಿ ಬಿದ್ದಿದ್ದಾರೆ. ಯಾವ ರೀತಿಯಲ್ಲಾದರೂ ಕಾಂಗ್ರೆಸನ್ನು ತೃಪ್ತಿಪಡಿಸದೆ ನಿರ್ವಾಹವಿಲ್ಲದಂತಾಗಿದೆ ಅವರಿಗೀಗ.

ಲೈಬ್ರರಿ
ಮತ್ತು
ಸ್ಕೂಲ್ ಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ಕಟಲಾಗಿಗೆ ಬರೆಯಿರಿ

ಪಿ. ಎ. ಉಪಾಧ್ಯಾಯ,
ಬುಕ್‌ಸೆಲ್ಲರ್ ಅಂಡ್ ಪಬ್ಲಿಷರ್,
ಎ. ಎಸ್. ಸ್ಟ್ರೀಟ್,
ಬೆಂಗಳೂರು ಸಿಟಿ

38000 ರೂಪಾಯಿಗಳು.
ಸಂಪೂರ್ಣ ಸರಿಯಾದ 19 ಇನಾಮುಗಳೊಳಗೆ ಹಂಚಲ್ಪಡುವುದು.

ನಮ್ಮ ಸಾಂಕೇತಿಕ ಉತ್ತರದ ಯಾವುದಾದೊಂದು ಸಾಲಿಗೆ ಅನುಕ್ರಮವಾಗಿ ಸರಿಯಾದ ಉತ್ತರ ಕಳುಹಿಸುವ 'ರನ್ನರ್ಸ್ ಅಪ್ಸ್' ಇವರಿಗೆ ರೂ 20ರ 50 ಇನಾಮುಗಳನ್ನು ಸಮಾಧಾನಾರ್ಥವಾಗಿ ಕೊಡಲಾಗುವುದು ಮುದ್ರೆ ಹಾಕಿ ಇಡಲ್ಪಟ್ಟಿರುವ ನಮ್ಮ ಉತ್ತರದ ಮೊದಲಿನ ಎರಡು ಸಮಾನಂತರ ಸಾಲುಗಳಿಗೆ ಅನುಕ್ರಮವಾಗಿ ಸರಿಯಾದ ಸಾಲುಗಳನ್ನು ಸೂಚಿಸುವವರಿಗೆ ರೂ 100ರ ಗ್ಯಾರಂಟಿ ಇನಾಮು ಅತಿ ಹೆಚ್ಚಿನ ಉತ್ತರ ಕಳುಹಿಸುವವರಿಗೆ ರೂ 150 ರಿಸರ್ವ್ ಮಾಡಲಾಗಿದೆ

ಕೊಡಲ್ಪಟ್ಟಿರುವ ಚೌಕಟ್ಟಿನಲ್ಲಿ 7ರಿಂದ 22ರ ವರೆಗಣ ಅಂಕೆಗಳನ್ನು ಅಡ್ಡಕ್ಕೆ ಮತ್ತು ನೀಟಕ್ಕೆ ಪ್ರತಿಯೊಂದು ಸಾಲಿನ ಮತ್ತು ಮೂಲೆಗಳಿಂದ ಮೂಲೆಗಳಿಗೆ ಎರಡು ಸಾಲಿನ ಸಂಖ್ಯೆಗಳನ್ನು ಕೂಡಿಸಿದರೆ ಜಮ್ಲಾ 58 ಆಗತಕ್ಕದ್ದು ಪ್ರತಿಯೊಂದು ಅಂಕೆಯೂ ಒಮ್ಮೆಯೇ ಉಪಯೋಗಿಸಲ್ಪಡಬೇಕು ಉತ್ತರ ಕಳುಹಿಸುವ ಕೊನೆಯ ತಾ 14 11-39, ಪಲಿತಾಂಶ ಪ್ರಕಟಿಸುವ ತಾರೀಕು 22-11-39.

ಪ್ರತಿಯೊಂದು ಉತ್ತರಕ್ಕೆ ಪ್ರವೇಶಫಾಸಲು ರೂ. 1 ಅಥವಾ 3ಕ್ಕೆ ರೂ. 2 ಅಥವಾ 8ರ ಪ್ರತಿಯೊಂದು ಸೆಟ್ಟಿಗೆ ರೂ 5

ನಿಯಮಗಳು — ಬಿಳಿ ಕಾಗದದಲ್ಲಿ ಸ್ಪಷ್ಟವಾಗಿ ಬರೆದು, ಅಗತ್ಯವುಳ್ಳ ಪ್ರವೇಶ ಫಾಸಲಿನ ಸಮೇತವಾಗಿ ಎಷ್ಟು ಬೇಕಾದರೂ ಉತ್ತರಗಳನ್ನು ಕಳುಹಿಸಬಹುದು ಪ್ರವೇಶಫಾಸಲನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕದ್ದು ಪ್ರವೇಶಫಾಸಲು ಸಂಗ್ರಹವಾದ ಮೇರೆಗೆ ಇನಾಮುಗಳು ಬದಲಾಯಿಸಲ್ಪಡುವವು ಆದರೆ ಬೊಂಬಾಯಿಯ ಪ್ರಸಿದ್ಧವಾದ ಬ್ಯಾಂಕೊಂದರಲ್ಲಿ ಡಿಪೋಸಿಟ್ ಇಡಲ್ಪಟ್ಟಿರುವ ಉತ್ತರವನ್ನು ಹೋಲುವ ಸರಿಯಾದ ಉತ್ತರ ಕಳುಹಿಸುವ ಪ್ರತಿಯೊಬ್ಬರಿಗೆ ರೂ 2000ದಷ್ಟರ ಇನಾಮಿನ ಗ್ಯಾರಂಟಿ ಇದೆ ಫಲಿತಾಂಶವನ್ನು ಪಡೆಯುವುದಕ್ಕಾಗಿ ವಿಳಾಸ ಸಮೇತವಾದ ಕವರೊಂದನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು. ಮೆನೇಜರರ ನಿರ್ಣಯವೇ ಕೊನೆಯದೂ ಸಿಂಧವಾದದೂ ಆಗಿರುವುದು

ಜುಮ್ಲಾ 54ರ ಹಿಂದಿನ ಸವ ಸ್ಕೆಯು ಮುದ್ರೆ ಹಾಕಿ ಇಡಲ್ಪಟ್ಟ ಉತ್ತರ				
1ನೇ ಸಾಲು	14,	6,	21,	13
2ನೇ ಸಾಲು	11,	12,	15,	16
3ನೇ ಸಾಲು	20,	17,	10,	7
4ನೇ ಸಾಲು	9,	19,	8,	18

ನಿಮ್ಮ ಉತ್ತರ ಮತ್ತು ಪ್ರವೇಶ ಫಾಸಲನ್ನು ಈ ಕೆಳಗಣ ವಿಳಾಸಕ್ಕೆ ಕಳುಹಿಸಿರಿ,
ದಿ ಮ್ಯಾನೇಜರ್,
ಪ್ರೆಸಿಡೆನ್ಸಿ, ಕಮರ್ಸಿಯಲ್ ಸಿಂಡಿಕೇಟ್
ಮುಂಬಾದೇವಿ, ಬೊಂಬಾಯಿ 2.
The Manager,
Presidency, Commercial Syndicate,
Mumbadevi, BOMBAY 2.

ಪ್ರಾಮುಖ್ಯ ಪ್ರಕಟಣೆ
ಅಮೃತಾಂಜನ
— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಣ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.



ಆಯುರ್ವೇದ ಕೀರ್ತಿವಂತರ ರತ್ನ
55 ವರ್ಷಗಳಿಂದ ಪ್ರಸಿದ್ಧವಾದ
ಶಕ್ತಿಸುಧಾಕರ ಗೋಳಿಯ
(ರಿಜಿಸ್ಟರ್ಡ್)



ಪುರುಷರು ಕಳಕೊಂಡ ಶಕ್ತಿಯನ್ನು ಪುನಃ ಹೊಂದಿ ರಕ್ತಶುದ್ಧವಾಗಿ, ಧಾತು ವೃದ್ಧಿ ಹೊಂದುತ್ತದೆ. ಸ್ವಪ್ನದಲ್ಲಿ, ವಿಷಯಾದಿ ಸ್ತ್ರೀಸಂಗ, ಕೆಟ್ಟ ಉಪಯೋಗ ಅಥವಾ ಮೂತ್ರದಲ್ಲಿ ಹೋಗುವ ಧಾತು (ರಕ್ತ) ಕೆಲವು ಸಮಯದ ಸೇವನೆಯಿಂದಲೇ ಸಂಪೂರ್ಣ ನಿಲ್ಲುತ್ತದೆ, ಅಲ್ಲದೆ ಸ್ಮರಣಶಕ್ತಿ ವೃದ್ಧಿಯಾಗಿ ದೇಹವನ್ನು ಪುಷ್ಟೀಕರಿಸುತ್ತದೆ ಕ್ಷಯರೋಗವನ್ನು ಮತ್ತು ನಪುಂಸಕತನವನ್ನು ಹೋಗಲಾಡಿಸಿ ನವತಾರುಣ್ಯವನ್ನುಂಟುಮಾಡುತ್ತದೆ ಏನೆನ್ನೋಣ ಎಂತೂ ಇದರ ಉಪಯೋಗದಿಂದ ಮಾಯವಾಗುತ್ತದೆನ್ನಲು ಸಂಶಯವಿಲ್ಲ ತಾವು ಇದನ್ನು ಒಂದಾವರ್ತಿ ಉಪಯೋಗಮಾಡಿ ನೋಡಿದಲ್ಲಿ ತನ್ನಷ್ಟಕ್ಕೆ ತಾನೇ ಇದರ ಗುಣವು ತಿಳಿದು ಬರುವುದು 32 ಗುಳಿಗೆಗಳ ಡಬ್ಬಿ 1ರ ಬೆಲೆ ರೂ 1ಮಾತ್ರ

ಆಫೀಸು ಸಮಯ ಬೆಳಿಗ್ಗೆ 8ರಿಂದ 12ಗಂಟೆ ಮಧ್ಯಾಹ್ನ 2ರಿಂದ 8

Vaidya Shasthry Kalyanji Takar
303, Kalaladevi Road
Hanuman Lane Corner BOMBAY 2

ವೈದ್ಯಶಾಸ್ತ್ರಿ ಕಲ್ಯಾಣ್‌ಜಿ ಹರಿಕೃಷ್ಣ ಟಾಕರ
565, ಕಾಲಬಾದೇವಿ ರೋಡ್,
ಹನುಮಾನ್‌ಗಲ್ಲಿಯ ನಾಕೆ, ಬೊಂಬಾಯಿ ನಂ 2

ನೋಟೀಸು

ಕಾರ್ಕಳ ಡಿ. ಮು ಕೋರ್ಟಿನಲ್ಲಿ

O. S. No $\frac{122}{1934}$
R. E. P. $\frac{846}{1939}$

ವಾದಿ — ಅಗ್ಗಣ್ಣ ಕುಂಜತ್ತಾಯ 2ನೇ ಪ್ರತಿವಾದಿ 2, ರಾಮ ಕುಂಜತ್ತಾಯ, 4ನೇ ಪ್ರತಿವಾದಿ 3, ವೆಂಕಟ್ರಮಣ ಕುಂಜತ್ತಾಯ ಶೇಷ ಕುಂಜತ್ತಾಯರ ಮಕ್ಕಳು, } **ಅರ್ಜಿದಾರರು**
ಕಾರ್ಕಳ ತಾಲೂಕು ಶಿರ್ಲಾಲು ಗ್ರಾಮಸ್ಥರು ಮತ್ತು

1ನೇ ಪ್ರತಿವಾದಿಯು, ಸುಬ್ಬಕ್ಕ ಸೆಡ್ತಿ ಬಾಬ ಸೆಟ್ಟಿಯ ಹೆಂಡತಿ, ಉಡುಪಿ ತಾಲೂಕು ಬೈರಂಪಳ್ಳಿ ಗ್ರಾಮದ ಒಳಬೈಲು ಎಂಬಲ್ಲಿರುವ ವಳು ಈಗ ಹಾಲಿ ಉಡುಪಿ ತಾಲೂಕು ಬೊಮ್ಮರಬೆಟ್ಟು ಗ್ರಾಮದಲ್ಲಿರುವವಳು. } **ಎದುರುದಾರ್ತಿ**

ಇವರೊಳಗೆ,

ಈ ಮೂಲಕ ನಿಮಗೆ ತಿಳಿಯಪಡಿಸುವದೇನೆಂದರೆ ಮೇಲ್ಕಾಣಿಸಿದ ಅಮಲ್‌ಜ್ಯಾರಿಯಲ್ಲಿ ನಿಮ್ಮ ಹಕ್ಕಿನ ಸ್ಥಿರಾಸ್ತಿಗಳನ್ನು ಅರ್ಜಿದಾರರು ನಿಲಾಮಿಗೆ ಅಪೇಕ್ಷಿಸಿ ಹಾಜ್ರುಮಾಡಿರುವ ಡ್ರೇಫ್ಟ್ ಇಸ್ತಿಹಾರು ಮಂಜೂರುಮಾಡುವ ಬಗ್ಗೆ ತಾರೀಕು 24-11-1939 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಅಮಲ್‌ಜ್ಯಾರಿಯು ತನ್ಕಿಗೆ ಇಟ್ಟಿರುತ್ತದೆ ಮತ್ತು ಸದ್ರಿ ಇಸ್ತಿಹಾರಿನಿಂದ ತೋರುವ ನಿಮ್ಮ ಹಕ್ಕಿನ ಆಸ್ತಿಗಳ ಏಲಂ ಸಮಯ ದರ್ಖಾಸ್ತಿಗೆ ನಿಲ್ಲುವ ಕುರಿತು ಅರ್ಜಿದಾರರಿಗೆ ಯಾ ಅವರ ಕಡೆಯ ವಕೀಲರಿಗೆ ಅನುಮತಿ ಕೊಡಬೇಕಾಗಿಯೂ, ಹಾಗೆ ದರ್ಖಾಸ್ತಿಗೆ ನಿಂತಲ್ಲಿ ದರ್ಖಾಸ್ತಿಗೆ ನಿಂತ ಮೊಬಲಗು ಕ್ರೆಡಿಟ್ ಐವಜನಲ್ಲಿ ಮುಜ್ರೆಮಾಡಿ ಕೊಡುವ ರಶೀದಿ ಮಂಜೂರು ಮಾಡಬೇಕಾಗಿ ಕೂಡಾ ಅರ್ಜಿದಾರರು ಸದ್ರಿ ಅಮಲ್‌ಜ್ಯಾರಿಯಲ್ಲಿ ದಾಖಲು ಮಾಡಿರುವ R. E. A. No. $\frac{837}{39}$ನೇ ಅರ್ಜಿಯು ಕೂಡಾ ತಾರೀಕು 24-11-39ಕ್ಕೆ ತನ್ಕಿಗೆ ಇಟ್ಟಿರುತ್ತದೆ, ಆದ್ದರಿಂದ ಈ ಕುರಿತು ನಿಮ್ಮ ಆಕ್ಷೇಪಣೆಗಳು ಇರುವದಾದರೆ ಸದ್ರಿ ತಾರೀಕಿನಲ್ಲಿ ಬೆಳಿಗ್ಗೆ 10 ಘಂಟೆ ಸಮಯಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು ತಪ್ಪಿದಲ್ಲಿ ಸದ್ರಿ ಅಮಲ್‌ಜ್ಯಾರಿಯ ಅರ್ಜಿಯು ಮತ್ತು ಮೇಲ್ಕಂಡ ಬಗ್ಗೆ ಕೊಟ್ಟಿರುವ ಅರ್ಜಿಯು ಏಕಪಕ್ಷವಾಗಿ ತೀರ್ಮಾನ ಸಲುಗುವದು.

A N. S. Achar,
Pleader for Petitioners
Karkala, S K Date 25-10-'39

ಅದ್ವಿತೀಯ ಗುಣಕಾರಿ
ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿಗುಟಿ

ಆಯುರ್ವೇದ ಋಷಿಮುನಿಗಳ ಆಧಾರಸ್ಥಂಬದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಡುಬ್ಬುವ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವವು. ಹಾಗೂ ಆಲಸ್ಯ ಯಾ ವಾಯುಗಳೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ

ಕ್ರಯ—12ಮಾತ್ರೆ, 0-4-0 25, 0-7-0, 50, 0-13 0, 100, 1-5-0, 500,5-0 0 1000, 9-0 0.

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ) ಗಳನ್ನು ಕಳುಹಿಸುತ್ತದೆ,

ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕುಂಬಾಳು,
ಪ್ರೋಸ್ಟ್—ಬ್ರಹ್ಮಾವರ, ದ. ಕ

ನಮ್ಮ ಸ್ಟಾಕಿಸ್ಟರು—1 ವಿ. ಆರ್. ಪ್ರಭು, ದಿ ಕೆನರಾ ಸ್ಟೋರ್ಸ್ ಎಂಡ್ ಬುಕ್ಸ್ ಏಜನ್ಸಿ, ಬಟಾಟೂವ ಲೂ ಮೆನ್ಶನ್, ಮುಂಬೈ 2 ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ 3. ನವಭಾರತ ಬುಕ್ ಡಿಪೋ, ಉಡುಪಿ.

ಅಳಿಯ ಸಂತಾನ ಸುಧಾರಣಾ ಪರಿಷತ್ತು.

ನವಂಬರ ತಾ. 5ಕ್ಕೆ ಎರಡನೇ ಅಧಿವೇಶನ

ಇಂದೀಗ ಕಾಂಗ್ರೆಸ್ ಮಂತ್ರಿಮಂಡಲವು ರಾಜಿನಾಮೆಕೊಟ್ಟು, ಮದ್ರಾಸ್ ಗವರ್ನರರು ಎಸೆಂಬ್ಲಿಯನ್ನೇ ಬರ್ಖಾಸ್ತುಗೊಳಿಸಿ ತಾನೇ ಆಡಳಿತದ ಜವಾಬ್ದಾರಿ ವಹಿಸಿರುವ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಅಳಿಯ ಸಂತಾನ ಮಸೂದೆಗಾಗಿ ಚಡಪಡಿಸಿ ಫಲವೇನೆಂಬ ಸಂದೇಹವು ಕೆಲವರಲ್ಲುಂಟಾಗುವುದು ಸ್ವಾಭಾವಿಕವಾಗಿದೆ. ಆದರೆ ಕೇವಲ ದಕ್ಷಿಣ ಕನ್ನಡದ ಅಳಿಯಕಟ್ಟಿನವರಿಗೆ ಅನ್ವಯಿಸುವ ಅಳಿಯಸಂತಾನ ಮಸೂದೆಯಂತಹ ಸಾಮಾಜಿಕ ಸುಧಾರಣಾ ಕಾಯಿದೆಗೂ, ದೇಶದ ಹಾಗೂ ಲೋಕದ ರಾಜಕೀಯ ಪರಿಸ್ಥಿತಿಗೂ ಹೆಚ್ಚಿನ ಸಂಬಂಧವೇನೂ ಇರುವುದಿಲ್ಲ. ಇದು ಹೊರತು ಈಗಣ ರಾಜಕೀಯ ಕ್ಷೋಭೆಯೂ ದೀರ್ಘಕಾಲದವರೆಗೆ ಉಳಿಯುವದಾಗಿಲ್ಲ. ಈಗ ಮಸೂದೆಯೊಂದನ್ನು ತಯಾರಿಸಿದಾಕ್ಷಣ ಅದನ್ನು ಕೂಡಲೆ ಎಸೆಂಬ್ಲಿಯ ಮುಂದೆ ತರಬೇಕೆಂದೇನೂ ಇಲ್ಲ. ಆದುದರಿಂದ ಅಳಿಯಸಂತಾನ ಸುಧಾರಣಾ ಕಮಿಟಿಯವರು ತಾವು ಹಿಡಿದ ಕೆಲಸವನ್ನು ಕೊನೆಗೊಳಿಸುವ ನಿರ್ಧಾರದಿಂದ ಇದೇ ತಾ 5ನೇ ಆದಿತ್ಯವಾರ ಪೂರ್ವಾಹ್ನ ಘಂಟೆ 11ಕ್ಕೆ ಮಂಗಳೂರಿನ ಶ್ರೀ. ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಎರಡನೇ ಸಲ ಪರಿಷತ್ತನ್ನು ಕರೆದಿರುತ್ತಾರೆ.

ಈ ಮೊದಲೇ ಸರಿಯಾದ ನೋಟೀಸು ಕೊಟ್ಟು ಪ್ರತಿ ತಾಲೂಕು ಕೇಂದ್ರಗಳಲ್ಲಿ ಸಭೆಗಳನ್ನು ನಡಿಸಿ ಪ್ರತಿ ಜಿಲ್ಲಾ ಬೋರ್ಡ್ ಸರ್ಕಲ್‌ಗಳಿಂದ ಈ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಲಾಗಿದೆ. ರೂ. ಒಂದರಂತೆ ಪ್ರತಿನಿಧಿಹಾಸಲನ್ನು ತೆರುವ ಪ್ರತಿಯೊಬ್ಬ ಪ್ರತಿನಿಧಿಯೂ ಪರಿಷತ್ತಿನಲ್ಲಿ ಭಾಗವಹಿಸಿ ಓಟುಕೊಡಬಹುದು. ಸುಧಾರಣಾಕಮಿಟಿಯ ಸಮ್ಮತಿಯ ನಿರೀಕ್ಷೆಯಿಂದ ಪ್ರತಿನಿಧಿ ಹಾಸಲನ್ನು ತೆರುವ ತಾರೀಕನ್ನು ಪರಿಷತ್ತಿನ ದಿನವರೆಗೂ ಮುಂದುವರಿಸಲಾಗಿದೆ. ಆದುದರಿಂದ ಇಷ್ಟರ ವರೆಗೆ ಪ್ರತಿನಿಧಿ ಹಾಸಲು ತೆರದೆ ಬಾಕಿಮಾಡಿಕೊಂಡಿರುವವರೆಲ್ಲರೂ ಇನ್ನಾದರೂ ಶ್ರೀ ಪಿ ಎಸ್ ಹೆಗ್ಡೆ ಎಡಿಟರ್, ಮಂಗಳೂರು ಇವರಿಗೆ ಟಪ್ಪಾಲು ದ್ವಾರಾಯಾ ಸ್ವತಃ, ಇಲ್ಲವೆ ವಿಜಯ ಬೇಂಕಿನ ಶಾಖೆಗಳಲ್ಲಿ ತೆರಬೇಕಾಗಿಯೂ, ಪರಿಷತ್ತಿಗೆ ಉತ್ಸಾಹದಿಂದ ಬಂದು ಅದನ್ನು ಜಯಶೀಲಗೊಳಿಸಬೇಕಾಗಿಯೂ ವಿನಂತಿ. ಪ್ರೇಕ್ಷಕರು ಈ ಪರಿಷತ್ತಿಗೆ ಬಂದು ಸಲಹೆಗಳನ್ನೀಯಬಹುದು.

ಅಳಿಯ ಸಂತಾನ ಸುಧಾರಣಾ ಕಮಿಟಿಯ ಸಭೆ.

ಈ ಕಮಿಟಿಯ ಕೊನೆಯ ಸಭೆಯು ಇದೇ ತಾ 5ನೇ ಪೂರ್ವಾಹ್ನ ಘಂಟೆ 10ಕ್ಕೆ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನಡೆಯಲಿರುವುದು. ಮೆಂಬರರೆಲ್ಲಾ ಸಕಾಲದಲ್ಲಿ ಬರಬೇಕಾಗಿ ವಿನಂತಿ. ಈ ಸಭೆಯ ಕುರಿತು ಪ್ರತ್ಯೇಕ ನೋಟೀಸುಕೊಡಲ್ಪಡುವುದಿಲ್ಲ. ಇದನ್ನೇ ನೋಟೀಸಾಗಿ ಪರಿಗಣಿಸಬೇಕು.

ಕಾರ್ಯದರ್ಶಿ,

ಅಳಿಯ ಸಂತಾನ ಸುಧಾರಣಾ ಕಮಿಟಿ

ನೋಟೀಸು

ಕಾರ್ಕಳ ಡಿ ಮು ಕೋರ್ಟಿನಲ್ಲಿ

R E P No $\frac{100}{1939}$

O S $\frac{321}{1932}$

ಕೃಷ್ಣ ಸೆಟ್ಟಿ—ಅರ್ಜಿದಾರ

ಚಂಗ ಸೆಟ್ಟಿ—ಎದ್ರಿ

ಎದ್ರಿ—ಚಂಗಸೆಟ್ಟಿ ಚಂದುಸೆಟ್ಟಿ ಅಳಿಯ, ಮಂಗಳೂರು ತಾಲೂಕು ಕರ್ನಿರೆ ಗ್ರಾಮದಲ್ಲಿರುವವ

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಅರ್ಜಿದಾರನು ಎದ್ರಿಯ ಕುಟುಂಬದ ಸ್ಥಿರಾಸ್ತಿಗಳನ್ನು ಏಲಂಪಿಗೆ ಅಪೇಕ್ಷಿಸಿ ಬರಕೊಂಡ ಏಲಂ ಇಸ್ತಿಹಾರಿನ ಶರ್ತುಗಳನ್ನು ಮಂಜೂರ ಮಾಡುವ ಒಗ್ಗೆ ಯಾ ಮತ್ತು ಸದ್ರಿ ಆಸ್ತಿಗಳು ಏಲಂ ಸಮಯ ಅರ್ಜಿದಾರ ಬಿಡ್ ಮಾಡುವರೆ ಪರ್ಮಿಶನ್ ಕೊಡಬೇಕಾಗಿಯೂ ಬಿಡ್ ಮಾಡಿದ ಮೊಬಲಗು ಡಿಕ್ರಿಯ ಐವಜಿನಲ್ಲಿ ಮಜ್ರೆಮಾಡಿಕೊಡುವ ರಶೀದಿ ಮಂಜೂರು ಮಾಡಬೇಕಾಗಿ ಕೊಡಾ ಕೊಟ್ಟ ಅರ್ಜಿಯು ತಾ 11-11-1939ಕ್ಕೆ ಇಟ್ಟಿರುವುದರಿಂದ ಇವುಗಳ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಸದ್ರಿ ತಾ 11-11-1939ನೇ ದಿನ ಹಗಲು ಘಂಟೆ 10ಕ್ಕೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರ ಹಾಜರಿಯಿಂದ ಅವುಗಳು ತೀರ್ಮಾನಿಸಲ್ಪಡುವವು ಎಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ. ಕೋರ್ಟು ಹುಕುಂ ಪ್ರಕಾರ.

K Mahabala Hegde,

ಅರ್ಜಿದಾರನ ವಕೀಲ್

ಕಾರ್ಕಳ, ತಾ 30-10-1939.

THULUNAD BANK

OF SUPPLY AGENCY LIMITED,

ESTD.] UDIPI. [1933.

INTEREST ON CURRENT ACCOUNT ALLOWED

at 3% p. a.

All kinds of Banking business transacted

Write for particulars to —

The Managing Director

ಈಶಾನ್ಯ ಯುರೋಪಿನಲ್ಲಿ ಯುದ್ಧದ ಬೆದರಿಕೆ.

ಜರ್ಮನ್ ಸೋವಿಯೆಟ್ ಮಾತುಕತೆ.

ಟರ್ಕಿ ಮತ್ತು ಎಂಗ್ಲೋ ಫ್ರೆಂಚ್ ಒಡಂಬಡಿಕೆಯ ಪರಿಣಾಮವಾಗಿ ಈಶಾನ್ಯ ಯುರೋಪಿನಲ್ಲಿ ಗಲಾಟೆಯೇಳುವ ಸಂಭವ ತೋರುತ್ತದೆ. ಈ ಒಪ್ಪಂದದಿಂದ ಇಟಲಿಯು ಅತೃಪ್ತಿಗೊಂಡಿದೆ. ಜರ್ಮನಿಯಲ್ಲಿ ತೀವ್ರ ಸಂತಾಪವುಂಟಾಗಿದೆ. ರಶ್ಯಕ್ಕೂ ಅತೃಪ್ತಿಯುಂಟಾಗಿದೆ. ಟರ್ಕಿ, ಗ್ರೀಸ್, ಯುಗೊಸ್ಲೋವಿಯ ಮೊದಲಾದ ಬಾಲ್ಕನ್ ರಾಷ್ಟ್ರಗಳು ಒಕ್ಕಟ್ಟಿನಿಂದ ಕಟ್ಟಸಮಾಗಿರುವ ಆಶೆಯು ಕಡಿಮೆಯಾಗುತ್ತಿದೆ. ಇದಕ್ಕೆ ಬಲ್ಗೇರಿಯದ ಧೋರಣೆಯೇ ಕಾರಣ. ರುಮೇನಿಯಕ್ಕೆ ಸೇರಿದ ದಕ್ಷಿಣ ದೊಬ್ರುಜ ಎಂಬುದನ್ನು ತನಗೆ ಬಿಟ್ಟುಕೊಡಬೇಕೆಂದು ಬಲ್ಗೇರಿಯ ಹಠಹಿಡಿದಿರುತ್ತದೆ. ಈ ಸಂದರ್ಭದಲ್ಲಿ ಬಲ್ಗೇರಿಯಕ್ಕೆ ದಕ್ಷಿಣ ದೊಬ್ರುಜವನ್ನು ಬಿಟ್ಟುಕೊಟ್ಟಲ್ಲಿ ರಶ್ಯವು ಬೆಸರೇಬಿಯವನ್ನೂ ಹಂಗೇರಿಯು ಆದರ ಎಲ್ಲೆಯ ಪ್ರದೇಶವನ್ನೂ ಕೇಳುವ ಗಂಡಾಂತರ ಬರುವುದೆಂದು ರುಮೇನಿಯದ ಹೆದರಿಕೆ. ಬಲ್ಗೇರಿಯದ ಕೇಳಿಕೆಯನ್ನು ಮುಂದೆ ಮನ್ನಿಸಲಾಗುವುದೆಂದು ಹೇಳಿ ಟರ್ಕಿಯು ಬಲ್ಗೇರಿಯವನ್ನೂ ಬಾಲ್ಕನ್ ಕೂಟಕ್ಕೆ ಸೇರಲು ಆಮಂತ್ರಿಸಿತು. ಆದರೆ ಮೊದಲಾಗಿಯೇ ಹಾಗೆ ಮಾಡಬೇಕೆಂದು ಬುಲ್ಗೇರಿಯದ ಹಟ. ಇದರ ಪರಿಣಾಮವಾಗಿ ಟರ್ಕೊಬುಲ್ಗಾರ್ ಎಲ್ಲೆಯಲ್ಲಿ ಸೈನ್ಯಗಳು ಒದಗಿ ಎದುರಿಸಿ ನಿಂತಿರುತ್ತವೆ. ಸಾಂಪತ್ತಿಕವಾಗಿ ಬುಲ್ಗೇರಿಯವು ಜರ್ಮನಿಯ ಮೇಲೆ ಹೊಂದಿಕೊಂಡಿದೆ. ಆದರೆ ಬುಲ್ಗೇರಿಯದಲ್ಲಿ ಸೋವಿಯೆಟ್ ರಶ್ಯದ ಕುರಿತು ಆದರಭಾವವು ಬೆಳೆಯುತ್ತಿದೆ. ಹಂಗೇರಿ ಮತ್ತು ರುಮೇನಿಯಗಳು ಈಗ ಹತ್ತಿರವಾಗಿವೆ. ಆದರೆ ಬುಲ್ಗೇರಿಯವನ್ನು ತೃಪ್ತಿಪಡಿಸದಿದ್ದ ಪಕ್ಷದಲ್ಲಿ ಜರ್ಮನಿಯು ಅದನ್ನು ತನ್ನ ಉಪಕರಣವಾಗಿ ಉಪಯೋಗಿಸಿಕೊಂಡು ಬಾಲ್ಕನ್ ಕೂಟವನ್ನು ಭೇದಿಸಲೆತ್ನಿಸಬಹುದು. ರುಮೇನಿಯಕ್ಕೂ ಪೋಲಂಡಿನ ಅವಸ್ಥೆಯೇ ಉಂಟಾಗುವುದೋ ಎಂಬ ಸಂದೇಹಕ್ಕಾಸ್ಪದವಾಗಿದೆ. ಅದು ತನ್ನ ನೆರೆಯ ಜರ್ಮನಿ ಮತ್ತು ರಶ್ಯಗಳಿಗಿಂತಲೂ ಇಂಗ್ಲೆಂಡಿನ ಮೈತ್ರಿಯನ್ನು ಹೆಚ್ಚಾಗಿ ಬೆಳೆಸಿಕೊಂಡಿದೆ. ಅದರ ಸ್ವಾತಂತ್ರ್ಯ ನಾಶಕ್ಕೆ ಗಂಡಾಂತರ ಬಂದಾಗ ಇಂಗ್ಲೆಂಡಿನ ರಕ್ಷಣೆಯ ಭರವಸೆಯೂ ಅದಕ್ಕಿದೆ. ಆದರ ಇಂಗ್ಲೆಂಡಿಗ ಅದಕ್ಕ ಯಾವ ರೀತಿಯಲ್ಲೂ ಸಹಾಯ ಮಾಡಲು ಸಾಧ್ಯವಿಲ್ಲ. ಚಿಕ್ಕ ಚಿಕ್ಕ ಬಾಲ್ಕನ್ ರಾಜ್ಯಗಳಿಂದ ಅದಕ್ಕೆ ಹೆಚ್ಚಿನ ಸಹಾಯವೇನೂ ದೊರೆಯುವದಾಗಿಲ್ಲ.

ರುಮೇನಿಯವು ತಳಮಳಗೊಂಡಿದೆ. ಅವರ ಅರಸರಾದ ಕೆರೋಲರು, ಅಕ್ಟೋಬರ ತಾ 28ರಲ್ಲು ಟರ್ಕಿ ಮತ್ತು ಯುಗೊಸ್ಲೋವಿಯದ ತನ್ನ ರಾಯಭಾರಿಗಳನ್ನು ಕರೆದು ಮಾತುಕತೆ ನಡೆಸಿರುವರು. ಪ್ರಧಾನಮಂತ್ರಿ ಮತ್ತು ವಿದೇಶ ಮಂತ್ರಿಗಳೂ ಈ ರಾಯಭಾರಿಗಳೊಡನೆ ಮಾತಾಡಿರುವರು. ರುಮೇನಿಯ ಮತ್ತು ಯುಗೊಸ್ಲೋವಿಯಗಳ ಪ್ರಧಾನಮಂತ್ರಿಗಳೂ ಎರಡು ರಾಜ್ಯಗಳ ಎಲ್ಲೆಯಲ್ಲಿ ಒಟ್ಟು ಸೇರಿ ಆಲೋಚಿಸಿರುವರು. ಬುಲ್ಗೇರಿಯ ಮತ್ತು ಗ್ರೀಸಿನ ರಾಯಭಾರಿಗಳನ್ನೂ ರುಮೇನಿಯದ ವಿದೇಶ ಮಂತ್ರಿಗಳು ಜರೂರಿಂದ ಕರೆದು ಮಾತಾಡಿರುವರು.

ರಶ್ಯವು ಯುದ್ಧ ಮಾಡುವುದೇ?

ರುಮೇನಿಯದ ಮತ್ತು ಟರ್ಕಿಯ ವಿರೋಧವಾಗಿ ಸೋವಿಯಟ್ ರಶ್ಯವು ಬೇಗನೆ ಯುದ್ಧಮಾಡುವುದೆಂಬ ಸುದ್ದಿಯು ಫ್ರೆಂಚ್ ರೇಡಿಯೋ ಮುಖಾಂತರ ಪ್ರಚಾರವಾಗಿದೆ. ಇದಕ್ಕೆ ಜರ್ಮನಿಯಲ್ಲಿರುವ ತಟಸ್ಥರಾಷ್ಟ್ರಗಳ ಕೆಲವು ಪ್ರತಿನಿಧಿಗಳ ಅಭಿಪ್ರಾಯವೇ ಕಾರಣ. ಇದಕ್ಕೆ ಜರ್ಮನ್ ಸೇನೆಯ ಮತ್ತು ನೌಕಾ ಪಡೆಯ ಬೆಂಬಲ ದೊರೆಯಬಹುದೆಂದು ನಂಬಲಾಗಿದೆ. ಈ ಸಂದರ್ಭದಲ್ಲಿ ಇಟಲಿಯು ಎಂತಹ ಧೋರಣವಹಿಸುವುದೆಂದು ಹೇಳಬರುವುದಿಲ್ಲ. ರಶ್ಯವು ಆಳವಾಗಿ ವಿಚಾರಿಸದೆ ಮತ್ತು ಬಲವಾದ ಕಾರಣವಿಲ್ಲದೆ ಟರ್ಕಿಯೊಡನೆ ಕಲಹಮಾಡಲಾರದು. ಆದುದರಿಂದ ಈ ಸುದ್ದಿಗೆ ಇಷ್ಟರಿಂದ ಆಧಾರ ದೊರೆಯುವಂತಾಗುವದಿಲ್ಲ. ಆದರೆ ರುಮೇನಿಯಕ್ಕೂ ರಶ್ಯಕ್ಕೂ ಇಷ್ಟರಿಂದ ಮೈತ್ರಿಯಿರುವಂತೆ ತೋರುವುದಿಲ್ಲ. ಆಂತರಿಕ ಮತ್ತು ಹೊರಗಣ ಆಡಳಿತ ಧೋರಣೆಯ ವಿಷಯದಲ್ಲಿ ರಶ್ಯ ಮತ್ತು ಜರ್ಮನಿಗಳಿಗೀಗ ಬಹಳ ಸ್ನೇಹಭಾವವುಂಟಾಗಿದೆಯೆಂದೂ, ಬಾಲ್ಕನ್ ರಾಷ್ಟ್ರಗಳ ಸಂಬಂಧವಾದ ಅವುಗಳ ಧೋರಣೆಯಿಂದ ಇಟಲಿಯ ಹಿತಕ್ಕೇನೂ ಘಾತವಾಗುವದಾಗಿಲ್ಲೆಂದೂ ನಾಜಿಗಳು ಪ್ರಚಾರಮಾಡುತ್ತಿದ್ದಾರೆ.

ಜರ್ಮನ್ ಸೋವಿಯೆಟ್ ಮಾತುಕತೆ

ವ್ಯಾಪಾರ ವಹಿವಾಟು ಸಂಬಂಧವಾದ ಒಡಂಬಡಿಕೆಗಾಗಿ ಬರ್ಲಿನಿಗೆ ಹೋಗಿರುವ ಸೋವಿಯೆಟ್ ಸರಕಾರದ ಪ್ರತಿನಿಧಿಗಳನ್ನು ಹಿಟ್ಲರರೇ ಸ್ವತಃ ಕಂಡು ಮನ್ನಿಸಲಿರುವರು. ಈ ಪ್ರತಿನಿಧಿಗಳಿಗೆ ವ್ಯಾಪಕವಾದ ಅಧಿಕಾರ ಕೊಡಲಾಗಿದೆ ಎಂದೂ, ಅವರ ಮಾತುಕತೆಯು ವ್ಯಾಪಾರ ಸಂಬಂಧಕ್ಕೆ ಮಾತ್ರವೆ ಅನ್ವಯಿಸದೆ ಇತರ ಸಂಗತಿಗಳೂ ಆಲೋಚಿಸಲ್ಪಡುವವೆಂದೂ ನಂಬಲಾಗಿದೆ. ಜರ್ಮನಿಯ ಆರ್ಥಿಕ ತಜ್ಞರಾದ ಡಾಕ್ಟರ್ ಸ್ನಾಟರು ಸೋವಿಯೆಟ್ ಪ್ರತಿನಿಧಿಗಳೊಡನೆ ಮಾತಾಡಲಿರುವರು. ಅವರು ಜರ್ಮನಿಯ ಸಿಗ್‌ಫ್ರೀಡ್ ಕೋಟೆ, ಪ್ರಾಮುಖ್ಯ ಬಂದರು, ನೌಕಾಯಾರ್ಡ್ ಮತ್ತು ಯುದ್ಧ ಹಡಗ ಮೊದಲಾದುವನ್ನು ನೋಡಲಿರುವರು. ಸೋವಿಯೆಟ್ ರಶ್ಯದ ಮಾರ್ಗವಾಗಿ ಜರ್ಮನಿಗೆ ಬಂದು ಜರ್ಮನ್ ನಾವಿಕರಿಗೆ ಮತ್ತು ನಾಗರಿಕರಿಗೆ ಸೋವಿಯೆಟ್ ಸರಕಾರವು ಮಾಡಿದ ಸಹಾಯಕ್ಕೆ ಜರ್ಮನಿಯು ಅಭಾರ ಸೂಚಿಸಿರುವುದು. ಸ್ಟೇನಲಿರು ತನ್ನ ಸಮತಾವಾದಿ ತತ್ವಗಳನ್ನೂ ಕೆಲಮಟ್ಟಿಗೆ ಬದಲಾಯಿಸಿ, ಖಾಸಗಿ ಸೊತ್ತು, ಹೊಲ, ಉದ್ಯಮ ಮತ್ತು ಒಳಗಣ ವ್ಯಾಪಾರ ಸ್ವಾತಂತ್ರ್ಯವನ್ನು ಸದ್ಯವೇ ಕೊಡಬಹುದೆಂದು ಸುದ್ದಿಯುಂಟಾಗಿದೆ. ಆದರೆ ಯಾವ ಉದ್ಯಮವಲ್ಲೂ 50ಕ್ಕಿಂತ ಹೆಚ್ಚು ಕೆಲಸಗಾರರನ್ನು ನೇಮಿಸಲು ಬಿಡಲಾಗುವುದಿಲ್ಲ.

AN INVITATION.

to avail best facilities.

With the experience of 33 years and with a net-work of Branches and Agencies, the Corporation presents efficient service and caters to all the needs of the public. Transmission of funds to various places undertaken with maximum safety and minimum cost

Enquiries in the matter promptly attended to at all times

The Canara Banking Corporation Limited.

(Incorporated in British India)

ನವಯುಗ

ಉಡುಪಿ, ಗುರುವಾರ ತಾ. ೨-೧೧-೩೯

ಸರ್ ಸಾಮುವೇಲ್ ಹೋರರ ಭಾಷಣ

ಅಕ್ಟೋಬರ ತಾ. 26ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಹಿಂದೀ ಪ್ರಶ್ನೆಯ ಕುರಿತು ಮಹತ್ವದ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ಲೇಬರ್ ಪಕ್ಷದ ಪರವಾಗಿ, ಹಿಂದೆ ಲೇಬರ್ ಸರಕಾರದಲ್ಲಿ ಇಂಡಿಯಾ ಸೆಕ್ರೆಟರಿಗಳಾಗಿದ್ದ ಮಿ. ವೆಜ್‌ವುಡ್ ಬೆನ್ನರು ಹಿಂದೀ ಆಕಾಂಕ್ಷೆಯ ಕುರಿತು ಸಂಪೂರ್ಣ ಸಹಾನುಭೂತಿ ತೋರಿಸಿದರು 1914-18ರಲ್ಲಿ ಹಿಂದೂದೇಶವು ಎಂತಹ ಸಹಾಯಮಾಡಿರುವುದೆಂಬುದನ್ನು ಆಲೋಚಿಸಿರಿ 14 ಮಿಲ್ಯ ಪವನಿಗಿಂತಲೂ ಮಿಕ್ಕಿ ದಾನವಾಗಿಕೊಟ್ಟಿದೆ ಸೈನಿಕ ಮತ್ತು ಸಾಮಾನುಗಳಿಗಾಗಿ ಇನ್ನು 80 ಮಿಲ್ಯ ಪವನಿತ್ತಿದೆ ಅದರ ಹಡಗಗಳನ್ನು ಬ್ರಿಟಿಷ್ ಹಡಗ ಪಡೆಗೆ ಬಿಟ್ಟುಕೊಟ್ಟಿದೆ. ಒಂದು ಮಿಲ್ಯಕ್ಕಿಂತಲೂ ಮಿಕ್ಕಿದ ಹಿಂದೀಯರು ರಣರಂಗಕ್ಕೆ ಬಂದಿರುತ್ತಾರೆ ಈ ಭೌತಿಕ ಸಹಾಯದ ಹೊರತು, ಹಿಂದೂದೇಶದ ಮಹಾಪುರುಷ ಗಾಂಧಿಯವರ ನೈತಿಕ ಬೆಂಬಲವು ನಮ್ಮ ಕಡೆಗಿತ್ತು, ಅಂದಿನಂತೆ ಇಂದು ಕೂಡಾ ಗಾಂಧಿಯವರು ಇಂಗ್ಲೆಂಡಿನ ನಿಜವಾದ ಸ್ನೇಹಿತರಾಗಿ ನಾವು ಈಗ ಯುದ್ಧ ಹೂಡಿರುವ ಉದ್ದೇಶವನ್ನು ಸಂಪೂರ್ಣವಾಗಿ ಪ್ರತಿಪಾದಿಸಿರುತ್ತಾರೆ ಇಂದಿನ ಯುದ್ಧಕ್ಕಾಗಿ ಹಿಂದೂದೇಶವು ತ್ಯಾಗಮಾಡಬೇಕೆಂದು ನಾವು ಕೇಳುವುದಾದರೆ ನಾವು ಹೋರಾಡುವ ಉದ್ದೇಶವು ಹಿಂದೂದೇಶದ್ದೂ ಆಗಬೇಕು. ಬೆಣ್ಣೆಯಂತಹ ಮಾತುಗಳಿಂದ ಫಲವಿಲ್ಲ ನಾವು ಹೇಳುವುದೆಲ್ಲಾ ಯಥಾರ್ಥವಾದುದೆಂಬುದನ್ನು ಕಾರ್ಯರೂಪದಲ್ಲಿ ಇಂದು ಲೋಕಕ್ಕೆ ತೋರಿಸಿಕೊಡುವ ಜವಾಬ್ದಾರಿ ನಮ್ಮ ಮೇಲಿದೆ. ಹಿಂದೂದೇಶದಲ್ಲೊಂದರಲ್ಲಿ ಮಾತ್ರ ಅಲ್ಪಸಂಖ್ಯಾಕ ಪ್ರಶ್ನೆಯಿರುವುದಿಲ್ಲ ಪ್ರತಿಯೊಂದು ದೇಶದಲ್ಲಿಯೂ ಅದು ಇದ್ದೇ ಇವೆ ನಿಜವಾದ ಜನಪ್ರತಿನಿಧಿಗಳ ಪರಿಷತ್ತೊಂದನ್ನು ನಾವು ಹಿಂದೂದೇಶದಲ್ಲೇ ಕರೆದು, ಹಿಂದೂ-ಮುಸಲ್ಮಾನ ಪ್ರಶ್ನೆಯನ್ನು ಇತ್ಯರ್ಥಪಡಿಸಿಕೊಳ್ಳಲು ಹಿಂದೀಯರಿಗೇನೇ ಬಿಟ್ಟುಬಿಡಬೇಕು. ಇಂದಿನ ಬಿಕ್ಕಟ್ಟನ್ನು ಕೂಡಲೆ ಪರಿಹರಿಸಬೇಕು. ಅದು ನಮ್ಮ ಹೋರಾಟಕ್ಕೆ ದೊಡ್ಡ ತೊಡಕು ಮತ್ತು ಪ್ರತಿಷ್ಠೆಗೆ ಕುಂದು. ಹಿಂದೀ ಜನ ಮುಖಂಡರನ್ನು ವೈಸರಾಯರು ಮಂತ್ರಿಗಳಾಗಿ ತೆಗೆದುಕೊಳ್ಳಬೇಕು. ಹಿಂದೀಯರ ಸಂಪೂರ್ಣ ಸಹಕಾರ ಪಡೆದು ನಾವು ಯುದ್ಧ ನಡಿಸಿದರೆ ಇಡೀ ಲೋಕದ ಸಹಾನುಭೂತಿ ನಮಗೆ ದೊರೆಯುವುದೆಂದೇ ಮಿ. ಬೆನ್ನರ ಭಾಷಣದ ಸಾರಾಂಶ.

ಬ್ರಿಟಿಷ್ ಸರಕಾರದ ಪರವಾಗಿ ಪ್ರಮುಖ್ಯ ಭಾಷಣಮಾಡಿದವರೆಂದರೆ, ಇಂಡಿಯಾ ಆಕ್ಟಿನ ನಿರ್ಮಾಣಕರಾಗಿ ಪ್ರಖ್ಯಾತರಾದ ಸರ್. ಸಾಮುವೇಲ್ ಹೋರರು. ಲೋಕದಲ್ಲೆಲ್ಲಾ ವಿಪ್ಲವವುಂಟಾಗಿರುವಾಗ 350ಮಿಲ್ಯ ಜನಸಂಖ್ಯೆಯ ದೊಡ್ಡ ಭೂಖಂಡವಾದ ಹಿಂದೂದೇಶವು ಶಾಂತಿ ಸುರಕ್ಷಿತತೆಯಿಂದಿದೆ. ಯುರೋಪಿನಲ್ಲಿ ಪ್ರಜಾಸತ್ತೆಗಳು ನಾಶವಾಗುತ್ತಿರುವಾಗ ಹಿಂದೂದೇಶದಲ್ಲಿ 11ಪ್ರಜಾಸತ್ತಾತ್ಮಕ ಸರಕಾರಗಳು ಅಸ್ತಿತ್ವಕ್ಕೆ ಬಂದು ಲೋಕದ ಪ್ರಜಾಸಾಹಿ ಜನಾಂಗಗಳೊಂದಿಗೆ ಸೇರಿವೆ ಹಿಂದೂದೇಶದಲ್ಲಿ ಪ್ರಾಂತಿಕ ಸ್ವಾಯತ್ತತೆಯು ಜಯಶೀಲವಾಗಿವೆ. ಹಿಂದೂದೇಶಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೀಯಲಾಗುವುದೆಂದು ಬ್ರಿಟಿಷ್ ಸರಕಾರವು ಆಗಾಗ ಕೊಟ್ಟಿರುವ ವಚನವನ್ನು ಬೇಗನೆ ಪಾಲಿಸಲು ಅದು ಹಾರೈಸಿಕೊಂಡಿದೆ. ಇಂದು ಅನುಕೂಲಪರಿಸ್ಥಿತಿಯುಂಟಾದೊಡನೆ ಬೇಗನೆ ಅದು ಹಿಂದೂದೇಶಕ್ಕೆ ಕೊಡಲ್ಪಡುವುದು ಆ ಅನುಕೂಲಸ್ಥಿತಿಯು ಆದಷ್ಟು ಬೇಗ ಉಂಟಾಗಲೆಂದೇ ನಮ್ಮ ಹಾರೈಕೆ ಅದರ ಮಾರ್ಗದಲ್ಲೀಗ ತೊಡಕುಗಳಿರುವ ಪಕ್ಷದಲ್ಲಿ ನಾವೇನೂ ಅದನ್ನು ತಂದೊಡ್ಡಿದುದಲ್ಲ ತಮ್ಮೊಳಗಿರುವ ಜಾತಿ ಮತ್ತು ಪಂಗಡ ಕಲಹಗಳನ್ನು ಹಿಂದೀಯರೇ ಆದಷ್ಟು ಬೇಗ ನಿವಾರಿಸಿಕೊಳ್ಳಬೇಕು. ನಾವು ವಿಭಾಗಿಸಿ ಆಳುವ ಮಾತಂತಿರಲಿ, ಈ ಭೇದಗಳು ದೊಡ್ಡ ಅನಾಹುತವೆಂದು ಭಾವಿಸಿ ಅವುಗಳನ್ನು ನಿವಾರಿಸಲು ಬೇಕಾದ ಸಹಾಯವೀಯಲು ಸಿದ್ಧರಿದ್ದೇವೆ.

ಹಿಂದೀಯರೊಳಗಣ ಭೇದಗಳೇ ಕೇಂದ್ರದ ಆಡಳಿತದಲ್ಲಿ ಸ್ವತಂತ್ರವೀಯಲಿಕ್ಕೆ ಮತ್ತು ಇಡೀ ಹಿಂದೂದೇಶದ ಸಂಯುಕ್ತ ರಾಜ್ಯಾಂಗ ಘಟನೆಗೆ ದೊಡ್ಡ ತೊಡಕಾಗಿದೆ ಇಂದೀಗ ನಾವು ಹಿಂದೀ ಜನಮತವನ್ನು ತೃಪ್ತಿ ಪಡಿಸಲು ಇಂಡಿಯಾ ಆಕ್ಟಿನ ವ್ಯಾಪನೆಯೊಳಗೆ ಸಾಧ್ಯವಾದುದನ್ನೆಲ್ಲಾ ಮಾಡುವೆವು. ನಾನೇನೂ ಬಾಗಿಲನ್ನು ಮುಚ್ಚಿಬಿಡುವುದಿಲ್ಲ. ಮಿ. ಬೆನ್ನರು ಹೇಳಿರುವ ಹೆಚ್ಚಿನ ವಿಷಯಗಳಿಗೆ ನಾನೊಪ್ಪುವೆನು ಜನ ಪ್ರತಿನಿಧಿಗಳನ್ನು ಮಂತ್ರಿಗಳಾಗಿ ತೆಗೆದುಕೊಳ್ಳುವ ಕುರಿತು ಆಲೋಚಿಸಲಾಗುವುದು ವೈಸರಾಯರು ನೇಮಿಸಲಿರುವ ಜನಪ್ರತಿನಿಧಿಗಳ ಸಲಹೆಗಾರ ಕಮಿಟಿಯಿಂದ ಬಹಳ ಪ್ರಯೋಜನವಾಗಲಿದೆ. ವೈಸರಾಯರು ಅದನ್ನು ಸಂಪೂರ್ಣವಾಗಿ ಉಪಯೋಗಿಸಲಿರುವರೆಂದು ನಾನು ಆಶ್ವಾಸನೆ ಕೊಡುತ್ತೇನೆ ಆದರಿಂದ ಹಿಂದೂದೇಶದ ರಾಜಕೀಯ ಪ್ರಗತಿಯ ದಾರಿಯಲ್ಲಿರುವ ತೊಡಕು ನಿವಾರಿತವಾಗುವಂತಾಗಬಹುದು. ಹಿಂದೀ ಪ್ರತಿನಿಧಿಗಳು ಈ ಕಮಿಟಿಯ ಮೂಲಕ ಒಟ್ಟು ಸೇರಿ ನಡೆದು ತಮ್ಮ ಭಿನ್ನಭೇದಗಳನ್ನು ಮೂಲೆಗೊತ್ತುವಂತಾಗಬಹುದು. ಇಂತಹದೇ ರೀತಿಯಲ್ಲಿ ಹಿಂದೀ ಪ್ರತಿನಿದಿಗಳ ಸಲಹೆ ಪಡೆಯಬೇಕೆಂಬ ಕಟ್ಟುನಿಟ್ಟನ್ನೇನೂ ವೈಸರಾಯರು ಮಾಡಿಕೊಂಡಿಲ್ಲ ಎಲ್ಲಾ ವಿಷಯಗಳನ್ನವರು ಹಿಂದೀ ರಾಜಕೀಯ ಮುಖಂಡರೊಡನೆ ಮಾತಾಡಿ ನಿಶ್ಚೈಸುವರು. ಈ ಕುರಿತು ಇನ್ನೊಮ್ಮೆ ಅವರನ್ನೆಲ್ಲಾ ಆಮಂತ್ರಿಸಿ ಮಾತಾಡಲಿದ್ದಾರೆ ಯಾವುದಾದರೊಂದು ರಾಜಿಯಿಂದ ತೀರ್ಮಾನವಾಗಲು ಸಾಧ್ಯವಾಗದೆ ಇಂಡಿಯನ್ ನೇಶನಲ್ ಕಾಂಗ್ರೆಸಿನವರು ಅಸಹಕಾರ ಚಳವಳ ಹೂಡಿ ತಮ್ಮದೇ ಮಾರ್ಗ ಹಿಡಿದರೆ, ಬ್ರಿಟಿಷ್ ಸರಕಾರ ಮತ್ತು ಅಲ್ಪ ಸಂಖ್ಯಾಕರು ತಮ್ಮ ದಾರಿ ಹಿಡಿಯುವರು. ಅಂತಹ ಪರಿಸ್ಥಿತಿಯಲ್ಲಿ ಚಕ್ರವರ್ತಿ ಸರಕಾರವು ದಕ್ಷತೆಯಿಂದಲೂ, ಬಲವಾಗಿಯೂ ನ್ಯಾಯವಾಗಿಯೂ ನಡಿಸಲ್ಪಡುವುದು.

ಹಿಂದೂದೇಶದಲ್ಲಿ ಪುನಃ ಅಸಹಕಾರ ಚಳವಳವುಂಟಾಗುವಂತಾದರೆ, 'ನಾವು ಇಷ್ಟರವರೆಗೆ ನಡಿಸಿದ ಎಲ್ಲಾ ಪ್ರಯತ್ನಗಳೂ ನಿಷ್ಫಲವಾಗುವವು. ಇಂದೀಗ ಲೋಕವನ್ನಿದಿರಿಸಿರುವ ಅಭೂತ ಪೂರ್ವ ಬಿಕ್ಕಟ್ಟಿನ ಸಂದರ್ಭದಲ್ಲಿ, ಹಿಂದೂದೇಶದಲ್ಲಿ ಅಸಹಕಾರದ ಗಂಡಾಂತರವುಂಟಾದುದು ಅತ್ಯಂತ ಶೋಚನೀಯ. ಬ್ರಿಟಿಷ್ ಸರಕಾರವು ಇಂದು ಸಹಕಾರವನ್ನಲ್ಲದೆ ಕಲಹವನ್ನು ಹಾರೈಸುತ್ತಿರುವುದಿಲ್ಲ. ನಾವು ನಮ್ಮ ಸಾಮ್ರಾಜ್ಯ ಕಾಂಕ್ಷೆಗಳನ್ನು ಬಹಳ ಹಿಂದೆಯೇ ಬಿಟ್ಟುಬಿಟ್ಟಿದ್ದೇವೆ. ಲೋಕದಲ್ಲಿ ನಮ್ಮ ಕರ್ತವ್ಯವು ಇತರರನ್ನು ಆಳುವುದಿಲ್ಲ. ಅವರು ತಮ್ಮನ್ನಾಳಿಕೊಳ್ಳುವಂತೆ ನೆರವಾಗುವುದು ಅಸಹಕಾರವು. ಶೀಘ್ರ ರಾಜಕೀಯ ಪ್ರಗತಿಯನ್ನು ತಡೆಗಟ್ಟುವುದು. ಈ ಯುದ್ಧದ ಪರಿಣಾಮ ಏನೇ ಆಗಲಿ, ಆದರಿಂದ ಲೋಕದಲ್ಲಿ ಮಹತ್ತಾದ ಮಾರ್ಪಾಟವಾಗುವುದರಲ್ಲಿ ಸಂದೇಹವೇ ಇಲ್ಲ. ಆ ಮಾರ್ಪಾಟತನವೀಗ ಲೋಕರಚನೆಯಲ್ಲಿ ಹಿಂದೂದೇಶದ ಸ್ಥಾನವು ಮಹತ್ವದ್ದಿದೆ. ತಲತಲಾಂತರಗಳವರೆಗೆ ಯುದ್ಧವು ಬಹಿಷ್ಕೃತವಾಗಿ ನ್ಯಾಯ ಮತ್ತು ಸುವ್ಯವಸ್ಥೆಯ ಆಳ್ವಿಕೆಯು ಸ್ಥಿರವಾಗಿ ನೆಲೆಗೊಳ್ಳುವ ಕೂಟಕ್ಕೆ ಹಿಂದೂದೇಶವು ಒಂದು ಮಾದರಿಯಾಗಿ ನಿಲ್ಲುವಂತಾಗಲೆಂದು ನಮ್ಮೆಲ್ಲರ ಮಹತ್ತಾದ ಹಾರೈಕೆಯೆಂದೇ ಸರ್. ಸಾಮುವೇಲ್ ಹೋರರ ಭಾಷಣದ ಮುಖ್ಯಾಂಶ.

ನ ವ ಯು ಗ

ನೋಟೀಸು.

ನವಯುಗದ ಚಂದಾಹಣ, ಜಾಹೀರಾತಿನ ಹಣ, ಪತ್ರಿಕೆ ಮಾರಾಟದ ಹಣ ಮೊದಲಾದ ಯಾವತ್ತೂ ಹಣವನ್ನು ಮೆನೇಜರ್ ನವಯುಗ, ಉಡುಪಿ ಕಳಿಸಬೇಕು, ಯಾವ ಖಾಸಗಿ ವಿಳಾಸಕ್ಕಾದರೂ ಕಳಿಸಬಾರದು. ಹಾಗೆ ಖಾಸಗಿ ವಿಳಾಸಕ್ಕೆ ಕಳಿಸಿದ್ದಾದರೆ ನಾವು ಹೊಣೆಯಲ್ಲ

ಉಡುಪಿ,
ತಾ 1-11-'39.

ಮೆನೇಜರ್.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು

ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

ಮಂಗಳೂರು

ಸ್ವಂ. ಬಾ ತಾ 30-10-39.

ಹೊಸ ಜಿಲ್ಲಾ ಕಲೆಕ್ಟರರು—ದ ಕನ್ನಡ ಜಿಲ್ಲಾ ಕಲೆಕ್ಟರ್‌ರವರಾಗಿದ್ದ ಶ್ರೀ ಸಿ. ಪಿ ಕರುಣಾಕರ ಮೆ.ನನ್‌ರವರು ಕುಂದಾಪುರದ ಸಬ್ ಕಲೆಕ್ಟರರಾಗಿ ನೇಮಕ ಹೊಂದಿರುವರು. ಇವರ ಸ್ಥಾನದಲ್ಲಿ ಮಿ. ಎ. ಸಿ ಉಡ್‌ಹೌಸ್ ಸಾಹೇಬರು ಜಿಲ್ಲಾ ಕಲೆಕ್ಟರರಾಗಿ ನೇಮಿಸಲ್ಪಟ್ಟು ಚಾರ್ಜು ವಹಿಸುವರು.

ಅಪಘಾತಗಳು—ಹೋದವಾರ ಇನ್‌ಶೂರೆನ್ಸ್ ಏಜಂಟರಾದ ಶ್ರೀ ಶ್ರೀಧರರಾಯರು ಮೋಟರ್ ಸೈಕಲಿನಲ್ಲಿ ಹೋಗುತ್ತಿದ್ದಾಗ ಇದಿರುಗಡೆ ಒಂದು ಮೋಟರ್ ಬರಲು ಪಕ್ಕನೆ ತನ್ನ ಸೈಕಲ್ ನಿಲ್ಲಿಸಲಾಗಿ ಅದು ಪಕ್ಕನೆ ಮುಂದಕ್ಕೆ ಹಾರಿ ಅವರು ಆಳವಾದ ಚರಂಡಿಗೆ ಬಿದ್ದು ವಿಪರೀತ ಗಾಯ ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಅವರ ದೇಹಸ್ಥಿತಿಯು ಸುಧಾರಿಸುತ್ತಿದೆ.

ಮೊನ್ನೆ ವಿಜಯ ದಶಮಿ ದಿವಸ ಶ್ರೀ ಮಂಗಳಾದೇವಿ ದೇವಸ್ಥಾನದ ಸಮೀಪ ಜನರ ನೂಗ್ಗಾಟದಿಂದ ಒಂದು ಕಂಭ ಜರಿದು ಬಿದ್ದು ಅದರ ಅಡಿಗೆ ಬಿದ್ದು ಓರ್ವ ಪ್ರೋ. ಕ್ರಿಸ್ತ ಬಾಲಕನು ಮಡಿದನು. ಮತ್ತೊಬ್ಬನು ಆಸ್ಪತ್ರೆಗೆ ಸಾಗಿಸಲ್ಪಟ್ಟನು. ಇನ್ನು ಕೆಲವರಿಗೆ ಜಖಂ ಆಗಿದೆಯೆಂದು ತಿಳಿದು ಬರುತ್ತದೆ.

ಉದಾರದಾನ—ಸ್ಥಳೀಯ ದೀನ ಬಂಧು ಅನಾಥಾಶ್ರಮದ ಸಹಾಯಾರ್ಥವಾಗಿ ದಾನವೀರ ಸೇಠ್ ಜ್ಯುಗಲ್ ಕಿಶೋರ ಬಿರ್ಲಾರವರು ಆ ಹರಿಜನ ಸೇವಾ ಸಂಘದ ಅಧ್ಯಕ್ಷರ ಮೂಲಕ ರೂ 100ನ್ನು ಕಳುಹಿಸಿರುವರು. ಈ ಮೊದಲು ಇವರು ಇದೇ ಆಶ್ರಮಕ್ಕೆ ರೂ. 50ನ್ನು ಕೊಟ್ಟಿದ್ದರೆಂದು ತಿಳಿದು ಬರುತ್ತದೆ.

"ಕರ್ನಾಟಕ ಏಕೀಕರಣವೂ ಕನ್ನಡ ವಾಙ್ಮಯವೂ" ಕಳೆದ ಶುಕ್ರವಾರ ಸಾಯಂಕಾಲ ಗವರ್ನಮೆಂಟ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ ಕೆ. ಕೃಷ್ಣರಾವ್, ಇವರು ಮೇಲಿನ ವಿಷಯವಾಗಿ ಭಾಷಣ ಮಾಡಿದರು. ಕರ್ನಾಟಕ ಏಕೀಕರಣವು ಬಹಳ ಮುಖ್ಯವೆಂದೂ ಆದರೆ, ಕರ್ನಾಟಕವು ಬೇರೆ ಬೇರೆ ಆಡಳಿತಗಳಿಗೆ ಸೇರಿದ್ದರಿಂದ ಅದನ್ನು ಕೂಡಲೆ ಸಾಧಿಸುವುದು ಪ್ರಯಾಸವೆಂದೂ, ಅದಕ್ಕಿಂತ ಮೊದಲು ಕರ್ನಾಟಕ ಭಾಷೆಯ ಏಕೀಕರಣಕ್ಕೆ ಪ್ರಯತ್ನ ಮಾಡಬೇಕೆಂದೂ, ಇದಕ್ಕೆ ರಾಜಕೀಯ ಆತಂಕಗಳು ಬರುವುದಿಲ್ಲವೆಂದೂ, ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳನ್ನೂ, ಇತರರನ್ನೂ ಬೇರೆ ಕಡೆಗಳಿಗೆ ಕರೆಸಿ ಉಪನ್ಯಾಸಗಳನ್ನು ಮಾಡಿಸುವುದು, ಪತ್ರಿಕೆಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಗಳವರನ್ನೇ ಬಾತ್ಮೀದಾರರನ್ನಾಗಿ ನೇಮಿಸಿ ಆ ಜಿಲ್ಲೆಯ ಕನ್ನಡದ ಪರಿಚಯವನ್ನು ವಾಚಕರಿಗೆ ಮಾಡಿಸಿಕೊಡುವುದು, ಕನ್ನಡ ಪಠ್ಯಪುಸ್ತಕಗಳಲ್ಲಿ ಬೇರೆ ಬೇರೆ ಜಿಲ್ಲೆಗಳವರು ಬರೆದ ಬರೆಹಗಳನ್ನು ಸಂಗ್ರಹಿಸಿ ಪ್ರಕಟಿಸುವುದು—ಈ ಮೂಲಕ ಕನ್ನಡ ಭಾಷೆಯಲ್ಲಿ ಐಕ್ಯತೆಯನ್ನುಂಟು ಮಾಡಬಹುದೆಂದೂ, ಇದು ಏಕೀಕರಣದ ಚಳವಳಿಯನ್ನು ಬಲಪಡಿಸುವುದೆಂದೂ ಹೇಳಿ, ಫ್ರಾಂಕದ ಏಕೀಕರಣದಿಂದ ವಾಙ್ಮಯದ ಏಳಿಗೆಯು ಹೇಗಾಗುವುದೆಂಬುವನ್ನೂ ವಿವರಿಸಿದರು. ಕಾರ್ಯದರ್ಶಿಗಳ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ದುಃಖಸೂಚಕ ಸಭೆ—ನಿನ್ನೆಯ ದಿವಸ ರಾತ್ರಿಕಾಲ ಶ್ರೀ. ಕಡೆಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಮಿತ್ರಮಂಡಲಿಯ ಸಭೆ ಸೇರಿ, ದಿವಂಗತ ಪೇಜಾವರ ಸದಾಶಿವರಾಯರ ಅಕಾಲ ನಿಧನಕ್ಕೆ ದುಃಖವನ್ನು ಸೂಚಿಸಿ ಠರಾವು ಮಾಡಲಾಯಿತು.

ನೈಸರಾಯಿಗಳ ಪ್ರಕಟನೆಯ ಖಂಡನೆ—ನಿನ್ನೆಯ ದಿನ ಸಾಯಂಕಾಲ ಮಂಗಳೂರು ಪುರಜನರ ಸಭೆಯು ಶ್ರೀ ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು. ಕಾಂಗ್ರೆಸಿನ ಪರ ಪ್ರಶ್ನೆಗೆ ನೈಸರಾಯಿಗಳು ಕೊಟ್ಟ ಪ್ರಕಟಣೆಯು ಅಸಮಾಧಾನಕರವೆಂದು ಶ್ರೀ ಜಿನರಾಜ ಹೆಗ್ಡೆಯವರೂ, ಎಂ. ಎಸ್. ಸಿ. ಪಾಯಸರವರೂ ಮೊದಲಾದವರು ಭಾಷಣಮಾಡಿ ಕಾಂಗ್ರೆಸಿನವರು ಈಗ ಕೈಕೊಂಡ ಧೋರಣೆಯು ಸರಿಯೆಂದೂ ಅದಕ್ಕೆ ಸಭೆಯು ಬೆಂಬಲಕೊಡುತ್ತದೆಂದೂ ತಿಳಿಸಿದರು. ಪೋಲೀಸ್ ರಿಪೋರ್ಟರರು ಹಾಜರಿದ್ದರು.

ಉಡುಪಿ

ಲೋಕಲ್‌ಫಂಡ್ ಆಡಳಿತಕ್ಕೊಳಪಟ್ಟ ಗುಂಡಿಯೂ ಇನ್ಸ್‌ಪೆಕ್ಷನ್ ಶೆಡ್ ಮತ್ತು ಸೋಮೇಶ್ವರದ ಛತ್ರವು ಪ್ರಕೃತ ಪ್ರಯಾಣಿಕರಿಗೆ ತಂಗುವರೆ ಸಿಗಲಾರದೆಂದೂ ಈ ಸ್ಥಳಗಳು ಪ್ಲೇಗಿನ ಹಾವಳಿಯನ್ನು ತಡೆಗಟ್ಟಲು ನೇಮಿಸಲ್ಪಟ್ಟ ಪ್ಲೇಗ್ ಸ್ಟಾಫಿನವರ ಸೌಕರ್ಯಗಳಿಗೆ ಬಿಡಲಾಗಿದೆಯೆಂದೂ ಜಿಲ್ಲಾ ಬೋರ್ಡು ಇಂಜಿನಿಯರರು ತಿಳಿಸುತ್ತಾರೆ.

ಸಂಭಾವನೆ—ಕೆಲವು ಸಮಯದ ಹಿಂದೆ ಇಲ್ಲಿಯ ಯಸ್. ಯಮ್. ಯಸ್. ಪಿ. ಸಂಸ್ಕೃತ ಮಹಾಪಾಠಶಾಲೆಯಲ್ಲಿ ದ್ವೈತವೇದಾಂತವನ್ನು ಕಲಿತು ಮದ್ರಾಸ್ ಯುನಿವರ್ಸಿಟಿ ಶಿರೋಮಣಿ ಪರೀಕ್ಷೆಯಲ್ಲಿ ಉತ್ತಮ ತರಗತಿಯಲ್ಲಿ ಪಾಸಾಗಿ ಪ್ರೆಸಿಡೆನ್ಸಿ ಫಸ್ಟಾಗಿ ಅನೇಕ ಬಹುಮಾನಗಳನ್ನು ಪಡೆದ ಶ್ರೀ ಮ. ಶಿ. ಸಂ ಕಳತೂರು ರಾಮಕೃಷ್ಣ ತಂತ್ರಿಗಳು ಕೆಲಸಮಯ ಸದ್ರಿ ಶಾಲೆಯಲ್ಲೇ ರಿಸರ್ಚ್ ವಿದ್ಯಾರ್ಥಿಯಾಗಿ ಗವರ್ನಮೆಂಟಿನವರಿಂದ ನೇಮಿಸಲ್ಪಟ್ಟಿದ್ದರು. ಶ್ರೀಯುತರು ಮೊನ್ನೆ ತಾನೇ ನಡೆದ ಮೈಸೂರು ವಿದ್ವತ್ಪರೀಕ್ಷೆಗೆ ಹೋಗಿ ದ್ವೈತವೇದಾಂತ ವಿಭಾಗದಲ್ಲಿ ಉತ್ತಮ ತರಗತಿಯಲ್ಲಿ ಪಾಸಾಗಿ ಶ್ರೀಮನ್ಮಹಾರಾಜರವರಿಂದ ರೂ. 300-0-0 ಮತ್ತು ಒಂದು ಥಂಗಾರದ ಮುಂಗೈಸರಪಣಿಯನ್ನೂ ಬಹುಮಾನವಾಗಿ ಪಡೆದಿರುವರು. ಇವರು ಇನ್ನೂ ಹೆಚ್ಚಾಗಿ ಪರಿಶ್ರಮಿಸಿ ನಮ್ಮ ನಾಡಿನ ಪಂಡಿತಮಂಡಲಿಯನ್ನಲಂಕರಿಸಲೆಂದೂ, ಆಯುರಾರೋಗ್ಯಭಾಗ್ಯದಿಂದ ಯುಕ್ತರಾಗಲೆಂದೂ ಹಾರೈಕೆ.

ತಾಲೂಕು ಎಡ್ಯುಕೇಶನಲ್ ಎಡ್ವೈಸರಿ ಕಮಿಟಿಯ ಸಭೆ—ಈ ಸಭೆಯು ಆದಿತ್ಯವಾರ ತಾಲೂಕು ಡಿಪ್ಯುಟಿ ಇನ್ಸ್‌ಪೆಕ್ಟರರ ಆಫೀಸಿನಲ್ಲಿ ಪ್ರೆಸಿಡೆಂಟ ಶ್ರೀ ಕೆ ಟಿ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಮೂಡುಕುದ್ರು, ಪಡುಬಿದ್ರಿ, ಬೋರ್ಕಟ್ಟೆ ಎಣ್ಣಾಡಿ, ಬಡಗಬೆಟ್ಟು ಆದಿದ್ರಾವಿಡ, ಕೋಟ ಆದಿದ್ರಾವಿಡ ಮೊದಲಾದ ಶಾಲೆಗಳಿಗೆ ಐದನೇ ಕ್ಲಾಸನ್ನು ಖಾಯಂ ಮಾಡಬಹುದಾಗಿ ಜಿಲ್ಲಾ ಎಡ್ಯುಕೇಶನಲ್ ಆಫೀಸರರ ಶಿಫಾರಸು ಮಾಡಿದ್ದರು. ಆದಿದ್ರಾವಿಡ ಶಾಲೆಗಳ ಹಿನಃ ಇತರ ಶಾಲೆಗಳಿಗೆ ಹಂಗಾಮಿಯಾಗಿ ಐದನೇ ಕ್ಲಾಸುಗಳನ್ನು ನಡಿಸುವರೆ ರಿಕೊಮ್ಮೆಂಡೇಶನ್ ಕೊಡಲಾಯಿತು.

ಹರಿಕತೆ—ತಾ. 27 10-39ರಿಂದ ನವಂಬರ 22ರ ತನಕ ಸ್ಥಳೀಕ ಶ್ರೀ. ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ವಿಟ್ಠಲ ಶಂಕರನ ರಾಯರ ಗಾಮಗರು ಶ್ರೀಮನ್ಮಹಾಭಾರತವನ್ನು ಹರಿಕೀರ್ತನೆ ಮಾಡುವರು.

ಉಡುಪಿ ಮುನ್ಸಿಪಾಲ್ ಜಿಮ್ಖಾನಾ ಕಮಿಟಿಯ ಆಶ್ರಯದಲ್ಲಿ ವರ್ಷಂಪ್ರತಿ ನಡೆಯುವ ಟೌನ್ ಟೀಮುಗಳ ಕ್ರಿಕೆಟ ಪಂದ್ಯಾಟವು 23 10-39ರಲ್ಲಿ ಕಾರ್ಕಳ ಟೌನ್ ಟೀಮು ಮತ್ತು ಉಡುಪಿ ಟೌನ್ ಟೀಮುಗಳೊಳಗೆ ನಡೆಯಿತು. ಸದ್ರಿ ಪಂದ್ಯಾಟದಲ್ಲಿ ಎರಡನೇಯವರು ಜಯಶಾಲಿಗಳಾದರು. ಕಳೆದ ತಾ 26ರಲ್ಲಿ ಉಡುಪಿ ಟೌನು ಟೀಮು ಬಿ. ಮತ್ತು Y M. C. A ಟೀಮುಗಳೊಳಗೆ ನಡೆದ ಪಂದ್ಯಾಟದಲ್ಲಿ ಎರಡನೇಯವರು ಗೆದ್ದರು. ತಾ 30 10 39ರಲ್ಲಿ ವಿಜಯಿಗಳಾದ ಎರಡು ಟೀಮುಗಳೊಳಗೆ ಕೊನೆಯ ಪಂದ್ಯಾಟವಾಗಿ ಉಡುಪಿ ಟೌನು ಟೀಮಿನವರು ಜಯಶಾಲಿಗಳಾಗಿ ಈ ವರ್ಷದ 'ಕಪ್' ಪಡೆಯಲು ಅರ್ಹರಾಗಿರುವರು. (ಮೊದಲನೆ ಇನ್ನಿಂಗ್ಸಿನಲ್ಲಿ ಉಡುಪಿಗೆ ರನ್ನುಗಳು 34, Y M C A.ಯವರಿಗೆ 86, II ಇನ್ನಿಂಗ್ಸಿನಲ್ಲಿ ಉಡುಪಿ ಟೀಮಿಗೆ 119, Y M C. A ಯವರಿಗೆ 50 ಸ್ಕೋರ್ ಸಿಕ್ಕಿರವಾಸು) ಗೆದ್ದ ಆಟಗಾರರಿಗೂ ಕಪ್ತನ್ ಶ್ರೀ ಕಣ್ಣನ್ ಸಂಬಿಯಾರರಿಗೂ ನಮ್ಮ ಅಭಿವಂದನೆಗಳು.

ಕೊಚ್ಚಿಕಾಡ್ ವಾಸುದೇವ ಪೈಗಳ ಮರಣ—ಉಡುಪಿಯ ಪ್ರಸಿದ್ಧ ವಕೀಲರಾದ ಶ್ರೀ ಕೆ. ರಮಾನಾಥ ಪೈಗಳ ಪುತ್ರರೂ ಉಡುಪಿಯಲ್ಲಿ ಸರೀಫರೂ ಆಗಿದ್ದ ಶ್ರೀ. ವಾಸುದೇವ ಪೈಗಳು ಬೊಂಬಾಯಿಯಲ್ಲಿ ಅಪೆಂಡಿಸೈಟಿಸ್ ರೋಗದಿಂದ ಮೃತರಾಗಿರುವರೆಂಬ ದುಃಖಕರ ವಾರ್ತೆ ಬಂದಿದೆ. ಮೃತರ ದುಃಖಿತ ಕುಟುಂಬದೊಂದಿಗೆ ನಾವೂ ಸಂತಾಪವನ್ನು ವ್ಯಕ್ತಗೊಳಿಸುವೆವು.

ಶ್ರೀ ನರಸಿಂಹ ಶೆಟ್ಟರ ನಿಧನ—ದಿವಂಗತ ಕುತ್ಪಾಡಿ ಮುದ್ದಣ್ಣ ಶೆಟ್ಟರ ಹಿರಿಯ ಮಗ ಕೆ ಅನಂತ ಶೆಟ್ಟರ ಅಳಿಯ ಶ್ರೀ ನರಸಿಂಹ ಶೆಟ್ಟರು ಸ್ವಲ್ಪ ಸಮಯದಿಂದ ಟೈಫಾಯಿಡ್ ರೋಗದಿಂದ ಹಾಸಿಗೆ ಹಿಡಿದು ತಾ 20ನೇ ಮುಂಜಾನೆ ಅಕಸ್ಮಿಕವಾಗಿ ಮೃತರಾಗಿರುವರೆನ್ನಲು ಅತ್ಯಂತ ವಿಷಾದಪಡುತ್ತೇವೆ. ಇವರು ಕೇವಲ 21 ವರ್ಷದ ತರುಣರಿದ್ದು ಸ್ಥಳೀಯ ಕೆನರಾ ಬ್ಯಾಂಕಿಂಗ್ ಕೊಪರೇಶನಿನಲ್ಲಿ ಉತ್ಸಾಹ ಮತ್ತು ಮನಃಪೂರ್ವಕ ಕೆಲಸ ಮಾಡುವ ಕ್ಲಾರ್ಕರಾಗಿದ್ದರು. ಇವರು ಸಮಯೋಚಿತಕ್ಕೆ ಬೇರೆ ಬೇರೆ ರೀತಿಗಳಿಂದ ಜನ ಸಹಾಯ ಮಾಡಿಕೊಂಡಿದ್ದರು. ಇವರ ನಿಧನದಿಂದ ಇವರ ಬಂಧುಬಳಗದವರೆಲ್ಲರಿಗುಂಟಾಗಿರುವ ಅಪಾರ ದುಃಖದಲ್ಲಿ ನಾವೂ ಪಾಲುಗಾರರಾಗಿದ್ದೇವೆ.

ಅತ್ಯಂತ ವಿಷಾದಕರ ಮರಣ—ಉಡುಪಿಯ ಬರ್ಮಾಶೆಲ ಏಜಂಟ್, ಕೆನರಾ ಬೇಂಕಿಂಗ್ ಕೊಪರೇಶನಿನ ಡೈರೆಕ್ಟರರೂ ಶ್ರೀಮಂತ ಪ್ರಮುಖ ಸಾರಸ್ವತ ಗೃಹಸ್ಥರೂ ಆದ ಶ್ರೀ. ತಿಮ್ಮಣ್ಣ ರಾಮರಾಯರು ಇದೇ ತಾ. 1ನೇ ಮುಂಜಾನೆ ಅದೇನೊ ಕಾರಣದಿಂದ ಬಾವಿಗೆ ಬಿದ್ದು ಮೃತರಾಗಿರುವುದು ಅತ್ಯಂತ ವಿಷಾದಕರವಿದೆ. ಅಕಸ್ಮಿಕವಾಗಿ ತೀವ್ರ ದುಃಖಕ್ಕೊಳಗಾಗಿರುವ ಮೃತರ ಪತ್ನಿ ಮತ್ತು ಇತರ ಬಂಧುಬಳಗದವರೊಡನೆ ನಾವು ಸಹಾನುಭೂತಿಪಡುತ್ತೇವೆ.

ಶ್ರೀ. ಹಳ್ಳನಾಡು ಮಾದಪ್ಪಯ್ಯನವರ ಶೋಚನೀಯ ನಿಧನ—ಕುಂದಾಪುರ ತಾಲೂಕಿನ ಸುಪ್ರಸಿದ್ಧ ವರ್ಗದಾರರೂ, ಮಾಜಿ ತಾಲೂಕ ಬೋರ್ಡ ಪ್ರೆಸಿಡೆಂಟರೂ ಪ್ರತಿಷ್ಠಿತ ದ್ರಾವಿಡ ಬ್ರಾಹ್ಮಣರೂ ಆದ ಶ್ರೀ ಹಳ್ಳನಾಡು ಮಾದಪ್ಪಯ್ಯನವರು ತಮ್ಮ 72ನೇ ವಯಸ್ಸಿನಲ್ಲಿ ತಾ. 24ನೇ ಒಕ್ಟೋಬರ ತಿಂಗಳಲ್ಲಿ ಬೆಳಗ್ಗೆ 10 ಘಂಟೆಗೆ ದಿವಂಗತರಾದರೆಂದು ಕೇಳುತ್ತೇವೆ. ಕಳೆದ ಒಂದು ವರ್ಷದೊಳಗೆ ಇವರ ಮಕ್ಕಳಾದ ಶ್ರೀ ಸೂರಪ್ಪಯ್ಯ ಮತ್ತು ರಾಮಪ್ಪಯ್ಯನವರು ದಿವಂಗತರಾಗಿದ್ದು ಅವರು ಪುತ್ರಶೋಕ ಪೀಡಿತರಾಗಿದ್ದರು. ಇವರ ನಿಧನದಿಂದ ಕುಟುಂಬಕ್ಕೆ ಅಪಾರ ಹಾನಿಯಾಯಿತು. ದ್ರಾವಿಡ ಬ್ರಾಹ್ಮಣ ಸಮಾಜಕ್ಕೆ ಅತಿ ನಷ್ಟವಾಯಿತು. ದಿವಂಗತರು ವಿದ್ಯಾವಂತರೂ ಸಾರ್ವಜನಿಕ ಸೇವಾಸಕ್ತರೂ ಆಗಿದ್ದರು. ಅಪಾರ ಶೋಕಕ್ಕೀಡಾದ ಇವರ ಪತ್ನಿ, ಪುತ್ರರ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ.

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಲೆಕ್ಕ ಪತ್ರಗಳು.

ಈ ಪ್ರಕಟವಾಗಿವೆಯಷ್ಟೆ! ಇವರಲ್ಲಿ ಸ್ಯಾಬರಕಟ್ಟೆ ಕಮಿಟಿಯ ಬಾಬ್ತು ರೂ 25 ನ್ನು ನಾನು ಕೊಡಬೇಕೆಂದಿರುತ್ತದೆ ಆಗಿನ ಕಮಿಟಿಯ ಅಧಿಕಾರಿ ವರ್ಗದವರಲ್ಲಿ ಕೆಲವರಿಗೂ ನನಗೂ ಒತ್ತಾಯವಿದ್ದು ಈ ರೂ. 25/ನ್ನು ಅದಕ್ಕೆ ಎಡ್ಜಸ್ಟ್‌ಮೆಂಟ್ ಮಾಡಬೇಕೆಂದು ತಿಳಿಸಿದ್ದೆ. ಆದರೆ ಯಾರೂ ಹಾಗೆ ಮಾಡಿ ರಶೀದಿ ಕೊಡಲಿಲ್ಲ. ಈಗ ಕಮಿಟಿಯು ಬದಲಾವಣೆಯಾದ್ದರಿಂದ ಈಗಿನ ಅಧಿಕಾರಿಗಳು ಯಾರಾದರೂ ನನಗೆ ರಶೀದಿ ಕೊಟ್ಟು ಈ ರೂ 25/ನ್ನು ವಸೂಲು ಮಾಡಿ ಕೊಂಡು ಹೋಗಬಹುದು.

ವರದಿಯ ಇನ್ನೊಂದೆಡೆ ರೂ 72/- ನನ್ನ ಹೆಸರಲ್ಲಿ ಸಿಂಡಿಕೇಟ್ ಬೇಂಕಿನಲ್ಲಿ ಇದೆ ಎಂತ ತಿದ್ದಿದೆ ಎಂದು ಕಾಣಿಸಲಾಗಿದೆ. ಪುಣ್ಯಕ್ಕೆ ಈ ತಿದ್ದುಪಡಿಗೆ ಲೆಕ್ಕ ಪರಿಶೋಧಕರಲ್ಲೊಬ್ಬರಾದ ಶ್ರೀ ವರದರಾಜ ಶರ್ಮರ ಒಪ್ಪಿಗೆಯಿಲ್ಲವೆಂದೂ ಪ್ರಕಟವಾಗಿದೆ. ಇದರಿಂದಲೇ ಈ ತಿದ್ದುಪಡಿಯ ಸುಳ್ಳೆಂದು ಸ್ಪಷ್ಟವಾಗುವುದಾದರೂ ನಾನದನ್ನು ಇನ್ನಷ್ಟು ಸ್ಪಷ್ಟವಾಗಿ ಸುಳ್ಳೆಂದು ಹೇಳಬೇಕಾಗಿದೆ. ನನ್ನ ಹೆಸರಲ್ಲಿ ಕಾಂಗ್ರೆಸ್ ಕಮಿಟಿಯ ಬಾಬ್ತು ಸಿಂಡಿಕೇಟ್ ಬ್ಯಾಂಕಿನಲ್ಲಾಗಲೀ ಇತರ ಬ್ಯಾಂಕಿನಲ್ಲಾಗಲೀ ಏನೊಂದೂ ಇರುವುದಿಲ್ಲ. ನನಗೂ ಕಮಿಟಿಗೂ ಸಂಬಂಧವೇ ಇಲ್ಲ. ನಾನು ಬೇರೆ ಹಣ ಕಮಿಟಿಗೆ ಕೊಡತಕ್ಕದೂ ಇರುವುದಿಲ್ಲ.

ಉಡುಪಿ,
ತಾ 31 10-1939

ಕೆ. ಹೊನ್ನಯ್ಯ ಸೆಟ್ಟಿ.

ಶ್ರೀ ಪೇಜಾವರ ಸದಾಶಿವರಾಯರ ನಿಧನ—ನಮ್ಮ ಜಿಲ್ಲೆಯ ಪ್ರಸಿದ್ಧ ತರುಣ ಸಾಹಿತಿಗಳಾದ ಶ್ರೀ ಪೇಜಾವರ ಸದಾಶಿವರಾಯರು ವಿದ್ಯಾವ್ಯಾಸಂಗಕ್ಕಾಗಿ ಇಟೆಲಿಗೆ ಹೋಗಿದ್ದವರು ಅಲ್ಲಿ 'ಎಪೆಂಡಿಕ್ಯುಲರ್ ಏಬ್‌ಸೆಸ್' ರೋಗಕ್ಕೆ ತುತ್ತಾಗಿ ತಾ 18-10-'39ರಲ್ಲಿ ಅಲ್ಲಿಯೇ ದೈವಾಧೀನರಾದರೆಂಬ ಶೋಚನೀಯ ವಾರ್ತೆ ಬಂದಿದೆ. ಇವರು ಇಟೆಕ್ನಿಕಲ ಇಂಜನೀಯರಿಂಗಿನಲ್ಲಿ ವ್ಯಾಸಂಗಮಾಡುತ್ತಿದ್ದು ಅದನ್ನು ಪೂರೈಸಿ ಸಧ್ಯದಲ್ಲೇ ಹಿಂದುಸ್ಥಾನಕ್ಕೆ ಬರುವವರಿದ್ದರು. ಇವರ ನಿಧನದಿಂದ ಪ್ರತಿ ಕನ್ನಡಿಗನೂ ಮರುಗುವಂತಾಗಿದೆ. ಕನ್ನಡಕ್ಕೆ ಅಪಾರ ನಷ್ಟವಾಗುವಂತಾಯಿತು. ಪೌರ್ವಾತ್ಯ ಪಾಶ್ಚಿಮಾತ್ಯ ಸಾಹಿತ್ಯ ಸಂಸ್ಕೃತಿಗಳಲ್ಲಿ ನಿಷ್ಣಾತರಿದ್ದರು. ಇವರ ಸಾಹಿತ್ಯೋತ್ಸವವು ನಿಸ್ಸೀಮವಾಗಿತ್ತು. ದಿವಂಗತರ ಪತ್ನಿ, ಮಗು ಮತ್ತು ಬಂಧುಗಳೆಲ್ಲರ ದುಃಖದಲ್ಲಿ ನಮ್ಮ ಸಹಸಂತಾಪವಿದೆ.

ಮೈಸೂರು

ಮೈಸೂರು ಹೊರ್ಟಿಕಲ್ಚರಲ್ ಸೊಸೈಟಿಯ ಗಾರ್ಡನ್ ಕೊಂಪಿಟೀಶನ್ ತಾ 17-10-39ಕ್ಕೆ ನಡೆಯಿತು. ಇದರಲ್ಲಿ ಗಾರ್ಡನ್ ಹೋಟೆಲಿಗೆ ಎರಡನೇ ಬಹುಮಾನವು ಬಂದದ್ದಕ್ಕಾಗಿ ತಾ. 28 10 39ರಲ್ಲು ಎಕ್ಸಿಬಿಷನ್ ಗ್ರೌಂಡಿನಲ್ಲಿ ಪ್ರಿನ್ಸ್ ಜಯಚಾಮರಾಜೇಂದ್ರ ಒಡೆಯರ್ ಒಡೆಯರವರು ಗಾರ್ಡನ್ ಹೋಟೆಲಿನ ಪ್ರೊಪ್ರೈಟರರಾದ ಕೆ. ಗುರುರಾಜಾಚಾರ್ಯರವರಿಗೆ ಒಂದು ಬೆಳ್ಳಿಯ ಕಪ್ಪನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ. ಇವರು ಕಳೆದ 2 ವರ್ಷಗಳಿಂದಲೂ ಗಾರ್ಡನ್ ಕೊಂಪಿಟೀಶನಿಗೆ ನಿಂತು ಪ್ರತಿವರ್ಷವೂ ಬಹುಮಾನ ಪಡೆಯುತ್ತಿದ್ದಾರೆಂಬ ವಿಷಯವನ್ನು ತಿಳಿಸಲು ಬಹಳ ಆನಂದವಾಗುತ್ತದೆ.

ಬೊಂಬಾಯಿ

ಕೆನರಾ ಸ್ಟೂಡೆಂಟ್ಸ್ ಯುನಿಯನ್ ಮುಂಬಾಯಿ—ಇದೇ ತಾ. 10ಕ್ಕೆ ಜೋಗ ಫಾಲ್ಸ್ ಎಂಬಲ್ಲಿಗೆ ವಿನೋದ ಪ್ರಯಾಣ ಬೆಳೆಸಲಿಕ್ಕಾಗಿ ಸಕಲ ಏರ್ಪಾಡು ಮಾಡಿರುವುದರಿಂದ ಭಾಗವಹಿಸಲಿಚ್ಛಿಸುವ ಸದಸ್ಯರು ತಾ 8 11-39 ರೊಳಗೆ ಕಾರ್ಯದರ್ಶಿಗಳಿಗೆ ಬರೆಯಬಹುದು.

ಮೂಲ್ಕಿ—ತಾ. 22-10-39ರಲ್ಲಿ ಸ್ಥಳೀಕ "ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆ"ಯಲ್ಲಿ ಶಾರದಾಪೂಜೆಯು ಅತೀವ ವಿಜೃಂಭಣೆಯಿಂದ ನಡೆಯಿತು.

ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಬರುವ ತಾ. 4 11 39ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ ಕೊಜಿಕೋಡಿ ವಿದ್ಯಾಪ್ರಚಾರಿಣೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಲಿರುವುದು.

ಪುತ್ತೂರು

ಪುತ್ತೂರಿನ ದಸರಾ ಮಹೋತ್ಸವಕ್ಕೆ ದಯಮಾಡಿದ್ದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ ವಿ. ಸೀತಾರಾಮಯ್ಯ, ಶ್ರೀಮಾನ್ ಬೇಂದ್ರೆ, ಶ್ರೀ. ಗೋಕಾಕ, ಶ್ರೀ. ರಾಘವಾಚಾರ್, ಶ್ರೀ. ಜೋಶಿ ಇವರುಗಳು ಕಳೆದ ತಾ. 24 10 39ರಲ್ಲು ಶ್ರೀ. ಕೋ. ಶಿ ಕಾರಂತರ ಬಿಡಾರದಲ್ಲಿ ಇದ್ದ ಸಮಯದಲ್ಲಿ ಸ್ಥಳೀಕ ಯೂನಿಯನ್ ಕ್ಲಬ್ಬಿನ ನೇತೃತ್ವದಲ್ಲಿ "ಕರ್ನಾಟಕದ ಏಕೀಕರಣವೂ ಅದರ ಮುಂದಿರುವ ತೊಡಕುಗಳೂ" ಎಂಬ ವಿಷಯದ ಮೇಲೆ ಸೊಗಸಾದ ಹಾಗೂ ಹೃದಯಂಗಮವಾದ ಭಾಷಣಗಳನ್ನು ಕೊಟ್ಟರು.

ಸ್ಥಳೀಕ ಹೈಸ್ಕೂಲ್ ಕಟ್ಟಡದ ಕೆಲಸವು ಭರದಿಂದ ಸಾಗುತ್ತಿದೆ.

Advertisement Tariff

1 Page	Rs 25/	per insertion	
½ ,,	Rs. 15/-	,,	,,
¼ ,,	Rs 8/-	,,	,,
⅛ ,,	Rs 5/-	,,	,,

Per Single inch col Re 1 ,,
Contract rates on application
Manager **Navayuga UDIPI.**

ಬೊಂಬಾಯಿ

27-10-39

ಮುಂಬಯಿ ಎಸೆಂಬ್ಲಿ—ಮುಂಬಯಿ ಸರಕಾರದ ಮುಖ್ಯ ಮಂತ್ರಿಯವರಾದ ಶ್ರೀ. ಬಿ. ಜಿ. ಖೇರರವರು, ಕೋಂಗ್ರೆಸ್ ವರ್ಕಿಂಗ್ ಕಮಿಟಿಯ ಆಜ್ಞೆಯ ಮೇರೆಗೆ "ಯುದ್ಧ ಮತ್ತು ಇಂಡಿಯ" ಎಂಬ ಸಾಮ್ರಾಜ್ಯವಾದಿ ಯುದ್ಧದಲ್ಲಿ ಭಾರತದ ಅಭಿಪ್ರಾಯವನ್ನು ಸೂಚಿಸುತ್ತಿರುವ ಠರಾವನ್ನು ಅಸೆಂಬ್ಲಿಯಲ್ಲಿ ತಂದು ಇದರ ಕುರಿತಾಗಿ ಭಾಷಣಮಾಡುತ್ತಾ "ತಮ್ಮ ದೇಶಕ್ಕೆ ಕಂಟಕ ಬರುವ ಸಮಯದಲ್ಲಿ ಬ್ರಿಟಿಶಿನ ಜನರು ತಮ್ಮ ಮತಭೇದಗಳನ್ನು ತೊರೆದು ಏಕಕಂಠದಿಂದ ವೈರಿಗೆ ವಿರುದ್ಧ ಘರ್ಜಿಸುತ್ತಿರುವಂತೆ ನಾವು, ಭಾರತೀಯರೂ ಕೂಡ ನಮ್ಮಲ್ಲಿ ಬಹುಕಾಲದಿಂದ ನೆಲೆನಿಂತಿರುವ, ಮತಭೇದಗಳನ್ನೆಲ್ಲ ತೆಗೆದೊಗೆದು, ವೈರಿಯನ್ನಿದಿರಿಸಲು ಒಗ್ಗಟ್ಟಾಗಬೇಕು. ನಮ್ಮಲ್ಲಿ ಹಲವು ಪಾರ್ಟಿಗಳಿದ್ದಾರೆದು, ಒಂದು ದೇಶವು ಮಾತ್ರ ಇರಬೇಕು. ರಾಜಕೀಯ ನೀತಿಯ ಕುರಿತು, ಸ್ವಾತಂತ್ರ್ಯದ ಕುರಿತು ಯಾವ ಪ್ರಶ್ನೆ ಬಂದರೂ ಕೂಡ ಅಂಥಾ ಸಮಯದಲ್ಲಿ ಏಕವ್ಯಕ್ತಿಯಂತೆ ಒಂದೇ ಗಾಡಿಯಲ್ಲಿ ನಿಲ್ಲುವ ಆ ಶುಭದಿನವನ್ನು ನಾನು ಆತುರದಿಂದ ಈಕ್ಷಿಸುತ್ತಿದ್ದೇನೆ" ಎಂದು ಹೇಳಲು ಇವರ ವೇದವಾಕ್ಯಗಳನ್ನು ಕೇಳಿ ಅಸೆಂಬ್ಲಿ ಪೋಲಿನ ಹೊರಗೆ ನೆರೆದಿದ್ದ ಸಾವಿರಾರು ಜನರು ಸಂತೋಷದಲ್ಲಿ ಮೈಮರೆತು ಕುಣಿದಾಡತೊಡಗಿದರು. ಭಾರತೀಯರಲ್ಲಿರುವ ಉತ್ಸಾಹವನ್ನು ಆಂಗ್ಲ ಸರಕಾರವು ಕಣ್ಣಿಟ್ಟು ನೋಡಲಿ!

ಪಂಡಿತ ಜವಹರಲಾಲ ನೆಹರು—ಮುಂಬಯಿ ಅಸೆಂಬ್ಲಿಯಲ್ಲಿಂದು ಆಂದೋಲನ ನಡೆದಿದೆ. ಇದೇ ಆಂದೋಲನವು ಇಡೀ ಭಾರತದಲ್ಲೆಲ್ಲಾ ಹಬ್ಬಲಿದೆ ಪರದೆ ಬಿಟ್ಟೊಡನೆ ಮೊದಲನೆಯ ಅಂಕದ ಪ್ರಾರಂಭ ಇದರಂತೆಯೇ "ಸ್ವಾತಂತ್ರ್ಯ ಸಂಗ್ರಾಮದ" ಪರದೆಯು ಏರಿಸಲ್ಪಡುತ್ತಿದೆ. ಇದು ಎತ್ತಲ್ಪಡುವ ಮೊದಲು ಪ್ರತಿಯೊಂದು ಕೋಂಗ್ರೆಸ್ ಕಮಿಟಿಯೂ, ಪ್ರತಿಯೊಬ್ಬ ಕೋಂಗ್ರೆಸ್ ಸಭ್ಯನೂ ಸಂಗ್ರಾಮಕ್ಕೆ ಸಿದ್ಧರಾಗಿ ನಿಲ್ಲಬೇಕಿದ್ದು, 'ಪ್ರಜಾಸತ್ತೆ'ಯ ಹೆಸರಿಂದ ಆಂಗ್ಲಸರಕಾರವು ತನ್ನ ಸಾಮ್ರಾಜ್ಯಸತ್ತೆಯನ್ನು ರಕ್ಷಿಸಿಕೊಳ್ಳಲು ಯುದ್ಧ ಮಾಡುತ್ತಿದೆ. ಆ ಸಾಮ್ರಾಜ್ಯ ಸತ್ತೆಯನ್ನು ನಿರ್ನಾಮವಾಗಬೇಕೆಂದು ನೊಂದುಕೊಂಡಿರುವ ಭಾರತವು ಬ್ರಿಟಿಶರೊಡನೆ ಸೇರುವದೆಂತು.

ಸ್ವಾತಂತ್ರ್ಯ, ಸ್ವಾತಂತ್ರ್ಯವೆಂದು ಬೊಬ್ಬಿಡುತ್ತಿರುವ, ಮುಸ್ಲಿಂ ಲೀಗು, ಕೋಂಗ್ರೆಸು ಈಗ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವುದನ್ನು ಕಂಡು, ಕಡೆಗಟ್ಟುತ್ತಿದೆ. ಮುಸ್ಲಿಂ ಲೀಗಿನ ಸ್ವಾತಂತ್ರ್ಯ ಧ್ಯೇಯವು ಇದರಲ್ಲೇ ಕಂಡುಬರುತ್ತದೆ.

ಸ್ವಾತಂತ್ರ್ಯಯುದ್ಧಕ್ಕಾಗಿ ರಣಭೇರಿ ಬಾರಿಸಲಿನ್ನು ತಡವಿಲ್ಲ, ಆದ್ದರಿಂದ ಮುಂಬಯಿ ನಾಗರಿಕರೆಲ್ಲ ಸಂಗ್ರಾಮಕ್ಕಾಗಿ ಟೊಂಕಕಟ್ಟಿರುವರೆಂದು ಬಾವಿಸುತ್ತೇನೆ ಯುದ್ಧದ ಸಮಯದಲ್ಲಿ ನಮ್ಮ ಧ್ಯೇಯವಾದ ಸತ್ಯ ಮತ್ತು ಅಹಿಂಸೆಯನ್ನು ಮಾತ್ರ ಎಂದಿಗೂ ತೊರೆಯಬಾರದು ಎಂದು ಪಂಡಿತ ಜವಹರಲಾಲ ನೆಹರೂರವರು ಆಜಾದ ಮೈದಾನದಲ್ಲಿ ನೆರೆದಿದ್ದ 28ಸಾವಿರ ಜನರ ಮುಂದೆ ಭೀಷಣ ಭಾಷಣ ಮಾಡಿದರು.

ದಿ ದೇವಾಡಿಗ ಸುಧಾರಕ ಸಂಘ

ಮುಂಬಯಿ—ಈ ಮೇಲಿನ ಸಂಘದ ಚತುರ್ದಶ ವಾರ್ಷಿಕ ವರದಿ ಛಾಪಿಸಿದ ವರದಿಯಲ್ಲಿ ಶ್ರೀಯುತ ಸೂರಪ್ಪ ದೇವಾಡಿಗರ ಹೆಸರೂ ಅವರು ಕೊಟ್ಟ ವರ್ಗಣಿ ವಸೂಲು ರೂ. 1-4-0 ಅಲ್ಲದೆ ಬೆಲನ್ಸ್ ಸೀಟಿನಲ್ಲಿ ರೂ 6ನ್ನು ಬಿಟ್ಟುಹೋಗಿವೆ. ಇದು ಪ್ರಿಂಟ್ ತಪ್ಪೆಂದು ಹೇಳುವರೆ ತುಂಬಾ ಪಶ್ಚಾತ್ತಾಪಪಡುತ್ತೇವಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ

ಮೈಸೂರು

ಸ್ವ. ಬಾ. ತಾ 30-10-39.

ಮಹೋತ್ಸವ ಮತ್ತು ನಂತರ—ಕಳೆದ ಹದಿನೈದು ದಿನಗಳಿಂದ ಮೈಸೂರಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಮುಕ್ತಾಯಗೊಂಡವು. ಅತಿಥಿಗಳು ಮತ್ತು ಪ್ರೇಕ್ಷಕರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಲು ಇಂದು ಮೈಸೂರು ಬರಿದಾಗುತ್ತಿದೆ. ಕಳೆದ ಹದಿನೈದು ದಿನಗಳಿಂದ ಜರಗುತ್ತಿದ್ದ ವಸ್ತು ಪ್ರದರ್ಶನವು ಮುಕ್ತಾಯಗೊಂಡಿತು. ಪ್ರದರ್ಶನದಲ್ಲಿಟ್ಟಿದ್ದ ಬಹುಮಾನ ಪಡೆದ ವಸ್ತುಗಳ ಮಾಲಿಕರುಗಳಿಗೆ ಶ್ರೀ ಪ್ರಿನ್ಸ್ ಹಿಯುವರಾಜ ಒಡೆಯರವರು ಅಧ್ಯಕ್ಷತೆ ವಹಿಸಿ ಬಹುಮಾನ ಹಂಚಿ ಆನೋಘ ಭಾಷಣ ಮಾಡಿದರು. ಸುಪ್ರಸಿದ್ಧ ಚಾಮುಂಡಾಂಬಿಕೆ ರಥೋತ್ಸವವು ಯಶಸ್ವಿಯಾಗಿ ನಡೆಯಿತು. ಮಹಾ ಪ್ರಭುಗಳು ಸ್ವತಃ ಹಾಜರಿದ್ದು ರಜತ ಕೈಗಳಿಂದ ಚಾಮುಂಡಿ ತೇರನ್ನು ಎಳೆದರು. ಸಿಂಹವಾಹನ ಮತ್ತು ತೆಪ್ಪೋತ್ಸವವು ಚೆನ್ನಾಗಿ ನೆರವೇರಿತು. ಸಾವಿರಾರು ಜನರು ಹಾಜರಿದ್ದು ಇವೆಲ್ಲವನ್ನೂ ನೋಡಿ ಆನಂದ ಪಟ್ಟರು ಮೈಸೂರು ನಗರವು ಶಾಂತರೀತಿಯಿಂದಿದೆ.

ದೆಹಲಿಗೆ ಹೊರಟರು—ಇಂಡಿಯ ವೈಸರಾಯರ ಆಹ್ವಾನ ಮನ್ನಿಸಿ ಮೈಸೂರು ದಿವಾನರಾದ ಸರ್. ಮಿರ್ಜಾ ರವರು ಮುಂಜೈನ ಮಾಲಿಕ ದೆಹಲಿಗೆ ಪ್ರಯಾಣ ಬೆಳೆಸಿದರು ಸರ್. ಮಿರ್ಜಾ ರವರು ದೆಹಲಿಯಲ್ಲಿ ಏಳೆಂಟು ದಿನಗಳಿದ್ದು, ನಂತರ ವಾರ್ಧಾಕ್ಕೆ ಹೊರಟು ಮಹಾತ್ಮರನ್ನು ಭೇಟಿ ಮಾಡುತ್ತಾರೆಂದೂ ಮೈಸೂರು ರಾಜಕೀಯ ವಿಚಾರ ಚರ್ಚಿಸುತ್ತಾರೆಂದೂ ಹೇಳಲಾಗಿದೆ. (ಸರ್. ಮಿರ್ಜಾ—ವೈಸರಾಯ್ ಭೇಟಿಯು ಒಂದು ಚರಿತ್ರಾರ್ಹವಾದುದಾಗಿರುತ್ತದೆ. ಇವರ ಭೇಟಿ ನಡೆವುದು ವೈಸರಾಯರ ಭವನದಲ್ಲಿ. ದೆಹಲಿ ವಿಚಾರವಾಗಿ "ನವಯುಗ"ದ ತಾ. 30-3-39ನೇ ಸಂಚಿಕೆಯಲ್ಲಿ ಒಂದು ವಿಶೇಷ ಲೇಖನ ಬಂದಿದೆ, ಇದನ್ನು ವಾಚಕರು ಓದಬೇಕಾಗಿ ವಿನಂತಿ).

ಮಹಾತ್ಮರಿಗೊಂದು ಪತ್ರ—ಮೈ. ಕಾಂ. ಚಳುವಳಿಯನ್ನು ವಿವರಿಸಿ, ಜೈಲಿನಲ್ಲಿರುವ ಮೈ. ಕಾಂ. ಅಧ್ಯಕ್ಷರಾದ ಶ್ರೀ. ಹೆಚ್. ಸಿ. ದಾಸಪ್ಪನವರು ಮಹಾತ್ಮರಿಗೊಂದು ಪತ್ರ ಬರೆದಿದ್ದಾರೆಂದು ಪ್ರಕಟವಾಗಿದೆ.

ಮೈಸೂರು ಕಾಂಗ್ರೆಸ್ ಚಳುವಳಿ

ಅಖಿಲ ಮೈಸೂರು ಕಾಂಗ್ರೆಸ್ ಚಳುವಳಿಯು ಸಂಸ್ಥಾನದಾದ್ಯಂತವೂ ಮುಂದುವರಿಯುತ್ತು ಆಜ್ಞೋಲ್ಲಂಘನೆಗ ದಸ್ತಗಿರಿ ಮತ್ತು ಶಿಕ್ಷೆಯಾಗುತ್ತಿದೆ ಮೈಸೂರು ಕಾಂಗ್ರೆಸ್ ಮತ್ತು ಸರಕಾರಕ್ಕೆ ರಾಜಿ ನಡೆಸಲು ಎಲ್ಲ ಪ್ರಯತ್ನ ಮುಗಿದು ಶೀಘ್ರದಲ್ಲೇ ಕಾಂಗ್ರೆಸ್ ಮುಖಂಡರು ಒಂದು ಕಡೆ ಸೇರಿ ಚರ್ಚಿಸುತ್ತಾರೆಂದೂ ಮಹಾತ್ಮರ ಉತ್ತರಕ್ಕೆ ಕಾಯುತ್ತಿದ್ದಾರೆಂದೂ ಗೊತ್ತಾಗಿದೆ ಪಬ್ಲಿಕ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಅನೇಕರ ದಸ್ತಗಿರಿ ನಡೆದು ಶಿಕ್ಷೆಯಾಗುತ್ತಿದೆ. ಕೋಲಾರ, ಮೈಸೂರು, ಬೆಂಗಳೂರು ಮತ್ತು ಚಿತ್ರದುರ್ಗದಲ್ಲೂ ಇತರ ಕಡೆಗಳಲ್ಲೂ ಸತ್ಯಾಗ್ರಹ ಚಳುವಳಿಯು ಚೆನ್ನಾಗಿ ನಡೆಯುತ್ತಿದೆ.

ಮೈಸೂರು ಪಬ್ಲಿಕ್ ಸೆಕ್ಯೂರಿಟಿ ಆಕ್ಟ್—ಮೇಲ್ಕಂಡ ಆಕ್ಟ್ ವಿಚಾರವಾಗಿ ಮೈಸೂರು ನ್ಯಾ. ಪ್ರ. ಸಭೆಯಲ್ಲಿ ಚರ್ಚೆ ನಡೆದು ಬಹುಮತ ದೊರೆಯಿತು, ಇದರ ಬಗ್ಗೆ ಸ್ಥಳೀಯ ಒಂದು ಪತ್ರಿಕೆಯು, ಒಂದು ಅಗ್ರ ಲೇಖನ ಬರೆದು ನ್ಯಾಯವಾಗಿ ಟೀಕೆ ಮಾಡಲು, ಮಾರನೆಯ ನ್ಯಾ. ಪ್ರ. ಸಭೆಯಲ್ಲಿ ಕೆಲವು ಸದಸ್ಯರು ಇದರ ಬಗ್ಗೆ ಸರಕಾರಿ ಪತ್ರಿಕೆಗಳಿಗೆ ಬೈಗಳ ಸುರಿಮಳೆ ಮೂಡಿ ವಾಚಾಮಗೋಚರವಾಗಿ ಬೈದರು, ಮೇಲ್ಕಂಡ ಆಕ್ಟಿನ ವಿಚಾರವಾಗಿ ನ್ಯಾ. ಪ್ರ. ಸಭೆಯಲ್ಲಿ ನಡೆದ ವಿಚಾರವಾಗಿ ಬಂದಿರುವ ಅಗ್ರ ಲೇಖನದ ವಿಚಾರವಾಗಿ ಚರ್ಚಿಸಲು, ಬೆಂಗಳೂರು ಪತ್ರಿಕೋದ್ಯೋಗಿಗಳ ಸಂಘದ ಒಂದು ಸಭೆ ನಡೆದು, ಇದನ್ನೂ ಪರಿಶೀಲಿಸಲಾಯಿತೆಂದು ಹೇಳಲಾಗಿದೆ. ಸ್ಥಳೀಯ ಪತ್ರಿಕೆಯ ಟೀಕೆಯು ನ್ಯಾಯವಾದುದೆಂದು ಅನೇಕರಭಿಪ್ರಾಯಪಟ್ಟಿದ್ದಾರೆ.

ರಾಜಕೀಯ ಸುಧಾರಣಾ ಸಮಿತಿ ವರದಿ—ಮೇಲ್ಕಂಡ ಸಮಿತಿಯ ವರದಿಯು ಪೂರ್ತಿಯಾಗಿದೆಯೆಂದೂ, ಶೀಘ್ರದಲ್ಲೇ ಅದನ್ನು ಒಂದು ವಿಶೇಷ ಸಭೆಯನ್ನು ರಾಜಧಾನಿ (ಮೈಸೂರು)ಯಲ್ಲಿ ನಡೆಸಿ ಪ್ರಕಟಿಸುವರೆಂದೂ ನಂಬಲರ್ಹವಾದ ಕಡೆಗಳಲ್ಲಿ ಹೇಳಲಾಗಿದೆ.

ಚಂದಾದಾರರಲ್ಲಿ ವಿನಂತಿ.

ಚಂದಾ ಅವಧಿ ಮುಗಿದ ಚಂದಾದಾರರೂ ತಮ್ಮ ಚಂದಾ ಹಣವನ್ನು ದಯಮಾಡಿ ಕೂಡಲೇ ಕಳಿಸಿಕೊಡಬೇಕೆಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ.

—A JOB—

YOU WOULD LIKE

because you would be proud to represent a company like "East & West" whose policies have unquestionable safety and unusually low rates.

Strong & Progressive

ESTD 1913

The East And West Insurance Co., Ltd. invites applications from well connected and experienced persons for the posts of Inspectors and district organisers in Karnatak, Mysore State, South and North Kanara Districts

Attractive contracts & liberal terms. Please communicate immediately with our official representative Mr. H S. Nayak *c/o this paper*

OR

EAST & WEST INSURANCE CO., LTD

East & West Bldg.

Apollo St, Fort BOMBAY

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ) [ಸಂ. ನ]

ಹೆಬ್ರಿ—ಹೆಬ್ರಿಗೆ ಗಾಡಿಚಲಾವಣೆಯಿರುವ ಆಗುಂಬೆ ಗಾಟಿಯ ರಸ್ತೆಯು ಕಳೆದ ಮಳೆಗಾಲದಲ್ಲಿ ಕುಸಿದಿದ್ದು, ಅದನ್ನು ಸರಿಪಡಿಸುವ ವರೆಗೆ ಗಾಡಿಗಳು ಮೇಲೆ ಮತ್ತು ಕೆಳಗೆ ಹೋಗಿಬರಲು ಆತಂಕವಿದ್ದಿತು. ಮೊನ್ನೆ ಮೈಸೂರು ದಿವಾನರು ಅದೇ ದಾರಿಯಾಗಿ ಬಂದ ವೇಳೆ ರಸ್ತೆಯು, ಗಾಡಿಸಂಚಾರಕ್ಕೆ ಬಿಟ್ಟುಕೊಟ್ಟಿರಬಹುದೆಂಬ ನಂಬಿಕೆಯಿಂದ, ಈಗ ದಿನವೂ ಅನೇಕ ಗಾಡಿಗಳು ಬರಲು ಪ್ರಾರಂಭವಾಗಿವೆ. ಆದರೆ ರಸ್ತೆಯು ದುರುಸ್ತಿಯಾಗಿಲ್ಲ ಎಂಬ ಕಾರಣದಿಂದ ಹೀಗೆ ಮಾಲು ತುಂಬಿಸಿ ಬಂದ ಗಾಡಿಗಳು ಮುಂದಕ್ಕೆ ಹೋಗಲು ಪ್ರತಿಬಂಧಕವು ಇನ್ನೂ ಇರುವುದು. ಇವರ ದೆಸೆಯಿಂದ, ಬಂದ ಗಾಡಿಗಳು ಹಿಂದಕ್ಕೆ ಬರಬೇಕು. ಅಥವಾ ಮುಂದಕ್ಕೆ ಸಾಗಬೇಕಾದರೆ ಸಾಮಾನು ಮತ್ತು ಗಾಡಿಯನ್ನು ತಲೆಹೊರೆಯಿಂದ ಆತಂಕವಿರುವ ಜಾಗದಲ್ಲಿ ಹೊತ್ತುಕೊಂಡು ಹೋಗಬೇಕು. ಇದರಿಂದ ಈ ಗಾಡಿಯವರೆಲ್ಲರೂ ನಷ್ಟಕಷ್ಟಕ್ಕೆ ಗುರಿಯಾಗುತ್ತಾರೆ, ಅಲ್ಲದೆ ಗಾಡಿಸಂಚಾರವೇ ನಿಂತುಹೋಗಿ, ಶಿತಾನದಿಯಲ್ಲಿರುವ ಗಾದಿಬೋಕನವನ್ನು ವಹಿಸಿಕೊಂಡ ಕಂಟ್ರಾಕ್ಟದಾರರಿಗೂ ಹೇರಳ ನಷ್ಟವಾಗುವ ಸಂಭವ ಬಂದೊದಗಿದೆ. ಗಾಡಿವ್ಯಾಪಾರದಿಂದಲೇ ಜೀವನಸಾಗಿಸುತ್ತಿದ್ದ ಅದೆಷ್ಟೋ ಬಡ ಗಾಡಿವ್ಯಾಪಾರಸ್ಥರಿಗೂ ವಿಶೇಷವಾಗಿದೆ. ಅದೆಷ್ಟು ಸಮಯದ ವರೆಗೆ ಗಾಡಿಚಲಾವಣೆಗೆ ಆತಂಕವಿರುವುದೆಂಬದಾಗಿ ಒಂದು ಸರಿಯಾದ ಕಾಲನಿರ್ಣಯವನ್ನು ಸಂಬಂಧಪಟ್ಟವರು ಪ್ರಕಟಿಸುವರೇ? ಈ ರಸ್ತೆಯನ್ನು ಬೇಗನೆ ಸಂಪೂರ್ಣವಾಗಿ ವಾಹನಸಂಚಾರಕ್ಕೆ ಅನುಕೂಲವಾಗುವಂತೆ ಮಾಡಿಸುವಲ್ಲಿ ಬಡಜನರಿಗೆ ಇದಕ್ಕಿಂತ ಹೆಚ್ಚಿನ ಉಪಕಾರವು ಬೇರೊಂದಿಲ್ಲವೆಂತಾಗುತ್ತಿತ್ತು.

20-10 39 ಹಿತಾಕಾಂಕ್ಷಿ,

P. Sanjiva Nayak, Hebri.

ಸಂಪಾಜೆ—ತಾ. 29-16-39ರಲ್ಲಿ ಬೆಂಗಳೂರಿನ ರೆಸಿಡೆಂಟ್ ಮೆಡಿಕಲ್ ಸರ್ಜನರು ಮಡಿಕೇರಿಯ ಸಿವಿಲ್ ಸರ್ಜನ್ ಮಲೇರಿಯ ಆಫೀಸರ್, ಸೇನಿಟರಿ ಆಫೀಸರ್ ಮತ್ತು ಡಾ. ಅಯ್ಯಪ್ಪನವರೊಂದಿಗೆ ಸಂಪಾಜೆಗೆ ದಯಮಾಡಿಸಿದ್ದರು. ಶೀನಪ್ಪಯ್ಯ ದೇಶಕೋಡಿಕಾರರ ಮುಂದಾಳುತ್ವದಿಂದ ಸ್ವಾಗತವಾದ ಮೇಲೆ ಸಂಪಾಜೆ ಹಂಗಾಮಿ ಆಸ್ಪತ್ರೆಯಲ್ಲಿ ನೆರೆದವರ ಪೈಕಿ ಸಣ್ಣ ಮಕ್ಕಳನ್ನು ಸ್ವತಃ ಪರೀಕ್ಷಿಸಿ ಮಲೇರಿಯಾ ನಿವಾರಣೆಯ ಕ್ರಿಮಿನಾಶಕ ಸ್ಪ್ರೇಯಿಂಗ್ ಕಾರ್ಯಕ್ರಮವನ್ನು ಸ್ವತಃ ನೋಡಿದ ಮೇಲೆ ವಾರಕ್ಕೆ ಒಂದುದಿನ ಮಾತ್ರ ಮಡಿಕೇರಿಯಿಂದ ಕಳುಹಿಸಲ್ಪಡುವ ಡಾಕ್ಟರರು ಇನ್ನು ಮುಂದೆ ಸಂಪಾಜೆ ಹಂಗಾಮಿ ಆಸ್ಪತ್ರೆಯನ್ನು ಎರಡು ದಿನ ತೆರೆದಿಡುವ ವಿಷಯವಾಗಿಯೂ ಅಶುದ್ಧ ನೀರಿನ ಒರತೆಯುಳ್ಳ ಹಳೇ ಸರ್ಕಾರಿ ಬಾವಿಯನ್ನು ಮನ್ನಾಮಾಡಿ ಹೊಸ ಬಾವಿಯನ್ನು ತೋಡಿಸುವ ವಿಷಯವಾಗಿಯೂ ಶ್ರೀಯುತರ ಕೇಳಿಕೆಯು ಸಮಾಧಾನಕರ ರೀತಿಯಲ್ಲಿ ಬೇಗನೆ ಸುಧಾರಿಸಲ್ಪಡುವುದೆಂಬ ಭರವಸೆಯು ಉಕ್ತರವಿತ್ತು ಹೊರಟು ಹೋದರು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ

ಮದನಮಂಜರಿ ಮಾತ್ರೆಗಳು

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು. ಡಬ್ಬಿ 1ರ ಕ್ರಯ: ರೂ. 1

ಮದನಮಂಜರಿ ಫಾರ್ಮಸಿ,

184 ಚೈನಾಬಜಾರ್ ರೋಡ್, ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.



KOPRAN Tooth Paste

ಹಿಂದೂದೇಶದ ಜನಪ್ರೀತ ದಂತಾಂಜನ

ಜಾಲಿಗಿಡದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ. ತೀವ್ರಸತ್ವವುಳ್ಳದ್ದು, ವಿಷಹಾರಕವಾದದು.

KOPRAN CHEMICAL CO. BOMBAY

ಕೊಪರನ್ ಲಾರ್ಜ್ ಸೈಜು 0 13 0, ಕೊಪರನ್ ಸ್ಟ್ಯಾಂಡರ್ಡ್ ಸೈಜು 0-8 0. ಟೆಂಡರ್ಗಮ್ ಸ್ಟ್ಯಾಂಡರ್ಡ್ ಸೈಜು 0 8 0.

ಹಿಟ್ಲರರ ಮಹತ್ವಾಕಾಂಕ್ಷೆಗೆ ಸ್ಟೈಲಿನರ ತಡೆ

ಹಿಟ್ಲರರು ನಿರ್ವಾಹವಿಲ್ಲದೆ ರಸ್ಯದ ಆಶ್ರಯ ಪಡೆದಿದ್ದಾರೆ.

ಸ್ಟೈಲಿನ್ ಹಿಟ್ಲರರು ಒಂದಾಗಿ ನಡೆಯುತ್ತಿದ್ದಾರೆಯೋ?

ರಸ್ಯದ ಧೋರಣೆಯ ಅಂತರ್ಯವೇನು?

"ರಸ್ಯದಿಂದ ಬಂದಿರುವ ವರ್ತಮಾನವು ನಮಗೆ ಒಳ್ಳೇದು ರಸ್ಯದ ವಿದೇಶ ಮಂತ್ರಿ ಎಮ್. ಮೊಲೋಟೋವರ ಭಾಷಣದ ಪ್ರತಿಶಬ್ದಗಳೂ ಸತ್ಯವಾದುದು. ಪೋಲಂಡಿಗೆ ಬೆಂಬಲದ ಅಭಯವಿತ್ತು ನಾವು ಅದನ್ನು ಯುದ್ಧ ಮಾಡಲು ಪ್ರೋತ್ಸಾಹಿಸಿದೆವು ಮತ್ತು ಪೋಲಿಶ್ ಸೇನೆಯು ಸಂಪೂರ್ಣ ಧ್ವಸ್ತಪಟ್ಟಿಲ್ಲ ಪೋಲರು ವಿಚಿತ್ರ ಧೈರ್ಯ ಮತ್ತು ಸ್ಥೈರ್ಯ ತೋರಿಸುತ್ತಿದ್ದಾರೆಂಬ ಭ್ರಾಂತಿ ಕಟ್ಟಿಕೊಂಡಿದ್ದೆವು. ವಾಸ್ತವ ವಿಷಯವೆಂದರೆ, ಪೋಲರಿಗೆ ನಮ್ಮ ಸಹಾಯವು ಸಂಪೂರ್ಣ ನಿರರ್ಥಕವಾಗಿದೆ. ಪೋಲಿಶ್ ಸೈನ್ಯ ಮತ್ತು ಪೋಲೀಶ್ ಸೇನೆಯೊಂದಿಗೆ ಪೋಲರ ವಿರೋಧವೂ ಪರಿಪೂರ್ಣ ನಿರ್ನಾಮವಾಗಿದೆ. ಈ ಸಂದರ್ಭದಲ್ಲಿ ನಾವು ನಿಸ್ಸಹಾಯಕರಾಗಿ ಮೇಲೆ ಕೆಳಗೆ ನೋಡುತ್ತಿರುವಾಗ ಸ್ಟೈಲಿನರು ಮುಂದುವರಿದು ಹಿಟ್ಲರನ್ನು ತಡೆದು, 'ತಡೆಯಿರಿ, ಸಂಪೂರ್ಣ ನಿಮ್ಮದೇ ರಾಜ್ಯವಲ್ಲ. ಉಕ್ರೈನ್ ಮತ್ತು ಬಿಳಿ ರಸ್ಯಕ್ಕೆ ಗತಿಯಿಲ್ಲನೆಂದಾದರೆ ರಸ್ಯವು ಅವನ್ನು ವಶಪಡಿಸಿಕೊಳ್ಳುವುದ"ಂದರು. ಹಿಟ್ಲರರನ್ನವರು ಗಣಿಸಲಿಲ್ಲ ಅಂತೆಯೇ ಸೋವಿಯೆಟ್ ಸೇನೆಯು ಈಗ ಪೋಲಂಡಿನ ಪೂರ್ವ ಭಾಗವನ್ನು ಆಕ್ರಮಿಸಿಕೊಂಡಿದೆ ನಮ್ಮ ಸೂತ್ರಚಾಲಕ ಗೊಂಬೆಯಾಗಲು ಸ್ಪಷ್ಟವಾಗಿ ನಿರಾಕರಿಸುವ ಬುದ್ಧಿವಂತಿಕೆಯಿದ್ದ ಸ್ಟೈಲಿನರು ಈಗ ಹಿಟ್ಲರರನ್ನು ತನ್ನ ಉಪಕರಣವಾಗಿ ಉಪಯೋಗಿಸಿರುವರು. ದುರ್ದೈವಿ ಹಿಟ್ಲರನು ತಾನು ನುಂಗಿದುದರ ಅರೆವಾಸಿಯನ್ನು ಹೊರ ಕಾರಿ, "ಇಷ್ಟರವರೆಗೆ ಮಾತ್ರ. ಇನ್ನು ಮುಂದುವರಿಯಬಾರದು" ಎಂದು ಎದುರು ನಿಂತಿರುವ ಪ್ರಚಂಡ ಸೋವಿಯೆಟ್ ಸೇನೆಯನ್ನಿದಿರಿಸಿ ಉಪಾಯವಿಲ್ಲದೆ ತಲೆಬಾಗಬೇಕಾಗಿದೆ ನಾವು ನೂರು ನೂರು ಸಲ ಜಯಘೋಷವೆಬ್ಬಿಸಿ ಸ್ಟೈಲಿನರನ್ನು ಸ್ವಾಗತೀಕರಿಸುವ ಬದಲಿಗೆ, ಸರ್ವ ನಾಶವಾಯಿತೆಂದು ಒರಲುತ್ತಿದ್ದೇವೆ. ನಮ್ಮ ಕುರಿತು ನಗಾಡುತ್ತಿರುವ ತನ್ನ ಭಾವಚಿತ್ರವೊಂದನ್ನು ಸ್ಟೈಲಿನರು ಇತ್ತಲಾಗಿ ನಮಗೆ ಕಳುಹಿಸಿದ್ದರು ನಾವೇ ನಮ್ಮ ಕುರಿತು ನಗಾಡಿಕೊಳ್ಳಲು ಕಲಿಯುವುದಾದರೂ ಎಂದು?" ಸೋವಿಯೆಟ್ ಸೇನೆಯು ಪೋಲಂಡಿನ ಪೂರ್ವ ಭಾಗವನ್ನು ವಶಪಡಿಸಿಕೊಂಡೊಡನೆಯೇ ಪ್ರಖ್ಯಾತ ಗ್ರಂಥಕರ್ತರೂ, ಇದ್ದುದನ್ನು ಇದ್ದ ಹಾಗೆ ನಿರ್ಭಿಡೆಯಿಂದ ನಿಷ್ಠುರವಾಗಿ ಹೇಳಿಬಿಡುವುದರಲ್ಲಿ ತಜ್ಞರೂ ಆದ ಮಿ. ಬೆರ್ನಾರ್ಡ್ ಶೋರವರು ಲಂಡನಿನ ಟೈಮ್ಸ್ ಪತ್ರಿಕೆಯಲ್ಲಿ ಕೊಟ್ಟ ಅಭಿಪ್ರಾಯವಿದು. ಇದರಿಂದ ರಸ್ಯವು ಮಾಡಿದ ಆಕ್ರಮಣವು ನ್ಯಾಯವಾದುದು ಮತ್ತು ಹಿಟ್ಲರರ ಮಹತ್ವಾಕಾಂಕ್ಷೆಗೆ ದೊಡ್ಡ ತಡೆಯನ್ನೊಡ್ಡಿದಂತಾಗಿರುವುದೆಂಬುದು ಸಿದ್ಧವಾಗುವುದು.

ಪೂರ್ವ ಮತ್ತು ಈಶಾನ್ಯ ಯುರೋಪಿನ ವಾರ್ತೆಯು ಸರಿಯಾಗಿ ಪ್ರಕಟವಾಗುವುದೇ ಇಲ್ಲ. ಆದುದರಿಂದ ಅಲ್ಲಿಯ ನಿಜವಾದ ಪರಿಸ್ಥಿತಿಯೇನೆಂಬುದು ಸರಿಯಾಗಿ ತಿಳಿವಿಲ್ಲ ಹಿಟ್ಲರರು, ರಸ್ಯದೊಡನೆ ಮೊದಲೇ ಮೈತ್ರಿಯ ಒಡಂಬಡಿಕೆ ಮಾಡಿಕೊಂಡಿದ್ದುದರಿಂದ ಮತ್ತು ಪಶ್ಚಿಮದಲ್ಲಿ ಘೋರ ಯುದ್ಧವನ್ನಿದಿರಿಸಿದ್ದುದರಿಂದ ಪೂರ್ವ ಪೋಲಂಡನ್ನು ರಸ್ಯಕ್ಕೆ ಬಿಟ್ಟುಕೊಟ್ಟರು ಇಲ್ಲವಾದರೆ ಪೋಲೀಶ್ ಉಕ್ರೈನಿಗಾಗಿ ಸೋವಿಯೆಟ್ ಸರಕಾರದೊಡನೆ ಯುದ್ಧವನ್ನೇ ಹೂಡುತ್ತಿದ್ದರು. "ಪಶ್ಚಿಮ ರಣರಂಗದಲ್ಲಿ ಫ್ರೆಂಚ್ ಮತ್ತು ಬ್ರಿಟಿಷರನ್ನು ಸೋಲಿಸಿದ ಮೇಲೆ ಹಿಟ್ಲರರು ಸೋವಿಯೆಟ್ ರಸ್ಯದ ಮೇಲೆ ಯುದ್ಧ ಹೂಡದೆ ಸುಮ್ಮನಿರಲಾರರು" ಎಂದು ಪೋಲಂಡಿನಲ್ಲಿ ನಾಝಿ ಏಜೆಂಟರು ಪ್ರಚಾರ ಮಾಡುತ್ತಿರುವರೆಂಬ ಸುದ್ದಿಯು ಜರ್ಮನರ ಅಂತರ್ಯವನ್ನು ಸೂಚಿಸುತ್ತದೆ ಮಿತ್ರ ರಾಷ್ಟ್ರಗಳ ವಿಶೇಷವಾಗಿ ಇಂಗ್ಲೆಂಡಿನ ಮೇಲಿನ ಪ್ರತೀಕಾರೋದ್ವೇಗದಿಂದ ಹಿಟ್ಲರರು ಗತ್ಯಂತರವಿಲ್ಲದೆ ರಸ್ಯದ ಆಶ್ರಯ ಪಡೆದು, ತನ್ನ ಹಿಂದಿನ ಘೋಷಣೆ ಮತ್ತು ಆಕಾಂಕ್ಷೆಗಳನ್ನೆಲ್ಲಾ ತ್ಯಜಿಸಿಬಿಟ್ಟಿರುತ್ತಾರೆ. ಇಂದಾದರೂ ಅವರಿಗೆ ಇಂಗ್ಲೆಂಡಿನ ಮೈತ್ರಿಯನ್ನು ಸಂಪಾದಿಸಲು ಸಾಧ್ಯವಾದರೆ ರಸ್ಯವನ್ನು ವಿರೋಧಿಸಲು ಅವರು ಮುಂದಾಗದಿರಲಾರರು ಆದರೆ ಆ ಬಲೆಯೇ ಇಲ್ಲದಿರುವುದರಿಂದ ಆಕ್ರೋಶಗೊಂಡು ಇಡೀ ಜರ್ಮನಿಯೇ ಕಮ್ಯೂನಿಸ್ಟ್ ತತ್ವವನ್ನು ಸ್ವೀಕರಿಸುವ ಅಪಾಯವುಂಟಾದರೂ ಇಂಗ್ಲೆಂಡಿಗೆ ತಲೆ ಬಾಗಲಿಕ್ಕಿಲ್ಲೆಂದು ಹೆಚ್ಚುಹೆಚ್ಚಾಗಿ ರಸ್ಯದ ಸಹಾಯವನ್ನು ಪಡೆಯಲೆತ್ನಿಸುತ್ತಿದ್ದಾರೆ. ಜರ್ಮನ್ ಸಾಮ್ರಾಜ್ಯ ವ್ಯಾಪನಾಕಾಂಕ್ಷೆಯಾದ 'ಲೆಬೆನ್ಸ್ರವಮ್' ಬಿಸಿಲ್ಗುದುರೆಯಂತೆ ಮಾಯವಾಗಿದೆ. ಬಾಲ್ಟಿಕ್ ರಾಷ್ಟ್ರಗಳ ಮೇಲೆ ಅಧಿಕಾರ ಸ್ಥಾಪಿಸಬೇಕೆಂಬ ಆಕಾಂಕ್ಷೆಯು ಮೂಲೆಗುಂಪಾಗಿದೆ ಬಾಲ್ಕನ್ ಮತ್ತು ಆ ಮಾರ್ಗವಾಗಿ ಪೂರ್ವಕ್ಕೆ ಮುಂಬೊತ್ತಿ ತನ್ನ ಪ್ರಭಾವವನ್ನು ವಿಸ್ತರಿಸಬೇಕೆಂಬ ಆಸೆಯು ನಿರಾಶೆಯಾಗಿದೆ. ಹಿಟ್ಲರರು ಈಗ ತಾನು ಕಟ್ಟಿದ ಬೃಹತ್ ಜರ್ಮನಿಯನ್ನೇ ಭದ್ರಪಡಿಸಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಚೆದರಿಬಿದ್ದಿರುವ ಸಾವಿರಾರು ಮಂದಿ ಜರ್ಮನರು ಒಂದೇ ಕಡೆಯಲ್ಲಿ ವಾಸಿಸುವಂತೆ ಮಾಡಲೆತ್ನಿಸುತ್ತಿದ್ದಾರೆ

ಸೋವಿಯೆಟ್ ಸೇನೆಯು ಪೂರ್ವ ಪೋಲಂಡಿನ ಮೇಲೇರಿಹೋದಾಗ ಪ್ರಬಲ ವಿರೋಧವೇ ತೋರಿಬರಲಿಲ್ಲ ಕೆಲವು ಕಡೆ ಜನರು ಅವರನ್ನು ಸ್ವಾಗತೀಕರಿಸಿದರು. ಜರ್ಮನಿಯೊಡನೆ ತಾವು ಯುದ್ಧ ಹೂಡುವೆವೆಂದು ಸೋವಿಯೆಟ್ ಸೈನಿಕರು ಪ್ರಚಾರಮಾಡಿದ್ದರೆಂದು ಈಗ ತಿಳಿದುಬಂದಿದೆ. ಅಂತೂ ನಿರಾತಂಕವಾಗಿ ಅತಿ ಫಲವತ್ತಾದ ಪೋಲಿಶ್ ಉಕ್ರೈನ್ ಮತ್ತು ಗೆಲೀಸಿಯದ ಎಣ್ಣೆಯ ಬಾವಿಗಳು ರಸ್ಯದ ವಶವಾಗಿರುವವು ರಸ್ಯವು ಈಗ ತಾನು ವಶಪಡಿಸಿಕೊಂಡ ಪ್ರದೇಶದಲ್ಲಿ ಸೋವಿಯೆಟ್ ರಾಜ್ಯಭಾರವನ್ನು ಸ್ಥಾಪಿಸಿದೆ ಚುನಾವಣೆ ನಡಿಸಿ ಪ್ರಜಾ ಪ್ರತಿನಿಧಿಗಳನ್ನು ಆರಿಸಿ ಲೋವ್ ಪಟ್ಟಣದಲ್ಲಿ ಪ್ರಜಾ ಪ್ರತಿನಿಧಿ ಸಭೆಯನ್ನು ಸ್ಥಾಪಿಸಿದೆ ಈ ಪ್ರಜಾ ಪ್ರತಿನಿಧಿ ಸಭೆಯು, ಸೋವಿಯೆಟ್ ಆಳ್ವಿಕೆಯನ್ನು ಸ್ಥಾಪಿಸುವ, ಪೋಲಿಶ್ ಉಕ್ರೈನನ್ನು ಸೋವಿಯೆಟ್ ಉಕ್ರೈನಿನೊಂದಿಗೆ ಸೇರಿಸುವ, ಜಮೀನ್ದಾರಿಗಳನ್ನು ವಶಪಡಿಸಿ ಹಂಚಿಹಾಕುವ, ಬ್ಯಾಂಕು ಮತ್ತು ದೊಡ್ಡ ಕೈಗಾರಿಕೆಗಳನ್ನು ವಶಪಡಿಸಿಕೊಳ್ಳುವ ನಿರ್ಧಾರ ಮಾಡಿರುವುದು. ದೊಡ್ಡ ಜಮೀನುಗಳನ್ನು ವಿಭಾಗಿಸುವ ಕೆಲಸವು ಇಷ್ಟರಲ್ಲೇ ನಡೆದಿದೆ ಒಟ್ಟು 1,790,000 ಎಕ್ರೆ ಜಮೀನನ್ನು 1,78,000 ಬೇಸಾಯಗಾರ ಕುಟುಂಬಗಳೊಳಗೆ ಹಂಚಿಹಾಕಲಾಗಿದೆ 33,000 ಬೇಸಾಯ ಕೆಲಸಗಾರರು ಈಗ ಚಿಕ್ಕ ವರ್ಗದಾರರಾಗಿದ್ದಾರೆ 175,000 ಬಡ ಮತ್ತು ಮಧ್ಯ ತರಗತಿಯ ಬೇಸಾಯಗಾರರ ಸಾಗುವಳಿ ಭೂಮಿಯು ಹೆಚ್ಚಿಸಲ್ಪಟ್ಟಿದೆ ಸಾವಿರಾರು ಜಾನುವಾರು, ಕುದುರೆ, ಆಡು ಮತ್ತು ಕಂದಿಗಳನ್ನು ಜನರಿಗೆ ಹಂಚಲಾಗಿದೆ. ಪೋಲಿಶ್ ಬಿಳಿ ರಸ್ಯ ಮತ್ತು ಉಕ್ರೈನಿನ ಜನಸಂಖ್ಯೆ ಒಟ್ಟು 11 ಮಿಲ್ಯವಾಗಿದೆ. ಇವರೆಲ್ಲಾ ಹೆಚ್ಚಾಗಿ ಬೇಸಾಯಗಾರರು 2,000,000 ಬೇಸಾಯ ಕುಟುಂಬಗಳಿರುತ್ತವೆ ಒಟ್ಟು ಇವರು ಈಗ ತಾನೇ ತಮ್ಮ ಬೆಳೆ ಕಟಾವುಮಾಡಿರುವರು. ಸುಮಾರು 20 ಮಿಲ್ಯ ಪವನು ಬೆಲೆಯ ಬೇರೆಬೇರೆ ದವಸಧಾನ್ಯಗಳು ಹಿಟ್ಲರರ ಕೈತಪ್ಪಿ ಸ್ಟೈಲಿನರ ಅಧೀನವಾಗಿವೆ

ಹಿಟ್ಲರ್ ಮತ್ತು ಸ್ಟೈಲಿನರು ಈಗ ಒಂದುಗೂಡಿ ನಡೆಯುತ್ತಿರುವಂತಿದೆ ಜರ್ಮನಿಗೆ ಅತ್ಯವಶ್ಯಕವಾದ ಧಾನ್ಯವನ್ನು ರಸ್ಯವು ಒದಗಿಸುವುದೆಂದು ತಿಳಿದುಬಂದಿದೆ. ಮತ್ತೆ ಇನ್ನು 2 ತಿಂಗಳೊಳಗೆ ಒಂದು ಮಿಲ್ಯ ಟನ್ನು ದವಸಧಾನ್ಯ ಮತ್ತು ಕುದುರೆ ಮೊದಲಾದುವುಗಳ ಆಹಾರವನ್ನೊದಗಿಸಲಿರುವುದು. ಜರ್ಮನಿಯ ವ್ಯಾಪಾರ ವಹಿವಾಟು ಸಂಬಂಧವಾದ ಪ್ರತಿನಿಧಿಗಳು ಕೆಲವರು ಮಾಸ್ಕೋ ಪಟ್ಟಣಕ್ಕೆ ಹೋಗಿ ಮಾತುಕತೆ ನಡಿಸಿರುವರು. ರಸ್ಯದ ಪ್ರತಿನಿಧಿಗಳು ಜರ್ಮನಿಗೆ ಹೋಗಿರುವರು ರಸ್ಯನರನ್ನು ಜರ್ಮನ್ ಕಾರ್ಖಾನೆಗಳಲ್ಲಿ ತರಬೇತಿ ಮಾಡಲು ಜರ್ಮನಿಯು ಒಪ್ಪಿರುವುದು ಹಿಟ್ಲರರ ಸಮ್ಮತಿಯಿಂದಲೇ ಸ್ಟೈಲಿನರು ಬಾಲ್ಟಿಕ್ ರಾಷ್ಟ್ರಗಳ ಮೇಲೆ ರಸ್ಯದ ಅಧಿಕಾರ ಸ್ಥಾಪಿಸಲೆತ್ನಿಸುತ್ತಿರುವಂತಿದೆ. ಇದರಿಂದ ಬಾಲ್ಟಿಕ್ ರಾಷ್ಟ್ರಗಳು ತಮ್ಮ ವ್ಯಾಪಾರ ವಹಿವಾಟುಗಳನ್ನೆಲ್ಲಾ ರಸ್ಯದ

(೧೮ನೇ ಪುಟಕ್ಕೆ ಮುಂದುವರಿಯುವುದು)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಖರ್ಚು ೦-೮-೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಿನಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer Dr. D. N. JASANI, Vitalbhai Patel Road, BOMBAY 4

ಮುಂಬಯಿಯ ಬಿಲ್ಲವರಲ್ಲಿ ವಿನಂತಿ

ಲೇಖಕರು: ಯು. ಕೆ ರಂಗ ಬೊಂಬಾಯಿ

ಅನಾದಿ ಕಾಲದಿಂದಲೂ ಬಿಲ್ಲವರು ಪಡುವ ಕಷ್ಟ, ಅವರಿಗೆ ಸಿಕ್ಕಿದ ನಿಃಸ್ವಾರ್ಥ ಮಾರಿಯು ಕೆಣ್ಣು ಪಡುವನ ಮೇಲಿರುವಂತೆ ಸನಾತನಿಗಳ ದೃಷ್ಟಿ ಈ ಬಿಲ್ಲವರ ಮೇಲೆಯೂ ಹರಿದು ಯಾವ ಅಧಿಕಾರವೂ ಸಿಕ್ಕದಿರುವುದು ನಮ್ಮ ದುರದೃಷ್ಟವೆನ್ನಬೇಕು. ಪ್ರತಿಯೊಬ್ಬನೂ ತನ್ನತ್ವಕ್ಕೆ ತಾನು ಶ್ರೇಷ್ಠನೆಂದು ಹೇಳುವುದು ನಮಗೇನೂ ನಷ್ಟವಿಲ್ಲ. ಅವನಿಗೂ ಇಷ್ಟ ಸಿದ್ಧಿಯಾಗಲಿಕ್ಕಿಲ್ಲ. ಆದರೆ ಉತ್ತಮನೆಂದು ಹೇಳಿಕೊಳ್ಳುವುದಲ್ಲದೆ ಅದರಂತೆ ವರ್ತಿಸತೊಡಗಿದರೆ ಮಾತ್ರ ಘರ್ಷಣೆಯ ಪ್ರಸಂಗಗಳು ಉದ್ಭವಿಸುವವು. ಪ್ರತಿಯೊರ್ವ ಮಾನವನೂ ತನ್ನನ್ನು ತಾನು ತಿಳಿದುಕೊಳ್ಳಲು ಹೇಗೆ ಪ್ರಯತ್ನ ಪಡುತ್ತಾನೋ ಹಾಗೆಯೇ ಮಾತೃಭೂಮಿಯನ್ನೂ ಅರಿಯಲು ಪ್ರಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯ. ಅಂಥವರೇ ತ್ಯಾಗ ಪುರುಷರು.

ಮುಖ್ಯವಾಗಿ ಒಂದೊಂದು ಸಂಸ್ಥೆಯು ಒಳ್ಳೆಟ್ಟಾಗಿದ್ದರೆ ಕಾಲಾಂತರದಿಂದ ತ್ಯಾಗಪೂರ್ಣ ಕೆಲಸವನ್ನು ಮಾಡಲು ಅರ್ಹವಾಗಬಹುದು. ಅದಕ್ಕಾಗಿ ಮುಂಬಾಯಿಯಲ್ಲಿ ವಾಸಿಸುವ ಜಾತಿಪ್ರೇಮಿಗಳಾದ ಕೆಲವು ಮುಖಂಡರಿಂದ ಬಿಲ್ಲವ ಎಸೋಸಿಯೇಶನ್ ಸಂಸ್ಥೆಯು ಸ್ಥಾಪನೆಯಾದಂದಿನಿಂದಲೂ ಸ್ವಾರ್ಥವನ್ನು ಬಯಸದೆ ನಿಃಸ್ವಾರ್ಥಿಗಳಾಗಿ ಕೆಲಸ ಮಾಡುತ್ತಾ ದೇಶಸೇವೆ, ಜಾತೀಯ ಮೇಲ್ಮೆ, ಅನಾಥ ರಕ್ಷಣೆ ಮಾಡುವ ಬಿಲ್ಲವ ಸಮಾಜದವರನ್ನು ಈ ಸಂಸ್ಥೆಯು ಹುರಿಹುಗೊಳಿಸುತ್ತದೆ. 1931ನೇ ಇಸವಿಯಲ್ಲಿ ಇನ್ನವೆತ್ತಿ ತನ್ನ ಸ್ಥಾನವನ್ನು ಬಲಪಡಿಸಿ ಅವಿದ್ಯಾವಂತರಿಗೆ ಅವರವರ ಯೋಗ್ಯತೆಯನ್ನು ಪರಿಶೀಲಿಸಿ, ಹಣವನ್ನು ಕೊಟ್ಟಿರುತ್ತದೆ. ಪ್ರತಿಯೊಂದು ವ್ಯಕ್ತಿಗೂ ವಿದ್ಯೆಯೇ ಸರ್ವ ಆಧಾರ. "ವಿದ್ಯಾವಿಹೀನಃ ಪಶುಃ" ಎಂದು ಕವಿಗಳು ನಮ್ಮನ್ನು ಆಗಾಗ್ಗೆ ಎಚ್ಚರಿಸುತ್ತಾರೆ. ಈ ಸಂಸ್ಥೆಯು ಸ್ಥಾಪನೆಯಾದಂದಿನಿಂದಲೂ ದಿನೇದಿನೇ ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನು ಹೊಂದುತ್ತಾ ಬಿಲ್ಲವರಲ್ಲಿ ಎಲ್ಲರನ್ನೂ ಪ್ರೀತಿಗೊಳಿಸುತ್ತಾ ಇಂದಿಗೆ ಇಡೀ ಬಿಲ್ಲವ ಜನಾಂಗದ ಆದರಕ್ಕೆ ಪಾತ್ರವಾಗಿರುತ್ತದೆ. ಇಷ್ಟೊಂದು ಅತ್ಯಲ್ಪ ಕಾಲದಲ್ಲಿ ತನ್ನ ಸ್ಥಾನವನ್ನು ಸಮಸ್ತ ಬಿಲ್ಲವರಲ್ಲಿ ವಿಸ್ತರಿಸಿ ಹೆಸರುಗೊಂಡ ಈ ಸಂಸ್ಥೆಯು ಮೊದಲನೆಯದಾಗಿರುತ್ತದೆ. ನಮ್ಮ ಜಾತಿಗೆ ಇದೊಂದು ಮಾದರಿ ಸಂಸ್ಥೆಯಾಗಿದೆ. ಯಾವ ಸಮಾಜವು ಮುಂದಿನ ಏಳಿಗೆಯನ್ನು ಬಯಸುತ್ತದೋ, ಯಾವುದು ನಿಷ್ಪಕ್ಷಪಾತಿಯಾಗಿ ಕೆಲಸ ಮಾಡುತ್ತದೋ, ಯಾವುದು ತನ್ನ ಜನಾಂಗವನ್ನು ಹುರುಪುಗೊಳಿಸುತ್ತದೋ ಅದಕ್ಕೆ ಬೆಂಬಲ ಕೊಡುವುದು ಪ್ರತಿಯೊರ್ವನ ಕರ್ತವ್ಯ. ಹಾಗಿಲ್ಲದೆ ತಾನೊಂದೆಡೆ ಸಮಾಜವೊಂದೆಡೆ ಸಮಾಜಕ್ಕೂ ಎನಗೂ ಏನೊಂದೂ ಸಂಬಂಧ ಇಲ್ಲವೆಂದು ಹೇಳುವವರು ಅನೇಕರಿರಬಹುದು. ಇದು ನಮ್ಮ ದೌರ್ಭಾಗ್ಯವೆನ್ನಬೇಕು. ಇದೀಗ ನಮ್ಮ ಸಮಾಜವು ಎನೊಂದು ವಿಧದಲ್ಲಿ ಮುಂದೆ ಬಂದಿದೆಯೆಂದು ವಿವರಿಸುವ ಅಗತ್ಯವಿಲ್ಲ. ಮಹಿಷ್ಠರು ಮಾತು ಭಗವಂತನು, ರಾಯ್ ಕೋ ಪರ್‌ಬತ್ ಬನಾಸಕ್ತಾ ಹೈ, ಪರ್‌ಬತ್ ಕೋ ರಾಯ್ ಬನಾ ಸಕ್ತಾ ಹೈ. ಅಂದರೆ ಭಗವಂತನು ರಾಗಿಯನ್ನು ಪರ್ವತ ಮಾಡುತ್ತಾನೆ, ಪರ್ವತವನ್ನು ರಾಗಿ ಮಾಡುತ್ತಾನೆಂದು ಪುರಾಣಗಳು ಕೂಗುತ್ತವೆ. ಇದರಲ್ಲಿ ನನಗೆ ಸಂಶಯವಾಗುತ್ತದೆ ಪೂರ್ವಜರೇ ಬಕ್ತರಲ್ಲ. ಅವರಿಂತ ಇನ್ನಿತರ ಭಕ್ತರು ಈ ನಮ್ಮ ಬಿಲ್ಲವರಲ್ಲಿ ಈಗಿರಬಹುದು. ಆದರೆ ಬಿಲ್ಲವರಲ್ಲಿ ಒಕ್ಕಟ್ಟು ಮಾಡುವ ಯಾವ ದೇವರೂ ಸಿಕ್ಕದಿರುವುದು ದೌರ್ಭಾಗ್ಯವಲ್ಲವೇ, ಇದನ್ನೆಲ್ಲಾ ನಾನಿಲ್ಲಿ ವಿವರಿಸ ಹೋಗುವುದಿಲ್ಲ. ಮುಖ್ಯವಾಗಿ ನಮ್ಮ ಬಿಲ್ಲವ ಸಂಸ್ಥೆಯೊಂದನ್ನು ಬಲಪಡಿಸಲು ಸಾಧ್ಯವಿಲ್ಲವೆಂಬುದು ಬಹು ವಿಷಾದಕರವಾದ ವಿಷಯವಾಗಿದೆ. ಮುಂಬಾಯಿ ನಗರದಲ್ಲಿ ಹೆಚ್ಚಾಗಿ ಆಫೀಸುಗಳಲ್ಲಿಯೂ ಕೋಟೆಯ ಹೋಗೆ ಕೆಲವರು ಹೋಟೆಲು ಮಾಲಿಕರಾಗಿಯೂ, ಕೆಲವರು ಮಿಲ್‌ವಾಲ, ಬಜೆ ಮಾಡವವರು ಬಿಲ್ಲವರಲ್ಲಿ ಅನೇಕರಿರುವರು. ಅವರಲ್ಲಿ ಅನೇಕರು ಈ ಸಂಘಕ್ಕೆ ಸೇರಿರಬಹುದು. ಅನೇಕರು ಸೇರದೆ ಇರಲೂ ಬಹುದು. ಇಷ್ಟು ಬಿಲ್ಲವರಿದ್ದು ಒಂದು ಪಾಲಿನ ಒಂದಂಶದಲ್ಲಿ ಮುಕ್ಕಾಲು ಪಾಲು ಇದಕ್ಕೆ ಮೆಂಬರರು ಆಗಲಿಲ್ಲವೆಂದು ಇದರ ವರದಿಯಲ್ಲಿಯೇ ಗೊತ್ತಾಗುತ್ತದೆ. ಈ ಸಂಸ್ಥೆಯಲ್ಲಿ ಬಿಲ್ಲವರ ಪರಸ್ಪರ ಸಹಾಯಕ ಫಂಡು (Billawar Benif.t Fund) ಎಂಬುದನ್ನು ಮಾಡಿರುತ್ತಾರೆ. ಇದಕ್ಕೆ ಮೆಂಬರರಾಗಿ ಅಕಾಲ ಮರಣಕ್ಕೆ ತುತ್ತಾದ ಅನೇಕ ಮಹನೀಯರ ಆಶ್ರಯಗಳಿಗೆ ಇದರಿಂದ ಸಹಾಯ ದೊರೆತು ಅವರನ್ನೇ ಕಷ್ಟದಿಂದ ಪಾರುಮಾಡಲು ಈ ಸಂಸ್ಥೆಯ ಕಾರ್ಯಕಾರಿ ಮಂಡಳಿಯು ಎಷ್ಟೊಂದು ಮುಂದೆ ಬಂದಿದೆಯೆಂದು ಇಲ್ಲಿ ವಿವರಿಸುವ ಅಗತ್ಯವಿಲ್ಲ. ಇವನ್ನೆಲ್ಲಾ ಕಣ್ಣಾರೆ ಕಂಡ ಬಿಲ್ಲವರು ಇದಕ್ಕೆ ಮೆಂಬರರಾಗದೆ ಇರುವುದು ನಮ್ಮ ಜಾತಿಯ ಅಧೋಗತಿಯ ಮಾರ್ಗವನ್ನು ಸೂಚಿಸುತ್ತದೆ. ಉತ್ಸಾಹಿತ ಸಮಾಜದಲ್ಲಿ ಕೆಲಸ ಮಾಡಿ ನುರಿತ ಇಪ್ಪತ್ತೈದು ಕಮಿಟಿ ಮೆಂಬರರೂ 14 ಸಮಾಜಪ್ರೇಮಿಗಳಾದ ಉತ್ಸಾಹಿತರು ಸೇವಾದಳವೂ ಇದರಲ್ಲಿ ಎಷ್ಟೊಂದು ಚುರುಕಾಗಿ ಕೆಲಸ ಮಾಡುತ್ತಾರೆಂದು ಕೆಲವು ಸಮಾಜಕರಿಗೆ ತಿಳಿದ ಸಂಗತಿಯೇ ಸರಿ.

ಇವು ಯಾವ್ಯಾವ ಗುಣಾವಗುಣಗಳನ್ನು ಮುಂದೆ ಮಾಡಿಕೊಂಡಿದೆ, ಏನೆಲ್ಲಾ ಮಹತ್ಕಾರ್ಯಗಳನ್ನು ಮಾಡಿದೆ, ಎಷ್ಟೊಂದು ಬಿಲ್ಲವ ತರುಣರನ್ನು ವಿದ್ಯೆಯಿಂದ ಮೇಲಕ್ಕೆತ್ತಿದೆಯೆಂದು ಈ ವರ್ಷದ ವರದಿಯೇ ವಿಸಂತಿಸಿಕೊಳ್ಳುತ್ತದೆ.

ಬಿಲ್ಲವರು ಇನ್ನಾದರೂ ಈ ಸಂಸ್ಥೆಗೆ ಮೆಂಬರರಾಗಬೇಕಾಗಿ ಬೇಡಿಕೊಳ್ಳುವೆನು. ಅನಾದಿ ಕಾಲದಿಂದಲೂ ಬಿಲ್ಲವರಲ್ಲಿ ಹಿಡಿದ ಅಂಟುರೋಗ, ಚಂಚಲಬುದ್ಧಿ, ಸಮಾಜಪ್ರೇಮ, ನಮ್ಮ ಜಾತಿಯಲ್ಲಿರುವ ಮೂಢ ಭ್ರಾಂತಿ, ತೊಲಗಲು ಪ್ರಯತ್ನ ಮಾಡುವ ಬಿಲ್ಲವರ ಎಸೋಸಿಯೇಶನಿನ ಮೆಂಬರರಾಗಿ ಸೇರಿ, ಸಮಾಜದ ಮುಂದಿನ ಏಳಿಗೆಗೆ ಬೆಂಬಲ ಕೊಡುವಿರೆಂದು ತುಂಬಾ ನಂಬಿಕೆಯಿದೆ. ಈ ಸಮಾಜವು ಕೈಕೊಂಡ ಮಹತ್ಕಾರ್ಯಗಳು ಕಮಿಟಿಯವರು ವಿತ್ತ ಸೇವಾದಳವು ಮಾಡುವ ಪುಣ್ಯ ಕೆಲಸಕ್ಕೆ ಶ್ರೀ ದಯಾಮಯನು ಅವರನ್ನು ಆಯುರಾರೋಗ್ಯವಂತರನ್ನಾಗಿ ಮಾಡಲೆಂದೂ, ಮಾತ್ರವಲ್ಲದೆ ಧರ್ಮಕಲಹದಿಂದಲೂ, ಧೈರ್ಯ ಸಾಹಸದಿಂದಲೂ, ಕರುಣಾದೃಷ್ಟಿಯಿಂದಲೂ, ಸ್ವಾರ್ಥತ್ಯಾಗದಿಂದಲೂ, ಮುಖಿಯವ ನಮ್ಮ ಜಾತಿಯ ಬಿಲ್ಲವ ಎಸೋಸಿಯೇಶನಿಗೆ ಬಿಲ್ಲವರು ಮೆಂಬರರಾಗಿ ಸೇರುವಂತೆ ಅನುಗ್ರಹಿಸಲೆಂದೂ ಇನ್ನಾದರೂ ಅವರ ಮನಸ್ಸನ್ನು ಒಮ್ಮತದಿಂದ ಸೇರುವಂತೆ ಮಾಡಿ, ಸಮಾಜದ ಏಳಿಗೆಗೆ ಪಾತ್ರರಾಗಲೆಂದೂ ಅಹೋರಾತ್ರಿ ಭಗವಂತನನ್ನು ಬೇಡುವೆವು.

ವಿ. ಸೂ:—ಈವುಗೆ ವರದಿ ಇನ್ನೇನಾದರೂ ಸಮಾಜದ ವಿಷಯ ತಿಳಿದುಕೊಳ್ಳಬೇಕಾದರೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ —

ಮಾನಾರ್ಥ ಕಾರ್ಯದರ್ಶಿ

ಬಿಲ್ಲವರ ಎಸೋಸಿಯೇಶನ್,

13, 19, ಮೇಡೋ ರಸ್ತೆ, ಕೋಟೆ, ಮುಂಬಾಯಿ.

ಜಾಹೀರಾತುಗಳಿಗೆ ಬೇಕಾಗುವ ಚಿತ್ರಾಕರ್ಷಕ ನಮೂನೆಯ ಬ್ಲೋಕು, ಡಿಜ್ಯಾನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ರೀನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮೃತಕಲಾ ಪ್ರೆಸ್,

ಆರ್ಟ್ ಪ್ರಿಂಟರ್ಸ್ ಡಿಜ್ಯಾನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡು ಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು
ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ

ಓರಿಯಂಟಲ್‌ನಲ್ಲಿ ಪಡೆಯಿರಿ.

— ಮಕ್ಕಳ ಮುಂದುವರಿಸಲ್ಪಡುವ ವಿಮೆಯು —

ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿವೆ. ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ

ಅಥವಾ ದಿ ಬ್ರ್ಯಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,
ಫೌಶ್‌ಪೆರೇಡ್ ಬೆಂಗಳೂರು.

—ORIENTAL—

GOVERNMENT SECURITY LIFE ASSURANCE CO., LTD.

ಪಶ್ಚಿಮ ರಣರಂಗದಲ್ಲಿ ಜರ್ಮನಿಯ ಸೇನಾಸಂಗ್ರಹ

ದೊಡ್ಡ ಯುದ್ಧಸಿದ್ಧತೆ

ಪೋಲೆಂಡಿನಂತೆಯೇ ಪಶ್ಚಿಮ ರಣರಂಗದ ಉದ್ದಕ್ಕೂ ಪ್ರಬಲ ಹೋರಾಟ ನಡೆಸುವ ಸಿದ್ಧತೆಯನ್ನು ಜರ್ಮನಿಯು ನಡೆಸುತ್ತಿರುವಂತಿದೆ. ಸಾರ್ ಪ್ರದೇಶದಲ್ಲಿ 30 ದಳ, ಹೊಲ್ಲೆಂಡಿನ ಎಲ್ಲೆಯಲ್ಲಿ 18 ದಳ, ಸ್ವಿಸರ್ಲೆಂಡಿನ ಎಲ್ಲೆಯಲ್ಲಿ 12 ದಳ ಮತ್ತು ಕನ್‌ಸ್ಟೆನ್ಸ್ ಸರೋವರ ಮತ್ತು ಸ್ವಿಸರ್ಲೆಂಡ್ ಇಟಲಿಗಳ ಸಂದಿನಲ್ಲಿ 9 ದಳ ಸೇನೆಯನ್ನು ಜರ್ಮನಿಯು ಸಂಗ್ರಹಿಸಿದೆ. ಬಾಸೆಲ್ ಪಟ್ಟಣದ ಬಳಿ ಹೆಚ್ಚಿನ ಜರ್ಮನ್ ಸೇನೆಯು ಕೂಡಿಸಲ್ಪಟ್ಟು ರ್‍ಹೈನ್ ನದಿಯನ್ನು ದಾಟಲು ದೋಣಿಗಳ ಸೇತುವೆಗಳು ಕಟ್ಟಲ್ಪಡುತ್ತಿವೆ. ಒಟ್ಟು ಇಡೀ ಪಶ್ಚಿಮ ರಣರಂಗದಲ್ಲಿ 75ರಿಂದ 80ದಳಗಳ ವರೆಗೆ ಸೇನೆಯು ಕೂಡಿಸಲ್ಪಟ್ಟಿರುತ್ತದೆ. ಜರ್ಮನಿಯು ಸ್ವಿಸರ್ಲೆಂಡಿನ ಮೂಲಕ ಮುಂದೊತ್ತಿ ಮೆಗಿನೆಟ್ ಕೋಟೆಗಳ ಹಿಂಬದಿಗೆ ಹೋಗಲೆತ್ನಿಸುವುದೆಂದೂ, ಆಗಲೇ ರ್‍ಹೈನ್ ನದಿಯ ಮೇಲ್ಭಾಗದಿಂದಲೂ ಪ್ರಬಲ ಯುದ್ಧವನ್ನಾರಂಭಿಸುವುದೆಂದೂ, ಹೊಲ್ಲೆಂಡಿನ ಮೇಲೆ ಧಾಳಿಯಿಟ್ಟು, ಇಂಗ್ಲೆಂಡಿನ ಮೇಲೆ ನೆಟ್ಟಗೆ ಏರಿಹೋಗಲು ವಿಮಾನ ನಿಲಯ ಮತ್ತು ಸಬ್ ಮೆರೀನ್ ನಿಲಯಗಳನ್ನು ಸ್ಥಾಪಿಸಬಹುದೆಂದೂ ನಂಬಲಾಗಿದೆ.

ಇಷ್ಟರವರೆಗಣ ಯುದ್ಧದಲ್ಲಿ ಪಶ್ಚಿಮ ರಣರಂಗದಲ್ಲಿ ಎರಡೂ ಕಡೆಗಳಲ್ಲಿಯೂ 3000ದ ವರೆಗೆ ಸೈನಿಕರು ಕೊಲ್ಲಲ್ಪಟ್ಟಿರುತ್ತಾರೆ. ಕಳೆದ ವಾರ ಪ್ರಬಲ ಯುದ್ಧವೇನೂ ನಡೆದಿಲ್ಲ. ಹಿಟ್ಲರರು ಮೆಗಿನಟ್ ಕೋಟೆಯನ್ನು ಮುರಿಯಲು ಪ್ರಚಂಡ ಪ್ರಯತ್ನವನ್ನೇನೂ ನಡೆಸಲಿಲ್ಲ. ತೀವ್ರ ಚಳಿ, ಮಳೆ ಮತ್ತು ಮಂಜು ಬೀಳುತ್ತಿವೆ. ಅಕ್ಟೋಬರ ತಾ. 27ರಲ್ಲಿ ಮೊಸೆಲ್ ಮತ್ತು ವಾರ್ನ್ಡ್ ಕಾಡಿನ ಪ್ರದೇಶದಲ್ಲಿ ತೀವ್ರ ಹೋರಾಟ ನಡೆದಿರುವುದು. ಜರ್ಮನಿ ಮತ್ತು ತಟಸ್ಥ ರಾಷ್ಟ್ರಗಳೊಳಗಣ ಟೆಲಿಫೋನ್ ತಂತಿಗಳನ್ನು ಕಡಿದುಹಾಕಲಾಗಿದೆ. ಇನ್ನು ಮುಂದೆ ವಿದೇಶೀ ರಾಜ್ಯಗಳೊಡನೆ ಮಾತಾಡಬೇಕಾದರೆ ಸರಕಾರದ ಅಪ್ಪಣೆ ಪಡೆಯಬೇಕಾಗಿದೆ. ರ್‍ಹೈನ್ ನದಿಯಲ್ಲಿ ದೊಡ್ಡ ನೆರೆಬಂದು ಸಿಗ್‌ಫ್ರಿಡ್ ಕೋಟೆಗಳಿಗೆ ಹಾವಳಿಯಾಗಿದೆ. ಹವಾಗುಣವು ಬಹಳ ಕೆಟ್ಟದಾಗಿದೆ. ನೆರೆಯ ಪ್ರದೇಶದಲ್ಲಿ ಯುದ್ಧ ಸಿದ್ಧತೆಯೆಲ್ಲಾ ನಿಲ್ಲಿಸಲ್ಪಟ್ಟಿದೆ.

ಹಲವು ಹಡಗುಗಳು ಮುಳುಗಿಸಲ್ಪಟ್ಟವು.

ಯುದ್ಧ ಆರಂಭವಾದಂದಿನಿಂದ ಅಕ್ಟೋಬರ ತಾ. 28ರ ವರೆಗೆ ಜರ್ಮನರು ಒಟ್ಟು 116 ಹಡಗಗಳನ್ನು ಮುಳುಗಿಸಿರುವರೆಂದು ಬರ್ಲಿನಿನಸುದ್ದಿ. ಇವುಗಳ ಒಟ್ಟು ಘನಟನ್ನು 4,76,331 ಜರ್ಮನರಿಗೆ ಹೆಚ್ಚಿನ ನಷ್ಟವೇನೂ ಆಗಿಲ್ಲ. ಈ ವರೆಗೆ 3 ಸಬ್‌ಮೆರೀನುಗಳು ಮಾತ್ರ ಹಿಂದಕ್ಕೆ ಬಾರದೆ ನಾಶಹೊಂದಿರುತ್ತವೆ. ಬಾಲ್ಟಿಕ್ ಮತ್ತು ಉತ್ತರ ಸಮುದ್ರಗಳಲ್ಲಿ ಸಾಂಪತಿಕ ಯುದ್ಧವು ಜಯಶೀಲವಾಗಿ ನಡೆದಿದೆ. ಅಕ್ಟೋಬರ ತಾ. 18ರಿಂದ 25ರ ವರೆಗೆ 33 ಹಡಗುಗಳು ಮುಳುಗಿಸಲ್ಪಟ್ಟಿರುತ್ತವೆ

ಯುದ್ಧಾರಂಭದಿಂದ 115 ಹಡಗಗಳು ಮುಳುಗಿಸಲ್ಪಟ್ಟಿವೆ.

ವಾರ್ಸೋದಲ್ಲಿ ನಾಯಿ ಮಾಂಸ ತಿಂದು ಜೀವಧಾರಣೆ.

ದಿನಕ್ಕೆ 4½ ಮಿಲ್ಯ ಪವನು ಯುದ್ಧ ವೆಚ್ಚ.

ಎಡ್ಮಿರಲ್ ಸ್ಕೀಯರ್ ಮತ್ತು ಡ್ಯೂಚ್ಲೆಂಡ್ ಎಂಬ ಜರ್ಮನ್ ಪೊಕೆಟ್ ಯುದ್ಧದ ಹಡಗುಗಳು ಶಾಂತ ಮತ್ತು ಅಟ್ಲಾಂತಿಕ ಸಾಗರಗಳಲ್ಲಿ ಸಂಚರಿಸುತ್ತಾ ಹಡಗಗಳನ್ನು ಮುಳುಗಿಸಲೆತ್ನಿಸುತ್ತವೆ. ಇಷ್ಟರವರೆಗೆ ಇವು ಎರಡು ಹಡಗಗಳನ್ನು ಮಾತ್ರ ಮುಳುಗಿಸಿವೆ. ಯುದ್ಧ ವಿಮಾನಗಳ ಸಹಾಯದಿಂದ ಬ್ರಿಟಿಷ್ ಯುದ್ಧ ಹಡಗಗಳು ಈ ಜರ್ಮನ್ ಹಡಗುಗಳನ್ನು ಹುಡುಕುತ್ತಿವೆ. ಅಕ್ಟೋಬರ 26ರಲ್ಲಿ ಸಶಸ್ತ್ರವಾಗಿದ್ದ ಸಾಮಾನು ಹಡಗವೊಂದಕ್ಕೂ ಒಂದು ಸಬ್‌ಮೆರಿನಿಗೂ ತೀವ್ರಯುದ್ಧವಾಗಿ ಸಬ್‌ಮೆರೀನು ಮುಳುಗಿಸಲ್ಪಟ್ಟಿರುವುದು. ಜರ್ಮನಿಯ ಡ್ಯೂಚ್ಲೆಂಡ್ ಯುದ್ಧ ಹಡಗವು ಅಕ್ಟೋಬರ ತಾ. 25ರಲ್ಲಿ 2 ಹಡಗಗಳನ್ನು ಮುಳುಗಿಸಿರುವುದು. ಸಿಟಿ ಅಫ್ ಫ್ಲಿಂಟ್ ಎಂಬ ಯುನೈಟೆಡ್ ಸ್ಟೇಟ್ಸಿನ ಹಡಗವನ್ನು ಜರ್ಮನಿಯ ಎಮ್ಡನ್ ಹಡಗವು ಹಿಡಿದು, ಅದರಲ್ಲಿ ಅಕ್ರಮವಾದ ಸಾಮಾನಿದೆಯೆಂದು ಜಪ್ತಿಮಾಡಲೊಯ್ಯುವಾಗ ಸಿಟಿ ಅಫ್ ಫ್ಲಿಂಟಿನಲ್ಲಿ ನೀರಿನ ಕೊರತೆ ಉಂಟಾಗಿ ಅದನ್ನು ರಷ್ಯದ ಮಾರ್ಮಾನ್ಸ್ಕ್ ಎಂಬ ಬಂದರಕ್ಕೊಯ್ಯಲಾಯಿತು. ಇದರಿಂದ ಯುನೈಟೆಡ್ ಸ್ಟೇಟ್ಸ್ ಸರಕಾರವು ಉದ್ವೇಗಗೊಂಡಿದೆ. ಸೋವಿಯೆಟ್ ಸರಕಾರವು ಸಿಟಿಅಫ್‌ಫ್ಲಿಂಟನ್ನು ಅಕ್ಟೋಬರ ತಾ. 28ರಲ್ಲಿ ಬಿಡುಗಡೆಮಾಡಿದೆ.

ವಾರ್ಸೋ ಪಟ್ಟಣಿಗರ ಭಯಂಕರ ಸಂಕಷ್ಟ

ಪೋಲೆಂಡಿನ ಮುಖ್ಯ ಪಟ್ಟಣವಾದ ವಾರ್ಸೋದಲ್ಲಿ ಜನರುಪಡುವ ಪಾಡನ್ನು ಬಣ್ಣಿಸಲಸಾಧ್ಯವಾಗಿದೆ. ಸತ್ತ ನಾಯಿಗಳ ಮಾಂಸವೂ ಆಹಾರಕ್ಕಾಗಿ ಸಿಕ್ಕುವುದು ಕಷ್ಟವಾಗಿದೆ. ಒಂದು ನಾಯಿಯ ಮಾಂಸಕ್ಕೆ 10 ಶಿಲ್ಲಿಂಗಿನ ವರೆಗೆ ಬೆಲೆ ಕೊಡಬೇಕಾಗಿದೆ. ಪ್ರಾಮುಖ್ಯ ಕಟ್ಟಡ ಮತ್ತು ದೊಡ್ಡ ದೊಡ್ಡ ರಸ್ತೆಗಳೆಲ್ಲಾ ಸಂಪೂರ್ಣ ನಾಶವಾಗಿವೆ. ಇಲೆಕ್ಟ್ರಿಕ್ ಲೈಟು ನೀರಾಶಯ ಮತ್ತು ಟ್ರೇಮುಗಳೇನೂ ಇಲ್ಲ. ಎಲ್ಲಾ ಅಂಗಡಿಗಳೂ ಮುಚ್ಚಲ್ಪಟ್ಟಿವೆ. ಒಂದೇ ಒಂದು ಲೈನಿನಲ್ಲಿ ಬಸ್ ಚಲಾವಣೆಯಾಗುತ್ತದೆ. ಎಲ್ಲಾ ಪೋಲಿಶ್ ಪತ್ರಿಕೆಗಳೂ ನಿಲ್ಲಿಸಲ್ಪಟ್ಟಿವೆ. ಆದರೆ ಜರ್ಮನರು ತಮ್ಮದೇ ಆದ ಪತ್ರಿಕೆಗಳನ್ನು ನಡೆಸುತ್ತಾರೆ. ಕಡೆಯ ವರೆಗೆ ವಾರ್ಸೋವನ್ನು ರಕ್ಷಿಸುವ ಜವಾಬ್ದಾರಿ ವಹಿಸಿದ್ದ ವೀರ ಪುರಾಧ್ಯಕ್ಷ ಎಮ್. ಸ್ಟಾರ್ಜಿನ್‌ಸ್ಕಿ ಮತ್ತು ಇತರ ಪುರ ಸಭಾ ಮೆಂಬರರನ್ನು ಜರ್ಮನರು ನಿರ್ಬಂಧದಲ್ಲಿರಿಸಿ ಕೆಲಸ ಮಾಡಿಸುತ್ತಿದ್ದಾರೆ. ಪಟ್ಟಣದ ಸ್ಮಶಾನ ಶಾಂತತೆಯು, ರಾತ್ರಿ ಜರ್ಮನ್ ಸೈನಿಕರು ಮತ್ತು ಇನ್ನೂ ಬಂಡಾಯವೆಬ್ಬಿಸುತ್ತಿರುವ ಪೋಲರು ಹೊಡೆದುಕೊಳ್ಳುವ ರಿವಾಲ್ವರ್ ಗುಂಡುಗಳಿಂದ ಮಾತ್ರ ಭಂಗ ಹೊಂದುತ್ತದೆ.

ದಿನಕ್ಕೆ 4½ ಮಿಲ್ಯ ಪವನು ವೆಚ್ಚ

ಇಂಗ್ಲೆಂಡು ಯುದ್ಧಕ್ಕಾಗಿ ದಿನವೊಂದರ 35 ಮಿಲ್ಯ ಪವನು ವ್ಯಯಮಾಡುತ್ತಿದೆ. ಅದರ ಆರ್ಥಿಕ ಪತನವು ಬೇಗನೆ ಆಗಲಿದೆಯೆಂದು ನಾಝಿಗಳು ಅಪಪ್ರಚಾರಮಾಡುತ್ತಿದ್ದಾರೆ. ಕಳೆದ ಸೆಪ್ಟಂಬರ ತಾ. 2ರಿಂದ ಅಕ್ಟೋಬರ ತಾ 14ರವರೆಗಣ 42ದಿನಗಳ ಬ್ರಿಟಿಷ್ ಸರಕಾರದ ವೆಚ್ಚ 192,728,000 ಪವನುಗಳಾಗಿವೆ. ಇದರಲ್ಲಿ ಸಾಲದ ಬಡ್ಡಿ, ಇತರ ಸಮಾಜ ಹಿತಸಾಧಕ ಕೆಲಸಗಳ ವೆಚ್ಚವೂ ಸೇರಿತು. ಈ ಪ್ರಕಾರ ಇಂಗ್ಲೆಂಡಿನ ದಿನವಹಿ ವೆಚ್ಚ 4,599,000 ಪವನುಗಳಾಗಿವೆ. ಇಂಗ್ಲೆಂಡಿನ ಚಿನ್ನ ಸಂಗ್ರಹವು 500,000,000 ಪವನುಗಳಷ್ಟಿವೆ ಬೇರೆ ದೇಶಗಳ ಭದ್ರತೆಗಳಲ್ಲಿ ಅದು 3,500,000,000 ಪವನುಗಳನ್ನು ವಿನಿಯೋಗಿಸಿವೆ ಇದರಲ್ಲಿ ಮೂರನೇ ಒಂದಂಶವನ್ನು ಆಹಾರ ಸಾಮಾಗ್ರಿ ಮತ್ತು ಇತರ ಸಾಮಾನುಗಳಿಗಾಗಿ ಮಾರ್ಪಡಿಸಬಹುದು. ಇಂಗ್ಲೆಂಡಿನಲ್ಲಿ ಬೇಕಷ್ಟು ಆಹಾರ ಸಾಮಾಗ್ರಿಗಳಿವೆ. ಆದರೆ ನಾಝಿ ಜರ್ಮನಿಯ ಚಿನ್ನ ಸಂಗ್ರಹ ಮತ್ತು ಇತರ ಧನಾಶಯವು ಇಷ್ಟರಲ್ಲೇ ಬಂದಾಗಿದೆ. ಆಸ್ಟ್ರಿಯ ಮತ್ತು ಜೆಕೊಸ್ಲೊವೇಕಿಯದ ಚಿನ್ನದಿಂದ ಅವರು ಯುದ್ಧದ ಆರಂಭದಲ್ಲೇ ಉಂಟಾಗಿದ್ದ ಚಿನ್ನದ ಕೊರತೆಯನ್ನು ಭರ್ತಿಮಾಡಿದುದಾಗಿದೆ, ಅವರ ಚಿನ್ನ ಸಂಗ್ರಹ ಮತ್ತು ವಿದೇಶಗಳ ವಿನಿಮಯವು 50,000,000 ಪವನುಗಳಷ್ಟಾಗಿವೆ ಜರ್ಮನಿಯು ಒಂದು ವೇಳೆ ಸಮುದ್ರ ಮುತ್ತಿಗೆಯನ್ನು ಭೇದಿಸಿದರೂ, ತಟಸ್ಥ ರಾಷ್ಟ್ರಗಳಿಂದ ಸಾಮಾನು ತರಲು ಅವರೊಡನೆ ಚಿನ್ನವಿರುವುದಿಲ್ಲೆಂದು ಬ್ರಿಟಿಷ್ ಸರಕಾರದ ಕಡೆಯ ಪ್ರಕಟಣೆ ಯುದ್ಧದ ಪ್ರಥಮ ತಿಂಗಳಾದ ಸಪ್ಟಂಬರದಲ್ಲಿ ಬ್ರಿಟನಿನ ಆಮದು 50 ಮಿಲ್ಯ ಪವನಿನಷ್ಟಿದ್ದು ಸೇಕಡ 33ರಷ್ಟು ಕಡಿಮೆಯಾಗಿದೆ ರಫ್ತು 23 ಪವನಾಗಿ ಸೇಕಡ 42ರಷ್ಟು ಇಳಿದುಹೋಗಿದೆ. ಯುದ್ಧಾರಂಭದ ಪ್ರಥಮ 3 ವಾರಗಳಲ್ಲಿ ಭೂಮಧ್ಯ ಸಾಗರವು ಮುಚ್ಚಲ್ಪಟ್ಟದ್ದೇ ಇದಕ್ಕೆ ಕಾರಣ. ಕಳೆದ 10 ದಿವಸಗಳಿಂದ ಹಡಗ ಸಂಚಾರವು ಹೆಚ್ಚಲಾರಂಭವಾಗಿದೆ. ವ್ಯಾಪಾರ ವಹಿವಾಟುಗಳು ಬಹಳ ಹೆಚ್ಚಿರುತ್ತವೆ

16 ಜರ್ಮನ್ ವಿಮಾನಗಳನಾಶ

ಜರ್ಮನ್ ವಿಮಾನಗಳು ಬ್ರಿಟಿಷ್ ಹಡಗಗಳ ಮೇಲೆ ಬೋಂಬೆಸೆದು ಹಾವಳಿ ಮಾಡಲೆತ್ನಿಸಿ ಹತಭಗ್ನವಾಗಿವೆ. ಬ್ರಿಟಿಷರ ಹಡಗಗಳಿಗೇನೂ ಹೆಚ್ಚಿನ ಹಾವಳಿಯಾಗಿರುವುದಿಲ್ಲ ಸ್ಕೋಟ್ಲೆಂಡಿನ ಫರ್ಥ್ ಆಫ್ ಫೋರ್ಥಿನ ಮೇಲೆ ನಡೆಸಲ್ಪಟ್ಟ ವಿಮಾನಧಾಳಿಗಳು ಸಂಪೂರ್ಣ ನಿರರ್ಥಕವಾಗಿವೆ. ಬ್ರಿಟಿಷ್ ವಿಮಾನಗಳು ಕೂಡಲೇ ಜರ್ಮನ್ ವಿಮಾನಗಳನ್ನಿದಿರಿಸಿ ಹಿಂದಕ್ಕೋಡಿಸಿವೆ. ಬ್ರಿಟಿಷ್ ಹಡಗುಗಳ ಮೇಲೆ ಜರ್ಮನ್ ವಿಮಾನಗಳು 5 ಸಲನಡಿಸಿದ ವಿಮಾನಧಾಳಿಗಳಿಂದ 1 ಬೋಂಬು ಮಾತ್ರ ಹಡಗವೊಂದಕ್ಕೆ ತಾಗಿದೆ. ಅದೂ ಒಡೆಯಲಿಲ್ಲ, ಇನ್ನು ಮುಂದೆ ಜರ್ಮನ್ ವಿಮಾನಗಳು ಇನ್ನೂ ಪ್ರಬಲ ಧಾಳಿನಡಿಸಬಹುದೆಂದೂ ಅವನ್ನಿದಿರಿಸಲು ಬ್ರಿಟಿಷ್ ಹಡಗಗಳು ಮತ್ತು ವಿಮಾನಗಳು ಸಿದ್ಧವೇ ಇರುವವೆಂದೂ ತಿಳಿದುಬರುತ್ತದೆ.

Hark:-

Only a few pages more are available

FOR

ADVERTISEMENT

IN

THULUNAD

TILAKA PANCHANGA

1940

Apply early to: MANAGER

THULUNAD PRESS, UDIPI.

(PROPS:-GENERAL SUPPLIES, LIMITED)

GET RICH

AND

PROSPEROUS

through Simple Means upheld and pursued by Millions.........!

WRITE NOW WITH STAMP.—

K. S. Row,

Worli, BOMBAY.

ಹಿಟ್ಲರರ ಮಹತ್ವಾಕಾಂಕ್ಷೆಗೆ ಸ್ಟೆಲಿನರ ತಡೆ.

(೧೧ನೇ ಪುಟದಿಂದ)

ಮೂಲಕವೇ ನಡಿಸುವಂತಾಗಿ ಇಂಗ್ಲೆಂಡಿನೊಡನೆ ನಡಿಸುತ್ತಿದ್ದ ವ್ಯಾಪಾರ ಕಡಿಮೆಯಾಗುವುದು. ಎಸ್ತೋನಿಯ, ಲಿಟೋವಿಯ ಮತ್ತು ಲಿಥುವಾನಿಯಗಳು ರಷ್ಯದ ಅಧೀನ ರಾಷ್ಟ್ರಗಳಂತಾಗಿರಲು ಸಂತೋಷಗೊಂಡಿರುವಂತಿದೆ. ಎಲ್ನಿವು ಮೊದಲು ಲಿಥುವಾನಿಯದ ಮುಖ್ಯ ಪಟ್ಟಣವಾಗಿತ್ತು. ಅದನ್ನು ಇತ್ತಲಾಗಿ ಪೋಲೆಂಡು ಬಲಾತ್ಕಾರದಿಂದ ವಶಪಡಿಸಿಕೊಂಡಿದ್ದಿತು. ಅದನ್ನೀಗ ರಷ್ಯವು ಲಿಥುವಾನಿಯಕ್ಕೆ ಬಿಟ್ಟುಕೊಟ್ಟಿರುವುದು. ಜರ್ಮನಿಯು ಇತ್ತಲಾಗಿ ವಶಪಡಿಸಿಕೊಂಡಿದ್ದ ಮೆಮೆಲನ್ನೂ ಲಿಥುವಾನಿಯಕ್ಕೆ ಬಿಟ್ಟುಕೊಡುವ ಆಲೋಚನೆ ನಡೆದಿದೆ. ಎಸ್ತೋನಿಯ ಕರಾವಳಿಯಲ್ಲಿ ರಷ್ಯವು ನೌಕಾ ಮತ್ತು ವಿಮಾನ ನಿಲಯ ಸ್ಥಾಪಿಸಲಿದೆ. ಎಸ್ತೋನಿಯದ ಪಾಲ್ಡಿಸ್ಕಿ ಎಂಬ ಬಂದರವು ಇನ್ನು ಮುಂದೆ ರಷ್ಯದ ನೌಕಾನಿಲಯ ಮತ್ತು ವ್ಯಾಪಾರ ಬಂದರಾಗುವುದು. ಲಿಟೋವಿಯದ ಲಿಬೋ ಮತ್ತು ಎಂಡೋ ಎಂಬ ಬಂದರುಗಳೂ ರಷ್ಯಕ್ಕೆ ಸೇರುವವು. ರಷ್ಯವು ಲಿಟೋವಿಯ, ಎಸ್ತೋನಿಯ ಮತ್ತು ಲಿಥುವಾನಿಯಗಳಿಗೆ ರಕ್ಷಣೆಯ ಭರವಸೆ ಕೊಟ್ಟು ಅವುಗಳ ವ್ಯಾಪಾರಿ ಸಾಮಾನುಗಳನ್ನು ತನ್ನ ಸಾಮಾನುಗಳೊಂದಿಗೆ ಬದಲಾಯಿಸಲೊಪ್ಪಿದೆ.

ಇದೇ ರೀತಿ ಫಿನ್ಲೆಂಡನ್ನು ಕೂಡಾ ತನ್ನ ಅಧೀನ ಪಡಿಸಲು ರಷ್ಯವು ಮಾಡಿದ ಯತ್ನ ಫಲಕಾರಿಯಾಗದೆ ವೈಮನಸ್ಯವುಂಟಾಯಿತು. ಆದರೆ ರಷ್ಯವು ಯುದ್ಧಮಾಡಲು ಸಿದ್ಧವಿಲ್ಲ. ಒತ್ತಾಯದ ಉಪಾಯದಿಂದಲೇ ಕಾರ್ಯಸಾಧಿಸನೋಡುತ್ತಿದೆ. ಫಿನ್ಲೆಂಡು ದೊಡ್ಡ ರಾಜ್ಯ. ಮತ್ತು ಸ್ವೀಡನ್ ಡೆನ್ಮಾರ್ಕ್ ನೋರ್ವೆಗಳ ಬೆಂಬಲ ಅದಕ್ಕಿದೆ. ಆದುದರಿಂದ ಅದು ರಷ್ಯದೊಡನೆ ಹೋರಾಡುವುದಕ್ಕಾದರೂ ಸಿದ್ಧವಿದ್ದಿತು. ರಷ್ಯಾ ಮತ್ತು ಫಿನ್ಲೆಂಡುಗಳೊಳಗೆ ಯಾವಾಗಲೂ ಕಲಹ ನಡದೇ ಇದ್ದಿತು. 1920ರಲ್ಲಿ ಡೋರ್ಪಟ್ ಎಂಬಲ್ಲಿ ರಷ್ಯಾ ಮತ್ತು ಫಿನ್ಲೆಂಡುಗಳೊಳಗೆ ಒಡಂಬಡಿಕೆಯಾಯಿತು. ಅನಂತರ ಫಿನ್ಲೆಂಡಿನ ಬಳಿಯ ಆಲೆಂಡ್ ದ್ವೀಪಗಳಲ್ಲಿ ಕೋಟೆಕಟ್ಟೆ ಭದ್ರತೆ ಮಾಡಲು ಸ್ವೀಡನ್ ಮತ್ತು ಫಿನ್ಲೆಂಡುಗಳು ಮುಂದಾದಾಗ ರಷ್ಯವು ವಿರೋಧಿಸಿತು. ಇಂದೀಗ ರಷ್ಯವು ಫಿನ್ಲೆಂಡ್ ಕೊಲ್ಲಿಯ ಕೆಲವು ದ್ವೀಪಗಳನ್ನು ತನಗೆ ಬಿಟ್ಟುಕೊಡಬೇಕೆಂಬ ಮತ್ತು ಆಲೆಂಡ್ ದ್ವೀಪಗಳಲ್ಲಿ ಕೋಟೆಕಟ್ಟಬಾರದೆಂಬ ಶರ್ತಗಳನ್ನು ಫಿನ್ಲೆಂಡಿಗಿತ್ತಿದೆ. ಈ ಕುರಿತೀಗ ರಾಜಪ್ರಸ್ತಾಪ ನಡಿಯುತ್ತಿದೆ. ಬಾಲ್ಟಿಕ್ ಪ್ರದೇಶದಲ್ಲಿ ರಷ್ಯದ ಪ್ರಭಾವವು ಬಹಳವಾಗಿ ಬೆಳೆದುದರಿಂದ ಸ್ವೀಡನ್ ಡೆನ್ಮಾರ್ಕ್ ನೋರ್ವೆ ಮೊದಲಾದ ಉತ್ತರದ ರಾಷ್ಟ್ರಗಳಲ್ಲಿ ತಳಮಳವುಂಟಾಗಿದೆ. ಇತ್ತಲಾಗಿ ಅವುಗಳ ಮುಖ್ಯಾಧಿಕಾರಿಗಳು ಸ್ಟೊಕಹೋಲ್ಮಿನಲ್ಲಿ ಸಭೆ ಸೇರಿ ಆಲೋಚಿಸಿದ್ದರು. ಈ ಭಾಗದ ವ್ಯಾಪಾರ ವಹಿವಾಟೆಲ್ಲಾ ಉತ್ತರ ಸಮುದ್ರದ ಮಾರ್ಗವಾಗಿ ಇಂಗ್ಲೆಂಡ್ ಫ್ರಾನ್ಸುಗಳ ಮೂಲಕ ನಡೆಯುವ ಬದಲಿಗೆ ಬಾಲ್ಟಿಕ್ ಸಮುದ್ರ ಮಾರ್ಗವಾಗಿ ಜರ್ಮನಿ ಮತ್ತು ರಷ್ಯಗಳೊಡನೆ ನಡೆದರೆ ಇಂಗ್ಲೆಂಡಿಗೆ ದೊಡ್ಡ ಪೆಟ್ಟಾಗುವದು. ಜರ್ಮನಿಯು ಈ ಹಂಚಿಕೆಯನ್ನೇ ಮಾಡುತ್ತಿರುವಂತಿದೆ. ಅದಕ್ಕಾಗಿ ತನ್ನ ಕೀಲ್ ಕಾಲುವೆಯನ್ನದು ತೆರೆದು ಹಾಕಲು ಸಿದ್ಧವಿದೆ.

ಬಾಲ್ಟಿಕ್ ರಾಷ್ಟ್ರಗಳ ಮೇಲೂ ರಷ್ಯವು ತನ್ನ ವರ್ಚಸ್ಸನ್ನು ಸ್ಥಾಪಿಸಲೆತ್ನಿಸಿದುದು ಜರ್ಮನಿಯ ಪ್ರೇರೇಪಣೆ ಮೇರೆಗೆಂದೇ ಹೇಳಬಹುದು. ಭೂಮಧ್ಯ ಸಾಗರವನ್ನು ಮಿತ್ರ ರಾಷ್ಟ್ರಗಳಿಗೆ ಮುಚ್ಚಿಬಿಟ್ಟು ರಷ್ಯ ಮತ್ತು ಜರ್ಮನಿಗಳೊಳಗೇನೇ ಟರ್ಕಿಯು ಹೆಚ್ಚಿನ ಸಂಬಂಧಬೆಳೆಸಬೇಕೆಂದು ನಡೆದ ಪ್ರಯತ್ನವು ಫಲಿಸಿರುವುದಿಲ್ಲ. ಇದರಿಂದ ಹಿಟ್ಲರರು ಬಹಳ ನಿರಾಶೆಗೊಂಡಿರುತ್ತಾರೆ. ಆದರೆ ರಷ್ಯಕ್ಕೂ ಟರ್ಕಿಗೂ ಮೊದಲಿದ್ದ ಸ್ನೇಹಕ್ಕೇನಾದರೂ ಇದರಿಂದ ಧಕ್ಕೆಯುಂಟಾದಂತೆ ತೋರುವುದಿಲ್ಲ. ಅಂತೂ ರಷ್ಯವು ಯುರೋಪಿನ ಯಾವ ರಾಷ್ಟ್ರಗಳ ಗೊಡವೆಯನ್ನೂ ಹಚ್ಚಿಕೊಳ್ಳದೆ ಕೇವಲ ತನ್ನ ಸ್ಥಾನವನ್ನು ಬಲಗೊಳಿಸುವ ಮತ್ತು ತನ್ನ ಪ್ರಭಾವವನ್ನು ಹೆಚ್ಚಿಸುವ ಧೋರಣೆ ವಹಿಸಿರುತ್ತವೆ. ಲೋಕದ ನವ ವ್ಯವಸ್ಥೆ, ಪ್ರಜಾಸತ್ತೆ ಮತ್ತು ಸ್ವಾತಂತ್ರ್ಯಕ್ಕಾಗಿ ತಾವು ಯುದ್ಧ ಹೂಡಿರುವುದೆಂಬ ಮಿತ್ರ ರಾಷ್ಟ್ರಗಳ ಉದ್ಘೋಷದಲ್ಲಿ ಹುರುಳಿಲ್ಲೆಂಬುದನ್ನು ಸ್ಟೆಲಿನರೂ ಮೊದಲೇ ಮನಗಂಡಿರುವರು. ಎಲ್ಲವರೂ ಪ್ರಯತ್ನಿಸುವುದು ತಮ್ಮ ಸ್ವಾರ್ಥಸಾಧನೆಗೆ, ಮತ್ತು ತಮ್ಮ ಅಧಿಕಾರ ಸ್ಥಿರತೆಗೆ. ಬಾಯಿಯಲ್ಲಿ ಮಾತ್ರ ಉದಾತ್ತ ತತ್ವಗಳನ್ನು ಘೋಷಿಸುತ್ತಿರುವುದು. ಆದುದರಿಂದ ಸ್ಟೆಲಿನರು ಕೇವಲ ಸೋವಿಯೆಟ್ ರಷ್ಯದ ಅಭ್ಯುದಯ, ಭದ್ರತೆ ಮತ್ತು ಸ್ಥಿರತೆಯ ದೃಷ್ಟಿಯಿಂದ ಕೆಲಸಮಾಡುತ್ತಿದ್ದಾರೆ.

ಬೊಂಬಾಯಿಯ ಕನ್ನಡಿಗರಲ್ಲಿ ವಿನಂತಿ

ದಕ್ಷಿಣ ಕನ್ನಡಜಿಲ್ಲೆಯಲ್ಲಿ ಬಡನಿವಾಸಿಗಳ 28 ಗ್ರಾಮಗಳಿಂದೊಡಗೂಡಿದ **ಮೂಡಬಿದ್ರೆ** ಲೋಕಲ್ ಫಂಡ್ ಆಸ್ಪತ್ರೆಯಲ್ಲಿ "ಬಡ ರೋಗಿಗಳ ವಸತಿಗೃಹ"ದ ಅಭಾವವಿದ್ದುದರಿಂದ ಅದರ ಮಹನೀಯರ ಅಪೇಕ್ಷೆ ಮೇರೆಗೆ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಶ್ರೀ Dr. ವಿಠ್ಠಲ ಶೆಟ್ರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿದ 'ಬಡ ರೋಗಿಗಳ ಸಹಾಯಕ ಸಭೆ' ಕಮಿಟಿಯವರು ಕಳೆದ ತಾ.9-10-39 ನೇ ದಿನ ಆ ಊರಿನ ದಿವಾನರ ಹಸ್ತದಿಂದ ಜನರಲ ವಾರ್ಡಿನ ಕಟ್ಟಡದ 'ಅಸ್ತಿವಾರ ಕಲ್ಲು ಸ್ಥಾಪನೆ'ಯ ಸಮಾರಂಭವನ್ನು ನಡೆಸಿದರು. ಮಾನ್ಯ ದಿವಾನರು ಕೂಡಾ 100 ರೂಪಾಯಿಗಳ ದಾನವನ್ನು ಮಾಡಿರುವರು. ಸಾರ್ವಜನಿಕರ ಸಹಾಯದಿಂದ ಈ ಕಾರ್ಯವನ್ನು ಪೂರೈಸಬೇಕಾದುದರಿಂದ ಇದೇ ಬರುವ ತಾ. 1-11-39ಕ್ಕೆ ಸದರಿ ಕಮಿಟಿಯ ಪ್ರೆಸಿಡೆಂಟ್, ವ್ಹಾಯಿಸ್‌ಪ್ರೆಸಿಡೆಂಟ ಮತ್ತು ಸೆಕ್ರೆಟರಿಯವರು ಬೊಂಬಾಯಿಗೆ ಬರಲಿರುವರು, ಉದಾರಿಗಳಾದ ಬೊಂಬಾಯಿಯ ಕನ್ನಡಿಗರು ಇವರುಗಳಿಗೆ ಸಂಪೂರ್ಣ ಸಹಕಾರ ಪ್ರೋತ್ಸಾಹಗಳನ್ನು ಕೊಟ್ಟು ಕನ್ನಡಿಗರ ಅಭಿಮಾನವನ್ನು ವ್ಯಕ್ತಗೊಳಿಸಬೇಕಾಗಿ ವಿನಂತಿ.

ಇತಿ,

ಧರಣೇಂದ್ರ ಕುಮಾರ ಶಾಸ್ತ್ರೀ, ಬೊಂಬಾಯಿ.

ದಾರಿಹೋಕನ ಡೈರಿ.

ನವಯುಗದ ದಾರಿಹೋಕನ ಮೇಲೆ ಸ್ವತಂತ್ರ ಭಾರತದ ಟ್ರೋಟರನ ವಕ್ರದೃಷ್ಟಿ ಬಿದ್ದಿದೆ. ಪ್ರಾಯಶಃ ಟ್ರೋಟರನು ಇಂದಿನ ತನ್ನ ಸ್ಥಾನದ ಮೋಹದಿಂದ ಹಿಂದಿನ ತನ್ನ ಮನೋವೃತ್ತಿಯನ್ನು ಮರೆತಿರಬೇಕು. ಇಲ್ಲವಾದರೆ ಈಗ ದಾರಿಹೋಕನನ್ನು ತಟ್ಟಿ ಶಾಹಭಾಸೆನ್ನುತ್ತಿದ್ದ ಟ್ರೋಟರ. ಸ್ಥಾನ ಮಹಿಮೆಗೇನೆನ್ನಬೇಕು! ಎಂತಹ ಅಂತರ್ಲಾಗವನ್ನೆಲ್ಲಾ ಹಾಕಿಸುತ್ತದದು ಜನರಿಂದ!

೦೦ ೦೦ ೦೦

ದಕ್ಷಿಣ ಕನ್ನಡ ಮೋಟರ್ ಕೆಲಸಗಾರರ ಸಂಘದ ಗಲಾಟೆಯು ಒಂದೊಂದು ಕ್ರೋನಿಕ್ ರೋಗವಾಗಿಹೋಗಿದೆ, ಅದು ಒಂದೊಂದು ಕಾಲಕ್ಕೆ ಒಂದೊಂದು ಸ್ವರೂಪದಿಂದ ಹೊರಬೀಳುತ್ತಿದೆ.

೦೦ ೦೦ ೦೦

ಒಮ್ಮೆ ಸಿ. ಪಿ. ಸಿ. ಕಂಪೆನಿಯಲ್ಲಿ ಮುಷ್ಕರದ ಗಲಾಟೆಯೆದ್ದು ಕೊನೆಗೆ ಹೇಗಾದರೂ ಮಾನ್ಯ ಮಂತ್ರಿಗಿರಿಗಳ ಮಧ್ಯಸ್ತಿಕೆಯಿಂದ ಅದು ಇತ್ಯರ್ಥವಾಯಿತು. ಕಲೆಕ್ಟರ್ ವೆಲ್ಲೋಡಿಯವರು ಮುಷ್ಕರನಿಲ್ಲಿಸಿ ಸುಮ್ಮನಾದರು. ಪುನಃ ಮುಷ್ಕರದ ಹೊಗೆಯಾಡ ಹತ್ತಿತು. ಲೇಬರ್ ಕಮಿಶನರರು ಬಂದು ಬಹಳವಾಗಿ ಪರಿಶ್ರಮಿಸಿ ಆಳವಾಗಿ ವಿಚಾರಿಸಿ ಇತ್ತಂಡದವರೊಳಗೂ ರಾಜಿಮಾಡಿದರು. ಇನ್ನಾದರೂ ಶಾಂತಿಯಾಗುವುದೆಂಬ ಆಶೋದಯವುಂಟಾಯಿತು.

೦೦ ೦೦ ೦೦

ಆದರೆ ಸ್ವಲ್ಪ ಸಮಯದಲ್ಲೇ ಈ ಆಶೆ ನಿರಾಶೆಯಾಯಿತು. ಸ್ಟಾಫ್ ಎಸೋಸಿಯೇಶನೆಂಬುದೊಂದು ಜನ್ಮತಾಳಿತು. ಕೆಲಸಗಾರರೊಳಗೆ ಭೇದದ ಬೀಜ ಬಿತ್ತಲಾಯಿತು. ಅನಂತರ ಅದನ್ನೂ ಬಿಟ್ಟು ಒಳಹೊಕ್ಕು ಗಲಾಟೆಯೆಬ್ಬಿಸುವ ತಂತ್ರ ನಡೆದಿದೆ. ೦೦ ೦೦ ೦೦

ಈ ವಿದ್ಯೆಯಲ್ಲೆಲ್ಲಾ ಒಳ್ಳೇ ತರಬೇತಾದವರೇ ಮೋಟರ್ ಕೆಲಸಗಾರರ ಸಂಘದಲ್ಲಿಯೂ ಇದ್ದಾರೆ. ಗುರುವಿನಿಂದ ಕಲಿತ ವಿದ್ಯೆಯನ್ನು ಗುರುವಿನ ವಿರೋಧವಾಗಿಯೇ ಉಪಯೋಗಿಸಿ ಬಿಟ್ಟಿದ್ದಾರೆ ಅವರು. ಅವರ ಮೇಲೆ ಹೊರಲ್ಪಟ್ಟ ಅವಿಶ್ವಾಸ ಠರಾವು ಅಕ್ರಮವೆಂದು ನಿರಾಕರಿಸಿದ್ದಾರೆ.

೦೦ ೦೦ ೦೦

ಮಳೆ ಬೀಳಲಾರಂಭಿಸಿದೊಡನೆಯೇ ಎಲ್ಲೆಲ್ಲಿ ಮಣ್ಣೊಳಗೆ ಹುದುಗಿಕೊಂಡಿದ್ದ ಕಪ್ಪೆಗಳು 'ಗೊರಂಕ್, ಗೊರಂಕ್' ಎಂದು ಮೇಲಕ್ಕೆದ್ದು ಬಂದು ತಮ್ಮ ನಿಜಸ್ವರೂಪವನ್ನು ತೋರಿಸುವಂತೆ, ಇಷ್ಟರವರೆಗೆ ಎಲ್ಲಿಯೋ ನಿದ್ದೆಹೋಗಿದ್ದ ಕೆಲವರೆಲ್ಲಾ ಈಗ ಫಕ್ಕನೆ ಎದ್ದು ಬಂದು, "ಕಾಂಗ್ರೆಸು ಜನತೆಯ ಪ್ರತಿನಿಧಿ ಸಂಸ್ಥೆಯಲ್ಲ. ಅದಕ್ಕೆ ಬೇಸಾಯಗಾರರೇ ಮೊದಲಾದ ಸೇಕಡ 90 ಮಂದಿ ಜನತೆಯ ಬೆಂಬಲವಿಲ್ಲ" ಎಂದೆಲ್ಲಾ ಮನವಿಗಳನ್ನು ಗವರ್ನರರಿಗೆ ಕಳುಹಿಸತೊಡಗಿದ್ದಾರೆ. ದಕ್ಷಿಣಕನ್ನಡದಿಂದಲೂ ಇಂತಹ ಮನವಿಗಳು ಕೆಲವು ಗವರ್ನರರ ಬಳಿಗೆ ಹೋಗಿರುವವಂತೆ

೦೦ ೦೦ ೦೦

ಕಾಂಗ್ರೆಸಿಗೆ ಜನ ಬೆಂಬಲವಿಲ್ಲೆಂದು ಸದ್ದು ಹೊಡೆದು ಸನಾತನಿಗಳು ಮತ್ತು ಜಸ್ಟಿಸ್ ಪಾರ್ಟಿಯವರು ಕಡಲೂರಿನಲ್ಲಿ ಚುನಾವಣೆಗೆ ನಿಂತರು, ತಲೆಯೆತ್ತಲಾರದ ಅಪಜಯವು ನಡೆದು ಬಾಲಮುಡಚಿದರು. ಇತ್ತಲಾಗಿ 6 ಜಿಲ್ಲೆಗಳಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಯು ಇದನ್ನು ಮತ್ತಷ್ಟು ಸ್ಪಷ್ಟಪಡಿಸಿರುವುದು. ಒಟ್ಟು 309 ಜಿಲ್ಲಾ ಬೋರ್ಡು ಸೀಟುಗಳಲ್ಲಿ 269 ಕಾಂಗ್ರೆಸಿಗೆ ಸಿಕ್ಕಿವೆ. ತೀವ್ರ ಪ್ರತಿ ಸ್ಪರ್ಧೆಯಿದ್ದರೂ ಕಾಂಗ್ರೆಸು ಸುಮಾರು ಸೇಕಡಾ 90ರಷ್ಟುರ ಸೀಟುಗಳನ್ನು ಗೆದ್ದಿರುತ್ತದೆ.

೦೦ ೦೦ ೦೦

ಮಧುರೆಯಲ್ಲಿ ಸನಾತನಿಗಳ ದೇವಸ್ಥಾನ ಪ್ರವೇಶದ ವಿರೋಧವಾಗಿ ಸತ್ಯಾಗ್ರಹ ಆರಂಭಿಸಿದ್ದಾರೆ. ಇವರ ಸತ್ಯಾಗ್ರಹ ಅತಿ ನೂತನವಾದುದು. ಶರ್ತಿ ಪ್ರಕಾರ ಕೆಲವರು ಒಂದು ದಿವಸ ಉಪವಾಸ ಕೂತರಾಯಿತು. ಯಾರಿಗೂಬಾಧಕವಿಲ್ಲದ ಸತ್ಯಾಗ್ರಹವಿದು. ನಿರಾತಂಕವಾಗಿ ಬೇಕಷ್ಟು ನಡಿಸಬಹುದಿದನ್ನು ಸನಾತನಿಗಳು. ಮಧುರೆಯ ಮೀನಾಕ್ಷಿಯು ಇವರಿಗೊಲಿದು ದೇವಸ್ಥಾನ ಪ್ರವೇಶವಾದಿಗಳನ್ನು ಎಂದು ನಾಶಮಾಡುವಳೋ ನೋಡಬೇಕು!

೦೦ ೦೦ ೦೦

ಬಂಗಾಳದ ಪ್ರಧಾನಮಂತ್ರಿ ಮಿ. ಫಜ್ಲುಲ್ ಹಕ್ಕರಿಗೆ 'ಚಲೆಂಜ್' ಕೊಡುವುದೆಂದರೆ ಬಹಳ ಪ್ರೀತಿ. ತನ್ನ ಮಂತ್ರಿಮಂಡಲಿಗೆ ಸೇರಿದ ಶ್ರೀ. ಎನ್. ಆರ್. ಸರಕಾರರಿಗೆ ಬ್ರಿಟಿಷ್ ಸರಕಾರದ ಧೋರಣೆಯನ್ನು ಟೀಕಿಸುವ ಹಕ್ಕೇನು? ತನಗೆ ಮಾತ್ರ ಇಚ್ಛಾನುಸಾರ ಮಾತಾಡುವ ಹಕ್ಕಿದೆಯೆಂದು ಗರ್ಜಿಸಿದರು ಹಕ್ ಸಾಹೇಬರು. ವೈಯಕ್ತಿಕವಾಗಿ ತನಗೆ ಆ ಹಕ್ಕು ಇದ್ದೇ ಇದೆ. ಹಲವು ವಿಷಯಗಳಲ್ಲಿ ತನಗೂ ಹಕ್ ಸಾಹೇಬರಿಗೂ ಅಭಿಪ್ರಾಯ ಭೇದವಿದೆ ಎಂದರು ಶ್ರೀ ಸರ್ಕಾರರು. ಹಕ್ ಸಾಹೇಬರ ಉತ್ತರವಿಲ್ಲ ಅದಕ್ಕೆ. ಕಾಂಗ್ರೆಸ್ ಮಂತ್ರಿಗಳು ಮುಸಲ್ಮಾನರಿಗೆ ಅನ್ಯಾಯ ಮಾಡಿದ್ದಾರೆಂದು ಉದ್ಘೋಷಿಸುವ ಹಕ್ಕರು ಬಂಗಾಳದಲ್ಲಿ ಹಿಂದುಗಳಿಗೆ ಮಾಡಿರುವ ಅನ್ಯಾಯವನ್ನು ಬೆಳಕಿಗೆ ತಂದರೆ ದೇಶವು ಚಕಿತಗೊಳ್ಳದಿರಲಾರದು. ತನ್ನ ಕಾಲಡಿಯ ಕತ್ತಲೆ ತೋರುವುದಿಲ್ಲ ಹಕ್ ಸಾಹೇಬರಿಗೆಂದು ಶ್ರೀ. ಬೋಸರು ಸರಿ ಕೆಮಿಹಿಂಡಿದ್ದಾರೆ. ಹಕ್ ಸಾಹೇಬರು ಅದಕ್ಕೇನಾದರೂ ಕಿವಿಗೊಡದೆ, ಸಂಯುಕ್ತ ಪ್ರಾಂತದ ಮುಸಲ್ಮಾನರಿಗೆ ದೊಡ್ಡ ಅನ್ಯಾಯವಾಗಿದೆ, ಘೋರ ಅತ್ಯಾಚಾರಗಳು ನಡೆದಿರುತ್ತವೆ. ಈ ಕುರಿತು ಯಾವ ವಿಚಾರಣೆಗೂ ತಾವು ಸಿದ್ಧವಿದ್ದೇವೆ. ಧೈರ್ಯವಿದ್ದರೆ ಪಂಡಿತ ಜವಾಹರಲಾಲರು ಮುಂದೆ ಬಂದು ಸಿದ್ಧರಾಗಬಹುದೆಂದು ಪಂಡಿತರಿಗೆ ಆಹ್ವಾನವಿತ್ತಿದ್ದಾರೆ. ಪಂಡಿತರು ಇದಕ್ಕೆ ಮೊದಲೇ ಸಿದ್ಧತೆ ತೋರಿಸಿರುವಾಗ ಈ ಮರ್ಮಬಾಣವೇಕೋ ತಿಳಿಯದು! ಡಾಕ್ಟರ್ ಗೊಬ್ಬೆಲ್ಸರ ಹಿಂದೀ ಪ್ರತಿಮೂರ್ತಿಯಾಗುವಂತಿದ್ದಾರೆ ಹಕ್ ಸಾಹೇಬರು.

೦೦ ೦೦ ೦೦

ಫ್ರಾನ್ಸ್ ಮತ್ತು ಇಂಗ್ಲೆಂಡುಗಳನ್ನು ಬಿಂಗಡಿಸಲೆತ್ನಿಸುತ್ತಿದ್ದಾರೆ ಜರ್ಮನರು. ಫ್ರಾನ್ಸಿನ ಪಾಪ ಎಲ್ಲಕ್ಕೂ ಕಾರಣ ಇಂಗ್ಲೆಂಡೆಂದು ಉರಿದುಬಿದ್ದಿದ್ದಾರೆ ಬ್ರಿಟನಿನ ಮೇಲೆ. ಇಂಗ್ಲೆಂಡಿನ ಮೇಲೆ ಹಿಟ್ಲರರು ಪ್ರಚಂಡ ವೈಮಾನಿಕ ಮತ್ತು ನೌಕಾ ಧಾಳಿನಡಿಸುವರೆಂದು ನಾನಾ ಕತೆಗಳನ್ನು ಹಬ್ಬಿಸುತ್ತಿದ್ದಾರೆ ನಾಝಿ ಪ್ರಚಾರಕರು. ಅಸ್ತ್ರಕ್ಕೆ ಪ್ರತ್ಯಸ್ತ್ರ. ಜರ್ಮನಿ ಮತ್ತು ರಷ್ಯಗಳೊಳಗೆ ವೈಮನಸ್ಯವೆಬ್ಬಿಸಲು ಬ್ರಿಟನು ಪ್ರಯತ್ನಿಸುತ್ತಿರುವುದಿಲ್ಲವೇ?

—ದಾರಿಹೋಕ.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

DAIMONDS! DAIMONDS!

K. R. K. SHET

Opposite Govt College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಮಸ್ತಾಕ (first quality, selected) ಎಸ್ ಸ್ಟ್ರ ದಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕಾಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕಾಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗ ನಿಗಾ ಕೊಡುವುದಲ್ಲದೆ ಸಾಲಿಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು



ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದೆ ಆರೆಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು ಸೀಸೆಕ್ಕೆ 12 ಆಣೆ, ಟಪಾಲು ಖರ್ಚು ಬೇರೆ

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು - **ನವಭಾರತ ಬುಕ್‌ಡಿಪೋ. ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು **ಚಿರಸ್ಮರಣೀಯಗಳಾಗಿವೆ. ಶೋಧನ ಗುಣ** —ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ.** ಸುಖಸೇವನದಿಂದ ಮಧುರವಾಸನೋ ಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಎಲ್ಲಾ ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ, ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ
ವಿಜ್ಞಾನದ ನವೀನ ಮತ್ತು
ವಿಚಿತ್ರ ಶೋಧ

ಕಿವಿಸೋರುವುದು, ನೋವು, ಉರಿಯ ಹುಣ್ಣು, ದಪ್ಪ ನೀರ ಸ್ರಾವ, ತಲೆಸುತ್ತು, ಕಿರ ಕಿರ ಆಸುಸ ... ಕರ್ಣಕ್ಕೊಳಗಿದ ದೋಷ, ಶೀತ ಅಥವಾ ಜ್ವರದ ನಿಮಿತ್ತ ... ಇತ್ಯಾದಿ ... ನಮ್ಮ ವಿಚಿತ್ರ ... ಶ್ರವಣಶಕ್ತಿಯನ್ನು ಪಡೆದವರು ... ಬಾಟ್ಲಿ 1ರ ಬೆಲೆ ರೂ 2, 3 ಬಾಟ್ಲಿಗಳಿಗೆ ರೂ 5, ಟಪಾಲು ಖರ್ಚು ಪ್ರತ್ಯೇಕ

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾತ್ತವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ ಕರುಣಾಕರ ಹೆಗ್ಡೆ ಆರ್ಗನೈಸರ್
ಕೆ ಆರ್ ಕೆ ಶೇಟ್ ಬಿಲ್ಡಿಂಗ್,
ಮಿಶ್ಯನ್ ಹೈಸ್ಕೂಲ್ ರೋಡು

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ,

The Asiatic Govt. Security Assurance Co. Ltd.

ಶ್ರೀ ರಾಮಾ ರೆಸ್ಟೋರೆಂಟ್
ಬೋರ್ಡಿಂಗ್ ಮತ್ತು ಲೋಜಿಂಗ್, ಉಡುಪಿ.

ಬ್ರಾಂಚ್:—ಕೊಡಿಯಾಲಬೈಲು ಮಹಾತ್ಮಾಗಾಂಧಿ ರೋಡು, ಮಂಗಳೂರು.
ರುಚಿಕರ, ಆರೋಗ್ಯಕರ ಭೋಜನ, ನಿರ್ಮಲವಾದ ವಸತಿ. ವಿಶೇಷತಃ ವಿದ್ಯಾರ್ಥಿ ಮೊದಲಾದವರಿಗೆ ಅತ್ಯನುಕೂಲ, ಸರ್ವರಿಗೂ ಸುಲಭವೆನಿಸುವಂತೆ ಅನುಕೂಲ ಹಾಗೂ ಕೇಂದ್ರಸ್ಥಳ. ಎಚ್ ರಾಮಚಂದ್ರನಾಯಕ್, ಪ್ರೊಪ್ರೈಟರ್.

ಸ್ಥಾಪನೆ 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ನೇಮ್ ಬೋರ್ಡು, ಪೇಟೆಗಳ ಚೀಟು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು

Crown Rubber Stamp Co., Balmat Road, MANGALORE

ಉಡುಪಿಗೆ ಬಂದಾಗ



ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯರ ಅಂಗಡಿಗೆ ಬನ್ನಿರಿ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ 'ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ ಔಷಧಿ" ಎಂದು ಕರೆಯಲ್ಪಡುತ್ತಿದೆ ವಾನಿಂಗ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುಚ್ಛಕ್ತಿಯಂತೆ ಪ್ರವರ್ತಿಸಿ ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲು, ಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಗುವುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು 'ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ 'ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್' ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳು

ಕ್ರಯ ಸೀಸೆ 1ಕ್ಕೆ ರೂ. 2—8—0
ವಿ ಪಿ ಬೇರೆ.

ಒಂದೇ ಸಲ 12 ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ ಮತ್ತು ಪ್ಯಾಕಿಂಗ್ ಮಾಫಿ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ 1-4-0
ವಿ ಪಿ ಬೇರೆ

ಒಂದೇ ಸಲ 12 ಸೀಸಗಳನ್ನು ತರಿಸಿಕೊಂಡರೆ ವಿ ಪಿ ಮತ್ತು ಪ್ಯಾಕಿಂಗ್ ಮಾಫಿ

'ಹವನನ್' ಹೆಮೊರ್‍ರ್ಯಾಡ್ — ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಎಹುನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಒಸರುವದಾದರೆ, "ಹವನನ್" ಎಂಬ ಹೆಮೊರೋಯ್ಡ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು **ಸೀಸೆ 1ಕ್ಕೆ ರೂ 1-4-0 ವಿ ಪಿ ಬೇರೆ**

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ 1-0-0 ವಿ ಪಿ ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು.

The Eclipse Distributing Agency,

Dahanu Road, B. B & C. I Ry BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ನಮಗ ಏಜಂಟರುಗಳು ಬೇಕಾಗಿದ್ದಾರೆ. ದಯವಿಟ್ಟು ವಿಚಾರ ಇಂಗ್ಲಿಷಿನಲ್ಲಿಯೇ ಬರೆಯಿರಿ

ered No. M. 3618 DATE 9-11-1939

ನವಯುಗ
NAVAYUGA

ದ್ವಾರಾವತೀಂ ಸಕಲಭಾಗ್ಯವತೀಂ ತು ಪೇಕ್ಷ್ಯ
ಗೋಪಾಲಬಾಲಲಲನಾಕರಪೂಜನಂ ಚ ।
ವಾರ್ಧಿಂ ವಧೂಗೃಹಮತೀತ್ಯ ಸ ಮನ್ಮನಾಥೋ
ಯತ್ರಾಸ್ತಿ ತದ್ರಜತಪೀಠಪುರಂ ಗರೀಯಃ ॥

ಉಡುಪಿ ಶ್ರೀ ಕೃಷ್ಣನ ಸನ್ನಿಧಿಯಲ್ಲಿ

ಇದೇ ಬರುವ ತಾ. 23-11-1939ರಿಂದ 26-11-1939ರ ತನಕ

ಪ್ರಮಾಥಿ ಸಂ|ರದ ಕಾರ್ತಿಕ ಶು. (ಉತ್ಥಾನ) ದ್ವಾದಶಿಯಿಂದ ಆರಂಭಿಸಿ ಹುಣ್ಣಿಮೆಯ ವರೆಗೆ ನಾಲ್ಕು ರಾತ್ರಿಗಳಲ್ಲಿ

ಲಕ್ಷದೀಪೋತ್ಸವವು

ಜರಗಲಿರುವುದು.

ಶ್ರೀಮನ್ಮಧ್ವಾಚಾರ್ಯರವರ ಅವತಾರಸ್ಥಾನವಾಗಿದ್ದು, ಮುಕ್ತಿಪ್ರದವಾದ ಸಪ್ತಕ್ಷೇತ್ರಗಳಲ್ಲಿ ಮುಖ್ಯವಾದ ಉಡುಪಿಯು ಶ್ರೀಮಧ್ವಾಚಾರ್ಯರ ದಿವ್ಯಹಸ್ತದಿಂದ ಪ್ರತಿಷ್ಠಿತನಾದ, ಕಡಗೋಲು ನೇಣನ್ನು ಕೈಗಳಲ್ಲಿ ಹಿಡಿದುಕೊಂಡು ನಿಂತಿರುವ, ರುಕ್ಮಿಣೀಕರಾರ್ಚಿತ ದಿವ್ಯ ಬಾಲಕೃಷ್ಣನ ಸನ್ನಿಧಾನದಿಂದ ಅತಿ ಪವಿತ್ರವೆಂದು ಹೆಸರುಗೊಂಡಿದೆ. ಈ ಸುಂದರ ಮೂರ್ತಿಯ ದರ್ಶನಮಾತ್ರದಿಂದ ಭಕ್ತರ ಹೃದಯದಲ್ಲಿ ಅಪೂರ್ವ ಭಕ್ತಿಸ್ರೋತವು ಉಕ್ಕಿ ಪ್ರವಹಿಸುವುದರಲ್ಲಿ ಆಶ್ಚರ್ಯವಿಲ್ಲ. ಸಾವಿರಾರು ಆಸ್ತಿಕ ಭಕ್ತರು ಈ ಪರಮಾತ್ಮನ ಮತ್ತು ಗುರುಗಳಾದ ಮಧ್ವಾಚಾರ್ಯರ ಸೇವಾ-ದರ್ಶನಾದಿಗಳಿಂದ ತಂತಮ್ಮ ಅಭೀಷ್ಟ ಸಿದ್ಧಿ ಪಡೆದಿರುತ್ತಾರೆ.

ಇದಲ್ಲದೆ ಉಡುಪಿ ಕ್ಷೇತ್ರವೂ ಸುತ್ತುಮುತ್ತಲಿನ ರಮಣೀಯವಾದ ಪ್ರಾಕೃತಿಕ ದೃಶ್ಯಗಳಿಂದ ಕೂಡಿದ ಮನೋಹರ ಮತ್ತು ಸ್ವಾಸ್ಥ್ಯಪ್ರದವಾದ ಪ್ರದೇಶದಲ್ಲಿರುವುದು. ಏಕಕಾಲದಲ್ಲಿ ಶ್ರೀಹರಿಗುರುಗಳ ದರ್ಶನ-ಸೇವಾದಿಗಳ ಲಾಭ ದೊರೆಯುವ ಈ ಪುಣ್ಯಕ್ಷೇತ್ರವನ್ನು ಕಾರ್ತಿಕ ಲಕ್ಷದೀಪೋತ್ಸವ ಕಾಲದಲ್ಲಿ ಸಮಸ್ತ ಭಜಕರೂ ಅವಶ್ಯ ನೋಡಬೇಕಾಗಿದೆ. ರಥೋತ್ಸವಕ್ಕೆ ಮೊದಲು ತೆಪ್ಪೋತ್ಸವವೂ, ನಾಲ್ಕುಬೀದಿಗಳಲ್ಲಿಯೂ ಬೆಳಗಿಸುವ ಲಕ್ಷಗಟ್ಟಲೆಯ ದೀಪಮಾಲೆಗಳ ವೈಭವವೂ ಅತಿ ಪ್ರೇಕ್ಷಣೀಯವಾಗಿವೆ.

ಹೆಚ್ಚಿನ ಅನುಭವಕ್ಕೂ, ವಸತಿ ಮೊದಲಾದ ಸೌಕರ್ಯಗಳಿಗೂ ಪತ್ರ ಬರೆದು ಕೇಳಿರಿ.

ಏಜಂಟ್:
ಪರ್ಯಾಯ ಶ್ರೀಫಲಿಮಾರು ಮಠ, ಉಡುಪಿ.

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3 61,56,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
„ **M Shivarama Rao,** Organizer, Puttur.

Or

Sri J. A. PUTRAN,
Branch Manager, MANGALORE.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 19_0)

Reserves Rs 2,02 800/-. Paid up Capital Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year.

For further particulars please address or call at any of our offices.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ
ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು
ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.
ಅತ್ಯುತ್ತಮ ಜನಾಭ್ಯರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ
ನಾವು ಕೈಹಾಕುತ್ತಿರುವೆವು
ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರ
ವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು
ನಮ್ಮಲ್ಲಿ ಬರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0

ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡ ವುದನ್ನೂ ೨ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕ ವನ್ನ ಇದುವರೆಗೆ ಯಾರೂ ತಯಾರಿಸಲಿಲ್ಲ. ೮೬೪ ಪೇಜಗಳು ಇರುವ ದೊಡ್ಡ ಪುಸ್ತಕ ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ. ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ ಮನೆಯಲ್ಲೀ ಈ ಪುಸ್ತಕ ಓದಿ ಇಂಗ್ಲೀಷ್ ಓದುಬರಹ ಎಲ್ಲ ಸುಲಭವಾಗಿ ಬರುತ್ತೆ. ಪುಸ್ತಕದ ಬೆಲೆ ರೂ ೧॥

Western Swiss watch Co.
Book Sellers Post Box No 65
G. P. O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ ನಂ 68. ಮದರಾಸ್

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ಚ್ಯವನಪ್ರಾಶ ಲೇಹ ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಜ್ವರವನ್ನು ಶೀಘ್ರ ಗುಣಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ದೇಹಪೋಷಕ ಸಾರವನ್ನು ವರ್ಧಿಸುವುದು. ಕೆಮ್ಮು, ಶೀತಬಾಧೆ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯ ಔಷಧಿ.
ಪೌಂಡ್ ರೂ 2-8-0, ½ ಪೌಂಡಿಗೆ ರೂ 1-5-0.

ಕಸ್ತೂರಿಮಿಶ್ರಣ ದಶಮೂಲ. ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೇಕರೂಪದ ಶಕ್ತಿವರ್ಧಕ ರಸಾಯನ. ಇದು ಗರ್ಭಕೋಶದ ನೋವನ್ನು ಶೀಘ್ರದಿಂದ ಹೋಗಲಾಡಿಸಿ ಉದರದೊಳಗಿನ ಅಂಗಗಳನ್ನು ಬಲಪಡಿಸುವುದು ಗತ ಶಕ್ತಿಯನ್ನು ಪುನಃ ತುಂಬಿಸಿ ರಕ್ತ ಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವದಲ್ಲದೆ ಶಿಶುವಿಗೆ ಧಾರಾಳವಾಗಿ ಹಾಲ ಸಿಕ್ಕುವಂತೆ ಮಾಡುವುದು. ಬಾಟ್ಲಿ 1ರ ರೂ. 1-8-0.

ಕೆಟಲಾಗಿಗೆ ಬರೆಯಿರಿ:— **ಯಂ. ಗಣಪಯ್ಯ ಎಂಡ್ ಸನ್ಸ್,**
ನಂಬ್ರ 11 ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ ಮಂಗಳೂರು
ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ
ಉಡಪಿ ಸೆಲ್ಲಿಂಗ್ ಏಜಂಟರು —ನವಭಾರತ ಬುಕ್ ಡಿಪೋ ಮತ್ತು ಕೊರಗಪ್ಪ ನ್ಯೂಸ್ ಏಜಂಟ್ಸ್ ಉಡುಪಿ

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್

ಫೋನ್ 406

ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು
ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ನಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಪ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್.- ಕೆ. ಗುರುರಾಜಾಚಾರ್ಯ.

ಮಿತ ದರದಲ್ಲೀ ಮಾರಾಟ.

ಹೊಸ ಯೋಜನೆಗಳಿಗೆ ಆಸ್ಪದವೀಯುವ ಸಲುವಾಗಿ ಗಟ್ಟಿಯಾಗಿ ಯಾ ಹೆಚ್ಚು ಕಾಲ ಬಾಳಿಕೆ ಬರುವಂತಹ ಸ್ವಿಸ್ ತಯಾರಿಯ ಉರುಟು ಅಥವಾ ಚಚ್ಚೌಕ ರಿಸ್ಟುವಾಚುಗಳು.

ನಂಬ್ರ 401 ಕ್ರೋಮಿಯಮ್ ರೂ 3-12-0, 402 ಗೋಲ್ಡನ್ ಕೇಸು ರೂ. 4 12 0, 517 ಕ್ರೋಮಿಯಮ್ ಕೇಸು 6 8 0, 518 ಗೋಲ್ಡನ್ ಕೇಸು 8 0 0, ಜ ವೆಲ್ಸ್ ಚಲನೆಯುಳ್ಳ, ನಂಬ್ರ 409 ಕ್ರೋಮಿಯಮ್ 9 8 0, ನಂಬ್ರ 410 ಗೋಲ್ಡನ್ ಕೇಸು 10 8 0, 411 ರೋಲ್ಡ್‌ಗೋಲ್ಡ್ 15 0 0.

ಪ್ಯಾಕಿಂಗ್ ಮತ್ತು ಪೋಸ್ಟೇಜು ಬಗ್ಗೆ 0-9-0 ಅಲಾಯಿದ.
(ಪತ್ರವ್ಯವಹಾರ ಇಂಗ್ಲಿಷಿನಲ್ಲಿ)

ಬಾಪಲಾಲ್ ಎಂಡ್ ಕೊ, **Bapalal & Co.,**
ಅಬ್ದುಲ್ ರೆಹಿಮಾನ ಸ್ಟ್ರೀಟ್, 101 Abdul Rehman Street,
ಬೊಂಬಾಯಿ 3 BOMBAY 3

Transport & Car Owners

ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

FOUNDER
SRI. A. B SHETTY, M L A,
Parliamentary Secretary Govt of Madras
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ ಎಲ್ ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA

ಚಂದಾ ವಿವರ:
1 ವರ್ಷಕ್ಕೆ - ರೂ 3—4—0
6 ತಿಂಗಳಿಗೆ - ರೂ. 1-12-0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೦

ಉಡುಪಿ, ಗುರುವಾರ, ೯—೧೧—೧೯೩೯.
UDIPI, THURSDAY, 9-11-1939.

VOL. 19
No. 10

ವಾರದ ವಿಮರ್ಶೆ

ಮುಸ್ಲಿಮ್ ಲೀಗಿನ ಧೋರಣೆ

ಮುಸ್ಲಿಮ್ ಲೀಗೊಂದೇ ಮುಸಲ್ಮಾನ ಪ್ರತಿನಿಧಿ ಸಂಸ್ಥೆಯೆಂದು ವೈಸರಾಯರು ಅಂಗೀಕರಿಸಿರುವರೆಂದು ಲೀಗಿನವರು ಉಬ್ಬಿಹೋಗಿದ್ದಾರೆ. ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯಸಾಧನೆಯೇ ಮುಸ್ಲಿಮ್ ಲೀಗಿನ ಧ್ಯೇಯವೆಂದು ಇತ್ತಲಾಗಿ ಮಾಡಿದ ನಿರ್ಣಯವನ್ನು ಮೂಲೆಗೊತ್ತಿ, ಹಿಂದೂದೇಶದ ಸ್ವಾತಂತ್ರ್ಯ ಸಾಧಿಸಲು ಮುಂದಾಗಿರುವ ಕಾಂಗ್ರೆಸಿಗೆ ಅಡ್ಡಗಾಲು ಹಾಕಿ ಬ್ರಿಟಿಷ್ ಸರಕಾರದೊಡನೆ ಸಹಕರಿಸಲು ಮುಸ್ಲಿಮ್ ಲೀಗೀಗ ಹಾತೊರೆಯುತ್ತಿದೆ. ಮಹಾತ್ಮ ಗಾಂಧಿ ಬಾಬು ರಾಜೇಂದ್ರ ಪ್ರಸಾದ್ ಮತ್ತು ಪಂಡಿತ ಜವಾಹರಲಾಲರು ಮಿ. ಜಿನ್ನರನ್ನು ಕಾಂಗ್ರೆಸಿನ ಕಡೆಗೆ ಒಲಿಸಿಕೊಳ್ಳಲು ಡಿಲ್ಲಿಯಲ್ಲಿ ಮೂರು ದಿನಗಳವರೆಗೆ ಮಾಡಿದ ಪ್ರಯತ್ನ ಫಲಕಾರಿಯಾಗಿಲ್ಲ. ಮಿ. ಜಿನ್ನಾರವರು ಎಷ್ಟಕ್ಕೂ ತನ್ನ ಛಲವನ್ನು ಬಿಡಲು ಸಿದ್ಧರಿರುವಂತೆ ತೋರುವುದಿಲ್ಲ. ಬ್ರಿಟಿಷ್ ಸರಕಾರದಿಂದಲೇ ಮುಸಲ್ಮಾನ ಹಕ್ಕುಬಾಧ್ಯತೆಗಳನ್ನು ಪಡೆಯಬೇಕೆಂದವರ ಉದ್ದೇಶವಿರುತ್ತದೆ. ಕಾಂಗ್ರೆಸ್ಸಿನೊಂದಿಗೆ ಸೇರಿ ಬ್ರಿಟಿಷ್ ಸರಕಾರದಿಂದ ಸಾಧ್ಯವಾದಷ್ಟು ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು ಇಂದೀಗ ಪ್ರತಿಯೊಬ್ಬ ಹಿಂದೀಯನ ಧೋರಣೆಯೆಂಬುದನ್ನವರು ಒಪ್ಪುವಂತೆ ತೋರುವುದಿಲ್ಲ. ಆದುದರಿಂದಲೇ ಅವರು ವೈಸರಾಯರಿಗೆ ಪ್ರತ್ಯೇಕವಾದ ಹೇಳಿಕೆ ಕಳುಹಿಸಿ ಅವರನ್ನು ಪ್ರತ್ಯೇಕವಾಗಿಯೇ ಕಂಡು ಮಾತಾಡಿರುವರು. ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸ್ಸಿನೊಳಗಣ ಐಕ್ಯದ ಮಾತುಕತೆಯು ಈಗ ನಿಲ್ಲಿಸಲ್ಪಟ್ಟರೂ ಇನ್ನು ಮುಂದೆ ಬೇಗನೆ ನಡಿಸಲ್ಪಡುವುದೆಂಬುದು ಶುಭಸೂಚನೆ. ಪಂಡಿತ ಜವಾಹರಲಾಲರೆಂದರೆ ಉರಿದೇಳುತ್ತಿದ್ದ ಮಿ. ಜಿನ್ನರು ಈಗ ಅವರ ಕುರಿತು ಮೆಚ್ಚಿಗೆ ಸೂಚಿಸಿರುವುದು ಸಂತೋಷಕರ. ಡಿಲ್ಲಿ ಮಾತುಕತೆಯು ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸುಗಳೊಳಗಣ ಮಾತುಕತೆಗೆ ಅನುಕೂಲ ವಾತಾವರಣವನ್ನುಂಟುಮಾಡಿದೆ.

ಮುಸಲ್ಮಾನರಲ್ಲಿ ಅತೃಪ್ತಿ

ಮುಸ್ಲಿಮ್ ಲೀಗನ್ನು ಬಹುಪಕ್ಷೀಯ ಮುಸಲ್ಮಾನರ ಪ್ರತಿನಿಧಿ ಸಂಸ್ಥೆಯೆಂದೊಪ್ಪಲು ಕಾಂಗ್ರೆಸು ಸಿದ್ಧವಿದೆ. ಅದವರ ಏಕ ಮಾತ್ರ ಸಂಸ್ಥೆಯೆಂದೊಪ್ಪಬೇಕೆಂದು ಮಿ.ಜಿನ್ನಾರವರ ಹಠ. ಮುಸ್ಲಿಮ್ ಲೀಗಿಗೆ ಸಮಾನ ಸ್ಥಾನ ಮಾನವಿತ್ತು ಅದರ ಪ್ರತಿನಿಧಿಗಳನ್ನೊಳಗೊಂಡ ಮಂತ್ರಿಮಂಡಲವನ್ನು ಸ್ಥಾಪಿಸಲು ಕಾಂಗ್ರೆಸು ನಿರಾಕರಿಸಿದುದಕ್ಕಾಗಿ ತೀವ್ರ ದ್ವೇಷ. ಇದಕ್ಕೆ ಅರ್ಥವಿಲ್ಲ ಯಾಕೆಂದರೆ ಗಡಿನಾಡಿನ ಇಡೀ ಪ್ರಾಂತದ ಹೆಚ್ಚಿನ ಮುಸಲ್ಮಾನರು ಸಂಪೂರ್ಣ ಕಾಂಗ್ರೆಸ್ ಪಕ್ಷಪಾತಿಗಳಾಗಿದ್ದಾರೆ ಇದು ಹೊರತು ಪ್ರತಿಯೊಂದು ಪ್ರಾಂತದಲ್ಲೂ ಕಾಂಗ್ರೆಸಿನ ಮೇಲೆ ಅಭಿಮಾನವಿರುವ ಮುಸಲ್ಮಾನರು ಬಹಳ ಮಂದಿ ಇರುತ್ತಾರೆ. ಲೀಗನ್ನು ಅಂಗೀಕರಿಸಲೊಪ್ಪದ ಅಹ್ರಾರರು, ಶೀಯರು, ಉಲೇಮಾ ಸಂಘದವರೇ ಮೊದಲಾದವರಿರುತ್ತಾರೆ. ಲೀಗಿನೊಳಗೇನೇ ಒಂದು ತಂಡದವರು ಮಿ ಜಿನ್ನಾರವರ ಧೋರಣೆಯಿಂದ ತೀವ್ರ ಅತೃಪ್ತಿಗೊಂಡಿದ್ದಾರೆ. ಬಹುತೇಕ ಮೇಲು ವರ್ಗದ ಮತ್ತು ಅಧಿಕಾರಲಾಲಸಿಗಳ ಸಂಸ್ಥೆಯಾಗಿದೆ ಮುಸ್ಲಿಮ್ ಲೀಗು. ಅದರ ಜಾತೀಯ ಮತ್ತು ಬ್ರಿಟಿಷ್ ಸಾಮ್ರಾಜ್ಯ ಶಾಹಿ ಪ್ರತಿಪಾದಕ ಧೋರಣೆಯಿಂದ ಮುಸಲ್ಮಾನ ಜನ ಸಾಮಾನ್ಯರಿಗೆ ಅಹಿತವೇ ಹೊರತು ಹಿತವಿಲ್ಲ. ಇದು ಹೊರತು, ಕಾಂಗ್ರೆಸು ಮುಸ್ಲಿಮ್ ಲೀಗಿನಂತಹ ಜಾತೀಯ ಸಂಸ್ಥೆಗೆ ಸರಿಸಮಾನ ಸ್ಥಾನವಿತ್ತಲ್ಲಿ ಹಿಂದೂಮಹಾಸಭೆಯನ್ನೂ ಅದೇ ರೀತಿ ಮನ್ನಿಸಬೇಕಾಗುವುದು. ಆದರಿಂದ ಕಾಂಗ್ರೆಸು ತನ್ನ ಮೂಲತತ್ವವನ್ನೇ ಮೂಲೆಗೊತ್ತಿದಂತಾಗುವುದು

ಮೊಲೊಟೊರವರ ಭಾಷಣ

ಅಕ್ಟೋಬರ ತಾ 31ರಲ್ಲಿ ಸೋವಿಯೆಟ್ ಪಾರ್ಲಿಮೆಂಟಿನಲ್ಲಿ, ರಶ್ಯದ ವಿದೇಶಮಂತ್ರಿ ಎಮ್. ಮೊಲೊಟೊವರಿತ್ತ ಭಾಷಣವು ಯುದ್ಧದ ಮುಂದಿನ ಗತಿಯ ಮೇಲೆ ತುಂಬಾ ಪರಿಣಾಮವನ್ನುಂಟುಮಾಡುವಂತಹದಿದೆ. ಅಂತರರಾಷ್ಟ್ರೀಯ ವ್ಯವಹಾರ ಸ್ವಾತಂತ್ರ್ಯ, ಯುದ್ಧ ತಾಟಸ್ಥ್ಯ ಮತ್ತು ಅದಷ್ಟು ಶೀಘ್ರವಾಗಿ ಶಾಂತಿಸ್ಥಾಪನಾ ಪ್ರಯತ್ನವೇ ರಶ್ಯದ ಧೋರಣೆಯೆಂದು ಮೊಲೊಟೋರವರು ಸ್ಪಷ್ಟಪಡಿಸಿರುತ್ತಾರೆ. ವರ್ಸೈಲ್ಸ್ ಒಪ್ಪಂದದ ಪೋಲಂಡನ್ನು ಅಸ್ತಿತ್ವಕ್ಕೆ ತರುವುದು ಅಸಾಧ್ಯವಿರುವುದರಿಂದ ಯುದ್ಧವನ್ನು ಮುನ್ನಡೆಸುವುದರಲ್ಲಿ ಅರ್ಥವಿಲ್ಲ. ಮತ್ತು ಅದು ಘೋರ ಅನ್ಯಾಯ. ಮಿತ್ರ ರಾಷ್ಟ್ರಗಳು ತಮ್ಮ ವಸಾಹತುಗಳ ರಕ್ಷಣೆ ಮತ್ತು ಸ್ವಾರ್ಥಸಾಧನೆಗಾಗಿ ಯುದ್ಧನಡಿಸುತ್ತಿರುವುದೆಂದು ಸೋವಿಯೆಟ್ ವಿದೇಶ ಮಂತ್ರಿಗಳು ಬ್ರಿಟನ್ ಮತ್ತು ಫ್ರಾನ್ಸುಗಳ ಧೋರಣೆಯನ್ನು ಉಗ್ರವಾಗಿ ಟೀಕಿಸಿರುವರು. ರಾಜನೈತಿಕವಾಗಿ ರಶ್ಯವು ಜರ್ಮನಿಯೊಂದಿಗೆ ಸಹಕರಿಸಿ, ಬೇಗನೆ ಶಾಂತಿಯುಂಟಾಗುವಂತೆ ಬೇಕಾದ ಸಹಾಯವನ್ನೆಲ್ಲಾ ಕೊಡಲಿರುವುದೆಂದಿಷ್ಟೇ ಮೊಲೊಟೊರವರು ಹೇಳಿರುವರಲ್ಲದೆ ಸೇನಾಸಹಾಯದ ಪ್ರಸ್ತಾಪವನ್ನೇ ಎತ್ತಿರುವುದಿಲ್ಲ. ಇದರಿಂದ ಜರ್ಮನಿಯಲ್ಲಿ ಅತೃಪ್ತಿಯುಂಟಾಗಿದೆ ಆದರೆ ಮುಂದೆ ಸೇನಾ ಸಹಾಯವೀಯದೆ ನಿರ್ವಾಹವಿಲ್ಲದಾಗುವ ಅಥವಾ ಅದು ಅತ್ಯಗತ್ಯವಾಗುವ ಪರಿಸ್ಥಿತಿಯುಂಟಾಗಬಹುದು ಆದುದರಿಂದ ಈ ಕುರಿತು ಖಂಡಿತವಾಗಿ ಏನೂ ಹೇಳಬರುವುದಿಲ್ಲ. ಫಿನ್ಲೆಂಡು ರಶ್ಯದ ಕೇಳಿಕೆಗಳನ್ನು ಮನ್ನಿಸದಿದ್ದಲ್ಲಿ ಶಾಂತಿಗೆ ಗಂಡಾಂತರ ಬರುವುದೆಂದು ಮೊಲೊಟೊವರು ಬೆದರಿಕೆ ಹಾಕಿರುವರು. ಕಪ್ಪು ಸಮುದ್ರಕ್ಕೆ ಹೊರಗಣ ರಾಷ್ಟ್ರಗಳ ಹಡಗುಗಳು ಪ್ರವೇಶಿಸದಂತೆ ತಡೆಗಟ್ಟಿ, ಜರ್ಮನಿಯೊಡನೆ ಹೋರಾಟಕ್ಕೆ ಕೈಯಲ್ಲಪದಂತಾಗಬೇಕೆಂಬ ಶರ್ತಗಳಿಗೆ ಟರ್ಕಿಯು ಒಪ್ಪದುದು ಕೂಡಾ ಅಯುಕ್ತವೆಂದು ಸೂಚಿಸಿರುವರು. ಫಿನ್ಲೆಂಡಿನ ವಿಷಯದಲ್ಲಿ ಅಮೆರಿಕವು ಕೈಹಾಕುವುದು ಅಧಿಕಪ್ರಸಂಗವೆಂದು ಟೀಕಿಸಿರುವರು. ಮೊಲೆಟೊವರ ಭಾಷಣವು ಜರ್ಮನಿಯಲ್ಲಿ ನಿರೀಕ್ಷಿಸಿದಷ್ಟು ಸಂತೋಷವನ್ನುಂಟುಮಾಡಿಲ್ಲ. ಅಮೆರಿಕವು ಸಿಟ್ಟುಗೊಂಡಿದೆ ಮಿತ್ರರಾಷ್ಟ್ರಗಳು ಸಂತಾಪಗೊಂಡಿವೆ. ಫಿನ್ಲೆಂಡ ಸ್ವೀಡನ್ ಮೊದಲಾದ ರಾಷ್ಟ್ರಗಳಲ್ಲಿ ತಳಮಳವೆದ್ದಿದೆ ಟರ್ಕಿಯು ಚಿಂತೆಗೊಳ್ಳುವಂತಾಗಿದೆ.

NO ONE IS SAFE!



NATURAL CAUSE *May deprive your family*

YOU MEANT TO TAKE OUT A POLICY YOU HAD DISCUSSED ONE WHICH WOULD HAVE BROUGHT YOU SUFFICIENT INCOME!
BUT WRITING WAS TOO MUCH TROUBLE FOR YOU
THEN AN ACCIDENT HAPPENED NOW OUR FAMILY IS LEFT PENNILESS.
A SAD STORY BUT ALAS HOW COMMON! YOU ARE IN DANGER AT EVERY MOMENT SAFEGUARD TO DAY INSURE WITH **TROPICAL.**
WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE!

Quotations for all ages and amounts to suit all circumstances

TROPICAL INSURANCE COY. LTD.
NEW DELHI

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂ-ಡೆಲ್ಲಿ.
ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.

ಎಂ ಸುಂದರರಾಮ ಶೆಟ್ಟಿ,
ಬ್ರಾಂಚ್ ಮೆನೇಜರ್,
ಹಂಪನಕಟ್ಟೆ—ಮಂಗಳೂರು.

ಅಥ
ಕೆ ರಾಮಮೂರ್ತಿ, ಎಂ ಎ,
ಬ್ರಾಂಚ್ ಸಕ್ರೆಟರಿ,
ನಾ 160 ಮೌಂಟ್‌ರೋಡ್, ಮದ್ರಾಸು

ಈ ವಾರದಿಂದ
ವಾಚಕರನೇಕರ ಅಪೇಕ್ಷೆಯಂತೆ
ವಾರದ ಭವಿಷ್ಯವನ್ನು
ತಿರುಗಿ ಕೊಡಲಾರಂಭಿಸಲಾಗಿದೆ.
ಪುಟ ೧೪ ನೋಡಿರಿ.

22 ವರ್ಷಗಳ ಹಿಂದೆ ಅಂದಿನ ಮತ್ತು ಇಂದಿನ ಬ್ರೆಸ್ಟ್ ಲಿಟೋವಸ್ಕ್ ಒಪ್ಪಂದ

ರಸ್ಯವು ಇಂದು ಸೇಡು ತೀರಿಸುತ್ತಿರುವುದೇ?

ಬ್ರೆಸ್ಟ್ ಲಿಟೋವಸ್ಕ್ ಪಟ್ಟಣದಲ್ಲಿ, ಜರ್ಮನಿ ಮತ್ತು ರಸ್ಯಗಳು ಒಂದುಗೂಡಿ ಪೋಲಂಡಿನ ಶವಸಂಸ್ಕಾರ ಮಾಡಿರುವವು. ರಸ್ಯವು ಜರ್ಮನಿಯ ಮೇಲೆ ಬಂದು ವಿಧದ ಅಧಿಕಾರ ಚಾಲೂಮಾಡಿ ಅದರ ಆಕಾಂಕ್ಷೆಗೆ ದೊಡ್ಡ ತಡೆ ಹಾಕಿರುವುದು. ಈ ಸಂದರ್ಭದಲ್ಲಿ 22 ವರ್ಷಗಳ ಹಿಂದೆ ಇದೇ ಬ್ರೆಸ್ಟ್ ಲಿಟೋವಸ್ಕಿನಲ್ಲಿ ಜರ್ಮನಿ ರಸ್ಯಗಳೊಳಗೆ ನಡೆದ ಒಪ್ಪಂದದ ಸ್ಮರಣೆಯು ಸುಪ್ರಸ್ತುತವಾಗಿದೆ. 1917ನೇ ಮಾರ್ಚ್ ತಿಂಗಳಲ್ಲಿ ಜರ್ಮನ್ ಸೇನಾನಿಗಳ ಪ್ರೇರಣೆ ಮತ್ತು ಪ್ರೋತ್ಸಾಹದಿಂದ ರಸ್ಯದಲ್ಲಿ ಬೊಲ್ಶೆವಿಕ್ ಕ್ರಾಂತಿಯೆದ್ದಿತು. ಡಿಸೆಂಬರದೊಳಗೆ ಈ ಕ್ರಾಂತಿಯು ಜಯಶೀಲವಾಗಿ ರಸ್ಯವು ಜರ್ಮನಿಯೊಡನೆ ಸಂಧಿಗೆ ಸಿದ್ಧವಾಯಿತು. ಆದರೆ ಜರ್ಮನಿಯು ಯುರೋಪಿಯನ್ ರಸ್ಯದ ಕತ್ತು ಹಿಸುಕುವಂತಹ ಶರ್ತಗಳನ್ನು ರಸ್ಯದ ಮೇಲೆ ಹಾಕಿತು. ರಸ್ಯದ ಕ್ರಾಂತಿಕಾರರು ಇದಕ್ಕೊಪ್ಪಲಾರದೆ, ಸಂಧಿಯ ಶರ್ತಗಳನ್ನೇ ಚರ್ಚಿಸಿ 6 ವಾರ ಸಮಯ ಕಳೆದರು. ಜರ್ಮನಿಯು ತಾಳ್ಮೆಗೆಟ್ಟು, ತನ್ನ ಕೈಗೊಂಬೆಯಾದ ಉಕ್ರೈನ್ ರಿಪಬ್ಲಿಕ್ ಸರಕಾರದೊಡನೆ ಒಪ್ಪಂದಮಾಡಿಕೊಂಡು ಉಪವಾಸ ಬಿದ್ದಿರುವ ಜರ್ಮನ್ ಸೇನೆಗೆ ಒಂದುಮಿಲ್ಯ ಟನ್ನು ದವಸಧಾನ್ಯ ಪಡೆದು ರಸ್ಯದ ಮೇಲೆ ಸೇನೆ ನಡೆಸಿತು. ಬೇರೆ ಉಪಾಯವಿಲ್ಲದೆ ಬೊಲ್ಶೆವಿಕರು ಜರ್ಮನಿಯೊಡನೆ ಸಂಧಿಮಾಡಿಕೊಂಡರು. ಆಗ ಜರ್ಮನಿಯು ಖಡ್ಗವನ್ನೆತ್ತಿ ಹಿಡಿದೆಂಬಂತೆ, ರಸ್ಯದ ಮೃತ್ಯು ವಾರಂಟಿನಂತಿದ್ದ ಒಡಂಬಡಿಕೆಯನ್ನು ಅದರ ಮೇಲೆ ಹೊರಿಸಿತು. ಈ ಪ್ರಕಾರ ರಸ್ಯವು 300 ಮಿಲ್ಯ ರುಬ್ಲು ಚಿನ್ನವನ್ನು ಜರ್ಮನಿಗೆ ಪರಿಹಾರವಾಗಿ ತೆರಬೇಕಾಯಿತು. ರಸ್ಯಾನ ಪೋಲಂಡ್ ಲಿಥುವಾನಿಯ, ಕೊರ್ಲೆಂಡ್, ಲಿವೋನಿಯ, ಎಸ್ಟೋನಿಯ,ಆಲ್ಡರ್‌ಹಾಸ್, ಕಾರ್ಸ್ ಮತ್ತು ಬಟುಮ್ ರಾಜ್ಯಗಳನ್ನು ಜರ್ಮನಿ, ಆಸ್ಟ್ರೋ ಹಂಗೇರಿ ಮತ್ತು ಟರ್ಕಿಗಳಿಗೆ ಬಿಟ್ಟುಕೊಡಬೇಕಾಯಿತು. ಇದರಿಂದ ಕಪ್ಪು ಸಮುದ್ರದಿಂದ ಯುರೋಪಿಯನ್ ರಸ್ಯವನ್ನು ಕಡಿದುಹಾಕಿ, ಬಾಲ್ಟಿಕ್ ಸಮುದ್ರಕ್ಕೆ ಅತಿ ಚಿಕ್ಕದಾದ ಪ್ರವೇಶವನ್ನು ಮಾತ್ರ ಕೊಟ್ಟಂತಾಗಿದ್ದಿತು. ಮಾತ್ರವಲ್ಲದೆ ಸೇಕಡ 10ರಷ್ಟರ ಇದ್ದಲು, 15ರಷ್ಟು ಸಕ್ಕರೆ, ಮೂರನೇ ಒಂದಂಶದಷ್ಟರ ಜನಸಂಖ್ಯೆ ಮತ್ತು ಬೇಸಾಯ ಭೂಮಿಯನ್ನು ಮಾತ್ರ ರಸ್ಯಕ್ಕೆ ಬಿಟ್ಟು ಉಳಿದುದನ್ನು ರಸ್ಯದಿಂದ ಅಪಹರಿಸಲಾಯಿತು. ವರ್ಸೈಲ್ಸಿನ ಒಪ್ಪಂದಕ್ಕಿಂತಲೂ ದೊಡ್ಡ ಅನ್ಯಾಯವಿದು. ಟ್ರೋಟ್ಸ್ಕಿಯವರು ಆ ಒಪ್ಪಂದವನ್ನು ರಸ್ಯದ ಮೃತ್ಯು ಸರ್ಟಿಫಿಕೇಟೆಂದು ಕರೆದಿದ್ದರು. ಈ ಒಪ್ಪಂದವನ್ನು ಮಿತ್ರರಾಷ್ಟ್ರಗಳು ಪ್ರಬಲವಾಗಿ ವಿರೋಧಿಸಿ ಕೊನೆಯವನಕ ಯುದ್ಧನಡೆಸಿ ಜರ್ಮನಿಯನ್ನು ಸೋಲಿಸಿದುವು. ಜರ್ಮನಿಯಲ್ಲೆಲ್ಲಾ ಬೋಲ್ಶೆವಿಕ್ ತತ್ವ ಹಬ್ಬಿತು. 1918ನೇ ನವಂಬರದಲ್ಲಿ ಬ್ರೆಸ್ಟ್ ಲಿಟೋವಸ್ಕ್ ಒಪ್ಪಂದವು ಹರಿದೊಗೆಯಲ್ಪಟ್ಟಿತು

ಇಂದೀಗ ಸ್ಟಾಲಿನರು ಸಂದರ್ಭನೋಡಿ ರಸ್ಯದ ಮೇಲೆ ಹೊರಿಸಲಟ್ಟ ಬ್ರೆಸ್ಟ್ ಲಿಟೋವಸ್ಕ ಒಪ್ಪಂದಕ್ಕೆ ಪ್ರತೀಕಾರಮಾಡುತ್ತಿದ್ದಾರೆ. ಜರ್ಮನಿಯು ಬಲಾತ್ಕಾರದಿಂದ ಮಾಡಿದ ಕೆಲಸವನ್ನು ರಸ್ಯವು ಇಂದು ಮೈತ್ರಿಯಿಂದ ಮಾಡುತ್ತಿರುವುದು. ಬಾಲ್ಟಿಕ್ ಪ್ರದೇಶದಲ್ಲಿ ಜರ್ಮನಿಯ ಪ್ರಭಾವವನ್ನು ನಿರ್ನಾಮಗೊಳಿಸಿ ಬಾಲ್ಕನ್ ಪ್ರದೇಶದಲ್ಲಿಯೂ ತನ್ನ ವರ್ಚಸ್ಸನ್ನು ಬೆಳೆಸಲೆತ್ನಿಸುತ್ತಿದೆ. ಕಪ್ಪು ಸಮುದ್ರವನ್ನು ಸಂಪೂರ್ಣವಾಗಿ ತನ್ನ ಸರೋವರವನ್ನಾಗಿ ಮಾಡುವ ತಂತ್ರನಡೆಸಿದೆ. ವಿಜಯಿ ಜರ್ಮನಿಯಿಂದ ತನಗೆ ಅಪಾಯ ತಪ್ಪಲಾರದೆಂದು ರಸ್ಯವು ಇಂದು ಅದನ್ನು ಬೋಲ್ಶೆವಿಕ್ ತತ್ವಕ್ಕೊಲಿಸಿಕೊಳ್ಳುವ ತಂತ್ರ ನಡೆಸಿರುವುದೋ ಎಂಬ ಸಂದೇಹಕ್ಕಾಸ್ಪದವಾಗಿದೆ. ಮಧ್ಯ ಪೋಲಂಡಿನಲ್ಲಿ ಜರ್ಮನಿಯ ಕೈಗೊಂಬೆಯಾಗಿ ನಡೆಯುವ ಸ್ವತಂತ್ರ ರಾಜ್ಯವೊಂದನ್ನು ಸ್ಥಾಪಿಸಲು ಅದೀಗ ಪ್ರಯತ್ನಿಸುತ್ತಿದೆ. ಈ ರಾಜ್ಯಕ್ಕೆ ಮುಖ್ಯಾಧಿಕಾರಿಯೊಬ್ಬನನ್ನು ಹುಡುಕುವುದಕ್ಕಾಗಿ ಇತ್ತಲಾಗಿ ಹರ್ ಹೆಸ್ ಮತ್ತು ಡಾಕ್ಟರ್ ಗೊಬ್ಬೆಲ್ಸರು ಪೋಲಂಡಿಗೆ ಹೋಗಿದ್ದರೆಂದು ತಿಳಿದುಬರುತ್ತದೆ. ಸೋವಿಯಟ್ ಸೈನಿಕರು ಸೆರೆಹಿಡಿದು ಮೋಸ್ಕೋ ಪಟ್ಟಣಕ್ಕೊಯ್ದಿರುವ ರಾಜಕುಮಾರ 'ರೇಡ್ಜ್ವಿಲ್' ಎಂಬವರನ್ನು ಜರ್ಮನರು ಪೋಲಿಶ್ ರಾಜ್ಯದ ಅಧಿಕಾರಿಮಾಡುವ ನಿರ್ಧಾರಮಾಡಿದರು. ಆದರೆ ಇದಕ್ಕೆ ಸೋವಿಯೆಟ್ ಸರಕಾರವು ಆಕ್ಷೇಪಿಸಿ ಅವರನ್ನು ಬಿಡುಗಡೆಮಾಡಲೊಪ್ಪಲಿಲ್ಲ. ಈ ರಾಜಕುಮಾರರು ಬೋಲ್ಶೆವಿಕ್ ತತ್ವವಿರೋಧಿಗಳಿರುವರೆಂಬುದೇ ಇದಕ್ಕೆ ಕಾರಣ. ಇದರಿಂದ ಹಿಟ್ಲರರು ಬಹಳ ಸಂತಪ್ತರಾಗಿರುವಂತಿದೆ. ಇಷ್ಟು ಮಾತ್ರವಲ್ಲದೆ, ತಮ್ಮ ಹೊಸ ಎಲ್ಲೆಗಳ ಭದ್ರತೆಗಾಗಿ ವಾರ್ಸೋ ಪಟ್ಟಣದ ಪೂರ್ವದಲ್ಲಿ ಸೋವಿಯೆಟ್ ಸೇನೆಯನ್ನಿಡುವುದು ಆವಶ್ಯವೆಂದು ಸ್ಟಾಲಿನರ ಅಭಿಮತವಾಗಿದೆ. ಅನಿರೀಕ್ಷಿತವಾದ ಈ ಕೇಳಿಕೆಗಳಿಗೆ ಮೋಸ್ಕೋ ಪಟ್ಟಣದ ಜರ್ಮನ್ ರಾಯಭಾರಿಗಳು ಆಕ್ಷೇಪಿಸಿರುವರೆಂದು ಪೇರಿಸಿನ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಇದರಿಂದ ಸೋವಿಯೆಟ್ ಸರಕಾರವು ನಾಝಿ ಜರ್ಮನಿಯ ಮೇಲೆ ವಿಶ್ವಾಸವಿಡದೆ ತನ್ನ ಸ್ಥಾನವನ್ನು ಸಾಧ್ಯವಾದಷ್ಟು ಭದ್ರಪಡಿಸಿ ಜರ್ಮನಿಯ ಪ್ರಭಾವವನ್ನು ಕುಂದಿಸುವುದರಲ್ಲಿ ನಿರತವಾಗಿದೆಯೆಂಬುದು ಸುಸ್ಪಷ್ಟವಾಗುವುದು.

ಆಲಂಡ್ ದ್ವೀಪಗಳು

ರಸ್ಯಕ್ಕೂ ಫಿನ್ಲೆಂಡಿಗೂ ಈಗ ಉಂಟಾಗಿರುವ ಕಲಹದಲ್ಲಿ, ಸ್ವೀಡನ್ ಮತ್ತು ಫಿನ್ಲೆಂಡುಗಳ ನಡುವೆ ಬೊತ್ನಿಯಾ ಕೊಲ್ಲಿಯ ಬಾಯಿಯಲ್ಲಿರುವ ಆಲಂಡ್ ದ್ವೀಪಗಳನ್ನು ಕೋಟೆಕೊತ್ತಳ ಕಟ್ಟಿ ಭದ್ರಗೊಳಿಸಬಾರದೆಂಬುದು ಒಂದು ವಿಷಯವಾಗಿದೆ. ಈ ಆಲಂಡ್ ದ್ವೀಪಗಳಲ್ಲಿರುವ ಹೆಚ್ಚಿನ ಜನರು ಸ್ವೀಡಿಶರು. ಆದುದರಿಂದ ಸ್ವೀಡನಿಗೆ ಇವುಗಳ ಮೇಲೆ ಕಣ್ಣಿದೆ. ರಸ್ಯದ ಲೆನಿನ್‌ಗ್ರಾಡ್ ಪಟ್ಟಣ ಮತ್ತು ಅದರ ಸಮೀಪದ ಕ್ರೋನ್‌ಸ್ಟಾಟ್ ಎಂಬ ನೌಕಾನಿಲಯಕ್ಕೆ ಆಲಂಡ್ ದ್ವೀಪಗಳು ಸಮೀಪವಿರುತ್ತವೆ. ಫಿನ್ಲೆಂಡ್ ಕೊಲ್ಲಿಯ ಕೊನೆಯಲ್ಲಿ ಲೆನಿನ್‌ಗ್ರಾಡಿದೆ. ಈ ಕೊಲ್ಲಿಯ ಪ್ರವೇಶ ದ್ವಾರದಲ್ಲಿಯೋ ಎಂಬಂತೆ ಆಲಂಡ್ ದ್ವೀಪಗಳಿವೆ. ಈ ದ್ವೀಪಗಳಲ್ಲಿ ಇತರ ದೇಶೀಯರಾರಾದರೂ ಕೋಟೆಕೊತ್ತಳ ಕಟ್ಟಿ ಭದ್ರಪಡಿಸಿದರೆ ರಸ್ಯಕ್ಕೆ ಬಹಳ ಅಪಾಯವಿದೆ. ಆದುದರಿಂದ ರಸ್ಯಕ್ಕೆ ಆಲಂಡ್ ದ್ವೀಪಗಳ ಪ್ರಶ್ನೆಯು ಮಹತ್ವದ್ದಾಗಿದೆ. ರಸ್ಯಕ್ಕೂ ಜರ್ಮನಿಗೂ ದ್ವೇಷವಿದ್ದಾಗ ಜರ್ಮನಿಯು ಆಲಂಡ್ ದ್ವೀಪಗಳ ಮೇಲೆ ಕಣ್ಣಿಟ್ಟು ಅದನ್ನು ಭದ್ರಪಡಿಸುವ ಹಂಚಿಕೆ ನಡೆಸುತ್ತಿತ್ತು. ಇದನ್ನು ರಸ್ಯವು ಬಲವಾಗಿ ವಿರೋಧಿಸಿದ್ದಿತು. ಬಾಲ್ಟಿಕ್ ಸಮುದ್ರದ ಬೀಗದ ಕೈಯೇ ಆ ದ್ವೀಪಗಳೆಂದು ಹೇಳಬಹುದು. ರಸ್ಯವು ಈಗ ಎಸ್ಟೋನಿಯ, ಲಟ್ವಿಯಗಳ ಬಂದರುಗಳನ್ನು ವಶಪಡಿಸಿ ಬಾಲ್ಟಿಕ್ ಸಮುದ್ರದ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿರುವುದರಿಂದ ಆಲಂಡ್ ದ್ವೀಪಗಳು ಕೋಟೆ ಕೊತ್ತಳಗಳಿಂದ ಭದ್ರವಾಗದಂತೆ ನೋಡುವುದು ಮತ್ತಷ್ಟು ಅವಶ್ಯವಾಗಿದೆ. ಆದರೆ ರಸ್ಯದ ಪ್ರಭಾವದಿಂದ ತಳಮಳಗೊಂಡ ಸ್ವೀಡನ್, ನೋರ್ವೆ ಮತ್ತು ಡೆನ್ಮಾರ್ಕ್‌ಗಳು, ಅದನ್ನು ತಡೆಗಟ್ಟಲೆತ್ನಿಸುತ್ತಿವೆ. ಫಿನ್ಲೆಂಡು ತನ್ನ ಸ್ವಾತಂತ್ರ್ಯವನ್ನು ಕಳಕೊಂಡು ರಸ್ಯದ ಕೇಳಿಕೆಗಳಿಗೊಪ್ಪುವಹಾಗಿಲ್ಲ. ಅದೀಗ ಅಗತ್ಯಬಿದ್ದರೆ ರಸ್ಯದೊಡನೆ ಕಾದಾಡುವ ನಿರ್ಧಾರಮಾಡಿ ಅದಕ್ಕೆ ಬೇಕಾದ ಸಿದ್ಧತೆಮಾಡುತ್ತಿದೆ. ಇದರಿಂದ ರಸ್ಯವು ಸಿಟ್ಟುಗೊಂಡಿದೆ. 80,000 ಸೋವಿಯೆಟ್ ಸೈನಿಕರು ಫಿನ್ಲೆಂಡಿನ ಎಲ್ಲೆಗೆ ಕಳುಹಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ. ಇದರಿಂದ ಜರ್ಮನಿಯೂ ಕಳವಳಗೊಂಡಿದೆ. ಇಂಗ್ಲೆಂಡ್, ಅಮೆರಿಕ ಮೊದಲಾದ ರಾಷ್ಟ್ರಗಳು ಸಂತಪ್ತವಾಗಿವೆ.

THE

BOMBAY LIFE ASSURANCE Company Limited.

[ESTD. 1908]

COMPARE

Your Life Assurance with any other property you possess what is its guaranteed value

If you live—today—a few years more—when you are old?
If you die—to your family and dependants?

REMEMBER THAT If you live, Life Insurance takes the place of your professional income during your old age. If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiara, CALICUT.	Central Station Road, TRIVANDRUM.

ಮಾಧ್ವ ಗ್ರಂಥ ಪ್ರಚಾರಕ್ಕೆ ಒಂದು ರೂಪಾಯಿ ಕೊಟ್ಟು ಚಂದಾದಾರರಾಗುವವರಿಗೆ ಮಾತ್ರ ಈಗಲೇ ಮೂರು ರೂಪಾಯಿ ಪುಸ್ತಕಗಳು.

ಉಚಿತ

1	ದೇವಪೂಜಾ ವಿಧಿ	0-3-0
2	ವಿಷ್ಣು ಸಹಸ್ರನಾಮ ಸ್ತೋತ್ರ	0-2-0
3	ಮಾಯುಸ್ತುತಿ	0-2-0
4	ದ್ವಾದಶಸ್ತೋತ್ರ	0-2-0
5	ಆದಿತ್ಯ ಹೃದಯ	0-1-0
6	ಶ್ರೀಸೂಕ್ತ ಪುರುಷಸೂಕ್ತ(ಋ)	0-1-6
7	ಶ್ರೀಸೂಕ್ತ ಪುರುಷಸೂಕ್ತ(ಯ)	0-1-6
8	ಹರಿಕಥಾಮೃತಸಾರಸಾರೋದ್ಧಾರ	1-0-0
9	ಪುರಂದರದಾಸರ ಕೀರ್ತನೆ ಭಾಗ ೧	0-4-0
10	,, ,, ,, ೨	0-4-0
11	,, ,, ,, ೩	0-4-0
12	ಸುಂದರಕಾಂಡರಾಮಾಯಣಮೂಲ	0-_-0

ಟಪ್ಪಾಲು ಖರ್ಚು ಬೇರೆ. ಒಟ್ಟು ರೂ. 3-0-0

ಮೇನೇಜರ್

ಮಾಧ್ವಗ್ರಂಥ ಪ್ರಚಾರಕಸಂಘ,

ನಂ 45, A. S. ಸ್ಟ್ರೀಟ್, ಬೆಂಗಳೂರು ಸಿಟಿ.

ಜನವರಿ ಪ್ರಾರಂಭದಲ್ಲಿ ಹೊರಡುವ "ನವಯುಗ" ಪರ್ಯಾಯ ಸಂಚಿಕೆಯನ್ನು ನಿರೀಕ್ಷಿಸಿರಿ!

ಎಂತಹ ತಮಾಷೆಯ ಯುದ್ಧವಿದು--?

ಆರಂಭವಾಗಿ ತಿಂಗಳೆರಡಾದರೂ ಹೋರಾಟವೇ ನಡೆದಿಲ್ಲ!

ಪೋಲಂಡನ್ನು ಹಿಟ್ಲರರು ಗೆದ್ದು ವಾರ್ಸೋ ಪಟ್ಟಣವನ್ನು ಭೀಕರ ಸ್ಮಶಾನವಾಗಿ ಮಾರ್ಪಡಿಸಿದರೂ ಬರ್ಲಿನಿನ ಮೇಲೆ ವಿಮಾನಧಾಳಿಯೇನೂ ನಡೆದಿಲ್ಲ. ಅರೆವಾಸಿ ಪೋಲಂಡಿನ ಮೇಲೆ ರಶ್ಯವು ಧಾಳಿನಡಿಸಿ ಜರ್ಮನಿಗೆ ಬೇಕಾದ ಸಹಾಯಮಾಡುತ್ತಿರುವುದಾದರೂ ರಶ್ಯದ ಮೇಲೆ ಯುದ್ಧ ಹೂಡಲ್ಪಟ್ಟಿಲ್ಲ.

ಯುದ್ಧದ ಬೇಗೆ

ಆಗೋಸ್ತು ತಾ. 31ಕ್ಕೆ ಹಿಟ್ಲರರು ಪೋಲಂಡಿನ ಮೇಲೆ ಯುದ್ಧ ಹೂಡಿ ಸುಮಾರು 500ಮೈಲು ವಿಸ್ತೀರ್ಣದ ರಣರಂಗದಲ್ಲಿ ಪ್ರಚಂಡ ಜರ್ಮನ್ ಯಾಂತ್ರಿಕ ಮತ್ತು ಕಾಲಾಳು ಸೇನೆಯನ್ನು ಮುನ್ನಡೆಸಿದರು. ಸಾವಿರಾರು ವಿಮಾನಗಳ ಮೂಲಕ ಪೋಲಿಶ್ ಸೈನ್ಯವನ್ನು ಛಿನ್ನಭಿನ್ನಗೊಳಿಸಿದರು. ಸೆಪ್ಟಂಬರ ತಾ 3ರಲ್ಲೇ ಇಂಗ್ಲೆಂಡ್ ಮತ್ತು ಫ್ರಾನ್ಸುಗಳೂ ಜರ್ಮನಿಯ ಮೇಲೆ ಯುದ್ಧ ಹೂಡಿದುವು ಕೂಡಲೆ ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಕ್ಕೆ ಸೇರಿದ ಎಲ್ಲಾ ರಾಷ್ಟ್ರಗಳೂ ಜರ್ಮನಿಯೊಡನೆ ಸಮರಕ್ಕೆ ಸೇರಿಸಲ್ಪಟ್ಟುವು ಇಡೀ ಲೋಕದಲ್ಲೇ ಯುದ್ಧದ ಬೇಗೆಯೆದ್ದಿತು. ಎಲ್ಲೆಲ್ಲಿಯೂ ಶೀಘ್ರ ಹಾಗೂ ಪ್ರಬಲ ಸಿದ್ಧತೆಗಳಾದುವು ಜನರೆಲ್ಲಾ ನಾನಾ ಭೀತಿಗಳಿಂದ ತಳಮಳಗೊಂಡರು ಥಕ್ಕನೆ ಆಕಾಶವೇ ಕುಸಿದುಬೀಳುವದೋ ಎಂಬಷ್ಟು ದಿಗಿಲೆಬ್ಬಿಸಲ್ಪಟ್ಟಿತು

ಆತ್ಮರಕ್ಷಣೆಯ ವ್ಯವಸ್ಥೆ

ಸುಮಾರು ಒಂದು ತಿಂಗಳವರೆಗೆ ಜರ್ಮನಿಯು ತನ್ನ ಹೆಚ್ಚಿನ ಸೇನೆಯನ್ನೆಲ್ಲಾ ಪೋಲಂಡಿನ ಮೇಲೆ ನಡಿಸಿದ್ದಿತು. ಅದರ ವಿಮಾನಪಡೆಯೆಲ್ಲಾ ಪೋಲಂಡನ್ನು ಸದೆಬಡಿಯುವುದರಲ್ಲಿ ನಿರತವಾಗಿದ್ದಿತು. ಆದರೆ ಈ ಸಂದರ್ಭದಲ್ಲಿ ಮಿತ್ರ ರಾಷ್ಟ್ರಗಳು ನಡಿಸಿದ ಕೆಲಸವೆಂದರೆ ಆತ್ಮರಕ್ಷಣೆಯ ಪ್ರಚಂಡ ವ್ಯವಸ್ಥೆ ಇಡೀ ಲೋಕದಲ್ಲೇ ಅತ್ಯಂತ ಪ್ರಬಲವಾದ ಬ್ರಿಟಿಷ್ ನೌಕಾಪಡೆಯು ಜರ್ಮನಿಯ ಸಮುದ್ರಭಾಗದ ಮೇಲೆ ಒಡನೆಯೇ ಧಾಳಿಯಿಡಲಿಲ್ಲ ಫ್ರೆಂಚ್ ಮತ್ತು ಬ್ರಿಟಿಷ್ ನೌಕಾಪಡೆಗಳೊಂದುಗೂಡಿ [ಜರ್ಮನಿಯ ಮೇಲೇರಿಹೋಗುತ್ತಿದ್ದರೆ ಅದರ ನೌಕಾನಿಲಯ ಮತ್ತು ಪಡೆಯನ್ನು ನಾಶಗೊಳಿಸಲು ಸಾಧ್ಯವಿದ್ದಿತು. ಸಂದುಕಟ್ಟಿನ ಕೀಲ್ ಕಾಲುವೆಯನ್ನೇ ಒಡೆಯಬಹುದಿತ್ತು ಗಿಡ್ನಿಯಾ ಮತ್ತು ಡಾನ್ಜಿಗ್ ಬಂದರುಗಳ ಮೂಲಕ ಜರ್ಮನ್ ಸೇನೆಯ ಮೇಲೆ ಯುದ್ಧ ಹಡಗಗಳಿಂದ ಗುಂಡುಗಳ ಮಳೆಗರೆಯಬಹುದಿತ್ತು. ಇದು ಹೊರತು ಮಿತ್ರ ರಾಷ್ಟ್ರಗಳ ಪ್ರಚಂಡ ವಿಮಾನಪಡೆಯನ್ನು ಪೋಲಂಡಿನ ಸಹಾಯಕ್ಕೆ ಕಳುಹಿಸಬಹುದಿತ್ತು ಇಲ್ಲನೆ ಬರ್ಲಿನ್, ಹೇಂಬರ್ಗ್, ಮ್ಯುನಿಚ್, ವಿಯನ್ನ, ಡ್ರೆಸ್‌ಡೆನ್, ಫ್ರೇಂಕ್‌ಫರ್ಟ್, ಲೈಪ್ಸಿಗ್, ಕೊಲೋನ್ ಮೊದಲಾದ ಪಾಮುಖ್ಯ ಜರ್ಮನ್ ಪಟ್ಟಣಗಳ ಮೇಲೆ ಒಮ್ಮೆಯೇ ಪ್ರಚಂಡ ವಿಮಾನಧಾಳಿ ನಡಿಸಿ ಪ್ರತೀಕಾರಮಾಡಬಹುದಿತ್ತು. ಒಂದುವರೆ ಲಕ್ಷ ಬ್ರಿಟಿಷ್ ಮತ್ತು ೬ಲಕ್ಷದವರೆಗಣ ಫ್ರೆಂಚ್ ಸೇನೆಯನ್ನು ಒಮ್ಮೆಯೇ ಪಶ್ಚಿಮ ರಣರಂಗದಲ್ಲಿ ಮುನ್ನಡೆಸಿ, ಫಿರಂಗಿ, ತೋಪು, ವಿಮಾನಗಳ ಪ್ರಚಂಡ ಧಾಳಿಯಿಟ್ಟು ಸಿಗ್‌ಫ್ರಿಡ್ ಕೋಟೆಗಳನ್ನು ಭೇದಿಸಿ ಮುಂದೊತ್ತಲೆಳ್ಸಬಹುದಿತ್ತು.

ಬ್ಲೇಕ್ ಔಟ್

ಪ್ರಚಂಡ ಜರ್ಮನ್ ಸೇನೆಯು ಪೋಲಿಶ್ ಸೇನೆಯನ್ನು ಸದೆಬಡಿದು, ಪೋಲಂಡನ್ನು ಪುಡಿ ಪುಡಿ ಮಾಡಿ ವಾರ್ಸೋ ಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ, ಲಂಡನು ಮತ್ತು ಪೆರಿಸ್ ಮೊದಲಾದ ಪಟ್ಟಣಗಳಲ್ಲಿ 'ಬ್ಲೇಕ್ ಔಟ್' (ಕತ್ತಲುಗೊಳಿಸುವುದು)ಗಳನ್ನು ಮಾಡಿ ವಿಮಾನ ಧಾಳಿ ರಕ್ಷಣೆಯ ಏರ್ಪಾಡು ನಡೆಯುತ್ತಿತ್ತು. ಈ ಪಟ್ಟಣಗಳಿಂದ ಸ್ತ್ರೀಯರು ಮಕ್ಕಳೇ ಮೊದಲಾದವರು ಸಾವಿರಗಟ್ಲೆಯಲ್ಲಿ ಹೊರಗೆ ಕಳುಹಿಸಲ್ಪಡುತ್ತಿದ್ದರು. ಪೋಲೀಶ್ ಸೇನೆಯ ಧೈರ್ಯ ಸ್ಥೈರ್ಯದ ಕುರಿತು ಮೆಚ್ಚಿಗೆ ಮಾತ್ರ ಸೂಚಿಸಲ್ಪಡುತ್ತಿತ್ತು ಪೋಲಂಡಿಗೆ ಮಿತ್ರರಾಷ್ಟ್ರಗಳು ಮಾಡಿದ ಸಹಾಯದ ರೀತಿಯಿದು, ಲೋಕದಲ್ಲಿ 5ನೇ ಸ್ಥಾನ ಪಡೆದ 2ಮಿಲ್ಯಕ್ಕಿಂತಲೂ ಮಿಕ್ಕಿದ ಪದಾತಿ. ಅದ್ವಿತೀಯವೆನಿಸಿದ 1ಲಕ್ಷ ಅಶ್ವಾರೋಹಿ ಸೇನೆ ಮತ್ತು 500 ವಿಮಾನ ಪಡೆಯನ್ನು ಜರ್ಮನಿಯು ಎರಡು ವಾರಗಳಲ್ಲಿ ಮುರಿದು ಹಾಕಿದುದು ಅದೊಂದು ವಿಚಿತ್ರ ಸೇನಾ ನೈಪುಣ್ಯವೇಸರಿ ಪೋಲಿಶ್ ಸರಕಾರವು ರುಮೇನಿಯಕ್ಕೆ ಪಲಾಯನ ಮಾಡಿತು ಪ್ರಖ್ಯಾತ ಸೇನಾನಿ ಮಾರ್ಶಲ್ ಸ್ಮಿಗ್ಲಿಯವರ ಸುದ್ದಿಯೇ ಇಲ್ಲ. ವಿದೇಶ ಮಂತ್ರಿ ಕರ್ನಲ್ ಬೆಕ್ಕರು ಎಲ್ಲಿರುವರೆಂದು ತಿಳಿಯದಾಯಿತು. ಜರ್ಮನರು 7ಲಕ್ಷ ಮಂದಿ ಪೋಲರನ್ನು ಸೆರೆಹಿಡಿದು ಜರ್ಮನಿಯಲ್ಲಿ ಕೆಲಸ ಮಾಡಿಸಲೊಯ್ದರು. ಇಷ್ಟೆಲ್ಲಾ ಆಗುವಾಗ, ಪೋಲಂಡಿಗಾಗಿ ಜರ್ಮನಿಯ ಮೇಲೆ ಸಪ್ಟಂಬರ ತಾ. ೩ರಲ್ಲೇ ಯುದ್ಧ ಹೂಡಿದ್ದ ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಮಾಡಿದುದೇನು? ಆತ್ಮರಕ್ಷಣೆಯ ಸಿದ್ಧತೆ. ಮತ್ತು ಫ್ರೆಂಚ್ ಸೇನೆಯು ಪಶ್ಚಿಮ ರಣರಂಗದಲ್ಲಿ ಆನೆಯ ಹೆಜ್ಜೆಗಳಿಂದ ನಿಧಾನವಾಗಿ ಮುಂದೊತ್ತಿ ಕೆಲವು ಜರ್ಮನ್ ಪ್ರದೇಶಗಳನ್ನು ವಶಪಡಿಸಿಕೊಂಡುದು.

ಪಶ್ಚಿಮ ರಣರಂಗದಲ್ಲಿ

ಹಿಟ್ಲರ್ ಸ್ಟೆಲಿನರು ಪೋಲಂಡನ್ನು ಅನಾಯಾಸವಾಗಿ ಗೆದ್ದು ಹಂಚಿಕೊಂಡು ಅಲ್ಲೀಗ ಹೊಸತೇ ಆದ ರಾಜ್ಯಭಾರ ವ್ಯವಸ್ಥೆ ಮಾಡಿಬಿಟ್ಟಿರುವರು. ರಶ್ಯವು ವಶಪಡಿಸಿಕೊಂಡಿರುವ ಪೋಲಂಡಿನ ಭಾಗವನ್ನಿನ್ನು ಪುನಃ ಬಿಡಿಸಿಕೊಳ್ಳಲು ಸಾಧ್ಯವೇ ಇಲ್ಲ ಅಲ್ಲಿಯ ಜನತೆಯು ಸೋವಿಯಟ್ ರಾಜ್ಯಭಾರವನ್ನೊಪ್ಪಿ ಸ್ವಸಂತೋಷದಿಂದ ರಶ್ಯದೊಂದಿಗೆ ಸೇರಿಬಿಟ್ಟಿರುವರು. ಹಿಟ್ಲರರು ಅದನ್ನು ಹೆಚ್ಚು ಮಂದಿ ಜರ್ಮನರು ಪೋಲಂಡಿಗೆ ಬಂದು ವಾಸಿಸುವಂತೆ ಮಾಡುತ್ತಿದ್ದಾರೆ ಇಂದೀಗ ಪೋಲಂಡಿನ ಯುದ್ಧ ಮುಗಿದು ಒಂದು ತಿಂಗಳು ಮಿಕ್ಕಿತು. ಪಶ್ಚಿಮ ರಣರಂಗದಲ್ಲಿ ಇನ್ನೂ ಯುದ್ಧವೇನೂ ನಡೆದಿರುವುದಿಲ್ಲ ಜರ್ಮನಿಯ ಕೈಗಾರಿಕಾ ಕೇಂದ್ರಕ್ಕೆ ಕೈಕೀಲಿಯಂತಿರುವ ಸಾರ್ ಬ್ರಕೆನು, ಫಲಿತ ಹಣ್ಣಿನಂತೆ ಫ್ರೆಂಚರ ಕೈವಶವಾಗುವುದೆಂದು ಸುದ್ದಿಯೇ ಸುದ್ದಿ! ಸಿಗ್‌ಫ್ರಿಡ್ ಕೋಟೆಯೇ ಭೇದಿಸಲ್ಪಟ್ಟಿರುವುದೆಂದು ವಾರ್ತೆಯೇ ವಾರ್ತೆ ಆದರೆ ಈಗ ಫ್ರೆಂಚ್ ಸೇನೆಯು ಒಮ್ಮೆ ಆಕ್ರಮಿಸಿದ ಜರ್ಮನ್ ಪ್ರದೇಶವನ್ನೇ ಕಾದಾಟವಿಲ್ಲದೆ ಬಿಟ್ಟುಕೊಟ್ಟು ಹಿಂದೆ ಸರಿದಿದೆ ಇದನ್ನೊಂದು ದೊಡ್ಡ ಸಮರತಂತ್ರವಾಗಿ ಕರೆಯಲಾಗಿದೆ ಆದರೆ ಹಿಟ್ಲರರು, ಜರ್ಮನ್ ಪ್ರದೇಶದಲ್ಲಿರುವ ಫ್ರೆಂಚ್ ಸೇನೆಯನ್ನೆಲ್ಲಾ ಹಿಂದಕ್ಕಟ್ಟಲಾಗಿದೆಯೆಂದೂ, ಯುದ್ಧದ ಪ್ರಥಮ ಪರಿಚ್ಛೇದವೊಂದು ಮುಗಿದಂತಾಯಿತೆಂದೂ ಉದ್ಘೋಷಿಸಿರುತ್ತಾರೆ.

ಹಿಟ್ಲರರ ಧೋರಣೆ.

ಪೋಲಂಡನ್ನು ಗೆದ್ದು ಬಂದ ಕೂಡಲೆ ಹಿಟ್ಲರರು ಡಾನ್ಜಿಗಿನಲ್ಲಿ ಮಾಡಿದ ಭಾಷಣದಲ್ಲಿ, ತಮಗೆ ವಿರೋಧ ನಿಂತ ಪೋಲಂಡನ್ನು ಗೆದ್ದಾಯಿತು. ಇನ್ನು ಪಶ್ಚಿಮ ರಣರಂಗದಲ್ಲಿ ತಾವು ಮುಂದಾಗಿ ಯುದ್ಧಕ್ಕೆ ಹೋಗುವ ಹಾಗಿಲ್ಲ. ವೈರಿಗಳು ಮೇಲೆ ಬಿದ್ದರೆ ಮಾತ್ರ ಹೋರಾಟ ನಡಿಸಲಾಗುವುದೆಂದು ಸ್ಪಷ್ಟಪಡಿಸಿದ್ದರು ಆದರೂ ಅವರು ಒಂದು ಮಿಲ್ಯ ಸೇನೆಯನ್ನಾದರೂ ಬಲಿಗೊಟ್ಟು ಮೆಗಿನೊಟ್ ಕೋಟೆಯನ್ನು ಮುರಿಯುವ ನಿರ್ಧಾರಮಾಡಿದ್ದಾರೆ. ಪ್ರಚಂಡ ಜರ್ಮನ್ ಸೇನೆಯು ಸಂಗ್ರಹವಾಗುತ್ತಿದೆಯೆಂದೆಲ್ಲಾ ನಾನಾ ಸುದ್ದಿಗಳು ಹಬ್ಬಲ್ಪಟ್ಟಿದ್ದವು. ಇಷ್ಟರವರೆಗೂ ಪಶ್ಚಿಮರಣರಂಗದಲ್ಲಿ ಘೋರ ಸಂಗ್ರಾಮ ನಡೆದಿಲ್ಲ. ಇನ್ನಾದರೂ ಬೇಗನೆ ನಡೆಯುವ ಸಂಭವ ತೋರವುದಿಲ್ಲ ಹಿಟ್ಲರರ ಧೋರಣೆಯು ಯಾರಿಗಾದರೂ ಅರ್ಥವಾಗುತ್ತದೆ. ಪೋಲಂಡನ್ನು ಗೆದ್ದಮೇಲೆ ಅವರಿಗೆ ಯುದ್ಧಮಾಡುವ ಅವಶ್ಯವೇ ಇಲ್ಲ ಅವರೇನೂ ಇಂಗ್ಲೆಂಡ್ ಮತ್ತು ಫ್ರಾನ್ಸುಗಳ ಮೇಲೆ ಯುದ್ಧಹೂಡಿಲ್ಲ ಬ್ರಿಟಿಷ್ ಮತ್ತು ಫ್ರೆಂಚ್ ನೌಕಾಪಡೆಯು ಜರ್ಮನಿಯ ಮೇಲೆ ಹಾಕಿರುವ ಸಾಂಪತ್ತಿಕ ಮುತ್ತಿಗೆಯನ್ನು ಮುರಿಯುವುದು ಇಲ್ಲವೆ ನಿರರ್ಥಕಗೊಳಿಸುವುದೇ ಈಗ ಅವರ ಪ್ರಯತ್ನ ಜರ್ಮನ್ ಸಬ್‌ಮೆರೀನ್ ಮತ್ತು ಯುದ್ಧಹಡಗಗಳೂ, ವಿಮಾನಗಳೂ ನೌಕಾ ಮುತ್ತಿಗೆಯನ್ನು ಮುರಿಯಲೆತ್ನಿಸುತ್ತಿವೆ ದಿನಕ್ಕೆ ಎರಡುಮೂರರಂತೆ ಬ್ರಿಟಿಷ್ ಮತ್ತು ಇತರ ರಾಷ್ಟ್ರಗಳ ಹಡಗಗಳು ಮುಳುಗಿಸಲ್ಪಡುತ್ತಿವೆ ರಶ್ಯದಿಂದ ಮತ್ತು ರಶ್ಯದ ಮೂಲಕ ಇತರ ದೇಶಗಳಿಂದ ಕಚ್ಚಾಮಾಲುಗಳನ್ನು ತರಿಸಿಕೊಳ್ಳುವ ಏರ್ಪಾಡನ್ನು ಜರ್ಮನಿಯು ಮಾಡುತ್ತಿದೆ.

ಮಿತ್ರರಾಷ್ಟ್ರಗಳ ರೀತಿ ನೀತಿ

ಅರ್ಥವಾಗದುದೆಂದರೆ ಮಿತ್ರರಾಷ್ಟ್ರಗಳ ರೀತಿ ನೀತಿ, ಅವುಗಳ ಧೋರಣೆಯಿಂದಾಗಿ

(೧೨ನೇ ಪುಟಕ್ಕೆ ಮುಂದರಿಯುವದು)

SAVINGS & SPENDING

Every Rupee that you save adds materially to your present wealth for the satisfaction of a future want, while every Rupee that is spent leaves you poorer to that extent Life's stormy voyage is a smooth sailing only for those who know this difference between **SAVING & SPENDING** and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd.] (Incorporated in British India) [1925.

Head Office.—**UDIPI**, (S India).

ಎ. ಆರ್. ಪಿ. ವಿಮಾನ ಧಾಳಿ ಮುಂಜಾಗ್ರತೆ

ವಿಮಾನಗಳು ಹೇಗೆ ಧಾಳಿ ಇಡುವವು?

ಎಷ್ಟೊಂದು ಬಗೆಯ ಭೀಕರ ಬೋಂಬುಗಳನ್ನು ಹೇಗೆ ಸುರಿಸುವವು?

ಎ. ಆರ್. ಪಿ. ಅಂದರೇನು?

ಎ ಆರ್. ಪಿ ಎಂಬುದೀಗ ಸಾಮಾನ್ಯ ಶಬ್ದವಾಗಿ ಹೋಗಿದೆ ವಿಮಾನಧಾಳಿ ಮುಂಜಾಗ್ರತೆ ಎಂಬುದೇ ಅದರ ಅರ್ಥ ಆ ಬಗ್ಗೆ ಬೊಂಬಾಯಿ, ಕರಾಚಿ, ಕಲ್ಕತ್ತೆ ಮದ್ರಾಸ್ ಮೊದಲಾದ ಪಟ್ಟಣಗಳಲ್ಲಿ ಪ್ರತ್ಯೇಕ ಅಧಿಕಾರಿಗಳೇ ನೇಮಿಸಲ್ಪಟ್ಟದ್ದಾರೆ ದೇಶರಕ್ಷಣೆಯ ಮುಖ್ಯವಾದ ಜವಾಬ್ದಾರಿಯು ವಿಮಾನ ಮತ್ತು ನೌಕಾ ಪಡೆಗಳದ್ದಾಗಿದೆ ಆದರೆ ಆ ವ್ಯವಸ್ಥೆಯನ್ನು ಎಷ್ಟೊಂದು ಸುಭದ್ರವಾಗಿ ನಡಿಸಿದರೂ ವೈರಿವಿಮಾನಗಳು ಅದನ್ನು ತಪ್ಪಿಸಿಕೊಂಡು ಜನತೆಯ ಮೇಲೆ ಬೋಂಬೆಸೆಯುವುದು ಅಸಂಭವನೀಯವೇನೂ ಅಲ್ಲ. ದಕ್ಷಿಣ ಹಿಂದುಸ್ಥಾನದ ಪಶ್ಚಿಮ ಕರಾವಳಿಯ ಮುಖ್ಯ ಪಟ್ಟಣಗಳಿಗೆ ಈ ಅಪಾಯದ ಸಂಭವವಿದೆ ಆದುದರಿಂದ ವಿಮಾನಗಳು ಹೇಗೆ ಧಾಳಿನಡಿಸುತ್ತವೆ, ಎಂತಹ ಬೋಂಬುಗಳನ್ನೆಸೆಯುತ್ತವೆ ಮತ್ತು ಅವುಗಳ ಹಾವಳಿಯನ್ನು ತಪ್ಪಿಸುವ ಸುಲಭವಾದ ಉಪಾಯಗಳಾವುವೆಂಬುದನ್ನು ಈ ಕರಾವಳಿಯ ಜನರು ತಿಳಿದುಕೊಳ್ಳುವುದು ಅಪ್ರಸ್ತುತವಾಗಲಾರದು.

ಅಕಸ್ಮಾತ್ತಾಗಿ ಬೋಂಬೆಸೆಯಬಹುದು

ಪಶ್ಚಿಮಕರಾವಳಿಯು ವೈರಿರಾಜ್ಯದಿಂದ ಸುಮಾರು 1400 ಮೈಲು ದೂರವಿದ್ದು ಹೆಚ್ಚಿಗೆಯಾಗಿ ಸಮುದ್ರಪ್ರದೇಶದಿಂದ ಆವರಿತವಾಗಿದೆ. ಇಷ್ಟರವರೆಗೆ ಯುದ್ಧವಿಮಾನಗಳನ್ನೊಳಗೊಂಡ ನಾವೆಗಳೇನೂ ಈ ಸಮುದ್ರಭಾಗಕ್ಕೆ ಪ್ರವೇಶಿಸಿರುವುದಿಲ್ಲ. ಆದರೆ ಹೆಚ್ಚಿನ ಯುದ್ಧಹಡಗಗಳಲ್ಲಿ ಯುದ್ಧವಿಮಾನಗಳು ಕೂಡಾ ಇರುತ್ತವೆ. ಈ ಯುದ್ಧಹಡಗಗಳು ಸಮುದ್ರಭಾಗದಲ್ಲಿ ದೂರನಿಂತು ಅವುಗಳಿಂದ ಯುದ್ಧವಿಮಾನಗಳು ಅಕಸ್ಮಾತ್ತಾಗಿ ಹಾರಿಬಂದು ಮಂಗಳೂರು ಕಲ್ಲಿಕೋಟೆಗಳಂತಹ ಪಟ್ಟಣಗಳಿಗೆ ಬೋಂಬೆಸೆಯಬಹುದು ಇದು ಹೊರತು ಆಧುನಿಕ ಬೋಂಬೆಸೆಯುವ ವಿಮಾನಗಳು ಘಂಟೆಗೆ 300ಮೈಲುಗಳ ವೇಗದಿಂದ 3000ಮೈಲು ದೂರ ಹಾರಿಹೋಗಿ ಒಮ್ಮೆಯೇ 3000ದಿಂದ 4000ದ ವರೆಗೆ ಬೋಂಬುಗಳನ್ನು ಸುರಿಸಬಲ್ಲುವು. ಇದುದರಿಂದ ಪಶ್ಚಿಮಕರಾವಳಿಯ ಪಟ್ಟಣಗಳ ಮೇಲೆ ವಿಮಾನಗಳು ಬೋಂಬೆಸೆಯಬಹುದು ಇಲ್ಲವೆ ಯುದ್ಧನಾವೆಗಳು ತೋಪು ಗುಂಡುಗಳನ್ನೆಸೆಯಬಹುದು. ಆದುದರಿಂದ ಆ ಕುರಿತು ಅನುಭವವನ್ನು ಪಡೆಯುವುದು ಈಗಿನ ಕಾಲದ ಅವಶ್ಯಕತೆಯಾಗಿದೆ

ವಿಮಾನಧಾಳಿಯ ಹಾವಳಿಯನ್ನು ನಿವಾರಿಸಿಕೊಳ್ಳುವುದೆಂತು?

[ಶ್ರೀ. ಕೆ ಅನಂತ ಶೆಟ್ಟಿ ವರ್ಕ್ಸ್ ಮೆನೇಜರ್, ಹನುಮಾನ್ ಟ್ರಾನ್ಸ್‌ಪೋರ್ಟ್, ಕಂಪೆನಿ ಲಿಮಿಟೆಡ್ ಇವರ ಸೌಹಾರ್ದದಿಂದ]

ವಿಮಾನಗಳು ಹಾರಿಬರುವ ರೀತಿ

ಬೋಂಬೆಸೆಯುವ ವಿಮಾನಗಳು ಈ ಕೆಳಗಣ ರೀತಿಯಲ್ಲಿ ಹಾರಿಬಂದು ಬೋಂಬೆಸಯುತ್ತವೆ ಈ ರೀತಿಯ ಹಾರಾಟವು

1.



ಮೂರು ಮೂರು ವಿಮಾನಗಳ 3ತಂಡಗಳಿಂದೊಡಗೂಡಿರುತ್ತದೆ ಈ ವಿಮಾನಗಳೊಳಗಣ ದೂರವು 30 ಅಡಿಯಿಂದ 300 ಗಜಗಳವರೆಗಿರಬಹುದು. ಒಂದು ಪ್ರದೇಶದ ಮೇಲೆ ಅಕಸ್ಮಾತ್ತಾಗಿ ಏರಿಹೋಗಿ ಗೊತ್ತುಗುರಿಯಿಲ್ಲದೆ ಬೋಂಬೆಸೆಯುವಾಗ ಈ ರೀತಿ ಹಾರಾಡಲಾಗುವುದು

2.



ಗೊತ್ತುಗುರಿಯಿಲ್ಲದೆ ಏರಿಹೋಗಿ ಬೋಂಬೆಸೆಯುವಾಗ ಈ ರೀತಿಯೂ ಹಾರಾಡಲಾಗುವುದು.

3.



1



ನಿಶ್ಚಿತವಾದೊಂದು ಸ್ಥಳದ ಮೇಲೆ ಬೋಂಬೆಸೆಯುವಾಗ ಈ 3 ಮತ್ತು 4ನೇ ರೀತಿಯಲ್ಲಿ ಹಾರಾಡಲಾಗುವುದು. ಅಂದರೆ ಒಂದು ಗುರಿಯ ಮೇಲೆ ವಿಮಾನಗಳು ಒಂದರ ಬೆನ್ನಲ್ಲಿ ಇನ್ನೊಂದು ಅತೀ ಕೆಳಗಿನವರೆಗೆ ಹಾರಿ ಬೋಂಬುಗಳನ್ನು ಸುರಿದು ತಕ್ಷಣ ಮೇಲಕ್ಕೇರಿಹೋಗುವವು.

ವೈರಿವಿಮಾನಗಳು ಭೀಕರ ಸ್ಫೋಟಕ, ಸುಡುವ, ವಿಷಗಾಳಿ ಪ್ರಸರಿಸುವ ಮತ್ತು ಚುಮುಕಿಸುವ ಇಲ್ಲವೆ ಇವೆಲ್ಲಾ ಸಮ್ಮಿಶ್ರವಾಗಿರುವ ಬೋಂಬುಗಳನ್ನೆಸೆಯಬಹುದು. ಆದುದರಿಂದ ಅವುಗಳ ಕುರಿತು ಸ್ವಲ್ಪಮಟ್ಟಿನ ಸಾಮಾನ್ಯ ತಿಳುವಳಿಕೆಯು ಅವಶ್ಯವಾಗಿರುತ್ತದೆ

ಭೀಕರ ಸ್ಫೋಟಕ ಬೋಂಬುಗಳು

ಹಿಂದೂದೇಶದಲ್ಲಿ ಪ್ರಾಯಶಃ ಉಪಯೋಗಿಸಲ್ಪಡುವ ಭೀಕರ ಸ್ಫೋಟಕ ಬೋಂಬುಗಳು ಪ್ರತಿಯೊಂದು 500ರಾತ್ತಲ್ಲ ಭಾರವಿರಬಹುದು ಒಂದೊಂದರ ಭಾರ 3000 ರಾತ್ತಲಾಗಿರುವ ಬೋಂಬುಗಳೂ ಇವೆ ಆದರೆ ಹಿಂದುದೇಶದಲ್ಲಿ 500ರಾತ್ತಲ್ಲಿಗಿಂತ ಹೆಚ್ಚು ಭಾರದ ಬೋಂಬುಗಳನ್ನೆಸೆಯಲು ವೈರಿಗಸಾಧ್ಯವಾಗಲಾರದೆಂದು ನಂಬಲಾಗಿದೆ. ಸ್ಫೋಟಕ ಬೋಂಬು ಟೋರ್ಪೆಡೋ ಆಕಾರದ್ದಾಗಿರುತ್ತದೆ ಚೂಪಾಗಿ ಅನಂತರ ದುಂಡಗೆ ಅಗಲವಾಗಿರುತ್ತದೆ, ಆದರ ಸುತ್ತಲೂ ಉಕ್ಕಿನ ತಗಡಿರುತ್ತದೆ ಒಳಗೆ ಸಿಡಿಮದ್ದಿರುತ್ತದೆ ಈ ಬೋಂಬನ್ನೆಸೆಯುವಾಗ ಅದರ ಉಕ್ಕಿನ ತಗಡೊಡೆದು ಅದರ ತುಂಡುಗಳು ವಸ್ತುಗಳನ್ನೂ ಜನರನ್ನೂ ಜಖಮ್ ಮಾಡುವುವು ಈ ಭಯಂಕರ ಸ್ಫೋಟದಿಂದ ಉಂಟಾದ ಒತ್ತಾಟದ ಪರಿಣಾಮವಾಗಿ ಏಳುವ ಪ್ರಚಂಡ ವಾಯು ತರಂಗಗಳು ಕಟ್ಟಡ ಮೊದಲಾದವುಗಳ ಬಡಿದು ಹೆಚ್ಚಿನ ಹಾವಳಿಮಾಡುವವು. ಪ್ರತ್ಯೇಕವಾಗಿ ಉಕ್ಕಿನ ದಪ್ಪವಾದ ಹಾಗೂ ಚೂಪಾದ ಮೂಗು ಜೋಡಿಸಲ್ಪಟ್ಟಿರುವ ಬೋಂಬು, ಕಂಕ್ರೀಟಿನೊಳಗೆ ಕೂಡ ಹತ್ತು ಅಡಿಗಳವರೆಗೆ ತೂರಿಹೋಗುವುದು ಇಂತಹ ಬೋಂಬುಗಳು ಕಟ್ಟಡಗಳ ಮಡುಗಳೊಳಗೆ ತೂರಿ ಒಳಹೊಕ್ಕು ಆಮೇಲೆ ಸ್ಫೋಟವಾಗುವವು ಈ ಬೋಂಬನ್ನು ಅದರ ಬಾಯಿ ನೋಡಿ ಗುರುತಿಸಬಹುದು ಅದರ ವ್ಯಾಸವು ಸುಮಾರು 60 ಇಂಚುಗಳ ವರೆಗಿರುತ್ತದೆ

ಸುಡುವ ಬೋಂಬುಗಳು

ಈ ಬೋಂಬು ಅತಿ ಚಿಕ್ಕದು ಮತ್ತು ಹಗುರವಾದುದು ಆದುದರಿಂದ ಹೆಚ್ಚಿ ಸಂಖ್ಯೆಯಿಂದ ಅವನ್ನು ಕೂಡೊಯ್ದು ವಿಶಾಲವಾಗಿ ಚೆಲ್ಲಿಬಿಡಬಹುದು ಒಂದು ವಿಮಾನವು 1500 ಸುಡುವ ಬೋಂಬುಗಳನ್ನೊಯ್ಯಬಹುದು ಮತ್ತು ಅವನ್ನು ಎಲ್ಲೆಯೂ ಸುರಿದು ಬೆಂಕಿಯೆಬ್ಬಿಸಬಹುದು ಸುಡುವ ಬೋಂಬು 14 ಇಂಚು ಉದ್ದ ಮತ್ತು 2 ಇಂಚು ವ್ಯಾಸವುಳ್ಳದಿದ್ದು 2ರಿಂದ 4 ರಾತ್ತಲ್ಗಳ ವರೆಗೆ ಭಾರವಿರುತ್ತದೆ ಒಂದು ಬೋಂಬು ಬಿದ್ದೊಡನೆ ಅದರ ತುದಿಯಲ್ಲಿರುವ ಥರ್ಮೈಟ್ ಎಂಬ ಪದಾರ್ಥವು ಉರಿಯಹತ್ತಿ ಒಳಗಿನ ಮೆಗ್ನೀಸಿಯಮ್ ಗುಂಡನ್ನು ಉರಿಸುವುದು ಈ ಬೋಂಬಿನ ಸಮಿಪಕ್ಕೇನೇ ಹೋಗಕೂಡದು. ಮೆಗ್ನೀಸಿಯಮ್ ಗುಂಡೊಡೆದು 50 ಅಡಿ ದೂರದ ವರೆಗೆ ಬೆಂಕಿಯ ಕಿಡಿಗಳನ್ನು ಹಾರಿಸಿ ಎಲ್ಲೆಲ್ಲಿಯೂ ಕಿಚ್ಚಿಕ್ಕುವುದು. ಈ ಬೋಂಬಿನಿಂದಾಗಿ ಹೆಚ್ಚಿನ ಉಷ್ಣವುಂಟಾಗುವುದರಿಂದ ಬೆಂಕಿಯು ಕೂಡಲೆ ಹಿಡಿದು ಹಬ್ಬುವುದು ಸುಡುವ ಬೋಂಬಿನ ಉಷ್ಣವು ಸೂರ್ಯಬಿಂಬದ ಉಷ್ಣಕ್ಕಿಂತ ಅರವಾಸಿಯಿರುವುದೆಂಬುದರಿಂದ ಅದರ ಸುಡುವ ಶಕ್ತಿಯನ್ನು ಕಲ್ಪಿಸಿಕೊಳ್ಳಬಹುದು ಉಕ್ಕನ್ನು ತುಂಡು ಮಾಡುವ ಜ್ವಾಲೆಯದೊಂದಿಗಿಂತ ಸುಡುವ ಬೋಂಬಿನ ಉಷ್ಣವು ಎರಡು ಪಾಲಷ್ಟು ಹೆಚ್ಚಾಗುತ್ತವೆ. ತೀವ್ರವಾದ ಈ ಉಷ್ಣವನ್ನುಂಟುಮಾಡಿ ಈ ಬೋಂಬು 20 ನಿಮಿಷಗಳವರೆಗೆ ಉರಿದು ಬೆಂಕಿಯೆಬ್ಬಿಸುತ್ತದೆ. ಈ ಬೆಂಕಿಯು 6 ಇಂಚುಕಂಕ್ರೀಟನ್ನೂ 1½ ಇಂಚು ದಪ್ಪ ಉಕ್ಕನ್ನೂ ಸುಟ್ಟು ಒಳಗೆ ಹೋಗಬಲ್ಲುದು. (ಮುಂದುವರಿಯವುದು)

THULUNAD BANK
OF SUPPLY AGENCY LIMITED,

ESTD.] UDIPI. [1933.

INTEREST ON CURRENT ACCOUNT ALLOWED

at 3% p. a.

All kinds of Banking business transacted

Write for particulars to —

The Managing Director.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ 1—0—0

ಮದನಮಂಜರಿ ಫಾರ್ಮಸಿ, 184 ಜೈನಾಬಜಾರ್ ಮದ್ರಾಸ್

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸ್ವೀಕಾರ - ವಿಮರ್ಶೆ

ಕರ್ನಾಟಕ ಫ್ರೀ ಹೈಸ್ಕೂಲ್ ಮುಂಬಾಯಿ—ಇದರ 1939ನೇ ಇಸವಿ ಆಗೋಸ್ತು 31ಕ್ಕೆ ಅಂತ್ಯವಾಗುವ ವರದಿ ನಮ್ಮ ಹಸ್ತಗತವಾಗಿದೆ. 1924ರಲ್ಲಿ ಕೆಲವು ಕನ್ನಡ ಸೇವಾಧುರಂಧರರಿಂದ ಸ್ಥಾಪಿಸಲ್ಪಟ್ಟ ಈ ಶಾಲೆಯು ವರದಿಯ ವರ್ಷದಲ್ಲಿ ಹೈಸ್ಕೂಲಾಗಿ ಮಾರ್ಪಟ್ಟಿರುವುದು ಸಂತೋಷಕರವಿದೆ ಶ್ರೀ ಯಚ್ ಯಂ. ಕಾಮತ್ ಎಂ ಎ ರವರು ಪ್ರಿನ್ಸಿಪಾಲ್ ಕೆಲಸವನ್ನು ವಹಿಸಿದ್ದಾರೆ ಶಾಲೆಯು ಜನ್ಮವೆತ್ತಿ ದಾರಿದ್ರ್ಯ ಜಾತಿ ಮತ ಭೇದವಿಲ್ಲದೆ ಸಕಲರಿಗೂ ಪ್ರವೇಶನೀಕ್ಕುತ್ತದೆ, ಶಾಲೆಯು ಉನ್ನತ ಸ್ಥಿತಿಗೇರಿ ಮುಂಬಯಿ ಕನ್ನಡಿಗರಿಗೆ ಅತ್ಯುಪಯುಕ್ತವಾಗಲೆಂದು ಹಾರೈಸುವೆವಲ್ಲದೆ ಶ್ರದ್ಧಾಪೂರ್ವಕ ಕೆಲಸಮಾಡುತ್ತಿರುವ ಅಧ್ಯಾಪಕ ಮಂಡಳಿಯನ್ನು ಅಭಿನಂದಿಸುವೆವು

ಚಿತ್ರ ಸಮಾಚಾರ— ಬೆಂಗಳೂರಿನಿಂದ ಹೊರಡುತ್ತಿರುವ ಚಲಚಿತ್ರ ವಿಷಯಕವಾದ ಈ ಮಾಸಪತ್ರಿಕೆಯು ಅಕ್ಟೋಬರ ತಿಂಗಳ ಸಂಚಿಕೆಯು 'ದಸರಾ ಸಂಚಿಕೆ' ಎಂಬ ವಿಶೇಷ ಸಂಚಿಕೆಯಾಗಿ ಹೊರಬಿದ್ದಿದೆ ಇದು ಮಾಸ ಸಂಚಿಕೆಗಿಂತ ಎಷ್ಟೋ ಉತ್ತಮವಾಗಿದೆ ಲಗು-ಬಿಗ, ನಟೀ ಪರ್ಣಯಲ್ಲಿ ಚಲನಚಿತ್ರತಾರೆಗೆ ನರಕಯಾತನ, ದೇವಿಕಾರಾಣಿ ಧನದ ವೈಭವ ಮೊದಲಾದ ವಾಚನೀಯ ಬರೆಹಗಳಿವೆ. ಇದರ ಸಂಪಾದಕರಾದ ಶ್ರೀ ಎಚ್. ಆರ್. ಕೃಷ್ಣಮೂರ್ತಿಯವರು ಪಡುವ ಸಾಹಸವು ಸ್ತುತ್ಯವಾದುದು ಇದೇರೀತಿ ಉತ್ತಮ ವಿಶೇಷ ಸಂಚಿಕೆಗಳನ್ನು ಇವರು ಹೊರಡಿಸಿ ಕನ್ನಡ ಸೇವೆಮಾಡುವಂತಾಗಲಿ.

ಸರಸ್ವತಿ-ನವರಾತ್ರಿ ಸಂಚಿಕೆ— ಅಖಿಲ ಕರ್ನಾಟಕದಲ್ಲಿ ಸ್ತ್ರೀಯರಿಗಾಗಿ ಬೆಂಗಳೂರಿನಿಂದ ಶ್ರೀಮತಿ ಆರ್. ಕಲ್ಯಾಣಮ್ಮನವರ ಸಂಪಾದಕತ್ವದಲ್ಲಿ ಹೊರಡುವ "ಸರಸ್ವತಿ" ಮಾಸ ಪತ್ರಿಕೆಯ ಹೆಸರನ್ನು ಕೇಳದವರಿಲ್ಲ ಶ್ರೀಮತಿಯವರು ವರ್ಷವರ್ಷವೂ ಉತ್ತಮವಾದ ನವರಾತ್ರಿಯ ವಿಶೇಷ ಸಂಚಿಕೆಯನ್ನು ವಾಚಕರಿಗೆ ಅರ್ಪಿಸುತ್ತಿರುವರು. ಈ ಸಲದ ವಿಶೇಷ ಸಂಚಿಕೆಗೆ ಸರ್ ಮಿರ್ಜಾ ಇಸ್ಮಾಯಿಲ್, ಶ್ರೀ ವಿಶ್ವೇಶ್ವರಯ್ಯ, ಪ್ರೊ. ಆಲೂರು ವೆಂಕಟರಾವ್, ಮೊದಲಾದವರು ತಮ್ಮ ದಿವ್ಯ ಸಂದೇಶಗಳನ್ನು ಕೊಟ್ಟು ಹರಸಿದ್ದಾರೆ, ಇದರಲ್ಲಿ ನಮ್ಮ ಹಿಂದಿನ ಕರ್ತವ್ಯ' ಎಂಬ ಸಂಪಾದಕೀಯ ಲೇಖನವು ವಿಚಾರ ಪೂರ್ಣವೂ ಬೋಧಪ್ರದವಿದೆ. ದುರ್ಗಾ ಪೂಜೆ, 'ಸರಕಾರದಿಂದ ಸ್ತ್ರೀಯರ ಉದ್ಧಾರ' ಮೊದಲಾದ ಲೇಖನಗಳೂ ಚೆಲೋದಾಗಿವೆ ಮುಂದೆ ಇದಕ್ಕಿಂತಲೂ ಉತ್ತಮವಾದ ವಿಶೇಷಾಂಕಗಳನ್ನು ಹೊರಡಿಸಿ, ಸ್ತ್ರೀಯರ ಏಳ್ಗೆಯನ್ನೂ ಕನ್ನಡಿಗರ ಸೇವೆಯನ್ನು ಮಾಡ ಬಂತಾಗಲೆಂದು ನಮ್ಮ ಹಂಬಲ

ಪ್ರಭಾತ ದಸರಾ ಸಂಚಿಕೆ—ಮಂಗಳೂರಿನ ಶ್ರೀ ಕುಡ್ವ ವಾಸುದೇವ ಶೆಣೈಯವರ ಸಂಪಾದಕತ್ವದಲ್ಲಿ ಪ್ರಭಾತವಾರಪತ್ರಿಕೆಯು ವಾಡಿಕೆಯಂತೆ ಈ ವರ್ಷವೂ ದಸರಾ ಸಂಚಿಕೆಯನ್ನು ವಾಚಕರಿಗರ್ಪಿಸಿದೆ, ಇದರ ಅಂತರಂಗ ಬಹಿರಂಗಗಳು ಮನೋಹರವಾಗಿವೆ, ಕರ್ನಾಟಕದಲ್ಲಿ ಹೆಸರಾದ ಶ್ರೀಗಳಾದ ವಿ ಬಿ ಅಲಕರ್ಜೆ, ಎನ್ ಟಿ, ಕೊ ತಿ ಕಾರಂತ್, ಗೋವಿಂದ ಪೈ, ಕುಡ್ವ ವಾಸುದೇವ ಶೆಣೈ, ವಿ. ಕೈ. ಗೋಕಾಕ, ದಾಸರಾದಾಸ ಮೊದಲಾದವರ ಲೇಖನಕವನಗಳಿಂದ ಸಂಚಿಕೆಯು ಒಪ್ಪುತ್ತಿದೆ. ಶ್ರೀ ಕೊ ತಿ. ಕಾರಂತರ 'ಒಂದೇ ಹಾಡು' ಎಂಬ ಏಕಾಂಕ ನಾಟಕವು ಎಲ್ಲಿಲ್ಲಿಯೂ ಇರುವ ತಗಾದೆಯು ಒಂದೇ ಹಾಡಾಗಿದೆ, ಇದು ಅತಿ ಸ್ವಾಭಾವಿಕ ಚಿತ್ರಿಸಲ್ಪಟ್ಟಿದೆ. ಕೊನೆಯಲ್ಲಿ ನಮ್ಮ ಜಿಲ್ಲೆಯ ಪ್ರಸಿದ್ಧ ಸಂಸ್ಥೆಗಳು ಎಂಬ ಸಂಸ್ಥೆಗಳ ಪರಿಚಯ ಲೇಖನವಿದೆ, ಅಂತೂ ಸಂಚಿಕೆಯು ಉತ್ತಮವಾಗಿದೆ, ಕ್ರಯ ೦-೩-೦ ಪುಟ 92

ನಾಡಗುಡಿ. — ಇದೊಂದು ಬೆಂಗಳೂರಿಂದ ಹೊಸತಾಗಿ ಹೊರಟ ಪಕ್ಷಪತ್ರಿಕೆ. ಅನಂದ ಪವರ್ ಪ್ರೆಸ್ಸಿನ ಶ್ರೀ ಪಿ. ಮುರಹರಿರಾಯರ ಹೊಸ ಸಾಹಸವಿದು ಇದರ ಮೊದಲ ಸಂಚಿಕೆಯು ನಮ್ಮ ಹಸ್ತಗತವಾಗಿದೆ, ಕರ್ನಾಟಕವನ್ನು ಸರ್ವಾಂಗಪರಿಪೂರ್ಣವಾದ ಅಭಿವೃದ್ಧಿಯ ಸ್ಥಿತಿಯಲ್ಲಿ ನೋಡುವುದೇ, ಆದರ್ಶವಾಗಿ ಸ್ವಾರ್ಥತ್ಯಾಗ ಪೂರ್ವಕವಾಗಿ ಹೋರಾಡುವುದೇ ಇದರ ಗುರಿಯೆಂದು ತಿಳಿದು ಬರುತ್ತದೆ ಸಂಚಿಕೆಯು ಅಂತರಂಗ ಬಹಿರಂಗ ಸೌಂದರ್ಯಗಳಿಂದ ಕೂಡಿದ್ದು ಮನೋಹರವಾಗಿದೆ. ಈ ನೂತನ ಬಂಧುವಿಗೆ ನಮ್ಮ ಸುಸ್ವಾಗತ ಇದರ ವಾ ಚಂದಾ ರೂ 1—14—0

ಅಳಿಯ ಸಂತಾನ ಸುಧಾರಣಾ ಪರಿಷತ್ತು, ಮಂಗಳೂರು.

ಈ ಪರಿಷತ್ತಿನ ಎರಡನೇ ಅಧಿವೇಶನವು ಇದೇ ಕಳೆದ ತಾ 5ನೇ ಆದಿತ್ಯವಾರ ಪೂರ್ವಾಹ್ನ ಘಂಟೆ 11ಕ್ಕೆ ಶ್ರೀ ಕೆ ಬಿ ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನಡೆಯಿತು. ಬೇರೆ ಬೇರೆ ತಾಲೂಕುಗಳಿಂದ ಸುಮಾರು 50 ಮಂದಿ ಪ್ರತಿನಿಧಿಗಳು ಬಂದಿದ್ದರು. ಕಾಸರಗೋಡು, ಪುತ್ತೂರು, ಮಂಗಳೂರು ಮತ್ತು ಕಾರ್ಕಳ ತಾಲೂಕುಗಳಿಂದ ಹೆಚ್ಚಿಗೆಯಾಗಿ ಪ್ರತಿನಿಧಿಗಳು ಬಂದಿದ್ದರು. ಅಧ್ಯಕ್ಷರು, ಪರಿಷತ್ತಿನ ಆರಂಭದಲ್ಲಿ ಅಳಿಯ ಸಂತಾನ ಸುಧಾರಣಾ ಕಮಿಟಿಯವರು ತಯಾರಿಸಿರುವ ಮಸೂದೆ, ಆ ವೇಳೆ ಉಂಟಾಗಿದ್ದ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪರಿಸ್ಥಿತಿ, ಕಾಂಗ್ರೆಸಿನ ಧೋರಣೆ ಮತ್ತು ಕಾಂಗ್ರೆಸ್ ಮಂತ್ರಿಗಳ ರಾಜೀನಾಮೆಯ ಸಂಗತಿಗಳನ್ನು ವಿವರಿಸಿ ಚಿಕ್ಕ ಭಾಷಣವಿತ್ತರು ಆ ವೇಳೆ ಕಮಿಟಿಯ ಸೆಕ್ರೆಟರಿಗಳಾದ ಶ್ರೀ ಕೆ. ಕೆ. ಶೆಟ್ಟಿ ತಾ 23 5 39ರ ಪ್ರಥಮ ಪರಿಷತ್ತಿನಲ್ಲಿ ನಿಯುಕ್ತರಾದ ಅಳಿಯ ಸಂತಾನ ಸುಧಾರಣಾ ಕಮಿಟಿಯವರು ಮಾಡಿದ ಕೆಲಸ, ತಯಾರಿಸಿರುವ ಮಸೂದೆ, ಮಸೂದೆಯ ಕುರಿತು ತೋರಿಬಂದ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯ, ಎರಡನೇ ಪರಿಷತ್ತಿಗೆ ಪ್ರತಿನಿಧಿಗಳನ್ನು ಆರಿಸಲು ಮಾಡಲ್ಪಟ್ಟ ವ್ಯವಸ್ಥೆಯ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದಿಟ್ಟರು. ಆ ಮೇಲೆ ಅಧ್ಯಕ್ಷರ ಅಳಿಯಸಂತಾನ ಸುಧಾರಣಾ ಮಸೂದೆಯ ಪ್ರತಿಯೊಂದು ಪ್ರಕರಣಗಳನ್ನು ಓದಿಹೇಳಿ ಆ ಕುರಿತು ಚರ್ಚೆ ನಡೆದು ಈ ಕೆಳಗಣ ತಿದ್ದುಪಡಿಗಳಿಂದ ಮಸೂದೆಯು ಮಂಜೂರಾಯಿತು, ಪರಿಚ್ಛೇದ Vರ 27ನೇ ಸೆಕ್ಷನಿನಲ್ಲಿ 'ಕುಟುಂಬದ ಮೆಂಬರರು ಲೆಕ್ಕಪತ್ರಗಳ ನಕಲನ್ನಾಗಲಿ, ಅದರ ಕೆಲವು ಅಂಶವನ್ನಾಗಲಿ ಬರೆದು ತೆಗೆದುಕೊಳ್ಳಬಹುದು.' ಎಂಬುದನ್ನು ತೆಗೆದು ಹಾಕಿ ಅದರ ಬದಲಿಗೆ 'ಕುಟುಂಬದ ಕಿರಿ ಮೆಂಬರರು ಲೆಕ್ಕಪತ್ರಗಳ ಪ್ರತಿಯನ್ನು ಅಪೇಕ್ಷಿಸಿದಲ್ಲಿ ಆತನ ಖರ್ಚಿನಿಂದಲೇ ಯಜಮಾನನು ಅದನ್ನವನಿಗೆ ಕೊಡತಕ್ಕದ್ದು' ಎಂಬುದನ್ನು ಸೇರಿಸಬೇಕು, ಈ ಪರಿಚ್ಛೇದದ ಸೆಕ್ಷನ್ 28 ಮತ್ತು 29ನ್ನು ಸಂಪೂರ್ಣ ತೆಗೆದು ಹಾಕಬೇಕು, ಪರಿಚ್ಛೇದ VIರ 33ನೇ ಸೆಕ್ಷನಿನ ಕೊನೆಗೆ 'ಸಮಾನ ಹಿರಿಯಳು ಮೃತಳಾದುದಕ್ಕಾಗಿ, ಅಥವಾ ಈ ಮಸೂದೆಯ ಜ್ಯಾರಿಗೆ ಬಂದ ಕೂಡಲೆ (ಯಾವುದು ನಂತರವೋ ಅದ) ಆಸ್ತಿಯು ಪಾಲಾಗುವುದಾದರೆ ಪ್ರತಿಯೊಂದು ಕವರು ಎಷ್ಟರವರೆಗಿನ ಪಾಲಿಗೆ ಬಾಧ್ಯಸ್ಥಾಗುವವೊ ಅಷ್ಟಕ್ಕೇನೇ ಅದು ಅನಂತರ ಯಾವ ಸಮಯದಲ್ಲಿ ಪಾಲಾಗುವಾಗಲೂ ಬಾಧ್ಯವಾಗಿರತಕ್ಕದ್ದು' ಎಂಬುದನ್ನು ಸೇರಿಸಬೇಕು

"ನಿಸ್ಸಂತತಿ ಕುಟುಂಬದಲ್ಲಿ ಪಾಲಾಗುವಾಗ ಕುಟುಂಬದ ಆಸ್ತಿಯು ಕುಟುಂಬದ ಪ್ರತಿಯೊಬ್ಬ ಮೆಂಬರರೊಳಗೆ ತಲೆವಾರು ಪಾಲಾಗಿ ಅದನ್ನವನು ಇಚ್ಛಾನುಸಾರ ಪಡೆಯತಕ್ಕದ್ದು" ಎಂಬ ಹೊಸ ಸೆಕ್ಷನನ್ನು 33 (a) ಆಗಿ ಸೇರಿಸಬೇಕು,

ಪರಿಚ್ಛೇದ VIIರ 35ನೇ ಪ್ರಕರಣದಲ್ಲಿ ಮತ್ತು ಅದರ ಉಪಪ್ರಕರಣ 3ರಲ್ಲಿ "ಕುಟುಂಬದ ಯಾವುದಾದರೊಂದು ಕವರಿನ ೫ನೇ ಅಂಶ ಮೆಂಬರರು" ಎಂದಾಗಬೇಕು.

ಅಳಿಯಸಂತಾನ ಸುಧಾರಣಾ ಪರಿಷತ್ತಿನವರು ತಯಾರಿಸಿರುವ ಮಸೂದೆ ಮದ್ರಾಸ್ ಲೆಜಿಸ್ಲೇಟಿವ್ ಸಭೆಗಳ ಮುಂದೆ ಆದಷ್ಟು ಬೇಗನೆ ತರಲ್ಪಟ್ಟು ಒಡನೆ ಮಂಜೂರಾಗುವಂತೆ ಆಗತಕ್ಕ ಎಲ್ಲಾ ಕೆಲಸ ಮಾಡುವರೆ ಶ್ರೀ ಕೆ ಬಿ ಜಿನರಾಜ ಹೆಗ್ಡೆಯವರು ಅಧ್ಯಕ್ಷರಾಗಿ ಮತ್ತು ಶ್ರೀ. ಎ. ಎಸ್. ಹೆಗ್ಡೆಯವರು ಸೆಕ್ರೆಟರಿಯಾಗಿ ಶ್ರೀಗಳಾದ ಎ. ಶಂಕರ ಆಳ್ವ, ಬಿ. ಎ. ಬಿ. ಎಲ್. ಜಿ ಎ ಪುತ್ರನ್, ರಾವ್ ಬಹದೂರು ಎನ್ ಎಸ್ ಕುಮಾರ, ಎನ್. ಎಸ್ ಶೆಟ್ಟಿ, ಟಿ ಎನ್ ಭಂಡಾರಿ, ಎಡ್ವೊಕೇಟ್, ಬಡಿಲ ಐತಪ್ಪ ಶೆಟ್ಟಿ, ಕೆ. ವೆಂಕಪ್ಪ ಶೆಟ್ಟಿ, ವಕೀಲ್, ಬಿ. ಶೀನಪ್ಪ ಹೆಗ್ಡೆ, ಎಡ್ವೊಕೇಟ್, ಕೆ. ನಾರಾಯಣ ಹೆಗ್ಡೆ, ಎಡ್ವೊಕೇಟ್, ಬಿ. ಲಕ್ಷ್ಮೀನಾರಾಯಣ ಪೈ, ಎಡ್ವೊಕೇಟ್, ಕೆ ಸುಂದರರಾಮ ಶೆಟ್ಟಿ, ಎಡ್ವೊಕೇಟ್, ಟಿ ಕೃಷ್ಣಶೆಟ್ಟಿ ಮತ್ತು ಕೆ ಕೆ ಶೆಟ್ಟಿ ಇವರ ಕಮಿಟಿಯೊಂದನ್ನು ಸ್ಥಾಪಿಸಲಾಯಿತು. ಕೊನೆಯಲ್ಲಿ ಶ್ರೀ ಎನ್, ಎಸ್ ಕಿಲ್ಲೆಯವರು ಪರಿಷತ್ತಿನ ಮತ್ತು ಕಮಿಟಿಯ ಕೆಲಸದಲ್ಲಿ ನೆರವಾದವರಿಗೆಲ್ಲಾ ಆಭಾರ ಸೂಚಿಸಿ, ಮಸೂದೆ ತಯಾರಿಸುವ ಕುರಿತು ಹೆಚ್ಚಿನ ಕೆಲಸ ಮಾಡಿರುವ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಶ್ರೀ. ಪಿ. ಎಸ್. ಹೆಗ್ಡೆ ಮತ್ತು ಶ್ರೀ ಕೆ. ಕೆ. ಶೆಟ್ಟಿಗೆ ವಂದನೆಯನ್ನರ್ಪಿಸಿ ಪರಿಷತ್ತು ಸಂಜೆ ಸುಮಾರು 5 ಘಂಟೆಗೆ ಕೊನೆಗೊಂಡಿತು

A JOB
YOU WOULD LIKE

because you would be proud to represent a company like 'East & West" whose policies have unquestionable safety and unusually low rates

Strong & Progressive

ESTD 1913

The East And West Insurance Co, Ltd. invites applications from well connected and experienced persons for the posts of Inspectors and district organisers in Karnatak, Mysore State, South and North Kanara Districts

Attractive contracts & liberal terms Please communicate immediately with our official representative **Mr H S Nayak** *c/o this paper*

OR

EAST&WEST INSURANCE CO. LTD

East & West Bldg.

Apollo St, Fort BOMBAY

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ (ದೀಪಾವಳಿಯ ನಂತರ) ಸಂಚರಿಸಲಿರುವರೆಂದು ತಿಳಿದುಬರುತ್ತದೆ ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸಬಹುದೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ ಪ್ರವೇಶ ಹಾಸಲು ರೂ. 1, (ಜುಮ್ಲಾ ರೂ. 11) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ. ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಮಾಹಿತಿಯನ್ನು ಪಡೆಯಲಪೇಕ್ಷಿಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ ಈ ವಿಳಾಸಕ್ಕೆ ಬರೆಯಬಹುದು

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

ಸ್ಥಾಪನೆ **ಕ್ರೌನ ರಬ್ಬರ ಸ್ಟಾಂಪ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳನ್ನು, ಸ್ಟೆನ್ಸಿಲ್ ಗಳು, ಸೀಲ್ ಗಳು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವುದು.

Crown Rubber Stamp Co, Balmat Road, MANGALORE.

Includ'd by the Mysore Govt Stores Purchase Committee in the list of approved Firms

INSERTED BY
The Canara Banking Corporation Ltd.,
(INCORPORATED IN BRITISH INDIA)
ESTD 1906.

IN MEMORY OF
LATE SRI KARNAD RAMA RAO,
Merchant, UDIPI.
Who expired on 1—11—1939.

DIRECTOR OF THE BANK FROM 1922 TO 1939

ಉಡುಪಿ, ಗುರುವಾರ ತಾ. ೯-೧೧-೩೯.

ಅಳಿಯಸಂತಾನ ಮಸೂದೆ

ಕಳೆದ ತಾ. ೭ರಲ್ಲಿ ಮಂಗಳೂರಲ್ಲಿ ನಡೆದ ಜಿಲ್ಲಾ ಪರಿಷತ್ತಿನ ಎರಡನೇ ಅಧಿವೇಶನದ ವಿವರವನ್ನು ಇನ್ನೊಂದೆಡೆ ಕೊಡಲಾಗಿದೆ. ಮಸೂದೆಯು ಪ್ರತಿಯೊಂದು ಪ್ರಕರಣವೂ ಚೆನ್ನಾಗಿ ಪರ್ಯಾಲೋಚಿಸಲ್ಪಟ್ಟು ಅಲ್ಪಸ್ವಲ್ಪ ತಿದ್ದುಪಡಿಗಳಿಂದ ಇಡೀ ಮಸೂದೆಯು ಮಂಜೂರಾಗಿರುವುದು. ಮತ್ತು ಮುಂದೆ ಮದ್ರಾಸ್ ನ್ಯಾಯವಿಧಾಯಕ ಸಭೆಗಳು ಆರಂಭವಾದಾಗ ಕೂಡಲೇ ಮಸೂದೆಯನ್ನು ಅವುಗಳ ಮುಂದೆ ತಂದು ಮಂಜೂರುಮಾಡಿಸುವ ಕುರಿತು ಬೇಕಾದ ಕೆಲಸವನ್ನೆಲ್ಲಾ ಮಾಡಲು ಕಮಿಟಿಯೊಂದು ಸ್ಥಾಪಿಸಲ್ಪಟ್ಟಿರುವುದು.

ಅಳಿಯಸಂತಾನ ಸುಧಾರಣಾ ಪರಿಷತ್ತಿನವರು ಮಸೂದೆ ತಯಾರಿಸುವ ತಮ್ಮ ಕೆಲಸವನ್ನು ಒಳ್ಳೇ ಪರಿಶ್ರಮದಿಂದ ಮತ್ತು ಜವಾಬ್ದಾರಿಯಿಂದ ನೆರವೇರಿಸಿರುವರೆಂಬುದರಲ್ಲಿ ಸಂದೇಹವೇ ಇಲ್ಲ. ಸರಕಾರವಾದರೂ ಯಾವುದಾದರೊಂದು ಕಾಯಿದೆಯನ್ನು ಮಾಡುವಾಗ ಇಷ್ಟೊಂದು ಪ್ರಚಾರ ಮತ್ತು ಪರಿಶ್ರಮ ವಹಿಸುವುದಿಲ್ಲೆನ್ನಬಹುದು. ಪರಿಷತ್ತಿನವರು ತಯಾರಿಸಿರುವ ಮಸೂದೆಯು ಕೂಡಾ ಬಹುಮಟ್ಟಿಗೆ ಜನಮತವನ್ನು ತೃಪ್ತಿಪಡಿಸಿರುವದೆಂದು ಹೇಳಬಹುದು. ಎರಡು ವಿಧದ ತೀವ್ರಗಾಮಿತ್ವಕ್ಕೂ ಆಸ್ಪದ ಕೊಡದೆ, ಮಿತಗಾಮಿ ಪ್ರಗತಿಪರ ಧೋರಣೆ ವಹಿಸಿ, ಯಾವ ಪೂರ್ವಗ್ರಹವೂ ಇಲ್ಲದೆ ನಿಜವಾಗಿ ಸುಧಾರಣೆಯನ್ನಾಶಿಸುವ ಎಲ್ಲಾ ವಿಧದ ಜನಮತವನ್ನು ಸಮಾಧಾನಪಡಿಸಲು ಪರಿಷತ್ತಿನವರು ಸಾಧ್ಯವಾದ ಪ್ರಯತ್ನಮಾಡಿರುವರು. ಮಸೂದೆಯಲ್ಲಿ ಇನ್ನೇನಾದರೂ ತಿದ್ದುಪಡಿ ಆಗಬೇಕಾಗಿದ್ದ ಪಕ್ಷದಲ್ಲಿ ಅಂತಹ ತಿದ್ದುಪಡಿ ಬೇಕೆನ್ನುವವರ ಅಸಡ್ಡೆಯಿಂದ ಅದು ಆಗದೆ ಹೋಗಿರುವುದೇ ಹೊರತು ಪರಿಷತ್ತಿನವರ ಆಗ್ರಹ ಅಥವಾ ಅನುದಾರ ಧೋರಣೆಯಿಂದಲ್ಲ. 'ಜನಮತವನ್ನು' ಅನುಲಕ್ಷಿಸಿ ತಾವು ತಯಾರಿಸಿರುವ ಸುಧಾರಣೆಯಲ್ಲಿ ಯಾವ ತಿದ್ದುಪಡಿಮಾಡುವುದಕ್ಕೂ ಪರಿಷತ್ತಿನವರು ಸದಾ ಸಿದ್ಧರೇ ಇದ್ದರು.

ಅಳಿಯಸಂತಾನ ಸುಧಾರಣಾ ಮಸೂದೆಯ ಕುರಿತು ಅಲ್ಲಲ್ಲಿ ತಲೆದೋರಿರುವ ವಿರೋಧವು ನಿಜವಾದ ಜನಬೆಂಬಲವುಳ್ಳದ್ದಾಗಿದೆಯೆಂದು ಹೇಳಬರುವುದಿಲ್ಲ. ಅಲ್ಲದೆ ಇಂತಹ ವಿರೋಧವು ಯಾವಾಗಲೂ ಎಂತಹ ಮಸೂದೆಗಾದರೂ ಇದ್ದೇ ಇರುತ್ತದೆ. ಜನತೆಯು ಸೂಚಿಸಿರುವ ಕೆಲವು ತಿದ್ದುಪಡಿಗಳು ಪರಿಷತ್ತಿನ ಈ ಸಲದ ಅಧಿವೇಶನದಲ್ಲಿ ಮಾಡಲ್ಪಟ್ಟಿದೆ. ಆಸ್ತಿ ವಿಭಾಗವು ಯಾವ ರೀತಿ ಆಗಬೇಕೆಂಬುದು ಮಹತ್ವಾದ ಚರ್ಚೆಯ ವಿಷಯ. ಮಸೂದೆಯಲ್ಲಿ ಅರೆವಾಸಿ ಕವರುವಾರು ಮತ್ತು ಅರೆವಾಸಿ ಜನಸಂಖ್ಯಾವಾರು ಪಾಲಾಗಬೇಕೆಂಬುದು ಸರ್ವ ಸಾಮಾನ್ಯ ನ್ಯಾಯಪರ ತತ್ವವು ಅನುಸರಿಸಲ್ಪಟ್ಟಿದೆ. ಕುಟುಂಬದ ಇಡೀ ಆಸ್ತಿಯು ಜನಸಂಖ್ಯಾ ವಾರುಪಾಲಾಗಬೇಕೆಂದು ಪ್ರತಿಪಾದಿಸುವ ಪ್ರಬಲ ಪಕ್ಷವೊಂದಿದೆಯೆಂಬುದನ್ನು ನಾವು ಒಪ್ಪುತ್ತೇವೆ. ಈ ಕುರಿತು ಏನಾದರೊಂದು ಮಧ್ಯ ಪಂಚಾಯಿತಿಕೆಮಾಡುವುದು ಸಾಧ್ಯವಿತ್ತು. ಮಸೂದೆ ತಯಾರಿಸಿದ್ದ ಸುಧಾರಣಾ ಕಮಿಟಿಯ ಮೆಂಬರರೇ ಕೆಲವರು, ಮೂರರಲ್ಲಿ ಎರಡು ಪಾಲು ತಲೆವಾರು ಮತ್ತು ಒಂದು ಪಾಲು ಕವರುವಾರು ಪಾಲಾಗಬೇಕೆಂದು ಭಿನ್ನಾಭಿಪ್ರಾಯವಿತ್ತಿದ್ದರು. ಒಂದು ಕುಟುಂಬವು ಅನೇಕ ವರ್ಷಗಳಿಂದ ಪಾಲಾಗದೆ ಪ್ರಥಮವಾಗಿ ವಿಭಾಗವಾಗುವಾಗ, ಅರೆವಾಸಿ ಜನಸಂಖ್ಯೆ ಮತ್ತು ಇನ್ನರೆವಾಸಿ ಕವರುವಾರು ಪಾಲಾಗುವ ಮಸೂದೆಯ ತತ್ವವನ್ನನುಸರಿಸಿದರೆ ಅತಿ ಹೆಚ್ಚು ಜನಸಂಖ್ಯೆ ಇರುವ ಅನೇಕ ಕವರುಗಳವರಿಗೆ ದೊಡ್ಡ ಅನ್ಯಾಯವಾಗಬಹುದು. ಈ ಕುರಿತು ಯಾವುದಾದರೊಂದು ನ್ಯಾಯವಾದ ಏರ್ಪಾಡು ಅವಶ್ಯವಿರುವುದು. ಪರಿಷತ್ತಿನ ಪ್ರಚಾರಕರಲ್ಲೊಬ್ಬರಾದ ಶ್ರೀ. ಎನ್. ಎಸ್. ಕಿಲ್ಲೆಯವರು ಈ ಸಂಬಂಧವಾಗಿ ಏನಾದರೊಂದು ತಿದ್ದುಪಡಿಮಾಡುವ ಆತುರವುಳ್ಳವರಾಗಿ ಅದನ್ನು ಪರಿಷತ್ತಿನ ಎರಡನೇ ಅಧಿವೇಶನದ ಮುಂದಿಟ್ಟು ಪ್ರಬಲವಾಗಿ ಪ್ರತಿಪಾದಿಸಲು ಸಿದ್ಧರಾಗಿದ್ದರು. ಆದರೆ ಪರಿಷತ್ತಿನ ಪ್ರತಿನಿಧಿಗಳಾದರೂ ಆ ಪ್ರಸ್ತಾಪವನ್ನೇ ಎತ್ತದುದರಿಂದ ಏನು ಮಾಡುವುದಕ್ಕೂ ಸಾಧ್ಯವಾಗದೆ ಹೋಯಿತು. ಇದಕ್ಕೆ ಆಸ್ತಿ ವಿಭಾಗ ಕ್ರಮದಲ್ಲಿ ಹೊಸ ತಿದ್ದುಪಡಿಯಾಗಬೇಕೆಂದು ಪ್ರತಿಪಾದಿಸುವ ಹಲವರ ಅಸಡ್ಡೆ ಮತ್ತು ಇನ್ನು ಕೆಲವರ ವಿರೋಧವೇ ಕಾರಣವಲ್ಲದೆ ಮತ್ತೇನಲ್ಲ. ಇನ್ನಾದರೂ ಈ ಜನರು ಜಾಗ್ರತರಾಗಿದ್ದು ಕಮಿಟಿಯೊಂದಿಗೆ ಸಹಕರಿಸಿ ಚಳವಳಿಸಿದರೆ, ಆಸ್ತಿ ವಿಭಾಗವಾಗುವಾಗ, ಅತಿ ಹೆಚ್ಚು ಜನಸಂಖ್ಯೆಯಿರುವ ಕವರುಗಳಿಗೆ ದೊಡ್ಡ ಅನ್ಯಾಯವಾಗದಂತೆ ಏನಾದರೊಂದು ಏರ್ಪಾಡು ಮಾಡುವುದು ಸಾಧ್ಯವಿದೆಯೆಂಬೇ ನಮ್ಮ ಅಭಿಮತ.

ಮಸೂದೆಯು ಯಾವಾಗ ಎಸೆಂಬ್ಲಿಯ ಮುಂದೆ ತರಲ್ಪಡುವುದೆಂದು ಈಗ ನಿಶ್ಚಿತವಾಗಿ ಹೇಳಬರುವುದಿಲ್ಲ. ದೇಶದಲ್ಲಿ ಈಗ ಉಂಟಾಗಿರುವ ಬಿಕ್ಕಟ್ಟು ಹೆಚ್ಚು ಸಮಯ ಇದೇ ರೀತಿ ನಿಲ್ಲಲಾರದು. ಇನ್ನು ಕೆಲವು ತಿಂಗಳುಗಳಲ್ಲಿಯೇ ಏನಾದರೊಂದು ತೀರ್ಮಾನವಾಗಿ ಮದ್ರಾಸ್ ಎಸೆಂಬ್ಲಿಯು ಪುನಃ ಆರಂಭಿಸಲ್ಪಟ್ಟೊಡನೆಯೇ ಮಸೂದೆಯು ಅದರ ಮುಂದೆ ತರಲ್ಪಡಬಹುದು. ಮಸೂದೆಯಲ್ಲಿ ಇನ್ನೂ ಕೆಲವು ತಿದ್ದುಪಡಿಗಳಾಗಬೇಕೆಂಬುವವರು ಇನ್ನಾದರೂ ಚಳವಳಿಸಿ ಬಹುಪಕ್ಷದ ಜನಬೆಂಬಲ ಪಡೆದು ಬೇಕಾದ ರೀತಿಯ ತಿದ್ದುಪಡಿ ಮಾಡಿಸಬಹುದು. ಮಸೂದೆಯು ಒಮ್ಮೆ ಎಸೆಂಬ್ಲಿಯ ಮುಂದೆ ಬಂದು ಮಂಜೂರಾದರೆ ಅದನ್ನು ಮುಂದೆ ಯಾವ ರೀತಿಯಲ್ಲಾದರೂ ತಿದ್ದಿಕೊಳ್ಳಬಹುದು. ಆದರೆ ಅದು ಎಸೆಂಬ್ಲಿಯ ಮುಂದೆಯೇ ಬಾರದಂತಾದರೆ ಸುಧಾರಣೆಯೇ ಇನ್ನು ಕೆಲವು ವರ್ಷಗಳ ಹಿಂದೆ ಬೀಳಬಹುದು. ಮುಂದಾಳುಗಳಾಗಿ ಹೋಗಿ ಸುಧಾರಣೆಗಾಗಿ ಕೆಲಸಮಾಡುವ ಸುಧಾರಕರು ಜುಗುಪ್ಸೆಗೊಂಡು ತಣ್ಣಗಿದ್ದುಬಿಡಬಹುದು. ಇಂತಹ ಪರಿಸ್ಥಿತಿಯುಂಟಾಗದಂತೆ ಸುಧಾರಣಾಪೇಕ್ಷಿಗಳಾದ ಜನರೆಲ್ಲಾ ಸಕಾಲದಲ್ಲಿ ಎಚ್ಚತ್ತು ಸುಧಾರಣಾಪರಿಷತ್ತಿನವರಿಗೆ ಹೆಚ್ಚಿನ ಜನಬೆಂಬಲ ದೊರೆಯುವಂತೆ ಪ್ರಯತ್ನಿಸತಕ್ಕದ್ದು.

ಯುನೈಟೆಡ್ ಸ್ಟೇಟ್ಸಿನ ತಾಟಸ್ಥ್ಯ ಮಸೂದೆ

ಇದೇ ತಾ. 3ರಲ್ಲು ಅಮೇರಿಕದ ಯುನೈಟೆಡ್ ಸ್ಟೇಟ್ಸಿನ 'ನ್ಯೂಟ್ರಲಿಟಿ ಬಿಲ್' ಎಂಬ ತಾಟಸ್ಥ್ಯ ಮಸೂದೆಯು ಸೆನ್‌ಟ್ ಪ್ರಜಾಪ್ರತಿನಿಧಿಗಳಲ್ಲಿ ಮಂಜೂರಾಗಿ, ಕೂಡಲೆ ಅದನ್ನು ಪ್ರೆಸಿಡೆಂಟ್ ರೂಸ್‌ವೆಲ್ಟರು ಕಾನೂನಾಗಿ ಜ್ಯಾರಿಗೆ ತಂದಿರುವರು. ಯುದ್ಧದ ಮೊದಲೊಮ್ಮೆ ಸೆನೆಟಿನಲ್ಲಿ ಈ ಮಸೂದೆಯು ನಿರಾಕರಿಸಲ್ಪಟ್ಟಿತು. ಈಗ 55 ಅನುಕೂಲ ಮತ್ತು 22 ಪ್ರತಿಕೂಲ ಮತಗಳಿಂದ ಮಂಜೂರಾಗಿರುವುದು. ಇದರಿಂದ ಪ್ರೆಸಿಡೆಂಟ್ ರೂಸ್‌ವೆಲ್ಟರು ಬಹಳ ಸಂತೋಷಗೊಂಡಿರುವರು. ಇದರಿಂದ ಯುರೋಪಿನ ಯುದ್ಧದ ಮೇಲೆ ಮಹತ್ವದ ಪರಿಣಾಮವಾಗಲಿದೆ. ಈ ಮಸೂದೆಯು ಮಂಜೂರಾದುದರಿಂದ ಮಿತ್ರ ರಾಷ್ಟ್ರಗಳು ಸಂತೋಷಗೊಂಡಿವೆ. ಜರ್ಮನಿ ಮತ್ತು ರಷ್ಯಗಳಲ್ಲಿ ಸಂತಾಪವುಂಟಾಗಿದೆ. ಯುನೈಟೆಡ್ ಸ್ಟೇಟ್ಸಿನ ಮೊದಲಿನ ಯುದ್ಧ ತಾಟಸ್ಥ್ಯ ಕಾನೂನಿನ ಮೇರೆಗೆ ಹೋರಾಡುವ ಯಾವ ರಾಷ್ಟ್ರಗಳಿಗಾದರೂ ಅದು ಯುದ್ಧೋಪಕರಣವೇ ಮೊದಲಾದ ಸಾಮಾನುಗಳನ್ನು ಕಳುಹಿಸದಂತೆ ನಿಷೇಧವಿದ್ದಿತು. ಈಗಣ ಬದಲಾವಣೆಯ ಮೇರೆಗೆ ಯುದ್ಧಮಾಡುತ್ತಿರುವ ಯಾವ ರಾಷ್ಟ್ರವಾದರೂ ನಗ್ದು ಹಣವಿತ್ತು ತನ್ನ ಹಡಗಗಳ ಮೂಲಕವಾಗಿ ಯುದ್ಧೋಪಕರಣಗಳನ್ನೊಯ್ಯಬಹುದು. ಇದರಿಂದ ಮಿತ್ರ ರಾಷ್ಟ್ರಗಳಿಗೆ ಬಹಳ ಪ್ರಯೋಜನ. ಅತ್ಲಾಂತಿಕ ಸಾಗರದಲ್ಲಿ ಈಗ ಇಂಗ್ಲೆಂಡ್ ಮತ್ತು ಫ್ರಾನ್ಸುಗಳ ಹಡಗಗಳೇ ಹೆಚ್ಚಾಗಿ ಸಂಚರಿಸುತ್ತಿದ್ದು ಜರ್ಮನಿಯ ಹಡಗಗಳ ಸಂಚಾರಕ್ಕೆ ಆಸ್ಪದವೇ ಇಲ್ಲ. ಇದು ಹೊರತು ನಗ್ದು ಹಣ ಕೊಟ್ಟು ವ್ಯಾಪಾರಮಾಡುವ ಸ್ಥಿತಿಯಲ್ಲಿ ಜರ್ಮನಿಯು ಇರುವುದಿಲ್ಲ. ಆದುದರಿಂದ ಈಗಿನ ನ್ಯೂಟ್ರಲಿಟಿ ಮಸೂದೆಯು ಹಿಟ್ಲರರಿಗೆ ದೊಡ್ಡ ಪೆಟ್ಟಾಗಿದೆ. ಈ ಪ್ರಾಮುಖ್ಯ ಬದಲಾವಣೆಯ ಹೊರತು ಹೋರಾಡುವ ರಾಷ್ಟ್ರಗಳಿಗೆ ಅಮೇರಿಕದ ಹಡಗಗಳು ಪ್ರಯಾಣಿಕರನ್ನು, ಸಾಮಾನುಗಳನ್ನೊಯ್ಯದಂತೆ ಯುದ್ಧದ ಪ್ರದೇಶಗಳಿಗೆ ಅಮೇರಿಕದ ಹಡಗಗಳು ಹೋಗದಂತೆ ಹೋರಾಡುವ ರಾಷ್ಟ್ರಗಳು ಯುನೈಟೆಡ್ ಸ್ಟೇಟ್ಸಿನಲ್ಲಿ ಸಾಲ ಎತ್ತುಕೂಡಿಸದಂತೆ ನಿಷೇಧಿಸುವ ಬದಲಾವಣೆಗಳು ಕೂಡಾ ಪ್ರಾಮುಖ್ಯವಾಗಿರುತ್ತವೆ. ಇದರಿಂದ ಯುನೈಟೆಡ ಸ್ಟೇಟ್ಸು ಯಾವ ಸಂದರ್ಭದಲ್ಲೂ ಯುದ್ಧಕ್ಕಿಳಿಯದಂತೆ ಮುಂಜಾಗ್ರತೆಯಿಂದ ಬೇಕಾದ ಏರ್ಪಾಡು ಮಾಡಲ್ಪಡುವಂತಾಗಿದೆ

ಪ್ರಚಂಡ ವೈಮಾನಿಕ ಮತ್ತು ನೌಕಾಪಡೆ

95 ಯುದ್ಧ ಹಡಗ ಮತ್ತು 2400 ಯುದ್ಧ ವಿಮಾನಗಳನ್ನು ಹೆಚ್ಚಿಗೆಯಾಗಿ ತಯಾರಿಸುವರೆ, 1,300,000,000 ಡೋಲರುಗಳ ಮಂಜೂರಾತಿಯನ್ನು ಯುನೈಟೆಡ್ ಸ್ಟೇಟ್ಸ್ ಸರಕಾರವು ಬರುವ ಜನವರಿ ತಿಂಗಳಲ್ಲಿ ಸ್ಟೇಟ್ ಕಾಂಗ್ರೆಸಿನಿಂದ ಪಡೆಯಲಿರುವುದು. ಈ ಹೊಸ ಕಾರ್ಯಕ್ರಮದಂತೆ, ಯುದ್ಧ ವಿಮಾನಗಳನ್ನೊಯ್ಯುವ ಹಡಗ 3, 8 ಕ್ರ್ಯೂಸರ್ ಹಡಗ, 52 ಡಿಸ್ಟ್ರೋಯರುಗಳು, 32 ಸಬ್‌ಮೆರೀನ್ ಮತ್ತು 31 ಸಹಾಯಕ ನಾವೆಗಳನ್ನು ಕಟ್ಟಲಾಗುವುದು.

ಜರ್ಮನ್ ಹಡಗದ ಆತ್ಮಹತ್ಯೆ

ಇದೇ ತಾ. 3ರಲ್ಲು ಮೆಕ್ಸಿಕೋ ದೇಶದಿಂದ 40,000 ಪೀಪಾಯಿ ಎಣ್ಣೆ ತರುತ್ತಿದ್ದ ಎಮ್ಮಿ ಫ್ರಿಡ್ರಿಚ್ ಎಂಬ ವ್ಯಾಪಾರಿ ಹಡಗವೊಂದನ್ನು ಬ್ರಿಟಿಷ್ ಹಡಗಗಳು ತಡೆದು ವಶಮಾಡಿಕೊಳ್ಳಲಿದ್ದಾಗ, ಅದರ ಕೆಪ್ಟನನು ಇಡೀ ಹಡಗವನ್ನು ಮುಳುಗಿಸಿ ಅದರೊಳಗಿದ್ದ ಸುಮಾರು 40ಮಂದಿ ನಾವಿಕರು ಜೀವರಕ್ಷಣಾ ಬೆಲ್ಟನ್ನು ಕಟ್ಟಿಕೊಂಡು ನೀರಿಗೆ ಹಾರಿಬಿಟ್ಟರು.

ಲೋರ್ಡ್ಸ್ ಸಭೆಯಲ್ಲಿ ಹಿಂದೀ ಪ್ರಶ್ನೆ

ಹಿಂದೀ ಪ್ರಶ್ನೆಯ ಕುರಿತು ಇಂಗ್ಲೆಂಡಿನ ಲೋರ್ಡ್ಸ್ ಸಭೆಯಲ್ಲಿ ಚರ್ಚೆ ನಡೆದಾಗ ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ಮಾಡಿದ ಭಾಷಣವು, ಹಿಂದೂ ದೇಶದ ಬಿಕ್ಕಟನ್ನು ಪರಿಹರಿಸಲು ಯಾವ ಸಹಾಯವನ್ನೂ ಮಾಡುವಂತಹದಿರುವುದಿಲ್ಲ. ಅದರ ಬದಲಿಗೆ ತೊಡಕೇ ಆಗಿದೆ. 1919ರಿಂದ ಬ್ರಿಟನು ಹಿಂದೂದೇಶದ ಮೇಲೆ ಅಧಿಕಾರ ನಡೆಸಿ ಹಿಂದೀಯರ ಮೇಲೆ ಸೂರೆಮಾಡುವ ಅಭಿಪ್ರಾಯವನ್ನು ಬಿಟ್ಟು ಹಿಂದೀಯರಿಗೆ ಸ್ವತಂತ್ರ ರಾಜ್ಯಭಾರವೀಯುವ ನಿರ್ಧಾರಮಾಡಿದೆಯೆಂದು ಲೋರ್ಡ್ ಜೆಟ್ಲೆಂಡರ ಹೇಳಿಕೆ. ಮಾ

ಅಭ್ಯಂತರವಿ
ರದಂತೆ, ಇ
ಮಾತ್ರ ಆಗಿದ್ದ
ಜ್ಯವು ಯು
ಕಾರ್ಯರೂಪ
ನೆ ಲೋರ್ಡ್
ಉತ್ತರವಿಲ್ಲ.
ರಿಂತೆ, ಹಿಂದೀ
ವ ಆಕರ್ಷಕ
ಷ್ ಮುತ್ಸದ್ದಿ
ಕೊಂಡುಬಂ
ಸ್ವಾತಂತ್ರ್ಯ
ವಾಗಿಯೇ ಇ
ವೇಗೆ ಕಾ
ದು ಕೂಡಾ
ಪ್ರಶ್ನೆಯನ್ನು
ಹಿಂದೂಡ್ಡುವ
ಸಾಮುವೇಲ
ಬಹು ಕಂ
ಕೆಗೊಳುವುದೆಂ
ಮೂರರ
ಉಳಿದವರ
ತಾಗುವುದು
ಸರಕಾರದ
ಸಂಖ್ಯಾತರು
ಲ ಕುದುರೆ
ರೆಂದು ಲೋ
ಮುಸಲ್ಮಾನರೇ
ರನ್ನು ಕಾಂ
ಪ್ಪು, ಹಿಂದೀ
ಆದಷ್ಟು
ಪಟೇಲ ಘೋ
ರ್ಡ್ ಸೆಲಿಸ್
ಜ್ಯವಾದಿಗಳ
ಲೋರ್ಡ್ ಜೆ
ನ್ನು ಇತ್ಯರ್ಥ
ವಾದ ಪ್ರಯ
ನಿಸ್ಟೇ ಹೇ
ಮ ಹೊಗಳ
ಕಾಂಗ್ರೆಸು
ಳಿ ದೊಡ್ಡ
ತ್ತಾರೆ

ಕೋರ್ಟ
ಯು ಅಂತ್ಯವಾ
ಗಾ ವಣೆ ತಾ.
ಅಫೀಸರ
ದೆ ಕೆ ಪಂಕ
ಪಂಕರಶೆಟ್ಟ
ತ್ತಿಗೆ ಸದ್ರಿ
ಲ ಸುಮಾರು
ಮಾತ್ರವೇ.

ದ್ವೈರಿ
ಭಂಡಾರ

ಡಿಲ್ಲಿ ಮಾತುಕತೆ ನಿರರ್ಥಕವಾಯಿತು.

ಕಾಯಿದೆಭಂಗಕ್ಕೆ ಇದು ಸಂದರ್ಭವಲ್ಲ! ಪಂಡಿತ ನೆಹರುಗಳ ಅಶಾವಾದ!

ವೈಸರಾಯರ ಸ್ಟೇಟ್‌ಮೆಂಟ್

ಕಳೆದ ತಾ. 5ನೇ ರಾತ್ರಿ ಘಂಟೆ 8 30 ಕ್ಕೆ ಡಿಲ್ಲಿಯಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಪ್ರತಿನಿಧಿಗಳೊಳಗೆ ನಡೆದ ಮಾತುಕತೆಯ ಕುರಿತು ವೈಸರಾಯರು ಸುದೀರ್ಘ ಹೇಳಿಕೆಯೊಂದನ್ನು ಹೊರಡಿಸಿ, ವೈಸರಾಯರಿಗೂ, ಹಿಂದೀ ಮುಖಂಡರಿಗೂ ನಡೆದಿರುವ ಪತ್ರವ್ಯವಹಾರವು ಪ್ರಕಟಿಸಲ್ಪಟ್ಟಿರುವುದು. ಡಿಲ್ಲಿಯ ಮಾತುಕತೆಯು ಫಲಕಾರಿಯಾಗಿರುವುದಿಲ್ಲ ಹೀಗಾದುದು ಅತ್ಯಂತ ಶೋಚನೀಯ ಆದರೆ ಪ್ರಕೃತದ ಬಿಕ್ಕಟ್ಟು ನಿವಾರಿತವಾಗುವಂತೆ ಇನ್ನಾದರೂ ತಾನು ಪುನಃ ಪುನಃ ಪ್ರಯತ್ನಿಸುವೆನೆಂದೇ ವೈಸರಾಯರ ನಿರ್ಧಾರ. ಸೆಪ್ಟಂಬರ ತಾ 3ರಲ್ಲಿ ಬ್ರಿಟನು ಯುದ್ಧವನ್ನಾರಂಭಿಸಿದ ವೇಳೆ ಈಸಲ ಡಿಲ್ಲಿಯ ಮಾತುಕತೆ ನಡೆಯುವವರೆಗೆ ನಡೆದಿರುವ ವಿದ್ಯಮಾನಗಳನ್ನು ವೈಸರಾಯರು ಪ್ರಸ್ತಾಪಿಸಿ ಇದೇ ತಾ 1ರಲ್ಲಿ, ಮಹಾತ್ಮ ಗಾಂಧಿ, ಬಾಬು ರಾಜೇಂದ್ರ ಪ್ರಸಾದ್ ಮತ್ತು ಮಿ ಜಿನ್ನಾರವರನ್ನು ಡಿಲ್ಲಿಗೆ ಆಮಂತ್ರಿಸಿ ನಡೆಸಿದ ಮಾತುಕತೆಯ ವಿಷಯಗಳನ್ನು ವಿವರಿಸಿರುವರು ಕೇಂದ್ರದಲ್ಲಿ ಯಾವ ಬದಲಾವಣೆಯನ್ನಾದರೂ ಮಾಡಲು, ಹಿಂದೂದೇಶದ ಪ್ರಾಮುಖ್ಯ ಸಮಾಜಗಳೊಳಗಿರುವ ಅನೈಕ್ಯವೇ ಕಾರಣ, ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸಿನೊಳಗಣ ಪ್ರಬಲ ಭಿನ್ನಾಭಿಮತವು ಅವುಗಳು ಹೊರಡಿಸಿರುವ ಪ್ರಕಟಣೆಗಳಿಂದಲೇ ಸ್ಪಷ್ಟವಾಗುತ್ತದೆ. ಆದುದರಿಂದ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗಿನವರು, ಪ್ರಾಂತಿಕ ಪ್ರಶ್ನೆಯ ಕುರಿತಾದ ತಮ್ಮೊಳಗಣ ವೈಷಮ್ಯವನ್ನು ಮೊದಲು ನಿವಾರಿಸಿಕೊಂಡರೆ ಕೇಂದ್ರದಲ್ಲಿ ಬದಲಾವಣೆಮಾಡಲು ಅನುಕೂಲವಾಗುವುದೆಂದು ವೈಸರಾಯರು ಮಿ ಜಿನ್ನಾ, ಗಾಂಧಿಜಿ ಮತ್ತು ಬಾಬು ರಾಜೇಂದ್ರ ಪ್ರಸಾದರೊಡನೆ ಆಗ್ರಹದಿಂದ ಕೇಳಿಕೊಂಡರು. ಈ ಬಿಕ್ಕಟ್ಟಿನ ಪ್ರಶ್ನೆಯ ಇತ್ಯರ್ಥಕ್ಕಾಗಿ ಹಿಂದೀ ಮುಖಂಡರು ಸಾಧ್ಯವಾದ ಪ್ರಯತ್ನವನ್ನೆಲ್ಲಾ ಮಾಡಬೇಕು ಅದು ಪ್ರಾಮುಖ್ಯವಾಗಿ ಹಿಂದೀಯರು ತಮ್ಮೊಳಗೆ ಇತ್ಯರ್ಥಿಸಿಕೊಳ್ಳುವ ಪ್ರಶ್ನೆ ತಾನು ಮಾತ್ರವಲ್ಲದೆ ಬ್ರಿಟಿಷ್ ಸರಕಾರವೂ ಈ ಜಾತೀಯ ಪ್ರಶ್ನೆಯ ಇತ್ಯರ್ಥದ ಕುರಿತು ಬಹಳ ಆತುರದಿಂದಿದ್ದು ಇದಕ್ಕಾಗಿ ಸಾಧ್ಯವಾದ ಸಹಾಯಮಾಡುವೆವೆಂದು ವೈಸರಾಯರು ಆಶ್ವಾಸನೆಯಿತ್ತರು.

ಈ ಪ್ರಕಾರ ಹಿಂದೀ ಮುಖಂಡರು ಡಿಲ್ಲಿಯಲ್ಲಿ ಮಾತುಕತೆ ನಡಿಸಿದರು ಆದರೆ ಅದರ ಪರಿಣಾಮವು ಅತ್ಯಂತ ನಿರಾಶಾಜನಕವಿದೆ, ಪ್ರಾಮುಖ್ಯ ಪ್ರಶ್ನೆಗಳ ಕುರಿತು ಇಂದು ಹಿಂದೂದೇಶದ ಪ್ರಬಲ ಪಕ್ಷಗಳೊಳಗೆ ತೀವ್ರ ಭಿನ್ನಾಭಿಪ್ರಾಯವು ನೆಲೆಗೊಂಡಿದೆ ಈ ಅಪಜಯವನ್ನು ಸ್ವೀಕರಿಸಲು ತಾನು ಸಿದ್ಧನಿಲ್ಲ ಇನ್ನು ಮುಂದಾದರೂ ಈ ಪ್ರಬಲ ಪಕ್ಷಗಳೊಳಗೆ ಮತ್ತು ದೇಶೀಯ ರಾಜರುಗಳೊಳಗೆ ಒಕ್ಕಟ್ಟು ಸಾಧ್ಯವಿದೆಯೋ ಎಂದು ಪ್ರಯತ್ನಮಾಡಿ ನೋಡಬೇಕಾಗಿದೆ. ಹಿಂದೀಯರೊಳಗೆ ಒಕ್ಕಟ್ಟನ್ನು ಸ್ಥಾಪಿಸಲು ತಾನು ಹಿಂದೂದೇಶಕ್ಕೆ ಬಂದ ಮೇಲೆ ಬಹಳವಾಗಿ ಪ್ರಯತ್ನಮಾಡಿರುವೆನು. ಐಕ್ಯವು ಹಿಂದೂದೇಶಕ್ಕೆ ಮಹತ್ವವಾದುದು ಯಾವ ಜಾತಿ ಅಥವಾ ಪಕ್ಷಕ್ಕೆ ಸೇರಿದ ಹಿಂದೀಯರೇ ಆಗಲಿ, ದೇಶೀಯ ಸಂಸ್ಥಾನದವರಾಗಲಿ, ಬ್ರಿಟಿಷ್ ಇಂಡಿಯದವರಾಗಲೀ ಭಾರತೀಯರೆಲ್ಲರೂ ಪರಸ್ಪರ ಹಿತಸಾಧನೆಗಾಗಿ ಒಟ್ಟುಗೂಡಿ ಕೆಲಸಮಾಡುವಂತಾಗುವ ಐಕ್ಯವುಂಟಾಗಬೇಕು. ಇದಕ್ಕಾಗಿ ಮಾಡುವ ಯಾವ ಶ್ರಮವೂ ಹೆಚ್ಚಲ್ಲ. ತಾನು ಇಷ್ಟರವರೆಗೆ ಈ ಪ್ರಯತ್ನದಲ್ಲಿ ಅಪಜಯ ಹೊಂದಿರಬಹುದು. ಆದರೆ ತಾನು ಇನ್ನೊಮ್ಮೆ ಪ್ರಯತ್ನಮಾಡಲಿರುವೆನು. ತನ್ನ ಯಥಾರ್ಥತೆ ಮತ್ತು ಸೌಹಾರ್ದವನ್ನು ಮನ್ನಿಸಿ ಹಿಂದೀಯರು ತನ್ನೊಡನೆ ಅಂತಃಕರಣಪೂರ್ವಕವಾಗಿ ಸಹಕರಿಸಬೇಕು ದೇಶದ ಮಹತ್ತಾದ ಸಂಸ್ಥೆಗಳಿಂದ ಇತ್ಯರ್ಥಪಡಿಸಲಸಾಧ್ಯವಾದ ಸಮಸ್ಯೆಯನ್ನು ತಾನೀಗ ಬಗೆಹರಿಸಲೆತ್ನಿಸಬೇಕಾಗಿದೆ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ಒಂದುಗೂಡಿಸಬೇಕಾಗಿದೆ ಈ ಸಮಸ್ಯೆಯು ಅತಿ ತೀಕ್ಷ್ಣವಾದುದಾದರೂ, ಇತರ ಮಾನವ ಸಮಸ್ಯೆಗಳಂತೆ ಸೌಹಾರ್ದ ಮತ್ತು ತಾಳ್ಮೆಯಿಂದ ಅವನ್ನು ಬಿಡಿಸಲು ಸಾಧ್ಯವಿದೆಯೆಂದೇ ತನ್ನ ನಂಬಿಕೆ. ಮುಖಂಡರು ತಮ್ಮೊಳಗೆ ಮತ್ತು ತನ್ನೊಡನೆ ಮಾತುಕತೆ ನಡಿಸುವಾಗ ಅವರಲ್ಲಿ ತೋರಿಬಂದ ಸೌಹಾರ್ದವು ಶುಭಚಿನ್ಹೆಯಾಗಿದೆ ದೇಶವೂ, ದೇಶದ ಬೇರೆ ಬೇರೆ ಪಕ್ಷಗಳ ಮುಖಂಡರೂ ತನಗೆ ಬೇಕಾದ ಸಹಾಯವನ್ನಿತ್ತು, ಈಗಣ ತೊಡಕನ್ನು ನಿವಾರಿಸುವಂತೆ ನೆರವಾಗಬೇಕೆಂದೇ ತನ್ನ ಪ್ರಾರ್ಥನೆ ಎಂಬುದೇ ವೈಸರಾಯರ ಹೇಳಿಕೆಯ ಸಾರಾಂಶ

"ಜಾತೀಯ ಪ್ರಶ್ನೆಯು ಈ ರೀತಿಯಲ್ಲಿ ಹಿಂದೂದೇಶದ ಸ್ವಾತಂತ್ರ್ಯಕ್ಕೆ ತೊಡಕಾಗಿ ಮುಂದೊಡ್ಡಲ್ಪಟ್ಟಿರುವುದು ವಿಷಾದಕರವಿದೆ. ಮುಖ್ಯ ಪ್ರಶ್ನೆಯನ್ನೇ ಅದು ಮುಸುಕಿಬಿಟ್ಟಿದೆ ಹಿಂದೂದೇಶದ ಸ್ವಾತಂತ್ರ್ಯದ ಪ್ರಶ್ನೆಗೂ ಇದಕ್ಕೂ ಯಾವ ಸಂಬಂಧವೂ ಇಲ್ಲೆಂದು ಬಾಬು ರಾಜೇಂದ್ರಪ್ರಸಾದರು ವೈಸರಾಯರಿಗೆ ತಿಳಿಸಿರುವರು ಬ್ರಿಟಿಷ್ ಸರಕಾರವು ಯುದ್ಧದ ತನ್ನ ಉದ್ದೇಶವನ್ನು ಸ್ಪಷ್ಟಪಡಿಸುವನಕ ವೈಸರಾಯರು ಪ್ರಸ್ತಾಪಿಸಿರುವ ಯಾವ ಪ್ರಶ್ನೆಯನ್ನಾದರೂ ಕಾಂಗ್ರೆಸ್ ಮುಖಂಡರು ಜಿನ್ನರೊಡನೆ ಚರ್ಚಿಸಲು ಸಿದ್ಧರಿಲ್ಲೆಂದು ತನ್ನೊಡನೆ ಹೇಳಿರುವರೆಂದು ಜಿನ್ನರು ವೈಸರಾಯರಿಗೆ ತಿಳಿಸಿರುವರು. ವೈಸರಾಯರ ಹೇಳಿಕೆಯಿಂದ ಕಾಂಗ್ರೆಸ್ ಪಕ್ಷೀಯರೆಲ್ಲಾ ನಿರಾಶೆಗೊಂಡಿರುವರು.

ಈಗ ಕಾಯಿದೆಭಂಗ ಸಾಧ್ಯವಿಲ್ಲ

ಪ್ರಕೃತದ ಪರಿಸ್ಥಿತಿಯಲ್ಲಿ ಸ್ವರಾಜ್ಯಕ್ಕಾಗಿ ಕಾಯಿದೆಭಂಗ ಚಳವಳವನ್ನು ಹೂಡದಿರುವುದೇ ಜಾತೀಯ ವೈಷಮ್ಯವನ್ನು ನಿವಾರಿಸುವ ಒಂದು ದಾರಿಯೆಂದು ತಾನು ಸೂಚಿಸಿದರೆ ಕಾಂಗ್ರೆಸ್ ವಾದಿಗಳಿಗೆಲ್ಲಾ ಆಶ್ಚರ್ಯಕರವಾಗಿ ತೋರಬಹುದು ಮುಂದೆ ದೇಶವನ್ನಿದಿರಿಸುವ ಪರಿಸ್ಥಿತಿಯೆಂದರೆ ಬ್ರಿಟಿಷ್ ಸರಕಾರವು ಅಲ್ಪಸಂಖ್ಯಾತರೆನಿಸುವವರ ಬೆಂಬಲ ಪಡೆದು ಏಕಾಕಿಯಾಗಿರುವ ಕಾಂಗ್ರೆಸ್ಸನ್ನು ವಿರೋಧಿಸಲಿರುವುದು ಅವರ ಎದುರಾಗಿ ಕಾಯಿದೆಭಂಗ ಹೂಡುವುದು ಅಸಫಲವಾಯಿದೆ ಅದು ಅಂತಃಕಲಹ ಮಾತ್ರವಲ್ಲದೆ ಪಾಪಕರ ಕಲಹವಾಗಿರುತ್ತದೆ ಕಾಂಗ್ರೆಸ್ಸಿನೊಳಗಿನ ದುರ್ಬಲತೆಗೆ ಯಾವುದು ಕಾರಣವಾಗಿರುವುದೋ, ಕಾಂಗ್ರೆಸಿನೊಳಗೆ ಎಲ್ಲಾ ಸಮಾಜಗಳನ್ನೆಳೆದು ಸೇರಿಸಿಕೊಳ್ಳುವುದಕ್ಕೂ ಅದೇ ಕಾರಣವಾಗಿದೆ ಅಹಿಂಸೆಯ ಕುರಿತಾದ ತ್ರಿಕರಣಪೂರ್ವಕವಾದ ಶ್ರದ್ಧೆಯ ಅಭಾವವೇ ಈ ಕಾರಣವೆಂದು ಮಹಾತ್ಮ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಬರೆದಿರುವರು "ದೇಶವು ಅದಕ್ಕೆ ಸಿದ್ಧವಾಗಿರದಿದ್ದ ಪಕ್ಷದಲ್ಲಿ ನಾನು ಕಾಯಿದೆಭಂಗವನ್ನು ವಿರೋಧಿಸುವೆನು ಬ್ರಿಟಿಷ್ ಸರಕಾರದೊಡನೆ ಅಸಹಕಾರವು ಮಾತ್ರ, ಕಾಂಗ್ರೆಸ್ ಮಂತ್ರಿಗಳ ರಾಜಿನಾಮೆಯಿಂದ ಆರಂಭವಾಗಿದೆ" ಎಂದು ಇದೇ ತಾ. 6 ರಲ್ಲಿ ವಾರ್ಧಾಕ್ಕೆ ಹಿಂತೆರಳುವ ಗಾಂಧಿಯವರು ನಾಗಪುರದಲ್ಲಿ ಹೇಳಿರುವರು

ಕಾಂಗ್ರೆಸ್ ಮಂತ್ರಿಗಳ ರಾಜಿನಾಮೆ

ಬೊಂಬಾಯಿ, ಸಂಯುಕ್ತ ಪ್ರಾಂತ, ಬಿಹಾರ್ ಮತ್ತು ಒರಿಸ್ಸಗಳ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಟ್ಟಿರುತ್ತಾರೆ. ಈ ಪ್ರಾಂತಗಳಲ್ಲಿ ಇತರ ಮಂತ್ರಿಮಂಡಲಗಳನ್ನು ಸ್ಥಾಪಿಸಲು ಸಾಧ್ಯವಾಗದೆ ಮದ್ರಾಸಿನಂತೆ ಗವರ್ನರರೇ ಆಡಳಿತ ವಹಿಸಿದ್ದಾರೆ ಇದೇ ತಾ 6ರಲ್ಲಿ ವಾಯುವ್ಯ ಗಡಿನಾಡಿನ ಮಂತ್ರಿಗಳು ರಾಜಿನಾಮೆ ಕೊಟ್ಟಿರುತ್ತಾರೆ ಮುಸ್ಲಿಮ್ ಲೀಗಿನವರ ಮಂತ್ರಿಮಂಡಲವನ್ನು ರಚಿಸಕೂಡದೆಂದ ನಿರ್ಧರಿಸಿರುವುದರಿಂದ ಇಲ್ಲಿಯೂ ಗವರ್ನರರೇ ಆಡಳಿತ ವಹಿಸಬೇಕಾಗುವುದು.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು

ಇನ್ಕಮು ಟೇಕ್ಸಿನ ಕಾಯಿದೆಯಲ್ಲಿ 1 4-39ರಿಂದ ಬಹಳ ವ್ಯತ್ಯಾಸಗಳಾಗಿವೆ ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯವಸ್ಥೆ ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ, ಕೇವಲ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು, ಅದರಿಂದ ತಯಾರಿಸಿದ ಸಾರಾಂಶವು ನಿಜವೆಂದು ಕೆಲವು ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು ಅಂಥಾ ಲೆಖ್ಖಗಳ ಸಹಾಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದ ಆಫೀಸರರಿಗೆ ತಮ್ಮ ಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ರಿಯಾಯತಿಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಶ್ಚಿಂತವಾಗಿ [illegible] ಲಾಗ ವ ಟೇಕ್ಸು ಕಟ್ಟಿಯಾಗಿ ಪಡು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು 'ರಿಟರ್ನ್' ಕಳ್ಸಿಯಾಗಿ ಹೋಗಿದ್ದರೂ ತಡವಾಗಲಿಲ್ಲ ಟೇಕ್ಸು ಹಾಕುವ ಮಾಡಿನ 15 ದಿವಸಗಳ ಮುಂಚೆಯಾದರೂ ಕೆಳಗೆ ಸಹಿ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್ ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ನಾಝಿ ಪಕ್ಷದಲ್ಲಿ ಅತೃಪ್ತಿ

ಸೋವಿಯೆಟ್ ರಷ್ಯದೊಡನೆ ಸ್ನೇಹ ಬೆಳೆಸಿದುದರಿಂದ ಜರ್ಮನಿಯ ನಾಝಿ ಪಕ್ಷದೊಳಗೇನೇ ಅತೃಪ್ತಿಯುದ್ಭವಿಸಿರುವಂತೆ ತಿಳಿದು ಬರುತ್ತದೆ. ಇದನ್ನು ತಡೆಗಟ್ಟಲು ಹೊಸ ಏರ್ಪಾಡ ಮಾಡಲಾಗಿದೆ ಹಿಟ್ಲರು ಬ್ರಿಟನ್ ಮತ್ತು ಫ್ರಾನ್ಸುಗಳಿಗೆ [illegible]ಗ್ಗುವುದಕ್ಕಿಂತ ರಷ್ಯದೊಡನೆ ಯ[illegible] ಒಪ್ಪಂದಕ್ಕಾದರೂ ಸಿದ್ಧರಿರುವರೆಂದು ತಿಳಿದು ಬಂದಿದೆ ಪಶ್ಚಿಮ ರಣರಂಗದಲ್ಲಿ ಯುದ್ಧವನ್ನು ಯಾವ ರೀತಿಯಲ್ಲಿ ಮುಂದೆ[illegible]ತ್ತುವುದೆಂಬ ಕುರಿತು ಹಿಟ್ಲರ್ ಮತ್ತು ಅವರ ಸೇನಾನಿಗಳು ಕೆಲವರೊಳಗೆ ಭಿನ್ನಾಭಿಪ್ರಾಯವುಂಟಾಗಿ ಸೇನಾನಾಯಕರಾ[illegible] ಜನರಲ್ ಬ್ರೌಚಿಚರನ್ನು ತೆಗೆದು ಹಾ[illegible] ಜನರಲ್ ಕಿಟ್ಟೆಲರು ಅವರ ಸ್ಥಾನದಲ್ಲಿ ನೇಮಿಸಲ್ಪಟ್ಟಿರುವರೆಂದೂ ಇದರಲ್ಲ ಹ[illegible]ವು ಮಂದಿ ಸೇನಾನಾಯಕರಲ್ಲಿ ಅತೃಪ್ತಿಯುಂಟಾಗಿದೆಯೆಂದೂ ಸುದ್ದಿ

ಬರುವ ವಸಂತಋತುವಿನವರೆಗೆ ಪಶ್ಚಿಮ ರಣರಂಗದಲ್ಲಿ ಯುದ್ಧವಾಗುವುದಿಲ್ಲೆಂದು ನಂಬಲಾಗಿದೆ. ಹಿಟ್ಲರರು ಈವರೆಗೆ ಯಾವ ನಿರ್ಧಾರಕ್ಕೂ ಬಂದಿಲ್ಲ. ಇಂಗ್ಲೆಂಡಿನ ಮೇಲೆ ಪ್ರಬಲ ವಿಮಾನಧಾಳಿಯು ಮುಂದಾಗಿ ನಡೆಯಬಹುದೆಂದು ಸುದ್ದಿಯುಂಟಾಗಿದೆ

ಒಡಂಬಡಿಕೆಯು ಸಂಭವನೀಯ[illegible]

ದೇಶದ ಕೇಂದ್ರ ಗುರಿಯ ವಿಷಯದಲ್ಲಿ ತನಗೂ ಮಿ. ಜಿನ್ನಾರವರಿಗೂ ಹೆಚ್ಚು ಭೇದವೇನೂ ಇರುವುದಿಲ್ಲೆಂಬುದನ್ನು [illegible]ನವರೊಡನೆ ಮಾತಾಡಿದಾಗ ಕಂಡುಕೊಂಡಿರುವೆನು. ದೇಶದ ಆ ಗುರಿಯನ್ನು ಯಾವ ರೀತಿಯಲ್ಲಿ ಸಾಧಿಸುವುದೆಂಬ ಕುರಿತು ಮಾತ್ರ ಭಿನ್ನಾಭಿಪ್ರಾಯವಿದೆ ವೈಸರಾಯರಿಗೆ ತಾವು ಬೇರೆ ಬೇರೆ ಉತ್ತರಗಳನ್ನು ಕೊಡುವಂತಾದುದು ಶೋಚನೀಯ ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸಿನೊಳಗಣ ವೈಷಮ್ಯವು ಬೇಗನೆ ನಿವಾರಿಸಲ್ಪಟ್ಟು ಇತ್ತಂಡದವರೂ ಒಟ್ಟಿಗೆ ಮುಂದೊತ್ತುವ ದಿನವು ದೂರವಿರಲಾರದೆಂದು ಪಂಡಿತ ಜವಾಹರಲಾಲರು ಇದೇ ತಾ. 7ರಲ್ಲಿ ಲಹಾಬಾದಿನಲ್ಲಿ ಸಾರ್ವಜನಿಕ ಸಭೆಯ ಭಾಷಣವೀಯುವಾಗ ಹೇಳಿರುವರು.

"ಭಿನ್ನಭೇದಗಳನ್ನೆಲ್ಲಾ ಮುಳುಗಿಸಿಬಿಡಿರಿ"

ಬ್ರಿಟಿಷ್ ಸರಕಾರದೊಡನೆ ಸಹಕರಿಸುವ ವಿಷಯದಲ್ಲಿ ಕಾಂಗ್ರೆಸ್ ಮಂತ್ರಿಗಳ ರಾಜಿನಾಮೆಯು ಪ್ರಥಮ ಹೆಜ್ಜೆ ಇತರ ಹೆಜ್ಜೆಗಳು ಅದನ್ನನುಸರಿಸುವವು ಆದ[illegible] ಕಾಂಗ್ರೆಸ್ ವಾದಿಗಳು ದೇಶದ [illegible]ತ್ವವನ್ನು ಪರಿಶುದ್ಧಗೊಳಿಸಲು ಸಿದ್ಧವಿರಬೇಕು ತಮ್ಮೊಳಗಿನ ಭಿನ್ನಭೇದಗಳನ್ನು ಮುಳುಗಿಸಿಬಿಡಬೇಕೆಂದು ಸರ್ದಾರ ವಲ್ಲಭಭಾಯಿಯವರು ಹೇಳಿರುವರು

ಮಂಗಳೂರು

ಸ್ವಂ. ವಾ. ತಾ. 5-11-39.

ಅಂತರ ಕಾಲೇಜು ಚರ್ಚೆ—ಕಳೆದ ಶುಕ್ರವಾರ ದಿನ ಸಾಯಂಕಾಲ ಸ್ಥಳೀಯ ಗವರ್ನಮೆಂಟು ಕಾಲೇಜಿನಲ್ಲಿ ಸೈ. ಎ. ಕಾಲೇಜಿನ, ಸಂಘಕ್ಕೂ ಗವರ್ನಮೆಂಟ್ ಕಾಲೇಜಿನ ಸಂಘಕ್ಕೂ ದೊಡ್ಡ ಚರ್ಚೆ ನಡೆಯಿತು. ಚರ್ಚಾವಿಷಯವಿದು— 'ಶಿಕ್ಷಣವನ್ನು ನವಾದುವುದರಿಂದ ಸಮಾಜ ಸುಧಾರಣೆಯು ಆಗಲಾರದು' ಎಂದು ಈ ಸಭೆಯು ಅಭಿಪ್ರಾಯ ಪಡುತ್ತದೆ'ಎಂಬುದಾಗಿತ್ತು. ಸೈ. ಎ. ಕಾಲೇಜಿನ ಶ್ರೀ. ಕೆ. ಶೀನ ಶೆಣೈಯರು ಠರಾವನ್ನು ತಂದರು. ಶ್ರೀ ಎನ್. ಸದಾನಂದ ಉಡುಪರು ಅದನ್ನು ಅನುಮೋದಿಸಿದರು ಗವರ್ನಮೆಂಟ್ ಕಾಲೇಜಿನ ಶ್ರೀ. ವೆಂಕಟರಾಯ ಕಾಮತರು ಅದನ್ನು ಪರೋಕ್ಷಿಸಿದರು. ವಿ. ಸ್. ಯೂಸುಫ್ ನಲ್ವರು ಅವರ ಅಭಿಪ್ರಾಯವನ್ನು ಸಮರ್ಥಿಸಿದರು. ಠರಾವಿನ ಮೇಲೆ ಮತ ತೆಗೆಯಲಾಗಿ ಬಹುಮತದಿಂದ ಅದು ಮಂಜೂರಾಯಿತು. ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಜಡ್ಜರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರು ತಮ್ಮ ಅವಲೋಕನ ಅಭಿಪ್ರಾಯವನ್ನು ಸೂಚಿಸುತ್ತಾ ಶಿಕ್ಷಣವು ಸಮಾಜ ಸುಧಾರಣೆಯನ್ನು ತರಲು ಸಹಾಯಕವಾಗಿರಬಹುದಲ್ಲದೆ ಅದೇ ಸುಧಾರಣೆಯನ್ನು ಜ್ಯಾರಿಗೆ ತರಲು ಸಾಧ್ಯವಿಲ್ಲೆಂದು ಅಭಿಪ್ರಾಯಪಟ್ಟರು.

ಮಂಗಳೂರು ನಗರಸಭೆ—ಕಳೆದ ತಾ. 0ನೇ ಸಾಯಂಕಾಲ ಮಂಗಳೂರು ನಗರ ಸಭೆಯು ಶ್ರೀ.ಬಿ.ಪಿ.ಬಾಳಿಗ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತು. ಅನೇಕ ಸರಕಾರಿ ಹುಕುಮುಗಳು ಸಭೆಯಲ್ಲಿ ಓದಿ ರಿಕಾರ್ಡು ಮಾಡಲ್ಪಟ್ಟವು. ಇಂಪ್ರೂವ್‌ಮೆಂಟು ಟೇಕ್ಸನ್ನು ಪ್ರಕೃತ ವಸೂಲುಮಾಡುವುದು ಅನಗತ್ಯವೆಂದು ನಿರ್ಧಾರವಾಗಿ ಹಿಂದೆ ಆ ಟೇಕ್ಸನ್ನು ಕೊಡಬೇಕಾಗಿದ್ದ ಕೆಲವು ಸ್ಥಳಗಳನ್ನು ವಿನಾಯಿತಿ ಮಾಡಬೇಕೆಂದು ತೀರ್ಮಾನವಾಯಿತು.

ಹೊಸ ಅನಾಥಾಶ್ರಮ ಆರಂಭ—ಸ್ಥಳೀಯ ಆರ್ಯ ಸಮಾಜದ ಆಶ್ರಯದಲ್ಲಿ ಮುಂದಿನ ಶುಕ್ರವಾರ ತಾ.10 ಶ್ರೀಮದ್ದಯಾನಂದ ನಿರ್ವಾಣೋತ್ಸವವೂ ಅದೇ ಸಂದರ್ಭದಲ್ಲಿ ಶ್ರೀ ಶ್ರದ್ಧಾನಂದ ಅನಾಥಾಶ್ರಮದ ಸ್ಥಾಪನಾಕಾರ್ಯವೂ ನಡೆಯುವುದು. ಈ ಸಮಾರಂಭದಲ್ಲಿ ನಮ್ಮ ಜಿಲ್ಲಾ ಜಡ್ಜರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರೇ ಅಧ್ಯಕ್ಷತೆ ವಹಿಸಿ ಮೊಲಿನಕಾರ್ಯಗಳನ್ನು ನೆರವೇರಿಸುವರು.

ದ. ಕನ್ನಡಜಿಲ್ಲಾ ಕನ್ನಡ ಮೊಲಿಯುವರ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವ—ಉತ್ಸಾಹೀ ತರುಣರಿಂದ ಸ್ಥಾಪಿಸಲ್ಪಟ್ಟು ಸಮಾಜದ ಸೇವೆಯನ್ನು ಯಥಾಶಕ್ತಿ ನಡೆಸಿಕೊಂಡು ಬರುವ ಮೇಲಿನ ಸಂಘದ ವಾರ್ಷಿಕೋತ್ಸವ ರಾಷ್ಟ್ರಬಂಧು ಪತ್ರಿಕೆಯ ಉಪಸಂಪಾದಕರಾದ ಶ್ರೀ. ಕೆ. ಕೃಷ್ಣರಾವ್ ಬಿ.ಎ. ಇವರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಸಾಯಂಕಾಲ ಯಶಸ್ವಿಯಾಗಿ ನೆರವೇರಿತು. ಅಧ್ಯಕ್ಷರ ಚುನಾವಣೆ ಭಗವತ್ಪ್ರಾರ್ಥನೆ ಮುಗಿದನಂತರ ಸಂಘದ ಕಾರ್ಯದರ್ಶಿಗಳಾದ ಶ್ರೀ! ಯು. ಗುರುವಪ್ಪನವರು ಸಂಘದ ವರದಿಯನ್ನೋದಿದರು. ಈ ಸಂಘವು ಹೊಸತಲ್ಲವೆಂದೂ ಹಿಂದೆ ಸಮಾಜದ ಮುಂದಾಳುಗಳಿಂದ ಸ್ಥಾಪಿಸಲ್ಪಟ್ಟು ಅನಂತರ ಶಿಥಿಲವಾದ ಯುವಕ ಸಂಘವೇ ಇತ್ತೀಚೆಗೆ ಹೊಸರಿಂದ ಸಮಾಜದ ಸಕಲರನ್ನೂ ಒಳಗೊಳ್ಳುವಂತೆ 'ಸಮಾಜ ಸುಧಾರಕ ಸಂಘ'ವೆಂಬ ಹೆಸರಿನಲ್ಲಿ ಪುನರುತ್ಥಾನಗೊಂಡಿದೆಯೆಂದೂ ಈಗೆ ಪುನರುಜ್ಜೀವಿತವಾದ ಸಂಘದ (ಹೊಸ ಹೆಸರಿನಿಂದ) ಪ್ರಥಮ ವಾರ್ಷಿಕ ಸಭೆಯು ಇದಾಗಿದೆಯೆಂದೂ ಹೇಳಿದರು ಅನಂತರ ಈ ಸಂಘದ ಚಟುವಟಿಕೆಗಳನ್ನು ಅದು ನಡಿಸಿಕೊಂಡು ಬರುವ 'ಸಮಾಜ ಸೇವಕ' ಎಂಬ ಹಸ್ತಲಿಖಿತ ಪತ್ರಿಕೆಯು ಸಮಾಜದಲ್ಲಿ ನವಜಾಗೃತಿಯನ್ನುಂಟುಮಾಡಲು ಎಷ್ಟು ಸಹಾಯಕವಾಗಿದೆಯೆಂಬುದನ್ನೂ ಹೇಳಿದರು. ಅನಂತರ ಸಭೆಯ ವ್ಯಕ್ತಿ ಶ್ರೀ. ಬಾಬು ಮಾಸ್ತರ್‌ರವರೂ ನುತ್ತು ಶ್ರೀ ಕೃಷ್ಣರವರೂ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಬೇಕಾದ ಹಲವು ಉಪಯುಕ್ತ ಸೂಚನೆಗಳಿತ್ತರು. ಸಂಘಕ್ಕೆ ವಿರೋಧಮಾಡುವವರಿದ್ದರೂ ಅವನ್ನು ಪ್ರೀತಿಯಿಂದ ಒಲಿಸಿ ಸಂಘಕ್ಕೆ ತರುವಂತೆ ಮಾಡುವುದು ಸಮಾಜದ ತರುಣರ ಮುಖ್ಯ ಕರ್ತವ್ಯವೆಂದು ಶ್ರೀ ಕೃಷ್ಣರವರು ತಿಳಿಸಿ ಈ ವಿಷಯದಲ್ಲಿ ಮಹಾತ್ಮರ ಸೂಚನೆಯನ್ನು ನಾವು ಅನುಸರಿಸಬೇಕೆಂದು, ಶ್ರೀ ಬಾಬು ಮಾಸ್ತರವರು ಸಮಾಜದ ಈ ಸಂಘದ ಅಭಿಪ್ರಾಯಗಳನ್ನು ತಿಳಿದು ತಮ್ಮ ಕಾರ್ಯಭಾರ ನಡೆಸುವ ಸ್ಥಿತಿಗೆ ಸಂಘವನ್ನು ಉತ್ತಮ ಸ್ಥಿತಿಗೆ ತರುವುದು ಸಕಲರ ಕರ್ತವ್ಯವೆಂದರು. ಸಂಘದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅತ್ಯಂತ ಅಲ್ಪ ಜನಸಂಖ್ಯೆಯುಳ್ಳ ಕನ್ನಡ ಮೊಲಿ ಸಮಾಜದವರು ತಮ್ಮ ಪುರೋಭಿವೃದ್ಧಿಗೆ ಏನೆಲ್ಲಾ ಮಾಡಬೇಕು, ಸಂಘವನ್ನು ಹೇಗೆ ಬಲಗೊಳಿಸಬೇಕೆಂಬುದನ್ನು ಸೂಚಿಸಿ ಅರ್ಥಗರ್ಭಿತವಾದ ಭಾಷಣ ಮಾಡಿದರು. ಅನಂತರ ಸಭಾಧ್ಯಕ್ಷರು ಭಾಷಣಮಾಡುತ್ತಾ ಅತಿ ಸಣ್ಣ (ಸಂಖ್ಯೆಯಲ್ಲಿ) ದಾದ ಕನ್ನಡಮೊಲಿಯರು ಒಂದು ಕಾಲದಲ್ಲಿ ಅತ್ಯಂತ ಉತ್ತಮ ವರ್ಗದವರಾಗಿದ್ದರೂ ಇಂದು ವಿದ್ಯೆಯಲ್ಲಿಯೂ ಐಶ್ವರ್ಯದಲ್ಲಿಯೂ ಹಿಂದುಳಿದು, ಹಿಂದುಳಿದವರಿಗಿಂತಲೂ ಹಿಂದೆಬಿದ್ದಿದ್ದಾರೆ. ಸಣ್ಣ ಸಮಾಜವಾದ ಇದನ್ನು ಅತ್ಯಂತ ಉತ್ತಮಸ್ಥಿತಿಗೆ ತರುವುದು ಸುಲಭದ ಕಾರ್ಯವಾಗಬೇಕಿತ್ತು. ಆದರೆ ದುಡ್ಡಿನ ಅಭಾವದಿಂದಾಗಿ ಮತ್ತು ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆಯು ಕಡಿಮೆಯಾಗಿರುವುದರಿಂದಾಗಿ ಸಮಾಜವು ತಾನು ಹೊಂದಬೇಕಾದ ಸ್ಥಾನಮಾನವನ್ನು ಪಡೆದಿಲ್ಲ. ಆದ್ದರಿಂದ ಸಮಾಜದ ಹಿತೈಷಿಗಳೆಲ್ಲರೂ ಸಮಾಜದ ತರುಣರ ವಿದ್ಯೆಯ ಮೇಲ್ಮೆಯ ಕಡೆಗೆ ಗಮನಕೊಡಬೇಕು. ತಮ್ಮಲ್ಲಿರುವ ಭೇದಭಾವಗಳನ್ನು ವೃದ್ಧಿಗೊಳಿಸದೆ ಸಮಾಜದ ಏಳಿಗೆಯ ಮೇಲೆ ದೃಷ್ಟಿಯಿಟ್ಟು ದುಡಿದು ಅದರ ಉದ್ಧಾರವನ್ನಾಗಬೇಕು ಎಂದು ಹೇಳಿ ಸಮಾಜದ ತರುಣರು ನಡಿಸಿಕೊಂಡು ಬರುತ್ತಿರುವ ಹಸ್ತಲಿಖಿತ ಪತ್ರಿಕೆಯನ್ನು ಬಹಳವಾಗಿ ಪ್ರಶಂಸಿಸಿ ಅದಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿದರು.

ಅನಂತರ ಸಮಾಜದ ಮುಂದಾಳುಗಳಾದ ಶ್ರೀ. ಬಾಬುಮಾಸ್ತರವನೂ ಶ್ರೀ. ಕೃಷ್ಣರವರೂ ಅಲ್ಲದೆ ಈಗಿನ ಅಧ್ಯಕ್ಷರಾಗಿರುವ ತರುಣ ಉತ್ಸಾಹಿಗಳಾದ ಶ್ರೀ! ಯು. ರಾಮರವರು ಮತ್ತಷ್ಟು ಶ್ರಮವಹಿಸಿ ಸಂಘದ ಸದುದ್ದೇಶಕ್ಕೆ ಭಗವಂತನ ಕೃಪೆಯು ದೊರೆಯುವುದು ಖಂಡಿತವೆಂದೂ ಹೇಳಿದರು. ಅನಂತರ ಧನ್ಯವಾದ ಉಪಹಾರದೊಂದಿಗೆ ಸಭಾಂತ್ಯವಾಯಿತು.

ಶಿಕ್ಷಕರ—ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆಯು ತಾ.4-11-39 ರಲ್ಲಿ ಪ್ರಾರ್ಥನೆ, ಸರ್ಕಲಾರು ಮತ್ತು ವಂದಿಮಾಚನ 'ಕ್ರೀಡಾಶಿಕ್ಷಣ' ಎಂಬ ಹಸ್ತ ಲಿಖಿತ ಮಾಸಪತ್ರಿಕೆಯ ಉದ್ಘಾಟನೆ ನೊದಲಾದ ಕಾರ್ಯಕ್ರಮಗಳೊಂದಿಗೆ ಜರಗಿತು.

ಕಾರ್ಕಳ ಪರಸ್ಪರ ಸಹಕಾರ ಸಂಘದ ಸದಸ್ಯರ ಒಂದು ಸಭೆಯು ಡಾಕ್ಟರ ಯನ . ಯನ್. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಕೂಡಿ ಪರಿಶೋಧಿತ ಲೆಕ್ಕಪಟ್ಟಿಗಳು ಓದಿ ಮಂಜೂರಾದುವಲ್ಲದೆ ಸಾರ್ವಜನಿಕ ಉಪಕಾರ ನಿಧಿಯಿಂದ 100 ರೂಪಾಯಿಗಳನ್ನು ಚೌಪಾಟಿಯಲ್ಲಿ ನೇಸ ದೀಪ ಉರಿಸಲಿಕ್ಕೂ, 17ನ್ನು ಹರಿಜನಸೇವೆಗೂ 10ನ್ನು ಕಾರ್ಕಳದಲ್ಲಿ ಒಂದು ಕ್ರಿಕೆಟ್ ಪಂದ್ಯಾಟವನ್ನಿಟ್ಟು ಅದರಲ್ಲಿ ವಿಜಯಿಗಳಿಗೆ ಒಂದು ಬೆಳ್ಳಿಯ ಕಪ್ಪನ್ನು ಕೊಡಲಿಕ್ಕೂ ತತ್ಸಂಬಂಧ ಸಂಸ್ಥೆಗಳಿಗೆ ಕೊಡಬೇಕೆಂದೂ ನಿರ್ಣಯವಾಯಿತು.

ಕಡಂದಲೆ—ತಾ. 4-11-39ರಲ್ಲಿ ಮಧ್ಯಾಹ್ನ ಗಂಟೆ 12ಕ್ಕೆ ಕಡಂದಲೆ ಪಂಚಾಯತ್ ಬೋರ್ಡಿನವರು ಗ್ರಾಮದ ಯುವಕ ಸಂಘದವರ ಉದಾರಾಶ್ರಯದಿಂದ ದಿವಂಗತ "ಕಡಂದಲೆ ಗುತ್ತು ಶ್ರೀ. ಉಮಾಪತಿ ಬಾಯಿಯವರ" ಸ್ಮಾರಕಾರ್ಥವಾಗಿ ಧರ್ಮಾರ್ಥ ವಾಚನಾಲಯದ ಪ್ರವೇಶೋತ್ಸವ ಸಮಾರಂಭವನ್ನು ಅಸಿಸ್ಟಾಂಟ್ ಪಂಚಾಯತ್ ಆಫೀಸರರಾದ "ಶ್ರೀ. ಕೆ. ಶೀನಶೆಟ್ಟಿ, ಬಿ. ಎ.ಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿಸಿದರು. ಊರ-ಪರಊರ ಸಭ್ಯಜನರಿಂದಲೂ, ಶಾಲಾ ಬಾಲಕರಿಂದಲೂ, ಕೂಡಿ ಬೇಂಡ್ ವಾಲಗದಿಂದ ಅಧ್ಯಕ್ಷರನ್ನು ಎದುರುಗೊಂಡು ಸ್ವಾಗತೀಕರಿಸಲಾಗಿ ಅಧ್ಯಕ್ಷರು ಕಾಲೋಚಿತ ಭಾಷಣ ಮಾಡಿ ಸುಮುಹೂರ್ತದಲ್ಲಿ "ಶ್ರೀ ಉಮಾಪತಿ ವಾಚನಾಲಯದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಶಾಲಾ ಮಕ್ಕಳಿಗೂ ಸಭಿಕರಿಗೂ ಫಲಾಹಾರದ ಸತ್ಕಾರಗಳಾದುವು. ಬಳಿಕ ಉತ್ಸಾಹೀ ಪಂಚಾಯತ್ ಬೋರ್ಡ್ ಪ್ರೆಸಿಡೆಂಟ್ ಕಡಂದಲೆ ಗುತ್ತು ಶ್ರೀ. ಕೆ. ಸಂಜೀವ ಶೆಟ್ಟರು ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನು ಸಮರ್ಪಿಸಿದರು. ನಂತರ ಸಭಾಂತ್ಯವಾಯಿತು.

ಕೊಡಗು—ಕೊಡಗು ಡಿಸ್ಟ್ರಿಕ್ಟ್ ಪ್ರೆಚರ್ ಪೇಟೆಯಲ್ಲಿ ತಾ. 30-11-39ರಲ್ಲಿ ನಡೆಯುವ ಗಣಪತಿ ರಥೋತ್ಸವದ ಸಂದರ್ಭದಲ್ಲಿ ತಾ. 1-11-39ರಿಂದ ತಾ. 3-12 39ರ ವರೆಗೆ ದನಗಳ ಪ್ರದರ್ಶನವು ನಡಿಸಲ್ಪಡುವುದು

ಮೈಸೂರು

ಸ್ವಂತಬಾತ್ಮೀದಾರರಿಂದ ತಾ. 6-11-39

ಹಿಂದೆಗೆದುಕೊಳ್ಳಲಾಯಿತು—ಕೋಲಾರದ ಚಿನ್ನದ ಗಣಿ ಪ್ರಾಂತದಲ್ಲಿ ಜಾರಿಯಾಗಿದ್ದ ಮೈಸೂರು ಪೋ! ಸೆ! 39ನ್ನು (ಸತ್ಯಾಗ್ರಹಿಗಳು ಸತ್ಯಾಗ್ರಹ ನಿಲ್ಲಿಸಿರುತ್ತಾರೆಂಬುದಾಗಿ) ಸರ್ಕಾರದವರು ವಾಪಾಸು ತೆಗೆದುಕೊಂಡಿರುತ್ತಾರೆ.

ಉದಾರ ದಾನ—ಬೆಂಗಳೂರಿನಲ್ಲಿ ಕಟ್ಟಲಾಗುವ ಶ್ರೀ ರಾಮಕೃಷ್ಣಾ ಸ್ಟೂಡೆಂಟ್ಸ್ ಹೋಂ ಕಟ್ಟೋಣಕ್ಕೆ ಸರ್ಕಾರದವರು ರೂ 5000 ಉದಾರ ದಾನಮಾಡಿರುತ್ತಾರಂತೆ.

ಸಹಕಾರ ದಿನ—ಅಖಿಲ ಭಾರತ ಸಹಕಾರ ದಿನವನ್ನು ವಿದ್ಯಾ ಇಲಾಖೆಯ ನಿವೃತ್ತ ಡೈ! ಶ್ರೀ! ಕೆ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಕೋಆಪರೇಟರ್ಸ್ ಹೋಂನಲ್ಲಿ ಆಚರಿಸಲಾಯಿತಲ್ಲದೆ ಸಂಸ್ಥಾನದ ಇತರ ಭಾಗಗಳಲ್ಲೂ ಮೇಲ್ಕಂಡ ದಿನ ಆಚರಿಸಲಾಯಿತು.

ಇಂಡಿಯನ್ ಕಾಫಿ ಸೆಸ್ ಸಮಿತಿ ಸಭೆ—ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಎನ್. ಮಾಧವ ರಾವ್ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಸಮಿತಿಯ ಆರನೇ ವಾರ್ಷಿಕ ಸಭೆಯು ಪಬ್ಲಿಕ್ ಆಫೀಸು ಕಟ್ಟೋಣದಲ್ಲಿ ನಡೆದು ಕಾಫಿ ವಿಚಾರವಾಗಿ ಚರ್ಚಿಸಲಾಯಿತು.

ಕಲಾವಸ್ತು ಪ್ರದರ್ಶನ—ಮೈಸೂರು ವಿಶ್ವ ವಿದ್ಯಾನಿಲಯ ಸಂಘದಾಶ್ರಯದಲ್ಲಿ ಅಖಿಲ ಭಾರತ ವಿಶ್ವ ವಿದ್ಯಾನಿಲಯ ವಿದ್ಯಾರ್ಥಿಗಳಿಗೋಸ್ಕರ ಮುಂದಿನ ಮಾಹೆ ಒಂದು ಕಲಾವಸ್ತು ಪ್ರದರ್ಶನ ಮತ್ತು ದೇಹಸೌಂದರ್ಯ ಪ್ರದರ್ಶನ ಏರ್ಪಡಿಸಲಾಗುತ್ತೆಂದು ಇದರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಚಿಕ್ಕಮಗಳೂರು-ಕಡೂರು ರೈಲ್ವೆ—ಹಣಕಾಸಿನ ದುಸ್ಥಿತಿಯಿಂದನೇಲ್ಕಂಡರೈಲ್ವೆಯನ್ನು ಸದ್ಯಕ್ಕೆ ನಿಲ್ಲಿಸಲಾಗಿದೆಂದು ಸರ್ಕಾರದವರು ಕಡೂರು ಜಿ! ಬೋ! ಗೆ ಒಂದು ಪತ್ರ ಬರೆದಿದ್ದಾರೆಂದೂ ಗೊತ್ತಾಗಿದೆ.

ಪ್ರಚಾರೋಪನ್ಯಾಸ—ಲಾಸ್ಕಿರವ ಮಿ! ಯಲ್. ಯಂ. ಸ್ಕ್ರೀಫರವರು, ಮೈಸೂರು ವಿಶ್ವವಿದ್ಯಾನಿಲಯ ಸಂಘದಾಶ್ರಯದಲ್ಲಿ ಮೈಸೂರು ಮತ್ತು ಬೆಂಗಳೂರಲ್ಲಿ 'ಮಾನವ ಕಲಾ ಶಾಸ್ತ್ರ' ಮತ್ತು 'ಇಂಡಿಯಾ ಮತ್ತು ಮಾಡರ್ನ್ ಕಲ್ಚರ್' ಎಂಬ ವಿಷಯವಾಗಿ ಕ್ರಮಕ್ರಮವಾಗಿ ಭಾಷಣಮಾಡಿದರು.

ಕಾಂಗ್ರೆಸ್ ಸುದ್ದಿಗಳು—ಮೈಸೂರು ಕಾಂಗ್ರೆಸ್ ಚಳವಳಿ ಜೋರಾಗಿದೆ. ಆಜ್ಞೋಲ್ಲಂಘನೆಗೂ, ಪಬ್ಲಿಕ್ ಸೆಕ್ಯೂರಿಟಿ ಆಕ್ಟಿಗೂ ದಸ್ತಗಿರಿಗಳು ಮತ್ತು ಶಿಕ್ಷೆಯೂಗುತ್ತಿದೆ. ಮೈಸೂರು ಟವನ್ ಹಾಲ್ ಮೈದಾನದ ಬಳಿ ಸತ್ಯಾಗ್ರಹ ನಡಿಯುತ್ತಲೇ ಇದೆ. ಇದೇ ಮಾಹೆ ತಾ 17 ಅಥವಾ 18ರಲ್ಲಿ ಕಾಂಗ್ರೆಸ್ ಅಧ್ಯಕ್ಷರೂ ಕೆಲವು ಮುಂದಾಳುಗಳೂ ಜೈಲಿನಿಂದ ಬಿಡುಗಡೆ ಹೊಂದಿ ಹೊರಕ್ಕೆ ಬರುತ್ತಾರೆ. ಅಷ್ಟು ಹೊತ್ತಿಗೆ ಸರ್ ವಿಜಾರವರು ದೆಹಲಿಯಿಂದ ವಾಪಸು ಬರುವರು. ನಂತರ ಇವರುಗಳನ್ನು ಕರೆಸಿ ಯಾವುದು ಇತ್ಯರ್ಥ ಮಾಡಲಾಗುತ್ತೆಂದೂ ಹೇಳಲಾಗಿದೆ.

ಸ್ವದೇಶೀ ವಸ್ತು ಪ್ರದರ್ಶನ—ದೀಪಾವಳಿ ಸಲುವಾಗಿ ಬೆಂಗಳೂರು ಮಹಿಳಾ ಸೇವ ಸಮಾಜದಾಶ್ರಯದಲ್ಲಿ ಒಂದು ಸ್ವದೇಶೀ ವಸ್ತು ಪ್ರದರ್ಶನ ತೆರೆಯಲಾಗಿದೆ. ದ್ವಿತೀಯ ಸಚಿವರ ಪತ್ನಿಯವರು ಇದರ ಆರಂಭೋತ್ಸವ ನಡಿಸಿ ಭಾಷಣಮಾಡಿದರು ಅನೇಕ ಉಪಯುಕ್ತವಾದ ಸ್ವದೇಶಿ ವಸ್ತುಗಳನ್ನು ಪ್ರದರ್ಶಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ—ಮೈಸೂರು ಸರ್ಕಾರದ ಅಧಿಕಾರಿಗಳು ರೈತರ ಸಂಪದಭ್ಯುದಯಕ್ಕಾಗಿ ಹೇಗೆ ದುಡಿಯುತ್ತಿದ್ದಾರೆ, ಹೊಸ ಕೈಗಾರಿಕೆಗಳ ಸ್ಥಾಪನೆ, ಗ್ರಾಮಗಳ ಏಳಿಗೆಗೆ ಉಪಚ್ಚಿಸ್ತವಾಗಿ ದುಡಿಮೆ, ನೈಗೆಯವರಿಗೆ ಸರ್ಕಾರದ ಸಹಾಯ, ಕ್ಷೇಮಗ್ಗದ ಕೈಗಾರಿಕೆ ಅಭಿವೃದ್ಧಿಗಾಗಿ ಇಲಾಖೆಯವರು ನಡೆಸುತ್ತಿರುವ ವಿಷಯಗಳನ್ನೊಳಗೊಂಡ ಒಂದು ಲೇಖನವನ್ನು ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರವರು ಪ್ರಕಟಣೆಗಾಗಿ ಕಳುಹಿಸಿದ್ದಾರೆ. (ಸ್ಥಳ ಸಂಕೋಚದಿಂದ ಪೂರ್ತಿ ಲೇಖನ ಪ್ರಕಟಿಸಲಾಗಲಿಲ್ಲ. ಸಂ. ನ.)

ಉಡುಪಿ

ಅಭಿವಂದನೆ—ಕಳೆದ ಕ್ರಿಕೆಟ್ ಪಂದ್ಯಾಟದಲ್ಲಿ ವಿಜಯಿಗಳಾಗಲು ನೆರವಾದ ಎಲ್ಲಾ ಆಟಗಾರರಿಗೂ, ಮೆಂಬರರಿಗೂ, ಹಿತೈಷಿಗಳಿಗೂ, ಪ್ರತ್ಯಕ್ಷವಾಗಿಯಾಗಲಿ, ಅಪ್ರತ್ಯಕ್ಷವಾಗಿಯಾಗಲಿ ಸಹಾಯಮಾಡಿ ಪ್ರೋತ್ಸಾಹಿಸಿದ ಸಕಲರಿಗೂ ತಾನು ಈ ಮೂಲಕ ಧನ್ಯವಾದಗಳನ್ನು ಅರ್ಪಿಸುವೆನೆಂದೂ, ಮುಂದೆಯೂ ಇದೇ ರೀತಿಯ ಪ್ರೋತ್ಸಾಹವನ್ನು ಸರ್ವರೂ ಕೊಡಬೇಕೆಂದೂ ಉಡುಪಿ ಕ್ರಿಕೆಟ್ ಟೀಮಿನ ಉತ್ಸಾಹೀ ಕಾರ್ಯದರ್ಶಿಗಳಾದ ಶ್ರೀ. ಬಿ. ಸಬ್ಬಿದಾಸಂದ ಹೆಗ್ಡೆ, ಏಜೆಂಟ್, ವಿಜಯಾ ಬ್ಯಾಂಕ್, ಇವರು ತಿಳಿಸುತ್ತಾರೆ.

ವಿದ್ಯಾ ವಸ್ತು ಪ್ರದರ್ಶನ—ಕಂಬ್ಳಾಟೀಚರ್ಸ್ ಗಿಲ್ಡಿನ ವತಿಯಿಂದ ವಿದ್ಯಾ ವಸ್ತುಪ್ರದರ್ಶನವೊಂದನ್ನು ಪರ್ಯಾಯದ ವೇಳೆ (ಜನವರಿ) ಜರಗಿಸುವ ವ್ಯವಸ್ಥೆ ಮಾಡಲಾಗಿದೆ. ಈ ಪ್ರದರ್ಶನಕ್ಕೆ ಮೈಸೂರು ಸಬ್ಬಿನ ದ ಸರಕಾರದ ಸಾಮಾನುಗಳೂ, ಕಾಗದಗಳೂ ಪ್ರದರ್ಶನಕ್ಕೆ ಬರುವವೆಂದು ತಿಳಿದು ಬರುತ್ತದೆ.

ಶ್ರೀಶೀರೂರು ಸ್ವಾಮಿಯರಿಗೆ ಔತಣ—ಸ್ಥಳೀಯ ಸಂಸ್ಕೃತ ಕಾಲೇಜಿನ ಗೌರವ ಲೆಕ್ಚರರಾದ ಶ್ರೀಶೀರೂರು ಮಠದ ಶ್ರೀ. ಲಕ್ಷ್ಮೀಂದ್ರತೀರ್ಥ ಸ್ವಾಮಿಗಳಿಗೆ ಸದರಿ ಕಾಲೇಜಿನ ಆಡಳಿತ ಕಮಿಟಿ ಪ್ರೆಸಿಡೆಂಟರೂ ಪ್ರಸಿದ್ಧ ವಕೀಲರ ಲ್ಲೊಬ್ಬರೂ ಆದ ಶ್ರೀ. ಕಿದಿಯೂರು ಲಕ್ಷ್ಮೀನಾರಾಯಣ ರಾಯರು ತನ್ನ ಮೃತ ತಾಯಿಯ ಉತ್ತರಕ್ರಿಯೆಯ ಕೊನೆಯ ದಿನ ತಾ. 1ನೇ ನವಂಬರ ತಿಂಗಳಲ್ಲಿ ಔತಣ ಸತ್ಕಾರವಿತ್ತು ಗೌರವಿಸಿದರು. ಈ ನಿಮಿತ್ತ ಸಾವಿರಗಟ್ಟಲೆ ಜನರಿಗೆ ಪಂಕ್ತಿಪರಿಭೇದವಿಲ್ಲದೆ ಭೋಜನ ಸಮಾರಂಭವಿತ್ತು.

ಲಕ್ಷದೀಪೋತ್ಸವ—ತಾ. 23-11-39 ರಿಂದ ನಾಲ್ಕು ದಿನ ರಾತ್ರಿ ವಿಜೃಂಭಣೆಯಿಂದ ಜರಗಲಿದೆ. ಈಗಲೇ ತಕ್ಕ ವ್ಯವಸ್ಥೆಗೆ ಪ್ರಾರಂಭವಾಗಿದೆ. ಈ ಉತ್ಸವವು ನವೀನ ರೀತಿಯಿಂದ ಚಿತ್ತಾಕರ್ಷಕವಾಗಿ ಧಾರ್ಮಿಕ ಮತ್ತು ಲೌಕಿಕರಿಗೆ ಮನಸ್ಸಂತೃಪ್ತಿಯ ರೀತಿಯಲ್ಲಿ ಆಚರಿಸಲ್ಪಡಲಿರುವುದು. ಇದಕ್ಕೆ ಊರು ಪರವೂರುಗಳಿಂದ ಯಥೇಷ್ಟ ಯಾತ್ರಿಕರು ಬರುವರೆಂದು ನಿರೀಕ್ಷಿಸಲಾಗಿದೆ. ಪರವೂರವರಿಗೆ ಉಳಕೊಳ್ಳಲಿಕ್ಕೆ ಸ್ಥಳದ ಅನುಕೂಲತೆಯನ್ನು ಪರ್ಯಾಯ ಮಠದ ಕಡೆಯಿಂದ ಒದಗಿಸುವ ವ್ಯವಸ್ಥೆ ನಡೆದಿದೆ.

ಸಹಕಾರಿ ತರಬೇತು ಕ್ಲಾಸುಗಳು—ಸಹಕಾರ ಸಂಘಗಳ ಮೆಂಬರರಿಗೆ ಟ್ರೈನಿಂಗ್ ಕ್ಲಾಸುಗಳು ಪಕ್ಕಳ, ಕಮ್ಮಣ್ಣು, ಬೈರಂಪಳ್ಳಿ ಕೇಂದ್ರಗಳಲ್ಲಿ ಜರಗಿದವು. ಶ್ರೀಗಳಾದ ರಾಮಯ್ಯ ಪಿಳ್ಳೆ, ಕೋಟೇಶ್ವರ್ ಸುಬ್ಬಣ್ಣಯ್ಯ, ಸುಪರ್‌ವೈಜರ್ ಮಾಧವಯ್ಯ ಇವರು ಸಹಕಾರ ತತ್ವಗಳ ಕುರಿತು ಉಪನ್ಯಾಸಗಳನ್ನಿತ್ತರು. ಪಕ್ಕಳಕ್ಕೆ ಶ್ರೀ. ಕೆ.ಜಿ. ಬಲ್ಲಾಳರೂ, ಶ್ರೀ. ಕೆ. ಆರ್. ಶೆಣೈಯವರೂ ಬಂದು ಉಪನ್ಯಾಸವಿತ್ತರು.

ಎಕ್ಸೈಜ್ ಎಡ್ವೈಸರಿ ಕಮಿಟಿ ಸಭೆ—ಯೊಂದು ತಾ 7-11 39ರಲ್ಲಿ ಕುಂದಾಪುರ ಡಿವಿಜನಲ್ ಕಲೆಕ್ಟರ ಅಧ್ಯಕ್ಷತೆಯಲ್ಲಿ ತಾಲೂಕು ಆಫೀಸಿನಲ್ಲಿ ಜರಗಿತು. ಜಿಲ್ಲಾ ಬೋರ್ಡ್ ಪ್ರತಿನಿಧಿಗಳಾದ ಶ್ರೀ.ಬಿ.ಸುಬ್ಬಣ್ಣ ಶೆಟ್ಟರು(1) ತಿಂಗಳಿಗೆ ರೂ. 1ಕ್ಕಿಂತ ಕಡಿಮೆ ಉತ್ಪತ್ತಿಯಿರುವ ಸರಾಯಿ ಗಾಂಜಾ, ಅಫೀಮು ಅಂಗಡಿಗಳನ್ನು ಮುಚ್ಚಬೇಕೆಂದೂ,(2) ಕುಂದಾಪುರ, ಕಾರ್ಕಳ ಉಡುಪಿ ತಾಲೂಕುಗಳ [[ಕ್ಲಾಸ್ ರಸ್ತೆಯ ಬದಿಯಲ್ಲಿರುವ ಸರಾಯಿ ಗಾಂಜಾ ಅಫೀಮು ಅಂಗಡಿಗಳನ್ನು ರಸ್ತೆಯಿಂದ ಕನಿಷ್ಠ 2 ಪರ್ಲಾಂಗ್ ದೂರದಲ್ಲಿರಿಸಬೇಕೆಂದೂ, 21ದಿವಸಗಳೊಳಗೆ ಬೈಂದೂರು ಕುಂದಾಪುರ ಟೌನ್, ಗಂಗೊಳ್ಳಿ, ಈ 3 ಸ್ಥಳಗಳಲ್ಲಿರುವ ಮೇಲಿನ ಅಂಗಡಿಗಳನ್ನು ಇತರ ಕಡೆಗಳಲ್ಲಿ ಹಾಕಿಸಬೇಕೆಂದೂ ಠರಾವುಗಳನ್ನು ತಂದರು, ಅವು ಸರ್ವಾನುಮತದಿಂದ ಪಾಸಾದವು

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜೈನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ಯಾನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮ್ಮೈಕಕಲಾ ಪ್ರೆಸ್,

ಆರ್ಟ್ ಪ್ರಿಂಟರ್ಸ್ ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

ಕಾಂಗ್ರೆಸು ಮುಂದೇನು ಮಾಡುವುದು?

ಈಗಲೇ ಹೋರಾಟವನ್ನಾರಂಭಿಸಲು ದೇಶವು ಸಿದ್ಧವಿದೆಯೇ?

ಪ್ರತಿ ಪ್ರಾಂತದ ಕಾಂಗ್ರೆಸ್ ಮಂತ್ರಿಗಳೀಗ ರಾಜಿನಾಮೆ ಕೊಟ್ಟು ದೇಶದಲ್ಲೆಲ್ಲಾ ಕಳವಳವುಂಟಾಗಿದೆ. ಕಾಂಗ್ರೆಸು ಮುಂದೇನು ಮಾಡುವುದೆಂಬ ಪ್ರಶ್ನೆಯು ಎಲ್ಲೆಲ್ಲಿಂದಲೂ ಕೇಳಬರುತ್ತದೆ. ರಾಜಿಯು ಅಸಾಧ್ಯವಾದರೆ ಹೋರಾಟ ನಿಶ್ಚಯವೆಂಬ ಅಭಿಪ್ರಾಯವು ಬಲಗೊಳ್ಳುತ್ತಿದೆ. ಪ್ರಕೃತದ ಪರಿಸ್ಥಿತಿಯಲ್ಲಿ ನಾಯಕತ್ವವು ಮಹಾತ್ಮಾ ಗಾಂಧಿ ಮತ್ತು ಪಂಡಿತ ಜವಾಹರಲಾಲರಿಂದ ಬರಬೇಕು. ಪಂಡಿತರು, ದೇಶವು ಹೋರಾಟಕ್ಕೆ ಸಿದ್ಧವಾಗಬೇಕೆಂಬ ಕರೆಯನ್ನಿತ್ತಿದ್ದಾರೆ. ಸಂಯುಕ್ತ ಪ್ರಾಂತವನ್ನವರು ಅದಕ್ಕಾಗಿ ಸಿದ್ಧಗೊಳಿಸುತ್ತಿದ್ದಾರೆ. ವಾಯುವ್ಯ ಗಡಿನಾಡು ಕೂಡಾ ಇಷ್ಟರಲ್ಲೇ, ಖಾನ್ ಅಬ್ದುಲ್ ಗಾಫರ್ ಖಾನರ ನಾಯಕತ್ವದಲ್ಲಿ ಸಮರಕೂಟವೊಂದನ್ನು ಸ್ಥಾಪಿಸಿ ಕಟಿಬದ್ಧವಾಗಿದೆ. ಇತರ ಪ್ರಾಂತಗಳಲ್ಲೆಲ್ಲಾ ಅಂತಹ ಸಿದ್ಧತೆಯೇನೂ ನಡೆದಿರುವಂತೆ ತೋರುವುದಿಲ್ಲ. ಕರ್ನಾಟಕವಂತೂ ಬಹಳ ಹಿಂದುಳಿದಿದೆ.

‘ಮುಂದಿನ ಹೆಜ್ಜೆ’ ಎಂಬ ಶಿರೋನಾಮೆಯಿಂದ ಗಾಂಧಿಜಿಯವರು ಹರಿಜನದಲ್ಲಿ ಬರೆದಿರುವ ಲೇಖನವು ಅವರ ಮನೋಭಾವನೆಗಳನ್ನು ಸ್ಪಷ್ಟಪಡಿಸುವುದು. ದೇಶದ ನಾಡಿಯನ್ನು ಹಿಡಿದವರು ಪರೀಕ್ಷಿಸಿರುವಂತಿದೆ. “ಎಂದಿಗಿಂತಲೂ ಹಿರಿದಾದ ಜವಾಬ್ದಾರಿಯ ಭಾರವೀಗ ನನ್ನ ಮೇಲೆ ಬಿದ್ದಿದೆ. ಕಾಂಗ್ರೆಸ್ ಮಂತ್ರಿಗಳ ರಾಜಿನಾಮೆಯು ಅದೊಂದು ಅವಶ್ಯಕತೆಯಾಗಿದ್ದಿತು. ಆದರೆ ಮುಂದೇನು ಮಾಡಬೇಕೆಂಬುದು ಸ್ಪಷ್ಟವಾಗಿರುವುದಿಲ್ಲ. ಪ್ರಚಂಡ ಚಳವಳವೊಂದು ಆರಂಭಿಸಲ್ಪಡುವುದೆಂದು ಕಾಂಗ್ರೆಸ್‌ವಾದಿಗಳು ನಿರೀಕ್ಷಿಸುತ್ತಿದ್ದಾರೆ. ನಾನು ಕರೆಯನ್ನಿತ್ತುದೇಯಾದರೆ ಇಡೀ ಹಿಂದೂ ದೇಶವು ಅಭೂತಪೂರ್ವ ಉತ್ಸಾಹದಿಂದ ಎದ್ದು ನಿಲ್ಲುವುದು. ಜನರು ಅಹಿಂಸಾನಿಷ್ಠರಾಗಿ ನಡೆಯುವರೆಂದು ಕೆಲವರು ನನಗೆ ಆಶ್ವಾಸನೆ ಕೊಡುತ್ತಾರೆ. ಈ ಆಶ್ವಾಸನೆಯ ಹೊರತು ಅವರ ಹೇಳಿಕೆಗೆ ಬೇರೆ ಯಾವ ಆಧಾರವನ್ನೂ ದೇಶದಲ್ಲಿ ನಾನು ಕಾಣುವುದಿಲ್ಲ. ಅದಕ್ಕೆ ವಿರೋಧವಾದ ರುಜುವಾತುಗಳೇ ನನ್ನಲ್ಲಿವೆ. ಕಾಂಗ್ರೆಸ್ ವಾದಿಗಳು ತ್ರಿಕರಣಶುದ್ಧವಾಗಿ ಅಹಿಂಸೆಯಲ್ಲಿ

ದೇಶದ ನಾಡಿಯು ಗಾಂಧಿಜಿಯವರ ಕೈಯಲ್ಲಿದೆ.

ಕಾಂಗ್ರೆಸ್‌ವಾದಿಗಳಿಗೆ ಮಹಾತ್ಮರ ಸಲಹೆ.

ವಿಶ್ವಾಸವುಳ್ಳವರಾಗಿ, ಆಗಾಗ ಕೊಡಲ್ಪಡುವ ಸಲಹೆಗಳಂತೆ ನಡೆಯಲು ಸಿದ್ಧರಿರುವರೆಂದು ನನಗೆ ದೃಢವಾಗುವ ವರೆಗೆ ನಾನು ಯಾವ ಕಾಯಿದೆಭಂಗ ಚಳವಳದಲ್ಲಿಯೂ ಸೇರಲಾರೆನು.

ಕಾಂಗ್ರೆಸ್ ವಾದಿಗಳು ಅಹಿಂಸಾನಿಷ್ಠರಾಗಿ ನಡೆಯುವರೋ ಇಲ್ಲವೋ ಎಂಬ ಸಂದೇಹದ ಹೊರತು, ಕಾಂಗ್ರೆಸು ಮುಸಲ್ಮಾನರ ವೈರಿಯೆಂಬ ಮುಸ್ಲಿಮ್ ಲೀಗಿನ ಘೋಷಣೆಯು ಅತಿದೊಡ್ಡ ಪ್ರತಿಬಂಧಕವಾಗಿದೆ. ಇದರಿಂದಾಗಿ ಕಾಯಿದೆಭಂಗದ ಮೂಲಕ ಕಾಂಗ್ರೆಸು ಜಯಶೀಲವಾಗಿ ಅಹಿಂಸಾತ್ಮಕ ಕ್ರಾಂತಿಯನ್ನುಂಟುಮಾಡುವುದು ಬಹುಮಟ್ಟಿಗೆ ಅಸಾಧ್ಯವೆಂಬಂತಾಗಿದೆ. ಅದರಿಂದ ನಿಶ್ಚಯವಾಗಿಯೂ ಹಿಂದೂಮುಸಲ್ಮಾನ ಗಲಭೆಯೇಳದಿರಲಾರದು. ಆದುದರಿಂದ ರಾಷ್ಟ್ರೀಯ ಗೌರವವನ್ನು ಕಾಪಾಡಲು ಅತ್ಯಂತ ಮಿತ ಹಾಗೂ ಶಾಂತವಾದ ಕಾಯಿದೆಭಂಗವನ್ನು ಕಾಂಗ್ರೆಸು ಆರಂಭಿಸಬೇಕಾಗುವುದು. ಕಾಂಗ್ರೆಸ್ಸನ್ನು ಬ್ರಿಟಿಷ್ ಸರಕಾರವು ಕೆಣಕಿ ಮೇಲಿಗೆ ಬೀಳಬೇಕು. ಪ್ರಕೃತದ ಉಭಯ ಸಂಕಟದ ಪರಿಸ್ಥಿತಿಯಲ್ಲಿ ವೈಯಕ್ತಿಕವಾಗಿ ಕಾಂಗ್ರೆಸ್ ವಾದಿಗಳಾಗಲಿ, ಕಾಂಗ್ರೆಸ್ ಕಮಿಟಿಗಳಾಗಲಿ ಮನಬಂದಂತೆ ನಡೆಯುವಂತಾಗಬಾರದು. ಕಾಯಿದೆಭಂಗ ಚಳವಳವನ್ನಾರಂಭಿಸಿ ಅದನ್ನು ನಡಿಸುವ ಸರ್ವ ಜವಾಬ್ದಾರಿಯೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯದಾಗಬೇಕು. ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಸಲಹೆಕೊಟ್ಟು ನಡಿಸುವ ಜವಾಬ್ದಾರಿಯನ್ನು ನಾನು ವಹಿಸಿರುವೆನು. ಆದರೆ ನನ್ನ ಸಂಕೋಚಗಳು ನನ್ನನ್ನೇ ದಿಗಿಲುಗೊಳಿಸುತ್ತವೆ. ನನ್ನ ಈಗಣ ಶಾರೀರಿಕ ಪರಿಸ್ಥಿತಿಯಿಂದಾಗಿ ಮೊದಲಿನಂತೆ ದೇಶದಲ್ಲೆಲ್ಲಾ ನನಗೆ ತಿರುಗಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಜನತೆಯಿಂದ ನಾನು ದೂರವಾಗಿದ್ದೇನೆ. ಈಗಣ ಪ್ರಾಮುಖ್ಯ ಕಾಂಗ್ರೆಸ್ ಕೆಲಸಗಾರರ ಪರಿಚಯವೂ ನನಗಿಲ್ಲ. ನಾನೆಂದೂ ಅವರನ್ನು ಕಂಡು ಮಾತಾಡಿರುವುದಿಲ್ಲ. ನನ್ನ ಪತ್ರವ್ಯವಹಾರವನ್ನು ಸಾಧ್ಯವಾದಷ್ಟು ಮಿತಿಯಲ್ಲಿಟ್ಟುಕೊಳ್ಳಬೇಕಾಗಿದೆ. ಆದುದರಿಂದ ಆರಂಭದಲ್ಲಿ ಈಗ ಯಾವ ಚಳವಳವನ್ನೂ ಹೂಡದ ತಟಸ್ಥವಾಗಿರುವ ಆವಶ್ಯಕತೆ ಮತ್ತು ಕರ್ತವ್ಯವನ್ನು ಕಾಂಗ್ರೆಸ್ ವಾದಿಗಳು ತಾವಾಗಿಯೇ ಸ್ವಯಂ ಪ್ರೇರಣೆಯಿಂದ ಮನಗಂಡುಕೊಳ್ಳದಿದ್ದ ಪಕ್ಷದಲ್ಲಿ ನನ್ನ ಸಲಹೆಯು ಅಪ್ರಯೋಜಕ ಮಾತ್ರವಲ್ಲದೆ ಹಾನಿಕರವಾಗುವುದು. ಅದು ಗೊಂದಲವನ್ನುಂಟುಮಾಡುವುದು.

ಅದು ಹೇಗೂ ಇರಲಿ ನಾನು ಕಾಯಿದೆಭಂಗವನ್ನಾರಂಭಿಸಲು ಅವಸರವೇನೂ ಪಡುವುದಿಲ್ಲ. ಎಲ್ಲಾ ತರದ ದುರ್ಬಲತೆಯಿಂದ ಕಾಂಗ್ರೆಸನ್ನು ವಿಮುಕ್ತಿಗೊಳಿಸಿ ಸಂಘಟಿಸಿ ಬಲಪಡಿಸುವುದು ಕಾಂಗ್ರೆಸ್ ವಾದಿಗಳು ತತ್ಕಾಲಕ್ಕೆ ಮಾಡತಕ್ಕ ಕೆಲಸವೆಂದು ನನ್ನ ಸೂಚನೆ. ಕ...ಯ ವಿಧಾಯಕ ಕಾರ್ಯಕ್ರಮವಾದ ಜಾತೀಯ ಐಕ್ಯ, ಅಸ್ಪೃಶ್ಯತಾ ನಿವಾರಣ ಮತ್ತು ಚರಕಕ್ಕೇನೇ ಈಗಲೂ ನಾನು ಕಟ್ಟಿಬಿದ್ದಿರುತ್ತೇನೆ. ಮೊದಲಿನ ಎರಡು ವಿನಹ ಅಹಿಂಸೆಯು ಅಸಾಧ್ಯವಿದೆ. ಹಿಂದೂ ಹಳ್ಳಿಗಳು ಜೀವಿಸಿ ಅಭಿವೃದ್ಧಿಹೊಂದಬೇಕಾದರೆ ಚರಕವು ಸಾರ್ವತ್ರಿಕವಾಗಬೇಕು. ಚರಕದ ವಿನಹ ಹಳ್ಳಿ ನಾಗರಿಕತೆಯೆ ಅಸಾಧ್ಯ. ಹಳ್ಳಿಕೈಗಾರಿಕೆಗಳ ಪುನರುಜ್ಜೀವನದ ಸಂಕೇತವೇ ಚರಕ. ಅಹಿಂಸೆಯ ಪ್ರತ್ಯಕ್ಷವಾದ ಸಂಕೇತವೂ ಕೂಡಾ ಅದೇ ಇರುತ್ತದೆ. ಕಾಂಗ್ರೆಸ್‌ವಾದಿಗಳು ಈಗ ಚರಕಕ್ಕೇನೇ ತಮ್ಮ ಸಂಪೂರ್ಣ ಸಮಯವನ್ನು ಉಪಯೋಗಿಸಬಹುದು. ಆದರೆ ಅವರಿಗೆ ಅಭಿಮಾನ ಹುಟ್ಟದಿದ್ದರೆ, ಒದೋ ಅವರಲ್ಲಿ ಅಹಿಂಸೆಯಿಲ್ಲ, ಅಥವ ನನಗೆ ಅಹಿಂಸೆಯ ಶ್ರೀಗಣೇಶವೂ ತಿಳಿದಿಲ್ಲ. ಚರಕದ ಕಡೆಗಿನ ಪ್ರೇಮವು ನನ್ನಲ್ಲಿರುವುದು ದುರ್ಬಲತೆಯಾದರೆ, ಅದು ನನ್ನನ್ನ ನಾಯಕತನಕ್ಕೆ ಅನರ್ಹನನ್ನಾಗಿ ಮಾಡುವಷ್ಟು ತೀವ್ರವಾಗಿ ನನಗೆ ಅಂಟಿಕೊಂಡಿದೆ. ನನ್ನ ಸ್ವರಾಜ್ಯ ಸ್ಕೀಮಿನಲ್ಲಿ, ಮಾನ್ವದೆ ಜೀವನದೊಂದಿಗೇನೇ ಚರಕವು ಹೊಂದಿಕೊಂಡಿರುತ್ತದೆ. ಸ್ವರಾಜ್ಯದ ಕೊನೆಯು ಮತ್ತು ನಿರ್ಧಾರಕವಾದ ಹೋರಾಟವಾಗಲಿರುವ ಸಂದರ್ಭದಲ್ಲೀಗ ನನ್ನ ಯೋಗ್ಯತಾಪತ್ರವನ್ನು ಇಡೀ ದೇಶವು ಅರಿತುಕೊಳ್ಳತಕ್ಕದ್ದು” ಎಂದು ಮಹಾತ್ಮರು ರಾಷ್ಟ್ರದ ಮುಂದೆ ತನ್ನ ಹೃದಯವನ್ನು ತೆರೆದಿಟ್ಟಿರುವರು. ದೇಶದ ಪರಿಸ್ಥಿತಿಯ ಅವರ ವಿಮರ್ಶೆ ಮತ್ತು ನಿರ್ಧಾರವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ಪಂಡಿತ ಜವಾಹರಲಾಲರ ಉಜ್ವಲ ವ್ಯಕ್ತಿತ್ವವು ಕಡೆಗೆ ಅವರ ಮೇಲೆ ಯಾವ ಪರಿಣಾಮವನ್ನುಂಟುಮಾಡುವುದೆಂದು ಹೇಳಬರುವುದಿಲ್ಲ.

ಕೋಪ್ರಾನದ ಬಿಳೀ ಟೂಥಪೇಸ್ಟು ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡುವದು



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು.— ಕೋಪ್ರಾನ್ ಕೆಮಿಕಲ್ ಕಂ (ಮಾಲಕರು —ಮಗನಭಾಯಿ ಆಮಿನ್ ಅಂಡ್ ಕಂಪೆನಿ ಮುಂಬಯಿ)

ಕೋಪರನ್ ಲಾರ್ಜ್ ಸೈಜು 0 13 0, ಕೋಪರನ್ ಸ್ಟ್ಯಾಂಡರ್ಡ್ ಸೈಜು 0 8 0, ಟೆಂಡರ್‌ಗಮ್ ಸ್ಟ್ಯಾಂಡರ್ಡ್ ಸೈಜು 0 8 0

WHAT MAKES A MAN RICH?

Luck? - - Very rarely.
Inheritance? - Not often.
Speculation? Once in a blue moon
Gambling? - - Never.
Hard Work? - Very Often.
Hard work and Thrift - Always.

RESOURCES OF A CRORE

ESTD 1906
CANARA BANK LIMITED

Hark:-

Only a few pages more are available

FOR

ADVERTISEMENT

IN

THULUNAD

TILAKA PANCHANGA

1940

Apply early to: MANAGER
THULUNAD PRESS, UDIPI.
(PROPS.-GENERAL SUPPLIES, LIMITED.)

(೫ನೇ ಪುಟದಿಂದ ಮುಂದುವರಿದುದು)

ದೊಡ್ಡ ಯುದ್ಧ ಮಾಡಲು ಅವಕ್ಕೆ ಮನಸ್ಸಿಲ್ಲವೋ ಎಂಬ ಸಂದೇಹವು ಸ್ಪಷ್ಟವಾಗಿದೆ. ಇನ್ನೂ ಬ್ರಿಟಿಷ್ ಸೇನೆಯು ಪಶ್ಚಿಮ ರಣರಂಗಕ್ಕೆ ಹೋಗುತ್ತಿರುವುದೇ ಹೊರತು ಹೋರಾಟ ಮಾಡಿದ್ದೇನೂ ತೋರುವುದಿಲ್ಲ ಜರ್ಮನಿಯ ಮೇಲೆ ಸಾಂಪತ್ತಿಕ ಮುತ್ತಿಗೆ ಹಾಕಿ, ಕಚ್ಚಾ ಮಾಲು, ಆಹಾರ ಸಾಮಗ್ರಿ ಮತ್ತು ಪೆಟ್ರೋಲ್ ಮೊದಲಾದ ಯುದ್ಧಕ್ಕೆ ಅತ್ಯಾವಶ್ಯಕವಾದ ವಸ್ತುಗಳು ದೊರೆಯದಂತೆ ಮಾಡಿ ಅದನ್ನು ಸೋಲಿಸಬೇಕೆಂದೇ ಮಿತ್ರರಾಷ್ಟ್ರಗಳ ಪ್ರಮುಖ್ಯ ಉದ್ದೇಶವಿರುವಂತಿದೆ. ಜರ್ಮನಿಯು ಪ್ರಥಮವಾಗಿ ಯುದ್ಧವಾರಂಭಿಸಿ ಪ್ರಬಲ ವಿಮಾನ ಧಾಳಿ ನಡಿಸಲಾರಂಭಿಸದೆ ಮಿತ್ರರಾಷ್ಟ್ರಗಳು ಅದರ ಮೇಲೆ ಬೀಳುವ ಸಂಭವ ತೋರುವುದಿಲ್ಲ. ಪೋಲೆಂಡು ಹೋದುದು ಮತ್ತು ವಾರ್ಸೋ ಮೊದಲಾದ ಪಟ್ಟಣಗಳಲ್ಲಿ ಜರ್ಮನರು ನಡಿಸಿರುವ ಪೈಶಾಚಿಕ ಅತ್ಯಾಚಾರಗಳು ಸಾಕಾಗಿರುವುದಿಲ್ಲ ಇಂಗ್ಲೆಂಡ್ ಮತ್ತು ಫ್ರಾನ್ಸುಗಳಿಗೆ ಜರ್ಮನಿಯ ಮೇಲೇರಿ ಹೋಗಿ ಅದರ ಪ್ರಾಮುಖ್ಯ ಪಟ್ಟಣಗಳ ಮೇಲೆ ಪ್ರಚಂಡ ವಿಮಾನ ಧಾಳಿ ನಡೆಸುವುದಕ್ಕೆ!

ತಮಾಷೆಯ ಯುದ್ಧ

ಪೋಲೆಂಡನ್ನು ಆಕ್ರಮಿಸುವುದರಲ್ಲಿ ರಶ್ಯವು ಜರ್ಮನಿಯಷ್ಟೇ ಅನ್ಯಾಯಮಾಡಿರುವುದಾದರೂ ರಶ್ಯದ ಮೇಲೆ ಯುದ್ಧ ಹೊಡಲ್ಪಟ್ಟಿರುವುದಿಲ್ಲ ಬದಲಿಗೆ ಹಿಟ್ಲರರ ಆಕಾಂಕ್ಷೆಯನ್ನು ತಡೆಗಟ್ಟಿದುದಕ್ಕಾಗಿ ಸ್ಟೆಲಿನರ ಬೆನ್ನು ತಟ್ಟಿದವರಿದ್ದಾರೆ ಅನೇಕ ಮಂದಿ ಆಂಗ್ಲೇಯರು ಮತ್ತು ಫ್ರೆಂಚರು. ಆದರೆ ರಶ್ಯವು ಹೆಚ್ಚೆಚ್ಚಾಗಿ ಜರ್ಮನಿಯ ಕಡೆಗೆ ಒಲಿದು ಮಿತ್ರರಾಷ್ಟ್ರಗಳಿಂದ ದೂರವಾಗುತ್ತಿದೆ ರಶ್ಯಾ ಜರ್ಮನಿಗಳೊಂದುಗೂಡಿ, ಮಧ್ಯ, ಪೂರ್ವ ಮತ್ತು ಈಶಾನ್ಯ ಯುರೋಪಿನಿಂದ ಇಂಗ್ಲೆಂಡು ಫ್ರಾನ್ಸುಗಳ ಕೈವಾಡವೇ ನಡೆಯುವಂತ ಹೊಸ ವ್ಯವಸ್ಥೆಯೊಂದನ್ನು ಮಾಡಹೊರಟಿವೆ! ಜರ್ಮನಿಯು ದೀರ್ಘ ಕಾಲದವರಗೆ ಸುಮ್ಮಗೆ ಕೂತುಬಿಟ್ಟರೆ ಮಿತ್ರ ರಾಷ್ಟ್ರಗಳೇನು ಮಾಡುವವೋ? ತಮಗೆ ಎಷ್ಟು ಸಮಯ ಬೇಕಾಗರೂ ಕಾಯಲು ಸಾಧ್ಯವಿದೆ ಜರ್ಮನಿಗದು ಸಾಧ್ಯವಿಲ್ಲ. ರಶ್ಯದಿಂದ ಅದಕ್ಕೆ ಯುದ್ಧಕ್ಕೆ ಆವಶ್ಯವಾಗಿ ಬೇಕಾದ ಸಾಮಾಗ್ರಿಗಳು ಸಾಕಷ್ಟು ದೊರೆಯುವಹಾಗಿಲ್ಲೆಂದು ಆಂಗ್ಲೋ, ಫ್ರೆಂಚರ ಅಂಬೋಣ. ಆದರೆ ಜರ್ಮನಿ ರಶ್ಯಗಳೊಂದುಗೂಡಿ ನಡೆದು ದೀರ್ಘಕಾಲದವರೆಗೆ ದೊಡ್ಡ ಯುದ್ಧವೇ ನಡೆಯದಿದ್ದಲ್ಲಿ ಜರ್ಮನ್ ತಜ್ಞರ ಮತ್ತು ಇಂಜಿನೀಯರರ ಸಹಾಯದಿಂದ ರಶ್ಯವು ತನ್ನ ಸಂಪತ್ತನ್ನು ಮತ್ತಷ್ಟು ಹೆಚ್ಚಿಸುವ ಸಂಭವ ತೋರುತ್ತದೆ ಅದು ಹೊರಗಿನಿಂದ ಸಾಮಾನುಗಳನ್ನು ಜರ್ಮನಿಗೆ ತರಿಸಿಕೊಡಬಹುದಾಗಿದೆ ಆದುದರಿಂದ ಜರ್ಮನಿಯು ಸಾಂಪತ್ತಿಕ ಪರಿಸ್ಥಿತಿಯು ಶೀಘ್ರವಾಗಿ ಕೆಟ್ಟು ಅಸಹನೀಯವಾಗುವ ಹಾಗೇನೂ ಇಲ್ಲ ಜನರು ಹಿಟ್ಲರರ ವಿರೋಧವಾಗಿ ಪಂಗೆ ಏಳುವಹಾಗಿಲ್ಲ ಯುದ್ಧ! ಯುದ್ಧ! ವೆಂದು ದಿಗಿಲೆಬ್ಬಿಸಿ ಪ್ರಜೆಗಳ ರಾಜಕೀಯ ಮತ್ತು ನಾಗರಿಕ ಸ್ವಾತಂತ್ರ್ಯವನ್ನೆಲ್ಲಾ ಕಸಕೊಂಡು, ಒಂದರ ಹಿಂದೊಂದು ಹಲವು ಓರ್ಡಿನೆನ್ಸುಗಳನ್ನು ಜ್ಯಾರಿಗೆ ತಂದು, ಬ್ಲೇಕ್ ಔಟು, ಮುಖ ಕವಚ ತಯಾರಿ, ಮಿಲ್ಯಾಂತರ ಹೊಯಿಗೆ ಗೋಣಿ ಸಂಗ್ರಹ, ಹಳ್ಳಿ ಪಳ್ಳಿಗಳಲ್ಲಿಯೂ ಬಂದೋಬಸ್ತು, ಜನ ಮತ್ತು ಧನ ಸಂಗ್ರಹ ಮಾಡಿದ್ದೇ ಬಂತು ಈಗ ಯುದ್ಧವೂ ಇಲ್ಲ, ಏನೂ ಇಲ್ಲ. ಅಂದಮೇಲೆ ಇದೊಂದು ವಿಜಾತೀಯ ಹಾಗೂ ಅತಿ ತಮಾಷೆಯ ಯುದ್ಧವಲ್ಲದೆ ಮತ್ತೇನು?

ನೋಟೀಸು

ಮಹತೋಭಾರ ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನದ 1939—40ನೇ ಸಾಲಿನ ಹುಂಡಿ ಚಿನ್ನ ಬೆಳ್ಳಿ ಮಾರಾಟದ ಹಕ್ಕನ್ನು ಇದೇ ಬರುವ ತಾ. 20—11—39ನೇ ಸೋಮವಾರ ಅಪರಾಹ್ನ ಘಂಟೆ 4ಕ್ಕೆ ದೇವಳದ ಆಫೀಸಿನಲ್ಲಿ ವಾರುಕರೆಯಲಾಗುವುದು ಏಲಮಿನಲ್ಲಿ ನಿಶ್ಚಿತ ಮೂರು ವಾರು ಖಾಯಂ ಹೊಂದಿದ ಮನುಷ್ಯನು ಎಷ್ಟು ಹಣಕ್ಕೆ ಏರಿಸಿ ಮೂರುವಾರು ಖಾಯಂ ಮಾಡಲ್ಪಡುವುದೋ ಆ ಹಣವನ್ನು ಕೂಡಲೇ ದೇವಳದ ಆಫೀಸಿಗೆ ವಸೂಲು ಕೊಟ್ಟು ರಶೀದಿ ಪಡೆಯದ ವಿನಃ ಏಲಂ ಮಂಜೂರು ಮಾಡಲ್ಪಡುವುದಿಲ್ಲ. ಬಾಕಿ ಶರ್ತುಗಳನ್ನು ದೇವಳದ ಆಫೀಸಿನಲ್ಲಿ ಏಲಮಿನ ತಾರೀಕಿನ ಮುಂದಾಗಿ ಬಂದು ತಿಳಿದುಕೊಳ್ಳಬಹುದು

ಸುಬ್ರಹ್ಮಣ್ಯ, 31-10-39 } **K Vyasa Rao,** ಮೆನೇಜರ್

GET RICH
AND
PROSPEROUS
through Simple Means upheld and pursued by Millions.........!
WRITE NOW WITH STAMP.—
K. S. Row,
Worli, BOMBAY.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಬದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ ಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಟುಟ್ಟುವ ಯೂ ಎಳೆಯುವ ಸರ್ವತರಹ ದೋಷಗಳನ್ನು ನಿವೃತ್ತಿಪಡಿಸುವದು, ಹಾಗೂ ಆಲಸ್ಯ ಯೂ ವಾಯುಗಳೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500,5 0-0 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ)ಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕೊಂಜಾಡಿ.
ಪೋಸ್ಟ್—ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು—1 ವಿ. ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ಸ್ ಏಜನ್ಸಿ, ಬಟಾಟಾವಾಲಾ ಮೆನ್ಶನ್, ಮುಂಬಯಿ 2 ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ 3 ನವಭಾರತ ಬುಕ್ ಡಿಪೋ, ಉಡುಪಿ.

Advertisement Tariff

1 Page	Rs	25/	per insertion	
½ „	Rs	15/-	„	„
¼ „	Rs	8/-	„	„
⅛ „	Rs.	5/-	„	„

Per Single inch col. Re. 1 „
Contract rates on application
Manager **Navayuga UDIPI.**

Every Policyholder is a Member
IN
The Canara Mutual
ASSURANCE COMPANY, LTD.
(Head Office:- UDIPI, S. India.)
Everyday the Membership increases
The Company issues all the well-known plans of Assurance
Female lives accepted.
JOIN ITS EVER INCREASING MEMBERSHIP.

ಹೋರರ ಭಾಷಣದಲ್ಲಿ ಹುರುಳಿಲ್ಲ

ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಕಾಂಗ್ರೆಸ್ ಬದ್ಧ ವಿರೋಧವಿದೆ.

ಕಾಂಗ್ರೆಸು ದೇಶದ ಏಕಮಾತ್ರ ರಾಷ್ಟ್ರೀಯ ಸೇನೆ

ಲೋರ್ಡ್ ಜೆಟ್ಲೆಂಡರು ತನ್ನ ತಪ್ಪನ್ನು ಸರಿಪಡಿಸಬೇಕು — ತನ್ನ ರಾಜಕೀಯ ಘಟನೆಯನ್ನು ತಯಾರಿಸುವ ಹಕ್ಕು ಕಾಂಗ್ರೆಸಿರಬೇಕು

ಮಹಾತ್ಮಾ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಬೇರೆಬೇರೆ ಲೇಖನಗಳನ್ನು ಬರೆದು, ಸರ್ ಸಾಮುವೇಲ್ ಹೋರರ ಭವಿಷ್ಯತಿನ ಮುಸುಕನ್ನು ಹರಿದು, ಲೋರ್ಡ್ ಜೆಟ್ಲೆಂಡರ ಅವಿವೇಕತನವನ್ನು ನಿಷೇಧಿಸಿ, ಕಾಂಗ್ರೆಸಿನ ಸ್ಥಾನ, ಉದ್ದೇಶ ಮತ್ತು ಧೋರಣೆಯನ್ನು ಸ್ಪಷ್ಟವಾಗಿ ನಿರೂಪಿಸಿರುವರು.

"ಸರ್. ಸಾಮುವೇಲ್ ಹೋರರು ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದ ಕುರಿತು ನಾನು ಆಲೋಚಿಸಿದಷ್ಟು ವಿಸ್ಮಿತನಾಗುತ್ತೇನೆ. ಅದರಲ್ಲಿ ಒಳ್ಳೇ ಅಂಶಕ್ಕಿಂತಲೂ ಕೆಟ್ಟ ಅಂಶ ಅಧಿಕವಾಗಿದೆ. ಬ್ರಿಟಿಷ್ ಸರಕಾರವು ಸಾಮ್ರಾಜ್ಯ ಸತ್ವವನ್ನು ಬಿಟ್ಟುಬಿಟ್ಟಿದೆಯೆಂದು ಅವರು ಒಂದುಸಿರಲ್ಲಿ ಹೇಳಿ ಮತ್ತೊಂದರಲ್ಲಿ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣೆಯ ಭಾರವನ್ನೊಡ್ಡಿರುವುದು ಅಸಮಂಜಸವಾದೆ. ಹಿಂದೂದೇಶದ ಯುರೋಪಿಯನರನ್ನೂ ಸಂಸ್ಥಾನಾಧಿಪತಿಗಳನ್ನೂ ಇತರ ಅಲ್ಪಸಂಖ್ಯಾಕರೊಂದಿಗೆ ಸೇರಿಸಿದಾಗ ಅವರ ನಿಜವೇಷವು ಬಯಲಾಗಿದೆ. ಹಿಂದೂದೇಶದಲ್ಲ ಮನೆಮಾರು ಮಾಡಿಕೊಳ್ಳದೆ ಯುರೋಪೇ ತಮ್ಮ ಮಾತೃಭೂಮಿಯೆಂದು ಭಾವಿಸಿಕೊಳ್ಳುವ ಬಿಳಿಜನರು ಕೂಡಾ ರಕ್ಷಣೆಯು ಅವಶ್ಯವಿರುವ ಅಲ್ಪಸಂಖ್ಯಾಕರಾದರೆ, ಈ ದೇಶದಲ್ಲಿರುವ ಅತ್ಯಲ್ಪಸಂಖ್ಯಾಕರಾಗಿರುವ ಬ್ರಿಟಿಷ್ ಸೈನಿಕರೂ ಅವರ ಪಿರೋಂಧಿ ಸರಕಾರಿ ನೌಕರರೂ ರಕ್ಷಣೆಯು ಅತ್ಯಾವಶ್ಯಕವಾಗುವದೆ. ಬ್ರಿಟಿಷ್ ಬೆಯನೆಟಿನ ಬಲದಿಂದ ಬಿಳಿಜನರ ಸ್ವಾರ್ಥವು ಹಿಂದೀರ ಮೇಲೆ ಹೊರಿಸಲ್ಪಟ್ಟು ರಕ್ಷಿಸಲ್ಪಡುವದೆ? ಸ್ವತಂತ್ರ ಹಿಂದುಸ್ಥಾನವು ರಾಷ್ಟ್ರೀಯ ಹಿತವಿಘಾತುಕವಾದ ಬಿಳಿಜನರ ಯಾವ ಸ್ವಾರ್ಥಕ್ಕಾದರೂ ರಕ್ಷಣೆಯನ್ನೀಯಲಾರದು. ವ್ಯಾಪಾರಕ್ಕೆ ಬ್ರಿಟಿಷ್ ಜನದ ರಕ್ಷಣೆಬೇಕಾಗಿರುವಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ವ್ಯಾಪಿಸುವುದೇ ಸಾಮ್ರಾಜ್ಯವಾದವೆಂಬ ಅರ್ಥವನ್ನು ನಿಘಂಟಿನಲ್ಲಿ ಕೊಡಲಾಗಿದೆ. ಇದು ಸಾಮ್ರಾಜ್ಯವಾದವಾದರೆ ಸರ್. ಸಾಮುವೇಲರ ಭಾಷಣವು ಅದನ್ನು ಸಂಪೂರ್ಣವಾಗಿ ಭದ್ರಪಡಿಸಿದಿಲ್ಲವೇ? ಅಂತಹ ಸಾಮ್ರಾಜ್ಯವಾದವನ್ನು ಸಂಪೂರ್ಣ ವಿರೋಧಿಸಿ ನಾಶಪಡಿಸುವುದೇ ಹಿಂದೂದೇಶದ ಆಕಾಂಕ್ಷೆ."

ಹಿಂದೀ ದೇಶೀಯ ಸಂಸ್ಥಾನಗಳೂ ಆ ಬಿಳಿಜನರ ರೀತಿಯಲ್ಲಿಯೇ ಇರುವುವೇ? ಅವುಗಳಲ್ಲಿ ಹೆಚ್ಚಿನವನ್ನು ಬ್ರಿಟಿಷ್ ಸಾಮ್ರಾಜ್ಯವು ಸೃಷ್ಟಿಸಿ ತನ್ನ ಸ್ವಾರ್ಥಕ್ಕೆ ನಡೆಸುತ್ತಿದೆ. ದೇಶೀಯ ರಾಜರುಗಳು ಯಾವ ರೀತಿಯಲ್ಲಿಯೂ ಜನಪ್ರತಿನಿಧಿಗಳಾಗುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಆಶ್ರಯದಲ್ಲಿ ಪೋಷಿಸಲ್ಪಡುವವರವರು. ಇದು ಸಾಮ್ರಾಜ್ಯ ಸ್ವಾರ್ಥವಲ್ಲವೆ ಮತ್ತೇನು? ದೇಶೀಯ ರಾಜರನ್ನು ಅಲ್ಪಸಂಖ್ಯಾಕರೆಂದು ಪರಿಗಣಿಸಿ ಅವರಿಗೆ ರಕ್ಷಣೆಕೊಡಬೇಕೆಂದು ಹೇಳಲಾಗಿದೆ. ಬ್ರಿಟಿಷ್ ಸಾರ್ವಭೌಮ ಸರಕಾರದ ಆಶ್ರಯವಿಲ್ಲದೆ ಹಿಂದೀರಾಜರುಗಳಿಗೆ ಉಳಿಯಲು ಸಾಧ್ಯವಿಲ್ಲ. ಕಾಂಗ್ರೆಸ್ ಪಕ್ಷೀಯರೊಡನೆ ಒಡಂಬಡಿಕೆ ಮಾಡಿಕೊಳ್ಳುವುದಂತಿರಲಿ, ಅವರೊಡನೆ ಮಾತಾಡುವ ಸ್ವತಂತ್ರವೂ ಈ ರಾಜಮಹಾರಾಜರುಗಳಿಗಿಲ್ಲ."

"ಜಾತೀಯ ಎವಾರ್ಡನ್ನಿತ್ತುದು ಬ್ರಿಟಿಷ್ ಸರಕಾರವು ಮಾಡಿರುವ ಪ್ರಶಂಸನೀಯ ಕೆಲಸವೆಂದು ಸರ್ ಸಾಮುವೇಲರ ಅಂಬೋಣ. ರೌಂಡ್ ಟೇಬ್ಲ್ ಪರಿಷತ್ತಿನ ಸಂದರ್ಭದಲ್ಲಿ ನಡೆದೊಂದು ಒಳಸಂಚಾಗಿರುವ ಜಾತೀಯ ಎವಾರ್ಡಿನ ಅತ್ಯಂತ ರಹಸ್ಯರಣೆಯು ನನ್ನಲ್ಲಿದೆ. ಅದು ನಾಚಿಕೆಕರವಾದುದೇ ಹೊರತು ಅವರಲ್ಲಿ ಯಾರೂ ಹೆಗ್ಗಳಿಕೆಪಡಲಿಕ್ಕಿಲ್ಲ. ಮಾಜಿ ಪ್ರಧಾನ ಮಂತ್ರಿ ಮೆಕ್ ಡೋನಾಲ್ಡರು ಮಧ್ಯಸ್ಥಿಕೆ ಮಾಡಬಹುದೆಂದು ಸಹಿಕೊಟ್ಟವರಲ್ಲಿ ನಾನೊಬ್ಬನಾಗಿರುವುದರಿಂದ ಕಾಂಗ್ರೆಸು ಅದನ್ನು ವಿಧೇಯವಾಗಿ ಸ್ವೀಕರಿಸಿರುವುದು. ಸ್ವಾತಂತ್ರ್ಯದ ಬಾಯಾರಿಕೆಯಿಂದ ಬಳಲುತ್ತಿರುವ ಕಾಂಗ್ರೆಸ್ ಪಕ್ಷೀಯರ ಒಣಗಂಟಲನ್ನು ತಣಿಸುವಂತಹದೇನೂ ಹೋರರ ಬಾಯಿಂದ ಹೊರಡಲಿಲ್ಲ. ಕಾಂಗ್ರೆಸು ಮೊದಲಿಗಿಂತಲೂ ಹೆಚ್ಚಿಗೆಯಾಗಿ ತನ್ನ ತತ್ವದಲ್ಲಿ ನಿಷ್ಠೆವಹಿಸಿ ಅಜೇಯ ಅಹಿಂಸಾತ್ಮಕ ಶಕ್ತಿ ಪಡೆದು, ಸಶಸ್ತ್ರ ಇಂಡಿಯ ಮತ್ತು ಸಶಸ್ತ್ರ ಬ್ರಿಟನು ಶಸ್ತ್ರತ್ಯಾಗ ಮಾಡುವಂತೆ ಮಾಡಬೇಕು. ಅದು ಸಾಧ್ಯವಾದರೆ ಕಾಂಗ್ರೆಸು ಲೋಕ ಶಾಂತಿ ಸ್ಥಾಪನೆಗೆ ಅತಿ ಹೆಚ್ಚಿನ ಸಹಾಯ ಮಾಡಿದಂತಾಗುವುದು. ಯಾಕಂದರೆ ಶಸ್ತ್ರಗಳ ಘರ್ಷಣದಿಂದ ಶಾಂತಿಯು ಬರುವುದಿಲ್ಲ ಸಶಸ್ತ್ರ ರಾಷ್ಟ್ರಗಳು ಪ್ರಬಲ ಸಶಸ್ತ್ರ ವಿರೋಧದಿದಿರಲ್ಲಿ ಮಾಡುವ ನ್ಯಾಯ ಮತ್ತು ನಡಿಸುವ ನ್ಯಾಯಪರ ಜೀವನದಿಂದ ಶಾಂತಿಯುಂಟಾಗುತ್ತದೆ.

ಹಿಂದು ಮುಸಲ್ಮಾನ ಐಕ್ಯವೆಂದರೆ ಜಾತೀಯ ಐಕ್ಯ. ಆದರೆ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳು ಏನಾದರೂ ಒಪ್ಪಂದಮಾಡಿಕೊಳ್ಳುವಹಾಗಿಲ್ಲ. ಮುಸಲ್ಮಾನರ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಜನಾಬ್ ಜಿನ್ನಾ ಸಾಹೇಬರು ಬ್ರಿಟಿಷ್ ಸರಕಾರದ ಕಡೆಗೆ ನೋಡುತ್ತಾರೆ. ಕಾಂಗ್ರೆಸು ಏನುಮಾಡುವುದರಿಂದಾದರೂ ಅವರಿಗೆ ತೃಪ್ತಿಯಾಗುವಹಾಗಿಲ್ಲ. ಕೊಟ್ಟಷ್ಟು ಹೆಚ್ಚಿನವನ್ನು ಅವರು ಕೇಳುತ್ತಾರೆ. ಅವರ ದೃಷ್ಟಿಯಿಂದದು ಸ್ವಾಭಾವಿಕ. ಆದುದರಿಂದ ಮುಸ್ಲಿಮ್ ಲೀಗಿನ ಕೇಳಿಕೆಗಳಿಗೊಂದು ಕೊನೆಯೆಂದಿಲ್ಲ. ಹಿಂದೂದೇಶದ ಸ್ವಾತಂತ್ರ್ಯವನ್ನಪೇಕ್ಷಿಸುವ ಎಲ್ಲಾ ಹಿಂದೀಯರ ಏಕಮಾತ್ರ ಪ್ರತಿನಿಧಿ ಸಂಸ್ಥೆ ಕಾಂಗ್ರೆಸು. ಈ ಗುರಿಯಿಂದ ಹೋರಾಡುವ ಸಂಸ್ಥೆಯು ಕಾಂಗ್ರೆಸಿನ ಹೊರತು ದೇಶದಲ್ಲಿ ಇನ್ನೊಂದಿಲ್ಲ. ವಾಸ್ತವವಾಗಿಯೂ ದೇಶದಲ್ಲಿರುವ ಒಂದೇ ಒಂದು ರಾಷ್ಟ್ರೀಯ ಸೇನೆಯೆಂದರೆ ಕಾಂಗ್ರೆಸು. ಅಹಿಂಸಾತ್ಮಕ ವಾದಾಕ್ಷಣ ಅದು ಸೇನೆಗಿಂತ ಹೆಚ್ಚೇ ಹೊರತು ಕಡಿಮೆಯಾದಾಗಲಾರದು. ರಾಷ್ಟ್ರೀಯ ಹಿತದ ಹೊರತು ಬೇರೆ ಯಾವುದನ್ನೂ ಕಾಂಗ್ರೆಸು ಈ ವರೆಗೆ ಪ್ರತಿಪಾದಿಸಿಲ್ಲ. ಅದೆಂದೂ ಹಿಂದುಗಳ ಪ್ರತಿನಿಧಿತ್ವ ವಹಿಸಿಲ್ಲ. ಮುಸಲ್ಮಾನ ಪ್ರತಿನಿಧಿ ಸಂಸ್ಥೆ ಮುಸ್ಲಿಮ್ ಲೀಗಿರುವಂತೆಯೇ ಹಿಂದುಗಳ ಪ್ರತಿನಿಧಿ ಸಂಸ್ಥೆ ಹಿಂದೂ ಮಹಾಸಭೆ ಇರುತ್ತದೆ. ಇವುಗಳು ಬ್ರಿಟಿಷ್ ಸರಕಾರದ ಆಶ್ರಯದಿಂದ ಎಂತಹ ಹಕ್ಕುಬಾಧ್ಯತೆಗಳನ್ನು ಬೇಕಾದರೂ ಪಡೆಯಲಿ ಕಾಂಗ್ರೆಸು ಆ ವಿಷಯದಲ್ಲಿ ಒಪ್ಪುಗೆಕೊಡದೆ ಹೋರಾಡಲಾರದು. ಜಾತೀಯ ಸಂಬಂಧವಾದ ಅದರ ಧೋರಣೆಯನ್ನದು ಸ್ಪಷ್ಟಪಡಿಸಿ ಸುಮ್ಮನಿರುವುದು.

ಇಂಡಿಯಾ ಸೆಕ್ರಿಟರಿಗಳಾದ ಲೋರ್ಡ್ ಜೆಟ್ಲೆಂಡರು ಲೋರ್ಡ್ ಸಭೆಯಲ್ಲಿ, ಕಾಂಗ್ರೆಸನ್ನು ಹಿಂದೂಸಂಸ್ಥೆಯೆಂದು ಕರೆದುದು ವಿಸ್ಮಯಕರವಿದೆ. ಇಂಡಿಯಾ ಸೆಕ್ರಿಟರಿಗಳಂತಹ ಜವಾಬ್ದಾರಿ ಮನುಷ್ಯರ ಬಾಯಿಯಿಂದ ಈ ಮಾತು ಹೊರಡುವುದು ಶೋಚ್ಯವಿದೆ. ಕಾಂಗ್ರೆಸು ಶುದ್ಧ ರಾಜಕೀಯ ಸಂಸ್ಥೆಯೇ ಹೊರತು ಎಂದೂ ಜಾತೀಯ ಸಂಸ್ಥೆಯಾಗಿರಲಿಲ್ಲ. ಹಿಂದುಗಳ ಜಾತೀಯ ಸಂಸ್ಥೆ, ಹಿಂದು ಮಹಾಸಭೆ ಹಿಂದುಗಳ ಪ್ರತ್ಯೇಕವಾದ ಹಕ್ಕುಬಾಧ್ಯತೆಗಳನ್ನು ಕಾಂಗ್ರೆಸು ರಕ್ಷಿಸುವುದಿಲ್ಲೆಂಬ ಕಾರಣದಿಂದ ಈ ಹಿಂದೂಮಹಾಸಭೆಯು ಜನ್ಮಕ್ಕೆ ಬಂತು ಹಿಂದೂ ದೇಶದ ಗವರ್ನರರೂ ಗ್ರಂಥಕರ್ತರೂ ಆಗಿದ್ದ ಲೋರ್ಡ್ ಜೆಟ್ಲೆಂಡರಿಗೆ ಇದು ಚೆನ್ನಾಗಿ ತಿಳಿದಿರಬೇಕು. ಅವರು ಕಾಂಗ್ರೆಸನ್ನು ಹಿಂದೂ ಸಂಸ್ಥೆಯೆಂದು ಈ ಸಂದರ್ಭದಲ್ಲಿ ಕರೆದುದು ಅನುಚಿತ ಮತ್ತು ಹಾನಿಕರ ವಿರುದ್ಧ ವೈಮನಸ್ಸು ಮತ್ತು ತಿಕ್ಕಾಟವನ್ನು ಮಾತ್ರವಷ್ಟು ಹೆಚ್ಚಿಸದಿರಲಾರದು. ದೊಡ್ಡದಾದ ಈ ತಪ್ಪನ್ನು ಲೋರ್ಡ್ ಜೆಟ್ಲೆಂಡರು ಬೇಗನೆ ತಿದ್ದುವರೆಂದು ಗಾಂಧಿಜಿಯವರ ಆಶೆ

ಸಾಧ್ಯವಾದಷ್ಟು ವ್ಯಾಪಕವಾದ ಮತದಾನ ಪದ್ಧತಿಯಿಂದ ಆರಿಸಲ್ಪಡುವ ರಾಷ್ಟ್ರೀಯ ಮಹಾಸಭೆಯ ಮೂಲಕ ತನ್ನ ಘಟನೆಯನ್ನು ತಯಾರಿಸಿಕೊಳ್ಳುವ ಹಕ್ಕು ಹಿಂದೂದೇಶಕ್ಕಿದೆ. ಅಂತಹ ಘಟನೆಯಲ್ಲಿ ಅಲ್ಪಸಂಖ್ಯಾಕರ ಹಿತಕ್ಕೆ ನ್ಯಾಯವಾದ ರಕ್ಷಣೆ ದೊರೆಯದಿರಲಾರದೆಂದು ಮಹಾತ್ಮರು ಸ್ಪಷ್ಟಪಡಿಸಿರುವರು.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

GONO ORIGINAL KILLER

ಪ್ರಮೇಹವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಇಂಗ್ಲೀಷ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜಿಕ್ಸನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3 ವಿ. ಪಿ. ಖರ್ಚು 0-8 0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ.

Sole Manufacturer Dr. D. N. JASANI, Vitalbhai Patel Road, BOMBAY 4

ಈ ವಾರದ ಭವಿಷ್ಯ

ತಾ. 9-11-1939ರಿಂದ – – – – ತಾ. 16-11-1939ರ ವರೆಗೆ

ಮೇಷ—

ಶೋಕಾಗ್ನಿಯಲ್ಲಿ ತಪ್ತರಾದ ನಿಮಗೆ ಈ ವಾರದಲ್ಲಿ ಮನಸ್ಸಮಾಧಾನಕರವಾಗತಕ್ಕ ಅನೇಕ ಕಾರ್ಯಗಳು ಜರಗಲಿವೆ. ನಿಮ್ಮ ರಾಶ್ಯಧಿಪತಿಯಾಗತಕ್ಕ ಶತ್ರುಪ್ರಧಾನನಾದ ಕುಜನು ಈ ವಾರದಲ್ಲಿ ಲಾಭಸ್ಥಾನಕ್ಕೆ ಬಂದಿರುವನು. ಈತನಿಂದಲೂ ಇತರ ಕೆಲವು ಗ್ರಹರ ಬಲದಿಂದಲೂ ಹಿಡಿದ ಕಾರ್ಯವನ್ನು ಜಯಶೀಲವಾಗಿ ಕೊನೆಗೊಳಿಸುವಿರಿ. ಆರೋಗ್ಯವು ಉತ್ತಮವಿರುವುದು. ನಾನಾ ರೀತಿಯಿಂದ ಧನಗಳಿಸುವಿರಾದರೂ ಆಪದ್ಧನವಾಗಿಡಲುಕೂಡ ಉಳಿಯದು. ವಿಷವಸ್ತುಗಳ ಭಯವಿದೆ. ತಾ. 12ರಿಂದ 15ರ ವರೆಗೆ ದೇಶಾಟನದಿಂದಾಗಿ ಕಷ್ಟನಷ್ಟಗಳೂ ಸ್ವಜನವಿಯೋಗದಿಂದ ದುಃಖವೂ ಉಂಟಾಗುವುದು.

ವೃಷಭ—

ಗ್ರಹರಾಜನ ಬಲದಿಂದಲೂ ಗುರ್ವನುಗ್ರಹದಿಂದಲೂ ನೀವು ಸ್ಥಾನಮಾನಾದಿಗಳನ್ನು ಹೊಂದಿ ಆರೋಗ್ಯವಂತರಾಗಿ ನಿಶ್ಚಿಂತೆಯಿಂದಿರುವಿರಾದರೂ ಮಧ್ಯೇ ಮಧ್ಯೇ ನೀಚನಾದ ಶನಿಯು ಆಕಸ್ಮಿಕ ಅನರ್ಥಗಳನ್ನು ತಂದೊಡ್ಡಿ ಅತೀವ ಧನವ್ಯಯ ಮತ್ತು ದುಃಖವನ್ನುಂಟುಮಾಡುವನು. ಶತ್ರುಗಳ ಬೆದರಿಕೆಯು ನಿಮಗಿಲ್ಲವಾದರೂ ಸ್ತ್ರೀಯರೊಡನೆ ಕಲಹ ತನ್ಮೂಲಕ ಅನಿಷ್ಟಗಳು ತಪ್ಪಲಾರವು. ವಿದ್ಯಾರ್ಥಿಗಳಿಗೂ ವಿಶೇಷತಃ ವ್ಯಾಪಾರಿಗಳಿಗೂ ಹೆಚ್ಚಿನ ಹಾನಿಯಿದೆ. ತಾ. 10ರಿಂದ 13ರ ವರೆಗಿನ ದಿನಗಳು ಉತ್ತಮವಿರುವುದರಿಂದ ಮಾನಸಿಕ ಸುಖ ಶಾಂತಿಯು ದೊರೆಯುವುದು.

ಮಿಥುನ—

'ಕಾದವ ಬಾಳಿಯಾನು' ಎಂಬ ಲೋಕೋಕ್ತಿಯನ್ನು ನೀವು ಮುಖ್ಯವಾಗಿ ಅನುಸರಿಸಬೇಕಾಗಿದೆ. ಯಾವ ಕಾರ್ಯಕ್ಕಾದರೂ ದುಡುಕಿ ಪ್ರಯೋಜನವಿಲ್ಲವು. ನೀವು ಕಷ್ಟಪಟ್ಟು ದುಡಿಯುವಿರಿ. ನಿಮ್ಮ ಕಷ್ಟಕ್ಕೆ ತಕ್ಕುದಾದ ಫಲ ದೊರೆತೇ ತೀರುವುದು. ಆದರೂ ವಿಪರೀತ ಖರ್ಚುಗಳು ನಿಮ್ಮನ್ನು ಅಂಟಿಕೊಂಡಿರುವುದರಿಂದ ಸಿಕ್ಕಿದುದು ತೀರಾ ಅಲ್ಪವೆಂದೇ ತೋರಬಹುದು. ಶತ್ರುಪೀಡೆ ಅಧಿಕವಾದೀತು. ರಾಜಕೀಯದಲ್ಲಿ ತೊಂದರೆ ಹಾನಿಗಳು ಹೆಚ್ಚುವವು. ಆರೋಗ್ಯವು ಕೆಟ್ಟು ದೇಹದಲ್ಲಿ ನಿಶ್ಶಕ್ತಿ ಹೆಚ್ಚುವುದು. ತಾ. 9, 10, 11, 16 ಈ ದಿನ ಕಾರ್ಯಹಾನಿ, ಶೋಕ, ಪ್ರಯಾಣಗಳೊದಗುವವು.

ಕರ್ಕಾಟಕ—

ಸುರಾಸುರ ಮಂತ್ರಿದ್ವಯರ ಅನುಕೂಲ್ಯವಿರತಕ್ಕೆ ನೀವು ಯಾವ ಕಾರ್ಯವನ್ನು ಮಾಡಲೂ ಸಮರ್ಥರಿರುವಿರಿ. ಮನಸ್ಸಿನ ದೌರ್ಜನ್ಯದಿಂದಾಗಿ ನೀವು ಕುಮಾರ್ಗದಲ್ಲಿ ಪ್ರವೃತ್ತಿಸುವುದರಿಂದ 'ಅಪಂಥಾನಂ ತು ಗಚ್ಛಂತಂ ಸೋದರೋಽಪಿ ವಿಮುಂಚತಿ' ಎಂಬಂತೆ ಅನ್ಯಾಯ ಪ್ರವೃತ್ತನನ್ನು ಸಹೋದರರೂ ಕೂಡ ತ್ಯಜಿಸುವರು, ಅಂತೆಯೇ ನೀವು ಬಂಧುವರ್ಗದವರಿಂದಲೂ ಪತ್ನೀ ಪುತ್ರರಿಂದಲೂ ತಿರಸ್ಕೃತರಾಗುವಿರಿ. ವಿಪತ್ತಿಯಿಂದ ಮಾನಚ್ಯುತಿಯೂ ಸಂಭವಿಸಬಹುದು. ಆಕಸ್ಮಿಕವಾಗಿ ದೇಹಕ್ಕೆ ಪೆಟ್ಟು ತಗಲೀತು. ತಾ. 10 ರಿಂದ 13ರವರೆಗೆ ಜಾಗ್ರತರಾಗಿರಿ

ಸಿಂಹ—

ಶುಭಾಶುಭ ಗ್ರಹರ ಬಲಸಾಮ್ಯವಿರೋಧದಿಂದ ನಿಮಗೀವಾರದಲ್ಲಿ ಮಿಶ್ರಫಲ ದೊರೆಯಲಿದೆ. ಕುಟುಂಬಿಕರಿಂದಲೂ ಮಿತ್ರವೃಂದದಿಂದಲೂ ಕೂಡಿರತಕ್ಕ ನಿಮಗೆ ಇದಿರಾಳಿಗಳಾರೂ ಇರಲಾರರು. ವೈದ್ಯಭಾಗದಲ್ಲೂ ನೌಕರಿಯಲ್ಲೂ ವ್ಯಾಪಾರ ವೃತ್ತಿಯಲ್ಲೂ ಆದಾಯವು ಚೆನ್ನಾಗಿರುವುದು. ಕಾಲಗತಿಯಿಂದಲೋ ಎಂಬಂತೆ ನಿಮ್ಮಲ್ಲಿ ಧರ್ಮಬುದ್ಧಿಯು ಹ್ರಾಸವಾಗಿ ಅಧರ್ಮದಲ್ಲಿ ಅಡಿಯಿಡುವಿರಿ. ಕೈಹಿಡಿದಾಕೆಯು ಕಲಹಪ್ರಿಯಳಾಗುವಳು, ಶರೀರಾಲಸ್ಯವು ಅತ್ಯಧಿಕವಾಗುವುದರಿಂದ ಹೆಚ್ಚಿನ ರೋಗಕ್ಕೆ ಗುರಿಯಾಗುವಿರಿ. ತಾ. 12ರಿಂದ 15ರ ವರೆಗಿನ ದಿನಗಳು ಅನಿಷ್ಟಕಾರಿಗಳಾಗಿವೆ.

ಕನ್ಯಾ—

ಕಾಲವು ಹೆಚ್ಚಿನಂಶ ಅನುಕೂಲಸ್ಥಿತಿಗೆ ಬಂದಿದೆ. ಈ ಸಮಯದಲ್ಲಿ ನಿಮ್ಮ ಮನಸ್ಸನ್ನು ಸ್ಥಿರೀಕರಿಸುವ ಶಕ್ತಿಯು ನಿಮಗಿಲ್ಲದಿರುವುದು ನಿಮ್ಮ ದುರ್ದೈವವೆಂದೇ ಹೇಳಬೇಕಾಗಿದೆ. ಈ ಕಾರಣದಿಂದಾಗಿ ನೀವು ಅಧಿಕಾರೀ ಜನರ ಕೋಪಕ್ಕೆ ಗುರಿಯಾಗಲಿರುವಿರಿ. ನೇತ್ರರೋಗವು ನಿಮ್ಮನ್ನು ಬಾಧಿಸಬಹುದು. ಮಾತಿನಲ್ಲಿ ಪ್ರವೀಣರಾದ ನೀವು ವಿರೋಧಿಗಳನ್ನೂ ಕೂಡ ವಶೀಕರಿಸುವಿರಿ. ಇಷ್ಟವಸ್ತುಗಳ ಪ್ರಾಪ್ತಿ, ವನಿತಾಸುಖ, ಜನರಿಂದ ಮನ್ನಣೆ ಇತ್ಯಾದಿಗಳು ಅನಾಯಾಸದಿಂದ ದೊರೆಯುವವು. ಸಂಪದ್ವಿಭಾಗವು ಸುಧಾರಿಸುವುದು. ತಾ. 9, 12, 13 ಅತ್ಯುತ್ತಮವಿದೆ.

ತುಲಾ—

ಕಷ್ಟಪಟ್ಟು ನೌಕರಿಯಿಂದಲೂ ವಾಣಿಜ್ಯಮೂಲಕವಾಗಿಯೂ ಸಂಪಾದಿಸಿದ ಧನವೂ ನಾಶಾಗದೆ. ಆಪದ್ಧನವೂ ಕೂಡ ವ್ಯಯವಾಗಿ ಹೋದೀತು ಈ ವಾರದಲ್ಲಿ. ಶತ್ರುಗಳು ಮೇಲಿಂದ ಮೇಲೆ ಉಪದ್ರವಿಸುವರು. ದೇಹದಲ್ಲೂ ಆರೋಗ್ಯ ಚೆನ್ನಾಗಿಲ್ಲದಿರುವುದರಿಂದ ಕೋಪವು ಅಧಿಕವಾಗುವುದು. ಹೆಚ್ಚಿನ ಕಾರ್ಯಗಳಲ್ಲಿ ಸೋಲೇ ಪ್ರಾಪ್ತಿಯಾಗುವುದು. ನಿಂತಲ್ಲಿ ನಿಲ್ಲದೆ ಹೆಚ್ಚಾಗಿ ಪರ್ಯಟನದಲ್ಲೇ ಕಾಲಕಳೆವಿರಿ. ಮನೋವ್ಯಥೆಯಿಂದ ಪೀಡಿತರಾದ ನಿಮಗೆ ಅಪತ್ಯವರ್ಗದಿಂದ ಶೋಕವೃದ್ಧಿಯಾಗುವುದು. ತಾ. 9-12-13-16 ಅನಿಷ್ಟಕಾರಿಗಳು.

ವೃಶ್ಚಿಕ—

ಸದಾಚಾರನಿರತರಾದ ಸಜ್ಜನವೃಂದಕ್ಕೆ ಈ ವಾರವು ಸಾಕಷ್ಟು ಉತ್ತಮವಾಗಿಯೇ ಇರುತ್ತದೆ. ಸಂಸಾರವು ಸುಖಮಯವಾಗಿರುವುದು. ಶತ್ರುಜನರು ಮೂಲೆಪಾಲಾಗುವರು, ಆರ್ಥಿಕಭಾಗವು ಉತ್ತಮಸ್ಥಿತಿಗೆ ಬರುವುದು. ಶಯನಸುಖವು ಅತ್ಯುತ್ತಮವಾಗಿ ದೊರೆಯುವುದು. ಆದರೆ ನಿಮ್ಮ ದೌರ್ಭಾಗ್ಯ ವಶಾತ್ ದುರ್ಜನರ ಮೈತ್ರಿಯು ಬೆಳೆದು ಅವರ ಸಂಪರ್ಕದಿಂದ ನಿಮ್ಮಲ್ಲಿ ಕೆಲವು ದೋಷಗಳು ಮೂಡುವವು, ಇದರಿಂದಾಗಿ ಹಲವರೊಡನೆ ಕಲಹ ತಿರಸ್ಕಾರವನ್ನು ಹೊಂದುವಿರಿ. ಮುಂದೆ ಬಹಳ ಕೆಡುಕೂ ಇದೆ. ತಾ. 9-12-13-16 ಈ ದಿನಗಳು ಚೆನ್ನಾಗಿವೆ.

ಧನು—

ಕೋರ್ಟು ವಗೈರೆಗಳ ಕಾರ್ಯದಲ್ಲೂ ರಾಜಕೀಯರಂಗದಲ್ಲೂ ವಾಣಿಜ್ಯವೃತ್ತಿಯಲ್ಲೂ ನೀವು ಒಳ್ಳೆ ಲಾಭವನ್ನೂ ಯಶಸ್ಸನ್ನೂ ಪಡೆಯುವಿರಿ. ನಿಮ್ಮ ಯೋಗ್ಯತೆಗೆ ಮೀರಿ ಖರ್ಚು ಇರುವುದಾದರೂ ಆದಾಯವು ಸಾಕಷ್ಟು ಇರುವುದರಿಂದ ಆರ್ಥಿಕ ಅಡಚಣೆ ಸಂಭವಿಸದು. ಬಂಧುಜನರಿಂದ ಅನಿಷ್ಟಾಪವಾದಗಳನ್ನು ಹೊಂದುವಿರಿ. ಸೇವಕರಿಗೂ ಪುತ್ರರಿಗೂ ನಿಮ್ಮೊಡನೆ ಕಲಹವಾದೀತು. ಆರೋಗ್ಯವು ಕನಿಷ್ಠತರಗತಿಯಲ್ಲಿ ಉಳಿಯುವುದು. ತಾ. 12, 13, 16 ಈ ದಿನಗಳಲ್ಲಿ ಖರ್ಚಿನ ಭಾಗದಲ್ಲೂ ಕಾರ್ಯನಿರ್ವಾಹದಲ್ಲೂ ಸೂಕ್ಷ್ಮದೃಷ್ಟಿಯಿರಿ.

ಮಕರ—

ಕರ್ಮಸ್ಥಾನಕ್ಕೆ ರವಿಯೂ ಲಾಭಸ್ಥಾನಕ್ಕೆ ಬುಧಶುಕ್ರರೂ ಬಂದಿರುವುದರಿಂದ ನಿಮ್ಮ ದುರ್ದೈವವು ಬಹುಮಟ್ಟಿಗೆ ಬಯಲಾಯಿತೆನ್ನಬಹುದು. ನೆನಸಿದ ಕಾರ್ಯಗಳು ಮಿತ್ರವೃಂದದವರ ಸಹಕಾರದಿಂದ ಕಾರ್ಯರೂಪಕ್ಕೆ ಬಂದು ನಿರ್ವಿಘ್ನದಿಂದ ಕೊನೆಗೊಳ್ಳುವವು. ಆರ್ಥಿಕ ಬಿಕ್ಕಟ್ಟಿನಿಂದ ಒಮ್ಮೆಗೆ ಪಾರಾಗುವಿರಿ. ಅನೇಕ ದುಸ್ಸ್ವಪ್ನಗಳು ನಿಮ್ಮ ನಿದ್ರಾಭಂಗವನ್ನು ಮಾಡುವವು. ಅವಯವಗಳಲ್ಲಿ ನೋವು ಕಂಡುಬಂದೀತು. ಮನಸ್ಸು ಸ್ವಾಭಾವಿಕವಾಗಿ ದುರ್ಮಾರ್ಗದಲ್ಲಿ ಪ್ರವರ್ತಿಸುವುದರಿಂದ ಶತ್ರುಜನರ ಪ್ರತೀಕಾರೇಚ್ಛೆಯು ಬಲವಾಗುವುದು. ತಾ. 10ರಿಂದ 13ರ ವರೆಗೆ ಉತ್ತಮವಿದೆ.

ಕುಂಭ—

ವ್ಯವಹಾರದಲ್ಲಿ ಬಹಳ ಜಾಗರೂಕರಾಗಿರತಕ್ಕದ್ದು. ಎಷ್ಟು ನಾಲಗೆಯನ್ನು ಬಿಗಿಹಿಡಿದರೂ ಕಲಹವು ಅನಿವಾರ್ಯವೆಂದೇ ಹೇಳಬಹುದು. ವಾಹನಾದಿಗಳ ಪ್ರಯಾಣದಲ್ಲೂ ಶಸ್ತ್ರಗಳ ಉಪಯೋಗದಲ್ಲೂ ವಿಶೇಷ ಜಾಗ್ರತೆಯಿಂದಿರಿ. ಧನವಿಷಯಕವಾಗಿ ಕಲಹಗಳುಂಟಾಗಿ ಕೋರ್ಟುಮನೆಗೆ ತಿರುಗುವ ಪ್ರಸಂಗಬಂದೀತು. ಆದರೂ ಆಯವು ಚೆನ್ನಾಗಿದ್ದು ವ್ಯಯವು ಬಹಳ ಕಡಿಮೆಯಿರುವುದರಿಂದ ಒಂದು ತರಹದ ಸುಖ ಇದ್ದೇ ಇರುವುದು. ಶಯ್ಯಾಸುಖವು ಉತ್ತಮವಿರುವುದು. ಬಲಿಷ್ಠರಾದ ಶತ್ರುಗಳನ್ನು ನಿಗ್ರಹಿಸಲು ಶಕ್ತರಿರುವಿರಿ. ತಾ. 12ರಿಂದ 15ರ ವರೆಗೆ ಅತ್ಯುತ್ತಮವಿದೆ.

ಮೀನ—

"ಯಾರು ಕೈಬಿಟ್ಟರು ನೀ ಕೈಯ್ಯ ಬಿಡದಿರು ನಾರಾಯಣ" ಎಂಬ ದಾಸರ ಪದದಂತೆ ಕಷ್ಟಬಂದ ಕಾಲಕ್ಕೆ ದೇವರ ನೆನಪುಂಟಾಗುವುದು ಜನಸಾಮಾನ್ಯರ ಗುಣವು. ಅಂತೆಯೇ ಪ್ರಕೃತ ಶುಕ್ರೇತರ ಸರ್ವಗ್ರಹರಿಂದಲೂ ತಿರಸ್ಕೃತರಾದ ನಿಮಗೆ ದೈವದೇವರುಗಳ ಸ್ಮರಣೆಯುಂಟಾಗುತ್ತಿದೆ. ಆದರೇನು ಬಂದದ್ದನ್ನು ಅನುಭವಿಸಿಯೇ ತೀರಬೇಕಷ್ಟೆ. ಶರೀರವು ವ್ಯಾಧಿಗಳ ಬೀಡಾಗಿ ಬಹಳ ದುಃಖವನ್ನನುಭವಿಸುವಿರಿ. ಖರ್ಚಿಗೆ ಕೈಯಲ್ಲಿ ಕಾಸಿಲ್ಲದೆ ಕಂಡ ಕಂಡವರಲ್ಲಿ ಸಾಲಕೇಳುವ ಪರಿಸ್ಥಿತಿಯೊದಗುವುದು. ಸ್ವಸ್ತ್ರೀಯಿಂದ ನಿತ್ಯ ಜಗಳವಾಗುವುದು. ಈ ಎಲ್ಲಾ ಕಷ್ಟಗಳಿಂದ ಇತಿಕರ್ತವ್ಯತಾ ಮೂಢರಾಗಿ ಉದಾಸೀನರಾಗುವಿರಿ. ತಾ. 10ರಿಂದ 13ರ ವರೆಗಿನ ದಿನಗಳು ಬಹಳ ಕಷ್ಟದಾಯಕಗಳಾಗಿವೆ.

ನವಯುಗ
ನೋಟೀಸು.

ನವಯುಗಕ್ಕೆ ಸಂಬಂಧಿಸಿದ ಚೆಕ್, ಮನಿಯಾರ್ಡರ್, ಪೋಸ್ಟಲ್ ಆರ್ಡರು ಮೊದಲಾದ ಯಾವತ್ತೂ ಹಣದ ವ್ಯವಹಾರವನ್ನು **ಮೆನೇಜರ್ ನವಯುಗ, ಉಡುಪಿ** ಈ ವಿಳಾಸಕ್ಕೇನೇ ಕಳಿಸಬೇಕಲ್ಲದೆ ಯಾವ ಖಾಸಗಿ ವಿಳಾಸಕ್ಕಾದರೂ ದಯಮಾಡಿ ಕಳಿಸಬಾರದು. ಹಾಗೆ ಖಾಸಗಿ ವಿಳಾಸಕ್ಕೆ ಕಳಿಸಿದ್ದಾದರೆ ನಾವು ಹೊಣೆಯಲ್ಲ.

ಉಡುಪಿ,
ತಾ. 1-11-'39. } **ಮೆನೇಜರ್.**

Degrees: Books: Medicines.

Free H. L. M. S., H. M. B. H. M. D. etc Free Homeo-Ayur-Unani-Naturo degrees, by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

Wanted. District working partners for the Districts of Belgaum, Bijapur, Dharwar, North and South Kanara Only those who can guarantee Rs. 20,000/— befors 30th December 1939 need apply, Padubidri Bros, Bombay 8."

ಚಂದಾದಾರರಲ್ಲಿ ವಿನಂತಿ.

ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ದಯಮಾಡಿ ಕೂಡಲೇ ಕಳಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಮೆನೇಜರ್, **'ನವಯುಗ'**



స్థాపనె] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE**.

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೋಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5¾ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವೆಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, — **ಯಂ. ಆರ್. ಪೂಂಜ,**
President & Manager, — ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗಸೇರುವುದು
ಸೀಸೆ1 ಕ್ಕೆ 12 ಆಣೆ, ಟ. ಖ. ೯ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪ್ರೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರವುಸೋಹರವಾದ ಈರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.
ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಅರ್ಶ-ಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯು 'ಅರ್ಶಮಾರ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವುದು; ನೋವು ತುರಿಸುವಿಕೆ, ಉರಿಯುವಿಕೆ, ಶೀವು, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು. ಕೇವಲ 3 ದಿನ ಹಚ್ಚಿದರೆ ಯಾವ ತರದ ಓಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಇದನ್ನು ಶಿಫಾರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್
ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಕರುಣಾಕರ ಹೆಗ್ಡೆ ಆರ್ಗನೈಜರ್, ಕೆ. ಆರ್. ಕೆ. ಶೇಟ್ ಬಿಲ್ಡಿಂಗ್, ಮಿಶ್ಯನ್‌ಹೈಸ್ಕೂಲ್ ರೋಡು.
ಅಥವಾ
ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —
ಇನ್ನುರವರೆಗೂ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನಲ್ಲಿ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ... ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯು, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮಾತ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಸಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳು

ತ್ರಯ ಸೀಸೆ 1ಕ್ಕೆ ರೂ. 2—8—0
ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1—4—0
ವಿ. ಪಿ. ಬೇರೆ.

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ ಪಿ ಮತ್ತು ಪ್ಯಾಕಿಂಗ್ ಮಾಫಿ.

'ಹವನನ್' ಹೆಮೊರ್‍ಹ್ಯಾಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೊರ್‍ಹ್ಯಾಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ.ಪಿ ಬೇರೆ.

ಲಕ್ಷೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಸ್ವಭಾವವುಳ್ಳವರು ಲಕ್ಷೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಮ್ಮನ್ನು ಸದಾ ಸುಜೀವಿಗಳನ್ನಾಗಿರಿಸುವದು. ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B. & C. I. Ry. BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ನಮಗೆ ಏಜಂಟರುಗಳು ಬೇಕಾಗಿದ್ದಾರೆ. ... . ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S S KARANTH AT THE [illegible]

ered No. M. 3618 16-11-1939

ನವಯುಗ
NAVAYUGA

ದ್ವಾರಾವತೀಂ ಸಕಲಭಾಗ್ಯವತೀಮುಪೇಕ್ಷ್ಯ
ಗೋಪಾಲಬಾಲಲಲನಾಕರಪೂಜನಂ ಚ ।
ಪಾರ್ಥಿಂ ಮಧ್ವಾಗ್ರ್ಯಹಮುತೀತ್ಯ ಸ್ವಮಧ್ವನಾಥೋ
ಯತ್ರಾಸ್ತಿ ತದ್ರಜತಪೀಠಪುರಂ ಗರೀಯಃ ॥

ಉಡುಪಿ ಶ್ರೀ ಕೃಷ್ಣನ ಸನ್ನಿಧಿಯಲ್ಲಿ

ಇದೇ ಬರುವ ತಾ. 23—11—1939ರಿಂದ 26—11—1939ರ ತನಕ

ಪ್ರಮಾಥಿ ಸಂ॥ರದ ಕಾರ್ತಿಕ ಶು.
(ಉತ್ಥಾನ) ದ್ವಾದಶಿಯಿಂದ ಆರಂಭಿಸಿ
ಹುಣ್ಣಿಮೆಯ ವರೆಗೆ
ನಾಲ್ಕು ರಾತ್ರಿಗಳಲ್ಲಿ

ಲಕ್ಷದೀಪೋತ್ಸವವು

ಜರಗಲಿರುವುದು.

ಶ್ರೀಮನ್ಮಧ್ವಾಚಾರ್ಯರವರ ಅವತಾರಸ್ಥಾನವಾಗಿದ್ದು,

ಮೋಕ್ಷಪ್ರದವಾದ ಸಪ್ತಕ್ಷೇತ್ರಗಳಲ್ಲಿ ಮುಖ್ಯವಾದ ಉಡುಪಿಯು ಶ್ರೀಮದಾಚಾರ್ಯರ ದಿವ್ಯಹಸ್ತದಿಂದ ಪ್ರತಿಷ್ಠಿತನಾದ, ಕಡಗೋಲು ನೇಣನ್ನು ಕೈಗಳಲ್ಲಿ ಹಿಡಿದುಕೊಂಡು ನಿಂತಿರುವ, ರುಕ್ಮಿಣೀಕರಾರ್ಚಿತ ದಿವ್ಯ ಬಾಲಕೃಷ್ಣನ ಸನ್ನಿಧಾನದಿಂದ ಅತಿ ಪವಿತ್ರವೆಂದು ಹೆಸರುಗೊಂಡಿದೆ. ಈ ಸುಂದರ ಮೂರ್ತಿಯ ದರ್ಶನ ಮಾತ್ರದಿಂದ ಭಕ್ತರ ಹೃದಯದಲ್ಲಿ ಅಪೂರ್ವ ಭಕ್ತಿಸ್ರೋತವು ಉಕ್ಕಿ ಪ್ರವಹಿಸುವುದರಲ್ಲಿ ಆಶ್ಚರ್ಯವಿಲ್ಲ. ಸಾವಿರಾರು ಆಸ್ತಿಕ ಭಕ್ತರು ಈ ಪರಮಾತ್ಮನ, ಮತ್ತು ಗುರುಗಳಾದ ಮಧ್ವಾಚಾರ್ಯರ ಸೇವಾ-ದರ್ಶನಾದಿಗಳಿಂದ ತಂತಮ್ಮ ಅಭೀಷ್ಟ ಸಿದ್ಧಿ ಪಡೆದಿರುತ್ತಾರೆ.

ಇದಲ್ಲದೆ ಉಡುಪಿ ಕ್ಷೇತ್ರವೂ ಸುತ್ತುಮುತ್ತಲಿನ ರಮಣೀಯವಾದ ಪ್ರಾಕೃತಿಕ ದೃಶ್ಯಗಳಿಂದ ಕೂಡಿದ ಮನೋಹರ ಮತ್ತು ಸ್ವಾಸ್ಥ್ಯಪ್ರದವಾದ ಪ್ರದೇಶದಲ್ಲಿರುವುದು.

ಏಕಕಾಲದಲ್ಲಿ ಶ್ರೀಹರಿಗುರುಗಳ ದರ್ಶನ-ಸೇವಾದಿಗಳ ಲಾಭ ದೊರೆಯುವ ಈ ಪುಣ್ಯಕ್ಷೇತ್ರವನ್ನು ಕಾರ್ತಿಕ ಲಕ್ಷದೀಪೋತ್ಸವ ಕಾಲದಲ್ಲಿ ಸಮಸ್ತ ಭಜಕರೂ ಅವಶ್ಯ ನೋಡಬೇಕಾಗಿದೆ. ರಥೋತ್ಸವಕ್ಕೆ ಮೊದಲು ತೆಪ್ಪೋತ್ಸವವೂ, ನಾಲ್ಕು ಬೀದಿಗಳಲ್ಲಿಯೂ ಬೆಳಗಿಸುವ ಲಕ್ಷಗಟ್ಟಳೆಯ ದೀಪಮಾಲೆಗಳ ವೈಭವವೂ ಅತಿ ಪ್ರೇಕ್ಷಣೀಯವಾಗಿವೆ.

ಹೆಚ್ಚಿನ ಅನುಭವಕ್ಕೂ, ವಸತಿ ಮೊದಲಾದ ಸೌಕರ್ಯಗಳಿಗೂ ಪತ್ರ ಬರೆದು ಕೇಳಿರಿ.

ಏಜಂಟ್:
ಪರ್ಯಾಯ ಶ್ರೀಫಲಿಮಾರು ಮಠ, ಉಡುಪಿ.

THE ASIAN ASSURANCE COMPANY, LTD.



ASIAN BUILDINGS - - - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9 24,965	24 50 234
1935	2,52,08,418	18,39,296	42 98 820
1938	3,61,56,764	22 34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri **B Narayan Shetty,** Organizer Brahmavar
„ **M Shivarama Rao,** Organizer, Puttur

Or

Sri **J. A PUTRAN,**
Branch Manager, MANGALORE

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2 02 800/- Paid up Capital Rs 1,82 100/-

PRINCIPAL OFFICE COURT ROAD UDIPI.

OTHER OFFICES

UDIPI, MANGALORE, KATAPADI, & KANHANGAD

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year.

For further particulars please address or call at any of our offices

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆಮಂತ್ರ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೬೬೪ ಪೇಜುಗಳು ಇರುವ ದೊಡ್ಡ ಪುಸ್ತಕ ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲಿಯೂ ಹೋಗಬೇಕಾಗಿಲ್ಲ ಮನೆಯಲ್ಲೇ ಈ ಪುಸ್ತಕ ಓದಿ ಇಂಗ್ಲೀಷ್ ಓದುಬರಹ ಎಲ್ಲಾ ಸುಲಭವಾಗಿ ಬರುತ್ತೆ ಪುಸ್ತಕದ ಬೆಲೆ ರೂ ೧॥

Western Swiss watch Co
Book Sellers Post Box No 68
G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68 ಮದರಾಸ್

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮರ ರಸ್ತೆ, ಮಂಗಳೂರು,

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು ಪೇಂಟುಗಳ ಬೇಜು, ಮೊಹೊರ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡುವವು

Crown Rubber Stamp Co, Balmat Road, MANGALORE

Incl I in the Mysore Govt Store Purchase Committee in the list of approve Firms

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು

ಗಾರ್ಡನ್ಸ್ ಹೋಟೆಲ್

ಫೋನ್ 406

ಹಳೆ ಪೋಸ್ಟಾಫೀಸು ರೋಡು
ಮೈಸೂರು.

ಅರಮನೆಯ ಎದುರು
ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್ - ಕೆ ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance*

CANARA AUTOMOBILES - - - - - MANGALORE

ಶೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

Estd. 1921 ಸ್ಥಾಪನೆ

FOUNDER
SRI A B SHETTY M L A,
ಸಂಸ್ಥಾಪಕರು
ಶ್ರೀ ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ
ಕೆ ಕೆ ಶೆಟ್ಟಿ

NAVAYUGA

ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3—4—0
6 ತಿಂಗಳಿಗೆ - ರೂ 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೧

ಉಡುಪಿ, ಗುರುವಾರ, ೧೬—೧೧—೧೯೩೯.
UDIPI, THURSDAY, 16-11-1939.

VOL 19
No 11

ರಸ್ಯದ ಮಹಾಕ್ರಾಂತಿ

ಜೀರ್ಣವಾಗಿ ಮುಗ್ಗುರಿಸುತ್ತಿದ್ದ ಹಳೆಯ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕಟ್ಟಡಗಳನ್ನು ಕಿತ್ತುಹಾಕಿ ಇಡೀ ಲೋಕಕ್ಕೇನೇ ನವರಚನೆಯ ಹಾದಿ ತೋರಿಸಿರುವ ರಸ್ಯದ ಮಹತ್ತಾದ ಕ್ರಾಂತಿಯುಂಟಾಗಿ ಇದೇ ಕಳೆದ ನವಂಬರ ತಾ. 7ಕ್ಕೆ 22ವರ್ಷಗಳಾದುವು ಈ 22ನೇ ವಾರ್ಷಿಕೋತ್ಸವವು ರಸ್ಯದ ಸೋವಿಯೆಟ್ ರಿಪಬ್ಲಿಕಿನಲ್ಲೆಲ್ಲಾ ಅತ್ಯಂತ ಸಂಭ್ರಮದಿಂದ ಆಚರಿಸಲ್ಪಟ್ಟಿರುವುದು ರಸ್ಯದಲ್ಲಿ ಬೋಲ್ಶೆವಿಕರು ಆರಂಭಿಸಿರುವ ನವಪ್ರಯೋಗವು ಅನೇಕ ದೋಷಗಳುಳ್ಳದಾಗಿರಬಹುದು ಆದರೆ ಭಂಡವಾಳ ಪದ್ಧತಿಯ ಸಮಾಜ ಮತ್ತು ಸಾಮ್ರಾಜ್ಯಶಾಹಿ ರಾಜಕೀಯದಿಂದ ಮಾನವ ಸಮಾಜವನ್ನಾವರಿಸಿರುವ ವೈಷಮ್ಯ, ಅವ್ಯವಸ್ಥೆ ಮತ್ತು ಗೊಂದಲದ ಕಾರ್ಮುಗಿಲಲ್ಲಿ ತೋರಿಬಂದಿರುವ ಒಂದೇ ಒಂದು ಆಶಾಕಿರಣವೆಂದರೆ ರಸ್ಯದ ನವರಚನೆಯೆಂದರದು ಅತಿಶಯೋಕ್ತಿಯಾಗಲಾರದು. ಫ್ರಾನ್ಸಿನ ಕ್ರಾಂತಿಯ ನಂತರ ಇಷ್ಟೊಂದು ಪ್ರಚಂಡ ಕ್ರಾಂತಿಯುಂಟಾದುದಿಲ್ಲ ಲೋಕದ ಇತಿಹಾಸದಲ್ಲಿ. ಲೋಕಪ್ರಸಿದ್ಧ ಗ್ರಂಥಕರ್ತರೂ ವೇದಾಂತಿಯೂ ಆದ ಎಮ್. ರೋಮೇ ರೋಲರವರು ಈ ಕ್ರಾಂತಿಯ ಕುರಿತು ಬರೆದಿರುವ ಮಾತುಗಳು ಮನನೀಯವಿವೆ. “ಮಾನವಕೋಟಿಯ ಇತಿಹಾಸದಲ್ಲಿ, ರಸ್ಯದ ಕ್ರಾಂತಿಯು ಫ್ರಾನ್ಸಿನ ಕ್ರಾಂತಿಗಿಂತಲೂ ದೊಡ್ಡದಾದ ಮುನ್ನಡೆ ಈ ನವ ಮಂದಿರದ ರಚನೆಯು ಸಂಪೂರ್ಣವಾದಾಗ ಯುರೋಪಿನ ಮತ್ತು ಲೋಕದ ಇತರ ಕಡೆಗಳಲ್ಲಿನ ಹಳೆಯ ಜೀರ್ಣವಾದ ಅನೇಕ ಮಂದಿರಗಳು ಕುಸಿದುಬೀಳುವವು, ಹಗಲು ರಾತ್ರಿಯನ್ನು ತೊಲಗಿಸುವಂತೆ ಈ ಮಾರ್ಪಾಟವಾಗುವುದು.” ಮಾನವರೆಲ್ಲರ ಸರಿಸಮಾನ ಹಕ್ಕುಬಾಧ್ಯತೆ ಸುಖಸುಭಿಕ್ಷೆಯ ಲೋಕೋದ್ಧಾರಕ ಹಾದಿಯ ಕೈಕಂಬವಾಗಿ ರಸ್ಯದ ಕ್ರಾಂತಿಯು ಸ್ಮರಣೀಯವಿದೆ

ರಸ್ಯದ ಧೋರಣೆಯೇನು?

ನವಂಬರ ತಾ. 7ರಲ್ಲಿ ಮೋಸ್ಕೋ ಪಟ್ಟಣದಲ್ಲಿ ನಡೆದ ಪ್ರಚಂಡ ಸಭೆಯಲ್ಲಿ ಸೊವಿಯೆಟ್ ವಿದೇಶಮಂತ್ರಿಗಳಾದ ಎಮ್ ಮೋಲಟೋವರು ಪ್ರಾಮುಖ್ಯವಾದೊಂದು ಭಾಷಣವಿತ್ತು ಲೋಕದ ಸಾಮ್ರಾಜ್ಯಶಾಹಿ ರಾಷ್ಟ್ರಗಳನ್ನೆಲ್ಲಾ ನಿಷೇಧಿಸಿ ರಸ್ಯದ ರಾಜಕೀಯ ಪದ್ಧತಿಯನ್ನು ಬಹಳವಾಗಿ ಪ್ರಶಂಸಿಸಿದರು ತಮ್ಮ ಅಂತರಿಕ ತೊಡಕುಗಳನ್ನು ಪರಿಹರಿಸಿಕೊಳ್ಳಲಾರದೆ, ಬಂಡವಾಳಶಾಹಿ ರಾಷ್ಟ್ರಗಳು ಲೋಕದ ಅರೆವಾಸಿ ಜನಸಂಖ್ಯೆಯನ್ನು ಕೊಲೆಕಾರಕ ಯುದ್ಧಕ್ಕೆಳೆದು ಈಗ ಅದು ಇಡೀ ಲೋಕಕ್ಕೆ ಹಬ್ಬುವ ಅಪಾಯ ಬಂದಿದೆ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ನಿರರ್ಥಕವಾಗಿ ಯುದ್ಧವನ್ನು ಮುನ್ನಡೆಸಿ, ತನ್ನ ಕಡೆಗೆ ಆದಷ್ಟು ಹೆಚ್ಚು ರಾಷ್ಟ್ರಗಳನ್ನೆಳೆಯಲೆತ್ನಿಸುತ್ತಿವೆ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಟರ್ಕಿಯೊಡನೆ ಮಾಡಿಕೊಂಡಿರುವ ಒಪ್ಪಂದವೇ ಇದಕ್ಕೆ ಸಾಕ್ಷಿ ಸೋವಿಯೆಟ್ ರಸ್ಯವೊಂದೇ ನಿಜವಾದ ಶಾಂತಿಯ ಧೋರಣೆ ವಹಿಸಿದೆ ರಸ್ಯವು ತನ್ನದೇ ಆದ ದಾರಿ ಹಿಡಿದು ಮುನ್ನಡೆಯಲಿರುವುದು ಅದರ ಪ್ರಭಾವವು ಇಂದು ಬಹಳವಾಗಿ ಬೆಳೆದಿರುತ್ತದೆಂದೀ ಎಮ್ ಮೊಲೊಟೊವರ ಭಾಷಣದ ಸಾರಾಂಶ. ಈ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಸಮತಾವಾದಿ ಸಂಘದವರಾದ ‘ಕಮ್ಯೂನಿಸ್ಟ್ ಇಂಟರ್ ನೇಶನಲ್’ ಇವರು ಹೊರಡಿಸಿರುವ ಘೋಷಣೆಯಲ್ಲಿ ಇಂಗ್ಲೆಂಡ್ ಫ್ರಾನ್ಸ್ ಮತ್ತು ಇಟೆಲಿಯೊಂದಿಗೆ ಜರ್ಮನಿಯ ರಾಜಕೀಯ ಪದ್ಧತಿಯನ್ನೂ ಖಂಡಿಸಿ ಕೂಲಿಗಾರರಲ್ಲಾ ಸಂಘಟಿತರಾಗಿ ಎದ್ದುನಿಂತು ಈ ರಾಜ್ಯಭಾರಗಳನ್ನೆಲ್ಲಾ ನಿರ್ಮೂಲಿಸಬೇಕೆಂದು ವಿನಂತಿಮಾಡಿಕೊಂಡಿರುವರು ಇದರಿಂದ ರಸ್ಯವು ಯುರೋಪಿನ ಯಾವ ರಾಷ್ಟ್ರಕ್ಕೂ ಕಟ್ಟುಬೀಳದೆ ಸ್ವತಂತ್ರ ಧೋರಣೆ ವಹಿಸುವುದೆಂಬುದು ಸಿದ್ಧವಾಗುವುದು. ಲೀಗ್ ಆಫ್ ನೇಶನ್ಸಿಗೆ ಸೇರಿ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳೊಂದಿಗೆ ಸಹಕರಿಸಿ ರಸ್ಯವು ನಿಂದೆಗೊಂಡಿದ್ದುದು ರಸ್ಯದ ಮೊದಲಿನ ವಿದೇಶ ಮಂತ್ರಿ ಎಮ್ ಲಿಟ್ವಿನೋಫರ ರಾಜೀನಾಮೆಯು ರಸ್ಯದ ಧೋರಣಾಮಾರ್ಪಾಟದ ಸಂಕೇತವಾಗಿದ್ದಿತು. ಜರ್ಮನಿಯೊಡನಾದರೂ ರಸ್ಯವು ರಾಜಕೀಯವಾಗಿ ಸೇರಿ ನಡೆಯುವ ಹಾಗಿಲ್ಲ ಜರ್ಮನಿಯ ಮೇಲದು ವಿಶ್ವಾಸವಿಟ್ಟಿರುವುದಿಲ್ಲ ಅದು ಇತ್ತಲಾಗಿ ವಶಪಡಿಸಿಕೊಂಡಿರುವ ಪೂರ್ವ ಪೋಲಂಡಿನ ಎಲ್ಲೆಯನ್ನು ಭದ್ರಪಡಿಸಿ ಕೋಟೆಕಟ್ಟಿ ಸೈನ್ಯವನ್ನಿರಿಸುವ ಏರ್ಪಾಡು ಮಾಡುತ್ತಿರುವುದೇ ಇದಕ್ಕೆ ಸಾಕ್ಷಿ ಫಿನ್ಲೆಂಡ್ ರಾಜಿಗೊಪ್ಪದಿದ್ದಲ್ಲಿ ಪರಿಣಾಮ ನೆಟ್ಟಗಾಗಲಿಕ್ಕಿಲ್ಲೆಂದು ಎಮ್. ಮೊಲೊಟೊವರು ಎಚ್ಚರಿಸಿರುವರು. ಟರ್ಕಿಯು ಆಂಗ್ಲೋ ಫ್ರೆಂಚರೊಡನೆ ಮಾಡಿಕೊಂಡ ಒಪ್ಪಂದದ ಕುರಿತು ಅತೃಪ್ತಿ ಸೂಚಿಸಿರುವರು ರಸ್ಯವು ಈ ಸಂದರ್ಭದಲ್ಲಿ ತನ್ನ ಅಧಿಕಾರವನ್ನು ಸಾಧ್ಯವಾದಷ್ಟು ವ್ಯಾಪಿಸಿ, ತನ್ನ ಸ್ಥಾನವನ್ನು ಭದ್ರಗೊಳಿಸುವ ಕೇವಲ ರಾಷ್ಟ್ರೀಯ ಧೋರಣೆ ವಹಿಸಿರುವುದೆನ್ನಬಹುದು.

ವಾರದ ವಿಮರ್ಶೆ

YOU MEANT TO TAKE OUT A POLICY YOU HAD DISCUSSED ONE WHICH WOULD HAVE BROUGHT YOU SUFFICIENT INCOME!
BUT WRITING WAS TOO MUCH TROUBLE FOR YOU
THEN AN ACCIDENT HAPPENED NOW YOUR FAMILY IS LEFT PENNILESS.
A SAD STORY BUT ALAS HOW COMMON! YOU ARE IN DANGER AT EVERY MOMENT SAFEGUARD TO DAY INSURE WITH TROPICAL.
WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE?

Insurance for all ages and amounts to suit all circumstances

TROPICAL INSURANCE COY. LTD
NEW DELHI

ಟ್ರೋಪಿಕಲ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ

ಎಂ ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು. ಅಥವಾ ಕೆ ರಾಮಮೂರ್ತಿ, ಎಂ. ಎ., ಬ್ರಾಂಚ್ ಸೆಕ್ರೆಟರಿ, 160 ಮೌಂಟ್‌ರೋಡ್, ಮದ್ರಾಸು.

ಸಾರ್ವಜನಿಕ ಅವಗಾಹನೆಗೆ ಪ್ರಕಟಣೆ

ತಿರುವಾಂಕೂರು ಸರಕಾರದವರು ಕಳೆದ ವರ್ಷದಂತೆ ಈ ವರ್ಷವೂ ಸಮಗ್ರ ಭಾರತದ ಸ್ವದೇಶಿ, ವ್ಯವಸಾಯಿಕ ಮತ್ತು ಕೈಗಾರಿಕೆಗಳ ವಸ್ತುಪ್ರದರ್ಶನದ ವ್ಯವಸ್ಥೆಯನ್ನು ಏರ್ಪಡಿಸಿರುವರು ಪ್ರದರ್ಶನವು ಇದೇ ನವಂಬರು ತಿಂಗಳ ತಾರೀಕು 19ರಿಂದ ಪ್ರಾರಂಭಿಸಿ ಕಾರ್ತಿಕ ದೀಪಾವಳಿಯ ನಂತರ 12 ದಿನಗಳ ವರೆಗೂ ನಡೆಯುವುದು ಹಿಂದೂದೇಶದ ಎಲ್ಲಾ ಭಾಗಗಳಿಂದಲೂ ಗ್ರಾಮ ಕೈಗಾರಿಕೆಯ ಸಹಿತ್ಯ ಸಾಮಗ್ರಿಗಳು ಅಲ್ಲಿಗೆ ಬಂದು ಪ್ರದರ್ಶಿಸಲ್ಪಡುವವು ಒಂದು ದೇಶದ ಎಲ್ಲಾ ಬಗೆಯ ಕೈಗಾರಿಕೆಯ ವಸ್ತುಗಳನ್ನು ಒಂದೇ ಸ್ಥಳದಲ್ಲಿ ಕಲೆಯುವಂತೆ ಮಾಡಿ ತಯಾರಿಸುವವರಿಗೂ ಗಿರಾಕಿ ಜನರಿಗೂ ಪರಸ್ಪರ ಪರಿಚಯ ಮತ್ತು ಸಂಬಂಧವನ್ನು ಒದಗಿಸುವ ಅಂಥ ಸಂದರ್ಭಗಳ ದೊರೆಯುವುದು ತೀರಾ ಅಪರೂಪ. ಆದುದರಿಂದ ನಮ್ಮ ಜಿಲ್ಲೆಯ ಜನರೂ ಸಾಧ್ಯವಿದ್ದಷ್ಟು ಮಟ್ಟಿಗೆ ಜನೋಪಯೋಗದ ಈ ಕಾರ್ಯದಲ್ಲಿ ಭಾಗಿಗಳಾಗುವ ಸಂದರ್ಭವನ್ನು ಕಳೆದುಕೊಳ್ಳುವುದು ಸರಿಯಲ್ಲ ಆದಷ್ಟು ಜನರು ಆದಷ್ಟು ಕೈಗಾರಿಕೆಯ ವಸ್ತುಗಳನ್ನು ಕಳುಹಿಸಬೇಕಾಗಿ ತೀರಾ ಅಪೇಕ್ಷಿಸಲಾಗುತ್ತದೆ ಇದರಿಂದ ಜನರಿಗೆ ಲಾಭವಿದೆ, ಜಿಲ್ಲೆಗೆ ಗೌರವವಿದೆ

ಕೆ. ವಿಟ್ಟಲಶೆಟ್ಟಿ,
ಪ್ರೆಸಿಡೆಂಟ್ ಜಿಲ್ಲಾ ಬೋರ್ಡ್ ದ. ಕ.

ಚಂದಾದಾರರಲ್ಲಿ ವಿನಂತಿ

ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ವಿನಯಪೂರ್ವಕ ಅಪೇಕ್ಷಿಸಲಾಗುತ್ತದೆ ಮೆನೇಜರ್, ‘ನವಯುಗ’

ಜನವರಿ ಪ್ರಾರಂಭದಲ್ಲಿ ಹೊರಡುವ “ನವಯುಗ” ಪರ್ಯಾಯ ಸಂಚಿಕೆಯನ್ನು ನಿರೀಕ್ಷಿಸಿರಿ!

ವಿಮಾನ ಧಾಳಿ ಮುಂಜಾಗ್ರತೆ

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಬೋಂಬುಗಳ ಹಾವಳಿಯಿಂದ ದೂರವಾಗುವ ಬಗೆ ಹೇಗೆ?

ಯಾವ ಸಂದರ್ಭದಲ್ಲೂ ದಿಗಿಲುಗೊಳ್ಳದೆ ಶಿಸ್ತು ಮತ್ತು ಪ್ರಸಂಗಾವಧಾನತೆಯಿಂದ ವರ್ತಿಸಬೇಕು.

ವಿಷವಾಯು ಬೋಂಬು

ಸಿಡಿಯುವ ಮತ್ತು ಸುಡುವ ಬೋಂಬುಗಳ ವಿಷಯ ಕಳೆದ ಸಂಚಿಕೆಯಲ್ಲಿ ಬರೆಯಲಾಗಿದೆ. ಮೂರನೇ ವಿಧದ ಬೋಂಬೆಂದರೆ ವಿಷವಾಯು ಬೋಂಬು. ಪಶ್ಚಿಮ ಕರಾವಳಿಯ ಮಂಗಳೂರು ಕಲ್ಲಿಕೋಟೆಗಳಂತಹ ಪಟ್ಟಣಗಳಲ್ಲಿ ಈ ವಿಧದ ಬೋಂಬುಗಳು ಉಪಯೋಗಿಸಲ್ಪಡಲಾರವೆಂದು ತಜ್ಞರ ಅಭಿಮತ. ಆದರೂ ವಿಷವಾಯು ಬೋಂಬುಗಳ ಕುರಿತು ಸರ್ವಸಾಮಾನ್ಯ ಅನುಭವ ಮಾಡಿಕೊಳ್ಳುವುದೊಳ್ಳೇದು. ಕಳೆದ ಮಹಾಯುದ್ಧದಲ್ಲಿ 2500 ಟನ್ನು ಭಾರದ ವಿಷವಾಯು ಬೋಂಬೆಸೆದು 500 ಮಂದಿ ಮಾತ್ರ ಕೊಲ್ಲಲ್ಪಟ್ಟದ್ದರು. ಮುಖವಚಗಳ ಸಿದ್ಧತೆಯಿದ್ದು ಶಿಸ್ತಿನಿಂದ ನಡೆಯುವ ಜನತೆಯ ಮೇಲೆ ಈಗಲೂ ವಿಷಬೋಂಬೆಸೆಯಲ್ಪಟ್ಟಲ್ಲಿ ಯಾವ ತರದ ಹಾನಿಯೂ ಆಗದಿರಲು ಸಾಧ್ಯವಿದೆ. ಮಳೆ ಮತ್ತು ಶ್ಯಾವ ತುಂಬಿದ ವಾತಾವರಣ, ಹೆಚ್ಚಿನ ಉಷ್ಣ ಮತ್ತು ಬಿಸಿಲಿರುವಾಗ ವಿಷವಾಯು ಬೋಂಬು ಪರಿಣಾಮಕಾರಿಯಾಗುವುದಿಲ್ಲ. ಘಂಟೆಗೆ 10ರಿಂದ 14 ಮೈಲು ವೇಗದಲ್ಲಿ ಬೀಸುವ ಸ್ಥಿರವಾದ ವಾಯುಚಲನೆಯಿದ್ದಲ್ಲಿ ಮಾತ್ರವೇ ವಿಷವಾಯು ಬೋಂಬು ಪರಿಣಾಮವನ್ನುಂಟುಮಾಡುತ್ತದೆ. ಆದುದರಿಂದ ವೈರಿಗೆ ಅದನ್ನು ಫಲಕಾರಿಯಾಗಿ ಉಪಯೋಗಿಸಲು ಬಹುತೇಕ ಅಸಾಧ್ಯವೇ ಸರಿ.

ಸಿಡಿಯುವ ಬೋಂಬಿನಂತೆಯೇ ವಿಷವಾಯು ಬೋಂಬಿನ ಆಕಾರ ಮತ್ತು ರೂಪ. ದಪ್ಪದ ಉಕ್ಕಿನ ತಗಡಿನ ಹೊದಿಕೆಯೊಳಗೆ ಸಿಡಿಮದ್ದಿರುತ್ತದೆ ಸಿಡಿಯುವ ಬೋಂಬಿನಲ್ಲಿ. ವಿಷವಾಯು ಬೋಂಬಿನಲ್ಲಿ ತೆಳುವಾದ ಉಕ್ಕಿನ ಹೊದಿಕೆಯೊಳಗೆ ವಿಷವಾಯು ದ್ರವವು ಸಂಗ್ರಹಿಸಲ್ಪಟ್ಟಿರುತ್ತದೆ. ವಿಷವಾಯು ಬೋಂಬು ನೆಲಕ್ಕೆಯಾ ಕಟ್ಟಡಗಳಿಗೆ ಬಿದ್ದು ಒಡೆದೊಡನೆಯೇ ಅದರೊಳಗಿನ ದ್ರವವು ವಾತಾವರಣದಲ್ಲೆಲ್ಲಾ ಚುಮುಕಿಸಲ್ಪಟ್ಟು ಆವಿಯಾಗಿ ವಾಯುಮಂಡಲವು ವಿಷದಿಂದ ತುಂಬುವುದು. ಈ ಬೋಂಬಿಗೆ ದೊಡ್ಡ ಬಾಯಿಯೇನೂ ಇರುವುದಿಲ್ಲ. ಅದು ಬಿದ್ದು ಒಡೆಯುವಾಗ ಹೆಚ್ಚಿನ ಶಬ್ದವಾಗುವುದೂ ಇಲ್ಲ. ಕಂದು ಬಣ್ಣದ ಕಲೆಗಳ ರೂಪದಲ್ಲಿ ಈ ವಿಷವಾಯುವು ಕಾಣಿಕೊಳ್ಳುವುದು.

ಬೋಂಬೆಸೆತದ ಹೊರತು ವಿಮಾನಗಳಿಂದಲೇ ವಿಷವಾಯು ದ್ರವವನ್ನು ವೈರಿ ಕಂದಕಗಳ ಮೇಲೆ ಚುಮುಕಿಸಬಹುದು. ವಿಮಾನವು 2300 ಅಡಿ ಎತ್ತರದಲ್ಲಿ ಹಾರಾಡಿ ಈ ಕೆಲಸ ಮಾಡಬಹುದು. ಶ್ವಾಸಕೋಶವನ್ನು ಸುಡುವ ಕಣ್ಣೀರಿಳಿಸುವ, ಮೂಗನ್ನುರಿಸುವ ಮತ್ತು ಚರ್ಮ ಸುಡುವಂತಹ 4 ವಿಧದ ವಿಷವಾಯುಗಳಿರುತ್ತವೆ. ಶ್ವಾಸಕೋಶ ಸುಡುವ ವಾಯು ಪ್ರಯೋಗದಿಂದ ಕಣ್ಣಲ್ಲಿ ಸ್ವಲ್ಪ ನೀರಿಳಿದು ಮೂಗು ಉರಿಯುವುದು. ಕಣ್ಣೀರಿಳಿಸುವ ಬೋಂಬಿನಿಂದ ಕಣ್ಣೀರು ಬಹಳವಾಗಿ ಇಳಿದು ಸೀನು ಬರುವುದು. ಮೂಗನ್ನುರಿಸುವ ವಾಯುವಿನಿಂದ ಮೂಗು ನೋವುಂಟಾಗಿ ವಾಂತಿಬರುವುದು. ಚರ್ಮ ಸುಡುವ ವಾಯುವಿನಿಂದ ಚರ್ಮದ ಸೂಕ್ಷ್ಮ ಭಾಗಗಳು ಸುಟ್ಟು ಹೋಗಿ ಮೂಗಿನೊಳಭಾಗವು ಉರಿಯುವುದು.

ಅತ್ಯಾಧುನಿಕ ದೊಡ್ಡ ಸಿಡಿಬೋಂಬಿನ ಹಾವಳಿಯನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳಬೇಕಾದರೆ ಕಡಿಮೆಪಕ್ಷ ಭೂಮಿಯೊಳಗೆ ೬೦ ಅಡಿ ಆಳದಲ್ಲಿ ಕಾಂಕ್ರೀಟಿನ ನೆಲಮಾಳಿಗೆಯನ್ನು ಕಟ್ಟಿಸಿಕೊಳ್ಳಬೇಕು. ಇದು ಅವ್ಯವಹಾರ್ಯ. ಹೆಚ್ಚಿನ ಸಿಡಿಯುವ ಬೋಂಬುಗಳು ನೆಲದಡಿಗೆ ಹೊಕ್ಕು ಹೋಗಿ ಅಲ್ಲಿ ಒಡೆದು ಅದರ ತುಂಡುಗಳು ಮೇಲಕ್ಕೆ ಮತ್ತು ಸುತ್ತಲೂ ಹಾರುತ್ತವೆ. ಆದುದರಿಂದ ನೆಲದ ಮೇಲೆ ಬಿದ್ದುಬಿಟ್ಟರೆ ಅಥವಾ ತಗ್ಗಿನಲ್ಲಿ ತಂಗಿದರೆ ಈ ಬೋಂಬಿನ ತುಂಡುಗಳು ಬಂದು ತಾಗುವ ಸಂಭವ ಅಷ್ಟೇನೂ ಇರಲಾರದು. ಈ ಬೋಂಬಿನಿಂದುಂಟಾದ ವಾಯುತರಂಗದ ಹಾವಳಿಯನ್ನು ಕೂಡಾ ಇದೇ ರೀತಿ ತಪ್ಪಿಸಿಕೊಳ್ಳಬಹುದು. ಸಿಡಿಯುವ ಬೋಂಬುಗಳು ಕಟ್ಟೋಣಗಳ ಮೇಲೆಸೆಯಲ್ಪಟ್ಟರೆ ಅವುಗಳು ಕುಸಿದುಬಿದ್ದು ಪ್ರಾಣಹಾನಿಯಾಗಬಹುದು. ಆದುದರಿಂದ ಕಟ್ಟಡಗಳಿಲ್ಲದ ಬಯಲು ಪ್ರದೇಶದ ತಗ್ಗಿನಲ್ಲಿ ತಂಗುವುದು ಅಥವಾ ನೆಲದ ಮೇಲೆ ಮಲಗಿಬಿಡುವುದೇ ಈ ಬೋಂಬಿನ ಹಾವಳಿಯಿಂದ ತಪ್ಪಿಸುವ ಉಪಾಯ. ಸುಡುವ ಬೋಂಬೆಸೆಯಲ್ಪಟ್ಟರೆ ಬೆಂಕಿಯೇಳುವುದು. ಈ ಬೋಂಬು ಬರಿ ನೆಲದ ಮೇಲೆ ಬಿದ್ದಲ್ಲಿ ತನ್ನಷ್ಟಕ್ಕೇನೆ ಸುಟ್ಟುಹೋಗುವುದು. ಆದುದರಿಂದ ಅದರ ಹಾವಳಿಯನ್ನು ತಪ್ಪಿಸಿಕೊಳ್ಳುವುದಕ್ಕೂ ಕಟ್ಟಡಗಳನ್ನು ಬಿಟ್ಟು ಬಯಲಿಗೆ ಹೋಗಬೇಕು. ಬಿಸಿಲು, ಗಾಳಿ ಮತ್ತು ಶಾಕವು ವಿಷವಾಯುವಿನ ಹಾವಳಿಯನ್ನು ತಡೆಗಟ್ಟುವವಾದುದರಿಂದ ವಿಷವಾಯು ಬೋಂಬೆಸೆಯಲ್ಪಟ್ಟಾಗಲೂ ಮನೆಮಾರು ಬಿಟ್ಟು ಹೊರಗೆ ಬರಬೇಕು. ಮುಖ್ಯವಾಗಿ ವಿಮಾನ ಧಾಳಿಯೆಂದಾಕ್ಷಣ ದಿಗಿಲು ಗೊಂದಲವಿಲ್ಲದೆ ಕ್ರಮ ಮತ್ತು ಶಿಸ್ತಿನಿಂದ ಮನೆಮಾರು ಬಿಟ್ಟು ಬಯಲಿಗೆ ಹೋಗತಕ್ಕದ್ದು. ಪ್ರಥಮವಾಗಿ ವಿಮಾನ ಧಾಳಿ ನಡೆದಾಗ, ಬೋಂಬುಗಳಿಗಿಂತಲೂ ಜನತೆಯ ದಿಗಿಲಿನಿಂದ ಹೆಚ್ಚಿನ ಪ್ರಾಣಹಾನಿಯಾಗಿರುವುದು.

ನೆನಪಿಟ್ಟುಕೊಳ್ಳತಕ್ಕ ಕ್ರಮಗಳು

1. ಯಾವ ಸಂದರ್ಭದಲ್ಲೂ ದಿಗಿಲುಗೊಳ್ಳಬಾರದು.

2. ಯಾವ ರೀತಿಯ ವಿಮಾನಧಾಳಿಯೆಂಬುದನ್ನು ಪರೀಕ್ಷಿಸಿ ಆ ಪ್ರಕಾರ ಮುಂಜಾಗ್ರತೆ ತೆಗೆದುಕೊಳ್ಳಬೇಕು.

3 ಎಂತಹ ವಿಮಾನಧಾಳಿಗೆ ಯಾವ ಮುಂಜಾಗ್ರತೆ ತೆಗೆದುಕೊಳ್ಳತಕ್ಕದ್ದೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

4. ವಿಷವಾಯು ಉಪಯೋಗಿಸಲ್ಪಟ್ಟಲ್ಲಿ ಕಣ್ಣೆತ್ತಿ ಮೇಲೆ ನೋಡಬಾರದು. ಯಾಕೆಂದರೆ ವಿಷವಾಯು ಬಿಂದುಗಳು ಕಣ್ಣಿಗೆ ಅಪಾಯಕರವಿರುತ್ತವೆ.

5. ವಿಷವಾಯು ತಗಲಿದ ಪಕ್ಷದಲ್ಲಿ ಕೂಡಲೆ ಹೆಚ್ಚಿನ ಉಡುಪನ್ನು ತೆಗೆದುಹಾಕಿ ಆದಷ್ಟು ಹೆಚ್ಚು ತಂಪು ಗಾಳಿ ಸೇವಿಸಬೇಕು.

6. ಸುಡುವ ಬೋಂಬು ಬಿದ್ದು ಉರಿಯುವ ಕಟ್ಟಡದೊಳಕ್ಕೆ ಸಿಕ್ಕಿಬಿದ್ದರೆ ಕೈ ಮತ್ತು ಮೊಣಗಂಟುಗಳನ್ನೂರಿ ಹೊರಳಿಕೊಂಡು ಬರಬೇಕು. ಇದರಿಂದ ಎಡವಿ ಬೀಳುವ ಅಪಾಯವಿಲ್ಲ ಮಾತ್ರವಲ್ಲದೆ ಉಸಿರಾಡಲು ಬೇಕಷ್ಟು ವಾಯು ದೊರೆಯುವಂತಾಗುತ್ತದೆ.

7. ಸಿನೆಮಾ, ನಾಟಕ, ಸರ್ಕಸ್, ಮೊದಲಾದ ಪ್ರದರ್ಶನಗಳಿಂದ ಜನ ಗುಂಪು ಬರುವಾಗ, ಮೇಲೆ ಬೋಂಬೆಸೆಯುವ ವಿಮಾನವು ಹಾರಾಡುವುದು ತೋರಿಬಂದರೆ ನಿಂತಲ್ಲಿಯೇ ನಿಂತುಬಿಡಬೇಕು. ತಲೆಯ ಮೇಲೆ ಎತ್ತರದಲ್ಲಿ ಹಾರಾಡುವ ವಿಮಾನಕ್ಕೆ ನಿಶ್ಚಲ ಜನರನ್ನು ಗುರುತಿಸಲು ಸಾಧ್ಯವಾಗಲಾರದು ಚಲನೆಯಿಂದ ಮಾತ್ರ ಗುರುತು ಹಿಡಿಯಲ್ಪಡುವುದು.

8 ಬಾಗಿಲು ಮುಚ್ಚಲ್ಪಟ್ಟಿರುವ ಕೋಣೆಯೊಳಗೆ ಬೆಂಕಿಯೆದ್ದಿರುವುದೆಂಬ ಸಂದೇಹವುಂಟಾದರೆ ಬಾಗಿಲನ್ನು ಬಹಳ ಜಾಗರೂಕತೆಯಿಂದ ತೆರೆಯಬೇಕು. ಗಾಳಿಯ ಒತ್ತಾಟದಿಂದ ಬಾಗಿಲೊಡೆದು ಬೆಂಕಿಯು ನಿಮ್ಮನ್ನು ಸುಟ್ಟು ಹಬ್ಬುವ ಅಪಾಯವಿರುತ್ತದೆ.

9. ನೆಟ್ಟಗೆ ತಲೆಯ ಮೇಲೆ ಬೋಂಬು ಬಂದು ಬೀಳುವುದೆಂಬ ಭಯವೇ ಬೇಡ. ನೆಟ್ಟಗೆ ಜನರ ಮೇಲೆ ಗುರಿಯಿಟ್ಟು ಬೋಂಬೆಸೆಯುವುದು ಬಹಳ ಕಷ್ಟಸಾಧ್ಯ.

10. ವಿಮಾನಧಾಳಿಯು ದೇಶದ ಗಂಡಾಂತರದ ಕಾಲ. ಈ ಸಂದರ್ಭದಲ್ಲಿ ಶಾಂತವಾಗಿ ಶಿಸ್ತಿನಿಂದಿರುವುದರಿಂದ ಹೆಚ್ಚಿನ ಪ್ರಾಣಹಾನಿಯನ್ನು ನಿವಾರಿಸಬಹುದು.

THE
BOMBAY LIFE ASSURANCE
Company Limited.
(ESTD. 1908)
COMPARE
Your Life Assurance with any other property you possess what is its guaranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS	Visweswarapuram Circle BANGALORE CITY.	Charni Road Girgaum BOMBAY No. 1.
Car Street, MANGALORE.	Puthiyara, CALICUT.	Central Station Road, TRIVANDRUM.

"**Wanted**-a Branch Agency Manager on a monthly salary of Rs. 250/- for our Agency Office to be opened either at Belgaum or Mangalore. Only those who can write a test business of Rs 75,000/- before 28th February 1940 need Apply Messrs. Padubidri Bros, Chief Agents. Maharashtra and Karnataka, East & West Insurance Co. Ltd., Bombay 8."

ಗಾಂಧೀಜಿಯವರ ಮೇಲೆ ಅಸಹ್ಯ ಆರೋಪ

ಲೋಕದ ಅತಿ ದೊಡ್ಡ ಮಹಾಪುರುಷರ ಮೇಲೆ ಕಾಮಾಸಕ್ತಿಯ ಅಪವಾದ! ಮಹಾತ್ಮರ ಬ್ರಹ್ಮಚರ್ಯ ನಿಷ್ಠೆ. ಸ್ತ್ರೀಯರ ಮೇಲಿನ ಮಾತೃಸಮಾನ ಸಹಜ ಪ್ರೇಮ. ಗಾಂಧಿಯವರು ಕಾಮಾಸಕ್ತರಿದ್ದಾರೆ, ಶ್ರೀಮತಿ ಡಾಕ್ಟರ್ ಸುಶೀಲ ನಾಯರ್, ಶ್ರೀಮತಿ ಮೀರಾಬೆನ್, ಶ್ರೀಮತಿ ಪ್ರೇಮಾಬೆನ್ ಕಂಟಕರೇ ಮೊದಲಾದ ಮಹಿಳೆಯರೊಡನೆ ಅನೈತಿಕ ಸಂಬಂಧವುಳ್ಳವರಿರುತ್ತಾರೆಂದು ಸನಾತನಿಗಳು ಮಹಾತ್ಮರಂತಹ ಮಹಾಸಂತರ ಮೇಲೆ ಅಪವಾದ ಹೊರಿಸಿ ತಮ್ಮ ಕ್ಷುದ್ರ ಮನೋವೃತ್ತಿಯನ್ನು ಚೆನ್ನಾಗಿ ಪ್ರತಿಬಿಂಬಿಸಿರುತ್ತಾರೆ.

ನನಗೆ ಸ್ತ್ರೀಯರ ಮೇಲೆ ಕಾಮಾಸಕ್ತಿಯಿದ್ದರೆ, ಈ ಪ್ರಾಯದಲ್ಲಾದರೂ ಅದನ್ನು ತೃಪ್ತಿಪಡಿಸಿಕೊಳ್ಳುವಷ್ಟರ ಧೈರ್ಯವಿದೆ. ತನ್ನ ಜೀವನದಲ್ಲಿ ಗುಪ್ತತೆಯೇನೂ ಇಲ್ಲ. ತನ್ನ ದುರ್ಬಲತೆಗಳನ್ನೂ ಕಾನೊಪ್ಪಿರುವೆನು. ತಾನು ಕಾಮವಾಸನೆಗೆ ಬಲಿಬಿದ್ದಿದ್ದರೆ ಅದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಿದ್ದೆನೆಂದು ಗಾಂಧಿಜಿಯವರು ಪ್ರಕಟಿಸಿರುವರು.

ದ್ವೇಷಸಾಧನೆಯು ಎಂತಹ ವಿವೇಕಿಗಳನ್ನಾದರೂ ಕುರುಡುಗೊಳಿಸಿಬಿಡುವುದು. ದ್ವೇಷದ ದೃಷ್ಟಿ ದೋಷದಿಂದಾಗಿ ವೈರಿಯ ಸದ್ಗುಣಗಳೂ ದೊಡ್ಡ ದುರ್ಗುಣಗಳಾಗಿ ತೋರಿಬರುವವು. ಆದರೆ ತನ್ನ ಜೀವನದ ಎಂತಹ ವಿದ್ಯಮಾನವನ್ನಾದರೂ ಗುಟ್ಟಾಗಿರಿಸಿಕೊಳ್ಳದೆ ಜನತೆಯ ಮುಂದೆ ಹೃದಯವನ್ನು ತ್ರಿಕರಣ ಶುದ್ಧವಾಗಿ ತೆರೆದಿಟ್ಟಿರುವ, ಲೋಕದ ಮಹಾಪುರುಷರೂ ಮಹಾಸಂತರೂ ಆದ ಗಾಂಧಿಜಿಯವರ ಮೇಲೆ ಕಾಮಾಸಕ್ತಿಯ ಆರೋಪಹೊರಿಸುವಷ್ಟು ಕೊಳಕು ಮನೋವೃತ್ತಿಯನ್ನು ಸನಾತನಿಗಳು ತೋರಿಸಿರುವರೆಂದರೆ ಸರ್ವಸಾಮಾನ್ಯ ಜನರು ಚಕಿತರಾಗಿ ಹೋಗಬಹುದು. ಸೂರ್ಯನಿಗೆ ಉಗುಳಿದರೆ ಉಗುಳಿದ ಮುಖಕ್ಕೇನೇ ಉಗುಳು ಬಿದ್ದು ಹೊಲಸಾಗುವುದೆಂಬ ಮಾತು ಈ ಸನಾತನಿಗಳ ಮನೋವೃತ್ತಿಯನ್ನು ಚೆನ್ನಾಗಿ ಚಿತ್ರಿಸುತ್ತಿದೆ.

ಸೇಕಡ 90ರಷ್ಟರ ಈ ಸನಾತನಿಗಳು ಕಾಮಾಂಧ ದುರಾಚಾರಿಗಳು. ತೋರುವಿಕೆಗೆ ದೊಡ್ಡ ಧರ್ಮನಿಷ್ಠರು, ವೇದಾಂತಿಗಳು, ಸಾಧುಸಂತರೆನ್ನಿಸಿಕೊಂಡು ಒಳಗಿಂದೊಳಗೆ ಎಂತಹ ಹೇಯ ಕೃತ್ಯವನ್ನಾದರೂ ಮಾಡ ಹೇಸದ ಆತ್ಮವಂಚಕ ಹೇಡಿಗಳು. ಇಂಥವರ ರೀತಿನೀತಿಗಳಿಂದಲೇ ಮಿಸ್ ಮೇಯೋಳಂಥವರು ಹಿಂದೂದೇಶದ ಕೀರ್ತಿಗೆ ದೊಡ್ಡ ಕಳಂಕ ತರುವ ಗ್ರಂಥಗಳನ್ನು ಬರೆಯುವಂತಾಗಿರುವುದು. ಬಾಯಿಯಲ್ಲಿ ಎಷ್ಟೊಂದು ಉದಾತ್ತತತ್ವ ಮತ್ತು ನೀತಿಶಾಸ್ತ್ರವನ್ನವರು ಹೇಳುವರೋ ಅಷ್ಟೇ ವಿಷಯ ಲಂಪಟ ಸ್ತ್ರೀ ವ್ಯಾಮೋಹಕೆ ಮತ್ತು ಅತ್ಯಂತ ಕ್ಷುದ್ರಸ್ವಾರ್ಥಪರ ಆಚರಣೆಯುಳ್ಳವರಿದ್ದಾರೆ. ಗಾಂಧಿಜಿಯವರ ಮೇಲೆ ಕಾಮವಾಸನೆಯ ಆರೋಪ ಹೊರಿಸಿ ಸನಾತನಿಗಳು ತಮ್ಮ ಮನೋವೃತ್ತಿಯನ್ನು ಚೆನ್ನಾಗಿ ಪ್ರದರ್ಶಿಸಿರುತ್ತಾರೆ.

ಮಹಾತ್ಮರು ಇಂತಹ ಕ್ಷುದ್ರ ಮನೋವೃತ್ತಿಗೆ ಸೊಪ್ಪು ಹಾಕುವವರಲ್ಲ. ಆದರೆ ಇಂಗ್ಲೆಂಡ್ ಅಮೇರಿಕಗಳಲ್ಲೂ ಈ ಅಪವಾದವು ಹಬ್ಬಿ ಪ್ರಚಾರವಾಗಿರುವುದೆಂದು, ಇತ್ತಲಾಗಿ ಗಾಂಧಿಜಿಯವರನ್ನು ಸಂದರ್ಶಿಸಿದ್ದ ಪ್ರಖ್ಯಾತ ಗ್ರಂಥಕರ್ತರಾದ ಮಿ ಎಡ್ವರ್ಡ್ ಥೋಮಸರು ಅವರಿಗೆ ತಿಳಿಸಿರುವರು. ಆದುದರಿಂದ ಮಹಾತ್ಮರು ಆ ಸಂಬಂಧವಾಗಿ ಹರಿಜನದಲ್ಲಿ ಈ ಕೆಳಗಣ ಲೇಖನ ಬರೆದಿರುವರು.

ನಾಲ್ಕೈದು ಮಂದಿ ಗುಜರಾಥಿಗಳು ಸಹಿ ಹಾಕಿ ನನಗೊಂದು ಪತ್ರ ಬರೆದು, ಹಿಂದು ಸಂಘಟನೆಯ ಉದ್ದೇಶದಿಂದ ಪ್ರಕಟವಾಗುವ ಪತ್ರಿಕೆಯ ಪ್ರತಿಯೊಂದನ್ನು ಕಳುಹಿಸಿರುವರು. ನನ್ನ ಮಾನಸಾಂತರಗಳಿಗೇನೇ ಬೇರೆ ಬೇರೆ ಬಣ್ಣ ಕೊಟ್ಟು ಅವುಗಳ ಸನ್ನಿವೇಶಗಳಿಂದವನ್ನು ಕಿತ್ತು ತಮಗೆ ಬೇಕಾದಂತೆ ಚಿತ್ರಿಸಿ ನನ್ನ ಮೇಲೆ ನಾನಾ ಅಪವಾದ ಹೊರಿಸಲು ಅವನ್ನು ಪಯೋಗಿಸಲಾಗಿದೆ. ನನ್ನ ಬ್ರಹ್ಮಚರ್ಯವು ಕಾಮಾಸಕ್ತಿಯನ್ನು ಮರೆಸುವ ಮುಸುಕೆಂದು ಟೀಕಿಸಿ, ನನಗೆ ಪ್ರತಿದಿನ ಎಣ್ಣೆ ಹಾಕಿ ತಿಕ್ಕಿ ಅಭ್ಯಾಂಗ ಮಾಡಿಸುತ್ತಿರುವ ಶ್ರೀಮತಿ ಡಾಕ್ಟರ್ ಸುಶೀಲ ನಾಯರರ ಹೆಸರನ್ನು ಜನತೆಯ ಮುಂದೆ ತರಲಾಗಿದೆ. ಶ್ರೀಮತಿ ಡಾಕ್ಟರ್ ಸುಶೀಲ ನಾಯರರು ತೈಲಾಭ್ಯಂಗದ ವಿಷಯದಲ್ಲಿ ತಜ್ಞರಿರುತ್ತಾರೆ, ಇದರಲ್ಲಿ ಗುಪಿತವೇನೂ ಇರುವುದಿಲ್ಲ. ಪ್ರತಿದಿನ ಸುಮಾರು 1½ ಘಂಟೆಗಳ ವರೆಗೆ ಈ ಕೆಲಸವು ಜಾಹೀರಾಗಿಯೇ ನಡಿಸಲ್ಪಡುತ್ತದೆ. ಆಗ ಒಮ್ಮೊಮ್ಮೆ ನಾನು ನಿದ್ದೆ ಹೋಗಿಬಿಡುವೆನು. ಇಲ್ಲವೆ ಶ್ರೀಗಳಾದ ಮಹದೇವ ದೇಸಾಯಿ, ಪ್ಯಾರಿಲಾಲರೇ ಮೊದಲಾದ ಸಹ ವ್ಯವಸಾಯಿಗಳೊಂದಿಗೆ ಏನಾದರೂ ಕೆಲಸ ಮಾಡುವೆನು.

ನಾನು ಅಸ್ಪೃಶ್ಯತೆಯ ವಿರೋಧವಾಗಿ ಪ್ರಬಲ ಚಳವಳ ನಡಿಸಿದಂದಿನಿಂದ, ಆ ವರೆಗೆ ಮೈತ್ರಿಯಿಂದಿದ್ದು ಸಹಾಯಕರಾಗಿದ್ದ ಸನಾತನಿಗಳು ನನ್ನನ್ನು ದ್ವೇಷಿಸಿ ನನ್ನ ಮೇಲೆ ಅಲ್ಲಸಲ್ಲದ ಅಪವಾದ ಹೊರಿಸತೊಡಗಿರುತ್ತಾರೆ. ಅನಂತರ ಅತಿ ದೊಡ್ಡ ಸ್ಥಾನ ಪಡೆದ ಆಂಗ್ಲೇಯ ಗೃಹಸ್ಥರೊಬ್ಬರು ಈ ಸನಾತನಿಗಳ ನಾಲಿಗೆ ಸೇರಿ, ನಾನು ಸ್ತ್ರೀಯರೊಡನೆ ಅತ್ಯಂತ ಸಲುಗೆಯಿಂದಿರುವುದನ್ನು ಟೀಕಿಸಿ ನಾನು ಸಾಧು ಸಂತನಲ್ಲ, ಪಾಪಚಾರಿಯೆಂದು ತೋರಿಸ ಬೆಳ್ಳಿಸಿದರು. ಸುಪ್ರಸಿದ್ಧರಾದ ಒಬ್ಬಿಬ್ಬ ಹಿಂದೀಯರೂ ಇವರೊಂದಿಗೆ ಸೇರಿದ್ದ ರೌಂಡ್ ಟೇಬಲ್ ಪರಿಷತ್ತಿನ ಸಂದರ್ಭದಲ್ಲಿ ಅಮೇರಿಕದ ಪತ್ರಿಕೆಗಳು ನನ್ನ ಕುರಿತು ಕ್ರೂರ ಅಪವಾದ ಹೊರಿಸಿ ನನ್ನ ಆರೈಕೆ ನೋಡುತ್ತಿದ್ದ ಶ್ರೀಮತಿ ಮೀರಾಬಾಯಿಯವರ ಕುರಿತು ಕ್ಷುದ್ರ ಅಪಪ್ರಚಾರಮಾಡಿದ್ದವು.

ಸಬರ್ಮತಿ ಆಶ್ರಮ ಸದಸ್ಯೆಯಾಗಿದ್ದ ಶ್ರೀಮತಿ ಪ್ರೇಮಾಬೆನ್ ಕಂಟಕರಿಗೆ ನಾನು ಬರೆದಿರುವ ಪತ್ರಗಳನ್ನು ಕೂಡಾ, ನನ್ನ ದುರಾಚರಣೆಯನ್ನು ರುಜುಪಡಿಸಲು ಉಪಯೋಗಿಸಲಾಗಿದೆ. ಶ್ರೀಮತಿ ಪ್ರೇಮಾಬೆನ್ನರು ವಿಶ್ವವಿದ್ಯಾಲಯದ ಪದವೀಧರರು, ನುರಿತ ಸಾರ್ವಜನಿಕ ಕೆಲಸಗಾರರು, ಬ್ರಹ್ಮಚರ್ಯ ಮತ್ತು ಇತರ ಸಂಗತಿಗಳ ಕುರಿತು ಅವರು ನನಗೆ ಪ್ರಶ್ನೆ ಕೇಳಿ ನನ್ನಿಂದ ಸಮರ್ಪಕ ಉತ್ತರಗಳನ್ನು ಪತ್ರಮೂಲಕ ಪಡೆಯುತ್ತಿದ್ದರು. ಈ ಪತ್ರಗಳು ಜನಸಾಮಾನ್ಯರಿಗೆ ಪ್ರಯೋಜನಕರವಾಗಬಹುದೆಂದು ನನ್ನ ಸಮ್ಮತಿ ಪಡೆದು ಅವನ್ನವರು ಪ್ರಕಟಿಸಿದರು. ಈ ಪತ್ರಗಳು ಸಂಪೂರ್ಣ ನಿರ್ದುಷ್ಟ ಹಾಗೂ ನಿರ್ಮಲ ಅಂತಃಕರಣ ಪ್ರೇರಿತವಿರುತ್ತವೆ.

ನನ್ನ ಜೀವನದಲ್ಲಿ ರಹಸ್ಯವೆಂಬುದೇನೂ ಇರುವುದಿಲ್ಲ. ನನ್ನ ದೌರ್ಬಲ್ಯಗಳನ್ನೆಲ್ಲಾ ನಾನು ಮೊದಲೇ ಒಪ್ಪಿಕೊಂಡಿರುವೆನು. ನಾನು ಕಾಮಾಸಕ್ತನಾಗಿದ್ದರೆ ಅವನ್ನೊಪ್ಪುವ ಧೈರ್ಯವು ನನಗಿರುವುದು. ಪತ್ನಿಯೊಂದಿಗ ಕೂಡಾ ಕಾಮ ಭೋಗ ಕರವೆಂದರೆ ನಾನು ಹೇರಾ ಜುಗುಪ್ಸೆಗೊಂಡು, ನನ್ನನ್ನು ನಾನು ಚೆನ್ನಾಗಿ ಪರೀಕ್ಷೆ ಮಾಡಿಕೊಂಡ ಮೇಲೆಯೇ 1906ರಲ್ಲಿ ಬ್ರಹ್ಮಚರ್ಯ ದೀಕ್ಷಾಬದ್ಧನಾದೆನು. ಮಾತೃಭೂಮಿಯ ಸೇವನೆಗಾಗಿ ಜೀವನವನ್ನು ಉತ್ಕೃಷ್ಟವಾಗಿ ಸಮರ್ಪಿಸುವುದೇ ಅದರ ಉದ್ದೇಶವಾಗಿದ್ದಿತು. ಅಂದಿನಿಂದ ಜನತೆಯ ಮುಂದೆ ಯಾವುದನ್ನೂ ಮರೆಮಾಡದೆ ತೆರೆದಿಡುವ ನನ್ನ ಜೀವನಾರಂಭವಾಯಿತು.

ಆ ಮೇಲೆ ಯಂಗ್ ಇಂಡಿಯಾ ಮತ್ತು ನವಜೀವನದ ಲೇಖನಗಳಲ್ಲಿ ನಾನು ಸೂಚಿಸಿರುವ ಹೊರತು ಇತರ ಯಾವ ಸಂದರ್ಭದಲ್ಲೂ ನಾನು ನನ್ನ ಪತ್ನಿಯೊಂದಿಗೆ ಅಥವಾ ಇತರ ಸ್ತ್ರೀಯರೊಂದಿಗೆ ಬಾಗಿಲು ಹಾಕಿಕೊಂಡು ಇದ್ದಾಗಲೀ ಮಲಗಿದ್ದಾಗಲೀ ಇಲ್ಲ. ಆ ಲೇಖನಗಳಲ್ಲಿ ಸೂಚಿಸಿದ್ದ ದಿನಗಳು ನನ್ನ ಜೀವನದ ಕರಾಳರಾತ್ರಿಗಳಾಗಿದ್ದುವು. ಆದರೆ ದೇವರು ನನ್ನ ರಕ್ಷಣೆಗೆ ಬಂದಿರುವನು. ನನ್ನಲ್ಲಿರುವ ಯಾವ ಸದ್ಗುಣದ ಪ್ರಶಂಸೆಗೂ ನಾನು ಪಾತ್ರನಲ್ಲ. ಉತ್ತಮವಾದುದನ್ನೆಲ್ಲಾ ಕೊಡುವ ದಾತನಾದ ದೇವರೇ ನನ್ನನ್ನು ಆತನ ಸೇವೆಗಾಗಿ ರಕ್ಷಿಸಿರುವನು.

ನಾನು ಬ್ರಹ್ಮಚರ್ಯದೀಕ್ಷೆ ಒಪ್ಪಿದಂದಿನಿಂದ ನನ್ನಲ್ಲಿ ದಾಂಪತ್ಯಸ್ವಾತಂತ್ರ್ಯವುಂಟಾಯಿತು. ನನ್ನ ಪತ್ನಿಯು ಅವಳ ಒಡೆಯ ಮತ್ತು ಯಜಮಾನನಾದ ನನ್ನ ಅಧಿಕಾರ ವಿಮುಕ್ತಳಾಗಿ ಸ್ವತಂತ್ರಳಾದಳು. ಅವಳು ತೃಪ್ತಿಪಡಿಸಬೇಕಾಗಿದ್ದ ನನ್ನ ಕಾಮಲಾಲಸೆಯ ದಾಸ್ಯದಿಂದ ನಾನು ಮುಕ್ತನಾದೆನು. ನನ್ನ ಹೆಂಡತಿಯಂತೆ ಇನ್ನಾವ ಸ್ತ್ರೀಯೂ ನನ್ನನ್ನು ಆಕರ್ಷಿಸಿರುವುದಿಲ್ಲ. ನಾನವಳ ಅತ್ಯಂತ ವಿಧೇಯ ಪತಿಯಾಗಿದ್ದೆನು. ಮಾತೆಯ ಮುಂದೆ ತೆಗೆದುಕೊಂಡ ಪ್ರತಿಜ್ಞೆಗೆ ಅತಿ ವಿಧೇಯನಿದ್ದುದರಿಂದ ಇತರ ಸ್ತ್ರೀಯರ ದಾಸನಾಗಲು ನನಗೆ ಸಾಧ್ಯವೇ ಇದ್ದಿಲ್ಲ.

ನನ್ನ ಬ್ರಹ್ಮಚರ್ಯ ನಿಷ್ಠೆಯ ಪ್ರಭಾವದಿಂದಾಗಿ, ಪ್ರತಿಯೊಬ್ಬ ಸ್ತ್ರೀಯಲ್ಲೂ ನನಗೆ ಮಾತೃಸಮಾನ ಪ್ರೇಮೋತ್ಪನ್ನವಾಯಿತು. ಆ ಪವಿತ್ರ ಭಾವನೆಯಲ್ಲಿ ಕಾಮಾಸಕ್ತಿಗೆ ಅಸ್ಪದವೇ ಇಲ್ಲದಾಯಿತು. ಪ್ರತಿಯೊಬ್ಬ ಸ್ತ್ರೀಯೂ ನನಗೆ ಸಹೋದರಿ ಅಥವಾ ಪುತ್ರಿಯಂತಾದಳು. ದಕ್ಷಿಣ ಆಫ್ರಿಕದ ಫೀನಿಕ್ಸಿನ ಆಶ್ರಮದಲ್ಲಿ ನನ್ನೊಂದಿಗೆ ಹಲವು ಮಂದಿ ಸ್ತ್ರೀಯರಿದ್ದರು. ಇವರಲ್ಲಿ ಕೆಲವರು ನಾನು ಆಕರ್ಷಿಸಿ ಕರೆತಂದಿದ್ದ ನನ್ನ ಸಂಬಂಧಿಕರು, ಇತರರು ನನ್ನ ಸಹೋದ್ಯೋಗಿಗಳ ಪತ್ನಿಯರು ಅಥವಾ ಸಂಬಂಧಿಕರು. ಇವರಲ್ಲಿ ವೆಸ್ಟರೇ ಮೊದಲಾದ ಆಂಗ್ಲೇಯರು ಮತ್ತು ಅವರ ಕುಟುಂಬಗಳ ಸ್ತ್ರೀಯರೂ ಇದ್ದರು.

ಹೊಸತಾದ ಒಂದೇ ಸಂಗತಿಯನ್ನೇನಾದರೂ ನಾನು ನನ್ನ ಹೊಟ್ಟೆಗೇನೇ ಇಟ್ಟುಕೊಳ್ಳಲಾರೆ. ಅಂತೆಯೇ ನಾನು ಫೀನಿಕ್ಸಿನ ಆಶ್ರಮವಾಸಿಗಳೆಲ್ಲರೂ ಬ್ರಹ್ಮಚರ್ಯ ವ್ರತಧಾರಿಗಳಾಗಬೇಕೆಂದು ತಿಳಿಸಿದೆ. ಎಲ್ಲರೂ ಅದಕ್ಕೊಪ್ಪಿ ಕೆಲವರು ಕೊನೆಯವರೆಗೂ ಆ ಆದರ್ಶದ ಮೇರೆಗೇನೇ ನಡೆದರು. ನನ್ನ ಬ್ರಹ್ಮಚರ್ಯದಲ್ಲಿ ಕಠಿಣನಿಷ್ಠೆ, ಕಟ್ಟುನಿಟ್ಟೇನೂ ಇಲ್ಲ. ಸಂದರ್ಭಾನುಸಾರ ಬೇಕಾ

(ಪುಟ ೧೭ಕ್ಕೆ ಮುಂದುವರಿದಿದೆ.)

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೦—೧೦—೦ ಚಿಕ್ಕದು ೦—೫—೦

„ ಮುಚ್ಚಳದ್ದು ೦—೧೨—೦ „ ಮುಚ್ಚಳದ್ದು ೦—೭—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.

GENERAL SUPPLIES LIMITED

UDIPI - - - - S. INDIA

ಈ ವಾರದ ಕತೆ

ಮೂಢ ನಂಬಿಕೆಗೆ ನವತರುಣಿಯ ಪ್ರಾಣ ಬಲಿದಾನ.

"ಆಹಾ! ನನ್ನ ಮಾಲತಿ ಎಂತಹ ನಿರ್ಮಲ ಕುಸುಮ! ಎಷ್ಟೊಂದು ಮೃದು ಮಧುರ ಸ್ವಭಾವ ಅವಳದು! ಹದಿನೆಂಟರ ನಡುಯೌವನದ ಸೊಬಗು ಮತ್ತು ಆರೋಗ್ಯದೇರಕದಿಂದ ಸ್ಫುರದ್ರೂಪಿಯಾಗಿರುವ ಈ ಮುಗುದೆಯನ್ನು ನಾನು ಮದುವೆ ಮಾಡಿಕೊಂಡು ಫಲವೇನು? ನನ್ನಂತಹ ಹತಭಾಗ್ಯನಿಗೆ ಇಂತಹ ನಿರ್ದುಷ್ಟ ಯುವತಿಯನ್ನೇಕೆ ವಿಧಿಯು ಸಂಘಟಿಸಿದ? ರಾತ್ರಿಯೆಲ್ಲಾ ಅಫೀಮಿನ ಮತ್ತಿನಿಂದ ಮೈಮರೆತು ಬಿದ್ದಿರುವ ಪಶುವಾದ ನನ್ನಿಂದ ಈ ಪಾವನ ಪ್ರೇಮಮಯಿಯು ಪಡುವ ಸುಖವಾದರೂ ಏನು? ಆದರೂ ಅದೆಂತಹ ವಿಧೇಯತೆಯು, ಸ್ಥಿರನಿಷ್ಠೆಯು ಪ್ರಕಾಶ ಕಣ್ಣಾಲಿಗಳಲ್ಲಿ! ಎಷ್ಟೊಂದು ಅನುಕಂಪ ಮತ್ತು ಕಾತರ ವದನಾರವಿಂದದಲ್ಲಿ! ರಾತ್ರಿಯೆಲ್ಲಾ ನನ್ನ ಕಾಲಡಿ ಕೂತು ಅದೆಷ್ಟು ಕಣ್ಣೀರಿಡುತ್ತಿರುವಳೋ ಸಹನೆಯ ಪ್ರತಿಮೂರ್ತಿ! ಅವಳ ಕೋಮಲ ಹೃದಯವೆಷ್ಟು ಸಂತಪ್ತವಾಗುವುದೋ? ನನಗೇಕೆ ಬೇಕಿತ್ತು ವಿವಾಹ! ಆಹ! ಮಾಲತಿಯಂತಹ ಸ್ತ್ರೀಯು ನನ್ನ ಪಾಲಿನ ಭಾಗ್ಯದೇವತೆಯಾಗಿ ಬರುವಳೆಂದು ಕನಸಿನಲ್ಲಾದರೂ ತಿಳಿವಂತಾಗಿದ್ದರೆ! ಛೆ! ಕಾಮಾಂಧನಾಗಿ ಆ ನಾಗಿಣಿಯರ ಬಲೆಗೆ ಬಿದ್ದು ಕ್ಷಣಿಕ ಮಾದಕದಮಲಿಗಾಗಿ ಚಿರದಾಂಪತ್ಯ ಸುಖಾಮೃತವನ್ನೇ ಬಲಿಕೊಡುತ್ತಿದ್ದನೇ! ಹಾಯ್, ಹಾಯ್! ನಾನೇನು ಮಾಡಲಿ. ಅತ್ತ ಹುಲಿ, ಇತ್ತ ಹೆಬ್ಬಾವು. ಎತ್ತ ಹಾರಲಿ! ಅಫೀಮು ಬಿಟ್ಟರೆ ಅಸಹನೀಯ ರೋಗದುಪದ್ರವ, ಸೇವಿಸಿದರೆ ಜೀವನ್ಮೃತ! ಪಾಪ, ಆ ನಿರ್ದುಷ್ಟ ಬಾಲೆಗೇನು ಗೊತ್ತು ನನ್ನ ಅವಸ್ಥೆ! ಶ್ರೀಮಂತಿಕೆಯನ್ನು ಮತ್ತು ಸಮಾಜದಲ್ಲಿ ನನ್ನ ಕುಟುಂಬದ ಸ್ಥಾನಮಾನವನ್ನು ಪರಿಗಣಿಸಿ ಮಾಲತಿಯನ್ನು ಕಟ್ಟಿದರು ನನ್ನ ಕೊರಳಿಗೆ ಅವಳ ಹೆತ್ತವರು. ನಾನು ಹೇಳಬೇಕಿತ್ತು ಮದುವೆ ಬೇಡವೆಂದು. ಮದುವೆಯೇ ಆಗುವುದಿಲ್ಲೆಂದು. ಆ ನೈತಿಕ ಬಲವಾದರೂ ಎಲ್ಲಿ ಈ ದುರಾಚಾರಿ ಹೇಡಿಯಲ್ಲಿ! ನಾನಂತೂ ಮೊದಲೇ ಸದ್ಗತಿಮಾಡಿಕೊಂಡಿರುವೆನು! ನನ್ನ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗಲೇಬೇಕು. ಆದರೆ ಇಂದು ತಾನೆ ಅರಳಿ ಲೋಕಕ್ಕೆ ಮಧುಮಾಧುರ್ಯ ಬೀರುವ ನವಕುಸುಮದಂತಿರುವ ಈ ಮಾಲತಿಯು ಮಾಡಿದ ತಪ್ಪಾದರೂ ಏನು? ಅವಳೇಕೆ ನನ್ನ ಪಾಪದಲ್ಲಿ ಪಾಲುಪಡೆಯಬೇಕು?" ಎಂಬೀ ಉದ್ವೇಗಪರಭಾವನಾತರಂಗಗಳು ಮುಂಜಾನೆ ಅಫೀಮಿನ ಗುಂಗಿನಿಂದ ಮೈಕೊಡಹಿ ಎಚ್ಚತ್ತ ಮಧುಕರನ ಮೆದುಳಿನಲ್ಲಿ ತುಂಬಿ ಆತನನ್ನು ಧೃತಿಗೆಡಿಸಿಬಿಟ್ಟುವು. ದಿಕ್ಸೂಚಿ ಮುರಿದ ನಾವಿಕನಂತಾಗಿದ್ದನವನು. ಏನು ಮಾಡುವುದೆಂದು ತಿಳಿಯದೆ ತುಸು ಹೊತ್ತು ಕಣ್ಣೀರಿಡುತ್ತಾ ಇದ್ದಲ್ಲಿಯೇ ಬಿದ್ದುಕೊಂಡನು. ಆ ವೇಳೆ ಶ್ವಾಸೋಚ್ಛ್ವಾಸವನ್ನು ನಿರೋಧಿಸಿದ್ದ ತಡೆಯೊಂದು ಒಮ್ಮೆಯೇ ಹಾರಿಹೋದಂತೆ ಫಕ್ಕನೆ ದೀರ್ಘಶ್ವಾಸಬಿಟ್ಟು ಅದೇನೋ ನಿರ್ಧಾರಕ್ಕೆ ಬಂದವನಾಗಿ ಎದ್ದನು. ಒಮ್ಮೆಗೆ ಆತನ ನಿರ್ಧಾರವು ಒಂದು ಬಗೆಯ ಸಮಾಧಾನವನ್ನುಂಟುಮಾಡಿತು ಅವನಲ್ಲಿ. ಆ ಕಿರಣವೊಂದು ಚಮಕಿಸಿತಾತನ ಕಾರಿರುಳು ಕವಿದ ಜೀವನದಲ್ಲಿ.

ಬರುವ ವಾರದ ಕತೆ— **ಪುರುಷರೆಲ್ಲರೂ ಕಾಮಾಂಧರು !**

ಮಧುಕರನು ಸಂಪೂರ್ಣಪ್ರಜ್ಞೆಗೆ ಬಂದು ನೋಡುವಾಗ ಕೋಣೆಯ ಒಂದು ಮೂಲೆಯ ಚಿಕ್ಕ ಮೇಜಿಯ ಮೇಲೆ ಬಿಸಿನೀರ ಚೆಂಬು, ಕಪ್ ಮತ್ತು ಚಹಾದ ಕೆಟ್ಲ್ ಇಡಲ್ಪಟ್ಟಿತ್ತು. ಮಾಲತಿಯು ಯಾವಾಗ ಬಂದು ಚಹಾಮಾಡಿ ತಂದಿಟ್ಟು ಹೋದುದು, ಮಧುಕರನ ಹೃದಯವೀಣಾ ತಂತಿಗಳೆಲ್ಲವೂ ಒಮ್ಮೆಯೇ ಮಿಡುಕಿಸಲ್ಪಟ್ಟವು. ಅವನು ಪುನಃ ಸ್ವಲ್ಪ ಸಮಯ ಕೋಣೆಯಲ್ಲೇ ಅತ್ತಿತ್ತ ತಿರುಗಾಡಿದನು. ಕಂಗಳಲ್ಲಿ ನೀರು ತುಂಬಿ ಬಂತು. ತನ್ನ ಮೊದಲಿನ ನಿರ್ಧಾರವನ್ನು ಮತ್ತಷ್ಟು ದೃಢಪಡಿಸಿ ಬಿಸಿನೀರ ತಂಬಿಗೆ ತೆಗೆದು ಮತ್ತೊಂದು ಮೂಲೆಯಲ್ಲಿರುವ ಬೇಸಿನಿನಲ್ಲಿ ಮುಖತೊಳೆದು ಬಿಸಿಬಿಸಿ ಚಹಾ ಕುಡಿದು ಸಿಗರೇಟ್ ಹಚ್ಚಿ ಆರಾಮ ಕುರ್ಚಿಯಲ್ಲಿ ಕೂತು ಅದನ್ನೆಳೆಯುತ್ತಾ ಚಿಂತಾಮಗ್ನನಾದನು.

೦೦ ೦೦ ೦೦

ಮಧುಕರನು ರೋಗ ಬಾಧೆ ತಡೆಕೊಳ್ಳಲಾರದೆ ಹಾಸಿಗೆ ಹಿಡಿದಿದ್ದಾನೆ. "ಏನು? ಏನಾಗುತ್ತಿದೆ ನಿಮಗೆ? ಡಾಕ್ಟರರನ್ನು ಕರತರಿಸಲೇ? ಏನು ಹೇಳಿರಿ! ದಯಮಾಡಿ ತಿಳಿಸಿರಿ!" ಆ ವರೆಗೆ ಬಾಯ್ಬಿಟ್ಟು ಪತಿಯೊಡನೆ ಮಾತನಾಡದ ಮಾಲತಿಯು ಮಧುಕರನ ಮೇಲೆ ಪ್ರಶ್ನೆಗಳ ಮಳೆಗರೆದು ಅಂಗಲಾಚಿ ಬೇಡಿಕೊಂಡಳು. "ನನ್ನಾಣೆ ಉಂಟು ಮಾಲತಿ ಡಾಕ್ಟರರನ್ನು ತರಿಸಿದರೆ! ನನಗೆ ಸ್ವಲ್ಪ ಹೊಟ್ಟೆ ನೋವು ಮಾತ್ರ. ಏನೋ ಅಜೀರ್ಣವಾಗಿರಬೇಕು. ನಾನೇ ಒಂದು ಮಾತ್ರೆ ತೆಗೆದುಕೊಂಡಿದ್ದೇನೆ ಅದಕ್ಕೆ. ಬೇಗನೆ ಗುಣವಾದೀತು. ನೀನೇನು ತಳಮಳಗೊಳ್ಳಬೇಡ." ಎಂದು ಮಧುಕರನು ಮಾಲತಿಯನ್ನು ಸಮಾಧಾನ ಪಡಿಸಿದನು. ಆದರೆ ಅವನು ಸಮಾಧಾನ ಪಡಿಸಿದಷ್ಟು ಅವಳ ದುಃಖ ಹೆಚ್ಚುತ್ತಿತ್ತು. ಹೀಗೆಯೇ ಕೆಲವು ದಿನಗಳು ಸಂದು ಹೋದವು. ಮಧುಕರನ ಕಾಯಿಲೆಯು ಗುಣವಾಗುವ ಬದಲಿಗೆ ದಿನೇ ದಿನೇ ಹೆಚ್ಚಾಗುತ್ತಾ ಹೋಯಿತು. ಅವನು ಡಾಕ್ಟರನ್ನು ಕರೆಸಲು ಎಷ್ಟಕ್ಕೂ ಕೇಳಲಾರ. ಮಾತುಮಾತಿಗೆ ತನ್ನಾಣೆ ಹಾಕಿಬಿಡುವನು. ಮಾಲತಿಯು ಏನು ಮಾಡಬೇಕೆಂದು ತಿಳಿಯದೆ ಕಂಗೆಟ್ಟಳು. ತನ್ನಾಣೆ ಹಾಕಿ ಹೇಳುವ ಪತಿಯ ಮಾತನ್ನು ಆ ವಿಧೇಯ ಸತಿಯು ಮೀರುವುದಾದರೂ ಎಂತು? ಏನಾದರೂ ಸರಿ, ಅಫೀಮನ್ನು ತೆಗೆದುಕೊಳ್ಳಲಾರೆನೆಂದು ಮಧುಕರನು ನಿರ್ಧಾರ ಮಾಡಬಿಟ್ಟಿದ್ದನು. ಆದರೆ ಅದನ್ನು ಮಾಲತಿಗೆ ತಿಳಿಸಲಿಲ್ಲ.

ಧೃತಿಗೆಟ್ಟ ತರುಣ ಪತ್ನಿ ಮಾಲತಿಯು ಅಪಶಕುನಗಳನ್ನು ಕಾಣಹತ್ತಿದಳು. ಒಂದು ದಿನ ಮುಂಜಾನೆ ಎದ್ದು ಹೊರ ಬರುವಾಗ, ಖಾಲಿ ಗಡಿಗೆಯೊಂದನ್ನು ಒಬ್ಬಳು ಹೊತ್ತುಕೊಂಡು ಎದುರು ಬರುತ್ತಿದ್ದಳು. "ಹಾ! ದುಶ್ಶಕುನ!" ಎಂದು ಮಾಲತಿಯ ಎದೆ ಡಬ್ಬೆಂದಿತು. ಆಮೇಲೆ ಬೆಕ್ಕೊಂದು ಅವಳದಾರಿನಡುವೆ ಹಾದುಹೋಯಿತು. ಅನಂತರ ಒಂದು ಟಂಬ್ಲರ್ ಹಾಲು ಅವಳ ಕೈತಪ್ಪಿ ನೆಲಕ್ಕೆ ಬಿದ್ದು ಒಡೆಹೋಯಿತು. ಇಷ್ಟರಲ್ಲೇ ಮುಗಿಯಲಿಲ್ಲ. ಮಾಲತಿಯ ಕೈ ಬಳೆಗಳು ಆಕಸ್ಮಿಕವಾಗಿ ಗೋಡೆಗೆ ಬಡಿದು ಪುಡಿಪುಡಿಯಾದುವು. ಇಷ್ಟೆಲ್ಲಾ ಅಪಶಕುನಗಳು ಒಂದರ ಹಿಂದೊಂದು, ಉಂಟಾದ ಮೇಲೆ ತನ್ನ ಗಂಡನ ಸಾವು ನಿಶ್ಚಯವೆಂದವಳು ಬಗೆದಳು. ನೆರೆಯ ಅನುಭವಸ್ಥ ಹೆಂಗಸೊಬ್ಬಳೊಡನೆ ನಡೆದ ಸಂಗತಿಗಳನ್ನೆಲ್ಲಾ ಹೇಳಿ ಅತ್ತಳು. ಅವಳೂ ಮಾಲತಿಯ ಭಯವನ್ನು ಮತ್ತಷ್ಟು ಬಲಪಡಿಸಿದಳು. ಪತಿ ಸತ್ತು ತಾನಿದ್ದೇನು? ಮಾಲತಿಯು ಎಂದು ತನ್ನ ನಿರ್ಧಾರಮಾಡಿ ಯಾವಾಗ ರಾತ್ರಿಯಾಗುವುದೆಂದು ನಿರೀಕ್ಷಿಸುತ್ತಾ ಕ್ಷಣಗಳನ್ನು ಜಾಮದಂತೆ ದೂಡಿದಳು. ಕತ್ತಲಾಗುವಷ್ಟರಲ್ಲಿಯೇ ನೆಟ್ಟಗೆ ಉಪ್ಪರಿಗೆಗೆ ಹೋಗಿ ದೀಪ ಹಚ್ಚಿ ಪತಿಯ ಕಾಲು ಹಿಡಿದು ಕಣ್ಣೀರಿಟ್ಟಳು. "ಅದೇಕೆ ಮಾಲತಿ ಕಾಲು ಹಿಡಿದೆ? ಇಂದೇನು ಬಹಳ ಕಂಗೆಟ್ಟಿರುವೆ? ಏಕೆ ಒಂದೇ ಸವನೆ ಕಣ್ಣೀರಿಳಿಸುವೆ? ಪ್ರಿಯತಮೆ, ನಿನಗೆ ಈಶ್ವರನು........" ಎನ್ನುವಷ್ಟರಲ್ಲಿ ಮಧುಕರನ ಕಂಠವು ರುದ್ಧವಾಯಿತು. ಅವನೂ ಮಾಲತಿಯನ್ನು ಎವೆಯಿಕ್ಕದೆ ನೋಡುತ್ತಿರುವಂತೆ ಕಣ್ಣೀರು ತುಂಬಿಬಂತು. ಮಾಲತಿಗದು ಅಸಹನೀಯವಾಯಿತು. ಏನೋ ಮಾತಾಡಬೇಕೆಂದವಳು ಬಹಳವಾಗಿ ಪ್ರಯತ್ನಿಸಿದಳು. ಪ್ರಯತ್ನಿಸಿದಷ್ಟು ಸಲ ದುಃಖವು ಮುಂದಾಗಿ ಮಾತನ್ನು ಹಿಂದೆ ಹಾಕಿಬಿಟ್ಟಿತು. ಅವಳೊಮ್ಮೆ ತನ್ನ ಪ್ರಿಯತಮನ ಮುಖವನ್ನು ಕಣ್ಣೆತ್ತಿ ನೋಡಿದಳು. ಮದುವೆಯಾದ ಮೇಲೆ ಹೀಗೆ ಕಣ್ಣೆತ್ತಿ ಮಧುಕರನ ಮುಖವನ್ನೀಕ್ಷಿಸಿದುದು ಇದೇ ಮೊದಲವಳು. ಆಮೇಲೆ ಧರಧರನೆ ಇಳಿದುಬರುವ ಕಣ್ಣೀರನ್ನು ಸೆರಗಿನಿಂದೊರಸಿ ಫಟ್ಟನೆ ಉಪ್ಪರಿಗೆಯಿಂದಿಳಿದು ಹೋದಳು. ಅವಳ ನೂಪುರಗಳ ಝಣತ್ಕಾರವು ಮೆಟ್ಟಿಲಿಳಿದು ಹೋದಂತೆ ಕಡಿಮೆ ಕಡಿಮೆಯಾಗಿ ಕಡೆಗೆ ಕೇಳದೆಹೋದಂತೆಲ್ಲಾ ಮಧುಕರನ ಎದೆವೀಣೆಯ ತಂತಿಗಳೊಂದೊಂದೇ ತುಂಡಾಗುವಂತಾಗುತ್ತಿತ್ತು.

ಮಾಲತಿಯು ಕೆಳಗೆ ಹೋದವಳೇ ಒಂದು ಕೋಣೆಗೆ ಪ್ರವೇಶಿಸಿ ಬಾಗಿಲು ಹಾಕಿದಳು. ಆಗ ಸರಿ ಕತ್ತಲಾಗಿತ್ತು. ಸೀರೆಗೆ ಚಿಮಣಿ ಎಣ್ಣೆ ಹೊಯ್ದು ಬೆಂಕಿ ಕೊಟ್ಟು ಪತಿಯ ಚಿತೆಯ ಮೇಲೆ ನಿಂತ ವೀರ ಸತಿಯಂತೆ ಜೀವನವನ್ನು ಕೊನೆಗೊಳಿಸಿದಳು. ರೋಗಶಯ್ಯೆಯಲ್ಲಿರುವ ಪತಿಯು ಇದರಿಂದ ಸ್ತಂಭಿತನಾದನು. ಆ ಮೇಲೆ ಮಗುವಿನಂತೆ ಬಾಯ್ಬಿಟ್ಟು ಅತ್ತನು ತನ್ನ ಅಪರಾಧವನ್ನು ಮನಗಂಡು ಪಶ್ಚಾತ್ತಾಪದಿಂದ ಎದೆಯನ್ನು ಸುಟ್ಟು ಬೂದಿ ಮಾಡಿದನು. ಅನಂತರ ಕೂಡಲೆ ಅಫೀಮ್ ತರಿಸಿ ತಿಂದನು. ರೋಗ ಸ್ವಲ್ಪ ಗುಣವಾಯಿತು. ಎದ್ದು ಪತ್ನಿಯ ಶವಸಂಸ್ಕಾರ ಮಾಡಿದನು. ತನ್ನ ದಾಂಪತ್ಯ ಜೀವನದ ಅಂತ್ಯಕ್ರಿಯೆಯನ್ನೂ ನಡಿಸಿದನು.

— ಕೆ. ಕೆ. ಎಸ್.

WHAT MAKES A MAN RICH?

Luck?	Very rarely.
Inheritance?	Not often.
Speculation?	Once in a blue moon
Gambling?	Never.
Hard Work?	Very Often.
Hard work and Thrift	Always.

RESOURCES OF A CRORE

ESTD. 1906

CANARA BANK LIMITED

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. S. 526/1935 R. E. P. 580/39

R. E. A. 107/39 S

ಅನಂತ್ರಾಮಯ್ಯ—ಅರ್ಜಿದಾರ—ವಾದಿ.

ಮತ್ತು

1, 3ನೇ ಪ್ರ. ಬಿಲ್ಲ ಯಾನೆ ಫ್ರಾಂಸಿಸ್ಕ ಬರ್ಬೋಜ, ಪಾವುಲು ಬರ್ಬೋಜನ ಮಗ.
2, 4ನೇ ಪ್ರ. ವಿಲಿಯಮ್ ಕಾಡ್ಡೋಸ್ ಬಾಯಿ, 1ನೇಯವನ ಹೆಂಡತಿ,

ಕಾರ್ಕಳ ತಾಲೂಕು ಪುತ್ತಿಗೆ ಗ್ರಾಮದ ಗುಂಡ್ಯಡ್ಕ ಎಂಬಲ್ಲಿರುವವರು.

ಮೇಲ್ಕಂಡ ಅಮ್ಲ ಜ್ಯಾರಿಯಲ್ಲಿ ಕಳೆದ ಸಪ್ಟಂಬರ ತಾ. 25ರಲ್ಲಿ 3ನೇ ಪ್ರತಿವಾದಿಯ ಹಕ್ಕಿನದ್ದೆಂತ ಏಲಂ ಆದ ಸ್ಥಿರಾಸ್ತಿಯನ್ನು ಆತ 2ನೇ ಎಪ್ರಿಲ ಹಸರಲ್ಲಿ ಕ್ರಯ ಮಾಡಿಟ್ಟಿರುವುದಾಗಿಯೂ ಅದರಲ್ಲಿ ಆತಗೆ ಎಷ್ಟನ್ನಾದರೂ ಹಕ್ಕಿಲ್ಲವಾಗಿಯೂ ಅರ್ಜದಾರನು ತಿಳಿಯುವುದರಿಂದ ಸದ್ರಿ ಏಲಮನ್ನು ರದ್ದುಪಡಿಸಬೇಕಾಗಿ ವಗೈರೆ ಅರ್ಜದಾರನು ದಾಖಿಲ್ಲ ಮಾಡಿದ ಮೇಲ್ಕಂಡ ಅರ್ಜಿಯು ತಾ. 25-11-39ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದರಿಂದ ಆ ಕುರಿತು ನಿಮಗೆ ಆಕ್ಷೇಪವಿದ್ದರೆ ಸದ್ರಿ ದಿನ್ನ ಬೆಳಿಗ್ಗೆ ಗಂಟೆ 10ಕ್ಕೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ಇಲ್ಲವಾದ್ರೆ ನಿಮ್ಮನ್ನು ಗೈರು ಹಾಜರುಮಾಡಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವದು ಎಂದು ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ.

(S.d.) K. Venkatesha Pai,
ಅರ್ಜದಾರನ ಕಡೆ ವಕೀಲ,
ಕಾರ್ಕಳ, ತಾ. 11-11-39.

Your anxiety in finding a sound and progressive Life Office both to insure or to represent will end on consultation with:

Branch Secretary,
The New Guardian of India Life Ins. Co Ltd, Madras.
MANGALORE Branch

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ಪಟ್ಟಿಯು ಕೆಲವೇ ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪಂಚಾಯ್ತಿಗೆ ನಿಮ್ಮಿಂದ ಪಡೆದ ಲಾಭದ ಟೇಕ್ಸ್ ಕಡಿಮೆಯಾಗುವುದು ಸಂದರ್ಭಾನುಸಾರ ಟೇಕ್ಸ್ ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ಕೆಡವಾಗಲಿಲ್ಲ. ಲೆಕ್ಕ ಹಾಜರ ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ್,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜ್ಯಾನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ಯಾನ್ ಬೋರ್ಡ್- ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮ್ಯುಸೆಕೆಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಜ್ಯಾನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ

From,
A. C. Woodhouse, Esq,
C. I. E.
District Magistrate of South Kanara

CIRCULAR

Holders of licences in from XIX are informed that such licences are renewed without payment of any fee and that what is required is only a court fee lable of two annas for every application for renewal of licences in form XIX

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ $\frac{291}{1939}$

ಕುಂಞ ವೈದ್ಯದಿನ ಕುಟ್ಟಿ ಸಹಾ-ವಾದಿರು

ಮತ್ತು

ಬೆಳಾಪರತ್ತ ಅಬ್ದುಲ್ಲ ರಹಿಮಾನ ಸಹಾ ಪ್ರತಿವಾದಿರು.

ಸದ್ರಿ ವ್ಯಾಜ್ಯದ 3ನೇ ಪ್ರತಿವಾದಿ ಬೆಳಾಪರತ್ತ ಸೇಬಿಸು 4ನೇ ಪ್ರತಿವಾದಿ ಬೆಳಾಪರತ್ತ ಮಮ್ಮದ ಕುಂಞ. 5ನೇ ಪ್ರತಿವಾದಿ ಬೆಳಾಪರತ್ತ ಅಬ್ದುಲ್ಲ ಕೂಡಾ 3 ಜನರಿಗೆ—

ಸದ್ರಿ ವ್ಯಾಜ್ಯದ ಮೇಲೆ ಹೇಳಿದ 3ರಿಂದ 5ನೇ ಪ್ರತಿವಾದಿರಿಗೆ ಸಬ್ಸ್ಟಿಟ್ಯೂಟ ಸರ್ವಿಸ ಮುಖಾಂತರ ವ್ಯಾಜ್ಯದ ನೋಟೀಸು ಜ್ಯಾರಿ ಬಗ್ಗೆ ತಾರೀಕು 28-11-39ಕ್ಕೆ ಇಟ್ಟಿದೆ ಎಂಬ ಸಂಗ್ತಿ ಅವರಿಗೆ ಈ ಮೂಲಕ ತಿಳಿಸಲಾಗುತ್ತದೆ.

K Sundar Rama Shetty,
Vakil for Plaintiff.
Kasaragod, 7-11-'39.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ ಈಗಾಗಲೇ ಸಂಚರಿಸತೊಡಗಿರುವರೆಂದು ತಿಳಿದುಬರುತ್ತದೆ ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸುದಿರೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ. ಪ್ರವೇಶ ಹಾಸಲು ರೂ. 1. (ಜುಮ್ಲಾ ರೂ. 11.) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಮಾಹಿತಿಯನ್ನು ಪಡೆಯಲಪೇಕ್ಷಿಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ. ಈ ವಿಳಾಸಕ್ಕೆ ಬರೆಯಬಹುದು.

ಮೈಸೂರು

ಸ್ವ. ಬಾ. ತಾ. 13-11-'39

ಮಹಿಳೆಯರ ಸಮ್ಮೇಳನ—ರಾಜಕುಮಾರಿ ಶ್ರೀಮತಿ ಲೀಲಾವತಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನದ ಮೈಸೂರು ಶಾಖೆಯ ಸಮ್ಮೇಳನವೊಂದು ನಡೆದು, ಮುಂದಿನ ವಾರ ಚಿತ್ರದುರ್ಗದಲ್ಲಿ ನಡೆಯಲಿರುವ ಅಖಿಲ ಮೈಸೂರು ಸ್ತ್ರೀಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಚುನಾಯಿಸಿ ಮೈಸೂರು ಶಾಖೆಯಿಂದ ಕಳುಹಿಸುವ ನಿರ್ಣಯಗಳನ್ನು ಅರಿಸಿದ ಮೇಲೆ, ಮೈಸೂರು ಶಾಖೆಗೆ ಮುಂದಿನ ಸಾಲಿಗೆ ಅಧಿಕಾರಿಗಳ ಚುನಾವಣೆ ನಡೆಯಿತು. ರಾಜಕುಮಾರಿಯವರ ಅವಶ್ಯ ಭಾಷಣ ನಡೆದು ಸಭೆ ಮುಗಿಯಿತು. ಈ ಸಭೆಯು ನಡೆದ ಹಿಂದಿನ ದಿನ ಮೈಸೂರಿನ ಕೆಲವು ಗಣ್ಯ ಮಹಿಳೆಯರು ಒಂದು ಸಭೆ ನಡೆಸಿ, ಶ್ರೀಮತಿ ಕೆ. ಡಿ. ರುಕ್ಮಿಣಮ್ಮನವರಿಗೆ ಮಹಾಪ್ರಭುಗಳು ಲೋಕಸೇವಾಪರಾಯಣೆ ಎಂಬ ಬಿರುದನ್ನು ಕೊಟ್ಟುದಕ್ಕೆ ಶ್ರೀಮತಿಯವರನ್ನು ಅಭಿನಂದಿಸಿದರು.

ಕಾಂಗ್ರೆಸ್ ವರ್ತಮಾನ—ಮೈಸೂರು ಕಾಂಗ್ರೆಸ್‌ನವರು ಹೂಡಿರುವ ಚಳುವಳಿ ಸಂಸ್ಥಾನದಾದ್ಯಂತವೂ ಯಶಸ್ವಿಯಾಗಿ ನಡೆಯುತ್ತಿದೆ. ದಸ್ತಗಿರಿಗಳು ನಡೆಯುತ್ತಿವೆ. ಮೈ. ಸಂ||ದಿಂದ ಗಡಿಪಾರಾಗಿದ್ದ ಶ್ರೀ. ವೆಂಕಟ್ಟಯ್ಯನವರು ಅಪ್ಪಣೆಯಿಲ್ಲದೆ ಬೆಂಗಳೂರಿಗೆ ಬರಲು ಅವರ ದಸ್ತಗಿರಿಯಾಗಿ ಕೊಡಗಿಗೆ ಅಟ್ಟಿದರೆಂದು ಹೇಳಲಾಗಿದೆ. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಓರ್ವ ರಾಜಕೀಯ ಕೈದಿ ಮೃತನಾದನು. ಇದು ವರೆಗೆ ಸುಮಾರು 1500 ಮಂದಿ ದಸ್ತಗಿರಿಯಾಗಿ ಜೈಲಿನಲ್ಲಿದ್ದಾರಂತೆ.

ಯೋಗಶಾಲಾ ದಿನ—ಅರಮನೆ ಯೋಗಶಾಲೆಯ ಏಳನೆಯ ವಾರ್ಷಿಕೋತ್ಸವವು ಅರಮನೆಯ ಅಧಿಕಾರಿಗಳಾದ ರಾಜಸೇವಾಸಕ್ತ ಎಂ. ರಾಮರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೃಷ್ಣರಾಜ ಸಾಗರ—ಕೃಷ್ಣರಾಜ ಸಾಗರದ ಇಂಡಿಯನ್ ರೆಸ್ಟೋರೆಂಟಿನ ಏಳನೇ ವಾರ್ಷಿಕೋತ್ಸವವು ತಾ. 7-11-39ನೇ ಸಾಯಂಕಾಲ ಅತ್ಯಂತ ವಿಜೃಂಭಣೆಯಿಂದ ಶ್ರೀ. ಬಾಟ್ಲಿ ಭೀಮರಾವ್, ಬಿ.ಎ.ಬಿ.ಯಿ.,ಯಂ. ಐ. ಇ. End ಎಗ್ಸಿಕ್ಯೂಟಿವ್ ಇಂಜಿನಿಯರ್ ಕೃಷ್ಣರಾಜ ಸಾಗರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅನೇಕ ಪುರಮಾಸಿಗಳೂ ವಿಶಾಷ್ಯ ಆಫೀಸರುಗಳೂ ಸೇರಿದ್ದರು. ಸಭೆಯನ್ನು ಏರ್ಪಡಿಸಿದ ಶ್ರೀಯುತ ಪ್ರೊಪ್ರೈಟರ್ ಕೆ. ಗರುಡಾಚಾರ್ಯರನ್ನು ಶ್ಲಾಘಿಸಿ ಭಾಷಣವನ್ನು ಮಾಡಿದ ನಂತರ ಮಾನ್ಯ ಅತಿಥಿ ಸತ್ಕಾರ, ಉಪಹಾರ ವಗೈರೆ ನಡೆದು ಸಭೆಯು ಮುಕ್ತಾಯವಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿಗೆ ಶ್ರೀ ಬೆನಗಲ್ ರಾಮರಾಯರ ರಾಜೀನಾಮೆ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಲಿಯ ಮತ್ತು ಮೈಸೂರು ಪ್ರಾಂತೀಯ ಸಮಿತಿಯ ಗೌರವ ಕಾರ್ಯದರ್ಶಿಗಳ ಸಮಕ್ಷಮಕ್ಕೆ, ಸ.|| ನಮಸ್ಕಾರಗಳು. ಮಹಾಶಯರೇ,

ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮುಖಾಂತರವನ್ನೂ ಅದರ ಆಶ್ರಯದಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳ ಧೋರಣೆಯನ್ನೂ ನೋಡಿದರೆ ನನ್ನಂತಹ ಮನುಷ್ಯನು ಅವುಗಳಲ್ಲಿ ಭಾಗಿಯಾಗಿ ಸಹಕರಿಸಿ ಆತ್ಮಗೌರವವನ್ನು ಕಾಪಾಡಿಕೊಳ್ಳುವುದು ಸಾಧ್ಯವಿಲ್ಲವೆಂದು ನನಗೆ ಗೋಚರಕ್ಕೆ ಬಂದಿರುವುದರಿಂದ ಅದರ ರೀತಿನೀತಿಗಳಲ್ಲಿ ತಕ್ಕಂತೆ ಮಾರ್ಪಾಡುಗಳಾಗುವ ತನಕ ಕೊಂಚಕಾಲ ದೂರವಾಗಿರಬೇಕೆಂಬ ಮನೀಷೆಯುಂಟಾಗಿದೆ. ಹೀಗಾದುದರಿಂದ ನನಗೆ ಪರಿಷತ್ತಿನ ಸಂಬಂಧದಲ್ಲಿ ಇರುವ ಪ್ರಾಂತ ಸಮಿತಿಯ ಸದಸ್ಯತ್ವ, ಅಧ್ಯಕ್ಷಸ್ಥಾನ ಹಾಗೂ ಇನ್ನೂ ಬೇರೆಬೇರೆ ಉಪಸಮಿತಿಗಳಲ್ಲಿರುವ ಸದಸ್ಯಸ್ಥಾನ ಇತ್ಯಾದಿ ಸಮಸ್ತ ಸ್ಥಾನಗಳಿಗೂ ಈ ಮೂಲಕ ರಾಜೀನಾಮೆ ಕೊಟ್ಟಿರುತ್ತೇನೆ, ದಯವಿಟ್ಟು ಅಂಗೀಕರಿಸಬೇಕಾಗಿ. ಈ ಮೇರೆಗೆ ತಮಗೆ ತಿಳಿಯಪಡಿಸುವಲ್ಲಿ ಪುನರಾಲೋಚನೆಗೆ ಅವಕಾಶವಿಲ್ಲದಂತೆ ಚೆನ್ನಾಗಿ ಆಲೋಚನೆ ಮಾಡಿಯೇ ಬರೆದಿರುವೆನಾದದರಿಂದ ಇದನ್ನು ನನ್ನ ಕೊನೆಯ ತೀರ್ಮಾನವಾಗಿ ಎಣಿಸಿ ವರ್ತಿಸಬೇಕೆಂದು ಪ್ರಾರ್ಥನೆ.

(ಸಹಿ) ಇಂತು ತಮ್ಮ ವಿಧೇಯ

ಬಿ. ರಾಮರಾವ್

ಏಳನೇ ಸಾಹಿತ್ಯಸಮ್ಮೇಳನದ ಅಧ್ಯಕ್ಷರು

ಪರಿಷತ್ತಿನ ಕಾರ್ಯಸಮಿತಿಯು ಮತ್ತು ಬೆಳಗಾಂವಿಯ ಸಾಹಿತ್ಯ ಸಮ್ಮೇಳನದ ಸ್ವಾಗತಸಮಿತಿಯು ಆಹ್ವಾನವನ್ನು ಮನ್ನಿಸಿ ಸುಪ್ರಸಿದ್ಧ ಕನ್ನಡಿಗರಾದ ಶ್ರೀಮಾನ್ ಮುದವೀಡು ಕೃಷ್ಣರಾಯರು ಏಳನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರಲು ಒಪ್ಪಿರುತ್ತಾರೆ.

ಬೊಂಬಾಯಿ

ಬಿಲ್ಲವರ ಸಂಸ್ಥೆಗಳ ಕೇಂದ್ರ ಸಮಿತಿ—ಇವರ ಪ್ರತಿನಿಧಿತ್ವವುಳ್ಳ ಸಂಸ್ಥೆಗಳಾದ ಬಿಲ್ಲವರ ಎಸೋಸಿಯೇಶನ್, ವಿದ್ಯಾದಾಯಿನಿ ಸಭಾ ಬಾರಕೂರು ಬಿಲ್ಲವರ ಟಿರಿಟಿ ಸಂಘ, ಕೆನರಾ ಬಿಲ್ಲವರ ಅನಾಥ ಸಂಘ, ಮತ್ತು ಬಿಲ್ಲವ ಯುವಕ ಸಂಘ, ಇವುಗಳ ನೇತೃತ್ವದಲ್ಲಿ ಶ್ರೀ. ಬ್ರಹ್ಮನಾರಾಯಣ ಗುರುದೇವರ ಜನ್ಮೋತ್ಸವ ಮಹಾ ಸಮಾಧಿ ದಿನವು ತಾ. 22-10-39ರಲ್ಲಿ ಕೋಟೆಯೊಳಗಿನ ಮಂಗ್ಳೂರ್ ಹೋಟೆಲಿನಲ್ಲಿ ಶ್ರೀ. ಜಿ. ಆರ್. ಮದ್ವಾನಿ ಬಿ. ಎ. ಎಲ್. ಎಲ್. ಬಿ. (ಅಡ್ವೊಕೇಟ್) ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ದೇವತಾ ಭಜನೆ, ಗುರುಸ್ತೋತ್ರ ಮತ್ತು ಗುರುಪೂಜೆಯಾದ ಬಳಿಕ ರಾ. ಬಿ. ಪಿ. ಕೋಳಿಕಾರ್‌ರವರು ಸಭಿಕರನ್ನು ಸ್ವಾಗತಿಸಿದರು. ಶ್ರೀಮಾನ್ ಮದ್ವಾನಿಯವರು ಅಧ್ಯಕ್ಷಪೀಠವನ್ನಲಂಕರಿಸುವಂತೆ ವಿನಂತಿಸಿದರು. ಬಂದ ಶುಭಸಂದೇಶಗಳನ್ನು ಶ್ರೀ. ಕೃಷ್ಣಪ್ಪ ಬಿ. ಮೂಲ್ಕಿಯವರು ಓದಿದರು. ಶ್ರೀ. ಕೊಳೂರ್‌ಕರ್‌ಯವರು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರ ಜೀವನದ ರಹಸ್ಯವನ್ನು ಸಭಿಕರಿಗೆ ಮಂದಟ್ಟಾಗುವಂತೆ ಓದಿ ಹೇಳಿದರು. ಶ್ರೀ ಗಳಾದ ಅಂಬಾರಾವ್ ಕಾಲಕಟ್ಟರ್, ಬಿ. ಪಿ. ಆಚಾರ್ಯ ಕೆ. ಎಸ್. ಶೆಟ್ಟಿ ಬಿ. ಎ. ಮತ್ತು ಪ್ರೊ. ವಸ್ಸ ಇವರು ಗುರುಸ್ವಾಮಿಜಿಯವರು ಯೋಗಿಗಳು ಮತ್ತು ಗಣಿತರು ಇವರಂತೆ ಮಹಾಪುರುಷರಿರುವರೆಂದೂ ಇವರ ಬೋಧನೆಯ ಮುಖ್ಯ ತತ್ವವು 'ಒಂದೇ ಜಾತಿ' ಒಂದೇ ಮತ 'ಒಂದೇ ದೇವರು' ಎಂಬುದಾಗಿರುವುದರಿಂದ ಇದು ಇಡೀ ಜಗತ್ತಿನ ಜನಾಂಗಗಳ ಜನದಿಂದ ಮನ್ನಿಸಲ್ಪಡತಕ್ಕುದಾಗಿದೆ.ಎಂದೂ ತಮ್ಮ ಸುರಸವಾದ ಭಾಷಣಗಳನ್ನಿತ್ತರು. ಅಧ್ಯಕ್ಷರು ಪ್ರತ್ಯೇಕತೆಯಲ್ಲಿ ಈಗ ಕಾಣಬರುವ ಅನೇಕ ಜಾತಿ ಮತಗಳು ಉಂಟಾಗಲು ಮನುಷ್ಯರೇ ಕಾರಣಭೂತರಲ್ಲದೆ ಅವು ಪರಮಾತ್ಮನಿಂದ ಮಾಡಿದುದಲ್ಲ. ಆದಕಾರಣ ಎಲ್ಲಾ ಮಾನವರು ಒಂದೇ ಜಾತಿ ಮತ್ತು ಮತಕ್ಕೆ ಸೇರಿದವರಾಗಿರಬೇಕು. ಪೂಜ್ಯ ನಾರಾಯಣ ಗುರುದೇವರು ದಕ್ಷಿಣ ಹಿಂದೂಸ್ಥಾನದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿ ಜನತ್ತಕ್ಕೆ ಮಾಡಿದ ದೇವಸ್ಥಾನಗಳನ್ನು ಕಟ್ಟಿಸಿ ಮನುಷ್ಯರು, ಉಚ್ಚ ನೀಚ ಮೇಲುಕೀಳೆಂಬ ಭೇದಾನುಭೇದಗಳನ್ನು ಇಡದೆ ಎಲ್ಲರೂ ಸರಿಸಮಾನರೆಂದು ಭಾವಿಸಿ ಆ ಪ್ರಕಾರ ಇಹಲೋಕದ ಜೀವನಯಾತ್ರೆಯನ್ನು ಸಾಗಿಸಬೇಕೆಂದು ಬೋಧನೆಯನ್ನಿತ್ತು ಸಮಾಧಿಯನ್ನು ಹೊಂದಿರುವರು. ಅವರ ಭಕ್ತರು ಅವರ ತತ್ವಗಳನ್ನು ಕಾರ್ಯರೂಪದಲ್ಲಿ ತರುವಂತೆ ಪ್ರಯತ್ನಿಸಬೇಕು. ಎಲ್ಲಾ ಮತಸ್ಥಾಪಕರ ತತ್ವವು ಸಹ ಗುರುಸ್ವಾಮಿಯವರ ತತ್ವಕ್ಕನುಸಾರವಾಗಿರುವುದೆಂದು ಒತ್ತಿ ಹೇಳಿ ತನ್ನ ಭಾಷಣವನ್ನು ಅಂತ್ಯಗೊಳಿಸಿದರು.

ಮಂಗಲ ಪ್ರಸಾದ ಹಂಚುವಿಕೆ ಮತ್ತು ಶ್ರೀ. ಎನ್. ಎಸ್. ಉಚ್ಚಿಲ್‌ರವರಿಂದ ಮಾಯಾ ಲಾಂದ್ರ ಪ್ರದರ್ಶನ ಆಗಲು ಶ್ರೀಯುತ ಮೂಲ್ಕಿಯವರು ಅಧ್ಯಕ್ಷ ಮಹಾಶಯರಿಗೂ, ಕೂಡಿದ ಸಭಿಕರಿಗೂ ಧನ್ಯವಾದಗಳನ್ನರ್ಪಿಸಿ ಸಭೆಯು ಕೊನೆಗೊಂಡಿತು.

ಬಂಟರ ಯಾನೆ ನಾಡವರ ಸಂಘ ಮುಂಬಯಿ—ತಾ 8-10 39ಕ್ಕೆ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಡಾಕ್ಟರ್ ವೆಂಕಟ್ರಾಯ ಶೆಟ್ಟಿ, ಬಿ. ಪಿ. ಯವರು ಗೈರ್‌ಹಾಜರಿಯಿದ್ದು ತನ್ನ ಅಧ್ಯಕ್ಷಸ್ಥಾನಕ್ಕೆ ಮತ್ತು ತನ್ನ ಆಜೀವ ಸದಸ್ಯತೆಗೆ ಆ ಮೊದಲೇ ರಾಜಿನಾಮೆ ಕೊಟ್ಟಿದ್ದರೂ ಕೂಡ ಅವರನ್ನೇ ಬಹುಮತದಿಂದ ಪುನಃ ಅಧ್ಯಕ್ಷರನ್ನಾಗಿ ಚುನಾಯಿಸಿ, ಇವರು ಸದ್ರಿ ಅಧ್ಯಕ್ಷಸ್ಥಾನವನ್ನು ಅಂಗೀಕರಿಸುವಂತೆ ಹೇಳುವ ಸಲುವಾಗಿ ಐದುಜನ ಸದಸ್ಯರನ್ನು ಅವರ ಕೂಡೆ ಕಳುಹಿಸಬೇಕೆಂದು ನಿರ್ಣಯಿಸಿದ ಮೇರೆಗೆ ಸದ್ರಿಯವರು ಅವರನ್ನು ಕೇಳಿಕೊಂಡಲ್ಲಿ ಅವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿರುವರು

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ಕ್ಕೆ ರೂ. 1—0—0

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

AN INVITATION

to avail best facilities.

With the experience of 33 years and with a net-work of Branches and Agencies, the Corporation presents efficient service and caters to all the needs of the public. Transmission of funds to various places undertaken with maximum safety and minimum cost.

Enquiries in the matter promptly attended to at all times.

The Canara Banking Corporation Limited.

(Incorporated in British India)

ಉಡುಪಿ, ಗುರುವಾರ ತಾ. ೧೬-೧೧-೩೯

ಸಂಧಿಯು ಸಂಭವನೀಯವೇ?

ನವಂಬರ ತಾ. 7ರಲ್ಲಿ ಹೊಲ್ಲಂಡಿನ ರಾಣಿ ವಿಲ್ ಹೆಲ್ಮೀನಳು ಮತ್ತು ಬೆಲ್ಜಿಯಮಿನ ರಾಜ ಲಿಯೋಪೋಲ್ಡರು, ಹೋರಾಡುವ ರಾಷ್ಟ್ರಗಳೊಡನೆ ಸಂಧಿಮಾಡಿಕೊಳ್ಳಬೇಕೆಂದು ಕೇಳಿಕೊಂಡು ತಾವು ಮಧ್ಯಸ್ಥಿಕೆಗಾಗಿ ಮುಂದೆ ಬಂದಿರುವರು. ತಾ. ೮ರಲ್ಲಿ ಹರ್. ಹಿಟ್ಲರರು, ಮ್ಯುನಿಚಿನ ಬೀರ್ ಸೆಲ್ಲರಿನಲ್ಲಿ ಭಾಷಣಮಾಡುವಾಗ ಸಂಧಿಯ ಪ್ರಸ್ತಾಪವನ್ನೇ ಎತ್ತಿವೆ. ಎಷ್ಟಕ್ಕೂ ತಾನು ಶರಣಾಗತನಾಗಲಾರೆ. ಯುದ್ಧದಲ್ಲಿ ಜರ್ಮನಿಗೆ ವಿಜಯ ನಿಶ್ಚಯ. ೫ ವರ್ಷದ ವರೆಗೆ ಹೋರಾಡಲು ಜರ್ಮನಿಯು ಸಿದ್ಧತೆಮಾಡಲಿದೆಯೆಂದು ರಣಗರ್ಜನೆಮಾಡಿರುವರು. ಮಿ. ಚೇಂಬರ್ಲೇನರ ತಾ. 10ರ ಲಂಡನಿನ ಭಾಷಣವು ನ್ಯಾಯವಾದ ಸಂಧಿಗೆ ಇಂಗ್ಲೆಂಡು ಸದಾ ಸಿದ್ಧವಿರುವುದೆಂದು ಸೂಚಿಸುತ್ತ ದಾಪವರೂ ಬಲವು ಬಲದಿಂದಲೇ ಪ್ರತಿಭಟಿಸಲ್ಪಡುವುದು, ಯುರೋಪನ್ನು ಆಗಾಗ ಯುದ್ಧದ ಗಂಡಾಂತರಕ್ಕೀಡುಮಾಡುವ ಹಿಟ್ಲರ್ ಶಾಹಿಯು ನಿರ್ನಾಮವಾಗಿ, ಯುರೋಪಿನಲ್ಲಿ ಹಾಗೂ ಇಡೀ ಲೋಕದಲ್ಲಿ ನ್ಯಾಯಕ್ಕೆ ಮತ್ತು ಶಾಂತಿಗೆ ಸದಾ ಮಾನ್ಯತೆ ದೊರೆಯುವಂತಾಗುವವರೆಗೆ ಯುದ್ಧವು ಮುಂದುವರಿಸಲ್ಪಡುವದೆಂಬುದನ್ನು ವ್ಯಕ್ತಗೊಳಿಸಿರುವುದು. ತಾ. 12ರಲ್ಲಿ ಮಿ. ಚರ್ಚಿಲ್ಲರು, ನಾಝಿಗಳ ರೀತಿಯ ಭಾಷಣವನ್ನೇ ಆಕಾಶವಾಣಿಯ ಮೂಲಕ ಕೊಟ್ಟು, 10 ವಾರಗಳ ಯುದ್ಧದ ಸಿಂಹಾವಲೋಕನ ಮಾಡಿರುವರು. "ಯುದ್ಧವನ್ನು ತಡೆಗಟ್ಟಲು ನಾವು ಬಹಳ ಪ್ರಯತ್ನ ಮಾಡಿದೆವು. ಅದು ಸಾಧ್ಯವಾಗಲಿಲ್ಲ. ಈಗ ಯುದ್ಧಕ್ಕೆಳೆಯಲ್ಪಟ್ಟ ಮೇಲೆ ವೈರಿಗಳು ಸಾಕುಸಾಕಾಗುವನಕ ದೃಢನಿರ್ಧಾರದಿಂದ ಛಲ ಹಿಡಿದು ಹೋರಾಡುವೆವು. ಚಕಿತಗೊಳಿಸುವ ಬೆದರಿಕೆಗಳಿಗೆ ನಾವು ಸೊಪ್ಪು ಹಾಕುವವರಾಗಿಲ್ಲ. ಬಾಯಿಬಡಿಕತನವು ವೈರಿಯ ದೌರ್ಬಲ್ಯದ ಸೂಚನೆಯೆಂದು ತಿಳಿಯಬೇಕು. ಸಮಯವು ನಮ್ಮ ಕಡೆಗಿದೆ. ದೊಡ್ಡ ಹೋರಾಟವೇನೂ ನಡೆಯದೆ ಇಡೀ ಚಳಿಗಾಲವು ದಾಟಿದರೂ ನಮಗದರಿಂದ ಬಹಳ ಪ್ರಯೋಜನ. ನಮ್ಮ ನೆಲ ಜಲ ಮತ್ತು ಆಕಾಶ ಸೇನಾ ಶಕ್ತಿಯು ದಿನೇ ದಿನೇ ಬಹಳವಾಗಿ ಹೆಚ್ಚುತ್ತಿದೆ. ಇಡೀ ಲೋಕದ ಸಹಾನುಭೂತಿ ಮತ್ತು ಸಹಾಯ ನಮಗಿದೆ. ಆದರೆ ಕಾಲವು ಜರ್ಮನಿಯ ಶಕ್ತಿಯನ್ನು ಕ್ಷಯಿಸುವುದು. ನಾವು ಶರಣಾಗತವಾಗುವಂತೆ ಮಾಡಿದ ಕೈಸರರ ಜರ್ಮನಿಯಷ್ಟು ಹಿಟ್ಲರರ ಜರ್ಮನಿಯು ಬಲಶಾಲಿಯಾಗಿರುವುದಿಲ್ಲ. ಇಡೀ ಲೋಕವೇ ಅದಕ್ಕೆ ವಿರೋಧವಿದೆ. ಹಿಟ್ಲರರ ಮಿತ್ರ ಮುಸಲೋನಿಯವರೇ ತಾಟಸ್ಥ್ಯ ವಹಿಸಿದ್ದಾರೆ. ಜಪಾನು ಜರ್ಮನಿಯಿಂದ ದೂರವಾಗಿದೆ. ರಷ್ಯವು, ಉಕ್ರೇನ್ ಬಾಲ್ಟಿಕ್ ಮತ್ತು ಕಪ್ಪು ಸಮುದ್ರ ಭಾಗಗಳಲ್ಲಿ ಜರ್ಮನಿಯನ್ನು ತಡೆಗಟ್ಟಿ ಹಿಂದಕ್ಕೊತ್ತಿದೆ. ಆದುದರಿಂದ ಜಯವು ನಮಗೆ ನಿಶ್ಚಯವೆಂಬ ವಿಶ್ವಾಸ ನನ್ನಲ್ಲಿದೆ. ಯುದ್ಧದಲ್ಲಿ ಬೆಲ್ಜಿಯಮ್ ಮತ್ತು ಹೊಲ್ಲೆಂಡುಗಳ ಗತಿ ಏನಾಗುವುದೆಂದು ಹೇಳಬರುವುದಿಲ್ಲ. ಉನ್ಮತ್ತ ಹಿಟ್ಲರನು ಅವುಗಳ ಮೇಲೆ ಯಾವಾಗ ಆಕ್ರಮಣ ನಡಿಸುವನೆಂದು ಹೇಳಬರುವುದಿಲ್ಲ. ಈ ಯುದ್ಧದಲ್ಲಿ ಒಂದೋ ಹಿಟ್ಲರ್ ಶಾಹಿಯು ಸಂಪೂರ್ಣವಾಗಿ ನಾಶಗೊಳ್ಳಬೇಕು. ಪೋಲಂಡು, ಜೆಕೋಸ್ಲೋವೇಕಿಯ, ಬೆಲ್ಜಿಯಮ್ ಮತ್ತು ಹೊಲ್ಲೆಂಡುಗಳ ರಕ್ಷಣೆಯಾಗುವುದು. ಲೋಕದಲ್ಲಿ ನ್ಯಾಯ ಮತ್ತು ಶಾಂತಿಯು ಸುವ್ಯವಸ್ಥೆಯಾಗುವುದು. ಇಲ್ಲವೆ ಫ್ರಾನ್ಸ್ ಮತ್ತು ಇಂಗ್ಲೆಂಡುಗಳು ಪತನ ಹೊಂದಿ, ಹಿಟ್ಲರ್ ಶಾಹಿಯನ್ನೆದುರಿಸಲು ಅಮೆರಿಕದ ಯುನೈಟೆಡ್ ಸ್ಟೇಟ್ಸ್ ಮಾತ್ರ ಉಳಿಯುವುದು. ಜರ್ಮನಿಯ ಕೆಟ್ಟ ಮನುಷ್ಯ ಮತ್ತು ಆತನ ಸಹಚಾರಿಗಳಿಗೆ ಯುದ್ಧದಲ್ಲಿ ಜಯವಾಗುವುದೆಂದು ನನಗಿಷ್ಟು ದೃಢವಿಲ್ಲೆಂದೇ ಮಿ. ಚರ್ಚಿಲ್ಲರ ಭಾಷಣ ಸಾರಾಂಶ. ಇತ್ತಂಡದವರೂ ಇಷ್ಟೊಂದು ಆಕ್ರೋಶಗೊಂಡು ಉರಿಕಾರುತ್ತಿರುವಾಗ ಶಾಂತಿಯು ಹೇಗೆ ಸಂಭವನೀಯ?

ಬೆಲ್ಜಿಯಮ್ ಮತ್ತು ಹೊಲ್ಲೆಂಡಿನ ಸಂಧಿಯ ವಿನಂತಿಯನ್ನು ಜರ್ಮನ್ ಸರಕಾರವು ಪರ್ಯಾಲೋಚಿಸಿ ಉತ್ತರ ಕಳುಹಿಸಲಿರುವುದು. ಇದೇ ತಾ. 12ರಲ್ಲಿ ಇಂಗ್ಲೆಂಡಿನ ಪರವಾಗಿ ಜೋರ್ಜ್ ಚಕ್ರವರ್ತಿಗಳೂ, ಫ್ರಾನ್ಸಿನ ಪರವಾಗಿ ಪ್ರೆಸಿಡೆಂಟ್ ಲೆಬ್ರೆನರೂ ಉತ್ತರ ಕಳುಹಿಸಿರುವರು. ಇಬ್ಬರೂ ಸಂಧಿಯ ಪ್ರಯತ್ನದ ಸದುದ್ದೇಶವನ್ನು ಪ್ರಶಂಸಿಸಿ, ಯುರೋಪಿನ ರಾಷ್ಟ್ರಗಳ ಸ್ವಾತಂತ್ರ್ಯ ನಾಶಕ್ಕೆ ಕಾರಣವಾದ ಜರ್ಮನಿಯ ಆಕ್ರಮಣ ಅಪಾಯವು ಇಲ್ಲದಂತಾಗಿ, ಶಾಂತಿ ಸುರಕ್ಷಿತತೆಯು ನೆಲೆಗೊಂಡು, ಅಂತರರಾಷ್ಟ್ರೀಯ ಕಲಹಗಳು ಶಾಂತಪರ ಮಧ್ಯಸ್ಥಿಕೆಯಿಂದ ತೀರ್ಮಾನಿಸಲ್ಪಡುವಂತಾಗುವುದಾದರೆ ತಾವು ಸಂಧಿಗೆ ಸದಾ ಸಿದ್ಧವಿರುವೆವೆಂದೂ, ಆ ಸಂಬಂಧವಾದ ಯಾವ ಸೂಚನೆಗಳನ್ನಾದರೂ ಪರ್ಯಾಲೋಚಿಸಲಿರುವೆವೆಂದೂ ತಿಳಿಸಿರುವರು. ತಾನು ಸಂಧಿಗೆ ಸದಾ ಸಿದ್ಧನಿರುವೆನೆಂದು ಹರ್. ಹಿಟ್ಲರರೂ ತಿಳಿಸಿರುವರು. ಆದರೆ ಯುದ್ಧದ ಸರ್ವ ಜವಾಬ್ದಾರಿಯನ್ನವರು ಮಿತ್ರ ರಾಷ್ಟ್ರಗಳ ಮೇಲೆ ಹೊರಿಸಿ, ಜರ್ಮನಿಗೆ ಅವುಗಳು ವರ್ಸೆಲ್ಸಿನ ಒಪ್ಪಂದದಿಂದ ಮಾಡಿದ ಅನ್ಯಾಯವನ್ನೆತ್ತಿ ಹೇಳದಿರಲಾರರು. ಈ ಪರಿಸ್ಥಿತಿಯಲ್ಲಿ ಯಾವುದಾದರೊಂದು ಕಡೆಯು ಯುದ್ಧದಲ್ಲಿ ಸಂಪೂರ್ಣವಾಗಿ ಪರಾಜಿತವಾಗುವಂತಾಗದೆ ಸಂಧಿಯು ಸಾಧ್ಯವಾಗುವಹಾಗಿಲ್ಲ. ಇಲ್ಲವಾದರೆ ಜರ್ಮನಿಯಲ್ಲಿ ಬಂಡಾಯವೇನಾದರೂ ಎದ್ದು ಹಿಟ್ಲರರು ಅಧಿಕಾರದಿಂದ ತಳ್ಳಹಾಕಲ್ಪಡಬೇಕು. ಅದು ಕೂಡಾ ಬೇಗನೆ ಸಂಭವನೀಯವೆನ್ನಲಾಗುವದಿಲ್ಲ.

ಒಂದುವೇಳೆ ಯುದ್ಧದಲ್ಲಿ ಜರ್ಮನಿಯು ಸೋಲಿಸಲ್ಪಟ್ಟರೂ ಪೋಲಂಡ್, ಜೆಕೋಸ್ಲೊವೇಕಿಯ, ಆಸ್ಟ್ರಿಯ ಮೊದಲಾದುವುಗಳನ್ನು ಸ್ವತಂತ್ರಗೊಳಿಸಬೇಕೆಂಬ ಮಿತ್ರರಾಷ್ಟ್ರಗಳ ಉದ್ದೇಶವು ನೆರವೇರುವ ಬಗೆ ಹೇಗೋ ತಿಳಿಯದು. ಪೋಲಂಡಿನ ಅಧಿಕ ಭಾಗವನ್ನು ರಷ್ಯವು ಆಕ್ರಮಿಸಿ ಸಂಪೂರ್ಣ ತನ್ನದಾಗಿ ಮಾಡಿಕೊಂಡಿದೆ. ಇಂದೀಗ ರಷ್ಯದ ಪ್ರಭಾವವು ಬೆಳೆಯುತ್ತಾ ಬರುತ್ತಿದೆ. ದೀರ್ಘಕಾಲ ಯುದ್ಧ ನಡೆದಲ್ಲಿ ಜರ್ಮನಿಯನ್ನು ಸೋಲಿಸಿ ರಷ್ಯದೊಡನೆ ಹೋರಾಟ ನಡಿಸುವಷ್ಟು ಶಕ್ತಿಯು ಮಿತ್ರರಾಷ್ಟ್ರಗಳಿಗಿರಲಾರದು. ಇದು ಹೊರತು ಇಂಗ್ಲೆಂಡನ್ನು ತೀವ್ರವಾಗಿ ದ್ವೇಷಿಸಿ, ರಷ್ಯದ ಮೈತ್ರಿಯನ್ನು ಗಳಿಸಿರುವ ಹಿಟ್ಲರರು ಮಿತ್ರರಾಷ್ಟ್ರಗಳಿಗೆ ಎಷ್ಟಕ್ಕೂ ಶರಣಾಗತನಾಗಲಾರೆನೆಂಬ ಹಠವನ್ನೇ ಸಾಧಿಸಿ ಇಡೀ ಜರ್ಮನಿಯಲ್ಲಿ ರಷ್ಯದಂತಹ ಸಮತಾವಾದಿ ರಾಜ್ಯಭಾರವನ್ನು ಜಾರಿಗೆ ತಂದು ಸೋವಿಯೆಟ್ ಸರಕಾರದೊಂದಿಗೆ ಸೇರಿಬಿಟ್ಟರೆ ಯುರೋಪಿನ ರಾಜಕೀಯ ಪರಿಸ್ಥಿತಿಯೇ ಪ್ರಚಂಡ ಮಾರ್ಪಾಟ ಹೊಂದದಿರಲಾರದು. ನಾಝಿವಾದ ಮತ್ತು ಸಮತಾವಾದಕ್ಕೆ ಹೆಚ್ಚಿನ ತಾರತಮ್ಯವಿಲ್ಲೆಂಬ ಅಭಿಪ್ರಾಯವು ಈಗಲೇ ಹುಟ್ಟಿ ಬೆಳೆಯಹತ್ತಿದೆ. ಈಗಲೇ ಇಡೀ ಯುರೋಪಿನಲ್ಲಿ ಅತಿ ಪ್ರಬಲವಾಗುತ್ತಿರುವ ಸೋವಿಯೆಟ್ ರಿಪಬ್ಲಿಕಿನೊಂದಿಗೆ ಜರ್ಮನಿಯು ಸೇರಿಬಿಟ್ಟರೆ ಮತ್ತೆ ಅವನ್ನು ಪ್ರತಿಭಟಿಸುವ ಶಕ್ತಿಯು ಮಿತ್ರರಾಷ್ಟ್ರಗಳಿಗಿರಲಾರದು. ರಷ್ಯದ ಸ್ನೇಹ ಬೆಳೆಸಿ ಸಹಕಾರ ಪಡೆದು ಮಿತ್ರರಾಷ್ಟ್ರಗಳು ನಡೆಯುವಂತಾದರೆ ಮಾತ್ರ ಪೋಲಂಡ್ ಮೊದಲಾದ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಾಪಾಡಬಹುದು.

ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ತಮ್ಮ ಸ್ವಾರ್ಥಸಾಧನೆ ಮತ್ತು ಅಧಿಕಾರಸ್ಥಾಪನೆಯ ಸಾಮ್ರಾಜ್ಯಶಾಹಿ ಧೋರಣೆಯನ್ನು ತ್ಯಜಿಸಿ, ರಾಷ್ಟ್ರಮದವನ್ನು ಮೂಲೆಗೊತ್ತಿ ಮಾನವಕೋಟಿಯ ಸಮಾನತೆ ಮತ್ತು ಸೋದರತೆಯನ್ನೆತ್ತಿಹಿಡಿದು, ಪ್ರತಿಯೊಂದು ರಾಷ್ಟ್ರ ಮತ್ತು ಜನಾಂಗಕ್ಕೂ ಸ್ವಾತಂತ್ರ್ಯವಿತ್ತು, ಇಡೀ ಲೋಕದಲ್ಲಿ ಸ್ವಾತಂತ್ರ್ಯ, ಪ್ರಜಾಸತ್ತೆ, ಶಾಂತಿ ಸುಭಿಕ್ಷೆ ಮತ್ತು ಸುರಕ್ಷಿತತೆಯು ಸ್ಥಿರವಾಗಿ ನೆಲೆಗೊಳ್ಳುವಂತೆ ನವವ್ಯವಸ್ಥೆ ಮತ್ತು ನವರಚನೆಯ ಉದಾತ್ತ ಉದ್ದೇಶಪ್ರೇರಿತರಾಗಿ ಮುಂದುವರಿಯದಿದ್ದರೆ ರಷ್ಯದ ಸಹಕಾರವು ಅವುಗಳಿಗೆ ದೊರೆಯುವಹಾಗಿಲ್ಲ. ಜರ್ಮನಿಯನ್ನು ನೆಲಹಿಡಿಸಿ ತಲೆಯೆತ್ತದಂತೆ ಮಾಡಿದ್ದ ವರ್ಸೆಲ್ಸ್ ಒಪ್ಪಂದವೇ ಇಂದಿನ ಭಯಂಕರ ಯುದ್ಧಕ್ಕೆ ಕಾರಣವೆನ್ನಬಹುದು. ಇನ್ನು ಮುಂದೆ ಯುದ್ಧವೇ ನಡೆಯದಂತೆ ಮಾಡುವ ಉದಾತ್ತ ಉದ್ದೇಶದಿಂದ ನಡೆಸಲ್ಪಟ್ಟ 1914ರ ಮಹಾಸಂಗ್ರಾಮಾಂತ್ಯದಲ್ಲೇ ಇಂದಿನ ಘೋರಸಮರದ ವಿಷಬೀಜವು ಬಿತ್ತಲ್ಪಟ್ಟಿತು. ಜರ್ಮನಿಯಲ್ಲಿ ಹಿಟ್ಲರರ ಪ್ರಭಾವಕ್ಕೆ ಕಾರಣವೇ ವರ್ಸೆಲ್ಸ್ ಒಪ್ಪಂದ. ಅಂತರರಾಷ್ಟ್ರೀಯ ಕಲಹಗಳನ್ನು ರಾಜಿಯಿಂದ ತೀರ್ಮಾನಿಸಿ ಲೋಕದಲ್ಲಿ ಶಾಂತಿ ಮತ್ತು ಸುಭಿಕ್ಷೆಯನ್ನುಂಟುಮಾಡುವ ಉಚ್ಚ ಉದ್ದೇಶಗಳಿಂದ ಸ್ಥಾಪಿಸಲ್ಪಟ್ಟಿದ್ದ ಲೀಗ್ ಆಫ್ ನೇಶನ್ಸು ಈ ವರ್ಸೆಲ್ಸಿನ ಒಪ್ಪಂದವನ್ನು ಪ್ರತಿಪಾದಿಸಿ, ಇಂಗ್ಲೆಂಡ್ ಮತ್ತು ಫ್ರಾನ್ಸುಗಳ ಸ್ವಾರ್ಥಸಾಧಕ ಉಪಕರಣವಾಗಿ ಜರ್ಮನಿಯ ದ್ವೇಷಕ್ಕೀಡಾಯಿತು. ಬ್ರಿಟಿಷ್ ಮತ್ತು ಫ್ರೆಂಚ್ ಸರಕಾರಗಳು ಲೀಗನ್ನು ತಮ್ಮ ಕೈಗೊಂಬೆಯಾಗಿ ಉಪಯೋಗಿಸಿದುದರಿಂದಲೇ ಅದಿಂದು ನಿರ್ನಾಮವಾಗಲು ಮುಖ್ಯ ಕಾರಣ. ರಷ್ಯವು ಇದರಿಂದ ಜುಗುಪ್ಸೆಗೊಂಡು ಇಂಗ್ಲೆಂಡ್ ಫ್ರಾನ್ಸುಗಳನ್ನು ಅವುಗಳ ಗೊಡವೆಗೆ ಬಿಟ್ಟು ತನ್ನದೇ ಆದ ಸ್ವತಂತ್ರ ಧೋರಣೆ ವಹಿಸಿರುವುದು. ರಷ್ಯದ ಸಮತಾವಾದಿ ಸರಕಾರದ ವರ್ಚಸ್ಸು ಬೆಳೆದು, ಎಲ್ಲಿ ತಮಗದರಿಂದ ಅಪಾಯವಾಗುವುದೋ ಎಂಬ ಬೆದರಿಕೆಯಿಂದ ಬ್ರಿಟಿಷ್ ಮತ್ತು ಫ್ರೆಂಚ್ ಅಪ್ರಾಗತಿಕ ಸರಕಾರಗಳು ಸೋವಿಯೆಟ್ ಸರಕಾರವನ್ನು ಮನ್ನಿಸದೆ ಕಡೆಗಣಿಸಿ ಇಂದೀಗ ಜರ್ಮನಿಯ ಸಹಾಯಕ್ಕೆ ದೂಡಿರುವವು. ಈ ಸಂಕುಚಿತ ಧೋರಣೆಯಿಂದಾಗಿ ರಷ್ಯದ ಪ್ರಭಾವವು ಮತ್ತಷ್ಟು ಹೆಚ್ಚುವಂತಾಗಿರುವುದೇ ಹೊರತು ಕಡಿಮೆಯಾಗಿಲ್ಲ. ಈ ಯುದ್ಧದ ಕೊನೆಯಲ್ಲಿ ಸೋವಿಯೆಟ್ ರಷ್ಯವು, ಇಕ್ಕಡೆಯವರಿಗೂ ಶರ್ತಗಳನ್ನಿತ್ತು ಅವರ ಮೇಲೆ ಅಧಿಕಾರ ನಡಿಸುವ ಸ್ಥಾನವಹಿಯುವಂತಾದರೆ ಅದೇನೂ ಆಶ್ಚರ್ಯವಲ್ಲ. ಆದುದರಿಂದ ಈ ಭೀಷಣ ಸಂಗ್ರಾಮವು ಯಾವ ರೀತಿಯಲ್ಲಿ ಕೊನೆಗೊಳ್ಳುವುದೆಂದು ಹೇಳಬರುವುದಿಲ್ಲ. ಅದರ ಅಂತ್ಯದಲ್ಲಿ ಯುರೋಪಿನ ಹಾಗೂ ಇಡೀ ಲೋಕದ ಪರಿಸ್ಥಿತಿ ಹೇಗೆ ನಿಲ್ಲುವುದೆಂದು ಕೂಡಾ ಹೇಳಲು ಸಾಧ್ಯವಿಲ್ಲ.

ನಿಮ್ಮ ಜಾಹೀರಾತನ್ನು

'ನವಯುಗ'ದ

ಪರ್ಯಾಯ ಸಂಚಿಕೆಯಲ್ಲಿ

ಕೊಟ್ಟು ನಿಮ್ಮ ವಹಿವಾಟನ್ನು

ಪ್ರಬಲಪಡಿಸಿರಿ!

...ಗಾಗಿ ನಿರರ್ಥಕ ಯತ್ನ

...ಷಣದ ಸಂದರ್ಭದಲ್ಲಿ ಬೋಂಬು ಸ್ಫೋಟ

...ನಿಗೆ ಅಪಜಯ ನಿಶ್ಚಯ

ವದ ಕೇಂದ್ರ
...ಕಾರಿ ವಾಂ
...ನಲ್ಲಿ ನಡೆ
...ತು, ಕಳೆದ
...ಯನ್ನು ಪರಿ
...ರಾಜಕೀಯ
...ಗಳಲ್ಲಿಯೂ
...ದಿನೇ ಅಪಜ
...ತಿಳಿಸಿಬರು.
...ಚೀನೀಯರು
...ರಣರಂಗಗಳ
...ನೀ ಸೈನಿಕ
...ತ್ಸಾಹದಿಂ
...ತು ಇದರಿಂ
...ಟ ವಿಜಯದ
...ವಿಶ್ವಾಸವುಂ
...ಲ್ಲಾ ದೇಶಗಳ
...ಯಟ್ ರಷ್ಯ
...ರುವುದು ಆ
...ದ್ಧ ಸಾಮಗ್ರಿ
...ಗಿ ಜೈನಕ್ಕೆ
...ತು ಮಹಾತ್ಮ
...ನೊಡಲಾದರು
...ಹಾನುಭೂತಿ

...ಧೋರಣೆ.
...ವಿಯಟ್ ರಷ್ಯ
...ಸ್ವ ಸಾಮ್ಯವು
...ವುದಿಲ್ಲ ಲೆನಿ
...ರಷ್ಯವು ಫಿನ್ಲೆಂ
...ಷ ಕೇಳಿರುವು
...ಬಿಟ್ಟುಕೊಡಲು
...ರಕ್ಷಿತತೆಗೆ ಧಕ್ಕೆ
...ದರೂ ಫಿನ್ಲೆಂ
...ಲು ಸಿದ್ಧವಿರುವು
...ಮಂತ್ರಿ ಎಮ್,
...13ರಲ್ಲಿ ರಷ್ಯ

NAYAK
...D,
...E

...Mrs P Sundari
...of Sri P Nur-
...uttapadi, holder
...513 and 1578 to
...ank has applied
...thereof on the
...have been mis-
...and that they
...in any manner.
...sale of the said
...quired to lodge
...writing to the
...at Udipi by the
..., failing which
...k duplicates as

Laxman
Nayak,
...y the Treasurer.

ಕ್ಕೆ ಇನ್ನು ಹೆಚ್ಚಿನ ರಿಯಾಯಿತಿ ತೋರಿಸಲು ಸಾಧ್ಯವಿಲ್ಲೆಂದು ಸ್ಪಷ್ಟವಾಗಿ ಹೇಳಿರುವರು. ಇದರಿಂದ ಸೋವಿಯೆಟ್ ಸರಕಾರವು ಸಿಟ್ಟುಗೊಂಡಿರುವುದು. ಸೋವಿಯೆಟ್ ಪತ್ರಿಕೆಗಳು ಫಿನ್ಲೆಂಡಿಗೆ ಬೆದರಿಕೆ ಹಾಕಿರುವವು. ಲೆನಿನ್ ಗ್ರಾಡಿನ ಸುರಕ್ಷಿತತೆಗಾಗಿ ಸೋವಿಯೆಟ್ ಸರಕಾರವು ಕೇಳುವ ಕನಿಷ್ಠ ಕೇಳಿಕೆಗಳನ್ನು ಫಿನ್ಲೆಂಡು ಕೊಡದೆ ಉದ್ಧಟತನ ತೋರಿಸಿದರೆ, ರಷ್ಯವು ಬೇರೆ ವಿಧಾನದಿಂದ ತನ್ನ ಉದ್ದೇಶ ಸಾಧಿಸಬೇಕಾಗುವುದೆಂದು ಎಚ್ಚರಿಸಿರುತ್ತದೆ. ರಷ್ಯವು ಧಾಳಿ ನಡಿಸಿದರೆ ತಡೆಗಟ್ಟಲು ಬೇಕಾದ ಸಿದ್ಧತೆಯೆಲ್ಲಾ ಫಿನ್ಲೆಂಡಿನಲ್ಲಿ ನಡೆಸಲ್ಪಟ್ಟಿರುವುದು.

ಮುಸ್ಲಿಮ್ ಲೀಗಿನ ಉದ್ದೇಶ

ಇದೇ ತಾ. 13ರಲ್ಲು ಬೊಂಬಾಯಿಯ ಎಸ್‌ಪ್ಲನೇಡ್ ಮೈದಾನಿನಲ್ಲಿ 80,000 ಕ್ಕಿಂತಲೂ ಮಿಕ್ಕಿದ ಮುಸಲ್ಮಾನರು ಇದ್-ಉಲ್-ಫಿಟಾರ್ ಪ್ರಾರ್ಥನೆಗಾಗಿ ನೆರೆದಿದ್ದಾಗ ಮಿ. ಜಿನ್ನಾರವರು, ಜನತೆಯಿಂದ ಉತ್ಸಾಹಪರ ಜಯಘೋಷಪಡೆದು ಮುಸ್ಲಿಮ್ ಲೀಗ್ ಧ್ವಜಾರೋಹಣಮಾಡಿದರು.

"ಈ ಸಂದರ್ಭದಲ್ಲಿ ಮುಸ್ಲಿಮ್ ಲೀಗಿಗೆ ಉತ್ಸಾಹಪರ ಬೆಂಬಲವೀಯುವುದೇ ಮುಸಲ್ಮಾನರ ಏಕಮಾತ್ರ ರಾಜಕೀಯ ತತ್ವವಿರಬೇಕು. ಮುಸ್ಲಿಮ್ ಲೀಗಿಗೆ ಈಗ ಹೆಚ್ಚಿನ ಬಲಬಂದಿದೆ ಮುಸಲ್ಮಾನರೀಗ ಎಂತಹ ಪ್ರಬಲ ಶಕ್ತಿಯನ್ನಾದರೂ ವಿರೋಧಿಸಬಲ್ಲರು. ಆದರೆ ಯಾರೊಡನಾದರೂ ಜಗಳ ಗಂಟಿಕ್ಕುವುದು ಅಥವಾ ಯಾರಿಗಾದರೂ ಹಾನಿ ಮಾಡುವುದು ಲೀಗಿನ ಉದ್ದೇಶವಲ್ಲ" ಎಂದು ಮಿ. ಜಿನ್ನರು ಭಾಷಣವಿತ್ತರು.

ಮಾಜಿ ಕೈಸರರ ಮಗನ ಪಸ್ತಗಿರಿ.

ಜರ್ಮನಿಯಲ್ಲಿ ಪುನಃ ಅರಸುತನವನ್ನು ಸ್ಥಾಪಿಸಬೇಕೆಂಬ ಚಳವಳವು ನಡೆದಿರುತ್ತದೆ. ಈ ಸಂಬಂಧವಾಗಿ ಮಾಜಿ ಕೈಸರರ 4ನೇ ಪುತ್ರ ರಾಜಕುಮಾರ ಅಗಸ್ಟ್ ವಿಲ್ ಹೆಲ್ಮರು ಪೋಟ್ಸ್ ಡೇಮ್ ಎಂಬಲ್ಲಿ ನಿರ್ಬಂಧದಲ್ಲಿರಿಸಲ್ಪಟ್ಟಿರುವರು. ಇವರು 1930ರಲ್ಲಿ ನಾಝಿ ಪಕ್ಷಕ್ಕೆ ಸೇರಿದ್ದರು. ಮತ್ತು ಕೆಲಸಮಯ ಪ್ರಷ್ಯದ ಪಾರ್ಲಿಮೆಂಟಿನ ನಾಝಿ ಪ್ರತಿನಿಧಿಯಾಗಿದ್ದರು.

ಪಶ್ಚಿಮ ರಣರಂಗದಲ್ಲಿ ಜರ್ಮನರ ದೊಡ್ಡ ಧಾಳಿ

ಇದೇ ತಾ. 11ರಲ್ಲು ಪಶ್ಚಿಮ ರಣರಂಗದಲ್ಲಿ ಜರ್ಮನರು ಎರಡು ಕಡೆಗಳಲ್ಲಿ ಫ್ರೆಂಚ್ ಸೇನೆಯ ಮೇಲೆ ಪ್ರಬಲ ಧಾಳಿ ನಡಿಸಿ ಹತಭಗ್ನರಾಗಿರುವರು. ಒಂದು ಕಡೆ ಒಂದು ಮೈಲು ಮತ್ತು ಇನ್ನೊಂದು ಕಡೆ 1000ಗಜ ವಿಸ್ತೀರ್ಣದಲ್ಲಿ ಜರ್ಮನ್ ಸೇನೆಯು ಮೊದಲು ಫಿರಂಗಿ ಗುಂಡುಹಾರಿಸಿ ಅನಂತರ ವಿ. ಕನ್ ತೋಪುಗಳಿಂದ ಗುಂಡುಗಳ ಮಳೆಗರೆದು ಹೋರಾಟ ನಡೆಸಿತು. ಜರ್ಮನ್ ವಿಮಾನಗಳು ರಣರಂಗದಲ್ಲಿ ಎಡೆಬಿಡದೆ ಮುಂದೆ ಹಿಂದೆ ಹಾರುತ್ತಾ ಫ್ರೆಂಚ್ ಸೇನೆಯ ಚಲನವಲನದ ಕುರಿತು ಸಮಾಚಾರ ಕಳುಹಿಸುತ್ತಿದ್ದವು. ಜರ್ಮನರು 200ಗಜ ಮುಂದೊತ್ತುತ್ತಿದ್ದಾಗ ಫ್ರೆಂಚ್ ಫಿರಂಗಿ ಗುಂಡುಗಳಿಂದ ಜಯಶೀಲವಾಗಿ ತಡೆಗಟ್ಟಲ್ಪಟ್ಟರು.

ಹೊಲ್ಲೆಂಡಿನ ಮೇಲೆ ಧಾಳಿ ನಡಿಸಲ್ಪಡುವುದಿಲ್ಲ.

ಜರ್ಮನ್ ಸೇನೆಯು ಹೊಲ್ಲೆಂಡಿನ ಮೇಲೆ ಧಾಳಿನಡಿಸುವದಾಗಿಲ್ಲೆಂದೂ, ಬೆಲ್ಜಿಯಮ್ ಮತ್ತು ಹೊಲ್ಲೆಂಡಿನ ಎಲ್ಲೆಗಳಲ್ಲಿ ಕವಾಯತಿಗಾಗಿ ಜರ್ಮನ್ ಸೇನೆಯು ಸಂಗ್ರಹವಾಗಿರುವುದೆಂದೂ ಜರ್ಮನ್ ಸರಕಾರವು ತಿಳಿಸಿರುವುದು. ಹೊಲ್ಲೆಂಡ್ ಮತ್ತು ಬೆಲ್ಜಿಯಮ್‌ಗಳ ಮೇಲೇರಿ ಹೋಗಬೇಕೆಂದು ಹಿಟ್ಲರರ ಛಲವಿದ್ದರೂ, ಸೇನಾನಿಗಳು ಕೆಲವರು ಪ್ರಬಲವಾಗಿ ವಿರೋಧಿಸಿ, ಆದರಿಂದ ಅಮೇರಿಕವು ಯುದ್ಧಕ್ಕೆಳೆಯಲ್ಪಡುವಂತಾಗುವುದೆಂದು ಎಚ್ಚರಿಸಿ ತಡೆಗಟ್ಟಿರುವಂತಾಗಿ ತಿಳಿದುಬರುತ್ತದೆ.

ಸಂಧಿಯ ಯತ್ನ

ಯುದ್ಧದಿಂದ ದೊಡ್ಡ ಉಭಯಸಂಕಟದಲ್ಲಿ ಬಿದ್ದಿರುವ ಹೊಲ್ಲೆಂಡಿನ ರಾಣಿ ವಿಲ್ ಹೆಲ್ಮೀನಾ ಮತ್ತು ಬೆಲ್ಜಿಯಮಿನ ರಾಜ ಲಿಯೊಪೋಲ್ಡರು ಒಟ್ಟುಸೇರಿ ಇನ್ನಾದರೂ ರಾಜಿಮಾಡಿಕೊಂಡು ಭೀಕರ ಯುದ್ಧದ ಹಾವಳಿಯಿಂದ ಯುರೋಪನ್ನು ಉಳಿಸಬೇಕೆಂದು ಶಾಂತಿಮೂಲಕ ಅತ್ಯಾಗ್ರಹದ ವಿನಂತಿಗಳನ್ನು ಹರ್ ಹಿಟ್ಲರರಿಗೂ ಮಿತ್ರರಾಷ್ಟ್ರಗಳಿಗೂ ಕಳುಹಿಸಿದುವರು. ಇಕ್ಕಡೆಯವರೂ ಈ ಕುರಿತು ಆಲೋಚಿಸುತ್ತಿರುವರು. ಈಗ ಜರ್ಮನಿಯು ಫ್ರಾನ್ಸಿಗಿಂತಲೂ ಇಂಗ್ಲೆಂಡಿನ ಮೇಲೆ ಮುನಿದುಬಿದ್ದು ಉರಿಕಾರುತ್ತಿದೆ. ಅವರ ಮೇಲೆ ಜಯಶೀಲವಾಗಿ ವಿಮಾನಧಾಳಿ ನಡಿಸಲು ಹೊಲ್ಲೆಂಡಿನ ಮೂಲಕ ಮಾತ್ರ ಸಾಧ್ಯ. ಜರ್ಮನ್ ಸಬ್‌ಮೆರೀನುಗಳೂ ಹೊಲ್ಲೆಂಡಿನ ಸಮುದ್ರತೀರದಲ್ಲಿ ಆಶ್ರಯಪಡೆದು ಬ್ರಿಟಿಷ್ ಹಡಗಗಳ ಮೇಲೆ ಹೆಚ್ಚಿನ ಹಾವಳಿಮಾಡಬಹುದು. ಆದುದರಿಂದ ಜರ್ಮನಿಯು ಹೊಲ್ಲೆಂಡಿನ ಮೇಲೆ ಧಾಳಿಟ್ಟು ಆಕ್ರಮಣ ಮಾಡುವ ಸಿದ್ಧತೆಮಾಡಿರುವುದೆಂದು ಸುದ್ದಿಯುಂಟಾಗಿದ ಹೊಲ್ಲೆಂಡು ಈ ಧಾಳಿಯನ್ನು ತಡೆಗಟ್ಟಲು ಬೇಕಾದ ಸಿದ್ಧತೆಮಾಡುತ್ತಿದೆ. ಜರ್ಮನಿಯು ಎಲ್ಲೆಯ ತನ್ನ ಪ್ರದೇಶವನ್ನು ನದಿನೀರಿನಿಂದ ಮುಳುಗಿಸಿ ಬಿಡುವ ಏರ್ಪಾಡುಮಾಡಿದೆ. ಹಾಗೆ ಮುಳುಗಿಸಿದ ಪಕ್ಷದಲ್ಲಿ ಈಜಿ ದಾಟಲು ಜರ್ಮನರು ಅಶ್ವಾರೋಹಿ ಸೇನೆಯನ್ನು ಸಂಗ್ರಹಿಸುತ್ತಿದ್ದಾರೆಂದು ವಾರ್ತೆಯುಂಟಾಗಿದೆ. ಹೊಲ್ಲೆಂಡನ್ನು ಜರ್ಮನ್ ಸೇನೆಯು ಆಕ್ರಮಿಸಿದರೆ ಮತ್ತೆ ಬೆಲ್ಜಿಯಮಿನ ಗತಿ ಏನಾಗುವುದೆಂದು ಹೇಳಬರುವುದಿಲ್ಲ. ಆದುದರಿಂದ ಈ ಎರಡು ರಾಷ್ಟ್ರಗಳೂ ಉದ್ವೇಗಗೊಂಡಿವೆ. ಯುದ್ಧವು ಭೀಷಣವಾಗಿ ಮುಂದುವರಿದ ಪಕ್ಷದಲ್ಲಿ ಒಂದಲ್ಲೊಂದು ರೀತಿಯಿಂದ ತಮಗೆ ಗಂಡಾಂತರ ತಪ್ಪದೆಂದು ಬೆದರಿ ಸಂಧಾನ ಮಾಡಲು ಸಾಧ್ಯವಾದ ಪ್ರಯತ್ನವನ್ನು ಈ ದೇಶಗಳ ಅರಸರು ನಡಿಸುತ್ತಿರುವರು

ಹಿಟ್ಲರನ ರಣಗರ್ಜನೆ

1923ನೇ ನವಂಬರ ತಾ. 8ರಲ್ಲು ಹರ್ ಹಿಟ್ಲರರೇ ಮೊದಲಾದ ನಾಝಿಗಳು ಮ್ಯುನಿಚ್ ಪಟ್ಟಣದ ಬೀರ್ ಸಂಗ್ರಹಾಲಯವೊಂದರಲ್ಲಿ ಒಳಸಂಚು ನಡಿಸಿ ಬಂಡಾಯವೆಬ್ಬಿಸಿ ಅದು ಅಣಗಿಸಲ್ಪಟ್ಟಿತು ಹಿಟ್ಲರರು ವಿಜಯಿಯಾದ ಮೇಲೆ ಪ್ರತಿವರ್ಷ ಈ ನಿರರ್ಥಕ ಬಂಡಾಯದ ದಿನವನ್ನು ಸ್ಮರಣೀಯವಾಗಿ ಆಚರಿಸುತ್ತಾ ಬಂದಿರುವರು. ಈ ವರ್ಷವೂ ಅದೇ ರೀತಿ ಹಿಟ್ಲರರು ಸ್ವತಃ ಮ್ಯುನಿಚಿಗೆ ಹೋಗಿ ಉಗ್ರ ಭಾಷಣವೊಂದನ್ನಿತ್ತಿರುವರು. ಎಂದಿಗೂ ತಾನು ಶರಣಾಗತನಾಗಲಾರೆ. 5 ವರ್ಷಗಳ ಯುದ್ಧಕ್ಕೆ ಸಿದ್ಧತೆ ಮಾಡಬೇಕೆಂದು ಮಾರ್ಶಲ್ ಗೋರಿಂಗರಿಗೆ ಅನುಜ್ಞೆ ಕೊಟ್ಟಿರುತ್ತೇನೆ. ಜರ್ಮನ್ ಸರಕಾರದ ಮಾತನ್ನು ನಂಬಬಹುದಾದರೆ ತಾವು ಸಂಧಿಗೆ ಸಿದ್ಧವಿರುವೆವೆಂದು ಬ್ರಿಟಿಷ್ ಮಂತ್ರಿಗಳು ಹೇಳಿರುತ್ತಾರೆ. ಅದೇ ಮಾತನ್ನು ತಾನು ಬ್ರಿಟಿಷ್ ಸರಕಾರದ ಕುರಿತೂ ಹೇಳಬಹುದು. ಇಂದೀಗ ಜರ್ಮನ್ ಸೇನೆಯು ಅಪ್ರತಿಮವಾಗಿದೆ. ಜರ್ಮನ್ ಜನತೆಯ ಐಕ್ಯವು ಇತಿಹಾಸದಲ್ಲೇ ಅಸದೃಶವಿದ. ಬ್ರಿಟಿಷರು ತಮ್ಮ ಸಾಮ್ರಾಜ್ಯದ ರಾಷ್ಟ್ರಗಳಿಗೆ ಸ್ವಾತಂತ್ರ್ಯವೀಯುತ್ತಿದ್ದರೆ, ಹಿಂದು ದೇಶವನ್ನು ಸ್ವತಂತ್ರವಾಗಿ ಮಾಡುತ್ತಿದ್ದರೆ ಮಂದನೀಯರಾಗಿರುತ್ತಿದ್ದರು. ಈ ಯುದ್ಧದಲ್ಲಿ ಯಾರಾದರೂ ವಿಜಯಿಯಾಗುವುದಿದ್ದರೆ ಅದು ಜರ್ಮನಿ. ನಾಝಿ ಜರ್ಮನಿಯ ಸಂಬಂಧವಾದ ಬ್ರಿಟಿಷರ ದ್ವೇಷವೇ ಈ ಯುದ್ಧಕ್ಕೆ ಮೂಲ. ಫ್ರಾನ್ಸು ಇಂಗ್ಲೆಂಡಿನೊಂದಿಗೆ ಸೇರಿದುದು ಶೋಚನೀಯ. ಏಕ ರಣರಂಗದ ಯುದ್ಧದ ಭಯವೇನೂ ಜರ್ಮನಿಗಿಲ್ಲ. ಇಂದು ಇಂಗ್ಲೆಂಡು ಎದುರಿಸಿರುವ ಜರ್ಮನಿಗೂ 1914ರ ದಕ್ಕೂ ಬಹಳ ಅಭ್ಯಂತರವಿದೆ. ಈ ಸಲ ಜರ್ಮನಿಯು ಎಂದೂ ಶರಣಾಗತನಾಗಬಾರದು ಒಂದೇ ಮನಸ್ಸಿನಿಂದ ಒಬ್ಬ ಮುಖಂಡನ ಕೈತಳಗೆ ಬಂದುಗೂಡಿರುವ 80 ಮಿಲ್ಯ ಜನರು ಏನುಮಾಡಬಲ್ಲರೆಂಬುದನ್ನು ವೈರಿಗಳಿಗೆ ತೋರಿಸುವ ಸಂದರ್ಭವೀಗ ಬಂದಿದೆಯೆಂಬುದೇ ಹಿಟ್ಲರರ ಭಾಷಣದ ಸಾರಾಂಶ.

ಮ್ಯುನಿಚಿನಲ್ಲಿ ಬೋಂಬಿನ ಸ್ಫೋಟ

ಹಿಟ್ಲರರು ಮ್ಯುನಿಚಿನ ಬೀರ್ ಸೆಲ್ಲರಿನಲ್ಲಿ ಭಾಷಣಕೊಟ್ಟು ಬರ್ಲಿನಿಗೆ ಹೊರಟುಹೋದೊಡನೆಯೇ ಬೀರ್‌ಸೆಲ್ಲರಿನಲ್ಲಿ ಬೋಂಬೊಂದು ಸ್ಫೋಟವಾಗಿ ಇದೀ ಕಟ್ಟಡದ ಸೀಲಿಂಗ್ ಕುಸಿದು ಬಿದ್ದು 6 ಮಂದಿ ಕೊಲ್ಲಲ್ಪಟ್ಟು 60ಕ್ಕಿಂತಲೂ ಮಿಕ್ಕಿದವರು ಜಖಮ್ ಹೊಂದಿರುವರು. ಹರ್ ಹಿಟ್ಲರರ ಭಾಷಣವೀಯುವಾಗ ಆ ಬೋಂಬು ಅವರ ತಲೆಯ ಮೇಲೆಯೇ ಇಡಲ್ಪಟ್ಟಿತ್ತು. ಹಿಟ್ಲರರು ತನ್ನ ಭಾಷಣವನ್ನು ಅರ್ಧ ಘಂಟೆ ಮೊದಲೇ ಮುಗಿಸಿ ಹೋದುದರಿಂದ ಅವರು ಪ್ರಾಣಾಪಾಯದಿಂದ ಪಾರಾದರು ಪ್ರಮುಖ ನಾಝಿ ಮುಖಂಡರಾರೂ ಈ ಸ್ಫೋಟದಿಂದ ಕೊಲ್ಲಲ್ಪಟ್ಟಿರುವುದಿಲ್ಲ. ಈ ಬೋಂಬನ್ನು ಯಾರು ಹೇಗೆ ಇರಿಸಿದರೆಂಬ ಕುರಿತು ಈ ವರೆಗೆ ಪತ್ತೆ ಹಚ್ಚಲ್ಪಟ್ಟಿರುವುದಿಲ್ಲ ಹಿಟ್ಲರರು ಸ್ವತಃ ಈ ಬೋಂಬು ಸ್ಫೋಟದ ಸ್ಥಳಕ್ಕೆ ಹೋಗಿ ತನಿಖೆ ನಡಿಸುತ್ತಿರುವರು.

NAVAYUGA ENTERPRISE LTD.
UDIPI.
DIRECTORS:

1 Sri K. Jagannatha Ballal, B A LL.B.
Director, Vijaya Bank Ltd; Director, Karnataka Stores Ltd, & Vakil, Udipi. (Chairman)

2 Sri M. S. Pejathaya,
Director, Karnataka Stores Ltd. & Agent, Palimar Mutt Udipi.

3 Sri Balkattabeedu Krishnayya Hegde,
Dt. Bd. Member, S. Kanara Director, The Thulunad Bank of Supply Agency Ltd., Udipi; & Landlord Athradi, Parkal Post.

4 Sri K. Honnayya Shetty,
Director, General Supplies Ltd. & Merchant, Udipi. (Managing Director)

ಅದ್ವಿತೀಯ ಗುಣಕಾರಿ
ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ
ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ಥಂಬರಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ ಯಾ ಇನ್ನಿತರ ಅನಭವಯುಕ್ತ ವನಸ್ಪತಿಗಳ ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ ಹೊಟ್ಟೆಯುಬ್ಬರ, ಶೂಲೆ, ಆಚ್ಛಾದ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿ ಪಡಿಸುವದು, ಹಾಗೂ ಆಲಸ್ಯ ಯಾ ವಾಯುಗೆಳೆಂಬ ವಿಷನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿವೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, ?-0-0, 1000, 9-0-0.
5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ) ಗಳನ್ನು ಕಳುಹಿಸುತ್ತಬೆ.

ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕುಂಬಳೆ.
ಪ್ರೋಪ್ರೈಟರು—ಬ್ರಹ್ಮಾವರ, ದ. ಕ.

ನಮ್ಮ ಸ್ಟಾಕಿಸ್ಟರು—1. ಪಿ. ಆರ್. ಪ್ರಭು, ದಿ ಕೆನರಾ ಡ್ರಗ್ಸ್ ಎಂಡ್ ಬುಕ್ಸ್ ಎಜನ್ಸಿ, ಬಟಾಟಾವಾಲು ಮೆನ್ನನ್, ಮುಂಬೈ 2 ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ. 3. ನವಭಾರತ ಬುಕ್ ಡಿಪೋ, ಉಡುಪಿ.

ಮಂಗಳೂರು

ಸ್ವ. ಬಾ. ತಾ 13-11-39.

ಯಕ್ಷಗಾನ—ತಾ. 8-11-39ನೇ ಬುಧವಾರ ದಿನ ರಾತ್ರಿ ಗವರ್ನಮೆಂಟ್ ಟ್ರೈನಿಂಗ್ (ಹಾ ಎ) ಶಾಲಾ ಹೆಡ್ಮಾಸ್ತರ್ ಶ್ರೀ| ಕೆ. ಗೋಪಾಲರಾಯರನ್ನೂ ಅವರ ಸಹೋದ್ಯೋಗಿಗಳಾದ ಶ್ರೀ| ಮಾಧವ ಭಟ್ಟರು ಮತ್ತು ಶ್ರೀ| ಶಂಕರನಾರ್ಣಪ್ಪಯ್ಯನವರು ಇವರುಗಳನ್ನೂ ಗೌರವಿಸುವುದಕ್ಕಾಗಿ ಒಂದು ಯಕ್ಷಗಾನ ಸಮಾರಂಭವು ಏರ್ಪಡಿಸಲ್ಪಟ್ಟಿತು. ಮೇಲಿನ ಮೂವರು ಮಹನೀಯರು ಸದ್ಯದಲ್ಲಿ ಸರ್ವಿಸಿನಿಂದ ನಿವೃತ್ತರಾಗುವವರಾಗಿರುವರು. ಈ ಸಂದರ್ಭದಲ್ಲಿ ಅವರನ್ನು ಗೌರವಿಸುವ ಉದ್ದೇಶದಿಂದ ಈ ಸಮಾರಂಭವನ್ನೇರ್ಪಡಿಸಲಾಯಿತು ಜಿಲ್ಲೆಯ ಅನೇಕ ಪ್ರಸಿದ್ಧ ಅರ್ಥಧಾರಿಗಳು ಭಾಗವಹಿಸಿದ್ದರು ಪ್ರಸಂಗ "ಭೀಷ್ಮಪರ್ವ"

ಕದ್ರಿ ಯಕ್ಷಗಾನ ಸಭಾ—ಕದ್ರಿ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಸಭೆಯವರು ಕನ್ನರಕುದ್ರು ಗಂಗಾಧರ ರ ವೆಂಕಟಪ್ಪಯ್ಯನವರಿಂದ ರಚಿತವಾದ "ಶಲ್ಯಪರ್ವ" ಎಂಬ ನೂತನ ಪ್ರಸಂಗವನ್ನು ತಾಳಮದ್ದಳೆ ರೂಪದಿಂದ ಯಕ್ಷಗಾನ ಕಾಲಕ್ಷೇಪ ನಡೆಸಿದರು. ಈ ಸಂದರ್ಭದಲ್ಲಿ ಶ್ರೀ| ಎನ್. ತಿಮ್ಮಪ್ಪಯ್ಯ ಕಾಡಂತಪೂ ವಿದ್ವಾನ್ ಯಂ. ಆರ್. ಶಾಸ್ತ್ರಿಗಳೂ ಮತ್ತು ಕೆ ಕೃಷ್ಣರಾಯರೂ ಯಕ್ಷಗಾನ ಕಲೆಯ ವಿಷಯ ಮಾತಾಡಿ ಯಕ್ಷಗಾನ ಕಲಾಭಿವೃದ್ಧಿಗಾಗಿ ದುಡಿಯುವವರು ಯಕ್ಷಗಾನ ಪ್ರಸಂಗಗಳನ್ನು ಬರೆಯುವವರ ಕಥೆಗಳನ್ನು ಕವಿತೆಗಳನ್ನು ಉಪಯೋಗಿಸಿ ಅವರಿಗೂ ಪ್ರೋತ್ಸಾಹ ಕೊಡುವುದು ಅಗತ್ಯವೆಂದರು. ಶಲ್ಯಪರ್ವವು ಯಶಸ್ವಿಯಾಗಿ ಅಭಿನಯಿಸಲಾಯಿತು.

ಹೊಸ ಅನಾಥಾಶ್ರಮ—ಕಳೆದ ತಾ. 10ನೇ ಶುಕ್ರವಾರ ದಿನ ಸಾಯಂಕಾಲ ಜಿಲ್ಲಾ ಜಡ್ಜರಾದ ಶ್ರೀ| ಪಿ ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಋಷಿ ದಯಾನಂದರ ನಿರ್ವಾಣೋತ್ಸವವೂ ಶ್ರೀ. ಶ್ರದ್ಧಾನಂದ ಅನಾಥಾಶ್ರಮದ ಸ್ಥಾಪನೆಯೂ ನಡೆಯಿತು. ಈ ಸಮಾರಂಭದಲ್ಲಿ ಶ್ರೀಗಳುದ ನಡ್ಕೋಡಿ ಅನಂತ ಉಪಾಧ್ಯಾಯರೂ, ಕೆ. ಕೃಷ್ಣರಾಯರೂ ಮತ್ತು ಯಂ ಮಾಧವರಾಯರೂ ಭಾಷಣ ಮಾಡಿದರು. ಅಧ್ಯಕ್ಷರು ಆರ್ಯಸಮಾಜದವರು ಮಾಡುತ್ತಿರುವ ಧರ್ಮಸೇವೆಯನ್ನು ಪ್ರಶಂಸಿಸಿ ಅನಾಥಾಶ್ರಮದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಶಾಂತಿಪಾಠ ಧನ್ಯವಾದಾರ್ಪಣೆಗಳೊಂದಿಗೆ ಸಭಾಂತ್ಯವಾಯಿತು.

ಕರ್ಣಾಟಕ ಸಂಘ, ಹಿಂದೂ ವಿಶ್ವವಿದ್ಯಾಲಯ, ಕಾಶಿ— "ಕಾಶೀ ಹಿಂದೂ ವಿಶ್ವವಿದ್ಯಾಲಯದ ಕರ್ಣಾಟಕ ಸಂಘದ ಸಾರ್ವಜನಿಕ ಸಭೆಯು ತಾ 4—11—39ನೇ ಸಾಯಂಕಾಲ ಘಂಟೆ 6ಕ್ಕೆ ಶ್ರೀ. ಪೇಜಾವರ ಸದಾಶಿವರಾಯರ ನಿಧನದ ಕುರಿತು ದುಃಖ ಸೂಚಕವಾದ ಠರಾವನ್ನು ಪಾಸುಮಾಡಲು ಪ್ರೊಫೆಸರ್ ಡಾಕ್ಟರ್ ಬಿ ದಾಕ್ಷಿಣ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಸದಾಶಿವರಾಯರ ವಿಷಯವಾಗಿ ನಾಲ್ಕು ಮಾತುಗಳನ್ನಾಡಿದ ತರುವಾಯ ಶ್ರೀ| ಸಾಂತ್ಯರು ಕೃಷ್ಣರಾಯರು ಅವರ ಜೀವನ ಚರಿತ್ರೆಯನ್ನು ಕನ್ನಡ ನಾಡಿಗೆ ಅವರು ಮಾಡಿದ ಸೇವೆಯನ್ನೂ ವಿವರಿಸಿ ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು. "ಕನ್ನಡಸಾಹಿತಿಗಳೂ ಹಿಂದೂ ವಿಶ್ವವಿದ್ಯಾಲಯದ ಕರ್ಣಾಟಕ ಸಂಘದ ಭೂತಪೂರ್ವ ಕಾರ್ಯದರ್ಶಿಗಳೂ ಆದ ಶ್ರೀ ಪೇಜಾವರ ಸದಾಶಿವರಾಯರು ತನ್ನ ವಿದ್ಯಾಭ್ಯಾಸವು ಮುಗಿಯುತ್ತಲೇನ್ನುವಾಗಲೇ ಮಿಲಾನ್ನಿನಲ್ಲಿ ದೈವಾಧೀನರಾದರೆಂದು ಕೇಳಲು ಈ ಸಂಘದ ಸದಸ್ಯರಾದ ನಾವೆಲ್ಲರೂ ಅತ್ಯಂತ ವಿಷಾದಿಸುತ್ತೇವೆ. ಅವರ ನಿಧನದಿಂದ ಕರ್ಣಾಟಕವು ಪ್ರಗತಿಗೆ ಬರತಕ್ಕವರಿದ್ದ ಒಬ್ಬ ತರುಣರನ್ನು ಕಳೆದುಕೊಂಡಿತು. ಅವರ ಆತ್ಮಕ್ಕೆ ಶಾಂತಿಯು ಸಿಕ್ಕುವಂತೆ ನಾವೆಲ್ಲರೂ ಪರಮಾತ್ಮನನ್ನು ಪ್ರಾರ್ಥಿಸುವೆವು." ಠರಾವು ಅಂಗೀಕೃತವಾದ ನಂತರ ದಿವಂಗತ ಆತ್ಮಕ್ಕೆ ಶಾಂತಿಯು ಸಿಕ್ಕುವಂತೆ ನಿಮಿಷಕಾಲ ಪರಮಾತ್ಮನನ್ನು ಪ್ರಾರ್ಥಿಸಿ ಸಭೆಯು ಮುಕ್ತಾಯವಾಯಿತು."

ವಿದ್ಯಾ ಸಪ್ತಾಹ—ಕಳೆದ ತಾ. 11ನೇ ಶನಿವಾರ ಸಾಯಂಕಾಲ ಜಿಲ್ಲಾ ಉಪಾಧ್ಯಾಯರ ಸಂಘದವರು ವಿದ್ಯಾ ಸಪ್ತಾಹವನ್ನು ಆರಂಭಮಾಡಿದರು ಕಾಶಿಯ ಪ್ರೊ ಬಿ ಸಂಜೀವರಾಯರು ಇದರ ಉದ್ಘಾಟನಾಸಮಾರಂಭವನ್ನು ನೆರವೇರಿಸಿದರು ಪ್ರತಿದಿನವೂ ಬೇರೆಬೇರೆ ವಿದ್ವಾಂಸರ ಭಾಷಣಗಳ ಏರ್ಪಾಡಾಗಿದೆ.

ಬೈಲೂರು—ಇಲ್ಲಿಯ ಕೋಂಗ್ರೆಸ್ ಕಮಿಟಿಯ ಆಹ್ವಾನದಂತೆ ಕಳೆದ ತಾ. 4ನೇ ಸೋಮವಾರ ಸ್ಥಳೀಯ ಮಿಲಿಟರಿ ಮೈದಾನಿನಲ್ಲಿ ಶ್ರೀ. ದೇಶಭಕ್ತ ಎನ್. ಎಸ್. ಕಿಲ್ಲೆಯವರು, ನೆರೆದ ಪ್ರಚಂಡ ಜನಸಮೂಹದೆದುರಿಗೆ, ಇಂದಿನ ಪ್ರಾಪಂಚಿಕ ಪರಿಸ್ಥಿತಿಯನ್ನೂ ಈ ಸಂಬಂಧದಲ್ಲಿ ಕೋಂಗ್ರೆಸಿನ ಧೋರಣೆಯನ್ನೂ ಕುರಿತು ಒಂದು ಉಜ್ವಲ ಭಾಷಣವನ್ನಿತ್ತರು.

ಸುಬ್ರಹ್ಮಣ್ಯ—ದಕ್ಷಿಣಕನ್ನಡ ಜಿಲ್ಲಾ ಪುತ್ತೂರು ತಾಲೂಕು ಮಹತೋಭಾರ ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪೂರ್ವ ಸಂಪ್ರದಾಯ ಪ್ರಕಾರ ಇದೇ ಬರುವ ಪ್ರಮಾಥಿ ಸಂ|ರದ ಕಾರ್ತಿಕ ಬ ೧೩ ಯು ಶುಕ್ರವಾರ ತಾ. 8-12-39ರಲ್ಲಿ ಮಹೋತ್ಸವವು ಪ್ರಾರಂಭವಾಗಿ ಕಾರ್ತಿಕ ಬ ೩೦ ಯು ರವಿವಾರ ತಾ 10-12-39ರಲ್ಲಿ ಲಕ್ಷದೀಪೋತ್ಸವ, ಮಾರ್ಗಶಿರ ಶು ೪ ಯು ಕ್ಷೌಪಂಚಮಿಯು ಶುಕ್ರವಾರ ತಾ, 15 12-39ರಲ್ಲಿ ಹೂವಿನ ತೇರು, ಶು. ೫ ಯು ಶನಿವಾರ ತಾ 16-12 39ರಲ್ಲಿ ಪಂಚಮಿ ರಥೋತ್ಸವ ಶು. ೬ ಯು ರವಿವಾರ ತಾ. 17-12-39ರಲ್ಲಿ "**ಚಂಪಾಷಷ್ಠಿ ಮಹಾರಥೋತ್ಸವ**" ಅದೇ ಶು. ೭ ಯು ಸೋಮವಾರ ತಾ 18-12 39ರಲ್ಲಿ ಅವಭೃತೋತ್ಸವವೇ ಮೊದಲಾಗಿ ವಿಶೇಷ ಉತ್ಸವಗಳು ನಡೆದು ಬರುವದ್ರಿಂದ ಭಕ್ತ ಮಹಾಜನರು ಈ ಸುಸಂದರ್ಭದಲ್ಲಿ ಈ ಪುಣ್ಯಕ್ಷೇತ್ರಕ್ಕೆ ದಯಮಾಡಿ ಶ್ರೀದೇವರ ಪ್ರಸಾದಾದಿಗಳನ್ನು ಸ್ವೀಕರಿಸಿಕೊಂಡು ಹೋಗಬೇಕಾಗಿ ಮೆನೇಜರರು ಅಪೇಕ್ಷಿಸುತ್ತಾರೆ.

ಕಟಪಾಡಿ—ತಾ. 1-11-39ರಲ್ಲಿ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡು ವೈಸ್ ಪ್ರೆಸಿಡೆಂಟರು ಬಂದು ಕಟಪಾಡಿ ಬೋರ್ಡು ಹುಡುಗಿಯರ ಶಾಲೆಯನ್ನು ಪರಿಶೀಲಿಸಿ ಅಷ್ಟರಲ್ಲಿ ತೆರೆದುದಕ್ಕಾಗಿ ತಾ. 2-11-39ರಲ್ಲಿ ಅಟ್ಟೆಡೆ ಜನಾರ್ದನಾಚಾರ್ಯರ ಅಧ್ಯಕ್ಷತೆಯಲ್ಲಿ ಊರವರ ಮಹಾಸಭೆಯು ಜರಗಿ ಕೃತಜ್ಞತೆಯನ್ನು ವ್ಯಕ್ತಪಡಿಸಲಾಯಿತು. ಮಕ್ಕಳಿಗೆ ಇನಾಮನ್ನೂ ನೆರೆದ ಸಭಿಕರಿಗೆ ತಿಂಡಿತೀರ್ಥಗಳನ್ನೂ ಶ್ರೀ. ಲಕ್ಷ್ಮೀನಾರಾಯಣ ಆಚಾರ್ಯರು ತನ್ನ ಖರ್ಚಿನಿಂದ ಹಂಚಿಸಿದ್ದು ಸ್ತುತ್ಯ

ಫಲಿಮಾರು—ಬೊಂಬಾಯಿ ಈಸ್ಟ್ ಎಂಡ್ ವೆಸ್ಟ್ ಇನ್ಶೂರೆನ್ಸ್ ಕಂಪನಿಯ ಜಿಲ್ಲಾ ಏಜನ್ಸಿ ಓರ್ಗನೈಜರರಾದ ಶ್ರೀ. ಕಕ್ಕುಂಜೆ ನಾರಾಯಣ ಶೆಟ್ರು ಆಫೀಸೊಂದನ್ನು ತೆರೆವ ಸಮಾರಂಭವು ತಾ. 7-11-39ರಲ್ಲಿ ಶ್ರೀ| ಡಿ. ಯಂ. ಜಿ. ಪಿರೇರವರು ಅಧ್ಯಕ್ಷತೆಯಲ್ಲಿ ಜರಗಿಸಿದರು. ಡಾ| ಕುಮಾರನ್ ನಂಬಿಯಾರರು ಆಫೀಸಿನ ಉದ್ಘಾಟನೆ ಮಾಡಿದರು, ಶ್ರೀ. ನಾರಾಯಣ ಶೆಟ್ರ ತರುಣೋತ್ಸಾಹವನ್ನು ಕೊಂಡಾಡಿ ಶ್ರೀಗಳಾದ ಕೆ. ವೆಂಕಟಪ್ಪಯ್ಯ ವೈ, ಶ್ರೀ. ವೈ ಕಾಳಪ್ಪ ಶೆಟ್ರು ಸಂಸ್ಥೆಗೆ ಶ್ರೇಯಸ್ಸನ್ನು ಕೋರಿ ಭಾಷಣವಿತ್ತ ಬಳಿಕ ಅಧ್ಯಕ್ಷರು ಸಾಲೋಚಿತ ಭಾಷಣವೀಯಲು ಲಘು ಸತ್ಕಾರದೊಂದಿಗೆ ಅಂದಿನ ಸಭೆಯು ಯಶಸ್ವಿಯಾಗಿ ಕೊನೆಗೊಂಡಿತು.

ಬೊಂಬಾಯಿ

ದೊಡ್ಡ ಯಮಾರ್ಳ ಬಿಲ್ಲವರ ಯೂನಿಯನ್—ಇದರ ತೃತೀಯ ವಾರ್ಷಿಕ ಮಹಾಸಭೆಯು ತಾ, 5 11-39ರಲ್ಲಿ ಮಹಾತ್ಮ ಗಾಂಧಿರಸ್ತೆಯಲ್ಲಿರುವ ಸಾಗರ್ ದಾಸ್ ಬಿಲ್ಡಿಂಗಿನ 2ನೇ ಮಾಳಿಗೆಯಲ್ಲಿ ಶ್ರೀ. ಕೆ. ಟಿ. ಅಂಚನರವರ ಅಧ್ಯಕ್ಷತೆಯಲ್ಲಿ ಜರಗಿತು ಗತವರುಷದ ವರದಿಯನ್ನು ಕಾರ್ಯದರ್ಶಿಯವರು ಓದಿ ಹೇಳಿದರು, ಅದು ಸರ್ವಾನುಮತದಿಂದ ಮಂಜೂರುಮಾಡಲಾಯಿತು. ಸಭಿಕರುಗಳಲ್ಲಿ ಶ್ರೀ ಗಣಪತಿ, ಯ. ಜೆ. ಸಾಲಿಯಾನ್, ವೈ ಸೋಮಯ್ಯ ಮತ್ತು ಅಧ್ಯಕ್ಷರು ಯೂನಿಯನಿನ ಶ್ರೇಯಸ್ಸಿನ ಕುರಿತು ಭಾಷಣವನ್ನಿತ್ತರು. ತರುವಾಯ ಅಧ್ಯಕ್ಷರಿಗೆ ಧನ್ಯವಾದವನ್ನರ್ಪಿಸಿ ಲಘುಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಉಡುಪಿ

ಜಿಲ್ಲಾ ಬೋರ್ಡು ಸಭೆ—ಯು ತಾ. 18ನೇ ಶನಿವಾರ ಬೆಳಗ್ಗೆ 10 ಘಂಟೆಗೆ ಉಡುಪಿ ಮುನ್ಸಿಪಲ್ ಮ್ಯಾನ್ ಶ ಉ ಕಟ್ಟಡದಲ್ಲಿ ಜರಗಲಿರುವುದು.

ವ್ಯಾಯಾಮ ಮತ್ತು ಸ್ಕೌಟುಗಳ ಚಟುವಟಿಕೆ—ಸ್ಥಳೀಕ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳ ವ್ಯಾಯಾಮ ಪ್ರದರ್ಶನ ಮತ್ತು ಸ್ಕೌಟುಗಳ ಚಟುವಟಿಕೆಗಳ ವಿಹಾರ ಸಮಾರಂಭವೊಂದು ತಾ 18ನೇ ಶನಿವಾರ ಸಂಜೆ 4-30ಕ್ಕೆ ಶಾಲಾ ಕಂಪೌಂಡಿನಲ್ಲಿ ಡಿ. ಬೊ. ಪ್ರೆಸಿಡೆಂಟ್ ಡಾ ವಿಟ್ಠಲಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಶಾಲೆಯೊಳಗಿನ ಕ್ರಿಕೆಟ ಪಂದ್ಯಾಟಗಳ ಬಹುಮಾನ ವಿತರಣೆಯನ್ನೂ ಮಾಡಲಿರುವರು. ಈ ಸಮಾರಂಭಕ್ಕೆ ಸಕಲರೂ ಬಂದು ಪ್ರೋತ್ಸಾಹಿಸಬೇಕೆಂದು ಶಾಲಾ ಹೆಡ್ಮಾಸ್ಟರ್ ಶ್ರೀ. ಎಫ್. ರೋಚ್ಚಿ ಫೆರ್ನಾಂಡೀಸರು ಅಪೇಕ್ಷಿಸುತ್ತಾರೆ.

ಉಡುಪಿ ಮುನ್ಸಿಪಾಲಿಟಿ—ಯವರು ಮಳೆಗಾಲ ದಾಟಿ ಬಹಳ ಸಮಯವಾದರೂ ಧೂಳು ವಿಪರೀತವಾಗಿ ಸಳಲಾರಂಭಿಸಿದರೂ ನೀರು ಹಾಕಿಸುವ ವ್ಯವಸ್ಥೆ ಕೈಗೊಳ್ಳಲಿಲ್ಲವೆಂದೂ, ಇನ್ನಾದರೂ ಬೇಗನೆ ಈ ಕಡೆಗೆ ಗಮನ ಕೊಡಬೇಕೆಂದೂ, ಅಲ್ಲಲ್ಲಿ ಇನ್ನೂ ಅತ್ಯಾವಶ್ಯಕವಾಗಿರುವ ಕೆಲವು ಕಡೆಗಳಲ್ಲಾದರೂ ಮುನ್ಸಿಪಾಲಿಟಿಯವರು ಕೆಲವು ಮೂತ್ರದೊಡ್ಡಿಗಳನ್ನು ಬಹುಬೇಗನೆ ಕಟ್ಟಿಸಬೇಕೆಂದೂ ಇಲ್ಲವಾದರೆ ಜನರಿಗೆ ತುಂಬಾ ಉಪದ್ರವವಾಗುವುದೆಂದೂ ಇಂತಹ ಪತ್ರಿಕೆಯೊಂದು ನಮ್ಮೆಡೆಗೆ ಬಂದಿದೆ, ಸ್ಥಳಾಭಾವದಿಂದ ಪ್ರಕಟಿಸಲಿಲ್ಲ. ಈ ಕುರಿತು ಸಂಬಂಧಪಟ್ಟವರು ಲಕ್ಷ್ಯ ಹರಿಸುವರೇ?

ದುಃಖಸೂಚಕ ಸಭೆ—ಉಡುಪಿ ಮುನಿಸಿಪಲ್ ಬಡಂಬೂರ ಪಂಚಾಯತ ಕೋರ್ಟಿನಲ್ಲಿ 3 ವರುಷಗಳಿಂದಲೂ ಪ್ರೆಸಿಡೆಂಟರಾಗಿದ್ದ ಶ್ರೀ. ಕಾರ್ನಾಡ ರಾಮರಾಯರು ತಾ. 1-11 39ರಲ್ಲಿ ಅಕಾಲನಿಧನವಾದ ಬಗ್ಗೆ ಸದರೀ ಕೋರ್ಟಿನಲ್ಲಿ ತಾ 13 11-39ರಲ್ಲಿ ಎಲ್ಲಾ ಮೆಂಬರರು ವೈಸ್ ಪ್ರೆಸಿಡೆಂಟರಾದ ಶ್ರೀ ಪಿ ನಾರಾಯಣ ಪ್ರಭುಗಳ ಅಧ್ಯಕ್ಷತೆಯಲ್ಲಿ ವಿಶೇಷ ಸಭೆಸೇರಿ ದುಃಖಪ್ರದರ್ಶಕ ಠರಾವನ್ನು ಮಾಡಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ದೇವರ ಪ್ರಾರ್ಥನೆಯನ್ನು ಮಾಡಿದ್ದಲ್ಲದೆ ಅಂದಿನ ಕೋರ್ಟು ಕೆಲಸಗಳನ್ನು ಮುಂದರಿಸಿದ್ದರು. ಸದರಿ ಸಭೆಯಲ್ಲಾದ ನಿರ್ಣಯಗಳ ಪ್ರತಿಯನ್ನು ಮೃತರ ಮಕ್ಕಳಿಗೆ ಕಳುಹಿಸಬೇಕಾಗಿಯೂ, ಮೃತರ ತೈಲಚಿತ್ರವೊಂದನ್ನು ಆಫೀಸಿನಲ್ಲಿ ಇಡಬೇಕಾಗಿಯೂ ನಿರ್ಣಯಿಸಿರುತ್ತಾರೆಂದು ಮೆಂಬರರಾದ ಶ್ರೀ. ಎಂ. ವಾಮನಭಟ್ಟರು ತಿಳಿಸುತ್ತಾರೆ.

ದಿವಂಗತ ಕಾರ್ನಾಡು ರಾಮರಾಯರು—ಇವರ ವೈಕುಂಠ ಸಮಾರಾಧನೆಯು ತಾ 13ರಲ್ಲಿ ಅತ್ಯಂತ ವಿಜೃಂಭಣೆಯಿಂದ ಜರಗಿತು. ಈ ಸಂಬಂಧ ಶ್ರೀಕೃಷ್ಣಮಠ, ಶ್ರೀ ವೆಂಕಟರಮಣ ದೇವಸ್ಥಾನ, ಸಾರಸ್ವತ ದೇವಸ್ಥಾನ, ಕಾಪು ದೇವಸ್ಥಾನಗಳಲ್ಲಿ ಸಾವಿರಾರು ಜನರಿಗೆ ಸಂತರ್ಪಣೆ ನಡೆಯಿತು. ಕಾಡಬೆಟ್ಟಿನಲ್ಲಿರುವ ಹರಿಜನ ಅನಾಥಾಲಯದಲ್ಲಿ ಸುಮಾರು 70 ವಿದ್ಯಾರ್ಥಿಗಳಿಗೆ ಊಟ ವಸ್ತ್ರ ವಸ್ತ್ರದಾನದ ವ್ಯವಸ್ಥೆಯಿತ್ತು. ಈ ಸಂಬಂಧ ದಿವಂಗತರ ಭಾವಚಿತ್ರದೊಡನೆ ಹರಿಜನ ವಿದ್ಯಾರ್ಥಿಗಳ ಪುರಮೆರವಣಿಗೆ ಭಜನೆಯಿತ್ತು.

ವಿದ್ಯಾವಸ್ತು ಪ್ರದರ್ಶನೆ—ಇದರ ಆರ್ಥಿಕ ಉಪಸಮಿತಿಯ ಕಮಿಟಿ ಸಭೆಯೊಂದು ತಾ. 11-11 39ನೇ ಶನಿವಾರ ಬೋರ್ಡ್ ಹೈಸ್ಕೂಲಿನಲ್ಲಿ ಈ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ಬಿ. ವಿಷ್ಣುಮೂರ್ತಿ ಶೆಟ್ಟಿ, ಬಿ. ಎ. ಎಲ್ ಟಿ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ಎಲಿಮೆಂಟರಿ ಶಾಲೆಗಳ ಮೆನೇಜರರ ಸಂಘದ ಕಡೆಯಿಂದ ಬಂದ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಪ್ರದರ್ಶನಕ್ಕೆ ಪ್ರವೇಶ ಹಾಕಲು ವಿನಾಯಿತಿಪಡಿಸಬೇಕೆಂಬ ಸೂಚನೆಯನ್ನು ಮೇಲಿನ ಕಮಿಟಿಗೆ ತಿಳಿಸಲಾಯಿತು. ವಿನೋದ ಕಾಲಕ್ಷೇಪಕ್ಕೆ ಎಲ್ಲರೂ ಪ್ರವೇಶ ಹಣ ಕೊಡಬೇಕೆಂದೂ ಯಿತು. ಪ್ರದರ್ಶನವು ಜಯಶೀಲವಾಗುವಂತೆ ಸಕಲರೂ ಸಹಕರಿಸಬೇಕೆಂದು ಕೇಳಿಕೊಳ್ಳಲಾಯಿತು. ಅತ್ಯಾವಶ್ಯಕವಾದ ಖರ್ಚು ಮಾಡುವುದಕ್ಕೆ ಕಾರ್ಯದರ್ಶಿಗಳಿಗೆ ಅಧಿಕಾರ ಕೊಡಲಾಯಿತು.

ಪತ್ರಿಕೋದ್ಯಮಿಗಳ ಸ್ಥಾನಮಾಹಾತ್ಮ್ಯ

ಕೆಲ ದಿನಗಳ ಹಿಂದೆ ಬನಾರಸದಲ್ಲಿ ಕೂಡಿದ ಹಿಂದಿ ಪತ್ರಿಕೋದ್ಯಮಿಗಳ ಪರಿಷತ್ತಿನ ಪ್ರತಿನಿಧಿಗಳ ಸ್ವಾಗತ ಬಯಸುತ್ತ ಶ್ರೀ. ಶ್ರೀಪ್ರಕಾಶ ಇವರು ಮಾಡಿದ ಭಾಷಣದ ಸಾರಾಂಶವು ಹೀಗಿದೆ.

"ಪತ್ರಿಕೋದ್ಯಮಿಯು ವ್ಯಾಪಾರಿಯಲ್ಲ. ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಅವನ ವ್ಯವಸಾಯ ಉಪಯೋಗವು ಮಾಡಿಕೊಳ್ಳಲ್ಪಡಕೂಡದು. ಅವನ ಸ್ಥಾನವು ಬಹಳ ಮಹತ್ವದ್ದಾಗಿದೆ. ಅವನೊಬ್ಬ ಶ್ರೇಷ್ಠ ತರಗತಿಯ ಶಿಕ್ಷಕನಾಗಿದ್ದಾನೆ ಶಿಕ್ಷಕರು ಒಂದು ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಶಿಕ್ಷಣವನ್ನು ಕೊಡುತ್ತಾರೆ. ಆದರೆ ವರ್ತಮಾನ ಪತ್ರಕಾರರು ಕುಳಿತಲ್ಲಿಯೇ ಇಡೀ ಪ್ರಾಂತದ ದೇಶದ ಇಲ್ಲವೆ ಪರದೇಶಗಳಲ್ಲಿಯ ಜನರಿಗೆ ಕೂಡ ಶಿಕ್ಷಣವನ್ನು ಕೊಡಬಲ್ಲವರಾಗಿರುತ್ತಾರೆ. ಪತ್ರಿಕೋದ್ಯಮಿಯಾಗಿ ಕಾರ್ಯ ಮಾಡಲು ಸಂಧಿ ದೊರೆತ ಪ್ರತಿಯೊಬ್ಬ ವ್ಯಕ್ತಿಯು ಆನಂದ ಮತ್ತು ಹೆಮ್ಮೆ ಪಡಬೇಕು. ಇದು ಮಹತ್ವಪೂರ್ಣವೂ ಪುಣ್ಯತಮ ಕಾರ್ಯವಾಗಿದೆ.

ಆದರೆ ಇದರ ದುರುಪಯೋಗವನ್ನು ಮಾಡಿಕೊಳ್ಳುವವರಿಗೂ ಕಡಿಮೆಯಿಲ್ಲ. ವರ್ತಮಾನ ಪತ್ರಿಕೆ ದ್ವಾರಾ ಜನರ ಮನೋವೃತ್ತಿಗಳನ್ನು ಹಾಹಾ ಎನ್ನುವದರೊಳಗೆ ತಿರುಗಿಸಲು ಬರುತ್ತದೆ. ಪತ್ರಿಕೋದ್ಯಮಿಯು ಕ್ರಾಂತಿಗಳನ್ನು ಮಾಡಬಲ್ಲನು, ಜಾತಿಯ ಜಗಳಗಳನ್ನು ಹುಟ್ಟಿಸಬಲ್ಲನು, ವೈಯಕ್ತಿ ದ್ವೇಷಗಳಿಗೆ ಜನ್ಮಕೊಡುವ ಶಕ್ತಿಯು ಅವನಲ್ಲಿರುವದು. ಬೆಂಕಿಯನ್ನು ಹಿಡಿದವರು ಜಾಗರೂಕತೆಯಿಂದ ವರ್ತಿಸಬೇಕಾಗುವುದು. ಅದನ್ನು ವ್ಯಾಮರೆತು ಆತ್ತ ಒಗೆಯಲು ಅವನಿಗೆ ಬರುವುದಿಲ್ಲ. ತನ್ನ ಹತ್ತಿರ ಕೂಡ ಬೇಕಾದಲ್ಲಿ ಅವನ್ನು ಇಟ್ಟುಕೊಂಡರೆ ಅವನಿಗೂ ಅಪಾಯವಾಗುವುದು. ಅದಕ್ಕೆ ಸಂಬಂಧಿಸಿದ ಕಾಯಿದೆಕಾನೂನುಗಳನ್ನು ಅರಿತು, ತದ್ವಿರುದ್ಧವಾಗಿ ನಡೆದರೆ ಆಗುವ ಪರಿಣಾಮಗಳನ್ನು ತಿಳಿದುಕೊಂಡು ಅವನು ವರ್ತಿಸಬೇಕಾಗುವುದು.

ಪತ್ರಿಕೋದ್ಯಮಿಯ ಸ್ಥಿತಿಯು ಅದೇ ಪ್ರಕಾರ ಇರುತ್ತದೆ. ಅಸಂಖ್ಯ ಜನರ ಹಿತಾಹಿತಗಳಿಗೆ ಅವನು ಕಾರಣನಾಗಿರುತ್ತಾನೆ. ಎಲ್ಲ ವಿಷಯಗಳನ್ನೂ ಅವನು ಅರಿತವನಾಗಿರಬೇಕು. ಪ್ರತಿಯೊಂದು ಸ್ಥಳ ವಿಚಾರದಲ್ಲಿ ಸರಿಯಾದ ಮಾರ್ಗ ತೋರಿಸುವ ಶಕ್ತಿಯು ಅವನಲ್ಲಿರಬೇಕು.

ವಿಶೇಷತಃ ಹಿಂದುಸ್ಥಾನದ ಸದ್ಯದ ಪರಿಸ್ಥಿತಿಯಲ್ಲಂತೂ ಪತ್ರಿಕೋದ್ಯಮಿಯ ಹೊಣೆಗಾರಿಕೆಯು ಇನ್ನೂ ಹೆಚ್ಚಾಗಿದೆ. ಹಿಂದುಸ್ಥಾನವು ಪಾರತಂತ್ರ್ಯ ಶೃಂಖಲೆಯಿಂದ ಜರ್ಝರಿತವಾಗಿದೆ ಅದರಿಂದ ಮುಕ್ತವಾಗಲು ಹಾತೊರೆಯುತ್ತಿದೆ ಮತ್ತು ಹವಣಿಸುತ್ತಿದೆ. ಈ ಸ್ವಾತಂತ್ರ್ಯವು ಭಾರತೀಯರ ಜಾಗೃತಿಯ ಮೂಲಕವಾಗಿಯೇ ನಿವಾರಣೆ ಹೊಂದಬೇಕಾಗಿದೆ ಜಾಗೃತಿಯನ್ನು ಹುಟ್ಟಿಸುವ ಕಾರ್ಯದ ಬಹುಭಾಗವು ಪತ್ರಿಕೋದ್ಯಮಿಗಳ ಮೇಲಿದೆ

ಇಷ್ಟೇ ಅಲ್ಲದೆ, ವರ್ತಮಾನ ಪತ್ರಕಾರರ ಜೀವನವು ಬಹು ಕಷ್ಟಮಯವಾದದ್ದೂ ನಾನಾ ಸಂಕಟಗಳಿಂದ ತುಂಬಿ ತುಳುಕುವಂಥದ್ದೂ ಆಗಿದೆ. ಆರ್ಥಿಕ ತೊಂದರೆಗೆ ಗುರಿಯಾಗದೆ ಉಳಿಯುವ ಪತ್ರಗಳು ಬಹಳ ಸ್ವಲ್ಪ ಇರುತ್ತವೆ. ಸ್ವಲ್ಪ ಹೆಚ್ಚು ಕಡಿಮೆಯಾದರೆ ಕಾಯಿದೆಯ ದವಡೆಗಳಲ್ಲಿ ಸಿಕ್ಕು ಸಂಪಾದಕರು ಪರದಾಡಬೇಕಾಗುತ್ತದೆ. ಯಾರ ದಯೆ ದಾಕ್ಷಿಣ್ಯಗಳಿಲ್ಲದೆ ಧೈರ್ಯದಿಂದ ಸತ್ಯವನ್ನು ಬಯಲಿಗೆಳೆಯಬೇಕೆಂದರೆ ಅನೇಕರ ದ್ವೇಷಕೋಪಗಳಿಗೆ ಗುರಿಯಾಗಬೇಕಾಗುತ್ತದೆ. ಸತ್ಯಾಸತ್ಯಗಳ ಪರಿವೆಯಿಲ್ಲದೆ ಹಣಗಳಿಸಲು ಹೊರಟರೆ ಪತ್ರಿಕೋದ್ಯಮಿಯ ಸ್ಥಾನದ ಕೀರ್ತಿಗೆ ಕಳಂಕ ತಂದಂತಾಗುತ್ತದೆ. ಇಷ್ಟೆಲ್ಲ ಸಂಕಟ ತಾಪತ್ರಯದಿಂದ ಪಾರಾಗಿ ಶುದ್ಧ ಉಳಿಯುವವನೇ ನಿಜವಾದ ಪತ್ರಿಕೋದ್ಯಮಿಯೆನ್ನಿಸಿಕೊಳ್ಳುತ್ತಾನೆ. ಅವನಿಂದಲೇ ಸರ್ವರ ಕಲ್ಯಾಣವಾಗುತ್ತದೆ.

ಈ ಪ್ರಕಾರ ಮಹತ್ವಪೂರ್ಣವಾದ ವ್ಯವಸಾಯಕ್ಷೇತ್ರದಲ್ಲಿ ಕಾಲಿಟ್ಟ ತಮಗೆ ನಾನು ಹೃತ್ಪೂರ್ವಕವಾಗಿ ಸ್ವಾಗತಬಯಸುತ್ತೇನೆ. ಮತ್ತು ತಮ್ಮೆಲ್ಲರ ಯತ್ನಕ್ಕೆ ದೇವರು ಯೋಗ್ಯ ಯಶಸ್ಸು ಕೊಟ್ಟು ತಮ್ಮಿಂದ ಜನತೆಯ ಕಲ್ಯಾಣವನ್ನು ಹೆಚ್ಚಾಗಿ ಮಾಡಿಸಲೆಂದು ಬೇಡುತ್ತೇನೆ

ಕಾಂಗ್ರೆಸ್ ಮುಖಂಡರು ಮಾಡುತ್ತಿರುವುದೇನು?

ಡಿಲ್ಲಿ ಎಸೆಂಬ್ಲಿಯನ್ನು ಬಹಿಷ್ಕರಿಸಲಾಯಿತು — ಕಾಂಗ್ರೆಸ್ ಮಂತ್ರಿಗಳ ರಾಜಿನಾಮೆ ಆಯಿತು — ಮುಂದೇನು?

ಮುಸ್ಲಿಮ್ ಲೀಗನ್ನು ತೃಪ್ತಿಪಡಿಸಿ ವೈಸರಾಯರನ್ನು ಪರೀಕ್ಷಿಸಬಾರದೇಕೆ?

ಕೇವಲ ಜೈಲಿಗೆ ಹೋಗುವ ಅಗ್ಗದ ಖ್ಯಾತಿ ಮತ್ತು ತ್ಯಾಗದ ವಿಡಂಬನೆಯಿಂದ ಫಲವಿಲ್ಲ!

ಕಾಂಗ್ರೆಸ್ ಕೈಗೊಳ್ಳತಕ್ಕ ಧೋರಣೆಯ ಕುರಿತು ಶ್ರೀ ಎಮ್. ಎಸ್. ರೈಗಳ ಸೂಚನೆ.

ಕಾಂಗ್ರೆಸ್ ಮುಖಂಡರು ನಿಶ್ಚಿತವಾದ ಪ್ಲೇನ್ ಹಾಕಿಕೊಂಡು ಯಾವ ಕೆಲಸವನ್ನೂ ಮಾಡದೆ ಒಂದು ಹೆಜ್ಜೆಯಿಂದ ಮತ್ತೊಂದು ಹೆಜ್ಜೆಗೆ ದೂಡಲ್ಪಟ್ಟಿರುವಂತಿದೆ. ಬ್ರಿಟಿಷ್ ಸರಕಾರದೊಡನೆ ಸಂಧಿಯಾಗುವುದೆಂಬ ಭರವಸೆಯನ್ನೇ ಆಧಾರವಾಗಿಟ್ಟುಕೊಂಡು ತಮ್ಮ ಧೋರಣೆಯನ್ನು ರೂಪಿಸಿಕೊಳ್ಳುವಂತೆ ತೋರುತ್ತದೆ.

ಬ್ರಿಟಿಷ್ ಸರಕಾರದ ಧೋರಣೆಯಂತೂ ಸೂರ್ಯಪ್ರಕಾಶದಷ್ಟು ಸ್ಪಷ್ಟವಿದೆ. ಅವರು ಯುದ್ಧ ಮುಗಿದ ಮೇಲಾದರೂ ಹಿಂದೂದೇಶಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೀಯುವ ಹಾಗಿಲ್ಲ. ಪ್ರಕೃತದ ಬಿಕ್ಕಟ್ಟಿನಲ್ಲಿ ಹಿಂದೂದೇಶದಲ್ಲಿ ಕಾಂಗ್ರೆಸಿನವರೇನೂ ಚಳವಳ ಹೂಡದಂತೆ, ಸಾಧ್ಯವಾದಷ್ಟು ಸಮಜಾಯಿಸಿ ಕಾಲಯಾಪನೆ ಮಾಡುವ ಮತ್ತು ಹಿಂದೀ ಸ್ವಾತಂತ್ರ್ಯದ ಕುರಿತು ಜಾಗ್ರತವಾಗಿರುವ ಲೋಕಮತದ ಕಣ್ಣಿಗೆ ಮಣ್ಣುಹಾಕುವ ತಂತ್ರವನ್ನು ನಡಿಸುತ್ತಿದ್ದಾರೆಂಬುದು ಸುವೇದ್ಯವಿದೆ.

ತಾವು ಸಂಧಾನದ ಬಾಗಿಲು ತೆರೆದೇ ಇಟ್ಟಿದ್ದೇವೆ. ಇನ್ನಾದರೂ ರಾಜಿಗೆ ಆಸ್ಪದವಿದೆಯೆಂಬ ಸವಿಮಾತಿನ ಅಂತರ್ಯವೆಂದರೆ, ಕಾಂಗ್ರೆಸಿನವರು ಇನ್ನೇನಾದರೂ ಉಗ್ರ ಚಳವಳವನ್ನಾರಂಭಿಸುವ ಸಂಭವವುಂಟಾದರೆ ಪುನಃ ಗಾಂಧಿಜಿ ಮೊದಲಾದವರನ್ನು ಕರೆದು ಮಾತುಕತೆ ನಡಿಸಿ ಕಾಲಯಾಪನೆ ಮಾಡುವುದು. ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸಿನೊಳಗಣ ಐಕ್ಯಸ್ಥಾಪನೆಯ ಕುರಿತು ಬ್ರಿಟಿಷ್ ಸರಕಾರವು ತೋರಿಸುವ ಆಸಕ್ತಿ ಮತ್ತು ಹೊರಡಿಸುವ ಮೊಸಳೆ ಕಣ್ಣೀರು, ಹಿಂದೀ ಆಕಾಂಕ್ಷೆಯ ಕುರಿತು ಸಂಪೂರ್ಣ ಸಹಾನುಭೂತಿಯಿಂದಿರುವ ಅಮೇರಿಕವೇ ಮೊದಲಾದ ದೇಶಗಳ ಜನಮತವನ್ನು ಸಮಾಧಾನಪಡಿಸಲಿಕ್ಕಾಗಿ. ಮಹಾತ್ಮ ಗಾಂಧಿಯವರ ಗುಟ್ಟನ್ನವರು ಚೆನ್ನಾಗಿ ಅರಿತುಕೊಂಡಿರುವಂತಿದೆ. ನೂರು ಸಲವಾದರೂ ಆಮಂತ್ರಿತರಾದರೆ ಅವರು ಹೋಗಿ ಮಾತಾಡಲು ಸಿದ್ಧರೇ ಇದ್ದಾರೆ. ಆದರೆ ಮಾತುಕತೆಯ ಫಲವಾದರೂ ಏನು? ವೃಥಾ ಕಾಲಯಾಪನೆಯಲ್ಲದೆ ಅನ್ಯಥಾ ಅದರ ಉದ್ದೇಶವೇನು? ಇಂಡಿಯಾ ಸರಕಾರದ ಓರ್ಡಿನೆನ್ಸುಗಳನ್ನು ಮತ್ತು ಹಿಂದೂದೇಶವು ಏಕಾಏಕಿ ಜರ್ಮನಿಯೊಡನೆ ಯುದ್ಧಕ್ಕೆಳೆಯಲ್ಪಟ್ಟುದನ್ನು ನಿಷೇಧಿಸಿ ಲೋಕ ಜಾಗೃತಿಯನ್ನುಂಟುಮಾಡುವ ಸಂದರ್ಭದಲ್ಲಿ ಡಿಲ್ಲಿ ಎಸೆಂಬ್ಲಿಯನ್ನು ಬಹಿಷ್ಕರಿಸಲಾಯಿತು. ಪ್ರಾಂತದಲ್ಲಿ ಆರ್ಡಿನೆನ್ಸ್ ರಾಜ್ಯಭಾರವನ್ನು ವಿರೋಧಿಸಿ ಸಾಧ್ಯವಾದಷ್ಟು ಅದಕ್ಕೆ ತಡೆಹಾಕುವ ಕಾಲದ ಕಾಂಗ್ರೆಸ್ ಮಂತ್ರಿಗಳು, ತಾವು ಸದಾಕಾಲ ಅಧಿಕಾರದಲ್ಲಿರುವೆವೆಂದು ನಂಬಿ ಹಾಕಿಕೊಂಡಿದ್ದ ಹಲವು ವರ್ಷಗಳ ಕಾರ್ಯಕ್ರಮವನ್ನು ಅಲ್ಲಲ್ಲೇ ಬಿಟ್ಟು ಹೊರಬಂದುದಾಯಿತು. ಮುಂದೇನು? ಎಂಬ ಪ್ರಶ್ನೆಗೆ ಉತ್ತರವಿಲ್ಲ. ಗಾಂಧಿಯವರು ಕೊಡುತ್ತಿರುವ ಅಭಿಪ್ರಾಯಗಳಿಗೆ ತಲೆಬುಡವಿರುವಂತಿಲ್ಲ. ಪೂರ್ವಾಪರ ಸಂಬಂಧವಿರುವಂತೆ ತೋರುವುದಿಲ್ಲ. ಅವಕ್ಕವರ ಅಂತಸ್ಫುರಣೆಯೇ ಕಾರಣವಿರಬಹುದು. ಅವರ ಅದ್ಭುತ ಶಕ್ತಿಯ ಮೇಲೆ ವಿಶ್ವಾಸವಿರುವವರಿಗದು ಸರಿಯೆನಿಸಬಹುದು. ಆದರೆ ಕೇವಲ ರಾಜಕೀಯದೃಷ್ಟಿಯಿಂದ ಮತ್ತು ವಾಸ್ತವಿಕ ವಿದ್ಯಮಾನಗಳ ವಿವೇಚನೆಯಿಂದ ಪರೀಕ್ಷಿಸಿದಲ್ಲಿ ಅದರಲ್ಲಿ ಸಂಬದ್ಧತೆಯಾಗಲಿ ಹುರುಳಿರುವಂತೆ ತೋರುವುದಿಲ್ಲ. ಹಳೆಯ ರಾಗವನ್ನೇ ಹೊಸ ಶಬ್ದಗಳಲ್ಲಿ ಹಾಡುತ್ತಿದ್ದಾರೆ ಅವರು.

ಗೆದ್ದು ವಶಪಡಿಸಿಕೊಂಡಿರುವ ರಾಜ್ಯವನ್ನು ಕಸಕೊಳ್ಳದೆ ಬ್ರಿಟಿಷರು ಬಿಟ್ಟುಕೊಡುವಹಾಗಿಲ್ಲ. ವಿಭಾಗಿಸಿ ಆಳುವ ಹಳೆಯ ಇತಿಹಾಸವೇ ಇಂದೂ ಆವರ್ತಿತವಾಗುತ್ತಿದೆ. ಅಲ್ಪಸಂಖ್ಯಾಕ ಪ್ರಶ್ನೆಯನ್ನೀಗ ಮುಂದೊಡ್ಡುವುದರಲ್ಲಿ ಅರ್ಥವಿಲ್ಲ. ಕಾಂಗ್ರೆಸ್ ಇನ್ನೊಮ್ಮೆ ಉಗ್ರ ಹೋರಾಟದ ಅಗ್ನಿಪರೀಕ್ಷೆಗೊಳಗಾಗದೆ ಗತ್ಯಂತರವಿಲ್ಲೆಂದು ಗಾಂಧಿಜಿಯವರು ಒಮ್ಮೆ ಎಚ್ಚರಿಸಿರುತ್ತಾರೆ ಆದರೆ ಮತ್ತೊಮ್ಮೆ, ಪ್ರಕೃತದ ಪರಿಸ್ಥಿತಿಯಲ್ಲಿ ಯಾವ ಹೋರಾಟವನ್ನಾದರೂ ಕಾಂಗ್ರೆಸು ಕೈಗೊಳ್ಳುವುದು ಮಹಾಪರಾಧವಾಗುವುದು. ಡೊಂಬಿಗಲಾಟೆಗಳಾಗಿ ರಕ್ತಪಾತವಾಗಬಹುದು. ಕಾಂಗ್ರೆಸಿನೊಳಗೇನೇ ಅನೀತಿ ಹೆಚ್ಚಿದೆ. ಅಹಿಂಸೆಯ ಮೇಲಿನ ನಿಜವಾದ ವಿಶ್ವಾಸ ತೋರಿಬರುವುದಿಲ್ಲ. ಈಗ ಎಲ್ಲರೂ ನೂಲುಮಾಡಿ ಕಾಲಕಳೆಯುವುದೊಂದೇ ಉಪಾಯ ಉಳಿದಿದೆಯೆಂದು ಬೋಧಿಸುತ್ತಾರೆ.

ಮುಸಲ್ಮಾನರಿಗೆ ತಾವು 'ಬ್ಲೇಂಕ್ ಚೆಕ್' ಕೊಡಲು ಯಾವಾಗಲೂ ಸಿದ್ಧವಿರುವೆನೆಂಬ ಪಲ್ಲವಿ ಹಾಡಿಕೊಂಡುಬಂದಿರುವ ಗಾಂಧಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರಿಗೆ, ಮಿ. ಜಿನ್ನರೊಡನೆ ಏನಾದರೊಂದು ಒಡಂಬಡಿಕೆಗೆ ಬರಲು ಅಸಾಧ್ಯವಾಗಿರುವುದು ಆಶ್ಚರ್ಯಕರ. ಬ್ರಿಟಿಷ್ ಸರಕಾರವು ಈ ಸಂದರ್ಭದಲ್ಲಿ ಅಲ್ಪಸಂಖ್ಯಾಕ ಪ್ರಶ್ನೆಯನ್ನೆತ್ತಿಹಿಡಿದಿರುವ ಯುಕ್ತಾಯುಕ್ತತೆಯ ಪ್ರಶ್ನೆಯಂತಿರಲಿ. ಗಾಂಧಿಯವರೇ ಹೇಳಿರುವಂತೆ, ಮುಸ್ಲಿಮ್ ಲೀಗು ಬ್ರಿಟಿಷ್ ಸರಕಾರದೊಂದಿಗೆ ಸೇರಿದರೆ ಹಿಂದೀ ಸ್ವಾತಂತ್ರ್ಯಕ್ಕಾಗಿ ಹೋರಾಟ ಹೂಡುವುದೇ ಅಸಾಧ್ಯವಷ್ಟೆ. ಅಂದ ಮೇಲೆ ಆ ಉದ್ದೇಶದಿಂದಾದರೂ, ಹಿಂದೂದೇಶದ ಮುಖಕ್ಕೆ ಬ್ರಿಟಿಷ್ ಸರಕಾರವು ಯಾವಾಗಲೂ ಮಂಗಳಾರತಿ ಮಾಡಲು ಕಾರಣವಾಗಿರುವಂತಹ, ಮತ್ತು ಈಗಿನ ಪರಿಸ್ಥಿತಿಯಲ್ಲಿ ಅವರು ತಮ್ಮ ನಿಜವಾದ ಉದ್ದೇಶವನ್ನು ಮರೆಮಾಜಲು ಸುಲಭವಾದ ಮುಸುಕಾಗಿರುವ, ಹಿಂದೂಮುಸಲ್ಮಾನ ಪ್ರಶ್ನೆಯನ್ನು ಕಾಂಗ್ರೆಸ್ ಮುಖಂಡರು ಉದಾರತೆ ತೋರಿ ಇತ್ಯರ್ಥಪಡಿಸಿಕೊಳ್ಳಬಾರದೇಕೆ?

ಕಾಂಗ್ರೆಸಿನವರು ತಮಗೆ ದೊರೆತ ಬಹುಪಕ್ಷದ ದರ್ಪದಿಂದ ಸಂಯುಕ್ತಪ್ರಾಂತ, ಬೊಂಬಾಯಿ ಮೊದಲಾದ ಪ್ರಾಂತಗಳಲ್ಲಿ ಮಂತ್ರಿಮಂಡಲಗಳನ್ನು ರಚಿಸುವಾಗ ಮುಸ್ಲಿಮ್ ಲೀಗಿನ ಪ್ರತಿನಿಧಿಗಳನ್ನು ಸೇರಿಸಿಕೊಳ್ಳದುದು ದೊಡ್ಡ ತಪ್ಪಾಗಿರುವುದು. ಮಂತ್ರಿಪದವಿ ಸ್ವೀಕಾರದಲ್ಲಿ ಕಾಂಗ್ರೆಸಿನ ದೊಡ್ಡ ತತ್ವವೇನೂ ಅಡಕವಾಗಿದ್ದಿಲ್ಲ. ಒಂದು ವೇಳೆ ಹಾಗಿದ್ದರೂ ಆ ತತ್ವನಿಷ್ಠೆಗಿಂತ ದೇಶದ ಐಕ್ಯ ಮತ್ತು ಸ್ವಾತಂತ್ರ್ಯ ಸಾಧನೆಯು ಮಹತ್ವದ್ದಾಗಿವೆ. ಈ ತಪ್ಪು ಹೆಜ್ಜೆಯಿಂದಾಗಿಯೇ ಇಂದೀಗ ಮಿ. ಜಿನ್ನರು ಮತ್ತು ಹೆಚ್ಚಿನ ಮುಸಲ್ಮಾನರು ಕಾಂಗ್ರೆಸನ್ನು ದ್ವೇಷಿಸಹತ್ತಿರುವರು. ಇನ್ನಾದರೂ ಕಾಂಗ್ರೆಸ್ ಮುಖಂಡರು ಈ ತಪ್ಪನ್ನು ಸರಿಮಾಡಿ, ಮುಸ್ಲಿಮ್ ಲೀಗನ್ನು ಅಂಗೀಕರಿಸಿ, ಅದರ ಪ್ರತಿನಿಧಿಗಳನ್ನು ಪ್ರಾಂತಿಕ ಮಂತ್ರಿಮಂಡಲಗಳಲ್ಲಿ ಸೇರಿಸಿಕೊಳ್ಳುವುದುತ್ತಮ. ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸುಗಳೊಂದುಗೂಡಿ ಹಿಂದೂದೇಶದ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದೊತ್ತುವಾಗ ಬ್ರಿಟಿಷ್ ಸರಕಾರವು ಏನುಮಾಡುವುದೆಂದು ನೋಡಬೇಕು. ಈಗಣ ಪರಿಸ್ಥಿತಿಯಲ್ಲಿ ಕೇವಲ ಅಲ್ಪ ಸಂಖ್ಯಾ

(೧೩ನೇ ಪುಟಕ್ಕೆ ಮುಂದುವರಿದ)



ಗಾಂಧಿಜಿಯವರ ಅಸಹ್ಯ ಆರೋಪ

(೧ನೇ ಪುಟದಿಂದ ಮುಂದುವರಿಸಿದ್ದು)

ದಂತೆ ನಾನೇ ನಿಯಮಗಳನ್ನು ಮಾಡಿದೆನು. ಆದರೆ ಬ್ರಹ್ಮಚರ್ಯವನ್ನು ಸರಿಯಾಗಿ ಪಾಲಿಸಲು, ಸ್ತ್ರೀಯೊಡನೆ ಯಾವ ರೀತಿಯ ಸಂಪರ್ಕವೂ ತ್ಯಾಜ್ಯವೆಂದು ನಾನೆಂದೂ ನಂಬಿರುವುದಿಲ್ಲ. ಸ್ತ್ರೀಯೊಡನೆ ಎಂತಹ ನಿರ್ದುಷ್ಟ ಸಂಬಂಧವನ್ನಾದರೂ ನಿಷೇಧಿಸುವ ನಿರ್ಬಂಧವು ಬಲಾತ್ಕಾರದ ಹಾಗೂ ಕೃತ್ರಿಮ ಬೆಳವಣಿಗೆಯಿದ್ದು ಅದಕ್ಕೇನೂ ಹೆಚ್ಚಿನ ಬೆಲೆ ಕೊಡಲು ಸಾಧ್ಯವಿಲ್ಲ. ಆದುದರಿಂದ ಸೇವಾಕಾರ್ಯಕ್ಕಾಗಿ ಸ್ತ್ರೀ ಪುರುಷರೊಢನೆ ಸ್ವಾಭಾವಿಕವಾದ ಸಂಸರ್ಗವನ್ನು ನಾನು ಎಂದೂ ನಿಷೇಧಿಸಿರುವುದಿಲ್ಲ. ದಕ್ಷಿಣ ಆಫ್ರಿಕದಲ್ಲಿ ನಾನು ಹಿಂದೀ ಮತ್ತು ಯುರೋಪಿಯನ್ ಸ್ತ್ರೀಯರ ಸಂಪೂರ್ಣ ವಿಶ್ವಾಸಪಾತ್ರನಾಗಿದ್ದೆನು. ಸತ್ಯಾಗ್ರಹದಲ್ಲಿ ನನ್ನಂತೆಯೇ ಅವರೂ ಭಾಗವಹಿಸಬಹುದೆಂದು ಅವರನ್ನು ಆಮಂತ್ರಿಸಿದೆನು. ಸ್ತ್ರೀಜಾತಿಯ ಸೇವೆಗಾಗಿ ನಾನು ವಿಶಿಷ್ಟರೀತಿಯ ಅರ್ಹತೆಯುಳ್ಳವನಿರುವನೆಂದು ಕಂಡುಕೊಂಡೆನು.

ನನಗೆ ಚಿತ್ತಾಕರ್ಷಕವಾದ ಈ ಕಥೆಯನ್ನು ಸಂಕ್ಷೇಪಿಸುವುದಾದರೆ, ಹಿಂದೂ ದೇಶಕ್ಕೆ ಬಂದ ಮೇಲಾದರೂ ಯಾವಾಗಲೂ ಹಿಂದೀ ಸ್ತ್ರೀಯೊಡನೆ ನಾನು ಆತ್ಮೀಯತೆಯುಳ್ಳವನಿರುವೆನು. ನಾನು ಅವರ ಹೃದಯದ ವಿಶ್ವಾಸಕ್ಕೆ ಸುಲಭವಾಗಿ ಪಾತ್ರನಾದುದು ನನಗೇನೇ ಆಶ್ಚರ್ಯಕಾರಿಯಾಗಿತ್ತು. ದಕ್ಷಿಣ ಆಫ್ರಿಕದಂತೆಯೇ ಇಲ್ಲಿಯೂ ಮುಸಲ್ಮಾನ ಸಹೋದರಿಯರು ನನ್ನ ಸಮಕ್ಷಮದಲ್ಲಿ ಪರದೆಯನ್ನು ತ್ಯಜಿಸಿಬಿಡುತ್ತಿದ್ದರು. ನಾನು ಸ್ತ್ರೀಯರಿಂದಾವರಿತನಾಗಿ ಆಶ್ರಮದಲ್ಲಿ ಮಲಗುವೆನು. ಯಾಕೆಂದರೆ ಪ್ರತಿಯೊಂದು ರೀತಿಯಲ್ಲಿಯೂ ಅವರು ನನ್ನೊಂದಿಗೆ ಸುರಕ್ಷಿತತೆಯ ನಿರ್ಭಯದಿಂದಿರುವರು. ಸೆಗಾಂವಿನ ಆಶ್ರಮದಲ್ಲಿ ಯಾವ ರೀತಿಯ ಗುಪ್ತತೆಯೂ ಇರುವುದಿಲ್ಲೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು.

ಸನಾತನಿ ಹಿಂದುಗಳು ಅಹಿಂಸೆಯೇ ಮೊದಲಾದ ನನ್ನ ತತ್ವಗಳನ್ನು ವಿರೋಧಿಸಬಹುದು. ನನ್ನ ಘೋಷಣೆಯನ್ನು ಟೀಕಿಸಬಹುದು. ಆದರೆ ಕ್ಷುದ್ರ ಸುಳ್ಳು ಪ್ರಚಾರದಿಂದ ಅವರು ಹಿಂದೂಧರ್ಮದ ಮತ್ತು ತಮ್ಮ ಹಿತಸಾಧಿಸುವಂತಾಗಲಾರದು.



THULUNAD BANK
OF SUPPLY AGENCY LIMITED,

ESTD.] UDIPI. [1933.

INTEREST ON CURRENT ACCOUNT ALLOWED at 3% p. a.

All kinds of Banking business transacted

Write for particulars to:—

The Managing Director,

ಮಿತ ದರದಲ್ಲೀ ಮಾರಾಟ.



ಹೊಸ ಯೋಜನೆಗಳಿಗೆ ಆಸ್ಪದವೀಯುವ ಸಲುವಾಗಿ ಗಟ್ಟಿಯಾಗಿ ಯಾ ಹೆಚ್ಚು ಕಾಲ ಬಾಳಿಕೆ ಬರುವಂತಹ ಸ್ವಿಸ್ ತಯಾರಿಯ ಉರುಟು ಅಥವಾ ಚಚ್ಚೌಕ ರಿಸ್ಟುವಾಚುಗಳು.

ನಂಬ್ರ 401 ಕ್ರೋಮಿಯಮ್ ರೂ. 3-12-0, 402 ಗೋಲ್ಡನ್ ಕೇಸು ರೂ. 4-12-0, 517 ಕ್ರೋಮಿಯಮ್ ಕೇಸು 6-8-0, 518 ಗೋಲ್ಡನ್ ಕೇಸು 8-0-0, ಜುವೆಲ್ಡ್ ಚಲನೆಯುಳ್ಳ, ನಂಬ್ರ 409 ಕ್ರೋಮಿಯಮ್ 9-8-0, ನಂಬ್ರ 410 ಗೋಲ್ಡನ್ ಕೇಸು 10-8-0, 411 ರೋಲ್ಡ್‌ಗೋಲ್ಡ್ 15-0-0.

ಪ್ಯಾಕಿಂಗ್ ಮತ್ತು ಪೋಸ್ಟೇಜು ಬಗ್ಗೆ 0-9-0 ಅಲಾಯಿದ.

(ಪತ್ರವ್ಯವಹಾರ ಇಂಗ್ಲಿಷಿನಲ್ಲಿ)

ಬಾಪಲಾಲ್ ಎಂಡ್ ಕೊ, **Bapalal & Co.,**
ಅಬ್ದುಲ್ ರೆಹಮಾನ್ ಸ್ಟ್ರೀಟ್, 101 Abdul Rehman St.
ಬೊಂಬಾಯಿ 3. BOMBAY 3.

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ.

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ಮುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲುಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ ಜೀವವಿಮೆ ಮಾಡುವುದೇ.

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?
ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸು, ಮೈನ್ ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರಿಟರಿ, ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್, ಬೆಂಗಳೂರು.

—ORIENTAL—
GOVERNMENT SECURITY LIFE ASSURANCE CO., LTD.

(೧೧ನೇ ಪುಟದಿಂದ ಮುಂದರಿಸಿದ್ದು)

ಕರನ್ನಾಗಲಿ, ಬ್ರಿಟಿಷ್ ಸರಕಾರವನ್ನಾಗಲಿ ನೂರಿ ಫಲವಿಲ್ಲ. ಒಣ ತತ್ವನಿಷ್ಠೆಯೂ ಕಾರ್ಯಕ್ಕೆ ಬೀಳುವಹಾಗಿಲ್ಲ:

ಮಂತ್ರಿಪದವಿಗೆ ರಾಜಿನಾಮೆ ಕೊಟ್ಟುದನ್ನು ಮಹತ್ತಾದ ವಿಷಯವನ್ನಾಗಿ ಮಾಡಿ ಜಂಭ ಹೊಡೆಯುವುದರಿಂದ ಫಲವಿಲ್ಲ. ಕಾಂಗ್ರೆಸ್ ಮಂತ್ರಿಗಳು ಅಧಿಕಾರ ಸ್ವೀಕರಿಸಿದುದು ಸ್ಥಾನಮಾನಕ್ಕಾಗಿಯಲ್ಲ. ಜೈಲಿಗೆ ಹೋಗಲು ಸಿದ್ಧವಾದಾಕ್ಷಣ ಸ್ವಾತಂತ್ರ್ಯಸಾಧನೆಗಾಗಿ ಬೇಕಾದ ಕೆಲಸವನ್ನೆಲ್ಲಾ ಮಾಡಿಬಿಟ್ಟ ಹಾಗಾಗುವುದಿಲ್ಲ. ಈ ಅಗ್ಗದ ಕೀರ್ತಿ ಮತ್ತು ತ್ಯಾಗದ ವಿಡಂಬನೆಯಿಂದ ಈಗೇನಾದರೂ ಚರಿತ್ರಾರ್ಹವಾಗುವ ಹಾಗಿಲ್ಲ. ಈ ಸಲ ಕೆಲವಂದಿ ದೊಡ್ಡವರು ಜೈಲಿಗೆ ಹೋಗುವಂತಾದರೆ ಬಡವರಲ್ಲಿ ಆ ಕುರಿತು ಉತ್ಸಾಹವಿರಲಾರದು. ಆದರೆ ಕೇವಲ ಜೈಲಿಗೆ ಹೋಗಿ ಬರುವುದೇ ಒಂದು ಉದ್ದೇಶವೇ? ಅಥವಾ ಅದರಿಂದ ದೇಶದ ಸ್ವಾತಂತ್ರ್ಯಸಾಧನೆಗೇನಾದರೂ ಪ್ರಯೋಜನವಾಗಬೇಕೇ? ಇಡೀ ಹಿಂದೀ ಜನಸಮುದಾಯವೇ ಬ್ರಿಟಿಷ್ ಸರಕಾರದ ವಿರೋಧವಾಗಿ ಎದ್ದು ನಿಂತು ವಿರೋಧಿಸದಿದ್ದಲ್ಲಿ ಅದು ಬಗ್ಗುವಹಾಗಿಲ್ಲ. ಆಡಳಿತ ನಡಿಸುವುದೇ ಅಸಾಧ್ಯವೆಂಬಂತಾಗುವ ಪರಿಸ್ಥಿತಿಯುಂಟಾಗದ ಪಕ್ಷದಲ್ಲಿ ಹಾದಿಗೆ ಬರುವಂತಿಲ್ಲ. ಅದಕ್ಕೀಗ ದೇಶವು ಸಿದ್ಧವಾಗಿರುವುದೇ? ಅಂತಹ ಕಾರ್ಯಕ್ರಮವನ್ನೇನಾದರೂ ದೇಶದ ಮುಂದಿಟ್ಟು ಜನತೆಯನ್ನದಕ್ಕೆ ತಯಾರು ಮಾಡಲಾಗಿದೆಯೋ? ಕಾಂಗ್ರೆಸು ಇತ್ತಲಾಗಿ ಮಾಡಿರುವ ಒಂದೇ ಒಂದು ಕೆಲಸವೆಂದರೆ ಮಂತ್ರಿಪದವಿ ಸ್ವೀಕಾರ. ಅದರಿಂದ ಕಾಂಗ್ರೆಸ್ಸಿನ ಬಲ ಮತ್ತಷ್ಟು ಕುಂದಿದೆ. ವಿರೋಧವು ಎಂದಿಗಿಂತಲೂ ಹೆಚ್ಚಾಗಿದೆ, ಕಾಂಗ್ರೆಸ್ಸಿನೊಳಗೆ ಸ್ವಾರ್ಥಪರರೂ ಅಧಿಕಾರಲಾಲಸಿಗಳೂ ಸೇರಿ ಅದೊಂದು ಕಪಟನಾಟಕದ ಕ್ಷೇತ್ರವಾಗಿ ಪರಿಣಮಿಸಿದೆ.

ಈ ಸಂದರ್ಭದಲ್ಲಿ ಶ್ರೀ. ಎಮ್. ಎನ್. ರಾಯ್‌ರವರು ದೇಶದ ಮುಂದಿಟ್ಟಿರುವ ಇನ್ನೊಂದು ರೀತಿಯ ಕಾರ್ಯಕ್ರಮವು ವಿಚಾರಣೀಯವಿದೆ. ಸುಮ್ಮನೆ ಬಜ್ಜನೆಟ್ಟ ಗೋಳಿಮರಕ್ಕೇನೇ ನೇಣುಹಾಕಿಕೊಂಡು ಫಲವಿಲ್ಲ. ಶ್ರೀ. ರಾಯ್‌ರವರ ಸೂಚನೆಗಳ ರೂಪರೇಖೆಗಳನ್ನು ಕೆಳಗೆ ಕೊಡಲಾಗಿದೆ. (1) ಯುರೋಪಿನ ಈ ಅರ್ಥರಹಿತ ಯುದ್ಧವನ್ನು ಶೀಘ್ರವಾಗಿ ಕೊನೆಗೊಳಿಸಬೇಕೆಂದೂ, ಅದಕ್ಕೆ ಮತ್ತು ಹಿಂದೂದೇಶಕ್ಕೆ ಹಾಗೂ ಇಡೀ ಲೋಕಕ್ಕೆ ಯಾವ ಸಂಬಂಧವೂ ಇಲ್ಲೆಂದೂ ಸಾರಿ ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ಪರಿಹರಿಸಲು ಕಾಂಗ್ರೆಸು ತನ್ನಿಂದ ಸಾಧ್ಯವಾದ ಪ್ರಯತ್ನ ಮಾಡಬೇಕು. (2) ಯುದ್ಧವು ಮತ್ತೂ ಮುಂದುವರಿದ ಪಕ್ಷದಲ್ಲಿ ತಾಟಸ್ಥ್ಯದ ಧೋರಣೆ ವಹಿಸಿ ಸಹಕಾರವೀಯಲೂ ವಿರೋಧಿಸಲೂ ಕೂಡದು. (3) ಸಾಧ್ಯವಾದಷ್ಟು ನಾಗರಿಕ ಹಕ್ಕುಬಾಧ್ಯತೆಗಳನ್ನೆತ್ತಿಹಿಡಿದು ಕಾಂಗ್ರೆಸ್ ಮಂತ್ರಿಗಳು ಅಧಿಕಾರ ನಡಿಸಬೇಕು. (4) ಅಗತ್ಯಬಿದ್ದಲ್ಲಿ ಮುಸ್ಲಿಮ್ ಲೀಗ್ ಮತ್ತು ಇತರ ಅಲ್ಪಸಂಖ್ಯಾಕ ಪ್ರತಿನಿಧಿಗಳನ್ನು ಸೇರಿಸಿಕೊಂಡು ಮಂತ್ರಿಮಂಡಲವನ್ನೇರ್ಪಡಿಸಬೇಕು. (5) ಕಾಂಗ್ರೆಸ್ ಮಂತ್ರಿಗಳು, ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಗಳಲ್ಲಿರುವ ಕಾಂಗ್ರೆಸ್ ಮೆಂಬರರು ಕಾಂಗ್ರೆಸ್ ಕಮಿಟಿಗಳ ಅಂಕೆಗೊಳಗಾಗಿ ನಡೆಯುವಂತಾಗಬೇಕು. (6) ಯುರೋಪಿನ ಪ್ರಕೃತದ ಯುದ್ಧದ ನಿಜವಾದ ಉದ್ದೇಶ, ಅರ್ಥ ಮತ್ತು ಕಾಂಗ್ರೆಸಿನ ಧೋರಣೆಯನ್ನು ವಿವರಿಸಿ ಜನತೆಯಲ್ಲೆಲ್ಲಾ ವ್ಯವಸ್ಥಿತ ಪ್ರಚಾರಕಾರ್ಯ ನಡೆಸಲ್ಪಡಬೇಕು. (7) ಹಿಂದೂದೇಶದ ಮೇಲೆ ಧಾಳಿಯ ಅಪಾಯಸಂಬಂಧವಾದ ಸುಳ್ಳುಭೀತಿಗಳನ್ನು ಕಾಂಗ್ರೆಸ್ ಪತ್ರಿಕೆಗಳು ಪ್ರಕಟಿಸಿ ಜನತೆಯನ್ನು ದಿಗಿಲುಗೊಳಿಸದಂತೆ ನಡೆಯಬೇಕು. (8) ಪ್ರತಿಯೊಂದು ಕಾಂಗ್ರೆಸ್ ಕಮಿಟಿಯು, ಎಡೆಬಿಡದೆ ಕಾಂಗ್ರೆಸ್ ಕೆಲಸಮಾಡುವ ಕೆಲಸಗಾರದಳವನ್ನು ಸ್ಥಾಪಿಸಬೇಕು. (9) ಹಿಂದೂದೇಶದ ಮುಂದಿನ ಪ್ರಜಾಸತ್ತಾತ್ಮಕ ರಾಜ್ಯಭಾರದ ಕೇಂದ್ರವಾಗಿ ಆದಷ್ಟು ಬೇಗನೆ ಸಂದರ್ಭ ಒದಗಿಬಂದಾಗ ರಾಜಕೀಯ ಅಧಿಕಾರವನ್ನು ಪಡೆದುಕೊಂಡು ನಡಿಸುವಂತೆ ದೇಶದಲ್ಲೆಲ್ಲಾ ಪ್ರಾಥಮಿಕ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ ಸಂಘಟಿಸಬೇಕು.

ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಎಂದಿಗಾದರೂ ಆತ್ಮಘಾತ ಮಾಡಿಕೊಳ್ಳಲಾರದು. ಹಿಂದೂದೇಶದ ಸ್ವಾತಂತ್ರ್ಯ ಮತ್ತು ಸ್ವಯಂ ನಿರ್ಣಯದ ಹಕ್ಕನ್ನದು ಎಂದಿಗೂ ಅಂಗೀಕರಿಸಲಾರದು. ಹಿಂದೀಯರು ಸ್ವಾತಂತ್ರ್ಯಕ್ಕಾಗಿ ಹೋರಾಟ ಹೂಡಿ ತಮ್ಮ ಬಲದಿಂದಲೇ ಅದನ್ನು ಸಾಧಿಸಿಕೊಳ್ಳಬೇಕು. ಹೋರಾಟವು ಮುನ್ನಡೆಯುತ್ತಿರಬೇಕು. ಕಾಂಗ್ರೆಸು ಈ ಹೋರಾಟದ ಮುಂದಾಳಾಗಿ ಅದನ್ನು ನಡಿಸಬೇಕಾದರೆ ಅದರ ಈಗಣ ಧೋರಣೆ ಕಾರ್ಯಕ್ರಮ ಮತ್ತು ನಾಯಕತ್ವವು ಬದಲಾಗಬೇಕೆಂದೇ ಶ್ರೀ ರಾಯ್‌ರವರ ಅಭಿಮತ.

Advertisement Tariff

1 Page	Rs. 25/-	per insertion	
½ „	Rs. 15/-	„	„
¼ „	Rs 8/-	„	„
⅛ „	Rs. 5/-	„	„

Per Single inch col. Re. 1 „
Contract rates on application
Manager-**Navayuga UDIPI**

ಮಾಧ್ವ ಗ್ರಂಥ ಪ್ರಚಾರಕ್ಕೆ ಒಂದು ರೂಪಾಯಿ ಕೊಟ್ಟು ಚಂದಾದಾರರಾಗುವವರಿಗೆ ಮಾತ್ರ ಈಗಲೇ ಮೂರು ರೂಪಾಯಿ ಪುಸ್ತಕಗಳು.

ಉಚಿತ

1	ದೇವಪೂಜಾ ವಿಧಿ	0-3-0
2	ವಿಷ್ಣುಸಹಸ್ರನಾಮ ಸ್ತೋತ್ರ	0-2-0
3	ವಾಯುಸ್ತುತಿ	0-2-0
4	ದ್ವಾದಶಸ್ತೋತ್ರ	0-2 0
5	ಆದಿತ್ಯ ಹೃದಯ	0-1-0
6	ಶ್ರೀಸೂಕ್ತ ಪುರುಷಸೂಕ್ತ(ಋ)	0-1-6
7	ಶ್ರೀಸೂಕ್ತ ಪುರುಷಸೂಕ್ತ(ಯ)	0-1-6
8	ಹರಿಕಥಾಮೃತಸಾರಸಾರೋದ್ಧಾರ	1-0-0
9	ಪುರಂದರದಾಸರ ಕೀರ್ತನೆ ಭಾಗ ೧	0-4 0
10	„ „ „ ೨	0 4-0
11	„ „ „ ೩	0-4 0
12	ಸುಂದರಕಾಂಡರಾಮಾಯಣಮೂಲ	0- -0

ಟಪ್ಪಾಲು ಖರ್ಚು ಬೇರೆ. ಒಟ್ಟು ರೂ. 3 0 0

ಮೇನೇಜರ್.

ಮಾಧ್ವಗ್ರಂಥ ಪ್ರಚಾರಕಸಂಘ,

ನಂ 45, A. S. ಸ್ಟ್ರೀಟ್, ಬೆಂಗಳೂರು ಸಿಟಿ.

GET RICH
AND
PROSPEROUS
through Simple Means upheld and pursued by Millions.........!
WRITE NOW WITH STAMP.—
K. S. Row,
Worli, BOMBAY.

Degrees Books: Medicines.
Free H. L. M S., H. M B. H. M. D. etc Free Homeo-Ayur-Unani-Naturo degres. by post also—Practioners also get soons Homeo Materiamedica, Rs. 5. Homeo-Practice book Rs 4. Insanity Cure Pills Rs 10 Enclose 2 annas stamp —
Principal, Indian Homeopathic Institute and Society (Govt Regd)
P O MAHUVA, (Kathiawar Dt. India.

ಸ್ವೀಕಾರ - ವಿಮರ್ಶೆ

ಶ್ರೀ ಕಲ್ಯಾಂಜೆ ವ್ಯಾಸಾಚಾರ್ಯ,

ಉಡುಪಿ—ಇವರ 1939-40ರ ಕಲ್ಯಾಂಜೆ ಪಂಚಾಂಗ—ಶ್ರೀ ಕಲ್ಯಾಂಜೆ ವ್ಯಾಸಾಚಾರ್ಯರ ಹೆಸರನ್ನು ಕೇಳದವರೂ ಇವರ ಪಾತ್ರೆಗಳು ಪೇರಿಸಿದ ಮನೆಗಳೂ ಕನ್ನಾಡಿಕಪಲ್ಲಿ ವಿರಳವೆನ್ನಬಹುದು. 'ದೇವರ ಪೂಜೆ ಮುಂತಾದ ದೈವಿಕ ಕಾರ್ಯಗಳಿಗೂ, ವಿವಾಹ ಮೊದಲಾದ ಸಂಸ್ಕಾರಗಳಿಗೂ, ಹೋಮ ಮುಂತಾದ ವೈದಿಕ ಮತ್ತು ಸ್ಮಾರ್ತ ಕರ್ಮಗಳಿಗೂ, ದಾನ ಮೊದಲಾದ ಸತ್ಕಾರ್ಯಗಳಿಗೂ ಮಂತ್ರ, ತಂತ್ರಗಳಂತೆಯೇ ಪಾತ್ರೆ ಮುಂತಾದ ಉಪಕರಣಗಳೂ ಅತ್ಯಾವಶ್ಯಕ. ಸಾಮಾನ್ಯವಾಗಿ ಈ ಪಾತ್ರೆಗಳು ಎಲ್ಲಾ ಕಡೆಗಳಲ್ಲಿ ದೊರೆಯುವವಾದರೂ ವಿಧ್ಯುಕ್ತವಾಗಿ ಲೋಹಗಳ ಪರಿಮಾಣದಿಂದ ತಯಾರಾದ ಸಾಮಾನುಗಳು ದೊರೆಯುವುದು ಅಪರೂಪವಾಗಿರುವುದರಿಂದಲೂ ಅನೇಕ ಸಾಮಾನುಗಳು ಪರದೇಶದಿಂದ ಬಂದು ದೇಶಾಭಿಮಾನಿಗಳಿಗೆ ಅಸಹ್ಯತೆಯನ್ನುಂಟುಮಾಡಲು ಆರಂಭಿಸಿದ್ದರಿಂದಲೂ ಇಂತಹ ಕೊರತೆಯನ್ನು ಹೋಗಲಾಡಿಸಬೇಕೆಂಬ ಇಚ್ಛೆಯಿಂದಲೂ, ಧರ್ಮಾಭಿಮಾನಿ ಮತ್ತು ದೇಶಾಭಿಮಾನಿ ಕೆಲ ಮಿತ್ರರ ಪ್ರೇರಣಾನುಸಾರವಾಗಿ ಈ ಉದ್ಯಮವನ್ನು ಶ್ರೀ ಆಚಾರ್ಯರು 1921ರಲ್ಲಿ ಕೈಗೊಂಡಿರುವರು ಅಂದಿನಿಂದ ದಿನೇ ದಿನೇ ಈ ವ್ಯಾಪಾರೋದ್ಯೋಗವು ಅಭಿವೃದ್ಧಿ ಹೊಂದುತ್ತಿದ್ದು ಇಂದು ಈ ಅಂಗಡಿಯು ಪರಿಸಾಟಿಯಿಲ್ಲದ ಸಮಸ್ತ ಪಾತ್ರೆಗಳ ಭಾಂಡಾರವೇ ಆಗಿದೆ. ಈ ಸುಂದರವಾದ ಕ್ರಯದ ಪಟ್ಟಿಯಲ್ಲಿ ಪ್ರತಿಯೊಂದು ಸಾಮಾನಿನ ಕ್ರಯವನ್ನು ಕನ್ನಡದಲ್ಲೂ ಇಂಗ್ಲಿಷಿನಲ್ಲೂ ಕೊಡಲಾಗಿದೆ, ಇದು ಸಕಲರಿಗೂ ಉಪಯುಕ್ತವಾಗಿದೆ, ಯಾರಿಗೆ ಯಾವ ಪಾತ್ರೆ ಸಾಮಾನು ಬೇಕಿದ್ದರೂ ಶ್ರೀ. ಕಲ್ಯಾಂಜೆಯವರಿಗೆ ಬರೆದು ಟಪ್ಪಾಲು ದ್ವಾರವೇ ವ್ಯಾಪಾರ ಸಾಗಿಸಲು ಇದು ಅತ್ಯಂತ ಸಹಕಾರಿಯಾಗಿದೆ. ಇವರ ವ್ಯಾಪಾರ ಸಾಹಸವನ್ನು ಕೊಂಡಾಡುವದಲ್ಲದೆ ಇನ್ನಷ್ಟು ಅಭಿವೃದ್ಧಿಯನ್ನೂ ಹಾರೈಸುವೆವು.

1940

ನೇ ಇಸವಿಯ

ಪಾಕೆಟ್ ಡೈರಿ

ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ

ಉಡುಪಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಚಿ. ಶ್ರೀ

ಡಾ. ಜಸಾನಿಯವರ

ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಚೆಲೆ ೩೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-5-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮ್ಯೋಪತ್ ಡಿಸ್‌ಪೆನ್ಸರಿ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

Sole Manufacturer Dr. D. N. JASANI, Vitalbhai Patel Road, BOMBAY 4

ಈ ವಾರದ ಭವಿಷ್ಯ

ತಾ. 16-11-1939ರಿಂದ – – – ತಾ. 23-11-1939ರ ವರೆಗೆ

ಮೇಷ:—ನೂತನ ಕಾರ್ಯವನ್ನಾರಂಭಿಸುವ ಶಕ್ತಿಯೂ ಆರಂಭಿಸಿದ ಕಾರ್ಯವನ್ನು ಕೊನೆಗೊಳಿಸುವ ಸಮಸ್ಫೂರ್ತಿಯೂ ನಿಮ್ಮಲ್ಲುಂಟಾಗಿರುವುದು. ಆರೋಗ್ಯವೂ ಉತ್ತಮ ಸ್ಥಿತಿಗೆ ಬರುವುದು. ಸಾಹಸಸಾಧ್ಯವಾದ ಕಾರ್ಯಗಳಲ್ಲೂ, ಬೌದ್ಧಿಕ ಕಾರ್ಯಗಳಲ್ಲೂ ವಿಜಯಿಗಳಾಗಿ ಇಚ್ಛಾಧಿಕವಾಗಿ ಫಲವನ್ನು ಹೊಂದುವಿರಿ. ಸ್ತ್ರೀಮೂಲಕ ಧನಪ್ರಾಪ್ತಿಯೂ ಜನಮನ್ನಣೆಯೂ ದೊರೆಯಲಿದೆ. ವಾರಾಂತ್ಯದ ಮೂರು ದಿನಗಳು ಅಷ್ಟೊಂದು ಸಮಂಜಸವಾಗಿಲ್ಲದಿರುವುದರಿಂದ ಅತಿವ್ಯಯ, ಅಟನ, ಸ್ಥಾನ ವಿಯೋಗದಿಂದ ದುಃಖವುಂಟಾಗುವುದು.

ವೃಷಭ:—"ನೀಚಾಶ್ರಯೋ ನ ಕರ್ತವ್ಯಃ ಕರ್ತವ್ಯೋ ಮಹದಾಶ್ರಯಃ" ಎಂಬ ನೀತಿವಚನದಂತೆ ಮಹಾತ್ಮರ ಆಶ್ರಯವು ಆಪತ್ಕಾಲದಲ್ಲಿ ಬಹಳ ಪ್ರಯೋಜನಕಾರಿಯಾಗುವುದು. ಪ್ರಕೃತ ಸಮಸ್ತ ಗ್ರಹರೂ ನಿಮ್ಮ ಮೇಲೆ ವಿಮುಖರಾಗಿದ್ದರೂ ಸುರಗುರುಗಳ ಅನುಗ್ರಹವನ್ನು ನೀವು ಪಡೆದಿರುವುದರಿಂದ ಇತರರಿಂದ ಪ್ರಾಪ್ತವಾಗತಕ್ಕ ಸಂಪೂರ್ಣ ಕಷ್ಟನಷ್ಟಗಳು ನಿಮಗೆ ಪ್ರಾಪ್ತವಾಗಲಾರವು. ಶಾರೀರಿಕ ಮಾನಸಿಕ ಮತ್ತು ಸಾಂಸಾರಿಕ ಭಾಗಗಳಲ್ಲೂ ನಿಮಗೆ ಸುಖ ಇರದು. ಆರ್ಥಿಕ ವಿಕ್ಕಟ್ಟು ಅಧಿಕವಾಗುವುದು ತಾ. 16, 17, 18 ಅತೀವ ಅಶುಭ.

ಮಿಥುನ:— ಸುಖದುಃಖ, ಲಾಭನಷ್ಟ, ಜಯಾಪಜಯಗಳು ಸಮಾನವಾಗಿ ಪರಿಣಮಿಸಲಿವೆ. ಶರೀರಗತ ವ್ಯಾಧಿಯು ನಿವಾರಣೆಯಾದರೂ ಅರುಚಿ ಆಲಸ್ಯಗಳು ಇದ್ದೇ ಇರುವವು. ನೌಕರಿ ಭಾಗದಲ್ಲಿ ಔನ್ನತ್ಯವನ್ನು ಪಡೆಯುವುದರಿಂದ ಶೋಕನಿವೃತ್ತಿ ಸೌಭಾಗ್ಯವೂ ಪ್ರಾಪ್ತವಾಗುವುದು. ವ್ಯರ್ಥ ಖರ್ಚುಗಳೇನೂ ಇಲ್ಲದಿರುವುದರಿಂದ ಧನವನ್ನು ಅಪರಿಮಿತವಾಗಿ ಸಂಗ್ರಹಿಸುವಿರಿ. ಕೋರ್ಟು ವಗೈರೆಗಳ ಕಾರ್ಯಗಳಲ್ಲಿ ಇಷ್ಟ ಸಿದ್ಧಿಸುವುದಾದರೂ ವಾರಾದಿಯ 3 ದಿನಗಳು ಅನಿಷ್ಟಕಾರಿಗಳಾಗಿರುವುದರಿಂದ ಶತ್ರುಪೀಡೆ ರಾಜಭಯ ಇತ್ಯಾದಿಗಳಿಂದ ಧನವ್ಯಯವಾದೀತು.

ಕರ್ಕಾಟಕ: —'ಸ್ವಭಾವೋ ದುರತಿಕ್ರಮಃ' ಎಂದಂತೆ ನೈಸರ್ಗಿಕ ಗುಣವು ದುಷ್ಟವೆಂದು ತೋರಿದರೂ ಅದನ್ನು ಬಿಡುವುದು ಕಷ್ಟಸಾಧ್ಯ. ಆದ್ದರಿಂದಲೇ ನಿಮ್ಮ ವರ್ತನೆಯಲ್ಲಿ ಜನರು ತಲೆಗೊಂಡು ರೀತಿ ಮಾತನಾಡುವರು. ಶತ್ರುಜನರು ಬೇಕೆಂದೇ ನಿಮ್ಮನ್ನು ಕೆಣಕಿ ಸಿಟ್ಟಿಗೆಬ್ಬಿಸುವರು. ಹೆಂಡತಿಮಕ್ಕಳೂ ಕೂಡ ನಿಮ್ಮೊಡನೆ ಕಲಹಕ್ಕೆಳೆಯುವುದರಿಂದ ಗೃಹಕೃತ್ಯದಲ್ಲಿ ವಿರಕ್ತಿಯುಂಟಾಗುವದು. ಬಂಧುಮಿತ್ರರ ಕೃಪಾಬಲವು ನಿಮಗಿರುವುದರಿಂದಲೂ ವ್ಯಯಕ್ಕೆ ತಕ್ಕದಾಗಿ ಆಯವಿರುವುದರಿಂದಲೂ ವಾರಾದಿಯ 3 ದಿನಗಳನ್ನು ಅನಾಯಾಸದಿಂದ ಕಳೆಯುವಿರಿ.

ಸಿಂಹ:—ದುರ್ಜನರಿಗೆ ಬುದ್ಧಿವಾದವನ್ನು ಹೇಳಿದರೆ ಬುದ್ಧಿ ಹೇಳಿದವರೇ ಶತ್ರುಗಳಾಗುವರು. ಹೇಗೆಂದರೆ ಹಿಂದೆ ರಾಮಾಯಣ ಕಾಲದಲ್ಲಿ ರಾವಣನಿಗೆ ನೀತಿ ಬೋಧಿಸಿದ ಮಾರೀಚನಂತೆ. ಪ್ರಕೃತದಲ್ಲಿ ನೀವೂ ಕೂಡ ಯಾರಾದರೂ ಹಿತೋಕ್ತಿಯನ್ನು ಬೋಧಿಸಿದರೆ ಅವರ ಮೇಲೇನೇ ಮುನಿದು ಬೀಳುವಿರಿ. ಕಾರಣ ಗ್ರಹಬಲವೇ ಅಂತಿರುವುದು. ನಿಮ್ಮ ಆರೋಗ್ಯವೂ ಕೆಡುವುದಲ್ಲದೆ ಅರ್ಧಾಂಗಿಯೂ ರೋಗಕ್ಕೆ ತುತ್ತಾಗುವಳು. ಪ್ರವಾಸ, ಧನವ್ಯಯ, ಮಾನಹಾನಿ ಇವುಗಳಿಂದ ಹೆಚ್ಚಿನ ಶೋಕಕ್ಕೆ ಗುರಿಯಾಗುವಿರಿ. ವಕ್ರಮಾರ್ಗಿಗಳಾದ ವ್ಯಾಪಾರಿಗಳಿಗೆ ಲಾಭವು ಚೆನ್ನಾಗಿರುವುದು. ತಾ. 21, 22, 23 ಹಾನಿಕರಗಳಾಗಿವೆ.

ಕನ್ಯಾ:—ನಿಮ್ಮ ಭಾಗ್ಯರವಿಯು ಉದಯಾಚಲವನ್ನೇರುತ್ತಿರುವನು. ಆದಕಾರಣ ಇಂತಹ ಸುಸಂಧಿಯನ್ನು ಆಲಸ್ಯದಿಂದ ಕಳೆಯುವುದು ಭಾವೀ ಕಲ್ಯಾಣಾಪೇಕ್ಷಿಗಳಿಗೆ ಯುಕ್ತವಲ್ಲವು. ಯಾವ ಕೆಲಸವನ್ನು ಮಾಡಿದರೂ ಅದರ ಸಂಪೂರ್ಣ ಪ್ರಯೋಜನವನ್ನು ಪಡೆಯುವ ಚೈತನ್ಯವು ನಿಮಗಿರುವುದು. ನಿಮ್ಮ ಭಾಗಕ್ಕೆ ವಿರೋಧಿಗಳೇ ಇಲ್ಲವೆಂದರೂ ತಪ್ಪಾಗದು. ಸಾಮಾಜಿಕ ಕಾರ್ಯಗಳಲ್ಲಿ ಪ್ರಶಸ್ತಿ ಜನಮನ್ನಣೆ ಇತ್ಯಾದಿಗಳಿಂದ ಯುಕ್ತರಾಗುವಿರಿ. ತಪ್ಪೆಂದು ತಿಳಿಯದೆ ಮಾಡತಕ್ಕ ದುಷ್ಕಾರ್ಯದಿಂದ ರಾಜಭಯಕ್ಕೆ ಗುರಿಯಾಗಲಿರುವಿರಿ. ತಾ. 19ರಿಂದ ವಾರಾಂತ್ಯದ ವರೆಗೂ ದಿನಗಳು ಅತ್ಯುತ್ತಮವಿವೆ.

ತುಲಾ:—ಸಂಸಾರವು ದುಃಖಮಯವಾಗಿ ಪರಿಣಮಿಸುವುದು. ಪತ್ನೀಪುತ್ರರು ಕಾಹಿಲೆಯಲ್ಲಿ ಬೀಳುವರು. ಸಹೋದರರು ಶತ್ರುಗಳಂತೆ ಜಗಳಾಡುವರು. ಹಿಡಿದ ಕಾರ್ಯದಲ್ಲಿ ನಿರಾಶೆಯ ಚಿಹ್ನೆಗಳೇ ತೋರಿಬರುವವು. ಮೇಲಿಂದ ಮೇಲೆ ಖರ್ಚು ಪ್ರಯಾಣ ಇತ್ಯಾದಿಗಳಿಂದ ಮನೋರೋಗಪೀಡಿತರಾದ ನಿಮಗೆ ಆರೋಗ್ಯವೂ ಸರಿಯಿರದು. ವಕೀಲ, ಉಪಾಧ್ಯಾಯ ವೃತ್ತಿಯವರಿಗೂ ನಟ ಗಾಯಕ ವ್ಯಾಪಾರಿಗಳಿಗೂ ತಾತ್ಕಾಲಿಕವಾಗಿ ಧನವಸನಾದಿಗಳು ದೊರೆಯುವವು. ವಾರಾಂತ್ಯದ ಮೂರು ದಿನಗಳಲ್ಲಿ ಮನಶ್ಶಾಂತಿ, ಧನಾಪ್ತಿಗಳುಂಟಾಗುವವು.

ವೃಶ್ಚಿಕ:—ಕೆಲವು ಸಮಯದ ಹಿಂದೆ ಸುಖಲೋಲುಪ್ತರಾಗಿ ಕಾಲಕಳೆಯುತ್ತಿದ್ದ ನಿಮ್ಮ ಅದೃಷ್ಟವು ಇತ್ತೀಚೆಗೆ ಸ್ವಲ್ಪ ಕನಿಷ್ಟ ಸ್ಥಿತಿಗೆ ಇಳಿದಿವೆ. 'ಸುಖಸ್ಯಾನಂತರಂ ದುಃಖಂ' ಎಂದಂತೆ ಸುಖಾವಸಾನದಲ್ಲಿ ದುಃಖವು ಅನಿವಾರ್ಯವಾದುದು. ಧೈರ್ಯವು ನಿಮ್ಮಲ್ಲಿ ಹೆಚ್ಚಿರುವುದರಿಂದ ಯಾವ ಕಾರ್ಯವನ್ನೂ ಧೈರ್ಯದಿಂದ ಮುಂದೊತ್ತಬಲ್ಲಿರಿ. ಅಂತೂ ಸುಖಕ್ಕೆ ತುಂಬಾ ವಿಘ್ನಗಳು ಬರುವವು. ದೇಹಾರೋಗ್ಯ, ಗೃಹಸುಖ, ಆರ್ಥಿಕ ಭಾಗಗಳು ಮುಂಚಿನಂತೆಯೇ ಉತ್ತಮವಾಗಿರುವುವು. ತಾ 16, 17, 18 ಈ ದಿನಗಳಲ್ಲಿ ಇಷ್ಟಸಿದ್ಧಿ, ಧನಾಗಮ, ಮಿತ್ರಭೇಟಿಗಳಾಗುವವು.

ಧನು:—'ಕ್ಷಣಶಃ ಕಣಶಶ್ಚೈವ ವಿದ್ಯಾಮರ್ಥಂ ಚ ಸಾಧಯೇತ್' ಕ್ಷಣ ಕಾಲವನ್ನೂ ಬಿಡದೆ ವಿದ್ಯಾಭ್ಯಾಸವನ್ನೂ ಚಿಕ್ಕಾಸನ್ನೂ ಬಿಡದೆ ಧನವನ್ನೂ ಸಂಗ್ರಹಿಸುವುದು ತತ್ತದಭಿಲಾಷಿಗಳ ಮುಖ್ಯ ಕರ್ತವ್ಯ. ಈ ವಾರದಲ್ಲಿ ನಿಮಗೆ ಈ ಎರಡು ವಿಚಾರಗಳಲ್ಲೂ ಹ್ರಾಸವೇ ಹೊರತು ವೃದ್ಧಿಯುಂಟಾಗದು. ದೈನಂದಿನದ ಚಿಲ್ಲರೆ ಖರ್ಚುಗಳಿಗೆ ಕಡಿಮೆಯಾಗದು. ಕೈಬಿಟ್ಟು ಹೋದ ಧನವೂ ಪುನಃ ಪ್ರಾಪ್ತವಾದೀತು. ಆರೋಗ್ಯ, ಮನಶ್ಶಾಂತಿಯು ಕೆಡುವುದು. ಸುಜನ ದುರ್ಜನ ಸಂಸರ್ಗ ಭೇದದಿಂದ ಇವುಗಳು ಮಾರ್ಪಾಟು ಹೊಂದಲಿವೆ. ತಾ. 19, 20 ಮಾತ್ರ ಅನುಕೂಲ.

ಮಕರ:—ಶರೀರದ ಪ್ರಕೃತಿಯು ಚೆನ್ನಾಗಿರದು. ಸಂಸಾರಚಕ್ರವು ಸುಗಮವಾಗಿರದು. ನಿದ್ರಾಭಾವ ಮನೋರೋಗಗಳಿಂದ ಶರೀರದಲ್ಲಿ ಕಾರ್ಶ್ಯತೆಯುಂಟಾಗುವುದು. ಎಷ್ಟೇ ಪ್ರಯತ್ನಪಟ್ಟರೂ ಇಂದ್ರಿಯಗಳು ನಿಮ್ಮ ವಶದಲ್ಲಿರಲಾರವು. ಆದರೂ ಆರ್ಥಿಕ ಭಾಗದ ಮಟ್ಟಿಗೆ ನೀವು ಬಹಳ ಉತ್ತಮ ಸ್ಥಿತಿಯಲ್ಲಿರುವಿರಿ. ಯಾವ ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯಲಾರಿರಿ. ಜನಸಹಾಯವು ನಿಮಗೆ ಚೆನ್ನಾಗಿರುತ್ತದರಿಂದ ಸಕಲರೂ ನಿಮ್ಮನ್ನು ಮಾನಿಸುವರು. ತಾ. 19, 20 ಬಿಟ್ಟು ಉಳಿದ ದಿನಗಳು ಶ್ರೇಯಸ್ಕರವಾಗಿವೆ

ಕುಂಭ:—ಇಷ್ಟರಲ್ಲಿ ನಿಮ್ಮ ಅದೃಷ್ಟವೇ ಉತ್ತಮ ಸ್ಥಿತಿಯಲ್ಲಿರುವುದು. ರಾಜಕೀಯ ಸಾಮಾಜಿಕ ಇತ್ಯಾದಿ ಕಾರ್ಯಗಳಲ್ಲಿ ಯಶಸ್ಸಂಪಾದಿಸುವಿರಿ. ಪ್ರತಿಸ್ಪರ್ಧಿಗಳು ನಿಮ್ಮ ಮೇಲೆ ಪ್ರತೀಕಾರೇಚ್ಛೆಯಿಂದ ಬಂದರೂ ಅವರೇ ಅಪಜಯ ಹೊಂದುವರು. ಶಾರೀರಿಕ ಮತ್ತು ಸಾಂಸಾರಿಕ ಭಾಗದಲ್ಲಿ ಏನೊಂದೂ ಕೊರತೆಯಾಗದು. ವಿದ್ಯಾರ್ಥಿಗಳಿಗೆ ಸರ್ವಾನುಕೂಲ ಯೋಗವಿರುವುದು. ನಿಷ್ಠುರವಾಗ್ದೋಷದಿಂದ ಕೆಲವರೊಡನೆ ಜಗಳವಾದೀತು. ವಾಣಿಜ್ಯ ಭಾಗದಲ್ಲಿ ಸ್ವಲ್ಪ ನಷ್ಟವುಂಟಾದೀತು. ತಾ 19, 30 ಅತ್ಯುತ್ತಮ ದಿನಗಳಾಗಿವೆ.

ಮೀನ:—ಮೃಗರಾಜನ ಘರ್ಜನೆಯಿಂದ ಭಯಭ್ರಾಂತವಾದ ಹರಿಣವು ಏನು ಮಾಡಲೂ ತೋಚದೆ ಸ್ತಬ್ಧವಾಗಿ ನಿಲ್ಲುವಂತೆ ಗ್ರಹ ಸಮೂಹದ ವಕ್ರದೃಷ್ಟಿಗೆ ಪಾತ್ರರಾದ ನೀವೂ ಕೂಡ ಕಾರ್ಯಾಕಾರ್ಯ ವಿವೇಕ ಶೂನ್ಯರಾಗುವಿರಿ. ಒಂದೆಡೆ ನಾಲಿಗರ ಕಾಟ, ಇನ್ನೊಂದೆಡೆ ಶತ್ರುಗಳ ಮಾಟ, ಮಗದೊಂದೆಡೆ ಅಧಿಕಾರಿಗಳ ವಕ್ರನೋಟ ಇವುಗಳಿಂದ ಬೆಂದು ಬೇಸತ್ತು ಹೋಗುವಿರಿ. ಇಷ್ಟಾದರೂ ನಿಮ್ಮ ಅರ್ಧಾಂಗಿಯಿಂದಾಗಿ ಮನಸ್ಸಿಗೆ ಸ್ವಲ್ಪ ಮಟ್ಟಿನ ಸುಖ ದೊರೆಯಲಿದೆ. ತಾ. 19, 20 ಬಹಳ ಹಾನಿಕರಗಳಾಗಿವೆ.

ಕೆಲವು ಪ್ರಶ್ನೋತ್ತರಗಳು.

(ಒಂದು ಪತ್ರಿಕೆಯ ಸಂಪಾದಕರಿಗೆ ಬಂದ ಕೆಲವು ಪ್ರಶ್ನೆಗಳನ್ನೂ ಅವುಗಳಿಗೆ ಅವರಿತ್ತಿರುವ ಉತ್ತರಗಳನ್ನೂ ಕೆಳಗೆ ಕೊಡಲಾಗಿದೆ. ಸಂ)

ಪ್ರಶ್ನೆ:—ಭಾರತದ ಯುವಕರು ಪಾಶ್ಚಿಮಾತ್ಯರ ಉಡುಪನ್ನು ಧರಿಸಬೇಕೆ?

ಉತ್ತರ:—ಯಾರು ಹಾಗೆ ಹೇಳಿದವರು? ಭಾರತದ ಉಡುಪಿನಲ್ಲಿರುವ ದೋಷವಾದರೂ ಏನೆಂಬುದು ನಮಗೆ ಇದು ವರೆಗೂ ತಿಳಿಯಲಿಲ್ಲ. ಪಾಶ್ಚಿಮಾತ್ಯ ಉಡುಪು ನಮ್ಮವರಿಗೆ ಕೇವಲ ಅನಗತ್ಯ ಮಾತ್ರವಲ್ಲ, ಅದರಿಂದ ಅವರ ತಲೆ ತಿರುಗಿ ಹೋಗುವುದು, ಜಂಭ ಬರುವುದು, ಅನ್ಯಾಯವಾಗಿ ಅಪವ್ಯಯಕ್ಕೆ ಕಾರಣವಾಗುವುದು. ಅಲ್ಲದೆ, ನಮ್ಮ ವಾಯುಗುಣಕ್ಕೆ ಸಹ ಅದು ಅನುಗುಣವಾಗಿರುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಅದು ನಮ್ಮಲ್ಲಿ ಗುಲಾಮಗಿರಿಯ ಭಾವನೆಗಳನ್ನು ತುಂಬುವುದು.

೦೦ ೦೦ ೦೦

ಪ್ರಶ್ನೆ:—ಕಪ್ಪು ಸ್ತ್ರೀಯೊಡನೆ ವಿವಾಹವಾಗಿ ಸಂಸಾರ ಸುಖಮಯವಾಗಿ ಸಾಗುತ್ತದೋ? ಅಥವಾ ಸುಂದರ ಸ್ತ್ರೀಯೊಡನೆ ಆದರೆ ಸಾಗುತ್ತದೋ?

ಉತ್ತರ:—ತಮ್ಮ ಪ್ರಶ್ನೆಯೇ ತಪ್ಪು. ಯಾಕೆಂದರೆ ಪ್ರತಿ ಕಪ್ಪು ಸ್ತ್ರೀಯೂ ಕುರೂಪಿಯಾಗಿರಲೇಬೇಕೆಂದೂ, ಪ್ರತಿ ಕೆಂಪು ಸ್ತ್ರೀಯೂ ಸುಂದರಿಯಾಗಿರುವಳೆಂದೂ ಇರುವ ಭಾವನೆಯೇ ತಪ್ಪು ಭಾವನೆಯಾಗಿದೆ. ಕಪ್ಪು ಕೆಂಪಿಗೂ; ಸೌಂದರ್ಯವು, ಕುರೂಪಕ್ಕೂ ವಿರೋಧ ಶಬ್ದಗಳು ಮಾತ್ರ. ಆದ್ದರಿಂದ ತಮ್ಮ ಪ್ರಶ್ನೆಯು ಈ ರೀತಿ ಇರಬೇಕಾಗಿತ್ತು "ಸುಂದರ ಸ್ತ್ರೀಯೊಡನೆ ವಿವಾಹವಾದರೆ ಸಂಸಾರವು ಸುಖಮಯವಾಗಿರುವುದೇ ಅಥವಾ ಕುರೂಪಿಯೊಡನೆ ಸುಖವಾಗಿರುವುದೇ." ಇದಕ್ಕೆ ಉತ್ತರವಾಗಿ ಅಸೆಂಬ್ಲಿಯಲ್ಲಿ ಯಾರಾದರೂ ಮೆಂಬರು ಕೇಳಿದ ಪ್ರಶ್ನೆಗೆ ಉತ್ತರ ಹೇಳುವಂತೆ ನಾವದರೂ ಸ್ವಲ್ಪ ದಿನಗಳ ಕೆಳಗೆ ಇಂಗ್ಲೆಂಡಿನ ಪ್ರಸಿದ್ಧ ಲೇಖಕರಾದ ಶ್ರೀ. H. G. ವೇಲ್ಸರು ಕೊಟ್ಟಿರುವ ಹೇಳಿಕೆಯನ್ನು ನೋಡಿರೆಂದು ಹೇಳುವೆವು. (ಹೇಳಿಕೆಯು ವಾಚಕರ ಉಪಯೋಗಾರ್ಥವಾಗಿ ಕೆಳಗೆ ಕೊಡಲ್ಪಟ್ಟಿದೆ.)

ಮಿ. H. G. ವೇಲ್ಸರ ವಯಸ್ಸು ಈಗ 72 ವರ್ಷ. ಅವರು ಕೊಡುವ ಹೇಳಿಕೆಗಳಿಗೆ ಅವರ ವಿಶಾಲ ಅನುಭವದ ಆಧಾರವಿರುವುದರಿಂದ ಬಹಳ ಮಹತ್ವವಿದೆ.

ವಿವಾಹದ ಸಮಸ್ಯೆಯು "ಸೌಂದರ್ಯ ಪ್ರೇಮ" ಇವುಗಳಿಗೆ ಸಂಬಂಧಿಸಿದ್ದು. ವಿವಾಹವಾಗುವ ಪ್ರತಿ ಪುರುಷನೂ ತನ್ನ ಹೆಂಡತಿಯೂ ಸುಂದರಿಯಾಗಿರಬೇಕೆಂದೇ ಬಯಸುವನು. ಆದರೆ ಮಿ. ವೇಲ್ಸರ ವಿಚಾರವು ಇದಕ್ಕೆ ವಿಪರೀತವಾಗಿದೆ ಅವರು ಹೇಳುವುದಿಷ್ಟೆ. "ಸುಂದರ ಸ್ತ್ರೀಯೊಡನೆ ಎಂದಿಗೂ ವಿವಾಹವಾಗಬೇಡಿ. ಏಕೆಂದರೆ ಅವಳು ನಿಮ್ಮನ್ನು ಆಕರ್ಷಿಸಿ ವಿವಾಹವೇನೋ ಆಗುವಳು. ಕೆಲವು ದಿನಗಳ ವರೆಗೂ ಜೀವನವು ಸುಖವಾಗಿಯೇ ಇರುವುದು. ಜನರು ನಿಮ್ಮನ್ನು ಕಂಡು ಹೊಟ್ಟೆಕಿಚ್ಚುಪಡುವರು. ಆದರೆ ಕಾಲ ಕಳೆದಂತೆಲ್ಲಾ, ನಿಮ್ಮ ಪತ್ನಿಯ ದೋಷಗಳು ಪ್ರಕಟವಾಗುತ್ತಾ ಬರುವುವು. ನಂತರ ನೀವು ನಿಮ್ಮನ್ನು ತೀರ ದುರ್ದೈವಿಗಳೆಂದುಕೊಳ್ಳುವಿರಿ. ಒಂದು ಮಾತನ್ನು ಮಾತ್ರ ನೆನಪಿನಲ್ಲಿಡಿ. ಅತ್ಯಂತ ಸುಂದರಿಯಾದ ಸ್ತ್ರೀಯು ಸಹ ತನ್ನ ಗಂಡನ ದೃಷ್ಟಿಯಲ್ಲಿ ಸೌಂದರ್ಯವತಿಯಲ್ಲ."

"ಸಾಧಾರಣವಾಗಿ ಅಂಗ ಸೌಷ್ಠವವುಳ್ಳ ಹೆಂಗಳನ್ನು ವಿವಾಹವಾಗಿರಿ. ಇದರಿಂದ ನಿಮ್ಮ ಆನಂದವು ಶಾಶ್ವತವಾಗಿರುವುದು. ಆಕೆಯಲ್ಲಿರುವ ಅನೇಕ ಸದ್ಗುಣಗಳು ಬೆಳಕಿಗೆ ಬರುವುವು. ಆಕೆಯ ಹೊರಗಿನ ರೂಪು, ರೇಖೆಗಿಂತಲೂ, ಆಕೆಯಲ್ಲಿರುವ ಸದ್ಗುಣಗಳೇ ನಿಮ್ಮನ್ನು ಹೆಚ್ಚು ಸುಖದಲ್ಲಿಡುವುವು. ಆಕೆಯು ನಿಮ್ಮ ಸರ್ವಸ್ವವಾಗುವಳು. ನಿಮ್ಮ ಆನಂದದ ಗಣಿಯಾಗುವಳು."

"ಮದುವೆಗೆ ಮೊದಲು ಕೇವಲ ಕುರೂಪಿಯಾದವಳನ್ನೇ ಹುಡುಕಿರಿ. ವ್ಯಸನದಲ್ಲಿ ಆಕೆಯು ನಿಮಗಿಂತ ಏನೂ ಕಡಿಮೆಯಾಗಿಲ್ಲವೆಂದು ಭಾವಿಸಿರಿ. ತೀರ ಬಡತನದವಳಾಗಿರಲಿ, ಕೂಳಕಾಗೇ ಇರಲಿ"

(ಇದು ಪಾಶ್ಚಿಮಾತ್ಯರೊಬ್ಬರ ವಾದ! ನಮ್ಮ ದೇಶಕ್ಕೆ ಇದು ಅನ್ವಯಿಸುವುದೆಂದು ಹೇಳಲಾಗುವುದಿಲ್ಲ.)

೦೦ ೦೦ ೦೦

ಪ್ರಶ್ನೆ:—ಯಾರೊಡನೆ ವೈರತ್ವವಿರಬೇಕು?

ಉತ್ತರ:—ಮನುಷ್ಯನು ಯಾರೊಡನೆಯೂ, ಕೊನೆಗೆ ತನ್ನ ಶತ್ರುವಿನೊಡನೆಯೂ ದ್ವೇಷವನ್ನಿಡಬಾರದು. ಇದು ಅತ್ಯಂತ ಉತ್ತಮ ತರದ ನಡತೆ. ಮಹಾತ್ಮಾಜಿಯವರು ಸಹ ಈ ತತ್ವವನ್ನೇ ಅನುಸರಿಸುತ್ತಿರುವರು. ಆದರೆ, ನೀವು ಯಾರೊಡನೆಯೇ ಆಗಲಿ, ದ್ವೇಷವನ್ನಿಡಲೇಬೇಕೆನ್ನುವುದಾದರೆ, ನಿಮ್ಮ ಇಂದ್ರಿಯ ಚಾಪಲ್ಯ, ಹೊಟ್ಟೆಕಿಚ್ಚು ಪಡುವಿಕೆ, ಅಧೈರ್ಯ, ಇವುಗಳನ್ನು ದ್ವೇಷಿಸಿರಿ.

ಅಮೃತವಾಣಿ

ಕೋಪವನ್ನು ಶಾಂತಿಯಿಂದಲೂ, ಸುಳ್ಳನ್ನು ಸತ್ಯದಿಂದಲೂ ಗೆಲ್ಲಬೇಕು,

Ruskin

KOPRAN
Tooth Paste

ಹಿಂದೂದೇಶದ ಜನಪ್ರೀತ ದಂತಾಂಜನ

ಹಾಳಿಗಿಡದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ. ತೀವ್ರಸತ್ವವುಳ್ಳದ್ದು, ವಿಷಹಾರಕವಾದದು.

KOPRAN CHEMICAL CO. BOMBAY

ಆರ್ಮಿನ್ ಅಂಡ್ ಕಂಪೆನಿ ಮುಂಬಯಿ.
ಕೊಪರನ್ ಲಾರ್ಜ್ ಸೈಜು 0 13 0, ಕೊಪರನ್ ಸ್ಟ್ಯಾಂಡರ್ಡ್ ಸೈಜು 0-8-0. ಟೆಂಡರ್ಗಮ್ ಸ್ಟ್ಯಾಂಡರ್ಡ್ ಸೈಜು 0 8-0.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,

Hampankatte, **MANGALORE.**

DAIMONDS! DAIMONDS!

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಜಾತ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ವರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮಕೈಗೆಸೇರುವುದು

ಸೀಸೆ1ಕ್ಕೆ12ಆಣೆ, ಟಪಾಲಾಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ,

ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರಮನೋಹರವಾದಈರಸಾಯನವುಬಾಣಂತಿಯ ಅರುಚಿ,ಅಗ್ನಿಮಾಂದ್ಯ,ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ, ಕ.

ಮೈಸೂರು ಸ್ಟೇಟಿನ ಏಜಂಟರು – ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬಧಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿಸೋರುವುದು, ಸೋಂಕು, ಉರಿಯುವುದು, ಶಬ್ದವೇಳುವುದು, ತುರಿಸುವುದು, ಕೆಡು ಅಥವಾ ನೋವೇಳುವುದು, ಕರ್ಣಕುಹರದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೈನು ತೆಗೆದುಕೊಂಡ ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂಥಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬಧಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಮಾತ್ರಗುಣಹೊಂದುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ. ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು. ಬಾಟ್ಲ 1ರ ಬೆಲೆ ರೂ. 2, 3 ಬಾಟ್ಲಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—**ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.**

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ, ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● **ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.**

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್ ಕೆ. ಆರ್ ಕೆ ಶೇಟ್ ಬಿಲ್ಡಿಂಗ್, ಮಿಲಾಗ್ರಿಸ್ ಸ್ಕೂಲ್ ರೋಡು.	ಅ ಥ ವಾ	**ಎಚ್. ವೆಂಕಟರಾಮಯ್ಯ** ಡಿವಿಜನಲ್ ಸುಪರಿಂಟೆಂಡೆಂಟ್,ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— **ಡಿಪೋವಿನ ರಿಂಗ್‌ವರ್ಮ್ ಮುಲಾಮು** —

ಇಷ್ಟರ ವರೆಗಣ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹಾಲೆಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದಾಗಿದೆ ವಿಷಮಜ್ವರ, ಪಿತ್ಥಜ್ವರ, ನಿಮೋನಿಯಾ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ ಬಹುಮೂತ್ರ, ಸೀಮೂತ್ರ ಅನ್ನಕೋಶ ಪಿತ್ಥಕೋಶ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷಘಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು, ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳು

ಕ್ರಯ ಸೀಸೆ 1ಕ್ಕೆ ರೂ. 2—8—0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕೆಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1—4—0

ವಿ. ಪಿ. ಬೇರೆ

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.

'ಹೆವನನ್' ಹೆಮೊರ್ರ್ಯಾಯ್ಡ್ — ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೀ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರ್ರ್ಯಾಯ್ಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ- ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. **ಸೀಸೆ 1ಕ್ಕೆ ರೂ. 1-4-0** ವಿ.ಪಿ. ಬೇರೆ

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವೃತ್ತಿಯುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನವಾಗುವದು ಈ ಗುಳಿಗೆಗಳು ಕರುಳುಗಳಿಗೆ ಬಲಿಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿ ಮಾಡುವವು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B. & C. I. Ry BOMBAY PRESIDENCY.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ದಕ್ಷಿಣ ಮಹಾರಾಷ್ಟ್ರ ಜಿಲ್ಲೆಗಳಲ್ಲಿ ಸಬ್ ಏಜಂಟರುಗಳು ಬೇಕಾಗಿದ್ದಾರೆ. ... ... ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ

PRINTED BY S. S. KARANTH AT THE THUTUNAD PRESS, UDIPI. AND PUBLISHED BY K. H. SHETTY AT 'NAVAYUGA OFFICE, UDIPI, S. INDIA

[Regist]ered No. M. 3618 23-11-1939

ನವಯುಗ

NAVAYUGA

ದ್ವಾರಾವತೀಂ ಸಕಲಭಾಗ್ಯವತೀಮುಪೇಕ್ಷ್ಯ
ಗೋಪಾಲಬಾಲಲಲನಾಕರಪೂಜನಂ ಚ ।
ವಾರ್ಧಿಂ ವಧೂಸ್ವಕಮುಕೀರ್ತ್ಯ ಸ್ವಮಧ್ವನಾಥೋ
ಯತ್ರಾಸ್ತಿ ತದ್ರಜತಪೀಠಪುರಂ ಗರೀಯಃ ॥

ಉಡುಪಿ ಶ್ರೀ ಕೃಷ್ಣನ ಸನ್ನಿಧಿಯಲ್ಲಿ

ಇದೇ ಬರುವ ತಾ. 23—11—1939ರಿಂದ 26—11—1939ರ ತನಕ

ಪ್ರಮಾಥಿ ಸಂ|ರದ ಕಾರ್ತಿಕ ಶು. (ಉತ್ಥಾನ) ದ್ವಾದಶಿಯಿಂದ ಆರಂಭಿಸಿ ಹುಣ್ಣಿಮೆಯ ವರೆಗೆ ನಾಲ್ಕು ರಾತ್ರಿಗಳಲ್ಲಿ

ಲಕ್ಷದೀಪೋತ್ಸವವು

ಜರಗಲಿರುವುದು.

ಶ್ರೀಮನ್ಮಧ್ವಾಚಾರ್ಯರವರ ಅವತಾರಸ್ಥಾನವಾಗಿದ್ದು,

ಮುಕ್ತಿಪ್ರದವಾದ ಸಪ್ತಕ್ಷೇತ್ರಗಳಲ್ಲಿ ಮುಖ್ಯವಾದ ಉಡುಪಿಯು ಶ್ರೀಮಧ್ವಾಚಾರ್ಯರ ದಿವ್ಯಹಸ್ತದಿಂದ ಪ್ರತಿಷ್ಠಿತನಾದ, ಕಡಗೋಲು ನೇಣನ್ನು ಕೈಗಳಲ್ಲಿ ಹಿಡಿದುಕೊಂಡು ನಿಂತಿರುವ, ರುಕ್ಮಿಣೀಕರಾರ್ಚಿತ ದಿವ್ಯ ಬಾಲಕೃಷ್ಣನ ಸನ್ನಿಧಾನದಿಂದ ಅತಿ ಪವಿತ್ರವೆಂದು ಹೆಸರುಗೊಂಡಿದೆ. ಈ ಸುಂದರ ಮೂರ್ತಿಯ ದರ್ಶನಮಾತ್ರದಿಂದ ಭಕ್ತರ ಹೃದಯದಲ್ಲಿ ಅಪೂರ್ವ ಭಕ್ತಿಸ್ರೋತವು ಉಕ್ಕಿ ಪ್ರವಹಿಸುವುದರಲ್ಲಿ ಆಶ್ಚರ್ಯವಿಲ್ಲ. ಸಾವಿರಾರು ಆಸ್ತಿಕ ಭಕ್ತರು ಈ ಪರಮಾತ್ಮನ ಮತ್ತು ಗುರುಗಳಾದ ಮಧ್ವಾಚಾರ್ಯರ ಸೇವಾ-ದರ್ಶನಾದಿಗಳಿಂದ ತಂತಮ್ಮ ಅಭೀಷ್ಟ ಸಿದ್ಧಿ ಪಡೆದಿರುತ್ತಾರೆ.

ಇದಲ್ಲದೆ ಉಡುಪಿ ಕ್ಷೇತ್ರವೂ ಸುತ್ತುಮುತ್ತಲಿನ ರಮಣೀಯವಾದ ಪ್ರಾಕೃತಿಕ ದೃಶ್ಯಗಳಿಂದ ಕೂಡಿದ ಮನೋಹರ ಮತ್ತು ಸ್ವಾಸ್ಥ್ಯಪ್ರದವಾದ ಪ್ರದೇಶದಲ್ಲಿರುವುದು.

ಏಕಕಾಲದಲ್ಲಿ ಶ್ರೀಹರಿಗುರುಗಳ ದರ್ಶನ-ಸೇವಾದಿಗಳ ಲಾಭ ದೊರೆಯುವ ಈ ಪುಣ್ಯಕ್ಷೇತ್ರವನ್ನು ಕಾರ್ತಿಕ ಲಕ್ಷದೀಪೋತ್ಸವ ಕಾಲದಲ್ಲಿ ಸಮಸ್ತ ಭಜಕರೂ ಅವಶ್ಯ ನೋಡಬೇಕಾಗಿದೆ. ರಥೋತ್ಸವಕ್ಕೆ ಮೊದಲು ತೆಪ್ಪೋತ್ಸವವೂ, ನಾಲ್ಕು ಬೀದಿಗಳಲ್ಲಿಯೂ ಬೆಳಗಿಸುವ ಲಕ್ಷಗಟ್ಟಲೆಯ ದೀಪಮಾಲೆಗಳ ವೈಭವವೂ ಅತಿ ಪ್ರೇಕ್ಷಣೀಯವಾಗಿವೆ.

ಹೆಚ್ಚಿನ ಅನುಭವಕ್ಕೂ, ವಸತಿ ಮೊದಲಾದ ಸೌಕರ್ಯಗಳಿಗೂ ಪತ್ರ ಬರೆದು ಕೇಳಿರಿ.

ಏಜಂಟ್:

ಪರ್ಯಾಯ ಶ್ರೀಫಲಿಮಾರು ಮಠ, ಉಡುಪಿ.

THE ASIAN ASSURANCE COMPANY, LTD.

ASIAN BUILDINGS - - - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,361	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar
,, **M. Shivarama Rao**, Organizer, Puttur.

Or

Sri. J. A. PUTRAN,
Branch Manager, MANGALORE.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆ ಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ದೆ ಆರ್ಗನೈಜರ್
ಕೆ. ಆರ್. ಕೆ. ಶೆಟ್ಟಿ ಬಿಲ್ಡಿಂಗ್,
ಮಿಶ್ಯನ್ ಹೈಸ್ಕೂಲ್ ರೋಡು.

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,800/-. Paid up Capital: Rs. 1,82,100/-.

PRINCIPAL OFFICE: COURT ROAD, UDIPI.

OTHER OFFICES:

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively; Interest being payable on the 1st January & 1st July of every year.

For further particulars please address or call at any of our offices.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖಸಿದ್ಧಿಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ--- ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್

ಫೋನ್ 406

ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

Transport & Car Owners

ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

ESTD. 1921 ಸ್ಥಾಪನೆ

FOUNDER
SRI A B SHETTY, M L. A,
ಸಂಸ್ಥಾಪಕರು
ಶ್ರೀ. ಎ. ಬಿ. ಶೆಟ್ಟಿಯರು, ಎಂ ಎಲ್ ಎ.

ಸಂಪಾದಕ
ಕೆ. ಕೆ. ಶೆಟ್ಟಿ.

NAVAYUGA
ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೨

ಉಡುಪಿ, ಗುರುವಾರ, ೨೩—೧೧—೧೯೩೯.
UDIPI, THURSDAY, 23-11-1939.

VOL 19
No. 12

ವಾರದ ವಿಮರ್ಶೆ

ಶುಭ ಚಿನ್ಹೆ.

ಇದೇ ತಾ 13ರಲ್ಲಿ ಮಿ. ಜಿನ್ನಾರವರು ಇಡ್ ಹಬ್ಬದ ಸಂದರ್ಭದಲ್ಲಿ ಕೊಟ್ಟ ಸಂದೇಶವು ಮುಸಲ್ಮಾನ ಬಂಧುಗಳಿಗೆ ಮಾತ್ರವಲ್ಲದೆ ಹಿಂದೀಯರಿಗೆಲ್ಲಾ ಬೋಧಪ್ರದವಿದ್ದು ಹಿಂದೂ ಮುಸಲ್ಮಾನ ಸಮಸ್ಯೆಯ ನಿರಾಶಾಮಯ ವಾತಾವರಣದಲ್ಲಿ ಆಶೋದಯವನ್ನುಂಟುಮಾಡುವಂತಹದಾಗಿದೆ ಜನಸಾಮಾನ್ಯ ಹಿತಕಾರಕವಾದ ಸಾಮಾಜಿಕ ಕೆಲಸಗಳಲ್ಲಿ ಇಂದಿನ ಯುವಕರು ತಮ್ಮ ಸಂಯಮಿತ ಶಕ್ತಿಯನ್ನುಪಯೋಗಿಸಬೇಕೆಂಬ ಮಿ ಜಿನ್ನರ ಬೋಧನೆಯು ಕರ್ಮಕೌಶಲ್ಯದ ಹಿಂದೂಧಾರ್ಮಿಕ ಭಾವನೆಯನ್ನೇ ಹೋಲುತ್ತದೆ. ಭಾವೀ ಭಾರತದಲ್ಲಿ ಮುಸಲ್ಮಾನರು ಪಡೆಯತಕ್ಕ ಹಕ್ಕುಬಾಧ್ಯತೆಗಳಿವೆ. ಆದರೆ ಆ ಕುರಿತು ಹಠ ತೊಡಬಾರದು. ಯಾಕೆಂದರೆ ಹಠವು ಮಹಮ್ಮದ್ ಪೈಗಂಬರರು ಬೋಧಿಸಿರುವ ಪ್ರೇಮ ಮತ್ತು ಸಹಿಷ್ಣುತಾ ಬುದ್ಧಿಗೆ ಬದ್ಧ ವಿರೋಧವಿದೆ ಮುಸಲ್ಮಾನರು ತಮ್ಮ ಮನೆಯೊಳಗೆ ಸಮಾಜದೊಳಗೆ ಮತ್ತು ಭಿನ್ನಭಿನ್ನ ಜಾತಿಮತಗಳಿಂದ ತುಂಬಿರುವ ದೇಶದೊಳಗೆ ಸಾಮರಸ್ಯವನ್ನುಂಟುಮಾಡಲೆತ್ನಿಸಬೇಕು. ಖಾಸಗಿಯಾಗಿಯೂ, ಸಾರ್ವಜನಿಕವಾಗಿಯೂ ಸಂಕುಚಿತ ಸ್ವಾರ್ಥಕ್ಕಾಗಿ ದುಡಿಯದೆ ತಮ್ಮ ಎಲ್ಲಾ ದೇಶಬಂಧುಗಳ ಹಾಗೂ ಮಾನವ ಕೋಟಿಯ ಅತ್ಯಂತವಾದ ಹಿತಕ್ಕಾಗಿ ದುಡಿಯಬೇಕೆಂಬ ಮಿ. ಜಿನ್ನರ ಉದಾತ್ತ ಸಂದೇಶವು ಇಂದೀಗ ಪ್ರತಿಯೊಬ್ಬನ ಹೃದಯದಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡದಿರಲಾರದು. ಮುಸ್ಲಿಮ್ ಲೀಗಿನ ಪ್ರೆಸಿಡೆಂಟರ ಈ ಉದಾರ ಹಾಗೂ ಸಮತ್ವಬುದ್ಧಿಪರ ಮನೋವೃತ್ತಿಯಿಂದಾಗಿ, ಅವರೊಡನೆ ಪಂಡಿತ ಜವಾಹರಲಾಲರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ ಮುಗಿದೊಡನೆಯೇ ಬೊಂಬಾಯಿಗೆ ಹೋಗಿ ನಡಿಸಲಿರುವ ಮಾತುಕತೆಯು ಹಿಂದೂ ಮುಸಲ್ಮಾನ ಪ್ರಶ್ನೆಯ ಇತ್ಯರ್ಥದಲ್ಲಿ ಕೊನೆಗೊಂಡು, ಭಾರತ ಸ್ವಾತಂತ್ರ್ಯಸಾಧನಾ ಮಾರ್ಗದ ಅತಿದೊಡ್ಡ ತೊಡಕೊಂದು ನಿವಾರಿತವಾಗುವುದೆಂದು ನಿರೀಕ್ಷಿಸಬಹುದೇ?

ಮುಂದೇನು ?

ಇದೇ ತಾ. 15ರಲ್ಲಿ ಅಸ್ಸಾಂ ಮಂತ್ರಿಮಂಡಲವು ರಾಜಿನಾಮೆ ಕೊಟ್ಟಿರುವುದು. ಇಲ್ಲಿಗೆ 8 ಕಾಂಗ್ರೆಸ್ ಮಂತ್ರಿ ಮಂಡಲಗಳೂ ರಾಜಿನಾಮೆ ಕೊಟ್ಟಂತಾಯಿತು ಅಸ್ಸಾಮಿನಲ್ಲಿ ಮಾತ್ರ ಸರ್. ಸಾದುಲ್ಲರು ಹೊಸ ಮಂತ್ರಿ ಮಂಡಲವನ್ನು ಸ್ಥಾಪಿಸಿರುವರು ಉಳಿದ 7 ಪ್ರಾಂತ್ಯಗಳಲ್ಲಿ ಪ್ರಾಂತಿಕಸ್ವಾಯತ್ತತೆಯೇ ಅಂತ್ಯಗೊಂಡು ಗವರ್ನರರ ಏಕತಂತ್ರ ಅಧಿಕಾರ ಆರಂಭವಾಗಿರುವುದು ಕಳೆದ ತಾ 11ರಲ್ಲಿ ವೈಸರಾಯರು ಗಾಂಧಿ, ಪ್ರಸಾದ್, ಜಿನ್ನಾರವರನ್ನು ಕಂಡ ಮೇಲೆ ಮೌನಧಾರಣೆ ಮಾಡಿರುವರು. ಕಾಯಿದೆ ಭಂಗ ಚಳವಳ ಹೂಡಲು ಇದೀಗ ಸಮಯವಲ್ಲೆಂದು ಮಹಾತ್ಮಾ ಗಾಂಧಿಯವರೆಂದಿರುವರು. ಈ ಸಂದರ್ಭದಲ್ಲಿ ಮುಂದೇನು ಎಂಬ ಪ್ರಶ್ನೆಯು ದೇಶದಲ್ಲೇ ಪ್ರತಿಧ್ವನಿಸುತ್ತಿರುವುದು.

ಪುನಃ ವೈಸರಾಯಿಗಾಂಧಿ ಭೇಟಿ

ಇದೇ ತಾ 19ರಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯ ಅನಂತರ ಮಹಾತ್ಮರು ಇನ್ನೊಮ್ಮೆ ವೈಸರಾಯರನ್ನು ಕಾಣಲಿರುವರೆಂದು ಸುದ್ದಿಯುಂಟಾಗಿದೆ . ಪಂಡಿತ ಜವಾಹಿರಲಾಲರು, ಕೂಡಲೆ ಬೊಂಬಾಯಿಗೆ ತೆರಳಿ ಮಿ ಜಿನ್ನರೊಡನೆ ಮಾತಾಡಿ ಹಿಂದೂ ಮುಸಲ್ಮಾನ ಸಮಸ್ಯೆಯನ್ನು ಪರಿಹರಿಸಲೆತ್ನಿಸುವರು ಕಾಂಗ್ರೆಸ್ ಮುಂದಾಳುಗಳು ಅವಸರಮಾಡದೆ ಬ್ರಿಟಿಷ್ ಸರಕಾರಕ್ಕೆ ಬೇಕಷ್ಟು ಸಮಯ ಮತ್ತು ಸಂದರ್ಭಗಳನ್ನಿತ್ತು ಅದು ಎಷ್ಟಕ್ಕೂ ವಿವೇಕದ ಹಾದಿ ಬಾರದಿದ್ದ ಪಕ್ಷದಲ್ಲಿ ಕಾಯಿದೆಭಂಗ ಚಳವಳ ಹೂಡದಿರಲಾರರು. ಹಿಂದೀ ಆಕಾಂಕ್ಷೆಯ ಕುರಿತು ಲೋಕಮತದ ಬೆಂಬಲವು ಹೆಚ್ಚೆಚ್ಚಾಗಿ ದೊರೆಯುತ್ತಾ ಬರುತ್ತಿದೆ

ಬ್ರಿಟಿಷ್ ಲೇಬರ್ ಪಕ್ಷವು ಸಂಪೂರ್ಣವಾಗಿ ಕಾಂಗ್ರೆಸಿನ ಬೆಂಬಲಕ್ಕೆ ನಿಂತಿದೆ ದಕ್ಷಿಣ ಆಫ್ರಿಕದ ಪತ್ರಿಕೆಗಳು ಕೂಡಾ ಕಾಂಗ್ರೆಸಿನ ಕೇಳಿಕೆಯು ನ್ಯಾಯವಾದುದೆಂದು ಪ್ರತಿಪಾದಿಸಿ, ಮಧ್ಯಕಾಲೀನ ರಾಜ್ಯಭಾರ ಕ್ರಮವಿದ್ದ ಪೋಲೆಂಡಿನ ಸ್ವಾತಂತ್ರ್ಯಕ್ಕಾಗಿ ಪ್ರಚಂಡ ಯುದ್ಧ ಹೂಡಿರುವ ಬ್ರಿಟನು, ಬಹುಳವಾಗಿ ಮುಂದುವರಿದ ಸುಸಂಸ್ಕೃತ ಹಿಂದೀಯರಿಗೆ ಸ್ವಾತಂತ್ರ್ಯವನ್ನು ನಿರಾಕರಿಸುವುದು ಅಪಹಾಸ್ಯಕರವೆಂದು ಟೀಕಿಸಿರುವವು ಜಾತೀಯ ಪ್ರಶ್ನೆಯನ್ನು ದೊಡ್ಡ ತೊಡಕಾಗಿ ಬ್ರಿಟಿಷ್ ಸರಕಾರವು ಮುಂದೊಡ್ಡಿದ ಕಾರಣವು ಕೇವಲ ಕಲ್ಪಿತವೆಂಬುದನ್ನು ಗಾಂಧಿಜಿಯವರೇ ಮೊದಲಾದವರು ಸಿದ್ಧಗೊಳಿಸಿದ್ದಾರೆ ಜಿನ್ನಾ ನೆಹರು ಮಾತುಕತೆಯು ಜಯಶೀಲವಾದ ಪಕ್ಷದಲ್ಲಿ ಮತ್ತಾವ ನೆಪವನ್ನು ಸರಕಾರವು ಮುಂದೊಡ್ಡುವುದೋ? ಅಂತೂ ಆದಕ್ಕೂ ಈಗ ಕಾಂಗ್ರೆಸನ್ನು ಎದುರಿಸಲು ಸಾಧ್ಯವಿಲ್ಲ. ಇನ್ನು ಒಂದೆರಡು ತಿಂಗಳ ಗಳೊಳಗೆ ಏನಾದರೊಂದು ರಾಜಿಯಾಗಬಹುದೆಂಬ ಆಶೆಯೇ ಬಲವಾಗಿದೆ ಶ್ರೀ. ರಾಜಗೋಪಾಲಾಚಾರ್ಯರಂತಹ ಕಾಂಗ್ರೆಸ್ ಮುಂದಾಳುಗಳಲ್ಲಿ ಕೂಡಾ.

ರಾಜಿಯ ಯತ್ನ ನಿಷ್ಫಲ

ಹೊಲ್ಲೆಂಡಿನ ರಾಣಿ ಮತ್ತು ಬೆಲ್ಜಿಯಮಿನ ರಾಜರು ನಡಸಿದ ರಾಜಿಯ ಪ್ರಯತ್ನವು ನಿಷ್ಫಲವಾಗಿದೆ. ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಅದನ್ನು ಗಮನಿಸದೆ ನಿರಾಕರಿಸಿ ಬಿಟ್ಟು, ವರ್ಸೆಲ್ಸ್ ಒಪ್ಪಂದವನ್ನೇ ಎತ್ತಿಹಿಡಿಯಲೆತ್ನಿಸುವುದರಿಂದ, ತಾವೂ ಅದನ್ನು ಪರಿಗಣಿಸದಂತಾಗಿದೆಯೆಂದು ಜರ್ಮನ್ ಸರಕಾರವು ತಿಳಿಸಿರುವುದು. ಬ್ರಿಟನ್ ಮತ್ತು ಫ್ರಾನ್ಸುಗಳು ಪೂರ್ವಯುರೋಪಿನ ರಾಜಕೀಯದಲ್ಲಿ ಕೈಹಾಕಿ ಅಧಿಕಾರ ಚಾಲುಮಾಡಲೆತ್ನಿಸುವ ಅಭಿಪ್ರಾಯವೇ ನಾಝಿ ಜರ್ಮನಿಗೆ ಅಸಹನೀಯವಾಗಿದೆ. ಅದು ರಶ್ಯದೊಡನೆಯೇ ನಿಕಟ ಸಂಬಂಧ ಬೆಳಸಿಕೊಂಡು, ಅವುಗಳು ತಮ್ಮೊಳಗೇನೇ ಯುರೋಪಿನ ಪೂರ್ವ ಮತ್ತು ಆಗ್ನೇಯ ಪ್ರದೇಶದ ರಾಷ್ಟ್ರಗಳ ಪ್ರಶ್ನೆಯನ್ನು ಇತ್ಯರ್ಥಮಾಡಿಕೊಳ್ಳಹತ್ತಿವೆ. ರಾಜ್ಯಗಳನ್ನು ಮಾತ್ರವಲ್ಲದೆ ಜನತೆಯನ್ನೇ ಬದಲಾಯಿಸಿಕೊಳ್ಳುವ ಹಂಚಿಕೆಗಳನ್ನು ಮಾಡಿವೆ ಇದರಿಂದಾಗಿ ಯುದ್ಧದಲ್ಲಿ ಒಂದು ವೇಳೆ ಮಿತ್ರರಾಷ್ಟ್ರಗಳು ಗೆದ್ದರೂ, ರಾಷ್ಟ್ರಗಳ ನವನಿರ್ಮಾಣದ ಬಲು ದೊಡ್ಡ ಸಮಸ್ಯೆಯು ಅವನ್ನಿದಿರಿಸದಿರಲಾರದು

ಹಿಟ್ಲರರ ತೊಡಕುಗಳು

ಹರ್. ಹಿಟ್ಲರರ ತೊಡಕುಗಳು ದಿನೇ ದಿನೇ ಅಧಿಕವಾಗುತ್ತಿದೆ. ಮೊದಲಾಗಿ ಯುದ್ಧವನ್ನು ಮುಂದೊತ್ತುವ ರೀತಿಯ ಕುರಿತು ಅವರಿಗೂ ಜರ್ಮನ್ ಸೇನಾಧಿಕಾರಿಗಳಿಗೂ ಭಿನ್ನಾಭಿಪ್ರಾಯವುಂಟಾಗಿದ್ದೆ. ಹರ್. ವಾನ್ ರಿಬಂಟ್ರಫರ ಸೋವಿಯೆಟ್ ರಶ್ಯದೊಡನೆ ಸಮೀಪ ಸಂಬಂಧ ಬೆಳಸುವ ಧೋರಣೆಯಿಂದ ನಾಝಿ ಪಕ್ಷ

(೭ನೇ ಪುಟಕ್ಕೆ ಮುಂದರಿಯುವದು)

NO ONE IS SAFE!



NATURAL CAUSE may deprive your family

YOU MEANT TO TAKE OUT A POLICY YOU HAD DISCUSSED ONE WHICH WOULD HAVE BROUGHT YOU SUFFICIENT INCOME BUT WRITING WAS TOO MUCH TROUBLE FOR YOU THEN AN ACCIDENT HAPPENED NOW YOUR FAMILY IS LEFT PENNILESS. A SAD STORY BUT ALAS HOW COMMON! YOU ARE IN DANGER AT EVERY MOMENT SAFEGUARD TO DAY INSURE WITH TROPICAL. WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE!

Quotations for all ages and amounts to suit all circumstances

TROPICAL INSURANCE COY, LTD.
NEW DELHI.

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ

ಎಂ ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಹಂಪನಕಟ್ಟೆ—ಮಂಗಳೂರು.

ಅಥವಾ

ಕೆ ರಾಮಮೂರ್ತಿ, ಎಂ. ಎ., ಆರ್ಗನೈಜಿಂಗ್ ಸೆಕ್ರೆಟರಿ, 160 ಮೌಂಟ್ ರೋಡ್, ಮದ್ರಾಸು.

— ಮೈ ಸೂ ರು ಪ ತ್ರ —

ಕಾಂಗ್ರೆಸ್ ಮುಂದಾಳುಗಳ ಬಿಡುಗಡೆ ಮತ್ತು ಪುನಃ ಮತ್ತೊಂದು ಹುಕುಮು ಜಾರಿ ಮಾಡಲಾಯಿತು.

ಸ. ಬೆ. ತಾ. 20-11-'39

ಕಾಂಗ್ರೆಸ್ ಚಳುವಳಿ—ಮೈಸೂರು ಕಾಂಗ್ರೆಸ್ ಚಳುವಳಿಯು ಈ ವಾರದಲ್ಲಿ ಜೋರಾಗಿತ್ತು. ಆಜ್ಞೋಲ್ಲಂಘನೆಮಾಡುವವರ ದಸ್ತಗಿರಿ ನಡೆದು ಶಿಕ್ಷೆಯಾಗುತ್ತಲೇ ಇವೆ. ಕೋಲಾರದ ಚಿನ್ನದ ಗಣಿ ಪ್ರಾಂತದಲ್ಲಿ 3 ತಿಂಗಳ ಕೆಳಗೆ ಆಜ್ಞೋಲ್ಲಂಘನೆಗೆ ದಸ್ತಗಿರಿಯಾಗಿದ್ದ ಕಾಂಗ್ರೆಸ್ ಅಧ್ಯಕ್ಷರು ಮತ್ತು ಇನ್ನಿತರ ಹನ್ನೊಂದು ಮಂದಿಯ ಜೈಲವಧಿಯು ಮುಗಿಯಲು ಅವರ ಬಿಡುಗಡೆಯಾಯಿತು. ಈ ಮುಂದಾಳುಗಳ ಬಿಡುಗಡೆಯಾದ ಕೂಡಲೇ, ಕೋಲಾರದ ಜಿ. ಮ್ಯಾ. ರು, ಲೀಗಲ್ ಪ್ರಾಕ್ಟೀಷನರ್ಸ್ ಆಕ್ಟ್ ಸೆ. 12ರ ಪ್ರಕಾರ ಒಂದು ಆಜ್ಞೆ ಹೊರಡಿಸಿ (ನೀವುಗಳು ಕಾಂಗ್ರೆಸ್ ಚಳುವಳಿಗೆ ಸೇರಿ ನಿಮ್ಮ ಹುದ್ದೆಗೆ ಅಡಚಣೆ ತರುತ್ತಿರುವಿರಿ, ನಿಮ್ಮ ವಕಾಲತ್ತು ಸನದನ್ನೇಕೆ ರದ್ದುಪಡಿಸಬಾರದೆಂಬುದೇ ಇದರರ್ಥ.) ಈ ಲಾಯರುಗಳ ಮತ್ತು ಇನ್ನೂ ಕೆಲವು ವಕೀಲರ ಮೇಲೆ ಜಾರಿಮಾಡಿ ಡಿಸೆಂಬರ ತಾ. 4ರಲ್ಲಿ ಕೋಲಾರ ಜಿ. ಮ್ಯಾ. ಕೋರ್ಟಿಗೆ ಹಾಜರಾಗಿ ತಿಳಿಸಬೇಕೆಂದು ಕೇಳಿದ್ದಾರೆ. ಕಾಂಗ್ರೆಸ್ ಮುಂದಾಳುಗಳೆಲ್ಲರೂ ಹರ್ಷಚಿತ್ತರಾಗಿದ್ದರು. ಮೈ. ಕಾ. ಅಧ್ಯಕ್ಷರನ್ನು ಮೈಸೂರಿನಲ್ಲಿ ಬಿಡುಗಡೆಮಾಡಿದಾಗ ಇವರಿಗೆ ಅಭೂತಪೂರ್ವ ಸ್ವಾಗತವಿತ್ತು. ಮೋಟಾರಿನಲ್ಲಿ ಕುಳ್ಳಿರಿಸಿ ರಾಜ ವೀಥಿಗಳಲ್ಲಿ ಮೆರವಣಿಗೆಮಾಡಿದರು. ಈ ದೃಶ್ಯವು ಅಖಿಲಭಾರತ ಕಾಂಗ್ರೆಸ್ ಮುಂದಾಳುಗಳಿಗೇರ್ಪಡಿಸುವ ಮೆರವಣಿಗೆಗೆ ಹೋಲುತ್ತಿತ್ತು. ಮೈಸೂರಿನಲ್ಲಿರುವ ಪತ್ರಿಕಾಪ್ರತಿನಿಧಿಗಳೆಲ್ಲರನ್ನೂ ಸೇರಿಸಿ ಒಂದು ಸಭೆಯನ್ನು ಮೈ. ಕಾಂ. ಅಧ್ಯಕ್ಷರೇರ್ಪಡಿಸಿದ್ದರು. "ನಾವು ಜೈಲಿನಲ್ಲಿದ್ದುದರಿಂದ ಇಂದಿನ ಪರಿಸ್ಥಿತಿ ವಿಚಾರವಾಗಿ ನಮಗೇನು ಗೊತ್ತಿಲ್ಲ. ಈಗ ಯಾವುದನ್ನೂ ಹೇಳಲು ಸಾಧ್ಯವಿಲ್ಲ. ಸದ್ಯದಲ್ಲೇ, ಕಾಂಗ್ರೆಸ್ ವ. ಕ. ಸೇರಿ ಯಾವುದನ್ನೂ ಇತ್ಯರ್ಥಮಾಡುವುದೆಂದರು." ಮೈ. ಕಾಂ. ವಿಚಾರವನ್ನು ತಿಳಿಸಲು, ಮಹಾತ್ಮರ ಬಳಿಗೆ ಕಾಂಗ್ರೆಸಿನವರು ಡೆಪ್ಯುಟೇಶನು ಹೋಗಲಿದ್ದಾರೆ. ಇದುವರೆಗೆ ಕಾಂಗ್ರೆಸ್ ಮುಂದಾಳುಗಳ ದಸ್ತಗಿರಿಯಾಗಲಿ ನಡೆದಿಲ್ಲ. ಎಲ್ಲವೂ ಶಾಂತ ರೀತಿಯಿಂದಿದೆ. ಮೈ. ಕಾಂ.ಗೆ ಜಯವು ಲಭಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಮುಂದೇನು?—ಮೈಸೂರಿನಲ್ಲಿ ರಾಜಕೀಯ ಸುಧಾರಣಾ ಸಮಿತಿ ವರದಿ ಹೊರಬಿತ್ತು. ಇದರ ಬಗ್ಗೆ ಅನೇಕ ಅಭಿಪ್ರಾಯಗಳು ಬರುತ್ತಿವೆ. ಇದರ ಪ್ರಕಾರ ನಡೆಯಲು ಎಲ್ಲವೂ ಸಿದ್ಧಗೊಳ್ಳುತ್ತಿವೆಂದೂ ಹೇಳಲಾಗಿದೆ. ಜನವರಿ ಮಾಹೆಯಲ್ಲಿ ಮೈ. ನ್ಯಾ. ಸಭೆಯು ನಡೆಯುವುದು, ನಂತರ ಮುಂದಿನ ವರ್ಧಂತಿಯ ಮೈ. ಪ್ರ. ಪ್ರ. ಸಭೆ ಹೊತ್ತಿಗೆ ಪುನಃ ಚುನಾವಣೆ ನಡೆಯಬೇಕು. ಇದು ಆದಷ್ಟು ಬೇಗ ನಡೆಯದಿದ್ದರೂ, ಬರುವ ನವರಾತ್ರಿ ಅಧಿವೇಶನದ ಹೊತ್ತಿಗಾದರೂ ಪ್ರ. ಪ್ರ. ಸಭೆ ಮತ್ತು ನ್ಯಾ. ಸಭೆಗಳಿಗೆ ಚುನಾವಣೆ ನಡೆಯುವುದೆಂದೂ, ಈ ಉಭಯ ಸಭೆಯ ಸದಸ್ಯರುಗಳನ್ನು ಒಟ್ಟಿಗೆ ಸೇರಿಸಿ ಮಹಾರಾಜರು ಭಾಷಣಮಾಡುತ್ತಾರೆಂದೂ ಹೇಳಲಾಗಿದೆ. ಸದ್ಯಕ್ಕೆ ಇಂಟೆರಿಂ ಮಂತ್ರಿಮಂಡಲ ನೇಮಕವಿಲ್ಲವೆಂದು ತಿಳಿಸಲಾಗಿದೆ. ಅಂತು ಒಟ್ಟಿನಲ್ಲಿ ಮೈಸೂರಿನ ಪ್ರಜೆಗಳ ಮತ್ತು ಕಾಂಗ್ರೆಸ್ ಮುಂದಾಳುಗಳ ಮೇಲೆ ಬಹು ಜವಾಬ್ದಾರಿ ಬಿದ್ದಿದೆ.

ಮೈಸೂರಿನ ಚಟುವಟಿಕೆಗಳು— ಈ ವಾರಾಂತ್ಯದಲ್ಲಿ ಮೈಸೂರಿನ ಚಟುವಟಿಕೆಗಳು ಬಹು ಸ್ವಾರಸ್ಯವಾಗಿದ್ದವು. ಬೆಂಗಳೂರು ಹೆಬ್ಬಾಳ ವ್ಯವಸಾಯಶಾಲೆಯ ರಜತ ಮಹೋತ್ಸವವನ್ನು, ಬೆಂಗಳೂರು ಬಸಪ್ಪ ಶಂಕರಪ್ಪ ಪಾರ್ಕಿನ ಆರಂಭೋತ್ಸವವನ್ನು ಆನೇಕಲ್ ರಾ. ರಾಮಕೃಷ್ಣ ಪುರದಲ್ಲಿ ಶ್ರೀರಾಮಕೃಷ್ಣ ಕೃಷಿಕೈಗಾರಿಕೆ ಶಾಲೆಯ ಆರಂಭೋತ್ಸವವನ್ನೂ ದ್ವಿತೀಯ ಸಚಿವರು ಅಧ್ಯಕ್ಷತೆ ವಹಿಸಿ ನಡೆಸಿದರು. ಅ. ಮೈ. ಸ್ತ್ರೀ ಸಮ್ಮೇಳನವು ಚಿತ್ರದುರ್ಗದಲ್ಲಿ ಮುಂದಿನ ಮಾಹೆ ತಾ. 20ರಿಂದ [illegible]ರವರೆಗೆ ಲೇಡಿ ಮಿರ್ಜಾರವರ ಅಧ್ಯಕ್ಷತೆಯಲ್ಲಿ ನಡೆಯುತ್ತೆ. ಚಿಕ್ಕಮಗಳೂರು ಪೌರ ಸಭಾಶ್ರಯದಲ್ಲಿ ಒಂದು ಫಲಪುಷ್ಪ, ಪಶು, ದನಗಳ ಪ್ರದರ್ಶನ ನಡೆಯಿತು. ಬೆಂಗಳೂರು ದಂಡಿನ ನಗರಸಭೆಗೆ ಸದಸ್ಯರುಗಳ ಸ್ಥಾನಕ್ಕೆ, ಹಿಂದಿನ ಚುನಾವಣೆ ಕ್ಷೇತ್ರದಲ್ಲಿ ಕಾಂಗ್ರೆಸ್ ಸದಸ್ಯರುಗಳಿಗೇ ವಿಜಯವಾಗುತ್ತಿದೆ.

ಇಂಡಿಯಾ ಸರ್ಕಾರದ ವಾಣಿಜ್ಯಸಚಿವರಾದ ಸರ್. ಎ. ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಅಖಿಲಭಾರತ ಕೈಗಾರಿಕೆ ಸಮ್ಮೇಳನವು ಮುಂದಿನ ಮಾಹೆ ಬೆಂಗಳೂರಲ್ಲಿ ನಡೆಯುತ್ತೆಂದೂ ತಿಳಿದುಬಂದಿದೆ. ಮೈಸೂರು ವಿಶ್ವವಿದ್ಯಾಲಯದ ಕೌನ್ಸಿಲ್ ಸಭೆಯೊಂದು ನಡೆದು ವಿಶ್ವವಿದ್ಯಾನಿಲಯದ 1938-39ನೇ ಸಾಲಿನ ವರದಿ, ಮೆಡಿಕಲ್ ಸ್ಕೂಲ್ ವಜಮಾಡುವುದು ಮತ್ತು ಇನ್ನಿತರ ವಿಷಯಗಳನ್ನು ಚರ್ಚಿಸಿತು. ಯಲ್. ಎಂ. ಪಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಡಿಪ್ಲೊಮ ಹಂಚಲಾಯಿತು. ಬೆಂಗಳೂರು ಇಂಟರ್‌ಮಿಡಿಯೆಟ್ ಕಾಲೇಜ್ ಸಂಘದಾಶ್ರಯದಲ್ಲಿ ಒಂದು ಚರ್ಚಾಕೂಟ ನಡೆಯಿತು. ದಕ್ಷಿಣ ಭಾರತ ಅನೇಕ ವಿಶ್ವವಿದ್ಯಾನಿಲಯ ಪ್ರತಿನಿಧಿಗಳು ಇದರಲ್ಲಿ ಪಾತ್ರವಹಿಸಿದ್ದರು. ಪೂನಾ ಕಾಲೇಜಿನ ಪ್ರತಿನಿಧಿಗಳಿಗೆ ಪ್ರಥಮ ಬಹುಮಾನ ಬಂತು. ಆರಮನೆ ಬ್ಯಾಂಡಿನ ಮುಖ್ಯಾಧಿಕಾರಿಗಳಾದ ಡಾ! ಸ್ಮಿತ್‌ರವರು ಜರ್ಮನ್ನರೆಂದು ಸೆರೆಯಾಗಿ ಅಹಮದಾಬಾದಿನಲ್ಲಿದ್ದರು. ಇವರ ಬಿಡುಗಡೆಯಾಗಿ ಮೈಸೂರಿಗೆ ಬಂದರು. ಇಂಗ್ಲಾಂಡಿಗೆ ತೆರಳಿದ್ದ ಮೈಸೂರು ಹೈಕೋರ್ಟು ಜಡ್ಜಿಗಳಾದ ಸರ್. ಡಾರ್ಸಿ ರೈಲಿಯವರೂ ಅವರ ಪತ್ನಿಯವರೂ ಮೈಸೂರಿಗೆ ಹಿಂತಿರುಗಿದರು. ಬೆಂಗಳೂರು ಚಾಮರಾಜಪೇಟೆ ಕ್ಲಬ್ಬಿನಾಶ್ರಯದಲ್ಲಿ ಪಂ! ನೆಹ್ರೂರವರ 51ನೇ ವರ್ಷ ವರ್ಧಂತಿ ನಡೆದು, ಶ್ರೀ. ಬಾಲಕೃಷ್ಣಯ್ಯನವರು ಅಧ್ಯಕ್ಷತೆ ವಹಿಸಿ ಶ್ರೀ. ಬಿ. ಟಿ. ಶ್ರೀಕಂಠಯ್ಯನವರು ಭಾಷಣಮಾಡಿದರು. ಶ್ರೀಮನ್ಮಹಾರಾಣಿಯವರು ಶೀಘ್ರದಲ್ಲೇ ಮುಂಬಾಯಿಗೆ ಹೋಗುತ್ತಾರೆಂದು ಗೊತ್ತಾಗಿದೆ. ಶಿವಮೊಗ್ಗ ಪತ್ರಿಕೋದ್ಯೋಗಿ ಸಂಘದಾಶ್ರಯದಲ್ಲಿ ವಕೀಲ್ ಶ್ರೀ ಟಿ. ಜಿ. ನಾರಾಯಣ ಅಯ್ಯಂಗಾರ್‌ರವರು ಶ್ರೀಮನ್ಮಹಾರಾಜ, ಶ್ರೀಯುವರಾಜ ಮತ್ತು ಪ್ರಿನ್ಸ್ ಜಯಚಾಮರಾಜ ಒಡೆಯರವರ ಭಾವಚಿತ್ರ ಅನಾವರಣ ಮಹೋತ್ಸವ ನಡೆಸಿದರು.

ಸ್ವೀಕಾರ, ವಿಮರ್ಶೆ

101 Fables of the Orient

ಇದು ಶ್ರೀ. ಜಿ. ಅಣ್ಣಾಜಿರಾವ್, ಎಂ. ಎ., ಬಿ. ಎಲ್., ಮುಂಬೈ 2, ಇವರಿಂದ ರಚಿಸಲ್ಪಟ್ಟ ಪೂರ್ವದೇಶದ 101 ಕತೆಗಳ ಇಂಗ್ಲಿಷ್ ಪುಸ್ತಕ. ಭಾರತೀಯ ಸಂಸ್ಕೃತಿಯ ಐಕ್ಯಸಾಧನೆಗೆ ಸಣ್ಣಪುಟ್ಟ ಕತೆಗಳು ಹಿಂದಿನಿಂದಲೂ ಅತ್ಯಂತ ಸಹಕಾರಿಯಾಗಿವೆ. ಈ ತೆರನ ಕತೆಗಳಲ್ಲಿ ಜಾತಿಮತಗಳ ಭೇದವಿಲ್ಲದೆ ಅವು ಪ್ರತಿಯೊಬ್ಬರಿಗೂ ಮುಖ್ಯವಾಗಿ ಉಪಾಧ್ಯಾಯರಿಗೂ, ಉಪದೇಶಕರಿಗೂ ಪ್ರಚಾರಕರಿಗೂ ಹೆಚ್ಚಿನ ಉಪಯೋಗಕರವಾಗಿವೆ ಎನ್ನಬಹುದು.

ಕನ್ನಡಿಗರಿಗೆ ಪರಿಚಿತರಾದ ಶ್ರೀ. ಜಿ. ಅಣ್ಣಾಜಿರಾಯರು ಇಲ್ಲಿಯವರೆಗೆ ಒಪ್ಪವ ಉತ್ತಮವಾದ 101 ಕತೆಗಳನ್ನೇ ಆರಿಸಿ, ಪೋಣಿಸಿ, ವಾಚಕರ ಮುಂದಿಟ್ಟಿದ್ದಾರೆ. ಪ್ರತಿಯೊಬ್ಬನೂ ಇದನ್ನೋದಿ ಲೇಖಕರ ಪ್ರಯತ್ನವನ್ನು ಸಫಲಗೊಳಿಸಬೇಕಾಗಿ ಹಾರೈಸುವೆವು.

140ಕ್ಕೂ ಮಿಕ್ಕಿದ ಪುಟಗಳ ಸಚಿತ್ರವಾದ ಈ ಪುಸ್ತಕದ ಬೆಲೆ, ಬರೀ 0-10-0. ಟಪ್ಪಾಲು ಖರ್ಚು ಫ್ರೀ ಪ್ರತಿಗಳು ಬೇಕಾದವರು 'ಇಂಡಿಯನ್ ಟ್ರೇಡ್ಸ್ ಕಂಪನಿ' 195/8 ಜಿ. ಕೆ. ಬಿಲ್ಡಿಂಗ್, ಗಾಮದೇವಿ, ಗ್ರಾಂಟರೋಡ್, ಬೊಂಬಾಯಿ ಇವರಿಗೆ ಬರೆದು ತರಿಸಿಕೊಳ್ಳಬಹುದು.

ಚಂದಾದಾರರಲ್ಲಿ ವಿನಂತಿ.

ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ದಯಮಾಡಿ ಕೂಡಲೇ ಕಳುಹಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಮೆನೇಜರ್, '**ನವಯುಗ**'

ಸ್ಥಳಾಭಾವದಿಂದ 'ಪುರುಷರೆಲ್ಲರೂ ಕಾಮಾಂಧರು!' ಎಂಬ ಕತೆಯನ್ನು ಈ ಸಲ ಪ್ರಕಟಿಸಲಾಗಲಿಲ್ಲ; ಬರುವ ವಾರ ಪ್ರಕಟಿಸಲಾಗುವುದು.

ಸಮಿತಿಯ ಸದಸ್ಯರಾಗುವವರಿಗೆ ಮಾತ್ರ
ಈಗಲೇ ರೂ. 3 ಬೆಲೆಯ ಪುಸ್ತಕಗಳು

ಉ ಚಿ ತ

(ಸದಸ್ಯತನದ ಚಂದಾ:—ಒಂದೇ ರೂಪಾಯಿ)

1	ದೇವಪೂಜಾ ವಿಧಿ	0-3-0
2	ವಿಷ್ಣುಸಹಸ್ರನಾಮ ಸ್ತೋತ್ರ	0-2-0
3	ವಾಯುಸ್ತುತಿ	0-2-0
4	ದ್ವಾದಶಸ್ತೋತ್ರ	0-2-0
5	ಆದಿತ್ಯಹೃದಯ	0-1-0
6	ಶ್ರೀಸೂಕ್ತ ಪುರುಷಸೂಕ್ತ (ಋ.)	0-1-6
7	ಶ್ರೀಸೂಕ್ತ ಪುರುಷಸೂಕ್ತ (ಯ)	0-1-6
8	ಪಂಕಭಾಷ್ಯತಸಾರಸಾರೋದ್ಧಾರ	1-0-0
9	ಪುರಂದರದಾಸರ ಕೀರ್ತನೆ ಭಾಗ ೧	0-4-0
10	,, ,, ,, ೨	0-4-0
11	,, ,, ,, ೩	0-4-0
12	ಸುಂದರಕಾಂಡರಾಮಾಯಣಮೂಲ	0-2-0
	ಟಪ್ಪಾಲು ಖರ್ಚು ಬೇರೆ, ಒಟ್ಟು ರೂ.	3-0-0

ಮಾಧ್ವಗ್ರಂಥ ಪ್ರಕಾಶನ ಸಮಿತಿ,
45, A. S. ಸ್ಟ್ರೀಟ್, ಬೆಂಗಳೂರು ಸಿಟಿ.

From,

A. C. Woodhouse, Esq.,
C. I. E.
District Magistrate of South Kanara.

CIRCULAR

Holders of licences in from XIX are informed that such licences are renewed without payment of any fee and that what is required is only a court fee lable of two annas for every application for renewal of licences in form XIX.

Degrees: Books: Medicines.

Free H. L. M. S., H. M. B. H. M. D. etc Free Homeo-Ayur-Unani-Naturo degrees. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt. India.

THE
BOMBAY LIFE ASSURANCE
Company Limited.
[ESTD. 1908]

COMPARE

Your Life Assurance with any other property you possess what is its guaranteed value

If you live–today–a few years more–when you are old?
If you die–to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs. 1,44,91,000
Life Assurance Fund	Rs. 1,17,69,748
Total Assets	Rs. 1,31,28,998

To Insure or to represent it pays you to consult

KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯಲ್ಲಿರುವ ಜೀವ ವಿಮಾ ಸಂಘಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನನ್ನೊಡನೆ ವಿಚಾರಿಸಿರಿ:—

ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಕಮಲ ನೆಹರು ಸ್ಮಾರಕ ಆಸ್ಪತ್ರೆ

ಭಾರತ ಮಾತೆಯ ಸುಪುತ್ರಿಗೆ ಭವ್ಯ ಸ್ಮಾರಕ.

ಮಹಾತ್ಮಾ ಗಾಂಧಿಯವರ ಪವಿತ್ರ ಹಸ್ತದಿಂದ ಮೂಲೆಗಲ್ಲು ಸ್ಥಾಪನೆ

ಇದೇ ತಾ. 19ರಲ್ಲು ಅಲಹಾಬಾದಿನಲ್ಲಿ ಮಹಾತ್ಮ ಗಾಂಧಿಯವರು ದಿವಂಗತ ಕಮಲಾನೆಹರು ಆಸ್ಪತ್ರೆಯ ಮೂಲೆಗಲ್ಲನ್ನು ಸ್ಥಾಪಿಸುವ ಸಮಾರಂಭವನ್ನು ನಡಿಸಿದರು. ಈ ಸಂದರ್ಭದಲ್ಲಿ ಪ್ರೇಮಮಯಿಯೂ, ತ್ಯಾಗಮೂರ್ತಿಯೂ, ಪತಿಯಂತೆಯೇ ಧೀರೆಯೂ, ಗಂಭೀರೆಯೂ, ಮಾತೃಭೂಮಿಸೇವಾನಿಷ್ಠೆಯೂ ಆಗಿ, ದೇಶಸೇವೆಯ ಹಾಗೂ ನಿಜವಾದ ದಾಂಪತ್ಯಜೀವನ ಸುಖಾಮೃತೋದಯದ ಸಂದರ್ಭದಲ್ಲಿ ಅಗಲಿಹೋದ ಶ್ರೀಮತಿ ಕಮಲಾ ನೆಹರುಗಳ ಉಜ್ವಲ ಹಾಗೂ ಪಾವನ ಜೀವನಸ್ಮರಣೆಯು ಸುಪ್ರಸ್ತುತವಾದುದು.

ಶರೀರದಂತೆಯೇ ಅತ್ಯಂತ ಕೋಮಲ ದೇಹಸ್ಥಿತಿಯಿದ್ದ ಕಮಲಾನೆಹರುಗಳು ಸದಾ ದೀನದರಿದ್ರ ಮತ್ತು ರೋಗಪೀಡಿತ ದುಃಖಿತರ ಪಕ್ಷಪಾತಿಯಾಗಿದ್ದರು. ರಾಜಕೀಯ ಹೋರಾಟದಲ್ಲಿ ವೀರಭಾರತ ರಮಣಿಯಾಗಿ ನಡೆದರೂ ಅವರ ಹೃದಯವು ಯಾವಾಗಲೂ ಜನಸಾಮಾನ್ಯರ ಕುರಿತು ಕರುಣೆ ಕಾತರತೆಗಳಿಂದ ತುಂಬಿದ್ದಿತು.

ಪತಿಯು ಕಾರಾಗೃಹಕ್ಕೆ ಸೇರಿದಾಗ ಹಿಂದೂ ಸತಿಯಾದ ತನ್ನ ಸ್ಥಾನವೂ ಆತನಿರುವೆಡೆಯಲ್ಲೆಂದು ಕಮಲಾನೆಹರುಗಳು ತನ್ನ ದೇಹಸ್ಥಿತಿಯನ್ನೊಂದಿಷ್ಟು ಗಮನಿಸದೆ ಪತಿಯನ್ನು ಹಿಂಬಾಲಿಸಿ ಸೆರೆಮನೆಗೆ ನಡೆದರು. ಹಿಂದೂದೇಶದ ಸ್ವಾತಂತ್ರ್ಯಪ್ರೇಮವು ಅವರಲ್ಲಿ ದೃಢವಾಗಿ ನೆಲೆಗೊಂಡಿದ್ದಿತು. ಕಾಯಿಲೆಯಿಂದ ಹಾಸಿಗೆ ಹಿಡಿದಾಗ ಭಾರತದ ಸ್ವಾತಂತ್ರ್ಯದ ಕುರಿತು ಚಿಂತಿಸುತ್ತಿದ್ದರವರು. ಯುರೋಪಿನಲ್ಲಿ ತನ್ನ ಕೊನೆಗಾಲ ಸಮೀಪಿಸಿದಾಗಲೂ, ಹಿಂದೂದೇಶದ ಪರಿಸ್ಥಿತಿಯು ಉಗ್ರತೆ ಹೊಂದಿ ತನ್ನ ವೀರಾಗ್ರಣಿ ಪತಿಯು ಸ್ವದೇಶಕ್ಕೆ ಹೋಗುವುದು ಅವಶ್ಯವೆಂದು ತೋರಿದಾಗ, ತನ್ನ ದೇಹಸ್ಥಿತಿಯನ್ನು ಗೊಡವೆಗೆ ತಾರದೆ ಕೂಡಲೆ ಸ್ವದೇಶಕ್ಕೆ ವಿಮಾನಮೂಲಕ ಹೋಗಿ ಹೋರಾಟದಲ್ಲಿ ಭಾಗವಹಿಸಬೇಕೆಂದು ಪ್ರಥಮವಾಗಿ ಒತ್ತಾಯಪಡಿಸಿದವರವರು. ಇಂತಹ ವೀರ ಭಾರತ ರಮಣಿಯ ಚರಿತ್ರೆಯು ಚಿರಸ್ಮರಣೀಯವು.

ತಾನು ಜೀವನ ಮರಣಗಳ ನಡುವೆ ಹೊಯ್ದಾಡುತ್ತಿದ್ದರೂ ತನ್ನ ಪತಿಯು ತನಗಾಗಿ ದೇಶದ ಗೌರವವನ್ನು ಒಂದಿಷ್ಟಾದರೂ ಬಿಟ್ಟುಕೊಡುವಂತಾಗಬಾರದೆಂಬುದೇ ಶ್ರೀಮತಿಯವರ ಕೊನೆಯ ವರೆಗಿನ ಛಲವಿದ್ದಿತು. ತನ್ನ ರುಗ್ಣಶಯ್ಯೆಯ ಬಳಿಯಲ್ಲಿರುವುದಕ್ಕಾಗಿ ಪಂಡಿತ ಜವಾಹರಲಾಲರು ರಾಜಕೀಯದಲ್ಲಿ ಭಾಗವಹಿಸುವುದಿಲ್ಲೆಂಬ ಶರ್ತದಿಂದ ಬಿಡುಗಡೆ ಹೊಂದಲು ಒತ್ತಾಯ ನಡೆಯುವುದೆಂದು ಕೇಳಿ ಕಮಲಾನೆಹರುಗಳು ಬಹಳ ತಲ್ಲಣಗೊಂಡರು.

ಈ ಸಂದರ್ಭದ ತನ್ನ ಭಾವನೆಗಳನ್ನು ಪಂಡಿತ ಜವಾಹರಲಾಲರೇ ಈ ರೀತಿ ಚಿತ್ರಿಸಿರುವರು. "ಆ ಸಮಯದಲ್ಲಿ ರಾಜಕೀಯವು ನನ್ನ ಭಾವನೆಗಳಿಂದ ಅತಿ ದೂರವಾಗಿತ್ತು. 11ದಿವಸ ಜೈಲಿನ ಹೊರಗಿದ್ದಾಗ ನಾನು ಕಂಡ ರಾಜಕೀಯವು ನನ್ನಲ್ಲಿ ಜುಗುಪ್ಸೆಯನ್ನುಂಟುಮಾಡಿದ್ದಿತು. ಆದರೆ ಅದನ್ನು ಬಿಟ್ಟಿರುವೆನೆಂದು ಆಶ್ವಾಸನೆ ಕೊಟ್ಟು, ನನ್ನ ದೀಕ್ಷೆಗೆ, ಉದ್ದೇಶಕ್ಕೆ ನನ್ನ ಸಹವ್ಯವಸಾಯಿಗಳಿಗೆ ಮತ್ತು ನನಗೇನೇ ನಾನು ಅವಿಧೇಯನಾಗಿ ನಡೆಯುವುದೇ? ಏನೇ ಆದರೂ ಅಸಾಧ್ಯ ಸಂಗತಿಯದು. ಹಾಗೆ ಮಾಡುವುದೆಂದರೆ ನನ್ನ ಜೀವನದ ಮೂಲಕ್ಕೆ, ನಾನು ಪವಿತ್ರವಾಗಿ ಪರಿಗಣಿಸಿರುವ ಸರ್ವಸ್ವಕ್ಕೆ ನೈತಿಕ ಹಾನಿಯನ್ನುಂಟುಮಾಡಿದಂತಾಗುವುದು."

"ಕಮಲೆಯ ದೇಹಸ್ಥಿತಿಯು ದಿನೇದಿನೇ ಕೆಡುತ್ತಾಬರುತ್ತಿದ್ದು ನಾವು ಅವಳ ಶಯ್ಯೆಯ ಬಳಿಯಿರುವುದರಿಂದ ಜೀವನ ಮರಣಗಳಷ್ಟರ ಅಭ್ಯಂತರವುಂಟಾಗಬಹುದೆಂದು ನನಗೆ ಹೇಳಲಾಗಿತ್ತು. ಅವಳಿಗೆ ಜೀವನದ ಸಂದರ್ಭವನ್ನೀಯುವುದಕ್ಕಿಂತಲೂ ನನ್ನ ವೈಯುಕ್ತಿಕ ಪ್ರತಿಷ್ಠೆ ಮತ್ತು ಅಹಂಭಾವವು ಹೆಚ್ಚಿನದೇ? ನನಗೆ ಇದೊಂದು ಭಯಂಕರ ಸಮಸ್ಯೆಯಾಗುತ್ತಿತ್ತು. ಆದರೆ ಸುದೈವದಿಂದ ಈ ಸಮಸ್ಯೆಯು ಆ ರೀತಿಯಲ್ಲಿ ನನ್ನನ್ನಿದಿರಿಸಲಿಲ್ಲ. ಕಮಲೆಗಾಗಿ ನಾನೇನಾದರೂ ಆಶ್ವಾಸನೆ ಕೊಡುವುದನ್ನು ಅವಳೇ ಪ್ರಬಲವಾಗಿ ವಿರೋಧಿಸದಿರಲಾರಳೆಂದು ನನಗೆ ಗೊತ್ತಿತ್ತು. ಮತ್ತು ನಾನು ಅಂತಹದೇನಾದರೂ ಮಾಡಿದರೆ ಅವಳದರಿಂದ ಸ್ತಂಭಿತಳಾಗಿ ನೊಂದುಕೊಳ್ಳುತ್ತಿದ್ದಳು."

"ಅಕ್ಟೋಬರ ತಿಂಗಳ ಆದಿಯಲ್ಲಿ ಅವಳನ್ನು ನೋಡಲು ಪುನಃ ನನ್ನನ್ನವಳ ಬಳಿಗೊಯ್ಯಲಾಯಿತು. ತೀವ್ರ ಜ್ವರದಿಂದ ಅವಳು ಅರೆ ಮರವೆಯಲ್ಲಿದ್ದಳು. ನಾನು ಅವಳ ಬಳಿಯಿರಬೇಕೆಂದವಳ ಆತುರವಿತ್ತು. ಆದರೆ ನಾನವಳನ್ನಗಲಿ ಜೈಲಿಗೆ ಹೋಗಬೇಕಿತ್ತು. ಧೀರತನದಿಂದ ನನ್ನನ್ನು ನೋಡಿ ನಸುನಕ್ಕು ತನ್ನ ಕಡೆಗೆ ಬಗ್ಗಹೇಳಿದಳು. ನಾನವಳ ಮುಖದೆಡೆಗೆ ಬಗ್ಗಿದಾಗ, "ನೀವು ಸರಕಾರಕ್ಕೆ ಆಶ್ವಾಸನೆ ಕೊಡುವ ಮಾತೆಲ್ಲಾ ಏನಿದು? ಕೊಡಬೇಡಿರಿ" ಎಂದು ಪಿಸುಗುಟ್ಟಿದಳು."

ಎಂತಹ ಧೈರ್ಯ ಮತ್ತು ಸ್ಥೈರ್ಯವಿದು! ಇದಕ್ಕಿಂತ ಹೆಚ್ಚಿನ ಧೀರತನವಾದರೂ ಇನ್ನೇನು! ಕಮಲಾನೆಹರುಗಳ ಜೀವನವನ್ನಿದಿರಿಸಿದ ಸಂಕಷ್ಟಗಳ ಒತ್ತಾಟದಿಂದ ಸರ್ವಸಾಮಾನ್ಯವಾಗಿ ಎಂತಹ ಧೀರಹೃದಯವಾದರೂ ಅಧೀರಗೊಳ್ಳುತ್ತಿತ್ತು. ಮಹಾರಾಣಿಯಂತಹ ಜೀವನ ನಡಿಸುವ ಭಾಗ್ಯ ಪಡೆದವರೂ, ಲೋಕದ ಮಹಾಪುರುಷರಲ್ಲೊಬ್ಬರ ಸತಿಯಾಗುವ ಪುಣ್ಯಪೂರ್ಣವರಾದರೂ ಜೀವನದಲ್ಲಿ ಒಂದಿಷ್ಟು ಸುಖ ಮತ್ತು ಶಾಂತಿಯನ್ನವರು ಕಂಡವರಲ್ಲ. ತೀವ್ರ ಅಸಹಿಷ್ಣುತೆಯಿಂದ ಸದಾ ಹೋರಾಟದಲ್ಲೇ ನಿರತವಾಗಿರುವ ತನ್ನ ಪತಿಯೊಂದಿಗೆ ಮತ್ತು ಪರದಾಸ್ಯಕ್ಕೊಳಗಾಗಿ ಬನ್ನಬಡುತ್ತಿರುವ ಮಾತೃಭೂಮಿಯೊಂದಿಗೆ ತಾದಾತ್ಮ್ಯ ಹೊಂದಿತ್ತು ಅವರ ಜೀವನ.

"ಸಂಪೂರ್ಣ ಅಶಕ್ತಳಾಗಿ, ಕೃಶಳಾಗಿ ಮಲಗಿದ್ದಳು ಅವಳಲ್ಲಿ ತನ್ನ ನೆರಳೋಪಾದಿ. ತನ್ನ ಕಾಯಿಲೆಯೊಡನೆ ದುರ್ಬಲವಾಗಿ ಹೋರಾಡುತ್ತಿದ್ದಳು. ನನ್ನನ್ನು ಅಗಲಿ ಹೋಗುವ ಭಾವನೆಯು ಅವಳನ್ನು ಹಿಡಿದು ಕಾಡುತ್ತಿದ್ದಿತು. ನಮ್ಮ ವಿವಾಹವಾಗ 18 ವರ್ಷವಾಗಿದ್ದಿತು. ಮದುವೆಯ ಆ ದಿನದಿಂದ ಈ ವರೆಗಿನ ಎಲ್ಲಾ ವರ್ಷಗಳು ನಮಗೇನನ್ನು ತಂದಿರುವವೆಂಬ ಕುರಿತೆಲ್ಲಾ ನನ್ನ ಮನಸ್ಸು ಹಿಂದೆ ಸರಿದು ಪರಿಶೀಲಿಸಹತ್ತಿತು. ಮದುವೆಯಾಗುವಾಗ ನಾನು 26 ವರ್ಷದವನಿದ್ದೆ. ಅವಳಿಗೆ ಸುಮಾರು 17 ವರ್ಷವಾಗಿತ್ತು. ಲೋಕಾನುಭವವೇನೂ ಇಲ್ಲದ ಕೋಮಲ ಬಾಲಿಕೆಯಾಗಿದ್ದಳವಳು. ಪ್ರಾಯಕ್ಕಿಂತಲೂ ಮನೋವೃತ್ತಿಗಳಲ್ಲಿ ನಮಗೆ ಬಹಳ ಅಭ್ಯಂತರವಿದ್ದಿತು. ಆದರೆ ಹೋಗುವಿಕೆಗೆ ನಾನೆಷ್ಟು ಲೋಕಾನುಭವ ಪ್ರೌಢನಿದ್ದರೂ ಬಹಳ ಹುಡುಗಾಟಿಕೆಯವನಿದ್ದೆನು. ಈ ಕೋಮಲ ಹಾಗೂ ಸೂಕ್ಷ್ಮ ಮನೋವೃತ್ತಿಯ ಹುಡುಗಿಯ ಮನಸ್ಸು ಪುಷ್ಪದಂತೆ ಅರಳುತ್ತಿದ್ದು ಅದನ್ನು ಮೃದುವಾಗಿ ಮತ್ತು ಜಾಗರೂಕತೆಯಿಂದ ಆರೈಕೆಮಾಡಬೇಕೆಂಬುದು ನನಗೆ ತಿಳಿದಿರಲಿಲ್ಲ. ನಾವಿಬ್ಬರೂ ಪರಸ್ಪರ ಆಕರ್ಷಿತರಾದೆವು. ಆದರೆ ನಮ್ಮಿಬ್ಬರ ಹಿನ್ನೆಲೆಗಳು ಭಿನ್ನವಾಗಿದ್ದವು. ಈ ವೈಷಮ್ಯದಿಂದಾಗಿ ಆಗಾಗ ಅಲ್ಪ ಸಂಗತಿಗಳಿಗಾಗಿ ತಿಕ್ಕಾಟ ಕಲಹಗಳೇಳುತ್ತಿದ್ದವು. ಆದರೆ ಹುಡುಗ ಹುಡುಗಿಯರ ಜಗಳಂತೆ ಕೂಡಲೇ ರಾಜಿಯಾಗುತ್ತಿತ್ತು. ನಾವಿಬ್ಬರೂ ಮುಂಗೋಪಿಗಳು, ಬಹಳ ಸೂಕ್ಷ್ಮ ಸ್ವಭಾವದವರು, ಸ್ವಗೌರವ ಭಾವನಾಪ್ರೇರಿತರಾದವರು. ಆದರೂ ದಿನ ಹೋದಂತೆ ನಮ್ಮಿಬ್ಬರ ಅನುರಾಗವು ಬೆಳೆಯಹತ್ತಿತು. ವಿವಾಹವಾಗಿ 22 ತಿಂಗಳಲ್ಲಿ ನಮ್ಮ ಏಕಮಾತ್ರ ಮಗು ಇಂದಿರೆಯ ಜನನವಾಯಿತು.

"ಸದಾ ರಾಜಕೀಯ ಹೋರಾಟದ ಸುಳಿಯಲ್ಲಿ ಸುತ್ತಾಡುತ್ತಿದ್ದ ನಾನು ಕಮಲೆಯನ್ನು ಕಡೆಗಣಿಸಿದೆನು. ನನ್ನ ಸಂಪೂರ್ಣ ಸಹಕಾರ ಮತ್ತು ಸಹಚರ್ಯೆಯು ಬೇಕಾಗಿದ್ದಾಗ ಅವಳನ್ನು ಅವಳಷ್ಟಕ್ಕೇನೇ ಬಿಟ್ಟುಬಿಟ್ಟೆನು. ಅವಳ ಮೇಲಿನ ನನ್ನ ಪ್ರೇಮವು ಅಧಿಕವಾಗಹತ್ತಿತು. ನನ್ನೊಂದಿಗೆ ಅವಳೇ ಸಹಕರಿಸಿ ನನ್ನ ಜೀವನವನ್ನು ಮಧುರಗೊಳಿಸಹತ್ತಿದಳು. ನನಗವಳು ಶಕ್ತಿ ಮತ್ತು ಉತ್ಸಾಹವನ್ನಿತ್ತಳು. ಆದರೆ ನಾನವಳನ್ನು ಕಡೆಗಣಿಸಿದುದರಿಂದ ಅವಳ ಮನಸ್ಸು ನೊಂದಿರಬೇಕು. ಅನಂತರ ಅವಳಿಗೆ ಆಗಾಗ ಕಾಯಿಲೆ ಉಂಟಾಯಿತು. ನಾನು ಈ ಸಂದರ್ಭದಲ್ಲಿ ದೀರ್ಘ ಕಾಲ ಕಾರಾಗೃಹದಲ್ಲಿರಬೇಕಾಯಿತು. ಜೈಲಿನ ಭೇಟಿಗಳಲ್ಲಿ ಮಾತ್ರ ನಾವು ಸಿಕ್ಕುತ್ತಿದ್ದೆವು."

"ಕಾಯಿದೆಭಂಗ ಚಳವಳವು ಕಮಲೆಯನ್ನು ದೇಶಕ್ಕಾಗಿ ಹೋರಾಡುವ ವೀರಾಗ್ರೇಸರರ ಸಾಲಿಗೆ ತಂದಿತು, ಅವಳೂ ಕಾರಾಗೃಹಕ್ಕೆ ಸೇರಿದಾಗ ಆನಂದಗೊಂಡಳು. ನಮ್ಮ ಸಂಬಂಧವು ದಿನೇದಿನೇ ನಿಕಟ

(೧೩ನೇ ಪುಟಕ್ಕೆ ಮುಂದುವರಿಯುವುದು)

SAVINGS & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between **SAVING & SPENDING** and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd.] (Incorporated in British India) [1925.

Head Office:—**UDIPI, (S. India).**

:: ಶಿಕ್ಷಿತ ಸಮಾಜದ ಆಧುನಿಕ ಜೀವನ ಪ್ರಣಾಲಿ ::

ಆದಾಯವಿಲ್ಲವಾದರೂ ಆಡಂಬರಕ್ಕೇನೂ ಕೊರತೆ ಇಲ್ಲ.

ನಮ್ಮ ಜೀವನದ ಆವಶ್ಯಕತೆಗಳಾದರೂ ಹೆಚ್ಚುತ್ತ ಬಂದಿವೆ. ಸಭ್ಯತೆ ಮತ್ತು ಸಂಸ್ಕೃತಿಗಳು ಹೊಸ ಹೊಸ ಆವಶ್ಯಕತೆಗಳಿಗೆ ದಾರಿ ಮಾಡುತ್ತಿವೆ. ಆದರೆ ಉತ್ಪತ್ತಿಯ ಮಾರ್ಗಗಳು 'ಬಂದ್' ಆಗಿವೆ. ಸಮಾಜದ ರೀತಿನೀತಿಗಳೂ, ಆಚಾರ ವಿಚಾರಗಳೂ ಸ್ಥಿರವಾಗಿ ಹೋಗಿವೆ; ಆದರೆ ಈ ಆದರ್ಶಗಳಿಗನುಸಾರವಾಗಿ ಜೀವನಮಾಡಲು ಮಾತ್ರ ಕೈಯಲ್ಲಿ ಹಣವಿಲ್ಲ. ಇದೇ ನಮ್ಮ ಆಧುನಿಕ ಸಭ್ಯ ಜೀವನದ ವಾಸ್ತವಿಕ ಚಿತ್ರ.

(ಪ್ರೊಫೆಸರ್ ಜಗನ್ನಾಥ ಮಿಶ್ರ, ಎಂ. ಎ. ಬಿ. ಎಲ್.ರವರ ಲೇಖನದ ಅನುವಾದ)

ಭಾರತೀಯ ಇಂದಿನ ಜೀವನ

ಜಗತ್ತಿನ ಸುಸಭ್ಯ ದೇಶಗಳಲ್ಲೆಲ್ಲಾ ತೀರ ಕೆಳ ದರ್ಜೆಯ ಜೀವನ ಮಟ್ಟದ ದೇಶವೆಂದರೆ ಭಾರತವೊಂದೇ. ಈಗಿನ ಕಾಲದ ವೈಜ್ಞಾನಿಕ ಯುಗದಲ್ಲಿ ಸುಸಂಸ್ಕೃತ ಜೀವನಕ್ಕೆ ಬೇಕಾಗುವ ಅನಿವಾರ್ಯ ವಸ್ತುಗಳಿಂದ ಇಲ್ಲಿನ ಅಧಿಕಾಂಶ ಜನರು ವಂಚಿತರಾಗುವರು. ಜೀವನದ ಆವಶ್ಯಕತೆಗಳನ್ನು ಕಡಿಮೆಮಾಡುವುದೇ ಆದರ್ಶ ಜೀವನದ ಚಿಹ್ನೆಯೆಂದು ಭಾವಿಸುವವರ ಸುದ್ದಿ ನಮಗೆ ಬೇಡ. ಏಕೆಂದರೆ ಇಂಥವರಿಗೆ ಲೌಕಿಕ ಜೀವನಕ್ಕಿಂತಲೂ ಪಾರಮಾರ್ಥಿಕ ಜೀವನವೇ ವಿಶೇಷ ಮಹತ್ವದ್ದಾಗಿರುವುದು. ಇಹಲೋಕದ ಸುಖಭೋಗಗಳು ತುಚ್ಛವೂ ತ್ಯಾಜ್ಯವೂ ಆಗಿರುವುವು. ಆದರೆ ಅಧಿಕಾಂಶ ಶಿಕ್ಷಿತ ಜನರು ಆಧುನಿಕ ಯುಗದ ಸಂಸ್ಕೃತಿ ಮತ್ತು ಸಭ್ಯತೆಯನ್ನು ಒಂದು ವರಪ್ರಸಾದವೆಂದು ಭಾವಿಸುವರು. ಅಂಥವರಿಗೆ ಅತ್ಯಾವಶ್ಯಕಗಳಾದ ವಸ್ತುಗಳೂ ದುರ್ಲಭವಾಗಿ ಕೀಳು ದರ್ಜೆಯ ಜೀವನವನ್ನು ತಳ್ಳುತ್ತಿರುವರು. ಈ ಜೀವನ ಪ್ರಣಾಲಿಯಲ್ಲಿ ಸಾಕಷ್ಟು ಉನ್ನತಿಯಾಗುವುದಕ್ಕೆ ಅವಕಾಶವಿದೆಯೆಂದು ಪ್ರಾಯಶಃ ಎಲ್ಲರೂ ಒಪ್ಪುವರು. ಯಾವ ದೇಶದ ಪ್ರತಿ ವ್ಯಕ್ತಿಯ ವಾರ್ಷಿಕ ಆದಾಯವು 78ರೂ. ಮತ್ತು ದೈನಿಕ ಸಂಪಾದನೆಯು 1–2ಆಣೆಯಷ್ಟಿದೆಯೋ? ಎಲ್ಲಿ ಪ್ರತಿವ್ಯಕ್ತಿಯ ಭೋಜನವು 9 ಚಟಾಕು ಅನ್ನದಷ್ಟು, ಉಡುಪು 15ಗಜ ಬಟ್ಟೆಯಷ್ಟು ಇದೆಯೋ ಅಲ್ಲಿನ ಜನರು ಆಧುನಿಕ ಸಭ್ಯತೆಯಂತಿರಲಿ, ಮಾನವೋಚಿತ ಜೀವನದಿಂದಲೂ ಸಹ ಎಷ್ಟು ದೂರದಲ್ಲಿರುವರೆಂಬುದನ್ನು ಸುಲಭವಾಗಿ ಊಹಿಸಬಹುದು. ಭಾರತವಾಸಿಗಳ ಇಂದಿನ ಜೀವನವು ಸಭ್ಯ ಜೀವನಕ್ಕೆ ಅನುಕೂಲವಾಗಿರುವುದಂತಿರಲಿ, ಕೇವಲ ಮನುಷ್ಯೋಚಿತಜೀವನವೂ ಅಲ್ಲವೆಂದು ಹೇಳಬಹುದು. ಆದುದರಿಂದಲೇ ಕಾಂಗ್ರೆಸ್ಸಿನಿಂದ ನಿಯುಕ್ತವಾಗಿರುವ (National Planing Committee) ರಾಷ್ಟ್ರೀಯ ಯೋಜನಾ ಸಮಿತಿಯು, ಭಾರತೀಯರ ಆರ್ಥಿಕ ಸಂಕಟವನ್ನು ದೂರಮಾಡಲು, ಅವರ ಜೀವನದ ಮಟ್ಟವನ್ನೂ ಹೆಚ್ಚಿಸಲು, ಪ್ರತಿಯೊಬ್ಬನ ಮಾಸಿಕ ಉತ್ಪತ್ತಿಯು ಕನಿಷ್ಠ 25ರೂ ಆದರೂ ಆಗಬೇಕೆಂದು ಪ್ರಕಟಿಸಿದೆ. ಈ ರೀತಿ ಆಗುವವರೆಗೆ ಆಧುನಿಕ ಸಭ್ಯತೆ ಮತ್ತು ಸಂಸ್ಕೃತಿಗಳ ಆಶೀರ್ವಾದ ಮತ್ತು ವಿಜ್ಞಾನದ ಚಮತ್ಕಾರಗಳು ಹೆಚ್ಚು ಮಂದಿ ಭಾರತೀಯರಿಗೆ ದುರ್ಲಭವೇ ಆಗುವುದಲ್ಲದೆ, ಶಿಕ್ಷಿತರಿಗೆ ಒಂದು ರೀತಿಯ ಶಾಪದಂತೆಯೇ ಆಗುವುವು.

ಆಡಂಬರದ ಮರುಳು

ಇಂದು ಸಾಧಾರಣ ದರ್ಜೆಯ ಜನರಿಗಿಂತಲೂ ಮಧ್ಯಮ ವರ್ಗದ ಶಿಕ್ಷಿತರ ಅವಸ್ಥೆಯು ಹೆಚ್ಚು ಶೋಚನೀಯವಾಗಿದೆ. ಈ ಆಧುನಿಕಶಿಕ್ಷಣ, ಸಭ್ಯತೆ ಮತ್ತು ಸಂಸ್ಕೃತಿಯನ್ನು ಗ್ರಹಣಮಾಡಿ ಅವರು ತಮ್ಮ ಜೀವನದ ಅಂತಸ್ತನ್ನು ಹೆಚ್ಚಿಸಬೇಕೆಂಬುದನ್ನೇನೋ ಕಲಿತುಕೊಂಡಿರುವರು. ಆದರೆ ಅದಕ್ಕಾಗಿ ಬೇಕಾಗುವ ಸಂಪಾದನೆಯನ್ನು ಮಾತ್ರ ಮಾಡಲಸಮರ್ಥರಾಗಿರುವರು. ಒಬ್ಬ ಆಧುನಿಕ ಶಿಕ್ಷಿತ ಯುವಕನಿಗೆ ಅಗತ್ಯವಾಗಿರುವ ವಸ್ತುಗಳು ದೊರೆಯದೆ ಮಾನಸಿಕ ಕ್ಲೇಶ, ಅಸಂತೋಷ, ನಿರಾಶೆ ಮತ್ತು ಮನೋವೇದನೆಗಳಿಗೆ ತುತ್ತಾಗುವನು. ಒಬ್ಬ ಯುವಕನಿಗೆ ಸಿಗರೇಟ್, ಎಲೆಅಡಿಕೆ, ಟೀ, ವರ್ತಮಾನಪತ್ರಿಕೆ, ಸಿನೆಮಾ ಮುಂತಾದುವುಗಳಿಗೆ ತಿಂಗಳಿಗೆ ಕನಿಷ್ಠಪಕ್ಷ 10 ರೂ.ವರೆಗೆ ಬೇಕಾಗುವುದು. ನಿರುದ್ಯೋಗಿಗಳ ಮಾತಂತೂ ಗೊತ್ತೇ ಇದೆ. ಆದರೆ ಸಂಪಾದಿಸುವವರು ಸಹ ಸಮಯೋಚಿತವಾಗಿ ಜೀವನಮಾಡುವುದು ವಿಶೇಷ ರೀತಿಯ ಚಿಂತೆಗೆ ಕಾರಣವಾಗುತ್ತದೆ. ತಿಂಗಳಿಗೆ 25 ರೂ. ವೇತನಕ್ಕೆ ಒಪ್ಪಲು ವಿಶ್ವವಿದ್ಯಾಲಯದ ಪದವೀಧರರು ಸ್ವಲ್ಪವೂ ಹಿಂಜರಿಯುವುದಿಲ್ಲ. ಆದರೆ ಆಧುನಿಕ ಯುವಕನಿಗೆ ಅದರಲ್ಲೂ ಶಿಕ್ಷಿತ ಪದವೀಧರನ ಜೀವನಕ್ಕೆ ಈ 25 ರೂ. ಗಳು ಎಷ್ಟು ತುಚ್ಛವೆಂಬುದನ್ನೂ, ಅವನು ಈ ಸ್ವಲ್ಪ ಹಣದಲ್ಲಿ ತನ್ನ ಪರಿವಾರದ ಪೋಷಣೆಯನ್ನು ಹೇಗೆ ಮಾಡಬಲ್ಲನೆಂಬುದನ್ನೂ ಯಾರೂ ಯೋಚಿಸುವುದೇ ಇಲ್ಲ. ಶಿಕ್ಷಿತ ಯುವಕರ ಈ ಸಭ್ಯ ಜೀವನಪ್ರಣಾಲಿಯ ಪ್ರಭಾವವು ನಮ್ಮ ಸಾಮಾಜಿಕ ಜೀವನದ ಮೇಲೆ ಬೀಳುತ್ತಿದ್ದು, ನಮ್ಮ ಪ್ರಾಚೀನ ಆದರ್ಶಗಳಲ್ಲಿ ಸಂಪೂರ್ಣವಾದ ಪರಿವರ್ತನೆಯುಂಟಾಗುತ್ತದೆ. ಮದುವೆಯ ಮಾರ್ಕೆಟ್ಟಿನಲ್ಲಿ ಈ ಯುವಕರ ಬೆಲೆಯು ಏರುತ್ತದೆ. ಹೆಚ್ಚು ಸಂಪಾದನೆ ಇರುವ–ಆ ಸಂಪಾದನೆಯು ಯಾವ ಮಾರ್ಗದಲ್ಲೇ ಆಗುತ್ತಿರಲಿ, ಯುವಕನೇ 'ಆದರ್ಶವರ'ನೆಂದು ಭಾವಿಸಲ್ಪಡುತ್ತಿರುವನು.

ಆಯ ಕಿರಿದು; ವ್ಯಯ ಹಿರಿದು

ಶಿಕ್ಷಣ ಮತ್ತು ಸಭ್ಯತೆ, ವಿಜ್ಞಾನ ಮತ್ತು ಸಂಸ್ಕೃತಿಗಳು ನಮ್ಮ ಜೀವನವನ್ನು ಉನ್ನತಿಗೊಳಿಸಿವೆ, ಉಚ್ಚ ಜೀವನದ ಮಾರ್ಗವನ್ನು ತೋರಿಸಿಕೊಟ್ಟಿವೆ. ಆದರೆ ಇವೆಲ್ಲವೂ 'ದೀಪದ ಬುಡದಲ್ಲಿನ ಕತ್ತಲೆ'ಯಂತೆ ಆಗಿವೆ. ನಮ್ಮ ಮಾರ್ಗದಲ್ಲಿದ್ದ ಅಂಧಕಾರವು ಹೇಗಿದ್ದಿತೋ ಹಾಗೆಯೇ ಇದೆ. ನಮ್ಮ ಜೀವನದ ಆವಶ್ಯಕತೆಗಳಾದರೂ ಹೆಚ್ಚುತ್ತ ಬಂದಿವೆ. ಸಭ್ಯತೆ ಮತ್ತು ಸಂಸ್ಕೃತಿಗಳು ಹೊಸ ಹೊಸ ಆವಶ್ಯಕತೆಗಳಿಗೆ ದಾರಿ ಮಾಡುತ್ತಿವೆ. ಆದರೆ ಉತ್ಪತ್ತಿಯ ಮಾರ್ಗಗಳು ಮಾತ್ರ 'ಬಂದ್' ಆಗಿವೆ. ಸಮಾಜದ ರೀತಿ ನೀತಿಗಳೂ ಆಚಾರ ವಿಚಾರಗಳೂ ಸ್ಥಿರವಾಗಿ ಹೋಗಿವೆ. ಆದರೆ ಈ ಆದರ್ಶಗಳಿಗನುಸಾರವಾಗಿ ಜೀವನ ಮಾಡಲು ಮಾತ್ರ ಕೈಯಲ್ಲಿ ಹಣವಿಲ್ಲ. ಇದೇ ನಮ್ಮ ಆಧುನಿಕ ಸಭ್ಯ ಜೀವನದ ವಾಸ್ತವಿಕ ಚಿತ್ರ. ಮನೆ ಬಿಟ್ಟು ಹೊರಡಲು ವಿಶೇಷ ಉಡುಪು ಬೇಕು, ಪಾದರಕ್ಷೆಗಳು ಬೇಕು. ಛತ್ರ ಬೇಕು. ಆದರೆ ವರ್ಷಕ್ಕೆ 2 ಜೊತೆ ಮೆಟ್ಟುಗಳು, 4–5 ಶರ್ಟುಗಳು, 2 ಜೋಡಿ ಪಂಚೆಗಳು ಇದ್ದರೂ ಹೊರಗೆ ಹೊರಡುವುದು ಕಠಿಣವಾಗಿದೆ. ಇದಕ್ಕಿಂತ ಹೆಚ್ಚಿನ ಆದಾಯದ ಮಾರ್ಗವೇ ತೋರುವುದಿಲ್ಲ. ಧೋತ್ರ, ಶರ್ಟು ಚದ್ದರ್, ಹಾಸಿಗೆ, ಎಕ್ಕಡ, ಸಾಬೂನು, ಎಣ್ಣೆ ಮುಂತಾದ ವಸ್ತುಗಳು ಈಗಿನ ಕಾಲದಲ್ಲಿ ನಿತ್ಯದ ಆವಶ್ಯಕತೆಗಳಾಗುತ್ತಿವೆ. ಸಿನೇಮಾ, ನಾಟಕ, ರೇಡಿಯೋ, ಕ್ಲಬ್, ಅಥವಾ ಸಮಾಜ, ಪತ್ರಿಕೆಗಳು ಪುಸ್ತಕಗಳು ಪ್ರವಾಸ ಮೊದಲಾದುವು ಸಹ ಆಧುನಿಕ ಜೀವನ ಪ್ರಣಾಲಿಯಲ್ಲಿ ಪ್ರಯೋಜನೀಯವಾಗುತ್ತ ಬಂದಿವೆ. ಆದರೆ ಆದಾಯ ಮಾತ್ರ ಇಲ್ಲ. ಮನೆಯಲ್ಲಿ ಇಲ್ಲದಿದ್ದರೂ ಹೊರಗೆ ಹೋಗಲು ವೇಷ ಬದಲಾವಣೆಯಾಗಬೇಕು. ಏಕೆಂದರೆ ಈ ರೀತಿ ಆಗದೆ ಹೊರಟರೆ, ಇತರರ ದೃಷ್ಟಿಯಲ್ಲಿ ನಾವು ನಾಗರಿಕರೆನಿಸಿಕೊಳ್ಳುವುದಿಲ್ಲ. ಹೊಟ್ಟೆಗೆ ಅನ್ನವಿಲ್ಲದಿದ್ದರೂ ಸರಿಯೆ, ಗೃಹಿಣಿಗೆ ಬಟ್ಟೆಯಿಲ್ಲದಿದ್ದರೂ ಸರಿಯೆ, ಹೊರಗೆ ಹೊರಟಾಗ ಮಾತ್ರ ಉಡುಪು ಚನ್ನಾಗಿರಲೇಬೇಕು. ಹಾಯ್! ಹಾಯ್! ಇದರಿಂದಲೇ ಈ ದರಿದ್ರ ದೇಶದ ಶಿಕ್ಷಿತ ಸಭ್ಯಜನರು ತಮ್ಮ ಸಭ್ಯತೆ ಕಾಪಾಡಿಕೊಳ್ಳುತ್ತಾ ಬರಬೇಕಾಗಿದೆ–ತಮ್ಮ ಜೀವನರಕ್ಷಣೆಯನ್ನು ಮಾಡಿಕೊಳ್ಳದಿದ್ದರೂ ಸರಿಯೆ. ಎಂತಹ ಮನೆಗಳಲ್ಲಿ ವಾಸಿಸುತ್ತೇವೆ, ಏನು ತಿನ್ನುತ್ತೇವೆ. ಎಲ್ಲಿ ಮಲಗುತ್ತೇವೆ ಎಂಬುದನ್ನು ಯಾರೂ ನೋಡಲು ಬರುವುದಿಲ್ಲ. ಆದುದರಿಂದ ಈ ಎಲ್ಲ 'ಮದಗಳ' ಖರ್ಚಿನಲ್ಲಿಯೇ ಕತ್ತರಿ ಪ್ರಯೋಗವಾಗಬೇಕಾಗುತ್ತದೆ. ಈ ರೀತಿ ಅಗತ್ಯವಾಗಿ ಬೇಕಾದುದಕ್ಕೆ ಕತ್ತರಿಪ್ರಯೋಗವನ್ನಾದರೂ ಮಾಡಿ, ಹೊರಗಿನವರ ತೃಪ್ತಿಗಾಗಿ, ಸಭ್ಯರೆಂದು ಹೇಳಿಸಿಕೊಳ್ಳುವುದಕ್ಕಾಗಿ ಹೊರಗಡೆಯ 'ಟೀಕ್ ಟಾಕಿ'ಗೆ ವಿನಿಯೋಗಿಸಬೇಕಾಗುತ್ತದೆ. ನಾವು ನಮ್ಮ ಜೀವನದಲ್ಲಿ ಸಭ್ಯತೆ ಮತ್ತು ಸಂಸ್ಕೃತಿಗಳನ್ನು ಹೆಚ್ಚಿಸಿಕೊಳ್ಳಲು ಯತ್ನಿಸಿದಷ್ಟು ಮನೆಯಲ್ಲಿ ಹಾಹಾಕಾರವು ಹೆಚ್ಚುತ್ತ ಹೋಗಿವೆ. ನಮ್ಮನ್ನು ಅಂತಸ್ಸಾರಶೂನ್ಯರನ್ನಾಗಿ ಮಾಡುತ್ತಿರುವ ಆಧುನಿಕ ಜೀವನದ ವಿಡಂಬನೆ ಇದು. ನಾವು ಈ ಸಭ್ಯತೆ, ಸಂಸ್ಕೃತಿಗಳ ಗೋಣುನಿಂದ ಹಿಂದಕ್ಕೆ ಹೋಗಲಾರೆವು. ಒಂದು ಕಡೆ ಆಧುನಿಕ ಜೀವನದ 'ಸ್ಟಾಂಡರ್ಡ್'ನ ಆಕರ್ಷಣೆ, ಮತ್ತೊಂದು ಕಡೆ ಸಾಕಷ್ಟು ಆದಾಯವಿಲ್ಲದಿರುವಿಕೆ ಈ ದ್ವಂದ್ವದಲ್ಲಿ ಸಿಕ್ಕಿ ನರಳುತ್ತಿದ್ದೇವೆ. ಉನ್ನತ ಜೀವನಕ್ಕೆ ಶಿಕ್ಷಣ ಮತ್ತು ಸಭ್ಯತೆಗಳು ಅನಿವಾರ್ಯವೇನೋ ಹೌದು, ಆದರೆ ಅನ್ನವಸ್ತ್ರಗಳು ಅವಕ್ಕಿಂತಲೂ ಹೆಚ್ಚು ಆವಶ್ಯಕವಾಗಿವೆ. ಕೇವಲ ಅನ್ನಬಟ್ಟೆಗೆ ದಾರಿಕಾಣದೆ ಇರುವ ನಮ್ಮವರಿಗೆ ಉನ್ನತಜೀವನ ಪ್ರಣಾಲಿಯ ಅರ್ಥವಾದರೂ ಹೇಗೆ ಆದೀತು? ಆದುದರಿಂದ ಶಿಕ್ಷಿತ ಯುವಕರ ಜೀವನದ ಮಟ್ಟವು ಏರಬೇಕು, ಅವರಿಗೆ ಉತ್ತಮ ಹಾಗೂ ಪುಷ್ಟಿಕರವಾದ ಆಹಾರವು ದೊರೆಯಬೇಕು. ಇದರಿಂದ ಅವರು ಆರೋಗ್ಯವಂತರೂ ಸಬಲರೂ ಆಗುವರು. ಏಕೆಂದರೆ ಅನಾರೋಗ್ಯ ಮತ್ತು ರುಗ್ಣ ಜೀವನದಲ್ಲಿದ್ದುಕೊಂಡು ಯಾರೂ ಸಮಾಜದ ಸಭ್ಯತೆಯ ಪ್ರಕಾಶವನ್ನು ಚಿರಕಾಲ ಉಜ್ವಲವಾಗಿಡಲಾರರು.

ಶ್ರೀ. S. L. ಸುಬ್ರಹ್ಮಣ್ಯಂರಿಂದ ಅನುವಾದಿಸಲ್ಪಟ್ಟಿತು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಉಡುಪಿಗೆ

ಮೈಸೂರು ಯುವರಾಣಿಯವರು ಬರಲಿರುವರು.

ಮೈಸೂರು ಯುವರಾಣಿ ಶ್ರೀಮತಿ ಕೆಂಪು ಚಲುವಾಜಮ್ಮಣ್ಣಿಯವರೂ, ಅವರ ಮೂವರು ಹೆಣ್ಮಕ್ಕಳು ಶ್ರೀ ಸುಜಯ, ಶ್ರೀ ವಿಜಯ, ಶ್ರೀ ಜಯ ಮತ್ತು ಪ್ರಿನ್ಸ್ ಶ್ರೀ ಜಯಚಾಮರಾಜ ಒಡೆಯರ್ರವರೂ, ಶ್ರೀ ಸತ್ಯಪ್ರೇಮಾ ದೇವಿಯವರೂ, ಪ್ರಿನ್ಸರ ಕಾರ್ಯದರ್ಶಿ ಮಿ ಎಮ್. ಜಿ. ಮೇಕ್ರಿಯವರೂ ತಕ್ಕ ಪರಿವಾರದೊಡನೆ ಇದೇ ತಾ. 26ನೇ ಆದಿತ್ಯವಾರ ಉಡುಪಿಗೆ ಬರಲಿರುವರೆಂದು ತಿಳಿದು ಬಂದಿದೆ. ಎಡ್ವಾನ್ಸ್ ಪಾರ್ಟಿಯವರು ತಾರೀಖು 23ಕ್ಕೆ ಮುಂಚಿತವಾಗಿ ಬರಲಿರುವರು. ಪರ್ಯಾಯ ಶ್ರೀ ಫಲಿಮಾರು ಮಠದ ಕಡೆಯಿಂದ ಸಂಭ್ರಮದ ಸುಸ್ವಾಗತದ ಸಿದ್ಧತೆಗಳಾಗುತ್ತಿವೆ. ತಾರೀಖು 23ರಿಂದ 26ರ ತನಕ ನಡೆಯಲಿರುವ ಲಕ್ಷದೀಪೋತ್ಸವವು ಅಭೂತಪೂರ್ವ ವಿಜೃಂಭಣೆಯಿಂದ ಮತ್ತು ಉತ್ಸಾಹದಿಂದ ನಡೆಯುವುದೆಂದೂ ನಿರೀಕ್ಷಿಸಲಾಗಿದೆ.

ಶ್ರೀ ಜಯಚಾಮರಾಜ ಒಡೆಯರರಿಗೆ ಅಷ್ಟ ಮಠಗಳ ಕಡೆಯಿಂದ ಮಾನಪತ್ರ ಕೊಡಲಾಗುವುದು. ನಗರ ಸಭೆಯವರೂ ಪುರನಿವಾಸಿಗಳ ಪರವಾಗಿ ಮಾನಪತ್ರವನ್ನರ್ಪಿಸಲಿಕ್ಕಿರುವರು. ಜಮ್ನಾಸ್ಟಿಕ್ ಕಮಿಟಿಯ ನೇತೃತ್ವದಲ್ಲಿ ಜರಗಿದ ಪಂದ್ಯಾಟಗಳಲ್ಲಿ ಜಯಶೀಲರಾದರಿಗೆ ಕಪ್ಪುಗಳನ್ನೂ ಮೆಡಲುಗಳನ್ನೂ ಶ್ರೀ ಒಡೆಯರಿಂದಲೇ ಕೊಡಿಸೋಣಾಗುವಂತೆ ವ್ಯವಸ್ಥೆ ನಡೆದಿದೆ ಎಂದು ತಿಳಿದುಬರುತ್ತದೆ

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,

ಉಡುಪಿ.

ಡೈರೆಕ್ಟರರು:=

(1) ಶ್ರೀ ಕೆ ಜಗನ್ನಾಥ ಬಲ್ಲಾಳರು, ಬಿ. ಎ. ಎಲ್‌ಎಲ್. ಬಿ.
ಡೈರೆಕ್ಟರ್, ವಿಜಯಾ ಬ್ಯಾಂಕ್ ಲಿಮಿಟೆಡ್, ಡೈರೆಕ್ಟರ್, ಕರ್ನಾಟಕ ಸ್ಟೋರ್ಸ್ ಲಿಮಿಟೆಡ್, ಮತ್ತು ವಕೀಲ್, ಉಡುಪಿ, (ಚೆಯರ್ ಮ್ಯಾನ್)

(2) ಶ್ರೀ. ಎಂ ಎ. ಪೆಜತ್ತಾಯರು,
ಡೈರೆಕ್ಟರ್, ಕರ್ನಾಟಕ ಸ್ಟೋರ್ಸ್ ಲಿಮಿಟೆಡ್, ಮತ್ತು ಏಜಂಟ್, ಫಲಿಮಾರು ಮಠ, ಉಡುಪಿ.

(3) ಶ್ರೀ. ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರು,
ಡಿಸ್ಟ್ರಿಕ್ಟ್ ಬೋರ್ಡು ಮೆಂಬರ್, ಡೈರೆಕ್ಟರ್, ತುಳುನಾಡ್ ಬ್ಯಾಂಕ್ ಅಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಮತ್ತು ಲೇಂಡ್ ಲೋರ್ಡ್, ಅತ್ರಾಡಿ, ಪರ್ಕಳ.

(4) ಶ್ರೀ. ಕೆ. ಹೊನ್ನಯ್ಯ ಶೆಟ್ಟಿ,
ಡೈರೆಕ್ಟರ್, ಜನರಲ್ ಸಪ್ಲೈಸ್ ಲಿಮಿಟೆಡ್ ಮತ್ತು ಮರ್ಚೆಂಟ್, ಉಡುಪಿ.
(ಮೆನೇಜಿಂಗ್ ಡೈರೆಕ್ಟರ್)

To our clients past, present and future
Flung far and wide over the Sub-continent of India.

OUR GREETINGS

Our glorious success in publishing our 1939 Annual the splendid response of the business community, the enthusiastic welcome of the reading public and last but not least the resounding praise about its get up from high literary circles embolden us to venture on our 1940 Annual in these very difficult times

Our Annual Numbers have been the biggest literary attraction of the season. This year we hope to surpass ourselves

NAVAYUGA ANNUAL NUMBER 1940

DATE OF PUBLICATION 11—1—1940

RATES OF ADVERTISEMENTS

Front Cover page	Rs	100/-
Back cover page	„	75/-
Second & Third cover page each	„	50/-
Full page in reading matter	„	25/-
Half page in reading matter	„	15/-
Quarter page in reading matter	„	8/-
1/8 page in reading matter	„	5/-

Small Advt Re 1 per square Inch.

SEND YOUR ADVERTISEMENT IMMEDIATELY

ADVT MANAGER—'NAVAYUGA' UDIPI, S. INDIA.

ತಾ. 11—1—1940ಕ್ಕೆ ಹೊರಡುವ ನವಯುಗ ಪರ್ಯಾಯ ಸಂಚಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಡಿರಿ

(೩ನೇ ಪುಟದಿಂದ ಮುಂದುವರಿಸಲ್ಪಟ್ಟ)

ದಲ್ಲೇ ಕೆಲವರಲ್ಲಿ ಅತೃಪ್ತಿಯುಂಟಾಗಿದೆ. ಮಜೂರ ವರ್ಗವು, ರಶ್ಯದ ಸಮತಾವಾದಿ ರಾಜ್ಯವನ್ನು ಜರ್ಮನಿಯಲ್ಲಿ ಸ್ಥಾಪಿಸುವ ನಿರೀಕ್ಷೆಯಿಂದ ಚಳವಳಿಸಹತ್ತಿದೆ. ಜೆಕೋಸ್ಲೋವೇಕಿಯ, ಬೊಹೇಮಿಯ ಮತ್ತು ಆಸ್ಟ್ರಿಯದ ಜನತೆಗಳಲ್ಲಿ ತೀವ್ರ ಅತೃಪ್ತಿಯಿದ್ದಿದೆ, ಜೆಕೋಸ್ಲೋವೇಕಿಯದಲ್ಲಿ ಕಾಲೇಜ್ ವಿದ್ಯಾರ್ಥಿಗಳು ಹಿಟ್ಲರ್ ಶಾಹಿಯ ಕುರಿತು ಪ್ರತ್ಯಕ್ಷ ವಿರೋಧ ಹೂಡಿ ಅನೇಕರು ದಸ್ತಗಿರಿಯಾಗಿದ್ದಾರೆ. ಕೆಲವರು ಗುಂಡಿಗೆ ಬಲಿಯಾಗಿದ್ದಾರೆ. ಸೈನ್ಯಾಧಿಕಾರಿಗಳು ಹಲವರು ಹಿಟ್ಲರರಿಗೆ ಬದ್ಧವಾಗಿ 120 ಮಂದಿ ಕೈದುಮಾಡಲ್ಪಟ್ಟಿದ್ದಾರೆ. ಮೊದಲು ಜರ್ಮನ್ ಯುದ್ಧ ಮಂತ್ರಿ ಮತ್ತು ಮುಖ್ಯ ಸೇನಾನಾಯಕರಾಗಿದ್ದು ಆಮೇಲೆ ಕೆಳಗೆ ಹಾಕಲ್ಪಟ್ಟ ಮಾರ್ಶಲ್ ಬ್ಲೊಂಬರ್ಗರನ್ನು ಗುಂಡಿಗೆ ಬಲಿಕೊಡಲಾಗಿದೆಯೆಂದು ಸುದ್ದಿಯುಂಟಾಗಿದೆ. ಬವೇರಿಯ ಪ್ರಾಂತವನ್ನು ಪ್ರಶ್ಯದಿಂದ ಪ್ರತ್ಯೇಕಿಸಿ ಬವೇರಿಯದಲ್ಲಿ ಸ್ವತಂತ್ರ ರಾಜಪಟ್ಟವನ್ನು ಸ್ಥಾಪಿಸುವ ಚಳವಳಿ ನಡೆದಿದೆ. ಕೈಸರ್ ಮನೆತನವನ್ನು ಪುನಃ ಜರ್ಮನಿಯ ಪಟ್ಟಕ್ಕೇರಿಸುವ ಚಳವಳವೂ ಬಲವಾಗುತ್ತಿದೆ. ನಾಜಿ ಪಕ್ಷ ಸ್ಥಾಪನೆ ಮತ್ತು ಸಂಘಟನೆಗಾಗಿ ಮಿಲ್ಯಾಂತರ ಡೋಲರು ಸಹಾಯಮಾಡಿ, ಹಿಟ್ಲರರ ಸಹಾಯಕರಾಗಿದ್ದ ಜರ್ಮನ್ ಉಕ್ಕಿನ ಕೈಗಾರಿಕೆಯ ಪ್ರಮುಖ ಮಿಲ್ಯಾಧೀಶ ಫ್ರಿಜ್ ಥೈಸ್ಸೆನರು ಜರ್ಮನಿಯಿಂದ ಪರಾರಿಯಾಗಿದ್ದಾರೆ. ಅವರ ಐಶ್ವರ್ಯವನ್ನೆಲ್ಲಾ ಸರಕಾರವು ಅಪಹರಿಸಿದೆ ಈ ಯುದ್ಧದಿಂದಾಗಿ ಜರ್ಮನಿಯಲ್ಲಿ ಏನೆಲ್ಲಾ ಆಗುವುದೆಂದು ಹೇಳಬರುವುದಿಲ್ಲ. ಅಂತೂ ಹಿಟ್ಲರರ ಮಾರ್ಗವು ಪ್ರಬಲ ತೊಡಕುಗಳಿಂದ ತುಂಬಿದೆ

ಶಿರ್ವ—ಶೀಂಬ್ರಗುತ್ತಿಗೆಯ ಬರ್ಬೋಜರ ದನ ಕಾಯುವ ಬಿಲ್ಲವರ ಹುಡುಗನಿಗೆ ಸಿಕ್ಕಿದ ಒಂದು ನಿಧಿಯು, ಸದ್ರಿ ಬರ್ಬೋಜರಲ್ಲಿದೆಯೆಂದು ರೆವೆನ್ಯೂ ಇನ್‌ಸ್ಪೆಕ್ಟರರು, ತಹಶೀಲ್ದಾರರೂ ಕಳೆದ ಮಠ ಸ್ಥಳಕ್ಕೆ ಆಗಮಿಸಿ ತನಿಖೆ, ವಾಗ್ಮೂಲಗಳನ್ನು ಪಡೆಕೊಂಡು ಹೋಗಿರುವರು, ಮುಂದಿನ ಕಾರ್ಯವು ಕೋರ್ಟಿನಲ್ಲಿ ನಡೆಸಲ್ಪಡುವುದೆಂದು ಪ್ರಬಲ ಊಹೆಗಳಿವೆ

ಕುತ್ಯಾರು ಬಿ ಇ ಯಂ ಶಾಲೆಯ ಬೆಳ್ಳಿ ಸಂಭ್ರಮ ಶ್ರೀ. ಯಂ. ವಿ. ಹೆಗ್ಡೇರ ಅಧ್ಯಕ್ಷತೆಯಲ್ಲಿ ತಾ. 15-11-39ರಲ್ಲಿ ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು. ಸಣ್ಣ ಮಕ್ಕಳ ಚಟುವಟಿಕೆಯು ಹೊಗಳತಕ್ಕಂಥದ್ದಿತ್ತು.

ಸ್ಥಳೀಯ L F. ಆಸ್ಪತ್ರೆಗೊಂದು ಹೆರಿಗೆ ವಾರ್ಡನ್ನು ತೆರೆಯುವ ಕುರಿತು, ಆಲೋಚನೆ ನಡೆಯುತ್ತಿರುವುದು. ಹಳ್ಳಿಗರ ಅಭ್ಯುದಯವನ್ನು ಬಯಸುವ, ಪಂ ಬೋರ್ಡಿನ ದರ್ವರ್ಥ ವಾಚನಾಲಯದಲ್ಲಿ ಸಾಕಷ್ಟು ಕನ್ನಡ ಇಂಗ್ಲಿಷ್ ಪತ್ರಿಕೆಗಳಿದ್ದರೂ, ಸ್ಥಳೀಯ ಮಹಾಜನರು ತಮ್ಮ ವತಿಯಿಂದ 'ಹಿಂದೂ' ಇಂಗ್ಲಿಷ್ ಮತ್ತು 'ಸ್ವತಂತ್ರ ಭಾರತ' ಕನ್ನಡ ದಿನಪತ್ರಿಕೆಗಳನ್ನು, ವಾಚನಾಲಯಕ್ಕೆ ಕೊಟ್ಟುದು ಅಭಿನಂದನೀಯ!

ಸ್ಥಳೀಯ ಪಂ| ಬೋರ್ಡಿನವರು ಸಾಧೂರತ್ತ ಹೋಗುವ ಗಾಡಿರಸ್ತೆಯನ್ನು ಚಲೋದಾಗಿ ದುರಸ್ತಿ ಪಡಿಸಿರುವರು.

ಪೌರ್ಮಾತ್ಯ, ಪಾಶ್ಚಿಮಾತ್ಯ ರೀತ್ಯಾ ಔಷಧೋಪಚಾರಗಳಿಂದ, ಒಂದು ತಿಂಗಳ ಹಿಂದೆ ತಾನೇ ತೆರೆಯಲ್ಪಟ್ಟಿರುವ ಶ್ರೀ ಆಚಾರ್ಯರ 'ಗೋಪಾಲ ಫಾರ್ಮಸಿ'ಯು ಹಳ್ಳಿಯ ಪ್ರತಿ ಮೂಲೆಯಿಂದಲೂ ಜನಾದರವನ್ನು ಪಡೆಯುತ್ತಿದೆ

ಹಸಿ ಧಾನ್ಯಗಳ ರಾಶಿಯಿದ್ದರೂ, ಕಾಲಲ್ಲದ ಸಮಯದ ದೀಪಾವಳಿಯು ಆಂಗ್ಡಿ ಬೆಟ್ಟು ಬುಕ್ಕಾಡ ಗೌಜಿಯಲ್ಲಿ ಹಳ್ಳಿಗರು ಕೆಲದಿನಗಳ ಮಟ್ಟಿಗಾದರೂ ಗ್ರಾಮದ ಕೇಂದ್ರ ಪೇಟೆಯನ್ನು ವರ್ಣಿಸಿದ ಬೇಕಾಗುತ್ತದೆ. ಲೆಕ್ಕಾಚಾರಗಳ ಹೊಸ ವರ್ಷವು ಪ್ರತಿ ಯುಗಾದಿಗಾಗುತ್ತಿದ್ದರೆ ಬಲು ಪುಣ್ಯವಿತ್ತೆಂಬುದು ನಿರ್ವಿವಾದ.

ಕಾಸರಗೋಡು—ದಿ ಎಸ್ಯಾಟಿಕ್ ಗವರ್ನ್‌ಮೆಂಟ್ ಸೆಕ್ಯುರಿಟಿ ಲೈಫ್ ಇನ್ಶೂರೆನ್ಸ್ ಕಂಪೆನಿಯ ಸ್ಪೆಶಲ್ ರಿಪ್ರೆಸೆಂಟೇಟಿವ್ ಪಿ. ಟಿ. ಹಸನ್ ಕುಟ್ಟಿಯವರಿಗೆ ಭಂಗಾರದ ಪದಕವೊಂದನ್ನು ಬಹುಮಾನ ಕೊಡುವ ಸಮಾರಂಭವು ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡಾ। ಕೆ. ಬಿತ್ತಿಲ ಶೆಟ್ಟರ ಅಧ್ಯಕ್ಷತೆಯಲ್ಲಿ ಬಿ. ಯಂ. ಸೆಕೆಂಡರಿ ಶಾಲೆಯಲ್ಲಿ ತಾ. 27-11-39ನೇ ಸಂಜೆ 5 30ಕ್ಕೆ ಜರಗಲಿರುವುದೆಂದೂ ಸಕಲರಿಗೂ ಸ್ವಾಗತವಿದೆಯೆಂದೂ ಕಂಪೆನಿಯ ಒರ್ಗನೈಜರ್ ಶ್ರೀ। ಬಿ ಕರುಣಾಕರ ಹೆಗ್ಡೆಯವರು ತಿಳಿಸುತ್ತಾರೆ.

ಅಜ್ಜಾಡ (ಕಟಪಾಡಿ)—ಇದೇ ತಿಂಗಳ ಕಳೆದ ತಾ. 19ರಲ್ಲಿ ಅಜ್ಜಾಡ ಬೋರ್ಡು ಹುಡುಗಿಯರ ಶಾಲೆಯಲ್ಲಿ ಶ್ರೀಯುತ ಸೀತಾರಾಮ ಘೋರಿ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿದ ಶಾರದಾ ಪ್ರಚಂಡ ಸಭೆಯಲ್ಲಿ ವೇದ ಮೂರ್ತಿ ಜನಾರ್ದನ ಆಚಾರ್ಯರು, ಸಿಂಸಪ್ಪ ನಾಯಕರು, ತಮ್ಮಯ ಶೇರಿಗಾರರು ಮೊದಲಾದವರ 18 ಮಂದಿಯ ಶಾಲಾ ಕಮಿಟಿಯನ್ನು ರಚಿಸಿದ್ದಲ್ಲದೆ ವಿದ್ಯಾರ್ಥಿಗಳಿಗೆ ಶ್ರೀ ನಾರಾಯಣ ಪುರಾಣಿಕರು ಕೊಟ್ಟ ಇನಾಮುಗಳನ್ನು ಹಂಚಿದ್ದು ಸ್ತುತ್ಯ.

ಕೊರಾಡಿ—ಇಲ್ಲಿಯ ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲೆಯನ್ನು ಜಿಲ್ಲೆಯ ಪ್ರಸಿದ್ಧ ವಾಗ್ಮಿಗಳೂ, ದೇಶ ಕಾರ್ಯ ಧುರೀಣರೂ ಆದ ಶ್ರೀ. ಎಚ್. ರಾಮರಾಯ ಮಲ್ಯ, ಸೆಂಟ್ರಲ್ ಕೋ-ಓಪರೇಟಿವ್ ಬೇಂಕಿನ ಡೈರೆಕ್ಟರ್ ಶ್ರೀ. ಎಚ್. ರಾಮಕೃಷ್ಣನವರ, ಉಡುಪಿ ಕೋ-ಓಪರೇಟಿವ್ ಸೊಸೈಟಿಯ ಸುಪರ್‌ವೈಸರ ರ. ಎಮ್. ಮಾದವಯ್ಯನವರು ಮೊದಲಾದವರು ತಾ. 14ನೇ ಸಂಜೆ ಸಂದರ್ಶಿಸಿದ್ದಾರೆ. ಅತಿಥಿಗಳ ವಿದ್ಯಾಲಯದಲ್ಲಿ ಸಂದರ್ಶನಕ್ಕಾಗಿ ಚಿತ್ರಿಸಿದ ಉತ್ತರದ ಇನ್ನಿತರ ಅತಿಥಿಗಳೊಡನೆ ನಿಂತು ಹಳ್ಳಿಯ ನಾಡಿನಲ್ಲಿ ನವಿಸುಧಾರಣೆಯ ರಾಷ್ಟ್ರೀಯ ಧ್ಯೇಯದ, ರಮಣೀಯ ಮಾದ ಜಿಲ್ಲೆಯ ಏಕಮಾತ್ರ ವಿದ್ಯಾಸಂಸ್ಥೆಯಿಂದು, ಅಭಿಪ್ರಾಯಪಟ್ಟು, ಸಂಸ್ಥೆಯನ್ನು ಸರ್ವದಾ ಸಂದರ್ಶಿಸಲು ಸುಯೋಗವು ದೊರೆಯಲೆಂದು ಹಾರೈಸಿ ಹಾಸಿ ತೆರಳಿದರು

ಧಾರವಾಡ ಜಿಲ್ಲಾ ಉಗ್ರವಾದಿ ಕಾಂಗ್ರೆಸ್ ಜನರ ಪರಿಷತ್ತು—ಧಾರವಾಡ ಜಿಲ್ಲಾ (ಹಳ್ಯಾಳ ತಾಲೂಕು ಸಹಿತ) ಉಗ್ರವಾದಿ ಕಾಂಗ್ರೆಸ್ ಜನರ ಪರಿಷತ್ತಿನ 1ನೇ ಅಧಿವೇಶನವು ಇದೇ ನವಂಬರ 20ನೇ ತಾರೀಕಿನ ದಿವಸ ಇಲ್ಲಿಯ ನಗರಸಭೆಯ ಆವರದ ಮೇಲೆ ಜರಗಲಿರುವದು. ಉಗ್ರವಾದಿ ಕಾಂಗ್ರೆಸ್ ಜನರ ಪ್ರಸಿದ್ಧ ಮುಂದಾಳುಗಳೂ ಲೋಕಮಾನ್ಯ ಆದ ಪುಣೆಯ ತೀರ್ಥರೂಪ ಲಕ್ಷ್ಮಣಶಾಸ್ತ್ರೀ ಜೋಶಿ ಇವರು ಈ ಅಧಿವೇಶನದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಒಪ್ಪಿಕೊಂಡಿರುವರು.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜೈನು ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸೈನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅನ್ನಪೂರ್ಣ ಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

"Wanted-a Branch Agency Manager on a monthly salary of Rs 250/ for our Agency Office to be opened either at Belgaum or Mangalore Only those who can write a test business of Rs 75,000/ before 28th February 1940 need Apply Messrs Padubidri Bross, Chief Agents. Maharashtra and Karnataka, East & West Insurance Co Ltd, Bombay 8."

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS.
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)

ನವಯುಗ

ಉಡುಪಿ, ಗುರುವಾರ ತಾ. ೨೩-೧೧-೩೯

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಭದ್ರವಾದ ಮತ್ತು ಉತ್ತಮವಾದ ಬೇಂಕಿಂಗ್ ಸಂಸ್ಥೆಯಿಂದ ವ್ಯಾಪಾರೋದ್ಯಮ, ಕೈಗಾರಿಕೆ ಮತ್ತು ರಾಷ್ಟ್ರದ ಪ್ರತಿಯೊಂದು ಸಾಂಪತ್ತಿಕ ಚಟುವಟಿಕೆಗೂ ಪ್ರಯೋಜನವಾಗುತ್ತದೆ. ರಾಷ್ಟ್ರೀಯ ಅಭಿವೃದ್ಧಿ ಮತ್ತು ಹಿತಸಾಧನೆಯಲ್ಲಿ ರಾಷ್ಟ್ರೀಯ ಬೇಂಕಿಂಗ್ ವ್ಯವಹಾರದ ಅಮೂಲ್ಯತೆಯು ಸ್ವಯಂವೇದ್ಯವಿರುತ್ತದೆ. ವ್ಯಾಪಾರಕ್ಕೆ ಉದಾರಾಶಯವಿತ್ತು, ಲಾಭದಾಯಕ ಕೈಗಾರಿಕೋದ್ಯಮಗಳಿಗೆ ಭಂಡವಾಳವನ್ನೊದಗಿಸಿ, ಪೋಷಿಸಿ, ಕರ್ನಾಟಕದಲ್ಲೆಲ್ಲಾ ವ್ಯಾಪಿಸಿರುವ, ತನ್ನ ಬೇರೆ ಬೇರೆ ಶಾಖೆಗಳ ಮೂಲಕ ಒಳಪ್ರದೇಶಗಳಲ್ಲಿ ಕೂಡಾ ವ್ಯಾಪಾರ ವಹಿವಾಟುಗಳಿಗೆ ಅನುಕೂಲತೆಯನ್ನುಂಟುಮಾಡಿ ಉತ್ತೇಜನವಿತ್ತಿರುವ, ಉಡುಪಿಯ ಪ್ರಖ್ಯಾತ ಸಿಂಡಿಕೇಟ್ ಬೇಂಕು ದೇಶದ ಸಾಂಪತ್ತಿಕ ಕ್ಷೇತ್ರದ ದೊಡ್ಡ ಅಭಾವವನ್ನು ಪೂರೈಸಿರುವುದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಪ್ರಾಮುಖ್ಯ ವ್ಯಾಪಾರ ಕೇಂದ್ರಗಳಲ್ಲಿ ಯೋಗ್ಯ ರೀತಿಯಲ್ಲಿ ಹಾಗೂ ಚತುರತೆಯಿಂದ ನಡಿಸಲ್ಪಡುವ ೩೬ ಉತ್ತಮ ಶಾಖೆಗಳ ಮೂಲಕವಾಗಿ ಸಿಂಡಿಕೇಟ್ ಬೇಂಕು ವಿವಿಧ ಮತ್ತು ಉಪಯುಕ್ತ ವ್ಯವಹಾರಗಳನ್ನು ನಡಿಸಿ ಅಮೂಲ್ಯ ಬೇಂಕಿಂಗ್ ಸೇವೆಯನ್ನು ಸಲಿಸುತ್ತಿರುವುದು. ಕಳೆದ 11 ವರ್ಷಗಳ ಕಾಲದಲ್ಲಿ ಅದು ಪಡೆದಿರುವ ಅಭಿವೃದ್ಧಿ ಮತ್ತು ಪ್ರಖ್ಯಾತಿ, ಆಕರ್ಷಿಸಿರುವ ಠೇವಣಾತಿ, ತೆತ್ತಿರುವ ಡಿವಿಡೆಂಡು, ಸಂಗ್ರಹಿಸಿಟ್ಟಿರುವ ರಿಸರ್ವ್ ಮೊದಲಾದುವುಗಳಿಂದ ಅದು ದಕ್ಷಿಣಹಿಂದುಸ್ಥಾನದ ಬೇಂಕಿಂಗ್ ಸಂಸ್ಥೆಗಳಲ್ಲಿ ಅಗ್ರಗಣ್ಯಸ್ಥಾನಕ್ಕೆ ಅರ್ಹತೆಪಡೆದು ಜನವಿಶ್ವಾಸಕ್ಕೆ ಪಾತ್ರವಾಗಿರುವುದು ಶ್ರೀಮಂತ ವರ್ಗದ ಮಾತ್ರವಲ್ಲದೆ ಮಧ್ಯ ಮತ್ತು ಬಡತರಗತಿಯ ಜನತೆಯ ಆವಶ್ಯಕತೆ ಅಡಚಣೆಗಳನ್ನೂ ಪೂರೈಸಿ ಅವರಲ್ಲಿ ಅಲ್ಪ ಸ್ವಲ್ಪ ಉಳಿತಾಯದ ಅಭ್ಯಾಸವನ್ನೂ ಉತ್ತೇಜಿಸಿ ಜನಸಾಮಾನ್ಯರ ಸೇವೆ ಮತ್ತು ಹಿತಸಾಧನೆಯನ್ನು ತನ್ನ ಪ್ರಾಮುಖ್ಯ ಉದ್ದೇಶವಾಗಿಟ್ಟುಕೊಂಡು ದುಡಿದು ಬಂದಿರುವ ಸಿಂಡಿಕೇಟ್ ಬೇಂಕಿನ ಆಡಳಿತದವರ ಧೋರಣೆಯು ಪ್ರಶಂಸನೀಯವಿದ್ದು ಜನಾದರ ಪಡೆದಿದೆ. ಅಂತೆಯೇ ಕಳೆದ ೬ ವರ್ಷಗಳಲ್ಲಿ ಸಿಂಡಿಕೇಟಿನ ಲಾಭವು ವರ್ಷ ವರ್ಷ ಹೆಚ್ಚುತ್ತಾ ಹೋಗಿದೆ. ಸೇವೆ ಮತ್ತು ಸುರಕ್ಷಿತತೆಯೇ ಈ ಬೇಂಕಿನ ಆಡಳಿತದ ಮೂಲತತ್ವವಿರುವುದರಿಂದ ಅದರ ಜನಪ್ರಿಯತೆಯೊಂದಿಗೆ ಭದ್ರತೆಯೂ ಸ್ಥಿರವಾಗಿ ಬೆಳೆದು ಅದು ಪ್ರಗತಿಪಥದಲ್ಲಿ ಆಶ್ಚರ್ಯಕರ ವೇಗದಿಂದ ಮುನ್ನಡೆದಿದೆ.

ಬೇಂಕಿನ ಶಾಖೆಗಳು ವ್ಯಾಪಕವಾಗಿ ಬೆಳೆದು ಅದರ ವಹಿವಾಟುಗಳು ಬಹಳವಾಗಿ ಹೆಚ್ಚಿದಂತೆ ಅದರ ಪಾಲು ಭಂಡವಾಳ ಕೂಡಾ ಅಧಿಕವಾಗಬೇಕಾದುದು ಅತ್ಯಾವಶ್ಯಕ ಮತ್ತು ಸ್ವಾಭಾವಿಕ. ಈ ಪ್ರಶ್ನೆಯ ಕಡೆಗೆ ರಿಸರ್ವ್ ಬೇಂಕ್ ಕೂಡಾ ಈಗ ಪ್ರಾಮುಖ್ಯವಾಗಿ ಗಮನವಿತ್ತಿರುವುದು. ಬೇಂಕಿಂಗ್ ಸಂಸ್ಥೆಗಳ ಕುರಿತಾಗಿ ಆಗಬಹುದಾದ ಹೊಸಕಾನೂನಿನ ಮತ್ತು ಇತರ ಆಧುನಿಕ ಆಡಳಿತ ಸಂಬಂಧವಾದ ಆವಶ್ಯಕತೆಗಳನ್ನು ಮುಂದಾಗಿ ನಿರೀಕ್ಷಿಸಿಕೊಂಡು ಅದಕ್ಕೆ ತಕ್ಕ ಸಿದ್ಧತೆಯನ್ನು ಮೊದಲೇ ಮಾಡಿಕೊಳ್ಳುವುದು ಮುಂಜಾಗ್ರತೆಯ ಹಾಗೂ ದೂರದೃಷ್ಟಿಯ ಆಡಳಿತದ ಲಕ್ಷಣವಾಗಿದೆ. ಕಾನೂನಿನ ವಿಷಯಕ್ಕಾಗಿ ಮಾತ್ರವಲ್ಲದೆ, ಬೇಂಕಿನ ಭಂಡವಾಳವನ್ನು ಹೆಚ್ಚಿಸುವುದರಿಂದ ಅದರ ಸ್ಥಿರತೆ ಮತ್ತು ಪ್ರಭಾವವನ್ನು ಮತ್ತಷ್ಟು ಹೆಚ್ಚಿಸಿ ಈ ಸಂಸ್ಥೆಗೆ ನಿಸ್ಸಂದೇಹವಾಗಿಯೂ ಅಚಲವಾದ ತಳಹದಿಯನ್ನು ಹಾಕಿದಂತಾಗುವುದು.

ಈ ದೃಷ್ಟಿಯಿಂದಲೇ ಸಿಂಡಿಕೇಟಿನ ಮೆನೇಜ್‌ಮೆಂಟಿನವರು ತಮ್ಮ ಬೇಂಕಿನ ಭಂಡವಾಳವನ್ನು ರೂ. 40 ಲಕ್ಷದಷ್ಟು ಹೆಚ್ಚಿಸುವ ನಿರ್ಧಾರವಮಾಡಿರುವುದು ಅಭಿನಂದನೀಯವಿರುತ್ತದೆ. ಇದರ ಅನುಭವದಾಯಿನಿ (ಪ್ರೊಸ್ಪೆಕ್ಟಸ್) ಇನ್ನೊಂದೆಡೆ ಕೊಟ್ಟಿರುತ್ತೇವೆ. ರೂ. 40 ಲಕ್ಷವನ್ನು ರೂ. ಹತ್ತರ 1 ಲಕ್ಷ ಪಾಲುಗಳನ್ನಾಗಿ ವಿಂಗಡಿಸಲಾಗಿ ಈ ಹೊಸ ಪಾಲುಗಳು ಲಾಭ ಹಂಚೋಣದಲ್ಲಿಯೂ ಪಾಲು ಭಂಡವಾಳ ಮರುಪಾವತಿಯಲ್ಲಿಯೂ ಪ್ರಧಮ ಆಯ್ಕೆಯವು (Preference) ಗಳಾಗಿರುತ್ತವೆ. ಈ ಪಾಲುಗಳ ಮೇಲೆ ವರ್ಷ ಒಂದಕ್ಕೆ ಸೇಕಡಾ 6 ರಂತೆ ತಪ್ಪದೆ ಡಿವಿಡೆಂಡ್ ಕೊಡುವ ಗ್ಯಾರಂಟಿಯಿದೆ.

ಪ್ರತಿ ಪಾಲಿಗೆ ಪ್ರವೇಶಶುಲ್ಕ 0-1-0. ಪಾಲುಪಡೆಯುವಾತನು ಈ ಪಾಲೊಂದಕ್ಕೆ ಪ್ರಥಮವಾಗಿ ರೂ. 1-1-0 ತೆತ್ತರಾಯಿತು. ಉಳಿದ ರೂ. 9ನ್ನು ತನಗೆ ಅನುಕೂಲವಾದಂತೆ ಮತ್ತು ಮನಸ್ಸಿದ್ದರೆ 10 ವರ್ಷಗಳೊಳಗೆ ತೆರುತ್ತ ಬರಬಹುದು. ಆ ವರೆಗೆ ಆ ಬಾಕಿ ಹಣವನ್ನು ಬ್ಯಾಂಕಿನ ವರು ಕೇಳಲಾರರು.

ಈ ವ್ಯವಸ್ಥೆಯಿಂದ ಜನಸಾಮಾನ್ಯರು ಕೂಡ ಪಾಲು ಪಡೆಯಲು ಸಾಧ್ಯವಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇದು 10 ವರ್ಷದ ಯೋಜನೆಯಾದ್ದರಿಂದ ಈ ಅವಧಿಯಲ್ಲಿ ಸಾಮಾನ್ಯ ಜನರಿಗೂ ಕೂಡ ಉಳಿತಾಯ ಮಾಡುವ ಪ್ರೋತ್ಸಾಹವಾಗದಿರದು.

ಪ್ರತಿಯೊಬ್ಬನೂ ಪಡೆಯತಕ್ಕ ಕನಿಷ್ಟ ಪಾಲುಗಳು 10. ಆ ಪ್ರಯುಕ್ತ ಆತನು ಪ್ರಾರಂಭದಲ್ಲಿ ರೂ. 10-10-0ನ್ನು ಈಗ ಕೊಟ್ಟರಾಯಿತು. ಉಳಿದ ರೂ. 90/–ನ್ನು ತನಗೆ ಒದಗಿದಂತೆ ಯಾವಾಗಲಾದರೂ ಕೊಡಲು 10 ವರ್ಷಗಳ ಅವಧಿಯಿರುತ್ತದೆ. ಹತ್ತು ವರ್ಷಗಳೊಳಗೆ ಹಣಕೊಡಲಿಲ್ಲವೆಂದು ಕೂಡ ಯಾವ ಅಪರಾಧವೂ ಇಲ್ಲ.

ಒಬ್ಬನು 1000 ಪಾಲುಗಳನ್ನು ಪಡೆಯಲಾತುರವುಳ್ಳವನಿದ್ದರೆ ಅವನು ಪ್ರಥಮವಾಗಿ ರೂ 1000 ಮತ್ತು ಆಣೆ 1000 ಕೊಡಬೇಕಾಗುವುದು. ಅವನು 10 ವರ್ಷಗಳೊಳಗೆ ಬಾಕಿ ಉಳಿದ ಹಣವನ್ನು ಕಡಾಕಡಿಯಾಗಿ ಕೊಡುತ್ತ ಬರಬೇಕೆಂದಿದ್ದರೆ ಪ್ರತಿ ವರ್ಷ ಸರಾಸರಿ ರೂ. 1000ದಂತೆ ಕೊಡಬೇಕಾಗುವುದಷ್ಟೆ. ಆದರೆ ಅವನು ತನಗೆ ವರ್ಷಕ್ಕೊಮ್ಮೆ ಸಿಗುವ ಲಾಭಾಂಶವನ್ನು ನಗದಿಯಾಗಿ ಪಡೆಯದೆ ಪಾಲಿಗೆ ಕೊಡುತ್ತ ಬಂದರೆ ಅವನು ಒಂದೊಂದು ವರ್ಷದಲ್ಲಿ ಕೊಡತಕ್ಕ ಕಂತು ರೂ 950/–, ರೂ. 900 ಹೀಗೆ ಪ್ರತಿ ವರ್ಷವೂ ರೂ. 50ರಂತೆ ಇಳಿಯುತ್ತ ಬರುವುದು ಹೀಗೆ ಅವನು ಕೊಡುವ ಕಟ್ಟಕಡೆಯ ಕಂತು ರೂ. 550 ಮಾತ್ರ ಆಗುವುದು. ಈ ವಾರ್ಷಿಕ ಕಂತನ್ನು ಮಾಸಿಕವಾಗಿಯೂ ಇಲ್ಲವೆ ಒದಗಿದಂತೆಲ್ಲಾ ತೆರುತ್ತ ಬರಲೂ ಬಹುದು. ಈ ಯೋಜನೆಯ ಕಡೆಗೆ ತುಸು ಲಕ್ಷ್ಯ ಹರಿಸಿದರೆ ಮುಂಜಾಗ್ರತೆಯುಳ್ಳ ಪ್ರತಿಯೊಬ್ಬನನ್ನೂ ಇದು ಆಕರ್ಷಿಸದಿರದೆಂದು ಧಾರಾಳವಾಗಿ ಹೇಳಬಹುದು.

ಇಷ್ಟರಲ್ಲೆ 40,000ಕ್ಕೂ ಮಿಕ್ಕಿದ ಪಾಲುಗಳು ಮಾರಾಟವಾಗಿರುವುದಾಗಿ ನಾವು ಕೇಳಿ ಸಂತೋಷಪಡುತ್ತೇವೆ. ಉಳಿದ ಪಾಲುಗಳು ಬೇಗನೆ ಮಾರಾಟವಾಗುವುದರಲ್ಲಿ ಏನೂ ಅನುಮಾನವಿರಲಾರದು. ಈ ಹೊಸ ಪಾಲುಗಳೆಲ್ಲಾ ಮಾರಾಟವಾದಾಗ ಈ ಸಿಂಡಿಕೇಟ್ ಬೇಂಕು ಭಂಡವಾಳದಲ್ಲಿ ಇಂಡಿಯದ ಪ್ರಥಮ ಶ್ರೇಣಿಯ ಬ್ಯಾಂಕುಗಳ ಸಾಲಿಗೆಬರುವುದರಲ್ಲಿ ಸಂದೇಹವಿಲ್ಲ

ಕೇವಲ ಭಂಡವಾಳಶಾಹಿ ಪಕ್ಷಪಾತಿ ಸಂಸ್ಥೆಯು ಸಿಂಡಿಕೇಟಲ್ಲವೆಂಬುದು ಈ ಯೋಜನೆಯಿಂದ ವ್ಯಕ್ತವಾಗುತ್ತದೆ. ಅದು ಸರ್ವರಿಗೂ ಸಹಾನುಭೂತಿಯಿಂದ ಸೌಹಾರ್ದದಿಂದ ಮತ್ತು ಸಹಕಾರಭಾವದಿಂದ ಸಹಾಯದ ಕೈಕೊಟ್ಟು ಸರ್ವರಿಂದಲೂ ಪ್ರೋತ್ಸಾಹದ ಆಶಯಕ್ಕೆ ಕೈ ನೀಡಿರುವ ಜನತಾಸಂಸ್ಥೆಯಾಗಿರುತ್ತದೆ. ಇಂತಹ ಜನಪಕ್ಷಪಾತಿ ಮತ್ತು ಜನತಾ ಸೇವಾನಿಷ್ಠ ಸಂಸ್ಥೆಯು ಶೀಘ್ರವಾಗಿ ತನ್ನ ಈ ಹೊಸ ಪಾಲು ಭಂಡವಾಳವನ್ನು ಪಡೆದು ತನ್ನ ಅಸ್ತಿತ್ವವನ್ನು ಮತ್ತಷ್ಟು ಬಲಪಡಿಸಿ ತನ್ನ ಸೇವಾ ಕ್ಷೇತ್ರವನ್ನು ಇನ್ನಷ್ಟು ವ್ಯಾಪಿಸಿ ಬೆಳೆದು ಬೆಳಗಲೆಂದು ನಮ್ಮ ಹಾರ್ದಿಕವಾದ ಹಾರೈಕೆ

ಮೈಸೂರಿನ ಪ್ರಿನ್ಸ್ ಜಯಚಾಮರಾಜ ಒಡೆಯರ ಸಂಕ್ಷಿಪ್ತ ಪರಿಚಯ.

ತಾ. 26ಕ್ಕೆ ಉಡುಪಿಗೆ ಪ್ರಥಮವಾಗಿ ಬರಲಿರುವ ಪ್ರಿನ್ಸ್ ಜಯಚಾಮರಾಜ ಒಡೆಯರವರೆಂದರೆ ಎಲ್ಲರಿಗೂ ಪ್ರಿಯರಾದವರು. ಶ್ರೀಯುತರು ಇತರ ಪ್ರಜೆಗಳಂತೆಯೇ ಮೈಸೂರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿ, ಮೊದಲನೆ ದರ್ಜೆಯಲ್ಲಿ ತೇರ್ಗಡೆಹೊಂದಿ, ನಂತರ ಮಹಾರಾಜ ಕಾಲೇಜ್‌ನಲ್ಲಿ ವಿದ್ಯಾಭ್ಯಾಸಮಾಡಿ, ಒಂದು ಪದಕವನ್ನು ಸಹಾ ಪಡೆದ, ಬಿ ಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಕಳೆದ ಎರಡು ವರ್ಷಗಳ ಕೆಳಗೆ ನಡೆದ ಮೈಸೂರು ಕಾನ್ವೋಕೇಷನ್ನಲ್ಲಿ ಡಿಗ್ರಿ ಪಡೆದರು. ರಾಜವಂಶದಲ್ಲಿ ಹುಟ್ಟಿ, ಕೇವಲ ಬಡ ವಿದ್ಯಾರ್ಥಿಗಳಂತೆಯೇ ಕಾಲೇಜಿಗೆ ಬಂದು ಯುವಕ ಸಮೂಹದಲ್ಲಿ ಬೆರತು, ಧನಿಕ ಬಡವರೆಂಬ ಬೇಧಭಾವವಿಲ್ಲದೆ ವಿದ್ಯಾಭ್ಯಾಸಮಾಡಿ ಇತರ ರಾಜಪುತ್ರರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರೆನ್ನಬಹುದು.

ಪ್ರಿನ್ಸ್ ಜಯಚಾಮರಾಜಒಡೆಯರವರನ್ನು ಎಷ್ಟು ಬಾರಿ ನೋಡಿದರೂ ತೃಪ್ತಿಯಾಗಲಾರದೆ, ಇನ್ನೂ ನೋಡುತ್ತಿರಬೇಕೆಂದೆನಿಸುತ್ತದೆ. ಶ್ರೀಯುತರಲ್ಲಿ ಈಗಾಗಲೇ ರಾಜಕಳೆಯು ತುಂಬಿದೆ. ಇವರು ಉತ್ತರ ಇಂಡಿಯಾ ಪ್ರವಾಸಮಾಡಿರುತ್ತಾರೆ. ಜಪಾನಿಗೆ ಪ್ರಯಾಣ ಬೆಳೆಸಿ ಅಲ್ಲಿಯ ಪ್ರಜೆಗಳ ನಡೆನುಡಿ ಮತ್ತು ಇತರ ವಿಷಯಗಳನ್ನು ಚೆನ್ನಾಗಿ ತಿಳಿದಿರುತ್ತಾರೆ. ಶ್ರೀಯುತರು ಕುದುರೆ ಸವಾರಿ, ಮೋಟಾರ್ ನಡೆಸುವುದರಲ್ಲಿ ಪ್ರವೀಣತೆ ಪಡೆದಿದ್ದಾರೆ.

ಚರ್ಕಾರಿ ಸಂಸ್ಥಾನಾಧೀಶ್ವರರ ಪುತ್ರಿಯಾದ ಶ್ರೀ ಮತಿ ಸತ್ಯಪ್ರೇಮಾದೇವಿಯವರನ್ನು, ಶ್ರೀಯುತರು ಕಳೆದ ಒಂದುವರೆ ವರ್ಷದ ಕೆಳಗೆ ವಿವಾಹವಾದರು. ಶ್ರೀಯುತರು ಇಂಗ್ಲಾಂಡ್ ಮತ್ತು ಯೂರೋಪಿನ ಕೆಲವು ಪಟ್ಟಣಗಳನ್ನು ನೋಡಿಕೊಂಡು, ಕೇವಲ ಒಂದು ತಿಂಗಳ ಕೆಳಗೆ ಮೈಸೂರಿಗೆ ಹಿಂತಿರುಗಿದ ವಿಚಾರವು ಎಲ್ಲರಿಗೂ ತಿಳಿದೇ ಇದೆ.

ಯುವರಾಣಿಯವರು ಮೂವರುರಾಜಕುಮಾರಿಯರು ಉನ್ನತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಸಂಗೀತದಲ್ಲಿ ಅಗ್ರಗಣ್ಯ ಸ್ಥಾನ ಪಡೆದಿದ್ದಾರೆ. ಇವರುಗಳು ಕೆಲವು ದಿನಗಳ ಕೆಳಗೆ, ಶ್ರೀಮನ್ಮಹಾರಾಜರೊಡನೆ ಇಂಗ್ಲೇಂಡಿಗೆ ಪ್ರಯಾಣಬೆಳೆಸಿದಾಗ, ಮುಂಬೈಯ ಬ್ರಾಡ್‌ಕಾಸ್ಟಿಂಗ್ ಸ್ಟೇಷನ್ನಿನಿಂದ ಪಿಯಾನೋ ಸಂಗೀತ ನುಡಿಸಿದ್ದರು.

ಎಲ್ಲರಿಗೂ ನಮ್ಮ ಸುಸ್ವಾಗತ.

WHAT MAKES A MAN RICH?

Luck?	Very rarely.
Inheritance?	Not often.
Speculation?	Once in a blue moon
Gambling?	Never.
Hard Work?	Very Often.
Hard work and Thrift	Always.

RESOURCES OF A CRORE

ESTD 1906
CANARA BANK
LIMITED

(A copy of this Prospectus has been filed for registration with the Assistant Registrar of Joint Stock Companies, South Kanara, Madras Presidency, as required under Section 92 (2) of the Indian Companies Act No VII of 1913 and also with the Registrar of Joint Stock Companies in Mysore Bangalore as required under Section 277-A 1 (i) of Mysore Companies Act,

PROSPECTUS

Prospectus offering shares of the value of Rupees forty lakhs (Rs 40,00,000/-) made up of four lakhs (4,00,000) of shares of ten rupees (Rs 10/-) each for subscription

THE CANARA INDUSTRIAL & BANKING SYNDICATE LTD.

(Incorporated under the Indian Companies Act in British India on 20th October 1925 with liability of members limited)

A SCHEDULED BANK UNDER THE RESERVE BANK OF INDIA ACT, 1934 AND MEMBER OF THE BANKERS CLEARING HOUSE, BOMBAY

AUTHORISED CAPITAL Rs 50,00,000

Divided into—

(1) Six thousand ordinary shares of Rs 100/ each

(2) Four thousand fully paid preference shares of Rs 100/ each, bearing 6 per cent cumulative dividend free of British Indian Incometax,

(3) Four lakhs preference shares of Rs 10/ each with preferential rights (a) of 5 per cent fixed cumulative dividend free of British Indian Incometax and (b) with regard to repayment of capital

SUBSCRIBED CAPITAL

5840 Ordinary shares of Rs 100/ each	Rs 5,84,000/
1906 Six per cent Cumulative Preference Shares of Rs. 100/- each	Rs 1,90 600/
	Rs 7,74 600/-

PAID UP CAPITAL

Under Ordinary Shares	Rs 2,05 630/
Under six per cent Cumulative Preference Shares	Rs 1,90,600/
	Rs 3,96 230/
Advance calls received on Ordinary Shares	Rs 8,860/

PRESENT ISSUE —

Cumulative Preference shares of the value of Rupees forty lakhs (Rs 40,00,000/) divided into four lakhs (4,00,000) shares of Rs ten (Rs 10/-) each with preferential rights (1) of 5 per cent fixed cumulative dividend free of British Indian Incometax and (2) with regard to repayment of capital.

Share money is payable as follows —

(a) Only one rupee (Re 1/) per share as application and allotment money in respect of every share is to be paid with the application in addition to the entrance fee which is fixed at one anna (Re 0 -1—0) per share

(b) Balance sum of nine rupees (Rs 9/) per share will be received as Optional Calls at one rupee (Re 1/) per quarter (with option to the party to pay the same) and the dates for receiving the amount of such optional calls to the credit of the share will be the first day of January, April July and October succeeding the allotment

(c) Any amounts tendered on any other dates can be accepted as Advance Optional Calls and will be adjusted towards such calls at the rate of one rupee (Re 1/) per share on such of the above mentioned dates which would immediately follow the date of such payment and other succeeding quarters thereafter Parties will be paid interest on amounts lying with the Syndicate under Advance Optional Calls (i e unadjusted) from time to time at rates to be determined by the Board of Directors.

(d) Not more than one rupee (Re 1/) per share will be credited as paid up on each of the above said dates as mentioned in the foregoing clause (b) supra

(e) When Optional Calls are paid by a member the calls shall be deemed to have been made in accordance with the provisions of the Articles of Association of the Syndicate and credited as paid up in accordance with clauses (b) & (d) supra But unless the Directors on their own motion make a call no penal interest could be charged for the non payment of the Optional calls and provided further that no call on these new shares be made by the Directors on their own motion until the expiry of ten years from the date of the allotment thereof

(f) If however the shares are not fully paid within ten years from the date of allotment as mentioned above, the Directors thereafter have got the option of demanding the balance remaining unpaid on such partly paid shares at not more than one rupee (Re 1/) per share per call as per provisions of Article No 40 of the Articles of Association of the Syndicate and in the case of non payment of such calls made under this option the provisions relating to default etc as laid down in the Articles of Association of the Syndicate will apply

Preference shares comprised in the Capital of the Syndicate are, as indicated above, of two classes, i e (1) four thousand (4000) fully paid six percent (6%) Cumulative Preference Shares of Rupees one hundred (Rs 100/) each and (2) four lakhs (4,00,000) five per cent (5%) Cumulative Preference Shares of Rupees ten (Rs 10/) each The holders of 6% and 5% Preference shares shall be entitled to be paid out of the profits which the Directors shall determine to distribute by way of dividend a fixed cumulative preferential dividend at the rate of six per cent and five per cent respectively per annum free of British Indian Income tax and to a right on winding up to be paid all arrears of preferential dividend whether earned, declared or not down to the commencement of the winding up and, in the case of the five per cent Preference shares, also to be repaid the amount of capital paid up or credited as paid up on such 5% Preference shares held by them respectively but shall not be entitled to any other rights in the surplus profits or assets of the Syndicate Subject as aforesaid the holders of the Ordinary shares and six per cent Preference Shares shall be entitled to be repaid the amount of capital paid up, or credited as paid up, on such shares and all surplus assets thereafter shall belong to the holders of Ordinary Shares and 6% Preference shares in proportion to the amount paid up or credited as paid up on such ordinary shares and 6% Preference shares respectively at the commencement of the winding up

DIRECTORS

1. Dr T Madhava Pai, M B, [illegible], *Physician & Surgeon Udipi* **Chairman & Managing Director**
2. Dr N Shripad Rao, *Retired Rly Asst Surgeon, Udipi* **Vice Chairman**
3. S R Haldipurkar, Esqr M L C *Forest Contractor, Karwar*
4. Mukunda Narayana Prabhu Siroorkar, Esqr *Merchant & Land lord, Ankola (N Kanara)*
5. L H Prabhu Esqr, [illegible], LL B, *Pleader Honavar (N Kanara)*
6. Venkataraman Vithal Shanbhag, Esqr *Merchant & Land lord, Honavar, (N Kanara)*
7. K Padmanabha Baliga, Esqr, *Land lord & Merchant, Kalianpur, (S Kanara)*
8. B Padmanabha Pai, Esqr *Merchant, Brahmavar, (S Kanara)*
9. Upendra Ananth Pai, Esqr, *Merchant Udipi*

SECRETARY.

Sri N. Ananda Rao.

AUDITORS.

1. Sri K. Gopalakrishna Rao, G. D. A., R. A.,
Registered Accountant & Auditor,
"Karnataka Bank Buildings", 20, Thambu Chetty Street, George Town, MADRAS.
2. Sri M. S. Krishna Rau,
Certified Auditor,
2, Coelhos' Street, Codialbail, MANGALORE.

Registered Head Office.

"Mukund Nivas", UDIPI, (South Kanara.)

The Syndicate has got 35 Offices at present among which those in Mysore State are three, viz., in Bangalore City, Tumkur and Sagar and the Principal Office in the Mysore State for purposes of Mysore Companies Act is the first named. Its address is:

The Canara Industrial & Banking Syndicate, Ltd.,
27, Chickpet,
BANGALORE CITY.

Copies of the Memorandum and Articles of Association of the Syndicate and the enactment under which the Syndicate was incorporated, viz., the Indian Companies Act can be inspected in Mysore State at the said address.

Contents of the Memorandum, names of signatories, number of shares subscribed for by them, have not been set out here as this is a Prospectus issued more than one year after the date at which the Syndicate was entitled to commence business Members of the public who are desirous of obtaining this infor. mation are cordially invited to make a request to the Syndicate. There are no founders' or deferred or management shares. Likewise, as at present, there are no redeemable preference. shares issued or intended to be issued.

Since the present issue of shares is not the first issue, it is needless to state the minimum subscription which has been exceeded already. The particulars of the amounts payable on application and allotment on each of the new shares now offered for issue have been set out in detail elsewhere in this Prospectus. As this is a subsequent offer of shares, it is necessary to state the amount offered for subscription on previous allotment made within the last two years. The particulars of shares offered, subscribed and allotted during the last two years ending on 31-12-1937 and 31-12-1938 are as stated below:

During the year ending 31-12-1937.

Ordinary Shares.

Issued	Subscribed	Allotted	Nominal value of shares allotted	Paid up amount
5000 shares of Rs. 100/- each	4,840 shares	4,840 shares	Rs. 4,84,000/-	Rs. 1,45,030/-

6% Preference Shares.

Subscribed	Allotted	Nominal value of shares allotted	Paid up amount
3 shares of Rs. 100/- each	3 shares	Rs. 300/-	Rs. 300/-

During the year ending 31-12-1938.

Ordinary Shares.

No ordinary shares were issued or subscribed for during this year.

6% Preference Shares.

Subscribed	Allotted	Nominal value of shares allotted	Paid up amount
1 share of Rs. 100/-	1 share	Rs. 100/-	Rs. 100/-

It is to be noted that 6% preference Shares of the nominal value of Rs. 4,00,000/- divided into 4000 Shares of Rs. 100/- each bearing 6% tax free cumulative dividend were created in the year 1933 and out of these only 2000 shares of the nominal value of Rs. 2,00,000/- were issued prior to 1937. Out of these 2000 shares 1902 shares have been subscribed for, allotted and fully paid up prior to 1937.

No shares have been issued by the Syndicate within the two preceding years or at any time otherwise than for cash, and no debentures have been issued at any time either for cash or otherwise than for cash.

Director's Qualification, Remuneration, Interest and Restrictions on their Powers of Management.

The names, descriptions and addresses of the Directors have been furnished above. The qualification of a Director shall be his holding of shares in the Syndicate that carry on a poll at least fifty votes under Article No. 69 (see below for Art. 69) of the Articles of Association of the Syndicate and it shall be his duty to comply with the provisions of Section 85 of the Indian Companies Act, 1913.

The remuneration of the Directors shall be from Rs. 3/- to Rs. 25/- for each meeting which he attends with travelling allowance, if any, as may be determined by the Board of Directors from time to time. The only contract of remuneration is between the Managing Director and the Syndicate and it is referred to below. Besides this there is no remuneration payable to or claimable by any of the Directors. The contract as to appointment of Managing Director is provided under Article No. 93 of the Articles of Association and is set out in material particulars below.

No restrictions are imposed by the Articles of Association upon the Directors of the Syndicate in respect of their powers of management save and except such restrictions as are imposed upon them by law.

The nature and interest of every Director is to the extent of the shares they hold in the Syndicate. The old managing agency agreement with the firm of Messrs. P. A. Pai Brothers having been terminated on 13-1-1939, there is no other agreement save the agreement with the Managing Director referred to above. No sums have at any time been paid to any Director or any body for promoting the Syndicate or in connection with the promotion or formation of the Syndicate.

Contract.

The only material contract now subsisting is the one appointing and fixing the remuneration of the Managing Director, Dr. T. Madhava Anantha Pai, M. B., & B. S. This contract between him and the Syndicate can be inspected at the Registered Office of the Syndicate, "Mukunda Nivas" at Udipi, during business hours. The date of the contract is 14th January, 1939. Under this contract the said Dr. T. Madhava Pai, son of Anantha Pai, has been appointed as the Managing Director of the Syndicate as per resolution of the Board of Directors passed at their meeting held on 14th January, 1939 on a remuneration of 12½% of the net profits subject to a minimum of Rs. 500/- per mensem. He is also entitled to be paid in addition a monthly car allowance of Rs. 125/- and an allowance of Rs. 5/- for every day on which he is out of Udipi on the business of the Syndicate. This contract has come into operation from 14-1-1939.

Commission and Brokerage.

Commission is permitted to be paid to recognised brokers, approved agents and authorised persons, at the rate of four annas (Re. 0—4—0) for every 10 shares allotted and canvassed for by the concerned person. No other commission will be paid.

No allotment of shares will be made for less than ten (10) shares on each application.

The amount paid as commission during the year ending 31-12-1937 for procuring subscriptions for shares of the Syndicate is Rs. 1869—0—0. This commission was in respect of the new ordinary shares issued in 1937. No commission has been paid during the subsequent year ending on 31-12-1938. No such commission was paid to the Managing Agents.

Voting Rights and Restrictions on Transfer of shares.

The Articles of Association of the Syndicate provide as follows:—

Art. 69: "On a show of hands every member present in person shall have one vote, but no member holding only five per cent preference shares shall be entitled to vote unless he holds at least fifty such shares in his own name on each of which at least half the nominal amount thereof has been paid. On a poll every member shall have one vote for every share held by him whether Ordinary or six per cent preference, and every member holding five per cent preference shares shall have one vote for every fifty such shares held by him on each of which at least half the nominal amount thereof has been paid."

Art. 70: "In the case of joint holders, the vote of the senior who tenders a vote, whether in person or by proxy, shall be accepted to the exclusion of the votes of the other joint holders, and for this purpose seniority shall be determined by the order in which the names stand in the Register of Members."

Art. 71: "A member of unsound mind, or in respect of whom an order has been made by any Court having jurisdiction in lunacy, may vote whether on a show of hands or on a poll, by his committee or other legal guardian, and any such committee or other legal guardian, may, on a poll, vote by proxy."

Art. 72: "No member shall be entitled to be present, speak, or vote at any general meeting unless all calls or other sums presently payable by him in respect of shares in the Syndicate have been paid."

The classes of shares of the Syndicate and the rights and conditions in respect of the capital and dividend attached thereto have already been set out in detail above.

The following restrictions on transfer of shares are contained in the Articles of Association:—

Art. 34: "The Directors may at any time in their absolute and uncontrolled discretion decline to register any proposed transfer of shares made by a member who is indebted to the Syndicate, or in case the proposed Transferee shall be a person of whom the Directors do not approve or shall be considered by them objectionable or the transfer shall be considered as having been made for purposes not conducive to the interests of the Syndicate, and the Directors shall not be bound to specify the grounds upon which the registration of any transfer is declined under this Article; this clause shall also apply to a case where the proposed transferee is already a member. If the Directors refuse to register a transfer of any shares, they shall within two months after the date on which the transfer was lodged with the Syndicate send to the transferee and the transferor notice of the refusal."

Art. 36: "No transfer of shares voluntary or otherwise, shall be recognised as binding on the Syndicate unless the same shall have been approved by the Directors, on such transfer being approved and on payment by the transferee of a registration fee of annas 8 per share, the Board of Directors shall forthwith cause the transferee's name to be substituted for that of the original shareholder and the transferee shall thereupon be deemed a shareholder, and shall be bound by all rules of the Syndicate as if the share or shares transferred to him had been applied for and alloted to him in the first instance provided, however, that no shareholder shall be permitted to transfer a fraction of a share. The above said registration fees of eight annas per share shall apply to Ordinary shares and six per cent Preference shares. In the case of five per cent Preference shares, however, it will be only one anna (Re. 0—1—0) for each such share."

A report by the Auditors of the Syndicate with respect to the profits of the Syndicate in each of the three financial years immediately preceding the issue of this Prospectus and with respect to the rates of the dividends on the classes of shares is set out below:—

Report of the Auditors of the Canara Industrial and Banking Syndicate Ltd., Udipi, as required by Sec. 93. I. A. (i) of the Indian Companies Act. 1913.

"We hereby certify that the annual Profits accruing from the business of the Canara Industrial and Banking Syndicate, Ltd., Udipi during each of the last 3 years have been as follows,

Year ending 31-12-1936	..	Rs	26971—0—8
Year ending 31-12-1937	. . .	Rs	33414-11—2
Year ending 31-12-1938	...	Rs.	49251—3—5
		Total Rs.	1,09,639-15—3

Out of the above profits the Bank has been declaring dividends as follows:—

For the year ending 31-12-1936

6% on 1902 Preference Shares of Rs 100/- each Rs 10857—4—8
10% Dividend & 5% Bonus on 1000 Ordinary
Shares of Rs 100/- each Rs 30/- paid Rs 4500—0—0 Rs. 15,357—4—8

For the year ending 31-12-1937

6% on 1905 Cumulative Preference Shares
of Rs. 100/ each . Rs 11,420—4—10
10% Dividend & 2½% Bonus on the following
Ordinary Shares
1770 Shares of Rs 100/- each Rs 10/. per share paid
3395 Shares of Rs 100/- each Rs 30/- paid.
765 Shares of Rs 100/- each Rs 70/- paid. Rs. 18,349—5—2 Rs. 29769-10—0

For the year ending 31-12-1938

6% on 1906 Cumulative Preference Shares
of Rs 100/- each ... Rs 11,430—13—11
10% Dividend & 5% Bonus on the following Ordinary Shares
1770 Shares of Rs 100/- each Rs. 20/ paid.
3305 Shares of Rs 100/- each Rs 30/- paid.
765 Shares of Rs. 100/- each Rs 70/- paid. Rs 28,171—5—9 Rs 39,602—3—8

We further certify that the Bank has transferred the following amounts to Reserves-

For the year ending 31-12-1936	Rs	7551—12—5
For the year ending 31-12-1937.	Rs.	6720— 0—0
For the year ending 31-12-1938.	Rs.	11430— 0—5
	Total Rs.	25701—12—10

The accounts for the financial year beginning from 1-1-1939 remain to be made up in due course.

The total income and expenditure and the net profit for the 3 years are as follows —

		1936		1937		1938
Total Income	Rs.	1 91,588-11—6	Rs	2 75,952—2—8	Rs	3,38,236-15—4
Interest paid	Rs.	86,629—8—7	Rs	1,04 908—2-10	Rs	1,21,603—1—6
Other expenses	Rs	77,988—2—3	Rs	1,37,629—4—8	Rs.	1,67,379-10—5
Net profit	Rs.	26 971—0—8	Rs.	33,414-11—2	Rs	49,251—3—5

K. Gopalakrishna Rao,
Registered Accountant,
28-10-1939.

M. S. Krishna Rau,
Certified Auditor.
30-10 1939.

AUDITORS.

Applications for Shares.

Applications for shares should be made on the form accompanying this Prospectus and should be sent to the Head Office together with a remittance of the amount payable on application. Share money will be received ***at par*** at all our Offices through whom the share applications also can be sent. Where no allotment is made the deposit will be returned in full and where the number of shares allotted is less than the number applied for, the balance of the deposit will be applied towards the amount remaining payable on the shares allotted and any balance still remaining thereafter will be returned. No allotment of shares will be made for less than ten (10) shares on each application. The shares when issued will be subject to the Memorandum and Articles of Association of the Syndicate, a copy of which can be inspected at the Registered Head Office of the Syndicate as well as all its Branch Offices during office hours

Though the whole of the present issue of the new shares of Rs. 40,00,000/- is offered to the existing members as required under Article No. 6 of the Articles of Association of the Syndicate, arrangements have been made to receive applications from non-members also even now in order to save every delay in the allotment of shares to such persons who are non members as at present. Such applications will be considered for allotment as they are received in priority of time and allotment will be proceeded apace as soon as shares are found available consequent on receipt of intimation from the present members declining the offer made to them or for any other reason. Therefore even non-member applicants stand a chance of the shares being allotted to them even before 30th November, 1939 until which date only the offer of the present issue made to the existing shareholders will be open.

Copies of this Prospectus and Forms of Application for shares may be obtained from the Head Office of the Syndicate and also at all its Branches.

(Sd) T. M. A. PAI
" N. SHRIPAD RAO
" SUBRAO R. HALDIPURKAR
" M. N. PRABHU SIROORKAR
" L. H. PRABHU
" V. V. SHANBHAG
" ಕೆ ಕೃಷ್ಣಾಪೈ ಪಾಂಗ
" B. PADMANABHA PAI
" UPENDRA ANANTH PAI

"MUKUND NIVAS" UDIPI.
15th November, 1939.

ವಾರ್ಸೋ ಪಟ್ಟಣದಿಂದ ತೆರಳಿದ ಪ್ರೇತ ಟ್ರೈನಿನ ಕರುಣ ಕತೆ.

ವಾರ್ಸೋ ಪಟ್ಟಣವು ಜರ್ಮನರ ವಶವಾಗುವ ಮೊದಲು ಪೋಲಿಶ್ ಸರಕಾರದ ಅಧಿಕಾರಿಗಳೇ ಮೊದಲಾದವರು ವಾರ್ಸೋದಿಂದ ತಪ್ಪಿಸಿಕೊಂಡು ಟ್ರೈನೊಂದರಲ್ಲಿ ಹೋಗುವಾಗ ಜರ್ಮನರ ಭೀಕರ ವಿಮಾನಧಾಳಿಯಿಂದ ಪಟ್ಟ ಯಮ ಯಾತನೆಯು ಅವರ್ಣನೀಯವಿದೆ. ಆ ಪ್ರಯಾಣವೇ ಅದೊಂದು ದುರಂತವಾಗಿದ್ದಿತು. ಪ್ರೇತ ಟ್ರೈನೆಂದು ಹೆಸರು ಪಡೆದಿರುವುದು ಈ ಪ್ರಯಾಣಿಕರನ್ನೊಯ್ದ ಟ್ರೈನು ಈ ಟ್ರೈನಿನಲ್ಲಿ ಸಂಚಾರಮಾಡಿ ಈಗ ರುಮೇನಿಯದಲ್ಲಿ ಆಶ್ರಯ ಪಡೆದಿರುವ ಪತ್ರಿಕಾ ವ್ಯವಸಾಯಿಯಾದ ಮಿ. ಜೆ. ಕಾಂಗರು ತನ್ನ ಕರುಣಕತೆಯನ್ನು ಈ ರೀತಿ ವಿವರಿಸಿರುವರು.

ವಾರ್ಸೋದಿಂದ ಹೊರಟ ನಮ್ಮ ಸ್ಪೆಶ್ಯಲ್ ಟ್ರೈನು, ಪೋಲೆಂಡ್ ಮತ್ತು ರುಮೇನಿಯದ ಎಲ್ಲೆಯಲ್ಲಿರುವ ಚಾಲೆಸ್ಜಿಕಿ ಪಟ್ಟಣಕ್ಕೆ ಮುಟ್ಟುವ ಮೊದಲು ಜರ್ಮನ್ ವಿಮಾನಗಳು ಅದರ ಮೇಲೆ 11 ಸಲ ಬೋಂಬೆಸೆದಿದ್ದುವು. ಪೋಲಿಶ್ ಸರಕಾರ ಆಡಳಿತ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಆ ಒಂದೇ ಟ್ರೈನಿನಲ್ಲಿ ತುಂಬಿಸಲಾಗಿತ್ತು. ಅನೇಕರಿಗೆ ಮೃತ್ಯುಬಂಡಿಯಾಗಿ ಪರಿಣಮಿಸಿರುವ ಈ ಟ್ರೈನು ಪ್ರೇತ ಟ್ರೈನೆಂದು ಕರೆಯಲ್ಪಟ್ಟಿತು. ಅದು ಎಲ್ಲೆಲ್ಲಾ ಸುತ್ತಾಡಿ ಕಟ್ಟಕಡೆಗಾದರೂ ನಿಶ್ಚಿತಗುರಿಗೆ ಮುಟ್ಟಲೇ ಇಲ್ಲ.

ಸೆಪ್ಟಂಬರ ತಾ. ೬ರಲ್ಲಿ ವಾರ್ಸೋ ಪಟ್ಟಣದ ಉತ್ತರದ ಕೋಟೆಯನ್ನು ಭೇದಿಸಿ ಜರ್ಮನ್ ಸೇನೆ ಮುಂದೊತ್ತಿದಾಗ, 6ನೇ ತಾರೀಕಿನಲ್ಲಿ ಫಕ್ಕನೆ ಒಂದೇ ಒಂದು ಘಂಟೆಯೊಳಗೆ ಸರಕಾರವು ವಾರ್ಸೋ ಪಟ್ಟಣವನ್ನು ಬಿಟ್ಟು ಹೋಗಬೇಕೆಂದು ನಿಶ್ಚಯಮಾಡಲಾಯಿತು. ಪೋಲಿಶ್ ಸೇನಾ ಮುಖ್ಯಸ್ಥರು ರಣರಂಗದ ನಿಜವಾದ ಪರಿಸ್ಥಿತಿಯನ್ನು ಸರಕಾರಕ್ಕೆ ಆ ಮೊದಲು ತಿಳಿಸಲೇ ಇಲ್ಲ. ಒಮ್ಮೆಯೇ ಎಲ್ಲೆಲ್ಲಿಯೂ ದಿಗಿಲೆದ್ದಿತು. ವಿದೇಶೀ ರಾಯಭಾರಿಗಳು, ಪತ್ರಿಕಾ ವ್ಯವಸಾಯಿಗಳೇ ಮೊದಲಾದವರು ವಾರ್ಸೋ ಪಟ್ಟಣದ ಅತ್ಯಾಧುನಿಕ ರೀತಿಯ ಹೋಟೆಲುಗಳಲ್ಲಿ ಕೂತು, ದೀರ್ಘವಾಗಿ ನಡೆಯಲಿರುವ ಸಂಗ್ರಾಮದ ಕುರಿತು ಚರ್ಚಿಸುತ್ತಿರುವಾಗ ಒಡನೆಯೇ ಪಟ್ಟಣಬಿಟ್ಟು ಹೋಗಬೇಕೆಂಬುದನ್ನು ತಿಳಿದು ಸ್ತಂಭಿತರಾದರು. ತಮ್ಮ ಸಾಮಾನುಗಳನ್ನೆಲ್ಲಾ ಅಲ್ಲಲ್ಲೇ ಬಿಟ್ಟು ಎಲ್ಲರೂ ಹೊರಟರು ನಾನೂ ನನ್ನ ಹೆಂಡತಿಮಕ್ಕಳೂ ಕೂಡಲೇ ಹೊರಟೆವು.

ಎಲ್ಲೆಲ್ಲಿಯೂ ದಿಗಿಲು, ಗದ್ದಲ, ಗೊಂದಲ. ವಿಸ್ಚೂಲ ಸೇತುವೆ ದಾಟಲು ಒಂದು ಘಂಟೆ ಹಿಡಿಯಿತು ನಮಗೆ ಆ ಮೇಲೆ ಪೂರ್ವದ ರೈಲ್ವೇ ಸ್ಟೇಶನಿಗೆ ಹೋಗಿ ಸ್ಪೆಶಲ್ ಟ್ರೈನಿನ ಗಾಡಿಗಳನ್ನು ಹುಡುಕಿ ಕೂತುಕೊಳ್ಳಲು 3 ಘಂಟೆ ತಾಗಿತು ರೈಲ್ವೇ ಸ್ಟೇಶನಿನಲ್ಲಿ ಗೊಂದಲವೇ ಗೊಂದಲ! ತಾಯಂದಿರು ಕತ್ತಲೆಯಲ್ಲಿ ಮಕ್ಕಳಿಗಾಗಿ ಕೂಗುತ್ತಿದ್ದರು. ಗಂಡಂದಿರು ಹೆಂಡಿರಿಗಾಗಿ ಬೊಬ್ಬಿಡುತ್ತಿದ್ದರು ಮಕ್ಕಳು ಹೆತ್ತವರಿಗಾಗಿ ಅಳುತ್ತಿದ್ದುವು. ಎಲ್ಲಿ ಇನ್ನೊಮ್ಮೆ ಜರ್ಮನ್ ವಿಮಾನಗಳು ಹಾರಿ ಬರುವವೋ ಎಂದು ಎಲ್ಲರೂ ದಿಗಿಲುಗೊಂಡಿದ್ದರು. ಕೆಲವೇ ಘಂಟೆಗಳ ಮೊದಲು ಈ ಸ್ಟೇಶನಿನ ಮೇಲೆ ವೈರಿ ವಿಮಾನಗಳು ಧಾಳಿ ನಡಿಸಿ ಅನೇಕರು ಕೊಲ್ಲಲ್ಪಟ್ಟಿದ್ದರು.

ಪೋಲಿಶ್ ಸರಕಾರದ ಬೇರೆ ಬೇರೆ ಖಾತೆಗಳ ಮಂತ್ರಿಗಳು ಮತ್ತು ಅಧಿಕಾರಿಗಳೆಲ್ಲಾ 14 ಗಾಡಿಗಳಲ್ಲಿ ತುಂಬಿದ್ದರು ಲುಬ್ಲಿನನ್ನು ಸರಕಾರದ ಕೇಂದ್ರವಾಗಿ ಮಾಡಬೇಕೆಂದು ಆರಂಭದ ಸಿದ್ಧಾಂತವಾಗಿತ್ತು. ಆದರೆ ಡೆಬ್ಲಿನಿನ ರೈಲ್ವೇ ಲೈನನ್ನು ಜರ್ಮನ್ ವಿಮಾನಗಳು ಬೋಂಬೆಸೆದು ಮುರಿದು ಹಾಕಿದುದರಿಂದ ನೆಟ್ಟಗೆ ಲುಬ್ಲಿನಿಗೆ ಹೋಗಲಾಗದೆ ಬಹಳ ಸುತ್ತಾಗಿ ಹೋಗಬೇಕಿತ್ತು. ಇದರಿಂದ ಟ್ರೈನಿನೊಳಗಿದ್ದ ಸುಮಾರು 1500 ಮಂದಿ, ಗಂಡಸರು, ಹೆಂಗಸರು ಮಕ್ಕಳೆಲ್ಲಾ ಅವರ್ಣನೀಯ ಯಾತನೆಗೊಳಗಾಗಬೇಕಾಯಿತು.

ವಾರ್ಸೋದಿಂದ 60 ಮೈಲು ದೂರ ಹೋಗುವಷ್ಟರಲ್ಲಿಯೇ ಜರ್ಮನ್ ವಿಮಾನಗಳು ಹಾರಿ ಬಂದು ಟ್ರೈನಿನ ಮೇಲ್ಭಾಗದಲ್ಲಿ ಬಹಳ ಕೆಳಗೆ ಹಾರಾಡಿದವು. ಪ್ರಯಾಣಿಕರಲ್ಲುಂಟಾದ ದಿಗಿಲನ್ನು ವಿವರಿಸಲು ಸಾಧ್ಯವಿಲ್ಲ. ಕೆಲವರು ಗಾಡಿಗಳಿಂದ ಹೊರ ಹಾರಿ ಗದ್ದೆ, ಕಾಡುಗಳಿಗೋಡಿ ಆಶ್ರಯ ಪಡೆದರು. ಆದರೆ ವಿಮಾನಗಳು ಜರೆಮ್ಪ ಎಂಬ ಜಂಕ್ಷನ್ ಸ್ಟೇಶನಿಗೋಡಿ ನಮ್ಮ ಟ್ರೈನನ್ನು ಕಾದು ನಿಂತವು 20 ನಿಮಿಷಗಳ ನಂತರ ಟ್ರೈನು ಅಲ್ಲಿಗೆ ಮುಟ್ಟಿದೊಡನೆ ಪ್ರತ್ಯಕ್ಷ ರೌರವ ನರಕವೇ ನಮ್ಮನ್ನಿದಿರಿಸಿತು. 3 ಜರ್ಮನ್ ವಿಮಾನಗಳು ಫಕ್ಕನೇ ಹಾರಿ ಬಂದು ಒಂದೇ ಸವನೆ 50 ಬೋಂಬುಗಳನ್ನು ಸುರುವಿದುವು. ಅವುಗಳಲ್ಲಿ ಹಲವು ಕಿಚ್ಚೆಬ್ಬಿಸುವ ಬೋಂಬುಗಳಿದ್ದುವು. ಪ್ರಯಾಣಿಕರಿಗೆ ಆಶ್ರಯ ಪಡೆಯಲು ಅವಕಾಶವೇ ಇರಲಿಲ್ಲ ಗಂಡಸರು, ಹೆಂಗಸರು ಮಕ್ಕಳೆಲ್ಲಾ ಓಡಿ ಹೋಗಿ ಕೆಲವರು ಹತ್ತಿರದ ಮರಗಳನ್ನಪ್ಪಿ ಹಿಡಕೊಂಡರು ಇನ್ನು ಕೆಲವರು ಬಯಲು ಗದ್ದೆಗಳಲ್ಲಿ ಮೊಣಕಾಲೂರಿ ಪ್ರಾರ್ಥಿಸ ತೊಡಗಿದರು. ಮತ್ತೂ ಭೀಕರ ಬೋಂಬುಗಳು ಇದೇ ಜಂಕ್ಷನಿನ ಮೇಲೆ ಸುರಿಸಲ್ಪಟ್ಟವು. ಅವುಗಳ ಸ್ಫೋಟ ಮತ್ತು ಹೆಂಗಸು ಮಕ್ಕಳ ದಿಗಿಲಿನ ಮೊರೆ, ಇವುಗಳಲ್ಲಿ ಯಾವುದು ಹೆಚ್ಚು ಕಂಗೆಡಿಸುವಂಥಾದ್ದೆಂದು ನನಗೆ ಹೇಳಲು ಸಾಧ್ಯವಿಲ್ಲ

ಇದೇ ಸ್ಟೇಶನಿನ ಮೇಲೆ ಈ ಮೊದಲೊಮ್ಮೆ ಬೋಂಬೆಸೆಯಲ್ಪಟ್ಟಿದ್ದಾಗ ಉಂಟಾದ ಸುರಂಗವೊಂದರಲ್ಲಿ ತಾಯಿಯೊಬ್ಬಳು ತನ್ನ ಮಗುವನ್ನಪ್ಪಿ ಹಿಡಿದು ಬಿದ್ದುಕೊಂಡಿದ್ದಳು. ವಾರ್ಸೋದಲ್ಲಿ 40 ಸಲ ವಿಮಾನಧಾಳಿಯನ್ನು ಕಂಡಿದ್ದ ನನ್ನ 4 ವರ್ಷದ ಮಗನು ನನ್ನ ಮೊಣಕಾಲನ್ನಪ್ಪಿ ಹಿಡಕೊಂಡು ಅಳುತ್ತಾ, "ಅಪ್ಪಾ, ಸ್ವಲ್ಪ ಹೇಳಬಾರದೆ ಅವರಿಗೆ ಬೋಂಬೆಸೆಯುವುದನ್ನು ನಿಲ್ಲಿಸಬೇಕೆಂದು?" ಎಂದು ಕೇಳಿಕೊಳ್ಳುತ್ತಿದ್ದನು. ಹೆಚ್ಚೆಚ್ಚು ಭೀಕರವಾಗಿ ಪುನಃಪುನಃ ಈ ಸ್ಟೇಶನಿನ ಮೇಲೆ ಬೋಂಬೆಸಿತ ನಡೆಯಿತು. ಈ ಮೊದಲು 30 ವಿಮಾನಧಾಳಿಗಳನ್ನು ಕಂಡಿದ್ದ ಸ್ಟೇಶನ್ ಮಾಸ್ಟರನು ಶಾಂತನಾಗಿ ತನ್ನ ಕರ್ತವ್ಯನಿರತನಾಗಿದ್ದು, ಇನ್ನೆಲ್ಲಿ ವಿಮಾನಗಳು ಹಾರಿ ಬರುವವೋ ಎಂದು ಅತ್ತಿತ್ತ ಹಾರಾಡಿ ಆಕಾಶವನ್ನು ಪರೀಕ್ಷಿಸುತ್ತಿದ್ದ ನನ್ನ ಮಗನ ಮೇಲೆ ಕಣ್ಣಿಟ್ಟುಕೊಂಡಿದ್ದನು. ನನ್ನ ಮಗನು ಈಗ ರುಮೇನಿಯ ಸರಕಾರದ ಉದಾರಾಶ್ರಯದಲ್ಲಿ ಸುರಕ್ಷಿತವಾಗಿರುವನಾದರೂ ರಾತ್ರಿ ಸ್ವಸ್ಥ ಮಲಗಲಾರದವನಿದ್ದಾನೆ. ಆಗಾಗ ಎದ್ದು ದಿಗಿಲುಗೊಂಡು ವಿಮಾನಗಳು ಬರುತ್ತಿವೆಯೋ ಒಂದು ಪ್ರಶ್ನಿಸುವನು.

ಹೇಗಾದರೂ ನಮ್ಮ ಟ್ರೈನು ಜರೆಮ್ಪಾ ಸ್ಟೇಶನನ್ನು ಬಿಟ್ಟು ಹೊರಟಿತು. ಆದರೆ ಅದರಲ್ಲಿದ್ದ ಪ್ರಯಾಣಿಕರ ಪೈಕಿ ಕೆಲವರು ಅದೃಶ್ಯರಾಗಿದ್ದರು. ಕೆಲಮಂದಿ ಪ್ರಾಮುಖ್ಯ ಅಧಿಕಾರಿಗಳು ಕೂಡಾ ಮಾಯವಾಗಿದ್ದರು. ಅವರೆಲ್ಲಿ ಹೋಗಿರುವರೆಂಬ ಪತ್ತೆಯೇ ಇಲ್ಲ. ಇಷ್ಟರಲ್ಲೇ ನಮ್ಮ ಅಗ್ನಿಪರೀಕ್ಷೆಯು ಮುಗಿಯಲಿಲ್ಲ ಪುನಃ ಜರ್ಮನ್ ವಿಮಾನಗಳು ನಮ್ಮ ಬೆಂಬತ್ತಿ ಬೋಂಬೆಸೆದುವು. ಪ್ರತಿ ಸಲ ಬೋಂಬೆಸೆಯಲ್ಪಡುವಾಗಲೂ ಪ್ರಯಾಣಿಕರು ಟ್ರೈನಿನಿಂದ ಹೊರ ಹಾರಿ ಹತ್ತಿರದ ಗದ್ದೆ, ತೋಟ, ಕಾಡು, ಹೊಂಡ, ಕೊಳ, ತೋಡುಗಳಲ್ಲಿ ಆಶ್ರಯಪಡುತ್ತಿದ್ದರು. ಆಮೇಲೆ ಕೆಲವರು ಹಿಂದೆ ಬರುತ್ತಿದ್ದೇ ಇಲ್ಲ. ನನ್ನೊಂದಿಗಿದ್ದ ಪೋಲೆಂಡಿನ ನ್ಯಾಯಖಾತೆಯ ಪ್ರಮುಖ್ಯಾಧಿಕಾರಿಯೊಬ್ಬರು ಒಮ್ಮೆ ತನ್ನ ಪತ್ನಿಯೊಂದಿಗೆ ಹೊರ ಹೋದವರು ಹಿಂದೆ ಬರಲೇ ಇಲ್ಲ. ಈ ಸ್ಮಶಾನಯಾತ್ರೆಗಿಂತಲೂ ಎಲ್ಲಿಯಾದರೂ ಹಳ್ಳಿಗೆ ಹೋಗಿ ಬದುಕಿಕೊಳ್ಳುವುದೇ ಲೇಸೆನಿಸಿತವರಿಗೆ.

ಪ್ರತಿಸಲದ ಬೋಂಬೆಸೆತದ ಪರಿಣಾಮವಾಗಿ ಟ್ರೈನಿನ ಪ್ರಯಾಣಿಕರ ಸಂಖ್ಯೆಯು ಕಡಿಮೆಯಾಗುತ್ತಾ ಹೋಗುತ್ತಿತ್ತು. ಅದರಲ್ಲಿದ್ದವರು ಧೃತಿಗೆಟ್ಟುಹೋಗಿದ್ದರು. ಸ್ತ್ರೀಯರು ಮಕ್ಕಳ ಅವಸ್ಥೆಯನ್ನು ಹೇಳತೀರದು. ಆಹಾರ ಮತ್ತು ನೀರನ್ನು ಪಡೆಯುವುದೇ ಅಸಾಧ್ಯವಾಗಿತ್ತು. ಕೆಲವರಿಗೆ ಬೋಧೆತಪ್ಪಿಹೋಗಿತ್ತು. ಭೀಕರ ಬೋಂಬೆಸೆದ ಭೀತಿಯಿಂದ ಕಂಗೆಟ್ಟು ವಿವರ್ಣವಾಗಿ, ಬೋಂಬಿನಿಂದ ತಪ್ಪಿಸಿಕೊಳ್ಳಲು ಕೂಗುತ್ತಾ ಓಡಾಡುವ ಚಿಕ್ಕ ಮಕ್ಕಳ ದೃಶ್ಯವು ಅತ್ಯಂತ ಕರುಣಾಜನಕವಿದ್ದಿತು. ಅವರ ಕೂಗು ಇನ್ನೂ ನನ್ನ ಕರ್ಣಕುಹರಗಳಲ್ಲಿ ಧ್ವನಿಸುತ್ತಿದೆ.

4 ದಿವಸಗಳನಕ ಟ್ರೈನು ಒಂದು ಸ್ಥಳದಿಂದ ಇನ್ನೊಂದಕ್ಕೆ ಅಡ್ಡಾಡಿತು. ಲುಬ್ಲಿನಿನ ಮೇಲೆ ಪ್ರಚಂಡ ವಿಮಾನಧಾಳಿ ನಡೆದುದರಿಂದ ಅಲ್ಲಿಗೆ ಹೋಗಲು ಸಾಧ್ಯವಾಗಲಿಲ್ಲ. ಹಲವು ಪಟ್ಟಣಗಳಿಗೆಲ್ಲಾ ಹೋಗಿ ಆಶ್ರಯಪಡೆಯಲಾಗದೆ ಟ್ರೈನು ಕಡೆಗೆ ರುಮೇನಿಯದ ಎಲ್ಲೆಯ ಪಟ್ಟಣವಾದ ಜೆಮನಿಕಿಗೆ ಮುಟ್ಟಿತು. ಇಲ್ಲಿ ಜರ್ಮನ್ ವಿಮಾನಗಳ ಬೋಂಬುಗಳಿಂದ ಸ್ವಲ್ಪ ಬಿಡು ದೊರೆಯಿತು. ಆದರೆ ಸ್ವಲ್ಪ ಸಮಯದಲ್ಲಿ ಅಲ್ಲಿಗೂ ಅವುಗಳು ಹಾರಿಬಂದು ಬೋಂಬೆಸೆದು 31 ಮಂದಿ ಕೊಲ್ಲಲ್ಪಟ್ಟರು. ಹೆಚ್ಚಿನ ಪ್ರಾಣಹಾನಿಮಾಡಿದ ಬೋಂಬೊಂದು ನಾನಿದ್ದ ಕಟ್ಟಡದ ಬಳಿಗೇ ಬಿದ್ದಿತು. ಹಲವರು ಬೇರೆ ವಾಹನವಿಲ್ಲದೆ ಎತ್ತಿನ ಗಾಡಿಗಳಲ್ಲಿ ಕೂತು ಜೆಮನಿಕಿನಿಂದಲೂ ಮತ್ತೂ ದೂರ ಹೋದರು. ನಾವೂ ಅವರನ್ನನುಸರಿಸಿದೆವು. 3 ದಿನಗಳ ವರೆಗೆ ನಾವು, ಮುಖ್ಯ ರಸ್ತೆಗಳನ್ನು ಬಿಟ್ಟು ಉಪರಸ್ತೆಗಳಲ್ಲಿ ಚಲಿಸಿದೆವು. ಈ ಉಪರಸ್ತೆಗಳಲ್ಲಿ ಕೂಡ ವಿಮಾನಗಳು ನಮ್ಮನ್ನನುಸರಿಸಿದುವು. ಆದರೆ ಬೋಂಬೆಸೆಯಲೆತ್ನಿಸಲಿಲ್ಲ. ಜರ್ಮನರ ಧಾಳಿಗೆ ಬೆದರಿ, ಎಲ್ಲಿಗೆ ಹೋಗುವುದೆಂದು ಗೊತ್ತುಗುರಿಯಿಲ್ಲದೆ ಓಡಾಡುತ್ತಿರುವ ಸಾವಿರಾರು ಮಂದಿ ನಿರಾಶ್ರಿತರು ನಮಗೆ ಸಿಕ್ಕಿದರು. ಹಲವು ಎಲ್ಲೆ ಪ್ರದೇಶಗಳು ಫಕ್ಕನೆ ಬಂದುಮಾಡಲ್ಪಟ್ಟುದರಿಂದ ಇವರು ಗೂಡಿನೊಳಗೆ ಸಿಕ್ಕಿದ ಹೆಗ್ಗಣಗಳಂತೆ ಓಡಾಡುತ್ತಿದ್ದರು. ಸಿಲೇಸಿಯ ಮತ್ತು ಗೆಲೀಸಿಯಗಳಿಂದ 500 ಮೈಲು ನಡೆದುಬಂದವರಿದ್ದರು. ಅವರು ಕೇವಲ ಅಸ್ಥಿಪಂಜರಗಳಂತಿದ್ದು ಮಾನವ ರೂಪ ಮತ್ತು ಆಕಾರವನ್ನೆಲ್ಲಾ ಕಳಕೊಂಡಿದ್ದರು.

THULUNAD BANK
OF SUPPLY AGENCY LIMITED,
ESTD.] UDIPI. [1933.
INTEREST ON CURRENT ACCOUNT ALLOWED
at 3% p. a.
All kinds of Banking business transacted
Write for particulars to:—
The Managing Director,

ಜೆಕೊಸ್ಲೊವಿಯದಲ್ಲಿ ಬಂಡಾಯ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ.

ಮಹಾತ್ಮರ ಮುಂದಿನ ಧೋರಣೆಯೇನು?

ಜೆಕೊಸ್ಲೊವಿಯದಲ್ಲಿ ಬಂಡಾಯ 50,000 ಮಂದಿಯ ದಸ್ತಗಿರಿ

ಜರ್ಮನಿಯ ಎದುರಾಗಿ ಜೆಕೊಸ್ಲೊವಿಯದಲ್ಲೆಲ್ಲಾ ಬಂಡಾಯವೆದ್ದಿರುವುದು. ಬೊಹೇಮಿಯ ಮತ್ತು ಮೊರಾವಿಯಗಳಲ್ಲಿ 50,000 ಮಂದಿಯ ವರೆಗೆ ದಸ್ತಗಿರಿ ಮಾಡಲ್ಪಟ್ಟಿರುವರು. ಇದೇ ತಾ. 19ರಲ್ಲಿ ನಾಝಿ ಬ್ಲೇಕ್‌ಗಾರ್ಡ್ ಪೋಲೀಸರು ಸ್ಟೆಲಾ ಮತ್ತು ಮಸಾರಿಕ್ ಕೊಲೇಜುಗಳಿಗೆ ಹೊಕ್ಕು ಹಲವು ವಿದ್ಯಾರ್ಥಿಗಳನ್ನು ಕೈದು ಮಾಡಿ ಕೊಂಡೊಯ್ದಿರುವರು. ಅನಂತರ ಜರ್ಮನ್ ಸೈನಿಕರು ಮೆಡಿಕಲ್ ಮತ್ತು ಲೋ ಕೊಲೇಜುಗಳಿಗೆ ಪ್ರವೇಶಿಸಿ ಎಲ್ಲಾ ವಿದ್ಯಾರ್ಥಿಗಳನ್ನೂ ಪ್ರೊಫೆಸರರನ್ನೂ ದಸ್ತಗಿರಿ ಮಾಡಿರುವರು. ಕೆಲ ಮಂದಿ ರಾಜಕೀಯ ಮುಖಂಡರುಗಳೂ ಕೈದು ಮಾಡಲ್ಪಟ್ಟಿರುವರೆಂಬ ಸುದ್ದಿ. ಒಂದು ಮಿಲ್ಯ ಜೆಕ್ ಸೇನೆಯನ್ನು ಸಂಗ್ರಹಿಸುವುದಕ್ಕಾಗಿ ಅನುಜ್ಞೆ ಹೊರಡಿಸಲೊಪ್ಪದುದಕ್ಕಾಗಿ ಜೆಕ್ ಪ್ರೆಸಿಡೆಂಟರಿಂದ ಡಾಕ್ಟರ್ ಹಾಜಾರವರನ್ನು ಕೂಡಾ ನಿರ್ಬಂಧದಲ್ಲಿರಿಸಲಾಗಿದೆಯೆಂದು ಸುದ್ದಿಯುಂಟಾಗಿದೆ. ಗಲಾಟೆಗಳೇಳದಂತೆ ಪ್ರೇಗ್ ಪಟ್ಟಣದಲ್ಲಿ ಅಲ್ಲಲ್ಲಿ ಪೋಲೀಸರು ಮತ್ತು ಸೈನಿಕರು ಬಂದೋಬಸ್ತು ನಡಿಸುತ್ತಿರುವರು. ಅಕ್ಟೋಬರ ತಾ 28ರಲ್ಲಿ ಜೆಕ್ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಗಲಾಟೆಯೆದ್ದು ಹಬ್ಬಿದುದೇ ಈ ದಸ್ತಗಿರಿಗೆ ಕಾರಣವೆಂದು ನಂಬಲಾಗಿದೆ.

ಹಿಟ್ಲರರ ವಿರುದ್ಧ ಕ್ರಾಂತಿ

ಹಿಟ್ಲರರ ಅತಿದೊಡ್ಡ ವೈರಿಯೆನಿಸುವ ಹೆರ್ ಒಟ್ಟೋ ಸ್ಟ್ರಾಸ್ಸರರು ಹಿಟ್ಲರರ ವಿರೋಧವಾಗಿ ಕ್ರಾಂತಿಯೆಬ್ಬಿಸಲು ಜರ್ಮನಿಯು ಬೇಗನೆ ಸಿದ್ಧವಾಗುವುದೆಂದು ಅಭಿಪ್ರಾಯಪಿತ್ತಿರುವರು. ಮ್ಯೂನಿಚ್ ಬೋಂಬು ಸ್ಫೋಟದ ಅನಂತರ 1 ದಿವಸಗಳೊಳಗೆ ಸ್ಟ್ರಾಸ್ಸರರು ಸ್ವಿಸರ್ಲೇಂಡ್ ಬಿಟ್ಟು ಪೆರಿಸಿಗೆ ಹೋಗಬೇಕಾಗಿರುವುದು. ನಾಝಿಗಳು ಸ್ಟ್ರಾಸ್ಸರರ ಸಹೋದರರನ್ನು ಕೊಂದಂದಿನಿಂದ ಅವರು ಹಿಟ್ಲರರ ಬದ್ಧ ವಿರೋಧವಾಗಿ ತೀವ್ರ ಚಳವಳ ನಡಿಸುತ್ತಾ ಬಂದಿರುವರು. ಜರ್ಮನಿಯಲ್ಲಿ ಕ್ರಾಂತಿಯೇಳಬೇಕಾದರೆ ಪ್ರಥಮವಾಗಿ ಇನ್ನೂ ಹಿಟ್ಲರರ ಮೇಲೆ ವಿಶ್ವಾಸವುಳ್ಳವರಿಗೆ ಯುದ್ಧದ ಭೀಷಣತೆಯು ಚೆನ್ನಾಗಿ ಅನುಭವಕ್ಕೆ ಬರಬೇಕು. ಎರಡನೇದಾಗಿ ನಾಝಿಗಳು ಯುದ್ಧದಲ್ಲಿ ಅಪಜಯ ಹೊಂದಬೇಕು. ಮೂರನೇದಾಗಿ ಜರ್ಮನ್ ಜನತೆಯು ತೀವ್ರ ಸಂಕಷ್ಟಕ್ಕೀಡಾಗಬೇಕು. 1910ನೇ ಎಪ್ರಿಲ್ ತಿಂಗಳೊಳಗೆ ಜರ್ಮನಿಯಲ್ಲಿ ಕ್ರಾಂತಿ ಏಳುವುದೆಂದು ಸ್ಟ್ರಾಸ್ಸರರ ಅಭಿಮತ.

ಕಮಲ ನೆಹರು ಸ್ಮಾರಕ ಆಸ್ಪತ್ರೆ ಧನಸಹಾಯಕ್ಕಾಗಿ ವಿನಂತಿ

ಇದೇ ತಾ. 19ರಲ್ಲಿ ಅಲಹಾಬಾದಿನಲ್ಲಿ, 30,000 ಜನಸಮುದಾಯದ ಸಮಕ್ಷಮದಲ್ಲಿ ಮಹಾತ್ಮಗಾಂಧಿಯವರು ಕಮಲ ನೆಹರು ಆಸ್ಪತ್ರೆಗೆ ಮೂಲೆಗಲ್ಲನ್ನಿಡುವ ಸಮಾರಂಭ ಜರಗಿಸಿದರು. ಬೊಂಬಾಯಿಯ ಡಾಕ್ಟರ್ ಜೀವರಾಜ ಮೇಧಾರವರು ಈ ಆಸ್ಪತ್ರೆಯ ಇತಿಹಾಸವನ್ನೋದಿಹೇಳಿ, ಈ ಸ್ಮಾರಕದ ಟ್ರಸ್ಟಿಗಳು, ರೂ. 5 ಲಕ್ಷ ಸಂಗ್ರಹಿಸುವ ನಿರ್ಧಾರಮಾಡಿರುವುದಾದರೂ ಈಗ ಕೇವಲ ರೂ 2,50,000 ಒಟ್ಟಾಗಿರುವುದೆಂದೂ, ಇದು ಆಸ್ಪತ್ರೆ ಕಟ್ಟಡಗಳಿಗೆ ಸಾಕಾಗಬಹುದಾದರೂ ಅದನ್ನು ನಡಿಸಲು ಏನೂ ಹಣ ಉಳಿಯುವಂತಿಲ್ಲೆಂದೂ ಸೂಚಿಸಿದರು. ಗಾಂಧಿಜಿಯವರು ಇಡೀ ದಿನ ನಡೆಯುತ್ತಿದ್ದ ಹವನ ಸಂಸ್ಕಾರದಲ್ಲಿ ಕೂಡಾ ಭಾಗವಹಿಸಿ ಆ ವೇಲೆ ಮೂಲೆಗಲ್ಲನ್ನು ಸ್ಥಾಪಿಸಿದರು. ಆ ಮೊದಲು ಪಂಡಿತ ಮಾಲವೀಯರಿಂದ ಬಂದ ಸಂದೇಶವನ್ನೋದಿಹೇಳಿದರು. "ದಕ್ಷಿಣ ಆಫ್ರಿಕದಿಂದ ಬಂದ ಮೇಲೆ ನಾನು ಕಮಲ ನೆಹರುಗಳ ಪರಿಚಯವುಳ್ಳವನಾದೆ. ಅವರು ಅಸಾಧಾರಣ ಮಹಿಳೆಯು! ಅವರು ಪತಿಸೇವಾ ಪರಾಯಣೆಯಾಗಿದ್ದಂತೆಯೇ ದೇಶಸೇವಾನಿಷ್ಠೆಯೂ ಆಗಿದ್ದರು. ತತ್ವನಿಷ್ಠ ಉದಾತ್ತ ಆತ್ಮ ಅವರದು. ಆಡಂಬರವಾಗಲಿ, ಲಾಭ, ಮತ್ತು ಕಟಾಕ್ಷಕ್ಕಾಗಿ ಅವರೇನೂ ಮಾಡುತ್ತಿದ್ದಿಲ್ಲ. ಕಾಯಿದೆಭಂಗ ಚಳವಳದ ಸಂದರ್ಭದಲ್ಲಿ ಕಮಲ ನೆಹರುಗಳ ಹೃದಯವು ಪೀಡಿತ ಜನತೆಯ ಕಡೆಗೆ ಹರಿಯಿತು. ಆಗ ಅವರು ಕಾಂಗ್ರೆಸ್ ಆಸ್ಪತ್ರೆಯ ಕುರಿತು ಆಸಕ್ತಿವಹಿಸಿದರು. ಬೊಂಬಾಯಿಯಲ್ಲಿ ನಾನವರನ್ನು ಕಡೆಯ ಸಲ ಕಂಡಾಗ, ಅಲಹಾಬಾದಿನ ಕಾಂಗ್ರೆಸ್ ಆಸ್ಪತ್ರೆಯ ಯೋಜನೆಯನ್ನು ಪರಿಪೂರ್ಣಗೊಳಿಸಬೇಕೆಂಬ ವಚನವನ್ನು ನನ್ನಿಂದ ಅವರು ಪಡಕೊಂಡಿದ್ದರು. ಆದುದರಿಂದ ಈ ಕೆಲಸವು ನನ್ನ ಪವಿತ್ರ ಕರ್ತವ್ಯವಾಗಿದೆ. ಅದಕ್ಕಾಗಿಯೇ ನಾನು ಅಲಹಾಬಾದಿಗೆ ಬಂದುದಾಗಿದೆ. ನಾನು ನಾಳೆಯೇ ಅಲಹಾಬಾದ್ ಬಿಟ್ಟು ಹೋಗುತ್ತಿದ್ದೆ. ಆದರೆ ಜವಾಹರಲಾಲ್ ನೆಹರುಗಳು ಒತ್ತಾಯ ಮಾಡಿದುದರಿಂದ ನಿಲ್ಲಬೇಕಾಗಿದೆ. ಈ ಆಸ್ಪತ್ರೆಗೆ ಬೇಕಷ್ಟು ಹಣ ಇನ್ನೂ ಸಂಗ್ರಹವಾಗಿರುವುದಿಲ್ಲ. ಅದು ಸಂಯುಕ್ತಪ್ರಾಂತ್ಯಕ್ಕಾಗಿರುವ ಆಸ್ಪತ್ರೆ ಮಾತ್ರವಲ್ಲ, ಇಡೀ ದೇಶದ ಆಸ್ಪತ್ರೆ. ಆದುದರಿಂದ ಎಲ್ಲರೂ ಅದಕ್ಕೆ ಹಣಸಹಾಯ ಮಾಡಬೇಕೆಂಬುದೇ ಗಾಂಧಿಯವರ ಭಾಷಣದ ಸಾರಾಂಶ. ಈ ವಾರದಲ್ಲಿ ಹಣ ಸಹಾಯಮಾಡಿದವರ ಪೈಕಿ ಸಂಯುಕ್ತ ಪ್ರಾಂತದ ಮಂತ್ರಿಗಳಾಗಿದ್ದ ಡಾಕ್ಟರ್ ಕಟ್ಜು ರವರು ರೂ 5000 ಕೊಟ್ಟಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ
ಮಹಾತ್ಮರ ಮುಂದಿನ ಧೋರಣೆಯೇನು ?

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ 3 ದಿವಸಗಳ ಸಭೆಯು ಇದೇ ತಾ. 19ನೇ ಅಪರಾಹ್ನ ಘಂಟೆ 3ಕ್ಕೆ ಆನಂದಭವನದಲ್ಲಿ ಡಾಕ್ಟರ್ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಸೇಟ್ ಜಮನಾಲಾಲ್ ಬಜಜರ ಹೊರತು ಇತರ ವರ್ಕಿಂಗ್ ಕಮಿಟಿ ಮೆಂಬರರೆಲ್ಲರೂ ಹಾಜರಿದ್ದರು. ಮಹಾತ್ಮಾಗಾಂಧಿ, ಶ್ರೀ ಗೋಪಾಲಾಚಾರ್ಯರು, ಪಂಡಿತ ಪಂತರು ಮತ್ತು ಪಂಡಿತ ಶುಕ್ಲರವರು ಕೂಡಾ ಹಾಜರಿದ್ದರು. ಮಹಾತ್ಮ ಗಾಂಧಿ ಮತ್ತು ಡಾಕ್ಟರ್ ರಾಜೇಂದ್ರ ಪ್ರಸಾದರು, ಡಿಲ್ಲಿಯಲ್ಲಿ ವೈಸರಾಯರನ್ನು ಮತ್ತು ಮಿ. ಜಿನ್ನರನ್ನು ಕಂಡು ಮಾತಾಡಿದುದೇನೆಂಬುದನ್ನೆಲ್ಲಾ ವಿವರಿಸಿ ಹೇಳಿದರು. ವೈಸರಾಯರು ತನ್ನ ರಾಜಿಯ ಪ್ರಯತ್ನವನ್ನು ನಡಿಸುತ್ತಿರುವ ವರೆಗೆ ಕಾಯಿದೆಭಂಗ ಚಳವಳ ಹೂಡಲು ಅವಸರಪಡಬಾರದೆಂಬುದೇ ಗಾಂಧಿಜಿಯವರ ಅಭಿಮತ. ತೀವ್ರಗಾಮಿಗಳಾರೂ ಅಸಹಿಷ್ಣುತೆ ತಾಳಬಾರದು. ಕಾಯುವುದರಲ್ಲಿಯೂ ಬಲವಿದೆ ಮತ್ತು ಪ್ರಯೋಜನವಿದೆಯೆಂದು ಮಹಾತ್ಮರು ವಿನಂತಿಮಾಡಿರುವರು. ಕಾಯಿದೆಭಂಗ ಹೂಡುವ ಮೊದಲು ಯಾವ ಕಾರ್ಯಕ್ರಮ ಕೈಕೊಳ್ಳಬೇಕೆಂಬುದನ್ನು ವರ್ಕಿಂಗ್ ಕಮಿಟಿಯ ಮುಂದೆ ವಿವರಿಸಿದರು. ತಾ. 20 ಗಾಂಧಿಯವರ ಮೌನದ ದಿನವಾದುದರಿಂದ ಪ್ರಾಮುಖ್ಯ ಸಂಗತಿಗಳನ್ನು ವರ್ಕಿಂಗ್ ಕಮಿಟಿಯವರು ಆಲೋಚಿಸುವಂತಿಲ್ಲ. ತಾ 21ರಲ್ಲಿ ಮಹಾತ್ಮರು ತನ್ನ ಭಾವನೆಗಳನ್ನೆಲ್ಲಾ ಮನಬಿಚ್ಚಿ ವರ್ಕಿಂಗ್ ಕಮಿಟಿಯ ಮುಂದಿಡುವರೆಂದು ನಿರೀಕ್ಷಿಸಲಾಗಿದೆ. ಆದರೆ ಅವರು ಸೂಚಿಸುವ ಹೊಸ ಕಾರ್ಯವಿಧಾನವೇನೆಂದು ಯಾರಿಗೂ ತಿಳಿದಿರುವುದಿಲ್ಲ. 1931ರಂತೆ ಈ ಸಂದರ್ಭದಲ್ಲೂ ಮಹಾತ್ಮಾ ಗಾಂಧಿಯವರನ್ನು ಕಾಂಗ್ರೆಸಿನ ಸರ್ವಾಧಿಕಾರಿಯಾಗಿ ನೇಮಿಸುವ ಆಲೋಚನೆ ನಡೆದಿದ.

ಮಹಾತ್ಮರು ಕಮಲ ನೆಹರು ಆಸ್ಪತ್ರೆಗೆ ಮೂಲೆಗಲ್ಲನ್ನಿಡುವ ಸಂದರ್ಭದಲ್ಲಿ ಮಾಡಿದ ಹೃದಯಸ್ಪರ್ಶಿ ಭಾಷಣದಲ್ಲಿ ಹೊರಗೆ ಬಿದ್ದ ಕೆಲವು ಮಾತುಗಳು ಕಾಂಗ್ರೆಸ್ ಮುಖಂಡರನ್ನು ಆಲೋಚನೆಗಿಟ್ಟಿವೆ. ಆಸ್ಪತ್ರೆ ತೆರೆಯುವ ಕುರಿತು ಕಮಲ ನೆಹರುಗಳಿಗೆ ಮಾತು ಕೊಡದಿರುತ್ತಿದ್ದರೆ ತಾನು ಅಲಹಾಬಾದಿಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಗೆ ಬರುತ್ತಿದ್ದೆ ಇಲ್ಲೆಂಬುದನ್ನು ಗಾಂಧಿಯವರು ಸ್ಪಷ್ಟಪಡಿಸಿ, ಕಾಯಿದೆ ಭಂಗದಂತಹ ಚಳವಳ ಹೂಡಲು ಈಗ ತನಗೆ ಶಕ್ತಿಯಾಗಲಿ ಉತ್ಸಾಹವಾಗಲಿ ಇಲ್ಲೆಂಬ ರೀತಿಯಲ್ಲಿ ಮಾತಾಡಿದರು. ಮಹಾತ್ಮರ ಭಾಷಣದ ಈ ಅಂಶದ ಕುರಿತು ಬಹಳ ವಿಮರ್ಶೆ ನಡೆದಿರುತ್ತದೆ. ಕಾಂಗ್ರೆಸಿನ ನಾಯಕತ್ವದ ಸಂಪೂರ್ಣ ಜವಾಬ್ದಾರಿಯನ್ನವರು ಪಂಡಿತ ಜವಾಹರಲಾಲರ ಮೇಲೆ ಹಾಕುವರೋ ಎಂಬ ಸಂದೇಹವುಂಟಾಗಿದೆ. ಸಂಯುಕ್ತ ಪ್ರಾಂತದ ಕೆಲವು ಕಡೆಗಳಲ್ಲಿ ಸಂಪೂರ್ಣ ಅಹಿಂಸಾತ್ಮಕ ವಾತಾವರಣವಿಲ್ಲವೆಂದು ಮಹಾತ್ಮರು ತಿಳಿದುಕೊಂಡಂತಿದೆ. ಪಂಡಿತ ನೆಹರುಗಳಿಗೂ ಇದೇ ಚಿಂತೆ ಹಿಡಿದಿರುತ್ತದೆ. ಅದಕ್ಕಾಗಿಯೇ ಅವರು ಗಾಂಧಿಯವರ ಸಮಕ್ಷಮದಲ್ಲೇ ಸಂಯುಕ್ತಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಮತ್ತು ಉತ್ಸಾಹಿ ಕಾಂಗ್ರೆಸ್ ಕೆಲಸಗಾರರ ಸಭೆ ಕರೆದಿರುತ್ತಾರೆ.

ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಟ್ಟು ಸುಮ್ಮಗೆ ಕೂತು ಫಲವಿಲ್ಲ. ಏನಾದರೂ ಉಗ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂಬ ಅಭಿಪ್ರಾಯವು ಹೆಲವರಲ್ಲಿ ಬೆಳೆಯುತ್ತಿದೆ. ತೀವ್ರಗಾಮಿಗಳು ಹಲವರು ಈ ಕುರಿತು ಅಸಹಿಷ್ಣುತೆಯಿಂದಿದ್ದಾರೆ.

ಹಿಂದೂ ಮುಸಲ್ಮಾನ ಪ್ರಶ್ನೆಯನ್ನು ಬಿಡಿಸಲು ಈ ಸಲ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಹೆಚ್ಚಿನ ಲಕ್ಷ ಕೊಡಲಿದ್ದಾರೆ. ಜಮಿಯತ್ ಉಲೇಮಾ ಮತ್ತು ಪಂಜಾಬಿನ ಅಕಾಲಿ ಸಿಖ್ ಸಂಘದ ಪ್ರತಿನಿಧಿಗಳು ಆಮಂತ್ರಿತರಾಗಿ ಅಲಹಾಬಾದಿಗೆ ಬಂದಿರುತ್ತಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ ಮುಗಿದೊಡನೆಯೇ ಪಂಡಿತ ಜವಾಹರಲಾಲರು ಬೊಂಬಾಯಿಗೆ ಹೋಗಿ ಮಿ. ಜಿನ್ನರೊಡನೆ ಮಾತುಕತೆ ನಡಿಸಲಿದ್ದಾರೆಂದು ತಿಳಿದುಬರುತ್ತದೆ.

ಸುಕ್ಕೂರಿನಲ್ಲಿ ಹಿಂದೂ ಮುಸಲ್ಮಾನ ಗಲಾಟೆ.

ಸಿಂಧ್ ಪ್ರಾಂತದ ಸುಕ್ಕೂರು ಪಟ್ಟಣದ ಮಂಜಾಲ್ಲ ಎಂಬ ಹಿಂದೂ ದೇವಸ್ಥಾನವು ತಮ್ಮ ಮಸೀದಿಯ ಸ್ಥಳವೆಂದು ಮುಸಲ್ಮಾನರು ಸಾಧಿಸಿ ದೊಡ್ಡ ಚಳವಳ ಹೂಡಿ ಸತ್ಯಾಗ್ರಹ ಹೂಡಿರುವರು. ಈ ಸಂಬಂಧವಾಗಿ ಇದೇ ತಾ. 19ರಲ್ಲಿ ಎಸೆಂಬ್ಲಿ ಮೆಂಬರರಾದ ಮಿ. ಜಿ. ಎಮ್. ಸೈಯದ್ ಮೊದಲಾದವರು ದಸ್ತಗಿರಿ ಮಾಡಲ್ಪಟ್ಟ ಪರಿಣಾಮವಾಗಿ ಮುಸಲ್ಮಾನರು ಗಲಾಟೆಯೆಬ್ಬಿಸಿ ಹಿಂದೂ ಮುಸಲ್ಮಾನ ಜಗಳವೆದ್ದು 11 ಮಂದಿ ಕೊಲ್ಲಲ್ಪಟ್ಟು 23 ಮಂದಿಗೆ ಪೆಟ್ಟಾಗಿರುವುದು.

5 ಹಡಗಗಳು ಮುಳುಗಿದುವು.

ಇದೇ ತಾ 18ರಲ್ಲಿ ಸೈಮನ್ ಬೊಲೀವರೆಂಬ ಡಚ್ ಸ್ಟೀಮರೊಂದು ಇಂಗ್ಲೆಂಡಿನ ಒಳಿಯ ಉತ್ತರ ಸಮುದ್ರದಲ್ಲಿ ಹೋಗುತ್ತಿದ್ದಾಗ ಜರ್ಮನರಿಟ್ಟಿದ್ದ ಜಲಸುರಂಗ ಸ್ಫೋಟವಾಗಿ ಒಡನೆಯೇ ಸ್ಟೀಮರು ಮುಳುಗಿ ಹೋಗಿ 111 ಮಂದಿ ಮುಳುಗಿ ಹೋಗಿರುವರು. ಇದರಲ್ಲಿ 400 ಮಂದಿ ಪ್ರಯಾಣಿಕರಿದ್ದರು. ಹಲವು ಮಂದಿ ಹೆಂಗಸರು ಮಕ್ಕಳಿದ್ದರು. ಕೆಲವೇ ತಿಂಗಳುಗಳ ಹಸುಳೆಗಳು 6 ಇದ್ದುವು. ಸ್ತ್ರೀಯರು ಮಕ್ಕಳ ಅವಸ್ಥೆಯು ಅತ್ಯಂತ ಕರುಣಾಜನಕವಿರುವುದು. ಜಲ ಸುರಂಗ ಸ್ಫೋಟವಾಗಿ 20 ಮಿನಿಟುಗಳೊಳಗೆ ಸ್ಟೀಮರು ಮುಳುಗಿದುದರಿಂದ ಪ್ರಯಾಣಿಕರ ದಿಗಿಲು ಗೊಂದಲವನ್ನು ಹೇಳತೀರದು. ಹಲವರು ಗಾಯಗೊಂಡಿರುವರು. ಅನೇಕರು ಒಡನೆಯೇ ನೀರಿಗೆ ಹಾರಿ ಮುಳುಗಿದರು. ಕೆಲವರು ರಕ್ಷಿಸಲ್ಪಟ್ಟಿರುವರು. ಸ್ಟೀಮರಿನ ಕೆಪ್ಟನರು ಸ್ಫೋಟದಿಂದಲೇ ಕೊಲ್ಲಲ್ಪಟ್ಟಿರುವರು.

ದಕ್ಷಿಣ ಕನ್ನಡ

ಮಂಗಳೂರು

ಸ್ವ. ಬಾ. ತಾ 19-11-39.

ಶೋಚನೀಯ ನಿಧನ—ಮಂಗಳೂರಿನ ಪ್ರಸಿದ್ಧ ವಕೀಲರೂ, ಸಾರಸ್ವತ ಬ್ರಾಹ್ಮಣ ಸಮಾಜದ ಅಗ್ರಗಣ್ಯರೂ, ಅನೇಕ ವಿದ್ಯಾ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಆಶ್ರಯದಾತರೂ ಆಗಿದ್ದ ಶ್ರೀಮಾನ್ ಗಂಗೊಳ್ಳಿ ಕೃಷ್ಣ ರಾವ್ ಬಿ. ಎ., ಬಿ. ಎಲ್.ರವರು ತಾರೀಕು 14ನೇ ಮಂಗಳವಾರ ತಮ್ಮ 72ನೇ ವಯಸ್ಸಿನಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಪಡುತ್ತೇವೆ. ಶ್ರೀಯುತರು ಈಗ ಕೆಲವು ವರ್ಷಗಳಿಂದಲೂ ತುಂಬ ಅಸೌಖ್ಯದಿಂದಿದ್ದರು. ಜಿಲ್ಲಾ ಸಬ್ ಕೋರ್ಟಿನಲ್ಲಿ ಅವರ ಮರಣದ ಬಗ್ಗೆ ಸಂತಾಪ ಸೂಚಿಸಲ್ಪಟ್ಟಿತು. ಶ್ರೀ ಜಿ. ಸೋಮಶೇಖರರಾಯರು ದಿವಂಗತರ ಗುಣಕಥನ ಮಾಡಿದರು.

ಮಂಗಳೂರು ನಗರಸಭೆ— ಕಳೆದ ತಾ 15ನೇ ಬುಧವಾರ ಸಾಯಂಕಾಲ ಮಂಗಳೂರು ನಗರಸಭೆಯು ಅಧ್ಯಕ್ಷರಾದ ಶ್ರೀ ಬಿ. ವಿ. ಬಾಳಿಗ ಯಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರಸಭೆಯವರು ಬ್ರಿಟಿಷ್ ಸರಕಾರದವರ ಯುದ್ಧೋದ್ದೇಶವೇನೆಂದು ಕೇಳಿದುದು ಸರಿಯೆಂದೂ, ಬ್ರಿಟಿಷ್ ಸರಕಾರದವರೂ ವೈಸರಾಯಿಗಳೂ ಕೊಟ್ಟ ಹೇಳಿಕೆಗಳು ತೀರ ಅಸಮರ್ಪಕವಾದುವೆಂದೂ, ರಾಷ್ಟ್ರಸಭೆಯವರು ಮಂತ್ರಿಮಂಡಲಗಳನ್ನು ಬಿಟ್ಟುತೊರೆದರೆಂದು ನಿರ್ಧರಿಸಿದುದು ಸಾಧುವೆಂದೂ, ಮದ್ರಾಸ್ ಸರಕಾರದವರು ಅಧಿಕಾರವನ್ನು ತ್ಯಜಿಸಿದುದು ಯುಕ್ತನೆಂದೂ ಅಭಿಪ್ರಾಯಗಳನ್ನು ಸೂಚಿಸುವ ಠರಾವು ಮಂಜೂರಾಯಿತು. ಈ ಠರಾವನ್ನು ಸಮರ್ಥಿಸಿ ಉಪಾಧ್ಯಕ್ಷರಾದ ಶ್ರೀ ಎಲ್. ಸಿ. ಪಯಸ್‌ರವರೂ, ಡಾ| ಕೆ. ವಿಟ್ಠಲ ಶೆಟ್ಟರೂ, ಶ್ರೀ ಯಂ. ಮಾಧವರಾಯರೂ ಮತ್ತು ಮಿ| ಎ. ಮೂಸಬ್ಬನವರೂ ಮಾತಾಡಿದರು.

ಪಂಪೋತ್ಸವ ಮತ್ತು ಸಾಹಿತಿಗಳಿಗೆ ಮಾನಪತ್ರ—ಕಳೆದ ತಾ 16ನೇ ಗುರುವಾರ ಸಾಯಂಕಾಲ ಥಿಯಾಸಫಿಕಲ್ ಲಾಜಿನಲ್ಲಿ, ಕಲ್ಚರಲ್ ಎಸೋಸಿಯೇಶನ್, ಪಂಡಿತರ ಸಂಘ ಮತ್ತು ಮಿತ್ರಮಂಡಲಿ, ಈ ಸಂಸ್ಥೆಗಳ ಆಶ್ರಯದಲ್ಲಿ ಪಂಪೋತ್ಸವ (ಮಹಾಕವಿ ಪಂಪನು ತನ್ನ ಉದಾತ್ತ ಗ್ರಂಥವನ್ನು ಬರೆದು ಮುಗಿಸಿದ ದಿವಸ)ವನ್ನು ಆಚರಿಸಿದರು. ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರು ಎಲ್. ಎ. (ಕೇಂದ್ರ) ಯವರು ಅಧ್ಯಕ್ಷತೆ ವಹಿಸಿದ್ದರು. ವಿದ್ವಾನ್ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಪಂಪಕವಿಯ ಗ್ರಂಥದಿಂದ ಕೆಲವು ಭಾಗಗಳನ್ನು ಸುಶ್ರಾವ್ಯವಾಗಿ ಓದಿ ಅರ್ಥ ಹೇಳಿದರು. ಅನಂತರ ಶ್ರೀ ಉಗ್ರಾಣ ಮಂಗೇಶರಾಯರು ಪಂಪನ ವಿಷಯವಾಗಿ ಒಂದು ಅರ್ಥಗರ್ಭಿತ ಭಾಷಣ ಮಾಡಿದರು.

ಇದೇ ಸಂದರ್ಭದಲ್ಲಿ ಪೂರ್ವೋಕ್ತ ಸಂಸ್ಥೆಗಳವರು ಪಂಡಿತ ತಿಮ್ಮಪ್ಪಯ್ಯನವರಿಗೆ ಒಂದು ಮಾನಪತ್ರವನ್ನರ್ಪಿಸಿ ಅವರು 'ನಾಡೋಜಪಂಪ'ವೆಂಬ ಗ್ರಂಥವನ್ನು ಬರೆದು ಕನ್ನಡಿಗರಿಗೆ ಮಹದುಪಕಾರವನ್ನು ಮಾಡಿದ ಬಗ್ಗೆ ಅವರ ಕರ್ನಾಟಕ ಭಾಷಾ ಸೇವೆಯನ್ನು ಬಹಳವಾಗಿ ಪ್ರಶಂಸಿಸಿದರು. ಶ್ರೀ ಎಚ್. ಭೀಮರಾಯರು ನಮ್ಮ ಜಿಲ್ಲೆಯ ಓರ್ವ ಪಂಡಿತರನ್ನು ಈ ರೀತಿ ಮಾನಪತ್ರವನ್ನರ್ಪಿಸಿ ಗೌರವಿಸಿದುದು ಇದೇ ಮೊದಲು ಎಂದೂ ಇದೇ ರೀತಿ ಇನ್ನುಮುಂದಕ್ಕೂ ಕೂಡ ಜಿಲ್ಲೆಯ ಸಾಹಿತಿಗಳಿಗೆ ಮನ್ನಣೆ ಕೊಡುವ ಏರ್ಪಾಡಾಗಬೇಕೆಂದು ತಮ್ಮ ಅಭಿಪ್ರಾಯವೆಂದೂ ಹೇಳಿದರು. ಅಧ್ಯಕ್ಷರು ಭಾಷೆಯ ಪ್ರಗತಿಗೆ ಪ್ರಯತ್ನಿಸದೆ ಕರ್ನಾಟಕ ಏಕೀಕರಣಕ್ಕೆ ಬಲವನ್ನು ಕೊಡುವುದಸಾಧ್ಯವೆಂದು ಹೇಳಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಅಂತರಕಲಾಶಾಲಾ ತರ್ಕಸ್ಪರ್ಧೆ—ಇದೇ ತಾ. 17ನೇ ಶುಕ್ರವಾರ ಸಾಯಂಕಾಲ ಗವರ್ನಮೆಂಟ್ ಮತ್ತು ಸೈಂಟ್ ಎಲೋಸಿಯಸ್ ಕಾಲೇಜುಗಳ ಕರ್ನಾಟಕ ಸಂಘಗಳೊಳಗೆ ಒಂದು ತರ್ಕಸ್ಪರ್ಧೆಯು ನಡೆಯಿತು. ರೇ. ಫ. ಎನ್. ಎಸ್. ಕಿಲ್ಲಿಯವರು ಅಧ್ಯಕ್ಷತೆ ವಹಿಸಿದ್ದರು. ತರ್ಕದ ವಿಷಯ, "ಆಧುನಿಕ ವಸ್ತು ವೈಜ್ಞಾನಿಕ ಮಾದರಿಯಲ್ಲಿ ಕೈಗಾರಿಕೋದ್ಯಮಗಳನ್ನು ಸ್ಥಾಪಿಸುವುದು ಭಾರತದ ಹಿತ ಗಳಿಗೆ ಹಾನಿಕಾರಕವಿರುತ್ತದೆ"ಎಂಬುದಾಗಿತ್ತು.

ಗವರ್ನಮೆಂಟ್ ಕಾಲೇಜ್ ದಿನಾಚರಣೆ—ನಿನ್ನೆಯ ದಿನ ಸಾಯಂಕಾಲ ಸ್ಥಳೀಯ ಗವರ್ನಮೆಂಟ್ ಕಾಲೇಜ್ ದಿನಾಚರಣೆಯು ನಡೆಯಿತು. ಶ್ರೀಮಾನ್ ಬೆನಗಲ್ ಸಂಜೀವರಾವ್ ಯಂ. ಎ. ಇವರು ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ, ವರದಿ ವಾಚನಗಳಾಗಿ ಪಾರಿತೋಷಕ ವಿತರಣೆಯಾಯಿತು. ಅಧ್ಯಕ್ಷರು ಕಾಲೇಜಿನ ಪ್ರಗತಿಯನ್ನು ಪ್ರಶಂಸಿಸಿ ಮಾತಾಡಿದರು. ವಿದ್ಯಾರ್ಥಿಗಳು ನಾಟಕಾಭಿನಯಗಳನ್ನಭಿನಯಿಸಿ ಸಭಿಕರನ್ನು ಸಂತೋಷಗೊಳಿಸಿದರು.

ಉಡುಪಿ

ಟೀಪಾರ್ಟಿ ಸತ್ಕಾರ— ಈ ಬಾರಿಯ ಕ್ರಿಕೆಟ್ ಪಂದ್ಯಾಟದಲ್ಲಿ ಗೆದ್ದ ಶ್ರೀಗಳಾದ ಕಣ್ಣನ್ ನಂಬಿಯಾರ್, ಬಿ. ಸಚ್ಚಿದಾನಂದ ಹೆಗ್ಡೆ, ಕೆ. ಗೋಪಾಲಕೃಷ್ಣ ಶೆಟ್ಟಿ, ಎ. ಶಿವರಾಮ ಹೆಗ್ಡೆ, ಎಡ್ವಿನ್ ಅಮ್ಮನ್ನ, ನರಸಿಂಹ ಪೈ, ಬಿ. ರಘುರಾಮ ಹೆಗ್ಡೆ, ಚಾರ್ಲಿ ಫೆರ್ನಾಂಡಿಸ್, ಜೋಸೆಫ್, ವಾದಿರಾಜ ಹೆಗ್ಡೆ, ಭಾಸ್ಕರ ಶೆಟ್ಟಿ, ಇಬ್ರಾಹಿಂ, ಸದಾಶಿವ ಹೆಗ್ಡೆ ಈ ಆಟಗಾರರನ್ನೊಳಗೊಂಡ ಉಡುಪಿ ಕ್ರಿಕೆಟ್ ಟೀಮು ಮತ್ತು ಪ್ರೋತ್ಸಾಹಕರನ್ನು ಸನ್ಮಾನಿಸುವುದಕ್ಕಾಗಿ ಟೀಮಿನ ಕೆಪ್ಟನರಾದ ಶ್ರೀ. ಕಣ್ಣನ್ ನಂಬಿಯಾರರು ತಮ್ಮ ವಸತಿಗೃಹವಾದ ಪಂಡಿತ್ ಕೇಳುನಂಬಿಯಾರರ ಬೃಹದ್ಗಿರಿಯ ಭವ್ಯ ಭವನದಲ್ಲಿ ತಾ. 19-11-39ರಲ್ಲಿ ಮುನ್ಸಿಫರಾದ ಶ್ರೀ. ಆರ್. ಎಂ ವಿ. ಎಸ್. ರಾಯರ ಅಧ್ಯಕ್ಷತೆಯಲ್ಲಿ ಟೀಪಾರ್ಟಿ ಸತ್ಕಾರವನ್ನು ಏರ್ಪಡಿಸಿದ್ದರು. ಪುರ ಪ್ರಮುಖರನೇಕರು ಬಂದಿದ್ದರು. ಉಪಾಹಾರವಾದೊಡನೆ ಶ್ರೀ. ಕಣ್ಣನ್ ನಂಬಿಯಾರರು ಟೀಮಿನ ವರದಿಯನ್ನೋದಿದರು. ಬಳಿಕ ಡಾ. ಮಾಧವ ಪೈ, ಶ್ರೀಗಳಾದ ಬಿ. ಶ್ಯಾಮರಾಯ ಶೆಟ್ಟಿ, ಎ. ಆರ್. ಕಾಮತ್, ಪಿ ತಿಮ್ಮಪ್ಪ ಶೆಟ್ಟಿ, ಕೆ. ವಿಟ್ಠಲ ಕಾಮತ್, ಬಿ. ಯಂ. ಬಾಳಿಗ, ಎಸ್. ಯು. ಪಣಿಯಾಡಿ, ಬೈಲೂರು ವಾಸುದೇವ ರಾವ್, ಡಾ. ಸುಂದರರಾಮ ಪೈ, ಕೆ. ಜಗನ್ನಾಥ ಬಲ್ಲಾಳ್, ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿ ಆಟಗಾರರನ್ನು ಹರಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ. ಕಣ್ಣನ್ ನಂಬಿಯಾರರು ಧನ್ಯವಾದಗಳನ್ನು ಅರ್ಪಿಸಲು ಸಭಾಂತ್ಯವಾಯಿತು.

ದ. ಕ. ಜಿಲ್ಲಾ ಬೋರ್ಡು ಸಭೆ—ತಾ. 16 11 39ರಲ್ಲಿ ಸ್ಥಳೀಯ ಮುನಿಸಿಪಲ್ ಟ್ರೈನ್ ಶಾಲೆಯಲ್ಲಿ ಶ್ರೀ. ಡಾ. ಕೆ. ವಿಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ವೈಕುಂಠ ಬಾಳಿಗರು ಯುದ್ಧವಿಷಯಕ ನಿರ್ಣಯವನ್ನು ಸಭಿಕರ ಮುಂದಿಡಲು ಶ್ರೀ. ಬಿ. ಸುಬ್ಬಣ್ಣ ಶೆಟ್ಟರ ಅನುಮೋದನೆಯೊಡನೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಜಿಲ್ಲಾ ಬೋರ್ಡಿನವರು ಬಸ್ಸ್ ಸರ್ವೀಸನ್ನು ತೆರೆಯುವ ವಿಷಯದಲ್ಲಿ ರಿಪೋರ್ಟು ಮಾಡುವರೆ ಶ್ರೀಗಳಾದ ಡಾ. ವಿಟ್ಠಲ ಶೆಟ್ಟಿ, ವೈಕುಂಠ ಬಾಳಿಗ, ಎಸ್. ಎನ್. ಹೊಳ್ಳ, ಸಿ. ಎಸ್. ಅಲ್ಬುಕರ್ಕ, ಕೃಷ್ಣಶೆಟ್ಟಿ ಈ ಜನರ ಕಮಿಟಿಯೊಂದನ್ನು ರಚಿಸಲಾಯಿತು. ಇವರು ಮುಂದಿನ ಬೋರ್ಡು ಮೀಟಿಂಗಿನೊಳಗಾಗಿ ತಮ್ಮ ರಿಪೋರ್ಟನ್ನು ಒಪ್ಪಿಸುವುದೆಂದಾಯಿತು. ಬಸ್ಸ್ ಸರ್ವೀಸು ನಡೆಸುವದು ಅತ್ಯಗತ್ಯವೆಂದು ಶ್ರೀಗಳಾದ ಎಮ್. ಆರ್. ಪೂಂಜ, ಬಿ. ಸುಬ್ಬಣ್ಣ ಶೆಟ್ಟಿ, ಮುಹಮ್ಮದ್ ಅಹಮ್ಮದ್ ಸಾಹೇಬರು ಹುರುಪಿನಿಂದ ಮಾತನಾಡಿದರು. ಡಾ. ಪಿ. ಜಿ. ಆಚಾರ್ಯರು ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಬಸ್ ಕಂಪೆನಿ ನಡೆಸುವುದು ಲಾಭದಾಯಕವಾಗಲಾರದೆಂದು ಮಾತನಾಡಿದರು. ಕಾರ್ಯಕ್ರಮಗಳು ಮುಗಿದು, ಬರುವ ಮೀಟಿಂಗು ಬೈಂದೂರಲ್ಲಿ ಜರಗುವುದೆಂದು ಜಾಹೀರುಮಾಡಲ್ಪಟ್ಟು, ಸಭಾಂತ್ಯವಾಯಿತು.

ಶ್ರೀಫಲಿಮಾರು ಸ್ವಾಮಿಗಳ ಊಟೋಪಚಾರ— ಜಿಲ್ಲಾ ಬೋರ್ಡು ಸದಸ್ಯರಿಗೂ ಬೋರ್ಡು ನೌಕರರಿಗೂ ಪರ್ಯಾಯ ಶ್ರೀ ಫಲಿಮಾರು ಸ್ವಾಮಿಗಳವರು ಮುನ್ಸಿಪಲ್ ನೋರ್ಮಲ್ ಶಾಲೆಯಲ್ಲಿ ಸಂಭ್ರಮದ ಭೋಜನವಿತ್ತರು.

ವ್ಯಾಯಾಮ ಪ್ರದರ್ಶನೆ—ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಫಿಜಿಕಲ್ ಇನ್ಸ್ಪೆಕ್ಟರ್ ಶ್ರೀ. ಬಿ ಎಮ್. ಬಾಳಿಗರ ನೇತೃತ್ವದಲ್ಲಿ ವ್ಯಾಯಾಮ ಪ್ರದರ್ಶನವೊಂದನ್ನು ಡಾ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. 18ರಲ್ಲಿ ಪ್ರದರ್ಶಿಸಿದರು. ಈ ಸಂದರ್ಭದಲ್ಲೇ ಆಟದಲ್ಲಿ ಗೆದ್ದವರಿಗೆ ಪಾರಿತೋಷಕವೀಯಲಾಯಿತು. ಅಧ್ಯಕ್ಷರು ಪ್ರದರ್ಶನವನ್ನು ಕೊಂಡಾಡಿ ಹೆಡ್ಮಾಸ್ಟರ್ ಮಿ| ರೋಕಿ ಫೆರ್ನಾಂಡೀಸ ಮತ್ತು ಶ್ರೀ ಬಿ. ಯಂ. ಬಾಳಿಗರನ್ನು ಶ್ಲಾಘಿಸಿ, ಮಾತನಾಡಿದರು. ರೋಕಿ ಫೆರ್ನಾಂಡೀಸರು ಅಧ್ಯಕ್ಷರಿಗೂ ನೆರೆದ ಮಹಾಜನರಿಗೂ ಧನ್ಯವಾದಗಳನ್ನರ್ಪಿಸಲು ಸಭಾಂತ್ಯವಾಯಿತು.

ಪೇಜಾವರ ಮಠದ ಹೊಸ ಸ್ವಾಮಿಗಳವರು—ಇತ್ತೀಚೆಗೆ ಪೇಜಾವರ ಮಠದ ಪೀಠವನ್ನೇರಿದ ಶ್ರೀ. ವಿಶ್ವೇಶತೀರ್ಥ ಸ್ವಾಮಿಗಳವರು ಇದೇ ತಾ. 18ರಲ್ಲಿ ಸಂಜೆ ತಮ್ಮ ಮಠಕ್ಕೆ ಪ್ರಥಮತಃ ಪ್ರವೇಶಮಾಡುವ ಸುಮುಹೂರ್ತದಲ್ಲಿ ಶ್ರೀಗಳವರನ್ನು ಜೋಡುಕಟ್ಟೆಯಿಂದ ವಾದ್ಯಘೋಷ ಮೆರವಣಿಗೆಗಳಿಂದ ಕರತರಲಾಯಿತು. ಎಳೆ ಸ್ವಾಮಿಗಳ ಸಂದರ್ಶನಾರ್ಥವಾಗಿ ದಾರಿಯುದ್ದಕ್ಕೂ ಜನರು ಕಿಕ್ಕಿರಿದು ನೆರೆದಿದ್ದರು.

ಪರ್ಯಾಯ ವಸ್ತು ಪ್ರದರ್ಶನೆ—ಶ್ರೀ. ಅದಮಾರು ಸ್ವಾಮಿಗಳವರ ಪರ್ಯಾಯ ಕಾಲದಲ್ಲಿ ವಸ್ತುಪ್ರದರ್ಶನವೊಂದನ್ನು ಜರಗಿಸುವರೆ ಕೆಲವು ಮಹನೀಯರ ಸಭೆಯೊಂದು ಇದೇ ತಾ 16ರಲ್ಲಿ ಡಾ ಸುಂದರರಾಮ ಪೈಗಳ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಹಾಲಿನಲ್ಲಿ ಜರಗಿತು. ಡಾ ಮಾಧವ ಪೈಗಳವರು ಸಭೆಯ ಉದ್ದೇಶವನ್ನು ವಿವರಿಸಿ ವಸ್ತುಪ್ರದರ್ಶನದ ಆವಶ್ಯಕತೆಗಳನ್ನು ಮನಗಾಣಿಸಿದರು. ಶ್ರೀಗಳಾದ ಕೋಟೆಗಾರು ಗಣಪಯ್ಯ ಶೆಟ್ಟಿ, ಪಿ. ಎ. ಪೈ, ಸೂರ್ಯನಾರಾಯಣ ರಾವ್ (ಮುನಿಸಿಪಲ್ ಕಮಿಶನರ್) ಆರೂರು ಲಕ್ಷ್ಮೀನಾರಾಯಣ ರಾವ್ ಮೊದಲಾದವರು ವಸ್ತುಪ್ರದರ್ಶನದ ಆವಶ್ಯಕತೆಯನ್ನು ವಿವರಿಸಿದರು. ತಾ. 8-1-40ರಿಂದ 22 1 40ರ ವರೆಗೆ ಪ್ರದರ್ಶನವನ್ನು ಶ್ರೀ. ಫಲಿಮಾರು, ಶ್ರೀ. ಅದಮಾರು ಮಠದ ಸ್ವಾಮಿಗಳವರ ಆಶ್ರಯದಲ್ಲಿ ಜರಗಿಸುವುದೆಂದಾಯಿತು. ಈ ಬಗ್ಗೆ ಬೇಕಾದ ಕೆಲಸಗಳನ್ನು ಮಾಡಲು ಶ್ರೀ. ಲಕ್ಷ್ಮೀನಾರಾಯಣ ರಾಯರು ಅಧ್ಯಕ್ಷರಾಗಿಯೂ ಡಾ. ಎಸ್. ಆರ್. ಪೈ ಮತ್ತು ಡಾ. ಮಾಧವ ಪೈಗಳವರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಪಿ ನಾರಾಯಣ ಪ್ರಭು ಉಪೇಂದ್ರ ಪೈ, ಪಿ. ಗೋಪಾಲ ನಾಯ್ಕರು ಜೊತೆ ಕಾರ್ಯದರ್ಶಿಗಳಾಗಿಯೂ ಇರುವ ಕಮಿಟಿ ರಚಿಸಲಾಯಿತು. ಪ್ರದರ್ಶನವು ಯಶಸ್ವಿಯಾಗಿ ಜರಗಬಹುದೆಂದು ನಿರೀಕ್ಷಿಸಲಾಗಿದೆ. ಪ್ರದರ್ಶನಕ್ಕೆ ಮೈಸೂರು ಸರಕಾರದ ಸಾಮಾನುಗಳೂ ಬರಲಿರುವವು.

ಮುನಿಸಿಪಲ್ ಸಭೆ— ಯು ತಾರೀಕು 16 11-29ರಲ್ಲಿ ಶ್ರೀ ಎ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಯುದ್ಧವಿಷಯಕ ಠರಾವನ್ನು ರಿಕಾರ್ಡು ಮಾಡಲಾಯಿತು.

ಹರಿಜನ ಅನಾಥಾಲಯ, ಕಾಡಬೆಟ್ಟು.

ಇದರ ತಾ. 13-8-'39ರಿಂದ 23-10-39ರ ಲೆಕ್ಕಪತ್ರಗಳನ್ನು ಶ್ರೀ ಟಿ ವಾಸುದೇವ ಶೆಣೈಯವರು ಪರಿಶೋಧಿಸಿ, ಹರಿಜನ ಬೋರ್ಡಿಂಗ್ ಹೌಸಿನ ಮೆನೇಜಿಂಗ್ ಕಮಿಟಿಯವರಿಗೊಪ್ಪಿಸಿರುವರು. 9 ಜನ ವಿದ್ಯಾರ್ಥಿಗಳು ಸೇರಿಸಲ್ಪಟ್ಟು, 4 ಜನರು ಬಿಟ್ಟಿರುತ್ತಾರೆ. ರೂ. 88-10-8 ಜಮಾ ಆಗಿ ರೂ. 86-15-6 ಖರ್ಚು ಮಾಡಲ್ಪಟ್ಟಿದೆ. ರೂ. 1-11-2 ಶಿಲ್ಕು ಇದೆ. ಜಮಾದಲ್ಲಿ ರೂ. 30ನ್ನು ಶ್ರೀ. ಗೋಪಾಲ ಸಾಲೆನ್ನರು ಎಡ್ವಾನ್ಸ ಮಾಡಿದ್ದಾಗಿದೆ.

ಭಾಷಣ—ಅಲಹಾಬಾದಿನ ಶ್ರೀ. ಗಂಗಾ ಪ್ರಸಾದ ಉಪಾಧ್ಯಾಯ, ಎಂ ಎ.ರವರು ತಾ 21ರಲ್ಲಿ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಬೈಲೂರು ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ಸಂಜೆ 5 ಗಂಟೆಗೆ ಹಿಂದೂ ಸಂಘಟನೆಯ ಕುರಿತು ಭಾಷಣ ಮಾಡಿದರು. ಶ್ರೀ. ಕೆ. ಕೆ. ಶೆಟ್ಟರು ವಂದಿಸಿದರು. ಪ್ರಾರಂಭದಲ್ಲಿ ಶ್ರೀ ವಾಸುದೇವ ಶೆಣೈಯವರು ಭಾಷಣಕರ್ತರ ಪರಿಚಯಮಾಡಿಕೊಟ್ಟರು.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ ಈಗಾಗಲೇ ಸಂಚರಿಸತೊಡಗಿರುವರೆಂದು ತಿಳಿದುಬರುತ್ತದೆ. ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸಬಹುದೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ. ಪ್ರವೇಶ ಹಾಸಲು ರೂ 1, (ಜುಮ್ಲಾ ರೂ. 11.) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಮಾಹಿತಿಯನ್ನು ಪಡೆಯಲಪೇಕ್ಷಿಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ. ಈ ವಿಳಾಸಕ್ಕೆ ಬರೆಯಬಹುದು.

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೧—೧೦—೦ ಚಿಕ್ಕದು ೦—೫—೦

„ ಮುಚ್ಚಳೆದ್ದು ೦—೧೨—೦ „ ಮುಚ್ಚಳೆದ್ದು ೦—೬—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

GENERAL SUPPLIES LIMITED

UDIPI - - - - S. INDIA

ಈ ವಾರದ ಭವಿಷ್ಯ

ತಾ. 23-11-1939ರಿಂದ - - - ತಾ. 30-11-1939ರ ವರೆಗೆ

ಮೇಷ—ಕಳೆದ ಎರಡು ವಾರಗಳ ಹಿಂದೆ ನಿಮ್ಮ ಶುಭಸ್ಥಾನಕ್ಕೆ ಅಂಗಾರಕನು ಬಂದಿದ್ದನು. ಈ ವಾರದಲ್ಲಿ ಧನಕಾರಕ, ಕಳತ್ರಕಾರಕನೂ ಆದ ಶುಕ್ರನು ಭಾಗ್ಯವನ್ನು ಪ್ರವೇಶಿಸುವನು. ಅಂದಮೇಲೆ ನಿಮಗೆ ಆರ್ಥಿಕ ಭಾಗದಲ್ಲಿ, ಕಳತ್ರ ಸುಖದಲ್ಲಿ ಏನೂ ಕೊರತೆಯುಂಟಾಗದು. ಸಮಾಜದಲ್ಲಿ ಮನ್ನಣೆ ಹೊಂದುವಿರಿ, ಕಾರ್ಯದಲ್ಲಿ ವಿಜಯಿಗಳಾಗುವಿರಿ, ಆರೋಗ್ಯವು ಕೆಡುವುದು, ಪ್ರಯಾಣ ನಿಮಿತ್ತವಾಗಿಯೂ ಆಪ್ತ ಜನ ವಿಯೋಗದಿಂದಲೂ ಮನಸ್ಸಿಗೆ ನೋವುಂಟಾಗುವುದು. ತಾ 23, 26 27, 28 ಈ ದಿನಗಳಲ್ಲಿ ಕೊಂಚ ಜ್ವರ ದೇಹಾಲಸ್ಯ ಹೆಚ್ಚುವುದು.

ವೃಷಭ—ನಿಮ್ಮ ಮನೋರಥವು ನೀರ ಮೇಲೆ ಬರೆದ ಲಿಪಿಯಂತಾಗುವುದಾದರೂ ಗುರು ಶುಕ್ರರ ಅನುಗ್ರಹದಿಂದ ಆರ್ಥಿಕ ಅಡಚಣೆಯು ಬಹ್ವಂಶ ಕಡಿಮೆಯಾಗುವುದು, ಸ್ತ್ರೀ ವಿಲಾಸವಾಗಿಯೂ ಸಂಪತ್ಪ್ರಾಪ್ತಿಯ ಯೋಗವಿದೆ. ಆರೋಗ್ಯದ ವಿಷಯಕ್ಕೆ ನೀವು ಹೆಚ್ಚಿನ ಜಾಗರೂಕತೆ ತೆಗೆದುಕೊಳ್ಳುವವರಾದರೂ ಆಹಾರ ನಿಮಿತ್ತದಿಂದ ಅಜೀರ್ಣಾದಿ ರೋಗಗಳಿಗೆ ಸಿಲುಕುವಿರಿ. ಒಂದಿಲ್ಲೊಂದು ಚಿಂತೆಯು ನಿಮ್ಮನ್ನು ಸದಾ ಬಿಟ್ಟಿರದು. ತಾ 24, 25, 29, 30 ಈ ದಿನಗಳಲ್ಲಿ ವೈಮನಸ್ಯ, ಕಲಹ, ಅನ್ಯಾಯ, ಅಪಮಾನಗಳು ಸಂಭವಿಸುತ್ತವೆ.

ಮಿಥುನ—ಇಷ್ಟಾರ್ಥಗಳು ಸಿದ್ಧಿಸುವವು. ಕಾರ್ಯದಲ್ಲಿ ಜಯ, ಪದವಿಯಲ್ಲಿ ಉನ್ನತಿ, ಹಣದ ಬಿಕ್ಕಟ್ಟಿನ ನಿವೃತ್ತಿ ಇತ್ಯಾದಿಗಳಾಗುವವು. ರಾಜಕೀಯದವರಿಗೆ ವಿಶೇಷ ಅನುಕೂಲವಿದೆ. ಶಾರೀರಿಕ ಮತ್ತು ಸಾಂಸಾರಿಕ ಭಾಗದಲ್ಲಿ ಸುಖವಿರದು. ಸ್ತ್ರೀಯರಿಂದ ಹೆಚ್ಚಾಗಿ ತೊಂದರೆಗಳುಂಟಾಗುವವು. ವ್ಯಾಪಾರದಲ್ಲಿ ಕಷ್ಟನಷ್ಟಗಳ ಯೋಗವಿದೆ. ವಿದ್ಯಾರ್ಥಿಗಳಿಗೆ ಕಾಲವು ಅನುಕೂಲವಿರುವುದು. ಭೂಸಂಬಂಧವಾದ ವ್ಯವಹಾರದಿಂದ ವ್ಯಸನಕ್ಕೀಡಾಗುವಿರಿ. ತಾ. 26, 27, 28 ಬಿಟ್ಟು ಇತರ ದಿನಗಳು ಅನುಕೂಲ.

ಕರ್ಕಾಟಕ—ಗ್ರಹಮಂಡಲವೇ ಪ್ರತಿಕೂಲವಾಗಿರುವ ಈ ಕಾಲದಲ್ಲಿ ಭಾಗ್ಯಸ್ಥ ಕರ್ಮಾಧಿಪತಿಯಾದ ಬೃಹಸ್ಪತ್ಯಾಚಾರ್ಯರ ಪೂರ್ಣ ಅನುಗ್ರಹವು ನಿಮ್ಮ ಮೇಲಿರುವುದು, ಅದೊಂದು ಸದೈವವೆನ್ನಬೇಕು. ದಶದಿಕ್ಕಿನಿಂದಲೂ ಶತ್ರುಜನರಿಂದ ಅಪಾಯವಿದೆ. ಲೋಕದ ಜನರು ಅಪವಾದ ಹೊರಿಸುವರು. ಪತ್ನೀಪುತ್ರರೂ ತ್ಯಜಿಸುವಂತಹ ಪ್ರಸಂಗವೊದಗುವುದು. ಶರೀರವೂ ಕೂಡ ನಿರಪಾಯವಾಗಿರದು. ಖರ್ಚಿನ ಸಲುವಾಗಿ ಹಣವಿಲ್ಲದೆ ಮಾನರಕ್ಷಣೆಯು ಕಷ್ಟವಾಗುವುದು. ಸರ್ವತ್ರ ಶೂನ್ಯಮಯವಾಗಿ ತೋರುವ ಈ ಕಾಲದಲ್ಲಿ ಸುರಗುರುಗಳು ನಿಮ್ಮನ್ನು ಕೈಹಿಡಿದೆತ್ತಲಿರುವರು. ತಾ 23 29, 30 ಅನಿಷ್ಟ.

ಸಿಂಹ—“ಪ್ರಾಣಂ ವಾಪಿ ಪರಿತ್ಯಜ್ಯ ಮಾನಮೇವಾಭಿರಕ್ಷತು” ಎಂಬಂತೆ ಮಾನವನ್ನು ಕಾಪಾಡುವ ಸಲುವಾಗಿ ಪ್ರಾಣವನ್ನು ಕೂಡ ಲೆಕ್ಕಿಸಲಾಗದು, ಪ್ರಕೃತ ನಿಮಗೆ ರಾಜಕೀಯದಲ್ಲೂ ಶತ್ರುಜನರಿಂದಲೂ ಮಾನಹಾನಿಯ ಸಂಭವವಿದೆ. ಅನೇಕ ತರದ ಖರ್ಚುಗಳು ಮೇಲಿಂದಮೇಲೆ ಪ್ರಾಪ್ತವಾಗುವವು. ನಿತ್ಯ ಗೃಹಕಲಹವು ಸಂಭವಿಸುವದು. ಆದರೂ ಬಂಧುಗಳೂ, ಮಿತ್ರರೂ, ಕುಟುಂಬಿಕರೂ ಕೂಡ ನಿಮಗೆ ಬಹುವಾಗಿ ನೆರವಾಗುವರು, ಧನಧಾನ್ಯ ಸಹಾಯ ಮಾಡುವರು. ತಾ 23, 24, 25 ಈ ಮೂರು ದಿನಗಳಲ್ಲಿ ವಿಶೇಷ ಜಾಗರೂಕರಾಗಿರಿ.

ಕನ್ಯಾ—ನಿಮ್ಮ ದೈವವು ಬಹಳ ಉತ್ತಮವಾಗಿರುವುದು. ನಿಮ್ಮ ಪ್ರಗತಿಯನ್ನು ನೋಡಿ ವಿರೋಧಿಗಳೂ ಕೂಡ ಬೆರಗಾಗುವರು. ಮಾತ್ರವಲ್ಲ ನಿಮ್ಮ ಮೈತ್ರಿಯನ್ನೇ ಅಪೇಕ್ಷಿಸುವರು. ಜನತೆಯ ಒಲ್ಮೆ ಗೌರವಾದರಗಳನ್ನು ಪಡೆದು ಜನರನ್ನು ತಮ್ಮವರನ್ನಾಗಿ ಮಾಡಿಕೊಳ್ಳುವ ಶಕ್ತಿಯು ಪ್ರಕೃತ ನಿಮಗೆ ದೈವದತ್ತವಾಗಿದೆ. ಯಾವ ಭಾಗದಲ್ಲೂ ನಿಮಗೆ ಕಡಿಮೆಯಾಗದು. ಅವಿಚಾರದಿಂದ ನೀಚ ಕನಿಷ್ಠ ವರ್ಗದವರ ಕೋಪಕ್ಕೆ ಸಿಲುಕಲಿರುವಿರಿ. ತಾ 24ರಿಂದ 28ರ ವರೆಗೆ ಜಾಗ್ರತೆ.

ತುಲಾ—‘ಅಬದ್ಧಂ ವಾ ಸುಬದ್ಧಂ ವಾ ಕಿಂತು ಪುತ್ರೋ ವಿನಾಯಕಃ’ ಎಂಬಂತೆ ತಪ್ಪುಗಳೇ ಇಷ್ಟಾಗಲೀ ಒಂದು ಕಾರ್ಯದಲ್ಲಿ ವಿಜಯಿಗಳಾಗಬೇಕಾದರೆ ಧೈರ್ಯವೇ ಪ್ರಾಮುಖ್ಯವಾದುದು. ಇಂತಹ ಧೈರ್ಯವು ನಿಮ್ಮಲ್ಲಿ ಈಗ ಕಿಂಚಿತ್ತೂ ಇಲ್ಲವೆಂದರೆ ಸುಳ್ಳಾಗದು. ಆದ್ದರಿಂದಲೇ ನಿಮ್ಮ ಕಾರ್ಯಗಳು ಅರ್ಧದಲ್ಲೇ ಉಳಿದಿವೆ. ಕೈಯಲ್ಲಿ ಕಾಸಿಲ್ಲದೆ ದಿನಗಳೆಯಲು ಬಹಳ ಪೇಚಾಡುವಿರಿ. ದೇಹಾಲಸ್ಯ ಪ್ರವಾಸ ತಗಲುವ ಪೀಡೆ ಇತ್ಯಾದಿಗಳಿಂದ ಬಹಳ ಶೋಕ ಸಂತಪ್ತರಾಗಿರುವಿರಿ. ಆದರೂ ತಾ. 23,24, 25 ಈ ದಿನಗಳಲ್ಲಿ ಕಿಂಚಿತ್ ಧನಪ್ರಾಪ್ತಿ ದೈಹಿಕ ಸುಖ ಮನಶ್ಶಾಂತಿಯನ್ನು ಹೊಂದುವಿರಿ.

ವೃಶ್ಚಿಕ—ಲೋಕದಲ್ಲಿ ಯಾವನೂ ಸಕಲೈಶ್ವರ್ಯ ಸಂಪನ್ನನಾಗಿರುವುದಿಲ್ಲ. ಒಂದಿಲ್ಲೊಂದು ಭಾಗದಲ್ಲಿ ನ್ಯೂನತೆಯಿದ್ದೇ ಇರುವುದು. ಪ್ರಕೃತ ನಿಮಗೆ ಖರ್ಚಿಗೆ ಬೇಕಾದಷ್ಟು ಉತ್ಪತ್ತಿ, ಅನ್ಯೂನವಾದ ಸಾಂಸಾರಿಕ ಗೃಹೋಪಕರಣ, ಗೃಹಸುಖ ಇತ್ಯಾದಿಗಳಿದ್ದರೂ ದೇಹದಲ್ಲಿ ಒಂದಲ್ಲೊಂದು ತರನಾದ ಪೀಡೆ ಆಪ್ತೇಷ್ಟರ ಅಭಾವ, ನಿಷ್ಠುರವಾಣಿಯಿಂದಾಗಿ ಹಲವರಲ್ಲಿ ಮನಸ್ತಾಪ ಇತ್ಯಾದಿಗಳು ಅನಿವಾರ್ಯವಾಗಿವೆ. ವಿದ್ಯೋಪಜೀವಿಗಳಿಗೆ ಅಷ್ಟೊಂದು ಉತ್ತಮವಿಲ್ಲವು. ತಾ 23,29,30 ಕಾರ್ಯಹಾನಿ ಮಾರ್ಗಯಾಸ ಶೋಕಗಳು ಸಂಭವಿಸುವವು.

ಧನು—‘ಹಿತಂ ಮನೋಹಾರಿ ಚ ದುರ್ಲಭಂ ವಚಃ’ ಎಂಬ ನೀತಿ ವಚನದಂತೆ ಹಿತವನ್ನುಂಟುಮಾಡುವುದಾಗಿಯೂ ಮನಸ್ಸಿಗೆ ಆನಂದಕಾರಿಯಾಗಿಯೂ ಇರತಕ್ಕ ಮಾತು ಬಹಳ ದುರ್ಲಭವಾಗಿರುವುದು, ಈ ವಿಷಯವು ಪ್ರಕೃತ ನಿಮ್ಮ ಅನುಭವಕ್ಕೆ ಒದಗಿದೆ. ನೀವು ನಿಮ್ಮ ಬಂಧುಗಳ ಹಿತಕ್ಕಾಗಿ ಉಪದೇಶಿಸಿ ಅವರ ಆಗ್ರಹಕ್ಕೇ ಪಾತ್ರರಾಗುವಿರಲ್ಲದೆ ಅನೇಕ ಕಷ್ಟನಷ್ಟಕ್ಕೂ ಒಳಗಾಗುವಿರಿ. ನಿಮ್ಮ ಕಾರ್ಯವು ಶತ್ರುಗಳಿಂದ ಆತಂಕಿಸಲ್ಪಡುವುದು. ಆದರೂ ನಿಮ್ಮ ಆದಾಯವು ಚೆನ್ನಾಗಿಯೇ ಇರುವುದು. ಸಾಹಸಪ್ರಿಯರಾದ ನೀವು ಇತರರ ಹೊಗಳಿಕೆಗಳಿಗೆ ಕಿವಿಗೊಡದೆ ಸ್ವಕಾರ್ಯತತ್ಪರರಾಗುವಿರಿ. ತಾ 26ರಿಂದ 30ರ ವರೆಗೆ ಅನುಕೂಲ.

ಮಕರ—ಆಯ ವ್ಯಯಗಳೂ ಜಯಾಪಜಯಗಳೂ ಈ ವಾರದಲ್ಲಿ ನಿಮಗೆ ಸಮಾನವಾಗಿರುವವು. ರಾಜಕೀಯ ಚಳವಳಿ ವಾಣಿಜ್ಯದಲ್ಲೂ ಇಷ್ಟಾರ್ಥವು ನಿರಾತಂಕವಾಗಿ ಕೊನೆಗೊಳ್ಳುವುದು. ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ ಎಂದಂತೆ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲವು ದೂರವೇ ಇರುವುದು. ಆದರೂ ಸಿಕ್ಕಿದ ಕಾಸು ಕೈಯಲ್ಲಿ ಉಳಿಯಲಾರದು. ಅನಾರೋಗ್ಯ, ಮಿತ್ರ, ಭಾರ್ಯಾ ಇವರ ವಿಯೋಗ ಇತ್ಯಾದಿಗಳಿಂದ ಮನಸ್ಸು ಬಹಳ ನೋಯುವುದು. ಇಂದ್ರಿಯ ನಿಗ್ರಹದಿಂದ ಮುಕ್ತರಾದ ನಿಮಗೆ ತಾ. 24ರಿಂದ 28ರ ವರೆಗೆ ಚೆನ್ನಾಗಿಲ್ಲವು.

ಕುಂಭ—‘ಭಾಗ್ಯಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಂ’ ಎಂಬ ಲೋಕೋಕ್ತಿಯಂತೆ ಸಾಹಸ ವಿದ್ಯೆಗಳಿಗಿಂತಲೂ ಭಾಗ್ಯವು ಸರ್ವತ್ರ ಫಲಕಾರಿಯಾಗುವುದು, ಇಂತಹ ಭಾಗ್ಯವನ್ನು ಹೊಂದಿದ ನಿಮಗೆ ಈ ವಾರವು ಕಳೆದದ್ದೇ ತಿಳಿಯದಾಗುವುದು. ಸಕಲ ವಿಚಾರಗಳಲ್ಲೂ ನಿಮ್ಮ ಶಕ್ತಿಯು ಯುಕ್ತಿಯು ನಿರರ್ಗಲವಾಗಿ ಫಲಕಾರಿಯಾಗುವುದು. ಮಹತ್ವಾಕಾಂಕ್ಷಿಗಳು ಇಂತಹ ಸುಸಂದರ್ಭವನ್ನು ಎಂದೂ ನಿರರ್ಥಕವಾಗಿ ಕಳೆಯಲಾರರು. ಶರೀರ ವಿಷಯದಲ್ಲಿ ಹೆಚ್ಚಿನ ನಿಗಾ ಇಡಿರಿ. ತಾ. 24, 25 ಅತ್ಯುತ್ತಮ.

ಮೀನ—ನಿಮ್ಮ ಔದಾರ್ಯವೇ ನಿಮ್ಮ ಮುಂದೆ ಅಪಕೀರ್ತಿಯಾಗಿ ಬಂದು ನಿಂತಿದೆಯೆಂದು ಹೇಳಬೇಕಾಗಿದೆ. ಯಾಕೆಂದರೆ ಅವನೊಬ್ಬ ಗ್ರಹನ ಅನುಗ್ರಹವೂ ನಿಮಗೀ ಕಾಲದಲ್ಲಿ ಇಲ್ಲವೆಂದರೆ ಇದಕ್ಕಿಂತ ಹೆಚ್ಚಿನ ಕಷ್ಟವು ನಿಮಗೆ ಹಿಂದೆ ಬಂದಿರದು ಮುಂದೆ ಬರಲಾರದು. ನಿಮ್ಮ ಮನಸ್ಸಿನ ನೆನಸುಗಳೆಲ್ಲವೂ ಕನಸಿನಂತಾಗುವವು. ಪ್ರತಿಯೊಂದು ವಿಭಾಗದಲ್ಲೂ ನಿಮಗೆ ಕಷ್ಟನಷ್ಟಗಳೇ ಹೆಚ್ಚುವವು. ಅಂತೂ ಈ ಒಂದು ವಾರವು ಒಂದು ವರ್ಷಕ್ಕಿಂತಲೂ ಅಧಿಕವಾಗಿ ತೋರೀತು. ಕಲ್ಯಾಣಾಪೇಕ್ಷಿಗಳು ತಾ. 23, 26, 27, 28 ಈ ದಿನಗಳಲ್ಲಿ ಗ್ರಹಪ್ರಾರ್ಥನಾ ಸ್ತೋತ್ರಜಪಾದಿಗಳನ್ನು ಮಾಡಬೇಕು.

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S India.)

Everyday the Membership increases

The Company issues all the well-known plans of Assurance

Female lives accepted.

JOIN ITS EVER INCREASING MEMBERSHIP.

೧೧ನೇ ಕರ್ನಾಟಕ ಆಯುರ್ವೇದ ಸಮ್ಮೇಲನ—ಡಿಶೆಂಬರ ೨೮ ೨೯ ೩೦ಕ್ಕೆ ಕಾರವಾರ ಜಿಲ್ಲಾ ಶಿರ್ಶಿಯಲ್ಲಿ ಕೂಡುವ ನಿ ಕ ಆ ಸಮ್ಮೇಲನದ ೧೧ನೇ ಅಧಿವೇಶನಕ್ಕೆ ವಿಜಾಪುರದ ಪ್ರಸಿದ್ಧ ವೈದ್ಯರಾದ ಶ್ರೀ ಆದ್ಯ ಅನಂತಾಚಾರ್ಯರು ಆರಿಸಲ್ಪಟ್ಟ ಸಂಗತಿ ಪ್ರಸಿದ್ಧವಾಗಿದೆಯಷ್ಟೆ ರೀತಿಯಂತೆ ಸ್ವಾಗತಸಮಿತಿಯವರು ಅಧ್ಯಕ್ಷಸ್ಥಾನ ಸ್ವೀಕರಿಸಲು ವಿನಂತಿಮಾಡಿಕೊಂಡ ಪ್ರಕಾರ ಶ್ರೀ ಆದ್ಯರು ಆಮಂತ್ರಣವನ್ನು ಸ್ವೀಕರಿಸಿದುದು ಆನಂದದ ಸಂಗತಿ

ಸಮ್ಮೇಲನವನ್ನು ಇದೇ ಡಿಶೆಂಬರ ತಿಂಗಳ ತಾ ೨೮-೨೯-೩೦ ಹೀಗೆ ಮೂರುದಿನ ಕೂಡಿಸುವುದೆಂದು ನಿಶ್ಚಯಿಸಿರುತ್ತದೆ ಈ ತಾರೀಕುಗಳಲ್ಲಿ ಹೆಚ್ಚು ಕಡಿಮೆಯಾದರೆ ಹಿಂದಿನಿಂದ ಪ್ರಕಟಿಸಲ್ಪಡುವುದು.

ಪ್ರತಿನಿಧಿಗಳಿಗೆ ಉಳಕೊಳ್ಳುವ ಯೋಗ್ಯವಾದ ವ್ಯವಸ್ಥೆಮಾಡಲಾಗಿದೆ ಎಲ್ಲ ವೈದ್ಯರೂ ಆಯುರ್ವೇದಾಭಿಮಾನಿಗಳೂ ಈ ಮಹತ್ವದ ಸಮ್ಮೇಲನಕ್ಕೆ ಹಾಜರಾಗಿ ಕಾರ್ಯಕ್ಕೆ ಶೋಭೆತರಬೇಕೆಂದು ಸ್ವಾಗತ ಸಮಿತಿಯವರು ವಿನಂತಿಮಾಡುತ್ತಾರೆ.

ಥಕ್ಕರ್ ಬಾಪಾ ಜಯಂತಿ

ಮಹಾಜನರಲ್ಲಿ ವಿಜ್ಞಾಪನೆ,

ಹರಿಜನ ಉನ್ನತಿಗಾಗಿ ದೇಶದಲ್ಲೆಲ್ಲಾ ಹಬ್ಬಿಗಿ ದುಡಿಯುತ್ತಿರುವ ಪ್ರಮುಖ ಸಂಸ್ಥೆಯೆಂದರೆ ಅಖಿಲ ಹಿಂದೂಸ್ಥಾನದ ಹರಿಜನ ಸೇವಕಸಂಘವು ಅದರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಅಮೃತಲಾಲ್ ಥಕ್ಕರ್ ಎಂಬುವವರೇ ಅದರ ನಿಜವಾದ ಜೀವವೆಂದರೂ ಅತಿಶಯೋಕ್ತಿಯಲ್ಲ ಅವರು ಹರಿಜನರ ಹಾಗೂ ಅವರಂತಹ ಎಲ್ಲರ ಜನಕರೆಂದು ಗಾಂಧಿಜಿಯವರೇ ಅಭಿಪ್ರಾಯಪಟ್ಟಿದ್ದಾರೆ ಅವರನ್ನು ಬಲ್ಲವರೆಲ್ಲಾ 'ಬಾಪಾ' ಎಂದೇ ಸರ್ವತ್ರ ಕರೆಯುತ್ತಿದ್ದಾರೆ ಯಾವುದೊಂದು ಹೊಗಳಿಕೆಯ ಕಡೆಗೂ ದೃಷ್ಟಿಯಿಡದೆ ಜನತಾಸೇವೆಯ ನಿರಂತರ ಪರಿಶ್ರಮದಲ್ಲೇ ನಿತ್ಯ ತೃಪ್ತರಿದ್ದು, ತಮ್ಮ ಇಳಿವಯಸ್ಸನ್ನು ಕೂಡಾ ಲಕ್ಷಿಸದೆ, ಕಾರ್ಯರಂಗದಲ್ಲಿ ಮುಂದೊತ್ತಿ ಅಗಾಧ ಸಾಹಸವನ್ನು ತೋರಿಸುವ ಅವರಂತಹ ಮಹನೀಯರು ತೀರಾ ವಿರಳ. ಅವರ ಮಧುರವಾದ ಮಾತು, ಸರಳವಾದ ಜೀವನ ಮತ್ತು ಅವಿಶ್ರಾಂತ ಪರಿಶ್ರಮಗಳು ಯಾರನ್ನಾದರೂ ಮೆಚ್ಚಿಸುವುದರಲ್ಲಿ ಅನುಮಾನವಿಲ್ಲ ಅವರು ಈ ಮೊದಲು ಮೂರುಸಾರಿ ಮಂಗಳೂರಿಗೆ ಬಂದಿರುತ್ತಾರೆ

ತಾ 29 11-'39ನೇ ದಿನ ಅವರ 70ನೇ ವಯಸ್ಸು ತುಂಬುವುದು ಈ ಸಂದರ್ಭದಲ್ಲಿ ಅವರಂತಹ ಅಪೂರ್ವ ಕಾರ್ಯಕರ್ತರನ್ನು ಸನ್ಮಾನಿಸುವುದಕ್ಕಾಗಿ ಅವರಿಗೊಂದು ಥೈಲಿಯನ್ನು ಸಮರ್ಪಿಸಬೇಕೆಂದು ಡಿಲ್ಲಿಯಲ್ಲಿರುವ ಹರಿಜನ ನಿವಾಸದ ಬಂಧುಗಳು ನಿಶ್ಚೈಸಿರುತ್ತಾರೆ ಆ ಥೈಲಿಯು 70ಸಾವಿರ ರೂಪಾಯಿಯದ್ದಾದರೂ ಇರಬೇಕೆಂದು ಮಹಾತ್ಮಾಗಾಂಧಿಯವರ ಆಗ್ರಹದ ವಿನಂತಿಯು ಆ ಮೊದಲೇ ಹೊರಟಿರುತ್ತದೆ ಇಂದಿನ ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದರೂ ಕೂಡ ಅದನ್ನು ಸಮರ್ಥಿಸಿದ್ದಾರೆ ಆದ್ದರಿಂದ ಈ ಭಾರವು ಇಡೀ ದೇಶದ ಎಲ್ಲವರದೆಂದಾಯ್ತು.

ಕರ್ನಾಟಕ ಪ್ರಾಂತದಿಂದ ಕಡಿಮೆ ಪಕ್ಷ ಎರಡು ಸಾವಿರ ರೂಪಾಯಿಯ ನಿಧಿಯನ್ನಾದರೂ ಸಂಗ್ರಹಿಸಿ ಕಳುಹಿಸಬೇಕಾಗಿದೆ ಆದ್ದರಿಂದ ನಮ್ಮ ಜಿಲ್ಲೆಯ ಪರವಾಗಿ ನಾವು ಕೂಡಾ ನಿಧಿಸಂಗ್ರಹಮಾಡಬೇಕೆಂದು ಮೊನ್ನೆ ತಾನೇ ನಡೆದ ಜಿಲ್ಲಾ ಹರಿಜನ ಸೇವಕ ಸಂಘದ ಸಭಾಸಭೆಯಲ್ಲಿ ನಿರ್ಣಯವಾಗಿರುತ್ತದೆ ಈ ಭಾಗದಲ್ಲಿ ಎಲ್ಲಾ ಸ್ಥಳೀಕ ಕಾಂಗ್ರೆಸ್ ಕಮಿಟಿಗಳೂ, ಇತರ ಸಾರ್ವಜನಿಕ ಸಂಸ್ಥೆಗಳೂ, ಮತ್ತು ಮಹನೀಯರೆಲ್ಲರೂ ಸಂಪೂರ್ಣ ಸಹಕಾರವಿತ್ತು ನಮ್ಮನ್ನು ಪ್ರೋತ್ಸಾಹಿಸುವರಾಗಿ ನಂಬಿರುತ್ತೇವೆ ಸಂಗ್ರಹವಾದ ಹಣವನ್ನು ಜಿಲ್ಲಾ ಹರಿಜನ ಸೇವಕ ಸಂಘ, ಅತ್ತಾವರ, ಮಂಗಳೂರು ಎಂಬ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸುತ್ತೇನೆ ತಾ. 29 11 39ನೇ ಸಾಯಂಕಾಲ ಘಂಟೆ 5 30ಕ್ಕೆ ಮಂಗಳೂರು ಡಿ ಸಿ ಮಿಶ್ಯನ್ ಸಭಾಸದನದಲ್ಲಿ ಜರಗಲಿರುವ ಥಕ್ಕರ್ ಬಾಪಾರವರ ಭಾವಚಿತ್ರದ ಅನಾವರಣ ಸಮಾರಂಭಕ್ಕೂ, ಸಾರ್ವಜನಿಕ ಸಭೆಗೂ ದಯವಿಟ್ಟು ಬರಬೇಕಾಗಿ ವಿನಂತಿ

(ಸಹಿ) ಯಚ್ ವಿ ಅಡಪ,
ಅಧ್ಯಕ್ಷ
ದ. ಕ. ಜಿಲ್ಲಾ ಹರಿಜನ ಸೇವಕ ಸಂಘ

ಕಮಲ ನೆಹರು ಸ್ಮಾರಕ ಆಸ್ಪತ್ರೆ

(೫ನೇ ಪುಟದಿಂದ ಮುಂದುವರಿದುದು)

ವಾಗಿ ಬೆಳೆಯಹತ್ತಿತು ನಮ್ಮ ಉಭಯರೂ ಪವಾದ ಸಮ್ಮಿಲನವು ಅನುಕೂಲ್ಯವಾಗಹತ್ತಿತು ಅವುಗಳನ್ನು ನಾವು ನಿರೀಕ್ಷಿಸುತ್ತಾ ದಿನ ಎಣಿಸಹತ್ತಿದೆವು. ನಾವು ಪರಸ್ಪರ ಬೆರತು ಒಟ್ಟಾಗಿದ್ದಾಗಲೆಲ್ಲಾ ನಮ್ಮಲ್ಲಿ ನವನವ ಭಾವನೆ ಮತ್ತು ವಿಚಾರಗಳುಂಟಾಗುತ್ತಿದ್ದವು ನಾವು ಒಬ್ಬರೊಬ್ಬರಲ್ಲಿ ಹೊಸ ಶೋಧಗಳನ್ನು ಮಾಡಿಕೊಳ್ಳುತ್ತಿದ್ದೆವು 18ವರ್ಷಗಳ ವಿವಾಹಿತ ಜೀವನ! ಆದರೆ ಅದೆಷ್ಟು ದೀರ್ಘ ವರ್ಷಗಳನ್ನು ನಾವು ಬೇರೆಬೇರೆಯಾಗಿ ಕಳೆದಿಲ್ಲ! ನಾನು ಕಾರಾಗೃಹಗಳಲ್ಲಿ ಅವಳು ಆಸ್ಪತ್ರೆ ಆರೋಗ್ಯ ವಸತಿಗಳಲ್ಲಿ. ಪುನಃ ನಾನೀಗ ಕಾರಾಗೃಹವಾಸಿಯಾಗಿ, ಕಮಲೆಯು ಕಠಿಣ ರೋಗಪೀಡಿತೆಯಾಗಿ ಜೀವನಕ್ಕಾಗಿ ಹೋರಾಡುತ್ತಿರುವಾಗ ಕೆಲವೇ ದಿನಗಳ ಸ್ವಾತಂತ್ರ್ಯ ಪಡೆದು ಅವಳ ಶಯ್ಯೆಯ ಬಳಿಗೆ ಬಂದಿರುವೆನು" ಪಂಡಿತ ಜವಾಹರಲಾಲರು ಮತ್ತೊಮ್ಮೆ ಸೆರೆಮನೆಯಿಂದ ಹೊರಬಂದುಹೋದಾಗ ಅವರಲ್ಲುಂಟಾದ ಭಾವನೆಗಳಿವು.

"ಅವಳು ತನ್ನ ಆರೋಗ್ಯದ ಕುರಿತು ಅಜಾಗರೂಕಳಾಗಿರುವುದರಿಂದ ನಾನು ಸ್ವಲ್ಪ ಸಿಟ್ಟುಗೊಳ್ಳುತ್ತಿದ್ದೆನು. ಆದರೆ ನಾನವಳನ್ನು ದೂರುವುದಾದರೂ ಹೇಗೆ? ರಾಷ್ಟ್ರೀಯ ಹೋರಾಟದಲ್ಲಿ ಸಂಪೂರ್ಣ ಪಾಲು ಪಡೆಯದೆ ಸುಮ್ಮನಿರಲು ಅವಳ ಉಜ್ವಲ ದೇಶಾಭಿಮಾನಿ ಮನಸ್ಸು ಒಡಂಬಡುತ್ತಿದ್ದಿಲ್ಲ ಶಾರೀರಿಕ ದುರ್ಬಲತೆಯಿಂದಾಗಿ ಅವಳಿಗೆ ಸಂಪೂರ್ಣ ದೇಶಸೇವೆಯಲ್ಲಿ ನಿರತವಾಗಲು ಸಾಧ್ಯವಾಗುತ್ತಿದ್ದಿಲ್ಲ ಚಿಕಿತ್ಸೆಯಲ್ಲೇ ಕಾಲಕಳೆಯಲು ಅವಳ ಮನಸ್ಸು ಕೇಳುತ್ತಿದ್ದಿಲ್ಲ ಒಳಗಿನ ಅಗ್ನಿಯು ಅವಳ ಶರೀರವನ್ನು ದಹಿಸಿ ಕುಂದಿಸಿ ಬಿಟ್ಟಿತು."

"ನನಗೆ ಅವಳು ಬಹಳವಾಗಿ ಬೇಕಾಗಿರುವಾಗ ನಿಜವಾಗಿಯೂ ನನ್ನನ್ನು ಬಿಟ್ಟು ಹೋಗಲಾರಳು ನಾವು ಈಗ ತಾನೆ ಒಬ್ಬರೊಬ್ಬರನ್ನು ಅರಿತುಕೊಳ್ಳ ಹತ್ತಿರುವೆವು. ನಮ್ಮೊಳಗಿನ ನಿಜ ಪರಿಚಯದ ಜೀವನವು ಆರಂಭವಾಗಿರುವದೆಂದರೆ ಈಗ ನಮ್ಮ ದಾಂಪತ್ಯ ಜೀವನ. ಕುಸುಮವು ಅರಳತೊಡಗಿರುವುದೇ ಈಗ ನಾವು ಎಷ್ಟೊಂದು ಪರಸ್ಪರ ಹೊಂದಿಕೊಂಡಿರುವೆವು! ಎಷ್ಟು ಕಲಸಗಳನ್ನೆಲ್ಲಾ ಒಟ್ಟಾಗಿ ಮಾಡುತ್ತಿರುವೆವು!"

ಸ್ವಿಜರ್ಲೆಂಡಿನ ಬೆಡೆಸ್ ವೈಲರ್ ಆರೋಗ್ಯ ವಸತಿಯಲ್ಲಿ ಕಮಲ ನೆಹರುಗಳ ಮೃತ್ಯು ಶಯ್ಯೆಯ ಬಳಿಯಲ್ಲಿ ಪಂಡಿತರು ದಿನ ದಿನ ತಾಸು ತಾಸು ಕಳೆಯುತ್ತಿದ್ದಾಗ ಈ ರೀತಿ ಇತ್ತು ಅವರೆಣಿಕೆ ತನ್ನ ಪ್ರಿಯಪತ್ನಿಯ ಕುರಿತು ಆದರೆ ವಿಧಿಯಣಿಕೆ ಬೇರೆಯೇ ಆಯಿತು

PRESS COMMUNIQUE.

Post to neutral countries under permit system

From referenceces received in the Postmaster-General s office it is observed that the public have still not familiarised themselves with the regulations governing the posting of second class mail matter to neutral contries The following communique is therefore re-published for general information

Printed papers, samples, insured boxes parcels or literature for the blind will not be accepted for transmission by post to any country other than the British Empire (excluding Eire or Southern Ireland) and France without a permit from the Chief Censor, India. Such permits will be issued on application to the Chief Censor, Army Headquarters New Delhi/Simla No such permits are required for any place in the British Empire (excluding Eire) and France.

2 Mail communication with Poland Danzing and Germany has been suspended

3 No permit is required for remitting money orders to foreign countries Money orders may be remitted to foreign countries other than Germany or Poland provided (a) that the maximum amount which any one remitter may send per day is limited to £40 to Great Britain and Northern Ireland and to £5 or Rs 70 to other countries, and (b) the remitter makes a declaration of the purpose of remittance at the foot of the money order form

Note– Business papers will not be mis taken for printed papers and a permit which is necessary in respect of the letter will not be demanded by the post office in respect of the former In this connection attention is invited to clauses 160 and 174 of the Post and Telegraph Guide Sept ember 1939) which define printed papers and business papers respectively Business papers, though printed, if they really are purely business papers as defined in the Post and Telegraph Guide will be allowed to go without a permit though they may be subjected to censorship like articles of the letter mail

ಕೋಪ್ರಾನದ ಬಿಳೀ ಟೂಥಪೇಸ್ಟ ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತನೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು ತಯಾರಿಸುವವರು— ಕೋಪ್ರಾನ್ ಕೆಮಿಕಲ್ ಕಂ (ಮಾಲಕರು —ಮಗನಭಾಯಿ ಅಮೀನ್ ಅಂಡ್ ಕಂಪೆನಿ ಮುಂಬಯಿ)

ಕೂಪರನ್ ಲಾರ್ಜ ಸೈಜು 0 13 0, ಕೂಪರನ ಸ್ಟ್ಯಾಂಡರ್ಡ ಸೈಜು 0 8 0. ಟೆಂಡರ್ಗಮ್ ಸ್ಟ್ಯಾಂಡರ್ಡ ಸೈಜು 0 8 0

ಸ್ವಸ್ತಿಕ "ಕಾಂತಿ" ಟ್ಯೊಲೆಟ್ ಸೋಪ್

ಪ್ರತಿಯೊಬ್ಬರ ಅಚ್ಚುಮೆಚ್ಚಿನದಾಗಿದೆ.

ಹೀಗಿರುವಾಗ ನೀವೂ ಇದನ್ನೇ ಏಕೆ ಉಪಯೋಗಿಸಬಾರದು?

ಅತಿ ಕಡಿಮೆ ಕ್ರಯಕ್ಕೆ ಅತ್ಯುತ್ತಮ ಟ್ಯೊಲೆಟ್ ಸೋಪೆಂದರೆ ಇದೊಂದೇ.

ಎಲ್ಲೆಲ್ಲೂ ಮಾರಲ್ಪಡುತ್ತದೆ.

ತಪ್ಪಿಸಿಕೊಂಡು ಬಂದಿರುವ ಪೋಲಿಶ್ ಅಧಿಕಾರಿಗಳ ಅನುಭವ

ಪೋಲರು ಬ್ರಿಟಿಷ್ ನೌಕಾಪಡೆಯ ಸಹಾಯವನ್ನು ನಿರೀಕ್ಷಿಸಿದ್ದರು.

ಪೂರ್ವ ಪೋಲಂಡನ್ನು ಸೋವಿಯೆಟ್ ರಷ್ಯವು ವಶಪಡಿಸಿಕೊಂಡ ರೀತಿ.

ವಾರ್ಸೋ ಪಟ್ಟಣದಿಂದ ರುಮೇನಿಯ ಎಲ್ಲೆಯಲ್ಲಿರುವ ಕುಟ್ಟಿ ಎಂಬ ಸ್ಥಳಕ್ಕೂ, ಅಲ್ಲಿಂದ ರುಮೇನಿಯದ ಮುಖ್ಯ ಪಟ್ಟಣವಾದ ಬುಖರೆಸ್ಟಿಗೂ, ಅನಂತರ ಯುಗೋಸ್ಲೋವಿಯ ಇಟಲಿಗಳ ಮಾರ್ಗವಾಗಿ ಸ್ವಿಸರ್ಲೆಂಡಿಗೂ ಬಂದು ಮುಂದೆ ಅಮೇರಿಕದ ಯುನೈಟೆಡ್ ಸ್ಟೇಟ್ಸಿಗೆ ಹೋಗಲಿರುವ ಪೋಲಿಶ್ ರಾಜ್ಯತಂತ್ರ ಖಾತೆಯ ಅಧಿಕಾರಿಗಳು ಕೆಲವರಿಂದ ಪೋಲಿಶ್ ಯುದ್ಧದ ಮತ್ತು ಅನಂತರದ ತಮ್ಮ ಅನುಭವವನ್ನು ಪತ್ರಿಕಾ ವ್ಯವಸಾಯಿಗಳು ಪಡೆದು ಪ್ರಕಟಿಸಿರುವರು. ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

೧೯೨೦ರ ಬೊಲ್ಶೆವಿಕ್ ಸೇನೆಗಿಂತಲೂ ಎಷ್ಟೋ ಬಲಶಾಲಿ ಸೇನೆಯನ್ನು ತಾವು ವಿರೋಧಿಸಬೇಕಾಗದೆಯೆಂಬುದು ಪೋಲರಿಗೆ ಯುದ್ಧಾರಂಭದಲ್ಲೇ ಸಿದ್ಧವಾಗಿದ್ದಿತು. ಆದರೆ ಇಷ್ಟೊಂದು ಬೇಗ ಪೋಲಂಡು ಜರ್ಮನರ ವಶವಾಗುವುದೆಂದು ಯಾರೂ ಕನಸಿನಲ್ಲೂ ನೆನಸಲಿಲ್ಲ. ಜರ್ಮನಿಯನ್ನು ಏಕಾಕಿಯಾಗಿ ವಿರೋಧಿಸಲು ಪೋಲಂಡಿಗೆ ಸಾಧ್ಯವೇ ಇಲ್ಲೆಂಬುದನ್ನು ಪೋಲಿಶ್ ಸೈನ್ಯಾಧಿಕಾರಿಗಳು ಮನಗಂಡಿದ್ದರು. ಆದರೆ ಬ್ರಿಟಿಷ್ ಯುದ್ಧಹಡಗಗಳು ಗಿಡ್ನಿಯಾ ಬಂದರಿಗೆ ಬಂದು ಜರ್ಮನ್ ಸೇನೆಯ ಮೇಲೆ ತುಪಾಕಿ ಗುಂಡುಗಳ ಮಳೆಗರೆದು ಸಹಾಯಮಾಡುವವೆಂದು ಅವರ ಮುಖ್ಯ ಆಶೆಯಾಗಿತ್ತು. ಬ್ರಿಟಿಷ್ ನೌಕಾಪಡೆಯ ಮೇಲೆ ಪೋಲರಿಗೆ ಅಷ್ಟೊಂದು ವಿಶ್ವಾಸವಿದ್ದಿತು. ಇದು ಹೊರತು ಕಳೆದ ೬ ವರ್ಷಗಳಿಂದ ಬ್ರಿಟನು ಯುದ್ಧೋಪಕರಣಗಳಿಗಾಗಿ 1,000,000,000,000 ಪವನಿಗಿಂತಲೂ ಹೆಚ್ಚಿನ ಹಣವನ್ನು ಉಪಯೋಗಿಸಿರುವುದು. ನಾಝಿ ಜರ್ಮನಿಗೆ ಇಷ್ಟೊಂದು ಹಣವನ್ನು ವೆಚ್ಚಮಾಡುವುದಂತಿರಲಿ, ಸಂಗ್ರಹಿಸಲು ಕೂಡ ಸಾಧ್ಯವಿಲ್ಲ. ಆದುದರಿಂದ ಪೋಲರಿಗೆ ಫ್ರಾನ್ಸಿನ ಮೇಲೆ ಅಷ್ಟೇನೂ ವಿಶ್ವಾಸವಿರದಿದ್ದರೂ, ಇಂಗ್ಲೆಂಡಿನ ಕುರಿತು ತುಂಬಾ ಭರವಸೆಯಿದ್ದಿತು. ಬ್ರಿಟಿಷ್ ಯುದ್ಧ ಹಡಗಗಳು ಡಾನ್ಜಿಗ್ ಮತ್ತು ಕೋನಿಗ್ಸ್‌ಬರ್ಗಗಳ ಮೇಲೆ ನೌಕಾ ಧಾಳಿನಡಿಸಿ, ಗಿಡ್ನಿಯಾದಲ್ಲಿ ನೌಕಾಸೇನೆಯು ಇಳಿದು ಹೋರಾಟ ನಡಿಸಿ ಜರ್ಮನರನ್ನು ಕಂಗೆಡಿಸುವುದೆಂದು ಪೋಲರು ನಿರೀಕ್ಷಿಸುತ್ತಿದ್ದರು. ಆದರೆ ಹಾಗೇನೂ ಆಗಲೇ ಇಲ್ಲ. ಯಾಕೆಂದರೆ ಹಿಟ್ಲರರು ಬರೇ ಜಂಬಕೊಡೆಯುತ್ತಿರುವರಲ್ಲದೆ ಕಾರ್ಯತಃ ಏನೂ ಮಾಡಲಾರರೆಂದು ಪಶ್ಚಿಮ ಯುರೋಪಿನಲ್ಲಿ ಹೆಚ್ಚಿನವರ ನಂಬಿಕೆಯಾಗಿತ್ತು. ಬಗಳುವ ನಾಯಿ ಕಚ್ಚುವುದಿಲ್ಲೆಂದು ಇಂಗ್ಲೆಂಡು ಮತ್ತು ಫ್ರಾನ್ಸುಗಳು ನೆನಸಿ ವಂಚಿತವಾದುವು. ಆದುದರಿಂದ ಕಡೆಯವರೆಗೂ ಬ್ರಿಟಿಷ್ ನೌಕಾಪಡೆಯು ಶೀಘ್ರಯುದ್ಧಕ್ಕೆ ತಯಾರಾಗಿದ್ದಿಲ್ಲ. ಇದನ್ನು ತಿಳಿದುಕೊಂಡೇ ಜರ್ಮನಿಯು ಅಷ್ಟೊಂದು ಅವಸರದಿಂದ ರಷ್ಯದೊಡನೆ ಒಪ್ಪಂದಮಾಡಿ ಒಡನೆಯೇ ಪೋಲಂಡಿನ ಮೇಲೆ 3 ಕಡೆಗಳಿಂದ ತನ್ನ ಸಂಪೂರ್ಣ ಶಕ್ತಿಯನ್ನುಪಯೋಗಿಸಿ ಧಾಳಿನಡಿಸಿ ಜಯಶೀಲವಾಯಿತು.

ಲೋಕದ ಮುಂದಿನ ಗತಿಯೇನು?

ಈ ಯುದ್ಧವು ಬೇಗನೆ ಕೊನೆಗೊಂಡದೆ ದೀರ್ಘ ಕಾಲ ನಡೆದರೆ ಲೋಕದ ಮುಂದಿನ ಗತಿಯೇನೆಂಬುದೇ ಈಗಣ ಪ್ರಶ್ನೆ. ಅಮೇರಿಕ ಮತ್ತು ಇಟೆಲಿಗಳು ಪ್ರಯತ್ನಿಸಿ ರಾಜಿಮಾಡಿ, ಯುದ್ಧ ಪೂರ್ವ ಯುರೋಪಿನ ಅಸ್ಥಿರ ಸ್ಥಿತಿಯನ್ನೇ ಪುನಃ ನೆಲೆಗೊಳಿಸದಿದ್ದ ಪಕ್ಷದಲ್ಲಿ ಯುದ್ಧಾಂತ್ಯದಲ್ಲಿ ಭಂಡವಾಳಶಾಹಿ ಪದ್ಧತಿಯು ಸಂಪೂರ್ಣ ಮಾಪಾರ್ಟವಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. 1914–18ರ ಯುದ್ಧದಲ್ಲಿ ಹೋರಾಡಿದ ರಾಷ್ಟ್ರಗಳಲ್ಲೆಲ್ಲಾ, ಪ್ರಾಮುಖ್ಯ ಕೈಗಾರಿಕೆ, ಸಂಚಾರಾನುಕೂಲತೆ, ಆಹಾರ ಸಾಮಗ್ರಿ ಹಂಚುವಿಕೆ ಮೊದಲಾದ ಜೀವನಾವಶ್ಯಕವಾದ ಎಲ್ಲಾ ವಿಷಯಗಳನ್ನೂ ಸರಕಾರವು ತನ್ನಾಧೀನಮಾಡಿಕೊಂಡು ನಡಿಸಿದ್ದಿತು. ಈಸಲ ಇಷ್ಟರವರೆಗೆ ನಿಜವಾದ ಯುದ್ಧವೇ ಆರಂಭವಾಗಿರುವಂತಿಲ್ಲ. ಇಷ್ಟರಲ್ಲೇ ಸರಕಾರಗಳು ಸಾಮಾನ್ಯ ನಾಗರಿಕ ಹಕ್ಕುಬಾಧ್ಯತೆಗಳ ಮೇಲೆ ಬಹಳ ನಿರ್ಬಂಧಹಾಕಿವೆ. ದೀರ್ಘ ಕಾಲದವರೆಗೆ ಕಾಯುವ ಶಕ್ತಿಯು ಯಾವ ಕಡೆಗಿರುವುದೋ ಆ ಕಡೆ ಈ ಯುದ್ಧದಲ್ಲಿ ಜಯಹೊಂದುವುದು. ಆದರೆ ಅದಕ್ಕೆ ದೀರ್ಘ ಸಮಯ ತಾಗುವುದು. ಆಗ ಇಷ್ಟರಲ್ಲೇ ಮುಗ್ಗರಿಸಹತ್ತಿರುವ ಈಗಣ ಭಂಡವಾಳಶಾಹಿ ಪದ್ಧತಿಯು ಸಂಪೂರ್ಣ ಮಾಪಾರ್ಟಹೊಂದದಿರಲಾರದು.

ಸಾಕಷ್ಟು ಪೆಟ್ರೋಲ್ ದೊರೆತರೆ ಮಾತ್ರ ಜರ್ಮನಿಗೆ ತನ್ನ ಪ್ರಚಂಡ ವಿಮಾನಪಡೆಯನ್ನುಪಯೋಗಿಸಲು ಸಾಧ್ಯವಾಗುವುದು. ಅದು ಹೆಚ್ಚಾಗಿ ರುಮೇನಿಯದಿಂದ ಪೆಟ್ರೋಲ್ ಪಡೆಯಬೇಕು. ಆ ದಾರಿಗೀಗ ರಷ್ಯವು ಅಡ್ಡಬಂದಿದೆ. ಪೋಲಂಡಿನ ಎಣ್ಣೆಗನಿ ಪ್ರದೇಶವು ಕೂಡಾ ರಷ್ಯದ ವಶವಾಗಿದೆ. ಆದುದರಿಂದ ಜರ್ಮನಿಯ ವಿಮಾನ ಯುದ್ಧ ಶಕ್ತಿಯು ರಷ್ಯದ ಮೇಲೆ ಹೊಂದಿಕೊಂಡಿದೆ. ರಷ್ಯವು ಸಂಪೂರ್ಣ ಮನಸ್ಸಿನಿಂದ ಜರ್ಮನಿಯೊಡನೆ ಸಹಕರಿಸದಿದ್ದ ಪಕ್ಷದಲ್ಲಿ ಹರ್ ಹಿಟ್ಲರರ ವಿಜಯದ ಸಂಭವವು ಬಹಳ ಕಡಿಮೆಯಾಗುವುದು. ಅದು ಸಹಾಯಮಾಡಿದ ಪಕ್ಷದಲ್ಲಿ ಪರಿಸ್ಥಿತಿಯು ಮತ್ತಷ್ಟು ವಿಷಮಗೊಂಡು, ಪರಿಣಾಮವೇನಾಗುವುದೆಂದು ಹೇಳಬರುವುದಿಲ್ಲ.

ಸೋವಿಯೆಟ್ ರಾಜ್ಯಭಾರ ಸ್ಥಾಪನೆ

ಪೂರ್ವ ಪೋಲಂಡಿನ ಸ್ಟನಿಸ್ಲವೋವ್ ಎಂಬ ಪಟ್ಟಣವನ್ನು ರಷ್ಯದ ಸೇನೆಯ ಧಾಳಿಯನ್ನಿದಿರಿಸಿ ರಕ್ಷಿಸಬೇಕೆಂದು ಪೋಲಿಶ್ ಅಧಿಕಾರಿಯೊಬ್ಬರು ವಾರ್ಸೋದಿಂದ ಕಳುಹಿಸಲ್ಪಟ್ಟಿದ್ದರು. ಇವರು ಸ್ಟನಿಸ್ಲವೋವಿಗೆ ಮುಟ್ಟುವಷ್ಟರಲ್ಲೇ, ಪಟ್ಟಣದ ಮುಖ್ಯ ಉದ್ಯಾನವನದಲ್ಲಿ ಜನತಂಡವೊಂದು ಕೂಡಿ, ಉಕ್ರೈನಿನ ಸ್ವಾತಂತ್ರ್ಯವನ್ನು ಉದ್ಘೋಷಿಸುತ್ತಿದ್ದರು. ವಿರೋಧಿತಂಡದವರು ಇವರ ಮೇಲೆ ಗುಂಡಿಸೆದರು ಅನಂತರ ಇಡೀ ದಿನ ಈ ಎರಡು ತಂಡಗಳೊಳಗೆ ತೀವ್ರ ಹೋರಾಟ ಆರಂಭವಾಯಿತು. ರಸ್ತೆರಸ್ತೆ, ಗಲ್ಲಿಗಲ್ಲಿ, ಮನೆಮನೆಗಳಲ್ಲಿ ಕದನ ಆರಂಭವಾಯಿತು. ಜರ್ಮನರ ಧಾಳಿಗಂಜಿ ಓಡಿಬಂದು ಆಶ್ರಯಪಡೆದಿದ್ದ ಪೋಲರು ಹೆಚ್ಚಿನ ಹಾನಿಗೊಳಗಾದರು. ಸ್ಟನಿಸ್ಲವೋವಿನಲ್ಲಿದ್ದ ಪೋಲಿಶ್ ಸೇನೆಯು ನಿರುತ್ಸಾಹಗೊಂಡು ಪಟ್ಟಣದ ರಕ್ಷಣೆಗಾಗಿ ಹೋರಾಡಲು ಸಿದ್ಧವಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಏನೂ ಮಾಡಲಾಗದೆ ಅಲ್ಲಿಗೆ ಬಂದಿದ್ದ ಪೋಲಿಶ್ ಅಧಿಕಾರಿಯು ತನ್ನ ಮೋಟರ್‌ಕಾರಿನಲ್ಲಿ ಸ್ಟನಿಸ್ಲವೋವ್ ಬಿಟ್ಟುಹೋದರು. ಮಧ್ಯದಲ್ಲಿ ಅವರ ಮೋಟಾರುಕಾರು ಹಾಳಾಯಿತು. ಅವರಿಗೆ ಯಾರೂ ಸಹಾಯಮಾಡುವವರಿಲ್ಲದೆ ೩ ಘಂಟೆ ರಸ್ತೆಯಲ್ಲೇ ಕಾದನಂತರ ಮೇಲೆ ಆ ಮಾರ್ಗವಾಗಿ ಸೋವಿಯೆಟ್ ಅಗ್ರಗಾಮಿ ಸೇನೆಯು ಬಂದು ಅವರನ್ನು ಹಿಡಿಯಿತು. ಅದರ ಮುಖ್ಯಾಧಿಕಾರಿಯು ಅವರ ಕಾರನ್ನು ಸರಿಮಾಡಿಸಿ ಪೆಟ್ರೋಲ್ ಕೊಡಿಸಿ, ಪೋಲಿಶ್ ನಿರಾಶ್ರಿತರನ್ನು ಸ್ಟನಿಸ್ಲವೋವಿನಿಂದ ಹೊರಗೆ ಕಳುಹಿಸುವ ವ್ಯವಸ್ಥೆಮಾಡಲು ಅವರು ಹಿಂದೆ ಬರಬೇಕೆಂದು ಕೇಳಿಕೊಂಡರು. ಮತ್ತು ಅವರನ್ನೂ ಅವರ ಸಹ ವ್ಯವಸಾಯಿಗಳನ್ನೂ ಹಂಗೇರಿಗೆ ಹೋಗಬಿಡಲಾಗುವುದೆಂದು ಮಾತುಕೊಟ್ಟರು. ಸೋವಿಯೆಟ್ ಸೇನೆಯು ಬಂದ ಸಂಗತಿಯನ್ನು ಜನತೆಗೆ ತಿಳಿಸಿ ಸೋವಿಯೆಟ್ ವಿಮಾನಗಳು ಮರುದಿನ ಬೆಳಗ್ಗೆ ೬ ಘಂಟೆಗೆ ಕರಪತ್ರ ಹಂಚಿದುವು. ಜನರೆಲ್ಲಾ ಮಧ್ಯಾಹ್ನ ೧೨ ಘಂಟೆಯೊಳಗೆ ಸೋವಿಯೆಟ್ ಸೇನಾನಿವಾಸಕ್ಕೆ ಹೋಗಿ ತಮ್ಮ ಹೆಸರನ್ನು ರಿಜಿಸ್ಟ್ರಿಮಾಡಿಕೊಳ್ಳಬೇಕು, ಹೆತ್ತವರು ಯಥಾಪ್ರಕಾರ ತಮ್ಮ ಮಕ್ಕಳನ್ನು ಬೆಳಗ್ಗೆ ೮ ಘಂಟೆಯೊಳಗೆ ಶಾಲೆಗಳಿಗೆ ಕಳುಹಿಸಬೇಕು. ಅಲ್ಲಿ ಉಕ್ರೈನ್ ಭಾಷೆಯಲ್ಲಿ ಕ್ರಮವಾಗಿ ಪಾಠ ಕಲಿಸಲ್ಪಡುವದೆಂದು ಆ ಕರ ಪತ್ರಗಳು ತಿಳಿಸಿದುವು. ಬೆಳಗ್ಗೆ ಘಂಟೆ 6–30 ರೊಳಗೆ ಮೋಟರ್ ಸೈನಿಕ ದಳವು ಪಟ್ಟಣಕ್ಕೆ ಪ್ರವೇಶಿಸಿತು. 8 ಘಂಟೆಯೊಳಗೆ ಸೋವಿಯೆಟ್ ಸೈನ್ಯಾಧಿಕಾರಿಗಳ ಬಳಿ

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER ORIGINAL

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋರೋಹಿಯದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ ಪಿ ಖರ್ಚು ೦-೩-೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಮಂಗಳೂರಲ್ಲಿ ಸ್ಟಾಕಿಸ್ಟರು:— ಮೆಸರ್ಸ್ ಇಲೆಕ್ಟ್ರೊ ಹೋಮಿಯೊಪತಿ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ಸಾಲುಗಟ್ಟಿ ಜನರು ಬರುತ್ತಿದ್ದರು. ಸೋವಿಯೆಟ್ ಅಧ್ಯಾಪಕರು ಸೈನಿಕರೊಂದಿಗೇನೇ ಬಂದು ಶಾಲೆಗಳಿಗೆ ಹೋಗಿ ವಿದ್ಯಾರ್ಥಿಗಳಿಗೆ ಉಕ್ರೈನ್ ಭಾಷೆಯಲ್ಲಿ ಪಾಠ ಕಲಿಸಲಾರಂಭಿಸಿದರು. ಮಧ್ಯಾಹ್ನದೊಳಗೆ ಹೊಸ ನಗರಾಧ್ಯಕ್ಷನು ನೇಮಿಸಲ್ಪಟ್ಟನು ಸೋವಿಯೆಟ್ ಸೇನೆಯು ಪಟ್ಟಣಕ್ಕೆ ಪ್ರವೇಶಿಸಿದೊಡನೆಯೇ ಸೋವಿಯೆಟ್ ರಾಜ್ಯಭಾರ ವ್ಯವಸ್ಥೆಯ ಏರ್ಪಾಡುಗಳೆಲ್ಲಾ ಭರದಿಂದ ನಡೆಸಲ್ಪಟ್ಟವು. ಸೋವಿಯೆಟ್ ಸೈನಿಕರೊಂದಿಗೆ ಯಾರೂ ಹೋರಾಡಲಿಲ್ಲ ರಷ್ಯವು ಧಾಳಿಯಿಡುವುದೆಂದು ಪೋಲರು ಕನಸಿನಲ್ಲಿಯೂ ನೆನಸಲಿಲ್ಲ. ಸೋವಿಯೆಟ್ ಸೈನಿಕರ ಧಾಳಿಯಿಂದ ಪೋಲಂಡು ಮತ್ತು ರಷ್ಯದ ಎಲ್ಲೆಯಲ್ಲಿರಿಸಲ್ಪಟ್ಟಿದ್ದ ಪೋಲಿಶ್ ಸೈನಿಕರು ಗಾಬರಿಗೊಂಡು ಅವರನ್ನು ವಿರೋಧಿಸದೆ ಹಿಂದ ಸರಿದು ಬಿಟ್ಟರು ಸೋವಿಯೆಟ್ ಪ್ರಚಾರ ಕಾರ್ಯವೂ ಪ್ರಚಂಡ ಪರಿಣಾಮವನ್ನುಂಟುಮಾಡಿದ್ದಿತು ಜರ್ಮನ್ ಮತ್ತು ಪೋಲಂಡಿನ ಯುದ್ಧದ ವಿಮಾನಗಳ ಕುರಿತು ನಕಾಶೆ ಚಿತ್ರಗಳನ್ನೂ ಬಿಡಿಸಿ ವಿವರಿಸಿ ಸಾವಿರಾರು ಕರಪತ್ರಗಳನ್ನು ಸೋವಿಯೆಟ್ ವಿಮಾನಗಳು ಪೂರ್ವ ಪೋಲಂಡಿನಲ್ಲೆಲ್ಲಾ ಹಂಚಿ ಜನತೆಯಲ್ಲಿ ಬೋಂಬು ಗುಂಡುಗಳಿಗಿಂತಲೂ ಹೆಚ್ಚಿನ ಪರಿಣಾಮವನ್ನುಂಟುಮಾಡಿದುವು. ಜನರೆಲ್ಲರೂ ದಿಗಿಲುಗೊಂಡರು. ವಾರ್ಸೋದಲ್ಲಿ ಕೆಲಮಟ್ಟಿಗೆ ಜರ್ಮನರನ್ನು ವಿರೋಧಿಸಲು ಸಾಧ್ಯವಾದುದೆಂದರೆ "ಬ್ರಿಟಿಷ್ ಸೇನೆಯು ಜರ್ಮನಿಯ ಹೇಂಬರ್ಗ್ ಪಟ್ಟಣವನ್ನು ವಶಪಡಿಸಿಕೊಂಡಿದೆ. ಬ್ರಿಟಿಷ್ ಯುದ್ಧಹಡಗಗಳು ವೆಸ್ಟರ್ ಪ್ಲೇಟ್ ಎಂಬಲ್ಲಿ ಜರ್ಮನ್ ಹಡಗಗಳನ್ನು ಎದುರಿಸಿವೆ" ಎಂಬ ಸುದ್ದಿಯು ಜನತೆಯಲ್ಲಿ ಹಬ್ಬಿದುದರಿಂದ. ಆದರೆ ಇತರ ಕಡೆಗಳಲ್ಲಿ, 'ವಿರೋಧಿಸಬೇಡಿರಿ. ಅದರಿಂದೇನೂ ಫಲವಿಲ್ಲ ನಿಮ್ಮ ಸುತ್ತುಮುತ್ತಲಿನ ಸ್ಥಳಗಳೆಲ್ಲಾ ನಮ್ಮ ಅಧೀನವಾಗಿವೆ" ಎಂಬುದೇ ಸೋವಿಯೆಟ್ ಕರಪತ್ರಗಳ ಉದ್ಘೋಷ. ಇದು ಹೊರತು, ಸೋವಿಯೆಟ್ ಸೈನಿಕರು ಮುಂದುವರಿಯುತ್ತಿರುವುದು ಜರ್ಮನರನ್ನು ವಿರೋಧಿಸುವುದಕ್ಕಾಗಿ ಎಂಬ ಸುದ್ದಿಯು ಹೇಗೋ ಹಬ್ಬಿಹೋಗಿತ್ತು. ಸೋವಿಯೆಟ್ ಸೈನಿಕರು ಪೋಲಿಶ್ ಸೈನಿಕರನ್ನೂ ಅಧಿಕಾರಿಗಳನ್ನೂ ತಾವು ಗೆದ್ದ ಪ್ರದೇಶಗಳೊಳಗಿಂದ ನಿರಾತಂಕವಾಗಿ ಹಾದುಹೋಗಬಿಡುತ್ತಿದ್ದುದರಿಂದ ಈ ಕತೆಯನ್ನು ಜನರು ಮತ್ತಷ್ಟು ನಂಬುವಂತಾಯಿತು. ಇದರಿಂದ ಅನಾವಶ್ಯಕವಾದ ರಕ್ತಪಾತವು ನಿವಾರಿತವಾಯಿತು.

ಶ್ರೀ. ಕೆ. ಶಂಕರಶೆಟ್ಟಿ, ಬಸ್ರೂರು.

ಶ್ರೀಯುತರು, ಜಗತ್ಪ್ರಸಿದ್ಧವೂ, ಲೋಕದ ಅತಿ ಪುರಾತನವೂ ಆದ ಕೆನಡದ ಸನ್‌ಲೈಫ್ ಎಶ್ಯೂರೆನ್ಸ್ ಕಂಪೆನಿಯ ನಮ್ಮ ಜಿಲ್ಲೆಯ ಪ್ರತಿನಿಧಿಯಾಗಿದ್ದು, ಕಳೆದ ಆರು ವರುಷಗಳಿಂದ ಒಂದೇ ಸಮಾನ ಅತಿ ಹೆಚ್ಚಿನ ವಿಮಾ ಉದ್ಯಮವನ್ನು ಗಳಿಸಿ, ಅನೇಕ ಪಾರಿತೋಷಕಗಳನ್ನು ಆಗಾಗ ಪಡೆದಿರುವರಲ್ಲದೆ, ಇದೇ ಕಳೆದ ಒಕ್ಟೋಬರ ತಿಂಗಳಲ್ಲಿ ಸದ್ರಿ ಕಂಪನಿಯ ಮದ್ರಾಸು ಶಾಖೆಯವರು ಏರ್ಪಡಿಸಿದ ವಿಮಾಸ್ಪರ್ಧೆಯಲ್ಲಿ ಆರನೇ ಸ್ಥಾನವನ್ನು ಪಡೆದು ಅತಿ ಹೆಚ್ಚು ಬೆಲೆಯ ನಗದು ಬಹುಮಾನ ಪಡೆದು ಪ್ರಶಂಸಿಸಲ್ಪಟ್ಟಿರುವರು. 1934 35 36ರಲ್ಲಿ ಶ್ರೀ. ಶೆಟ್ಟಿರು ಗಳಿಸಿದ ವಿಮಾ ಉದ್ಯಮದ ನಷೆಯ ಮೇಲೆ ಇಂಡಿಯಾ ಸರಕಾರವು ಇನ್‌ಕಮ್ ಟೇಕ್ಸ್ ಕರ ವಸೂಲು ಮಾಡಿರುವುದೇ ಅವರು ಗಳಿಸಿದ ಉದ್ಯಮದ ಪ್ರಬಲತೆಯನ್ನು ಸೂಚಿಸುವುದು. ವಿಮಾ ವ್ಯವಸಾಯಿಗಳಲ್ಲಿ ಶ್ರೀಯುತರು ನಮ್ಮ ಜಿಲ್ಲೆಯಲ್ಲಿ ಶ್ರೇಷ್ಠಸ್ಥಾನವನ್ನು ಇಷ್ಟರಲ್ಲೇ ಪಡೆದಿರುವರೆನ್ನಬಹುದು. ಮುಂದೆ ಶ್ರೀಯುತರು ನಮ್ಮ ದಕ್ಷಿಣ ಭಾರತದ ಪ್ರಮುಖ ವಿಮಾ ಪ್ರತಿನಿಧಿಯಾಗಲೆಂದೇ ನಮ್ಮ ಸದಾಶಯವು

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕುಮಟಾದ ಬಮಾ ಬೀಡಿನ ಲೆಕ್ಕಪಿದ್ದರೂ ಸಾಲದು ಅದರಿಂದ ತಯಾರಿಸಿದ ಸಾಧಾರಣದ ನಿಜತ್ತವು ಕೆಲವೆ ಸಿ ವಿಷಯಗಳಲ್ಲಿ ಕಣ್ಣಿಯ ಆಫೀಸರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಸರಿಯಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗಲೂಬಹುದು ಸಂದರ್ಭಾನುಸಾರ ಟೇಕ್ಸು ಕೊಡಬೇಕೆಂದಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ಶಿಕ್ಷೆಯಾಗಲಿಲ್ಲ. ಬೆಚ್ಚಿ ಹಾಜರು ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ,

ಎಸ್. ಎನ್. ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

"ಸಾಮುದ್ರಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ ಧಾತು ಕ್ಷೀಣತೆ, ಸಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ಗುಪ್ತರೋಗಗಳನ್ನು ಒನ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನ ವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazar Duncan Road,
BOMBAY 4

NOTICE.

Is hereby given that the firm "Gopala Laxmana Shanbhogue & Brothers" has been dissolved with effect from 11-11-1939 and U. Gopala Laxman Shanbhogue who was a partner in the said firm is entitled to collect and recover all the outstandings due to it.

ಉದಿಯಾವರ ಗೋಪಾಲ ಶಾನುಭೋಗನ ರುಜು.

Udiyavar, 18-11-1939

ಪ್ರಕಟಣೆ.

ಬೆಳ್ಮಣ್ಣಿನ ಸಿಪ್ರಾನ್ ಸೋಜರ ಮಗಳು, ಸೊರ್ಕಳ ಪಾಸ್ಕಲ್ ಯಾನೆ ಅಪ್ಪುದೇಸರ ಪುಗ ಪಿಯೊದ ದೇಸರ ಹೆಂಡತಿ ಸಹಾಲ್ ಸೋಜಾ ಬಾಯಿಯಾದ ನಾನು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ—

ನನ್ನ ಗಂಡನಿಗೆ ಈಗ ಸುಮಾರು 15 ವರ್ಷಗಳಿಂದ ಆಗಾಗ ತಲೆ ಸಮಯಿಲ್ಲದೆ ಅವರು ನಾನಾ ರೀತಿಯ ಉಪದ್ರ ಮಾಡುತ್ತಾರೆ. ಇಂತಹ ಉಪದ್ರಕ್ಕೆಲ್ಲಾಗಾಗಿಯೂ ನಾನು ನನ್ನ ಪತಿಯೊಂದಿಗೇನೇ ಇಷ್ಟರವರೆಗೆ ಜೀವನ ನಡಿಸಿಕೊಂಡು ಅವರಿಂದ ನನಗೆ 3 ಹೆಣ್ಣು ಮತ್ತು 1ಗಂಡು ಮಕ್ಕಳಾಗಿರುತ್ತವೆ. ಈ ಮಕ್ಕಳೆಲ್ಲಾ 9 ವರ್ಷಕ್ಕಿಂತ ಕೆಳಗಿನವುಗಳಾಗಿದ್ದು ಉದರ ಪೋಷಣೆಯ ಯಾವ ಹಾದಿಯೂ ಇಲ್ಲದವುಗಳಾಗಿವೆ. ನನ್ನಗಂಡನು ಈಗ ಸುಮಾರು 6 ತಿಂಗಳುಗಳಿಂದ ಅವರ ತಂಗಿ ಕತ್ರೀನ್ ದೇಸ ಬಾಯಿಯ ವಶವಾಗಿ ಸದ್ರಿಯವರ ಪ್ರೇರೇಪಣೆ ಮೇರೆಗೆ ತನ್ನ ಸ್ವಂತ ಸೊತ್ತುಗಳನ್ನೆಲ್ಲಾ ಪರಾಧೀನಮಾಡುವ ಇರಾದೆಯಿಂದಿರುವರೆಂದು ನಾನು ಖಾತ್ರಿಯಾಗಿ ತಿಳಿಯುತ್ತೇನೆ. ಈ ಕುರಿತು ನಾನು ಉಡುಪಿಯ ಸಬ್ ರಿಜಿಸ್ಟ್ರಾರರಿಗೆ ಒಂದು ಆಕ್ಷೇಪಣಾ ಅರ್ಜಿಯನ್ನು ಕೊಡಾ ಹಾಕಿರುತ್ತೇನೆ ಆದುದರಿಂದ ಸದರಿ ಪಿಯಾದ ಡಿ'ಸೋಜರ ಹೆಸರಲ್ಲಿರುವ ಮತ್ತು ಅವರ ಹಕ್ಕಿನದ್ದಾದ ಯಾವ ಸ್ಥಿರಚರ ಸೊತ್ತನ್ನಾದರೂ ಯಾರಾದರೂ ಪರಾಧೀನ ಮಾಡಿಕೊಳ್ಳಬಾರದು ಮತ್ತು ಹಾಗೆ ಪರಾಧೀನವಾಡಿಕೊಂಡಲ್ಲಿ ಅದು ಎಷ್ಟಕ್ಕೂ ಸಿಂಧುವಾಗಲಾರದೆಂದೂ ಈ ಮೂಲಕ ಸೂಚಿಸುವ ಪಡಿಸುತ್ತೇನೆ.

● ಈ ಎಡಗೈ ಹೆಬ್ಬೆಟ್ಟು ಸೊರ್ಕಳಿನ ಸಹಾಲ್ ಸೋಜಾ ಬಾಯಿಯ ರುಜು.

ಈ ಬಗ್ಗೆ ಸಾಕ್ಷಿ—
M. C. Fernandes, Member,
Dist Board, Shirva

GET RICH AND PROSPEROUS

through Simple Means upheld and pursued by Millions.........!

WRITE NOW WITH STAMP.—

K. S. Row,
Worli, BOMBAY.

1940

ನೇ ಇಸವಿಯ

ಪಾಕೆಟ್ ಡೈರಿ

ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ
ಉಡುಪಿ

ಮಿತ ದರದಲ್ಲೇ ಮಾರಾಟ.

ಹೊಸ ಯೋಜನೆಗಳಿಗೆ ಆಸ್ಪದವೀಯುವ ಸಲುವಾಗಿ ಗಟ್ಟಿಯಾಗಿ ಯಾ ಹೆಚ್ಚು ಕಾಲ ಬಾಳಿಕೆ ಬರುವಂತಹ ಸ್ವಿಸ್ ತಯಾರಿಯ ಉರುಟು ಅಥವಾ ಚಚ್ಚೌಕ ರಿಸ್ಟುವಾಚುಗಳು.



ನಂಬ್ರ 401 ಕ್ರೋಮಿಯಮ್ ರೂ. 3-12-0, 402 ಗೋಲ್ಡನ್ ಕೇಸು ರೂ 4 12 0, 517 ಕ್ರೋಮಿಯಮ್ ಕೇಸು 6 8 0, 518 ಗೋಲ್ಡನ್ ಕೇಸು 8-0 0, ಚ ಎಲ್ಲ ಚೌಕಯುಳ್ಳ, ನಂಬ್ರ 409 ಕ್ರೋಮಿಯಮ್ 9 8 0, ನಂ. 410 ಗೋಲ್ಡನ್ ಕೇಸು 10 8 0- 411 ರೋಲ್ಡ್‌ಗೋಲ್ಡ್ 15 0-0.

ಪ್ಯಾಕಿಂಗ್ ಮತ್ತು ಪೋಸ್ಟೇಜು ಬಗ್ಗೆ 0-9-0 ಅಲಾಯಿದ.
(ಪತ್ರವ್ಯವಹಾರ ಇಂಗ್ಲಿಸಿನಲ್ಲಿ)

ಬಾಪಲಾಲ್ ಎಂಡ್ ಕೊ., **Bapalal & Co.,**
ಅಬ್ದುಲ್ ರ್‍ಹಿಮಾನ್ ಸ್ಟ್ರೀಟ್, 101 Abdul Rehman St.
ಬೊಂಬಾಯಿ 3 BOMBAY 3.

NAVAYUGA
Advertisement Tariff

1 Page Rs. 25/- per insertion
½ „ Rs. 15/- „ „
¼ „ Rs 8/ „ „
⅛ „ Rs. 5/- „ „
Per Single inch col Re. 1 „
Contract rates on application
Manager-**Navayuga UDIPI**

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,
Hampankatte, **MANGALORE**

DAIMONDS! DAIMONDS!

K R. K. SHET

Opposite Govt College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ಯಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೫ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಬಂಗಾರ ಪ ಸರಕಿನ ಈಡಿನ ಮೇಲೆ ನೇಕಡೆ೭ ವರೆರ ದರದಲ್ಲಿ ಸಾಲಕೊಡಲಾಗುವುದು
ನಿರಖು ಠೇವಣಾತಿ ಸೇಕಡ ೫½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ ೩½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ಸಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು

M. R Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು ಇದು ಮಧುರವಾಗಿದ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ ೧ ಕ್ಕೆ ೧೨ ಆಣೆ, ಟಪಾಲ್ ೯ ಆಣೆ

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು.- **ನವಭಾರತ ಬುಕ್‌ಡಿಪ್ಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ.** ಸುಖಸೇವನದಿಂದ ಮಧುರವೂ ಮನೋಹರವಾದ ಈ ರಸಾಯನವು ಬಾಣಂತಿಯ ರಕ್ತಅರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ ೧ ಕ್ಕೆ ರೂ 2-0-0

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ

ಮೂಲವ್ಯಾಧಿ

ಸಾಧುಪುಂಗವನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ

ಆರ್ಶ-ಮಾರಾ (ರಿಜಿಸ್ಟರ್ಡ್)



ರಕ್ತಸುರಿಯುವ ಅಥವಾ ಬಿಂದಿ ಗಿರುವ ಹಳೆಯ ಅಥವಾ ಹೊಸತಾದ ಒಳಗಿನ ಅಥವಾ ಹೊರಗಿನ ಯಾವಸ್ಥಿತಿಯದ್ದೇ ಆದ ಮೂಲವ್ಯಾಧಿಯು 'ಆರ್ಶಮಾರ'ವನ್ನು ಒಂದೊಮ್ಮೆ ಹಚ್ಚಿದ ಕೂಡಲೆ ಅದ್ಭುತವಾಗಿ ಗುಣಹೊಂದುವುದು ನೋವು ತುರಿಸುವಿ, ಉರಿಯುವಿಕೆ, ಶೀಘ್ರ, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುವುದು ಕೇವಲ ೨ ದಿನ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿಸುವುದು ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇತರರಿಗೆ ಅದನ್ನು ಶಿಫಾರಸು ಮಾಡುತ್ತಿದ್ದಾರೆ ಗುಣವಾಗದಿದ್ದಲ್ಲಿ ಹಣ ವಾಪಸು ಬೆಲೆ ರೂ 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಡೆಗಳ ಬೇಜು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು,

Crown Rubber Stamp Co, Balmat Road, MANGALORE
Inclnd by the Mysore Govt Stores Purchase Committee in the list of approved firms

---

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇನ್ನುಮೇಲೆ ನಮ್ಮ

ವಿಲಿಯಮ್ ಎಂಡ್ ಕೋ ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕಿನ ರಿಂಗ್‌ವರ್ಮ್ ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪ್ಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ **1-8-0**



ಕನ್ನಡ ಓದಲಿಕ್ಕೆ ತಿಳಿದವರು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ, ಮಾತನಾಡುವುದನ್ನೂ, ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ೩ ತಿಂಗಳಲ್ಲಿ ಕಲಿತುಕೊಳ್ಳಬಹುದು. ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ೨೦೦ ಪೇಜುಗಳು ಇರುವ ದೊಡ್ಡ ಪುಸ್ತಕ. ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್‍ಯಾರೇ ಆಗಲಿ ಅರವತ್ತು ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ನೀವು ಅದಕ್ಕಾಗಿ ಎಲ್ಲೂ ಹೋಗಬೇಕಾಗಿಲ್ಲ ಮನೆಯಲ್ಲೇ ಈ ಪುಸ್ತಕ ಓದಿರಿ ಇಂಗ್ಲೀಷ್ ಓದ ಬರಹ ಎಲ್ಲ ಸುಲಭವಾಗಿ ಬರುತ್ತೆ. ಪುಸ್ತಕದ ಬೆಲೆ ರೂ.೧॥

Western Swiss watch Co.
Book Sellers Post Box No 68
G P O MADRAS

ವೆಸ್ಟರನ್ ಸ್ವಿಸ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 68. ಮದರಾಸ್

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದುಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರವಾಸಿಗರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಡುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ "ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳು

ಕ್ರಯ ಸೀಸೆ 1ಕ್ಕೆ ರೂ. 2—8—0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆ ಕಪ್ಸಲುಗಳನ್ನು ತರಿಸಿಕೊಂಡರೆ ವಿ. ಪಿ ಮತ್ತು ಪ್ಯಾಕಿಂಗ್ ಮಾಫಿ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ

ಸೀಸೆ 1ಕ್ಕೆ ರೂ. 1–4–0

ವಿ. ಪಿ. ಬೇರೆ.

ಒಂದೇ ಸಲ 12 ಸೀಸೆಗಳನ್ನು ತರಿಸಿಕೊಂಡರೆ ವಿ. ಪಿ. ಮತ್ತು ಪ್ಯಾಕಿಂಗ್ ಮಾಫಿ.

'ಹವನನ್' ಹೆಮೊರ್ರೊಯ್ಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಅಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳೆದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೊರ್ರೊಯ್ಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4 0 ವಿ ಪಿ ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವಜತ್ತವುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3–4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸರೀಸಾಗಿ ಸಾಗಿಸಿ ನಮ್ಮನ್ನು ಸದಾ ಸಜೀವಿಗಳನ್ನಾಗಿರಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ 1-0 0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B & C. I. Ry BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S S KARANTH AT THE [illegible] PRESS UDIPI AND PUBLISHED BY [illegible] AT NAVAYUGA OFFICE UDIPI S. INDIA

Regd. No. M 3618 30-11-1939

ನವಯುಗ NAVAYUGA

To our clients past, present and future. Flung far and wide over the Sub-continent of India.

OUR GREETINGS

Our glorious succees in publishing our 1939 Annual, the splendid response of the business community, the enthusiastic welcome of the reading public and last but not least the resounding praise about its get up from high literary circles emboldens us to venture on our 1940 Annual in these very difficult times.

Our Annual Numbers have been the biggest literary attraction of the season. This year we hope to surpass ourselves.

NAVAYUGA ANNUAL NUMBER 1940

DATE OF PUBLICATION 11-1-1940.

RATES OF ADVERTISEMENTS:

Full page in reading matter	...	...	„	25/-.
Half page in reading matter	...	...	„	15/-.
Quarter page in reading matter	...	...	„	8/-.
1/8 page in reading mater	...	...	„	5/-.

Small Advt. Rc. 1 per square inch.

Front Cover page	...	...	...	Rs.	100/-.
Back cover page	...	...	...	„	75/-.
Second & Third cover page each	...	...	„	50/-.	

SEND YOUR ADVERTISEMENT IMMEDIATELY.

ADVT. MANAGER:—'NAVAYUGA', UDIPI, S. INDIA.

ತಾ. 11—1—1940ಕ್ಕೆ ಹೊರಡುವ

ನವಯುಗ ಪರ್ಯಾಯ ಸಂಚಿಕೆಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕನಿಷ್ಠ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ



ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳ ಗಲಿಕ್ಕೂ ಬರೆಯಿರಿ—

ಬಿ ಕರುಣಾಕರ ಹೆಗ್ಡೆ ಆರ್ಗನೈಜರ್ ಕೆ ಎಲ್ ಕೆ ಶೆಟ್ ಬಿಲ್ಡಿಂಗ್, ಎ ಶ್ಯಾನ್‌ಹೈಸ್ಕೂಲ್ ರೋಡು ಮಂಗಳೂರು

ಅಥವಾ

ಎಚ್ ವೆಂಕಟರಾಮಯ್ಯ ಡಿವಿಜನಲ್ ಸುಪರಿಂಟೆಂಡೆಂಟ್ ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ

The Asiatic Govt. Security Assurance Co. Ltd.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs 2 02 800/- Paid up Capital Rs 1 82 100/-

PRINCIPAL OFFICE COURT ROAD UDIPI.

OTHER OFFICES

UDIPI, MANGALORE, KATAPADI, & KANHANGAD

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year.

For further particulars please address or call at any of our offices.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆವಂತ ಶ್ರೀಮಂತರ ವರೆಗೂ ಅವರವರ ಅನುಕೂಲಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್ ಫೋನ 406

ಹಳೆ ಪೋಸ್ಟಾಫೀಸು ರೋಡು ಮೈಸೂರು

ಅರಮನೆಯ ಎದರು ಫೋನ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್ ಮೈಸೂರು, ಕೃಷ್ಣರಾಜ ನಗರ್ ರೆಸ್ಟೋರೆಂಟ್ ಕನ್ನಂಬಾಡಿ ಮೈಸೂರು

ಸಮುದ್ರಾಕಿಗೆ ಬಂದಲ್ಲಿ

ಮೈಸೂರು ಕೇಪ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್ - ಕೆ. ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ



ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance*

CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

THE ASIAN ASSURANCE COMPANY, LTD.

ASIAN BUILDINGS - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1 18 40 801	9 54,965	24 50 234
1935	2,52,08 418	18 59 296	42 98 820
1938	3,61,56 764	22 34 301	67 66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer Brahmavar
, M Shivarama Rao, Organizer, Puttur

Or

Sri J. A PUTRAN,
Branch Manager, MANGALORE

ESTD. 1921 ಸ್ಥಾಪನೆ

FOUNDER
SRI. A. B SHETTY, M. L. A.,
ಸಂಸ್ಥಾಪಕರು
ಶ್ರೀ. ಎ. ಬಿ. ಶೆಟ್ಟರು, ಎಂ ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12-0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೩

ಉಡುಪಿ, ಗುರುವಾರ, ೩೦—೧೧—೧೯೩೯.
UDIPI, THURSDAY, 30-11-1939.

VOL. 19
No. 13

ಪ್ರಬಲ ಸಮುದ್ರ ಯುದ್ಧ

ಮಿ. ಚರ್ಚಿಲ್ಲರಂತೆ ಸಮುದ್ರಗಳಲ್ಲಿ ಮಾತ್ರ ನಿಜವಾದ ಯುದ್ಧ ನಡಿಯುತ್ತಿದೆ ಅದು ಕೂಡಾ ಕಳೆದ ಮಹಾಯುದ್ಧದ ಜೆಟ್ಲೆಂಡ್ ನೌಕಾ ಸಮರದಂತಹ ದೊಡ್ಡ ಹೋರಾಟವಲ್ಲ ಅಂತಹ ಪ್ರಬಲ ಯುದ್ಧಕ್ಕೆ ಜರ್ಮನಿಯೊಡನೆ ಬೇಕಷ್ಟು ಯುದ್ಧ ಹಡಗಗಳಿಲ್ಲ. ಯು. ಬೋಟುಗಳೆಂಬ ಕೆಲವು ಜಲಾಂತರ್ಗಾಮಿ ನಾವೆಗಳು ಮತ್ತು 'ಪೊಕೆಟ್ ಬೆಟ್ಲ್ ಶಿಪ್' ಎಂಬ ಹೊಸ ನಮೂನೆಯ ಐದಾರು ಯುದ್ಧ ಹಡಗಗಳು ಮಾತ್ರ ಇರುವುದು ಜರ್ಮನಿಯ ವಶ. ೨೦೦೦ದವರೆಗೆ ಬ್ರಿಟಿಷ್ ವ್ಯಾಪಾರಿ ಹಡಗಗಳು ಸಮುದ್ರದಲ್ಲಿ ಸಂಚರಿಸುತ್ತಿರುವುದರಿಂದ ಜರ್ಮನ್ ಯು. ಬೋಟು ಮತ್ತು ಪೊಕೆಟ್ ಬೆಟ್ಲ್ ಶಿಪ್‌ಗಳು ಬ್ರಿಟಿಷ್ ಯುದ್ಧ ಹಡಗಗಳ ಕಣ್ಣು ತಪ್ಪಿಸಿ ಅವನ್ನು ಮುಳುಗಿಸುವುದರಲ್ಲಿ ನಿರತವಾಗಿವೆ. ಜರ್ಮನಿಯ ವ್ಯಾಪಾರಿ ಹಡಗಗಳು ಸಂಚಾರವೇ ಬಹುತೇಕ ಈಗ ನಿಂತುಹೋಗಿದೆ. ಜರ್ಮನ್ ಸಬ್‌ಮೆರೀನ್ ಹಾವಳಿಯು ಈಗ ಕಡಿಮೆಯಾಗಿದೆ. ಅವುಗಳನ್ನು ನಡಿಸಿಕೊಂಡು ಹೋಗುವ ಸಾಹಸಕ್ಕೆ ಜರ್ಮನರೀಗ ಉತ್ಸಾಹ ಪಡುವುದಿಲ್ಲ. ಪೊಕೆಟ್ ಬೆಟ್ಲ್‌ಶಿಪ್‌ಗಳ ಹಾವಳಿ ಹೆಚ್ಚಿದೆ. ಇದು ಹೊರತು ಜರ್ಮನಿಯು ಯಾವ ನಿಯಮ ನೀತಿಯೂ ಇಲ್ಲದೆ ಇಚ್ಛಾನುಸಾರವಾಗಿ ಸಮುದ್ರಗಳಲ್ಲೆಲ್ಲಾ ಜಲ ತೋಟಿಗಳನ್ನಿರಿಸಿ ತಟಸ್ಥ ರಾಷ್ಟ್ರಗಳ ಹಡಗಗಳನ್ನೂ ಮುಳುಗಿಸಿ, ಇಂಗ್ಲೆಂಡಿಗೆ ಆಹಾರ ಸಾಮಗ್ರಿ ಒದಗಿಸಲ್ಪಡದಂತೆ ತಡೆ ಮಾಡಲೆತ್ನಿಸುತ್ತಿದೆ ಇದರಿಂದ ಸಿಟ್ಟುಗೊಂಡ ಬ್ರಿಟಿಷ್ ಸರಕಾರವು, ಜರ್ಮನಿಯ ಸಾಮಾನುಗಳನ್ನು ರಫ್ತು ಮಾಡುವ ತಟಸ್ಥ ರಾಷ್ಟ್ರಗಳ ಹಡಗಗಳನ್ನು ಕೂಡಾ ಹಿಡಿಯುವ ನಿರ್ಧಾರ ಮಾಡಿರುವುದು. ಇದರಿಂದ ಹೊಲ್ಲೆಂಡ್, ಬೆಲ್‌ಜಿಯಮ್ ಮೊದಲಾದ ರಾಷ್ಟ್ರಗಳ ವ್ಯಾಪಾರವೇ ನಿಂತು ಹೋಗುವಂತಾಗಿದೆ. ಮತ್ತು ಜರ್ಮನಿಯ ಸಾಮಾನುಗಳು ಹೊರಗೆ ಹೋಗದಂತಾಗಿದೆ. ಜರ್ಮನಿಯು ಇದರಿಂದ ಅತ್ಯಂತ ಕ್ರೋಧಗೊಂಡು ಇಂಗ್ಲೆಂಡಿನ ಥೇಮ್ಸ್ ನದಿ, ಮತ್ತು ಸುತ್ತುಮುತ್ತಲಿನ ಸಮುದ್ರ ಕರಾವಳಿಯಲ್ಲೆಲ್ಲಾ ವಿಮಾನಗಳ ಮೂಲಕ ಹೊಸ ನಮೂನೆಯ ಜಲ ತೋಟಿಗಳನ್ನು ಸುರಿದು ಹಾವಳಿ ಮಾಡತೊಡಗಿದೆ. ನೆಲ ಮತ್ತು ಆಕಾಶ ಯುದ್ಧಗಳೇನಾದರೂ ವಿಶೇಷವಾಗಿ ನಡೆಯುದಿದ್ದರೂ ನೌಕಾ ಮುತ್ತಿಗೆ ಮತ್ತು ಅದನ್ನು ಭೇದಿಸುವ ಹೋರಾಟವು ಪ್ರಬಲವಾಗಿ ನಡೆಯುತ್ತಿದೆ.

ವಾರದ ವಿಮರ್ಶೆ

ಅಲ್ಪ ಪಕ್ಷೀಯ ಮಂತ್ರಿ ಮಂಡಲ

ಕಾಂಗ್ರೆಸ್ ಮಂತ್ರಿಗಳು ರಾಜನಾಮೆ ಕೊಟ್ಟ 8 ಪ್ರಾಂತಗಳ ಪೈಕಿ ಅಸ್ಸಾಮಿನಲ್ಲಿ ಮಾತ್ರ ಸರ್ ಸಾದುಲ್ಲರು ಮಂತ್ರಿ ಮಂಡಲವನ್ನೇರ್ಪಡಿಸಿರುವರು. ಯಾವ ಶರ್ತಗಳಿಂದ ಮತ್ತು ಹೇಗೆ ಅವರು ಮಂತ್ರಿ ಮಂಡಲವನ್ನೇರ್ಪಡಿಸಿದರೋ ತಿಳಿಯದು. ಅಸಾಮ್ ಎಸೆಂಬ್ಲಿಯ 108 ಮಂದಿ ಸದಸ್ಯರ ಪೈಕಿ 59 ಮಂದಿ ಸಹಿ ಹಾಕಿ ಹೊಸ ಮಂತ್ರಿಗಳ ಮೇಲೆ ಅವಿಶ್ವಾಸ ಸೂಚನೆ ತಂದಿರುವರು ನವಂಬರ ತಾ 30ಕ್ಕೆ ಸೇರಲು ನೋಟೀಸು ಕೊಡಲ್ಪಟ್ಟಿದ್ದ ಅಸ್ಸಾಮ್ ಎಸೆಂಬ್ಲಿ ಸಭೆಯು ಮುಂದುವರಿಸಲ್ಪಟ್ಟಿದೆ. ಅದು ಯಾವಾಗ ಸೇರುವುದೆಂದು ತಿಳಿದಿಲ್ಲ ಈ ನಡುವೆ, ಮಂತ್ರಿ ಪದವಿಯ ಆಶೆ ತೋರಿಸಿ ಮೆಂಬರರನ್ನು ಒಲಿಸಿಕೊಳ್ಳುವ ಯತ್ನ ನಡೆಸಲ್ಪಡುವುದು. ಆದರೆ ಈ ಕುತಂತ್ರವು ಜಯಶೀಲವಾಗುವ ಸಂಭವ ತೋರುವುದಿಲ್ಲ ಕೇವಲ ಅಲ್ಪ ಸಂಖ್ಯಾಕ ಮೆಂಬರರ ಬೆಂಬಲವುಳ್ಳ ಸರ್ ಸಾದುಲ್ಲರವರನ್ನು ಸರಕಾರವು ಥಟ್ಟನೆ ಪ್ರಧಾನ ಮಂತ್ರಿಗಳಾಗಿ ನೇಮಿಸಲು ಕಾರಣವೇನು? ಅಸ್ಸಾಮಿನಲ್ಲಿಯೂ ಗವರ್ನರರೇ ಸರ್ವಾಧಿಕಾರವನ್ನು ವಹಿಸಲಿಲ್ಲೇಕೆ? ವೈಸರಾಯರು ಮತ್ತು ಇಂಡಿಯಾ ಸಕ್ರೆಟರಿಗಳು ಇದಕ್ಕೊಪ್ಪಿಗೆ ಕೊಟ್ಟಿರುವರೇ? ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರವೇ ದೊರೆಯುವ ಹಾಗಿಲ್ಲ. ಇದರಿಂದ ಸರಕಾರವು ತನಗೆ ಬೇಕಾದರೆ, ಯಾವ ನೀತಿ ನಿಯಮದ ಗೊಡವೆಯೇ ಇಲ್ಲದೆ ಇಚ್ಛಾನುಸಾರ ವರ್ತಿಸುವುದೆಂಬುದು ಸಿದ್ಧವಾಗುವುದು.

ಟ್ರೊಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂ-ಡೆಲ್ಲಿ.
ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ

ಎಂ. ಸುಂದರರಾಮ ಶೆಟ್ಟಿ, ಬ್ರಾಂಚ್ ಮೆನೇಜರ್, ಸಂಪನಕಟ್ಟೆ—ಮಂಗಳೂರು.
ಅಥವಾ
ಕೆ ರಾಮಮೂರ್ತಿ, ಎಂ. ಎ., ಬ್ರಾಂಚ್ ಸೆಕ್ರೆಟರಿ, 160 ಮೌಂಟ್‌ರೋಡ್, ಮದ್ರಾಸು

ರಾಷ್ಟ್ರೀಯ ಮುಸಲ್ಮಾನ ಪರಿಷತ್ತು

ಬೇಗನೇ ಡಿಲ್ಲಿಯಲ್ಲಿ ಹಿಂದೂದೇಶದ ರಾಷ್ಟ್ರೀಯ ಮುಸಲ್ಮಾನ ಪರಿಷತ್ತೊಂದು ನಡೆಯಲಿರುವುದು ರಾಷ್ಟ್ರೀಯ ಮುಸಲ್ಮಾನರು ಮುಸ್ಲಿಮ್ ಲೀಗಿನೊಂದಿಗೆ ಹೋರಾಡಲು ಸುಘಟಿತರಾಗುವುದಲ್ಲ ಹಿಂದೂದೇಶದ ಸ್ವಾತಂತ್ರ್ಯದ ಸಂಬಂಧವಾಗಿ ಮುಸಲ್ಮಾನರ ಧೋರಣೆಯ ವಿಷಯದಲ್ಲಿ ಹೆಚ್ಚಿನ ಅಪಪ್ರಚಾರವು ನಡೆದಿರುತ್ತದೆ. ಮುಸಲ್ಮಾನರೂ ಹಿಂದುಗಳಷ್ಟೇ ಸ್ವಾತಂತ್ರ್ಯಾಭಿಮಾನಿಗಳಿರುತ್ತಾರೆ. ಹಿಂದೂದೇಶದ ಸ್ವಾತಂತ್ರ್ಯವನ್ನು ಅವರಷ್ಟೇ ಹಾರೈಸುವವರಿದ್ದಾರೆ. ಪ್ರಜಾಸತ್ತಾತ್ಮಕ ಧರ್ಮ ಇಸ್ಲಾಮು. ಅದರ ಅನುಯಾಯಿಗಳೆಂದಿಗೂ ಪ್ರಜಾಸತ್ತೆಗೆ ವಿರೋಧ ವಿರಬಾರದು. ಹೆಚ್ಚಿನ ಮುಸಲ್ಮಾನರ ಹಿರಿಯರು ಹಿಂದುಗಳು ಹಿಂದೂದೇಶವೇ ಹಿಂದೀ ಮುಸಲ್ಮಾನರ ಮಾತೃಭೂಮಿ. ಈಗ ಲೋಕದಲ್ಲೆಲ್ಲಾ ಪ್ರಾಮುಖ್ಯವಾಗಿರುವದೆಂದರೆ ಸಾಂಪತ್ತಿಕ ಪ್ರಶ್ನೆ. ಅದು ಎಲ್ಲರಿಗೂ ಒಂದೇರೀತಿ ಅನ್ವಯಿಸುತ್ತದೆ. ಅದು ರಾಜಕೀಯ ಮತ್ತು ಸಾಂಪತ್ತಿಕ ಪ್ರಶ್ನೆಗಳನ್ನು ಇತ್ಯರ್ಥಪಡಿಸುವಾಗ ಧಾರ್ಮಿಕ ಪ್ರಶ್ನೆಯನ್ನ ತಂದುಗೊಂದಲವೆಬ್ಬಿಸುವುದರಲ್ಲಿ ಅರ್ಥವಿಲ್ಲ. ಸಾಂಪತ್ತಿಕ ದೃಷ್ಟಿಯಿಂದ ಮುಸಲ್ಮಾನ ಜನಸಾಮಾನ್ಯರು ಹಿಂದುಗಳಿಗಿಂತಲೂ ಕೆಳತೆಯಾಗಿರುವರು. ದೇಶವು ರಾಜಕೀಯ ಮತ್ತು ಸಾಂಪತ್ತಿಕ ಸ್ವಾತಂತ್ರ್ಯಪಡೆಯದೆ ಅವರ ಉದ್ಧಾರವಾಗಲಾರದು. ಈ ಪ್ರಶ್ನೆಗೆ ರಾಷ್ಟ್ರೀಯ ಮುಸಲ್ಮಾನರು, ಮುಖ್ಯವಾಗಿ ದೇಶದ ಗಮನವನ್ನೆಳೆಯಲಿರುವರು.

ಚೈನದ ಪರಿಸ್ಥಿತಿ

ಚೈನದ ಇತ್ತಲಾಗಿನ ನಿಜವಾದ ಪರಿಸ್ಥಿತಿಯು ತಿಳಿದುಬಂದಿಲ್ಲ. ಉತ್ತರ ಚೈನದಲ್ಲಿದ್ದ ಬ್ರಿಟಿಷ್ ಸೇನೆಯನ್ನೆಲ್ಲಾ ಬ್ರಿಟನು ಹಿಂದೆ ಕರೆದಿದೆ ಇದರಿಂದ ಜಪಾನು ಸಂತೋಷಗೊಂಡಿದೆ. ಫ್ರಾನ್ಸು ಕೂಡಾ ಬ್ರಿಟನನ್ನೇ ಅನುಸರಿಸುವುದು. ತಮ್ಮ ವ್ಯಾಪಾರ ವ್ಯವಹಾರದ ಕುರಿತು ಬ್ರಿಟಿಷರು ಜಪಾನಿನೊಡನೆ ಒಪ್ಪಂದಮಾಡಿಕೊಂಡು ತಮ್ಮನ್ನು ಸ್ವಕ್ಷೇಮವಾಗಿರಲೆಳಸುವಂತಿದೆ. ಅಮೆರಿಕವು ಜಪಾನಿನ ಧೋರಣೆಯನ್ನು ಪ್ರಬಲವಾಗಿ ವಿರೋಧಿಸಿಕೊಂಡು ಬಂದಿದೆ. ಅದಕ್ಕೆ ಯುದ್ಧ ಸಾಮಗ್ರಿ ಕಳುಹಿಸುವುದನ್ನು ಸಾಧ್ಯವಾದಷ್ಟು ಕಡಿಮೆಮಾಡಿದೆ. ಆದರೆ ಚೀನೀ ಸರಕಾರಕ್ಕೆ ಹೆಚ್ಚಿನ ಸಹಾಯವೇನೂ ಮಾಡಿರುವುದಿಲ್ಲ. ಈಗ ಚೈನಕ್ಕೆ ಹೆಚ್ಚಿನ ಸಹಾಯಮಾಡುತ್ತಿರುವುದೆಂದರೆ ಸೋವಿಯೆಟ್ ರಷ್ಯ.

ಜಿನ್ನಾ ನೆಹರು ಮಾತುಕತೆ

ಈ ಮಾತುಕತೆಯನ್ನು ಯಾವಾಗ ನಡಿಸಬಹುದೆಂದು ಪಂಡಿತ ನೆಹರುಗಳು ಮಿ. ಜಿನ್ನರಿಗೆ ಪತ್ರ ಬರೆದಿರುವರೆಂದು ತಿಳಿದುಬರುತ್ತದೆ. "ಮಹಾತ್ಮ ಗಾಂಧಿ, ಮಿ. ಎಮ್. ಎ ಜಿನ್ನ ಮತ್ತು ಪಂಡಿತ ಜವ್ಹಾರಲಾಲ ನೆಹರುಗಳಂತಹ ದೇಶಾಭಿಮಾನಿಗಳು ಮತ್ತು ಅಗ್ರಗಣ್ಯ ಮುಖಂಡರು ತಮ್ಮ ಉದ್ದೇಶ ಸಾಧಿಸದಿರಲಾರರು. ಆದರೆ ಹೊರಗಣವರೇನಾದರೂ ಅವರಿಗೆ ತೊಂದರೆಕೊಡುತ್ತಿರುವಂತಾಗಬಾರದು" ಎಂದು ಪಂಜಾಬಿನ ಪ್ರಧಾನಮಂತ್ರಿಗಳಾದ ಸರ್ ಸಿಕಂದರ್ ಹಾಯತ್ ಖಾನರು, ಪಂಜಾಬಿನ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ. ಭಾರ್ಗವರಿಗೆ ಉತ್ತರವಿತ್ತಿರುವರು. ಹಿಂದೂಮುಸಲ್ಮಾನ ಪ್ರಶ್ನೆಯ ಇತ್ಯರ್ಥಕ್ಕೆ ಪಂಜಾಬಿನ ಪ್ರಶ್ನೆಯು ದೊಡ್ಡ ತೊಡಕಾಗಿದೆ. ಅದನ್ನು ತಾವು ತಮ್ಮೊಳಗೇನೇ ಇತ್ಯರ್ಥಿಸಿಕೊಳ್ಳುವುದೊಳ್ಳೇದು ಅಖಿಲಭಾರತ ಪ್ರಶ್ನೆಯು ಇತ್ಯರ್ಥವಾಗುವ ಸಂಭವ ತೋರುವುದಿಲ್ಲೆಂದು ಡಾಕ್ಟರ್ ಗೋಪಿಚಂದ್ ಸೂಚಿಸಿ ಸರ್. ಸಿಕಂದರು ಮೇಲಿನ ಅಭಿಮತವಿತ್ತಿರುವರು.

ಹಲವು ಹಡಗಗಳು ಮುಳುಗಿಸಲ್ಪಟ್ಟವು

ಇಂಗ್ಲೆಂಡಿನ ಪೂರ್ವ ಕರಾವಳಿಯಲ್ಲಿ ಜರ್ಮನರು ಜಲ ತೋಟೆಗಳನ್ನಿಟ್ಟುದರ ಪರಿಣಾಮವಾಗಿ ಇದೇ ತಾ 30ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ 10 ಹಡಗಗಳು ಮುಳುಗಿಸಲ್ಪಟ್ಟಿರುವವು ಈ ಹಡಗಗಳ ಹಲವು ಮಂದಿ ನಾವಿಕರು ಕೊಲ್ಲಲ್ಪಟ್ಟಿರುವರು 'ಮೆಗ್ನೆಟಿಕ್ ಮೈನ್' ಎಂಬ ಹೊಸ ರೀತಿಯ ಜಲತೋಟೆಯು ಹಿಟ್ಲರರ ಗುಪ್ತ ಆಯುಧವೋ ಎಂಬ ಸಂದೇಹಕ್ಕಾಸ್ಪದವಾಗಿದೆ ಬ್ರಿಟನಿಗೆ ಇದೇನೂ ಹೊಸತಲ್ಲ ಈ ಜಲತೋಟೆಯು ನೀರೊಳಗೆ ಇಡಲ್ಪಟ್ಟು ಸ್ಟೀಮರುಗಳು ಅದರ ಹತ್ತಿರ ಹೋದೊಡನೆಯೇ ಸ್ಫೋಟವುಂಟಾಗಿ ಅವು ಮುಳುಗುವಂತಾಗುತ್ತದೆ.

ಇಗರ್ಜಿಗಳ ಮಾರಾಟ

ರಶ್ಯವು ವಶಪಡಿಸಿಕೊಂಡಿರುವ ಪೋಲಂಡಿನ ಭಾಗದಲ್ಲಿರುವ ಇಗರ್ಜಿ, ಕನ್ವೆಂಟ್ ಮತ್ತು ಕ್ರೈಸ್ತ ಸನ್ಯಾಸಾಶ್ರಮಗಳನ್ನೆಲ್ಲಾ ಸಿನೆಮಾ ಗೃಹ, ವಾಚನಾಲಯ ಮೊದಲಾದುವುಗಳನ್ನಾಗಿ ಮಾರ್ಪಡಿಸಿರುವುದು ಇದೀ ಪೋಲಂಡಿನಲ್ಲಿ ಅತಿ ದೊಡ್ಡದಾದ ಲೊವೊವ್ ಪಟ್ಟಣದ ಇಗರ್ಜಿಯನ್ನು ಕುದುರೆ ಲಾಯವಾಗಿ ಪರಿವರ್ತಿಸಲಾಗಿದೆಯೆಂದು ತಿಳಿದು ಬರುತ್ತದೆ.

ಬೊಹೀಮಿಯದಲ್ಲಿ ನಾಝಿಗಳ ಭೀಕರ ಹಿಂಸೆ

ಬೊಹೀಮಿಯ ಮತ್ತು ಮೊರಾವಿಯಗಳಲ್ಲಿ ಇತ್ತಲಾಗಿ ಉಂಟಾದ ಗಲಾಟೆಗಳನ್ನಡಗಿಸಲು ನಾಝಿ ಪೋಲೀಸರು ನಡಿಸಿದ ಭೀಕರ ಹಿಂಸೆಯಿಂದಾಗಿ 1700 ಮಂದಿ ಕೊಲ್ಲಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಇದರಲ್ಲಿ ಮೂರರಲ್ಲೊಂದಂಶ ಯೆಹೂದ್ಯರು. ಕಳೆದ ಐದಾರು ದಿವಸಗಳಲ್ಲಿ ಕೆಲವು ಸಹಸ್ರಮಂದಿ ಕೈದು ಮಾಡಲ್ಪಟ್ಟಿರುತ್ತಾರೆ ಜೆಕ್ಕರ ಮೇಲೆ ನಡಿಸಲ್ಪಡುತ್ತಿರುವ ದಬ್ಬಾಳಿಕೆಯು ಅವರ್ಣನೀಯವಿದೆ ಪ್ರೇಗ್ ಪಟ್ಟಣದಲ್ಲಿ ಮಾರ್ಶಲ್ ಲೋ

ಸಮಾಚಾರ ಸಂಗ್ರಹ

ಜ್ಯಾರಿಮಾಡಲ್ಪಟ್ಟಿದೆ 20,000 ನಾಝಿ ಪೋಲೀಸರು ಬಂದೋಬಸ್ತು ನಡಿಸುತ್ತಿದ್ದಾರೆ 5 ದಿವಸಗಳ ಭೀಕರ ದಬ್ಬಾಳಿಕೆಯ ಸಂದರ್ಭದಲ್ಲಿ 120 ಮಂದಿಯನ್ನು ತಲೆಗಡಿದು ಕೊಲ್ಲಲಾಗಿದೆ

ಯುದ್ಧಕ್ಕೆ ಪ್ರತಿ ದಿನ 6 ಮಿಲ್ಯ ಪವನು ವೆಚ್ಚ

ಪ್ರತಿ ದಿನ ಯುದ್ಧದ ವೆಚ್ಚವು 6 ಮಿಲ್ಯ ಪವನಾಗಿರುತ್ತದೆಂದು ಇಂಗ್ಲೆಂಡಿನ ಅರ್ಥಸಚಿವರಾದ ಸರ್. ಜೋನ್ ಸೈಮನರೆಂದಿರುವರು. ಇಷ್ಟರ ವರೆಗೆ ಸುಮಾರು 2 ಲಕ್ಷ ಸೇನೆಯು ಫ್ರಾನ್ಸಿಗೆ ಹೋಗಿರುವುದು, ಬರುವ ವಸಂತ ಋತುವಿನೊಳಗೆ ಇನ್ನೂ ಬಹಳ ಹೆಚ್ಚು ಸೈನಿಕರು ಕಳುಹಿಸಲ್ಪಡಲಿರುವರು ಯುದ್ಧ ಮುಗಿಯುವನಕ ಬ್ರಿಟಿಷ್ ಸೇನೆಯು ಸಹಸ್ರಗಟ್ಲೆಯಲ್ಲಿ ಫ್ರಾನ್ಸಿಗೆ ಕಳುಹಿಸಲ್ಪಡುವುದು ಒಂದು ಮಿಲ್ಯ ಸೈನಿಕರು ಹೊಸತಾಗಿ ತರಬೇತಿ ಹೊಂದುತ್ತಿದ್ದಾರೆಂದು ಯುದ್ಧ ಮಂತ್ರಿ ಮಿ. ಹೋರ್ ಬೆಲೀಶರವರಂದಿರುವರು.

ಸಿಂಧ್ ಪ್ರಾಂತದ ಹಳ್ಳಿಗಳಲ್ಲಿ ಢಕಾಯಿತಿ

ಸಿಂಧ್ ಪ್ರಾಂತದ ಸೂಕೂರ್ ಪಟ್ಟಣದ ಬಳಿ ಇರುವ ಮಂಜಿಲ್ಘರ್ ದೇವಸ್ಥಾನದ ಕುರಿತು ಎದ್ದಿರುವ ಹಿಂದೂ ಮುಸಲ್ಮಾನ ಕಲಹವು ಸಕ್ಕೂರಿಗೆ ಹಬ್ಬಿ ದೊಡ್ಡ ಹಿಂದೂ ಮುಸಲ್ಮಾನಗಲಾಟೆಯಲ್ಲಿ ಪರಿಣಮಿಸಿರುವುದು ಅಂಗಡಿ ಮತ್ತು ಮನೆಗಳು ಲೂಟಿಮಾಡಲ್ಪಟ್ಟಿರುವವು. ಕಲವು ಸುಟ್ಟುಹಾಕಲ್ಪಟ್ಟಿವೆ. ಇದೇ ತಾ. 23ರಲ್ಲು ಸೂಕೂರಿನಿಂದ 15ಮೈಲು ದೂರದ ಗೊಸ್ಸರ್ಜಿ ಮೊದಲಾದ ಕೆಲವು ಹಳ್ಳಿಗಳ ಮೇಲೆ ಬಲೂಚಿ ಸ್ಥಾನದ ಮುಸಲ್ಮಾನ ಪಂಗಡಿಗರು ಧಾಳಿಯಿಟ್ಟು ಲೂಟಿ ನಡಿಸಿ 100ಜನ ಹಿಂದುಗಳನ್ನು ಕೊಂದಿರುವರು. ಈ ಹಳ್ಳಿಗಳ ಹಿಂದುಗಳು ತಮ್ಮ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಹೋಗಲಾರಂಭಿಸಿರುವರು. ಸಿಂಧ್ ಸರಕಾರವು ಪೋಲೀಸರನ್ನೂ ಸೈನಿಕರನ್ನೂ ಕಳುಹಿಸಿ ಸೂಕೂರಿನಲ್ಲಿ ಮತ್ತು ಅದರ ಹತ್ತಿರದ ಪಟ್ಟಣಗಳಲ್ಲಿ ಶಾಂತಿಯನ್ನು ಸ್ಥಾಪಿಸಲೆತ್ನಿಸುತ್ತಿರುವುದು.

8 ಜರ್ಮನ್ ವಿಮಾನಗಳು ನಾಶಗೊಳಿಸಲ್ಪಟ್ಟವು

ಇದೇ ತಾ. 23ರಲ್ಲು ಪಶ್ಚಿಮ ರಣರಂಗದಲ್ಲಿ ಸುಮಾರು 100 ಮೈಲು ವಿಸ್ತೀರ್ಣದ ರಣರಂಗದಲ್ಲಿ ನಡೆದ ತೀವ್ರವಾದ ವಿಮಾನ ಯುದ್ಧದಲ್ಲಿ 8ನಾಜೀ ವಿಮಾನಗಳು ನಾಶವಾಗಿರುವವೆಂದು ತಿಳಿದು ಬರುತ್ತದೆ, ಇದೇದಿನ ಜರ್ಮನ್ ವಿಮಾನಗಳು ಇಂಗ್ಲೆಂಡಿನ ಶೆಟ್ಲೆಂಡ್ ದ್ವೀಪಗಳ ಮೇಲೆ ಹಾರಾಡಿ ಬೊಂಬುಗಳನ್ನೆಸೆದುವು ಆದರೆ ಈ ಬೋಂಬುಗಳು ಗುರಿತಪ್ಪಿ ಬಿದ್ದವು ಥೇಮ್ಸ ನದಿಯ ಮೇಲೆ ಜರ್ಮನ್ ವಿಮಾನಗಳು ಆಗಾಗ ಹಾರಿಬಂದು ಪ್ರತಿಕೋಟೆಗೆಯತ್ನಿಸಿ ಬ್ರಿಟಿಷ್ ವಿಮಾನಗಳಿಂದ ಹಿಂದಕ್ಕೋಡಿಸಲ್ಪಡುತ್ತಿವೆ. ಇದೇ ತಾ. 31ರಲ್ಲಿ ಗಿಪ್ಸಿ ಎಂಬ ಬ್ರಿಟಿಷ್ ಯುದ್ಧ ಹಡಗವು ಇಂಗ್ಲೆಂಡಿನ ಪೂರ್ವಕರಾವಳಿಯಲ್ಲಿ ಜಲತೋಟೆಗೆ ತಾಗಿ ಸ್ಫೋಟವಾಗಿ ಒಡೆದು ಹೋಗಿರುವುದು 3 ಮಂದಿ ಅಧಿಕಾರಿಗಳು ಮತ್ತು ಇತರ ನಾವಿಕರು ಗಾಯಗೊಂಡಿರುವರು. 10ಮಂದಿಯ ಪತ್ತೆಇಲ್ಲ

ಪುನಃ 3 ಬ್ರಿಟಿಷ್ ಹಡಗಗಳು ಮುಳುಗಿದುವು

ಇದೇ ತಾ. 23ರಲ್ಲು ಜರ್ಮನರಿಂದ ಇರಿಸಲ್ಪಟ್ಟ ಜಲತೋಟೆಗಳಿಂದ ಪುನಃ 3 ಬ್ರಿಟಿಷ್ ಹಡಗಗಳು ಮುಳುಗಿಹೋಗಿರುವವು ಡಾರಿನೋ ಎಂಬ ಹಡಗದಲ್ಲಿದ್ದ 27ಮಂದಿ ನಾವಿಕರಲ್ಲಿ 16ಮಂದಿ ಕೊಲ್ಲಲ್ಪಟ್ಟಿರುವರು ಇನ್ನೊಂದರ 6ಮಂದಿ ನಾವಿಕರು ಮುಳುಗಿಹೋಗಿರುವರು ಜಲ ತೋಟೆಗಳನ್ನು ತೆಗೆಯುವ ಆಗೋನ್ನಾಟ್ ಎಂಬ ನಾವೆ ಕೂಡಾ ಮುಳುಗಿರುವುದು.

7 ಜರ್ಮನ್ ವಿಮಾನಗಳ ನಾಶ

ಇದೇ ತಾ. 23ರಲ್ಲಿ ಪಶ್ಚಿಮರಣರಂಗದಲ್ಲಿ ಮಿತ್ರರಾಷ್ಟ್ರಗಳ ಮತ್ತು ಜರ್ಮನ್ ವಿಮಾನಗಳೊಳಗೆ ಹೋರಾಟ ನಡೆದು ಒಟ್ಟು 7 ಜರ್ಮನ್ ವಿಮಾನಗಳು ನಾಶಹೊಂದಿವೆಯೆಂದು ತಿಳಿದುಬರುತ್ತದೆ ಇತ್ತಲಾಗಿ ಕೆಲವು ದಿವಸಗಳಿಂದ ಫ್ರೆಂಚ್ ಯುದ್ಧ ಹಡಗಗಳು 3 ಜರ್ಮನ್ ಸಬ್‌ಮೆರೀನ್‌ಗಳನ್ನು ಮುಳುಗಿಸಿರುತ್ತವೆ.

ಜರ್ಮನರ ಬೆದರಿಕೆ

ಬ್ರಿಟಿಷ್ ಸಮುದ್ರಕರಾವಳಿ ಮತ್ತು ಬಂದರುಗಳಲ್ಲೆಲ್ಲಾ ಜರ್ಮನರು ಹೊಸ ನಮೂನೆಯ ಜಲತೋಟೆಗಳನ್ನು ಜಲಯಾನಗಳ ಮೂಲಕ ಹಾಕಿಸಿ ಸಾಧ್ಯವಾದಷ್ಟು ಹೆಚ್ಚು ಹಡಗುಗಳನ್ನು ನಿರ್ದಾಕ್ಷಿಣ್ಯವಾಗಿ ಮುಳುಗಿಸಿ ಬಿಡುವ ಬೆದರಿಕೆ ಹಾಕಿರುವರು. ಜರ್ಮನಿಯ ಸಾಮಾನುಗಳನ್ನು ತಟಸ್ಥ ರಾಷ್ಟ್ರಗಳೂ ಒಯ್ಯದಂತೆ ತಡೆಹಾಕಿ ಜರ್ಮನ್ ಸರಕಾರದ ನಾಣ್ಯ ವಿನಿಯಮಕ್ಕೆ ದೊಡ್ಡ ಹಾನಿಯನ್ನುಂಟುಮಾಡುವ ಬ್ರಿಟಿಷ್ ಸರಕಾರದ ಘೋಷಣೆಯು ಹಿಟ್ಲರರನ್ನು ಉದ್ರೇಕಿಸಿರುವುದು. ಒಂದುವಾರದಲ್ಲಿ ಜಲ ತೋಟೆಗಳಿಂದ ಮುಳುಗಿಸಲ್ಪಟ್ಟ ಹಡಗುಗಳ ಸಂಖ್ಯೆಯಿಂದ ಹಿಟ್ಲರರು ಸಂತೋಷಗೊಂಡು ಈ ಆಯುಧವನ್ನು ಮತ್ತಷ್ಟು ಪ್ರಬಲವಾಗಿ ಉಪಯೋಗಿಸುವನಿರ್ಧಾರಮಾಡಿರುವರು.

THE

BOMBAY LIFE ASSURANCE

Company Limited.

[ESTD 1908]

COMPARE

Your Life Assurance with any other property you possess what is its guaranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs	1,17,69,748
Total Assets . ..	Rs.	1,31,28,998

To Insure or to represent it pays you to consult

KOCHIKAR BROTHERS LTD.,

MADRAS BRANCH SECRETARIES,
BOMBAY LIFE BUILDING
Sir Lalubhai Samaldas Road,
GANDHI NAGAR, UDIPI

Post Box No 337, Mount Road, MADRAS	Visweswarapuram Circle BANGALORE CITY	Charni Road, Girgaum, BOMBAY No 4
Car Street, MANGALORE.	Puthiyara CALICUT.	Central Station Road, TRIVANDRUM

ನ ವ ಯು ಗ

ನೋಟೀಸು.

ನವಯುಗಕ್ಕೆ ಸಂಬಂಧಿಸಿದ ಚೆಕ್, ಮನಿಯಾರ್ಡರ್, ಪೋಸ್ಟಲ್ ಆರ್ಡರು ಮೊದಲಾದ ಯಾವತ್ತೂ ಹಣದ ವ್ಯವಹಾರವನ್ನು ಮೆನೇಜರ್ ನವಯುಗ, ಉಡುಪಿ ಈ ವಿಳಾಸಕ್ಕೇನೇ ಕಳಿಸಬೇಕಲ್ಲದೆ ಯಾವ ಖಾಸಗಿ ವಿಳಾಸಕ್ಕಾದರೂ ದಯಮಾಡಿ ಕಳಿಸಬಾರದು. ಹಾಗೆ ಖಾಸಗಿ ವಿಳಾಸಕ್ಕೆ ಕಳಿಸಿದ್ದಾದರೆ ನಾವು ಹೊಣೆಯಲ್ಲ.

ಉಡುಪಿ,
ತಾ 30-11-'39. } ಮೆನೇಜರ್.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರ

ಕಾಂಗ್ರೆಸಿನ ಕೇಳಿಕೆಯ ಪುಷ್ಟೀಕರಣ

ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ರೂಪುರೇಷೆ.

ಅಂಗೀಕೃತ ಅಲ್ಪಸಂಖ್ಯಾಕರಿಗೆ ರಕ್ಷಣೆಯ ಭರವಸೆ.

ಮಹಾತ್ಮರು ನಾಯಕತ್ವ ವಹಿಸಿರುವರು.

೬ ದಿವಸಗಳ ವರೆಗೆ ಆಲೋಚಿಸಿ ದೀರ್ಘ ನಿರ್ಣಯವೊಂದನ್ನು ಮಾಡಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇದೇ ತಾ. ೨೩ನೇ ಗುರುವಾರ ಕೊನೆಗೊಂಡಿರುವುದು. ಗಾಂಧಿಜಿ ಮತ್ತು ಸರ್ದಾರ್ ವಲ್ಲಭಾಯಿಯವರು ತಾ. ೨೬ರ ವರೆಗೆ ಅಲಹಾಬಾದಿನಲ್ಲಿ ನಿಲ್ಲುವರು. ಮಹಾತ್ಮರು ಪ್ರಾಯಶಃ ಪುನಃ ಸಂಯುಕ್ತ ಪ್ರಾಂತದ ಕಾಂಗ್ರೆಸ್ ಕೆಲಸಗಾರರನ್ನು ಕಂಡು ತನ್ನ ಭಾವನಾದೃಷ್ಟಿಯನ್ನವರಿಗೆ ವಿವರಿಸಲಿರುವರು. ಬ್ರಿಟಿಷ್ ಸರಕಾರವು ಹಿಂದೂದೇಶದ ಸಂಬಂಧವಾಗಿ ತನ್ನ ಯುದ್ಧದ ಉದ್ದೇಶಗಳನ್ನು ಸ್ಪಷ್ಟಪಡಿಸಲು ನಿರಾಕರಿಸಿರುವುದರಿಂದ ಗಾಂಧಿಜಿಯವರು ತೋರಿಸುತ್ತಿರುವ ವಿಶೇಷವಾದ ತಾಳ್ಮೆ, ಕಾಂಗ್ರೆಸಿನೊಳಗಣ ಅಹಿಂಸಾಚರಣೆ ಮತ್ತು ಶಿಸ್ತಿಗೆ ಅವರು ಕೊಡುತ್ತಿರುವ ಮಹತ್ವಿಕೆಯಿಂದ ತೀವ್ರಗಾಮಿಗಳಲ್ಲಿ ಅಸಹಿಷ್ಣುತೆಯುಂಟಾಗಿದೆ, ಆದರೆ ಮಹಾತ್ಮರು ಅವಸರದಿಂದ ಯಾವ ಕೆಲಸವನ್ನಾದರೂ ಮಾಡುವ ಹಾಗಿಲ್ಲ. ರಾಜಿಯ ಎಲ್ಲಾ ದ್ವಾರಗಳೂ ಮುಚ್ಚಲ್ಪಟ್ಟು ಸಾಮುದಾಯಿಕ ಕಾಯಿದೆ ಭಂಗ ಚಳವಳವನ್ನು ಹೂಡುವಷ್ಟರ ಶಕ್ತಿ ಮತ್ತು ಸಂಯಮವು ಕಾಂಗ್ರೆಸಿಗುಂಟಾಗಿರುವುದೆಂದು ಅವರಿಗೆ ದೃಢವಾಗಬೇಕು. ಆ ವರೆಗೆ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತಿ ಕಾಂಗ್ರೆಸನ್ನು ಬಲಪಡಿಸಬೇಕೆಂದೇ ಅವರ ನಿಶ್ಚಿತಾಭಿಮತ. ಕಾಂಗ್ರೆಸ್ ಕಮಿಟಿಯಲ್ಲೇ ಒಬ್ಬಿಬ್ಬರು, ಈಗಲೇ ನಿಶ್ಚಿತವಾದ ಕಾರ್ಯಕ್ರಮವನ್ನೇನಾದರೂ ಕೈಕೊಂಡು, ದೇಶವನ್ನು ಶೀಘ್ರವಾಗಿ ಉಗ್ರ ಕಾರ್ಯಕ್ರಮಕ್ಕೆ ಸಿದ್ಧಗೊಳಿಸಬೇಕೆಂಬ ಅಭಿಪ್ರಾಯದಿಂದಿದ್ದರು, ಆದರೆ ಕಾಂಗ್ರೆಸಿನ ನಾಯಕತ್ವವನ್ನು ಪುನಃ ವಹಿಸಿರುವಂತಿರುವ ಗಾಂಧಿಜಿಯವರು, ಯಾವಾಗ ಮತ್ತು ಯಾವ ರೀತಿಯ ಚಳವಳ ಹೂಡುವುದೆಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನು ತಾನೇ ಇಟ್ಟುಕೊಂಡಿರುವಂತಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಈ ಸಲ ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ರೂಪರೇಷೆಯನ್ನು ಸ್ಪಷ್ಟವಾಗಿ ಸೂಚಿಸಿ, ಅಂಗೀಕೃತ ಅಲ್ಪ ಸಂಖ್ಯಾಕರ ಒಪ್ಪಿಗೆಯಿಂದದು ರಚಿಸಲ್ಪಡಬೇಕೆಂದು ನಿಶ್ಚೈಸಿರುವುದರಿಂದ ಅಲ್ಪ ಸಂಖ್ಯಾಕರ ಭೀತಿಯು ದೂರವಾಗಬಹುದೆಂದು ನಂಬಲಾಗಿದೆ. ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ರಚನೆಯ ಕುರಿತು ಮಹಾತ್ಮರು ಕೆಲವು ಲೇಖನಗಳನ್ನು ಹರಿಜನದಲ್ಲಿ ಕೂಡಲೆ ಕ್ರಮಶಃ ಪ್ರಕಟಿಸಲಿರುವರೆಂದು ತಿಳಿದುಬರುತ್ತದೆ. ಕಾಂಗ್ರೆಸು ಇನ್ನಾದರೂ ಸಂಧಾನದ ದ್ವಾರವನ್ನು ತೆರೆದಿಟ್ಟಿದೆ. ಆದರೆ ವೃಥಾ ಕಾಲಯಾಪನೆ ಮಾಡಲು ಸಿದ್ಧವಿಲ್ಲ. ಕಾಂಗ್ರೆಸಿನ ಧೋರಣೆಯನ್ನು ವಿವರಿಸಿ ತಿಳಿಸಲು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಖಂಡರು ದೇಶದಲ್ಲೆಲ್ಲಾ ಸಂಚರಿಸಿ ಪ್ರಚಾರ ಮಾಡಲಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಬರುವ ಸಭೆಯು ದಶಂಬರ ತಾ 19ಕ್ಕೆ ವಾರ್ಧಾದಲ್ಲಿ ನಡೆಯಲಿರುವುದು. ಚಳಿಗಾಲ ದಾಟುವನಕ ಕಾಂಗ್ರೆಸಿನವರು ಕೂಡಾ ಉಗ್ರ ಧೋರಣೆಯನ್ನೇನಾದರೂ ಕೈಕೊಳ್ಳುವ ಹಾಗಿಲ್ಲ. ಹೊಸ ವರ್ಷದಲ್ಲಿ ಎಂತಹ ಸಂಸ್ಥಿತಿಯುಂಟಾಗುವುದೆಂದು ಹೇಳಬರುವುದಿಲ್ಲ

ವರ್ಕಿಂಗ್ ಕಮಿಟಿಯ ನಿರ್ಣಯ

ಯುರೋಪಿನ ಯುದ್ಧ ಮತ್ತು ಹಿಂದೂದೇಶದಲ್ಲಿ ಅದರಿಂದುಂಟಾದ ಪರಿಸ್ಥಿತಿಯ ಕುರಿತು ಕಾಂಗ್ರೆಸು ಕೈಕೊಂಡ ಧೋರಣೆಗೆ ದೇಶವು ಕೊಟ್ಟಿರುವ ಬೆಂಬಲದಿಂದ ವರ್ಕಿಂಗ್ ಕಮಿಟಿಯು ಸಂತೋಷ ಪಡುತ್ತದೆ 1914ರ ಯುದ್ಧದಂತೆ ಪ್ರಕೃತದ ಯುದ್ಧವು ಕೂಡಾ ಕೇವಲ ಸಾಮ್ರಾಜ್ಯ ಸ್ವಾರ್ಥಕ್ಕಾಗಿ ನಡೆಸಲ್ಪಡುತ್ತಿರುವುದೆಂಬುದೀಗ ಸ್ಪಷ್ಟವಾಗಿದೆ. ಹಿಂದೂದೇಶದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಯಥಾ ಪ್ರಕಾರ ಅಧಿಕಾರ ಚಲಾಯಿಸಲೆಳಸುವುದು. ಇಂತಹ ಯುದ್ಧ ಮತ್ತು ಧೋರಣೆಯಲ್ಲಿ ಕಾಂಗ್ರೆಸಿಗೆ ಸಹಕರಿಸಲು ಸಾಧ್ಯವಿಲ್ಲ ಸಾಮ್ರಾಜ್ಯಶಾಹಿ ಸ್ವಾರ್ಥ ಸಾಧನೆಗಾಗಿ ಹಿಂದೂದೇಶದ ಸಂಪತ್ತಿನ ಸೂರೆಯನ್ನು ಕಾಂಗ್ರೆಸು ಯಾವ ರೀತಿಯಲ್ಲಿಯೂ ಪ್ರೋತ್ಸಾಹಿಸಲಾರದು.

ಮುಖ್ಯ ಪ್ರಶ್ನೆಯನ್ನು ಮರೆಮಾಡುವ ಯತ್ನ

ಸಾಮ್ರಾಜ್ಯಶಾಹಿ ಮತ್ತು ಪ್ರಜಾಸತ್ತೆಯ ಕುರಿತು ಈ ಯುದ್ಧದ ಉದ್ದೇಶವೇನಿರುವುದು? ಹಿಂದೂದೇಶಕ್ಕದು ಯಾವ ರೀತಿಯಲ್ಲಿ ಅನ್ವಯಿಸಲಿರುವುದೆಂಬುದನ್ನು ಸ್ಪಷ್ಟೀಕರಿಸಬೇಕೆಂಬುದೇ ಕಾಂಗ್ರೆಸಿನ ಕೇಳಿಕೆಯಾಗಿತ್ತು. ಸಾಮ್ರಾಜ್ಯಶಾಹಿಯು ಕೊನೆಗೊಳಿಸಲ್ಪಟ್ಟು, ಹಿಂದೂದೇಶವು ಸ್ವತಂತ್ರ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟರೆ ಮಾತ್ರ ಈ ಉದ್ದೇಶಗಳು ಯೋಗ್ಯವಾದುವೆಂದು ಭಾವಿಸಬಹುದು. ಈ ಕೇಳಿಕೆಗೆ ದೊರೆತಿರುವ ಉತ್ತರವು ತೀರಾ ಅತೃಪ್ತಿಕರವಿದೆ. ಮಾತ್ರವಲ್ಲದೆ ಕಾಂಗ್ರೆಸು ಎತ್ತಿ ಹಿಡಿದಿರುವ ಮುಖ್ಯ ಹಾಗೂ ನೈತಿಕ ಪ್ರಶ್ನೆಯನ್ನು ಕಡೆಗಣಿಸಿ ಜನತೆಯ ಕಣ್ಣಿಗೆ ಮಣ್ಣು ಹಾಕುವ ಯತ್ನವನ್ನು ಬ್ರಿಟಿಷ್ ಸರಕಾರವು ಮಾಡುತ್ತದೆ ಹಿಂದೂದೇಶದ ಸ್ವಾತಂತ್ರ್ಯಕ್ಕೆ ಜಾತೀಯ ವೈಷಮ್ಯ, ಅಲ್ಪ ಸಂಖ್ಯಾಕರ ಮತ್ತು ದೇಶೀಯ ಸಂಸ್ಥಾನಗಳ ಪ್ರಶ್ನೆಗಳು ತೊಡಕಾಗಿರುವುದರಿಂದ ಕಾಂಗ್ರೆಸು ಕೇಳಿರುವ ನಿರೂಪಣೆಯು ಅಸಾಧ್ಯವಾಗಿದೆಯೆಂಬ ನೆವನವನ್ನೊಡ್ಡಲಾಗಿದೆ. ಕಾಂಗ್ರೆಸಿನ ಕೇಳಿಕೆಯನ್ನು ತೃಪ್ತಿಪಡಿಸುವ ವಿಷಯದಲ್ಲಿ ಜಾತೀಯ ಪ್ರಶ್ನೆಯ ವಿಚಾರವು ಬರುವುದೇ ಇಲ್ಲ. ಯಾವ ಅಲ್ಪ ಸಂಖ್ಯಾಕರಾದರೂ, ಹಿಂದೂದೇಶದ ಸ್ವಾತಂತ್ರ್ಯದ ಮತ್ತು ಪ್ರಜಾಸತ್ತೆಯ ಬಾಧ್ಯತೆಯನ್ನು ನಿರಾಕರಿಸಲಾರರು. ದೇಶೀಯ ರಾಜರುಗಳು ಚಕ್ರವರ್ತಿ ಸರಕಾರದ ಪ್ರತಿನಿಧಿಗಳು. ದೇಶೀಯ ಸಂಸ್ಥಾನಗಳು ಸ್ವತಂತ್ರ ಹಿಂದೂ ಸ್ಥಾನದಲ್ಲಿ ಯಾವ ಭಾಗ ವಹಿಸಬೇಕೆಂಬ ಕಟ್ಟಕಡೆಗೆ ನಿರ್ಧರಿಸುವವರಂದರೆ ಸಂಸ್ಥಾನಿಕ ಪ್ರಜೆಗಳು. ಅವರ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಬ್ರಿಟಿಷ್ ಸರಕಾರವು ನಿರಾಕರಿಸುತ್ತಾ ಬಂದಿರುವುದು. ಹಿಂದೂದೇಶದ ಸ್ವಾತಂತ್ರ್ಯವನ್ನು ವಿರೋಧಿಸುವವರಾರಾದರೂ ಇದ್ದರೆ ಅವರಿಗೂ ಕಾಂಗ್ರೆಸಿನ ಕೇಳಿಕೆಗೂ ಸಂಬಂಧವೇ ಇಲ್ಲ ಯುದ್ಧದ ಉದ್ದೇಶ ಮತ್ತು ಹಿಂದೂದೇಶದ ಸ್ವಾತಂತ್ರ್ಯದ ಕುರಿತು ಬ್ರಿಟಿಷ್ ಸರಕಾರವು ನಿರೂಪಣೆಯನ್ನು ಹೊರಡಿಸಲು ತಪ್ಪಿಸಿಕೊಂಡು, ಅದಕ್ಕೆ ಅಸಂಗತ ವಿಷಯಗಳನ್ನು ಮುಂದೊಡ್ಡಿರುವುದರಿಂದ, ದೇಶದ ಅಪ್ರಾಗತಿಕ ಜನರನ್ನು ಎತ್ತಿ ಕಟ್ಟಿ ತನ್ನ ಸಾಮ್ರಾಜ್ಯಾಧಿಕಾರವನ್ನು ಹಿಂದೂದೇಶದಲ್ಲಿ ಸ್ಥಿರವಾಗಿರಿಸುವ ಇಚ್ಛೆಯುಳ್ಳವರಿರುವರೆಂಬುದು ವ್ಯಕ್ತವಾಗುತ್ತದೆ.

ಕಾಂಗ್ರೆಸು ಲಾಭ ಹೊಂದಲು ಹೊರಟಿಲ್ಲ

ಈ ಯುದ್ಧದ ಬಿಕ್ಕಟ್ಟು ಮತ್ತು ಅದರಿಂದ ಲೋಕದಲ್ಲುಂಟಾಗಿರುವ ಸಮಸ್ಯೆಗಳನ್ನು ಕಾಂಗ್ರೆಸು ಕೇವಲ ನೈತಿಕ ಪ್ರಶ್ನೆಯಾಗಿ ಪರಿಗಣಿಸಿದೆಯೇ ಹೊರತು ಸಂದರ್ಭ ಸಾಧಿಸಿ ಲಾಭ ಪಡೆಯಲು ಹೊರಟಿಲ್ಲ ಇತರ ಯಾವ ವಿಷಯಗಳನ್ನಾದರೂ ಆಲೋಚಿಸುವ ಮೊದಲು ಈ ಪ್ರಮುಖ್ಯ ನೈತಿಕ ಪ್ರಶ್ನೆಯ ಇತ್ಯರ್ಥವಾಗಬೇಕು. ಮಾರ್ಪಾಟಿನ ಸಂದರ್ಭದಲ್ಲಿ ಕೂಡಾ ಜನತೆಯ ಪ್ರತಿನಿಧಿಗಳಿಗೆ ನಿಜವಾದ ಅಧಿಕಾರವು ಕೊಡಲ್ಪಡದೆ ಕಾಂಗ್ರೆಸು ಎಂದಿಗೂ ಆಡಳಿತದ ಜವಾಬ್ದಾರಿಯನ್ನು ವಹಿಸಲಾರದು. ಆದುದರಿಂದ ನವಂಬರ ತಾ 4ರಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರು ವೈಸರಾಯರಿಗೆ ಕಳುಹಿಸಿರುವ ಉತ್ತರವನ್ನು ವರ್ಕಿಂಗ್ ಕಮಿಟಿಯು ಒಪ್ಪುತ್ತದೆ.

ಅಲ್ಪಸಂಖ್ಯಾಕ ಪ್ರಶ್ನೆ.

ಬ್ರಿಟನಿನ ಧೋರಣೆಯಿಂದ ಸಾಮ್ರಾಜ್ಯಶಾಹಿಯ ಕಳಂಕವನ್ನು ನಿವಾರಿಸಲು ಮತ್ತು ಕಾಂಗ್ರೆಸು ಮುಂದೆ ಸಹಕಾರವೀಯುವ ಕುರಿತು ಆಲೋಚಿಸುವಂತಾಗಲು ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಮೂಲಕ ಹಿಂದೀಯರೇ ತಮ್ಮ ರಾಜಕೀಯ ಘಟನೆಯನ್ನು ರಚಿಸಿಕೊಳ್ಳುವ ಹಕ್ಕು ಅಂಗೀಕೃತವಾಗಬೇಕು. ಸ್ವತಂತ್ರ ರಾಷ್ಟ್ರದ ರಾಜಕೀಯ ಘಟನೆಯನ್ನು ನಿಶ್ಚೈಸುವ ಒಂದೇ ಒಂದು ಪ್ರಜಾಸತ್ತಾತ್ಮಕ ವಿಧಾನವೇ ಅದು. ಆ ಮೂಲಕವಾಗಿಯೇ ಜಾತೀಯ ಮತ್ತು ಇತರ ಪ್ರಶ್ನೆಗಳ ಇತ್ಯರ್ಥವು ಸಾಧ್ಯವಿದೆ. ಇದರಿಂದ ಜಾತೀಯ ಪ್ರಶ್ನೆಯನ್ನು ರಾಜಿಯಿಂದ ಇತ್ಯರ್ಥಪಡಿಸುವ ಯತ್ನವನ್ನು ಕಾಂಗ್ರೆಸಿನವರು ಕಡಿಮೆ ಮಾಡುವರೆಂದೇನೂ ಅಲ್ಲ ಈಗ ಅಂಗೀಕರಿಸಲ್ಪಟ್ಟಿರುವ ಅಲ್ಪ ಸಂಖ್ಯಾಕರು ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಮೂಲಕ ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಬಹುದು, ಮತ್ತು ಪರಸ್ಪರ ಒಡಂಬಡಿಕೆಗೆ ಬರಲು ಅಸಾಧ್ಯವಾಗುವ ಅಲ್ಪ ಸಂಖ್ಯಾಕ ಹಕ್ಕುಗಳೇನಾದರೂ ಇದ್ದಲ್ಲಿ ಅವನ್ನು ಮಧ್ಯಸ್ಥಿಕೆಯಿಂದ ಇತ್ಯರ್ಥಪಡಿಸಬಹುದು ಪ್ರಾಯಬಂದವರಿಗೆಲ್ಲಾ ಓಟಿನ ಹಕ್ಕಿನ ಆಧಾರದಿಂದ ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯು ಆರಿಸಲ್ಪಡಬೇಕು. ಅಲ್ಪ ಸಂಖ್ಯಾಕರು ಅಪೇಕ್ಷಿಪಟ್ಟಲ್ಲಿ ಈಗ ಅವರಿಗಿರುವ ಪ್ರತ್ಯೇಕ ಪ್ರಾತಿನಿಧ್ಯವನ್ನು ಹಾಗೆಯೇ ಇರಿಸಬಹುದು. ಈ ಎಸೆಂಬ್ಲಿಯ ಅಲ್ಪಸಂಖ್ಯಾಕ ಮೆಂಬರರ ಸಂಖ್ಯೆಯು ಅವರ ಜನಸಂಖ್ಯೆಯನ್ನು ಪ್ರತಿಬಿಂಬಿಸತಕ್ಕದ್ದು. ಬ್ರಿಟಿಷ್ ಸರಕಾರದ ಧೋರಣೆಯಿಂದಾಗಿ ಕಾಂಗ್ರೆಸಿಗೆ ಅದರೊಡನೆ ಸಹಕರಿಸಲು ಅಸಾಧ್ಯವಾಗಿ ಅಸಹಕಾರದ ಪ್ರಥಮ ಹೆಜ್ಜೆಯಾಗಿ ಅದು ಕಾಂಗ್ರೆಸ್ ಮಂತ್ರಿಗಳೆಲ್ಲಾ ರಾಜಿನಾಮೆ ಕೊಡುವಂತೆ ಮಾಡಬೇಕಾಗಿ ಬಂದಿದೆ ಬ್ರಿಟನು ತನ್ನ ಧೋರಣೆಯನ್ನು

(೧೬ನೇ ಪುಟಕ್ಕೆ ಮುಂದರಿಸಿದೆ)

THULUNAD BANK
OF SUPPLY AGENCY LIMITED,
ESTD.] UDIPI. [1933.
INTEREST ON CURRENT ACCOUNT ALLOWED
at 3% p. a.
All kinds of Banking business transacted
Write for particulars to:—
The Managing Director,

ಯಾವ ಹಾದಿ ಮತ್ತು ಯಾವ ವಿಧಾನ?

ಅಹಿಂಸೆಯೊಂದೇ ದೇಶದ ಮೋಕ್ಷದ ದಾರಿ

ಸಂಶಯವಾದಿಗಳಿಗೆ ಪಂಡಿತ ನೆಹರುಗಳ ಸ್ಪಷ್ಟೀಕರಣ.

ಕಾಂಗ್ರೆಸಿನೊಳಗಿದ್ದು ಅದರ ಮೂಲಭೂತ ತತ್ವವಿಘಾತುಕ ವರ್ತನೆಯ ನಿಷೇಧ. ಮಾತೃಭೂಮಿಯ ಕರೆ.

ದೇಶದ ಇಂದಿನ ಪರಿಸ್ಥಿತಿ, ಕಾಂಗ್ರೆಸಿನ ಆಂತರಿಕ ಸ್ಥಿತಿಗತಿ ಮತ್ತು ಮುಂದಿನ ಗತಿಯ ಕುರಿತು ಪಂಡಿತ ಜವಾಹರಲಾಲರು ನೆಶನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಬರೆದಿರುವ ಉದ್ಬೋಧಕ ಭಾಷಣವನ್ನು ಈ ಕೆಳಗೆ ಕೊಡಲಾಗಿದೆ.

ಇಂದೀಗ ಪುನಃ ಸಂಧಿಕಾಲವು ಸನ್ನಿಹಿತವಾಗಿದೆ. ಮಹತ್ತಾದ ಸಂಭವದ ಹೊಸ್ತಿಲಲ್ಲಿದ್ದೇವೆ ನಾವಿಂದು. ಪುನಃ ನಮ್ಮ ರಣವಾಡಿಗಳು ತೀವ್ರವಾಗಿ ಬಡಿಯಹತ್ತಿವೆ. ಕಾಳ್ಬೆರಳುಗಳು ನಡುಗತೊಡಗಿವೆ. ಹಳೆಯ ಆ ಕರೆಯು ಇಂದೀಗ ಪುನಃ ನಮ್ಮ ಕರ್ಣಕುಹರಗಳಲ್ಲಿ ಧ್ವನಿಗುಟ್ಟಲಾರಂಭಿಸಿದೆ. ನಾವು ನಮ್ಮ ಚಿಕ್ಕ ಪುಟ್ಟ ತೊಡಕುಗಳನ್ನೂ, ಗೃಹಕೃತ್ಯದ ಚಿಂತೆಗಳನ್ನೂ ಗಂಟುಕಟ್ಟತೊಡಗಿರುತ್ತೇವೆ. ಇತರ ಎಲ್ಲಾ ವಿಷಯಗಳನ್ನು ಮರೆಯಿಸುವ ಮಾತೃಭೂಮಿಯ ಕರೆಯ ಇದಿರಲ್ಲಿ ಈ ಚಿಂತೆಗಳಗೊಡವೆಯೆಲ್ಲಿ? ನಮ್ಮ ಅತ್ಯಂತ ಪ್ರೀತಿಯ, ನಾವು ಅತಿ ನಿಷ್ಠೆಯಿಂದ ಸೇವೆ ಸಲಿಸಿರುವ ಹಿಂದೂ ಮಾತೆಯು ನಮ್ಮ ಕಿವಿಗಳಲ್ಲಿ ಪಿಸುಗುಟ್ಟಿ ನಮ್ಮ ಅಲ್ಪ ಜೀವನಗಳನ್ನು ಮಂತ್ರಮುಗ್ಧವನ್ನಾಗಿ ಮಾಡುವಾಗ ನಮ್ಮ ಖಾಸಗಿ ತಾಪತ್ರಯಗಳನ್ನು ಗಣಿಸುವದೆಂತು?

ಈ ವಿಳಂಬವೇಕೆ?

ಆದರೂ ಕೆಲವರು ಅಸಹಿಷ್ಣುಗಳಾಗಿದ್ದಾರೆ ಯೌವನದುಬ್ಬಿನಿಂದ ತಪ್ಪುಹೊರಿಸಹತ್ತಿದ್ದಾರೆ. ಈ ವಿಳಂಬವಾದರೂ ಏಕೆ? ನಮ್ಮ ಧಮನಿಗಳಲ್ಲಿ ರಕ್ತವು ಕುದಿಯೇರಿರುವಾಗ, ಮುಂದೊತ್ತಲು ಜೀವನದ ಕರೆ ಬಂದಿರುವಾಗ ನಿಧಾನವಾಗಿ ನಡೆಯುವುದಾದರೂ ಏಕೆ? ಎಂದು ಪ್ರಶ್ನಿಸತೊಡಗಿದ್ದಾರೆ. ಭಾರತದ ತರುಣ ತರುಣಿಯರೇ! ಕಾತರಗೊಳ್ಳಬೇಡಿರಿ ಸಿಡುಕಿ ದುಡುಕಿ ಅಸಹಿಷ್ಣುತೆ ತೋರಿಸದಿರಿ. ಕಾಲವು ಬರುವುದು, ಅತಿ ವೇಗವಾಗಿಯೇ ಸನ್ನಿಹಿತವಾಗುವುದು. ಆಗ ನೀವು ಹಿರಿದಾದ ಜವಾಬ್ದಾರಿಯನ್ನು ಹೊರಬೇಕಾಗುವುದು. ಹೋರಾಟಕ್ಕೆ ಮುನ್ನಡೆಯಲು ಕೂಡಾ ಕರೆಯು, ನೀರೀಕ್ಷಿಸಿದಕ್ಕಿಂತಲೂ ಬೇಗನೆ ಬರಲಿರುವುದು. ಯಾಕೆಂದರೆ ಇಂದೀಗ ಅಜ್ಞಾನ ಭವಿಷ್ಯದ ಪ್ರವಾಹಕ್ಕೆ ಧುಮುಕಿರುವ ಲೋಕವು ಎಲ್ಲದಕ್ಕೂ ತೀವ್ರಗತಿಯನ್ನು ಕೊಟ್ಟಿದೆ. ನಮ್ಮ ಕಾಲಡಿಯ ನೆಲವೇ ಕಂಪಿಸುತ್ತಿರುವಾಗ, ನಮಗಾರಿಗೂ ಸುಮ್ಮಗೆ ನಿಂತಿರಲು ಸಾಧ್ಯವಿಲ್ಲ

ಕಾಲದ ಕರೆಯು ಬಂದೇ ಬರುವುದು ಆಗ ನಾವು ಗಟ್ಟಿಹೃದಯ, ಚುರುಕು ದೇಹ, ಶಾಂತ ಚಿತ್ತ ಮತ್ತು ಸ್ಥಿರಬುದ್ಧಿಯಿಂದ ಕಳಕ್ಕಿಳಿಯಲು ಸಿದ್ಧರಾಗುವ. ಮುನ್ನಡೆಯಬೇಕಾದ ದಾರಿಯನ್ನು ಚೆನ್ನಾಗಿ ಅರಿತುಕೊಳ್ಳುವ. ಮುಂದಡಿಯಿಟ್ಟ ಮೇಲೆ ನಮಗೇನಾದರೂ ಸಂದೇಹದ ತೊಡಕುಂಟಾಗದಿರಲಿ. ಭಿನ್ನಾಭಿಪ್ರಾಯವು ನಮ್ಮ ನಿರ್ಧಾರಶಕ್ತಿಯನ್ನು ಕುಂದಿಸದಿರಲಿ.

ಸಶಕ್ತ ಆಯುಧ

19 ವರ್ಷಗಳಿಂದ ಈಗ ಕಾಂಗ್ರೆಸು ಅಹಿಂಸೆಯನ್ನು ತನ್ನ ಕಾರ್ಯ ಸಾಧನವನ್ನಾಗಿ ಮಾಡಿಕೊಂಡು ಹಲವು ಪ್ರಯೋಗಗಳನ್ನು ನಡೆಸಿದೆ. ಅವರಿಂದ ಲೋಕದ ಮೇಲೂ ನಮ್ಮ ಮೇಲೂ ಹೆಚ್ಚಿನ ಪರಿಣಾಮವುಂಟಾಗಿದೆ. ವಿಸ್ಮಯಕರ ರೀತಿಯಲ್ಲಿ ನಮ್ಮ ಬಲವು ಹೆಚ್ಚಿದೆ. ಒಂದೋ ದೇಹಿಯೆಂದು ಶರಣಾಗತವಾಗುವ ಇಲ್ಲವೆ ಹಿಂಸಾತ್ಮಕ ಬಂಡಾಯವೆಬ್ಬಿಸುವ ಎರಡು ಉಪಾಯವಿದ್ದುದು ಈ ವರೆಗೆ ಪರಾಧೀನ ಜನಾಂಗಗಳಿಗೆ. ಆದರೆ ನಮ್ಮದು ನವೀನ ಹಾದಿ. ಶಾಂತ ಹಾಗೂ ಸಶಕ್ತ ಸಾಧನ. ಅದನ್ನು ಹೆಚ್ಚೆಚ್ಚು ಅರಿತುಕೊಂಡಂತೆ ಅದರ ಶಕ್ತಿಯು ಅಧಿಕವಾಗುವುದು. ಈ ಶಸ್ತ್ರವನ್ನು ಎಲ್ಲಿಯೂ ಉಪಯೋಗಿಸಬಹುದು. ಆದರೆ ವಿಶೇಷವಾಗಿ ಹಿಂದೂದೇಶದ ಪ್ರಕೃತದ ಪರಿಸ್ಥಿತಿ ಮತ್ತು ಪರಂಪರೆಗದು ಹೇಳಿಸಿದುದು. ನಮ್ಮ ಉದಾಹರಣೆಯೇ ಸಾಕು ಅದರ ಸಾರ್ಥಕತೆಯನ್ನು ಮನಗಾಣಿಸಿ ನಮ್ಮನ್ನುತ್ಸಾಹಗೊಳಿಸಲಿಕ್ಕೆ. ಆದರೆ ಇತ್ತಲಾಗಿನ ಕೆಲವು ವರ್ಷಗಳ ಲೋಕದ ಸಂಗತಿಗಳು ಹಿಂಸೆಯ ನಿರರ್ಥಕತೆ ಮತ್ತು ಪಾಶವಿಕತನವನ್ನು ಮತ್ತಷ್ಟು ವ್ಯಕ್ತಗೊಳಿಸಿರುವವು. ಭೀಕರ ಹಿಂಸೆಯ ಯುಗವು ಬೇಗನೆ ಕೊನೆಗೊಳ್ಳುವ ಸಂಭವವೇನೂ ತೋರುವುದಿಲ್ಲ. ಹಿಂದೆಂದೂ ನಡೆಯದಷ್ಟು ಅಮಾನುಷ ಮತ್ತು ವಿನಾಶಕ ಸ್ವರೂಪದಲ್ಲಿ ಇಂದು ಹಿಂಸೆಯು ತಾಂಡವವಾಡುತ್ತಿರುವುದು. ಆದರೂ ಅದರ ಭೀಷಣ ತೀವ್ರತೆಯೇ ಅಳಿಗಾಲದ ಸೂಚನೆ. ಅದು ಸಾಯುವುದು. ಅಥವಾ ಲೋಕದ ದೊಡ್ಡ ಭಾಗವೊಂದನ್ನು ಕೊಲ್ಲುವುದು. ತಪ್ಪು ಅವಿವೇಕವನ್ನು ಮರೆಮಾಚಲು ತಲೆತಿರುಕರು ಎಂದಿಗಾದರೂ ಉಪಯೋಗಿಸುವ ಯುಕ್ತಿಯೇ ಶಕ್ತಿ.

ಅವಿವೇಕದ ಯುಗ

ಆದರೆ ನಾವೀಗ ಜೀವಿಸುತ್ತಿರುವುದು ಅವಿವೇಕಮತ್ತು ಹುಚ್ಚುತನದ ಯುಗದಲ್ಲಿ. ನಮ್ಮನ್ನಾಳುವವರು ಮತ್ತು ಮಾನವ ಕಾರ್ಯಕಲಾಪಗಳ ಸಂಚಾಲಕರೆನಿಸುವವರು ಈ ಯುಗದ ನಿಜವಾದ ಪ್ರತಿನಿಧಿಗಳಾಗಿರುವರು. ಹಿಂಸಾತ್ಮಕ ಆಕ್ರಮಣವನ್ನು ವಿರೋಧಿಸುವ ಬಗೆ ಹೇಗೆಂಬುದೇ ಇಂದಿನ ಭೀಷಣ ಸಮಸ್ಯೆ. ಹಿಂಸೆಯನ್ನು ಪ್ರತಿಹಿಂಸೆಯಿಂದ ಪ್ರತಿಭಟಿಸಬೇಕು. ಇಲ್ಲವೆ ದುಷ್ಟತನಕ್ಕೆ ದುರ್ಬಲವಾಗಿ ತಲೆಬಾಗಿ ಶರಣು ಹೊಡೆಯಬೇಕು. ಸ್ಪೈನಿನ ಜನತೆಯು ಫೆಸಿಸ್ಟ ಆಕ್ರಮಣಕ್ಕೆ ಹಿಂಸಾತ್ಮಕ ವಿರೋಧ ಹೂಡಿ 3½ ವರ್ಷಗಳನಕ ಅದನ್ನು ಪ್ರತಿಭಟಿಸಿ ತೋರಿಸಿರುವ ಧೈರ್ಯ ಮತ್ತು ಸ್ಥೈರ್ಯವು ಚಿರಸ್ಮರಣೀಯವಿದೆ. ಇಂದಿಗಾದರೂ ಅವರು ಮಾಡಿದ್ದು ತಪ್ಪೆನ್ನಲು ಸಾಧ್ಯವಿಲ್ಲ. ಅವರಿಗೆ ಗೌರವಪೂರ್ವಕವಾದ ಬೇರೊಂದು ದಾರಿಯಿರಲಿಲ್ಲ. ಅಹಿಂಸಾತ್ಮಕ ವಿಧಾನವು ಅವರಿಗೆ ತಿಳಿದಿಲ್ಲ. ಚೈನದ ಪರಿಸ್ಥಿತಿಯೂ ಇದೇ ರೀತಿ. ಪ್ರಬಲ ಶಸ್ತ್ರಸಿದ್ಧತೆಯಿಂದ ಸಾಧಾರಣ ಧೈರ್ಯಶಾಲಿಯಾಗಿದ್ದ ಚೆಕೊಸ್ಲೊವೇಕಿಯವು ಹೋರಾಟವಿಲ್ಲದೆ ಶರಣು ಹೊಡೆಯಿತು. ಅದರ ಬಲ ಮತ್ತು ಶಸ್ತ್ರಸಿದ್ಧತೆಯು ಆಪತ್ಕಾಲದಲ್ಲಿ ಯಾವ ಪ್ರಯೋಜನಕ್ಕೂ ಬೀಳಲಿಲ್ಲ. 3 ವಾರಗಳ ಹೋರಾಟದಲ್ಲಿ ಪೋಲೆಂಡು ನೆಲಹಿಡಿಯಿತು. ಅದರ ದೊಡ್ಡ ಸೇನೆ ಮತ್ತು ಪ್ರಬಲ ವಿಮಾನಪಡೆಯು ಎಲ್ಲಿ ಮಾಯವಾಗಿಬಿಟ್ಟಿತೋ? ವೈರಿಗಿಂತ ಹೆಚ್ಚಿನ ಬಲವಿದ್ದರೆ ಮಾತ್ರ ಸಶಸ್ತ್ರಹಿಂಸೆಯು ವಿಜಯಿಯಾಗಲು ಸಾಧ್ಯವಿದೆ. ಇಲ್ಲವಾದರೆ ಅದರಿಂದ ಭಯಂಕರ ಹಾನಿಯೇ ಹೊರತು ಫಲವಿಲ್ಲ.

ಭವಿಷ್ಯವು ಹಿಂದೂದೇಶಕ್ಕೇನನ್ನು ತರಲಿರುವುದೆಂದು ಈಗ ಹೇಳಬರುವುದಿಲ್ಲ. ಸಶಸ್ತ್ರ ರಾಷ್ಟ್ರೀಯ ರಕ್ಷಣೆಯೇ ಮುಂದೆ ಹಿಂದೂದೇಶಕ್ಕೆ ಅವಶ್ಯವಾಗಿ ಬಿದ್ದರೆ ಸ್ವತಂತ್ರ ಹಿಂದೂಸ್ಥಾನವು ರಾಷ್ಟ್ರೀಯ ಸೇನೆ ಮತ್ತು ಅದಕ್ಕೆ ಬೇಕಾದ ಆಧುನಿಕ ಯುದ್ಧೋಪಕರಣಗಳನ್ನೊದಗಿಸಿಕೊಳ್ಳಬೇಕಾಗುವುದು. ಆದರೆ ಆ ಕುರಿತು ನಾವೀಗ ಆಲೋಚಿಸಬೇಕಿಲ್ಲ. ವರ್ತಮಾನದ ಪ್ರಶ್ನೆಯೇ ಮುಖ್ಯ ನಮಗಿಂದು. ನಮ್ಮ ದಾರಿಯು ಸುಸ್ಪಷ್ಟವಾಗಿದೆ. ಹಿಂದೂದೇಶದ ಸ್ವಾತಂತ್ರ್ಯದ ಪ್ರತಿಬಂಧಕಗಳನ್ನೆಲ್ಲಾ ಅಹಿಂಸಾತ್ಮಕವಾಗಿ ಪ್ರತಿಭಟಿಸುವುದೊಂದೇ ಹಾದಿ ನಮ್ಮ ಮುಂದಿರುವುದು. ಅದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳೋಣ. ಯಾಕೆಂದರೆ ಸಂದೇಹಗ್ರಸ್ತ ಮನಸ್ಸಿನಿಂದ ನಾವು ಕೆಲಸಕ್ಕೆ ತೊಡಗುವುದು ಹಾನಿಕರ. ಒಂದಿಷ್ಟಾದರೂ ಫಲಕಾರಿಯಾಗುವ ಸಂಭವ ತೋರುವ ಇನ್ನಾವುದಾದರೊಂದು ಕಾರ್ಯವಿಧಾನವೇ ನನಗೆ ತೋರದು. ನಾವು ಹತ್ತು ಹಲವು ವಿಧಾನಗಳನ್ನು ಪರಿಗಣಿಸುತ್ತಾ ಕೂತಗೆ ನಿಜವಾದ ಕಾರ್ಯಸಾಧನೆಯು ಸಾಧ್ಯವಿಲ್ಲ.

ಕಾಂಗ್ರೆಸಿನೊಳಗೆ ಬೇಳಿಕ್ತು ಸಾಧ್ಯವಿಲ್ಲ.

ಅಹಿಂಸೆಯ ಪ್ರಶ್ನೆಯ ಕುರಿತು, ಕಾಂಗ್ರೆಸ್‌ವಾದಿಗಳೊಡನೆ ಸರ್ವಸಾಮಾನ್ಯವಾಗಿ ಒಮ್ಮತವಿರುವುದೆಂದು ನಂಬುತ್ತೇನೆ. ಆದರೆ ಕಾಂಗ್ರೆಸಿಗೆ ಕೆಲಮಟ್ಟಿಗೆ ಹೊಸಬರಾಗಿರುವ ಕೆಲವರಿರುತ್ತಾರೆ. ತೋರುವಿಕೆಗವರು ಅಹಿಂಸೆಗೊಪ್ಪಿ ಒಳಗಿಂದೊಳಗೆ ನಡಿಸುವ ಪ್ಲೇನೇ ಪ್ರತ್ಯೇಕ. ಕಾಂಗ್ರೆಸಿನ ಮೂಲಕವಾಗಿ ಹೊರತು ಬೇರೆ ರೀತಿಯಲ್ಲಿ ರಾಷ್ಟ್ರೀಯ ಮತ್ತು ದೇಶವ್ಯಾಪಕ ಚಳವಳವು ಸಾಧ್ಯವಿಲ್ಲೆಂಬುದನ್ನವರು ಮನಗಂಡಿರುತ್ತಾರೆ. ಆದುದರಿಂದಲೇ ಅವರು ಕಾಂಗ್ರೆಸನ್ನೇ ಉಪಯೋಗಿಸಿಕೊಳ್ಳಲು ಅಪೇಕ್ಷೆ ಪಡುತ್ತಾರೆ. ಅದೇ ಕಾಲದಲ್ಲಿ ಕಾಂಗ್ರೆಸಿನ ಧೋರಣೆಯನ್ನು ವಿರೋಧಿಸಿ ಭೇದಿಸಲೆತ್ನಿಸುತ್ತಾರೆ ಕಾಂಗ್ರೆಸಿನೊಳಗೆ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡು ಅನೇಕ ಅದರ ಮೂಲ ತತ್ವ ಮತ್ತು ಕಾರ್ಯ ವಿಧಾನವನ್ನು ಮುರಿದುಹಾಕುವುದೇ ಈ ಜನರ ಕಾರ್ಯ ತಂತ್ರ. ಅಹಿಂಸಾ ವಿಧಾನವನ್ನು ವ್ಯಕ್ತವಾಗಿ ಮತ್ತು ಬಹಿರಂಗವಾಗಿಯಲ್ಲ: ಗುಪ್ತವಾಗಿ ಮತ್ತು ಆಂತರಿಕವಾಗಿ ವಿರೋಧಿಸುವುದೇ ಅವರ ಉದ್ದೇಶ. ತನ್ನ ಸ್ವಂತ ಸೂಚನೆ ಮತ್ತು ಭಾವನೆಗಳನ್ನು ದೇಶದ ಮುಂದಿಟ್ಟು ಪ್ರಚಾರ ಮಾಡಿ ಇತರರನ್ನು ಮತಾಂತರಗೊಳಿಸುವ ಹಕ್ಕು ಪ್ರತಿಯೊಬ್ಬ ಭಾರತೀಯನಿಗಿದೆ. ಆದರೆ ಬೇರೊಂದರ ಮರೆಯಲ್ಲಿ ಅವನು ಹಾಗೆ ಮಾಡುವುದು ನ್ಯಾಯವಲ್ಲ. ಅವ

(೧೧ನೇ ಪುಟಕ್ಕೆ ಮುಂದರಿಯುವದು)

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೦—೧೦—೦ ಚಿಕ್ಕದು ೦—೫—೦

" ಮುಚ್ಚಳದ್ದು ೦—೧೨—೦ " ಮುಚ್ಚಳದ್ದು ೦—೬—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

GENERAL SUPPLIES LIMITED

UDIPI - - - - S. INDIA

ಉಡುಪಿಗೆ ಪ್ರಿನ್ಸ್ ಜಯಚಾಮರಾಜ ಒಡೆಯರ ಆಗಮನ.

ಅಷ್ಟ ಮಠಗಳ ಸಂಭ್ರಮದ ಸ್ವಾಗತ! . . . . . ಜನತೆಯ ಅತ್ಯಪೂರ್ವ ಉತ್ಸಾಹ!

ಮೈಸೂರು ಯುವರಾಜ ಶ್ರೀ ಕಂಠೀರವ ನರಸರಾಜ ಒಡೆಯರ ಸುಕುಮಾರ ಶ್ರೀ. ಜಯ ಚಾಮರಾಜ ಒಡೆಯರು ತಮ್ಮ ಮಾತೃಶ್ರೀ ಮತ್ತು ತಕ್ಕ ಪರಿವಾರದೊಡನೆ ತಾ. 26-11-1939 ನೇ ಮಧ್ಯಾಹ್ನ 12 ಘಂಟೆಗೆ ಉಡುಪಿಗೆ ಆಗಮಿಸಿದರು. ಅವರನ್ನು ಕಡಿಯಾಳಿಯಲ್ಲಿ ಬಿರುದಾವಳಿಗಳಿಂದ ಅಷ್ಟಮಠಗಳ ಏಜಂಟರು, ಮುನ್ಸಿಪಲ್ ಚೆಯರ್ಮನ್, ಸಬ್ ಕಲೆಕ್ಟರರೇ ಮೊದಲಾದವರು ಹೂವಮಾಲೆ ಹಾಕಿ ಸ್ವಾಗತೀಕರಿಸಿದರು. ಅಲ್ಲಿಂದ ಮೊದಲೇ ಸಜ್ಜುಗೊಳಿಸಲ್ಪಟ್ಟ ಮೆ. ಸ್ಸರ್ಸ್ ಕೊಚ್ಚಿಕಾರ್ ಬ್ರದರ್ಸರ ಜೂಬಿಲೀ ಬಿಲ್ಡಿಂಗಿಗೆ ಯುವರಾಜರನ್ನು ಕರೆದೊಯ್ಯಲಾಯಿತು ಅಲ್ಲೇ ಅವರಿಗೆ ಉಳಕೊಳ್ಳಲು ತಕ್ಕ ವ್ಯವಸ್ಥೆಯಾಗಿತ್ತು.

ಸಂಜೆ 6ಗಂಟೆಗೆ ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ ಅಷ್ಟಮಠಗಳ ಶ್ರೀ. ಶ್ರೀಪಾದಂಗಳವರು ಸೇರಿ ಶ್ರೀ ಜಯ ಚಾಮರಾಜ ಒಡೆಯರಿಗೆ ಶ್ರೀಕೃಷ್ಣಾನುಗ್ರಹರೂಪವಾದ ಆಶೀರ್ವಾದ ಪತ್ರವನ್ನು ಕೊಡುವ ವ್ಯವಸ್ಥೆ ನಡೆದಿತ್ತು ಅದರಂತೆ ರಾಜಕುಮಾರರನ್ನು ಪರಿವಾರದೊಂದಿಗೆ ಬಿರುದಾವಳಿಗಳಿಂದ ಕೋರ್ಟ್ ರಸ್ತೆ, ತೆಂಕಪೇಟೆ ಮಾರ್ಗವಾಗಿ ಮೆರವಣಿಗೆಯಿಂದ ಮಠಕ್ಕೆ ಕರೆದೊಯ್ಯಲಾಯಿತು ಪ್ರಿನ್ಸರು ಮೊದಲು ಶ್ರೀಕೃಷ್ಣದರ್ಶನ ಮಾಡಿ ವಸಂತ ಮಹಲಿಗೆ ಚಿತ್ತೈಸಿದರು ಅಲ್ಲಿ ಅಷ್ಟ ಮಠಗಳ ಯತಿಗಳೆಲ್ಲ ಸಿಂಹಾಸನಾರೂಢರಾಗಿದ್ದರು, ಸಾವಿರಾರು ಜನರು ನೆರೆದಿದ್ದರು. ವಟುಗಳೇವರು ಸಂಸ್ಕೃತದಲ್ಲಿ ಶುಭಪ್ರಶಂಸೆಗಾಡಿದರು. ಆಚಾರ್ಯರೋರ್ವರು ಶ್ರೀಕೃಷ್ಣ ಮಹಿಮೆ ಮತ್ತು ರಾಜಕುಮಾರರ ಗುಣಾವಳಿಯನ್ನು ವರ್ಣಿಸುವ 'ನವಮಂಜರಿ' ಶ್ಲೋಕ ಹಾಡಿ ಅರ್ಥ ವಿವರಿಸಿದರು. ಬಳಿಕ ಅಷ್ಟಮಠಗಳ ಕಡೆಯಿಂದ ಅರ್ಪಿಸತಕ್ಕ ಶುಭಾಶಂಸಾ ಪತ್ರವನ್ನು ಪಂಡಿತ ಕೆ. ವೆಂಕಟರಮಣಾಚಾರ್ಯರು ಓದಿ ಹೇಳಿದರು ಅದನ್ನು ಪರ್ಯಾಯ ಶ್ರೀ ಫಲಿಮಾರು ಮಠದ ಏಜಂಟರಾದ ಶ್ರೀ. ಎಂ. ಎಸ್. ಪೆಜತ್ತಾಯರು ಅಷ್ಟಯತಿಗಳ ಪರವಾಗಿ ಪ್ರಿನ್ಸರಿಗೆ ಅರ್ಪಿಸಿದರು ಅದರ ಸಾರಾಂಶವು ಹೀಗಿದೆ.

ರಾಜಕುಮಾರರೆ,

ಶ್ರೀಕೃಷ್ಣ ಸಂದರ್ಶನಾರ್ಥವಾಗಿ ನಿಜಜನನೀಸಹಿತರಾಗಿ ಚಿತ್ತೈಸಿರುವ ತಮ್ಮನ್ನು ಸ್ವಾಗತೀಕರಿಸುವ ಸಂದರ್ಭದಲ್ಲಿ ನಮಗಾದ ಆನಂದಕ್ಕೆ ಮಿತಿಯಿಲ್ಲ ಅಗಣ್ಯ ಸೌಜನ್ಯಸೌಶೀಲ್ಯಾದಿ ರಾಜನ್ಯೋಚಿತ ಸದ್ಗುಣಗಳಿಂದ ಶ್ರೀಮನ್ಮಹಾರಾಜರವರ ಪ್ರೀತಿಗೂ 'ಮಾದರಿ ಮೈಸೂರಿನ' ಪ್ರಬುದ್ಧ ಪ್ರಜೆಗಳ ಸಮಾದರಕ್ಕೂ ಪಾತ್ರವಾದ ತಮ್ಮ ದಿವ್ಯ ವ್ಯಕ್ತಿತ್ವವು ಸ್ವದೇಶ ವಿದೇಶಗಳಲ್ಲಿ ಈಗಾಗಲೇ ಪ್ರತಿಷ್ಠೆಯ ಪರಾಕಾಷ್ಠೆಯನ್ನು ಮುಟ್ಟಿದೆಯೆಂಬುದು ವಿಶೇಷತಃ ಸ್ತುತಿಕಾರಣವು. ತಮ್ಮ ಪೂರ್ವಜ ಮಹಾರಾಜರುಗಳ ಸಮಾರಾಧ್ಯನಾದ ಶ್ರೀಕೃಷ್ಣ ಭಗವಂತನ ಇಂದಿನ ಈ ಸಂದರ್ಶನ ಸಮುದ್ಭವವು ತಮ್ಮ ಮುಂದಿನ ರಾಜ್ಯಶ್ರೀಸಮಭ್ಯುದಯ ಕಾರಣವಾತ್ರವಲ್ಲದೆ ಸಕಲ ಸದ್ಗುಣನಿಧಿಗಳಾದ ಶ್ರೀಮನ್ಮಹಾರಾಜರವರಿಗೂ ಕರ್ನಾಟಕ ಸಾಮ್ರಾಜ್ಯಕ್ಕೂ ಸರ್ವತೋಮುಖವ ಭ್ಯುದಯಸಾಧಕವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ನಮ್ಮ ಧರ್ಮಸಂಸ್ಥೆಯು ಬಹುಕಾಲದಿಂದಲೂ ತಮ್ಮ ಸಾಮ್ರಾಜ್ಯ ಪ್ರಭುಗಳನೇಕರ ಸಂದರ್ಶನಸಮುತ್ಸರ್ಗಾದಿಗಳಿಂದ ಸನ್ಮಾನಗೊಂಡು ಇಂದಿಗೂ ತಮ್ಮ ಉದಾರಪೋಷಣೆಯನ್ನೇ ಹೊಂದಿದೆಯೆಂಬುದು ಮರೆಯಲಾಗದ ಮಾತು. ಹಿಂದೆ ಕೀರ್ತಿಶೇಷ ಮೈಸೂರು ಸಂಸ್ಥಾನ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಬಹದ್ದೂರರವರು ತಾ 5 2-1821ರಲ್ಲಿ ಈ ಕ್ಷೇತ್ರಕ್ಕೆ ಪಟ್ಟಮಹಿಷೀಸಹಿತ ಬಿಜಯಮಾಡಿ, ಶ್ರೀಕೃಷ್ಣ ಸಂದರ್ಶನಮಾಡಿ, ಆಭರಣಾದಿ ದಾನಗಳಿಂದಲೂ, ನಿರಂತರ ಧರ್ಮೋತ್ಸರ್ಗದಿಂದಲೂ ಅಗಣ್ಯ ಪುಣ್ಯಭಾಗಿಗಳಾಗಿದ್ದರು ಇಂದಿಗೂ ತಮ್ಮ ಸಾಮ್ರಾಜ್ಯದ ಕಡೆಯಿಂದ ಶ್ರೀಕೃಷ್ಣನ ನಿತ್ಯಪೂಜಾದಿ ವಿನಿಯೋಗಗಳಿಗೆ ಉಂಬಳಿ ಉತ್ತಾರಗಳೂ, ಶ್ರೀಗಂಧವೂ, ಅಲಂಕಾರ ಪೀತಾಂಬರಗಳೂ ಅರ್ಪಿಸಲ್ಪಡುವುವು, ಅಲ್ಲದೆ, ಈಚೀಚೆಗೆ ನಮ್ಮ ಸಂಸ್ಕೃತ ಮಹಾಪಾಠಶಾಲೆಯ ಪುಸ್ತಕಭಂಡಾರಕ್ಕೆ ಪುಸ್ತಕಗಳ ವಿತರಣವೂ, ವಿದ್ವಾಂಸರಿಗೆ ಧರ್ಮಾಧಿಕಾರ ಪ್ರದಾನವೂ, ವಿದ್ಯಾರ್ಥಿಗಳಿಗೆ ಸ್ವರ್ಣಕಂಕಣಾದಿವಿಶೇಷ ಸಂಭಾವನೆಗಳೂ ಮಾಡಲ್ಪಟ್ಟವೆ

ಇಂದು ತಮಗೆ ಇಲ್ಲಿನ ನಿತ್ಯಪೂಜೆ, ಸಹಸ್ರಾಧಿಕ ಸಂತರ್ಪಣೆ, ನಿತ್ಯ ವಿಶೇಷೋತ್ಸವಗಳು ಮತ್ತು ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿಗಳಿಗೆ ತ್ರಿಕಾಲಭೋಜನಸಹಿತವಾದ ವಿದ್ಯಾದಾನ ಮುಂತಾದ ಧರ್ಮಕಾರ್ಯಗಳನ್ನು ಕಂಡು ವಿಶೇಷತಃ ಸಂತೋಷವಾಗದಿರದು ತಮ್ಮ ಈ ಸಂತೋಷೋದ್ಗಾರಪ್ರೇರಿತರಾದ ಶ್ರೀಮನ್ಮಹಾರಾಜರವರೂ ಸದ್ಯಃ ಶ್ರೀಕೃಷ್ಣ ಸಂದರ್ಶನಜನಿತ ಪುಣ್ಯ ಸಂದೋಹಭಾಗಿಗಳಾಗುವರೆಂದು ನಂಬಿದ್ದೇವೆ.

ಇಂದಿನಂತೆ ಮುಂದೆಯೂ ಈ ಧರ್ಮಸಂಸ್ಥೆಯು ಮೇಲಣ ತಮ್ಮಗಳ ಪ್ರೇಮಾದರಗಳು ಕುಂದದೆ, ಇನ್ನೂ ಹೆಚ್ಚುವುವೆಂದೇ ಭಾವಿಸಿ, ಇದರ ಆಗುಹೋಗುಗಳ ವಿಚಾರವನ್ನು ವಹಿಸಿ ಇದರ ಸಮುನ್ನತಿಯೊಡನೆ ಕರ್ನಾಟಕ ಸಾಮ್ರಾಜ್ಯ ಸಮುನ್ನತಿಯನ್ನೂ ಸಾಧಿಸ ಬಂತಾಗಲೆಂದು ಶ್ರೀಕೃಷ್ಣನನ್ನು ಸದಾ ಸಂಪ್ರಾರ್ಥಿಸುತ್ತೇವೆ

ಶ್ರೀಕೃಷ್ಣನು, ಶ್ರೀಮನ್ಮಹಾರಾಜರಿಗೂ, ರಾಜಕುಟುಂಬಕ್ಕೂ, ರಾಜ್ಯಕ್ಕೂ ಇತೋಪ್ಯಧಿಕವಾದ ಶ್ರೇಯಸ್ಸನ್ನೀಯಲೆಂದು ನಾವು ಮನಃಪೂರ್ವಕವಾಗಿ ಆಶಿಸುತ್ತೇವೆ.

ಕಡೆಗೋಲ್ ನೇಣ ಪಿಡಿವುತೆ ಕಾಂ |
ಕಡೆದೀವಂ ಪುಣ್ಯಮಂಟ ಬಣ್ಣಯ ನೆಂಬೀ ||
ಉಡುಪಿಯ ಕೃಷ್ಣಂ ಮೈಸೂ |
ರೊಡೆಯರ್ಗಂ ಕುಡುಗೆಯತುಳ ಭ
ಸಂಪದಮಂ ||

ಈ ಶುಭಾಶಂಸಾ ಪತ್ರಕ್ಕೆ ಉತ್ತರವಾಗಿ ರಾಜಕುಮಾರರು "ನಮಗೆ ಶ್ರೀಕೃಷ್ಣದರ್ಶನಮಾಡಬೇಕೆಂಬ ಆತುರ ಬಹುಕಾಲದಿಂದ ಇತ್ತು ಇಂದದು ಫಲಿಸಿತು ನಮ್ಮ ಸ್ವಾಗತವನ್ನು, ಶುಭಾಶಂಸಾ ಪತ್ರವನ್ನು ಸ್ವೀಕರಿಸಲು ನನಗೆ ಆನಂದವಾಗುತ್ತದೆ' ಎಂಬಿತ್ಯಾದಿಯಾಗಿ ಹೇಳಿದರು. ಬಳಿಕ ಸಭಾಂತ್ಯವಾಯಿತು ರಾತ್ರಿ ಲಕ್ಷದೀಪೋತ್ಸವಕ್ಕೂ ಪ್ರಿನ್ಸರು ಪರಿವಾರದೊಡನೆ ಬಂದಿದ್ದರು.

ಮರುದಿನ (ತಾ. 27-11 39ರಲ್ಲಿ) ಮುನ್ಸಿಪಾಲಿಟಿಯವರು ಅಜ್ಜರಕಾಡಿನಲ್ಲಿ ಪ್ರಿನ್ಸರಿಗೆ ಮಾನಪತ್ರವನ್ನು ಅರ್ಪಿಸುವ ಸಮಾರಂಭವನ್ನು ನೆರವೇರಿಸಿದರು ಇಲ್ಲಿ ಜನರು ಕಿಕ್ಕಿರಿದು ಸೇರಿದ್ದರು, ಪ್ರಾರ್ಥನೆಯಾದ ವೇಳೆ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಮಾನಪತ್ರವನ್ನು ಓದಿ ಹೇಳಿದರು

ಅದರ ಮುಖ್ಯ ಸಾರಾಂಶವು ಹೀಗಿತ್ತು—

"ಉಡುಪಿಯು ಎಂಟು ಮಠಗಳಿಂದಲೂ ಶ್ರೀಕೃಷ್ಣದೇವಸ್ಥಾನದಿಂದಲೂ ಮೈಸೂರು ಸರಕಾರದ ಸನದೀಕುಗಳಿಂದಲೂ ಪ್ರಾಮುಖ್ಯತೆಗೆ ಬಂದಿದೆ. ಬಹಳ ಸಮಯದಿಂದ ದಕ್ಷಿಣಕನ್ನಡಕ್ಕೂ ಮೈಸೂರು ಸಂಸ್ಥಾನಕ್ಕೂ ಭಾಷೆ, ನಡೆನುಡಿಗಳಲ್ಲಿ ಹೆಚ್ಚಿನ ಹೋಲಿಕೆಗಳಿರುತ್ತವೆ. ಇವು ಇನ್ನಷ್ಟು ಅಭಿವೃದ್ಧಿಯಾಗಲೆಂದು ನಾವು ಆಶಿಸುತ್ತೇವೆ. ಮೈಸೂರಿನಲ್ಲಿರುವ ಗೋಕುಲಗಳು, ಆಧುನಿಕ ಕಟ್ಟಡ ಮೊದಲಾದುವು ಬ್ರಿಟಿಷ್ ಹಿಂದೂಸ್ಥಾನದ ಅನೇಕ ಮುನಿಸಿಪಾಲಿಟಿಗಳಿಗೆ ಮೇಲ್ಪಂಕ್ತಿಯಾಗಿದ್ದು ಹೆಚ್ಚಿನವು ಆ ಕ್ರಮಗಳನ್ನು ಅನುಸರಿಸುತ್ತಲಿವೆ.

ಕೈಗಾರಿಕೆಯಲ್ಲಿಯೂ ಮೈಸೂರು ಬಹಳ ಮುಂದರಿದಿದೆ ವಾದು ವ್ಯಾಪಾರೀ ದೃಷ್ಟಿಯಿಂದಲೂ ದ. ಕ ಜಿಲ್ಲೆಯು ಮೈಸೂರ ಬಳಿಗವಾಗಿರುವುದು ಪರಸ್ಪರ ಮೈತ್ರೀಭಾವದಿಂದಲೇ. ಮೈಸೂರು ಸರಕಾರವು ಸಮರ್ಥ ದಿವಾನರ ನೇತೃತ್ವದಲ್ಲಿ ಆಗುಂಬೆ ಘಾಟಿ ರಸ್ತೆಯನ್ನು ಬಹಳ ಅಭಿವೃದ್ಧಿ ಸ್ಥಿತಿಗೆ ತಂದಿರುವುದನ್ನು ನಾವಿಲ್ಲಿ ಸೂಚಿಸಬಯಸುತ್ತೇವೆ ಇನ್ನು ಬೇಕಾದುದು ಮೈಸೂರಿನಿಂದ ಮಲ್ಪೆ ತನಕ ರೈಲ್ವೆ ಹಾಕಿಸುವುದು ಈ ವಿಷಯದಲ್ಲಿ ನಿಮ್ಮ ಸರಕಾರವು ನಮ್ಮ ಪ್ರಾರ್ಥನೆಗೆ ಮನ್ನಣೆಯೀಯುವುದೆಂದು ನಾವು ನಂಬುತ್ತೇವೆ ನಮ್ಮೂರ ಬೇಂಕುಗಳ ಶಾಖೆಗಳು ಮೈಸೂರಲ್ಲಿರುವವು ಅವುಗಳ ಕ್ಷೇಮಚಿಂತನೆಯು ನಿಮ್ಮ ಕೈಯಲ್ಲಿರುವುದು. ಪರ್ಯಾಯ ಕಾಲದಲ್ಲಿ ಕೈಗಾರಿಕೆ ಪ್ರದರ್ಶನವನ್ನು ಜರಗಿಸಲಿಕ್ಕಿರುವೆವು. ಅದಕ್ಕೆ ನಿಮ್ಮ ಸರಕಾರದ ಪೂರ್ಣ ಸಹಾನುಭೂತಿ ಬೆಂಬಲ ದೊರೆಯುವುದೆಂದು ನಾವು ನಿರೀಕ್ಷಿಸುತ್ತೇವೆ. ಕೊನೆಯದಾಗಿ ನಿಮಗೂ ಮಹಾರಾಜರಿಗೂ ನಿಮ್ಮ ಕುಟುಂಬಕ್ಕೂ ಶ್ರೇಯಸ್ಸುಂಟಾಗಲೆಂದು ಶ್ರೀಕೃಷ್ಣನನ್ನು ಪ್ರಾರ್ಥಿಸುವೆವು"

ಇದಕ್ಕೆ ಯುವರಾಜಕುಮಾರರು ಕೆಲವೇ ಮಾತುಗಳಲ್ಲಿ ಉತ್ತರವೀಯುತ್ತಾ ಕನ್ನಡ ಜಿಲ್ಲೆಯು ಮೈಸೂರು ಸಂಸ್ಥಾನದ ಒಂದಂಶವಾಗಿತ್ತು ಅದುದರಿಂದಲೇ ನಮ್ಮ ವಂಶದವರಿಗೆ ಈ ಊರಲ್ಲಿ ಹೆಚ್ಚಿನ ಮಮತೆ. ನಗರ ಸಭೆಯವರು ಊರವರಿಗೆ ಇನ್ನಷ್ಟು ಹೆಚ್ಚಿನ ಸೌಕರ್ಯಗಳನ್ನೀಯುವರೆ ಮಹಾಧಿಪತಿಗಳು ನೆರವಾಗಲಿ ಇದಕ್ಕೆ ಈಗಿನ ಪರ್ಯಾಯ ಸ್ವಾಮಿಗಳವರೇ ಸಾಕ್ಷಿಯಾಗಿರುವರು ನೀವೆಲ್ಲರೂ ನೀಡಿದ ಸ್ವಾಗತವನ್ನು ಸ್ವೀಕರಿಸಿ ನಮ್ಮ ಮಹಾರಾಜರವರಿಗೆ ನಿಮ್ಮ ದಯಾಪೂರ್ಣವಾದ ಭಕ್ತಿ ಶ್ರೇಯಃಪ್ರಾರ್ಥನೆಗಳನ್ನು ತಿಳಿಸುವೆನು' ಎಂದರು. ಈ ಮೊದಲು ಜರುಗಿದ ಕವಿಟೆಯ ರಿಪೋರ್ಟನ್ನು ಶ್ರೀ. ಎಂ ಎನ್ ವಿ ಕಾಮತರು ಓದಲಾಗಿ ಪಂದ್ಯಾಟಗಳಲ್ಲಿ ಗೆದ್ದವರಿಗೆ ಪ್ರಿನ್ಸರು ಪಾರಿತೋಷಕಗಳನ್ನು ಹಂಚಿದ್ದರು

ಬಳಿಕ ಕ್ರಿಶ್ಚಿಯನ್ ಹೈಸ್ಕೂಲ್, ಬೋರ್ಡ್ ಹೈಸ್ಕೂಲ್, ಮೊಡೆಲ್ ಸ್ಕೂಲ್ ವಿದ್ಯಾರ್ಥಿಗಳ ವ್ಯಾಯಾಮ ಪ್ರದರ್ಶನಗಳನ್ನು ಯುವರಾಜರು ಕಂಡು, ಸಂತೋಷಗೊಂಡು ಕುಂಜಾರು ದೇವಸ್ಥಾನಕ್ಕೆ ತೆರಳಿದರು ಅನಂತರ ಒಡಭಾಂಡೇಶ್ವರಕ್ಕೆ ಹೋಗಿ ಬಲರಾಮ ದೇವರ ದರ್ಶನಮಾಡಿ ಮರುದಿನ ಕಾರ್ಕಳ ಮೂಡಬಿದ್ರೆ ಮಂಗಳೂರು ಮಡಿಕೇರಿಗಾಗಿ ಮೈಸೂರಿಗೆ ತೆರಳಿದರು

CANARA BANK LIMITED

HEAD OFFICE—MANGALORE.

A NET WORK OF 37 BRANCHES

ALLEPPEY	CALICUT	KARKALA
ARSIKERE	CANNANORE	KASARGODE
BADAGARA	CHERAI	KAYAMKULAM
BANGALORE	CHIKMAGALUR	KUMBLA
BANTWAL	COCHIN	MANGALORE BUNDER
BELGAUM	COONDAPOOR	MANGALORE-CITY
BELTHANGADY	DAVANGERE	MANJESHWAR
BOMBAY-FORT	DHARWAR	MOOLKY
BOMBAY-MANDVI	DODDBALLAPUR	PAYYANNUR
BOMBAY GIRGAUM	ERNAKULAM	PUTTUR
BOMBAY-KALBADEVI	GANGULLI	QUILON
BOMBAY-PAREL	HUBLI	UDIPI
	UPPINANGADY	

ಉಡುಪಿ

'ಜಿಲ್ಲಾ ಬೋರ್ಡ್ ನೌಕರರ ಸಂಬಳ ಕಡಿತ ಮತ್ತು ಮೋಟಾರು ಟ್ರಾನ್ಸ್ ಪೋರ್ಟ್'—ಎಂಬ ಲೇಖನವೊಂದನ್ನು ಡಿ ಬೋ. ಮೆಂಬರರಾದ ಶ್ರೀ. ಎ. ಆರ್. ಪೂಂಜರು ಪ್ರಕಟನೆಗಾಗಿ ನಮಗೆ ಕಳುಹಿಸಿದ್ದಾರೆ ಅದು ರಾಷ್ಟ್ರಬಂಧುವಿನ ತಾ. 26-11-39ರ ಸಂಚಿಕೆಯಲ್ಲಿ ಪ್ರಕಟವಾದುದರಿಂದ ನಾವು ತಿರುಗಿ ಪ್ರಕಟಿಸಲಿಲ್ಲ ಸಂ ನ.

ಗಬ್ಬರ್ ಬಾಲ್ ಟೂರ್ನ್ಮೆಂಟ್—ಫೈನಲ್ ಪಂದ್ಯಾಟವು (ಲಕ್ಷ್ಮೀ ಮತ್ತು ಸೋಶಿಯಲ್ ಕ್ರಿಕೆಟ್ ಟೀಮುಗಳೊಳಗೆ) ತಾ 2 12 39ಕ್ಕೆ ಗಾಂಧೀ ಮೈದಾನದಲ್ಲಿ ಜರಗಲಿರುವುದು.

ಹರಿಜನ ಬೋರ್ಡಿಂಗ್—ಮೊದಲು ಎರಡಿದ್ದ ಹರಿಜನ ಬೋರ್ಡಿಂಗನ್ನು 'ಒಂದು ಗೂಡಿಸಬೇಕೆಂದು ನಿರ್ಣಯಿಸಿದಂತೆ ಹೊಸ ಹರಿಜನ ಬೋರ್ಡಿಂಗ್ ಹೌಸೊಂದು, ತಾ. 27 11 39ರಲ್ಲಿ ನಾಯರ ಕೆರೆಯ ಹತ್ತಿರದ ಕಟ್ಟಡವೊಂದರಲ್ಲಿ ಡಾ ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಡಿಲ್ಲಿಯ ರಿಸರ್ಚ್ ಸ್ಕಾಲರ್ ಶ್ರೀ ಮಂಜುನಾಥ ಭಟ್ ಇವರ ಹಸ್ತದಿಂದ ತೆರೆಯಲ್ಪಟ್ಟಿತು.

ಭಾಷಣ—ತಾ 27 11 39ನೇ ಸಂಜೆ ಮುನ್ಸಿಪಲ್ ಮೈನ್ ಸ್ಕೂಲಿನಲ್ಲಿ ಶ್ರೀ. ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ವಾಮನ್ ಪೈ ಭಟ್ಟರು ಹರಿಜನೋದ್ಧಾರದ ಕುರಿತು ಭಾಷಣ ಮಾಡಿದರು. ಶ್ರೀ. ಎನ್ ಎಸ್ ಕಿಲ್ಲೆಯವರೂ ಹೃದಯಂಗಮವಾಗಿ ಮಾತನಾಡಿದರು

ಲಕ್ಷದೀಪೋತ್ಸವ—ಶ್ರೀಕೃಷ್ಣ ದೇವಸ್ಥಾನದಲ್ಲಿ ವಾಡಿಕೆಯಂತೆ ಜರಗುವ ಲಕ್ಷದೀಪೋತ್ಸವವು ತಾ 23 11-39ರಿಂದ 26 11 39ರ ತನಕ ಅಭೂತಪೂರ್ವ ವಿಜೃಂಭಣೆಯಿಂದ ಯಥಾ ಸಾಂಗವಾಗಿ ಜರಗಿತು, ವಿದ್ಯುದ್ದೀಪಗಳ ನೂತನ ವ್ಯವಸ್ಥೆಯು ಅತಿ ಮನೋಹರವಾಗಿತ್ತು.

ಶ್ರೀ. ವೆಂಕಟರಮಣ ದೇವಸ್ಥಾನದಲ್ಲಿಯೂ ತಾ. 28-11 39ರಲ್ಲಿ ದೀಪೋತ್ಸವವು ವಿಜೃಂಭಣೆಯಿಂದ ಜರಗಿತು.

ನೋಟೀಸು

ಪುತ್ತೂರು ಡಿ- ಮುನ್ಸಿಫ್ ಕೋರ್ಟಿನಲ್ಲಿ

O.S. [illegible]

ನಾರಾಯಣಪ್ರಭು ಕೂಡಾ...ವಾದಿಗಳು.

ದೇವಪ್ಪಶಾನುಭಾಗ ಕೂಡಾ...ಪ್ರತಿವಾದಿಗಳು

ಸದ್ರಿ ವ್ಯಾಜ್ಯದ 7ನೇ ಪ್ರತಿವಾದಿ ರವಿರಾಜ ಅರಿಗ 9ನೇ ಪ್ರತಿವಾದಿ ಸೀತಿ ರಾಜ ಅರಿಗ, 11ನೇ ಪ್ರತಿವಾದಿ ಜಯಪತಿ 15ನೇ ಪ್ರತಿವಾದಿ ಗುಮ್ಮಣ್ಣ ರಿಗ ಇವರಿಗೆ—

ಮೇಲ್ಕಂಡ ವ್ಯಾಜ್ಯವು ತಾರೀಖು 7 12-39 ಕ್ಕೆ ತನಿಖೆಗೆ ಇಟ್ಟಿದೆ. ಅದರಲ್ಲಿ ಉಪಸ್ಥಿತರಿದ್ದರೆ ಆ ದಿವ್ಸ 10ಗಂಟೆಗೆ ಸರಿಯಾಗಿ ಸ್ವತಃವಾಗಲೀ, ಪರಿಚಿತ ವಕೀಲರ ಮುಖಾಂತ್ರವಾಗಲೀ ಹಾಜರು ಆಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷ ವಿಚಾರಣೆಯಿಂದ ತೀರ್ಮಾನವಾಗುವುದೆಂದು ತಿಳಿದಿರಿ

ಪುತ್ತೂರು | C S Shastry,
22-11 39 | *Vakil for Plaintiff*

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS,
BUT
THE OBJECT OF INTEREST IS ONLY ONE

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.

(Incorporated in British India)

ನವಯುಗ

ಉಡುಪಿ, ಗುರುವಾರ ತಾ. ೩೦-೧೧-೩೯

ಮಹಾತ್ಮಾ ಗಾಂಧಿಯವರ ನಾಯಕತ್ವ

ಇಂದಿಗ ಮಹಾತ್ಮಾ ಗಾಂಧಿಯವರು ಪುನಃ ಕಾಂಗ್ರೆಸಿನ ನಾಯಕತ್ವವನ್ನು ವಹಿಸಿಕೊಂಡಿರುವರೆಂದು ಹೇಳಬಹುದು. ಹಿಂದೂದೇಶದ ರಾಜಕೀಯ ಘಟನೆಯನ್ನು ತಯಾರಿಸುವ ಮತ್ತು ಅಲ್ಪಸಂಖ್ಯಾಕ ಪ್ರಶ್ನೆಯು ಇತ್ಯರ್ಥದ ದಾರಿಯ ತೊಡಕುಗಳನ್ನು ನಿವಾರಿಸುವ ಒಂದೇ ಒಂದು ಉಪಾಯವೆಂದರೆ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯೆಂದು ಅವರಲ್ಲೀಗ ದೃಢವಿಶ್ವಾಸವುಂಟಾಗಿದೆ. ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಸೂಚನೆಯನ್ನು ಪ್ರಥಮವಾಗಿ ಕಾಂಗ್ರೆಸಿನ ಮುಂದೆ ತಂದವರು ಪಂಡಿತ ಜವಾಹರಲಾಲರು. ಆಗ ಗಾಂಧಿಯವರಿಗೆ ಅದರಲ್ಲಿ ಅಷ್ಟೇನೂ ವಿಶ್ವಾಸವಿರಲಿಲ್ಲ. ಅವರು ಅದರ ವ್ಯವಹಾರ್ಯತೆಯ ಕುರಿತು ಸಂದೇಹಗ್ರಸ್ತರಾಗಿದ್ದರು. ಆದರೆ ಜವಾಹರಲಾಲರ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ವಿಧಾನಕ್ಕೆ ಮಹಾತ್ಮರು ಪೂರ್ಣ ಮತಾಂತರ ಹೊಂದಿ ಅತ್ಯುತ್ಸಾಹದಿಂದ ಅದನ್ನು ಪ್ರತಿಪಾದಿಸತೊಡಗಿರುವರು. ಬ್ರಿಟಿಷ್ ಸಾಮ್ರಾಜ್ಯಾಧೀನವಿರುವ ಕೆನಡಾ, ಆಸ್ಟ್ರೇಲಿಯಾ, ದಕ್ಷಿಣಆಫ್ರಿಕ ಮತ್ತು ನ್ಯೂಜೀಲೆಂಡ್‌ಗಳ ರಾಜಕೀಯ ಘಟನೆಗಳು ತಯಾರಿಸಲ್ಪಟ್ಟದ್ದು ಒಂದಲ್ಲೊಂದು ರೀತಿಯ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಮೂಲಕ. ಯಾವುದಾದರೊಂದು ದೇಶದ ಪ್ರಜಾಸತ್ತಾತ್ಮಕ ರಾಜ್ಯಾಂಗರಚನೆಯನ್ನು ಕೆಲವೇ ಮಂದಿ ಅಧಿಕಾರಿಗಳಾಗಲಿ, ಮುಖಂಡರಾಗಲಿ ನಿರ್ಮಿಸುವುದು ಅನುಚಿತವಾಗಿದೆ. ತಮ್ಮ ರಾಜಕೀಯ ಘಟನೆಯನ್ನು ನಿರೂಪಿಸುವ ಹಕ್ಕು ಜನತೆಗಿರಬೇಕು. ಆದುದರಿಂದಲೇ ಗಾಂಧಿಜಿಯವರು, ಪ್ರಾಯಬಂದ ಹಿಂದೀಯ ಸ್ತ್ರೀಪುರುಷರ ಮತದಾನದಿಂದ ಆರಿಸಲ್ಪಡುವ ಪ್ರತಿನಿಧಿಗಳಿಂದೊಡಗೂಡಿದ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯೇ ದೇಶದ ರಾಜಕೀಯ ಘಟನೆಯು ನಿಶ್ಚೈಸಲ್ಪಡಬೇಕೆಂಬ ನಿರ್ಧಾರಕ್ಕೆ ಬಂದಿರುವರು.

ಪಂಡಿತ ಜವಾಹರಲಾಲರ ವಿನಂತಿ

ಮಹಾತ್ಮರು ಪಂಡಿತ ಜವಾಹರಲಾಲರ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಅಭಿಪ್ರಾಯವನ್ನು ಸಂಪೂರ್ಣವಾಗಿ ಸಮರ್ಥಿಸಿರುವಾಗ ಪಂಡಿತರು ಗಾಂಧಿಜಿಯವರ ಅಹಿಂಸಾವಿಧಾನದಿಂದಲೇ ದೇಶದ ಉದ್ಧಾರವೆಂದು ಪ್ರತಿಪಾದಿಸಿ ಅವರ ನಾಯಕತ್ವವನ್ನು ದೇಶವು ಒಕ್ಕಟ್ಟಿನಿಂದ ಒಪ್ಪಿ ಅಹಿಂಸೆಯಲ್ಲಿ ತ್ರಿಕರಣಪೂರ್ವಕವಾದ ಶ್ರದ್ಧೆಯಿಂದ ಮುಂದಿನ ಹೋರಾಟಕ್ಕೆ ಸಿದ್ಧವಾಗಿರಬೇಕೆಂದು ಆಗ್ರಹದಿಂದ ವಿನಂತಿಮಾಡಿಕೊಂಡಿರುವರು. ಕಳೆದ 20 ವರ್ಷಗಳಿಂದ ಕಾಂಗ್ರೆಸು ಒಪ್ಪಿ ಅನುಸರಿಸಿರುವ ಮಹಾತ್ಮರ ಅಹಿಂಸಾತ್ಮಕ ರೀತಿನೀತಿಯ ಕುರಿತು ಈಗ ಸಂದೇಹಪಡುವುದರಲ್ಲಿ ಅರ್ಥವಿಲ್ಲ. ಕಾಂಗ್ರೆಸ್ಸಿನ ಮೂಲತತ್ವವಾದ ಅಹಿಂಸೆಯಲ್ಲಿ ವಿಶ್ವಾಸವಿಲ್ಲದವರು ಕಾಂಗ್ರೆಸಿನೊಳಗಿದ್ದು ಒಡಕನ್ನುಂಟುಮಾಡುವುದು ಅಯುಕ್ತ ಮತ್ತು ಹಾನಿಕರ. ಪ್ರಕೃತದ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರಬಲ ವೈರಿಯೊಂದಿಗೆ ಹೋರಾಟಕ್ಕಿಳಿಯಬೇಕಾಗಿರುವ ಕಾಲದಲ್ಲಿ ಕಾಂಗ್ರೆಸ್ಸಿನ ಧ್ಯೇಯ ಮತ್ತು ಸಾಧನದ ಕುರಿತು ಸಂದೇಹವನ್ನೆಬ್ಬಿಸುವುದು ದೇಶದ್ರೋಹವೆಂದು ಪಂಡಿತರು ಎಚ್ಚರಿಸುವಷ್ಟು ಮುಂದುವರಿದಿರುವರು. ಅವರ ಅತ್ಯಂತ ಸ್ಫೂರ್ತಿಪರವಾದ ವಿನಂತಿಯು ಹೆಚ್ಚಿನ ಭಾಗವು ಶ್ರೀ ಎಮ್. ಎನ್. ರಾಯ್‌ರಂಥ ನವೋದಯ ಗಾಂಧಿವಾದದ ವಿರೋಧಿಗಳಿಗನ್ವಯಿಸುತ್ತವೆ. ಹೀಗೆ ಪಂಡಿತರೂ ಗಾಂಧಿಜೀಯವರೂ ಸಂಪೂರ್ಣ ಮನಸ್ಸಿನಿಂದ ಒಂದುಗೂಡಿ ನಡೆಯುವಾಗ, ಗಾಂಧಿಜಿಯವರ ನಾಯಕತ್ವಕ್ಕೆ ಕಾಂಗ್ರೆಸ್ಸಿನಲ್ಲಿ ಪ್ರಬಲ ವಿರೋಧವೇನೂ ಇರಲಾರದೆಂದು ನಂಬಬಹುದಾಗಿದೆ.

ಶ್ರೀ ರಾಯ್ ಮತ್ತು ಭೋಸರು ಭಿನ್ನಾಭಿಮತ

ಕಾಂಗ್ರೆಸ್ಸಿನ ಮತ್ತು ಮಹಾತ್ಮಾ ಗಾಂಧಿಯವರ ಧೋರಣೆಯನ್ನು ಟೀಕಿಸಿ ವಿರೋಧಿಸುತ್ತಿರುವವರಲ್ಲಿ ಅಗ್ರಗಾಮಿಗಳೆಂದರೆ ಶ್ರೀ ಎಮ್. ಎನ್. ರಾಯ್‌ರವರು ಮತ್ತು ಶ್ರೀ ಸುಭಾಸಚಂದ್ರಭೋಸರು ಮೊದಲನೆಯವರು ಗಾಂಧಿವಾದಕ್ಕೇನೇ ಸಂಪೂರ್ಣ ವಿರೋಧವಾಗಿರುವರು. ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯವೇ ದೇಶದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾಗಿರುವ ಕಾಂಗ್ರೆಸ್ಸಿನ ಮುಖ್ಯ ಉದ್ದೇಶ. ಅಂದ ಮೇಲೆ ಅದು ಯಾವ ರೀತಿಯಲ್ಲಾದರೂ ಶೀಘ್ರವಾಗಿ ದೇಶದ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸಿ ಜನಸಾಮಾನ್ಯರ ಸಾಂಪತ್ತಿಕ ಸಂಕಷ್ಟಗಳನ್ನು ದೂರಪಡಿಸಿ ಅವರಿಗೆ ಕ್ಷೇಮವನ್ನುಂಟುಮಾಡಬೇಕು. ಅಹಿಂಸೆ, ಸತ್ಯ, ನೀತಿ, ಧರ್ಮವನ್ನೆಲ್ಲಾ ಕಾಂಗ್ರೆಸು ಕಟ್ಟಿಕೊಂಡು ಉದಾತ್ತ ತತ್ವವಿಚಾರವನ್ನೇ ಸರ್ವಸ್ವವಾಗಿ ಭಾವಿಸುವುದರಲ್ಲಿ ಅರ್ಥವಿಲ್ಲ. ಅದರಿಂದ ಮುಖ್ಯ ಉದ್ದೇಶವನ್ನು ಕಡೆಗಾಣಿಸಿದಂತಾಗುತ್ತದೆ. ಸಾಧ್ಯಕ್ಕಿಂತ ಸಾಧನವನ್ನೇ ಮುಖ್ಯವಾಗಿ ಪರಿಗಣಿಸಿದಂತಾಗುತ್ತದೆ. ಇಂತಹ ಧೋರಣೆಯಿಂದ ದೇಶವು ಬೇಗನೆ ಸ್ವಾತಂತ್ರ್ಯ ಪಡೆಯುವ ಸಂಭವ ತೋರುವುದಿಲ್ಲ. ಕಳೆದ 20 ವರ್ಷಗಳ ಅನುಭವದಿಂದ ಕಾಂಗ್ರೆಸು ಪಾಠ ಕಲಿಯಬೇಕು. ಮಂಗನಮುಷ್ಟಿಯಂತೆ ಹಿಡಿದುದನ್ನು ಬಿಡಲರಿಯದೆ ಹಾಡಿದ್ದನ್ನೇ ಹಾಡುತ್ತಿರುವುದರಿಂದ ಕಾಂಗ್ರೆಸ್ಸಿಗೆ ಜನಸಾಮಾನ್ಯರ ಉತ್ಸಾಹಪರ ಬೆಂಬಲ ಸಿಗುವಹಾಗಿಲ್ಲ. ಅದು ಕೇವಲ ಆತ್ಮವಂಚಕ ಕುಹಕಿಗಳ ಸೂತ್ರಜಾಲನೆಯ ಸಂಸ್ಥೆಯಾಗಿ ಪರಿಣಮಿಸುವಂತಾಗಿದೆ. ಸ್ವಾರ್ಥಸಾಧಕರು ಕೆಲವರು, ತಾವು ಗಾಂಧಿಯವರ ನಿಷ್ಠಾವಂತ ಅನುಯಾಯಿಗಳ ಸೋಗು ಹಾಕಿಕೊಂಡು ಕಾಂಗ್ರೆಸ್ಸನ್ನು ತಮ್ಮ ಅಧಿಕಾರ ಸ್ಥಾಪನೆಗಾಗಿ ದುರುಪಯೋಗಿಸುತ್ತಿದ್ದಾರೆ. ಗಾಂಧಿಯವರ ಉದಾತ್ತ ತತ್ವ ಮತ್ತು ಆದರ್ಶವಾದವು ಅವ್ಯವಹಾರ್ಯವಿದ್ದು ಅದನ್ನು ಜನಸಾಮಾನ್ಯರಿಂದ ಅನುಸರಿಸಲು ಎಂದಿಗೂ ಸಾಧ್ಯವಿಲ್ಲ. ವಾಸ್ತವಿಕ ಪರಿಸ್ಥಿತಿಯ ಕಡೆಗೆ ಕಣ್ಮುಚ್ಚಿ ತಮ್ಮದೇ ಆದ ತ್ರಿಲೋಕದಲ್ಲಿ ವಿಹರಿಸಿಕೊಂಡು ಏನೇನೋ ಕಲ್ಪನೆಗಳನ್ನು ಕಟ್ಟಿಕೊಳ್ಳುವುದರಿಂದ ಫಲವಿಲ್ಲೆಂದೇ ಶ್ರೀ ಎಮ್. ಎನ್. ರಾಯ್ ತಂಡದವರ ವಾದ. ಅವರು ಜನತೆಯ ನಿಜವಾದ ಹಿತಸಾಧನೆಗಾಗಿ ದೇಶದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಗಾಗಿ ಯಾವ ತ್ಯಾಗವನ್ನಾದರೂ ಮಾಡಿ ಎಂತಹ ಕಷ್ಟವನ್ನಾದರೂ ಸಹಿಸಿ ಹೋರಾಡಲು ಸಿದ್ಧರಿದ್ದಾರೆ. ಆದರೆ ಗಾಂಧಿವಾದಿಗಳ ತ್ರಿಕರಣಶುದ್ಧವಾದ ಅಹಿಂಸೆ, ಸತ್ಯನಿಷ್ಠೆ, ಚರಕ ಮತ್ತು ಖಾದಿ ಮೊದಲಾದವುಗಳಲ್ಲಿ ಅವರಿಗೆ ವಿಶ್ವಾಸವಿಲ್ಲ. ಅದಕ್ಕೂ ಸ್ವರಾಜ್ಯಸಾಧನೆಗೂ ಸಂಬಂಧವಿಲ್ಲೆಂದೇ ಅವರ ಮನೋನಿರ್ಧಾರ. ಆದರಿಂದಾಗಿ ಅವರು ಕಾಂಗ್ರೆಸ್ಸನ್ನು ಬಿಟ್ಟುಹೋಗುವಂತಾದರೂ ಅದಕ್ಕೆ ಸಿದ್ಧರೇ ಇದ್ದಾರೆ. ಒಂದಲ್ಲೊಂದು ದಿನ ಈ ತಂಡದವರಿಗೂ ಗಾಂಧಿವಾದಿಗಳಿಗೂ ಘರ್ಷಣ ನಿಶ್ಚಯವೆಂಬಂತೆ ತೋರುತ್ತದೆ. ಶ್ರೀ ಸುಭಾಸಭೋಸರು ಗಾಂಧಿವಾದಕ್ಕೇನೂ ವಿರೋಧವಿರುವುದಿಲ್ಲ. ಈಗಿನ ಕಾಂಗ್ರೆಸ್ಸಿನ ಮಂದಗಾಮಿ ಧೋರಣೆ ಮತ್ತು ಗಾಂಧಿಜಿಯವರ ಮನೋವೃತ್ತಿಯನ್ನವರು ಖಂಡಿಸುವವರಿದ್ದಾರೆ. ಬ್ರಿಟಿಷ್ ಸರಕಾರವು ಕಾಂಗ್ರೆಸ್ಸಿನ ಮುಖದ ಮೇಲೆ ಬಾಗಿಲು ಹಾಕಿದ ವಾಗ ಅದರೊಡನೆ ಗೌರವಪೂರ್ವಕ ಸಂಧಿಯೆಂದರೇನು? ಬ್ರಿಟಿಷರಿಂದ ರಾಜಕೀಯ ಸ್ವಾತಂತ್ರ್ಯವನ್ನು ನಾವು ಕಸಕೊಳ್ಳದೆ ಅವರು ಉದಾರಬುದ್ಧಿಯಿಂದ ಬಿಟ್ಟುಕೊಡುವರೆಂದು ನಂಬುವುದು ಬರಿಯ ಭ್ರಾಂತಿ. ಇಂದೀಗ ಹೋರಾಟಹೂಡಲು ಅನುಕೂಲ ಸಂದರ್ಭ ಬಂದಿರುವಾಗ ಕಾಂಗ್ರೆಸು ಮುಂದಡಿಯಿಡದೆ ಸಂದೇಹಗೊಂಡು ಸುಮ್ಮನಿರುವುದು ಅನುಚಿತವೆಂದೇ ಶ್ರೀ ಸುಭಾಸರ ಅಭಿಮತ. ಕಾಂಗ್ರೆಸು ಹೀಗೆಯೇ ಸಮಯ ಕಳೆಯುತ್ತಾ ಕೂತರೆ ತಮಗೆ ಸುಮ್ಮನಿರಲು ಸಾಧ್ಯವಿಲ್ಲ. ಸರಕಾರವು ಇಷ್ಟರಲ್ಲೇ ದಬ್ಬಾಳಿಕೆಯನ್ನಾರಂಭಿಸಿದೆ. ತೀವ್ರಗಾಮಿಗಳನ್ನೆಲ್ಲಾ ಹಿಡಿದು ಜೈಲಿಗೆ ಹಾಕತೊಡಗಿದೆ. ಆದುದರಿಂದ ತಾವು ಬೇಗನೆ ಉಗ್ರಕಾರ್ಯಕ್ರಮ ಕೈಕೊಳ್ಳದೆ ನಿರ್ವಾಹವಿಲ್ಲವಾಗಿದೆ. ಅದಕ್ಕೆ ಕಾಂಗ್ರೆಸು ಅಡ್ಡಬಂದರೆ ಕೇಳುವಹಾಗಿಲ್ಲೆಂದೇ ಶ್ರೀ. ಭೋಸರ ಎಚ್ಚರ. ಶ್ರೀ ರಾಯ್‌ಗಳು ಗಾಂಧಿವಾದಕ್ಕೇನೇ ವಿರೋಧವಿದ್ದರೆ ಶ್ರೀ ಭೋಸರು ಅದರ ಕಾರ್ಯವಿಧಾನದ ಕುರಿತು ತೀವ್ರ ಅತೃಪ್ತಿಗೊಂಡಿರುವರು. ಇಬ್ಬರ ಧೋರಣೆಯಲ್ಲಿಯೂ ಕಾಂಗ್ರೆಸ್ಸಿನೊಳಗೆ ಒಡಕಿನ ಅಪಾಯವು ತೋರಿಬರುತ್ತದೆ.

ದೇಶದ ಕರ್ತವ್ಯ

ಗಾಂಧಿವಾದವು ಈಗ ದೇಶದಲ್ಲಿ ದೃಢವಾಗಿ ನೆಲೆಗೊಂಡಿದೆ. ಗಾಂಧಿಯವರ ನಾಯಕತ್ವದಲ್ಲಿ ಜನಸಾಮಾನ್ಯರಿಗೆ ಅಚಲ ವಿಶ್ವಾಸವಿದೆ. ಹಿಂದೀಯರು ಹೆಚ್ಚಾಗಿ ಅಂಧವಿಶ್ವಾಸಿಗಳು. ಆ ವಿಶ್ವಾಸವು ಅವರನ್ನು ಬಹಳ ಸಾಹಸದ ಕಾರ್ಯಕ್ಕೆ ಕೂಡ ಮುಂದೊಡುವುದು. ಗಾಂಧಿಜಿಯವರ ಕುರಿತಾಗಿ ಇಡೀ ದೇಶದಲ್ಲಿ ಅಂತಹ ವಿಶ್ವಾಸವು ನೆಲೆಗೊಂಡಿರುವುದು. ಅವರ ಅಹಿಂಸಾ ಸಾಧನವು ಇಡೀ ಲೋಕಕ್ಕೇನೇ ಅದೊಂದು ನವೀನ ಸಂದೇಶವಿರುವುದು. ಅದೊಂದು ಹೊಸ ಪ್ರಯೋಗವನ್ನವರು ಸಾಮುದಾಯಿಕವಾಗಿ ನಡಿಸುತ್ತಿರುವರು. ಇಷ್ಟರ ವರೆಗೆ ಅವರು ನಡಿಸಿರುವ ಪ್ರಯೋಗಗಳು ಸಂಪೂರ್ಣ ನಿಷ್ಫಲವಾಗಿರುವವೆಂದು ಹೇಳಲು ಸಾಧ್ಯವಿಲ್ಲ. ಕಾಂಗ್ರೆಸಿನ ಈಗಣ ಸಂಘಟನೆ ಮತ್ತು ಪ್ರಚಂಡ ಶಕ್ತಿಗೆ ಮಹಾತ್ಮರೇ ಕಾರಣ. ಅವರ ವ್ಯಕ್ತಿತ್ವವು ಈಗ ಲೋಕಮಾನ್ಯವಾಗಿರುವುದು. ಅಮಾನುಷ ಹಾಗೂ ಬರ್ಬರ ಹಿಂಸಾ ಖಂಡದಿಂದ ಜುಗುಪ್ಸೆಗೊಂಡಿರುವ ಲೋಕಕ್ಕೆ ಮಹಾತ್ಮರು ಹೊಸ ಹಾದಿಯೊಂದನ್ನು ಹಾಕಿಕೊಟ್ಟು ಲೋಕವಂದ್ಯರಾಗಿರುವರು. ಲೋಕದ ಜನತೆಯಲ್ಲಿ ನವೀನ ದೃಷ್ಟಿ ಮತ್ತು ಸ್ಫೂರ್ತಿಯನ್ನುಂಟುಮಾಡಿದವರು. ಇಂತಹ ಮಹಾವ್ಯಕ್ತಿಯು ಕಾಂಗ್ರೆಸಿನ ನಾಯಕತ್ವವನ್ನು ಪುನಃ ವಹಿಸಲು ಸಿದ್ಧವಾಗಿರುವಾಗ, ಇಡೀ ದೇಶವು ಒಂದೇ ಮನಸ್ಸಿನಿಂದ ಅವರಿಗೆ ಬೆಂಬಲವಿತ್ತು ಅವರಿಗಿನ್ನೊಂದು ಸಂದರ್ಭವನ್ನೀಯಬೇಕೆಂದೇ ನಮ್ಮ ಅಭಿಮತ. ರಾಜಕೀಯದಲ್ಲಿ ನವೀನ ಮತಸ್ಥಾಪನಾಚಾರ್ಯರವರು. ಸತ್ಯಾಗ್ರಹ ಮತ್ತು ಅಹಿಂಸಾತ್ಮಕ ಕಾಯಿದೆ ಭಂಗವೇ ಅವರ ಸಾಧನ. ಅವರ ಪ್ರಯೋಗ ಮತ್ತು ಸಿದ್ಧಿಯ ರೀತಿನೀತಿಯಲ್ಲಿ ಅವರ ಹೊರತು ಇನ್ನೊಬ್ಬರು ತಜ್ಞರಿರಲಾರರು. ಆದುದರಿಂದ ಆ ಸಂಬಂಧವಾಗಿ ಅವರಿಗೆ ಸಂಪೂರ್ಣ ಅಧಿಕಾರವಿತ್ತು ಸರ್ವಜವಾಬ್ದಾರಿಯನ್ನು ಅವರ ಮೇಲೆ ಹಾಕಿ ಅವರು ಹೇಳಿದಂತೆ ನಡೆಯಲು ಹಿಂದೀಯರು ಸಿದ್ಧರಾಗುವುದೇ ದೇಶದ ಪ್ರಕೃತದ ಸಂದರ್ಭದಲ್ಲಿ ಎಲ್ಲರ ಕರ್ತವ್ಯವಿರುವುದು.

[ಹಿಟ್ಲ]ರರಿಗೆ ವಿರೋಧವು ಹೆಚ್ಚುತ್ತಿದೆ.

ಹಿಟ್ಲರರ ಗುಪ್ತ ಉಪಕರಣ ಯಾವುದು ?

ಮಂತ್ರಿ
ಭಾಷಣ
[ಬ್ರಿ]ಟಿಷ್ ಪ್ರಧಾ
[ಚೇ]ಂಬರ್ಲೇನರು,
...ರ್ ಗುಣ
...ರಿಯೋ ಭಾ
...ರ ರಾಷ್ಟ್ರಗಳಿಗೆ
...ಚಿಸಿ, ಯು
...ದ ಭೀತಿಯ
[ಆ]ಕ್ರಮಣ ಶೀಲ
...ಯು ಅಳಿಯ
...ಂದರೆ ಹಿಟ್ಲ
...ಗೊಳಿಸುವು
...ದು ಉದ್ದೇಶ,
... ಚೇಂಬರ್ಲೆ
...ಲೆ ವಿಜಯ
...ಣೆ ವಹಿಸುವ
...ರ್ಣನವನ್ನಿತ್ತ
...ತೆ ಪ್ರಸ ಇ
...ದವುಂಟಾಗು
ಯುದ್ದಾಂತ್ಯದ
ರಾಷ್ಟ್ರಗಳ ತ
...ಸಿನ ನಕಾಶೆ
...ಗಳ ಎಲ್ಲೆ

...ಪಿಸಿದ್ದು)
...ದೂದೇಶಕ್ಕೆ
ಆದುದರಿಂದ
ಹಿಂದೂದೇಶ
...ಗಿ ಮಾತಾಡ
...ವನ್ನು ಯಾಕೆ
...ದು ಮೆಂಚೆ
...ಯು ಸೂಚಿ

...ದೇಶವನ್ನು
...ರ್ವ ಹಾನಿ
... ವರ್ನನ್
...ಪ್ಲ್ಯಾ' ಎಂಬ
...ದು ಎಚ್ಚರ
...ಗಳು ತಮ್ಮ
...ಷೆಯ ಹಣ
...ಕ್ಕಾಗಿ ಸಮ
...ದು ಸಂತೋ
...ನ್ನು ಧಿಕ್ಕರಿಸಿ
...ಟ್ಟು ಹೊರ
...ಗದ ಕಾಂಗ್ರೆ
...ಷ್ ಸಾಮ್ರಾ
...ಟಿವಲ್ಲಿ ಸಹ
ಸಮರವನ್ನು
... ಅತ್ಯಂತ
...ರಣೆಯನ್ನು
...ನ್ನಿ ಮನ್ನಿಸಿ
...ಟು ಬ್ರಿಟಿಷ್
ಸ್ವಾತಂತ್ರ್ಯದ
...ಣೆಯನ್ನಿತ್ತ
...ಲೆ ಮಾತ್ರ
...ಲೆ ಅದರಿಂದ
...ಗುವುದೋ,

ಬ್ರಿಟಿಷ್ ಹಡಗಗಳು ಮುಳುಗಿಸಲ್ಪಟ್ಟವು

ರಾಷ್ಟ್ರೀಯ ಧ್ವಜಾರೋಹಣಕ್ಕೆ ಗವರ್ನರರ ಆಕ್ಷೇಪ

ಗಳನ್ನು, ಅವುಗಳ ನೆರೆಯ ರಾಷ್ಟ್ರಗಳ ಮತ್ತು ನಿಃಸ್ವಾರ್ಥ ಮೂರನೇ ಪಕ್ಷೀಯರ ಮಧ್ಯಸ್ಥಿಕೆಯಿಂದ ನಿರ್ಣೈಸಲಾಗುವುದು. ಆಧುನಿಕ ಲೋಕದಲ್ಲಿ ಸಾಂಪತ್ತಿಕ ಪ್ರಶ್ನೆಯು ರಾಜಕೀಯದೊಂದಿಗೆ ಸೇರಿರುತ್ತದೆ. ರಾಷ್ಟ್ರೀಯ ಜೀವನದ ಹಾಸು ಹೊಕ್ಕಾಗಳಂತಾಗಿವೆ ಅವು. ರಾಷ್ಟ್ರಗಳೊಳಗೆ ವ್ಯಾಪಾರ ವ್ಯವಹಾರವು ನಿರಾತಂಕವಾಗಿ ಮತ್ತು ಯಥೇಚ್ಛವಾಗಿ ನಡೆಯುವಂತೆ ವ್ಯವಸ್ಥೆ ಮಾಡಲಾಗುವುದೆಂದು ಚೇಂಬರ್ಲೆನರು ಹೇಳಿ, ಸಾಮ್ರಾಜ್ಯಶಾಹೀ ಸ್ವಾರ್ಥಕ್ಕಾಗಿ ಈ ಯುದ್ಧವು ನಡಿಸಲ್ಪಡುವುದಿಲ್ಲೆಂಬುದನ್ನು ಸ್ಪಷ್ಟಪಡಿಸಿರುವರು.

ಶ್ರೀ. ಎಮ್. ಎನ್. ರ್‍ಯೊಗಳ ಮೇಲೆ ನಿಷೇಧಾಜ್ಞೆ

ಶ್ರೀ. ಎಮ್. ಎನ್. ರ್‍ಯೊಗಳು ಕಾಂಗ್ರೆಸ್ ಕೆಲಸಕ್ಕಾಗಿ ಲಾಹೋರಿಗೆ ಆಮಂತ್ರಿಸಲ್ಪಟ್ಟು ಪಂಜಾಬಿನಲ್ಲೆಲ್ಲಾ 10ದಿವಸ ಸಂಚರಿಸುವ ಕಾರ್ಯಕ್ರಮವನ್ನು ನಿಶ್ಚೈಸಿ ಇದೇ ತಾ. 26ರಲ್ಲು ಶಹರನ್ ಪುರಕ್ಕೆ ಹೋದಾಗ ಅವರು ಪಂಜಾಬಿಗೆ ಪ್ರವೇಶಿಸಬಾರದೆಂದು ಕ್ರಿಮಿನಲ್ ಲೋ ಎಮೆಂಡ್ ಮೆಂಟ್ ಆಕ್ಟಿನ ಮೇರೆಗೆ ಅವರ ಮೇಲೆ ನಿಷೇಧಾಜ್ಞೆಯನ್ನು ಜ್ಯಾರಿಮಾಡಲಾಗಿದೆ. ಶ್ರೀ ರ್‍ಯೊಗಳು ಅಲ್ಲಿಂದಲೇ ಹಿಂತಿರುಗಿರುವರು.

ರಾವಳಪಿಂಡಿ ಹಡಗ ಮುಳುಗಿತು.

300 ಮಂದಿ ಪ್ರಾಣಹಾನಿ

17,000ಟನ್ನು ಘನ ತೂಕದ ರಾವಳಪಿಂಡಿ ಎಂಬ ದೊಡ್ಡ ಬ್ರಿಟಿಷ್ ವ್ಯಾಪಾರಿ ಯುದ್ಧ ಹಡಗವು ಇದೇ ತಾ. 26ರಲ್ಲು ಮುಳುಗಿಸಲ್ಪಟ್ಟಿರುವುದು. ಇದರಲ್ಲಿದ್ದ 300ಮಂದಿ ನಾವಿಕರು ಮತ್ತು ಅಧಿಕಾರಿಗಳು ಮುಳುಗಿ ಹೋಗಿರುವರೆಂದು ನಂಬಲಾಗಿದೆ ಸಸ್ಸೆಕ್ಸ್ ಎಂಬ ಹಡಗಕ್ಕೆ ಜಖಮಾಗಿದೆ, ಹುಕ್ ಉಡ್ ಎಂಬ ಇನ್ನೊಂದು ಬ್ರಿಟಿಷ್ ಹಡಗವು ಇದೇ ತಾ 23ರಲ್ಲಿ ಮುಳುಗಿಸಲ್ಪಟ್ಟಿರುವುದು. ಪಿಲ್ಸುಡ್ಸ್ಕಿ ಎಂಬ 14,000ಟನ್ನು ತೂಕದ ಪೋಲಿಷ್ ಸ್ಟೀಮರೊಂದು ಬ್ರಿಟಿಷ್ ನೌಕಾಖಾತೆಯಲ್ಲಿ ಕೆಲಸಮಾಡುತ್ತಿದ್ದು ಇದೇ ತಾ. 26ರಲ್ಲಿ ಅದನ್ನು ಜರ್ಮನ್ ಸಬ್ ಮೆರಿನ್ನೊಂದರಿಂದ ಮುಳುಗಿಸಲ್ಪಟ್ಟಿರುವುದು. ವಿಲಿಯಂ ಹಂಫ್ರಿಸ್ ಎಂಬ ನಾವೆಯೊಂದು ಕೂಡಾ ಇದೇ ತಾ. 26ರಲ್ಲು ಮುಳುಗಿಸಲ್ಪಟ್ಟಿದೆ.

ಫಿನ್ಲೆಂಡಿನ ಮೇಲೆ ಸೋವಿಯೆಟ್ ಸರಕಾರದ ಆರೋಪ

ಸೋವಿಯೆಟ್ ರಷ್ಯ ಮತ್ತು ಫಿನ್ಲೆಂಡುಗಳೊಳಗೆ ಒಡಂಬಡಿಕೆ ಆಗಿರುವುದು. ಫಿನ್ಲೆಂಡ್ ಸರಕಾರವು ರಷ್ಯದ ಶರ್ತಗಳನ್ನು ನಿರಾಕರಿಸಿರುವುದು. ಇದೇ ತಾ. 26ರಲ್ಲು ಫಿನ್ಲೆಂಡಿನ ಸೈನಿಕರು ಸೋವಿಯೆಟ್ ಫಿನ್ನಿಶ್ ಎಲ್ಲೆಯಲ್ಲಿರುವ ಸೋವಿಯೆಟ್ ಸೈನಿಕರ ಮೇಲೆ ಗುಂಡುಹಾರಿಸಿ 4 ಮಂದಿ ಕೊಲ್ಲಲ್ಪಟ್ಟು 9ಮಂದಿಗೆ ಪೆಟ್ಟಾಗಿರುವುದೆಂದು ತಿಳಿದುಬರುತ್ತದೆ. ಈ ಕುರಿತು ಸೋವಿಯೆಟ್ ಸರಕಾರವು ಫಿನ್ಲೆಂಡಿಗೆ ನಿಷೇಧಸೂಚಿಸಿ, ಫಿನ್ನಿಶ್ ಸೇನೆಯನ್ನು ಕರೇಲಿಯದಿಂದ 12ಮೈಲು ಹಿಂಪಕ್ಕೆ ಕರೆಯಬೇಕೆಂದು ಸೂಚಿಸಿರುವುದು ರಷ್ಯದ ಪ್ರಾಮುಖ್ಯ ಪತ್ರಿಕೆಯಾದ ಪ್ರವಾದವು, ವಿದೂಷಕನೊಬ್ಬನು ಫಿನ್ಲೆಂಡಿನ ಪ್ರಧಾನಮಂತ್ರಿಯ ಸ್ಥಾನದಲ್ಲಿದ್ದಾನೆ. ಕರ್ನಲ್ ಜೆಕ್ ಮತ್ತು ಎಮ್. ಮೆಸಿನ್ನಿಯವರ ಸಾಲಿಗೆ ಸೇರಿದವನೆಂದು ಕಠಿಣವಾಗಿ ಟೀಕಿಸಿರುವುದು. ಫಿನ್ಲೆಂಡ್ ಸರಕಾರವು ಈ ವಿದ್ಯಮಾನದ ಸಂಗತಿಯೇ ತಮಗೆ ಗೊತ್ತಿಲ್ಲವೆಂದೂ, ತಾವು ವಿಚಾರಣೆ ನಡಿಸುವೆವೆಂದೂ ತಿಳಿಸಿರುವುದು. ರಷ್ಯದೊಡನೆ ಒಡಂಬಡಿಕೆಮಾಡಿಕೊಳ್ಳಬೇಕೆಂದು ಜರ್ಮನಿಯು ಫಿನ್ಲೆಂಡಿಗೆ ಎಚ್ಚರವಿತ್ತಿರುವುದು.

ದಕ್ಷಿಣದಲ್ಲಿ ನೆರೆಹಾವಳಿ

ತಂಜಾವೂರು ಮತ್ತು ತಿರುಚಿನಾಪಳ್ಳಿಯಲ್ಲಿ ಈ ತಿಂಗಳ ಎರಡನೇ ವಾರದ ಎಡ್ಡಿಡೆಬಿಡದೆ ಬಂದ ಜಡಿಮಳೆ ಮತ್ತು ತಾ. 15ರಲ್ಲಿ ತಿರುಚಿನಾಪಳ್ಳಿ ಜಿಲ್ಲೆಯಲ್ಲಿಯೂ ತಾ. 14ರಿಂದ 16ರವರೆಗೆ ತಂಜಾವೂರಿನಲ್ಲಿಯೂ ವಿಪರೀತ ಮಳೆ ಬಿದ್ದುದರಿಂದ ಹೆಚ್ಚಿನ ಬಾವಳಿಯಾಗಿರುತ್ತದೆ. ತಂಜಾವೂರು ಪಟ್ಟಣದಲ್ಲಿಯೇ ಸಾವಿರಕ್ಕಿಂತಲೂ ಮಿಕ್ಕಿದ ಜನರು ಮನೆಮಾರು ಕಳಕೊಂಡು ನಿರಾಶ್ರಿತರಾಗಿರುತ್ತಾರೆ. ತಂಜಾವೂರಿನ ಸೊಡ್ಡ ಅಣೆಕಟ್ಟು 33ಕಡೆಗಳಲ್ಲಿ ಒಡೆದುಹೋಗಿದೆ. ಇಬ್ಬರ ಪ್ರಾಣಹಾನಿಯೂ ಆಗಿದೆ. 120ಜಾನುವಾರುಗಳು ಮುಳುಗಿ ಹೋಗಿವೆ. 1400ಮನೆಗಳು ಬಿದ್ದು ಹೋಗಿವೆ. ಪಾಪನಾಶಮ್ ತಾಲೋಕಿನಲ್ಲಿ 1000ಮಂದಿ ನಿರಾಶ್ರಿತರಾಗಿರುತ್ತಾರೆ ಪಟ್ಟುಕೋಟ್ಟಾ ತಾಲೋಕಿನಲ್ಲಿ ಮಹಾರಾಜ ಸಮುದ್ರಮ್ ನದಿಗೆ ಸೇತುವೆಕಟ್ಟುತ್ತಿದ್ದ 70ಮಂದಿ ಒಡ್ಡರು ಪ್ರವಾಹಕ್ಕೆ ಸಿಕ್ಕಿ ಮುಳುಗಿಹೋಗುವುದರಲ್ಲಿದ್ದಾಗ ದೋಣಿಯೊಂದು ಅವರನ್ನು ರಕ್ಷಿಸಿತು. ಅದು ಎರಡನೇ ಸಲ ಜನರನ್ನು ಹಿಡಿದುಕೊಂಡುಬರುವಾಗ ಕಲ್ಲೊಂದಕ್ಕೆ ತಾಗಿ ಒಡೆದು ಇಬ್ಬರು ಚಿಕ್ಕ ಮಕ್ಕಳು, ಒಬ್ಬ ಹುಡುಗಿ ಮತ್ತು ಇನ್ನೊಬ್ಬಳು ಹೆಂಗಸು ಮುಳುಗಿಹೋದರು. ಈ ತಾಲೂಕಿನಲ್ಲಿ ಒಟ್ಟು 6 ಪ್ರಾಣಹಾನಿಯಾಗಿದೆ. ಅಗ್ನಿಯಾರ್ ನದಿಯಲ್ಲುಂಟಾದ ನೆರೆಯಿಂದ ಹೆಚ್ಚಿನ ಹಾವಳಿಯಾಗಿದೆ 147ಮನೆಗಳು ಬಿದ್ದುಹೋಗಿ 206ಜಾನುವಾರುಗಳು ನಾಶಹೊಂದಿವೆ ಮನ್ನಾರ್‌ಗುಡಿ ತಾಲೋಕಿನಲ್ಲಿ ಸುಮಾರು 1000ಮನೆಗಳು ಬಿದ್ದುಹೋಗಿವೆ. ನನ್ನಿಲಾವರ್ ಮತ್ತು ನಾಗಪಟಾಮ್ ತಾಲೋಕುಗಳಲ್ಲಿಯೂ ಕುಂಭಕೋಣಮ್, ಮಾಯಾವರಮ್ ಮತ್ತು ತಿರುವಾಡಿ ತಾಲೂಕುಗಳಲ್ಲಿಯೂ ರಸ್ತೆಗಳು ಕಡಿದುಹೋಗಿ ಹಾವಳಿಯಾಗಿದೆ. ರೈಲ್ವೇ ಲೈನುಗಳು ಹಲವೆಡೆ ಒಡೆದುಹೋಗಿರುತ್ತವೆ. ತಿರುಚಿನಾಪಳ್ಳಿ ಪಟ್ಟಣ ಮತ್ತು ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಹಾವಳಿಯಾಗಿದೆ. ಪ್ರಾಣಹಾನಿ ಹೆಚ್ಚೇನೂ ಆಗಿಲ್ಲ. ಬೆಳೆಗೆ ಬಹಳ ಹಾನಿಯಾಗಿದೆ.

ಅಲ್ಲಹಾಬಾದಿನ ಕನ್ವೊಕೇಶನಿನ ಅಧ್ಯಕ್ಷತನ ವಹಿಸಲು ಗವರ್ನರರೊಪ್ಪಲಿಲ್ಲ

ಅಲಹಾಬಾದ್ ವಿಶ್ವವಿದ್ಯಾಲಯದ ವಾರ್ಷಿಕ ಪದವೀದಾನ ಸಮಾರಂಭದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದವರು ಸೆನೆಟ್ ಹೋಲಿನ ಮೇಲೆ ರಾಷ್ಟ್ರೀಯ ಧ್ವಜಾರೋಹಣ ಮಾಡಿದರೆಂಬ ಕಾರಣದಿಂದ ಸಂಯುಕ್ತ ಪ್ರಾಂತದ ಗವರ್ನರರೂ, ವಿಶ್ವವಿದ್ಯಾಲಯದ ಛಾನ್ಸೆಲರೂ ಆದ ಸರ್. ಹೆರ್ರಿ ಹೈಗರು, ಪದವೀದಾನ ಸಮಾರಂಭದಲ್ಲಿ ಅಧ್ಯಕ್ಷತನ ವಹಿಸಲು ನಿರಾಕರಿಸಿರುವರು ವಿದ್ಯಾರ್ಥಿ ಸಂಘದವರು ಈ ದಿನ ರಾಷ್ಟ್ರೀಯ ಧ್ವಜವನ್ನೇರಿಸತಕ್ಕದ್ದೆಂದೂ ಒಂದು ವೇಳೆ ಏರಿಸಿದರೂ ಅನಂತರ 1 ಘಂಟೆಯ ನಂತರ ಅದನ್ನಿಳಿಸಬೇಕೆಂದೂ ವಿಶ್ವವಿದ್ಯಾಲಯದ ವೈಸ್ ಛಾನ್ಸೆಲರು ಸೂಚಿಸಿದುದಕ್ಕೆ ವಿದ್ಯಾರ್ಥಿಗಳೊಪ್ಪಲಿಲ್ಲ. ಕಳೆದ ವರ್ಷ ಈ ವಿಶ್ವವಿದ್ಯಾಲಯದ ರಜತೋತ್ಸವದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜವೇರಿಸುವ ಕುರಿತು ಕಲಹವೆದ್ದು ಕಡೆಗೆ ಪಂಡಿತ ಜವಾಹರಲಾಲರ ಮಧ್ಯಸ್ಥಿಕೆಯಿಂದ ರಾಜಿಯಾಗಿ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ದಿನ ರಾಷ್ಟ್ರೀಯ ಧ್ವಜವೇರಿಸಲು ವಿದ್ಯಾರ್ಥಿ ಸಂಘಕ್ಕೆ ಸಮ್ಮತಿಕೊಡಲ್ಪಟ್ಟಿತು. ಆ ಪ್ರಕಾರ ಈ ವರ್ಷ ವೈಸ್ ಛಾನ್ಸೆಲರು ನಡೆಯಬೇಕಾಯಿತು. ಗವರ್ನರರಿಲ್ಲದೇನೇ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಇದೇ ತಾ. 25ರಲ್ಲು ಯಥಾಪ್ರಕಾರ ಜರಗಿತು. ಅಲಹಾಬಾದ್ ಯೂನಿವರ್ಸಿಟಿಯೂನಿಯನ್ನಿನ ಕಾರ್ಯದರ್ಶಿ ಸೈಯದ್ ಸುದುಲ್ಲ ಹಾಸನರು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು.

ಹಿಟ್ಲರರಿಗೆ ಪ್ರಬಲ ವಿರೋಧ ನಾಝಿಪಕ್ಷದೊಳಗೆ ವಿದ್ರೋಹ

ಹಿಟ್ಲರರ ಧೋರಣೆಯ ಕುರಿತು ತರುಣ ನಾಝಿಗಳಲ್ಲಿಯೇ ಅತೃಪ್ತಿಯುಂಟಾಗಿರುವುದೆಂದು ತಿಳಿದುಬರುತ್ತದೆ. ಕೆಲಸಗಾರರು ವಿರೋಧಹೂಡಹತ್ತಿದ್ದಾರೆ. ಹಿಟ್ಲರರ ಬದ್ಧವಿರೋಧಿಯಾದ ಒಟ್ಟೋ ಸ್ಟ್ರಾಸ್ಸರರ ಬ್ಲೆಕ್‌ಫ್ರೆಂಚ್ ಎಂಬ ಪಕ್ಷವು ಹೆಚ್ಚೆಚ್ಚು ಜನಾದರ ಪಡೆಯುತ್ತಿದೆ. ಮ್ಯೂನಿಚಿನ ಬೀರ್ ಸೆಲ್ಲರಿನ ಒಳಸಂಚಿನ ಮೊದಲೇ ಹಿಟ್ಲರರನ್ನು ಕೊಲ್ಲಲು ಎರಡು ಒಳಸಂಚು ನಡೆದಿದ್ದಿತೆಂದು ತಿಳಿದುಬಂದಿದೆ. ಒಂದು ಒಳಸಂಚು ಕಳೆದ ಜನವರಿ ತಿಂಗಳಲ್ಲಿ ಕಂಡುಹಿಡಿಯಲ್ಪಟ್ಟು 70 ಮಂದಿ ಕೈದುಮಾಡಲ್ಪಟ್ಟಿದ್ದರು. ಆಗೋಸ್ತು ತಿಂಗಳ ಅಂತ್ಯದಲ್ಲಿ ಕಂಡುಹಿಡಿಯಲ್ಪಟ್ಟ ಇನ್ನೊಂದು ಒಳಸಂಚಿನಲ್ಲಿ ದಸ್ತಗಿರಿಯಾದ 100 ಮಂದಿಯಲ್ಲಿ ಕೆಲವರು ಹಿಟ್ಲರ್ ಯುವಕ ಸಂಘದವರು ಮತ್ತು ಜಿಸ್ಟೇಪೋ ಗುಪ್ತ ಪೋಲೀಸರೂ ಇದ್ದರು.

'ಹೊರಗಣ ವೈರಿಗಳಿಂದ ನಮ್ಮ ದೇಶಕ್ಕೆ ಗಂಡಾಂತರ ಬಂದಿರುವುದಲ್ಲ, ಹರ್ ಹಿಟ್ಲರರೇ ಅದನ್ನು ನಾಶಕ್ಕೆ ನಡಿಸುತ್ತಿದ್ದಾರೆ. ಹಿಟ್ಲರರ ವಿರೋಧವಾಗಿ ಕ್ರಾಂತಿಯೆಬ್ಬಿಸುವುದೊಂದೇ ನಮ್ಮ ಉದ್ಧಾರದ ಹಾದಿ' ಎಂದು ಹಿಟ್ಲರ್ ಯುವಕ ಸಂಘದ ಮುಖಂಡನೊಬ್ಬನು ಉದ್ಘೋಷಿಸಿರುವನೆಂದು ಸುದ್ದಿ ಉಂಟಾಗಿದೆ. ಎಲ್ಲೆಲ್ಲಿಯೂ ಜನತೆಯಲ್ಲಿ ಅತೃಪ್ತಿಯೇಳುತ್ತಿದೆ. ಜರ್ಮನ್ ಕಮ್ಯೂನಿಸ್ಟಿನ ನಾಯಕರಾಗಿದ್ದು ಈಗ ರಷ್ಯದಲ್ಲಿರುವ ಫ್ಲೋರಿನ್ ಎಂಬವರು ಜರ್ಮನಿಯ ಸಾಮ್ರಾಜ್ಯವಾದವನ್ನು ತೀವ್ರವಾಗಿ ನಿಷೇಧಿಸಿರುತ್ತಾರೆ.

ಹಿಟ್ಲರರ ವಿರೋಧಿಗಳೇನೂ ಒಕ್ಕಟ್ಟಾಗಿ ಸಂಘಟಿತವಾಗಿರುವುದಿಲ್ಲ. ಅವರು ಬೇರೆಬೇರೆ ತಂತ್ರ ಮತ್ತು ಮನೋವೃತ್ತಿಯವರಿರುತ್ತಾರೆ.

ಹಿಂದೀ ಜನತೆಯ ಮಹತ್ತಾದ ಈ ಚಳವಳವನ್ನು ಕಡೆಗಣಿಸಿ ಅದು ನಮಗೆ ಬದ್ಧವಿರೋಧದ ಹಾದಿ ಹಿಡಿಯುವಂತೆ ಮಾಡಿದರೆ ಅಷ್ಟೇ ದುಷ್ಪರಿಣಾಮವಾಗುವುದೆಂದೇ ಮಿ. ವರ್ನನ್ ಬಾರ್ಟ್ಲೆಟರ ಅಭಿಮತ.

ಹಳೆಯ ಜೀರ್ಣವಾದ ತರ್ಕಗಳನ್ನು ಮುಂದೊಡ್ಡಿ ವೈಸರಾಯರು ಮತ್ತು ಇಂಡಿಯಾ ಸೆಕ್ರೆಟರಿಗಳು, ಹಿಂದೂದೇಶ ಪರಿಸ್ಥಿತಿಯನ್ನು ಕೆಡಿಸಿಬಿಟ್ಟಿರುವರು. ಇತರರಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿರುವುದರಿಂದ ನಾವೇ ನಮಗದನ್ನು ನಿರಾಕರಿಸಿಕೊಳ್ಳುವಂತಾಗುವುದು. ಈ ನಿರಾಕರಣೆಯು ನಮ್ಮ ಪ್ರಾಮಾಣಿಕತನದ ವಿಷಯದಲ್ಲಿ ಅಮೇರಿಕದ ಯುನೈಟೆಡ್ ಸ್ಟೇಟ್ಸ್, ಸೋವಿಯೆಟ್ ರಷ್ಯ, ಜರ್ಮನಿ ಮೊದಲಾದ ರಾಷ್ಟ್ರಗಳಲ್ಲಿ ಸಂದೇಹವನ್ನುಂಟುಮಾಡುವುದು. ಪೋಲಂಡಿನ ಸ್ವಾತಂತ್ರ್ಯಕ್ಕಾಗಿ ಭೀಕರ ಯುದ್ಧಹೂಡಿರುವವರು ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ನಿರಾಕರಿಸುವರೆಂದು ಜಗತ್ತು ಅಪಹಾಸ್ಯಮಾಡುವಂತಾಗುವುದು. ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಹಿಂದಿನಂತೆಯೇ ಪ್ರಮಾದಮಾಡಬಾರದು, ಮಜೂರ ಸಂಘಗಳವರೆಲ್ಲರೂ ಈ ಕುರಿತು ತೀವ್ರ ಚಳವಳ ಹೂಡಿ. ಸರಕಾರವು ಹಿಂದೀ ಪ್ರಶ್ನೆಯನ್ನು ರಾಜಿಯಿಂದ ಇತ್ಯರ್ಥಪಡಿಸುವಂತೆ ಲೇಬರ್ ಪಕ್ಷವು ಒತ್ತಾಪಡಿಸುವ ಹಾಗೆ ಮಾಡಬೇಕೆಂದು ಪ್ರೊಫೆಸರ್ ಹೆರಾಲ್ಡ್ ಲಾಸ್ಕಿಯವರು, ಲಂಡನಿನ ಲ್ಲೊಂದು ಸಭೆಯಲ್ಲಿ ಭಾಷಣವೀಯುವಾಗ ಹೇಳಿರುವರು.

ದಕ್ಷಿಣ ಕನ್ನಡ

ಮಂಗಳೂರು

ಸ್ವ ಪ್ರಾ ತಾ 27-11-39.

ನಮ್ಮ ಉನ್ನತಿಯ ಹಾದಿ

ಈ ವಿಷಯವಾಗಿ ಅಲಹಾಬಾದಿನಿಂದ ಬಂದಿದ್ದ ಆರ್ಯ ಸಮಾಜದ ಮುಂದಾಳುಗಳಾದ ಪಂಡಿತ ಗಂಗಾಪ್ರಸಾದ ಉಪಾಧ್ಯಾಯರವರು ಕಳೆದ ತಾ. 22ರಲ್ಲಿ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಉಪನ್ಯಾಸ ಮಾಡಿದರು. ಮಾನವನು ಸದಾ ಪ್ರಗತಿಯ ಪಥದಲ್ಲಿ ಮುನ್ನಡೆಯ ಬೇಕೆಂದೂ, ಇದಕ್ಕಾಗಿ ಸದಾ ಅವನು ದುಡಿಯ ಬೇಕೆಂದೂ, ಹೀಗೆ ತಾನು ಮುನ್ನಡೆಯುವಾಗ ತನಗೆ ಒಳ್ಳೆಯದನ್ನು ಮಾಡಿಕೊಳ್ಳುವಂತೆಯೇ ಇತರರಿಗೂ ಕೂಡಾ ಒಳ್ಳೆಯದಾಗುವಂತೆ ಮಾಡುವುದು ಅವನ ಕರ್ತವ್ಯವೆಂದೂ ವಿಷಯವನ್ನು ವೇದಗಳು ಬೋಧಿಸುತ್ತವೆಯೆಂದು ಹಲವು ವೇದಗಳಿಂದ ಅನೇಕ ನಿದರ್ಶನಗಳನ್ನಿತ್ತರು.

ರಿಕ್ರೂಟಿಂಗ್ ಆಫೀಸರರು—ಸೇನೆಗೆ ಸೇರುವ ಉಮೇದ್ವಾರರನ್ನು ಸೇರಿಸಿಕೊಳ್ಳುವ ಬಗ್ಗೆ ಸರಕಾರದ ರಿಕ್ರೂಟ್‍ಮೆಂಟ್ ಆಫೀಸರರು ನಾಳೆ ದಿವಸ ಇಲ್ಲಿಗೆ ಬರುವರು. ತಾ 1ರ ವರೆಗೆ ಸೇನೆಗೆ ಉಮೇದ್ವಾರರ ಅರ್ಜಿಗಳನ್ನು ಸ್ವತಃ ಸ್ವೀಕರಿಸುವರಾಗಿ ತಿಳಿದುಬಂದಿದೆ.

ವರ್ಗವಾಗಿದೆ—ಸೈ. ಎ. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ರೆ. ಫಾ. ಟಿ. ಗೋನ್ಸಾಲ್ವಿಸ್‍ರವರು ಬೆಂಗಳೂರಿನ ಸೈ. ಜೋಸೆಫ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ವರ್ಗಾಯಿಸಲ್ಪಟ್ಟರು. ಇವರನ್ನು ಕಳೆದ ವಾರ ಸ್ಥಳೀಯ ಕಾಲೇಜಿನವರು ಸನ್ಮಾನಿಸಿ ಬೀಳ್ಕೊಟ್ಟರು.

ಶ್ರೀ ವಿ. ಎಸ್. ಕುದ್ವರಿಗೆ ಅಭಿನಂದನಾ ಪತ್ರ—ಇತ್ತೀಚೆಗೆ ಬಿ ಪಿ ಸಿ. ಕಂಪೆನಿಯ ಮೆನೇಜಿಂಗ್ ಡೈರೆಕ್ಟರಾಗಿ ಆರಿಸಲ್ಪಟ್ಟ ಶ್ರೀ. ವಿ. ಎಸ್. ಕುದ್ವರಿಗೆ ಕೊಡಗು ದೇಶದಲ್ಲಿ ಕೆಲಸ ಮಾಡುತ್ತಿರುವ ಕಂಪೆನಿ ಮತ್ತು ಅದಕ್ಕೆ ಸಂಬಂಧಿಸಿದ ಮೋಟಾರು ಕಂಪೆನಿಗಳ ಕೆಲಸಗಾರರು ತಾ-25-11-39ರಲ್ಲಿ ಮಡಿಕೇರಿಯಲ್ಲಿ ಅಭಿನಂದನ ಪತ್ರಿಕೆಯನ್ನರ್ಪಿಸಿ ಸತ್ಕರಿಸಿದರು.

ಶಿಬಿರ—ತಾ. 22-11-39ರಲ್ಲಿ ಶ್ರೀ ಯಸ್. ಅಣ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿದ ಪಂಚಾಯತ ಬೋರ್ಡ ಸಭೆಯಲ್ಲಿ ಬರುವ ವರುಷ ದಲ್ಲಿ ಆರೋಗ್ಯ ಮತ್ತು ಶಿಬಿರ ಸಪ್ತಾಹ ಜರಗಿಸುವ ನಿರ್ಣಯವಾಗಿರುವುದು.

ತಾ. 25-11-1939ರಲ್ಲಿ ಹಿಂದೂ ಶಾಲೆಯಲ್ಲಿ ಸಿವಿಲ್ ಜನರಲ್ ಟೀಚರ್ಸ್ ಎಸೋಸಿಯೇಶನಿನ ಸಭೆಯು ಶ್ರೀ. ಯಂ ಸಂಕಪ್ಪ ಹೆಗ್ಡೇರ ಅಧ್ಯಕ್ಷತೆಯಲ್ಲಿ ನೆರೆಯಿತು. ಬರುವ ಸಭೆಯು ವರ್ಷದ ವಾರ್ಷಿಕಸಭೆಯಿದ್ದು ತಾ 9-12-39ರಲ್ಲಿ ಸೆಂಟ್ರಲ್ ಶಾಲೆಯಲ್ಲಿ ಜರಗುವುದು.

೧೧ನೇ ಅಖಿಲಕರ್ನಾಟಕದ ಆಯುರ್ವೇದ ಸಮ್ಮೇಲನ—ಶಿರ್ಸಿಯಲ್ಲಿ ಕೂಡುವ ಈ ಸಮ್ಮೇಳನವು ಡಿಸೆಂಬರ ೨೮ ೨೯-೩೦ ಈಗೆ ಮೂರು ದಿನ ನಡೆಯ ಲಿದೆ. ಆ ಕಾಲದ ಬೇರೆ ಬೇರೆ ಕಾರ್ಯಕ್ರಮದ ಅಧ್ಯಕ್ಷರು ಕೆಳಗಿನಂತಿರುವರು ೧ ಸಮ್ಮೇಲನ ಮುಖ್ಯ ಅಧ್ಯಕ್ಷರು ವಿಜಾಪುರದ ಪ್ರಸಿದ್ಧ ವೈದ್ಯರೂ ಧನಪಿದ್ಯಾಂಸರೂ ಆದ ಆದ್ಯ ಅನಂತಾಚಾರ್ಯರು, ೨ ಅಹಮ್ಮದ ನಗರದ ಸುಪ್ರಸಿದ್ಧ ಆಯುರ್ವೇದ ವಿದ್ಯಾಲಯದ ಪ್ರಿನ್ಸಿಪಾಲರೂ, ಉತ್ತಮ ಸಂಶೋಧಕ ಲೇಖಕರೂ ಆದ ವೈದ್ಯ ಪಂಚಾನನ ಗಂಗಾಧರ ಶಾಸ್ತ್ರಿ ಗ. ಇವರು ಪ್ರದರ್ಶನವನ್ನು ತೆರೆಯುವರು ೩ ಮಂಗಳೂರಿನ ಪ್ರಸಿದ್ಧ ವೈದ್ಯರೂ, ಜ್ಯೋತಿಷ್ಯರೂ ಆದ ವೈದ್ಯ ಗುರು ಡಾ. ಎಸ್. ಆರ್. ಭಟ್ಟ, P. H D. ಆಯುರ್ವೇದ ಮಹೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ತಜ್ಞರ ಸಂಭಾಷಣ ಪರಿಷತ್ತು ಸೇರುವದು.

ಕೋರಿಕೆ: ಬಿಲ್ಲವರ ಚಾರಿಟಿ ಸಂಘಕ್ಕೆ ಸಹಾಯದ ಪತಿಯೊಬ್ಬ ಬಂಧು ಭಗಿನಿ ಯರೂ ಆದಷ್ಟು ಬೇಗನೆ ಮುಂದರಾಗಿ ಸಹಾಯದ ಕೆಲಸ ಹವನ್ನು ಸಾಧಿಸಬೇಕೆಂಗಿ ವಿನಂತಿ

ವೈ. ಸುಬ್ಬ.

ಬೊಂಬಾಯಿ

ಸ್ವಂತವರ್ತಮಾನದಾರರಿಂದ, ತಾ. 24 11-39.

ಪೆಂಟೇಂಗ್ಯುಲರ್ ಕ್ರಿಕೆಟ್—ಪೆಂಟೇಂಗ್ಯುಲರ್ ಕ್ರಿಕೆಟ್ ಪಂದ್ಯಾಟವು ತಾ. 15ರಲ್ಲಿ ಪ್ರಾರಂಭವಾಯಿತು ಹಿಂದು ಮತ್ತು ಯುರೋಪಿಯನ್ನರೊಳಗೆ ಪ್ರಥಮ ಪಂದ್ಯಾಟವು ಜರಗಿತು. ಮೊದಲನೆಯ ಆಟದಲ್ಲಿ ಯುರೋಪಿಯನ್ನರಿಗೆ 168 ಹಿಂದುಗಳಿಗೆ 591 ವಿಕೆಟ್ ಪುಟ್‍ಕಂಟ್ 192, ವಿಜಯ ಮಂಕಟ್ 133. ಸಿ. ಕೆ. ನ್ಯಾಡುರವರ ನೇತೃತ್ವದಲ್ಲಿ ಹಿಂದುಗಳು ಬಹಳ ಚೆನ್ನಾಗಿ ಆಡಿರುವರು. ಯುರೋಪಿಯನ್ನರಿಗೆ ಎರಡನೆಯ ಆಟದಲ್ಲಿ ಬರೇ 106ರನ್ನುಗಳು. ಹೀಗೆ ಹಿಂದುಗಳು ಯುರೋಪಿಯನ್ನರನ್ನು ಬಹು ಸುಲಭದಲ್ಲಿ ಸೋಲಿಸಿದರು.

ಎರಡನೆಯ ಪಂದ್ಯಾಟ ಮುಸ್ಲಿಮರಿಗೆ ಮತ್ತು ರೆಸ್ಟಿಗೆ. ಮೊದಲನೆಯ ಆಟದಲ್ಲಿ ರೆಸ್ಟಿಗೆ 153, ಮುಸ್ಲಿಮರಿಗ 290. ಎರಡನೆಯ ಆಟದಲ್ಲಿ ರೆಸ್ಟಿಗೆ 126 ಹೀಗೆ ಮುಸ್ಲಿಮರು ರೆಸ್ಟಿನಿಂದ ಒಂದು ಆಟದಲ್ಲೇ ಗೆದ್ದರು. ಮೂರನೆಯ ಪಂದ್ಯಾಟವು ಹಿಂದು ಮತ್ತು ಪಾರ್ಶಿಗಳೊಳಗೆ ಇದು ಅತ್ಯಂತ ವಿಶೇಷತರದ್ದು. ಪಾರ್ಶಿಗಳಿಗೆ ಒಂದನೆಯ ಆಟದಲ್ಲಿ 220 ಹಿಂದುಗಳಿಗೆ 320. ಮೊದಲನೆಯ ಆಟದಲ್ಲಿ ಹಿಂದುಗಳ ಅವಸ್ಥೆಯು ಬಹಳ ಹೀನಸ್ಥಿತಿಯಲ್ಲಿರಲು ಸಿ. ಯಸ್. ನಾಯುಡು ಮತ್ತು ಬೆನರ್ಜಿಯವರು ಜೊತೆಯಲ್ಲಿ 182 ರನ್ನು ತೆಗೆದು, ಒಟ್ಟಿಗೆ 320 ಮಾಡಿ ಹಿಂದುಗಳ ಮರ್ಯಾದೆ ಉಳಿಸಿದರು. ಸಿ. ಯಸ್. ನಾಯುಡು 126 ರನ್ನುಗಳೂ ಎರಡನೆಯ ಆಟದಲ್ಲಿ ಪಾರ್ಶಿಗಳಿಗೆ 283 (8 ವಿಕೆಟು) ಹಿಂದುಗಳು 7 ವಿಕೆಟಿನ ಳಗೆ ಪಾರ್ಶಿಗಳನ್ನು ಸೋಲಿಸಿದರು ಫೈನಲ್ ಪಂದ್ಯಾಟವು ಹಿಂದು ಮತ್ತು ಮುಸ್ಲಿಮ್ ಟೀಮುಗಳೊಳಗೆ ನಡೆಯಿತು. ಮುಸ್ಲಿಮರಿಗೆ ಮೊದಲನೆ ಆಟದಲ್ಲಿ 199, ಹಿಂದುಗಳಿಗೆ 159 ಎರಡನೇ ಆಟದಲ್ಲಿ ಮುಸ್ಲಿಮರಿಗೆ 180 ಸಿಕ್ಕಿ ಹಿಂದುಗಳು 5 ವಿಕೆಟುಗಳೊಳಗೆ ಮುಸ್ಲಿಮರನ್ನು ಸೋಲಿಸಿರುವರು

ದಿ ಬಾಕರ್ಬರು ಬಿಲ್ಲವರ ಚಾರಿಟಿ ಸಂಘ, ಮುಂಬಾಯಿ—ಈ ಸಂಘದ 22 ನೇ ವಾರ್ಷಿಕ ಮಹಾಸಭಾರಂಭತ್ಸವ ತಾರೀಕು 19 11 39ರಲ್ಲಿ ಸರ್ ಕಾವಾಸ್ಜಿ ಜಹಂಗೀರ್ ಹೋಲಿನಲ್ಲಿ ಶ್ರೀಯುತ ಜೋಕಿಮ್ ಆಳ್ವ, ಬಿ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಸುಮಾರು 2000 ಜಾತಿ, ಪರಜಾತಿ ಜನರು ನೆರೆದಿದ್ದರು ವ್ಯಾಪಾರು ಸರಕಾರದ ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲ್, ಶ್ರೀಗೋಪಾಲ ಎನ್ ಕಾಳಪ್ಪ ಐತ್ತಾಳ, ಬಿ. ಎ., ಕೆ. ಎಮ್. ಉಡ್ಯಾವರ್, ಎಂ ಎ. ರಾಜ್ ಬಹದ್ದೂರ್, ಎಸ್. ಗಿರಿಯಪ್ಪ, ಬಿ ಎ., ಮೊದಲಾದವರಿಂದಲೂ ಹಲವು ಶಾಲೆ, ಸಂಘಗಳಿಂದಲೂ ಬಂದ ಸಂದೇಶಗಳನ್ನು ಓದಲಾಯಿತು

ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್. ಎಮ್. ಉದ್ಯಾವರರವರು, ಅಧ್ಯಕ್ಷರನ್ನು ಸ್ವಾಗತೀಕರಿಸಿದ ನಂತರ ಶ್ರೀಗಳಾದ ಭಕ್ತ ನಂದ ಸುವರ್ಣ, ತೌಡಪ್ಪ ಕೆ. ಅಮೀನ್, ಎಫ್. ಎಂ ಪಿಂಟ್ಟೊ, ಎ. ಎಸ್. ಉದ್ಯಾವರ ಗೋಳೀ, ಯು ಕೆ ರಂಗಪ್ಪ ಸುಬ್ಬ ಇವರು ಸಂಘದ ಶ್ರೇಯೋಭಿವೃದ್ಧಿಯಿಂದಲೂ, ಅಂತೂ ಸಮಾಜದ ಎಲ್ಲಾ ಸಂಘಗಳೂ ಒಟ್ಟಾಗುವ ದೃಷ್ಟಿಯಿಂದಲೂ ಮಾತನಾಡಿದರು. ಶ್ರೀಯುತ ಪ್ಲೆಜೆಟ್ ಆಳ್ವ, ಎಮ್. ಎ. ಎಲ್. ಎಲ್. ಬಿ. ಯವರು ಇಂಸ್ಟಿಟ್ಯೂಷನ್ ಸಂಘವನ್ನು ಶ್ಲಾಘಿಸಿ ಮಾತನಾಡಿದರು ಬಳಿಕ ಅಧ್ಯಕ್ಷರು ತಮ್ಮ ವರ ಸಂಘಶಕ್ತಿ, ಶಾರೀರಿಕ ಶಕ್ತಿ, ಬಿಲ್ಲವ ಸಂಘಗಳ ಸಂಘಟನೆ ಮೊದಲಾದವುಗಳ ಕುರಿತು ಸುರಸ ಭಾಷಣವಿತ್ತರು. ಬಳಿಕ ಸಂಘದ ಅಧ್ಯಕ್ಷರಾದ ಶ್ರೀ ಪಿ. ಕೆ. ಸುವರ್ಣರವರು, ಅಧ್ಯಕ್ಷರಿಗೂ, ಸಭಿಕರಿಗೂ ಧನ್ಯವಾದವನ್ನರ್ಪಿಸಿದರು. ಕೊನೆಗೆ ಶ್ರೀ ದೇವು ಸಾಲ್ಯಾನರಿಂದ ಬರೆಯಲ್ಪಟ್ಟ 'ಲಗ್ನಬಂಧನ' ಎಂಬ ಹಿಂದೂ ಜೀವ ನಾಟಕವೂ, ಶ್ರೀ. ಸರಸ್ವತಿ ಸಂಗೀತ ವಿದ್ಯಾಲಯದ ನೃತ್ಯವೂ ನಡೆಯಿತು

ಬಿಲ್ಲವ ಸಮಾಜದ ಸೇವೆಯನ್ನು ಅವಿಶ್ರಾಂತವಾಗಿ ಮಾಡಿಕೊಂಡು ಬರುತ್ತಿರುವ ದಿ ಬಾ

(ಎನೇ ಕಾಲಮಿನ ಬುಡ ನೋಡಿರಿ.)

ಪಂಡಿತ ನೆಹರುಗಳಿಗೆ ಬ್ರಿಟನು ಅಭಾರಿಯಿರಬೇಕು.

ಇಂಗ್ಲೆಂಡಿಗೆ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಉತ್ತರ.

ಕೆನಡ ಮತ್ತು ಐಗುಪ್ತಗಳ ಪಾಠ.

ಕಾಂಗ್ರೆಸಿನ ಕೇಳಿಕೆಯು ಅನ್ಯಾಯವಾದುದೇನೂ ಅಲ್ಲ. ಇಂಗ್ಲೆಂಡಿನಲ್ಲಿ ಹಲವರು ಕೇಳುತ್ತಿರುವುದನ್ನೇ ಅವರು ಕೇಳುತ್ತಿದ್ದಾರೆ. ತನ್ನ ಸ್ವಾರ್ಥದ ರಕ್ಷಣೆಗಾಗಿ ಮಾತ್ರ ಇಂಗ್ಲೆಂಡು ಇಷ್ಟೊಂದು ಪ್ರಚಂಡ ಹಾಗೂ ಲೋಕವ್ಯಾಪಿ ಯುದ್ಧ ಹೂಡಿರುವುದೇ? ಅಥವಾ ವಿಜಯಪ್ರಾಪ್ತಿಯಾದ ವೇಳೆ ಮಾನವಕೋಟಿಯು ಇನ್ನೊಮ್ಮೆ ಇಂತಹ ಭೀಷಣ ಅನಾಹುತಕ್ಕೊಳಗಾಗದಂತೆ ಲೋಕದಲ್ಲಿ ನವನಿರ್ಮಾಣವನ್ನುಂಟುಮಾಡುವ ಉದ್ದೇಶವೇನಾದರೂ ಅದಕ್ಕಿದೆಯೇ? ವ್ಯಾಪಕವಾದ ಈ ಪ್ರಶ್ನೆಯನ್ನಿದಿರಿಸುವಂತೆ ಮಾಡಿದುದಕ್ಕಾಗಿ ನಾವು ಪಂಡಿತ ನೆಹರುಗಳಿಗೆ ಆಭಾರಿಯಾಗಿರಲು ಕಾರಣಗಳುಂಟು. ತಾನು ಸುರಕ್ಷಿತವಾಗಿರುವುದಕ್ಕಾಗಿ ಇಂಗ್ಲೆಂಡು ಯುದ್ಧವನ್ನಾರಂಭಿಸಿರಬಹುದು. ಆದರೆ ಒಮ್ಮೊಮ್ಮೆ ಯುದ್ಧದಲ್ಲಿ ನಿರತವಾಗಿ ಪಡೆಯುವ ಸಶಸ್ತ್ರ ವಿಜಯವನ್ನದು ಲೋಕದ ರಾಷ್ಟ್ರಗಳಲ್ಲಿ ವಿಚಾರ ಮತ್ತು ವಿವೇಕದ ವಿಜಯವನ್ನು ಸ್ಥಾಪಿಸಲು ಉಪಯೋಗಿಸುವ ನಿರ್ಧಾರವುಳ್ಳದಾಗಬೇಕು. ಜವಾಹರಲಾಲರು ಯುದ್ಧದ ಈ ಉದಾತ್ತ ಉದ್ದೇಶದ ಕಡೆಗೆ ನಮ್ಮ ಪಕ್ಷವನ್ನೆಳೆದಿರುತ್ತಾರೆ.

ಇಂಗ್ಲೆಂಡ್ ತನ್ನ ಸಾಮ್ರಾಜ್ಯ ಸ್ವಾರ್ಥವನ್ನು ತೊರೆದಲ್ಲದೇ ಬಿಟ್ಟು ಬಿಟ್ಟಿದೆಯೆಂದು ಅವರ ಅಧಿಕಾರಿಗಳೇ ಹೇಳಿದ್ದಾರೆ. ಅದು ತನ್ನಾಧೀನದ ಇತರ ವಸಾಹತುಗಳಿಗೆ ಸ್ವಾತಂತ್ರ್ಯವಿತ್ತು ಸಮಾನ ಸ್ಥಾನ ಮಾನವಿತ್ತಿದೆ. ಆ ದಾರಿಯೇ ಯುಕ್ತವಾದುದೆಂಬುದು ಈಗ ಅನುಭವ ಸಿದ್ಧವಾಗಿದೆ. ಸಂಪೂರ್ಣ ಸ್ವತಂತ್ರ ರಾಜ್ಯಭಾರವೇ ಯುವುದೇ ದಂಗೆಗಳನ್ನು ನಿವಾರಿಸುವ ಉತ್ತಮೋಪಾಯವೆಂದು. ಕೆನಡಾ ದೇಶದ ಸಂಬಂಧವಾಗಿ ಲಾರ್ಡ್ ಡರ್ಹಮ್ ಹೇಳಿದುದು ಎಷ್ಟು ನಿಜ! ಈಗ ಒಂದು ಶತಮಾನವಾಯಿತು. ಕೇವಲ 10 ವರ್ಷಗಳ ಮೊದಲು ಸರ್ ಆಸ್ಟಿನ್ ಚೇಂಬರ್ಲೇನರು, ಐಗುಪ್ತದ ಪ್ರಧಾನ ಮಂತ್ರಿಗಳೊಡನೆ, ದೇನರು ಇಂಗ್ಲೆಂಡಿಗೆ ಕೊಟ್ಟಿರುವ ಐಗುಪ್ತದ ರಕ್ಷಣೆಯ ಜವಾಬ್ದಾರಿಯನ್ನು ಬಿಟ್ಟುಕೊಡಲು ಸಿದ್ಧವಿಲ್ಲೆಂದು ಹೇಳಿದ್ದರು. ಆದರೆ ಇಂದೀಗ ಐಗುಪ್ತ ಸ್ವತಂತ್ರವಾಗಿ ಇಂಗ್ಲೆಂಡಿನೊಡನೆ ಅತ್ಯಂತ ಪ್ರೀತಿ ಭಾವದಿಂದಿರುವುದು.

ಎಲ್ಲಾ ರಾಷ್ಟ್ರಗಳೂ ಸ್ವತಂತ್ರವಾಗಿ ಸರಿಸಮಾನತೆಯಿಂದ ಒಂದುಗೂಡಿ ನಡೆಯುವ ಏರ್ಪಾಡು ಮಾಡುವುದೇ ಬ್ರಿಟಿಷ್ ಸರಕಾರದ ಧೋರಣೆ. ಆ ಧ್ಯೇಯಕ್ಕಾಗಿಯೇ ಅದು ಹೋರಾಡುತ್ತಿರುವದೆಂಬ ಕುರಿತು ಯಥಾರ್ಥ ಆಶ್ವಾಸನೆಯನ್ನು ಹಿಂದೂದೇಶಕ್ಕೀಗ ಕೊಡಬೇಕು. ವಾಸ್ತವ ವಿಷಯವಿದು. ಆದರೆ ಅದನ್ನು ವ್ಯಕ್ತಗೊಳಿಸಬೇಕು. ಬ್ರಿಟಿಷ್ ಸರಕಾರವು ಈಗ ರಾಜಕೀಯ ವಿವೇಕ ಮತ್ತು ನ್ಯಾಯ ದೃಷ್ಟಿಯಿಂದ ನಿರ್ಧಾರ ಪೂರ್ವಕವಾಗಿ ನಡೆಯಬೇಕು. ಸಂಕುಚಿತ ಬುದ್ಧಿಯ ಜಾಗರೂಕತೆಗೆ ಇದು ಸಮಯವಲ್ಲ. "ಇತರರ ಸಂಪದಭಿವೃದ್ಧಿಯೇ ನಮ್ಮ ಬಲ, ಅವರ ತೃಪ್ತಿ ಸಮಾಧಾನವೇ ನಮ್ಮ ಭದ್ರತೆ, ಅವರ ಕೃತಜ್ಞತೆಯಲ್ಲಿ ನಮ್ಮ ಉತ್ತಮ ಪ್ರತಿಫಲ" ಎಂದು ಎಕ್ಸೋರಿಯ ಮಹಾರಾಣಿಯವರು ಇನ್ನೊಂದು ಕಾಲಂ ತೆರದ ಹಿಂದೀಯರಿಗಿತ್ತಿರುವ ಸಂದೇಶವು ಇಂದು ಸ್ಮರಣೀಯವಾಗಿದೆ.

ನಮಗೆ ಹಿಡಿದುಕೊಳ್ಳಲಾಗದ ಸ್ಥಾನವನ್ನು ಬಿಟ್ಟುಕೊಡಬೇಕೋ ಬೇಡವೋ? ಸ್ವಾತಂತ್ರ್ಯವನ್ನೀಯುವುದರಿಂದ ಹಿಂದೀ ಜನತೆಯ ಸ್ನೇಹಪೂರ್ಣ ಸಹಕಾರವು ದೊರೆಯುವಂತಿರುವಾಗ ಅದನ್ನು ಕೊಡಬೇಕೋ ಬೇಡವೋ ಎಂಬುದೀಗ ಪ್ರಶ್ನೆ. ಎಲ್ಲಾ ರಾಷ್ಟ್ರಗಳ ಸ್ವಾತಂತ್ರ್ಯದ ಆಧಾರದಿಂದ ನವೀನ ಅಂತರರಾಷ್ಟ್ರೀಯ ವ್ಯವಸ್ಥೆಯನ್ನುಂಟುಮಾಡುವುದೇ ಇಂಗ್ಲೆಂಡಿನ ಯುದ್ಧದ ಒಂದು ಉದ್ದೇಶ. ಈ ಉದ್ದೇಶವನ್ನು ಹಿಂದೂದೇಶದಲ್ಲಿ ಜ್ಯಾರಿಗೆ ತರುವಾಗ ಅದರ ರಕ್ಷಣೆ ಮತ್ತು ಆಂತರಿಕ ಕಲಹಗಳನ್ನು ಗಮನಿಸಿಕೊಳ್ಳಬಹುದು. ಬ್ರಿಟಿಷರ ಉದ್ದೇಶವು ಯಥಾರ್ಥವಾದುದೆಂಬುದು ಹಿಂದೀಯರಿಗೆ ಖಚಿತವಾದರೆ ಅವರು ಸೌಹಾರ್ದದಿಂದ ಸಹಕರಿಸದಿರಲಾರರು.

(೯ನೇ ಪುಟ ನೋಡಿರಿ)

ನೋಟೀಸು.

ಉಡುಪಿ ಡಿ ಮು ಕೋರ್ಟಿನಲ್ಲಿ

O. P. No 17/39

ಪದ್ಮನಾಭ ಭಟ್ಟ ಪುಟ್ಟಣ್ಣ ಭಟ್ಟ ಮಗ, ಹಟ್ಟಿಯಂಗಡಿ ಕಸಬು ಅರ್ಜಿದಾರ—

ಮತ್ತು

ಲಕ್ಷ್ಮಿ ಅಮ್ಮ, ಮೃತರಾದ ಪುಟ್ಟಣ್ಣ ಭಟ್ಟ ಮಗಳು 51 Gangadhareshwara Swami, Koil street, Vepery, Madras— ಎಂಬಲ್ಲಿರುವವಳು. ಎದ್ರಿ—

ಸದರಿ ಎದ್ರಿಳು ವ ಸಮಸ್ತ ಜನರಿಗೆ ತಿಳಿಸುವ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರನ ತಂದೆ ಕಾಯ ಮೃತನಾಗ್ವೆದವನ್ನ ಸ್ವೀದವನ ಹಕ್ಕಿನ ಬಾಬ್ತು ದಿ ಕೆನರಾ ಬೆನಿಫಿಟ್ ಲಿಮಿಟೆಡ್ ಮಂಗಳೂರು ಈ ಬ್ಯಾಂಕಿನಲ್ಲಿ ಇರುವ ಶೇರು 1ರ ರೂಪಾಯಿ 15/— ಬೆಲೆ ಬಾಳುವ Share Certificate Nos. 153 ಮತ್ತು 459ನೇ ಒಟ್ಟು 2ಶೇರುಗಳನ್ನು ನನ ಇದುಗಳಿಗೆ ಹಕ್ಕುದಾರಳಾದ ಸದರಿ ನಾಗ್ವೇಸ ಅವ್ವಗೆ ಎದ್ರಿಳು ಕೂಡ ನಾಲ್ಕು ಜನ ಹೆಣ್ಣು ಮಕ್ಕಳ ಪೈಕಿ ಎದ್ರಿಳು ಹೊರತು ಶಿಕ್ಕ ಮೂವರು ಹೆಣ್ಣು ಮಕ್ಕಳಾದ ಸರಸ್ವತಿ ಅಮ್ಮ, ಭಾಗೀರಥಿ ಅಮ್ಮ ಮತ್ತು ರುಕ್ಮಿಣಿ ಅಮ್ಮ ಸಹಾ ತಮಗೆ ಸದರಿ ಶೇರುಗಳಲ್ಲಿರುವ 3/4 ನೇ ಅಂಶದ ಹಕ್ಕನ್ನು ಅರ್ಜಿದಾರನಿಗೆ ತಾರೀಕು 17 9 39ರಲ್ಲು ನ್ಯಾಯವಾದ ಪ್ರತಿಫಲಕ್ಕೆ ಟ್ರಾನ್ಸ್ಫರ್ ಮಾಡಿಕೊಟ್ಟ ಪ್ರಯುಕ್ತ ದರಿಂದ ಶೇರುಗಳಲ್ಲಿ ರತಕ್ಕ 3/4ನೇ ಅಂಶದ ಹಕ್ಕನ್ನು ಪಡೆಯುವರೆ ಹಕ್ಕುದಾರನಾದ ತನಗೆ ಒಂದು ಸಾಕ್ಷೀಸು ಸರ್ಟಿಫಿಕೇಟನ್ನು ಕೊಡಿಸಬೇಕಾಗಿ ವಗೈರೆ ಅರ್ಜಿದಾರನು ಮಾಡಿಕೊಂಡ ಪ್ರಕಾರ ಮೇಲ್ಕಂಡ ಅರ್ಜಿಯು ತಾರೀಕು 6-12 1939ಕ್ಕೆ ತನ್ನಗೆ ಇಟ್ಟಿರುವದರಿಂದ ಆ ದಿವಸ ಸದರಿ ಅರ್ಜಿ ಕುರಿತು ಏನಾದ್ರೂ ಆಕ್ಷೇಪಣೆಯಿದ್ದರೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಣೆ ಮಾಡಿಕೊಳ್ಳಬಹುದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು

ಕೋರ್ಟಿನ ಹುಕುಂ ಪ್ರಕಾರ

Udupi Dated 28 11-1939 } K Ramakrishna Rao, Vakil for Petitioner.

ಈ ವಾರದ ಭವಿಷ್ಯ

ತಾ. 30-11-1939ರಿಂದ - - - ತಾ. 7-12-1939ರ ವರೆಗೆ

ಮೇಷ—"ಕ್ಲೇಶಲಬ್ಧ ಮಧಿಕಾದರದಂ ತು" ಎಂಬು ಶ್ರೀಹರ್ಷಕವಿಯು ಹೇಳಿದಂತೆ ಯಾರಿಗಾದರೂ ಸರಿಯೇ ತಾನು ಕಷ್ಟಪಟ್ಟು ದುಡಿದುದರಲ್ಲಿ ತುಂಬಾ ಆಶೆಯಿರುವುದು, ಹಿಂಯರು ಮಾಡಿಟ್ಟುದರಲ್ಲಾ ಶರರ ಒಡವೆಯಲ್ಲೂ ಅನಾದರವು ಸ್ವಾಭಾವಿಕವಾದುದು. ಈಗಲೀಗ ನೀವು ಕಷ್ಟಪಟ್ಟು ದುಡಿಯುತ್ತಲಿರುವಿರಿ. ಖರ್ಚುಗಳು ವಿಪರೀತವಾಗಿದ್ದರೂ ಸ್ವಾರ್ಜಿತವಾದ ಪ್ರಯಲ್ಪ ಸ್ವಲ್ಪವಟ್ಟಿಗಾದರೂ ಉಳಿತಾಯಮಾಡುವಿರಿ. ಗೃಹಸೌಖ್ಯವು ಚೆನ್ನಾಗಿರುವುದು. ದೈಹಿಕಸುಖವು ಚೆನ್ನಾಗಿರದು. ಸ್ವಸ್ತ್ರೀಯಳು ಸದಾ ಕಲಹಪ್ರಿಯಳಾಗುವಳು. ತಾ. 1ರಿಂದ 4ರ ವರೆಗೆ ಪ್ರವಾಸ ನಿಮಿತ್ತ ಕಷ್ಟನಷ್ಟಗಳೊದಗುವವು.

ವೃಷಭ—ಯಾರೇನೆಂದರೂ ನಿಮ್ಮ ಮನಸ್ಸಿನ ಚಿಂತೆ ದೂರಾಗದು. ಉದ್ಯೋಗಿಗಳ ಪರಿಸ್ಥಿತಿಯು ಬಹಳ ಕಷ್ಟಕ್ಕೆ ಬರುವುದು. ಹಾಸಿಗೆಯಿದ್ದಷ್ಟು ಕಾಲು ನೀಡಬೇಕೆಂಬ ನಾಣ್ಣುಡಿಯನ್ನು ಸದಾ ನೆನಪಿನಲ್ಲಿಡಿರಿ. ಪ್ರತಿಸ್ಪರ್ಧಿಗಳ ಉಪಟಳವು ಹೆಚ್ಚುತ್ತಾ ಬರುವುದು. ಅಂತೂ ಸಮುದ್ರದ ಅಲೆಗಳಂತೆ ಒಂದರಹಿಂದೊಂದೆಂಬಂತೆ ಆಪತ್ತುಗಳು ನಿಮ್ಮ ಬೆನ್ನಟ್ಟುತ್ತಾ ಬರುವವು. ಸ್ವದೇಹಪೀಡಾನಿವೃತ್ತಿಯ ಸಲುವಾಗಿ ಹೆಚ್ಚಿನಂಶ ಹಣ ವ್ಯಯಿಸಬೇಕಾಗುತ್ತದೆ. ತಾ. 1-2-7 ಈ ದಿನಗಳಲ್ಲಿ ದುಡಿತಕ್ಕೆ ತಕ್ಕ ಫಲಪ್ರಾಪ್ತಿಯೂ ತಾತ್ಕಾಲಿಕ ಸುಖವೂ ದೊರೆಯುವದು.

ಮಿಥುನ—ನಿಮ್ಮ ಅದೃಷ್ಟವು ತಕ್ಕಮಟ್ಟಿಗೆ ಉತ್ತಮವಾಗಿದೆಯೆನ್ನಬೇಕು. ಎಲ್ಲಾ ವಿಚಾರಗಳಲ್ಲಿ ಈ ವಾರವು ಚೆನ್ನಾಗಿದೆ. ಮನಃಸಂಕಲ್ಪವು ಅನ್ಯಥಾ ಆಗಲಾರದು. ಕಾರ್ಯದಲ್ಲಿ ಜಯ, ಆರ್ಥಿಕ ಸುಧಾರಣೆ ಮತ್ತು ಸತ್ಸಂಗ ಇವುಗಳ ಲಾಭವಾಗುವದು. ಆದರೂ ಸ್ತ್ರೀಮೂಲಕವಾಗಿ ಕಲಹ ಖರ್ಚುಗಳು ಪ್ರಾಪ್ತವಾಗಲಿವೆ. ಸಾಯುವ ಕಾಲ ತಪ್ಪಿದರೂ ನೋಯುವ ಕಾಲ ತಪ್ಪದೆಂಬಂತೆ ಆಕಸ್ಮಿಕ ಅಪಘಾತಾದಿಗಳಿಂದ ಗಾಯಾದಿಗಳಾಗುವವು. ತಾ. 1, 2, 5, 6, 7, ಈ ದಿನಗಳಲ್ಲಿ ಹೆಚ್ಚಿನಂಶ ಜಾಗರೂಕರಾಗಿರಿ.

ಕರ್ಕಾಟಕ—ನಿಮ್ಮ ಭಾಗ್ಯದಲ್ಲಿ ಸುರಗುರು ಗುರುಗಳಿರುವುವಾದರೂ ವೇಧದೋಷದಿಂದಾಗಿ ಶುಭವನ್ನು ಮಾಡಲು ಅವರಿಗೆ ಶಕ್ತಿಯಿಲ್ಲವಾಗಿದೆ. ಇತರ ಗ್ರಹರಾರೂ ನಿಮ್ಮನ್ನು ಆದರಿಸುವಂತಿಲ್ಲ. ಆಂದಮೇಲೆ ದೈವಬಲವೇ ಶೂನ್ಯವಾಗಿರತಕ್ಕ ನಿಮಗೆ ಯಾರಿಂದೇನು ಮಾಡಲಾದೀತು. ಸದ್ಯದ ನಿಮ್ಮ ಮನೋವೃತ್ತಿಗೆ ಸಜ್ಜನರಲ್ಲೂ ಕೆಟ್ಟ ಪ್ರತೀಕಾರಬುದ್ಧಿ ಹುಟ್ಟುವುದು. ಉದ್ಯೋಗ ವ್ಯಾಪಾರಾದಿಗಳಲ್ಲಿ ನಷ್ಟವೇ ವಿಶೇಷವಾಗುವುದು. ಹಗೆಯವರ ಕುತಂತ್ರದಿಂದ ನಿಮ್ಮ ಕಾರ್ಯವೊಂದೂ ಸಾಗದಾಗುವುದು. ಜನನಿಂದೆಗೆ ಪಾತ್ರರಾಗುವಿರಿ. ತಾರೀಕು 30, 3, 4, 7 ಬಹಳ ಅನಿಷ್ಟ.

ಸಿಂಹ—ಅನಾವಶ್ಯಕಗಳಾದ ಖರ್ಚುಗಳಿಗೆಲ್ಲಾ ನೀವು ಹವರುಮನೆಯಾಗಿರುವಿರೆಂಬುದ ತಪ್ಪಾಗದು. ನಿಮ್ಮ ಆರೋಗ್ಯದ ಪರಿಸ್ಥಿತಿಯು ಬಹಳ ಭಯಂಕರ ಸ್ಥಿತಿಗೆ ಬರುವುದು. ಹಿಡಿದ ಕಾರ್ಯದಲ್ಲಿ ವಿಜಯವು ಇಲ್ಲವೆಂದೇ ಹೇಳಬಹುದು. ಬಂಧುಮಿತ್ರರ ಸಹಾಯವು ಬಹುವಾಗಿರುವುದರಿಂದ ಮಿತವ್ಯಯಿಗಳಿಗೆ ಆರ್ಥಿಕ ಅಡಚಣೆಯು ಪೀಡಿಸದು. ಗ್ರಹಚ್ಛಿದ್ರಗಳಿಂದಾಗಿ ಮನೆಯಲ್ಲಿ ನಿತ್ಯ ಕಲಹ ತಪ್ಪದು. ಪ್ರವಾಸಕ್ಕೆ ಈ ಕಾಲವು ಸರ್ವಥಾ ಉಚಿತವಲ್ಲ. ತಾ. 1, 2, 4, 5 ಈ ದಿನಗಳನ್ನು ಜಾಗರೂಕತೆಯಿಂದ ಕಳೆಯಿರಿ.

ಕನ್ಯಾ—ಬಹ್ವಂಶ ನಿಮಗೆ ಗ್ರಹರು ಅನುಕೂಲರಾಗಿದ್ದರೂ, ರಾಮೇಶ್ವರಕ್ಕೆ ಹೋದರೂ ಶನೈಶ್ಚರನು ಬಿಡನೆಂದಂತೆ ಶನೈಶ್ಚರನ ಪೀಡೆಯೇನು ಕಡಿಮೆಯಾಗಿಲ್ಲವು. ನೀವು ನಿರೋಗಿಗಳಾಗಿಯೂ ನಿಶ್ಚಿಂತರಾಗಿಯೂ ಇರುವಿರೆಂದಿದ್ದರೂ ಧಕ್ಕನೆ ದೇಹಪೀಡೆ ವಾ ಪತ್ನೀಪುತ್ರರೊಡನೆ ಜಗಳ ಇತ್ಯಾದಿಗಳು ತಲೆದೋರುವವು. ವ್ಯಾಪಾರದಲ್ಲಿ ಪ್ರಮಾದದಿಂದಾಗಿ ಅಲ್ಪಸ್ವಲ್ಪ ಮಟ್ಟಿನ ನಷ್ಟ ಸಂಭವಿಸೀತು. ಆದರೂ ಅಧಿಕಭಾಗವು ಉತ್ತಮವಾಗಿಯೇ ಇರುವುದು ವಿಪತ್ಕಾಲದಲ್ಲಿ ನೀವು ಅಜಾತಶತ್ರುಗಳೆಂದು ಪರಿಹೋಗುವುದು: ತಾ. 30, 1, 2, 5, 6 ಅತ್ಯುತ್ತಮ.

ತುಲಾ—ಮನಸ್ಸಿನ ಚಾಂಚಲ್ಯಕ್ಕೆ ದೈಹಿಕ ಶಕ್ತ್ಯಭಾವವೂ ಒಂದು ಮುಖ್ಯ ಕಾರಣವಾಗುವುದು. ಪ್ರಕೃತ ನಿಮ್ಮ ಸ್ಥಿರತೆಕ್ಕೆ ಸಂಶಯಬುದ್ಧಿಗೆ ನಿಮ್ಮ ಶರೀರದ ಅನಾರೋಗ್ಯವೇ ಕಾರಣವಾಗಿದೆ. ಇದಕ್ಕೆ ಶತ್ರುಜನಕೃತ ಅಪಮಾನದಿಂದುಂಟಾದ ಶೋಕವು ಮುಖ್ಯ ಕಾರಣವೆನ್ನಬಹುದು. ಅಶಾಂತ ಸಂಶಯಚಿತ್ತರಾಗಿ ಯಾವ ಕಾರ್ಯವನ್ನೂ ಮಾಡದೆ ಉದಾಸೀನರಾಗುವ ಕಾಲಬಂದಿದೆ. ಮಕ್ಕಳು ಮರಿಗಳ ಅನಾರೋಗ್ಯದಿಂದಾಗಿ ಸಂಸಾರದಲ್ಲಿ ಕಷ್ಟ ವಿಧಿಕವಾಗುವುದು. ಆರ್ಥಿಕ ಅಡಚಣೆಗೆ ಸಿಲುಕಲಾರಿರೆನ್ನಬಹುದು. ತಾ. 1ರಿಂದ 4ರ ವರೆಗೆ ಇದ್ದುದರಲ್ಲುತ್ತಮ

ವೃಶ್ಚಿಕ—ಹುಟ್ಟು ಬಡವನಾಗಿದ್ದವನು ದಿನಗಳೆಯಲ್ಪಡುತ್ತಂತಲೂ ಮಧ್ಯಕಾಲದಲ್ಲಿ ಪ್ರಾಪ್ತವಾದ ಬಡತನವನ್ನು ಅನುಭವಿಸುವುದು ಹೇಗೆ ಅತ್ಯಂತ ಕಷ್ಟವಾಗುವುದೋ ಅಂತೆಯೇ ಕೆಲಸಮಯದಿಂದ ನಿಶ್ಚಿಂತರಾಗಿ ಸುಖದಿಂದ ಕಾಲಕಳೆಯುತ್ತಿದ್ದ ನಿಮಗೆ ಈಗ ಪ್ರಾಪ್ತವಾದ ಈ ಚಿಕ್ಕ ಕಷ್ಟವೂ ಅಸಹನೀಯವಾಗಿ ತೋರುವುದು. ಆರೋಗ್ಯವೂ ಚೆನ್ನಾಗಿ ಇರುವ ಚಿಹ್ನೆಗಳಿಲ್ಲ. ದಿನದಿಂದ ದಿನಕ್ಕೆ ಮಿತ್ರವೃಂದವು ಹ್ರಾಸವಾಗುತ್ತಾ ಬಂದು ಶತ್ರುವೃಂದವು ವೃದ್ಧಿಯನ್ನೈದುವದು. ಕಾಲ್ನಡಿಗೆಯಿಂದಲೇ ಕೆಲ ದೂರ ಹೋಗ ಬೇಕಾಗಿಯೂ ಬರುವುದು. ಆಯವ್ಯಯಗಳು ಸಮವಾಗಿರುವವು. ಗೃಹಸುಖವು ತಕ್ಕಮಟ್ಟಿಗಿರುವುದು. ತಾ. 30. 1. 2. 7 ಕಷ್ಟವಧಿಕ

ಧನು—ಕೈ ಕೆಸರಾಗದೆ ಬಾಯಿ ಮೊಸರಾಗದು ಎಂದಂತೆ ಕಷ್ಟಪಟ್ಟು ದುಡಿದರೆ ಇಷ್ಟವನ್ನು ಹೊಂದುವ ಯೋಗ್ಯತೆಯು ನಿಮ್ಮಲ್ಲಿದೆ. ಕೇವಲ ಸ್ವಾರ್ಥ ದೃಷ್ಟಿಯಿಂದ ಆವ ಕಾರ್ಯವನ್ನೂ ಮಾಡದಿರಿ. ಪರರ ಹಿತವೇ ತನ್ನ ಹಿತನೆಂಬ ಭಾವನೆಯು ನಿಮ್ಮಲ್ಲಿರುವುದಾದರೆ ನಿಮಗೀವಾರವು ಹೆಚ್ಚಿನ ಕಷ್ಟದಾಯಕವಾಗಲಾರದು. ಬಂಧು ಜನರಿಗಿಂತಲೂ ಆಪ್ತ ಮಿತ್ರರೇ ಎಷ್ಟೋ ಮೇಲೆಂಬ ವಿಚಾರವನ್ನು ನೀವು ಕಾರ್ಯತಃ ಕಂಡುಕೊಳ್ಳುವಿರಿ. ಕಷ್ಟಾರ್ಜಿತವಾದ ಧನವು ಹೆಚ್ಚಿನಂಶ ನ್ಯಾಯಮಾರ್ಗದಲ್ಲೇ ವ್ಯಯಿಸಲ್ಪಡುವುದು. ತಾ. 1ರಿಂದ 4ರ ವರೆಗೆ ಶಾರೀರಿಕ ಅನಾರೋಗ್ಯಗಳು ಪ್ರಾಪ್ತವಾದಾವು.

ಮಕರ—ನೀವು ಸದಾ ದುಃಖಿಗಳಾಗಿರುವುದಾದರೂ ಈಗ ಮಧ್ಯೆ ಮಧ್ಯೆ ಸುಖದ ದಿನಗಳನ್ನು ಕಾಣುವಿರಿ. ಮನಸ್ಸೆಂಬ ಕುದುರೆಯನ್ನು ಬುದ್ಧಿಯೆಂಬ ಕಡಿವಾಣದಿಂದ ಬಿಗಿಹಿಡಿದು ಸುಮಾರ್ಗದಲ್ಲೇ ಕೊಂಡೊಯ್ಯಿರಿ. ನೀವು ಹಿಡಿದ ಕಾರ್ಯವು ಸಾಂಗವಾಗಿ ಮುಂದರಿಯುವುದು. ವಿಷ್ಣಾಧಿಕ್ಯವುಳ್ಳ ವಸ್ತುಗಳನ್ನು ತ್ಯಜಿಸಿರಿ ಆರೋಗ್ಯಕ್ಕೇನೂ ಹಾನಿಯಾಗದು. ಅನುದಿನದ ಖರ್ಚು ತತ್ತದ್ದಿನದ ಉತ್ಪತ್ತಿಯಿಂದಲೇ ಸಾಗುವುದು. ಉದ್ಯೋಗಿಗಳಿಗೂ ವ್ಯಾಪಾರಿಗಳಿಗೂ ಫಲವು ಚೆನ್ನಾಗಿಯೇ ಇರುವುದು. ತಾ. 30ರಿಂದ 6ರ ವರೆಗೆ ರಾಜಕೀಯ ವಿಚಾರದಲ್ಲಿ ಖರ್ಚು ಹೆಚ್ಚಾದೀತು

ಕುಂಭ—"ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ ಪ್ರಕೃತಿಸಿದ್ಧಮಿದಂ ಹಿ ಮಹಾತ್ಮನಾಂ" ಎಂಬೀ ರೀತ್ಯಾ ಆಪತ್ಕಾಲದಲ್ಲಿ ಕುಗ್ಗದಿರುವುದೂ ಸಂಪತ್ಕಾಲದಲ್ಲಿ ಹಿಗ್ಗದಿರುವುದೂ ಸಜ್ಜನರ ಹುಟ್ಟುಗುಣವು. ಸದ್ಯದ ಗ್ರಹಸ್ಥಿತಿಯಲ್ಲಿ ನಿಮ್ಮ ಅದೃಷ್ಟವು ಇತರರೆಲ್ಲರಿಗಿಂತ ಉತ್ತಮವಾಗಿದೆ. ಈ ಕಾಲದಲ್ಲಿ ನೀವು ಮದಾಂಧರಂತೆ ವರ್ತಿಸದಿರಿ. ಅದು ಭಾವೀ ಶ್ರೇಯಸ್ಸಿಗೆ ತುಂಬಾ ಅಪಾಯಕಾರಿಯಾಗುವುದು. ಇಂತಹ ಉತ್ತಮ ಸಂಧಿಯನ್ನು ಸತ್ಕಾರ್ಯದಲ್ಲಿ ವ್ಯಯಿಸಿರಿ. ನಿಮ್ಮ ಅಪೇಕ್ಷೆಗಿಂತ ಅಧಿಕವಾದ ಫಲವು ಕಟ್ಟಿಟ್ಟ ಗಂಟೆಂದೇ ತಿಳಿಯಿರಿ. ತಾ. 1ರಿಂದ ನಾಲ್ಕರ ವರೆಗೆ ಇಷ್ಟಾರ್ಥ ಸಿದ್ಧಿ, ಸುಖ ಸಂತೋಷಗಳು ದೊರೆಯುವವು

ಮೀನ—ಸುರರಿಂದಲೂ ಮೀರಲಸದಳವಾದ ವಿಧಿಬರಹವನ್ನು ನರರಿಂದ ಮೀರಲು ಶಕ್ಯವೇ? ಇಲ್ಲ. ಪ್ರಕೃತ ನಿಮ್ಮ ಅದೃಷ್ಟವನ್ನು ಪರಿಶೀಲಿಸುವಾಗ ಪರಿಸ್ಥಿತಿಯು ಬಹಳ ಚಿಂತಾಜನಕವಾಗಿರುವುದು. ನೀವು ಯಾವ ಉದ್ಯೋಗವನ್ನೇ ಮಾಡಿರಿ, ಖರ್ಚಿನ ಕಾಲಂಶವೂ ಕೂಡ ಉತ್ಪತ್ತಿಯಾಗದು. ಗ್ರಹ ಮಂಡಲವು ಹೇಗೆ ಪ್ರತಿಕೂಲವಾಗಿರುವುದೋ ಅಂತೆಯೇ ಜನವೃಂದವೂ ನಿಮಗೆ ವಿರೋಧವಾಗಿರುವುದು. ಎಷ್ಟೊಂದು ಮಿತಭಾಷಿಯಾದರೂ ಕಲಹ ಅಪಮಾನಗಳು ಸರ್ವತ್ರ ನಿಮಗೆ ಸಿಗುವ ಬಹುಮಾನವೆನ್ನಬಹುದು. ಮನೆಯವರಿಂದಲೇ ನಿಮಗೆ ಜಗಳಗಳು ಅನಿವಾರ್ಯವು. ಅಂತೂ ವಿಪತ್ಪ್ರಾಯದಿಂದ ದಿನಗಳೆಯಬೇಕಾಗುವುದು. ತಾ. 30 1. 2. 7. ಅತೀವ ಹಾನಿ

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿಗುಟಿ

ಆಯುರ್ವೇದ ರೂಷೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುಚ್ಚುವ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವದು. ಹಾಗೂ ಆಲಸ್ಯ ಯಾ ವಾಯುಗಳೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500,5-0-0, 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ)ಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ,

(ರಿಜಿಸ್ಟರ್ಡ್) ಕುಂಜಾಲು.

ಪೋಸ್ಟ್—ಬ್ರಹ್ಮಾವರ, ದ. ಕ

ನಮ್ಮ ಸ್ಟಾಕಿಸ್ಟರು—1. ವಿ. ಆರ್. ಪ್ರಭು, ದಿ ಕೆನರಾ ನ್ಯೂಸ್ ಎಂಡ್ ಬುಕ್ಸ್ ಏಜನ್ಸಿ, ಬಟುಟಾವಾಲಾ ಮೆನ್ಶನ್, ಮುಂಬೈ. 2 ಜನರಲ್ ಸಪ್ಲೈಸ್ ಲಿಮಿಟೆಡ್, ಉಡುಪಿ. 3. ನವಭಾರತ ಬುಕ್ ಡಿಪೋ, ಉಡುಪಿ.

(೬ನೇ ಪುಟದಿಂದ ಮುಂದರಿಸಿದ್ದು.)

ರಿಂದ ಜನತೆಯನ್ನು ವಂಚಿಸಿದಂತಾಗುವುದು. ಅಂತಹ ವಂಚನೆಯಿಂದ ಸಾಮುದಾಯಿಕ ಚಳವಳಿಗಳುಂಟಾಗಲಾರವು. ಅಂತಹ ವರ್ತನೆಯು ಕಾಂಗ್ರೆಸಿಗೆ ದ್ರೋಹವಾಗುವುದು. ಸಂಪೂರ್ಣ ಶಕ್ತಿಯಿಂದ ನಡೆಯುತ್ತಿರುವ ಚಳವಳಿಕ್ಕೆ ಘಾತಮಾಡಿದಂತಾಗುವುದು. ಧ್ಯೇಯದ ವಿಷಯದಲ್ಲಿ ಕಲಹವಿದ್ದರೆ ಅದು ಬೆಳಕಿಗೆ ಬಂದು ಜನರದನ್ನು ತಿಳಿದುಕೊಂಡು ನಿರ್ಧರಿಸುವಂತಾಗಬೇಕು. ಪ್ರಭಾವಶಾಲಿ ವೈರಿಯೊಡನೆ ಹೋರಾಡುವ ಕುರಿತು ಆಲೋಚಿಸಬೇಕಾದ ಸಂದರ್ಭದಲ್ಲಿ ಯಾವ ಸಂಸ್ಥೆಯಾದರೂ ಆಂತರಿಕ ವಿಘಾತವನ್ನು ಸಹಿಸಿಕೊಳ್ಳಲಾರದು. ಕಾರ್ಯದ ಕರೆ ಬಂದಿರುವಾಗ ಕಾಂಗ್ರೆಸಿನೊಳಗೆ ಬೇರೆಯಿಸ್ತು ಮತ್ತು ಭಿನ್ನಾಭಿಮತವು ಸಾಧ್ಯವಿಲ್ಲ. ಆದುದರಿಂದ ಈ ಪ್ರಶ್ನೆಯನ್ನು ವಿಶದವಾಗಿ ಮತ್ತು ನಿಶ್ಚಿತವಾಗಿ ನಿರ್ಧರಿಸಬೇಕು. ಕಾಂಗ್ರೆಸು ಯಾವ ದಾರಿ ಹಿಡಿದು ಹೋಗಬೇಕೆಂಬುದನ್ನು ನಾವು ನಿಶ್ಚೈಸಿರುವೆವು. ಇನ್ನಾವ ದಾರಿಯಾದರೂ ಫಲಕಾರಿಯಾಗಲಾರದು. ಮತ್ತು ಹಾನಿಕರವಿರುವುದು.

ಅನಾಯಕತ್ವದ ಅಪಾಯ

ಹಿಂದೂದೇಶದಲ್ಲಿ ಅನಾಯಕತ್ವವನ್ನುಂಟುಮಾಡುವುದೇನೂ ಕಷ್ಟವಲ್ಲ. ಆದರೆ ಅನಾಯಕತ್ವದಿಂದ ಸ್ವಾತಂತ್ರ್ಯವು ಹುಟ್ಟುವುದಿಲ್ಲ. ಹಿಂದೂದೇಶದಲ್ಲಿ ಅನಾಯಕತ್ವವು ಅನಾಹುತಕಾರಿಯಾದೆ. ಸಾಮುದಾಯಿಕ ಚಳವಳ ಹೂಡುವಾಗ ನಮ್ಮ ಕಾರ್ಯದ ಪರಿಣಾಮವು ಏನಾಗುವುವೆಂದು ಹೇಳಬರುವುದಿಲ್ಲ. ಆದದ್ದಾಗಲೆಂಬ ಮನೋವೃತ್ತಿಯಿಂದ ನಾವು ಮುಂದೊತ್ತಬೇಕಾಗಿದೆ. ಆದರೆ ಈ ಅಪಾಯವನ್ನು ಮತ್ತಷ್ಟು ಹೆಚ್ಚಿಸುವುದು ಶುದ್ಧ ತಿಳಿಗೇಡಿತನ. ಇದರಿಂದ ನಮ್ಮ ಸ್ವಾತಂತ್ರ್ಯವು ತಡೆಗಟ್ಟಲ್ಪಡುವುದು. ಹಲವು ವರ್ಷಗಳಿಂದ ನಮ್ಮ ಚಳವಳದ ಬೆನ್ನೆಲುಬಾಗಿದ್ದ ನೈತಿಕ ಹಿನ್ನೆಲೆಯು ಹೋಗಿಬಿಡುವುದು. ಇಡೀ ಲೋಕವೇ ಹಿಂಸೆಯಿಂದ ಜುಗುಪ್ಸೆಗೊಂಡಿರುವಾಗ ನಾವು ಅದನ್ನವಲಂಬಿಸುವ ಆಲೋಚನೆ ಮಾಡುವುದು ದೊಡ್ಡ ದುರಂತವೇ ಸರಿ. ಆದುದರಿಂದ ನಾವು ಅಹಿಂಸಾ ವಿಧಾನವನ್ನೇ ನಿಸ್ಸಂಕೋಚವಾಗಿ ಮತ್ತು ಶುದ್ಧವಾಗಿ ಅನುಸರಿಸಬೇಕು. ಇತರ ವಿಧಾನಗಳನ್ನೆಲ್ಲಾ ನಿರಾಕರಿಸಿಬಿಡಬೇಕು. ಒಂದೇ ಸವನೆ ಹಲವು ವಿಧಾನಗಳನ್ನನುಸರಿಸಲು ಸಾಧ್ಯವಿಲ್ಲ. ಆದರಿಂದ ಯಾವ ವಿಧಾನವೂ ಫಲಕಾರಿಯಾಗದಂತಾಗುವುದು. ಆದುದರಿಂದ ನಾವು ಚೆನ್ನಾಗಿ ವಿಚಾರಮಾಡಿ ನಿರ್ಧರಿಸಬೇಕು. ಒಮ್ಮೆ ನಿರ್ಧಾರಕ್ಕೆ ಬಂದ ಮೇಲೆ ಅನ್ಯಥಾ ಚಿಂತಿಸಲೇ ಬಾರದು. ಅಹಿಂಸೆಯೆಂದರೆ ತ್ರಿಕರಣ ಶುದ್ಧವಾದ ಅಹಿಂಸಾಚರಣೆಯೆಂಬುದನ್ನು ಮನಗಂಡುಕೊಳ್ಳಬೇಕು. ನಮ್ಮ ಮನಸ್ಸಿನ ಕೆಲಸವೇ ಬೇರೆ ಆಗಿ, ನಮ್ಮ ಬಾಯಿಂದ ಹೊರಡುವ ಇತರ ಶಬ್ದಗಳು ಪ್ರತಿವಿರುದ್ಧವಿದ್ದು ನಮ್ಮ ಕಾರ್ಯವು ತೀರಾ ಭಿನ್ನವಾಗಿರುವಾಗ ಕೇವಲ ಯಾಂತ್ರಿಕವಾಗಿ ಉಪಯೋಗಿಸುವ ಶಬ್ದಮಾತ್ರವಲ್ಲ, ಅಹಿಂಸೆ. ನಾವು ಅದಕ್ಕೆ ನಮಗ ಮತ್ತು ನಮ್ಮ ಉದ್ದೇಶಕ್ಕೆ ನ್ಯಾಯಮಾಡಬೇಕೆಂಬ ಸುವೆವಾದರೆ ತ್ರಿಕರಣ ಶುದ್ಧವಾಗಿ ಅಹಿಂಸಾನಿಷ್ಠರಾಗಬೇಕು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಚೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

(೫ನೇ ಪುಟದಿಂದ ಮುಂದರಿಸಿದ್ದು)

ಬದಲಾಯಿಸಿ ಕಾಂಗ್ರೆಸಿನ ಕೇಳಿಕೆಯನ್ನು ಮನ್ನಿಸುವನಕ ಈ ಅಸಹಕಾರವು ಮುಂದುವರಿಸಲ್ಪಡುವುದು.

ಗೌರವ ಪೂರ್ವಕ ಒಪ್ಪಂದದ ಯತ್ನ

ವೈರಿಯೊಂದಿಗೆ ಗೌರವ ಪೂರ್ವಕ ಒಪ್ಪಂದವಾಗುವಂತೆ ಸಾಧ್ಯವಾದ ಪ್ರಯತ್ನವನ್ನೆಲ್ಲ ಮಾಡಿ ನೋಡುವುದು ಸತ್ಯಾಗ್ರಹಿಯ ಲಕ್ಷಣವಾಗಿದೆ ಅನಿವಾರ್ಯ ಸಂದರ್ಭದಲ್ಲಿ ಅಹಿಂಸಾತ್ಮಕ ಹೋರಾಟ ಹೂಡಲು ಸತ್ಯಾಗ್ರಹಿಯು ಸದಾ ಸಿದ್ಧನಿರುವನಾದರೂ, ಶಾಂತಿಗಾಗಿ ಅವನು ತನ್ನ ಯತ್ನವನ್ನೆಂದಿಗೂ ಸಡಿಲು ಮಾಡದೆ ಯಾವಾಗಲೂ ಅದಕ್ಕಾಗಿ ಹಾತೊರೆಯುವನು. ಬ್ರಿಟಿಷ್ ಸರಕಾರವು ಕಾಂಗ್ರೆಸಿನ ಮುಖದ ಮೇಲೆಯೇ ಬಾಗಿಲು ಹಾಕಿ ಬಿಟ್ಟಿರುವುದಾದರೂ ವರ್ಕಿಂಗ್ ಕಮಿಟಿಯು ಗೌರವಪೂರ್ವಕವಾದ ಇತ್ಯರ್ಥಕ್ಕಾಗಿ ತನ್ನ ಪ್ರಯತ್ನವನ್ನು ಮುಂದುವರಿಸುವುದು. ಆದರೆ, ಹಿಂದೀಯರ ಇಚ್ಛೆಗೆ ವಿರುದ್ಧವಾದ ದಾರಿಯಲ್ಲಿ ಅವರನ್ನು ಬಲಾತ್ಕಾರದಿಂದ ನಡಿಸುವ ಯತ್ನವನ್ನು ಮತ್ತು ಹಿಂದೂದೇಶದ ಗೌರವ ಮತ್ತು ಸ್ವಾತಂತ್ರ್ಯ ವಿಘಾತುಕವಾದುದೆಲ್ಲವನ್ನೂ ಕಾಂಗ್ರೆಸು ಅಹಿಂಸಾತ್ಮಕವಾಗಿ ವಿರೋಧಿಸದಿರಲಾರದು. ಕಾಯಿದೆ ಭಂಗ ಚಳವಳ ಹೂಡುವ ಆವಶ್ಯ ಬಂದಲ್ಲಿ ಅದಕ್ಕಾಗಿ ಕಾಂಗ್ರೆಸ್ ಪಕ್ಷೀಯರು ತೋರಿಸಿರುವ ಉತ್ಸಾಹವು ಪ್ರಶಂಸನೀಯವಿದೆ. ಆದರೆ ಸಶಸ್ತ್ರ ಯುದ್ಧಕ್ಕೆ ತಯಾರು ಮಾಡಲ್ಪಟ್ಟಿರುವ ಸೇನೆಯಂತಹ ಕಠಿಣ ಶಿಸ್ತೇ ಕಾಯಿದೆ ಭಂಗ ಚಳವಳಕ್ಕೂ ಆವಶ್ಯವಾಗಿದೆ. ವಿನಾಶಕಾರಕ ಆಯುಧಗಳನ್ನು ಸಾಕಷ್ಟು ಸಂಗ್ರಹಿಸಿ ಅವುಗಳ ಸರಿಯಾದ ಉಪಯೋಗವನ್ನು ತಿಳಿದುಕೊಳ್ಳದ ಸೇನೆಯು ನಿರರ್ಥಕ. ಅಂತೆಯೇ ಅಹಿಂಸಾತತ್ವವನ್ನು ಚೆನ್ನಾಗಿ ಅರಿತುಕೊಂಡು ಅದಕ್ಕೆ ಬೇಕಾದ ಶಿಸ್ತು ಸಂಯಮವಿಲ್ಲದ ಅಹಿಂಸಾತ್ಮಕ ಸೇನೆಯು ನಿಷ್ಫಲ. ಕಾಯಿದೆಭಂಗ ಚಳವಳದ ಸಿದ್ಧತೆಯ ನಿಜವಾದ ಪರೀಕ್ಷೆಯು, ಕಾಂಗ್ರೆಸ್ ಪಕ್ಷೀಯರು ತಾವೇ ನೂತು ಖಾದಿಗೆ ಪ್ರೋತ್ಸಾಹವಿತ್ತು ಗಿರಣಿ ವಸ್ತ್ರವನ್ನು ದೂರಪಡಿಸುವುದರಲ್ಲಿ ಮತ್ತು ಜಾತಿಜಾತಿಗಳೊಳಗೆ ಸೌಹಾರ್ದವನ್ನುಂಟುಮಾಡುವುದರಲ್ಲಿದೆ ಕಾಂಗ್ರೆಸ್‌ವಾದಿ ಹಿಂದುಗಳು ಹರಿಜನೋದ್ಧಾರ ಕಾರ್ಯ ನಿರತರಾಗತಕ್ಕದ್ದು. ಆದುದರಿಂದ ಕಾಂಗ್ರೆಸ್ ಸಂಸ್ಥೆಗಳೂ ಕಾಂಗ್ರೆಸ್‌ವಾದಿಗಳೂ ಈ ಕಾರ್ಯಕ್ರಮವನ್ನು ಮುಂದೊತ್ತಿ ಮುಂದಿನ ಹೋರಾಟಕ್ಕೆ ಸಿದ್ಧತೆ ಮಾಡತಕ್ಕದ್ದು ಕಾಂಗ್ರೆಸಿನ ಮುಂದಿನ ಕಾರ್ಯಕ್ರಮದ ಪ್ರಾಮುಖ್ಯ ವಿಷಯವಾದ ಕಾನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಉದ್ದೇಶ ಘೋರಣೆ ಮತ್ತು ಅರ್ಥವನ್ನು ಜನತೆಗೆ ಚೆನ್ನಾಗಿ ವಿವರಿಸತಕ್ಕದ್ದು.

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-**Navayuga UDIPI**

ನೋಟೀಸು

ದ. ಕನ್ನಡಾ ಜಿಲ್ಲಾ ಶಿರ್ವ ಪಂಚ್ಯಾತ ಕೋರ್ಟನಲ್ಲಿ.

C S. No 42/1939

ಸುಬ್ರಾಯ ನಾಯ್ಕ ವಾದಿ—

1 ಗುರುವ ಸೇರಿಗಾರ, 2 ಸೇಸಿ ಹೆಂಗಸು, 3 ಸೀನ ಸೇರಿಗಾರ ಪ್ರತಿವಾದಿರು—

(1ನೇ ಪ್ರತಿವಾದಿ 2ನೇ ಪ್ರತಿವಾದಿಳ ಗಂಡ 2ನೇ ಪ್ರತಿವಾದಿಳು ಬಾಬ ಸೇರಿಗಾರನ ಮೊಮ್ಮಗಳು, 3ನೇ ಪ್ರತಿವಾದಿ 2ನೇ ಪ್ರತಿವಾದಿಳ ತಮ್ಮ)

ಉಡುಪಿ ತಾಲೂಕು ಕಟ್ಪಂಗ್ರೆ ಗ್ರಾಮದ ಎಡ್ಮೇರು ಎಂಬಲ್ಲಿರುವವರು.

ಮೇಲ್ಕಾಣಿಸಿದ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ವಾದಿಗೆ ಪ್ರತಿವಾದಿರು ಬರಕೊಟ್ಟ ಡಿಮಾಂಡ್ ನೋಟಿನ ಅಸ್ಲು ಬಡ್ಡಿ ಕೂಡಾ ಐವೇಜನ್ನು ಬರವೂ ದಿಕೊಳ್ಳುವರೇ ವಾದಿಯು ಪ್ರತಿವಾದಿರ ಮೇಲೆ ಈ ಕೋರ್ಟನಲ್ಲಿ ದಾಖಲ್ಮಾಡಿದ ಮೇಲ್ಕಂಡ ವ್ಯಾಜ್ಯದ ತಾ. 16-12-1939ನೇ ಪೂರ್ವಾಹ್ನ ಘಂಟೆ 11ಕ್ಕೆ ತನಿಖೆಗೆ ಇಡೋಣಾಗಿಯದೆ. ಪ್ರತಿವಾದಿರು ಸದ್ರಿ ದಿವಸ ಹಾಜರಾಗಿ ಆಕ್ಷೇಪಣೆ ಕೊಡತಕ್ಕದ್ದು. ತಪ್ಪಿದರೆ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲಾದೀತು.

M. Venkatramana Kamath,
President.
ಶಿರ್ವ, ತಾ. 25-11-1939.

ನೋಟೀಸ್.

ಕಾಸರಗೋಡು ಡಿ ಮು. ಕೋರ್ಟನಲ್ಲಿ

O S. No. 415/1939

P. ರಾಮಚಂದ್ರರಾವ್—ವಾದಿ.

ಮತ್ತು

ತೆಕ್ಕಂಬಾಡ ಚಂದು ಕೂಡ-ಪ್ರತಿವಾದಿರು.

1ನೇ ಪ್ರತಿವಾದಿ ತೆಕ್ಕಂಬಾಡ ಚಂದು, ಅಂಬು ಆಳಿಯ ವ ಅಂಬ್ಬಾಡಿ ರಾಮನ ತಮ್ಮ, ಕಾಸರಗೋಡು ತಾಲೂಕು ಚೇಡಕ್ಕ ಗ್ರಾಮದಲ್ಲಿರುವವ—

ತಾ. 6-9-1926ರಲ್ಲು ವಾದಿಗೆ ಮಾಡಿ ಪರ್ಲ್ ಕಂಪ್ನಿ' ರವರು ಕೂಡಾ 2 ಜನರು ಬರಕೊಟ್ಟ ಅಡವು ದಸ್ತ್ಯವೇಜಿನ ಹಣ ವಸೂಲಾತಿ ಕುರಿತು ವಾದಿಯು ದಾಖಲುಮಾಡಿದ ಸದರೀ ವ್ಯಾಜ್ಯವು ತಾ. 15-12-1939ರಲ್ಲು ಮೇಲ್ಕಂಡ ಕೋರ್ಟನಲ್ಲಿ ತನಿಖೆಗೆ ಇಟ್ಟಿದೆ. ಆ ಕುರಿತು ಮೇಲೆ ಕಾಣಿಸಿದ 1ನೇ ಪ್ರತಿವಾದಿಯು ಆಕ್ಷೇಪವಿದ್ದಲ್ಲಿ ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗಿಯದೆ,

C. Rama Rao,
ವಾದಿಕಡೆ ವಕೀಲ್,
ಕಾಸರಗೋಡು, ತಾ. 20-11-39.

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯೇ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ವೇತಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4
Sorath Pharmacy,
Null Bazar, Duncan Road,
BOMBAY 4.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನಲ್ಲಿ

O. P. No. 50/1939

ಕೆ. ನಾರಾಯಣ ಶೆಟ್ಟಿ, ಕುತ್ಪಾಡಿ ಮುದ್ದಣ್ಣ ಶೆಟ್ರ ಮಗ, ಉಡುಪಿ ಕಸಬಾ-ಅರ್ಜಿದಾರ—

ಅರ್ಜದಾರನ ತರ್ಫ ತಾ. 19-10-39ರಲ್ಲಿ ಮೃತಪಟ್ಟ ಕೆ. ನರಸಿಂಹ ಶೆಟ್ಟಿಯ ಬಾಬತು 'ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್' ಬೊಂಬೈ ಈ ಕಂಪೆನಿಯ ನಂಬ್ರ 78,825 ಮತ್ತು 92,444ನೇ ಪೋಲಿಸಿಗಳ ಬಾಬತು ಒಟ್ಟು ರೂ. 1000ನ್ನು ಸದರಿ ಕಂಪೆನಿಯಿಂದ ವಸೂಲು ಮಾಡುವ ಬಗ್ಗೆ ಮತ್ತು ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್, ಈ ಕಂಪೆನಿಯ ನಂಬ್ರ 81,399ನೇ ಪೋಲಿಸಿ ಬಾಬತು ರೂಪಾಯಿ 1000ನ್ನು ದಿ ಕೆನರಾ ಬೇಂಕಿಂಗ್ ಕೊರ್ಪರೇಶನ್ ಉಡುಪಿ ಲಿಮಿಟೆಡ್ ಇದರ ಮೂಲಕ ವಸೂಲು ಪಡೆಯುವ ಬಗ್ಗೆ ಕೂಡಾ ಮೃತನ ಕವಡಿನ ಕುಟುಂಬದ ಹಿರಿಯ ವ ಯಜಮಾನನಾದ ಅರ್ಜದಾರನು ತನ್ನ ಹೆಸರಿಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಅರ್ಜಿ ಕೊಟ್ಟಿರುತ್ತಾನಾಗಿಯೂ ಸದರಿ ಅರ್ಜಿಯು ತಾ. 9-12-39ಕ್ಕೆ ತನ್ನ ಬಗ್ಗೆ ಇಟ್ಟಿರುತ್ತದಾಗಿಯೂ ಆಕ್ಷೇಪ ಹೇಳತಕ್ಕವರು ಇದ್ರೆ ಸದರಿ ದಿವಸ ಹಗಲು 10 ಘಂಟೆಗೆ ಕೋರ್ಟ ಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದೆಂಬದೂ ಸಹಾ ಈ ಮೂಲಕ ಯಾವತ್ತೂ ಜನರಿಗೆ ತಿಳಿಸೋಣಾಗಿದೆ,

ಕೋರ್ಟ ಹುಕುಮು ಪ್ರಕಾರ,

T. Ganapaya Shetty,
Vakil for Petitioner.
ಉಡುಪಿ, ತಾ. 24 11-39.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ ಈಗಾಗಲೇ ಸಂಚರಿಸತೊಡಗಿರುವರೆಂದು ತಿಳಿದುಬರುತ್ತದೆ. ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸಬಿರರೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ. ಪ್ರವೇಶ ಫಾರಲು ರೂ. 1, (ಜುಮ್ಲಾ ರೂ. 11.) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ. ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಮಾಹಿತಿಯನ್ನು ಪಡೆಯಲಪೇಕ್ಷಿಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ. ಈ ವಿಳಾಸಕ್ಕೆ ಬರೆಯಬಹುದು.

"Wanted-a Branch Agency Manager on a monthly salary of Rs 250/- for our Agency Office to be opened either at Belgaum or Mangalore. Only those who can write a test business of Rs 75,000/- before 28th February 1940 need Apply Messrs. Padubidri Bros, Chief Agents. Maharashtra and Karnataka, East & West Insurance Co. Ltd., Bombay 8."

ಸಮಿತಿಯ ಸದಸ್ಯರಾಗುವವರಿಗೆ ಮಾತ್ರ ಅಗಲೇ ರೂ. 3 ಬೆಲೆಯ ಪುಸ್ತಕಗಳು

ಉಚಿತ

(ಸದಸ್ಯತನದ ಚಂದಾ:—ಒಂದೇ ರೂಪಾಯಿ)

1	ದೇವಪೂಜಾ ವಿಧಿ	0-3-0
2	ವಿಷ್ಣು ಸಹಸ್ರನಾಮ ಸ್ತೋತ್ರ	0-2-0
3	ವಾಯುಸ್ತುತಿ	0-2-0
4	ದ್ವಾದಶಸ್ತೋತ್ರ	0-2-0
5	ಆದಿತ್ಯಹೃದಯ	0-1-0
6	ಶ್ರೀಸೂಕ್ತ ಪುರುಷಸೂಕ್ತ (ಋ)	0-1-6
7	ಶ್ರೀಸೂಕ್ತ ಪುರುಷಸೂಕ್ತ (ಯ)	0-1-6
8	ತರ್ಕಭಾಷ್ಯತಸಾರಸಾರೋದ್ಧಾರ	1-0-0
9	ಪುರಂದರದಾಸರ ಕೀರ್ತನೆ ಭಾಗ ೧	0-4-0
10	„ „ „ ೨	0-4-0
11	„ „ „ ೩	0-4-0
12	ಸುಂದರಕಾಂಡರಾಮಾಯಣಮೂಲ	0-2-0
	ಟಪ್ಪಾಲು ಖರ್ಚು ಬೇರೆ, ಒಟ್ಟು ರೂ.	3-0-0

ಮಾಧ್ವಗ್ರಂಥ ಪ್ರಕಾಶನ ಸಮಿತಿ,
45, A. S. ಸ್ಟ್ರೀಟ್, ಬೆಂಗಳೂರು ಸಿಟಿ.

Degrees: Books: Medicines.

Free H. L. M S. H M B. H. M. D. etc Free Homeo-Ayur-Unani-Naturo degrees. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp.—

Principal, Indian Homeopathic Institute and Society (Govt Regd)
P. O. MAHUVA, (Kathiawar Dt, India.

1940

ನೇ ಇಸವಿಯ

ಪಾಕೆಟ್ ಡೈರಿ

ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ
ಉಡುಪಿ.

GET RICH
AND
PROSPEROUS
through Simple Means upheld and pursued by Millions.........!

WRITE NOW WITH STAMP.—

K. S. Row,
Worli, BOMBAY.

ಬಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜಾಯಿನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಯಾನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮೃತಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಜಾಯಿನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

34000 ರೂಪಾಯಿಗಳು

ಸಂಪೂರ್ಣ ಸರಿಯಾದ 17 ಇನಾಮುಗಳೊಳಗೆ ಹಂಚಲ್ಪಡುವುದು.

ನಮ್ಮ ಸಾಂಕೇತಿಕ ಉತ್ತರದ ಯಾವುದಾದರೊಂದು ಸಾಲಿಗೆ ಅನುಕ್ರಮವಾಗಿ ಸರಿಯಾದ ಉತ್ತರ ಕಳುಹಿಸುವ 'ರನ್ನರ್ಸ್ ಅಪ್ಸ್' ಇವರಿಗೆ ರೂ 20ರ 50 ಇನಾಮುಗಳನ್ನು ಸಮಾಧಾನಾರ್ಥವಾಗಿ ಕೊಡಲಾಗುವುದು ಮುದ್ರೆ ಹಾಕಿ ಇಡಲ್ಪಟ್ಟಿರುವ ನಮ್ಮ ಉತ್ತರದ ಮೊದಲಿನ ಎರಡು ಸಮಾನಾಂತರ ಸಾಲುಗಳಿಗೆ ಅನುಕ್ರಮವಾಗಿ ಸರಿಯಾದ ಸಾಲುಗಳನ್ನು ಸೂಚಿಸುವವರಿಗೆ ರೂ 100ರ ಗ್ಯಾರಂಟಿ ಇರುವುದು ಅತಿ ಹೆಚ್ಚಿನ ಉತ್ತರ ಕಳುಹಿಸುವವರಿಗೆ ರೂ 150 ರಿಸರ್ವ್ ಮಾಡಲಾಗಿದೆ

ಕೊಡಲ್ಪಟ್ಟಿರುವ ಚೌಕಟ್ಟಿನಲ್ಲಿ 5ರಿಂದ 21ರ ವರೆಗಿನ ಅಂಕೆಗಳನ್ನು ಅಡ್ಡಕ್ಕೆ ಮತ್ತು ನೀಟಕ್ಕೆ ಪ್ರತಿಯೊಂದು ಸಾಲಿನ ಮತ್ತು ಮೂಲೆಗಳಿಂದ ಮೂಲೆಗಳಿಗೆ ಎರಡು ಸಾಲಿನ ಸಂಖ್ಯೆಗಳನ್ನು ಕೂಡಿಸಿದರೆ ದ ಮೊತ್ತ 54 ಆಗತಕ್ಕದ್ದು ಪ್ರತಿಯೊಂದು ಅಂಕೆಯನ್ನೂ ಒಮ್ಮೆಯೇ ಉಪಯೋಗಿಸಲ್ಪಡಬೇಕು ಉತ್ತರ ಕಳುಹಿಸುವ ಕೊನೆಯ ತಾ 12-12-39 ಫಲಿತಾಂಶ ಪ್ರಕಟಣಾ ತಾರೀಕು 20 12-39 ಪ್ರತಿಯೊಂದು ಉತ್ತರಕ್ಕೆ ಪ್ರವೇಶಹಾಸಲು ರೂ 1 ಅಥವಾ 3ಕ್ಕೆ ರೂ 2 ಅಥವಾ 8ರ ಪ್ರತಿಯೊಂದು ಸೆಟ್ಟಿಗೆ ರೂ 5

ಕ್ರಮಗಳು — ಬಿಳಿ ಕಾಗದದಲ್ಲಿ ಸ್ಪಷ್ಟವಾಗಿ ಬರೆದು, ಅಗತ್ಯವಿದ್ದ ಪ್ರವೇಶ ಹಾಸಲಿನ ಸಮೇತವಾಗಿ ಎಷ್ಟು ಬೇಕಾದರೂ ಉತ್ತರಗಳನ್ನು ಕಳುಹಿಸಬಹುದು ಪ್ರವೇಶಹಾಸಲನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕದ್ದು ಪ್ರವೇಶಹಾಸಲು ಸಂಗ್ರಹವಾದ ಮೇರೆಗೆ ಇನಾಮುಗಳು ಬದಲಾಯಿಸಲ್ಪಡುವವು ಆದರೆ ಬೊಂಬಾಯಿಯ ಪ್ರಸಿದ್ಧವಾದ ಬ್ಯಾಂಕೊಂದರಲ್ಲಿ ಡಿಪೋಸಿಟ್ ಇಡಲ್ಪಟ್ಟಿರುವ ಉತ್ತರವನ್ನು ಹೋಲುವ ಸರಿಯಾದ ಉತ್ತರ ಕಳುಹಿಸುವ ಪ್ರತಿಯೊಬ್ಬರಿಗೆ ರೂ 2000ದಷ್ಟರ ಇನಾಮಿನ ಗ್ಯಾರಂಟಿ ಇದೆ ಫಲಿತಾಂಶವನ್ನು ಪಡೆಯುವುದಕ್ಕಾಗಿ ವಿಳಾಸ ಸಮೇತವಾದ ಕವರೊಂದನ್ನು ಸ್ಟಾಂಪು ಸಹಿತ ಲಗ್ತೀಕರಿಸತಕ್ಕದ್ದು ಮೆನೇಜರರ ನಿರ್ಣಯವೇ ಕೊನೆಯದೂ ನಿರ್ಬಂಧವಾದದ್ದೂ ಆಗಿರುವುದು

ಜುಮ್ಲಾ 58ರ ಹಿಂದಿನ ಸಮಸ್ಯೆಯ ಮುದ್ರೆ ಹಾಕಿ ಇಡಲ್ಪಟ್ಟ ಉತ್ತರ				
1ನೇ ಸಾಲು	13,	11,	16,	18
2ನೇ ಸಾಲು	15,	17,	12,	14
3ನೇ ಸಾಲು	10,	8,	21,	19
4ನೇ ಸಾಲು	20,	22,	9,	7

ನಿಮ್ಮ ಉತ್ತರ ಮತ್ತು ಪ್ರವೇಶ ಹಾಸಲನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ,
ದಿ ಮೆನೇಜರ್,
ಪ್ರೆಸಿಡೆನ್ಸಿ, ಕಮರ್ಶಿಯಲ್ ಸಿಂಡಿಕೇಟ್
ಮುಂಬಾದೇವಿ, ಬೊಂಬಾಯಿ 2.
The Manager,
Presidency, Commercial Syndicate,
Mumbadevi, BOMBAY *2*

Your anxiety in finding a sound and progressive Life Office both to insure or to represent will end on consultation with

Branch Secretary
The New Guardian of India Life Ins Co Ltd, Madras.
MANGALORE Branch

ನೋಟೀಸು.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ –

ಉಡುಪಿ ಡಿ ಮು. ಕೋರ್ಟಿನಲ್ಲಿ

O P No 158/39

1. ಮಂಗೇಶರಾವ್ R Karnad,
2 ಪ್ರಭಾಕರರಾವ್–R Karnad–

ಅರ್ಜಿದಾರರು.

ಸದ್ರಿ ಅರ್ಜಿದಾರರ ತಂದೆ ಈ ದ್ವಿಯಲ್ಲಿರುತ್ತಿದ್ದ ಕಾರ್ನಾಡು ರಾಮರಾಯರು ತಾ 1 11 39ರಲ್ಲಿ ಸ್ವರ್ಗಸ್ಥರಾಗಿರುತ್ತಾರೆ ಸದ್ರಿ ಕಾರ್ನಾಡು ರಾಮರಾಯರು Empire of India Life Assurance Co, Ltd, Bombay Life Assurance Co, Ltd, United India Life Assurance Co, Ltd, Oriental Government Security Life Assurance Co, Ltd ಈ 4 ಕಂಪೆನಿಗಳಲ್ಲಿ ಇನ್ಶೂರು ಮಾಡಿದ ಬಾಬ್ತು ಬರತಕ್ಕ ರೂಪಾಯಿ 17126 8 0ನ್ನು ಪಡೆಯುವರೆ ಅವರ ಮಕ್ಕಳಾದ ಅರ್ಜಿದಾರರು ತಾವೇ ಹಕ್ಕುದಾರರೆಂತಲೂ, ತಮಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅಪೇಕ್ಷಿಸಿ ಅರ್ಜಿದಾರರು ಕೊಟ್ಟ ಸದ್ರಿ ಅರ್ಜಿಯು ತಾ 11 12 39ಕ್ಕೆ ತನಿಖೆಗೆ ಇಡೋಣಾಗಿಯದೆ ಆ ಕುರಿತು ಆಕ್ಷೇಪ ಉಳ್ಳವರು ಆ ದಿವಸ 10ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಪ್ರಕಟಿಸೋಣಾಗಿಯದೆ

M Vittal Kamath B A B L
Pleader for Petitioners
ಉಡುಪಿ ತಾ 28 11 1939

NOTICE.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ.

ಉಡುಪಿ ಡಿ ಮು ಕೋರ್ಟಿನಲ್ಲಿ

O P No 13/39

The Canara Banking Corporation Ltd, by its Manager, M Venkatraya Kamath—**ಅರ್ಜಿದಾರ**

ಕಲ್ಯಾಣಿ ಯಾನೆ ಭಾಗೀರತಿ ಬಾಯಿ–

ಎದ್ರಿಲು.

ಸದ್ರಿ ಎದ್ರಿಲು ಮಗ ಕೊಟ್ಟಿಕಾರ ವಾಸುದೇವ ಪೈಗಳು ತಾ 25 10 39ರಲ್ಲಿ ಸ್ವರ್ಗಸ್ಥರಾಗಿರುತ್ತಾರೆ. ಸದ್ರಿ ಕೊಟ್ಟಿಕಾರ ವಾಸುದೇವ ಪೈಗಳು, ದಿ ಕೆನರಾ ಮ್ಯೂಚವಲ್ ಎಶ್ಯೂರನ್ಸ್ Co, Ltd ಈ ಕಂಪೆನಿಯಲ್ಲಿ No 294ನೇ ರೂ 1000/ಕ್ಕೆ ಇನ್ಶೂರು ಮಾಡಿದ ಪೋಲಿಸಿಯ ಹ್ಯಾವತು ವಸೂಲು ಮಾಡುವರೆ ಹಕ್ಕುದಾರಳಾದ ಎದ್ರಿಲು ತನ್ನ ಹಕ್ಕು ಸಂಬಂಧವನ್ನು ತಾ 21 11 39ರಲ್ಲಿ ನ್ಯಾಯವಾದ ಪ್ರತಿಫಲಕ್ಕೆ ಅರ್ಜಿದಾರರ ಬ್ಯಾಂಕಿಗೆ ಟ್ರಾನ್ಸ್‌ಫರ್ ಮಾಡಿಕೊಟ್ಟ ಪ್ರಕಾರ ಸದ್ರಿ ಹಣ ಪಡೆಯುವರೆ ಅರ್ಜಿದಾರ್ರ ಬ್ಯಾಂಕಿನವರು ಅಧಿಕಾರಿಗಳಾಗಿರುತ್ತಾರೆ ಆದ್ದರಿಂದ ಸದ್ರಿ ಪೋಲಿಸಿಯ ಬಾಬ್ತು ಬಹಾ ರೂ. 991 9 0 ವಸೂಲು ಮಾಡುವರೆ ಅರ್ಜಿದಾರರ ಬ್ಯಾಂಕಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅಪೇಕ್ಷಿಸಿ ಅರ್ಜಿದಾರರ ಬ್ಯಾಂಕಿನವರು ಕೊಟ್ಟ ಸದ್ರಿ ಅರ್ಜಿಯು ತಾ 11-1 -39ಕ್ಕೆ ತನಿಖೆಗೆ ಇಡೋಣಾಗಿಯದೆ ಈ ಕುರಿತು ಆಕ್ಷೇಪ ಉಳ್ಳವರು ಆ ದಿವಸ 10ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಪ್ರಕಟಿಸೋಣಾಗಿಯದೆ

M Vittal Kamath B A B L
Pleader for Petitioner
ಉಡುಪಿ ತಾ 28 11 1939



ಕೊಪರನ್ ಲಾರ್ಜ ಸೈಜು 0 13 0 ಕೊಪರನ ಸ್ಟ್ಯಾಂಡರ್ಡ ಸೈಜ 0 8 0 ಟಂಡರ್ಗಮ್ ಸ್ಟ್ಯಾಂಡರ್ಡ ಸೈಜು 0 8 0

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್,

ಉಡುಪಿ.

ಡೈರೆಕ್ಟರರು:=

(1) **ಶ್ರೀ ಕೆ ಜಗನ್ನಾಥ ಬಲ್ಲಾಳರು, ಬಿ. ಎ ಎಲ್‌ಎಲ್ ಬಿ**
ಡೈರೆಕ್ಟರ್, ವಿಜಯಾ ಬ್ಯಾಂಕ್ ಲಿಮಿಟೆಡ್, ಡೈರೆಕ್ಟರ್, ಕರ್ನಾಟಕ ಸ್ಟೋರ್ಸ್ ಲಿಮಿಟೆಡ್, ಮತ್ತು ವಕೀಲ್, ಉಡುಪಿ, (**ಚೆಯರ್‌ಮ್ಯಾನ್**)

(2) **ಶ್ರೀ ಎಂ ಎಸ್ ಪೆಜತ್ತಾಯರು,**
ಡೈರೆಕ್ಟರ, ಕರ್ನಾಟಕ ಸ್ಟೋರ್ಸ ಲಿಮಿಟೆಡ, ಮತ್ತು ಏಜಂಟ್, ಫಲಿಮಾರು ಮಠ, ಉಡುಪಿ

(3) **ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರು,**
ಡಿಸ್ಟ್ರಿಕ್ಟ್ ಬೋರ್ಡ ಮೆಂಬರ್ ಡೈರೆಕ್ಟರ್, ತುಳುನಾಡ್ ಬ್ಯಾಂಕ್ ಅಫ್ ಸಪ್ಲೈ ಏಜನ್ಸಿ ಲಿಮಿಟೆಡ್, ಮತ್ತು ಲೇಂಡ್ ಲೋರ್ಡ, ಆತ್ರಾಡಿ, ಪರ್ಕಳ.

(4) **ಶ್ರೀ ಕೆ ಹೊನ್ನಯ್ಯ ಶೆಟ್ಟಿ,**
ಡೈರೆಕ್ಟರ ಜನರಲ್ ಸಪ್ಲೈಸ ಲಿಮಿಟೆಡ್ ಮತ್ತು ಮರ್ಚಂಟ್, ಉಡುಪಿ

(ಮೆನೇಜಿಂಗ್ ಡೈರೆಕ್ಟರ್)

ಸ್ವೀಕಾರ-ವಿಮರ್ಶೆ

ಬಿಲ್ಲವ (Billava)— ಬೊಂಬಾಯಿಯ ಬೆಂಗಳೂರು ಬಿಲ್ಲವ ಅಸೋಸಿಯೇಶನಿನ 22ನೆ ವಾರ್ಷಿಕೋತ್ಸವದ ಸ್ಮರಣಾರ್ಥವಾಗಿ ಪ್ರಕಟಿಸಿದ ಪುಸ್ತಕವಿದು ಕ್ರೌನ್ 1/4 ಸೈಜಿನ 24 ಪುಟಗಳು ಬೆಲೆ 0-6-0

ಬಿಲ್ಲವಸಮಾಜದ ಕುಂದುಕೊರತೆಗಳನ್ನೂ, ಅವುಗಳ ನಿವಾರಣೋಪಾಯವನ್ನೂ ವಿವರಿಸಿ, ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡುವ ಉದ್ದೇಶದಿಂದ ಈ ಪುಸ್ತಕವು ಪ್ರಕಟಿಸಲ್ಪಟ್ಟಿರುವುದು ಇದರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುದೇವರ ಸಂಕ್ಷಿಪ್ತ ಚರಿತ್ರೆ, ಶ್ರೀ ಸ್ವಾಮಿ ವಿದ್ಯಾನಂದರು, ಬಿಲ್ಲವರು ಬಿಲ್ಲಾಳುಗಳೇ, ಬಿಲ್ಲವ ಸಮಾಜ ಮೊದಲಾದ ವಿಚಾರಯುತ ಲೇಖನಗಳು ಸಮಾಜಸೇವೆ ದೀಕ್ಷಿತರಾದ ಕೆಲವು ಮಹನೀಯರಿಂದ ಬರೆಯಲ್ಪಟ್ಟಿವೆ

ಈ ಪುಸ್ತಕದ ಲಾಭಾಂಶವನ್ನು ವಿದ್ಯಾರ್ಥಿ ವೇತನದ ಭಂಡವಾಳಕ್ಕೆ ಸೇರಿಸಿಕೊಳ್ಳುವುದಾಗಿ ಕಾರ್ಯನಿರ್ವಾಹಕ ಮಂಡಳಿಯವರು ನಿರ್ಣಯಿಸಿದ್ದಾರೆ ಸಂಘದವರ ಈ ಸಾಹಸವು ಸ್ತುತ್ಯವಾದುದು ಸಮಾಜದ ಪ್ರತಿಯೊಬ್ಬರೂ ಈ ಉತ್ತಮ ಪುಸ್ತಕವನ್ನು ಓದಿ, ಸಮಾಜದ ಏಳಿಗೆಯನ್ನು ಹಾರೈಸಬೇಕಾಗಿ ಕೋರುತ್ತೇವೆ

ಶಿಶುಗೀತಮಾಲೆ—ಬಾಲಬಾಲಿಕೆಯರ ಉಪಯೋಗಾರ್ಥವಾದುದು ಶ್ರೀ ಟಿ ಎಸ್. ಅಯ್ಯಂಗಾರ ವಿದ್ವಾನ, ಸಿ ಟಿ ಎಲ್ ಇವರು ಮುದರಾಸು ಸರಕಾರದವರು ಪ್ರಾಥಮಿಕ ಶಾಲೆಗಳಿಗೆ ತಯಾರಿಸಿದ ಪಾಠಕ್ರಮಕ್ಕೆ ಅನುಸಾರವಾಗಿ ಬರೆದ ಶಿಶುಗೀತ ಮತ್ತು ಅಭಿನಯಗೀತಗಳ ಚಿಕ್ಕ ಪುಸ್ತಕವಿದು ಪ್ರಕಾಶಕರು ಸ್ಕೂಲ್ ಬುಕ್ ಕಂಪೆನಿ, ಮಂಗಳೂರ ಕ್ರಯ 0 2 6

ಶ್ರೀ. ಪೈಗಳು ಇಷ್ಟರಲ್ಲೇ ಹಲವು ಶಿಶುಗೀತಗಳನ್ನು ಬರೆದು ಪ್ರಸಿದ್ಧರಾಗಿದ್ದಾರೆ. ಮಕ್ಕಳ ವಯೋಗುಣಕ್ಕನುಸರಿಸಿ ಇದರಲ್ಲಿಯ ಕೋಡು ಬಳೆ, ಕಂದನ ಮುತ್ತು ರೈಲು, ಕುದುರೆ ಏನ ಮಾತು ಮೊದಲಾದ ಗೀತಗಳು ಉತ್ತಮವಾಗಿವೆ ಸಚಿತ್ರವೂ ಚಿತ್ತಾಕರ್ಷಕವೂ ಆದ ಈ ಚಿಕ್ಕ ಪುಸ್ತಕವು ಮಕ್ಕಳ ಉಪಯೋಗಕ್ಕೆ ಬೇಕಾದುದರಲ್ಲಿ ಸಂಶಯವಿಲ್ಲ

ಜನವರಿ ಪ್ರಾರಂಭದಲ್ಲಿ ವಿಶೇಷ ರೀತಿಯಲ್ಲಿ ಹೊರಡುವ "ನವಯುಗ" ಪರ್ಯಾಯ ಸಂಚಿಕೆಯನ್ನು ನಿರೀಕ್ಷಿಸಿರಿ !

. - ನವಯುಗ ಎಂಟರ್ ಪ್ರೈಸ್ ಲಿಮಿಟೆಡಿನ ಪಾಲುಗಳನ್ನು ಪಡೆಕೊಂಡು ಪ್ರೋತ್ಸಾಹಿಸಿರಿ - .

ಚರಿತ್ರೆಯಲ್ಲಿನ ಕೃಷ್ಣನನ್ನು ವ್ಯವಹಾರ ಕೃಷ್ಣನಿಂದ ದೂರ ಮಾಡಬೇಕು ಕೃಷ್ಣನ ವಿಚಾರದಲ್ಲಿ ಅನೇಕ ವಿಷಯಗಳು ನವಯುವಕರಿಗೆ ರುಚಿಸುವುದಿಲ್ಲ ಹೊಸದೊಂದು ಮನೋವೃತ್ತಿಯು ಜಾಗೃತಗೊಂಡಿದೆ. ಇವರಿಗೆ ಶ್ರೀ ಕೃಷ್ಣನ ವಿಚಾರದಲ್ಲಿ ಹೊಸ ವ್ಯಾಖ್ಯೆಗಳು ಬೇಕಾಗಿವೆ ನಾನ ನವಯುಗದ ನವಜಾಗೃತಿಯ ಬೆಳಕಿನಲ್ಲಿ ಶ್ರೀ ಕೃಷ್ಣನ ಸಂದೇಶವನ್ನು ಮೊದಲಿಂದ ತಿಳಿಯಬೇಕೆನ್ನುವವನು. ಶ್ರೀ ಕೃಷ್ಣನ ಜೀವನ ಚರಿತ್ರೆಯನ್ನು ನೀವು ಐತಿಹಾಸಿಕ ದೃಷ್ಟಿಯಿಂದ ನೋಡಬೇಕು

ಯುಗಯುಗಗಳಲ್ಲಿಯೂ ಶ್ರೀ ಕೃಷ್ಣನ ಪ್ರಭಾವವು ಹೆಚ್ಚುತ್ತಲೇ ಇದೆಯೆಂಬುದರ ಪರಿಣಾಮವು ನನ್ನ ಮೇಲೆ ಬಹಳವಾಗಿ ಆಗಿದೆ ಶ್ರೀ ಕೃಷ್ಣನು ಅನೇಕ ದೇಶಗಳಲ್ಲಿ ಅನೇಕರ ಪ್ರೇಮ ಮತ್ತು ಭಕ್ತಿಗಳಿಗೆ ಪಾತ್ರನಾಗಿದ್ದಾನೆ ಆ ಕೊಳಲ ಗಾನವು ಅನೇಕ ಮಹಮ್ಮದೀಯ ಗಾಯಕರನ್ನು ಮೋಹಗೊಳಿಸಿದೆ. ಶ್ರೀ ಚೈತನ್ಯರ ಮೂಲಕ ಪ್ರೇಮರೂಪೀ ಭಗವಾನನ ಸಂದೇಶವು ಬಂಗಾಳಿ ವಿಚಾರ ಜೀವನ ಮತ್ತು ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರಿದೆ. ಪಶ್ಚಿಮದಲ್ಲಿ ಭಗವಾನ್ ಶ್ರೀ ಕೃಷ್ಣನ ಜೀವನ ಮತ್ತು ಉಪದೇಶಗಳಿಂದ ಆಕರ್ಷಿತರಾಗಿರುವ ಈಸಾಯಿಗಳ ಸಂಖ್ಯೆಯು ಕಡಿಮೆಯಾಗಿಲ್ಲ.

ಕ್ರೈಸ್ತ ಈಸಾಯಿಗಳಿಗೆ ಏಸುಕ್ರಿಸ್ತರು ಹೇಗೋ, ಶ್ರೀಷ್ಟ ಹಿಂದುಗಳಿಗೆ ಶ್ರೀಕೃಷ್ಣನೂ ಹಾಗೆಯೇ. ಆದರೂ ಕೆಲವು ಈಸಾಯಿಗಳು ಶ್ರೀ ಕೃಷ್ಣನನ್ನು ದೂಷಿಸುವರು. ಬೇರೆ ಬೇರೆ ಮನುಷ್ಯರನ್ನು ಬೇರೆ ಬೇರೆ ಋಷಿಗಳ, ಅವತಾರಗಳ, ಪ್ರವಾದಿಗಳ ಮೂಲಕ ಸೇರಿಸಿರುವ ಈಶ್ವರನು ಒಬ್ಬನೇ ಎಂಬುದು ಅವರಿಗೆ ತಿಳಿದಿದ್ದರೆ! ಆ ಈಶ್ವರನೇ ಏಸುವಿನಲ್ಲಿ ಸಹ ಇರುವನೆಂಬುದು ಅವರಿಗೆ ಗೊತ್ತಿದ್ದಿದ್ದರೆ ಶ್ರೀಕೃಷ್ಣನನ್ನೂ ದೂಷಿಸುವಂತೆ ಮಾಡುವ ಅವರ ಏಸುವಿನ ಪ್ರೇಮವು ಅನೇಕ ಜಗಳಗಳನ್ನು ನಿವಾರಿಸಬಹುದಾಗಿತ್ತು

ಶ್ರೀ ಕೃಷ್ಣನೂ - ನವಯುಗವೂ

" ಆತ್ಮ ವಿಕಾಸವೇ ನಿಜವಾದ ಸ್ವಾತಂತ್ರ್ಯ "

(ಶ್ರೀ ಸಾಧು, T. L. ವಾಸ್ವಾನಿಯವರ ಉದ್ಬೋಧಕ ಉರ್ದು ಲೇಖನದ ಅನುವಾದವನ್ನು ನಮ್ಮ ವಾಚಕರಿಗಾಗಿ ಕೊಡಲಾಗಿದೆ)

ನಾನು ಇಂಗ್ಲೆಂಡಿನಲ್ಲಿ ಕೆಲವು ಈಸಾಯಿಗಳ ಮುಂದೆ ಶ್ರೀಕೃಷ್ಣನ ಸಂದೇಶವನ್ನು ಹೇಳಲು, ಲಂಡನಿನ ಒಬ್ಬ ಪಾದ್ರಿಯು ನನ್ನನ್ನು ಕಟುವಾಗಿ ಟೀಕಿಸಿದನು. "ಪ್ರತಿಯುಗದ ಏಸು" ಇದೇ ನನ್ನ ಭಾಷಣವಾಗಿತ್ತು. ಏಸುವಿನ ಉಪದೇಶಕ್ಕೂ ಶ್ರೀ ಕೃಷ್ಣನ ಉಪದೇಶಕ್ಕೂ ಸಂಬಂಧವನ್ನು ತೋರಿಸಿದನು ಇದಕ್ಕೆ ದೊರೆತ ಪುರಸ್ಕಾರವೆಂದರೆ ಆ ಪಾದ್ರಿಯು ಶ್ರೀಕೃಷ್ಣನನ್ನು ದೂಷಿಸಿದುದೇ. ಒಂದು ಬೆಟ್ಟದ ಮೇಲೆ ನಾನು ಒಬ್ಬ ಈಸಾಯಿ ಸ್ತ್ರೀಯನ್ನು ನೋಡಿದನು ಆಕೆಯು ಏಸುವಿನ ಹೆಸರಿನಲ್ಲಿ ಭಗವಾನ್ ಬುದ್ಧನನ್ನು ದೂಷಿಸಿದಳು ಎಷ್ಟು ಹೇಳಿದರೂ ಸುಮ್ಮನಾಗಲಿಲ್ಲ ಕೊನೆಗೆ ನಾನು ಈ ರೀತಿ ಹೇಳಿದೆನು ಏಸುವು "ಈಶ್ವರನೆಂದರೆ ಪ್ರೇಮ" ಎಂದು ಉಪದೇಶಿಸಿರುವರು ಜಗತ್ತಿಗೆ ಇಂತಹ ಪ್ರೇಮದ ಅಗತ್ಯವಿದೆ-ಎಲ್ಲ ಜನಾಂಗವ, ಎಲ್ಲ ಮತದ, ಎಲ್ಲ ಪ್ರವಾದಿಗಳನ್ನು ತನ್ನಲ್ಲಿ ಸಮಾವೇಶಮಾಡಿಕೊಳ್ಳುವ ಪ್ರೇಮ ಪೂರ್ವದವನಾಗಲೀ ಪಶ್ಚಿಮದವನಾಗಲೀ ಒಂದೇ ಒಂದು ಶಾಶ್ವತ ಆತ್ಮದಲ್ಲಿ ಸಮಾವೇಶವಾಗುವ ಪ್ರೇಮ! ಅವರ ದೃಷ್ಟಿಯು ಸತ್ಯದ ಕಡೆಗಿರುವುದು ಈ ಪ್ರೇಮದ ಹೆಸರಿನಲ್ಲಿ ನಾನು ಹೇಳುವುದೇನೆಂದರೆ, ಶ್ರೀಕೃಷ್ಣ, ಭಗವಾನ್ ಬುದ್ಧನನ್ನು ದೂಷಿಸುವವರು, ಏಸುವಿನ ಹೆಸರಿನಲ್ಲೇ ಮಹಾಪಾಪ ಮಾಡಿದಂತೆ

ಶ್ರೀಕೃಷ್ಣನು ಒಂದು ಮಹಾಶಕ್ತಿಯಾಗಿದ್ದು, ಅವನ ಆ ಶಕ್ತಿಯ ವಿಕಾಸವು ಸೂರ್ಯಮಂಡಲದೊಡನೆ ಆಗಿದೆ ಶ್ರೀಕೃಷ್ಣನ ಈ ವಿಕಾಸವು ಜಗತ್ತಿನಲ್ಲೆಲ್ಲಾ ವ್ಯಾಪಕವಾಗಿದೆ-ಆಗುತ್ತಿದೆ

ಭವಿಷ್ಯದಲ್ಲಿ ಬರುವ ಶ್ರೀಕೃಷ್ಣನ ಚಿತ್ರಗಳು ಎಲ್ಲಕ್ಕಿಂತ ಪ್ರೇಮಪಾತ್ರವಾಗಿರುವುವು ಅವು ಯಾವುವೆಂದರೆ—1 ಭಗವದ್ಗೀತೆಯಲ್ಲಿ ಸ್ಥಾಪಿತವಾಗಿರುವ ಪ್ರಾಚೀನ ಜ್ಞಾನದ ಸಂದೇಶವನ್ನು ಕೊಟ್ಟ ಶ್ರೀ ಕೃಷ್ಣನ ಚಿತ್ರವೊಂದು 2 ದರಿದ್ರರ ಸೇವಕನಾದ ಶ್ರೀಕೃಷ್ಣ, ದೀನದುಃಖಿಗಳ ಸೇವಾ ಸತ್ಕಾರದ ರೂಪಿನ ಶ್ರೀಕೃಷ್ಣ ಕೃಷ್ಣನ ಬಳಿ ಸುಂದರತೆಯ ಸಂದೇಶ ಸಹ ಇದೆ ಆದರೆ ಆದರ್ಶವಾದ ಸೌಂದರ್ಯವು ಉತ್ತಮ ಬಟ್ಟೆಗಳಲ್ಲಿಯಾಗಲೀ, ಬೆಲೆಬಾಳುವ ಆಭರಣಗಳಲ್ಲಾಗಲೀ ಇಲ್ಲ ಶ್ಯಾಮಸೌಂದರ್ಯವೇ ಉತ್ತಮ ಸೌಂದರ್ಯ ಇದರ ಸೌಂದರ್ಯವು ಒಬ್ಬ ತಪಸ್ವಿಯ ಸೌಂದರ್ಯ. ಬಡವರನ್ನು ಪ್ರೀತಿಸುವ ಸೌಂದರ್ಯ ಬಡವರ ಸೇವೆಯಲ್ಲಿ ಮಲಿನವಾದ ಕೈ ಮತ್ತು ಬಟ್ಟೆಗಳ ಸೌಂದರ್ಯ. ಶ್ರೀ ಕೃಷ್ಣನು ಈ ಶ್ಯಾಮಸುಂದರತೆಯ ಅವತಾರವಾಗಿದ್ದನು ಈ ಕಾರಣದಿಂದಲೇ ಅವನ ಜೀವನ ಮತ್ತು ಸಂದೇಶಗಳು ಮನುಷ್ಯಮಾತ್ರಕ್ಕೇ ಅಮೂಲ್ಯವಾಗಿವೆ.

ಭಾರತವು ಭಗವಾನ್ ಶ್ರೀಕೃಷ್ಣನ ಗೀತೆಯ ಸಂದೇಶವನ್ನು ಧಾರಣಮಾಡುವುದಾದರೆ, ಪಶ್ಚಿಮಕ್ಕೆ ದೊಡ್ಡ ಉಪಕಾರ ಮಾಡಿದಂತಾಗುವುದು ಏಕೆಂದರೆ ಪಶ್ಚಿಮವು ಇಂದು ಮೂರು ವಿಧದ ರೋಗಗಳಿಗೆ ತುತ್ತಾಗಿದೆ 1 ಮಿಶನರಿ, 2 ಭೌತಿಕ ವಸ್ತುಪ್ರೇಮ. 3 ನವಯುಗದ ಮಾಯೆಯ ಜಂಬ (Prestige)

ಭಾರತದ ಶಾಲೆಗಳೂ, ವಿಶ್ವವಿದ್ಯಾನಿಲಯಗಳೂ ಶ್ರೀಕೃಷ್ಣನ ಜೀವನ ಮತ್ತು ಆತನ ಆದರ್ಶಗಳನ್ನು ಸಂಪೂರ್ಣವಾಗಿ ದೂರಮಾಡಿರುವುದು ಅತ್ಯಂತ ಖೇದಕರವಾದ ವಿಷಯ

ಭಾರತವು ತನ್ನ ಶಿಕ್ಷಣದಲ್ಲಿ ನಿತ್ಯಜೀವನದಲ್ಲಿ, ರಾಜಕೀಯದಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೃಷ್ಣನನ್ನು ಪುನಃ ಹೊಂದಬೇಕು. ಶ್ರೀಕೃಷ್ಣನ ಆತ್ಮೋಪದೇಶಕ್ಕಾಗಿ ಹುಚ್ಚರಂತಾಗಬೇಕು ಒಂದು ಕಾಲದಲ್ಲಿ ಭಾರತವು ಜೀವಸಹಿತವಾಗಿತ್ತು ಸ್ವಯಂ ಭುವಿನೊಡನೆ ಆದರ್ಶ ಜೀವನದ ಸಂಬಂಧ ವಿತ್ತು, ಆದರೆ ಇಂದು ಅದು ಅಶಾಂತಿ, ಅಸಮಾಧಾನಗಳ ನೆಲೆವೀಡಾಗಿದೆ ನಿರ್ಜೀವವಾಗಿದೆ. ಕೇವಲ ಅದರ ಸ್ಮರಣೆ ಮಾತ್ರ ಜೀವಿಸಿದೆ. ನವಯುಗದಲ್ಲಿ ಗೀತೆಯು ಅದ್ಭುತ ರೂಪವನ್ನು ಹೊಂದಿದಾಗಲೇ ಅದು ಪುನಃ ಸಜೀವವಾಗುವುದು. ವಿಶ್ವವ್ಯಾಪೀ ಆತ್ಮಬಲ ಮತ್ತು ಸ್ವಾತಂತ್ರ್ಯ ಸಮಾವೇಶವಾಗಬೇಕಾಗಿದೆ

'ಆತ್ಮ ಬಲವೇ ನಿಜವಾದ ಸ್ವಾತಂತ್ರ್ಯ' ಎಂದು ಗೀತೆಯ ಉಪದೇಶ. ಇದೇ ನಿಜವಾದ ಮಾರ್ಗ, ಇದೇ ರಾಜ ಮಾರ್ಗ, ಇದರಲ್ಲೇ ಕರ್ಮ, ಭಕ್ತಿ ಮತ್ತು ಜ್ಞಾನಗಳು ದೊರೆಯುವುವು ಎಲ್ಲ ಆವಿಷ್ಕಾರಗಳ ಮೂಲವೂ ಇದೇ ಏಕತೆಯ ಈ ಸಂದೇಶವೇ ಗೀತೆಯನ್ನು ಸಮಾವೇಶ ಮತ್ತು ಶಕ್ತಿಯ ಮಹಾಗ್ರಂಥವನ್ನಾಗಿ ಮಾಡುವುದು.

ಸದ್ಯದ ವಾತಾವರಣದಲ್ಲಿ, ವಿಲಾಸ, ಗರ್ವ ಸುಖಲೋಲುಪತೆಗಳು ನಾಗರಿಕತೆಯ ಬೇರನ್ನೇ ಅಲ್ಲಾಡಿಸುತ್ತಿವೆ ಜೀವನರಹಸ್ಯದ ಮೇಲೆ ಮಿಷನರಿಗಳ ಆಕ್ರಮಣವಾಗಿದೆ ಮಾನವತೆಯು ತನ್ನ ಮನೆಯಲ್ಲೇ ಗಾಯಗೊಂಡು ಬಿದ್ದಿದೆ ಇಂತಹ ಸ್ಥಿತಿಯಲ್ಲಿ ಈ ಘೋರ ರಾತ್ರಿಯ ಮತಾಂಧತೆಯಲ್ಲಿ ಶ್ರೀ ಕೃಷ್ಣನ ಎಚ್ಚರಿಕೆಯ ಮಾತುಗಳು "ಹೇ ಅರ್ಜುನ, ಏಳು, ದಡ್ಡನಂತೆ ಕುಳಿತುಕೊಳ್ಳದೆ, ನಿರ್ಭಯನಾಗಿ ಕೆಲಸಮಾಡು. ನಿನ್ನ ಸರ್ವಸ್ವವನ್ನೂ ಆದಿಶಕ್ತಿಗೆ ಅರ್ಪಿಸು" ನಮ್ಮನ್ನೂ ಎಚ್ಚರಿಸಬೇಕು.

ಪೌರ್ವಾತ್ಯರೂ ಪಾಶ್ಚಿಮಾತ್ಯರೂ ಇಬ್ಬರೂ ಗುಲಾಮಗಿರಿಯ ಸಂಕೋಲೆಯಲ್ಲಿ ಬಂಧಿತರಾಗುತ್ತಿರುವುದು ತೀರ ಶೋಚನೀಯ. ಎಲ್ಲೆಲ್ಲಿಯೂ ನಿಜವಾದ ಮಾನವರ ಅಗತ್ಯವಿದೆ ಸ್ತ್ರೀ ಪುರುಷರ ಅಗತ್ಯವಿದೆ. ಶ್ರೀ ಕೃಷ್ಣನ ಪುತ್ರರ, ಪುತ್ರಿಯರ ಅಗತ್ಯವಿದೆ ಎಲ್ಲರೂ ಎದ್ದು ಆತ್ಮಜ್ಞಾನದ ಉತ್ತಮ ಆದರ್ಶದ ಮೇಲೆ, ನೂತನ ಭವನದ ನಿರ್ಮಾಣ ಮಾಡೋಣ

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1 4-39ರಿಂದ ಬಹಳ ವ್ಯತ್ಯಾಸಗಳಾಗಿವೆ ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ಬೊಡಕಿನ ವಿಷಯಗಳು ಅನೇಕ ಇವೆ ಕ್ರಮವಾದ ಜಮಾ ಖರ್ಚಿನ ಲೆಖ್ಖವಿದ್ದರೂ ಸಾಲದು. ಆದ್ದರಿಂದ ತಯಾರಿಸಿದ ಸಂಕ್ಷೇಪದ ನಿಜತ್ವವು ಕೆಲವೇ ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು ಅಂಥಾ ಭೇಟಿಗಳ ಸಮಯ ದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಡಿಮೆಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು 'ರಿಟರ್ನ್ ಕಳ್ಳಯಾಗಿ ತೋರಿಸಿದ್ದರೂ ತಪ್ಪವಾಗಲಿಲ್ಲ ಟೇಕ್ಸ ಹಾಜರ ಮಾಡುವ 15 ದಿನಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ

ಎಸ್. ಎಸ್ ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ ಜಸಾನಿಯವರ
ಜಗತ್ಪ್ರಸಿದ್ಧ



"ಗೊನೊಕಿಲರ್" (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟು ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ತೊಟ್ಟಿಕ್ಕುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೬೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩ ವಿ ಪಿ ಖರ್ಚು 0 8 0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ 'ಗೊನೊಕಿಲರ' ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ಮಂಗಳೂರಲ್ಲಿ ಸ್ಟಾಕಿಸ್ಟರು —ಮೆಸರ್ಸ ಇಲೆಕ್ಟ್ರೋ ಹೋಮ್ಯೊಪತ್ ಡಿಸ್‌ಪೆನ್ಸರಿ

Sole Manufacturer Dr. D. N. JASANI, Vitalbhai Patel Road, BOMBAY 4

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ

ಈಗ ದರವನ್ನು ಕೀರಾ ಕಡಿಮೆ ಮಾಡಲಾಗಿದೆ ಒಮ್ಮೆ ಬಂದು ವಿಚಾರಿಸಿರಿ

Kanara Printing Works,

Hampankatte, **MANGALORE**

DAIMONDS! DAIMONDS

K. R. K. SHET

Opposite Govt. College, Hampankatte, MANGALORE

SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎವರ್ಸ್ಟ್ ದಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೋಲೇಜಿನ ಎದುರುಗಡೆ ತೆರೆಯಲಾಗಿದೆ

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೋಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

THE MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ ಭಂಗಾರದ ಸರಕಿನ ಆಧಿನ ಮೇಲೆ ನೀಕಡೆ 7 ವರಿರ ದರದಲ್ಲಿ ಸಾಲಕೊಡಲಾಗುವುದು ನಿರಖು ಠೇವಣಾತಿ ನೀಕಡ 5 ರ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೀಕಡ 3½ ವರೆಗಿನ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ ನೆರವು ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,

President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸವೇರಿದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುವು ಇದು ಮಧುರವಾಗಿದ ಅರಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿ ತಿನ್ನ ಸಾಧ್ಯವಾಗುವುದು ಸೀಸೆ 1ಕ್ಕೆ 12 ಆಣೆ, ಟಪಾಲ ವೆಚ್ಚ



ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,

ಉಡುಪಿ ಸ್ಟಾಕಿಸ್ಟ್‌ರು:- ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ.**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವುದು **ರಸಾಯನ ಗುಣ.**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು **ಸುಖಸೇವನ** ಸುಖಸೇವನದಿಂದ ಮಧುರರುಚಿಯ ರಸಾಯನವು ಚಾಣಾಂತಿ ಯುರಿರುಚಿ, ಅಗ್ನಿಮಾಂದ್ಯ, ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು

ಬಟ್ಟಲು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ

ಮೈಸೂರು ಸ್ಟೇಟಿನ ಏಜಂಟರು – ಶ್ರೀ ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ

ಮಿತ ದರದಲ್ಲಿ ಮಾರಾಟ.



ಹೊಸ ಯೋಜನೆಗಳಿಗೆ ಅನ್ವಯವಾಗುವ ಸಲುವಾಗಿ ಗಟ್ಟಿಯಾಗಿ ಯಾ ಹೆಚ್ಚು ಕಾಲ ಬಾಳಿಕೆ ಬರುವಂತಹ ಸ್ವಿಸ್ ತಯಾರಿಯ ಉರುಟು ಇಥವಾ ಚಚ್ಚೌಕ ರಿಸ್ಟುವಾಚುಗಳು

ನಂಬ್ರ 401 ಕ್ರೋಮಿಯಮ್ ರೂ 3-12-0, 402 ಗೋಲ್ಡನ್ ಕೇಸು ರೂ. 4 12 0, 517 ಕ್ರೋಮಿಯಮ್ ಕೇಸು 6 8-0, 518 ಗೋಲ್ಡನ್ ಕೇಸ 8-0 0, ಚರ್ಮದ ಚಬಿನೆಯುಳ್ಳ, ನಂಬ್ರ 409 ಕ್ರೋಮಿಯಮ್ 9 8 0, ನಂಬ್ರ 410 ಗೋಲ್ಡನ್ ಕೇಸ 10 8 0, 411 ರೋಲ್ಡ್‌ಗೋಲ್ಡ್ 15 0 0.

ಪ್ಯಾಕಿಂಗ್ ಮತ್ತು ಪೋಸ್ಟೇಜು ಬಗ್ಗೆ 0-9-0 ಹೆಚ್ಚು

(ಪತ್ರವ್ಯವಹಾರ ಇಂಗ್ಲಿಷಿನಲ್ಲಿ)

ಬಾಪಲಾಲ್ ಎಂಡ್ ಕೊ, **Bapalal & Co.,**

ಅಬ್ದುಲ್ ರೆಹಮಾನ್ ಸ್ಟ್ರೀಟ್, 101 Abdul Rehman St.

ಬೊಂಬಾಯಿ 3 BOMBAY 3

ಸ್ಥಾಪನೆ **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆವಶ್ಯವಾದ ಎಲ್ಲಾ ತರದ ರಬ್ಬರ್ ಮೊಹರುಗಳು, ಸೈನ್ ಬೋರ್ಡುಗಳು ಹಿತ್ತಾಳೆಯ ಬಿಲ್ಲೆ, ಮೊಹೊರುಗಳು ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು



Crown Rubber Stamp Co , Balmat Road, MANGALORE

Included by the Mysore Govt Stores Purchase Committee in the list of approved firms

ಹೊಸ ಪುಸ್ತಕ! ಈಗಲೇ ಪ್ರಿಂಟಾಗಿದೆ!!

ಸೆಲ್ಫ್ ಇಂಗ್ಲಿಷ್ ಸ್ಟಡಿ SELF ENGLISH STUDY

ಎಂಬ ಇಂಗ್ಲೀಷನ್ನು ಬಹು ಸುಲಭವಾಗಿ ಕಲಿಸುವ ಕನ್ನಡ ಪುಸ್ತಕ 1-8-0



ಕನ್ನಡ ಓದಲಿಕ್ಕೆ ತಿಳಿದವರು ಬೇರೆ ಸಹಾಯವಿಲ್ಲದೆ ಇಂಗ್ಲೀಷ್ ಓದುವುದನ್ನೂ ಮಾತಾಡುವುದನ್ನೂ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ ಕೆಲವು ತಿಂಗಳಲ್ಲಿ ಕಲಿತುಕೊಳ್ಳಬಹುದು ಇಂಥಾ ಪುಸ್ತಕವನ್ನು ಇದುವರೆಗೆ ಯಾರೂ ಬರೆಯಲಿಲ್ಲ, ೭೭೬ ಪೇಜುಗಳು ಇರುವ ದೊಡ್ಡ ಪುಸ್ತಕ ಸ್ವಲ್ಪ ಪ್ರತಿಗಳು ಮಾತ್ರ ಇರುವವು ಬೇಗನೇ ಬರೆಯಿರಿ ಈ ಪುಸ್ತಕದ ಸಹಾಯದಿಂದ ಕನ್ನಡ ಓದಬಲ್ಲವರ್ಯಾರೇ ಆಗಲಿ ಅವರು ಸ್ವಲ್ಪ ದಿವಸಗಳಲ್ಲಿ ಇಂಗ್ಲೀಷ್ ಕಲಿತುಕೊಳ್ಳಬಹುದು ಇವು ಆದಕ್ಕಾಗಿ ಎಲ್ಲಾ ಹೋಗಬೇಕಾಗಿಲ್ಲ ಮನೆಯಲ್ಲೇ ಈ ಪುಸ್ತಕ ಓದಿ ಇಂಗ್ಲೀಷ್ ಓದುವುದು ಎಲ್ಲಾ ಸುಲಭವಾಗಿ ಬರುತ್ತೆ ಪುಸ್ತಕದ ಬೆಲೆ ರೂ 1-8-0

Western Swiss watch Co.

Book Sellers Post Box No 68

G P. O MADRAS

ವೆಸ್ಟರ್ನ್ ಸ್ವಿಸ್ ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂ 68 ಮದರಾಸ್

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗೆ ನಮ್ಮ ವಿಲಿಯಮ್ ಎಂಡ್ ಕೋ ರವರ

ದಾದ ಮತ್ತು ಗಜಕರ್ಣ ಕ್ಯೂರ್ ಮಾಕುಗಳು ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ಕ್ರಿಮಿನಾಶಕದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಕೆಟಿನಲ್ಲಿ ನಮ್ಮ ಔಷಧ ಕಂಪೆನಿಯಲ್ಲಿ ಯಾವ ವ್ಯತ್ಯಾಸವೂ ಆಗಲಿಲ್ಲವು ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾನುಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಪಾರಾಚಾರ್ಯರ ಇವರಲ್ಲಿಗೆ ಬನ್ನಿರಿ

ಅಲ್ಲಿ ನೋಡಿದೂ ಕೊಳ್ಳಲೂ ಬೇಕಷ್ಟು ಸುಮಾನುಗಳಿವೆ

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟೆಲ್ಲಿ ಹಾರ್ಲೆಮ್ ಆಯಿಲ್



ಎಂಬ "**ಸಂಜೀವನ**" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟು ಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಸ್ವರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ ಔಷಧಿ" ಎಂದು ಕರೆಯಲ್ಪಡುತ್ತಿವ ವಾನಿಂಗ್ ಟೆಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ತಜ್ವರ, ನಿಗೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟೆಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟೆಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟೆಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಗುವದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟೆಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ ಈ ವಾನಿಂಗ್ ಟೆಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟೆಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ

ವಾನಿಂಗ್ ಟೆಲ್ಲಿ ಹಾರ್ಲೆಮ್ ಆಯಿಲ್‌ನ
ಕೆಪ್ಸಲುಗಳ
ಕೆಲವು ಸೀಸೆಗಳು ಮಾತ್ರ ಉಳಿದಿವೆ.
ಬೇಗನೇ ತರಿಸಿಕೊಳ್ಳಿರಿ.
ವಿಳಂಬ ಮಾಡಿದರೆ ದೊರೆಯುವುದು ಕಷ್ಟ



ವಾನಿಂಗ್ ಟೆಲ್ಲಿ ಹಾರ್ಲೆಮ್ ಆಯಿಲ್
ಯುದ್ಧದ ದೆಸೆಯಿಂದ ಹೊಸ ಔಷಧಿ
ಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!
ಕೆಲವು ಸೀಸೆಗಳು ಮಾತ್ರ ಉಳಿದಿವೆ
ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರೈಡ್ – ಒಯಿಂಟ್‌ಮೆಂಟ್



ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ವಿಸರ್ಜನ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವದಾದರೆ, "ಹೆವನನ್" ಎಂಬ ಹೆಮೊರೈಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೆಳಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು, ಸೀಸೆ 1ಕ್ಕೆ ರೂ. **1-4-0** ವಿ ಪಿ ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಸ್ವಭಾವವುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಾಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸರಿಯಾಗಿ ಸಾಗಿಸಿ ನಿತ್ಯಕ್ಕೆ ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ... ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ 1 0 0 ವಿ ಪಿ ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರ

The Eclipse Distributing Agency,

Dahanu Road, B. B & C. I. Ry BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ

PRINTED BY S S KARANTH AT THE TULUNAD PRESS, UDIPI AND PUBLISHED BY K H SHETTY AT NAVAYUGA OFFICE, UDIPI, S INDIA.

[Regis]tered No. M 3618 7-12-193[9]

ನವಯುಗ

NAVAYUGA

To our clients past, present and future. Flung far and wide over the Sub-continent of India.

OUR GREETINGS

Our glorious success in publishing our 1939 Annual, the splendid response of the business community, the enthusiastic welcome of the reading public and last but not least the resounding praise about its get up from high literary circles emboldens us to venture on our 1940 Annual in these very difficult times.

Our Annual Numbers have been the biggest literary attraction of the season. This year we hope to surpass ourselves.

NAVAYUGA ANNUAL NUMBER 1940

DATE OF PUBLICATION 11-1-1940.

RATES OF ADVERTISEMENTS:

Full page in reading matter	,,	25/-.
Half page in reading matter	,,	15/-.
Quarter page in reading matter	,,	8/-.
1/8 page in reading mater	,,	5/-.

Small Advt. Re. 1 per square Inch.

Front Cover page	Rs.	100/-.
Back cover page	,,	75/-.
Second & Third cover page each	,,	50/-.

SEND YOUR ADVERTISEMENT IMMEDIATELY.

ADVT. MANAGER:—**'NAVAYUGA', UDIPI, S. INDIA.**

ತಾ. 11—1—1940ಕ್ಕೆ ಹೊರಡುವ

ನವಯುಗ ಪರ್ಯಾಯ ಸಂಚಿಕೆಯಲ್ಲಿ

ನಿಮ್ಮ ಜಾಹೀರಾತುಗಳನ್ನು ಕೊಡಿರಿ.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ

ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್, ಕೆ ಆರ್ ಕೆ ಶೆಟ್ಟಿ ಬಿಲ್ಡಿಂಗ್, ಮಿಶ್ಶನ್ ಹೈಸ್ಕೂಲ್ ರೋಡು ಮಂಗಳೂರು — ಅಥವಾ — ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ

The Asiatic Govt. Security Assurance Co. Ltd.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920)

Reserves Rs. 2,02,800/- Paid up Capital. Rs 1,82,100/-

PRINCIPAL OFFICE COURT ROAD, UDIPI.

OTHER OFFICES

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year.

For further particulars please address or call at any of our offices.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯಾಪಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯಾಪಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ಸ್ ಹೋಟೆಲ್

ಫೋನ್ 406 — ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು, ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಪ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್ - ಕೆ. ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance*

CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48 40,801	9,24,965	24 50,234
1935	2,52,08,418	18 39,296	42,98,820
1938	3,61,56 764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar

„ **M Shivarama Rao,** Organizer, Puttur

Or

Sri J. A PUTRAN, Branch Manager, MANGALORE

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ
NAVAYUGA

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1-12-0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೪

ಉಡುಪಿ, ಗುರುವಾರ, ೭—೧೨—೧೯೩೯.
UDIPI, THURSDAY, 7-12-1939.

VOL. 19
No. 14

ಸರ್. ಸಾದುಲ್ಲರಿಗೆ ಪ್ರಬಲ ವಿರೋಧ

ಆಸ್ಸಾಮಿನಲ್ಲಿ ಸರ್ ಮಹಮ್ಮದ್ ಸಾದುಲ್ಲರವರು ರಚಿಸಿರುವ ಅಲ್ಪಸಂಖ್ಯಾಕ ಮಂತ್ರಿಮಂಡಲವು ಹೆಚ್ಚು ಕಾಲ ಬಾಳುವ ಸಂಭವ ತೋರುವುದಿಲ್ಲ ಒಟ್ಟು 108 ಮಂದಿ ಎಸೆಂಬ್ಲಿ ಮೆಂಬರರ ಪೈಕಿ ಕಾಂಗ್ರೆಸ್ ಕೊಯಲಿಶನ್ ಪಕ್ಷಕ್ಕೆ ಸೇರಿದ 59 ಮಂದಿ ಒಕ್ಕಟ್ಟಾಗಿದ್ದು, ಸರ್. ಸಾದುಲ್ಲರು ಮಾಡಿದ ಅಪಮಾನಕ್ಕೆ ಪ್ರತೀಕಾರ ಮಾಡಿಯೇ ಸಿದ್ಧವೆಂಬ ನಿರ್ಧಾರದಿಂದಿದ್ದಾರೆ. ಈ ಪಕ್ಷೀಯರಿಗಿರುವ ಬಹುಪಕ್ಷವನ್ನು ಯಾವ ರೀತಿಯಿಂದಾದರೂ ಸರ್. ಸಾದುಲ್ಲರಿಗೆ ಕಡಿಮೆಮಾಡಲು ಸಾಧ್ಯವಿಲ್ಲ. ಆಸ್ಸಾಮ್ ಎಸೆಂಬ್ಲಿ ಸಭೆಯು ಕರೆಯಲ್ಪಟ್ಟ ದಿನಕ್ಕಿಂತ ಒಂದೇ ಒಂದು ದಿನ ಹೆಚ್ಚು ಸರ್. ಸಾದುಲ್ಲ ಮಂತ್ರಿಮಂಡಲವು ಬಾಳಿರಲಾರದೆಂದೇ ಕೊಯಲಿಶನ್ ಪಕ್ಷದವರ ಅಭಿಮತ.

ದೇಶೀಯ ರಾಜರುಗಳ ಆಕ್ಷೇಪ

ವೈಸರಾಯರು ರಚಿಸಬೇಕೆಂದು ಪ್ರಯತ್ನಿಸುತ್ತಿರುವ ಸಲಹೆಗಾರ ಮಂಡಲಿಗೆ (Consultative Committee) ಹಿಂದೀ ದೇಶೀಯ ರಾಜರುಗಳೂ ವಿರೋಧವಿರುತ್ತಾರೆ. ಈ ಕಮಿಟಿಯ ಉದ್ದೇಶ ಮತ್ತು ಕಾರ್ಯವನ್ನೂ, ಮತ್ತು ಅದರಲ್ಲಿ ಬ್ರಿಟಿಷ್ ಇಂಡಿಯದ ಪ್ರತಿನಿಧಿಗಳಿಗೂ ತಮಗೂ ಇರುವ ಸಂಬಂಧವನ್ನೂ ಸ್ಪಷ್ಟಪಡಿಸದೆ ತಾವು ಅದಕ್ಕೆ ಸೇರಲು ಸಿದ್ಧವಿಲ್ಲೆಂದು ದೇಶೀಯ ರಾಜರುಗಳ ಸಂಘದವರು ತಿಳಿಸಿರುತ್ತಾರೆ. ಫೆಡರೇಶನಿಗೂ ಈ ಕಮಿಟಿಗೂ ಸಂಬಂಧವಿರಬಹುದೆಂದು ಅವರ ಶಂಕೆ. ಸಲಹೆಗಾರ ಮಂಡಲಿಯ ಬದಲಿಗೆ ಇನ್ನೇನನ್ನಾದರೂ ಸೂಚಿಸಬಹುದೆಂದು ವರಿಷ್ಠ ಸರಕಾರವು ಈ ರಾಜರುಗಳೊಡನೆ ಕೇಳಿರುತ್ತದೆಂದು ತಿಳಿದುಬರುತ್ತದೆ

ಕಾಂಗ್ರೆಸಿಗೆ ಹೊಸ ಆಶ್ವಾಸನೆಯೇ?

ಗೌರವಪೂರ್ವಕವಾದ ರಾಜಿಯ ಯತ್ನವನ್ನು ಮುಂದುವರಿಸಲು ಅಲಹಾಬಾದಿನಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿದ ನಿರ್ಣಯದಿಂದ ಡಿಲ್ಲಿಯಲ್ಲಿ ಒಂದು ಬಗೆಯ ಸಮಾಧಾನವುಂಟಾಗಿದೆ. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗನ್ನು ತೃಪ್ತಿಪಡಿಸುವ ವಿಧಾನದ ಕುರಿತು ಡಿಲ್ಲಿ ಮತ್ತು ಲಂಡನುಗಳೊಳಗೆ ಎಡೆಬಿಡದೆ ಅಭಿಪ್ರಾಯ ವಿನಿಮಯ ನಡೆಯುತ್ತಿದೆ. ಹಿಂದೂದೇಶದ ಶೀಘ್ರವಾದ ರಾಜಕೀಯ ಭವಿಷ್ಯದ ಕುರಿತು ಒಂದು

ಸಮಾಚಾರ ಸಂಗ್ರಹ

ರೀತಿಯ ಆಶ್ವಾಸನೆಯನ್ನು ಸರಕಾರವು ಕೊಡಬಹುದೆಂದೂ, ಅದರಿಂದ ಕಾಂಗ್ರೆಸು ತೃಪ್ತಿಹೊಂದಬಹುದೆಂದೂ ನಂಬಲಾಗಿದೆ.

ಮಿಶನರಿಯ ಅನುಕರಣೀಯ ಮಾದರಿ

ಮಥುರದ ಕ್ಲೆನ್ಸಿ ಮಿಶನ್ ಹ್ಯಾಸ್ಕೂಲಿನ ಮೆನೇಜರರಾದ ರೆವೆರೆಂಡ್ ಮಿ. ಟೆಂಪ್ಲಿನರು, ಹಿಂದೂದೇಶದ ಅಲ್ಪ ಸಂಖ್ಯಾಕರಲ್ಲಿ ಕ್ರೈಸ್ತರನ್ನು ಸೇರಿಸಿದುದಕ್ಕಾಗಿ ವೈಸರಾಯರ ಬಾಷಣವನ್ನು ಟೀಕಿಸಿ ಹೇಳಿಕೆ ಹೊರಡಿಸಿದುದರಿಂದ ಈ ಮಿಶನಿನ ಅಧಿಕಾರಿಗಳು ರೇಗಿ ಬಿದ್ದು ರೆವೆರೆಂಡ್ ಟೆಂಪ್ಲಿನರು, ರಾಜಕೀಯದಲ್ಲಿ ಕೈ ಹಾಕಬಾರದೆಂಬ ಪ್ರತಿಜ್ಞೆಗೆ ವಿರೋಧವಾಗಿ ನಡೆದುದರಿಂದ ಹಿಂದೂದೇಶವನ್ನು ಬಿಟ್ಟು ಹೋಗಬೇಕೆಂದು ಸೂಚಿಸಿರುವರು. ಆದರೆ ಟೆಂಪ್ಲಿನರು ಅದಕ್ಕೊಪ್ಪಿರುವುದಿಲ್ಲ. ತಾನು ಪ್ರತಿಜ್ಞೆಗೆ ವಿರೋಧವಾಗಿ ನಡೆದಿರುವೆನೆಂದು ಇಂಡಿಯಾ ಸರಕಾರವು ಹೇಳಬೇಕಲ್ಲದೆ ಮಿಶನಿನ ಅಧಿಕಾರಿಗಳಲ್ಲ ಇಂಗ್ಲೆಂಡು ಕೂಡ ಹಿಂದೂದೇಶಕ್ಕೆ ಡೊಮಿನಿಯನ ಸ್ಟೇಟಸನ್ನು ಕೊಡಲೊಪ್ಪಿದೆ. ತಾನೇನೂ ರಾಜಕೀಯ ಭಾವನೆಯಿಂದ ವೈಸರಾಯರ ಭಾಷಣವನ್ನು ಟೀಕಿಸಿಲ್ಲ. ಅಂತರರಾಷ್ಟ್ರೀಯ ನವ ವ್ಯವಸ್ಥೆ, ಲೋಕ ಶಾಂತಿ ಮತ್ತು ಸೌಹಾರ್ದದ ಧಾರ್ಮಿಕ ದೃಷ್ಟಿಯಿಂದ ಪ್ರೇರಿತನಾಗಿ ತಾನು ಹೇಳಿಕೆ ಹೊರಡಿಸಿದುದು. ಸರಕಾರವೂ ಧರ್ಮವೂ ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ಅವು ಒಂದನ್ನೊಂದು ಹೊಂದಿಕೊಂಡಿವೆ. ಧರ್ಮವು ತನ್ನ ಸ್ವಾರ್ಥ ಸಾಧನೆಗಾಗಿ ಸಂಕುಚಿತ ಜಾತೀಯ ಮತ್ತು ರಾಜಕೀಯ ಭಾವನೆಯುಳ್ಳದಾಗಬಾರದು ಈ ದೃಷ್ಟಿಯಿಂದ ಅದು ಸರಕಾರದಿಂದ ಪ್ರತ್ಯೇಕವಿರುವುದು. ಧಾರ್ಮಿಕ ಕ್ಷೇತ್ರವು ಇಹ ಜೀವನವನ್ನು ಬಿಟ್ಟು ಪ್ರತ್ಯೇಕವಿರುವುದಿಲ್ಲ. ಯುದ್ಧವು ನಿರಂತರವೂ ನಿಷೇಧಿಸಲ್ಪಡಬೇಕಾದರೆ ಲೋಕದ ನವ ವ್ಯವಸ್ಥೆಯಾಗಬೇಕು. ಅದಕ್ಕಾಗಿ ಪ್ರಯತ್ನಿಸುವುದು ಧಾರ್ಮಿಕ ಸಂಘಗಳ ಜವಾಬ್ದಾರಿ ಇರುತ್ತದೆ. ಇಂತಹ ಅಂತರ ರಾಷ್ಟ್ರೀಯ ದೃಷ್ಟಿಯಿಂದಲೇ ತಾನು ವೈಸರಾಯ ಭಾಷಣವನ್ನು ಟೀಕಿಸಿದುದೆಂದು ರೆವೆರೆಂಡ್ ಟೆಂಪ್ಲಿನರ ಅಭಿಮತ.

ಬಿಹಾರ್ ಸರಕಾರದ ರೀತಿಯೇ ಬೇರೆ.

ಸಂಯುಕ್ತ ಪ್ರಾಂತ, ಬೊಂಬಾಯಿ, ಮದರಾಸು ಮೊದಲಾದ ಪ್ರಾಂತಗಳ ಗವರ್ನರರು, ಕಾಂಗ್ರೆಸ್ ಮಂತ್ರಿಗಳ ಧೋರಣೆಯನ್ನೇ ಅನುಸರಿಸಿ ಆಡಳಿತ ನಡಿಸುತ್ತಿರುವಾಗ ಬಿಹಾರಿನ ರೀತಿಯೇ ಬೇರೆ. ದಿದೆ. ಬಿಹಾರಿನ ರಾಮಘರ್ ಕಾಂಗ್ರೆಸಿನ ಸ್ಥಳವನ್ನು ಶುಚಿಯಾಗಿಡಲು ಮೊದಲಿನ ಮಂತ್ರಿಗಳು ಯಾರೂ ಕೇಳದೆ ತಾವಾಗಿ ಮಂಜೂರುಮಾಡಿರುವ ರೂ೪,೦೦೦ವನ್ನು ಕೂಡಲೆ ರದ್ದುಪಡಿಸಲಾಗಿದೆ. ಪಾಟ್ನ ಮೆಡಿಕಲ್ ಕೋಲೆಜಿಗೆ ಕೂಡಲೆ ಎರಡು ಮಂದಿ ಯುರೋಪಿಯನ್ ಐ. ಎಮ್. ಎಸ್.ರು ಪ್ರೊಫೆಸರರಾಗಿ ನೇಮಿಸಲ್ಪಟ್ಟಿದ್ದಾರೆ. ಆದರೆ ಕಾಂಗ್ರೆಸ್ ಮಂತ್ರಿಗಳು ಈ ಸ್ಥಾನಗಳಿಗೆ ಹಿಂದೀಯರನ್ನು ಮತ್ತು ಪ್ರಾಂತದೊಳಗಿನವರನ್ನು ನೇಮಿಸುವವರಿದ್ದರು. ರಾಂಚಿ ಜಿಲ್ಲಾ ಬೋರ್ಡಿಗೆ ಮೆಂಬರರನ್ನು ನೇಮಿಸುವ ವಿಷಯದಲ್ಲಿ ಈಗಣ ಸರಕಾರವು ಕಾಂಗ್ರೆಸ್ ಮಂತ್ರಿಗಳ ಹುಕುಮನ್ನೇ ಬದಲಾಯಿಸಿರುವುದು. ರಾಂಚಿಯಲ್ಲಿ ಸೇನಾತರಬೇತಿ ಶಾಲೆಯನ್ನು ತೆರೆಯುವ ಯೋಜನೆಯೇ ನಿಲ್ಲಿಸಲ್ಪಡುವುದೆಂದು ಪ್ರಸಿದ್ಧಿಯುಂಟಾಗಿದೆ. ಕಾಂಗ್ರೆಸ್ ಮಂತ್ರಿಗಳು ಆರಂಭಿಸಿದ ಹೊಸ ಯೋಜನೆ ಮತ್ತು ಸ್ಥಾಪಿಸಿದ ಹೊಸ ಖಾತೆಗಳ ವೆಚ್ಚವನ್ನೆಲ್ಲಾ ಕಡಿಮೆಮಾಡಬೇಕೆಂದು ಆಜ್ಞೆ ಕೊಡಲ್ಪಟ್ಟಿದೆ. ಕರಗಳನ್ನೆಲ್ಲಾ ನಿಷ್ಠುರವಾಗಿ ವಸೂಲುಮಾಡಬೇಕೆಂದಾಗಿದೆ.

60,000 ಜೆಕ್ಕರ ಮೇಲೆ ಕಠಿಣ ನಿರ್ಬಂಧ

60,000 ಜೆಕ್ಕರನ್ನು ಜರ್ಮನಿಗೊಯ್ದು ಕಠಿಣ ನಿರ್ಬಂಧದೊಳಗಿರಿಸಿ ಗುಲಾಮರಂತೆ ಅವರಿಂದ ಕೆಲಸಮಾಡಿಸಲಾಗುತ್ತದೆಂದು ತಿಳಿದುಬಂದಿದೆ. ಇಷ್ಟು ಮಾತ್ರವಲ್ಲದೆ ಜೆಕ್ಕಿಯದಲ್ಲಿ ಜನರೇನಾದರೂ ಜರ್ಮನಿಗೆ ವಿರೋಧವಾಗಿ ಗಲಾಟೆ ಎಬ್ಬಿಸಿದರೆ ಇವರನ್ನು ಜವಾಬ್ದಾರರನ್ನಾಗಿ ಮಾಡಲಾಗಿದೆ ಇವರಿಗೆ ಇನ್ನೂ ಹೆಚ್ಚಿನ ಶಿಕ್ಷೆ ಕೊಡಲಾಗುವುದೆಂದು ಎ

NO ONE IS SAFE!

NATURAL CAUSE *May deprive your family*

YOU MEANT TO TAKE OUT A POLICY. YOU HAD DISCUSSED ONE WHICH WOULD HAVE BROUGHT YOU SUFFICIENT INCOME! BUT WRITING WAS TOO MUCH TROUBLE FOR YOU. THEN AN ACCIDENT HAPPENED. NOW YOUR FAMILY IS LEFT PENNILESS. A SAD STORY BUT ALAS HOW COMMON! YOU ARE IN DANGER AT EVERY MOMENT. SAFEGUARD TO DAY. INSURE WITH **TROPICAL.** WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE?

Quotations for all ages and amounts to suit all circumstances.

TROPICAL INSURANCE COY., LTD.
NEW DELHI

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.

ಎಂ. ಸುಂದರರಾಮ ಶೆಟ್ಟಿ,	ಅ	ಕೆ. ರಾಮಮೂರ್ತಿ, ಎಂ. ಎ.,
ಬ್ರಾಂಚ್ ಮೆನೇಜರ್,	ಥ	ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟೆ—ಮಂಗಳೂರು.	ವಾ	160 ಮೌಂಟ್‌ರೋಡ್, ಮದ್ರಾಸು

ಚ್ಚರಿಸಲಾಗಿದೆ. ಹಳೆಯ ಜೆಕೊಸ್ಲೊವೇಕಿಯಾದಲ್ಲಿ ಆಹಾರದ ತೀವ್ರ ಕೊರತೆಯುಂಟಾಗಿದೆ. ಮಾಂಸ, ಸಕ್ಕರೆ, ಇದ್ದಲು ಮತ್ತು ರೊಟ್ಟಿ ಕೂಡಾ ಅಲ್ಪಸ್ವಲ್ಪವಾಗಿ ಮಾತ್ರ ದೊರೆಯುತ್ತದೆ.

ಚಿನ್ನದ ಬದಲಿಗೆ ಉಕ್ಕಿನ ಉಂಗುರ

ಜರ್ಮನಿಯಲ್ಲಿ ಉಕ್ಕಿನ ವಿವಾಹದ ಉಂಗುರಗಳೀಗ ತಯಾರಿಸಲ್ಪಡುತ್ತಿವೆ. ಅವುಗಳು ಬಹಳ ಒಳ್ಳೆಯ ಮತ್ತು ಉದಾತ್ತ ಭಾವನೆಗಳನ್ನುಂಟುಮಾಡುವವೆಂದು ಪತ್ರಿಕೆಗಳು ಪ್ರಚಾರಮಾಡತ್ತಿವೆ. ಜರ್ಮನಿಯ ವಿವಾಹಿತ ದಂಪತಿಗಳೆಲ್ಲಾ ಈ ನೂತನ ಉಕ್ಕಿನುಂಗುರಗಳನ್ನಿಟ್ಟುಕೊಂಡು ತಮ್ಮ ಚಿನ್ನದುಂಗುರಗಳನ್ನು ಕೊಡಬೇಕಾಗಿದೆ. ಜರ್ಮನ್ ಜನತೆಯಲ್ಲಿರುವ ಚಿನ್ನವನ್ನೆಲ್ಲಾ ಸಂಗ್ರಹಿಸುವ ಪ್ರಯತ್ನ ನಡೆದಿದೆ

ಜಪಾನು ಇಷ್ಟರಲ್ಲೇ ಪರಾಜಿತವಾಗಿದೆ!

ಸೋವಿಯೆಟ್ ರಶ್ಯವು ಚೈನಕ್ಕೆ ಮಾಡುವ ಸಹಾಯವು ಅಧಿಕವಾಗುತ್ತಿದೆ ಸುಮಾರು 10,000 ಸೈನಿಕ ಲೋರಿಗಳನ್ನು ರಶ್ಯವು ಚೀನೀ ಸರಕಾರದ ವಶಕ್ಕೊಪ್ಪಿಸಿದೆ ಈ ಲೋರಿಗಳ ಮೂಲಕವಾಗಿ ಚೈನವು ಮೆಂಗನೀಸ್ ಮದರು ಮೊದಲಾದ ಪದಾರ್ಥಗಳನ್ನು ಸೈಬೀರಿಯಕ್ಕೆ ಕಳುಹಿಸಬಹುದು ಚೀನೀ ಸರಕಾರಕ್ಕೆ ಕೊಡುವ ಸಾಲವನ್ನು ರೂ. 150ಮಿಲ್ಯ ಡೋಲರುಗಳಿಂದ ರೂ. 250 ಮಿಲ್ಯಕ್ಕೇರಿಸಲಾಗಿದೆ. ಮಾರ್ಶಲ್ ಚ್ಯಾಂಗರು, ಚುಂಕಿಂಗಿನಲ್ಲಿ ನಡೆದ ಚೀನೀ ಪ್ರತಿನಿಧಿಗಳ ಸಭೆಯಲ್ಲಿ ಭಾಷಣಮಾಡುವಾಗ, ಜಪಾನು ಇಷ್ಟರಲ್ಲೇ ಸೋತಂತೆಯೇ ಸರಿಯೆಂದು ಹೇಳಿರುವರು. ಚೀನವು ಕಟ್ಟಕಡೆಗೆ ಜಯಶೀಲವಾಗಿ, ಲೋಕದ ನವವ್ಯವಸ್ಥೆಯಲ್ಲಿ ತನ್ನ ಹಕ್ಕಿನ ಸ್ಥಾನ ಪಡೆಯಲಿದೆ 2ವರ್ಷಗಳಹಿಂದೆ ಯುದ್ಧಾರಂಭದಲ್ಲಿದ್ದುದಕ್ಕಿಂತ ಚೀನೀ ಸೇನಾಬಲವು ಈಗ ದ್ವಿಗುಣಿತವಾಗಿದೆ ಕಳೆದ 6ತಿಂಗಳುಗಳಲ್ಲಿ ಜಪಾನ ಸೇನೆಯು ಮುಂದೊತ್ತಿರವುದಿಲ್ಲ. ಮಾತ್ರವಲ್ಲದೆ ಹಲವು ಅಪಜಯ ಪಡೆದಿದೆ ಚೀನೀ ಜಪಾನ ಸಮಸ್ಯೆಯು ಅದೊಂದು ಜಾಗತಿಕ ಸಮಸ್ಯೆ. ಚೀನೀ ಜಪಾನಯುದ್ಧವು ಕೊನೆಗೊಳ್ಳದೆ ಲೋಕಶಾಂತಿಯಾಗಲಿ, ನವವ್ಯವಸ್ಥೆಯಾಗಲೀ ಅಸಾಧ್ಯ ಜಪಾನಿನ ಸೇನಾಶಕ್ತಿಯು ಈಗ ಕುಂದಿಹೋಗಿದೆ. ಆದುದರಿಂದ ಸೇನಾದೃಷ್ಟಿಯಿಂದ ಅದು ಇಷ್ಟರಲ್ಲೇ ಪರಾಜಿತವಾಗಿದೆ. ಆದೀಗ ರಾಜಕೀಯ ಮತ್ತು ಸಾಂಪತ್ತಿಕ ಸಾಧನಗಳಿಂದ ಚೀನದಲ್ಲಿ ತನ್ನ ಅಧಿಕಾರ ಸ್ಥಾಪಿಸಲೆತ್ನಿಸುವುದು ತನ್ನ ಕೈಗೊಂಬೆಯಾದ ಸರಕಾರವನ್ನು ಸ್ಥಾಪಿಸಲೆತ್ನಿಸುವುದು ಇಂತಹ ಸರಕಾರಕ್ಕೆ ಯಾರೂ ಬೆಂಬಲಕೊಡಕೂಡದು ಬೆಂಬಲಕೊಡುವವರು ಜಪಾನಿನ ಗುಲಾಮರೆಂದೇ ಮಾರ್ಶಲ್ ಚ್ಯಾಂಗರ ಭಾಷಣದ ಸಾರ

ಪ್ರಕಟಣೆ.

ಪುತ್ತೂರು ತಾಲೂಕು ಪಳ್ಳೀ ಸೇರಿಂಕೆ ಗ್ರಾಮದ ವೆಂಕಟ್ರಮಣ ಉಪಾಧ್ಯಾಯರ ಮಗ ಪಾಲಿ ಉಡ್ಪಿ ಪೇಜಾವರ ಮಠದಲ್ಲಿರುವ ಮಿಯ್ಯಾಳಿ ನಾರಾಯಣಾಚಾರ್ಯನು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ–ನಾನು ಈ ಮುಂಚೆ M ನಾರಾಯಣ ಉಪಾಧ್ಯಾಯ ಎಂದು ದಸ್ಕತು ಹಾಕುತ್ತಿದ್ದು ಈಗ ತಾ 14 11 39ರಿಂದ M ನಾರಾಯಣಾಚಾರ್ಯ ಎಂದು ನನ್ನ ದಸ್ಕತು ಹಾಕಲು ಪ್ರಾರಂಭಿಸಿರುತ್ತೇನೆ ಇನ್ನು ಮುಂದೆ ನನ್ನ ಎಲ್ಲಾ ದಸ್ಕತುಗಳು M ನಾರಾಯಣಾಚಾರ್ಯ ಎಂತ ಆಗಿರತಕ್ಕದೆಂದು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸಲಿಚ್ಛಿಸುತ್ತೇನೆ

M ನಾರಾಯಣಾಚಾರ್ಯ,
4-12-39

ಕೈಸರರ ಮೇಲೆ ಪ್ರತೀಕಾರ

ಹಿಟ್ಲರರು ಮಾಜಿ ಕೈಸರರ ಮೇಲೆ ಮುನಿದು ಬಿದ್ದು ಅವರ ಮಾಸಾಶನವಾದ 350 ಪವನನ್ನೂ ನಿಲ್ಲಿಸಿ ಬಿಟ್ಟಿರುವರು ಹಿಟ್ಲರರು ಅಧಿಕಾರಕ್ಕೆ ಬರುವ ಮೊದಲು, ಜರ್ಮನಿಯಲ್ಲಿದ್ದ ತನ್ನ ಹೇರಳ ಆಸ್ತಿಯಿಂದ ವರ್ಷಕ್ಕೆ 35,000 ಪವನುಗಳನ್ನ ಕೈಸರರು ಪಡೆಯುತ್ತಿದ್ದರು ಹಿಟ್ಲರರ ವಿಜಯದ ಸಂದರ್ಭಗಳಲ್ಲಿ ಕೈಸರರು ಅವರನ್ನು ಅಭಿವಂದಿಸಲಿಲ್ಲ ಮಾತ್ರವಲ್ಲದೆ ಅವರ ಧೋರಣೆಗೆ ವಿರೋಧವಿದ್ದರು ಈಗಣ ಯುದ್ಧವನ್ನು ಸಂಪೂರ್ಣವಾಗಿ ವಿರೋಧಿಸಿರುವರು ಆದುದರಿಂದಲೇ ಪುರಾರರು, ಹೊಲ್ಲೆಂಡಿನ ಡೂರ್ನಿನಲ್ಲಿ ಗಡಿಪಾರಾಗಿರುವ ಕೈಸರರ ಜೀವನದ ಏಕ ಮಾತ್ರ ಆಶಯವನ್ನೂ ನಿಲ್ಲಿಸಿ ಬಿಟ್ಟಿರುವರು ಕೈಸರರ ಮೊಮ್ಮಗ ರಾಜಕುಮಾರ ಒಸ್ಕರರು ಯುದ್ಧದಲ್ಲಿ ಮಡಿದಿರುವರು ಇದರಿಂದ ಕೈಸರರ ಹೆಂಡತಿಯು ಬಹಳವಾಗಿ ಸಂತಾಪಗೊಂಡು, ಇಂಗ್ಲೆಂಡಿನ ರೆವರೆಂಡ್ ಥೋಮಸ್ ಎಂಬವರ ಪತ್ರಕ್ಕೆ ಉತ್ತರವೀಯುವಾಗ, "ಈ ಭಯಂಕರ ಯುದ್ಧವು ಬೇಗನೆ ಕೊನೆಗೊಳ್ಳುವಂತಾಗಲಿ! ಆದರೆ ಇನ್ನೂ ಹೆಚ್ಚಿನ ಬೀಕರ ಸಂಗತಿಗಳುಂಟಾಗಲಿವೆಯೆಂದು ನನ್ನ ಹೆದರಿಕೆ" ಎಂದು ಉದ್ಗರಿಸಿರುವರು

ಜರ್ಮನರಿಗೆ ಪ್ರತೀಕಾರದ ಬೆದರಿಕೆ

ಇಂಗ್ಲೆಂಡಿನ ಮೇಲೆ ಭೀಕರ ವಿಮಾನ ಧಾಳಿ ನಡಿಸಲಾಗುವುದೆಂಬುದರಿಂದ ಜರ್ಮನ್ ಜನತೆಯಲ್ಲಿ ಭೀತಿಯುಂಟಾಗಿದೆ. ಇಂಗ್ಲೆಂಡಿನ ಪಟ್ಟಣಗಳ ಮೇಲೆ ಜರ್ಮನ್ ವಿಮಾನಗಳು ಧಾಳಿ ನಡಿಸಿದರೆ ಕೂಡಲೆ ಬ್ರಿಟಿಷ್ ಮತ್ತು ಫ್ರೆಂಚ್ ವಿಮಾನಗಳು ಜರ್ಮನ್ ಪಟ್ಟಣಗಳ ಮೇಲೆ ಧಾಳಿಯಿಟ್ಟು ಪ್ರತೀಕಾರ ಮಾಡದಿರಲಾರವು ಈ ಅಂಜಿಕೆಯಿಂದಲೇ ಜರ್ಮನ್ ಸರಕಾರವೂ ಹಿಂದೆಗೆಯುತ್ತಿರುವಂತಿದೆ.

ಇಟೆಲಿಯ ಸಕಾರ

ಆಸ್ಟ್ರಿಯಾದ ಸೇನಾ ಪಟ್ಲಾಮುಗಳೇ, ಹಿಟ್ಲರರಿಗಾಗಿ ಹೋರಾಡಲೊಪ್ಪದೆ ಸರ್ವ ಆಯುಧ ಸಮೇತವಾಗಿ ಗಡಿದಾಟಿ ಯುಗೋಸ್ಲಾವಿಯ ಅಥವಾ ಇಟೆಲಿಗೆ ಹೋಗುತ್ತಿರುವರು. ಸ್ಟೀರಿಯ ಮತ್ತು ಟೈರೋಲ್ ಎಂಬಲ್ಲಿನ ಸೈನಿಕರಲ್ಲಿ ತೀವ್ರ ಅತೃಪ್ತಿಯುಂಟಾಗಿದೆ ಎರಡು ಪಟ್ಲಾಮ್ ಸೈನಿಕರನ್ನು ಜರ್ಮನರು ನಿರಾಯುಧರನ್ನಾಗಿ ಮಾಡಿ, ದಂಗೆಯ ಆರೋಪದಿಂದ ಪ್ರತಿಯೊಬ್ಬ ಸೈನಿಕನನ್ನು ಕೊಲೆಗಡಿದಿರುವರು. ಪಶ್ಚಿಮ ರಣರಂಗದಲ್ಲಿ ಪ್ರತ್ಯೇಕ ಆಸ್ಟ್ರಿಯಾನ ಸೈನಿಕರನ್ನೆಲ್ಲಾ ಹಿಂದೆ ಕಳುಹಿಕಬೇಕೆಂದು ಹಿಟ್ಲರರು ಇಟೆಲಿಯಾನ ಸರಕಾರದೊಡನೆ ಕೇಳಿಕೊಳ್ಳಲು ಅದು ನಿರಾಕರಿಸಿ ಬಿಟ್ಟಿರುವುದು

ಸಂಯುಕ್ತ ಪ್ರಾಂತೀಯ ರಾಜಕೀಯ ಪರಿಷತ್ತು

ಪಂಡಿತ ಜವಾಹರಲಾಲರ ಅಧ್ಯಕ್ಷತೆಯಲ್ಲಿ ನವಂಬರ ತಾ ೨೬ರಲ್ಲಿ ಮಥುರದಲ್ಲಿ ಮಹೇಂದ್ರ ಪ್ರತಾಪ ನಗರದಲ್ಲಿ ಜರಗಿತು. ಬಾಬು ಪುರುಷೋತ್ತಮದಾಸ ಟಂಡನರು ರಾಷ್ಟ್ರೀಯ ಧ್ವಜಾರೋಹಣ ಮಾಡಿ, ಅದ ಶಾಂತಿ ಮತ್ತು ಪ್ರೇಮದ ಚಿಹ್ನೆ ಹಿಂದೀಯರ ಆಶೆ ಆಕಾಂಕ್ಷೆಗಳ ಸಂಕೇತ ಅದನ್ನು ಯಾರಾದರೂ ವಿರೋಧಿಸುವುದರಲ್ಲಿ ಅರ್ಥವಿಲ್ಲವೆಂದರು ಅಧ್ಯಕ್ಷರಾದ ಪಂಡಿತ ನೆಹರುಗಳು ಕುದುರೆಯ ಮೇಲೆ ಕೂತು ಪಟ್ಟಣದಲ್ಲೆಲ್ಲಾ ಮೆರವಣಿಗೆ ಹೋದರು. ಜಾಹೀರು ಅಧಿವೇಶನಕ್ಕೆ 30,000ಕ್ಕಿಂತಲೂ ಮಿಕ್ಕಿದ ಜನರು ಉತ್ಸಾಹದಿಂದ ನೆರೆದುಬಂದಿದ್ದರು ಪಂಡಿತರು ೯೦ ಮಿನಿಟುಗಳವರೆಗೆ ಹಿಂದಿಯಲ್ಲಿ ದೀರ್ಘ ಹಾಗೂ ಬೋಧಪರ ಭಾಷಣಮಾಡಿದರು ಈಗಣ ಪರಿಸ್ಥಿತಿ ನೋಡುವಾಗ, ಕಾಂಗ್ರೆಸು ಮತ್ತು ಬ್ರಿಟಿಷ್ ಸರಕಾರಗಳೊಳಗೆ ರಾಜಿಯಾಗುವ ಸಂಭವ ತೋರುವುದಿಲ್ಲ ಕಾಂಗ್ರೆಸ್ಸಿನ ಕೇಳಿಕೆಯನ್ನು ತೃಪ್ತಿಪಡಿಸಿದರೆ ಮಾತ್ರ ಸಂಧಾನವು ಸಾಧ್ಯವಿದೆ. ಕಾಂಗ್ರೆಸು ಹೋರಾಟವನ್ನಾರಂಭಿಸಲೇನೂ ಅವಸರಪಡುವುದಿಲ್ಲ ಆದರೆ ಎಲ್ಲರೂ ಈಗಲೇ ಅದಕ್ಕೆ ಬೇಕಾದ ಸಿದ್ಧತೆಮಾಡಬೇಕೆಂದು ಪಂಡಿತರ ಸ್ಪಷ್ಟವಾದ ಅಭಿಮತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕೈಗೊಂಡಿರುವ ಧೋರಣೆಯನ್ನು ಸಮರ್ಥಿಸುವ ಮತ್ತು ಗಾಂಧಿಜಿಯವರ ನಾಯಕತ್ವದ ಕುರಿತು ವಿಶ್ವಾಸ ಸೂಚಿಸುವ ಠರಾವುಗಳು ಈ ಪರಿಷತ್ತಿನಲ್ಲಿ ಮಂಜೂರಾಗಿರುವವು

ಪ್ರಕೃತದ ಬಿಕ್ಕಟ್ಟು ಹೆಚ್ಚು ಸಮಯ ಉಳಿಯಲಾರದು

ನವಂಬರ ತಾ 30ರಲ್ಲು ಶ್ರೀ ರಾಜಗೋಪಾಲಾಚಾರ್ಯರು ಬೊಂಬಾಯಿಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ಕೊಟ್ಟು, ಪ್ರಕೃತದ ಬಿಕ್ಕಟ್ಟು ಹೆಚ್ಚು ಕಾಲ ಹೀಗೆಯೇ ಉಳಿಯುವ ಹಾಗಿಲ್ಲ. ಮುಂದೆ ರಚಿತವಾಗಿರುವ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯಲ್ಲಿ ದೇಶೀಯ ಸಂಸ್ಥಾನದ ಪ್ರತಿನಿಧಿಗಳಿಗೆ ಸ್ಥಾನವಿಲ್ಲ ಅಲ್ಪ ಸಂಖ್ಯಾಕರಿಗೆ ಕೂಡ ಪ್ರತ್ಯೇಕ ಪ್ರಾತಿನಿಧ್ಯವು ಅಪಾಯಕರ. ಮಿಶ್ರಮತದಾನದಲ್ಲಿ ಸ್ಥಾನಗಳನ್ನು ರಿಸರ್ವ್ ಮಾಡುವುದರಲ್ಲಿ ಉತ್ತಮ ಭದ್ರತೆಯಿದೆ ಕ್ರಾಂತಿಯನ್ನೆಬ್ಬಿಸಿ ರಾಷ್ಟ್ರೀಯ ರಾಜ್ಯಾಂಗ ರಚನೆಯನ್ನೇರ್ಪಡಿಸುವುದಕ್ಕೂ ಒಡಂಬಡಿಕೆಯಿಂದ ಮಾಡುವುದಕ್ಕೂ ಬಹಳ ಅಭ್ಯಂತರವಿದೆ. ತಾವೀಗ ಕ್ರಾಂತಿಯನ್ನು ಅಪೇಕ್ಷಿಸುವುದಿಲ್ಲ ಅಧಿಕಾರದಲ್ಲಿದ್ದಾಗಿ ಕಾಂಗ್ರೆಸನ್ನು ಬಲಪಡಿಸಲು ತಾವು ಅಧಿಕಾರವನ್ನು ಪಯೋಗಿಸಲಿಲ್ಲ ವಿಧಾಯಕ ಕಾರ್ಯಕ್ರಮವನ್ನು ಮಾತ್ರ ಮುಂದೊತ್ತಿರುವೆನೆಂದು ಹೇಳಿರುವರು.

THE
BOMBAY LIFE ASSURANCE
Company Limited.
[ESTD 1908]
COMPARE
Your Life Assurance with any other property you possess what is its guarranteed value
If you live–today–a few years more–when you are old?
If you die–to your family and dependants?
REMEMBER THAT If you live, Life Insurance takes the place of your professional income during your old age
If you die, it provides your family with enough income for their maintenance and the education of your children
"BOMBAY LIFE" offers all that is best in
Life Assurance.
1938 Record.

Completed Business	Rs	1,44 91,000
Life Assurance Fund	Rs	1,17,69 748
Total Assets	Rs	1,31,28 998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING
Sir Lalubhai Samaldas Road,
GANDHI NAGAR UDIPI

Post Box No 337, Mount Road MADRAS	Visvesvarayam Circle BANGALORE CITY	Charni Road Girgaum BOMBAY No. 4
Car Street MANGALORE	Tuthiyara CALICUT	Central Station Road TRIVANDRUM

1940
ನೇ ಇಸವಿಯ
ಪಾಕೆಟ್ ಡೈರಿ
ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ
ಉಡುಪಿ.

ವಾರದ ವಿಮರ್ಶೆ

ದೀನ ದುಃಖಿತೋದ್ಧಾರಕ

ಹರಿಜನಸೇವಾ ದೀಕ್ಷೆ ವಹಿಸಿ ದೀನ ದುಃಖಿತೋದ್ಧಾರಕರಾಗಿರುವ ಶ್ರೀ. ಅಮೃತಲಾಲ ಥಕ್ಕರರು ಇಂದೀಗ ಹಿಂದೀಯರೆಲ್ಲರ ಸನ್ಮಾನ್ಯ ಪಿತಾಮಹ ಥಕ್ಕರ್ ಬಾಪಾರಾಗಿರುವರು. ಅವರ 71ನೇ ವಾರ್ಷಿಕೋತ್ಸವವು ಬೊಂಬಾಯಿಯಲ್ಲಿ ನವಂಬರ ತಾ. 29ರಲ್ಲು ಶ್ರೀ. ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕವಾಗಿ ಅತಿ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಅವರನ್ನು ಅಭಿನಂದಿಸಿ ದೇಶದ ಬೇರೆ ಬೇರೆ ಕಡೆಗಳಿಂದ ನೂರಕ್ಕಿಂತಲೂ ಮಿಕ್ಕದ ಸಂದೇಶಗಳು ಬಂದಿದ್ದುವು. ಅವರಿಗೆ ಈ ಸಂದರ್ಭದಲ್ಲಿ ಅರ್ಪಿಸಿದ ನಿಧಿಯು ಮೊದಲು ರೂ. 7000ವೆಂದಿದ್ದು ಅನಂತರ ಗಾಂಧಿಜಿಯವರ ಸೂಚನೆಯ ಮೇರೆಗೆ 7,1000ವೆಂದಾಗಿ ಒಂದು ತಿಂಗಳೊಳಗೆ ರೂ. 1,17,448 ಆ. 13, ಪೈ. 9 ಸಂಗ್ರಹಿಸಲ್ಪಟ್ಟಿರುವುದು. ಇವರಿಂದ ಅವರು ಅದೆಷ್ಟು ಜನಪ್ರಿಯರಾಗಿರುವರೆಂಬುದು ಸಿದ್ಧವಾಗುವುದು. ಈ ಹಣವನ್ನವರು ಹರಿಜನ ಸೇವಕ ಸಂಘಕ್ಕಾಗಿ ವಿನಿಯೋಗಿಸಲಿರುವರು. 1914ರಲ್ಲು ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಗೆ ಸೇರಿದಂದಿನಿಂದ ಶ್ರೀ ಥಕ್ಕರರು, ಹರಿಜನರು, ಹಿಂದುಳಿದಿರುವ ಮೂಲ ನಿವಾಸಿಗಳು, ನೆರೆಹಾವಳಿ ಮೊದಲಾದ ಪೀಡೆಗೊಳಗಾದ ದೀನದುಃಖಿತರ ಸೇವೆಗಾಗಿ ತನ್ನ ಜೀವನವನ್ನು ಸವೆಯಿಸುತ್ತಾ ಬಂದವರು. ಅನಂತರ ಹರಿಜನ ಸೇವಕ ಸಂಘದ ಜನರಲ್ ಸೆಕ್ರಿಟರಿಯಾಗಿ ಹರಿಜನರಿಗೆ ಮಾತ್ರವಲ್ಲದೆ ಇಡೀ ದೇಶಕ್ಕೆ ಮತ್ತು ಹಿಂದೂಧರ್ಮಕ್ಕೆ ಮಹದುಪಕಾರ ಮಾಡಿರುವರು. ಶ್ರೀ. ಥಕ್ಕರ್ ಬಾಪಾರವರು ಇನ್ನೂ ಹಲವು ವರ್ಷ ಬಾಳಿ ತನ್ನ ಉದಾತ್ತ ಉದ್ದೇಶವನ್ನು ನೆರವೇರಿಸುವಂತಾಗಲೆಂದು ಈ ಸಂದರ್ಭದಲ್ಲಿ ಹಿಂದೀಯರೆಲ್ಲರೂ ಏಕಕಂಠದಿಂದ ಹಾರೈಸದಿರಲಾರರು.

ಹಿಂದೂ ದೇಶದ ಭತ್ತದ ಬೆಳೆ

ಹಿಂದೀಯರಿಗೆ ಬೇಕಷ್ಟು ಅಕ್ಕಿಯು ಹಿಂದೂದೇಶದಲ್ಲಿಯೇ ಬೆಳೆಯುವುದಿಲ್ಲ. ವರ್ಷಕ್ಕೆ ಸುಮಾರು 14 ಲಕ್ಷಟನ್ನು ಹೊರಗಣಿಂದ ಆಮದಾಗುವುದೆಂದರೆ ಅನೇಕರು ಆಶ್ಚರ್ಯಗೊಳ್ಳಬಹುದು. ಹಿಂದೂದೇಶದಲ್ಲಿ ಹೆಚ್ಚಾಗಿ ಬೆಳೆಯುವುದು ಭತ್ತದ ಬೆಳೆ. ಆದರೂ ಅದಕ್ಕೇನೇ ಸಾಕಾಗದೆ ಹೊರಗಣ ಅಕ್ಕಿ ಬರಬೇಕಾಗಿದೆ ಭತ್ತದ ಬೆಳೆಯ ವಿಸ್ತೀರ್ಣವನ್ನು ಹೆಚ್ಚಿಸಲು ಸಾಧ್ಯವಿಲ್ಲ, ಆದರೆ ಪ್ರಯತ್ನಿಸಿದರೆ ಅದರ ಉತ್ಪತ್ತಿಯ ಪ್ರಮಾಣವನ್ನು ಹೆಚ್ಚಿಸಬಹುದು. ಹಿಂದೂದೇಶದಲ್ಲಿ ಒಂದು ಎಕ್ರೆ ಭತ್ತದ ಬೆಳೆಯಿಂದ ಸರಾಸರಿ ಸಿಗುವ ಅಕ್ಕಿ 900ರಾತಲು ಮಾತ್ರ. ಜಾವ ಮತ್ತು ಸಯಾಂ ದೇಶಗಳಲ್ಲಿ ಇದಕ್ಕಿಂತ ಒಂದು ವರೆ ಪಾಲಿನಷ್ಟು ಹೆಚ್ಚು ಬೆಳೆಯುತ್ತದೆ. ಜಾಪಾನ್ ಮತ್ತು ಕೋರಿಯ ದೇಶಗಳಲ್ಲಿ ಭತ್ತದ ಶಾಸ್ತ್ರೀಯ ಬೆಳವಣಿಗೆಯು ಎಷ್ಟೊಂದು ಮುಂದರಿದಿರುವುದೆಂದರೆ ಅಲ್ಲಿಯ ಎಕ್ರೆಯೊಂದರ ಉತ್ಪತ್ತಿಯು ಇಲ್ಲಿಗಿಂತ ಮೂರುಪಾಲು ಹೆಚ್ಚಾಗಿರುತ್ತದೆ. ಹಿಂದುದೇಶದಲ್ಲಿ ಭತ್ತದಸಾಗುವಳಿ ಕ್ರಮವು ಸುಧಾರಿಸಲ್ಪಡಬೇಕು ಮಾತ್ರವಲ್ಲದೆ ನೀರಾವರಿ ಅನುಕೂಲತೆಯನ್ನೂ ಹೆಚ್ಚಿಸುವುದು ಅತ್ಯಾವಶ್ಯಕ. ಉತ್ಕೃಷ್ಟ ಬೀಜ ಮತ್ತು ಸುಧಾರಿತ ವಿಧಾನದ ಬೇಸಾಯಾನುಭವವನ್ನು ಕೃಷಿ ಇಲಾಖೆಯವರು ಕೊಡುವಾಗ, ಅವುಗಳನ್ನುಪಯೋಗಕ್ಕೆ ಹಚ್ಚಲು ಬೇಕಾದ ಹಣದ ಅನುಕೂಲತೆಯನ್ನು 'ಕೋಪರೇಟಿವ್' ಖಾತೆಯವರು ಸಾಲರೂಪವಾಗಿ ಬೇಸಾಯಗಾರರಿಗೆ ಒದಗಿಸಬೇಕು. ಹಿಂದೂದೇಶವು ತನಗೆ ಬೇಕಾದಷ್ಟು ಅಕ್ಕಿಯನ್ನು ತಾನೇ ಬೆಳೆಸುವಂತೆ ಮತ್ತು ಹೊರಗಣ ಆಮದಿನ ಮೇಲಾಟದಿಂದ ಹಿಂದೀಬೇಸಾಯಗಾರರಿಗೆ ಹಾನಿಯಾಗದಂತೆ ನೋಡುವುದು ಸರಕಾರದ ಕರ್ತವ್ಯವಾಗಿದೆ.

ಶ್ರೀ ಸಾವರ್ಕರರ ಸ್ಪಷ್ಟೀಕರಣ

ಹಿಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ ಸಾವರ್ಕರರು, ಪ್ರಕೃತದ ಬಿಕ್ಕಟ್ಟಿನಲ್ಲಿ ಹಿಂದೂ ಸಭೆಯು ಎಂತಹ ಧೋರಣೆ ವಹಿಸುವುದೆಂಬುದನ್ನು ಸ್ಪಷ್ಟಗೊಳಿಸಿರುವುದು ಅಭಿನಂದನೀಯವಿದೆ. ವೈಸರಾಯರ ಭಾಷಣದಿಂದ ಅವರು ತೀವ್ರ ಅತೃಪ್ತಿಗೊಂಡು ಅದನ್ನು ಕೇವಲ ಶಬ್ದಾಡಂಬರವೆಂದು ಕರೆದಿರುವರು. ಹಿಂದೂದೇಶದಲ್ಲಿ ಡೊಮಿನಿಯನ್ ಸ್ಟೇಟಸ್ ಸ್ಥಾಪಿಸುವುದು ತಮ್ಮ ಉದ್ದೇಶವೆಂದು 1919ರಲ್ಲಿ ನಿರೂಪಿಸಲಾಗಿತ್ತು. 20 ವರ್ಷಗಳ ಮೇಲೂ ಅದೇ ಹಾಡು. ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವೀಯದೆ ಅದು ತೃಪ್ತಿ ಹೊಂದಲಾರದು. ಯುದ್ಧ ಮುಗಿದೊಡನೆಯೇ ಅದಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡಲ್ಪಡಬೇಕು. ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯುವ ಇಚ್ಛೆಯು ಇಂಗ್ಲೆಂಡಿಗಿಲ್ಲದಿದ್ದರೆ ಅದೆಂದಿಗಾದರೂ ಇಂಗ್ಲೆಂಡಿಗೆ ಯುದ್ಧದಲ್ಲಿ ಸ್ವಸಂತೋಷದಿಂದ ಸಹಾಯ ಮಾಡಲಾರದು. ವೈಸರಾಯರ ಕನ್‌ಸಲ್ಟೇಟಿವ್ ಕಮಿಟಿಯು ಜವಾಬ್ದಾರಿಯೇನೆಂದು ತಿಳಿದಿಲ್ಲ. ಈ ಕಮಿಟಿಯವರು ವೈಸರಾಯರ ಮಂತ್ರಿಗಳೋಪಾದಿ ಪರಿಗಣಿಸಲಾಗಿ ಅವರ ಸೂಚನೆಗಳನ್ನೆಲ್ಲಾ ಸರಕಾರವು ಅಂಗೀಕರಿಸಿದ ಪಕ್ಷದಲ್ಲಿ ಹಿಂದೂ ಮಹಾ ಸಭೆಯವರದಕ್ಕೆ ಒಪ್ಪಬಹುದೆಂದೇ ಸಾವರ್ಕರರ ಅಭಿಮತ. ಇದಕ್ಕೂ ಕಾಂಗ್ರೆಸಿನ ಅಭಿಮತಕ್ಕೂ ಹೆಚ್ಚಿನ ಭೇದವೇನೂ ಇರುವಂತಿಲ್ಲ. ಕಾಂಗ್ರೆಸು ಕಾಯಿದೆ ಭಂಗ ಹೂಡಬೇಕಾಗುವಾಗ ಮಾತ್ರ ಹಿಂದೂಮಹಾಸಭೆಯವರು ಯಾವ ಧೋರಣೆ ವಹಿಸುವರೋ?

(೭ನೇ ಪುಟಕ್ಕೆ ಮುಂದರಿಯುವದು)

"ನಾಮದಾರ್ಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮೆಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazzar, Duncan Road,
BOMBAY 4.

ಸಮಿತಿಯ ಸದಸ್ಯರಾಗುವವರಿಗೆ ಮಾತ್ರ
ಈಗಲೇ ರೂ. 3 ಬೆಲೆಯ ಪುಸ್ತಕಗಳು

ಉಚಿತ

(ಸದಸ್ಯತನದ ಚಂದಾ:—ಒಂದೇ ರೂಪಾಯಿ)

1	ದೇವಪೂಜಾ ವಿಧಿ	0-3-0
2	ವಿಷ್ಣುಸಹಸ್ರನಾಮ ಸ್ತೋತ್ರ	0-2-0
3	ವಾಯುಸ್ತುತಿ	0-2-0
4	ದ್ವಾದಶಸ್ತೋತ್ರ	0-2-0
5	ಆದಿತ್ಯಹೃದಯ	0-1-0
6	ಶ್ರೀಸೂಕ್ತ ಪುರುಷಸೂಕ್ತ (ಸ.)	0-1-6
7	ಶ್ರೀಸೂಕ್ತ ಪುರುಷಸೂಕ್ತ (ಯ)	0-1-6
8	ಹರಿಕಥಾಮೃತಸಾರಸಾರೋದ್ಧಾರ	1-0-0
9	ಪುರಂದರದಾಸರ ಕೀರ್ತನೆ ಭಾಗ ೧	0-4-0
10	,, ,, ,, ೨	0-4-0
11	,, ,, ,, ೩	0-4-0
12	ಸುಂದರಕಾಂಡರಾಮಾಯಣಮೂಲ	0-2-0
	ಟಪ್ಪಾಲು ಖರ್ಚು ಬೇರೆ, ಒಟ್ಟು ರೂ.	3-0-0

ಮಾಧ್ವಗ್ರಂಥ ಪ್ರಕಾಶನ ಸಮಿತಿ,
45, A. S. ಸ್ಟ್ರೀಟ್, ಬೆಂಗಳೂರು ಸಿಟಿ.

CANARA BANK LIMITED

HEAD OFFICE:—**MANGALORE.**

A NET WORK OF 37 BRANCHES.

ALLEPPEY	CALICUT	KARKALA
ARSIKERE	CANNANORE	KASARGODE
BADAGARA	CHERAI	KAYAMKULUM
BANGALORE	CHIKMAGALUR	KUMBLA
BANTWAL	COCHIN	MANGALORE-BUNDER
BELGAUM	COONDAPOOR	MANGALORE-CITY
BELTHANGADY	DAVANGERE	MANJESHWAR
BOMBAY-FORT	DHARWAR	MOOLKY
BOMBAY-MANDVI	DODDBALLAPUR	PAYYANNUR
BOMBAY-GIRGAUM	ERNAKULAM	PUTTUR
BOMBAY-KALBADEVI	GARGULLI	QUILON
BOMBAY-PAREL	HUBLI	UDIPI
	UPPINANGADY	

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No 321/1939

ಮಿಾಸು ಸೆಟ್ಟಿ—ವಾದಿಳು

ಮತ್ತು

ಚಂದು ಸೆಟ್ಟಿ ಕೂಡಾ—ಪ್ರತಿವಾದಿರು

4ನೇ ಪ್ರತಿವಾದಿ—ರಾಮಚಂದ್ರ ಸೆಟ್ಟಿ, ಬೋಳ ಕರ್ತ್ಯಾರು ಗುತ್ತು ಬೊಗ್ಗಿ ಸೆಟ್ಟಿ ಮಗಾ, ಹಾಲಿ R. T. D. Depot, Nander Hyderbad (Deccan) ಎಂಬಲ್ಲಿರುವವ,

ಸದ್ರಿ 4ನೇ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

ಮೃತಪಟ್ಟ ಬೊಗ್ಗಿ ಸೆಟ್ಟಿಯು ಈ ದಾವೆಯ 3ನೇ ಪ್ರತಿವಾದಿಯಾದ ನಾರಾಯಣ ಸೆಟ್ಟಿಗೆ ತಾ. 8-6-'29 ರಲ್ಲು ರೂ. 1150-0-0ಕ್ಕೆ ಬರಕೊಟ್ಟ ರಿಜಿಸ್ಟ್ರು ಸ್ಥಿರಾಸ್ತಿ ಕೋರದವು ದಸ್ತಾವೇಜು ಯಾವತ್ತೂ ಹಕ್ಕನ್ನು ತಾ. 31-7-1933ರಲ್ಲು ಸದ್ರಿ ನಾರಾಯಣ ಸೆಟ್ಟಿಯಿಂದ ಟ್ರಾನ್ಸಫರಿಗೆ ಪಡದ ವಾದಿಳು ಸದ್ರಿ ದಸ್ತಾವೇಜಿನ ಅಸಲುಬಡ್ಡಿ ವಿವಜುಗಳನ್ನು ಬರಮಾಡುವರೆ ಮಾಡಿದ ಈ ದಾವೆಯು ತಾ. 18-12-39 ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಾವೆಯ ಕುರಿತು ನಿಮ್ಮ ಉದಾಹರಣೆಗಳಿದ್ದರೆ ಸದ್ರಿ ದಿನ ಹಗಲು 10 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ಹೇಳಿಕೊಳ್ಳಬಹುದು. ತಪ್ಪಿದರೆ ನಿಮ್ಮ ಗೈರ್ಹಾಜರಿಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು. ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ.

K. Mahabala Hegde,
ವಾದಿಳ ವಕೀಲ್,
ಕಾರ್ಕಳ, ತಾ. 30-11-39.

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 207/1939

ಬೀಪಾತುಮ್ಮ ಸಹಾ—ವಾದಿರು.

ಮತ್ತು

ಮರಿಯುಮ್ಮ ಸಹಾ—ಪ್ರತಿವಾದಿರು

ಇವರೊಳಗೆ—

3ನೇ ಪ್ರತಿವಾದಿಳು ಕುಂಞ ಪಾತುಮ್ಮ, ಮೃತಪಟ್ಟ ಪಟೇಲ ಹಮ್ಮದ ಕುಂಞ ಬ್ಯಾರಿ ಮಗಳು ಪುತ್ತೂರು ತಾಲೂಕು ಅರಂತೋಡು ಗ್ರಾಮದಲ್ಲಿ ರುವವಳು, ಇವಳಿಗೆ ತಿಳಿಸುವುದೇನೆಂದರೆ—

1ನೇ ಪ್ರತಿವಾದಿಳ ಗಂಡ ವ 2ರಿಂದ 7ನೇ ವರೆಗಿನ ಪ್ರತಿವಾದಿಯರ ತಂದೆ ಮೃತಪಟ್ಟ ಪಟೇಲ ಹಮ್ಮದ ಕುಂಞ ಬ್ಯಾರಿಯು ವಾದಿರ ತಂದೆ ಮೃತಪಟ್ಟ ಅಬ್ದುಲ್ಲ ಮಾಪ್ರಿ ಬ್ಯಾರಿ ವ 8ನೇ ಪ್ರತಿವಾದಿ ಅಬ್ದುಲ್ಲ ರಹಿಮಾನ ಬ್ಯಾರಿಯ ಹೆಸರಿಗೆ ಕೂಡಾ ಬರಕೊಟ್ಟ ಅಡವು ದಸ್ತಾವೇಜಿನ ಬಾಬ್ತು ಅಧಾರಂಶದ ಐವಜನ್ನು ವಸೂಲು ಪಡಿಯುವರೆ ವಾದಿರು ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾ. 12-12-39 ಕ್ಕೆ ಆಖೈರ ತಸ್ಕಿಗೆ ಇಟ್ಟಿರುವದರಿಂದ ಆ ದಿವಸ ನೀವು ಹಾಜರಾಗದಿದ್ದರೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನ ಮಾಡಲಾಗುವದೆಂಬ ಸಂಗ್ತಿ ತಿಳಿಸಲಾಗಿಯದೆ.

K. Mammunhi B. A. B. L.
Advocate for Plaintiffs,
Kasaragod, 28-11-1939.

- - ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಳನ್ನು ಪಡಕೊಂಡು ಪ್ರೋತ್ಸಾಹಿಸಿರಿ - -

ಬೊಂಬಾಯಿ

(ಸ್ವಂತ ಬಾತ್ಮೀದಾರರಿಂದ)

ತಾ. 1-12-39.

ಯುದ್ಧ ಬೇಡ-ಬಾಗಲು ತೆರೆದಿರುವ ತನಕ ಶಾಂತ ರೀತಿಯಲ್ಲೇ ರಾಜಿ ಪಂಚಾತಿಕೆ—ಕಾಂಗ್ರೆಸಿನ ಬೇಡಿಕೆಗಳನ್ನು ಆಂಗ್ಲ ಸರಕಾರವು ಸಂಪೂರ್ಣವಾಗಿ ನಿರಾಕರಿಸಬಿಟ್ಟಿಲ್ಲ. ಬಾಗಿಲು ಮುಚ್ಚಲ್ಪಟ್ಟಿಲ್ಲ, ತೆರೆದಿದೆ. ಅದು ತೆರೆದಿರುವ ತನಕ ಶಾಂತ ರೀತಿಯಲ್ಲೇ ರಾಜಿಪಂಚಾತಿಕೆ ಮಾಡಿಕೊಳ್ಳಲು ಕಾಂಗ್ರೆಸು ಪ್ರಯತ್ನಿಸುತ್ತಿದೆ ಎಂದು ಶ್ರೀ. ವಲ್ಲಭಾಯಿ ಪಟೇಲರವರ ಮಾತು. ಗಾಂಧೀಜಿಯವರಿಗೆ ಸಧ್ಯಕ್ಕೆ ಸತ್ಯಾಗ್ರಹ ಹೂಡಲು ಮನಸ್ಸಿಲ್ಲ. ಯಾರಾದರೂ ಸತ್ಯಾಗ್ರಹ ಪ್ರಾರಂಭಿಸಿದರೆ ಅದನ್ನು ತಾನು ವಿರೋಧಿಸುತ್ತೇನೆಂದು ಅವರೇ ಹೇಳುತ್ತಿರಲು ಇವರ ಶಿಷ್ಯವೃಂದದವರು ಆ ಮಂತ್ರವನ್ನೇ ಜಪಿಸುತ್ತಿರುವರು. 1930 ರಲ್ಲಿ 'ಕ್ರಾಂತಿ' 'ಕ್ರಾಂತಿ' ಎಂದು ಚೀರಿಡುತ್ತಿದ್ದ ಪಂಡಿತ ನೆಹರುಗಳು ಇಂದು 'ಶಾಂತ ಶಾಂತಿ' ಎಂದು ಕೂಗತೊಡಗಿರುವರು. 'ಕ್ರಾಂತಿ' ಎಲ್ಲಿ? 'ಕ್ರಾಂತಿ' ಎಲ್ಲಿ?

ನಾವು ಯುದ್ಧಕ್ಕೆ ತಯಾರಿರಬೇಕು.

'ಪ್ರಜಾ ಪ್ರತಿನಿಧಿ ಸರಕಾರವು ಬೇಕೆಂದು ಗಾಂಧೀಜಿಯವರು ಆಂಗ್ಲ ಸರಕಾರದೊಡನೆ ಕೇಳಿರುವರು. ಯಾಕೆಂದರೆ ಹಲವು ಮತಗಳಿರುವ ಭಾರತಕ್ಕೆ 'ಶಾಂತಿ' ದೊರೆಯಬೇಕಾದರೆ ಒಗ್ಗಟ್ಟು ನೆಲಸಬೇಕಾದರೆ ಅದೊಂದೇ ಉಪಾಯ. ಇದರಲ್ಲಿ 'ಮೆಜೋರಿಟಿ' 'ಮೈನೋರಿಟಿ' ಎಂಬ ಪ್ರಶ್ನೆಯಿಲ್ಲ. ಸರ್ವ ಮತಗಳಿಗೂ ಅವುಗಳ ಜನಸಂಖ್ಯೆ ಪ್ರಕಾರ ಪ್ರತಿನಿಧಿಗಳನ್ನು ಹಂಚಿಕೊಟ್ಟು ಪ್ರಜಾಪ್ರತಿನಿಧಿ ಸರಕಾರವನ್ನು ಸ್ಥಾಪಿಸುವುದೇ ಅಗತ್ಯ. ಈ ನಮ್ಮ ಬೇಡಿಕೆಯನ್ನು ಬ್ರಿಟಿಷ್ ಸರಕಾರವು ಕೇಳಿದರೆ ಕೇಳಿತು, ಇಲ್ಲವಾದರೆ ನಾವು ಸತ್ಯಾಗ್ರಹ ಹೂಡಲಿಕ್ಕೆ ತಯಾರಿದ್ದೇವೆ. ಇದರಲ್ಲಿ ಸ್ವಾತಂತ್ರ್ಯ ಅಥವಾ ಮರಣ. ಯಾವುದಕ್ಕೂ ನಾವು ಸಿದ್ಧರಿದ್ದೇವೆ ಎಂದು ಶ್ರೀ. ರಾಜಗೋಪಾಲಾಚಾರಿಯವರು ಆಜಾದ ಮೈದಾನಿನಲ್ಲಿ ಜರಗಿದ ಮಹಾಸಭೆಯಲ್ಲಿ ಭಾಷಣವಿತ್ತರು.

ಮುಂದಾಳುಗಳೇ ಒಂದೇ ಸಭೆಯಲ್ಲಿ ಬೇರೆಬೇರೆ ಭಾಷೆಗಳಲ್ಲಿ ಒಂದೊಂದು ರೀತಿಯಾಗಿ ಭಾಷಣ ಮಾಡಿದರೆ ಯಾರನ್ನು ನಂಬುವುದು ಯಾರನ್ನು ಬಿಡುವುದು.

GET RICH
AND
PROSPEROUS
through Simple Means upheld and pursued by Millions..........!
WRITE NOW WITH STAMP.—
K. S. Row,
Worli, BOMBAY.

ಬಿಲ್ಲವರ ಅವಗಾಹನೆಗೆ.

ಎಂಬ ಶಿರೋನಾಮೆಯಿಂದ ಬೊಂಬಾಯಿಯ ಬೇರೆ ಬೇರೆ ಬಿಲ್ಲವ ಸಂಘಗಳ ಸದಸ್ಯರೊಬ್ಬರು ನಮ್ಮ ಬಳಿಗೆ ದೀರ್ಘ ಬಾತ್ಮಿಯೊಂದನ್ನು ಕಳುಹಿಸಿರುವರು. ಸ್ಥಳಾಭಾವದಿಂದ ಅದನ್ನು ಸಂಪೂರ್ಣವಾಗಿ ಪ್ರಕಟಿಸಲಾಗದುದಕ್ಕಾಗಿ ವಿಷಾದಿಸುತ್ತೇವೆ. ಅದರ ಸಾರಾಂಶವನ್ನು ಕೆಳಗೆ ಕೊಡಲಾಗಿದೆ.

ಇತ್ತೀಚೆಗೆ ಬೊಂಬಾಯಿಯಲ್ಲಿ ಬಿಲ್ಲವರ ಸಂಸ್ಥೆಗಳು ಹೆಚ್ಚುತ್ತಿರುವವಾದರೂ ಅವುಗಳಲ್ಲಿ ನಿಜವಾದ ಜನತಾ ಸೇವಾ ಬುದ್ಧಿಯ ಬದಲಿಗೆ ವಂಚಕ ಮನೋವೃತ್ತಿಯೇ ಹೆಚ್ಚಾಗಿ ತೋರಿಬರುತ್ತಿದೆ. ಬಿಲ್ಲವರ ಸಮಾಜದ ಏಳಿಗೆ, ಐಕ್ಯಸಾಧನೆಗಾಗಿ ಸಂಘಗಳು ಸ್ಥಾಪಿಸಲ್ಪಡುವುದು. ಚಂದಾ ಹಣ ಮತ್ತು ಸಹಾಯ ಧನ ವಸೂಲು ಮಾಡುವುದು. ಇತ್ತಲಾಗಿ ಸೋಡ್ತಿ, ನಾಟಕಾದಿಗಳಿಂದ ಸಂಘಗಳ ಪರವಾಗಿ ಅವುಗಳ ಅಧ್ಯಕ್ಷ ಕಾರ್ಯದರ್ಶಿಗಳೆಂಬವರು ಹಣ ಸಂಗ್ರಹಿಸಿರುತ್ತಾರೆ, ಆದರೆ ಸಂಘದ ಸಾಮಾನ್ಯ ಸದಸ್ಯರೊಡನೆ ಈ ಕುರಿತು ಅಭಿಪ್ರಾಯ ಕೇಳುವುದಿಲ್ಲ. ಅವರ ಸಮ್ಮತಿ ಪಡೆಯುವುದಿಲ್ಲ. ಇದು ಅಕ್ರಮ, ರಿಜಿಸ್ತ್ರಿಯಾದೊಂದು ಸಂಘದ ಹೆಸರು ಬಿಲ್ಲವ ಸಂಘವೆಂದಿದ್ದು ರಶೀದಿ ವಾರ್ಷಿಕ ವರದಿ ಇತ್ಯಾದಿಗಳಲ್ಲಿ ಬಿಲ್ಲವರ ಸಂಘವೆಂದು ಪ್ರಕಟವಾಗುವ ಉದ್ದೇಶವೇನು? ಇದರಿಂದ ವಂಚನೆಗಾಸ್ಪದವಾಗುವುದಿಲ್ಲವೇ? ಜಾಬು ಕ್ರಮೇಣ ಇಂತಹ ವರ್ತನೆಯಿಂದ ಪ್ರಮಾದವಾಗಲಾರದೇ? ಇಂತಹ ದೋಷವನ್ನು ದೂರದೃಷ್ಟಿಯುಳ್ಳ ಸಮಾಜ ಬಾಂಧವರು ಸರಿಪಡಿಸಿಕೊಳ್ಳಬೇಕೆಂದು ವಿನಂತಿ.

ಸಂಘಗಳ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟವರಾದರೂ ನಿವೃತ್ತರಾದರೆ ಅವರ ಬದಲಿಗೆ ಇತರರನ್ನು ಕ್ರಮವಾಗಿ ಆರಿಸುವ ಬದಲು ಸದಸ್ಯರ ತಿಳುವಳಿಕೆಗೆ ತಾರದೆ ತಮಗೆ ಬೇಕಾದವರನ್ನೇ ಕಾರ್ಯನಿರ್ವಾಹಕ ಸಮಿತಿಯವರು ಸೇರಿಸಿಕೊಂಡು ಬಿಡುವುದು ಅನುಚಿತ ಮತ್ತು ಅಕ್ರಮವಲ್ಲವೇ? ಸಂಘದ ವಾರ್ಷಿಕೋತ್ಸವವೇ ಮೊದಲಾದ ಸಮಾರಂಭಗಳಲ್ಲಿ ಸಭಿಕರಲ್ಲಿ ಮನಸ್ಸಿದ್ಧವರನ್ನು ಮಾತಾಡಗೊಡದೆ ತಮಗೆ ಬೇಕಾದ ಕೆಲವರನ್ನು ಮಾತಾಡಬಿಟ್ಟು ಪಕ್ಷಪಾತ ದೃಷ್ಟಿಯಿಂದಾದರೂ ಮಾತಾಡಬೇಕೆನಿಸಿದರೆ ಅವರಿಗೆ ಅಸ್ಪದ ಸಿಗದಂತೆ ಮಾಡುವುದು ಯಾವ ನ್ಯಾಯ?

ಬಿಲ್ಲವರೆಲ್ಲರೂ ಒಂದೇ ಸಮಾಜದವರಾದರೂ ಅವರೊಳಗೇನೇ ಬಾರ್ಕೂರು ಮತ್ತು ಮಂಗಳೂರು ಹೋಬಳಿ ಎಂಬ ಭೇದಕ್ಕೆ ಅರ್ಥವಿದೆಯೇ? ಬಿಲ್ಲವರೆಲ್ಲರೂ ಒಂದಾಗಬೇಕು. ಒಂದೇ ಸಂಘದ ಆಶ್ರಯದಲ್ಲಿ ಸೇರಿ ಸಂಘಟಿತರಾಗಬೇಕೆಂದು ತೋರುವಿಕೆಗೆ ಭಾಷಣವೀಯುತ್ತಾ ಒಳಗಿಂದೊಳಗೆ ಈ ಹೋಬಳಿಗ ವರು ಪರಸ್ಪರ ದ್ವೇಷಾಸೂಯೆಯುಳ್ಳವರಾಗಿರುವುದು ಅದೆಂತಹ ಹಾಸ್ಯ! ಬಿಲ್ಲವ ಸಮಾಜದ ಹಣವು ಬಿಲ್ಲವರ ಹಿತಕ್ಕಾಗಿಯೇ ವಿನಿಯೋಗಿಸಲ್ಪಡಬೇಕಾದರೂ ಕೆಲವು ಮಹನೀಯರು ಅದನ್ನು ತಮ್ಮಿಚ್ಛಾನುಸಾರ ದುರ್ವ್ಯಯ ಮಾಡುತ್ತಿರುವುದು ಅತ್ಯಂತ ವಿಷಾದಕರ. ಒಂದೆಡೆ ಬಿಲ್ಲವರೆಲ್ಲರನ್ನೊಂದುಗೂಡಿಸುವ ಯತ್ನದ ನಟನೆ ಮತ್ತು ಇನ್ನೊಂದೆಡೆ ಕ್ಷುದ್ರ ಪ್ರಾಂತ ಭೇದದ ಸಂಕುಚಿತ ಮನೋವೃತ್ತಿಯಿಂದ ಸಮಾಜಕ್ಕೆ ಹಾನಿಯೇ ಹೊರತು ಶ್ರೇಯಸ್ಸಿಲ್ಲ. ಒಬ್ಬೋ ಒಂದು ಸಂಘಕ್ಕೆ ಸೇರಿದ ಬಿಲ್ಲವರು ಇನ್ನೊಂದರ ಸದಸ್ಯರಾಗದಂತಾಗಬೇಕು. ಇಲ್ಲವೆ ಬಿಲ್ಲವರೆಲ್ಲರೂ ಒಂದಾಗದೆ ಯಾವ ಸಂಘಕ್ಕೂ ಬಲವಾಹದ ತೆರಬಾರದು. ಹೇಗಾದರೂ ಬಿಲ್ಲವ ಸಂಸ್ಥೆಗಳೆಲ್ಲವೂ ಒಂದಾಗುವಂತೆ ಪ್ರಯತ್ನಿಸಬೇಕೆಂದು ವಿಜ್ಞಾಪನೆ.

ಸರ್ವಾಂಗ ಭದ್ರತೆಯು ಹಾಗೂ ಅಭಿವೃದ್ಧಿಯ ಮೇಲ್ಮೆಯುಳ್ಳರುವ ಜೀವ ವಿಮಾ ಸಂಘಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:—

ಶಾಖಾ ಕಾರ್ಯದರ್ಶಿ,
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ಮಾರ್ಗಶಿರ ಮಾಸದಲ್ಲಿ ವಿಶೇಷವೇನು?

೧೧ದಶಂಬರದಿಂದ, ೧೯೪೦ಜನವರಿ ೯ರವರೆಗೆ

ಬರೆದವರು:—ಜ್ಯೋತಿರ್ವಿದ್ಯಾಭೂಷಣ ಪಂಡಿತ ಶ್ರೀ. ವೀರನಗೌಡರು,

ಭಾಗ್ಯೋದಯ ಪಂಚಾಂಗಕರ್ತರು, ಗದಗ ಇವರಿಂದ

ಈ ಮಾಸದಲ್ಲಿ ಸ್ಪರ್ಶಜನ್ಯ ರೋಗದಿಂದ ಮರಣವೂ, ಅಧಿಕಾರವರ್ಗದ ಪ್ರಮುಖರ ಮತ್ತು ರಾಜಕೀಯ ಮುಖಂಡರ ಮರಣವೂ, ದೊಡ್ಡ ದೊಡ್ಡ ವ್ಯಾಪಾರಸ್ಥರ ಮತ್ತು ಶ್ರೀಮಂತರ, ದಿವಾಳೀ ಯೋಗವೂ ನಿದರ್ಶನವಾಗುತ್ತೆ. ದನದ ಬೇನೆಯಿಂದ ದನದ ಮೃತ್ಯು ಅಧಿಕವಾಗುತ್ತೆ.

ಪೈರಿನ ಸ್ಥಿತಿ ಉತ್ತಮವಿರುತ್ತೆ. ಒಕ್ಕಲಿಗರಿಗೆ ಸುಖಯೋಗವಿರುತ್ತೆ. ಗಣಿಗಳಲ್ಲಿ ಧಾತುಪೋಧವೂ, ಸಂಕಾರೀ ಇಮಾರತುಗಳ ಕಾರ್ಯಗಳೂ, ಭರದಿಂದ ಸಾಗುತ್ತವೆ.

ಬ್ಯಾಂಕು, ಪೇಪರ್, ಹುಂಡಿಗಳ ವಿಷಯವಾಗಿ ಚಮತ್ಕಾರ ಘಟನೆಗಳುಂಟಾಗುತ್ತವೆ. ರಾಜವರ್ಗದಲ್ಲಿ ಪ್ರವಾಸಯೋಗ, ಬಂಧು, ಪ್ರಜೆಗಳಿಂದ ಗೌರವ ಹೊಂದುವ ಯೋಗವಿರುತ್ತೆ. ದೇಶದಲ್ಲಿ ಆರ್ಥಿಕ ಮುಗ್ಗಟ್ಟು ವಿಶೇಷವಾಗುತ್ತೆ. ಸರಕಾರದವರಿಂದ ಹೊಸದಾಗಿ "ಕರ" ಹೇರುವ ಯೋಗವಿರುತ್ತೆ.

ಕಳವು, ಮಾರಾಮಾರಿ, ಅತ್ಯಾಚಾರ, ಗುಪ್ತಕಾರಸ್ಥಾನ, ತುರಂಗಗಳಲ್ಲಿ ಅತ್ಯಾಚಾರ ಜರಗುತ್ತಾ ಸಾಗುತ್ತೆ. ಕಾಲೀಕಾಪ ಸಂಪತ್ತು ಹೆಚ್ಚಾಗುತ್ತೆ.

ರೈಲ್ವೆ, ಮೋಟಾರು, ತಾರು, ಪೋಸ್ಟ್, ವಿದ್ಯಾಖಾತೆಗಳಿಗೆ ಸುಖ, ಲಾಭದಾಯಕ ಯೋಗವಿರುತ್ತೆ. ವೃತ್ತಪತ್ರಗಳಿಗೆ, ಹೊಸ ಗ್ರಂಥಪ್ರಕಾಶಕರಿಗೆ ಲಾಭ ಯೋಗವಿರುತ್ತೆ. ಮಂತ್ರ-ತಂತ್ರ-ಯಂತ್ರ ವಾದಿಗಳಿಗೆ ಅನಿಷ್ಟಯೋಗವಿರುತ್ತೆ.

ರಾಷ್ಟ್ರ ರಾಷ್ಟ್ರಗಳಲ್ಲಿ ಶಾಂತಿಯೋಗವೂ, ಪರರಾಷ್ಟ್ರದ ವ್ಯಾಪಾರಿಗಳಿಗೆ ಲಾಭವೂ ಒಪ್ಪಂದವೂ, ಈ ಯೋಗ ಕಂಡುಬರುತ್ತೆ.

ಹತ್ತಿ ತೇಜೀ ಮಂದಿ ಯೋಗ

ದಿಶಂಬರ ೧೫ರಿಂದ ೧೮ರವರೆಗೂ ತೇಜಿ, ೨೬ರಿಂದ ೩೧ರವರೆಗೆ ಮಂದಿ, ಸನ್ ೧೯೪೦ನೇ ಜನವರಿ ೨ರಿಂದ ೯ರವರೆಗೆ, ಪುನಃ ತೇಜೀ ಯೋಗ ಖಂಡಿತ!

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ $\frac{283}{1939}$

ಶ್ರೀನಿವಾಸ ನಾಯ್ಕ—ವಾದಿ

ಮತ್ತು

ತುಕ್ರಪ್ಪ ವಗೈರೆರು—ಪ್ರತಿವಾದಿರು

ಇವರೊಳಗೆ–

ಪ್ರತಿವಾದಿರು–

1\. ತುಕ್ರಪ್ಪ-ಪಾಂಡು ಮಗ

20\. ಚೆಂದು } ಮ್ಯಾನರರು, ಗಾರ್ಡಿಯನ ತಾಯಿ 9ನೇ ಪ್ರತಿವಾದಿಳು ಕೊಲ್ಲು ಹೆಂಗ್ಸು, ದೇಯು ಹೆಂಗ್ಸಿನ ಮಗಳು.
21\. ವಿಮಾನಕ್ಕ }

22\. ಕಮಲಾಕ್ಷಿ ನಾವು ಹೆಂಗ್ಸಿನ ಮ್ಯಾನರ ಮಗಳು, ಗಾರ್ಡಿಯಾನ ಸದ್ರಿ ನಾಮು ಹೆಂಗ್ಸು, ದೇಯು ಹೆಂಗ್ಸಿನ ಮಗಳು.

ಕಾರ್ಕಳ ತಾಲೂಕು ಕುಕ್ಕುಂದೂರು ಗ್ರಾಮದಲ್ಲಿರುವವರು ಇವರಿಗೆ—

ತಾ. 17-4-1928ನೇ ರಿಜಿಸ್ತ್ರಿ ಮಾಯಿದೆ ಗೇಣಿ ಚೀಟು ಪ್ರಕಾರ ವಾಡಿಗೆ ಕಳೆದ ಈಶ್ವರ ಮತ್ತು ಬಹುಧಾನ್ಯ ಸಂವತ್ಸರಗಳ ಮೂಫು ಬಹುರ ಇಂದ ವಾಯಿದೆಗಳಿಗೆ ಬರತಕ್ಕ ಗೇಣಿ ಯಾನೆ ಹುಟ್ಟುವಳಿ ಬಾಕಿ ಬಡ್ಡಿ ಕೂಡಾ ರೂಪಾಯಿ 128-13-10 ದಾವಾ ಸಂಸ್ಕೃದ ಬಡ್ಡಿ, ಕೋರ್ಟು ಖರ್ಚು ವಗೈರೆ ಪ್ಲೆಯಿಂಟ್ ನಿವೃತ್ತಿಗಳ ಬಗ್ಗೆ ವಾದಿಯು ಮಾಡಿದ ಸದ್ರಿ ದಾವೆಯು ತಾರೀಕು 18-12-1939ಕ್ಕೆ ಇಟ್ಟಿರುವದ್ರಿಂದ ಸದ್ರಿ ದಾವೆಯ ಕುರಿತು ಆಕ್ಷೇಪವಿದ್ದಲ್ಲಿ ನೀವು ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮನ್ನು ಬಿಟ್ಟು ಮಾಡಿ ಗೈರ ಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲಾಗುವದು ಎಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿಯದೆ.

P. Ramachandra Rau,
Pleader for Plaintiff
ಕಾರ್ಕಳ, ತಾ. 29-11-1939

SAVINGS & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between SAVING & SPENDING and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd.] (Incorporated in British India) [1925.

Head Office:–UDIPI, (S. India).



KOPRAN Tooth Paste
ಹಿಂದೂದೇಶದ ಜನಪ್ರೀತ ದಂತಾಂಜನ
ಜಾಗಿಗಡದ ತತ್ವಗಳನ್ನೊಳಗೊಂಡು ತಯಾರಿಸಲ್ಪಟ್ಟಿರುವ ಉತ್ತಮ ದಂತಾಂಜನ. ಕೀನ್ರಿನಾಶವುಳ್ಳದ್ದು, ವಿಷಹರಕವಾದದ್ದು.
KOPRAN CHEMICAL CO., BOMBAY.
ಕೊಪರನ್ ಲಾರ್ಜ್ ಸೈಜು 0-13-0, ಕೊಪರನ್ ಸ್ಟ್ಯಾಂಡರ್ಡ್ ಸೈಜು 0-8-0, ಟಂಡರ್ಗಮ್ ಸ್ಟ್ಯಾಂಡರ್ಡ್ ಸೈಜು 0-8-0.

ಮೈಸೂರು

ನ. ಬಾ. ತಾ. 4-12-'39

ಮಹಿಳಾ ಸಮ್ಮೇಳನೆ—ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನದ 14ನೆಯ ಅಧಿವೇಶನವು ಚಿತ್ರದುರ್ಗದಲ್ಲಿ ಲೇಡಿ ಸರ್. ಮಿರ್ಜಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಸ್ಥಾನದಾದ್ಯಂತದಿಂದಲೂ ಪ್ರತಿನಿಧಿಗಳು ಬಂದಿದ್ದರು. ಸ್ಟಾಂಡಿಂಗ್ ಸಮಿತಿ ಸಭೆ ಮತ್ತು ಬಹಿರಂಗ ಅಧಿವೇಶನ ನಡೆದು, ಸ್ವಾಗತಾಧ್ಯಕ್ಷರ ಭಾಷಣ ನಡೆಯಿತು. ಸಮ್ಮೇಳನದಲ್ಲಿ ಚರ್ಚಿಸಲು ಬಂದಿದ್ದ ಅನೇಕ ವಿಷಯಗಳನ್ನು ಮಂಜೂರುಮಾಡಲಾಯಿತು.

ಅಖಿಲಭಾರತ ಕೈಗಾರಿಕೆ ಸಮ್ಮೇಳನ ಮೇಲ್ಕಂಡ ಸಮ್ಮೇಳನದ ವಿಚಾರವಾಗಿ ಹೆಚ್ಚು ವಿವರಗಳು ತಿಳಿದುಬಂದಿವೆ. ಬೆಂಗಳೂರಲ್ಲಿ ಇದೇ ಮಾಹೆ ತಾ. 15ರಲ್ಲಿ ನಡೆಯುವ ಮೇಲ್ಕಂಡ ಸಮ್ಮೇಳನದ ಹನ್ನೊಂದನೆ ಅಧಿವೇಶನಕ್ಕೆ ಅಧ್ಯಕ್ಷತೆ ವಹಿಸುವ ಇಂಡಿಯಾ ಸರ್ಕಾರದ ವಾಣಿಜ್ಯ ಸಚಿವರಾದ ಸರ್. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು, ಬೆಂಗಳೂರಿಗೆ ಆಗಮಿಸುವರು. ಸರ್. ಮಿರ್ಜಾರವರ ಸ್ವಾಗತ ಭಾಷಣದೊಡನೆ ಸಮ್ಮೇಳನವು 10ಘಂಟೆಗೆ ಪ್ರಾರಂಭವಾಗುವುದು. ಮಾರನೆ ದಿನ ಪ್ರತಿನಿಧಿಗಳೆಲ್ಲರೂ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಕೊಡುವರು ಸರ್. ಮೊದಲಿಯಾರ್‌ರವರು. ಭರತಖಂಡದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಬರುತ್ತಾರೆ.

ಮೈಸೂರು ಕಾಂಗ್ರೆಸ್ ಸುದ್ದಿಗಳು— ಮೈಸೂರು ಕಾಂಗ್ರೆಸ್‌ನವರ ಚಳುವಳಿಯು ಸಂಸ್ಥಾನದೆಲ್ಲಾ ಕಡೆಗಳಲ್ಲೂ ಯಶಸ್ವಿಯಾಗಿ ನಡೆಯುತ್ತಿದೆ. ಆದರೆ ಆಜ್ಞೋಲ್ಲಂಘನೆಮಾಡುವವರ ದಸ್ತಗಿರಿ ಮತ್ತು ಶಿಕ್ಷೆಯಾಗುತ್ತಿದೆ. ಮೈ॥ ಕಾಂ॥ ವಿಚಾರವಾಗಿ ತಿಳಿಸಲು ಮಹಾತ್ಮಗಾಂಧಿಯವರ ಬಳಿಗೆ ತೆರಳಿದ್ದ ಮೈ॥ ಕಾಂ॥ ಅಧ್ಯಕ್ಷ ರಾಯಭಾರ ವರ್ಗದವರು, ಮಹಾತ್ಮರನ್ನು ಅಲಹಾಬಾದ್ ಮತ್ತು ವಾರ್ಧಾದಲ್ಲೂ, ಶ್ರೀ. ಪಟೇಲರನ್ನು ಮುಂಬಾಯಲ್ಲೂ, ಇನ್ನಿತರ ಕಾಂಗ್ರೆಸ್ ಮುಂದಾಳುಗಳನ್ನು ಭೇಟಿಮಾಡಿ ಆಶೀರ್ವಾದ ಪಡೆದು ಹಿಂತಿರುಗಿದರು. ಈ ಪತ್ರವನ್ನು ಬರೆಯುತ್ತಿರುವ ವೇಳೆಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ನಡೆಯುತ್ತಿದೆ. ಅಲ್ಲಿ ಚರ್ಚಿಸಲ್ಪಡುವ ಮತ್ತು ಕಾಂಗ್ರೆಸ್‌ನವರು ಮಾಡುವ ನಿರ್ಣಯ, ಮುಂದಿನ ಕಾರ್ಯಕ್ರಮಗಳನ್ನೂ ಬರುವ ವಾರದ ಸಂಚಿಕೆಯಲ್ಲಿ ತಿಳಿಸಲಾಗುತ್ತೆ.

ಪ್ರಿಟಿಂಗ್ ಪರೀಕ್ಷೆ—1940ನೇ ಇಸ್ವಿಯಿಂದ ಲೆಟರ್ ಪ್ರೆಸ್ ಪ್ರಿಟಿಂಗ್ ವಾರ್ಷಿಕ ಪರೀಕ್ಷೆಗಳು 3ವರ್ಷಗಳ ಕಾಲ ನಡೆಯುವುದೆಂದು ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ ಈಗಾಗಲೇ ಸಂಚರಿಸತೊಡಗಿರುವರೆಂದು ತಿಳಿದುಬರುತ್ತದೆ. ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸುವರೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ. ಪ್ರವೇಶ ಹಾಸಲು ರೂ. 1, (ಜುಮ್ಲಾ ರೂ. 11.) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ. ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಸೂಚನೆಯನ್ನು ಪಡೆಯಲಪೇಕ್ಷಿಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ. ಈ ವಿಳಾಸಕ್ಕೆ ಬರೆಯಬಹುದು.

ಬಹಿಷ್ಕರಿಸಲಾಗಿದೆ—ಹೋಲಿವುಡ್ ತಯಾರಿಕೆಯ 'ಗಂಗಾಡಿನ್' ಚಿತ್ರಪಟವನ್ನು ಮೈಸೂರು ಸಂಸ್ಥಾನದಲ್ಲಿ ಪ್ರದರ್ಶಿಸಕೂಡದೆಂದು ಸರ್ಕಾರದವರು ಬಹಿಷ್ಕರಿಸಿದ್ದಾರೆ.

ಮೈಸೂರು ನ್ಯಾಯವಿಧಾಯಕ ಸಭೆ ಮೇಲ್ಕಂಡ ಸಭೆಯು ಮುಂದಿನ ಮಾಹೆ ತಾ. ೧೧ನೇ ಸೋಮವಾರ, ಬೆಂಗಳೂರಲ್ಲಿ ಪ್ರಾರಂಭವಾಗುತ್ತದೆ.

ಏಲಕ್ಕಿ ಕೈಗಾರಿಕೆ—ಏಲಕ್ಕಿ ವ್ಯಾಪಾರಾಭಿವೃದ್ಧಿಗೊಳಿಸಲು ಸರ್ಕಾರದವರು ಒಂದು ಸಮಿತಿ ನೇಮಿಸಿದ್ದಾರೆ.

ಸೆಂಟ್ರಲ್ ಕಾಲೇಜು ದಿನಾಚರಣೆ- ಬೆಂಗಳೂರು ಸೆಂಟ್ರಲ್ ಕಾಲೇಜ್ ದಿನಾಚರಣೆಯು ಮೊನ್ನೆ ನಡೆಯಿತು. ದಿ॥ ಬ॥ ಕೃಷ್ಣಸ್ವಾಮಿ ಅಯ್ಯಂಗಾರರವರು ಅಧ್ಯಕ್ಷತೆ ವಹಿಸಿದ್ದರು.

ಅರಳಿಮರ ಮುರಿದುಬಿದ್ದು ವಿದ್ಯುದ್ದೀಪ ಕಂಬ ಮುರಿದು ಗಲಾಟೆ— 'ನವಯುಗ' ಮೈಸೂರು ಪತ್ರಿಕೆದಾರರ ಮನೆಯ ಮುಂಭಾಗದಲ್ಲಿ ಒಂದು ಪ್ರಸಂಗವು ಮೊನ್ನೆ ಶುಕ್ರವಾರ ರಾತ್ರಿ ನಡೆಯಿತು. ಸಂಧ್ಯಾಕಾಲ 8ಘಂಟೆ ಸಮಯ ರಾತ್ರಿಯಾದ್ದರಿಂದ ಜನ ಸಂಚಾರವು ಬೀದಿಯಲ್ಲಿ ಸ್ವಲ್ಪ ಕಡಿಮೆಯಿತ್ತು. ಪತ್ರಿಕೆದಾರರ ಮನೆಯ ಮುಂಭಾಗದಲ್ಲಿ ಅತಿ ದೊಡ್ಡ ಪುರಾತನ ಒಂದು ಅರಳಿಮರದ ಒಂದು ಭಾಗವು ಫಕ್ಕನೆ ಮುರಿದುಬೀಳಲು, ಅದರ ಬಳಿಯಿದ್ದ ವಿದ್ಯುದ್ದೀಪದ ಕಂಬ ಮತ್ತು ವಿದ್ಯುತ್ ತಂತಿ ಮುರಿಯಿತು. ಈ ಮರವು ಮುರಿದ ಶಬ್ದದಿಂದ ಅನೇಕ ಮನೆಯ ಹೆಂಗಸರೂ, ಮಕ್ಕಳೂ ಗಾಭರಿಗೊಂಡು ಭಯಾಕ್ರಾಂತರಾದರು. ನಂತರ ನಮ್ಮ ಪ್ರತಿನಿಧಿಗಳು ಇವರೆಲ್ಲರಿಗೂ ಧೈರ್ಯ ಹೇಳಿ, ತಕ್ಷಣವೇ ವಿದ್ಯುತ್ ಇಲಾಖೆಯವರಿಗೆ ಟೆಲಿಫೋನ್‌ಮಾಡಲು ಅವರು ತಕ್ಕ ಆಯುಧದೊಡನೆ ಬಂದು ಎಲ್ಲವನ್ನು ಅದೇ ರಾತ್ರಿ ಸರಿಪಡಿಸಲಾಗದೆ ಕೆಲವು ಭಾಗಗಳಲ್ಲಿ ದೀಪವಿಲ್ಲದೆ "ಬ್ಲ್ಯಾಕ್‌ಔಟ್" ಆಯಿತು.

ಮರವು ಮುರಿದು ವಿದ್ಯುತ್ ತಂತಿಯು ವಿದ್ಯುತ್ ಶಕ್ತಿಯೊಡನೆ ನೆಲದ ಮೇಲೆ ಬೀಳಲು, ಅನೇಕರು ಹೆದರಿದರು. ರಾತ್ರಿಯಾದ್ದರಿಂದ "ಇದರ ಬಳಿ ಕಾಣದೆ ಯಾರಾದರು ಹೋಗಿಬಿಡಬಹುದೆಂದೂ, ಅಥವಾ ದಾಟಬಹುದೆಂದೂ ತಿಳಿದು, ನಮ್ಮ ಪ್ರತಿನಿಧಿಗಳು ಆ ರಸ್ತೆಯಲ್ಲಿ ನಿಂತು ಅನೇಕರಿಗೆ ಈ ವಿಷಯವನ್ನು ತಿಳಿಸಿ, ತಿಳುವಳಿಕೆಕೊಡಲು ಉದ್ಯುಕ್ತರಾದರು. ಮಾರನೆ ಬೆಳಿಗ್ಗೆ ಮುನಿಸಿಪಾಲಿಟಿ ಸಹಾಯದಿಂದ ಮುರಿದು ಕೆಳಗೆಬಿದ್ದಿದ್ದ ಮರವನ್ನೆಲ್ಲಾ ತೆಗಿಸಿ, ರಸ್ತೆಯನ್ನು ಜನ ಮತ್ತು ವಾಹನ ಸಂಚಾರಕ್ಕೆ ಅನುಕೂಲವಾಗಮಾಡಲಾಯಿತಲ್ಲದೆ, ವಿದ್ಯುತ್ ಇಲಾಖೆಯವರು ಎಲ್ಲ ಸರಿಪಡಿಸಿ, ಎಲ್ಲರ ಮನೆಗೂ ದೀಪಕೊಟ್ಟರು.

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲಾಕು, ಡಿಜ್ಯಾನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸೈನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮೃತಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

Degrees: Books: Medicines.

Free H. L. M. S., H. M. B., H. M. D. etc Free Homeo-Ayur-Unani-Naturo degres. by post also—Practioners also get soons Homeo Materiamedica, Rs. 5. Homeo-Practice book Rs. 4, Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India.

NAVAYUGA
Advertisement Tariff

1 Page Rs. 25/- per insertion
½ ,, Rs. 15/- ,, ,,
¼ ,, Rs. 8/- ,, ,,
⅛ ,, Rs. 5/- ,, ,,
Per Single inch col. Re. 1 ,,
Contract rates on application
Manager-**Navayuga UDIPI.**

(೫ನೇ ಪುಟದಿಂದ ಮುಂದರಿಸಿದ್ದು.)

ಮೊಂಟೆಸೋರಿ ಶಿಕ್ಷಣ ಪದ್ಧತಿ

ಮಗುವೇ ತನ್ನ ಶಿಕ್ಷಕ. ತನ್ನ ಶಾರೀರಕ ಮತ್ತು ಮಾನಸಿಕ ಬೆಳವಣಿಗೆಯ ಕ್ರಮ ಮತ್ತು ವಿಧಾನದ ಸ್ವಾಭಾವಿಕ ಪ್ರೇರಣೆಯನ್ನದು ಪಡೆದಿರುತ್ತದೆ. ಅದಕ್ಕಾರೂ ಕಲಿಸಬೇಕೆಂದಿಲ್ಲ. ಆದರಿಂದ ಮಾನವಕೋಟಿಯು ಹೆಚ್ಚಿನ ಪಾಠ ಕಲಿಯಲಿದೆ. ಅದರ ಸ್ವಾಭಾವಿಕ ಬೆಳವಣಿಗೆಯನ್ನು ಒತ್ತಿಬಿಡಲಾಗದು. ಅದರ ಮೇಲೆ ಬಲಾತ್ಕಾರ ನಡಿಸಬಾರದು. ಮಗುವಿನ ಮಾರ್ಗವನ್ನು ನಾವು ಅನುಸರಿಸಿ ನಡೆಯಬೇಕು. ಅದರ ನಿಸರ್ಗಸಿದ್ಧ ಪ್ರೇರಣೆಗಳನ್ನು ವಿಕಾಸಗೊಳಿಸುವಂತೆ ನಾವು ಸಹಾಯಮಾಡಬೇಕು. ಅದರ ಮನೋಭಾವಗಳನ್ನು ಕಂಡುಕೊಂಡು ಆ ಮಾರ್ಗದಲ್ಲೇ ಅದನ್ನು ಮುನ್ನಡೆಸಬೇಕೆಂಬ ನವೀನ ಶಿಕ್ಷಣ ಪದ್ಧತಿಯನ್ನು ಕಂಡುಹಿಡಿದು ತಾನೇ ಸ್ವತಃ ಅದನ್ನು ಪ್ರಯೋಗಕ್ಕೆ ಹಚ್ಚಿ ಜಯಶೀಲರಾಗಿರುವ ಡಾಕ್ಟರ್ ಮೇರಿಯ ಮೊಂಟಿಸೋರೀಯವರು ಈಗ ಮದ್ರಾಸಿಗೆ ಬಂದು ಅಡ್ಯಾರಿನಲ್ಲಿ ತನ್ನ ನೂತನ ಪದ್ಧತಿಯ ಮೇರೆಗೆ ಶಿಕ್ಷಣ ಕೊಡುವ ಕ್ಲಾಸೊಂದನ್ನು ನಡಿಸುತ್ತಿರುವರು. ಇದೇ ತಾ. 1ರಲ್ಲಿ ಮದ್ರಾಸ್ ಕೋರ್ಪರೇಶನಿನವರು ಡಾಕ್ಟರ್ ಮೊಂಟಿಸೋರಿಯವರಿಗೆ ಮಾನಪತ್ರವಿತ್ತು ಗೌರವಿಸಿದರು. ಆಗ ಡಾಕ್ಟರರು ಹಿಂದೂದೇಶದ ಶಿಲ್ಪಕಲೆ, ಸಂಸ್ಕೃತಿ ಮತ್ತು ತತ್ವವಿಚಾರದ ಕುರಿತು ಮೆಚ್ಚಿಗೆ ಸೂಚಿಸಿ, ಅಮಾನುಷ ಹಿಂಸೆ ಮತ್ತು ಬಲಾತ್ಕಾರ, ದಬ್ಬಾಳಿಕೆಯಿಂದ ಕಂಗೆಟ್ಟಿರುವ ಲೋಕಕ್ಕೆ ಹಿಂದೂದೇಶವು ನವಸಂದೇಶವನ್ನೀಯಬೇಕೆಂದು ಹೇಳಿದರು. ಚಿಕ್ಕಂದಿನ ಶಿಕ್ಷಣನೀತಿಯ ಮೇಲೆ ಹೊಂದಿಕೊಂಡಿದೆ ಒಂದು ಜನಾಂಗದ ಉನ್ನತಿ ಮತ್ತು ಶ್ರೇಯಸ್ಸು. ಈಗಣ ಶಿಕ್ಷಣವೇ ಮುಖ್ಯತಃ ದಂಡನೆ, ನಿರ್ಬಂಧ ಮತ್ತು ಬಲಾತ್ಕಾರದ ಮೇಲೆ ಅವಲಂಬಿಸಿಕೊಂಡಿದೆ. ಅದೇ ರೀತಿ ನೀತಿಯು ಸಮಾಜದಲ್ಲಿಯೂ ಪ್ರತಿಬಿಂಬಿತವಾಗುತ್ತದೆ. ಮಗುವಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತು, ಪ್ರೇಮಪೂರ್ವಕನಾಗಿ ಅದರ ಅಂತಃಶಕ್ತಿಯನ್ನು ವಿಕಾಸಗೊಳಿಸಿ ಬೆಳೆಯಗೊಡುವ ನವೀನ ಮನೋವೃತ್ತಿಯ ಸ್ಫೂರ್ತಿಯಿಂದ ಅಧ್ಯಾಪಕರು ಪ್ರೇರಿತರಾಗಿ ನಡೆದರೆ ಮಾನವಪ್ರೇಮ ಮತ್ತು ಸೌಹಾರ್ದಪೂರ್ಣವಾದ ನವಸಮಾಜರಚನೆಗವರು ಅಡಿಗಲ್ಲು ಹಾಕಿದಂತಾಗುವುದು.

ಹಿಟ್ಲರರಿಗಿಂತಲೂ ಒಂದು ಹೆಜ್ಜೆ ಮುಂದೆ

ಸ್ಟೆಲಿನರು ಹಿಟ್ಲರರ ಮಾದರಿಯನ್ನೆ ಅನುಸರಿಸುತ್ತಿರುವಂತಿದೆ. ಹಿಟ್ಲರರು ಮೂರು ವರುಷಗಳಲ್ಲಿ ಸಾಧಿಸಿದುದನ್ನು ಸ್ಟೆಲಿನರು ಮೂರೇ ತಿಂಗಳಲ್ಲಿ ಕೈಗೂಡಿಸಿಕೊಂಡಿರುತ್ತಾರೆ. ಎಸ್ಟೋನಿಯ ಲಟ್ವಿಯ, ಲಿಥುವಾನಿಯಗಳು ಬರಿಯ ಬೆದರಿಕೆಯಿಂದಲೇ ಬಗ್ಗಿ ಒಡಂಬಡಿಕೆಗೊಪ್ಪಿದುವು. ಫಿನ್ಲೆಂಡು ವಿರೋಧಿಸಿ ಈಗ ಭಯಾನಕ ಹಾವಳಿಗೊಳಗಾಗಿರುವುದು ಪೋಲಂಡಿನ ದುರಂತವೇ ಫಿನ್ಲೆಂಡಿನಲ್ಲಿಯೂ ಪುನರಾವರ್ತಿತವಾಗುತ್ತಿರುವುದು. ಸ್ಟೇಲಿನರು ಹಿಟ್ಲರರಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟಿರುವವರಂತಿದೆ. ಹಿಟ್ಲರರು ಯುರೋಪಿನಲ್ಲಿ ಭಯಂಕರ ರಕ್ತಪಾತವನ್ನುಂಟುಮಾಡಲು ವರ್ಸೇಲ್ಸ್ ಒಪ್ಪಂದವು ಕಾರಣವಾದರೆ, ಸ್ಟೆಲಿನರು ಫಿನ್ಲೆಂಡನ್ನು ಬಗ್ಗುಬಡೆಯುವುದಕ್ಕೂ ಬ್ರಿಟಿಷ್ ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿಯೇ ಅಪ್ರತ್ಯಕ್ಷವಾಗಿ ಕಾರಣವೆಂದರೆ ತಪ್ಪಾಗಲಾರದು. ಬ್ರಿಟನು ಮತ್ತು ಫ್ರಾನ್ಸ್‌ಗಳು ತಮ್ಮ ಸಾಮ್ರಾಜ್ಯ ಸ್ವಾರ್ಥ ಮತ್ತು ಯುರೋಪಿನಲ್ಲಿ ತಮ್ಮ ಅಧಿಕಾರ ಸ್ಥಾಪಿಸುವ ಪ್ರಯತ್ನವನ್ನು ಬಿಟ್ಟುಬಿಡದಿರುವವರೆಗೆ ಜರ್ಮನಿ ಮತ್ತು ರಷ್ಯಗಳು ತಮ್ಮ ಅಧಿಕಾರ ಸ್ಥಾಪಿಸಲು ತಮ್ಮ ಸ್ಥಾನಬಲಪಡಿಸಲು ವಹಿಸಿರುವ ಧೋರಣೆ ಮತ್ತು ನಡಿಸುತ್ತಿರುವ ಆಕ್ರಮಣ ದೊಡ್ಡ ತಪ್ಪೆನಲಾಗುವುದಿಲ್ಲ

"**Wanted**-a Branch Agency Manager on a monthly salary of Rs. 250/- for our Agency Office to be opened either at Belgaum or Mangalore. Only those who can write a test business of Rs 75,000/- before 28th February 1940 need Apply Messrs. Padubidri Bross, Chief Agents. Maharashtra and Karnataka, East & West Insurance Co. Ltd., Bombay 8."

ಮಂಗಳೂರ ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆಗಳು.

(ತಾ: 20-11-39ರಲ್ಲಿದ್ದಂತೆ ಹಜೂರು ಟ್ರೆಜರಿಯಿಂದ)

		ರಿಂದ	ವರೆಗೆ
1	ಭತ್ತ ಅವ್ವಲ್ ತರದ ಗುಡ್ಡೆ ಮುಡಿಗೆ	1 10 0	1 10 6
2	,, ದುಯಂ ,, ,,	ದಾಸ್ತಾನು ಇಲ್ಲ.	
3	,, ಅವ್ವಲ್ ಸುಗ್ಗಿ ,,		
4	,, ದುಯಂ ,, ,,		
5	ಅಕ್ಕಿ ಅವ್ವಲ್ ತರದ ಗುಡ್ಡೆ ಮುಡಿಗೆ ಹೊಸ್ತು	3 14 0	
6	,, ,, ,, ಹಳ್ತು	4 14 0	
7	,, ದುಯಂ ,, ಹೊಸ್ತು	3 12 0	
8	,, ,, ,, ಹಳ್ತು	4 8 0	
9	,, ಅವ್ವಲ್ ತರದ ಸುಗ್ಗಿ ಮುಡಿಗೆ	4 11 0	
10	,, ದುಯಂ ,,	4 6 0	
11	ತೆಂಗಿನಕಾಯಿ ಸುಲಿದದ್ದು 1000ಕ್ಕೆ	47 8 0	57 8 0
12	,, ಸಿಪ್ಪೆಯಿದ್ದದ್ದು ,,	50 0 0	60 0 0
13	ಕೊಬ್ಬರಿ ಅಫೀಸು ಖಂಡಿಗೆ	77 8 0	
14	,, ದೀವಿ ,,	90 0 0	
15	,, ದಿಲ್ ಪಸಂದ್	ದಾಸ್ತಾನು ಮುಗಿದಿದೆ.	
16	ಕೊಬ್ಬರಿ ಎಣ್ಣೆ ಮಣಕ್ಕೆ	5 12 0	
17	ಅಡಿಕೆ ಸಿಪ್ಪೆಯಿದ್ದದ್ದು 1000ಕ್ಕೆ	2 0 0	2 8 0
18	ಗೇರುಬೀಜ ಮುಡಿಗೆ	3 12 0	4 0 0
19	ಕಬ್ಬಿನ ಬೆಲ್ಲ ಖಂಡಿಗೆ	37 8 0	45 0 0
20	ಒಳ್ಳೇ ಮೆಣಸು ಕಂಡಿತ್ ಪೇಟೆಗೆ	15 12 0	17 0 0

INSERTED BY
THE
CANARA BANKING CORPORATION LTD.
(INCORPORATED IN BRITISH INDIA.)
ESTD. 1906

IN MEMORY OF
LATE SRI. K. M. SOMA,
Merchant & Landholder, Malpe.
Who expired on 30—11—1939.

Director of the Corporation from
1921 to 1924.

ನವಯುಗ

ಉಡುಪಿ, ಗುರುವಾರ ತಾ. ೭-೧೨-೩೯

ಮುಂದೇನು ?

ಕಾಂಗ್ರೆಸಿನ ನ್ಯಾಯವಾದ ಕೇಳಿಕೆಗೆ ಸರಕಾರವು ತೃಪ್ತಿಕರ ಉತ್ತರವನ್ನೇನೂ ಕೊಟ್ಟಿಲ್ಲ. ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಕೊಟ್ಟ ಪ್ರಾಂತಗಳಲ್ಲಿ ಗವರ್ನರರು ನಿರಂಕುಶ ರಾಜ್ಯಭಾರವನ್ನಾರಂಭಿಸಿರುತ್ತಾರೆ. ಯುದ್ಧದಲ್ಲಿ ಬ್ರಿಟನಿಗೆ ಬೇಕಾದ ಸಹಾಯವೀಯುವ ಸಿದ್ಧತೆ ಮತ್ತು ಪ್ರಯತ್ನವು ನಡೆಯುತ್ತಲೇ ಇದೆ. ಕಾಂಗ್ರೆಸಿನೊಡನೆ ರಾಜಿಮಾಡಲು ಬ್ರಿಟಿಷ್ ಸರಕಾರವು ಸಿದ್ಧವಿರುವಂತೆ ತೋರುವುದಿಲ್ಲ. ಅಂದಮೇಲೆ ಇದೇ ಸುಸಂದರ್ಭವೆಂದು ಕಾಂಗ್ರೆಸು ಉಗ್ರಕಾರ್ಯಕ್ರಮವನ್ನೇನಾದರೂ ಕೈಗೊಳ್ಳದೆ ತಣ್ಣಗಿರುವುದೇಕೆ? ಹೀಗೆಯೇ ಎಷ್ಟು ಕಾಲ ತಟಸ್ಥವಿರುವುದು. ಎಂಬೀ ಪ್ರಶ್ನೆಗಳು ಸ್ವಾಭಾವಿಕವಾಗಿ ಹುಟ್ಟುತ್ತವೆ. ಕಾಂಗ್ರೆಸಿನೊಳಗಣ ತೀವ್ರಗಾಮಿಗಳಂತೂ ತೀವ್ರ ಅಸಹಿಷ್ಣುತೆ ಇಂದಿದ್ದು ಸರಕಾರದ ಧೋರಣೆಯನ್ನು ತೀವ್ರವಾಗಿ ನಿಷೇಧಿಸಿ ಬಿಟ್ಟೆಗೊಳಗಾಗಿ ಕಾರಾಗೃಹಕ್ಕೆ ಸೇರುತ್ತಿದ್ದಾರೆ. ಸರಕಾರವಾದರೂ ತನ್ನ ದಬ್ಬಾಳಿಕೆಯ ನಖಗಳನ್ನು ತೆರೆದು ಗರ್ಜಿಸತೊಡಗಿದೆ. ಕ್ರಾಂತಿಗಾಗಿ ಹಾತೊರೆಯುತ್ತಿರುವವರು ಈಗ ಶಾಂತಿ ಪಾಠವನ್ನು ಪಠಿಸುತ್ತಾ ಕುಳಿತಿರುವುದಾದರೂ ಹೇಗೆ? ಇದೀಗ ಸಾಮುದಾಯಿಕ ಚಳವಳ ಹೂಡಲು ಸುಯೋಗವಲ್ಲವೆ? ಎಂದು ಕೆಲವರು ಚಡಪಡಿಸ ಹತ್ತಿದ್ದಾರೆ.

ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಪ್ರಶ್ನೆ

ಇದಕ್ಕೆ ಮಹಾತ್ಮಾ ಗಾಂಧಿಯವರೂ ಶ್ರೀ| ರಾಜಗೋಪಾಲಾಚಾರ್ಯರೂ ಸಮರ್ಪಕ ಉತ್ತರವಿತ್ತಿರುತ್ತಾರೆ. ಇಡೀ ದೇಶವು ಕಾಯಿದೆ ಭಂಗದಂತಹ ಅಗ್ನಿಪರೀಕ್ಷೆಗೊಳಗಾಗುವಂತೆ ಮಾಡುವುದು ಸಣ್ಣ ಜವಾಬ್ದಾರಿಯೇನೂ ಅಲ್ಲ. ಅಂದಮೇಲೆ ಆದಷ್ಟು ತಾಳ್ಮೆ ಮತ್ತು ಸಾವಧಾನದಿಂದ ನಡೆಯುವುದೇ ವಿವೇಕದ ಹಾದಿ ಕಾಂಗ್ರೆಸ್ ಈಗ ಕನ್‌ಸ್ಟಿಟ್ಯೂವೆಂಟ್ ಎಸೆಂಬ್ಲಿಯ ಪ್ರಶ್ನೆಯನ್ನು ಮುಂದೆ ತಂದಿರುವುದು. ಪ್ರತಿದೇಶದ ರಾಜ್ಯಾಂಗರಚನೆಯನ್ನು ಆಯಾ ದೇಶೀಯರೇ ಮಾಡುವುದು ನ್ಯಾಯವಾದುದು ಮತ್ತು ಅದವರ ಹಕ್ಕು. ಕೆನಡಾ ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮತ್ತು ಆಯರ್ಲೆಂಡ್‌ಗಳೇ ಮೊದಲಾದ ಬ್ರಿಟನಿನ ಅಧೀನ ರಾಜ್ಯಗಳ ರಾಜಕೀಯ ಘಟನೆಗಳನ್ನು ಮೊದಲಾಗಿ ಆಯಾರಾಜ್ಯಗಳ ಜನರೇ ತಯಾರಿಸಿ ಆ ಮೇಲೆ ಅವು ಬ್ರಿಟಿಷ್ ಪಾರ್ಲಿಮೆಂಟಿನ ಮುಂದೆ ತರಲ್ಪಟ್ಟದ್ದು. ಇದೇ ರೀತಿ ಹಿಂದೀಯರಿಗೂ ತಮ್ಮ ರಾಜಕೀಯ ಘಟನೆಯನ್ನ ತಯಾರಿಸುವ ಹಕ್ಕಿರಬೇಕು, ಅದಕ್ಕಾಗಿ ಕನ್‌ಸ್ಟಿಟ್ಯೂವೆಂಟ್ ಎಸೆಂಬ್ಲಿಯ ಹೊರತು ಬೇರೆ ದಾರಿಯೇ ಇಲ್ಲ. ಇದು ಹೊರತು ಮುಸ್ಲಿಮ್ ಲೀಗು ಮೊದಲಾದ ಎಲ್ಲಾ ಜಾತಿಯ ಹಾಗೂ ಅಲ್ಪಸಂಖ್ಯಾಕ ಸಂಘಗಳನ್ನು ತೃಪ್ತಿಪಡಿಸುವುದಕ್ಕೂ ಬೇರೆ ಉಪಾಯವಿಲ್ಲ. ಆದುದರಿಂದ ಮಹಾತ್ಮ ಗಾಂಧಿಯವರು ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಪ್ರಶ್ನೆಯನ್ನೇ ಪ್ರಬಲವಾಗಿ ಮುಂದೊಡ್ಡಿರುವರು, ನವಂಬರ ತಾ. 30ರಲ್ಲಿ ಬೊಂಬಾಯಿಯಲ್ಲಿ ಭಾಷಣವೀಯುವಾಗ ಶ್ರೀ. ಸಿ. ರಾಜಗೋಪಾಲಾಚಾರ್ಯರು ಹೇಳಿದ ಮಾತುಗಳಿಂದ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಸೂಚನೆಯನ್ನು ಬ್ರಿಟಿಷ್ ಸರಕಾರವು ಆಲೋಚಿಸುತ್ತಿದೆ. ಆ ಪ್ರಶ್ನೆಗದು ಗಮನ ಹರಿಸಿರುತ್ತದೆ. ಅದು ಇಷ್ಟರವರೆಗೆ ನಿರಾಕರಿಸಲ್ಪಟ್ಟಿರುವುದಿಲ್ಲೆಂದು ತಿಳಿದುಬರುತ್ತದೆ. ಪರಿಶೀಲನೆಯ ವಾತಾವರಣದಲ್ಲಿ ಹಿಂದೀಯರು ಸಾಧ್ಯವಾದಷ್ಟು ಸಹಕಾರವನ್ನೀಯಬೇಕೆಂಬೇ ರಾಜಾಜಿಯವರ ಅಭಿಮತ. ಕಾಂಗ್ರೆಸಿನ ಧೋರಣೆಯು ದೇಶಕ್ಕೂ ಲೋಕದ ಜನರಿಗೂ ಸರಿಯಾಗಿ ತಿಳಿಯುವಂತಾಗಬೇಕು. ಕನ್‌ಸ್ಟಿಟ್ಯೂವೆಂಟ್ ಎಸೆಂಬ್ಲಿಯ ಪ್ರಶ್ನೆಯ ಕುರಿತು ಸರಿಯಾದ ಪ್ರಚಾರಕಾರ್ಯ ನಡೆಯಬೇಕು. ವೈಸರಾಯರು ರಾಜಿಯ ಪ್ರಯತ್ನವನ್ನು ಯಥಾರ್ಥವಾಗಿ ನಡೆಸುತ್ತಿರುವವರಿಗೆ ವಿಷಮ ವಾತಾವರಣವನ್ನುಂಟುಮಾಡುವುದು ಯುಕ್ತವಲ್ಲ. ಕಾಂಗ್ರೆಸಿಗೂ ಶುದ್ಧೀಕರಣ ಸಂಘಟನೆ ಮತ್ತು ಸಿದ್ಧತೆಗೆ ಸಮಯಬೇಕೆಂದು ಮಹಾತ್ಮರ ಅಭಿಮತ. ಈಗ ಕಾಂಗ್ರೆಸ್ ಅವರ ನಾಯಕತ್ವದ ಮೇಲೆ ಸಂಪೂರ್ಣ ವಿಶ್ವಾಸ ಸೂಚಿಸಿರುವುದು. ಅವರನ್ನು ಸರ್ವಾಧಿಕಾರಿಯನ್ನಾಗಿ ಕೂಡಾ ಮಾಡಲು ಅದು ಸಿದ್ಧವಿರುವುದು. ಅಂದಮೇಲೆ ಅವರು ಕಾಂಗ್ರೆಸಿಗೆ ಕೊಡುವ ಸಲಹೆಯ ಕುರಿತು ಅಸಹಿಷ್ಣುತೆಯನ್ನು ಸೂಚಿಸುವುದರಲ್ಲಿ ಅರ್ಥವಿಲ್ಲ "ಇಬ್ಬರು ಯಜಮಾನರನ್ನಿಟ್ಟುಕೊಳ್ಳಬೇಡಿರಿ. ಒಂದೋ ನನ್ನನ್ನು ನಿಮ್ಮಪಕ್ಷಕ್ಕೆ ಮತಾಂತರಗೊಳಿಸಿರಿ ಇಲ್ಲವೆ ನನ್ನನ್ನು ತ್ಯಜಿಸಿಬಿಡಿರಿ" ಎಂದು ಮಹಾತ್ಮರೇ ತೀವ್ರಗಾಮಿಯೊಬ್ಬರಿಗೆ ಸ್ಪಷ್ಟವಾಗಿ ಹೇಳಿರುವರು. ಇಂದೀಗ ಮಹಾತ್ಮರು ಕಾಂಗ್ರೆಸಿನ ನಾಯಕತ್ವವನ್ನು ವಹಿಸಲೊಪ್ಪಿರುವುದಾದರೆ ಅದಕ್ಕೆ ಬಹುತೇಕ ಪಂಡಿತ ಜವಾಹರಲಾಲರು ಕಾರಣವೆನ್ನಬಹುದು. ಮಹಾತ್ಮರು ಅಲಹಾಬಾದಿಗೆ ಹೋಗಿದ್ದಾಗ ಪಂಡಿತರು ಸಂಯುಕ್ತಪ್ರಾಂತದ ಕೆಲಸಗಾರರ ಸಭೆಯನ್ನು ಮೂರು ಮೂರು ಸಲ ನೆರೆಸಿ, ಮಹಾತ್ಮರನ್ನು ಆಮಂತ್ರಿಸಿ ಮಾತುಕತೆ ನಡಿಸಿ ತನ್ನ ಪ್ರಾಂತದ ಕಾಂಗ್ರೆಸ್ ಕೆಲಸಗಾರರೆಲ್ಲಾ ಅವರನ್ನು ಅನುಸರಿಸಲು ಸಿದ್ಧರಿರುವರೆಂಬುದನ್ನು ಖಚಿತಗೊಳಿಸಿರುವರು. ಮತ್ತು ಸಂಯುಕ್ತಪ್ರಾಂತೀಯ ರಾಜಕೀಯ ಪರಿಷತ್ತಿನಲ್ಲಿಯೂ ಮಹಾತ್ಮರ ನಾಯಕತ್ವದ ಮೇಲೆ ಸಂಪೂರ್ಣ ವಿಶ್ವಾಸ ಸೂಚಿಸಲ್ಪಟ್ಟಿರುವುದು. ಕಾಂಗ್ರೆಸಿನ ಗೌರವ ಮತ್ತು ಸ್ವಾಭಿಮಾನಕ್ಕೆ ಹಾನಿಯಾಗುವ ಪರಿಸ್ಥಿತಿಯುಂಟಾದಲ್ಲಿ ಗಾಂಧಿಜಿಯವರೇ ಮೊದಲಾಗಿ ಬಂಡಾಯದ ಧ್ವಜವನ್ನೇರಿಸದಿರಲಾರರು. ಆದರೆ ಆ ಬಂಡಾಯದಿಂದ ಎಂತಹ ಭಯಂಕರ ಪರಿಣಾಮವುಂಟಾಗುವುದೆಂದು ಹೇಳಬರುವುದಿಲ್ಲ. ದೇಶವು ಎಂತಹ ತ್ಯಾಗ ಮತ್ತು ಕಷ್ಟಕ್ಕೆ ಸಿದ್ಧವಾಗಬೇಕಾಗುವುದೋ! ಸಾಧ್ಯವಾದ ಮಟ್ಟಿಗೆ ಅದನ್ನು ನಿವಾರಿಸಿ, ಶಾಂತಿಯಿಂದ ಹಿಂದೀಸ್ವಾತಂತ್ರ್ಯವನ್ನು ಸಾಧಿಸಬೇಕೆಂದೇ ಗಾಂಧಿಜಿಯವರ ಮನೋಗತ.

ಅನಿರ್ವಾಹ ಸಂದರ್ಭದಲ್ಲಿ ಕಾಯಿದೆ ಭಂಗ.

ಆದರೆ ಬ್ರಿಟಿಷ್ ಸರಕಾರವು ವೃಥಾ ಕಾಲಯಾಪನೆ ಮಾಡಿ ಹಿಂದೂದೇಶದಲ್ಲಿ ತಮ್ಮಿಚ್ಛಾನುಸಾರ ರಾಜ್ಯಭಾರ ನಡಿಸಿ, ಆ ಕುರಿತು ವಿರೋಧ ತೋರಿಸುವವರನ್ನು ಹಿಡಿದು ಜೈಲಿಗೆ ಹಾಕಿ ದಬ್ಬಾಳಿಕೆ ಆರಂಭಿಸಿದ ಪಕ್ಷದಲ್ಲಿ ಗಾಂಧಿಜಿಯವರು ಸುಮ್ಮನಿರಲಾರರು. ಅಂತಹ ಅನಿರ್ವಾಹ ಪಕ್ಷದಲ್ಲಿ ಕಾಯಿದೆ ಭಂಗ ಚಳವಳ ಹೂಡಬೇಕಾಗುವುದೆಂದು ಅವರೇ ಹರಿಜನ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬರೆದಿರುವರು. ಬ್ರಿಟಿಷ್ ಸರಕಾರವನ್ನು ಸಂಪೂರ್ಣವಾಗಿ ತಪ್ಪಿನಲ್ಲಿ ಹಾಕಿ, ಲೋಕದ ಸಂಪೂರ್ಣ ಸಹಾನುಭೂತಿಯನ್ನು ತನ್ನ ಕಡೆಗೆಳೆದುಕೊಂಡು ದೇಶದಲ್ಲಿ ಕಾಂಗ್ರೆಸಿನ ಕುರಿತಾಗಿರುವ ವಿರೋಧವನ್ನು ಆದಷ್ಟು ಕಡಿಮೆಮಾಡಿ ಕೊನೆಯದಾದ ಹಿಂದೀ ಸ್ವಾತಂತ್ರ್ಯ ಸಮರವನ್ನು ಹೂಡಬೇಕೆಂದೇ ಮಹಾತ್ಮರ ನಿರ್ಧಾರವಿರುವಂತಿದೆ. ಹಿಂದೂದೇಶವು ಸಂಪೂರ್ಣವಾಗಿ ವಿರೋಧಿಸುವ ನಿರಂಕುಶ ಹಾಗೂ ಬಲವೇ ನ್ಯಾಯವೆಂಬ ಲೋಕಕಂಟಕ ಧೋರಣೆ ವಹಿಸಿರುವ ಹಿಟ್ಲರ್ ಶಾಹಿಯನ್ನು ನಿರ್ನಾಮಗೊಳಿಸಿ ಯುರೋಪಿನಲ್ಲಿ ಹಾಗೂ ಇಡೀ ಲೋಕದಲ್ಲಿ ಶಾಶ್ವತವಾದ ಶಾಂತಿ, ಸುರಕ್ಷಿತತೆ ಮತ್ತು ಸುಭಿಕ್ಷೆಯನ್ನುಂಟುಮಾಡುವ ಉದ್ದೇಶದಿಂದ ಬ್ರಿಟನು ಈ ಯುದ್ಧವನ್ನಾರಂಭಿಸಿರುವುದು ನಿಜವಾದರೆ ಅದಕ್ಕೆ ಸಾಧ್ಯವಾದ ಸಹಾಯ ಮಾಡಬೇಕೇ ಹೊರತು ಯಾವ ರೀತಿಯ ತೊಡಕನ್ನಾದರೂ ತಂದೊಡ್ಡಬಾರದು. ಇದನ್ನೇ ಮಹಾತ್ಮರು ಸಂಪೂರ್ಣ ಪರೀಕ್ಷೆಮಾಡಿ ಆಮೇಲೆ ಮುಂದೆ ಕೈಕೊಳ್ಳಬೇಕಾದ ಕಾರ್ಯಕ್ರಮವನ್ನು ನಿರ್ಧರಿಸಲಿದ್ದಾರೆ. ಬ್ರಿಟನಿನ ಸಾಮ್ರಾಜ್ಯಶಾಹಿ ಮನೋವೃತ್ತಿಯು ಬಹಳವಾಗಿ ಮಾರ್ಪಾಟು ಹೊಂದಿರುವುದೆಂಬುದರಲ್ಲಿ ಸಂದೇಹವಿಲ್ಲ. ಮಹಾತ್ಮರಂತಹ ಲೋಕಮಾನ್ಯ ವ್ಯಕ್ತಿಯ. ಹಾಗೂ ಕಾಂಗ್ರೆಸಿನ ನೈತಿಕ ಸಹಾನುಭೂತಿಯನ್ನು ಬ್ರಿಟನು ಈ ಸಂದರ್ಭದಲ್ಲಿ ಕಳಕೊಳ್ಳಲು ಸಿದ್ಧವಿರಲಿಕ್ಕಿಲ್ಲ. ಆದುದರಿಂದಲೇ ಅದು ಪ್ರಸ್ತುತದ ಬಿಕ್ಕಟ್ಟನ್ನು ಯಾವ ರೀತಿಯಲ್ಲಿ ಪರಿಹರಿಸುವುದೆಂದು ಗಾಢ ಆಲೋಚನಾಮಗ್ನವಾಗಿರುವುದು.. ಈ ಸಂದರ್ಭದಲ್ಲಿ ಸತ್ವಪರೀಕ್ಷೆಯ ಸಡ್ಡು ಹೊಡೆದು ಅದನ್ನು ಹೋರಾಟಕ್ಕೆ ಕರೆಯುವುದು ವಿವೇಕವಾಗಲಾರದು. ಅದು ತಾನಾಗಿ ಸಡ್ಡು ಹೊಡೆದ ಪಕ್ಷದಲ್ಲಿ ಅದನ್ನು ಸ್ವೀಕರಿಸಲು ಕಾಂಗ್ರೆಸು ಸಿದ್ಧವಾಗಬೇಕು. ಇದೇ ಮಹಾತ್ಮರ ಧೋರಣೆಯಿರುವುದು.

ಸೋವಿಯೆಟ್…

ಸ್ವೀಡನಿನ …

ರಸ್ಯಾನರಿಗೆ ಹೆಚ್ಚಿನ ನಷ್ಟ

ಬಹಳವಾಗಿ ಹಿಮಬಿದ್ದುದರಿಂದ ಇದೇ ತಾ. 4ರಲ್ಲಿ ಫಿನ್ಲೆಂಡಿನಲ್ಲಿ ಯುದ್ಧವೇನೂ ನಡೆದಿರುವುದಿಲ್ಲ. ಲಡೋಗಾ ಸರೋವರ ಉತ್ತರದಲ್ಲಿ ಮಾತ್ರ ಹೋರಾಟ ನಡೆದು ರಸ್ಯಾನರು ಹೆಚ್ಚಿನ ಪ್ರಾಣಹಾನಿ ಹೊಂದಿರುತ್ತಾರೆ. ಟೆಂಜೋಕಿ ಪಟ್ಟಣದ ಬಳಿ, ತೋಟೆ ಇಡಲ್ಪಟ್ಟಿದ್ದ ಕಾಡೊಂದರಲ್ಲಿ ಸೋವಿಯೆಟ್ ಸೈನಿಕರು ಹೋಗುವಾಗ ದೊಡ್ಡ ಸ್ಫೋಟವಾಗಿ ಬಹಳಮಂದಿ ಕೊಲ್ಲಲ್ಪಟ್ಟಿರುವರು. ಇಷ್ಟರವರೆಗೆ ಹಲವು ಸಹಸ್ರಮಂದಿ ಸೋವಿಯೆಟ್ ಸೈನಿಕರು ಹತರಾಗಿರುವರೆಂದೂ, ಪುನಃ 18 ರಸ್ಯಾನ ಟ್ಯಾಂಕಿಗಳು ನಾಶಗೊಳಿಸಲ್ಪಟ್ಟಿರುವವೆಂದೂ ಹೆಲ್ಸಿಂಕಿಯ ಸುದ್ದಿ. ಫಿನ್ನರ ಪ್ರಬಲವಾದ ವಿರೋಧದಿಂದ ರಸ್ಯಾನರು ಆಶ್ಚರ್ಯಗೊಂಡಿರುತ್ತಾರೆ. ಫಿನ್ನಿಶ್ ಸೈನಿಕರು ಒಳ್ಳೇ ಸಿದ್ಧತೆಯುಳ್ಳವರಿರುತ್ತಾರೆ. ಪ್ರತಿ 11 ಬಂದೂಕಿಗೊಂದು ಮೆಶಿನ್ ತೋಫಿರುತ್ತದೆ. ಅವರೊಡನೆ ಸ್ವೀಡಿಶ್ ಸ್ಟೀಮರೊಂದರ ಮೇಲೆ ಸೋವಿಯೆಟ್ ವಿಮಾನಗಳು ಮಿಶನ್ ತೋಪು ಮೂಲಕ ಗುಂಡೆಸದುವೆಂದು ತಿಳಿದುಬಂದಿದೆ. ಫಿನ್ನರು ತಾವು ಕಳಕೊಂಡ ಸ್ಥಳಗಳನ್ನು ಪುನಃ ಗೆದ್ದು ತಮ್ಮ ಸ್ಥಾನಗಳನ್ನು ಭದ್ರಪಡಿಸುತ್ತಿದ್ದಾರೆ. ಇಮಾತ್ರ ಎಂಬಲ್ಲಿಯ ವಿದ್ಯುಚ್ಛಕ್ತಿ ಉತ್ಪಾದಕ ಯಂತ್ರಾಲಯದ ಮೇಲೆ ಬಾಂಬೆಸೆಯಲೆತ್ನಿಸಿದ 12 ವಿಮಾನಗಳನ್ನೂ ವಿಮಾನಭೇದಕ ತುಪಾಕಿಗಳ ಮೂಲಕ ಕೆಳಗುರುಳಿಸಲಾಗಿದೆಯೆಂದು ವಾರ್ತೆ.

ಪ್ರಥಮದ ಆಘಾತದಿಂದ ಸಾವರಿಸಿಕೊಂಡು ಫಿನ್ನರೀಗ ಹೆಚ್ಚೆಚ್ಚು ಪ್ರಬಲವಾಗಿ ವಿರೋಧಿಸುತ್ತಿದ್ದಾರೆಂದು ರಸ್ಯಾನರೇ ಒಪ್ಪಿರುತ್ತಾರೆ. ಫಿನ್ನಿಶ್ ಸೇನೆಯು, ತೋಟೆ, ತುಪಾಕಿಗಳನ್ನು ಅಡಗಿಸಿಟ್ಟು

ಜನ…

ಹಿಂದೆ ಸಾ… ಯುವನ್ನು… ನರ ಆಲೋ… ವು ಇದನ್ನು…

ಪೆಟ್ಸಾಮೋ… ಅಧೀನವಾಗಿ… ಬಂದಿದೆ. ಸೋ… ಫಿನ್ಲೆಂಡನ್ನು… ವಿಯೆಟ್ ಸೈ… ತಿ ಸುತ್ತಿ… ರೆವನೀಮಿ… ರಸ್ಯಾನರನ್ನು… ಲಿರುವರೆಂದು… 6 ಯುದ್ಧ… ಕಳುಹಿಸಿದೆ…

ಫಿನ್ಲೆಂಡಿ…

ಫಿನ್ಲೆಂಡಿನ… ಕ್ಕೆ ವಿಘಾತುಕ… ರಸ್ಯದೊಡನೆ… ಬೇಕೆಂದು… ಮಂಡಲವು… ಸ್ವೀಡನಿನ… ರಸ್ಯಕ್ಕೆ ತನ್ನ… ಆದರೆ ಈ… ಕೊಟ್ಟಿಲ್ಲ ಫಿ… ಯುದ್ಧ ತಾ… ಳಿಸಿಕೊಂಡು… ಪಡಿಸಲು ತಾ… ಪ್ರಯತ್ನವನ್ನೆ… ಪ್ರಧಾನ ಮಂ… ನರಿಂದ… ಸಹಾಯ. ಕೊ… ಸಹಾಯ… ದಬೇಕೆಂದು… ಅದಕ್ಕೆ. ವಿ… ಫಿನ್ಲೆಂಡ್ ತ… ಗಾಗ… ಎಮ್. … ಪ್ರಶ್ನೆಯ… ಲೀಗ್… ಕರೆಯ… ಮೇರೆಗೆ ತ… ಬ್ಲಿ ಸಭೆ… ದಿನ ಪ್ರಶ್ನೆಯ… ಬಿಟ್ಟುಬಿಡು…

ಜಿನೆ…

ದಶಂಬರ… ಷ್ ಯುದ್ಧ… ರ್ಮನ್… ಲೆಂಡಿನ… ಯುದ್ಧ ಪ…

...ನೆಯನ್ನು ಫಿನ್ನರು ತಡೆಗಟ್ಟಿರುವರು

...ಕ ಫಿನ್ನಿಶ್ ಸರಕಾರದ ರಾಜಿಯ ಯತ್ನ.

...ನೌಕಾನಿಲಯದ ಮೇಲೆ ಬ್ರಿಟಿಷ್ ವಿಮಾನಧಾಳಿ

...ು ವಿಷವಾ
...ು ರಸ್ಯಾ
... ಸರಕಾರ
...ು.
...ನ್ನು ಫಿನ್ನರ
...ು ತಿಳಿದು
...ಡನಿನಿಂದ
...ದಳ ಸೋ
...ಗಿ ಪ್ರಯ
... ಮತ್ತು
...ನೆ ಫಿನ್ನರು
... ವಿರೋಧಿಸ
... ಇಟೆಲಿಯು
... ಫಿನ್ಲೆಂಡಿಗೆ

... ಯತ್ನ

...ಮತ್ತು ಹಿತ
...ಡಿಕೊಂಡು
...ಯತ್ನ ನಡೆಸ
... ಮಂತ್ರಿ
...ು, ಅದು
... ಮೂಲಕ
...ಳಿಸಿರುವದು.
...ಕದಕ್ಕೃತ್ರರ
...ತ್ರ್ಯ ಮತ್ತು
...ರಣೆಯನ್ನು
...ನ್ನು ತೃಪ್ತಿ
... ಸಾಧ್ಯವಾದ
...ರುವವೆಂದು
... ೧ಟೆಯ
... ಯಾರೂ
... ಕೊಟ್ಟಿಲ್ಲ
... ಹೋರಾ
...ರೂ ಇಲ್ಲ
...ಟದಿಂದ
...ದ ರಕ್ಷಣೆ
...ಯಿತೆಂದೇ
... ತಮ್ಮ
...ು ಕೂಡಲೆ
...ಟ್ಟಿ ಸಭೆ
...ಕೊಂಡ
...ಗ್ ಎಸೆಂ
...ಲ್ಲಿ ಫಿನ್ಲೆ
... ಲೀಗನ್ನು
...ಟಾಗಿದೆ.

... ಮೇಲೆ

...ದ್ದ ಬ್ರಿಟಿ
...ಂದು, ಜ
... ಹೆಲಿಗೊ
... ಅಲ್ಲಿದ್ದ
...ಂಬೆಸೆದು

ವು. ಬ್ರಿಟಿಷ್ ವಿಮಾನಗಳ ವಿರೋಧಿಸಿದ ಜರ್ಮನ್ ವಿಮಾನವೊಂದನ್ನು ಕೆಳಗುರುಳಿಸಲಾಯಿತು. ಒಂದು ಜರ್ಮನ್ ಹಡಗದ ಮೇಲೆ ನೆಟ್ಟಗೆ ಬೋಂಬು ಬಿದ್ದಿರುತ್ತದೆ. ವಿಮಾನಭೇದಕ ತೋಪುಗಳ ಗುಂಡೆಸೆತದಿಂದ ಬ್ರಿಟಿಷ್ ವಿಮಾನಗಳಿಗೇನೂ ಹಾನಿಯಾಗಲಿಲ್ಲ. ಈ ವಿಮಾನಗಳು ಉಪಯೋಗಕರ ಫೋಟೋ ತೆಗೆದು ತಂದಿರುವವು. ಉತ್ತರ ಸಮುದ್ರದಲ್ಲಿ ಪಹರೆನಡೆಸುತ್ತಿದ್ದ ಬ್ರಿಟಿಷ್ ಜಲಯಾನಗಳು ಜರ್ಮನ್ ಸಬ್ ಮೆರೀನೊಂದರ ಮೇಲೆ ಅಕಸ್ಮಾತ್ತಾಗಿ ಬೋಂಬೆಸೆದು ಮುಳುಗಿಸಿರುವವು.

30 ಜರ್ಮನ್ ಸಬ್‌ಮೆರೀನುಗಳು ಮುಳುಗಿಸಲ್ಪಟ್ಟಿವೆ

ತನ್ನೊಡನಿದ್ದ ಸಬ್‌ಮೆರೀನುಗಳಲ್ಲಿ ಅರೆವಾಸಿಯಷ್ಟನ್ನು ಜರ್ಮನಿಯು ಇಷ್ಟರಲ್ಲೇ ಕಳಕೊಂಡಿರುವುದೆಂದು ಫ್ರೆಂಚ್ ನೌಕಾಖಾತೆಯ ಅಭಿಮತ. ಈ ವರೆಗೆ 30 ಯಾ 35 ಜರ್ಮನ್ ಸಬ್‌ಮೆರೀನ್‌ಗಳು ಮುಳುಗಿಸಲ್ಪಟ್ಟಿರುತ್ತವೆಂದು ನಂಬಲಾಗಿದೆ.

ಹಂಗೇರಿಯ ಬಳಿ ಜರ್ಮನ್ ಸೇನೆ

ಹಂಗೇರಿ ದೇಶದ ಎಲ್ಲೆಯಲ್ಲಿ ಜರ್ಮನಿಯು ಹೆಚ್ಚಿನ ಸೇನೆಯನ್ನು ಸಂಗ್ರಹಿಸುತ್ತಿರುವುದೆಂದು ರುಮೇನಿಯದಿಂದ ಸುದ್ದಿ ಬಂದಿದೆ. ಹಂಗೇರಿಯನ್ ನಾಝಿ ಪಕ್ಷದ ಪ್ರಮುಖರಲ್ಲೊಬ್ಬರಾದ ಎಮ್. ಜಿಬೋರ್ ಕೊಜ್ಹೊವ್‌ಸ್ಕಿ ಎಂಬವರು ಕೈದುಮಾಡಲ್ಪಟ್ಟಿದ್ದಾರೆ.

ಜರ್ಮನ್ ಅಧಿಕಾರಿಗಳ ಮೇಲೆ ವಂಚನೆಯ ತಮಾಷೆ

ಜರ್ಮನ್ ಸೈನ್ಯಾಧಿಕಾರಿಗಳು ಕೆಲವರು ಜೆಕೋಯದ ಪ್ರೇಗ್ ಪಟ್ಟಣದ ಬಳಿಯಲ್ಲಿರುವ ಶಸ್ತ್ರತಯಾರಿ ಕಾರ್ಖಾನೆಗೆ ಹೋಗಿ ಬಂದೂಕುಗಳನ್ನು ತೆಗೆದುಕೊಳ್ಳುವ ನಿಶ್ಚಿತ ದಿನದಲ್ಲೇ ಅವರು ಹೋಗುವ ಸ್ವಲ್ಪ ಸಮಯದ ಮೊದಲು, ಜರ್ಮನ್ ಪೋಷಾಕು ಹಾಕಿಕೊಂಡ ಯಾರೋ ಕೆಲವರು ಕಾರ್ಖಾನೆಗೆ ಹೋಗಿ, ಕ್ರಮವಾದ ಅಧಿಕಾರಪತ್ರ ತೋರಿಸಿ, ಬಂದೂಕುಗಳನ್ನು ತೆಗೆದುಕೊಂಡು ಲೋರಿಗಳಲ್ಲಿ ಹಾಕಿ ಒಯ್ದು ಬಿಟ್ಟಿರುವರು. ಇದಾಗಿ ಅರ್ಧಘಂಟೆಯ ಮೇಲೆ ನಿಜವಾದ ಜರ್ಮನ್ ಅಧಿಕಾರಿಗಳು ಬಂದು ಈ ವಂಚನೆಯ ಸಂಗತಿ ತಿಳಿದು ವಿಸ್ಮಯಗೊಂಡಿರುವರು. ಈ ಕುರಿತು ಜರ್ಮನ್ ಗುಪ್ತಪೋಲೀಸರು ಶೋಧನೆ ನಡಿಸುತ್ತಿರುವರು. ಜೆಕ್ಕರಿಗೆ ಇದು ಬಹಳ ವಿನೋದಕರ ಪ್ರಸಂಗವಾಗಿದೆ.

ಮುಳುಗಿಸಲ್ಪಟ್ಟ ಹಡಗುಗಳ ಸಂಖ್ಯೆ

ಈ ಸಲದ ಯುದ್ಧದಲ್ಲಿ ಸಪ್ಟಂಬರ ಅಕ್ಟೋಬರ ಮತ್ತು ನವಂಬರ ಈ 3 ತಿಂಗಳುಗಳಲ್ಲಿ ಒಟ್ಟಿಗೆ 138 ಹಡಗುಗಳು ಮುಳುಗಿಸಲ್ಪಟ್ಟಿವೆ. ಇವುಗಳಲ್ಲಿ 82 ಬ್ರಿಟಿಷ್ ಹಡಗಗಳು. 1914ರಲ್ಲಿ ಈ ಮೂರು ತಿಂಗಳಲ್ಲಿ ಒಟ್ಟು 63 ಹಡಗಗಳು ಮುಳುಗಿಸಲ್ಪಟ್ಟಿದ್ದುವು. ಇವುಗಳಲ್ಲಿ ಬ್ರಿಟಿಷ್ ಹಡಗಗಳು 45. 1917ರಲ್ಲಿ ಮೇಲಿನ ಮೂರು ತಿಂಗಳುಗಳಲ್ಲಿ ಒಟ್ಟು ಮುಳುಗಿಸಲ್ಪಟ್ಟ 457 ಹಡಗುಗಳಲ್ಲಿ ಬ್ರಿಟಿಷ್ ಹಡಗಗಳು 228.

ಸಾದುಲ್ಲ ಮಂತ್ರಿಮಂಡಲ

ಅಸ್ಸಾಮಿನ ಸರ್ ಸಾದುಲ್ಲ ಮಂತ್ರಿಮಂಡಲವು ಅಲ್ಪ ಪಕ್ಷೀಯರದ್ದೆಂಬುದು ಅಪಪ್ರಚಾರ. ಅದಕ್ಕೆ ಇಷ್ಟರ ವರೇಗೆ 57 ಮಂದಿ ಎಸೆಂಬ್ಲಿ ಮೆಂಬರರ ಬೆಂಬಲ ದೊರೆತಿದೆ. ಇದರಲ್ಲಿ ಮುಸಲ್ಮಾನರು 31, ಯುರೋಪಿಯಾನರು 9, ಲೇಬರ್ 4, ಹರಿಜನ 3, ಕ್ರೈಸ್ತರು 3, ಹಿಂದುಗಳು 4 ಮತ್ತು ಮೂಲನಿವಾಸಿಗಳು 4 ಮಂದಿ ಎಂದು, ಸಾದುಲ್ಲ ಪಕ್ಷದ ಪ್ರಮುಖ ಸದಸ್ಯರೊಬ್ಬರಾದ ಮಿ.ಅಬ್ದುಲ್ ರಹಿಮಾನ್‌ರೆಂಬವರು ಪ್ರಕಟಿಸಿರುತ್ತಾರೆ. ಆದರೆ ಸರ್. ಸಾದುಲ್ಲರು ಅಧಿಕಾರಿಕವಾಗಿ ಏನನ್ನೂ ಪ್ರಕಟಿಸಿರುವುದಿಲ್ಲ. ಎಸೆಂಬ್ಲಿ ಸಭೆಯು ಯಾವಾಗ ನಡೆಸಲ್ಪಡುವುದೆಂದು ಇನ್ನೂ ತಿಳಿದಿಲ್ಲ. ಮುಸ್ಲಿಮ್ ಲೀಗಿನ ಅಧ್ಯಕ್ಷರಾದ ಮಿ. ಜಿನ್ನರು ಸರ್. ಸಾದುಲ್ಲರನ್ನು ಅಭಿನಂದಿಸಿದುದು ತೋರಿಬರುವುದಿಲ್ಲ. ಒಳಗಿಂದೊಳಗೆ ಏನೋ ಹೊಗೆಯಾಡುತ್ತಿರುವಂತೆ ತೋರುತ್ತದೆ.

ಜರ್ಮನಿಯ ಯುದ್ಧೋದ್ದೇಶ

ಹಿಟ್ಲರ್ ಶಾಹಿಯನ್ನು ನಿರ್ನಾಮಗೊಳಿಸುವುದೇ ತಾವು ಯುದ್ಧಹೂಡಿದುದರ ಪ್ರಥಮೋದ್ದೇಶವೆಂದು ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಉದ್ಘೋಷಿಸಿರುವವಷ್ಟೆ. ಇದಕ್ಕೆ ಪ್ರತಿಯಾಗಿ, ಬ್ರಿಟಿಷರ ಡಿಕ್ಟೇಟರಶಾಹಿಯಿಂದ ಯುರೋಪನ್ನು ವಿಮುಕ್ತಗೊಳಿಸುವುದೇ ತನ್ನ ಉದ್ದೇಶನೆಂದು ಜರ್ಮನಿಯು ಘೋಷಿಸಿರುವುದು. ನಾಝಿ ಸರಕಾರವು ಈಗ ತೀವ್ರವಾಗಿ ದ್ವೇಷಿಸುತ್ತಿರುವುದು ಇಂಗ್ಲೆಂಡನ್ನು. ಅದೇಕೋ ಫ್ರಾನ್ಸನ್ನು ಅದು ಅಷ್ಟೊಂದು ದ್ವೇಷಿಸದೆ ಸಹಾನುಭೂತಿ ತೋರಿಸುವಂತಿದೆ. ಜರ್ಮನಿಯ ನೈರುತ್ಯ ಭಾಗದಲ್ಲಿ ಹೆಚ್ಚಿನ ಯುದ್ಧ ವಿಮಾನಗಳು ಸಂಗ್ರಹಿಸಲ್ಪಟ್ಟಿವೆ. ಬ್ರಿಟಿಷ್ ಸಮುದ್ರ ರೇವುಗಳ ಮೇಲೆ ಪ್ರಚಂಡ ಧಾಳಿಸುವುದೇ ಇದರ ಉದ್ದೇಶವಿರುವುದೆಂದು ನಂಬಲಾಗಿದೆ.

ಭರತಪುರ ಸಂಸ್ಥಾನ ಮತ್ತು ರಾಷ್ಟ್ರೀಯ ಧ್ವಜ

ಮಥುರದಲ್ಲಿ ಜರಗಿದ ಸಂಯುಕ್ತ ಪ್ರಾಂತೀಯ ರಾಜಕೀಯ ಪರಿಷತ್ತಿಗೆ ಹೋಗಿದ್ದ ಬಾಬು ಪುರುಷೋತ್ತಮದಾಸ್ ಟಂಡನರು ಇನ್ನು ಕೆಲವು ಕಾಂಗ್ರೆಸ್ ಕೆಲಸಗಾರರೊಂದಿಗೆ, ಭರತಪುರ ಸಂಸ್ಥಾನದಲ್ಲಿರುವ ಪುಣ್ಯಕ್ಷೇತ್ರವಾದ ಕಾಮವನವನ್ನು ನೋಡಲು ಬಸ್ಸಿನಲ್ಲಿ ಹೋದರು. ಈ ಬಸ್ಸಿನ ಮೇಲೆ ರಾಷ್ಟ್ರೀಯ ಧ್ವಜವು ಹಾರಾಡುತ್ತಿತ್ತು. ಬಸ್ಸು ಭರತಪುರ ಸಂಸ್ಥಾನದ ಗಡಿಗೆ ಮುಟ್ಟಿದೊಡನೆಯೇ, ಅಲ್ಲಿದ್ದ ಅಧಿಕಾರಿಯು, ಕಾಂಗ್ರೆಸ್ ಧ್ವಜವನ್ನೇರಿಸಿರುವ ಯಾವ ಬಸ್ಸನ್ನಾದರೂ ಸಂಸ್ಥಾನದೊಳಕ್ಕೆ ಪ್ರವೇಶಿಸಬಿಡಲಾಗುವುದಿಲ್ಲೆಂದು ತಡೆದರು. ಮತ್ತು ಭರತಪುರ ಸಂಸ್ಥಾನದಲ್ಲಿ ಕಾಂಗ್ರೆಸು ಬೇಕಾಯಿದೇಶೀರ ಸಂಸ್ಥೆಯಾಗಿ ನಿಷೇಧಿಸಲ್ಪಟ್ಟಿರುವುದೆಂದು ತಿಳಿಸಿದರು. ಬಾಬು ಪುರುಷೋತ್ತಮದಾಸ್ ರಾಷ್ಟ್ರೀಯ ಧ್ವಜವನ್ನು ಬಸ್ಸಿನಿಂದ ತೆಗೆಯಲೊಪ್ಪದೆ ಕಾಮವನವನ್ನು ನೋಡದೇನೇ ಹಿಂತಿರುಗುವ ನಿರ್ಧಾರಮಾಡಿದರು.

ಪೋಲಂಡಿನಲ್ಲಿ ಜರ್ಮನಿಯ ಭೀಕರ ರಾಜ್ಯಭಾರ

ಜರ್ಮನಿಯು ಪೋಲಂಡಿನಲ್ಲಿ ನಡಿಸುತ್ತಿರುವ ಅತ್ಯಾಚಾರ ಮತ್ತು ಅದರ ಭೀಕರ ರಾಜ್ಯಭಾರದ ಸಂಗತಿಗಳನ್ನೆಲ್ಲಾ ವಿವರಿಸಿ ಮನವಿಯೊಂದನ್ನು ಲಂಡನಿನಲ್ಲಿರುವ ಪೋಲಿಶ್ ರಾಯಭಾರಿಯು ಇಂಗ್ಲೆಂಡಿನ ವಿದೇಶ ಮಂತ್ರಿ ಲೋರ್ಡ್ ಹೆಲಿಫೇಕ್ಸರಿಗೊಪ್ಪಿಸಿರುತ್ತಾರೆ. ಪೋಲರ ಆಸ್ತಿ ಮನೆಮಾರು ಮತ್ತು ಸೊತ್ತುಗಳನ್ನು ಲೂಟಾಯಿಸುವುದು ಸರ್ವಸಾಮಾನ್ಯರ ಗತಿಯಾಗಿದೆ. ಪೋಲರನ್ನು ಅವರು ತಲತಲಾಂತರಗಳಿಂದ ವಾಸಿಸಿಕೊಂಡಿದ್ದ ಪ್ರದೇಶದಿಂದ ಜಾನುವಾರುಗಳಂತೆ ಹೊರಗಟ್ಟಲಾಗುತ್ತದೆ. ಮಾನವ ಜೀವನವು ಉಗ್ರ ಪಾಶವಿಕ ಕೊಲೆಪಾತಕಿಗಳ ವಿನೋದದಾಟವಾಗಿ ಪರಿಣಮಿಸಿದೆ. ಜರ್ಮನಿಯ ಈ ಭೀಕರ ಹಿಂಸಾಕಾಂಡವು ಇತಿಹಾಸದಲ್ಲೇ ಅಪೂರ್ವವಾಗಿದೆ. ಅಸಹಾಯಕ ಪೈಶಾಚಿಕ ಕೊಲೆಯಲ್ಲದು ಬರ್ಬರತೆಯು ಪರಮಾವಧಿಗೆ ಮುಟ್ಟಿದೆಯೆಂದು ಈ ಮನವಿಯಲ್ಲಿ ಹೇಳಲಾಗಿದೆ. ಮೊದಲಿನ ಸರಕಾರದ ಹಲವು ಮಂದಿ ಅಧಿಕಾರಿಗಳನ್ನು ಜರ್ಮನರು ತಲೆ ಕಡಿದು ಹಾಕಿರುವರು.

ಗಾಂಧಿಜಿ ಎಂಡ್ರೂಸರ ಭೇಟಿ

ಇದೇ ತಾ. 1ರಲ್ಲು ದೀನಬಂಧು ಎಂಡ್ರೂಸರು ವಾರ್ಧಕ್ಕೆ ಹೋಗಿ ಗಾಂಧಿಯವರೊಡನೆ ಒಂದು ಘಂಟೆಯ ವರೆಗೆ ಮಾತಾಡಿದರು. ದಕ್ಷಿಣದ ಆಫ್ರಿಕದ ಪ್ರಶ್ನೆಯೇ ಈ ಮಾತುಕತೆಯ ವಿಷಯವೆಂದು ನಂಬಲಾಗಿದೆ. ದೀನಬಂಧುಗಳು ಸ್ವಲ್ಪ ದಿನ ವಾರ್ಧದಲ್ಲಿ ನಿಲ್ಲುವರು. ಶ್ರೀಗಳಾದ ಮಹದೇವ ದೇಸಾಯಿ, ಸರ್ದಾರ್ ವಲ್ಲಭಾಯಿ ಪಟೇಲ್ ಮತ್ತು ರಾಜಗೋಪಾಲಾಚಾರ್ಯರು ಇದೇ ತಾ. 3ರಲ್ಲು ವಾರ್ಧಕ್ಕೆ ಹೋಗಿ ಮಹಾತ್ಮರನ್ನು ಕಾಣಲಿರುವರು.

ಬಿಹಾರಿನ ಎಡ್ವಕೇಟ್ ಜನರಲರ ರಾಜಿನಾಮೆ

ಕಾಂಗ್ರೆಸ್ ಮಂತ್ರಿಗಳಿಂದ ನೇಮಿಸಲ್ಪಟ್ಟಿದ್ದ ಬಿಹಾರಿನ ಎಡ್ವಕೇಟ್ ಜನರಲರಾದ ಶ್ರೀ. ಬಲದೇವ ಸಾಹೆಯವರು ತನ್ನ ಹುದ್ದೆಗೆ ರಾಜಿನಾಮೆ ಕೊಟ್ಟಿರುವರು, ಗವರ್ನರರು ಆಡಳಿತ ನಡಿಸುವಾಗ ಅವರಿಗನುಕೂಲವಾಗಿರುವವರನ್ನು ಎಡ್ವಕೇಟ್ ಜನರಲರಾಗಿ ನೇಮಿಸುವುದುಚಿತವೆಂದು ಶ್ರೀ. ಸಾಹೆಯವರು ಅಭಿಪ್ರಾಯಪಟ್ಟು ತಾನಾಗಿ ರಾಜಿನಾಮೆ ಕೊಟ್ಟದಾಗಿದೆ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಅವರನ್ನು ರಾಜಿನಾಮೆ ಕೊಡಬೇಕೆಂದೇನೂ ಕೇಳಲಿಲ್ಲ.

ಸರ್. ಸ್ಟಾಫೋರ್ಡ್ ಕ್ರಿಪ್ಸರು

ನವಂಬರ ತಾ. 30ರಲ್ಲು ವಿಮಾನ ಮೂಲಕ ಹಿಂದೂದೇಶಕ್ಕೆ ಹೊರಟಿರುವರು. ಅವರು ಪಂಡಿತ ಜವಾಹರಲಾಲರ ಅತಿಥಿಯಾಗಿ ಮಹಾತ್ಮ ಗಾಂಧಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರೊಡನೆ ಮಾತಾಡಲಿರುವರು. ಸರ್. ಸ್ಟಾಫೋರ್ಡ್ ಕ್ರಿಪ್ಸರು ಪ್ರಖ್ಯಾತ ವಕೀಲರು, ಅತೀವ ತೀವ್ರಗಾಮಿ ಪಾರ್ಲಿಮೆಂಟ್ ಮೆಂಬರರು, ಹಿಂದೀ ಸ್ವಾತಂತ್ರ್ಯದ ಕುರಿತು ಸಂಪೂರ್ಣ ಸಹಾನುಭೂತಿಯುಳ್ಳವರು ಮತ್ತು ಅದಕ್ಕಾಗಿ ಕೆಲಸ ಮಾಡುವವರು. ಇವರು ಬರುವ ಉದ್ದೇಶವೇನೆಂದು ತಿಳಿಸಿಲ್ಲ.

NAVAYUGA ENTERPRISE LTD.
UDIPI.
DIRECTORS:

1. **Sri K. Jagannatha Ballal**, B.A.LL.B.
Director, Vijaya Bank Ltd; Director, Karnataka Stores Ltd, & Vakil, Udipi. (*Chairman*)
2. **Sri M. S. Pejathaya**,
Director, Karnataka Stores Ltd. & Agent, Palimar Mutt Udipi.
3. **Sri Balkattabeedu Krishnayya Hegde**,
Dt. Bd. Member, S. Kanara Director, The Thulunad Bank of Supply Agency Ltd. Udipi; & Landlord Athradi, Parkal Post.
4. **Sri K. Honnayya Shetty**,
Director, General Supplies Ltd. & Merchant, Udipi.
(*Managing Director*)

ದಕ್ಷಿಣ ಕನ್ನಡ ಜಿಲ್ಲೆ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 3-12-39

ಹಿಂದುಳಿದವರ ಸಭೆ— ಹಿಂದುಳಿದ ವರ್ಗಗಳವರ ಸಭೆಯೊಂದು ಕಳೆದ ತಾ. 26ನೇ ಸಾಯಂಕಾಲ ಬೋಳೂರಲ್ಲಿ ಸೇರಿತು. ಸಂಘದ ಅಧ್ಯಕ್ಷರಾದ ರಾ. ಬ. ಎನ್. ಎಸ್. ಸುವರ್ಣರು ಅಧ್ಯಕ್ಷತೆ ವಹಿಸಿದ್ದರು. ಬೋಳೂರು ಗ್ರಾಮಕ್ಕೆ ಒಂದು ಸಂಘವನ್ನು ಸ್ಥಾಪಿಸಲಾಯಿತು. ಮತ್ತು ಕಾರ್ಯಕಾರಿ ಸಮಿತಿಗೆ ಸದಸ್ಯರನ್ನು ನೇಮಿಸಲಾಯಿತು.

ಠಕ್ಕರ್ ಬಾಪಾರವರ ೭೦ನೇ ವರ್ಧಂತಿ— ಕಳೆದ ತಾ. 29ನೇ ಸಾಯಂಕಾಲ ಮಂಗಳೂರು ಡಿ. ಸಿ. ಮಿಶನ್ ಶಾಲೆಯಲ್ಲಿ ಠಕ್ಕರ್ ಬಾಪಾರವರ ೭೦ನೇ ವರ್ಧಂತ್ಯುತ್ಸವವನ್ನು ಆಚರಿಸುವ ಸಲುವಾಗಿ ಒಂದು ಮಹಾಸಭೆಯು ಡಾ! ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀಗಳಾದ ವಾಮನ್ ರ್ಕೃ ಭಟ್, ಯಂ. ಎಸ್. ಮಾಧವರಾವ್ ಮತ್ತು ಕೆ. ಕೃಷ್ಣರಾವ್ ಇವರುಗಳು ಠಕ್ಕರ್ ಬಾಪಾರವರ ಗುಣಕಥನ ಮಾಡಿದ್ದಲ್ಲದೆ ಅವರಿಗೆ ಭಗವಂತನು ಚಿರಾಯುರಾರೋಗ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾದ ತರುವಾಯ ವೇ. ಭ. ನಾರಾಯಣ ಶೆಣ್ಣೈಯವರು ಧನ್ಯವಾದಗಳನ್ನರ್ಪಿಸಿದ ಮೇಲೆ ಸಭಾಂತ್ಯವಾಯಿತು.

ಠಕ್ಕರ್ ಬಾಪಾರವರಿಗೆ ಥೈಲಿ— ಜಿಲ್ಲಾ ಹರಿಜನ ಸೇವಕ ಸಂಘದ ವತಿಯಿಂದ ಠಕ್ಕರ್ ಬಾಪಾರವರ ನಿಧಿಗೆ ರೂ. 150|- ಜಮಾಯಿಸಿ ಕಳುಹಿಸಲಾಗಿಯೂ, ಕಾರ್ಕಳದಿಂದ ರೂ. 50| ನ್ನು ಕಳುಹಿಸಲಾದಾಗಿಯೂ ತಿಳಿದುಬರುತ್ತದೆ.

ಕದಿರೆ ದೀಪೋತ್ಸವ— ಬರುವ ತಾ. 10ನೇ ಭಾನುವಾರ ಕದಿರೆ ಶ್ರೀ. ಮಂಜುನಾಥ ಕ್ಷೇತ್ರದಲ್ಲಿ ದೀಪೋತ್ಸವವು ನಡೆಯುವದು. ತಾ. 8ರಲ್ಲಿ ಮಣ್ಣಗುಡ್ಡೆ ದೀಪೋತ್ಸವವು ನಡೆಯುವದು.

ಬೀಡಿ ಕೆಲಸಗಾರರ ಮುಷ್ಕರ ಮತ್ತು ಅನ್ನ ಸತ್ಯಾಗ್ರಹ— ಕಳೆದ ತಾ. 30ನೇ ದಿನ ಬೆಳಗ್ಗೆ ಸ್ಥಳೀಯ ಪಿ. ವಿ. ಎಸ್. ಬೀಡಿ ಕಾರ್ಖಾನೆಯ ಮುಂದೆ ಬೀಡಿ ಕೆಲಸಗಾರರು ಮುಷ್ಕರ, ಅನ್ನಸತ್ಯಾಗ್ರಹವನ್ನು ಹೂಡಿದರು. ಪಿ. ವಿ. ಎಸ್. ಬೀಡಿ ಕಾರ್ಖಾನೆಯಿಂದ ಇಬ್ಬರು ಕೆಲಸಗಾರರನ್ನು ಕೆಲಸದಿಂದ ನಿಷ್ಕಾರಣವಾಗಿ ತೆಗೆದುಹಾಕಿದರೆಂಬ ಕಾರಣದಿಂದ ಮೇಲಿನ ಮುಷ್ಕರ. ಬೆಳಗ್ಗೆ ಸತ್ಯಾಗ್ರಹ ಹೂಡುತ್ತಿದ್ದಾಗ ಒಬ್ಬರ ಮೇಲೊಬ್ಬರಂತೆ ಸುಮಾರು 17ಮಂದಿಯನ್ನು ಪೋಲೀಸರು ಬಂಧಿಸಿದರು. 11-30ಕ್ಕೆ ಮತ್ತೂ ಇಬ್ಬರು ಕಾರ್ಖಾನೆಯ ಬಾಗಿಲ ಮುಂದುಗಡೆ ಕುಳಿತು ಸತ್ಯಾಗ್ರಹ ಮಾಡಿದರು. ಅವರು ಬಂಧಿಸಲ್ಪಡಲಿಲ್ಲ. ರಾತ್ರಿ 7ಘಂಟೆಯವರೆಗೂ ಅವರು ಸತ್ಯಾಗ್ರಹ ನಡೆಸಿದರು. ಇಷ್ಟರಲ್ಲಿ ಜಿ. ಬೋ. ಅಧ್ಯಕ್ಷರಾದ ಮಾನ್ಯ ಡಾ. ಕೆ. ವಿಟ್ಠಲಶೆಟ್ಟಿಯವರ ಮಧ್ಯಸ್ಥಿಕೆಯ ಪ್ರಯತ್ನದಿಂದಾಗಿ ಈ ವಿವಾದವು ರಾಜಿಯಲ್ಲಿ ಇತ್ಯರ್ಥವಾಗುವ ಹಾಗೆ ಪ್ರಯತ್ನಗಳು ನಡೆದಿವೆ. ಇದರ ಪರಿಣಾಮವಾಗಿ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿತು. ಬಂಧಿತರು ಬಿಡಲ್ಪಟ್ಟರು. ಅಂದು ರಾತ್ರಿ ಸತ್ಯಾಗ್ರಹ ಹೂಡಿದವರ ಮೆರವಣಿಗೆ ನಡೆಯಿತು. ರಾಜಿಯ ಶರತ್ತುಗಳು ಏನೆಂದು ಈ ವರೆಗೆ ಗೊತ್ತಾಗಲಿಲ್ಲ. ಈ ಸಾಯಂಕಾಲ ಗೊತ್ತಾಗಬಹುದು.

ತೆರಿಗೆ ತೆರುವವರ ಸಂಘ— ಮಂಗಳೂರು ರೇಟ್‌ಪೇಯರ್ಸ್ ಅಸೋಸಿಯೇಶನಿನ ಸಾಧಾರಣ ಸಭೆಯೊಂದು ಈ ದಿನ ಸಾಯಂಕಾಲ ಸಂಘದ ಅಧ್ಯಕ್ಷರಾದ ಮ. ರಾ. ರಾ. ಜೆರೋಂ ಎ. ಸಲ್ಡಾನರ ಅಧ್ಯಕ್ಷತೆಯಲ್ಲಿ ನಡೆದು ಈ ಕೆಳಗಿನ ಮಹನೀಯರನ್ನು ಸಂಘದ ಆಡಳಿತ ಕಮಿಟಿ ಮೆಂಬರರನ್ನಾಗಿ ಚುನಾಯಿಸಲಾಯಿತು. ಅಧ್ಯಕ್ಷರು ಮ. ರಾ. ರಾ. ಗಣಾದ ರಾವ್‌ಸಾಹೇಬ್ ಎಲ್. ಪಿಂಟೋ, ಕೊಡಿಯಾಲ ಬೈಲು ವಾರ್ಡು ಡಾಕ್ಟರ್ ಎ. ಜಿ. ರಾವ್, ಸೆಂಟ್ರಲ್ ವಾರ್ಡು ಬೋಳಸ ಸುವರ್ಣ, ಮಾರ್ಕೆಟ್ ನೋರ್ತ್‌ವಾರ್ಡು ಪಿ. ಸಂಜೀವ ರಾವ್, ಮಾರ್ಕೆಟ್ ಸೌತ್‌ವಾರ್ಡ್ ಯು. ರಾಮರಾವ್, ಕೋರ್ಟುವಾರ್ಡ್ ಡಾಕ್ಟರ್ ಸಿ. ವಿ. ಮಥಾಯಸ್, ಬಲ್ಮಟವಾರ್ಡ್ ಪಿ. ಯಫ್. ಯಫ್. ವಾಸ್, ಪಿಲಿಗ್ರಿಮ್ ವಾರ್ಡ್ ಎ. ಎ. ಡಿ. ಸೋಜ, ಕಂಟೋನ್ಮೆಂಟ್ ವಾರ್ಡ್ ಯಸ್. ಯಫ್. ಸರೋನ್ಹ, ಮಂಗಳಾದೇವಿ ವಾರ್ಡ್ ಯಸ್. ಬಿ. ಸಲ್ಡಾನ.

ಇವರುಗಳಲ್ಲದೆ ಈ ಮೊದಲು ನೇಮಕ ಮಾಡಲ್ಪಟ್ಟ ಮ. ರಾ. ರಾ. ಜೆ. ಎ. ಸಲ್ಡಾನ, M. L. C. ಯಸ್. ನಾಗರಾಜಯ್ಯ, ಕೆ. ಆರ್ ಆಚಾರ್, ಕೆ. ಗೋಪಾಲಕೃಷ್ಣ ರಾವ್, ಯಂ. ಶಂಕ್ರನಾರಾಯಣ ರಾವ್, ಜಾರ್ಜ್ ಅಲ್ಬರ್ಟ್, ಜೆ. ಎ. ಪುತ್ರನ್, ರಹಿಂ ಅಹಮದ್, ಕೆ. ಪಿಟ್ಟಪ್ಪ ಪ್ರಭುಗಳೂ ಕೂಡಾ 21 ಜನರು ಆಡಳ್ತೆ ಕಮಿಟಿ ಮೆಂಬರರಾಗಿರುತ್ತಾರೆ. ಬಾಕಿ ವಾರ್ಡುಗಳಿಗೆ ಸದ್ಯದಲ್ಲಿಯೇ ಮೆಂಬರರನ್ನು ಮಾಡುತ್ತಾರೆ. ಮಂಗಳೂರು ಟೌನ್ ಪ್ಲಾನಿಂಗ್ ಮತ್ತು ಟೌನ್ ಎಕ್ಸ್‌ಟೆನ್‌ಶನ್ ಸ್ಕೀಮ್‌ಗಳ ವಿಷಯದಲ್ಲಿಯೂ, ಮಂಗಳೂರು ವಾಟರ್ ಸಪ್ಲೈ ವಿಷಯದಲ್ಲಿಯೂ ತಕ್ಕ ಆಲೋಚನೆಯನ್ನು ಮಾಡಿ ಬೇಕಾಗುವ ಕಾರ್ಯಗಳನ್ನು ಮುಂದೆವರಿಸುವರೆ ಯೂ ಕೆಳಗಿನ ಮೆಂಬರರುಗಳನ್ನೊಳಗೊಂಡ ಸಬ್ ಕಮಿಟಿಯೊಂದನ್ನು ನೇಮಕಮಾಡಲಾಯಿತು. ಮ. ರಾ. ರಾ. ಜೆ. ಎ. ಸಲ್ಡಾನ M. L. C. ಯಸ್. ನಾಗರಾಜಯ್ಯ, ಯಂ. ಶಂಕ್ರನಾರಾಯಣ ರಾವ್, ಯು. ರಾಮರಾವ್, ಯು. ಫೆರ್ನಾಂಡಿಸ್, ಕೆ. ಆರ್ ಕಾರಂತ್.

(*Sd*) **S. Nagarajiah,**
Secretary.

ಅತ್ಯಂತ ವಿಷಾದಕರ ಮರಣ

ಮಂಗಳೂರಿನ ವಕೀಲರೂ, ಬಂಟರಯಾನೆ ನಾಡವರ ಸಮಾಜದ ಪ್ರಮುಖ ಮನೆತನಕ್ಕೆ ಸೇರಿದವರೂ ಆದ ಶ್ರೀ. ತಿಮ್ಮಂಗೂರು ನಾರಾಯಣ ಭಂಡಾರಿ ಎಡ್ವಕೇಟ್ ಇವರು ಡಬ್ಲ್ ನ್ಯೂಮೋನಿಯ ಜ್ವರಪೀಡಿತರಾಗಿ ಮರಣಾವಸ್ಥೆಯಲ್ಲಿರುವುದನ್ನು ಕಂಡು ತಾಳಿಕೊಳ್ಳಲಾರದೆ ಅವರ ಎಳೆಪ್ರಾಯದ ಹೆಂಡತಿಯು ಇದೇ ಕಳೆದ ತಾ. 3ನೇ ರಾತ್ರಿ ಮಂಗಳೂರಿನ ಬಿಜಾರದ ಬಾವಿಗೆ ಬಿದ್ದು ಮೃತರಾಗಿರುವ ದುರಂತವು ಹೃದಯವಿದ್ರಾವಕವಿದೆ. ಇವರಿಗೆ ಮೂರು ಮಂದಿ ಚಿಕ್ಕ ಮಕ್ಕಳಿದ್ದು ಕಡೆಯದು ಒಂದು ವರ್ಷದ ತೊಟ್ಟಿಲ ಮಗುವಿರುವುದು. ತಾ. 4ನೇ ಬೆಳಿಗ್ಗೆ ಶ್ರೀ. ನಾರಾಯಣ ಭಂಡಾರಿಗಳು ಮೃತರಾಗಿರುವರೆಂದು ತಿಳಿಸಲು ವಿಷಾದಪಡುತ್ತೇವೆ. ದಿವಂಗತರು ಸಣ್ಣವಯಸ್ಸಿನವರಿದ್ದು ಬಂಟರಯಾನೆ ನಾಡವರ ಸಂಘದ ಕಾರ್ಯದರ್ಶಿಯಾಗಿದ್ದರು, ಮತ್ತು ವಿಜಯಾ ಬೇಂಕಿನ ಡೈರೆಕ್ಟರರಾಗಿದ್ದರು. ಈ ದಂಪತಿಗಳ ಅಕಾಲ ಮರಣವು ಅತ್ಯಂತ ದುಃಖಕರವಿದೆ. ಮೃತರ ಬಂಧುಬಳಗದವರ ತೀವ್ರ ಶೋಕದಲ್ಲಿ ನಾವು ಸಹ ಭಾಗಿಗಳಿದ್ದೇವೆ.

ಉಡುಪಿ

ಹರಿಕಥಾ ಕಾಲಕ್ಷೇಪ— ಶ್ರೀಕೃಷ್ಣಮಠದಲ್ಲಿ ಪರ್ಯಾಯ ಶ್ರೀ. ಫಲಿಮಾರು ಸ್ವಾಮಿಗಳವರ ಆಶ್ರಯದಲ್ಲಿ ಶ್ರೀ. ಹಂಪೆ ಶ್ರೀಪಾದದಾಸರು ಶ್ರೀ ಮಧ್ವಾಚಾರ್ಯರ ಜೀವನ ಚರಿತ್ರೆಯನ್ನು ಹರಿಕಥಾ ರೂಪದಲ್ಲಿ ತಾ. 11-12-'39ನೇ ಸೋಮವಾರ ಪ್ರಾರಂಭಿಸಲಿರುವರು.

ಉಡುಪಿ ಶ್ರೀ ಭಂಡಾರಕೇರಿ ಮಠಾಧಿಪತಿಗಳು ಪುಣ್ಯಕ್ಷೇತ್ರ ಯಾತ್ರೆಗಳನ್ನು ಸಂದರ್ಶಿಸಿ ವಿಜಯನಗರಕ್ಕೆ ಹೋದ ವೇಳೆ ಅಲ್ಲಿಯ ವೇದ ವಿಜ್ಞಾನ ವರ್ಧಿನೀ ಪರಿಷತ್ತಿನ ಕಡೆಯಿಂದ ಶ್ರೀಗಳವರಿಗೆ ತಾ. 25-11-'39ರಲ್ಲು ಮಾನಪತ್ರ ಸಮರ್ಪಿಸಲಾಯಿತು. ಶ್ರೀ. ಶ್ರೀಗಳವರು ಮಕರಸಂಕ್ರಾಂತಿ ಜಾತ್ರೆಗೆ ಸರಿಯಾಗಿ ಉಡುಪಿಗೆ ಬರಲಿಯವರೆಂದು ತಿಳಿದುಬರುತ್ತದೆ.

ಶೋಚನೀಯ ಮರಣ— ಉಡುಪಿಯ ಸುಪ್ರಸಿದ್ಧ ಮೊಗವೀರ ಮನೆಂದಾಳುಗಳಾಗಿದ್ದ ಮಲ್ಪೆ ಶ್ರೀ. ಕೆ. ಎಮ್. ಸೋಮನವರು ಕಳೆದ ಗುರುವಾರ ನವಂಬರ ತಾ. 30ರಲ್ಲು ದೈವಾಧೀನರಾದರೆಂಬುದನ್ನು ತಿಳಿಸುವರೆ ತುಂಬಾ ವಿಷಾದವೆನಿಸುತ್ತದೆ. ಶ್ರೀಯುತರ ಮರಣದಿಂದ ಮೊಗವೀರ ಬಡಜನರ ಆಧಾರಸ್ತಂಭವೊಂದು ಕಳಚಿದಂತಾಯಿತು. ಕೀರ್ತಿಶೇಷರು ಸರಳ ಸ್ವಭಾವಿಯೂ, ಉದಾರಿಗಳೂ ಆಗಿದ್ದರು. ಜಿಲ್ಲಾಬೋರ್ಡಿನ ನೋಮಿನೇಟೆಡ್ ಮೆಂಬರರಾಗಿಯೂ, ಉಡುಪಿಯ ಒನರರಿ ಬೆಂಚ್ ಮೆಜಿಸ್ಟ್ರೇಟರಾಗಿಯೂ, ಮಲ್ಪೆ ಪಂಚಾಯತ ಬೋರ್ಡು ಪ್ರೆಸಿಡೆಂಟರೂ ಆಗಿ ಕೆಲಸಮಾಡಿದ್ದರು. 1921-24ರಿಂದ ಕೆನರಾ ಬೇಂಕಿಂಗ್ ಕೋರ್ಪರೇಶನಿನ ಡೈರೆಕ್ಟರರಾಗಿದ್ದರು. ಮಲ್ಪೆಯ ಪ್ರಾಮುಖ್ಯ ವ್ಯಾಪಾರಿ ಹಾಗೂ ಮುಖಂಡರಿದ್ದರು. ಇತ್ತೀಚೆಗೆ ಕೆಲ ಸಮಯದಿಂದ ರೋಗಪೀಡಿತರಾಗಿದ್ದರು. ಮೃತರ ಬಂಧುಜನಗಳೊಂದಿಗೆ ನಾವು ತುಂಬಾ ಸಹಾನುಭೂತಿಯುಳ್ಳವರಿರುತ್ತೇವೆ.

ಹೆಜಮಾಡಿ— ತಾರೀಕು 27-11-39ರಲ್ಲು ಉಡುಪಿಯಿಂದ ನಂದಿಕೂರಿಗೆ ತಾಯಿಮನೆಗೆ ಬರುವ ಇಬ್ಬರು ಬ್ರಾಹ್ಮಣರ, ಸುಮಾರು 6 ಮತ್ತು 4 ವರ್ಷದ ಹೆಣ್ಣುಮಕ್ಕಳು ಪಡುಬಿದ್ರೆವರೆಗೆ ಬಸ್ಸಿನಲ್ಲಿ ಬಂದು ನಂತರ ನಡೆದುಕೊಂಡು ಹೋಗುವಾಗ ದಾರಿತಪ್ಪಿ ಮೂಲ್ಕಿಯತ್ತ ಕಡೆ ಬರುವ ರಸ್ತೆಯಲ್ಲಿ ಕಡವಿನ ಹತ್ತಿರ ದುಃಖಪಡುತ್ತಿರಲು ಈ ಮಕ್ಕಳನ್ನು ಅಧ್ಯಾಪಕರಾದ ಶ್ರೀಯುತ ಹೆಜಮಾಡಿ ಶೀನಶೆಟ್ರು ಕಂಡು ವಿಚಾರಿಸಿ ಅವರನ್ನು ಮನೆಗೆ ಕೊಂಡುಹೋಗಿ ತಾನು ಬಿಡುತ್ತೇನೆಂದು ಸಮಾಧಾನಪಡಿಸಿ ಸೀಯಾಳ ವಗೈರೆ ತೆಗಿಸಿಕೊಟ್ಟು ಅವರನ್ನು ಕರಕೊಂಡು ಹೋಗಿ ಅವರ ರಕ್ಷಕರ ಸ್ವಾಧೀನ ಸುರಕ್ಷಿತವಾಗಿ ಒಪ್ಪಿಸಿರುವದು ಅಭಿನಂದನೀಯವಿದೆ.

ಕಾರ್ಕಳ— ಕೆನರಾ ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಕಂಪೆನಿ ಲಿಮಿಟೆಡ್ಡಿನ ಮೇನೇಜಿಂಗ್ ಡೈರೆಕ್ಟರರಾಗಿ ಶ್ರೀ. ಪಿ. ಯಸ್. ಕುಡ್ವರು ಆರಿಸಲ್ಪಟ್ಟ ಕುರಿತು ಸದರಿ ಕಂಪೆನಿಯ ಸ್ಥಳೀಯ ಕೆಲಸಗಾರರು ಸಂತೋಷವನ್ನು ಸೂಚಿಸುವುದಕ್ಕೋಸ್ಕರ ಒಂದು ಸನ್ಮಾನಕೂಟವು ವಕೀಲ ಶ್ರೀ. ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿ, ಸಂದರ್ಭೋಚಿತ ಮಾನಪತ್ರ ಸಮರ್ಪಣ, ಭಾಷಣ ಮತ್ತು ಲಘು ಉಪಹಾರದ ಸತ್ಕಾರ ಮೊದಲಾದವು ನಡೆದುವು.

ಕಾರ್ಕಳ ಕೇಂದ್ರದಿಂದ ಕಳೆದ ಸಪ್ಟಂಬರ ತಿಂಗಳಲ್ಲಿ ಹಿಂದೀ ಮಧ್ಯಮ ಪರೀಕ್ಷೆಯನ್ನು ಕೊಟ್ಟ ಶ್ರೀಮತಿ ಪಿ. ಗಿರಿಜಾ ಅವರು ಪ್ರಾಂತದಲ್ಲೆಲ್ಲಾ ಸರ್ವ ಪ್ರಥಮಯಾಗಿ ತೇರ್ಗಡೆಯಾಗಿರುವದರಿಂದ ಅವರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕಡೆಯಿಂದ ಪುರಸ್ಕಾರವನ್ನು ಪಡೆಯಲಿಕ್ಕೆ ಅರ್ಹರಾಗಿರುವರೆಂದು ಸ್ಥಳೀಯ ಪ್ರಚಾರಕ ಶ್ರೀ. ಕಟಪಾಡಿ ಶ್ರೀನಿವಾಸ ಶೆಣ್ಯೆ, ವಿಶಾರದರವರು ತಿಳಿಸುತ್ತಾರೆ.

ಮೈಸೂರಿನ ಪ್ಲೇಗ್ ಹರಡಿದ ಪ್ರದೇಶದಿಂದ ಇಲ್ಲಿಗೆ ಬಂದು ತಾತ್ಕಾಲಿಕ ವಸತಿಮಾಡಿಕೊಂಡಿದ್ದ ಒಂದು ಕುಟುಂಬದಲ್ಲಿ ಪ್ಲೇಗಿನ ಪ್ರಕೋಪವಾಗಿ ಕಳೆದ ವಾರ ಎರಡು ಮರಣಗಳಾದವು. ಆದರೆ ಈ ಮಹಾರೋಗದ ಅಂಟು ಊರೆಲ್ಲಾ ಹರಡದ ಹಾಗೆ ಎಲ್ಲಾ ಮುಂಜಾಗ್ರತೆಗಳನ್ನು ತೆಗೆದುಕೊಂಡಿರುವದರಿಂದ ಅದು ಹರಡುವ ಭಯವು ಸದ್ಯ ಕಂಡುಬರುವದಿಲ್ಲ.

ಇದೇ ತಾ. 1-12-39ರಿಂದ ಮೂರು ದಿನಗಳ ತನಕ ಕಾರ್ಕಳ ದೀಪೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಆ ಸಂದರ್ಭದಲ್ಲಿ ಕಲಾಕುಶಲರಿಗೆ ಶ್ರೀ. ವೆಂಕಟ್ರಮಣ ದೇವಾಲಯದ ಕಡೆಯಿಂದ ಯಥೋಚಿತ ಸಂಭಾವನೆ ಮತ್ತು ಪುರಸ್ಕಾರವೂ ನಡೆಯಿತು.

ಸ್ಥಳೀಯ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ. ವಿ. ಪೋಲಾರೆಡ್ಡಿ ಬಿ. ಎ. ಬಿ. ಯಲ್. ರವರ ಅಧ್ಯಕ್ಷತೆಯಲ್ಲಿ ಆರೋಗ್ಯ ಮತ್ತು ಶಿಶುಸಪ್ತಾಹವು ತಾ. 4-12-39ರಿಂದ ಆರಂಭವಾಗಿ ಆರೋಗ್ಯ ಪ್ರದರ್ಶನ, ವ್ಯಾಯಾಮ ಪ್ರದರ್ಶನ, ಆರೋಗ್ಯ ಭಾಷಣ, ಸಂಗೀತ ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳಿಂದ ಕೂಡಿ ಒಂದು ವಾರದ ತನಕ ನಡೆಯುತ್ತಾ ಇದೆ.

ಕೊಂಜಾಳು— ಶ್ರೀ. ಇರ್ವಾಡಿ ವಿಟ್ಠಲ ಸೆಟ್ರೆ ಇಟ್ಟಂದಿಯಲ್ಲಿ ಸತ್ಯ, ಧರ್ಮ, ಸ್ವಾಮಿನಿಷ್ಠೆಯಲ್ಲಿ ಕೆಲಸಮಾಡುತ್ತಾ ಬಡವನಾದರೂ ಬಲ್ಲಿದರಂತಿದ್ದು ಊರವರ ಪ್ರೀತಿಯನ್ನು ಸೂರೆಗೊಂಡಿದ್ದ ಮಂಗಳೂರು ಪೇಟೆ ಕೋಟಿ ಮಗ ಸಂಜೀವ ಎಂಬವನು ವಿಷಮ ಜ್ವರಪೀಡಿತನಾಗಲು ಶ್ರೀ. ಸೆಟ್ಟರು ಅಹೋರಾತ್ರಿ ಬಳಿ ಇದ್ದು ಇಂಗ್ಲಿಷ್ ಹಾಗೂ ನೇಟಿವ್ ಡಾಕ್ಟರ್ರುಗಳಿಂದ ಚಿಕಿತ್ಸೆ ನಡಿಸಿದಾಗ್ಯೂ ಕಳೆದ ತಾ 25ರಲ್ಲು ತನ್ನ 25ನೇ ವಯಸ್ಸಿನಲ್ಲಿ ದೈವಾಧೀನನಾದುದು ಶೋಚನೀಯ ವೆಂದೊಂದು ಬಾತ್ಮಿ.

ಕೆಬ್ರಿ— ಸ್ಥಳೀಕ ಬೋ. ಹಾ. ಎ. ಶಾಲೆಯಲ್ಲಿ ಊರಿನವರ ಉದಾರಾಶ್ರಯದಿಂದ ಮತ್ತು ಪಂಚಾಯತ ಬೋರ್ಡಿನ ಸಹಕಾರದಿಂದ, ಈ ವರ್ಷದ ಶಿಶು ಮತ್ತು ಆರೋಗ್ಯ ಸಪ್ತಾಹಗಳು ತಾ. 25 ಮತ್ತು 26-11-39 ಈ ಎರಡು ದಿನಗಳಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ತಾ 25 ಶನಿವಾರ ಗಂಟೆ 3ಕ್ಕೆ ಸರಿಯಾಗಿ ಇಲ್ಲಿಯ ಮಹಿಳೆಯರ ಪರವಾಗಿ ಇಲ್ಲಿಯ ರೂರಲ್ ಡಿಸ್ಪೆನ್ಸರಿ ಡಾಕ್ಟರರವರ ಪತ್ನಿಯಾದ ಶ್ರೀಮತಿ, ಲಕ್ಷ್ಮೀ ದೇವಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿತು. ಹೊಸತಾಗಿ ನೇಮಕ ಹೊಂದಿದ ಇಲ್ಲಿಯ ಸೂಲಗಿತ್ತಿ (ಮಿಡ್ ವೈಫ್) ಮಿಸ್ ಜೋನ್ ಮೇರಿಯವರು ಹೆಂಗಸರು ಗರ್ಭವತಿಯರಾಗಿರುವ ಮತ್ತು ಹೆರಿಗೆಯ ಸಮಯದಲ್ಲಿ ಸಾಮಾನ್ಯವಾಗಿ ಅನುಸರಿಸಬೇಕಾದ ಕೆಲವು ನಿಯಮಗಳನ್ನು, ಮಕ್ಕಳ ಪೋಷಣೆಯ ವಿಷಯದಲ್ಲಿ ಕೆಲವು ಯೋಗ್ಯ ಸಲಹೆಗಳನ್ನು, ವಿವರಿಸಿ ಹೇಳಿದರು. ಅನಂತರ ಅಧ್ಯಕ್ಷೆಯರು ಹೆಂಗಸರ ಹಕ್ಕು ಬಾಧ್ಯತೆಗಳ ವಿಷಯ ಕೆಲವು ಮಾತುಗಳನ್ನು ಹೇಳಿ 'ವಂದೇ ಮಾತರಂ' ಗೀತೆಯೊಡನೆ ಸಭೆಯು ಮುಕ್ತಾಯವಾಯಿತು. ತಾ 26 ರಂದು ಬೆಳಿಗ್ಗೆ ಮಕ್ಕಳ ಮೆರವಣಿಗೆ ಮತ್ತು ಪಂದ್ಯಾಟಗಳು ಇದ್ದುವು. ಸಾಯಂ 3½ ಗಂಟೆಗೆ ಇಲ್ಲಿಯ ರೂರಲ್-ಡಿಸ್ಪೆನ್ಸರಿಯ-ಡಾಕ್ಟರ್ ಶ್ರೀ. ನ್. ರಾಘವಾಚಾರ್ಯರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಶಾಲಾ ಮಕ್ಕಳಿಗೆಲ್ಲಾ ಇನಾಮು ಹಂಚಲಾಯಿತು. ನಂತರ ಆರೋಗ್ಯ, ಶಿಸ್ತು, ಅಭಿಮಾನ, ಈ ಮೂರು ವಿಷಯಗಳಲ್ಲಿ ಮಕ್ಕಳಿಗೂ, ದೊಡ್ಡವರಿಗೂ, ಸರಿಯಾಗಿ ತಿಳಿಯುವಂತೆ ಅಧ್ಯಕ್ಷರು ಭಾಷಣ ಮಾಡಿದರು. ಮಕ್ಕಳಿಗೆಲ್ಲಾ ಮಿಠಾಯಿ ಹಂಚಿ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಸುವರ್ಣ ಪದಕ ಪಾರಿತೋಷ— ದಿ ಏಶಿಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿಯವರಿಂದ ಕೊಡೋಣವಾದ ಸುವರ್ಣ ಪದಕ ಪಾರಿತೋಷವನ್ನು ಕಾಸರಗೋಡಿನ ವಿ| ಟಿ. ಹಸನ್ ಕುಟ್ಟಿಯವರಿಗೆ ಕಳೆದ ತಾ 27ರಲ್ಲಿ ಮಿಶನ್ ಶಾಲಾ ಕಟ್ಟಡದಲ್ಲಿ ಸಭೆ ಸೇರಿ ಕೊಡಲಾಯಿತು. ಈ ಸಮಾರಂಭಕ್ಕೆ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಡಾ| ವಿಠಲ ಸೆಟ್ಟರು ಅಗ್ರಾಸನ ವಹಿಸಿದ್ದರು. ಊರ ಪ್ರಮುಖ ಸರಕಾರಿ ಹಾಗೂ ಇನ್ನಿತರ ಆಧ್ಯ ಗೃಹಸ್ಥರನೇಕರು ಈ ಸಂತೋಷ ಕೂಟದಲ್ಲಿ ಭಾಗವಹಿಸಿದ್ದರು. ಕಂಪೆನಿಯ ಆರ್ಗನೈಜರರಾದ ಶ್ರೀ. ಬಿ. ಕರುಣಾಕರ ಹೆಗ್ಗೆಡೆರವರು ವಿ| ಹಸನ್ ಕುಟ್ಟಿಯವರು ಮೆಡಲು ಪಡೆಯಲು ಎಷ್ಟರ ಮಟ್ಟಿನ ಕಾರ್ಯದಕ್ಷತೆಯಿಂದ ಕೆಲಸ ಮಾಡಿದ್ದಾರೆಂಬುದನ್ನು ವಿವರಿಸಿ ವಿ| ಕುಟ್ಟಿಯವರಿಗೆ ಕಂಪೆನಿಯಿಂದ ಕೊಡೋಣವಾದ ಸರ್ಟಿಫಿಕೇಟನ್ನು ಓದಿ ಹೇಳಿದರು. ಶ್ರೀಗಳಾದ ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ, ಖಾನ್ ಬಹದ್ದೂರ್ ಮಹಮ್ಮದ್, ಶವನ್ನಾಡ್, ಎಮ್. ಎಲ್. ಎ., ಎಸ್. ತಿಮ್ಮಪ್ಪ ಸೆಟ್ಟಿ, ಅಸಿಸ್ಟೆಂಟ್ ಕಮ್ಮರ್ಶಿಯಲ್ ಟೇಕ್ಸ್ ಆಫೀಸರ್. ಟಿ. ಪಿ. ಮಹಮ್ಮದ್ ಕುಂಞ ಮೊದಲಾದವರು ಜೀವವಿಮಾ ಸಂಘಗಳ ಮತ್ತು ಅವುಗಳಿಂದ ಸಿಕ್ಕುವ ಪ್ರಯೋಜನಗಳ ಕುರಿತು ಭಾಷಣಗಳನ್ನಿತ್ತರು. ಅಧ್ಯಕ್ಷರ ಕಾಲೋಚಿತಭಾಷಣವಾದ ಬಳಿಕ ನೆರೆದ ಮಹನೀಯರೆಲ್ಲರಿಗೂ ಟೀಪಾರ್ಟಿ ಸತ್ಕಾರ ನಡೆದು ಶ್ರೀ. ಬಿ. ಕರುಣಾಕರ ಹೆಗ್ಗೆಡೆರ ಧನ್ಯವಾದಗಳೊಂದಿಗೆ ಸಭಾಕಾರ್ಯವು ಕೊನೆಗೊಂಡಿತು.

ಅಜ್ಜಾಡ— ಇದೇ ತಾ. 2ರಲ್ಲು ಅಜ್ಜಾಡ ಬೋರ್ಡು ಹುಡುಗಿಯರ ಶಾಲೆಯ ತಿಂಗಳ ಸಭೆಯು ಶ್ರೀ. ಶಿವರ ಅಣ್ಣಯ್ಯ ಇವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ. ಸೀತಾರಾಮ ಘೋರೆ ಬಲ್ಲಾಳರಿಂದ ಕೊಡಲ್ಪಟ್ಟ ಇನಾಮುಗಳ ಹಂಚುವಿಕೆ, ವಿವಿಧ ವಿನೋದ, ಸಭಿಕರ ಮತ್ತು ಅಧ್ಯಕ್ಷರ ಭಾಷಣಾದಿಗಳಿಂದ ಸಂಭ್ರಮದಿಂದ ನಡೆಯಿತು.

ರಷ್ಯ ಮತ್ತು ಫಿನ್ಲೆಂಡುಗಳೊಳಗೆ ಯುದ್ಧ

ರಷ್ಯವು ಫಿನ್ಲೆಂಡಿನ ಸ್ವಾತಂತ್ರ್ಯವನ್ನು ಅಪಹರಿಸುವುದೇ? ಅಥವಾ ತನಗನುಕೂಲ ರಾಜ್ಯಭಾರವನ್ನು ಮಾತ್ರ ಸ್ಥಾಪಿಸಲೆಳಸುವುದೇ?

ಫಿನ್ಲೆಂಡು ಉತ್ತರ ಧ್ರುವದ ಬಳಿ ರಷ್ಯದ ನೆರೆಯಲ್ಲಿ ರಷ್ಯದ ಮುಖ್ಯ ಬಂದರಾದ ಲೆನಿನ್ ಗ್ರಾಡಿಗೆ ಸಮೀಪವಿರುವ ಚಿಕ್ಕದಾದೊಂದು ಸ್ವತಂತ್ರರಾಜ್ಯವಿದೆ. ಬಾಲ್ಟಿಕ್ ಸಮುದ್ರದಲ್ಲಿ 1200 ಮೈಲುಗಳಷ್ಟು ಕರಾವಳಿ ಇದೆ ಅದಕ್ಕೆ. ಬಾಲ್ಟಿಕ್ ಸಮುದ್ರದ ಸಂದುಕಟ್ಟಿನಲ್ಲಿ ಫಿನ್ಲೆಂಡ್ ಮತ್ತು ಬೊತ್ನಿಯಾ ಕೊಲ್ಲಿಗಳ ಬಾಯಿಯಲ್ಲಿದ್ದು ರಷ್ಯವು ಕಣ್ಣಿಟ್ಟಿರುವ ಆಲಂಡ್ ದ್ವೀಪಗಳು ಫಿನ್ಲೆಂಡಿನ ಅಧೀನವಿವೆ. ದ್ವೀಪಗಳೆಲ್ಲಾ ಸೇರಿ ಒಟ್ಟು ವಿಸ್ತೀರ್ಣ 13,2589 ಚದರಮೈಲು. ಜನಸಂಖ್ಯೆ ಸುಮಾರು 3,667,067. ಹೆಲ್ಸಿಂಕಿಯೆಂಬುದು ಫಿನ್ಲೆಂಡಿನ ರಾಜಧಾನಿ. ಮಹಾ ಅರಣ್ಯಗಳ ನಾಡು. ಕೃಷಿಯೇ ಮುಖ್ಯವೃತ್ತಿ. ಜಾನುವಾರುಗಳು ಹೇರಳವಾಗಿವೆ. ಫಿನ್ಲೆಂಡಿಗೆ ಸುಸಂಘಟಿತವಾದ 9 ದಳಸೇನೆಯಿದೆ. 150 ವಿಮಾನಪಡೆ ಮತ್ತು ಚಿಕ್ಕನೌಕಾಪಡೆಯಿದೆ. ಕೆಲವು ಶತಮಾನಗಳ ಹಿಂದೆ ಫಿನ್ಲೆಂಡು ಸ್ವೀಡನಿಗೆ ಸೇರಿತ್ತು. ಆದುದರಿಂದಲೇ ಸ್ವೀಡಿಶ್ ಭಾಷೆಯನ್ನಾಡುವ ಜನರು ಫಿನ್ಲೆಂಡಿನಲ್ಲಿ ಹೆಚ್ಚಾಗಿರುವರು. 1809ರಲ್ಲಿ ಫಿನ್ಲೆಂಡು ರಷ್ಯದ ಅಧೀನವಾಗಿ ರಷ್ಯದ ಝಾರ ಚಕ್ರವರ್ತಿಗಳೇ ಫಿನ್ಲೆಂಡಿನ ಗ್ರ್ಯಾಂಡ್ ಡ್ಯೂಕರಾದರು. ಫಿನ್ಲೆಂಡು ಯಾವಾಗಲೂ ಸ್ವೀಡಿಶ್ ಮತ್ತು ಫಿನ್ನಿಷ್ ಜನರ ಕಲಹದ ಕಳವಾಗಿದ್ದಿತು. ಅದು ರಷ್ಯದಲ್ಲಿ ಬೊಲ್ಶೆವಿಕ್ ರಾಜ್ಯಭಾರ ಸ್ಥಾಪಿತವಾದ ಮೇಲೆ 1917ರಲ್ಲಿ ಸ್ವತಂತ್ರವಾಗಿ ಮಾಡಲ್ಪಟ್ಟಿತು. ಫಿನ್ಲೆಂಡಿನಲ್ಲಿ ಈಗ ಪ್ರಜಾಪ್ರತಿನಿಧಿರಾಜ್ಯಭಾರ ಸ್ಥಾಪಿತವಾಗಿದೆ. ಜನತೆಯಲ್ಲಿ ಸಮತಾವಾದವು ಪ್ರಬಲವಾಗಿ ನೆಲೆಗೊಂಡಿದೆ. 1930ರಲ್ಲಿ ಅದನ್ನು ಕಠಿಣ ಹಸ್ತದಿಂದ ದಬಾಯಿಸಲಾಗಿತ್ತು. ಫಿನ್ಲೆಂಡಿನ ಬಳಿಯ ಆಲಂಡ್ ದ್ವೀಪಗಳಲ್ಲಿ ಕೋಟೆಕಟ್ಟಿ ಭದ್ರತೆಗೊಳಿಸಬಾರದೆಂದು ರಷ್ಯವು ಹಠತೊಟ್ಟಿರುವುದು, ಆದರೆ ಫಿನ್ಲೆಂಡು ಸರಕಾರವು ಸ್ವೀಡನ್ ಮತ್ತು ಜರ್ಮನಿಯ ಸಹಾಯದಿಂದ ಆಲಂಡ್ ದ್ವೀಪಗಳನ್ನು ಭದ್ರಪಡಿಸುವ ಪ್ರಯತ್ನ ನಡೆಸಿರುವುದು. ಇದರಿಂದಾಗಿ ಫಿನ್ಲೆಂಡ್ ಮತ್ತು ರಷ್ಯಗಳೊಳಗೆ ವೈಷಮ್ಯವುಂಟಾಗಿದ್ದಿತು.

ಮೊದಲು ಜರ್ಮನಿಯು ಬಾಲ್ಟಿಕ್ ಸಮುದ್ರದಲ್ಲಿ ಅಧಿಕಾರವನ್ನು ಸ್ಥಾಪಿಸುವ ಯತ್ನ ನಡಿಸಿ ರಷ್ಯವನ್ನು ಪ್ರತಿಭಟಿಸುತ್ತಿತ್ತು. ಆದರೆ ಜರ್ಮನಿ ಮತ್ತು ಸೋವಿಯೆಟ್ ರಷ್ಯಗಳೊಳಗೆ ಒಪ್ಪಂದವಾದ ಮೇಲೆ ಬಾಲ್ಟಿಕ್ ಸಮುದ್ರ ಭಾಗವನ್ನು ಹಿಟ್ಲರರು ರಷ್ಯಕ್ಕೆ ಬಿಟ್ಟುಕೊಟ್ಟಿರುವಂತಿದೆ. ಇದರಿಂದಲೇ ಲಿಥುವೇನಿಯ, ಲೆಟೇವಿಯ ಮತ್ತು ಎಸ್ಟೋನಿಯಗಳು ರಷ್ಯಕ್ಕೆ ತಲೆಬಾಗಿ ಅದಕ್ಕೆ ಬೇಕಾದ ರಿಯಾಯಿತಿಗಳನ್ನು ತೋರಿಸಿ ತಾವು ಕೆಲವು ಅನುಕೂಲತೆಗಳನ್ನು ಅದರಿಂದ ಪಡೆದಿವೆ. ಆದರೆ ಫಿನ್ಲೆಂಡು ಇದಕ್ಕೊಪ್ಪದೆ ಕಳೆದ ಎರಡು ತಿಂಗಳುಗಳಿಂದ ನಡೆಯುತ್ತಿದ್ದ ಒಡಂಬಡಿಕೆಯ ಪ್ರಯತ್ನವು ನಿಷ್ಫಲವಾಗಿ

ಬಾಲ್ಟಿಕ್ ಸಮುದ್ರ ಪ್ರದೇಶದಲ್ಲಿ ರಷ್ಯದ ಸರ್ವಾಧಿಕಾರ.

ಇದಕ್ಕೆ ತಡೆಯಾಗಿ ಬಂದ ಫಿನ್ಲೆಂಡಿನ ರಾಜ್ಯಭಾರವನ್ನು ಕೊನೆಗೊಳಿಸಲು ಧಾಳಿ.

ರುತ್ತದೆ. ರಷ್ಯವು ಫಿನ್ಲೆಂಡಿನ ಸ್ವತಂತ್ರವನ್ನೇನೂ ಅಪಹರಿಸಲೆಳಸುವುದಿಲ್ಲ. ಭಂಡವಾಳಶಾಹಿ ರಾಷ್ಟ್ರಗಳು ಒಟ್ಟುಗೂಡಿ ಒಂದಲ್ಲೊಂದು ದಿನ ತನ್ನನ್ನು ವಿರೋಧಿಸಬಹುದೆಂಬ ಭೀತಿಯಿಂದ ಅದೀಗ ಸಂದರ್ಭ ನೋಡಿ ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಿದೆ. ರಷ್ಯದ ಪ್ರಮುಖ್ಯ ಪಟ್ಟಣ ಹಾಗೂ ಬಂದರಾದ ಲೆನಿನ್ ಗ್ರಾಡು ಫಿನ್ಲೆಂಡ್ ಕೊಲ್ಲಿಯ ಕೊನೆಯಲ್ಲಿದೆ ಈ ಕೊಲ್ಲಿಯ ಮತ್ತು ಲಡೋಗಾ ಸರೋವರದ ನಡುವೆ ಇರುವ ಕರೇಲಿಯ ಭೂಕಂಠವು ಫಿನ್ಲೆಂಡ್ ಲೆನಿನ್ ಗ್ರಾಡುಗಳನ್ನು ಜೋಡಿಸುತ್ತದೆ. ಫಿನ್ಲೆಂಡಿನ ಪೂರ್ವದ ಎಲ್ಲೆಯಲ್ಲಿ ರಷ್ಯಕ್ಕೆ ಸೇರಿರುವ ಕರೇಲಿಯ ಎಂಬ ಪ್ರದೇಶವಿದೆ. ಕರೇಲಿಯ ಭೂಕಂಠ ಮತ್ತು ಫಿನ್ಲೆಂಡ್ ಕೊಲ್ಲಿಯಲ್ಲಿರುವ ಹೇಂಗೋ ಅರ್ಧದ್ವೀಪವೇ ಮೊದಲಾದುವನ್ನು ಫಿನ್ಲೆಂಡ್ ಬಿಟ್ಟುಕೊಡಬೇಕು. ಲೆನಿನ್ ಗ್ರಾಡಿನ ಭದ್ರತೆಗದು ಅವಶ್ಯವಾಗಿದೆ. ಅದರ ಬದಲಿಗೆ ಕರೇಲಿಯದಲ್ಲಿ ಹೆಚ್ಚಿನ ಪ್ರದೇಶವನ್ನು ಕೊಡಲಾಗುವುದೆಂದು ಸೋವಿಯೆಟ್ ರಷ್ಯದ ಕೇಳಿಕೆ. ಆದರಿಂದ ತನ್ನ ಸ್ವಾತಂತ್ರ್ಯವನ್ನು ಕಳಕೊಂಡಂತಾಗುವುದೆಂದು ಫಿನ್ಲೆಂಡು ಒಪ್ಪಲಿಲ್ಲ. ಈ ಸಂಬಂಧವಾಗಿ ಈಗ ಎರಡು ತಿಂಗಳುಗಳಿಂದ ಸಂಧಾನ ನಡೆಯುತ್ತಿದ್ದಿತು. ಫಿನ್ಲೆಂಡು ರಾಜಿ ಪ್ರಸ್ತಾಪ ನಡಿಸುತ್ತಿರುವಾಗಲೆ ರಷ್ಯದ ಧಾಳಿಯನ್ನು ನಿರೀಕ್ಷಿಸಿಕೊಂಡು ಅದನ್ನು ವಿರೋಧಿಸಲು ಬೇಕಾದ ಭದ್ರತೆಯನ್ನು ಮಾಡುತ್ತಿತ್ತು. ಅಮೇರಿಕ, ಸ್ವೀಡನ್, ಇಂಗ್ಲೆಂಡ್ ಮೊದಲಾದ ರಾಷ್ಟ್ರಗಳ ಸಂಪೂರ್ಣ ಸಹಾನುಭೂತಿ ಅದಕ್ಕಿತ್ತು. ರಷ್ಯವು ಫಿನ್ಲೆಂಡಿನ ಘೋಷಣೆಯಿಂದ ಸಂತಪ್ತವಾಗಿತ್ತು.

ಗಡಿನಾಡಿನ ಕಲಹ

ಹೀಗಿರುವಾಗ ನವಂಬರ ತಾ. 25ರಲ್ಲು ಫಿನ್ಲೆಂಡಿನ ಎಲ್ಲೆಯಲ್ಲಿದ್ದ ಫಿನ್ನಿಶ್ ಸೈನಿಕರು ಕರೇಲಿಯದಲ್ಲಿದ್ದ ಸೋವಿಯೆಟ್ ಸೈನಿಕರ ಮೇಲೆ ಗುಂಡೆಸೆದು 3ಮಂದಿ ಸೈನಿಕರು ಸತ್ತು ಕೆಲವರು ಗಾಯಗೊಂಡರೆಂದು ರಷ್ಯವು ಆರೋಪಹೊರಿಸಿ ಫಿನ್ಲೆಂಡಿನಿಂದ ಉದಾಹರಣೆ ಕೇಳಿತು. ಮತ್ತು ಕರೇಲಿಯ ಭೂಕಂಠದಿಂದ ಫಿನ್ನಿಶ್ ಸೈನಿಕರು 15 ಮೈಲು ಹಿಂದೆ ಸರಿಯಬೇಕೆಂಬ ಶರ್ತಹಾಕಿತು. ಫಿನ್ನಿಶ್ ಸೈನಿಕರು ಗುಂಡೆಸೆಯಲೇ ಇಲ್ಲ. ಈ ಗಲಾಟೆಯ ಸಂಗತಿಯೇ ತಮಗೆ ತಿಳಿಯದು. ಆ ಕುರಿತು ವಿಚಾರಿಸಲು ವಿಚಾರಣಾ ಕಮಿಟಿ ಸ್ಥಾಪಿಸಬಹುದು. ಕರೇಲಿಯ ಭೂಕಂಠದಿಂದ ಫಿನ್ನಿಶ್ ಸೈನಿಕರು ಹಿಂದೆ ಸರಿಯಬೇಕಾದರೆ ಸೋವಿಯೆಟ್ ಸೈನಿಕರೂ ಅದೇ ರೀತಿ ಹಿಂದೆ ಹೋಗಬೇಕೆಂದು ಫಿನ್ಲೆಂಡ್ ತಿಳಿಸಿತು. ತಾ. 27ರಲ್ಲು ಕರೇಲಿಯದ ಮೇಲೆ ಹಾರಾಡುತ್ತಿದ್ದ ಸೋವಿಯೆಟ್ ವಿಮಾನಗಳು ಕೆಲವನ್ನು ಫಿನ್ನಿಶ್ ವಿಮಾನಭೇದಕ ತೋಪುಗಳು ಕೆಳಗುರುಳಿಸಿದುವು.

ರಷ್ಯದ ಎಚ್ಚರಿಕೆ

ನವಂಬರ ತಾ. 28ರಲ್ಲು ಕರೇಲಿಯ ಭೂಕಂಠದಲ್ಲಿ ಲೆನಿನ್ ಗ್ರಾಡಿನ ಬಳಿ ಸೋವಿಯೆಟ್ ಮತ್ತು ಫಿನ್ನಿಶ್ ಸೈನಿಕರೊಳಗೆ ಕಲಹಗಳುಂಟಾದವು. ರಷ್ಯವು ತೀವ್ರ ಉದ್ವೇಗಗೊಂಡು, ಫಿನ್ಲೆಂಡಿನೊಂದಿಗೆ ಮಾಡಿಕೊಂಡಿದ್ದ ಅನಾಕ್ರಮಣದ ಒಪ್ಪಂದವನ್ನು ನವಂಬರ ತಾ. 28ರಲ್ಲು ರದ್ದುಪಡಿಸಿ, ಫಿನ್ಲೆಂಡು ಇದನ್ನು ಮೊದಲೇ ಮುರಿದುಹಾಕಿರುವುದೆಂಬ ಆರೋಪ ಹೊರಿಸಿರುವುದು. ಫಿನ್ಲೆಂಡು ರಷ್ಯದೊಡನೆ ಯುದ್ಧಕ್ಕಾಗಿ ಹಾತೊರೆಯುತ್ತಿರುವುದು. ಕರೇಲಿಯ ಭೂಕಂಠದಿಂದ ಸೇನೆಯನ್ನು ಹಿಂದಕ್ಕೆ ಸರಿಸಲು ನಿರಾಕರಿಸಿದುದೇ ಇದಕ್ಕೆ ಕಾರಣವೆಂದು ರಷ್ಯದ ಅಭಿಮತ. ರಷ್ಯವು ಫಿನ್ಲೆಂಡಿಗೆ ಕೊನೆಯ ಎಚ್ಚರಿಕೆ ಕೊಟ್ಟಿರುವುದು. ಆದರೆ ಫಿನ್ಲೆಂಡು ರಷ್ಯದ ಆರೋಪಗಳನ್ನೆಲ್ಲಾ ಅಲ್ಲಗಳೆದು, 1945ರ ವರೆಗಿರುವ ಅನಾಕ್ರಮಣದ ಒಪ್ಪಂದವನ್ನು ಅದು ಏಕಾಏಕಿ ರದ್ದುಪಡಿಸಿದುದು ಅನ್ಯಾಯವೆಂದು ಸೂಚಿಸಿರುವುದು. ಮತ್ತು ರಷ್ಯದ ಧಾಳಿಯನ್ನಿದಿರಿಸಲು ಭರದಿಂದ ಸಿದ್ಧತೆ ನಡಿಸುತ್ತಿರುವುದು.

ರಷ್ಯದ ಧಾಳಿ

ತಾ. 29ರಲ್ಲು ಸೋವಿಯೆಟ್ ವಿದೇಶಮಂತ್ರಿ ಎಮ್. ಮೊಲೋಟೋವರು ಕೊಟ್ಟ ಭಾಷಣದಲ್ಲಿ, ಫಿನ್ಲೆಂಡಿನ ಈಗಣ ಸರಕಾರದ ಉಗ್ರ ಘೋಷಣೆಯಿಂದಾಗಿ ರಷ್ಯಕ್ಕೂ ಅದಕ್ಕೂ ಸೌಹಾರ್ದವು ಸಾಧ್ಯವಿಲ್ಲ. ಫಿನ್ಲೆಂಡ್ ಸರಕಾರವು ಸಾಮ್ರಾಜ್ಯಶಾಹಿ ರಾಷ್ಟ್ರಗಳೊಂದಿಗೆ ಸೇರಿ ರಷ್ಯವನ್ನು ವಿರೋಧಿಸ ಹೊರಟಿದೆ. ಫಿನ್ಲೆಂಡಿನ ಸ್ವಾತಂತ್ರ್ಯವನ್ನು ಅಪಹರಿಸಬೇಕು ಅಥವಾ ಅವರ ರಾಜ್ಯವನ್ನು ಆಕ್ರಮಿಸಬೇಕೆಂಬ ಇಚ್ಛೆಯು ಸೋವಿಯೆಟ್ ರಷ್ಯಕ್ಕಿಲ್ಲ. ಲೆನಿನ್ ಗ್ರಾಡಿನ ಭದ್ರತೆಯೇ ಅದರ ಉದ್ದೇಶ. ಈ ಪ್ರಶ್ನೆಯು ರಾಜಿಯಿಂದ ಇತ್ಯರ್ಥವಾದರೆ ಫಿನ್ನಿಶ್ ಜನತೆಗೆ ಬೇಕಾದ ಸಹಾಯ ಮಾಡಿ ಸೌಹಾರ್ದದಿಂದಿರಲು ರಷ್ಯವು ಸಿದ್ಧವಿದೆಯೆಂದು ಸೂಚಿಸಿರುವರು. ಇದಕ್ಕೆ ಫಿನ್ನಿಶ್ ಸರಕಾರವು ಯಾವ ಉತ್ತರವನ್ನೂ ಕೊಡದುದರಿಂದ ರಷ್ಯವು ಫಿನ್ಲೆಂಡಿನೊಡನೆ ರಾಜಕೀಯ ಸಂಬಂಧವನ್ನು ಮುರಿದು ಹಾಕಿ ತನ್ನ ರಾಯಭಾರಿಯನ್ನು ಹೆಲ್ಸಿಂಗಿಯಿಂದ ಹಿಂದೆ ಕರೆದಿರುವುದು. ತಾ. 30ರಲ್ಲಿ ಸೋವಿಯೆಟ್ ಸೇನೆಯು, ನೆಲ, ಜಲ ಮತ್ತು ಆಕಾಶದ ಮೂಲಕ ಫಿನ್ಲೆಂಡಿನ ಮೇಲೆ ಧಾಳಿ ನಡೆಸಿರುವುದು. ಸೋವಿಯೆಟ್ ವಿಮಾನಗಳು ಹೆಲ್ಸಿಂಕಿಯ ಮೇಲೆ ಬೋಂಬೆಸೆದುವು. ಸೋವಿಯೆಟ್ ಯುದ್ಧ ನಾವೆಗಳು ಸೈಸ್ಕಾರಿದ್ವೀಪ ಮತ್ತು ಪೆಟ್ಸಾಮೋ ಕಿಯೆಂಬ ಬಂದರನ್ನು ಮುತ್ತಿ ವಶಪಡಿಸಿರುವವು. ಸೋವಿಯೆಟ್ ಸೇನೆಯು ಫಿನ್ಲೆಂಡಿನ ಎಲ್ಲೆಯಲ್ಲಿ 40 ಮೈಲು ಮುಂದೊತ್ತಿ, ಫಿನ್ನಿಶ್ ಮೇಗಿನೆಟ್ ಕೋಟೆಯೆಂದು ಕರೆಯಲ್ಪಡುವ ಕೋಟೆಗಳನ್ನು ಸಮೀಪಿಸಿರುವುದು.

ಶರಣಾಗತನಾಗುವ ಹಾಗಿಲ್ಲ

ಇದೇ ತಾ. 1ರಲ್ಲು ಎಮ್ ಕಜಾಂಡರರ ಫಿನ್ನಿಶ್ ಸರಕಾರವು ರಾಜನಾಮೆಕೊಟ್ಟು ಎಲ್ಲಾ ಪಕ್ಷಗಳನ್ನೊಳಗೊಂಡ ಹೊಸ ಮಂತ್ರಿ ಮಂಡಲವು ರಚಿಸಲ್ಪಟ್ಟಿರುವುದು. ಎಮ್. ರೆಟಿ ಎಂಬವರು ಪ್ರಧಾನ ಮಂತ್ರಿ ಮತ್ತು ಡಾಕ್ಟರ್ ಟಾನ್ನರರು ವಿದೇಶ ಮಂತ್ರಿಗಳಾಗಿರುವರು. ನಾವು ಯಾವ ರಾಜಿ ಪ್ರಸ್ತಾಪಕ್ಕು ಸಿದ್ಧರಿರುವೆವು. ಆದ

THULUNAD BANK
OF SUPPLY AGENCY LIMITED,
ESTD.] UDIPI. [1933.
INTEREST ON CURRENT ACCOUNT ALLOWED
at 3% p. a.
All kinds of Banking business transacted
Write for particulars to:—
The Managing Director.

ರೆ ನಮ್ಮ ಸ್ವಾತಂತ್ರ್ಯ ಮತ್ತು ನಮ್ಮ ಆಡಳಿತ ವಿಷಯಗಳನ್ನು ನಾವೇ ನಿರ್ಧರಿಸುವ ಹಕ್ಕನ್ನು ಬಿಟ್ಟುಕೊಡಲು ಸಿದ್ಧರಿಲ್ಲೆಂದೇ" ಎಮ್. ರಿಟಿಯವರ ಹೇಳಿಕೆ. 1917ರಲ್ಲಿ ಕಮ್ಯೂನಿಸ್ಟ್ ಸೈನಿಕರೊಡನೆ ಜಯಶೀಲವಾಗಿ ಹೋರಾಡಿ ಪ್ರಖ್ಯಾತರಾಗಿರುವ ಮುದುಕ ಫೀಲ್ಡ್ ಮಾರ್ಶಲ್ ಮೆನ್ನರ್‌ಹೈಮರು ಫಿನ್ನಿಶ್ ಸೇನೆಯ ಮುಖ್ಯ ನಾಯಕರಾಗಿ ನೇಮಿಸಲ್ಪಟ್ಟಿರುವರು. ರಶ್ಯದ ನೌಕಾ ಮತ್ತು ವಿಮಾನ ಧಾಳಿಯ ಅತ್ಯಾಚಾರಗಳಿಂದ ಅಮೆರಿಕ, ಸ್ವೀಡನ್, ಇಟೆಲಿ, ಇಂಗ್ಲೆಂಡ್, ಫ್ರಾನ್ಸ್, ಜಾಪಾನ್ ಮೊದಲಾದ ದೇಶಗಳೆಲ್ಲಾ ಸಂತಾಪಗೊಂಡು, ಲೋಕದಲ್ಲಿ ನೀತಿ ನಿಯಮವೇ ಇಲ್ಲದಂತಾಗಿ ಕಾಡುತನವೇ ಬಲಗೊಂಡಂತಾಗಿರುವುದೆಂದು ರಶ್ಯದ ವರ್ತನೆಯನ್ನು ನಿಷೇಧಿಸಿರುವವು. ಲೋಕಮತವು ರಶ್ಯಕ್ಕೆ ಸಂಪೂರ್ಣ ವಿರೋಧವಿದೆ. ಇನ್ನು ಮುಂದೆ ಅಮೆರಿಕಾದ ಕಂಪೆನಿಗಳು ರಶ್ಯಕ್ಕೆ ವಿಮಾನಗಳನ್ನು ತಯಾರಿಸಿ ಕೊಡಬಾರದೆಂದು ಪ್ರೆಸಿಡೆಂಟ್ ರೂಸವೆಲ್ಟರು ಕೇಳಿಕೊಂಡಿರುವರು.

ಜರ್ಮನಿಯಲ್ಲಿ ತೀವ್ರ ಅತೃಪ್ತಿ

ಫಿನ್ಲೆಂಡಿನ ಮೇಲೆ ರಶ್ಯವು ಧಾಳಿನಡಿಸಿದ ಕುರಿತು ಜರ್ಮನಿಯಲ್ಲಿ ತೀವ್ರ ಅತೃಪ್ತಿಯುಂಟಾಗಿದೆಯೆಂದು ತಿಳಿದುಬಂದಿದೆ. ಸೋವಿಯೆಟ್ ಸೇನೆಯು ಫಿನ್ಲೆಂಡಿನ ಮೇಲೇರಿಹೋಗುವ ಮೊದಲು ಹಿಟ್ಲೆರರು ಗುಪ್ತವಾಗಿ ಆ ಕುರಿತು ತನ್ನ ವಿರೋಧ ಸೂಚಿಸಿದರೂ ಸ್ಟೆಲಿನರು ಕಿವಿಗೊಡಲಿಲ್ಲೆಂದೂ ಇದರಿಂದ ಹಿಟ್ಲೆರರು ಬಹಳ ತಳಮಳಗೊಂಡಿರುವರೆಂದೂ ಸುದ್ದಿಯುಂಟಾಗಿದೆ. ಬಾಲ್ಟಿಕ್ ಸಮುದ್ರಭಾಗದಲ್ಲಿ ರಶ್ಯವು ಸಂಪೂರ್ಣವಾಗಿ ತನ್ನ ಅಧಿಕಾರ ಸ್ಥಾಪಿಸಿ ಜರ್ಮನಿಯು ಮೂಲೆಗೊತ್ತಲ್ಪಡುವುದೆಂಬ ಭೀತಿಯು ಜರ್ಮನ್ ಸೇನಾನಾಯಕರಲ್ಲುಂಟಾಗಿದೆ. ಅವರು ಜರ್ಮನಿಯ ವಿದೇಶ ಮಂತ್ರಿ ಹರ್ ವಾನ್ ರಿಬ್ಬೆಂಟ್ರೊಫರ ಧೋರಣೆಯನ್ನು ಪ್ರಬಲವಾಗಿ ವಿರೋಧಿಸಹತ್ತಿದ್ದಾರೆ. ಇದರಿಂದ ಹರ್ ಹಿಟ್ಲೆರರು ಬಹಳ ವ್ಯಥೆಗೊಂಡಿರುವರೆಂದು ತಿಳಿದುಬರುತ್ತದೆ.

ಫಿನ್ಲೆಂಡಿನ ಪ್ರಬಲ ವಿರೋಧ

ಫಿನ್ಲೆಂಡಿನ ಆಗ್ನೇಯ ಭಾಗದ ಎಲ್ಲೆಯಲ್ಲಿ, ಲಿಗೋಡಾ ಸರೋವರದ ಉತ್ತರದಲ್ಲಿ ಸೋವಿಯೆಟ್ ಸೈನಿಕರು ಭರದಿಂದ ಮುಂದೊತ್ತಿದರೂ ಫಿನ್ನಿಶ್ ಸೈನಿಕರು ವೀರಾವೇಶದಿಂದ ಕಾದಾಡಿ ಅವರನ್ನು ತಡೆದು ಹಿಂದಕ್ಕೊತ್ತಿರುವರು. ಹಲವು ಹಳ್ಳಿಗಳು ನಾಶವಾಗಿರುವವು. ಕರೇಲಿಯ ಭೂಕಂಠದಲ್ಲಿ ತೀವ್ರ ಹೋರಾಟ ನಡೆದಿದೆ. ಇದೇ ತಾ. 1ರಲ್ಲಿ ರಸ್ಯಾನರು 8ಟಾಂಕಿಗಳನ್ನು ಮತ್ತು 9 ವಿಮಾನಗಳನ್ನು ಕಳಕೊಂಡಿರುವರು. ಹೇಂಗೋ ಬಂದರಿನ ಮೇಲೆ ಇದೇ ತಾ. 1ರಲ್ಲು ಸೋವಿಯೆಟ್ ವಿಮಾನಗಳು 3ಸಲ ಬೋಂಬೆಸೆದುವು. ಹೆಲ್ಸಿಂಕಿಯಲ್ಲಿದ್ದ ಮೂರರಲ್ಲಿ ಎರಡಂಶ ಜನರು ಬಿಟ್ಟುಹೋಗಿರುವರು. ಹೆಲ್ಸಿಂಕಿಯ ಮೇಲೆ ಎಡೆಬಿಡದೆ ವಿಮಾನಧಾಳಿ ನಡೆಯುತ್ತಿರುವುದು. ಪೆಟ್ಸಮೋ ಎಂಬ ಬಂದರನ್ನು ಫಿನ್ನಿಶ್ ಸೈನಿಕರು ರಸ್ಯಾನರಿಂದ ವಶಪಡಿಸಿಕೊಂಡು 150ಮಂದಿ ಸೋವಿಯೆಟ್ ಸೈನಿಕರನ್ನು ಸೆರೆಹಿಡಿದಿರುವರು. ಹೇಂಗೋ ಬಂದರನ್ನು ವಶಪಡಿಸಿಕೊಳ್ಳಲು ರಸ್ಯಾನರು ಮಾಡಿದ ಪ್ರಯತ್ನ ನಿರರ್ಥಕವಾಗಿವೆ. ಅವರಿಗೆ ಅದರಿಂದ ಹೆಚ್ಚಿನ ನಷ್ಟವಾಗಿದೆ. ತಾ. 1ರಲ್ಲಿ ಫಿನ್ನಿಶ್ ಸೈನಿಕರು 36 ರಸ್ಯಾನ ಟಾಂಕಿಗಳನ್ನು ನಾಶಮಾಡಿರುವರು. ರಸ್ಯಾನ ಟಾಂಕಿಗಳ ಇಡೀ ದಳವೇ ಫಿನ್ನರು ರಚಿಸಿಟ್ಟ ಗುಪ್ತ ಗೂಡೊಳಕ್ಕೆ ಸಿಕ್ಕಿ ನಾಶವಾಗಿರುವದೆಂದು ತಿಳಿದುಬರುತ್ತದೆ ಫಿನ್ನಿಶ್‌ಸೇನೆಯ ಧೃತಿಗೆಟ್ಟಂತೆ ತೋರುವುದಿಲ್ಲ. ಸಾಲ್ಮಿಜೆರ್ವಿ ಎಂಬಲ್ಲಿಯ ನಿಕೆಲ್ ಗನಿಗಳು ನಾಶಮಾಡಲ್ಪಟ್ಟಿವೆಯೆಂದು ಹೆಲ್ಸಿಂಕಿಯ ಸುದ್ದಿ.

ಮೋಸ್ಕೋ ರೇಡಿಯೋ ಸುದ್ದಿಯ ಮೇರೆಗೆ ಪೆಟ್ಸಮೋ ಬಂದರಿನಿಂದ ಹಿಂದಕ್ಕೋಡುತ್ತಿರುವ ಫಿನ್ನಿಶ್ ಸೇನೆಯನ್ನು ಸೋವಿಯೆಟ್ ಸೈನಿಕರು ಬೆಂಬತ್ತಿರುವರು. ಕರೇಲಿಯದ ಭೂಕಂಠದಲ್ಲಿ ಸೋವಿಯೆಟ್ ಸೇನೆಯು 7 ಹಳ್ಳಿಗಳನ್ನು ವಶಪಡಿಸಿಕೊಂಡಿದೆ. ಫಿನ್ನರು ಹಳ್ಳಿಗಳಿಗೆ ಬೆಂಕಿಕೊಟ್ಟು ಬಲಾತ್ಕಾರದಿಂದ ಜನರು ಅವನ್ನು ಬಿಟ್ಟುಹೋಗುವಂತೆ ಮಾಡಿರುವುದು. 8 ಫಿನ್ನಿಶ್ ವಿಮಾನಗಳು ನಾಶಮಾಡಲ್ಪಟ್ಟಿವೆ.

ಡೆನ್ಮಾರ್ಕಿನಿಂದ ಬಂದ ಸುದ್ದಿಯ ಮೇರೆಗೆ ರಸ್ಯಾನರ ಪ್ರಚಂಡ ವಿಮಾನ ಧಾಳಿಯಿಂದಾಗಿ ಎಲ್ಲೆಲ್ಲಿಯೂ ಫಿನ್ಲೆಂಡಿನ ಹಳ್ಳಿ ಮತ್ತು ಪಟ್ಟಣಗಳಲ್ಲಿ ಬೆಂಕಿಯೆದ್ದು ಉರಿಯಹತ್ತಿದೆ. ಜನರು ಹಳ್ಳಿಪ್ರದೇಶಗಳಿಗೆಹೋಗಿ ಆಶ್ರಯ ಪಡೆಯುತ್ತಿದ್ದಾರೆ. ಹೆಲ್ಸಿಂಕಿಯ ಪೂರ್ವಭಾಗದ ಪರಿಸ್ಥಿತಿಯು ಭೀಷಣವಾಗಿದೆ. ಸೋವಿಯೆಟ್ ವಿಮಾನಗಳು ಮಾಡಿಗೆ ಮುಟ್ಟುವಷ್ಟು ಸಮೀಪ ಇಳಿದು ಹೋಗಿ ಮನೆಗಳಮೇಲೆ ಬೋಂಬೆಸೆದು ಭಯಂಕರ ಹಾವಳಿಮಾಡಿವೆ. ಜನರು ಮನೆಮಾರು ಬಿಟ್ಟು ತೀವ್ರ ಚಳಿಯಲ್ಲಿ ಬಯಲು ಪ್ರದೇಶಕ್ಕೆ ಬಂದು ವಾಸಿಸಹತ್ತಿರುತ್ತಾರೆ.

ಹವಾಗುಣವು ಬಹಳ ಕೆಟ್ಟುಹೋಗಿರುವುದರಿಂದ ತಾ. 3ರಲ್ಲಿ ವಿಮಾನಧಾಳಿ ನಡೆಯಲಿಲ್ಲ. ಫಿನ್ಲೆಂಡಿನ ಕೋಟೆ ಕೊತ್ತಳಗಳು ಬಲವಾಗಿವೆ. ಮತ್ತು ಗುಪ್ತ ಗೂಡುಗಳಿಂದ ಅಪಾಯಕರವಿರುತ್ತವೆ. ಆದುದರಿಂದ ಸೋವಿಯೆಟ್ ಸೇನೆಯ ಕೆಲಸವೇನೂ ಸುಲಭವಾದುದಲ್ಲ. ಫಿನ್ಲೆಂಡು ಸರೋವರಗಳ ದೇಶ. ಚಳಿಗಾಲದಲ್ಲಿ ಅವೆಲ್ಲಾ ಗಟ್ಟಿಕಟ್ಟಿ ಹೋಗುತ್ತವೆ. ಅವುಗಳ ಮೇಲಿಂದ ಟಾಂಕಿಗಳು ಹೋಗದಂತೆ ತಡೆಗಟ್ಟುವ ಗುಪ್ತಉಪಾಯ ಒಂದನ್ನು ಫಿನ್ಲೆಂಡ್ ಮಾಡಿಕೊಂಡಿರುವುದಂತೆ.

ಸೋವಿಯೆಟ್ ಯುದ್ಧ ಹಡಗವೊಂದು ಮುಳುಗಿಸಲ್ಪಟ್ಟಿರುವುದೆಂದು ತಿಳಿದುಬಂದಿದೆ. ಸಂಖ್ಯೆಯಲ್ಲಿ ಸೋವಿಯೆಟ್ ಸೇನೆಯು ಲೋಕದಲ್ಲೇ ಅತ್ಯಂತ ಪ್ರಬಲವಾದುವಾದರೂ ಅದು ಎರಡು ಖಂಡಗಳಲ್ಲಿ ವಿಭಾಗಿಸಲ್ಪಟ್ಟಿರುವುದರಿಂದ ಕೆಲಮಟ್ಟಿಗೆ ದುರ್ಬಲವಾಗಿದೆ. ಇದು ಹೊರತು 1937ರಲ್ಲಿ ಅನುಭವಶಾಲಿ ಸೋವಿಯೆಟ್ ಸೇನಾಧಿಕಾರಿಗಳೆಲ್ಲಾ ಕೊಲ್ಲಲ್ಪಟ್ಟು ಅವರ ಸ್ಥಾನದಲ್ಲಿ ನೇಮಿಸಲ್ಪಟ್ಟವರು ಅಷ್ಟೇನೂ ಅನುಭವಶಾಲಿಗಳಲ್ಲ. ಫಿನ್ಲೆಂಡಿಗೆ ಮೂರು ಅನುಕೂಲತೆಗಳಿವೆ. (1) ತೀವ್ರ ಚಳಿಗಾಲವು ಹೋರಾಟಕ್ಕೆ ದೊಡ್ಡ ಪ್ರತಿಬಂಧಕವಾಗಿದೆ. (2) 9 ದಳ ಫಿನ್ನಿಶ್ ಸೇನೆಯು ಒಳ್ಳೇ ತರಬೇತಿ ಪಡೆದಿದ್ದು ಚಳಿಗಾಲದಲ್ಲಿಯೂ ಕಾದಾಡುವ ಅಭ್ಯಾಸವುಳ್ಳದಾಗಿರುವುದು. (3) ದೇಶದ ಭೂಸ್ಥಿತಿಯು ರಕ್ಷಣೆಗೆ ಅನುಕೂಲವಾಗಿದೆ. ಆದರೂ ರಶ್ಯದ ಪ್ರಚಂಡ ಧಾಳಿಯನ್ನು ದೀರ್ಘಕಾಲ ಎದುರಿಸಲು ಫಿನ್ಲೆಂಡಿನಂತಹ ಚಿಕ್ಕ ರಾಷ್ಟ್ರಕ್ಕೆ ಸಾಧ್ಯವಾಗಲಾರದು. ಫಿನ್ಲೆಂಡಿನ ಸೋಸಿಯಲಿಸ್ಟರು, ಮಜೂರರೇ ಮೊದಲಾದವರೆಲ್ಲಾ ಸರಕಾರದ ಬೆಂಬಲಕ್ಕೆ ನಿಂತಿರುವರೆಂದು ಪ್ರಕಟಿಸಲಾಗಿದೆ. ಆದರೆ ಇದು ಎಷ್ಟರ ಮಟ್ಟಿಗೆ ನಿಜವೆಂದು ಹೇಳಬರುವುದಿಲ್ಲ.

ಫಿನ್ಲೆಂಡಿನಲ್ಲಿ ಹೊಸ ಸರಕಾರ ಸ್ಥಾಪನೆ

ಮೋಸ್ಕೋ ಪಟ್ಟಣದಿಂದ ಇದೇ ತಾ. 20ರಲ್ಲು ಬಂದ ಆಕಾಶವಾಣಿಯ ಮೇರೆಗೆ ರಶ್ಯವು ಫಿನ್ಲೆಂಡಿನಲ್ಲಿ ಫಿನ್ನಿಶ್ ಡೆಮೊಕ್ರೆಟಿಕ್ ರಿಪಬ್ಲಿಕ್ ಎಂಬ ಹೊಸ ಸರಕಾರವನ್ನು ಇಷ್ಟರಲ್ಲೇ ಸ್ಥಾಪಿಸಿರುವುದು. ಎಮ್. ಕುಸುನೆನ್ ಎಂಬವರು ಈ ಸರಕಾರದ ಪ್ರಧಾನ ಮಂತ್ರಿ. ಈ ಹೊಸ ಸರಕಾರದೊಡನೆ ಸೋವಿಯೆಟ್ ಸರಕಾರವು ಒಪ್ಪಂದಮಾಡಿಕೊಂಡಿರುವುದು. ಈ ಪ್ರಕಾರ ಸೋವಿಯೆಟ್ ಸರಕಾರವು ಫಿನ್ಲೆಂಡಿಗೆ 70,000 ಚದರ ಕಿಲೋಮಿಟರಿನಷ್ಟು ಸೋವಿಯೆಟ್ ಕರೇಲಿಯ ಪ್ರದೇಶವನ್ನು ಬಿಟ್ಟುಕೊಡುವುದು. ಇವರ ಬದಲಿಗೆ ಫಿನ್ಲೆಂಡು 3,970 ಚದರ ಕಿಲೋಮಿಟರಿನಷ್ಟು ಸ್ಥಳವನ್ನು ಕರೇಲಿಯ ಭೂಕಂಠದಲ್ಲಿ ರಶ್ಯಕ್ಕೆ ಬಿಟ್ಟುಕೊಡುವುದು ಇದಕ್ಕೆ ಪ್ರತಿಫಲವಾಗಿ ಸೋವಿಯೆಟ್ ಸರಕಾರವು 120 ಮಿಲ್ಯ ಫಿನ್ನಿಶ್ ಮಾರ್ಕ್ಸ್ ನಾಣ್ಯಗಳನ್ನು ತೆರಬೇಕು. ಹೇಂಗೋ ಅರ್ಧದ್ವೀಪ ಅದರ ಸಮೀಪದ ಸಮುದ್ರಭಾಗ ಮತ್ತು ಅದರ ಆಗ್ನೇಯದ ಕೆಲವು ದ್ವೀಪಗಳನ್ನು ಫಿನ್ಲೆಂಡು ರಶ್ಯಕ್ಕೆ 20 ವರ್ಷಗಳ ವರೆಗೆ ಬಿಟ್ಟುಕೊಡಬೇಕು. ಫಿನ್ಲೆಂಡ್ ಕೊಲ್ಲಿ ಮತ್ತು ಉತ್ತರ ಧ್ರುವದಲ್ಲಿ ಫಿನ್ಲೆಂಡಿಗೆ ಸೇರಿದ ಕೆಲವು ದ್ವೀಪಗಳನ್ನು ರಶ್ಯಕ್ಕೆ ಬಿಟ್ಟುಕೊಡಬೇಕು. ಇದಕ್ಕೆ ಪ್ರತಿಫಲವಾಗಿ ಸೋವಿಯೆಟ್ ರಶ್ಯವು 300 ಮಿಲ್ಯ ಮಾರ್ಕ್ಸ್‌ಗಳನ್ನು ತೆರುವುದು. ಶಸ್ತ್ರ ಮತ್ತು ಯುದ್ಧ ಸಾಮಾಗ್ರಿಗಳನ್ನು ರಶ್ಯವು ಫಿನ್ನಿಶ್ ರಿಪಬ್ಲಿಕಿಗೆ ಒದಗಿಸುವುದು. ಈ ಒಪ್ಪಂದವು 20 ವರ್ಷಗಳ ವರೆಗಿದ್ದು ಕೂಡಲೆ ಜ್ಯಾರಿಗೆ ಬರುವುದು. ಮೋಸ್ಕೋದಲ್ಲಿ ಎಮ್. ಸ್ಟೇಲಿನ್, ಎಮ್. ವರೋಶಿಲೋವ್ ಮತ್ತು ಎಮ್. ಜಡನೋವರ ಸಮಕ್ಷಮದಲ್ಲಿ ಈ ಒಪ್ಪಂದಕ್ಕೆ ಎಮ್. ಮೊಲೊಟೊವ್ ಮತ್ತು ಎಮ್. ಕುಸುನೆನರು ಸಹಿ ಹಾಕಿರುವರು.

ಈ ಹೊಸ ಸರಕಾರವು ಫಿನ್ಲೆಂಡಿನಲ್ಲಿ ಯಾವ ಪ್ರಾತಿನಿಧ್ಯವನ್ನೂ ಪಡೆದಿಲ್ಲ. ಕಳೆದ ಮಹಾಯುದ್ಧದ ನಂತರ ಫಿನ್ಲೆಂಡನ್ನು ಬಿಟ್ಟೋಡಿದ ಕುಸುನೆನರೇ ಮೊದಲಾದ ಕೆಲವರು ಈ ಸರಕಾರವನ್ನು ರಚಿಸಿದವರೆಂದು ಫಿನ್ನಿಶ್ ಸರಕಾರವು ಜಾಹೀರುಗೊಳಿಸಿ ಲೀಗ್ ಆಫ್ ನೇಶನ್ಸಿನ ಮಧ್ಯಸ್ಥಿಕೆಗಾಗಿ ವಿನಂತಿ ಮಾಡಿ ಕೊಂಡಿರುವುದು.

ಉಡುಪಿ ಡಿ। ಮು। ಕೋರ್ಟಿನಲ್ಲಿ

O. S. $\frac{456}{1939}$ R. I. A. $\frac{110}{1939}$

ರುಜಾರಿಯೋ ಲೂಯಿ ಕೂಡಾ—ವಾದಿರು

ಮತ್ತು

Fr. ಪಿ. ಜಿ. ಕೋಯೆಲ್ಹೊ ಕೂಡ—ಪ್ರತಿವಾದಿರು

ಇವರೊಳಗೆ

ಈ ವ್ಯಾಜ್ಯಕ್ಕೆ ಕಾರಣವಾದ ಬ್ರಹ್ಮಾವರ S: ಮಿಕಾಗ್ರಿಸ್ ಚೆಕೊಬ್ಯಾಟ್ ಶಿರಿಯನ್ ಇಗರ್ಜಿಯ ಎಲ್ಲಾ ಪೇರಿಷನರ ವ ಸದ್ರಿ ಪೇರಿಷಿನಿಂದ ಹೊರಟು ಹೋದವರ ತಿಳುವಳಿಕೆ ಬಗ್ಗೆ—

ವಾದಿರು ಪ್ಲೆಂಟಿನ ಆಸ್ತಿಯಾದ ಸ್ಮಶಾನವಿರ್ತನಗೆ ವ ಮಿಕ್ಕ ಪೇರಿಷನರಿಗೆ ಶವಗಳನ್ನು ಹುಗಿಯುವರೇ ಇದ್ದ ಹಕ್ಕಿನ ಕುರಿತು ಡಿಕ್ಲೇರೇಶನ್ ಕೊಡಬೇಕಾಗಿಯೂ,ಮತ್ತು ಪ್ರತಿವಾದಿರು ವ ಅವರ ಕಡೆಯವರು ವಾದಿರಿಗೆ ಯಾ ಸದ್ರಿ ಇಗರ್ಜಿಯ ಯಾವತ್ತೂ ಪೇರಿಷನರಿಗೆ ಸದ್ರಿ ಸ್ಮಶಾನದಲ್ಲಿ ಶವಗಳನ್ನು ಹುಗಿಯುವಲ್ಲಿ ಆತಂಕಿಸದ ಹಾಗೆ ಶಾಶ್ವತವಾದ ಇಂಜಂಕ್ಷನ್ ಮೂಲಕ ನಿರ್ಬಂಧಿಸುವಂತೆಯೂ, ಮೇಲ್ಕಂಡ ವ್ಯಾಜ್ಯ ಹಂಚಿರುತ್ತಾರೆ. ಸದ್ರಿ ವ್ಯಾಜ್ಯವನ್ನು ಮೇಲ್ಕಂಡ ಇಗರ್ಜಿಯ ಪೇರಿಷನರ ಪರವಾಗಿ ವಾದಿರು ಪ್ರತಿವಾದಿರ ಮೇಲೂ, ಮತ್ತು ಪೇರಿಷಿನಿಂದ ಹೊರಟು ಹೋಗಿರುವವರ ಪರವಾಗಿ 4ನೇ ಪ್ರತಿವಾದಿ ರುಜಾರಿಯೋ ವಾಲ್ಡರ ಮೇಲೆ ಅನಸೇಲ್ಯವಾಸದ ಮೇಲೂ, ಹದುಗಿದೇ ಪರ್ಮಿಶನ್‌ಕೊಡಬೇಕಾಗಿ ವಾದಿರು ಮೇಲ್ಕಂಡ ಅರ್ಜಿ ದಾಖಲ್ಮಾಡಿರುತ್ತಾರೆ. ಸದ್ರಿ ಐವಜ್ಯದ ಅರ್ಜಿ ಕೊಡಾ ತಾರೀಕು 18-12-1939ಕ್ಕೆ ಈ ಕೋರ್ಟಿನ ಮುಂದೆ ತನಿಕೆಗೆ ಬರುತ್ತವೆ. ಆಕ್ಷೇಪವುಳ್ಳವರು ಸದ್ರಿ ದಿವಸ ಹಗಲು ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರುಮಾಡದಿದ್ದರೆ, ಸದ್ರಿ ವ್ಯವಹರಣೆಗಳು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುವು.

Udipi | **B. Vasudeva Rao,**
5-12-39 | *Counsel for Plaintiffs.*

ನೋಟೀಸು

1940-41ನೇ ಇಸ್ವಿಯ ಡಿಸ್ಟ್ರಿಕ್ಟ್ ಬೋರ್ಡು ರಸ್ತೆಗಳ ಕಾಮಗಾರಿ ಬಗ್ಗೆ ರಿಜಿಸ್ಟ್ರಿಗೆ ದಾಖಲ್ಲು ಮಾಡಲ್ಪಟ್ಟ ಕಂಟ್ರಾಕ್ಟುದಾರರಿಂದ ಮೊಹರುಮಾಡಲ್ಪಟ್ಟ ಟೆಂಡರು ಯಾನೆ ದರಖಾಸ್ತುಗಳು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರ ಆಫೀಸಿನಲ್ಲಿ 10-1-40ನೇ ಅಪರಾಹ್ನ ಘಂಟೆ 4ರ ತನಕ ತೆಗೆದುಕೊಳ್ಳೋಣಾಗುವದು.

ಕಂಟ್ರಾಕ್ಟಿಗೆ ಸಂಬಂಧಪಟ್ಟ ಅಂದಾಜು ಪಟ್ಟಿಗಳು ವಗೈರೆ ಡಿಸ್ಟ್ರಿಕ್ಟ್ ಬೋರ್ಡು ಇಂಜನಿಯರರ ಆಫೀಸಿನಲ್ಲಿ ಆಫೀಸು ಸಮಯದಲ್ಲಿ ನೋಡಬಹುದು.

(*Sd*) **P. G. Mathew,**
ಡಿಸ್ಟ್ರಿಕ್ ಬೋರ್ಡು ಇಂಜನಿಯರರು, ದ. ಕನ್ನಡ
ಮಂಗಳೂರು, ತಾ. 30-11-1939

---

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಶಮನಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0

ಮದನಮಂಜರಿ ಫಾರ್ಮಸಿ, 184 ಜೈನಾಬಜಾರ್ ಮದ್ರಾಸ್.
ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಒಂದು ವಾರದ ಯುದ್ಧ ವಾರ್ತೆ

ಇನ್ನೂ ಹೋರಾಟವಿಲ್ಲ

ಪಶ್ಚಿಮ ರಣರಂಗದಲ್ಲಿ ಇನ್ನೂ ದೊಡ್ಡ ಯುದ್ಧವೇನೂ ನಡೆದಿಲ್ಲ. ಚಳಿಗಾಲ ದಾಟುವತನಕ ನಡೆವಹಾಗೂ ತೋರು ವುದಿಲ್ಲ. ಇಕ್ಕಡೆಯವರೂ ತಮ್ಮ ಕೋಟೆ ಬಿಟ್ಟು ಮುಂದುವರಿಯಲು ಅಂಜುತ್ತಿರುವಂತಿದೆ. ಫ್ರೆಂಚ್ ಕೋಟೆಯನ್ನು ಮುರಿಯಲು ಪ್ರಚಂಡ ಸಾಹಸಮಾಡಬೇಕು; ಇಲ್ಲವೆ ಹೊಲ್ಲೆಂಡ್ ಮೂಲಕ ಮುಂದೊತ್ತಬೇಕೆಂಬ ಹಿಟ್ಲರರ ಆಸಹಿಷ್ಣುತೆಯನ್ನು ಜರ್ಮನ್ ಸೇನಾ ನಾಯಕರು ತಣಿಸಿರುವಂತಿದೆ. ಆಗಾಗ ಪಹರೆಯ ಪಂಗಡಗಳೊಳಗೆ ಚಿಕ್ಕ ಪುಟ್ಟ ಹೋರಾಟಗಳು ನಡೆಯುತ್ತಲೇ ಇವೆ. ಇತ್ತಂಡದವರ ಒಂದೆರಡು ವಿಮಾನಗಳು ಅತ್ತಿತ್ತ ಹಾರಾಡಿ ಸೇನಾ ಚಲನವಲನಗಳನ್ನು ಪರೀಕ್ಷಿಸುತ್ತಿವೆ.

ಹಡಗು ಮುಳುಗಿಸುವ ಮತ್ತು ಹಿಡಿಯುವ ಯುದ್ಧ

ಮಿತ್ರರಾಷ್ಟ್ರಗಳು, ಜರ್ಮನಿಗೆ ಸಾಮಾನುಗಳನ್ನೊಯ್ಯುವ ಇಲ್ಲವೆ ಜರ್ಮನಿಯಿಂದ ಸಾಮಾನುಗಳನ್ನು ತರುವ ಹಡಗುಗಳು ಹಿಡಿಯುವುದರಲ್ಲಿ ನಿರತವಾಗಿವೆ. ಜರ್ಮನಿಯು, ಇಂಗ್ಲೆಂಡ್ ಮತ್ತು ಫ್ರಾನ್ಸ್ ಬಳಿಯ ಸಮುದ್ರಗಳಲ್ಲಿ ಸಂಚರಿಸುವ ಹಡಗಗಳನ್ನೆಲ್ಲಾ ಯಾವ ರೀತಿಯಿಂದಾದರೂ ಮುಳುಗಿಸಲು ಸೊಂಟಕಟ್ಟಿದೆ. ನವಂಬರ ತಾ. 27ಕ್ಕೆ ಅಂತ್ಯವಾಗುವ ಒಂದೇವಾರದಲ್ಲಿ 11 ಬ್ರಿಟಿಷ್ 3, ಫ್ರೆಂಚ್ ಮತ್ತು 4 ಇತರ ರಾಷ್ಟ್ರಗಳ ಹಡಗಗಳು ಮುಳುಗಿಸಲ್ಪಟ್ಟಿವೆ. ತಾ. 27ರಲ್ಲಿ ಎರಡು ಜರ್ಮನ್ ಹಡಗಗಳನ್ನು ಬ್ರಿಟಿಷ್ ಯುದ್ಧದ ಹಡಗಗಳು ಹಿಡಿದಿವೆ. ರಾವಳಪಿಂಡಿ ಎಂಬ ದೊಡ್ಡ ಬ್ರಿಟಿಷ್ ಹಡಗವನ್ನು ಎರಡು ಜರ್ಮನ್ ಯುದ್ಧದ ಹಡಗಗಳು ಎದುರಿಸಿ ತೀವ್ರ ಹೋರಾಟನಡೆದು ಬ್ರಿಟಿಷ್ ನಾವಿಕರು ವೀರಯುದ್ಧ ಹೂಡಿ ಕಡೆಗೆ ಸಂತೋಷದಿಂದ ಹಡಗದೊಂದಿಗೆ ಮುಳುಗಿಹೋದರೆಂದು ತಿಳಿದು ಬರುತ್ತದೆ.

ಜರ್ಮನ್ ವೈಮಾನಿಕನ ಕುರಿತು ಮೆಚ್ಚಿಗೆ

ನವಂಬರ ತಾ. ೨೩ರಲ್ಲಿ ಜರ್ಮನಿಯ ಬೋಂಬೆಸೆತ ವಿಮಾನವೊಂದು ಫ್ರೆಂಚ್ ಮೆಗಿನಟ್ ಕೋಟೆಯ ಮೇಲೆ ಹಾರಾಡಿದಾಗ ೩ ಬ್ರಿಟಿಷ್ ವಿಮಾನಗಳು ಅದನ್ನಿದಿರಿಸಿ ಗುಂಡುಗಳು ತೂರಿ ಅದು ಕೂತಾಗಿ ಕೆಳಗೆ ಬೀಳುತ್ತಿದ್ದಾಗ, ಅದರ ತೋಪುಗಾರ ಮತ್ತು ಪರೀಕ್ಷಕರು ಗಾಳಿಕೊಡೆ ಮೂಲಕ ಕೆಳಗೆ ಹಾರಿಬಿಟ್ಟರು. ಆಗ ಸಾಯುವ ಸ್ಥಿತಿಯಲ್ಲಿದ್ದ ವಿಮಾನ ಚಾಲಕ ನಾಝಿ ತರುಣನು ಅಸಾಧಾರಣ ಸ್ಥೈರ್ಯದಿಂದ ತಾನೇ ಒಂದು ಕೈಯಿಂದ ವಿಮಾನ ಕೆಳಗೆ ಬೀಳದಂತೆ ಚಾಲನೆ ಮಾಡಿ, ಇನ್ನೊಂದು ಕೈಯಿಂದ ತೋಪನ್ನು ಉಪಯೋಗಿಸಿ ಗುಂಡು ಹಾರಿಸಿ ಬ್ರಿಟಿಷ್ ವಿಮಾನವೊಂದರ ಯಂತ್ರವನ್ನು ಮುರಿದು ಹಾಕಿದನು. ಆಮೇಲೆ ವಿಮಾನದೊಂದಿಗೆ ಕೆಳಗೆ ಬಿದ್ದನು. ಆದರೆ ಗಾಯವೇನೂ ಆಗಲಿಲ್ಲ. ಈ ನಾಝಿ ತರುಣನ ಧೈರ್ಯ ಮತ್ತು ಪ್ರಸಂಗಾವಧಾನತೆಯ ಕುರಿತು ಬ್ರಿಟಿಷ್ ವೈಮಾನಿಕರು ಬಹಳ ಮೆಚ್ಚಿಗೆ ಸೂಚಿಸಿ ಅವನನ್ನು ಔತಣವೊಂದಕ್ಕೆ ಆಮಂತ್ರಿಸಿ ಸತ್ಕರಿಸಿದರು. ಈ ಔತಣದ ಸಂದರ್ಭದಲ್ಲಿ ಈ ನಾಝಿ ತರುಣನು ಆವೇಗಗೊಂಡು ಸ್ವಲ್ಪಹೊತ್ತು ಮಾತಾಡಲಾರದಾದನು. ಆಮೇಲೆ ಧೃತಿಗೊಂಡು "ಬ್ರಿಟಿಷರು ನಮ್ಮನ್ನು ಬಹಳವಾಗಿ ದ್ವೇಷಿಸುವರು. ನಾವೂ ಅವರನ್ನು ತೀವ್ರವಾಗಿ ದ್ವೇಷಿಸಬೇಕೆಂದು ಕಳೆದ ಒಂದು ವರ್ಷದಲ್ಲಿ ನಡೆದ ಎಡೆಬಿಡದ ಪ್ರಚಾರದಿಂದ ನಾವು ನಂಚಿತರಾಗಿ ಅದು ಸತ್ಯವಿರಬಹುದೆಂದು ನಂಬಿದ್ದೆವು. ನಾನು ಸೆರೆಹಿಡಿಯಲ್ಪಟ್ಟರೆ ನನ್ನನ್ನು ಕ್ರೂರವಾಗಿ ಹಿಂಸಿಸಲಾಗುವುದೆಂದವರು ನನಗೆ ಹೇಳಿದರು" ಎಂದು ಉದ್ಗರಿಸಿದನು.

ಜರ್ಮನ್ ಜಲಯಾನ ನಿಲಯದ ಮೇಲೆ ಧಾಳಿ

ನವಂಬರ ತಾ. 28ರಲ್ಲು ದೂರಗಾಮಿ ಬ್ರಿಟಿಷ್ ಪಹರೆ ವಿಮಾನಗಳು, ಜರ್ಮನಿಯ ಬೋರ್ಕಂ ಎಂಬಲ್ಲಿಯ ಜಲಯಾನ ನಿಲಯದ ಮೇಲೇರಿ ಹೋಗಿ ಅಲ್ಲಿದ್ದ 3 ಜಲಯಾನಗಳ ಮೇಲೆ ಮಿಶನ್ ತೋಪುಗಳ ಮೂಲಕ ಗುಂಡೆಸೆದುವು. ವಿಮಾನ ಭೇದಕ ತೋಪುಗಳು ಗುಂಡು ಹಾರಿಸಿದರೂ ತಪ್ಪಿಸಿಕೊಂಡು ಬ್ರಿಟಿಷ್ ವಿಮಾನಗಳು ಸುರಕ್ಷಿತವಾಗಿ ಹಿಂದೆಬಂದಿರುವವು.

ಸಬ್‌ಮೆರೀನ್‌ಗಳಿಂದ ಮತ್ತು ಇಚ್ಛಾನುಸಾರ ಸಮುದ್ರಗಳಲ್ಲೆಲ್ಲಾ ಜಲತೋಟೆಗಳನ್ನಿಟ್ಟು ಆಗುವ ಹಾವಳಿಯನ್ನು ನಿವಾರಿಸುವ ಸಾಧನವನ್ನು ತಾವು ಬಲ್ಲೆವೆಂದು ಬ್ರಿಟಿಷ್ ನೌಕಾಖಾತೆಯ ಪರವಾಗಿ ಲೋರ್ಡ್ ಸ್ಟೇನ್‌ಹೋಪರು ನವಂಬರ ತಾ. 28ರಲ್ಲು ಪಾರ್ಲಿಮೆಂಟಿನಲ್ಲಿ ಹೇಳಿರುವರು. ಈ ದಿನ ಬ್ರಿಟಿಷ್ ಯುದ್ಧ ಹಡಗಗಳು 2 ಜರ್ಮನ್ ವ್ಯಾಪಾರಿ ಹಡಗಗಳನ್ನು ಹಿಡಿದಿರುವವು.

ಹೊಗೆಮುಸುಕಿನ ತಂತ್ರ

ನವಂಬರ ತಾ. 28ರಲ್ಲು ನಡುಹಗಲಿನಲ್ಲಿ ಜರ್ಮನರು, ಪ್ರಥಮವಾಗಿ ಹೊಗೆ ಮುಸುಕನ್ನೆಬ್ಬಿಸಿ ಪಶ್ಚಿಮರಣರಂಗದಲ್ಲಿ ಮೊಸೆಲ್ ಪಟ್ಟಣಕ್ಕಿಂತ 10 ಮೈಲು ದೂರದಲ್ಲಿ ಹೋರಾಟ ನಡೆಸಿದರು. 200 ಮಂದಿ ಜರ್ಮನ್ ಸೈನಿಕರು ಚಿಕ್ಕ ಫ್ರೆಂಚ್ ಹಡಗವೊಂದರ ಮೇಲೇರಿ ಹೋದರು. ಆಗಲೆ ಜರ್ಮನ್ ತೋಪುಗಳು ಹೊಗೆಯ ಮುಸುಕನ್ನೆಬ್ಬಿಸಿ ಜರ್ಮನ್ ಸೇನೆಯು ಮುಂದೊತ್ತುವುದು ಫ್ರೆಂಚ್ ಸೇನೆಗೆ ತಿಳಿಯದಂತೆ ಮರೆಮಾಡಲೆತ್ನಿಸಿದುವು. ಒಂದು ಘಂಟೆಯ ವರೆಗೆ ಯುದ್ಧ ನಡೆದು ಜರ್ಮನರು ಹಿಂದಕ್ಕೋಡಿಸಲ್ಪಟ್ಟರು.

ಬೋಂಬಕು ಡಿಸ್ಟ್ರೋಯರುಗಳ ಯುದ್ಧ

ನವಂಬರ ತಾ. ೨೯ರಲ್ಲು ನೋರ್ವೆ ದೇಶದ ನೈರುತ್ಯದಲ್ಲಿ ಉತ್ತರ ಸಮುದ್ರ ಭಾಗದಲ್ಲಿ ಬೋಂಬೆಸೆವ ಜರ್ಮನ್ ವಿಮಾನವೊಂದಕ್ಕೂ ಬ್ರಿಟಿಷ್ ಯುದ್ಧ ಹಡಗಕ್ಕೂ ಹೋರಾಟ ನಡೆದಿರುವುದು

ಜರ್ಮನಿಯ ಸಾಮಾನುಗಳನ್ನೊಯ್ಯುವ ತಟಸ್ಥ ರಾಷ್ಟ್ರಗಳ ಹಡಗಗಳನ್ನು ಜಪ್ತಿ ಮಾಡುವ ಬ್ರಿಟಿಷ್ ಸರಕಾರದ ನಿರ್ಧಾರದ ಕುರಿತು ಹೊಲ್ಲೆಂಡ್, ಬೆಲ್ಜಿಯಮ್, ಡೆನ್ಮಾರ್ಕ ಮೊದಲಾದ ರಾಷ್ಟ್ರಗಳು ಆಕ್ಷೇಪ ಸೂಚಿಸಿರುವುವು. ಇಟಲಿ ಮತ್ತು ಜಪಾನುಗಳು ಅದಕ್ಕೊಪ್ಪಲು ಸಾಧ್ಯವಿಲ್ಲೆಂದು ಹೇಳಿರುವವು. ಇಂಗ್ಲೆಂಡ್ ಮತ್ತು ಫ್ರಾನ್ಸುಗಳು ಈ ನಿರ್ಧಾರವನ್ನು ಕಠಿಣವಾಗಿ ಜ್ಯಾರಿಗೆ ತಂದಲ್ಲಿ ಜಪಾನು ಪ್ರತೀಕಾರ ಮಾಡುವುದೆಂದು ತಿಳಿದು ಬಂದಿದೆ

25 ಜರ್ಮನ್ ವಿಮಾನ ನಾಶ

ನವಂಬರ ತಾ. ೨೯ರಲ್ಲು ಬ್ರಿಟಿಷ್ ವಿಮಾನಗಳು ಜರ್ಮನ್ ಜಲಯಾನವೊಂದನ್ನು ಕೆಳಗುರುಳಿಸಿರುವವು. ಅಕ್ಟೋಬರ ತಾ. 16ರಲ್ಲು ಜರ್ಮನ್ ವಿಮಾನಗಳು ಸ್ಕೋಟ್ಲೆಂಡಿನ ಫರ್ತ್ ಅಫ್ ಫೋರ್ತಿನ ಮೇಲೆ ಧಾಳಿ ನಡಿಸಿದಂದಿನಿಂದ ಕಡಿಮೆಯೆಂದರೆ 25 ಜರ್ಮನ್ ವಿಮಾನಗಳನ್ನು ಬ್ರಿಟಿಷ್ ವಿಮಾನಗಳು ಕೆಳಗುರುಳಿಸಿರುತ್ತವೆ. ಜರ್ಮನಿಯ ವಾಯವ್ಯ ಭಾಗದ ಮೇಲೆ ಹಾರಿ ಹೋದ ಬ್ರಿಟಿಷ್ ವಿಮಾನವೊಂದು 2000 ಅಡಿ ಎತ್ತರದಲ್ಲಿ ಹಾರಾಡುತ್ತಿದ್ದಾಗ ಅದರ ಪಕ್ಕಗಳಿಗೆ ಮಿಂಚು ಬಡಿದು ವಿಮಾನದ ಒಂದು ಪಕ್ಕದ ಅರ್ಧಭಾಗವು ಮುರಿದು ಇನ್ನೊಂದು ಚೌಕಟ್ಟು ಮಾತ್ರ ಉಳಿದಿದ್ದರೂ, ಅದನ್ನು ನಡಿಸುತ್ತಿದ್ದ ನ್ಯೂಜೀಲೆಂಡಿನ ಇಬ್ಬರು ವೈಮಾನಿಕರು ಧೃತಿಗೆಡದೆ ಕೆಳಗೆ ಬೀಳಲಿದ್ದ ವಿಮಾನವನ್ನು ಬಹು ಚಾತುರ್ಯದಿಂದ ನಡಿಸಿ ಇಂಗ್ಲೆಂಡಿಗೆ ಮುಟ್ಟಿದರು. ಅಷ್ಟರಲ್ಲಿ ವಿಮಾನ ಚಾಲಕನ ಬಲಪಕ್ಕೆ ನುರಗಟ್ಟಿಹೋಗಿತ್ತು.

ಇತ್ತಲಾಗಿ ಕೆಲವು ತಿಂಗಳುಗಳಲ್ಲಿ ಫ್ರಾನ್ಸಿನಲ್ಲಿ, ಕಳೆದ 4 ವರ್ಷಗಳಲ್ಲಿ ತಯಾರಾದಷ್ಟು ಯುದ್ಧವಿಮಾನಗಳು ಮೋಟರ್ ಕಾರುಗಳಂತೆ ತಯಾರಾಗುತ್ತಿವೆ. ಫ್ರೆಂಚರಿಗೆ ಇನ್ನು ಮುಂದೆ ಜರ್ಮನರ ಭೀತಿಯೇ ಇಲ್ಲದಂತಾಗುವಂತೆ ಜರ್ಮನಿಯ ಸೇನಾಶಕ್ತಿಯನ್ನು ಸಂಪೂರ್ಣ ಪರಾಜಯಗೊಳಿಸಲು ಫ್ರೆಂಚ್ ಸರಕಾರವು ನಿರ್ಧಾರಮಾಡಿದೆ. ಫ್ರೆಂಚ್ ಪ್ರಜಾಪ್ರತಿನಿಧಿ ಸಭೆಯು ಪ್ರಧಾನ ಮಂತ್ರಿ ಡೆಲಾಡಿಯರರ ಮೇಲೆ ವಿಶ್ವಾಸಸೂಚಿಸಿವೆ. ಸೆನೆಟ್ ಸಭೆಯು ಸರ್ವಾಧಿಕಾರಕೊಟ್ಟಿದೆ. ಫ್ರೆಂಚ್ ಸೇನಾ ಖಾತೆಯು ಹೊಸ ರೀತಿಯ ಟಾಂಕಿಯೊಂದನ್ನು ಸಹಸ್ರಗಟ್ಲೆಯಲ್ಲಿ ತಯಾರು ಮಾಡುತ್ತಿದೆ.

ಈ ವಾರದಲ್ಲಿ ಒಂದೇ ದಿನ ಬ್ರಿಟಿಷ್ ವಿಮಾನಗಳು 9 ಜರ್ಮನ್ ಜಲಯಾನಗಳನ್ನೆದುರಿಸಿ ಒಂದನ್ನು ನಾಶಮಾಡಿರುವವು. ಉಳಿದುವು ಹಿಂದಕ್ಕೋಡಿಸಲ್ಪಟ್ಟಿರುವವು. ಇಷ್ಟರವರೆಗೆ ನಡೆದಿರುವ ವಿಮಾನಯುದ್ಧಗಳಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ವಿಮಾನಗಳು ಮತ್ತು ವೈಮಾನಿಕರೇ ಜಯಶೀಲರಾಗಿ ತಮ್ಮ ಶ್ರೇಷ್ಠತೆಯನ್ನು ಸಿದ್ಧಪಡಿಸಿರುತ್ತಾರೆ. ಜರ್ಮನಿಯು ನವೀನ ವಿಧದ ಜಲತೋಟೆಗಳಿಂದ ಹಲವು ಹಡಗಗಳನ್ನು ಮುಳುಗಿಸಿರುತ್ತದೆ. ಇದು ಕೂಡಾ ಈ ವಾರ ಸ್ವಲ್ಪ ಕಡಿಮೆಯಾಗಿದೆ. ಜರ್ಮನಿಯ ಮೇಲೆ ಮಿತ್ರರಾಷ್ಟ್ರಗಳು ಹಾಕಿರುವ ಸಾಂಪತ್ತಿಕ ಮುತ್ತಿಗೆಯು ಬಹಳ ಜಯಶೀಲವಾಗಿದೆ. ಬಾಲ್ಟಿಕ್ ಸಮುದ್ರದ ಹೊರತು ಬೇರೆ ಎಲ್ಲಾ ಸಮುದ್ರಗಳಲ್ಲಿನ ಅದರ ವ್ಯಾಪಾರವು ಬಹುಶಃ ನಿಂತುಹೋಗಿದೆ. ಇಟೆಲಿಯಿಂದ ಜರ್ಮನಿಗೆ ಹೆಚ್ಚಿನ ಸಹಾಯವೇನೂ ದೊರೆಯುವುದಿಲ್ಲ. ರುಮೇನಿಯವೂ ಜರ್ಮನಿಗೆ ಪೆಟ್ರೋಲ್ ಸಹಾಯಮಾಡುವ ಉತ್ಸಾಹದಿಂದಿಲ್ಲ. ರಶ್ಯ ಮತ್ತು ಜರ್ಮನಿಗಳೊಳಗೆ ವ್ಯಾಪಾರ ವಹಿವಾಟಿನ ಕುರಿತು ಬಿಕ್ಕಟ್ಟುಂಟಾಗಿದೆಯೆಂದು ಸದ್ದಿ.

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೦—೧೦—೦ ಚಿಕ್ಕದು ೦—೫—೦

„ ಮುಚ್ಚಳದ್ದು ೦—೧೨—೦ „ ಮುಚ್ಚಳದ್ದು ೦—೬—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

GENERAL SUPPLIES LIMITED

UDIPI - - - - S. INDIA

ನೋಟೀಸು.

ಕಾಸರಗೋಡು ಡಿ ಮು. ಕೋರ್ಟಿನಲ್ಲಿ

O S. 127/1939

ಮಾವಿಲ ರಾಮು ನಂಬ್ಯಾರ, ಕಂಡ ನಂಬ್ಯಾರರ ಅಳಿಯ, ಚೆಮ್ನಾಡು ಗ್ರಾಮದಲ್ಲಿರುವವ } ವಾದಿ

ಮತ್ತು

1. ಆಯಿಕಾಡುಕಮ್ ಕುಂಞಂಬು ನ್ಯಾರ, ಮಾಣಿಕ್ಕಂ ಅಂಮನ ಮಗ, ತರವಾಡು ಕಾರ್ಣವ ಮತ್ತು ಅವಲ್ಲಿ ಡಾರ 2. ಕಂಡನಾಯರ, ಚಿರುಪಯಿಅಂಮನ ಮಗ, ಪನಯಾಲು ಗ್ರಾಮದ ಕಂಡಂಬ್ಯಲಲ್ಲಿರುವವರು. } ಪ್ರತಿವಾದಿಗಳು

ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದರೆ—

ಮದೆಯಿಲ್ಲಂ ಅಕ್ಕು ಅಂಮ ಪಗ್ಗೆರೆಂದ ಪವರ್ ಓಫ್ ಎಟೊರ್ನಿ ಮೇರೆಗೆ ವಾದಿಯು ಪ್ರತಿವಾದಿರ ಮೇಲೆ ಅಸ್ತಿ ಸ್ವಾಧೀನತೆಗೂ ನೇಣ ಬಾಕಿಗೂ ದಾಕ್ಲ ಮಾಡಿದ ಮೇಲ್ಕಂಡ ವ್ಯಾಜ್ಯವು ಪ್ರತಿವಾದಿರಿಗೆ ಅಚ್ಯರ ನೋಟೀಸಿನ ಬಗ್ಗೆ ತಾರೀಕು 13-12-39ಕ್ಕೆ ಇಟ್ಟಿರುವ ಕಾರಣ ಈ ಮೂಲಕ ತಿಳಿಸಲಾಗಿದೆ.

KASARAGOD } N. K. Nambiar.
ತಾ. 1-12-39 } *Advocate for Plaintiff.*

ಈ ವಾರದ ಭವಿಷ್ಯ

ತಾ. 7-12-1939ರಿಂದ - - - - **ತಾ. 14-12-1939**ರ ವರೆಗೆ

ಮೇಷ—ನಮ್ಮ ಅದೃಷ್ಟವೇ ಇಷ್ಟು ಅದನ್ನು ಮಾರಲು ನಮ್ಮಿಂದ ಶಕ್ಯವಲ್ಲವೆಂದು ತಲೆಗೆ ಕೈ ಹಿಡಿದು ಕುಳಿತುಕೊಳ್ಳುವ ಕಾಲವಿದಲ್ಲ. "ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ" ಎಂಬೀ ಶಾಸ್ತ್ರೋಕ್ತಿಯಂತೆ ಆಲಸನಾಗಿರದೆ ಉದ್ಯಮದಲ್ಲಿ ಪ್ರವರ್ತಿಸಿದ ಪುರುಷನನ್ನು ಸಂಪತ್ತು ಹೊಂದಿಯೇ ಹೊಂದುವಳು. ನಿಮ್ಮ ಮನಸ್ಸಿಗೆ ಶಾಂತಿಯಿಲ್ಲದಿರಬಹುದು. ದೇಹಾಲಸ್ಯವೂ ಹೆಚ್ಚಿರಬಹುದು. ಆದರೂ ನೀವು ಕೈಗೊಂಡ ಕಾರ್ಯವು ಸುಗಮವಾಗುವುವು. ಜಯಲಾಭಗಳು ನಿಮ್ಮ ಮನಸ್ಸನ್ನು ತೃಪ್ತಿ ಪಡಿಸಲು ಶಕ್ಯವಾಗುವುವು. ತಾ. 7, 8, 14 ಉತ್ತಮವಾಗಿದೆ.

ವೃಷಭ—ಈ ವಾರದಲ್ಲಿ ನೀವು ವ್ಯವಹಾರ ಭಾಗದಲ್ಲಿ ಆದಷ್ಟು ಮಿತಭಾಷಿಯಾಗಿರುವುದೊಳ್ಳಿತು. ಆದರೂ ವಿಜಾತೀಯರಿಂದ ಕಲಹವು ಅನಿವಾರ್ಯವಾದೀತು. ರಾಜಕೀಯ ಭಾಗದಲ್ಲಿ ಹೆಚ್ಚಿನ ಧನವ್ಯಯವಾಗುವುದು. ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಸಿಕ್ಕಿಯೇ ತೀರುವುದು. ಸ್ತ್ರೀಮೂಲಕವಾಗಿ ನಿಮಗೆ ಧನಲಭಿಸುವ ಯೋಗವಿದೆ. ಆರೋಗ್ಯವು ಸಾಧಾರಣ ಸ್ಥಿತಿಯಲ್ಲಿರುವುದಾದರೂ ಒಂದಲ್ಲೊಂದು ತೆರನಾದ ಚಿಂತೆಯು ನಿಮ್ಮನ್ನು ಬಿಟ್ಟಿರದು. ಕೈಯಲ್ಲಿದತಕ್ಕ ಹಣಕಾಸುಗಳು ಒಂದಲ್ಲೊಂದು ವಿಧದಿಂದ ನಿಮ್ಮ ಕೈಬಿಟ್ಟು ಹೋಗುವವು. ಅಂತೂ ತಾ. 12ರಿಂದ ವಾರಾಂತ್ಯದ ವರೆಗೆ ಸ್ವಲ್ಪ ಜಾಗ್ರತರಾಗಿರಿ.

ಮಿಥುನ—ಗ್ರಹಮಾನವು ನಿಮಗೆ ಬಹ್ವಂಶ ಅನುಕೂಲವಾಗಿರುವುದು. ಉದ್ಯೋಗದಲ್ಲಿ ತೃಪ್ತಿಕರವಾದ ಫಲಸಿಗುವುದು. ಸ್ಥಾನಮಾನಾದಿಗಳನ್ನು ಪಡೆಯುವಿರಿ. ಮಾನಸಿಕ ಚಿಂತೆಗಳು ದೂರವಾಗುವವು. ಪರಕೀಯ ಸ್ತ್ರೀಧನವು ಸಿಗುವ ಸಂಭವವಿದೆ. ದುಡುಕು ಸ್ವಭಾವವನ್ನು ಆದಷ್ಟು ನಿಗ್ರಹಿಸಿರಿ. ಚಿಷ್ಣ್ವ ವಿಕಾರದಿಂದ ದೇಹಪೀಡೆ ನಿಶ್ಶಕ್ತಿಗಳುಂಟಾದಾವು. ಸ್ತ್ರೀಜನತೆಯೊಂದಿಗೆ ಹಿತಮಿತವಾಗಿ ಜಾಗರೂಕತೆಯಿಂದ ನಡೆಸಿರಿ. ಕೋರ್ಟು ವ್ಯವಹಾರಗಳ ಕಾರ್ಯಗಳು ನಿಮಗನುಕೂಲವಾಗಿ ಪರಿಣಮಿಸುವವು. ತಾ. 9ರಿಂದ 13ರ ವರೆಗಿನ ದಿನಗಳು ಅತ್ಯನುಕೂಲವಾಗಿವೆ.

ಕರ್ಕಾಟಕ—ಸರ್ವತ್ರ ನಿರಾಶೆಯ ಚಿಹ್ನೆಗಳೇ ನಿಮಗೆ ಕಂಡುಬರುವವು. ವ್ಯಾಪಾರಿಗಳ ಮತ್ತು ನೌಕರಿಗಳ ಪರಿಸ್ಥಿತಿಯು ಬಹಳ ದಾರುಣವಾಗುವುದು. ಪ್ರತಿಯೊಂದು ಕಾರ್ಯದಲ್ಲೂ ಪರಾಭವವೇ ಪ್ರಾಪ್ತವಾಗುವುದು. ಪ್ರತಿಸ್ಪರ್ಧಿಗಳ ಪೀಡೆಯು ಅತ್ಯಧಿಕವಾಗಿ ಧನಮಾನಗಳಿಗೆ ನಾಶಕಾರಿಯಾಗುವುದು. ಸ್ವೀಯ ದುರ್ನಡತೆಯಿಂದಾಗಿ ಲೋಕಾಪವಾದದಿಂದ ಪಾರಾಗುವಂತಿಲ್ಲವು. ವಿದ್ಯಾರ್ಥಿಗಳಿಗೆ ವಿಶೇಷವಾದ ಹಾನಿತೊಂದರೆಗಳು ಪ್ರಾಪ್ತವಾಗುವವು. ಸಂಸಾರದಲ್ಲಿ ವಿರಕ್ತಿಯುಂಟಾಗುವುದು, ಅಂತಃಗುರುವಿನ ಪೂರ್ಣದೃಷ್ಟಿಯು ನಿಮ್ಮ ರಾಶಿಗಿಲ್ಲವಾದರಿಂದ ಕಷ್ಟಕಾಲದಲ್ಲಿ ಕೈ ಬಿಡನು. ವಾರದಿಯ 5 ದಿನಗಳು ಚೆನ್ನಾಗಿಲ್ಲವು.

ಸಿಂಹ—ಅಷ್ಟೇಶ್ವರ ಸಹಾಯವು ನಿಮಗೆ ಚೆನ್ನಾಗಿರುವುದರಿಂದ ವಿಪಕ್ಷೀಯರನ್ನು ನೀವು ಮರ್ದಿಸಲು ಶಕ್ತರಾಗಿರುವಿರಿ. ಆದರೆ ನಿಮ್ಮ ಉತ್ಪತ್ತಿಯು ಬಹಳ ಕಡಿಮೆಯಾಗಿದ್ದು ಹಲವಾರು ವಿಧದಿಂದ ಖರ್ಚು ಬೆಳೆಯುತ್ತಿರುವುದರಿಂದ ಆರ್ಥಿಕ ದುರವಸ್ಥೆಯು ನಿಮ್ಮನ್ನು ಬಹಳವಾಗಿ ಕಾಡುವುದು. ಆಧಿವ್ಯಾಧಿಗಳು ನಿಮ್ಮನ್ನು ಜೀವನ್ಮೃತರಾಗುವಂತೆ ಮಾಡುವವು. ಧರ್ಮದಲ್ಲಿ ತಾತ್ಸಾರ, ಆಚಾರದಲ್ಲಿ ಅನಾದರ ಇವುಗಳಿಂದ ನೀವು ಕ್ರಿಯಾಭ್ರಷ್ಟರಾಗಿ ವರ್ತಿಸುವಿರಿ. ಗಂಡಹೆಂಡಿರ ಕಲಹ ಕಲಹ ಅನುದಿನವೂ ತಪ್ಪದು. ತಾ. 9ರಿಂದ 13ರ ವರೆಗೆ ಬಹಳ ಕಷ್ಟ.

ಕನ್ಯಾ—ಗ್ರಹರ ಪರಿಸ್ಥಿತಿಯು ನಿಮಗೆ ಬಹಳ ಅನುಕೂಲವಾಗಿರುವುದು. ಸಕಲ ಭಾಗ್ಯದಲ್ಲೂ ನೀವು ಅದ್ವಿತೀಯರಾಗಿರುವಿರಿ. ಆದರೂ ಅಷ್ಟಮದ ಶನಿಕೇತುಗಳು ಸ್ವಲ್ಪಮಟ್ಟಿಗೆ ಕಷ್ಟವನ್ನು ಕೊಡಲಿರುವರಾದರೂ ಅದರ ಪರಿಣಾಮವು ಎಷ್ಟು ಮೇಲೆ ಹೆಚ್ಚಿಗೆ ಆಗುವಂತಿಲ್ಲ. ಶತ್ರುಜನರನ್ನು ಮಿತ್ರರನ್ನಾಗಿ ಮಾಡಿಕೊಳ್ಳುವಿರಿ ನಿರುದ್ಯೋಗ ಸಮಸ್ಯಾಪೀಡಿತರು ಇಂದಿಗ ನಿಶ್ಚಿಂತರಾಗುವರು. ಸಮಾಜದಲ್ಲಿ ಸ್ಥಾನಮಾನಾದಿಗಳನ್ನು ಪಡೆದು ಕೀರ್ತಿಶಾಲಿಗಳಾಗುವಿರಿ. ಗೃಹಸುಖವೂ ಉತ್ತಮತರವಾಗಿರುವುದು. ತಾ. 9-10-11 ಅತ್ಯುತ್ತಮವು.

ತುಲಾ—ನೀವು ಕೈಕೊಂಡ ಉದ್ಯಮದಲ್ಲಿ ಪರಾಭವವುಂಟಾಗುವುದಾದರೂ ನಷ್ಟತ್ತೀಡಾಗಲಾರಿರಿ. ಅನಾರೋಗ್ಯ ಪೀಡಿತರಾದ ನಿಮಗೆ ನೇತ್ರರೋಗವೂ ಬಾಧಿಸಬಹುದು. ಹಣದ ಅಡಚಣೆಯು ಬಹುವಾಗಿ ಪೀಡಿಸುವುದು. ಸಂಸಾರದಲ್ಲಿ ಒಬ್ಬರಲ್ಲೊಬ್ಬರಿಗೆ ಸದಾ ಕಾಹಿಲೆಯಿರುವುದು. ಶತ್ರುಜನರಿಂದ ಕಾರ್ಯವಿಘ್ನಗಳೂ ಅನಿಷ್ಟಗಳೂ ಮೇಲಿಂದ ಮೇಲೆ ಬರುವವು. ಮನಸ್ಸಿಗೆ ಯಾವಾಗಲೂ ಸುಖಶಾಂತಿಗಳು ಸಿಗವು. ಹೆಚ್ಚಿನ ಸಮಯವನ್ನು ಪರ್ಯಟನಾದಿಗಳಲ್ಲಿ ಕಳೆಯುವಿರಿ. ವಾಣಿಜ್ಯದಲ್ಲಿ ಇಷ್ಟಪ್ರಾಪ್ತಿಯಿದೆ. ತಾ. 9, 10, 14 ಈ ದಿನಗಳಲ್ಲಿ ಮಿತ್ರದ್ವೇಷ ಭಯ ಧನಮಾನಗಳ ಹಾನಿಯಧಿಕವಾಗುವುದು.

ವೃಶ್ಚಿಕ—ದುರ್ಜನರ ಸ್ನೇಹದಿಂದಲೂ ಸಜ್ಜನರಲ್ಲಿ ಕಲಹವೇ ಲೇಸು ಎಂಬ ಆರ್ಯೋಕ್ತಿಯನ್ನು ನೀವು ನೆನಪಿಸಲ್ಲಿಡಬೇಕಿದೆ. ಯಾಕೆಂದರೆ ದುರ್ಜನರ ಮೈತ್ರಿಯು ಆರಂಭದಲ್ಲಿ ಅಮೃತಸಮಾನವಾಗಿ ತೋರಿಬಂದರೂ ಅಂತ್ಯದಲ್ಲಿ ವಿಷರೂಪದಿಂದ ಪರಿಣಮಿಸುವುದು. ಇದು ನಿಮ್ಮ ಅನುಭವಕ್ಕೆ ಬರಲಿದೆ. ಸಂಸರ್ಗದೋಷದಿಂದ ದೌರ್ಜನ್ಯ ಸ್ವೈಷ್ಟ್ಯಯಾದಿಗಳು ನಿಮ್ಮಲ್ಲಿ ಹೆಚ್ಚುವವು. ಆದರೂ ನಿಮ್ಮ ಗೃಹಕೃತ್ಯದಲ್ಲಿ ಏನೊಂದೂ ನ್ಯೂನತೆಗಳಿರಲಾರವು. ಆರೋಗ್ಯಭಾಗ್ಯವು ಚೆನ್ನಾಗಿರುವುದು. ಆರ್ಥಿಕ ವಿಚಾರದಲ್ಲೂ ಸಾಕಷ್ಟು ತೃಪ್ತಿಯಿದೆ. ತಾ. 7, 8, 12, 13, ಈ ದಿನಗಳಲ್ಲಿ ಅತಿ ವ್ಯಯ ಉದರರೋಗ ಸಂಭವಿಸಲೂ ಬಹುದು.

ಧನು – ಹಗೆಯ ಜನರಿಂದ ಹಲವಾರು ರೀತಿಯಲ್ಲಿ ನಿಮಗೆ ಅನಿಷ್ಟ ಸಂಭವಿಸಲಿದೆಯಾದರೂ ಅದಕ್ಕೆ ತಕ್ಕ ಪ್ರತೀಕಾರವನ್ನು ನೀವು ಮಾಡಲು ಶಕ್ತರಿರುವಿರಿ. ಆದರೆ ನಿಮ್ಮ ಹಿತಚಿಂತಕ ಮಂಡಲಿಯಲ್ಲೇ ಸೇರಿದ ಕೆಲವರು ವಿಶ್ವಾಸಘಾತುಕ ಮಾಡಿದಲ್ಲಿ ನಿಮ್ಮಿಂದದನ್ನು ನಿವಾರಿಸಿಕೊಳ್ಳಲು ಸಾಧ್ಯವಾಗುವಂತಿಲ್ಲ. ಸ್ವಶಕ್ತಿಯಿಂದ ಖರ್ಚಿಗೆ ಬೇಕಾದಷ್ಟು ದುಡಿಯಲಿರುವಿರಿ. ವಿದ್ಯೋಪಜೀವಿಗಳಿಗೂ ವಿದ್ಯಾರ್ಥಿಗಳಿಗೂ ಪರಿಸ್ಥಿತಿಯು ಕಠಿಣವಾಗುವುದು. ಸೇವಕರೂ ಮಕ್ಕಳೂ ನಿಮ್ಮ ಮಾತನ್ನತಿಕ್ರಮಿಸಿ ಕಷ್ಟಕ್ಕೀಡಾಗುವರು. ತಾ. 9, 10, 14 ಅನಿಷ್ಟಕಾರಿಯಾಗಿವೆ.

ಮಕರ—ಯಾವಾಗಲೂ ನೀವು ವಕ್ರಮಾರ್ಗವನ್ನೇ ಅನುಸರಿಸುತ್ತಿರುವಿರಿ. ಮಾತಿನಲ್ಲೂ ಕ್ರಿಯೆಯಲ್ಲೂ ವಕ್ರವಾಗಿಯೇ ಇರುವಿರಿ. ಇದು ಹೆರವರಿಗಂತೂ ಇರಲಿ ನಿಮ್ಮ ಸಂಸಾರಿಕರಿಗೂ ಬಂಧುಮಿತ್ರರಿಗೂ ಸರಿದೋರದೆ ನಿಮ್ಮಿಂದ ದೂರಾಗಲು ಬಯಸುವರು. ಅಂಗಾಂಗಗಳಲ್ಲಿ ಪೀಡೆಯೂ ಉಂಟಾದೀತು. ಆದರೂ ನೀವು ನಿಶ್ಚಿಂತರಿರುವಿರಿ. ಏಕೆಂದರೆ ಆರ್ಥಿಕ ವಿಚಾರದಲ್ಲಿ ಸುಧಾರಣೆ ಹೊಂದಿರುವಿರಿ. ಯಾವ ಖರ್ಚಿಗೂ ಕೂಡ ಹೆರವರ ಮುಖ ನೋಡಬೇಕಾಗಿಲ್ಲ. ರಾಜಕೀಯ ಕಾರ್ಯಗಳಲ್ಲೂ ವ್ಯಾಪಾರಾದಿ ಉದ್ಯೋಗಗಳಲ್ಲೂ ಜಯ ಲಾಭಗಳು ನಿಶ್ಚಿತವಾಗಿವೆ. 7ರಿಂದ 10, 11, 14 ಈ ದಿನಗಳು ತುಂಬಾ ಅನುಕೂಲಗಳಾಗಿವೆ.

ಕುಂಭ – ನಿಮ್ಮ ಜನ್ಮ ಪತಿಯು ತೃತೀಯದಲ್ಲಿದ್ದು ತದಧಿಪತಿಯು ಜನ್ಮವನ್ನು ಹೊಂದಿರುವುದರಿಂದ, ಇನ್ನುಸ್ಥ ಕುಜನಿಂದ ನಿಮಗಂತಹ ವಿಪತ್ತೇನೂ ಸಂಭವಿಸಲಾರದು. ನವಮದಲ್ಲಿರತಕ್ಕ ರಾಹುವು ಸಂತಾಪಕಾರಿಯಾಗಿರುವನು. ಇತರ ಸರ್ವ ಗ್ರಹರೂ ನಿಮಗನುಕೂಲರಿರುವುದರಿಂದ ಯಾವ ಭಾಗದಲ್ಲೂ ನಿಮಗೆ ಕೊರತೆಯಿರದು. ಮಿತ್ರ ಜನರಿಂದ ಧನಲಾಭ ಇಷ್ಟ ಭೋಜನ ದೊರೆಯುವುದು. ಸಕಲ ಕಾರ್ಯಗಳೂ ಫಲಪ್ರದಗಳಾಗುವವು. ಸರ್ವತ್ರ ವಿಜಯವೇ ದೊರಕುವುದು. ಆರೋಗ್ಯವು ಉತ್ತಮ ಸ್ಥಿತಿಗೆ ಬರಲಿರುವುದು ಬಲಿಷ್ಠರಾದ ಶತ್ರುಗಳನ್ನೂ ಕೂಡ ನಿಗ್ರಹಿಸುವಿರಿ ತಾ 9ರಿಂದ 13ರ ವರೆಗೆ ಅತ್ಯುತ್ತಮವಿದೆ.

ಮೀನ—"ಅಂತರಂ ನೈವ ಪಶ್ಯಾಮಿ ನಿರ್ಧನಸ್ಯ ಮೃತಸ್ಯ ಚ" ಎಂದು ಹಿರಿಯರು ಹೇಳಿದಂತೆ ಕೈಯಲ್ಲಿ ಕಾಸಿಲ್ಲದವನಿಗೂ ಶವಕ್ಕೂ ವಿಶೇಷ ಅಂತರವಿಲ್ಲವು. ಶವವನ್ನು ನೋಡಿದೊಡನೆ ಎಲ್ಲರೂ ದೂರದಿಂದಲೇ ಸರಿವರೋ ಅಂತೆಯೇ ಧನಹೀನನನ್ನೂ ಕಾಣುವರು. ಸದ್ಯದ ಗ್ರಹಮಾನ ರೀತ್ಯಾ ನಿಮಗೆ ಸರ್ವವಿಧದಿಂದಲೂ ಅನಿಷ್ಟಗಳೇ ಮುಂದಾಗಿ ಬರುತ್ತಿವೆ. ಸರ್ವಕ್ಕೂ ಮೂಲವಾದ ಧನದ ಅಭಾವದಿಂದ ಬಹಳ ಕಷ್ಟವನ್ನನುಭವಿಸುವಿರಿ. ಮರ್ಯಾದೆಯಿಂದ ದಿನಗಳೆಯಲು ಶಕ್ಯವಾಗುವಂತಿಲ್ಲ. ಜನ್ಮಸ್ಥ ಗುರುವು ಜಾತ್ಯಾ ಅನಿಷ್ಟಕಾರಿಯಾಗಿ ಕಂಡರೂ ಅಂತರಂಗವಾಗಿ ನಿಮ್ಮ ಮೇಲವನ ಕೃಪೆಯಿರುವುದು. ತಾ. 12, 13, 14ರಲ್ಲಿ ಕಿಂಚಿತ್ಸುಖ ದೊರೆತೀತು.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕ ಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ವಿಶ್ವವ್ಯಾಲ್ಯವಾನ್ ದ್ರವ್ಯ ಯೂ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಕೆಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುಚ್ಚುವ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಸಡಿಸುವದು, ಹಾಗೂ ಆಲಸ್ಯ ಯಾ ವಾಯುಗಳೆಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.

5ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ) ಗಳನ್ನು ಕಳುಹಿಸುತ್ತದೆ.

ಸ್ವದೇಶೀ ಔಷಧಿ ಭಂಡಾರ,

(ರಿಜಿಸ್ಟರ್ಡ್) ಕುಂಜಾಲು.

ಪೋಸ್ಟ್—ಬ್ರಹ್ಮಾವರ, ದ. ಕ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಪತ್ತವು ಕೆಲವೇ ನಿಮಿಷಗಳಲ್ಲಿ ಟೆಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ರಿಯಾಯಿತಿಗಳ ಪ್ರಯೋಜನ ಹೊಂದಬಹುದು. ಕ್ರಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ತಪ್ಪಾಗಿ ಹೋಗಿದ್ದರೂ ಕಡವಾಗಲಿಲ್ಲ. ಲೆಕ್ಕ ಹಾಜರ ಮಾಡುವ 15 ದಿನಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,

ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,

ಕುಂದಾಪುರ ಪೋಸ್ಟ್.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವುದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವಮ ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-6-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ವೇಳೆ ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೋಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

DAIMONDS! DAIMONDS!

K. R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟ್ರಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು ಹಂಪನಕಟ್ಟೆ, ಮಂಗಳೂರು.

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, *President & Manager,*
ಯಂ. ಆರ್. ಪೂಂಜ, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ1ಕ್ಕೆ 12ಆಣೆ, ಟ ಖ.ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- **ನವಭಾರತ ಬುಕ್‌ಡಿಪೋ, ಉಡುಪಿ**

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:** ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:— ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

ಮಿತ ದರದಲ್ಲೀ ಮಾರಾಟ.



ಹೊಸ ಯೋಜನೆಗಳಿಗೆ ಆಸ್ಪದವೀಯುವ ಸಲುವಾಗಿ ಗಟ್ಟಿಯಾಗಿ ಯಾ ಹೆಚ್ಚು ಕಾಲ ಬಾಳಿಕೆ ಬರುವಂತಹ ಸ್ವಿಸ್ ತಯಾರಿಯ ಉರುಟು ಅಥವಾ ಚಚ್ಚೌಕ ರಿಸ್ಟ್‌ವಾಚುಗಳು.

ನಂಬ್ರ 401 ಕ್ರೋಮಿಯಮ್ ರೂ. 3-12-0, 402 ಗೋಲ್ಡನ್ ಕೇಸು ರೂ. 4-12-0, 517 ಕ್ರೋಮಿಯಮ್ ಕೇಸು 6-8-0, 518 ಗೋಲ್ಡನ್ ಕೇಸು 8-0-0, ಜುವೆಲ್ಸ್ ಚಿಲಿಯುಳ್ಳ, ನಂಬ್ರ 409 ಕ್ರೋಮಿಯಮ್ 9-8-0, ನಂಬ್ರ 410 ಗೋಲ್ಡನ್ ಕೇಸು 10-8-0, 411 ರೋಲ್ಡ್‌ಗೋಲ್ಡ್ 15-0-0.

ಪ್ಯಾಕಿಂಗ್ ಮತ್ತು ಪೋಸ್ಟೇಜು ಬಗ್ಗೆ 0-9-0 ಅಧಿಕ.
(ಪತ್ರವ್ಯವಹಾರ ಇಂಗ್ಲಿಷಿನಲ್ಲಿ)

ಬಾಪಲಾಲ್ ಎಂಡ್ ಕೊ, Bapalal & Co,
ಅಬ್ದುಲ್ ರೆಹಮಾನ್ ಸ್ಟ್ರೀಟ್, 101 Abdul Rehman St.
ಬೊಂಬಾಯಿ 3. BOMBAY 3.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು,



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಆಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪೇಡಿಗೆಳ ಬೀಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಸುಲಭ ದರಗಳಲ್ಲಿ ಮಾಡಿಕೊಡಲ್ಪಡುವವು.

Crown Rubber Stemp Co., Balmat Road, MANGALORE.
Includ by the Mysore Govt. Stores, Purchase Committee in the list of approvo Firms

---

SALE! SALE! SALE!

ಮುಂಚಿನ ಕ್ರಯ ರೂ. 10,
ಈಗಿನ ಕ್ರಯ ರೂ. 3-12-0

Swiss Lever Wrist Watch

ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನವನವೀನ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವುದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವುದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಜವಾನ್ನರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತರಿಸಲಿಕ್ಕೆ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 Beat SOWCARPET G. T. MADRAS.
ರಾಯಲ್ ಕಂಪೆನಿ, ೧೯ ಬೀಟ್ ಸಾಹುಕಾರ ಪೇಟೆ, ಜಿ. ಟಿ. ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇತ್ತೀಚಿನ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾತ ಮತ್ತು ದಾಡಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್ ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದ ನಾನಾವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಮಂಜೆ ನ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
— — — ಸುಖಶಾಂತಿಗಳ ಮೂಲಕಾರಣವಾದ — — —

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ.



ವಾನಿಂಗ್ ಟಿಲ್ಲಿ ತೈಲವು ಮಾನವನ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯು ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ—ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸುಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯೆ ತರಿಸಿಕೊಳ್ಳಿರಿ.

'ಹವನನ್' ಹೆಮೊರ್ರೋಯ್ಡ್ — ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹಂದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹವನನ್" ಎಂಬ ಹೆಮೋರ್ರೋಯ್ಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲತ್ರ ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ.ಪಿ. ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವಣತ್ವವುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನವಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವವು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ.

ಹಿಂದುಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B. & C. I. Ry. BOMBAY PRESIDENCY.

ದಯವಿಟ್ಟು ವಿಳಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S. S. KARANTH AT THE THULUNAD PRESS, UDIPI. AND PUBLISHED BY K. H. SHETTY AT "NAVAYUGA OFFICE, UDIPI, S. INDIA.

...tered No. M 3618 14-12-1939

ನವಯುಗ

NAVAYUGA

THE PAPER OF THE PEOPLE

In Karnatak which includes progressive Mysore, the NAVAYUGA is the Paper of the PEOPLE.

It is read by the Commercial Magnate and the professional man, the farmer and the artisan. It is the paper that has won its way to their hearts THE PAPER THAT GOES INTO THEIR HOMES.

The NAVAYUGA not only commands a dense circulation in and around the great industrial centres, it penetrates also into the most remote regions of the Province.

Space wisely used in the

NAVAYUGA ANNUAL NUMBER 1940

is obviously the most important factor in the success of a Karnataka advertising campaign.

RATES OF ADVERTISEMENTS:

1 PAGE	....	Rs. 25/-
½ PAGE	....	Rs. 15/-
¼ PAGE	....	Rs. 8/-
⅛ PAGE	....	Rs. 5/-

Send your advt. immediately.

Advt. Manager,

NAVAYUGA

UDIPI, S. India.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರ ವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ

ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ ಕರುಣಾಕರ ಹೆಗ್ಡೆ ಆರ್ಗನೈಜರ್
ಕೆ ಆರ್ ಕೆ ಕಿಟ್ ಬಿಲ್ಡಿಂಗ್,
ಮಿಶ್ಯನ್‌ಹೈಸ್ಕೂಲ್ ರೋಡು ಮಂಗಳೂರು

ಅಥವಾ

ಎಚ್. ವೆಂಕಟರಾಮಯ್ಯ
ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 920)

Reserves Rs. 2,02,800/-. Paid up Capital: Rs 1,82,100/-.

PRINCIPAL OFFICE COURT ROAD, UDIPI.

OTHER OFFICES.

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively, Interest being payable on the 1st January & 1st July of every year.

For further particulars please address or call at any of our offices.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್

ಫೋನ್ 406

ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು
ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು ಜನಮನರಂಜನೆಯ ಆ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance*
CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

THE ASIAN ASSURANCE COMPANY, LTD.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,955	24,50,234
1935	2,52,08,418	18 39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B Narayan Shetty, Organizer, Brahmavar
„ **M Shivarama Rao,** Organizer, Puttur.

Or

Sri J. A. PUTRAN,
Branch Manager, MANGALORE.

ESTD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA

ನವಯುಗ

ಚಂದಾ ವಿವರ:
1 ವರ್ಷಕ್ಕೆ – ರೂ. 3—4—0
6 ತಿಂಗಳಿಗೆ – ರೂ. 1-12-0
ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೫

ಉಡುಪಿ, ಗುರುವಾರ, ೧೪—೧೨—೧೯೩೯.
UDIPI, THURSDAY, 14-12-1939.

VOL. 19
No. 15

ಹೊಸ ವರ್ಷಾರಂಭದಲ್ಲಿ ಕಾಯಿದೆ ಭಂಗ

ಕಾಬೂಲಲ್ಲಿ ಜರ್ಮನ್ ಏಜೆಂಟರ ಸೂತ್ರಚಾಲನೆ

ಹಿಂದೂದೇಶದ ಕುರಿತು ಹಲವು ಗ್ರಂಥಗಳನ್ನು ಬರೆದು ಪ್ರಖ್ಯಾತರಾದ ಮಿ. ಎಡ್ವರ್ಡ್ ಥೋಮ್ಸನರು ಇತ್ತಲಾಗಿ ಹಿಂದೂ ದೇಶಕ್ಕೆ ಬಂದು, ಗಾಂಧಿಜಿ, ಪಂಡಿತ ಜವಾಹರಲಾಲರೇ ಮೊದಲಾದವರನ್ನೂ, ವೈಸರಾಯರನ್ನೂ ಕಂಡು ಮಾತಾಡಿದ್ದರಷ್ಟೆ. ಅವರು ಲಂಡನಿನಲ್ಲಿ, ಪಾರ್ಲಿಮೆಂಟಿನ ಎಲ್ಲಾ ಪಕ್ಷಗಳವರ ಸಭೆಯೊಂದರಲ್ಲಿ ಭಾಷಣವಿತ್ತು, ಕಾಂಗ್ರೆಸಿನ ಕೇಳಿಕೆಯನ್ನು ತೃಪ್ತಿಪಡಿಸದಿದ್ದಲ್ಲಿ ಅದು ಹೊಸ ವರ್ಷಾರಂಭದಲ್ಲಿ ಕಾಯಿದೆಭಂಗ ಚಳವಳ ಹೂಡಲಿರುವುದು. ಕಾಬೂಲಿನಲ್ಲಿ ಜರ್ಮನ್ ಏಜೆಂಟರು ತುಂಬಾ ಇದ್ದಾರೆ. ವಾಯುವ್ಯ ಗಡಿನಾಡಿನ ಗಲಾಟೆಗೂ ಅವರಿಗೂ ಸಂಬಂಧವಿರಬಹುದು. ಅದನ್ನು ತಡೆಗಟ್ಟಲು ಏನಾದರೂ ಶೀಘ್ರ ವ್ಯವಸ್ಥೆ ಮಾಡದಿದ್ದಲ್ಲಿ ಪರಿಸ್ಥಿತಿಯು ಅತ್ಯಂತ ವಿಷಮವಾಗುವದೆಂದು ಎಚ್ಚರಿಸಿರುವರು. ವಾಯುವ್ಯ ಗಡಿನಾಡಿನ ಗಲಾಟೆಯು ದಿನೇ ದಿನೇ ಹೆಚ್ಚುತ್ತಿದೆ. ಪ್ರತಿ ದಿನವೂ ಜನರನ್ನು ಕದ್ದೊಯ್ಯುವ ಅತ್ಯಾಚಾರವು ಅಪ್ರತಿಹತವಾಗಿ ನಡೆಯುತ್ತಿದೆ.

ಸಾದುಲ್ಲಾ ಮಂತ್ರಿಮಂಡಲದಲ್ಲಿ ಒಡಕು

ಸರ್. ಸಾದುಲ್ಲರ ಹೊಸ ಮಂತ್ರಿಮಂಡಲದಲ್ಲಿ ಇಷ್ಟರಲ್ಲೇ ಒಡಕಿನ ಚಿಹ್ನೆಗಳು ತೋರಬಂದಿವೆ. ನ್ಯಾಯಖಾತೆಯ ಮಂತ್ರಿಗಳಾದ ಶ್ರೀ। ರೋಹಿಣೀ ಕುಮಾರ ಚೌಧುರಿಯವರು, ಹೊಸ ಮಂತ್ರಿಮಂಡಲವು ಮುಸ್ಲಿಮ್ ಲೀಗ್ ಮಂತ್ರಿಮಂಡಲವಲ್ಲೆಂದು ಪ್ರಕಟಗೊಳಿಸಬೇಕೆಂದು ಸರ್. ಸಾದುಲ್ಲರನ್ನು ಒತ್ತಾಯಪಡಿಸುತ್ತಿರುವರೆಂದೂ, ಹಾಗೆ ಪ್ರಕಟಗೊಳಿಸದಿದ್ದ ಪಕ್ಷದಲ್ಲಿ ಶ್ರೀ. ರೋಹಿಣೀ ಕುಮಾರ ಚೌಧುರಿಯವರು ಇತರ ಹಿಂದೂ ಮಂತ್ರಿಗಳೊಂದಿಗೆ ರಾಜಿನಾಮೆ ಕೊಡುವರೆಂದೂ ತಿಳಿದು ಬರುತ್ತದೆ. ತನ್ನ ಮಂತ್ರಿಮಂಡಲವು ಎಲ್ಲಾ ಪಕ್ಷಗಳಿಂದೊಡಗೂಡಿದ್ದೆಂದು ಸರ್. ಸಾದುಲ್ಲರು ಶ್ರೀ। ಚೌಧುರಿಯವರಿಗೆ ಆಶ್ವಾಸನೆ ಇತ್ತಿರುವರಾದರೂ, ಅದರಿಂದ ಅವರು ತೃಪ್ತಿಗೊಂಡಿಲ್ಲ. ಸರ್. ಸಾದುಲ್ಲರಿಗೂ ಮುಸ್ಲಿಮ್ ಲೀಗಿಗೂ ನಿಕಟಸಂಬಂಧವಿರುವುದರಿಂದ ಆ ಸಂಬಂಧವಾಗಿ ಜಾಹೀರಾಗಿ ಹೇಳಿಕೆ ಹೊರಡಿಸಬೇಕೆಂದು ಶ್ರೀ। ಚೌಧುರಿಯವರ ಕೇಳಿಕೆ. ಆ ಕುರಿತು ಬರುವ ಅಸ್ಸಾಮ್ ಎಸೆಂಬ್ಲಿಯಲ್ಲಿ ಪ್ರಶ್ನೆ ಕೇಳಲ್ಪಡುವುದು.

ಸಮಾಚಾರ ಸಂಗ್ರಹ

ಹಿಂದೂದೇಶದ ಮಹಾಯೋಗಿಗಳು.

ವಿಶ್ವಭಾರತಿಯ ಚೈನಾಭವನದ ಡೈರೆಕ್ಟರರಾದ ಪ್ರೊಫೆಸರ್ ಟಾನ್ ಯುನ್ ಶಾನರು, ಪಾಂಡಿಚೇರಿಯ ಮಹರ್ಷಿ ಅರವಿಂದಾಶ್ರಮವನ್ನು ಕಂಡು ಬಹಳ ಆನಂದಗೊಂಡಿರುವರು. "ಪಾಂಡಿಚೇರಿಯನ್ನು ನಾನು ಬಿಟ್ಟು ಬರುವಾಗ ನನ್ನಲ್ಲುಂಟಾದ ಭಾವನೆಗಳು ವಿವರಣಾತೀತವಾಗಿವೆ. ಮಾನವ ಕೋಟಿಯ ಆಂತರಿಕ ಪುನರುಜ್ಜೀವನಕ್ಕಾಗಿ ಅರವಿಂದರು ಮಾಡುತ್ತಿರುವ ತಪಶ್ಚರ್ಯೆಯು, ಮಾನವನ ಆಧ್ಯಾತ್ಮಿಕ ಸಾಧನೆಯ ಇತಿಹಾಸದಲ್ಲೇ ಅಪೂರ್ವವಾದುದು. ಹಿಂದೂದೇಶದ ಈ ಮಹಾಯೋಗಿಯ ಸಂದರ್ಶನ ಮಾಡಿ ವಂದನಾರ್ಪಿಸುವ ಸುಯೋಗವು ನನಗೆ ದೊರೆತುದರಿಂದ ಬಹಳ ಸಂತೋಷಗೊಂಡಿರುವೆನು. ಅರವಿಂದರ ಜೀವನೋದ್ದೇಶವು ನೆರವೇರುವ ತನಕ ಅವರು ಮಾನವ ಕೋಟಿಯನ್ನು ಪಾವನಗೊಳಿಸುವ ತನ್ನ ಉಜ್ವಲ ವ್ಯಕ್ತಿತ್ವದ ಪ್ರಕಾಶವನ್ನು ಹೆಚ್ಚೆಚ್ಚಾಗಿ ಬೀರುತ್ತಿರಲೆಂದು ನನ್ನ ಆಶೆ ಮತ್ತು ಪ್ರಾರ್ಥನೆ. ಅರವಿಂದರ ಸಂದೇಶದ ಉದಾತ್ತ ತತ್ವದ ಕುರಿತು ಕೂಡಾ ಮಾನವ ಕೋಟಿಯು ಜಾಗ್ರತವಾಗಿ ಉದ್ಧಾರದ ಹಾದಿ ಹಿಡಿಯುವುದೆಂದು ಕೂಡಾ ನನ್ನ ಆಶೆ" ಎಂದು ಪ್ರೊಫೆಸರ್ ಟಾನರು ಕಲ್ಕತ್ತದಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆಂದಿರುವರು.

ಶ್ರೀ ಕೃಷ್ಣ ಮೆನನರ ಸ್ತುತ್ಯ ಕಾರ್ಯ

ಇಂಗ್ಲೆಂಡಿನಲ್ಲಿ ಹಿಂದೂದೇಶದ ಕುರಿತು ಪ್ರಚಾರ ಮಾಡುತ್ತಿರುವ ಇಂಡಿಯಾ ಲೀಗಿನ ಕಾರ್ಯದರ್ಶಿಗಳಾದ 'ಶ್ರೀ ಕೃಷ್ಣ ಮೆನನರು, ಹಿಂದೂದೇಶದ ಈಗಿನ ಪರಿಸ್ಥಿತಿಯ ಕುರಿತು ಬ್ರಿಟಿಷ್ ಜನತೆಯಲ್ಲಿ ಎಡೆಬಿಡದೆ ಪ್ರಚಾರ ಕಾರ್ಯ ನಡಿಸುತ್ತಿರುವರು. ಇತ್ತಲಾಗಿ ಅವರು ಗ್ಲಾಸ್ಗೋ, ದಂಡಿ, ಎಡಿನ್‌ಬರೋ ಮತ್ತು ಸೈಂಟ್ ಆಂಡ್ರೂಸ್ ಪಟ್ಟಣಗಳಲ್ಲಿ ಭಾಷಣಗಳನ್ನಿತ್ತು ಹಿಂದೀ ಪ್ರಶ್ನೆಯನ್ನು ವಿವರಿಸಿ ಲಂಡನಿಗೆ ಹಿಂತಿರುಗಿರುವರು. ಬರುವ ವಸಂತ ಋತುವಿನಲ್ಲಿ ಲಂಡನಿನಲ್ಲಿ ಹಿಂದೀ ಸ್ವಾತಂತ್ರ್ಯ ಪ್ರಶ್ನೆಯನ್ನು ಸಮರ್ಥಿಸಲು ದೊಡ್ಡ ಪರಿಷತ್ತೊಂದು ಜರಗಲಿರುವುದು.

ಉದಯಶಂಕರರ ಉದಾತ್ತ ಉದ್ದೇಶ

ಹಿಂದೀ ನೃತ್ಯಕಲೆಯನ್ನು ಪುನರುಜ್ಜೀವಿಸಿ ಆ ಮೂಲಕ ಲೋಕಕ್ಕೊಂದು ಹೊಸ ಮಾದರಿಯನ್ನು ಹಾಕಿಕೊಡುವ ಉದಾತ್ತ ಉದ್ದೇಶದಿಂದ ಲೋಕಪ್ರಖ್ಯಾತ ಹಿಂದೀ ನೃತ್ಯಕಲಾ ಪಟುವಾದ ಶ್ರೀ. ಉದಯಶಂಕರರು ಹಿಮಾಲಯದ ತಪ್ಪಲಿನ ಅಲ್ಮೋರದಲ್ಲೊಂದು ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕಾಗಿ ಹಣಸಂಗ್ರಹಿಸಲು ತನ್ನ ತಂಗಡದ ನೃತ್ಯ ಪ್ರದರ್ಶನ ನಡಿಸುತ್ತಾ ಹಿಂದೂದೇಶದಲ್ಲೆಲ್ಲಾ ಸಂಚರಿಸುತ್ತಿರುವರು. ಕಳೆದ ವಾರ ಅವರು ಮದ್ರಾಸಿಗೆ ಬಂದು ಪ್ರದರ್ಶನಗಳನ್ನಿತ್ತಿರುವರು. ಹಿಂದೀ ಸಂಸ್ಕೃತಿ ಕೇಂದ್ರ (India Culture Centre)ವೆಂದು ಈ ಹೊಸ ಸಂಸ್ಥೆಯ ಹೆಸರು. ಇದು 1940ನೇ ಇಸ್ವಿ ಮಾರ್ಚಿ ತಿಂಗಳಲ್ಲಿ ಆರಂಭವಾಗುವುದು. ಆರಂಭದಲ್ಲಿ ಯಾವ ತರದ ಜಾತಿ ಮತ ಮತ್ತು ಲಿಂಗಭೇದವಿಲ್ಲದೆ 35 ವಿದ್ಯಾರ್ಥಿಗಳನ್ನು ಸೇರಿಸಿಕೊಂಡು 5 ವರ್ಷ ತರಬೇತಿ ಕೊಡಲಾಗುವುದು. ಈ ಸಂಸ್ಥೆಗೆ ಸೇರುವ ವಿದ್ಯಾರ್ಥಿಗಳಿಗೆ ಹಿಂದಿ ಅಥವಾ ಇಂಗ್ಲಿಷ್ ಗೊತ್ತಿರಬೇಕು. ಜಾನ್ಯಕ್ಕೆ ಪ್ರಥಮವಾಗಿ ಲಕ್ಷ್ಯಕೊಡಲಾಗುವುದು. ಮಲಬಾರಿನ ಕಥಕ್ಕಳಿ ನರ್ತನ ತಜ್ಞರಾದ ಶ್ರೀ ಗುರು ಶಂಕರನ್ ನಂಬೂದರಿ ಮತ್ತು ಮೈಹಾರಿನ ಸಂಗೀತ ಕಲಾಕೋವಿದ ಉಸ್ತಾದ್ ಅಲ್ಲಾವುದ್ದೀನ್ ಖಾನರು ಈ ಸಂಸ್ಥೆಯ ಶಿಕ್ಷಕರಾಗಿರುವರು. ರಾಷ್ಟ್ರೀಯ ಸೇವೆ ಮತ್ತು ಕಲಾಪ್ರೇಮದ ದೃಷ್ಟಿಯುಳ್ಳ ವಿದ್ಯಾರ್ಥಿಗಳೇ ಶ್ರೀ ಉದಯಶಂಕರರಿಗೆ ಬೇಕಾಗಿದ್ದಾರೆ. ಅವರು ಒಬ್ಬ ರಾಷ್ಟ್ರಾಭಿಮಾನಿಯಿದ್ದು, 'ಜೀವನ ಸ್ಪಂದನ'ವೆಂಬ ಹೊಸ ನಾಟ್ಯವನ್ನವರು ಪಂಡಿತ ಜವಾಹರಲಾಲರ ಮತ್ತು ಗಾಂಧಿಜಿಯವರ ಭಾಷಣಗಳ ಸಾರವನ್ನು ಹೀರಿ ರಚಿಸುತ್ತಾರೆ. ದಕ್ಷಿಣ ಹಿಂದುಸ್ಥಾನದ ದೇವದಾಸಿ ಪದ್ಧತಿಯನ್ನು ನಿಷೇಧಿಸುವುದಕ್ಕೆ ಉದಯಶಂಕರರು

ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.

ಎಂ. ಸುಂದರರಾಮ ಶೆಟ್ಟಿ,	ಅ	ಕೆ. ರಾಮಮೂರ್ತಿ, ಎಂ. ಎ.,
ಬ್ರಾಂಚ್ ಮೆನೇಜರ್,	ಥ	ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟೆ—ಮಂಗಳೂರು.	ವಾ	160 ಮೌಂಟ್‌ರೋಡ್, ಮದ್ರಾಸು.

ವಿರೋಧವಿದ್ದಾರೆ. ಅದನ್ನು ಅಳಿಯಗೊಡದೆ ಸರಿಯಾದ ರೀತಿಯಲ್ಲಿ ಪುನರುಜ್ಜೀವಿಸಬೇಕೆಂದವರ ಅಭಿಮತ.

ಯೆಹೂದ್ಯರ ಹೊಸ ನಿವಾಸ

ಪೋಲೆಂಡಿನ ಲುಬ್ಲಿನ್ ಪಟ್ಟಣದ ದಕ್ಷಿಣ ಮತ್ತು ಆಗ್ನೇಯದಲ್ಲಿ, ಬಗ್, ವಿಸ್ತ್ಯುಲ ಮತ್ತು ಸಾನ್ ನದಿಗಳಿಂದ ಆವರಿತವಾಗಿರುವ 4600 ಚಚ್ಚೌಕ ಮೈಲು ಪ್ರದೇಶದಲ್ಲಿ 15ಮಿಲ್ಯ ಯೆಹೂದ್ಯರು ಹೋಗಿ ವಾಸಿಸುವಂತೆ ಜರ್ಮನಿಯು ಹೊಸತಾದ ಯೆಹೂದ್ಯ ನಿವಾಸವೊಂದನ್ನೇರ್ಪಡಿಸಿರುವುದು. ಇಲ್ಲಿಗೆ ಸಹ ಪ್ರಗಟ್ಟೆಯಲ್ಲಿ ಯೆಹೂದ್ಯರು ಜರ್ಮನಿಯಿಂದ ಅತ್ಯವಸರದಿಂದ ಕಳುಹಿಸಲ್ಪಡುತ್ತಿರುವರು. ಪೋಲೆಂಡಿನ ಯೆಹೂದ್ಯರು ಕೂಡಾ ಈ ಸ್ಥಳಕ್ಕೇನೇ ಕಳುಹಿಸಲ್ಪಡುತ್ತಿರುವರು. ಪೋಲೆಂಡಿನಲ್ಲಿ ಸಂಪೂರ್ಣ ಪೋಲರು ವಾಸಿಸುವ ಪ್ರದೇಶವನ್ನು ಆದಷ್ಟು ಕಡಿಮೆಮಾಡುವುದೇ ಜರ್ಮನಿಯ ಹಂಚಿಕೆ.

ಜರ್ಮನಿಯ ಮೌನಕ್ಕೆ ಕಾರಣವೇನು?

ಜರ್ಮನಿಯು ಬಾಲ್ಟಿಕ್ ರಾಜ್ಯಗಳನ್ನು ರಷ್ಯಕ್ಕೆ ಬಿಟ್ಟುಕೊಟ್ಟುದಾಯಿತು. ಯಾವ ರಾಜ್ಯದ ಸ್ವಾತಂತ್ರ್ಯಕ್ಕಾಗಿ ಮೊದಲು ಜರ್ಮನರು ಹೋರಾಡಿದ್ದರೋ ಅದೇ ಫಿನ್ಲೆಂಡಿನ ಮೇಲೆ ರಷ್ಯವು ಧಾಳಿ ನಡೆಸಿರುವಾಗಲೂ ಅದು ಸುಮ್ಮನಿದೆ. ಫೀಲ್ಡ್ ಮಾರ್ಶಲ್ ಗೋರಿಂಗರೇ ಮೊದಲಾದ ಪ್ರಾಮುಖ್ಯ ಅಧಿಕಾರಿಗಳು ರಷ್ಯದ ಫಿನ್ಲೆಂಡಿನ ಧಾಳಿಯನ್ನು ನಿಷೇಧಿಸಿ ಫಿನ್ಲೆಂಡಿನ ಸಹಾಯಕ್ಕೆ ಹೋಗಿ ಕಾದಾಡಲು ಜರ್ಮನ್ ತರುಣರು ಮುಂದೆ ಬಂದಿರುವರಾದರೂ ಜರ್ಮನ್ ಸರಕಾರವು ಮೌನಧಾರಣೆ ಮಾಡಿರುವುದು. ಇದರ ಅಂತರ್ಯವೆಂದರೆ ಜರ್ಮನಿಗೆ ಈಗ ಬೇಕಾದುದು ರಾಜ್ಯವಲ್ಲ, ಹಣ. ಆದು ಪೂರ್ವ ಯುರೋಪನ್ನು ರಷ್ಯಕ್ಕೆ ಬಿಟ್ಟುಕೊಟ್ಟ ಪಕ್ಷದಲ್ಲಿ ರಷ್ಯವು ಅದಕ್ಕೆ ಸಾವಿರ ಮಿಲ್ಯ ಚಿನ್ನದ ಮಾರ್ಕ್ಸ್‌ಗಳನ್ನು ಕೊಡಲೊಪ್ಪಿರುವುದೆಂದು ನಂಬಲಾಗಿದೆ.

ರಷ್ಯದ ಪ್ರಚಂಡ ಧಾಳಿ

ರಷ್ಯದ 16ದಳ ಸೇನೆ, 1600ವಿಮಾನ ಮತ್ತು ಹಲವು ಟಾಂಕಿ ಮತ್ತು ಇತರ ಯಾಂತ್ರಿಕೋಪಕರಣ ದಳಗಳನ್ನು ಸೋವಿಯೆಟ್ ಸೇನೆಯ ಮುಖ್ಯ ಸೇನಾನಾಯಕರಾದ ಮಾರ್ಶಲ್ ವರೊಶಿಲೊವರವರೇ ನಡೆಸಿರುವರು. ಫಿನ್ಲೆಂಡಿನಮೇಲೆಮಂಗೋಲಿಯದಿಂದ ಕೂಡಾ ಸೇನೆಯು ತರಿಸಲ್ಪಟ್ಟಿರುವುದೆಂದು ತಿಳಿದುಬಂದಿದೆ. ಉತ್ತರದಲ್ಲಿ ಮುರ್ಮಾಂಸ್ಕಿನಿಂದ, ದಕ್ಷಿಣದಲ್ಲಿ ಕರೇಲಿಯ ಭೂಕಂಠದಿಂದ ಮತ್ತು ಪಶ್ಚಿಮದಲ್ಲಿ ಫಿನ್ಲೆಂಡ್ ಕೊಲ್ಲಿಯಿಂದ ರಷ್ಯದ ನೆಲ ಜಲ ಮತ್ತು ಆಕಾಶಪಡೆಯು ಫಿನ್ಲೆಂಡಿನ ಮೇಲೇರಿಹೋಗಿದೆ. ಆದರೆ 3ಮಿಲ್ಯ ಜನಸಂಖ್ಯೆಯುಳ್ಳ ಚಿಕ್ಕ ಫಿನ್ಲೆಂಡು 180ಮಿಲ್ಯ ಜನಸಂಖ್ಯೆಯ ಅತಿ ಪ್ರಬಲ ವೈರಿ ರಷ್ಯವನ್ನು ಈ ವರೆಗೆ ಆಶ್ಚರ್ಯಕರ ಧೈರ್ಯ ಮತ್ತು ಸ್ಥೈರ್ಯದಿಂದ ತಡೆಗಟ್ಟಿರುವದು. ವಾತಾವರಣವು ದಟ್ಟವಾದ ಮಂಜುಕವಿದು ಹೋಗಿರುವುದರಿಂದ ರಷ್ಯಕ್ಕೆ ಪ್ರಬಲ ವಿಮಾನಧಾಳಿ ನಡೆಸಲು ಬಹಳ ತೊಂದರೆಯಾಗಿದೆ. 1500 ಮೈಲುಗಳವರೆಗಣ ಸಮುದ್ರ ಕರಾವಳಿಯುಳ್ಳ ಫಿನ್ಲೆಂಡಿನ ಮೇಲೆ ಜಯಶೀಲ ನೌಕಾ ಮುತ್ತಿಗೆಯು ಅಸಾಧ್ಯವಾಗಿದೆ. ನದಿ, ಸರೋವರಗಳೂ ಕೆಲವು ಕಡೆ ನೆಲವೂ ಕೂಡಾ ಹಿಮಾವರಿತವಾಗಿರುವುದರಿಂದ ಮತ್ತು ರಸ್ತೆಗಳೇನೂ ಇಲ್ಲದೆ ದಟ್ಟ ಕಾಡು ಗುಡ್ಡಗಳೇ ಹೆಚ್ಚಾಗಿರುವುದರಿಂದ ರಷ್ಯದ ಯಾಂತ್ರಿಕ ಮತ್ತು ನೆಲಸೇನೆಯು ಭರದಿಂದ ಮುಂದೊತ್ತಲು ತೊಡಕಾಗಿದೆ. ಆದುದರಿಂದ 10ದಿನಗಳ ಯುದ್ಧದಲ್ಲಿ ಫಿನ್ನರೇ ಜಯಶೀಲರಾಗಿರುವರೆನ್ನಬಹುದು.

ಜರ್ಮನಿಯ ಕುರಿತು ಭವಿಷ್ಯ

ಹಿಟ್ಲರರ ಪತನದ ಭವಿಷ್ಯವನ್ನೊಳಗೊಂಡ ಪುರಾತನ ಪದ್ಯವೊಂದು ಪಶ್ಚಿಮ ಜರ್ಮನಿಯಲ್ಲಿ ಪ್ರಚಾರವಾಗುತ್ತಿರುವುದನ್ನು ತಡೆಗಟ್ಟಲು ಜರ್ಮನ್ ಗುಪ್ತ ಪೋಲೀಸರು ಬಹಳವಾಗಿ ಪ್ರಯತ್ನಿಸುತ್ತಿರುವರು. ಈ ಪದ್ಯವು ಹಲವು ಶತಮಾನಗಳ ಹಿಂದೆ ಕ್ರೈಸ್ತ ಸನ್ಯಾಸಿಯೊಬ್ಬನಿಂದ ಬರೆಯಲ್ಪಟ್ಟದ್ದು ಅದರಲ್ಲಿ ಹೇಳಿದ್ದೆಲ್ಲಾ ಈ ವರೆಗೆ ಸತ್ಯವಾಗಿರುವುದಂತೆ. ಅಜ್ಞಾತ ಕುಲದವನೊಬ್ಬ ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದು ಜರ್ಮನ್ ರಾಜ್ಯವನ್ನು ವಿಸ್ತರಿಸಿ ಯೆಹೂದ್ಯರನ್ನೋಡಿಸಿ ವೈಭವದ ಶಿಖರಕ್ಕೇರಿ ಒಡನೆಯೇ ಜರ್ಮನ್ ಜನಾಂಗವನ್ನು ವಿನಾಶದ ದಾರಿ ಹಿಡಿಸುವನು. ಯುರೋಪಿನಲ್ಲಿ ಭಯಂಕರ ಯುದ್ಧವೇಳುವುದು. ಆ ಮೇಲೆ ಅವನು ಪತನಹೊಂದಿ ಹೊಸ ಮತ್ತು ವೈಭವಶಾಲಿ ರಾಜನೊಬ್ಬನು ಚಿಕ್ಕದಾದ ಜರ್ಮನಿಯನ್ನು ಆಳತೊಡಗಿ ಲೋಕದಲ್ಲಿ ನಿಜವಾದ ಮತ್ತು ಶಾಶ್ವತ ಶಾಂತಿಯು ನೆಲೆಗೊಳ್ಳುವಂತಾಗುವುದೆಂದೇ ಈ ಭವಿಷ್ಯದ ಸಾರಾಂಶ. ಈ ಹೊಸ ರಾಜನಾರಾಗಬಹುದೆಂದು ಜನರು ಆಲೋಚಿಸಹತ್ತಿರುತ್ತಾರೆ.

ಪಂಡಿತ ಗೋವಿಂದ ಮಾಲವೀಯರಿಗೆ ಪೆಟ್ಟು.

ಪಂಡಿತ ಮದನಮೋಹನ ಮಾಲವೀಯರ ಪುತ್ರರೂ, ಸಂಯುಕ್ತ ಪ್ರಾಂತದ ಎಸೆಂಬ್ಲಿ ಮೆಂಬರರೂ ಆದ ಪಂಡಿತ ಗೋವಿಂದ ಮಾಲವೀಯರು ಇದೇ ತಾ. 8ರಲ್ಲಿ ಲಕ್ನೋದಲ್ಲಿ ಸಿನೆಮಾ ನೋಡ ಹೋಗಿದ್ದರು. ಅವರೊಂದಿಗೆ ಪ್ರೊಫೆಸರ್ ಸಿ. ಎಲ್. ಮಾಲವೀಯರೂ ಇದ್ದರು. ಇವರ ಹಿಂಬದಿಯಲ್ಲಿ ಕುಳಿತಿದ್ದ ಸೈನಿಕನೊಬ್ಬನು, ಕಾಂಗ್ರೆಸನ್ನು ಇಚ್ಛಾನುಸಾರ ಬೈದು ಛೀಕರಿಸಿದನು. ಪಂಡಿತ ಗೋವಿಂದ ಮಾಲವೀಯರು ಇದಕ್ಕೆ ಆಕ್ಷೇಪಿಸಿ ಇಬ್ಬರಿಗೂ ಜಗಳವಾಗಿ ಸೈನಿಕನು ಗೋವಿಂದ ಮತ್ತು ಪ್ರೊಫೆಸರ್ ಸಿ. ಎಲ್. ಮಾಲವೀಯರನ್ನು ಬೈದು ಅಪಮಾನಿಸಿ ಕಡೆಗೆ ಹೊಡೆದನೆಂದು ತಿಳಿದು ಬಂದಿದೆ. ಗೋವಿಂದ ಮಾಲವೀಯರಿಗೆ ಮುಖಕ್ಕೆ ಸ್ವಲ್ಪ ಪೆಟ್ಟಾಗಿದೆ. ವಸ್ತ್ರ ಹರಿದಿದೆ. ಅಷ್ಟರಲ್ಲಿ ಥಿಯೇಟರಿನಲ್ಲಿ ಜನರು ಸೇರಿದರು. ಆದರೆ ಪೋಲೀಸರು ಶಾಂತಿ ಸ್ಥಾಪಿಸಿದರು. ಸೈನ್ಯಾಧಿಕಾರಿಗಳು ಈ ಕುರಿತು ವಿಚಾರಣೆ ನಡೆಸುತ್ತಿರುವರು. ಪಂಡಿತ ಗೋವಿಂದ ಮಾಲವೀಯರು ಸೈನಿಕನ ಮೇಲೆ ಫಿರ್ಯಾದಿ ಮಾಡಿರುವರು.

300ಮಂದಿ ಕಲಾಸಿಗಳು ಜೈಲಲ್ಲಿ.

ಪ್ರಾಣಾಪಾಯಕ್ಕೊಳಗಾಗಿ ಸ್ಟೀಮರುಗಳಲ್ಲಿ ಕೆಲಸಮಾಡಬೇಕಾಗಿರುವ ಈ ಕಾಲದಲ್ಲಿ ಬ್ರಿಟಿಷ್ ನಾವಿಕರ ಪ್ರಮಾಣದಲ್ಲಿಯೇ ತಮ್ಮ ಸಂಬಳವನ್ನೂ ಹೆಚ್ಚಿಸಬೇಕೆಂದು ಕೇಳಿಕೊಂಡು, ಸಂಬಳ ಹೆಚ್ಚಿಸದೆ ಕೆಲಸಮಾಡಲಾರೆವೆಂದು ಮುಷ್ಕರಹಿಡಿದಿರುವ 300ಮಂದಿ ಹಿಂದೀ ಕಲಾಸಿಗಳು ಕೈದುಮಾಡಲ್ಪಟ್ಟು ಶಿಕ್ಷೆಗೊಳಗಾಗಿ ಬ್ರಿಟಿಷ್ ಕಾರಾಗೃಹಗಳಲ್ಲಿರುವರು. ಸಮುದ್ರ ಜೀವನಕ್ಕಿಂತ ಬ್ರಿಟಿಷ್ ಕಾರಾಗೃಹ ಜೀವನವೇ ಒಳ್ಳೇದಾಗಿದೆ ಈ ಕಲಾಸಿಗಳಿಗೆ. ಸರ್. ವಾಲ್ಟರ್ ಸಿಟ್ರೈನ್ ಮತ್ತು ಹಿಂದೀ ಹೈ ಕಮಿಶನರರು ಇವರ ಬಿಡುಗಡೆಗಾಗಿ ಪ್ರಯತ್ನಿಸುತ್ತಿದ್ದಾರೆ.

ಮುಸ್ಲಿಂ ಲೀಗಿನ ನಿಷೇಧ

ಅಖಿಲಭಾರತ ಮೊಮಿನ್ ಪರಿಷತ್ತಿನ ಪರವಾಗಿ ಇದೇ ತಾ. 6ರಲ್ಲಿ ಮಿ. ಅಬ್ದುಲ್ ಕಾಯುಮ್ ಅನ್ಸಾರಿ, ಹಕೀಮ್ ಬಾಷೀರ್ ಅಹಮ್ಮದ್, ಹಕೀಮ್ ಹಾಜಿರ್ ಖಾನ್, ಮತ್ತು ಮಿ. ರಿಯಜುದ್ದೀನ್ ಅಹಮ್ಮದರು ಪಂಡಿತ ಜವಾಹರಲಾಲರ ಬಳಿಗೆ ಡೆಪ್ಯುಟೇಶನ್ ಹೋಗಿ, ಹಿಂದೂಸ್ಥಾನದ 9ಕೋಟಿ ಮುಸಲ್ಮಾನರಲ್ಲಿ ಸುಮಾರು ಅರೆವಾಸಿ ಮೋಮಿನ್ ಮುಸಲ್ಮಾನರು. ಇವರು ಇತರ ಬಡತರಗತಿಯ ಜನರಂತೆ ದೀನ ದರಿದ್ರರಿದ್ದು ಮೇಲು ವರ್ಗದ ಮುಸಲ್ಮಾನರ ಸೂರೆಗೊಳಗಾಗಿರುವರು. ಈ ಮೇಲು ವರ್ಗದ ಮುಸಲ್ಮಾನರು ತಮ್ಮ ಸ್ಥಾನಮಾನ ಮತ್ತು ಹಕ್ಕು ಬಾಧ್ಯತೆಗಳಿಗಾಗಿ ಮಾತ್ರ ಚಡಪಡಿಸಿ ಕೆಳತರಗತಿಯವರ ಗೊಡವೆಯೇ ಅವರಿಗಿಲ್ಲ, ಮೊಮಿನ್ ಮುಸಲ್ಮಾನರಿಗೂ ಮುಸ್ಲಿಮ್ ಲೀಗಿಗೂ ಯಾವ ಸಂಬಂಧವೂ ಇಲ್ಲ. ತಮಗೆ ತಮ್ಮ ಜನಸಂಖ್ಯೆಯ ಮೇರೆಗೆ ನೌಕರಿ ಮತ್ತು ಇತರ ಹಕ್ಕು ಬಾಧ್ಯತೆ ದೊರೆಯಬೇಕೆಂದು ಕೇಳಿಕೊಂಡಿರುವರು. ಮೊಮಿನ್ ಮುಸಲ್ಮಾನರ ಅಖಿಲಭಾರತ ಪರಿಷತ್ತು ದಶಂಬರ ತಾ. 27 ಮತ್ತು 28ರಲ್ಲಿ ಗೋರಕಪುರದಲ್ಲಿ ಜರಗಲಿರುವುದು.

1940

ನೇ ಇಸವಿಯ

ಪಾಕೆಟ್ ಡೈರಿ

ದೊರೆಯುತ್ತದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ.

THE
BOMBAY LIFE ASSURANCE
Company Limited.
[ESTD. 1908]

COMPARE

Your Life Assurance with any other property you possess what is its guarranteed value

If you live-today-a few years more-when you are old?
If you die-to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult
KOCHIKAR BROTHERS LTD.,
MADRAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	Puthiyara, CALICUT.	Central Station Road, TRIVANDRUM.

GET RICH
AND
PROSPEROUS
through Simple
Means upheld and
pursued by
Millions.........!
WRITE NOW WITH
STAMP.—
K. S. Row,
Worli, BOMBAY.

ಒಂದು ವಾರದ ಯುದ್ಧ ವಾರ್ತೆ.

ಬ್ರಿಟನಿಗೆ ಜರ್ಮನಿಯ ಬೆದರಿಕೆ. ● ೩ ತಿಂಗಳ ಜಲಯುದ್ಧದ ವಿಮರ್ಶೆ.

ರಣರಂಗಕ್ಕೆ ಬ್ರಿಟಿಷ್ ಚಕ್ರವರ್ತಿಗಳ ಸಂದರ್ಶನ. ಹಲವು ಹಡಗುಗಳು ಮುಳುಗಿಸಲ್ಪಟ್ಟಿವೆ.

ಜರ್ಮನಿಯ ಬೆದರಿಕೆ

ಬ್ರಿಟನಿನ ಸುತ್ತು ಮುತ್ತಿನಲ್ಲಿ ಇನ್ನೂ ಹೆಚ್ಚಿನ ಕೆಲವು ಸಮುದ್ರ ಪ್ರದೇಶಗಳ ಮೇಲೆ ಜರ್ಮನಿಯು ಧಾಳಿನಡಿಸುವ ನಿರ್ಧಾರಮಾಡಿ, ಆ ಪ್ರದೇಶಗಳಿಗೆ ಪ್ರವೇಶಿಸುವ ಎಲ್ಲಾ ಹಡಗುಗಳನ್ನೂ ಮುಳುಗಿಸುವ ಬೆದರಿಕೆ ಹಾಕಿರುವುದು. ಇಷ್ಟರ ವರೆಗೆ 144 ಜರ್ಮನ್ ಸಬ್‌ಮೆರಿನ್ ಚಾಲಕರನ್ನು ಬ್ರಿಟಿಷರು ಕೈದುಮಾಡಿರುವರು. 33 ಜರ್ಮನ್ ವ್ಯಾಪಾರಿ ಹಡಗುಗಳನ್ನು ಹಿಡಿದಿರುವರು. ಬ್ರಿಟಿಷ್ ವ್ಯಾಪಾರ ಹಡಗುಗಳು ಮುಳುಗಿಸಲ್ಪಟ್ಟು 410 ಮಂದಿ ಬ್ರಿಟಿಷ್ ನಾವಿಕರು ಕೊಲ್ಲಲ್ಪಟ್ಟಿರುವರು. ದಶಂಬ್ರ ತಾ. 2ಕ್ಕೆ ಅಂತ್ಯವಾಗುವ ವಾರದಲ್ಲಿ 6 ಬ್ರಿಟಿಷ್ ಮತ್ತು 6 ತಟಸ್ಥ ರಾಷ್ಟ್ರಗಳ ಹಡಗುಗಳು ಮುಳುಗಿಸಲ್ಪಟ್ಟಿವೆ. ನವಂಬರದಲ್ಲಿ ಮುಳುಗಿಸಲ್ಪಟ್ಟ ಹಡಗುಗಳ ಸಂಖ್ಯೆಯು ಸೆಪ್ಟೆಂಬರಕ್ಕಿಂತ ಮೂರನೇ ಒಂದು ಪಾಲಾಗಿವೆ. ಜರ್ಮನ್ ಸಬ್‌ಮೇರೀನ್ ಹಾವಳಿಯು ಜಯಶೀಲವಾಗಿ ತಡೆಗಟ್ಟಲ್ಪಟ್ಟಿದೆ. ಜಲತೋಟೆಗಳನ್ನಿಡುವುದನ್ನು ಕೂಡಾ ತಡೆಯಲು ಪ್ರಯತ್ನ ನಡೆಯುತ್ತಿದೆ. ಮೆಗ್ನೆಟಿಕ್ ತೋಟೆಗಳನ್ನು ನಾಶಮಾಡುವ ಗುಪ್ತವಿಧಾನವೊಂದು ಉಪಯೋಗಿಸಲ್ಪಟ್ಟಿರುತ್ತದೆ. ಜಲತೋಟೆಗಳಿಂದ ಇದೇ ತಾ. 4ರಲ್ಲಿ ಜರ್ಮನ್ ಪಸರೆ ಹಡಗವೊಂದು ಮುಳುಗಿಸಲ್ಪಟ್ಟಿರುವುದು. ಈ ವರೆಗೆ ಜರ್ಮನರ ಜಲತೋಟೆಗಳಿಂದ 4 ಜರ್ಮನ್ ಹಡಗುಗಳೇ ಮುಳುಗಿಸಲ್ಪಟ್ಟಿರುವುವು. ತಾ. 4ರಲ್ಲಿ ಎರಡು ಬ್ರಿಟಿಷ್ ಮತ್ತು ಒಂದು ಸ್ವೀಡಿಶ್ ಸ್ಟೀಮರು ಜರ್ಮನ್ ತೋಟೆಗಳಿಂದ ಮುಳುಗಿಸಲ್ಪಟ್ಟಿವೆ. ಆಸ್ಟ್ರೇಲಿಯದಿಂದ ಇಂಗ್ಲೆಂಡಿಗೆ ಬರುವ ಡೋರಿಕ್ ಸ್ಟಾರ್ ಎಂಬ ದೊಡ್ಡ ಪ್ರಯಾಣಿಕ ಹಡಗವೊಂದನ್ನು ಎಡ್ಮಿರಲ್ ವಾನ್ ಸ್ಪೀಯರ್ ಎಂಬ ಜರ್ಮನ್ ಯುದ್ಧ ಹಡಗವು ಮುಳುಗಿಸಿರುವುದು.

ರಣರಂಗಕ್ಕೆ ಬ್ರಿಟಿಷ್ ಚಕ್ರವರ್ತಿಗಳ ಸಂದರ್ಶನ.

ಬ್ರಿಟಿಷ್ ಚಕ್ರವರ್ತಿಗಳು ಇದೇ ತಾ. 5ರಲ್ಲು ಫ್ರಾನ್ಸಿಗೆ ಹೋಗಿ ಮರೆಮಾಡಲ್ಪಟ್ಟ ಮೋಟರ್ ಕಾರೊಂದರಲ್ಲಿ ಪಶ್ಚಿಮರಣರಂಗವನ್ನು ಸಂದರ್ಶಿಸಿದರು. ಅವರು ಮೊದಲಾಗಿ ವಿಮಾನ ನಿಲಯವನ್ನು ಕಂಡು ಆಮೇಲೆ 3 ಘಂಟೆಗಳ ವರೆಗೆ ಬ್ರಿಟಿಷ್ ಸೇನೆಯನ್ನು ಪರೀಕ್ಷಿಸಿದರು. ಫ್ರಾನ್ಸಿನಲ್ಲಿರುವ ಎಲ್ಲಾ ಬ್ರಿಟಿಷ್ ಸೈನಿಕರಿಗೂ ವೈಮಾನಿಕರಿಗೂ ಇಂಗ್ಲೆಂಡಿನ ರಾಜ ಮತ್ತು ರಾಣಿಯರು ಕ್ರಿಸ್‌ಮಸ್ ಹಬ್ಬದ ಸಂದೇಶವನ್ನೊಳಗೊಂಡ ಕಾರ್ಡು ಕಳುಹಿಸಲಿರುವರು. ತಾ. 6ರಲ್ಲು ಕೂಡಾ ಚಕ್ರವರ್ತಿಗಳು ಬ್ರಿಟಿಷ್ ಸೇನೆಯನ್ನು ಪರೀಕ್ಷಿಸುತ್ತಾ ಅವರೊಂದಿಗೇನೇ ಉಂಡು ತಿಂದು ಅವರ ಸಂಪರ್ಕ ಬೆಳೆಸಿದರು. ತಾ. 7ರಲ್ಲಿ ಯುದ್ಧ ವಾರ್ತಾವಾಹಕರಿಗೆ ಭೇಟಿಕೊಟ್ಟು ರಣರಂಗದಿಂದ ಹಿಂತಿರುಗಿದರು.

ತಾ. 6ರಲ್ಲು ಡೋರ್ಸೆಟ್ ಎಂಬ ಲಂಡನ್ ಸ್ಟೀಮರು ಮುಳುಗಿಸಲ್ಪಟ್ಟಿರುವುದು. ತಾ. 6ರಲ್ಲು ಬ್ರಿಟಿಷ್ ಹಡಗಗಳು ಉಸ್ಸುಕೂಮ ಎಂಬ ಜರ್ಮನ್ ಹಡಗವನ್ನು ಹಿಡಿದಿರುವವು. ಒಟ್ ಟ್ರೋಫ್ಟ್ ಎಂಬ ಡೇನಿಶ್ ಸ್ಟೀಮರು ಮತ್ತು ಹಂಟ್ಸ್‌ಮೇನ್ ಎಂಬ ದೊಡ್ಡ ಬ್ರಿಟಿಷ್ ಸ್ಟೀಮರು ಕೂಡಾ ಮುಳುಗಿಸಲ್ಪಟ್ಟಿರುವುವು. ಪರಲೋಸ್ ಎಂಬ ಗ್ರೀಕ್ ಹಡಗವು ತಾ. 7ರಲ್ಲಿ ಮುಳುಗಿ ಹೋಗಿದೆ.

3 ತಿಂಗಳ ಜಲಯುದ್ಧ

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯನ್ನು ಈಗ ಗುಪ್ತವಾಗಿ ನಡಿಸತೊಡಗಿರುವರು. ಬ್ರಿಟಿಷ್ ನೌಕಾಖಾತೆಯ ಮಂತ್ರಿ ಮಿ. ಚರ್ಚಿಲ್ಲರು ಇದೇ ತಾ. 6ರಲ್ಲು ಪಾರ್ಲಿಮೆಂಟಿನ ಮುಂದೆ 3 ತಿಂಗಳ ಜಲಯುದ್ಧದ ವಿದ್ಯಮಾನಗಳನ್ನು ವಿಮರ್ಶಿಸಿ ದೀರ್ಘ ಭಾಷಣವಿತ್ತಿರುವರು.

2000 ಬ್ರಿಟಿಷ್ ವ್ಯಾಪಾರಿ ಹಡಗಗಳೀಗ ಸಂಚರಿಸುತ್ತಿವೆ. ಪ್ರತಿ ದಿನ ಬ್ರಿಟನಿನ ಬಂದರುಗಳಿಂದ 100ರಿಂದ 150ರ ವರೆಗೆ ಹಡಗಗಳು ಹೋಗಿಬರುತ್ತಿವೆ. ಇವನ್ನು ತಡೆಗಟ್ಟಲು ಜರ್ಮನಿಯು ಭಗೀರಥ ಯತ್ನ ನಡಿಸಿರುವುದು. ಜರ್ಮನ್ ಸಬ್‌ಮೆರೀನು ಮತ್ತು ಯುದ್ಧ ಹಡಗಗಳು ಬ್ರಿಟಿಷ್ ಮತ್ತು ಬ್ರಿಟನಿಗೆ ಬಂದು ಹೋಗುವ ತಟಸ್ಥ ರಾಷ್ಟ್ರಗಳ ಹಡಗಗಳನ್ನು ಮುಳುಗಿಸಲು ಎಡೆಬಿಡದೆ ಪ್ರಯತ್ನ ನಡೆಸಿರುವವು. ಸಮುದ್ರಯಾನಗಳ ಮೂಲಕ ಹಡಗಗಳ ಮೇಲೆ ಬೋಂಬೆಸೆತ ನಡೆದಿರುವುದು. ಯಾವ ಅಂತರರಾಷ್ಟ್ರೀಯ ನ್ಯಾಯನೀತಿಯನ್ನಾದರೂ ಗಣಿಸದೆ ಹಡಗ ಪ್ರವೇಶದ ಸಮುದ್ರ ಭಾಗಗಳಲ್ಲೆಲ್ಲಾ ಜಲತೋಟೆಗಳು ಇಡಲ್ಪಟ್ಟಿರುವವು. ಆಮೇಲೆ ಸಬ್ ಮೆರೀನ್ ಮತ್ತು ಗಾಳಿಕೊಡೆಗಳ ಮೂಲಕ ಮೆಗ್ನೆಟಿಕ್ ತೋಟೆ ಎಂಬ ಭೀಕರ ತೋಟೆಗಳು ಬಂದರು ಪ್ರವೇಶ ದ್ವಾರಗಳಲ್ಲಿ ಚೆಲ್ಲಲ್ಪಟ್ಟಿರುವವು. ಆದರೂ ಬ್ರಿಟಿಷ್ ಹಡಗುಗಳು ಯಥಾ ಪ್ರಕಾರ ಹೋಗಿಬರುತ್ತಲೇ ಇವೆ. ಪ್ರತಿ ದಿನ 2ರಿಂದ 4ರ ವರೆಗೆ ಜರ್ಮನ್ ಸಬ್ ಮೆರೀನುಗಳು ಮುಳುಗಿಸಲ್ಪಡುತ್ತವೆ. 1940ರೊಳಗೆ 400 ಸಬ್ ಮೆರೀನುಗಳನ್ನು ಜರ್ಮನಿಯು ತಯಾರಿಸುತ್ತಿದೆಯೆಂದು ಹೇಳಲಾಗಿದೆ. ಆದರೆ ಅವನ್ನು ನಡಿಸುವವರನ್ನು ಅಷ್ಟು ಬೇಗನೆ ತಯಾರಿಸಲು ಸಾಧ್ಯವಿಲ್ಲ. ಆರೇಳು ವರ್ಷ ತರಬೇತಿ ಬೇಕವರಿಗೆ. ಜರ್ಮನಿಯ ಸಬ್ ಮೆರೀನುಗಳು ಹೆಚ್ಚಿದಷ್ಟಕ್ಕೆ ಅವುಗಳ ನಾಶದ ಪ್ರಮಾಣವೂ ಹೆಚ್ಚುವುದು. ಸುಮಾರು 1000 ಬ್ರಿಟಿಷ್ ವ್ಯಾಪಾರಿ ಹಡಗಗಳೀಗ ಆತ್ಮ ರಕ್ಷಣೆಯ ಶಸ್ತ್ರಗಳನ್ನೊಡಗೊಂಡಿವೆ. ಬೇಗನೆ 2000 ಹಡಗಗಳೂ ಈ ಸಿದ್ಧತೆ ಹೊಂದುವವು.

ಬ್ರಿಟಿಷ್ ಹಡಗುಗಳನ್ನು ಸುಲಭವಾಗಿ ಮುಳುಗಿಸಲಾಗದೆ ಜರ್ಮನ್ ಸಬ್‌ಮೆರೀನುಗಳೀಗ ತಟಸ್ಥರಾಷ್ಟ್ರಗಳ ಹಡಗುಗಳನ್ನು ಹೆಚ್ಚಾಗಿ ಮುಳುಗಿಸಹತ್ತಿವೆ. ಮುಳುಗಿಸಲ್ಪಟ್ಟ ಬ್ರಿಟಿಷ್ ಮತ್ತು ಫ್ರಾನ್ಸುಗಳ ಹಡಗಸಂಖ್ಯೆಯು ಕಡಿಮೆಯಾಗುತ್ತಾ ಹೋಗುವಾಗ ತಟಸ್ಥ ರಾಷ್ಟ್ರಗಳ ಹಡಗಗಳು ದಿನಹೋದಂತೆ ಹೆಚ್ಚೆಚ್ಚಾಗಿ ನಾಶಮಾಡಲ್ಪಡುತ್ತಿವೆ. ಕಲ್ಪಾಟಿಕೆಯಿಂದ ಮೆಗ್ನೆಟಿಕ್ ತೋಟೆಗಳನ್ನಿಡುವ ಕೆಲಸವನ್ನೀಗ ಜರ್ಮನಿಯು ಭರದಿಂದ ನಡಿಸುತ್ತಿದೆ. ಇದರಿಂದ ಹೆಚ್ಚಾಗಿ ತಟಸ್ಥ ರಾಷ್ಟ್ರಗಳ ಹಡಗಗಳಿಗೆ ಹಾವಳಿಯಾಗಿದೆ. ಮೆಗ್ನೆಟಿಕ್ ತೋಟೆಯು ಹಿಟ್ಲರರ ಗುಪ್ತ ಶಸ್ತ್ರವಾದರೆ ಅದು ಬ್ರಿಟಿಷ್ ನೌಕಾಖಾತೆಗೆ ಹೊಸತೂ ಅಲ್ಲ; ವಿಚಿತ್ರವೂ ಅಲ್ಲ. ಈ ಹಾವಳಿಯನ್ನು ತಡೆಗಟ್ಟುವ ಉಪಾಯವು ಪ್ರಥಮ ಮೆಗ್ನೆಟಿಕ್ ತೋಟೆಯನ್ನಿಟ್ಟಾಗಲೆ ಕಂಡುಹಿಡಿಯಲ್ಪಟ್ಟಿದೆ.

ಜರ್ಮನಿಯಿಂದ ಸಾಮಾನು ತರುವ ತಟಸ್ಥ ರಾಷ್ಟ್ರಗಳ ಹಡಗುಗಳನ್ನೂ ಹಿಡಿಯುವ ನಿರ್ಧಾರವನ್ನು ಬ್ರಿಟನು ಮಾಡಿದುದರಿಂದ ಜರ್ಮನಿಯು ಕತ್ತೊತ್ತಿಟ್ಟಂತಾಗಿದೆ. ರಫ್ತಾಗುವ ಸಾಮಾನುಗಳೆಲ್ಲಾ ಬಂದರುಗಳಲ್ಲಿ ಹೇರಳವಾಗಿ ಬಿದ್ದು ದೊಡ್ಡ ಗೊಂದಲವಾಗಿದೆಯೆಂದು ತಿಳಿದು ಬಂದಿದೆ. ನಮ್ಮಲ್ಲಿ ಒಟ್ಟು 21 ಮಿಲ್ಯ ಟನ್ನು ತೂಕದ ವ್ಯಾಪಾರಿ ಹಡಗಗಳಿರುತ್ತವೆ. ಈ ವರೆಗೆ ನಷ್ಟವಾದುದು 340,000 ಟನ್ನು ತೂಕ ಮಾತ್ರ. ಇದಕ್ಕೆ ಪ್ರತಿಯಾಗಿ ಹೊಸತಾಗಿ ಕಟ್ಟಿ, ವೈರಿಯದನ್ನು ಹಿಡಿದು, ಮತ್ತು ತಟಸ್ಥ ರಾಷ್ಟ್ರಗಳಿಂದ ಪಡೆದು ನಾವು 2,80,000 ಟನ್ನು ತೂಕವನ್ನು ಹೆಚ್ಚಿಗೆ ಸೇರಿಸಿರುತ್ತೇವೆ. ಹೀಗೆ ನಮಗುಂಟಾದ ನಿವ್ವಳ ನಷ್ಟ ಸುಮಾರು 60,000 ಟನ್ನು ಮಾತ್ರ. ಈ ರೀತಿಯಲ್ಲಿ ನಮ್ಮ ವ್ಯಾಪಾರಿ ಹಡಗವನ್ನು ನಾಶಮಾಡಬೇಕಾದರೆ 100 ವರ್ಷ ಸಮರ ನಡೆಯಬೇಕಾದೀತು.

ಇದೇ ತಾ. 7ರಲ್ಲು 8 ಜರ್ಮನ್ ವಿಮಾನಗಳು ಸ್ಕೋಟ್ಲೆಂಡಿನ ಫರ್ತ್ ಆಫ್ ಫೋರ್ತ್ ಕರಾವಳಿಯ ಮೇಲೇರಿಬಂದಾಗ ಬ್ರಿಟಿಷ್ ವಿಮಾನಗಳು ಅವನ್ನೆದುರಿಸಿ ಓಡಿಸಿದವು. ಟಜಂಡೋಯೆನ್ ಎಂಬ ಡಚ್ ಸ್ಟೀಮರೊಂದು ಮುಳುಗಿಸಲ್ಪಟ್ಟಿರುವುದು. ವಾಶಿಂಗ್ಟನ್ ಮತ್ತು ಚಾನ್ಸೆಲರ್ ಎಂಬ ಎರಡು ಬ್ರಿಟಿಷ್ ಹಡಗಗಳು ಮುಳುಗಿಸಲ್ಪಟ್ಟಿವೆ. ತಾ. 8ರಲ್ಲು ಜರ್ಮನ್ ಸಬ್‌ಮೆರೀನೊಂದು ಜೆರ್ಸ ಎಂಬ ಬ್ರಿಟಿಷ್ ಡಿಸ್ಟ್ರೋಯರನ್ನು ಜಖಮ್ ಮಾಡಿರುವುದು. ಒಂದು ಬ್ರಿಟಿಷ್ ಹಡಗ ಮತ್ತು ಇನ್ನೊಂದು ನಾರ್ವೇ ಹಡಗ ಮುಳುಗಿಸಲ್ಪಟ್ಟಿದೆ.

No WAR SCARE RISE IN PRICE

X'Mas Grand Reduction Sale.

Strong & Durable
Accurate
Time Keepers

All Swiss Made
GUARANTEED
Lever WATCHES.



No. 416 Chromium Case Rs. 5—10
No. 417 Golden Case Rs. 6—6
No. 417 R Rolledgold 10yrs. Jewelled Mov. Rs. 12—8



ROUND OR CUSHION
No. 401 Chromium Case Rs. 3—12
No. 402 Golden Case Rs. 4—8

No. 424 Chromium Case Rs. 7—8
No. 425 Golden Case Rs. 8—4
No. 425 R Rolledgold 10yrs. 13—8

As. 9/- Extra for Postage.
For further particulars send for our new cat.
(Correspondance in English)

LADIES MINIATURES.

No. 435 Chromium Case Rs. 12—0
No. 436 Rolledgold 10yrs. Rs. 16—8

BAPALAL & CO.
101 Abdul Rehman Street,
BOMBAY, 3.



Geneva Movement.
No. 460 Chromium Case Rs. 10—8
No. 461 Golden Case Rs. 12—0
No. 462 Rolledgold 10yrs. Rs. 15—0

ಫಿನ್ಲೆಂಡಿನ ಕುರಿತು ಇಡೀ ಲೋಕದ ಸಹಾನುಭೂತಿ!

ಃ ಃ ಃ ಃ ಇಟೆಲಿ, ಸ್ವೀಡನ್, ಅಮೆರಿಕ, ಇಂಗ್ಲೆಂಡುಗಳಿಂದ ಸಹಾಯ ಃ ಃ ಃ ಃ

ತೀವ್ರ ಸಹಾಯಕ್ಕಾಗಿ ಫಿನ್ನರ ಆಗ್ರಹದ ವಿನಂತಿ

ಫಿನ್ಲೆಂಡಿನ ಮೇಲೆ ಸಮುದ್ರ ಮುತ್ತಿಗೆ.

ಫಿನ್ನರ ಪ್ರಬಲ ವಿರೋಧ.

ಹವಾಗುಣ ಮತ್ತು ಭೂಸ್ಥಿತಿಯು ಫಿನ್ನರಿಗೆ ಸಹಾಯಕವಾಗಿವೆ. ಲಡೋಗ ಸರೋವರದ ಪ್ರದೇಶದಲ್ಲಿ ಹಿಮಬಿದ್ದಿರುವುದರಿಂದ ಸೋವಿಯೆಟ್ ಸೇನೆಗೆ ಮುಂದುವರಿಯಲು ಬಹಳ ಪ್ರಯಾಸವಾಗಿದೆ. ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಗಾಳಿ ಕೊಡೆಗಳ ಮೂಲಕ ಹಾರಾಡಿ ಸೇನೆಯನ್ನಿಳಿಸುವ ರಸ್ಯಾನರ ಪ್ರಯತ್ನವು ಸಂಪೂರ್ಣ ನಿಷ್ಫಲವಾಗಿದೆ. ಗಾಳಿ ಕೊಡೆಯಿಂದ ಹಾರಾಡುವ ಸೈನಿಕರನ್ನು ಕೂಡಲೆ ಫಿನ್ನರು ಗುಂಡು ಹೊಡೆದು ಕೊಲ್ಲುತ್ತಿರುವರು ಇಲ್ಲವೆ ನೆಲಕ್ಕಿಳಿಯೊಡನೆಯೇ ಹಿಡಿದು ಅವರನ್ನು ನಿಶ್ಶಸ್ತ್ರರನ್ನಾಗಿ ಮಾಡುವರು. ಉತ್ತರ ಪೆಟ್ಸಾಮೋ ಜಿಲ್ಲೆಯಲ್ಲಿ ಕದನ ನಡೆಯುತ್ತಿರುವುದು. ಹಿಮಗಾಳಿಯ ನಿಮಿತ್ತ ಪ್ರಬಲ ಹೋರಾಟವೆಲ್ಲಿಯೂ ನಡೆದಿರುವುದಿಲ್ಲ. ಕರೇಲಿಯನ್ ಭೂಕಂಠದಲ್ಲಿ ಫಿನ್ನರು ರಸ್ಯಾನರನ್ನು ಪ್ರಬಲವಾಗಿ ವಿರೋಧಿಸಿ ತಡೆಗಟ್ಟಿರುವರು. ಟೆಲಿಜೋಕಿಯಿಂದ ಫಿನ್ನರೆಲ್ಲಾ ಬಿಟ್ಟುಹೋಗಿ ಹಲವು ಕಟ್ಟಡಗಳನ್ನು ಸುಟ್ಟುಹಾಕಿರುವರು.

ಕರೇಲಿಯನ್ ಭೂಕಂಠದಲ್ಲಿ 38,000 ಫಿನ್ನಿಶ್ ಸೇನೆಯು ತಮಗಿಂತ 2 ಪಾಲು ಹೆಚ್ಚಿನ ಸೋವಿಯೆಟ್ ಸೇನೆಯನ್ನು ವಿರೋಧಿಸುತ್ತಿರುವುದು. ಲಡೋಗ ಸರೋವರವನ್ನು ದಾಟಲೆತ್ನಿಸಿದ ಹಲವು ಮಂದಿ ಸೋವಿಯೆಟ್ ಸೈನಿಕರು ಮುಳುಗಿ ಸತ್ತಿರುವರು.

ಉತ್ತರ ಪೆಟ್ಸಾಮೋ ಜಿಲ್ಲೆಯಲ್ಲಿ ಸೋವಿಯೆಟ್ ಸೈನಿಕರು ಫಿನ್ನಿಶ್ ಸೇನೆಯನ್ನು ಓಡಿಸಿ ಬೆನ್ನಟ್ಟಿ ಪೆಟ್ಸಾಮೋ ಬಂದರದ ದಕ್ಷಿಣದಲ್ಲಿ 35 ಕಿಲೋಮಿಟರ್ ಮುಂದೊತ್ತಿರುವರು. ಪೆಟ್ಸಾಮೋ ಬಂದರದ ಬಳಿ ಫಿನ್ನರಿಟ್ಟಿದ್ದ ಜಲತೋಟಿಗಳನ್ನು ಸೋವಿಯೆಟ್ ಹಡಗಗಳು ತೆಗೆಯುತ್ತಿರುವವು. ಕರೇಲಿಯನ್ ಭೂಕಂಠದ ಪ್ರದೇಶದಲ್ಲಿ ಸೋವಿಯೆಟ್ ಸೇನೆಯು 45ರಿಂದ 50 ಕಿಲೋಮಿಟರ್ ಮುಂದೊತ್ತಿರುವುದು. ಲಡೋಗಾ ಸರೋವರದ ತೀರದಲ್ಲಿ ಸಾಲ್ಮಿ ಪಟ್ಟಣವನ್ನು ವಶಪಡಿಸಿ ಮುನ್ನಡೆದಿರುವರೆಂದು ಮೋಸ್ಕೋ ರೇಡಿಯೋ ಸುದ್ದಿ.

ಹೆಲ್ಸಿಂಕಿಯ ಮೇಲೆ ನಡೆಸಲ್ಪಟ್ಟ ವಿಮಾನಧಾಳಿಯಿಂದ ಇಷ್ಟರವರೆಗೆ 112 ಮಂದಿ ಕೊಲ್ಲಲ್ಪಟ್ಟು 198ಮಂದಿ ಗಾಯಗೊಂಡಿರುವರು. ಪಟ್ಟಣ ಬಿಟ್ಟುಹೋಗಲು ಸಾಧ್ಯವಿದ್ದವರೆಲ್ಲಾ ಇಷ್ಟರಲ್ಲೇ ಬಿಟ್ಟುಹೋಗಿದ್ದಾರೆ. ಇವರ ಅವಸ್ಥೆಯು ಅತ್ಯಂತ ಕರುಣಾಜನಕವಿದೆ. ಹಲವರು ಓಮಗುಗಳಿಯಿಂದ ಮರಕಟ್ಟಿ ಮೃತರಾಗಿರುವರೆಂದು ತಿಳಿದುಬಂದಿದೆ. ತೀವ್ರ ಚಳಿ ಮತ್ತು ಹಸಿವೆಯಿಂದ ಅಸಹನೀಯ ಕಷ್ಟಕ್ಕೊಳಗಾಗಿರುವರು. ಫಿನ್ನಿಶ್ ಸ್ತ್ರೀಯರು ಮತ್ತು ಮಕ್ಕಳಿಗೆ ಸ್ವೀಡನ್ ಜನರು ಸಹಾಯಮಾಡುತ್ತಿರುವರು

ಫಿನ್ಲೆಂಡಿಗೆ ಸಹಾಯ

ಈ ಸಂದರ್ಭದಲ್ಲಿ ಫಿನ್ಲೆಂಡಿಗೆ ಸಹಾಯಮಾಡಬೇಕೆಂಬ ಅಭಿಪ್ರಾಯವು ಸ್ವೀಡನಿನಲ್ಲಿ ಬಲಗೊಳ್ಳುತ್ತಿದೆ. 1500ಮಂದಿ ಸ್ವೀಡರು ಫಿನ್ಲೆಂಡಿನ ಪರವಾಗಿ ಹೋರಾಡಲು ಮುಂದೆ ಬಂದು ಅನೇಕರು ಹೊರಟುಹೋಗಿರುವರು. ಸ್ವೀಡನಿನ ವಿದ್ಯಾರ್ಥಿಗಳೆಲ್ಲಾ ಅರಸರಿಗೆ ಮನವಿಯೊಂದನ್ನು ಮಾಡಿಕೊಂಡು ಫಿನ್ಲೆಂಡಿಗೆ ಸೇನಾ ಸಹಾಯಮಾಡಬೇಕೆಂದು ಕೇಳಿಕೊಂಡಿರುವರು. ಸ್ವೀಡನ್ ಮಂತ್ರಿಮಂಡಲದಲ್ಲಿ ಬದಲಾವಣೆಯಾಗುವ ಸಂಭವವಿದೆ. ಬ್ರಿಟಿಷ್ ಲೇಬರ್ ಪಕ್ಷವು ಸ್ಟೇಲಿನರ ಧೋರಣೆಯನ್ನು ನಿಷೇಧಿಸಿರುವುದು. ಇಟೆಲಿಯು ಫಿನ್ಲೆಂಡಿಗೆ ವಿಮಾನಗಳನ್ನು ಕಳುಹಿಸಿರುವುದು. ಫಿನ್ಲೆಂಡಿನ ಮೇಲೆ ಸಹಾನುಭೂತಿ ತೋರಿಸಿ ರಸ್ಯವನ್ನು ನಿಷೇಧಿಸುವ ಪ್ರದರ್ಶನಗಳು ಇಟೆಲಿಯಲ್ಲಿ ನಡೆಯುತ್ತಿರುವುವು. ಅಮೆರಿಕದ ಜನರು ವಂತಿಗೆ ಎತ್ತಿ ಕೆಲವು ವಿಮಾನಗಳನ್ನು ತೆಗೆದುಕೊಂಡು ವೈಮಾನಿಕರ ಸಮೇತ ಅವನ್ನು ಫಿನ್ಲೆಂಡಿಗೆ ಕಳುಹಿಸಿರುವರು. ಇಂಗ್ಲೆಂಡಿನಿಂದ ಕೂಡಾ ಕೆಲವು ವಿಮಾನಗಳು ಕಳುಹಿಸಲ್ಪಟ್ಟಿವೆ. ಫಿನ್ಲೆಂಡು ಕೊಡುವ ಸಾಲದ ಕಂತುಗಳ ವಸೂಲಿಯನ್ನು ಅಮೇರಿಕವು ಮುಂದೆ ಹಾಕಿರುವುದು. ಮಾತ್ರವಲ್ಲದೆ ಈ ವರೆಗೆ ವಸೂಲುಮಾಡಿದ ಕೆಲವಂಶವನ್ನೂ ಹಿಂದೆ ಕೊಡುವ ನಿರ್ಧಾರಮಾಡಿದೆ.

ರಾಜಿಯು ಸಾಧ್ಯವಿಲ್ಲ

ರಸ್ಯವು ಹೆಲ್ಸಿಂಕಿಯ ಸರಕಾರವನ್ನು ಅಂಗೀಕರಿಸದೆ ತಾನು ಟೆಲಿಜೋಕಿಯಲ್ಲಿ ಸ್ಥಾಪಿಸಿರುವ ಗೊಂಬೆ ಸರಕಾರವನ್ನು ಮಾತ್ರ ಮನ್ನಿಸುವುದೆಂದು ತಿಳಿಸಿರುವುದು. ಹೆಲ್ಸಿಂಕಿ ಸರಕಾರದೊಡನೆ ಯಾವ ರೀತಿಯ ರಾಜಿಯನ್ನೂ ಮಾಡದೆ ಅದನ್ನು ಸಂಪೂರ್ಣ ನಾಶಪಡಿಸಬೇಕೆಂದೇ ರಸ್ಯದ ದೃಢ ನಿರ್ಧಾರ. ರಾಜಿಯ ಕುರಿತು ಸ್ವೀಡನ್ ಮತ್ತು ನೋರ್ವೆಗಳು ನಡಿಸಿದ ಪ್ರಯತ್ನವು ಫಲಿಸಿರುವುದಿಲ್ಲ.

ರಸ್ಯವು ಫಿನ್ಲೆಂಡಿನೊಡನೆ ಯುದ್ಧ ಹೂಡಿಲ್ಲ!

ಸೋವಿಯೆಟ್ ರಸ್ಯವು ಫಿನ್ಲೆಂಡಿನ ಮೇಲೇನೂ ಯುದ್ಧ ಹೂಡಿರುವುದಿಲ್ಲ. ಹೆಲ್ಸಿಂಕಿ ಸರಕಾರವನ್ನು ಅದು ನಿಜವಾದ ಜನಪ್ರತಿನಿಧಿ ಸರಕಾರವೆಂದು ಒಪ್ಪುವುದಿಲ್ಲ. ಆದುದರಿಂದ ಅದು ಲೀಗಿಗೆ ಮಾಡಿಕೊಂಡ ವಿನಂತಿಗೆ ರಸ್ಯವು ಮನ್ನಣೆ ಕೊಡುವ ಹಾಗಿಲ್ಲ. ಆ ಪ್ರಕಾರ ಲೀಗ್ ಕೌನ್ಸಿಲಿನ ಸಭೆಯು ಕರೆಯಲ್ಪಡಕೂಡದು. ಕರೆಯಲ್ಪಟ್ಟಲ್ಲಿ ರಸ್ಯವು ಅದರಲ್ಲಿ ಭಾಗಿಯಾಗಲಿಕ್ಕಿಲ್ಲ. ಫಿನ್ಲೆಂಡಿನ ನಿಜವಾದ ಪ್ರಜಾಸತ್ತಾತ್ಮಕ ಸರಕಾರದೊಡನೆ ಒಪ್ಪಂದಮಾಡಿಕೊಂಡು ಸೌಹಾರ್ದದಿಂದಿದೆಯೆಂದು ಸೋವಿಯೆಟ್ ವಿದೇಶಮಂತ್ರಿಗಳು ವಿದಿತಗೊಳಿಸಿರುವರು.

ಪೆಟ್ಸಾಮೋ ಬಂದರದ ಬಳಿ ಯುದ್ಧ

ಪೆಟ್ಸಾಮೋ ಬಂದರದ ಮತ್ತು ಸಾಲ್ಮಿಜರ್ವಿ ನಿಕಲದ ಗಣಿಗಳ ಪ್ರದೇಶದಲ್ಲಿ ಫಿನ್ನರು ರಸ್ಯಾನರನ್ನು ಪ್ರಬಲವಾಗಿ ತಡೆಗಟ್ಟುವ ನಿರ್ಧಾರ ಮತ್ತು ಸಿದ್ಧತೆ ಮಾಡಿರುವರು. ಈ ಭಾಗದಲ್ಲಿ ಇಷ್ಟರಲ್ಲೇ ತೀವ್ರ ಹೋರಾಟ ನಡೆದು ರಸ್ಯಾನರು ಮುಂದೊತ್ತುತ್ತಾರೆ. ರಸ್ಯಾನರು ಈ ಭಾಗಕ್ಕೆ ರೈಲು ಮತ್ತು ಹಡಗ ಮೂಲಕ ಹೆಚ್ಚಿನ ಸೇನೆಯನ್ನು ಅತ್ಯವಸರದಿಂದ ಕಳುಹಿಸುತ್ತಿದ್ದಾರೆ. ಕರೇಲಿಯನ್ ಭೂಕಂಠದ ಪ್ರದೇಶದಲ್ಲಿ ನಡೆದ 3 ದಿನಗಳ ಯುದ್ಧದಲ್ಲಿ 2000 ಮಂದಿ ರಸ್ಯಾನರು ಕೊಲ್ಲಲ್ಪಟ್ಟು ಒಂದೇ ದಿನ 64 ಸೋವಿಯೆಟ್ ಟಾಂಕಿಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂದು ಹೆಲ್ಸಿಂಕಿಯ ಸುದ್ದಿ. ರಸ್ಯವು ಆಲಂಡ್ ದ್ವೀಪಗಳ ಮೇಲೆ ಧಾಳಿ ನಡಿಸುವ ನಿರೀಕ್ಷೆಯಿಂದ ಫಿನ್ನರು ಅವನ್ನು ಭದ್ರಗೊಳಿಸುತ್ತಿರುವರು. ಅವುಗಳ ಸುತ್ತಲೆಲ್ಲಾ ಜಲತೋಟಿಗಳನ್ನಿರಿಸಿರುವರು. ಇದರಿಂದ ಸೋವಿಯೆಟ್ ಯುದ್ಧ ಹಡಗಗಳು ಬೋತ್ನಿಯಾಕೊಲ್ಲಿಗೆ ಪ್ರವೇಶಿಸದಂತಾಗುವುದೆಂದು ನಿರೀಕ್ಷಿಸಲಾಗಿದೆ.

1917ರಲ್ಲಿ ಲೆನಿನರು ಫಿನ್ಲೆಂಡಿಗೆ ಸಂಪೂರ್ಣ ಸ್ವಾತಂತ್ರ್ಯವೀಯಬೇಕೆಂದು ಪ್ರಬಲವಾಗಿ ಪ್ರತಿಪಾದಿಸಿದ್ದರು. ಅವರ ಅನುಯಾಯಿಗಳೀಗ ಅವರ ಸ್ವಾತಂತ್ರ್ಯವನ್ನು ಅಪಹರಿಸುತ್ತಿರುವರು. ಹಂಗೇರಿಯ ಪ್ರಧಾನ ಮಂತ್ರಿಗಳು ಫಿನ್ನರ ಕುರಿತು ಸಹಾನುಭೂತಿ ತೋರಿಸಿರುವರು. ಜರ್ಮನಿಯು ಮಾತ್ರ ರಸ್ಯದ ಧೋರಣೆಯನ್ನು ಸಮರ್ಥಿಸಿರುವುದು.

ಐಕ್ಯವೇ ಅತಿ ದೊಡ್ಡ ಬಲ

ಇದೇ ತಾ. 6ರಲ್ಲು ಫಿನ್ಲೆಂಡಿನ ಸ್ವಾತಂತ್ರ್ಯದ 22ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಫಿನ್ನಿಶ್ ಪ್ರೆಸಿಡೆಂಟರಾದ ಕಲ್ಲಿಯೋರವರು, "ಐಕ್ಯವೇ ನಮ್ಮ ಅತಿ ದೊಡ್ಡ ಶಕ್ತಿ. ಫಿನ್ಲೆಂಡು ಪಾಶ್ಚಾತ್ಯ ನಾಗರಿಕತೆಯನ್ನು ರಕ್ಷಿಸುತ್ತಿದೆ. ದೇವರೇ ನಮ್ಮ ಪ್ರಬಲ ಆಶಯ" ಎಂಬ ಸಂದೇಶವಿತ್ತು ಫಿನ್ನಿಶ್ ಸ್ತ್ರೀಯರ ಮತ್ತು ಪುರುಷರ ತ್ಯಾಗ, ಸೇವೆ, ಧೈರ್ಯಸ್ಥೈರ್ಯಾದಿಗಳನ್ನು ಪ್ರಶಂಸಿಸಿರುವರು. ಪ್ರೆಸಿಡೆಂಟ್ ರುಸವೆಲ್ಟರು ಫಿನ್ನರ ಪ್ರಕೃತದ ಗಂಡಾಂತ

(೧೧ನೇ ಪುಟಕ್ಕೆ ಮುಂದರಿಯುವದು)

ಉಡುಪಿ

ಪರ್ಯಾಯ

ವಸ್ತುಪ್ರದರ್ಶನ.

1940

ತಾ. 8-1-1940ರಿಂದ

22-1-40ರ ವರೇಗೆ

ಸ್ವದೇಶೀ ಔದ್ಯೋಗಿಕ ಮತ್ತು ವ್ಯಾವಸಾಯಿಕ ವಸ್ತುಗಳ ಪ್ರದರ್ಶನಕ್ಕೆ ಸುವರ್ಣ ಸಂಧಿ! ಜಾಹೀರಾತುಗಳಿಗೆ ಅತ್ಯುತ್ತಮ ಸಾಧನ.

ವಿವರವನ್ನೊಳಗೊಂಡ ಕೈಪಿಡಿಗಾಗಿ ಏರಪಾಟಿನ ಚೀಟುಗಳ ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ

ಗೌರವ ಕಾರ್ಯದರ್ಶಿ,
ಪರ್ಯಾಯ
ವಸ್ತುಪ್ರದರ್ಶನ ಸಮಿತಿ,
ಶ್ರೀರಾಮಕೃಷ್ಣ ಬಿಲ್ಡಿಂಗ್ಸ್, ಉಡುಪಿ.

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೦—೧೦—೦ ಚಿಕ್ಕದು ೦—೫—೦

,, ಮುಚ್ಚಳವುಳ್ಳದ್ದು ೦—೧೨—೦ ,, ಮುಚ್ಚಳವುಳ್ಳದ್ದು ೦—೬—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

GENERAL SUPPLIES LIMITED

UDIPI - - - - - S. INDIA

BIL ಬಿಲ್ಲವ LAVA

ಕಣ್ಸೆಳೆವ ಬಹಿರಂಗ!
ಮನಸೆಳೆವ ಅಂತರಂಗ!!

ಬೊಂಬಾಯಿಯ ಬಾರ್ಕೂರು ಬಿಲ್ಲವ ಜಾತಿ ಸಂಘದವರು ತಮ್ಮ 22ನೇ ವಾರ್ಷಿಕೋತ್ಸವದ ಸ್ಮರಣಾರ್ಥವಾಗಿ ಪ್ರಕಟಿಸಿದ ಪುಸ್ತಕ. ಬಿಲ್ಲವ ಸಮಾಜದ ಕುಂದು ಕೊರತೆಗಳನ್ನೂ ಅವುಗಳನ್ನು ತೊಲಗಿಸುವ ಮಾರ್ಗವನ್ನೂ ವಿವರಿಸಿ ಸಮಾಜದ ಒಗ್ಗಟ್ಟನ್ನು ನೆಲೆಗೊಳಿಸುವುದೇ ಈ ಪುಸ್ತಕದ ಧ್ಯೇಯ. ಇದರಲ್ಲಿ ಬಿಲ್ಲವ ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಿರುವ ಕೆಲ ಮಹನೀಯರಿಂದ ಬರೆಯಲ್ಪಟ್ಟ ವ್ಯಾಖ್ಯಾನಗಳಿವೆ. ಬಿಲ್ಲವ ಸಮಾಜದ ಪ್ರತಿ ಬಂಧುಭಗಿನಿಯರು ಇದನ್ನೋದಿ ಸಮಾಜದ ಮೇಲ್ಮೆಯನ್ನು ಬಯಸಬೇಕಾಗಿ ವಿನಂತಿ.

ಈ ಪುಸ್ತಕದ ಲಾಭಾಂಶವನ್ನು ಸಂಘದ ವಿದ್ಯಾರ್ಥಿವೇತನದ ಫಂಡಿಗೆ ಕೊಡಲಾಗುವುದಾದ್ದರಿಂದ ವಿದ್ಯಾಭಿಲಾಷಿಗಳಾದ ಪ್ರತಿಯೋರ್ವರೂ ಇದನ್ನು ಕೊಂಡುಕೊಂಡು ಪ್ರೋತ್ಸಾಹಿಸಬೇಕಾಗಿಯೂ ಅಪೇಕ್ಷಿಸುತ್ತೇನೆ.

ವೈ ಸುಬ್ಬ, ಗೌ. ಕಾರ್ಯದರ್ಶಿ,
ಬಾರ್ಕೂರು ಬಿಲ್ಲವ ಜಾತಿ ಸಂಘ, 50
ಬೊಮ್ಮಂಜಿ ಲೇನ್, ಟೋಪ್ ಫ್ಲೋರ್,
ಫೋರ್ಟ್ ಬೊಂಬಾಯಿ.

ವಾರದ ವಿಮರ್ಶೆ

ಮಿ. ಜಿನ್ನರ ಶುದ್ಧ ಅವಿವೇಕತನ

ಮಿ. ಜಿನ್ನರ ವರ್ತನೆಯಿಂದ ಇಡೀ ದೇಶವೇ ಚಕಿತಗೊಂಡಿರುವುದು. ಅವರು ಕಾಂಗ್ರೆಸನ್ನು ಅಷ್ಟೊಂದು ದ್ವೇಷಿಸುವಾಗ ಪಂಡಿತ ಜವಾಹರಲಾಲರು ಅವರೊಡನೆ ಒಡಂಬಡಿಕೆಯ ಮಾತುಕತೆ ನಡಿಸುವುದಾದರೂ ಹೇಗೆಂಬ ಸಂದೇಹವುಂಟಾಗಿರುವುದು. ಅವರು ಹಿಂದೀ ಮುಸಲ್ಮಾನರೊಡನೆ ಮಾಡಿಕೊಂಡಿರುವ ವಿನಂತಿಯನ್ನು ಹಿಂತೆಗೆಯದಿದ್ದರೆ ಅವರೊಡನೆ ಕಾಂಗ್ರೆಸು ಸ್ವಾಭಿಮಾನದಿಂದ ಯಾವ ಒಡಂಬಡಿಕೆಯನ್ನಾದರೂ ಮಾಡಲು ಸಾಧ್ಯವಿಲ್ಲೆಂದು ಸರ್ದಾರ್ ವಲ್ಲಭಾಯಿಯವರು ಸ್ಪಷ್ಟವಾಗಿ ಹೇಳಿರುವರು. ಅಷ್ಟೊಂದು ಕೆಟ್ಟ ಹಾಗೂ ದೂಷಿತವಾದ ಕಾಂಗ್ರೆಸಿನೊಡನೆ ಮಿ. ಜಿನ್ನರು ಸಂಧಿ ಪ್ರಸ್ತಾಪ ನಡಿಸುವುದಾದರೂ ಹೇಗೆಂದು ಗಾಂಧಿಜಿಯವರು ಕೂಡಾ ಪ್ರಶ್ನಿಸಿರುವರು. ಮಿ. ಜಿನ್ನರ ಎರಡನೇ ಹೇಳಿಕೆಯನ್ನು ನೋಡಿದರೆ ಅವರಲ್ಲಿ ಸ್ವಲ್ಪ ಪಶ್ಚಾತ್ತಾಪವುಂಟಾಗಿರುವಂತಿದೆ. ಮುಸ್ಲಿಮ್ ಲೀಗಿನಂತಹ ಜವಾಬ್ದಾರಿ ಸಂಸ್ಥೆಯ ಅಧ್ಯಕ್ಷರು ಇಂತಹ ಅವಿವೇಕ ಹಾಗೂ ಅಚಾತುರ್ಯವನ್ನು ತೋರಿಸಿರುವುದು ಲೀಗಿನ ಪ್ರತಿಷ್ಠೆಗೇನೇ ದೊಡ್ಡ ಕುಂದುಕೊರತೆ. ಮಿ. ಜಿನ್ನರ ನಾಯಕತ್ವದ ಕುರಿತು ಮುಸಲ್ಮಾನರಲ್ಲೇ ಅತೃಪ್ತಿಯು ಬೆಳೆಯುಹತ್ತಿದೆ. ಅನೇಕರು ಅವರ ಸ್ವೇಚ್ಛಾಪರವರ್ತನೆಯನ್ನು ನಿಷೇಧಿಸಿದ್ದಾರೆ. ಆದರೂ ತನ್ನ ಮನೋವೃತ್ತಿಯನ್ನು ಬದಲಾಯಿಸದಿದ್ದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗುಗಳೊಳಗೆ ಸಂಧಿಯು ಅಸಾಧ್ಯ ಮಾತ್ರವಲ್ಲದೆ ವೈಷಮ್ಯವು ಮತ್ತಷ್ಟು ಹೆಚ್ಚುವಂತಾಗುವುದು. ಮಾತ್ರವಲ್ಲದೆ ಕಾಂಗ್ರೆಸು ಮಿ. ಜಿನ್ನರ ನಾಯಕತ್ವವನ್ನೇ ಅಲ್ಲಗಳೆದು ಅವರನ್ನು ಎದುರಾಡಿ ಅವರಿಗೆ ಮತ್ತು ಲೀಗಿಗೆ ಎಷ್ಟರ ಮಟ್ಟಿನ ಮುಸಲ್ಮಾನ ಜನ ಬೆಂಬಲವಿದೆಯೆಂಬುದನ್ನು ಸಿದ್ಧಗೊಳಿಸಲೆತ್ನಿಸಬೇಕಾಗುವುದು.

ಒಡಂಬಡಿಕೆಯಾಗುವ ಸಂಭವವಿದೆ

ತೀವ್ರಗಾಮಿ ಸೋಸಿಯಲಿಸ್ಟರೂ, ಪ್ರಖ್ಯಾತ ಮೇಧಾವಿಯೂ, ನ್ಯಾಯ ಶಾಸ್ತ್ರ ವಿಶಾರದರೂ ಆದ ಸರ್. ಸ್ಟೆಫೋರ್ಡ್ ಕ್ರಿಪ್ಸರು ಇದೇ ತಾ. 7ರಲ್ಲು ವಿಮಾನ ಮೂಲಕ ಕರಾಚಿಗೆ ಬಂದಿಳಿದು ಅಲಹಾಬಾದಿಗೆ ಹೋಗಿ ಪಂಡಿತ ಜವಾಹರಲಾಲರ ಅತಿಥಿಯಾಗಿ ಕಾಂಗ್ರೆಸ್ ಮತ್ತು ಇತರ ಮುಖಂಡರೊಡನೆ ಮಾತುಕತೆ ನಡಿಸುತ್ತಿರುವರು. ಸರ್. ಸ್ಟೆಫೋರ್ಡರು, ಸರ್. ಸಿಕಂದರ್ ಹಾಯತ್ ಖಾನ್, ಮಿ. ಜಿನ್ನ, ಫಜ್ಲುಲ್ ಹಕ್ ಮೊದಲಾದವರೊಡನೆ ಮತ್ತು ವೈಸರಾಯರೊಡನೆ ಕೂಡಾ ಮಾತುಕತೆ ನಡಿಸುವರು. ಶ್ರೀ. ಸುಭಾಸ ಚಂದ್ರ ಬೋಸರೇ ಮೊದಲಾದವರೊಡನೆಯೂ ಮಾತಾಡಲಿರುವರು. ಹಿಂದೂದೇಶದ ಕುರಿತು ಇಂಗ್ಲೆಂಡಿನಲ್ಲೀಗ ಹೆಚ್ಚಿನ ಸಹಾನುಭೂತಿಯು ತೋರಿಬರುತ್ತಿದೆ. ಆದರೆ ಹಿಂದೀ ರಾಜಕೀಯ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದಿರುವವರು ಬಹಳ ಸ್ವಲ್ಪ ಮಂದಿ. ಆದಕ್ಕಾಗಿ ಬ್ರಿಟಿಷ್ ಪಾರ್ಲಿಮೆಂಟಿನ ಕೆಲವು ಮೆಂಬರರು ಹಿಂದೂದೇಶವನ್ನು ಸಂದರ್ಶಿಸುವ ಆಲೋಚನೆಯಲ್ಲಿದ್ದಾರೆ. ಗಾಂಧಿಜಿಯವರು ಆವಸರ ಮಾಡದೆ ಸಂಧಿಯ ದ್ವಾರವನ್ನು ತೆರೆದಿಟ್ಟಿರುವುದು ಬಹಳ ವಿವೇಕಪರ ಧೋರಣೆ. ಕಾಂಗ್ರೆಸಿನ ಕೇಳಿಕೆಯ ಪ್ರಾಮುಖ್ಯ ವಿಷಯವನ್ನು ಬ್ರಿಟಿಷ್ ಸರಕಾರವು ತೃಪ್ತಿಪಡಿಸಲೆತ್ನಿಸಬಹುದು. ಹಿಂದೀ ಪ್ರಶ್ನೆಯ ಕುರಿತು ಕನ್‌ಸರ್ವೇಟಿವ್ ಪಕ್ಷೀಯರು ಕೂಡಾ ತಮ್ಮ ಧೋರಣೆಯನ್ನು ಮಾರ್ಪಡಿಸುತ್ತಾರೆ. ಅಲ್ಪ ಸಂಖ್ಯಾಕ ಮತ್ತು ಹಿಂದೀ ರಾಜರುಗಳ ಪ್ರಶ್ನೆಯನ್ನು ಹೇಗಾದರೂ ಇತ್ಯರ್ಥಪಡಿಸಬೇಕು; ಹಿಂದೂಸ್ಥಾನದಲ್ಲಿ ಐಕ್ಯ ಮತ್ತು ಶಾಂತಿಯನ್ನುಂಟುಮಾಡುವ ನಿಶ್ಚಿತ ಯೋಜನೆಯನ್ನು ಯಾರಾದರೂ ಸೂಚಿಸಬೇಕೆಂಬೇ ಸರ್. ಸ್ಟೆಫೋರ್ಡರ ಅಭಿಮತ. ಅವರು ಈ ಕುರಿತು ತನ್ನಿಂದ ಸಾಧ್ಯವಾದ ಪ್ರಯತ್ನ ನಡಿಸಲಿರುವರು. ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಪ್ರಶ್ನೆಯ ವಿವರಗಳನ್ನು ಪರಿಶೀಲಿಸುವ ಮನೋವೃತ್ತಿಯು ಡಿಲ್ಲಿಯಲ್ಲಿ ಕೂಡಾ ತೋರಿಬರುತ್ತದೆ. ಈ ಸಂದರ್ಭದಲ್ಲಿ ಮಿ. ಜಿನ್ನರು, ದೇಶದ ಸ್ವಾತಂತ್ರ್ಯ ವಿಘಾತುಕ ಧೋರಣೆ ವಹಿಸಿ, ಒಕ್ಕಟ್ಟಿಗೆ ದೊಡ್ಡ ವಿಘ್ನಕಾರಿಯಾಗಿರುವುದು ದೊಡ್ಡ ದುರ್ದೈವವೇ ಸರಿ.

CANARA BANK LIMITED

HEAD OFFICE:—**MANGALORE.**

A NET WORK OF 37 BRANCHES.

ALLEPPEY	CALICUT	KARKALA
ARSIKERE	CANNANORE	KASARGODE
BADAGARA	CHERAI	KAYAMKULUM
BANGALORE	CHIKMAGALUR	KUMBLA
BANTWAL	COCHIN	MANGALORE-BUNDER
BELGAUM	COONDAPOOR	MANGALORE-CITY
BELTHANGADY	DAVANGERE	MANJESHWAR
BOMBAY-FORT	DHARWAR	MOOLKY
BOMBAY-MANDVI	DODDBALLAPUR	PAYYANNUR
BOMBAY-GIRGAUM	ERNAKULAM	PUTTUR
BOMBAY-KALBADEVI	GANGULLI	QUILON
BOMBAY-PAREL	HUBLI	UDIPI
	UPPINANGADY	

ಮುಂಡ್ಕೂರು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನ

ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದ ಕಟ್ಟೋಣಗಳ ಜೀರ್ಣೋದ್ಧಾರ ಮತ್ತು ಅಷ್ಟಬಂಧ, ಬ್ರಹ್ಮಕಲಶ ಮಹಾವಿಧಿಯ ಸಂಬಂಧ ಪದ್ರಿ ದೇವಳದ ಅರ್ಚಕ ಶ್ರೀ ರಾಮ ಭಟ್ರು, ಮೊಕ್ತೇಸರ ಶ್ರೀ ನಡಿಗುತ್ತು ರಾಜು ಶೆಟ್ರು ಮತ್ತು ಇನ್ನದ ಗುತ್ತು ಪಟೇಲ ಸುಬ್ಬ ಶೆಟ್ರು ಸಹಾ ಧನ ಸಹಾಯ ಹೊಂದುವ ಬಗ್ಗೆ ಬೊಂಬಾಯಿಗೆ ಹೋದವರು ಇದೇ ತಳದ ತಾ 6-12-1939ನೇ ರಾತ್ರಿ ಮುಂಡ್ಕೂರಿಗೆ ಬಂದು ತಲಪಿರುತ್ತಾರೆ. ಆ ಸಂಬಂಧ ತಾ. 8-12-39ನೇ ದಿನ ಸಂಬಂಧ ಪಟ್ಟ ಇನ್ನ, ಮುಂಡ್ಕೂರು, ಮುಲ್ಲಡ್ಕ ಗ್ರಾಮಸ್ಥರ ಒಂದು ಮಹಾ ಸಭೆಯು ದೇವಸ್ಥಾನದಲ್ಲಿ ಜರಗಿಸಿ, ಬೊಂಬಾಯಿಯಲ್ಲಿ ಸಿಕ್ಕಿದ ಧನ ಸಹಾಯದ ವರದಿಯನ್ನು ಸಭೆಯ ಮುಂದಿಟ್ಟರು. ಒಟ್ಟಿಗೆ ರೂಪಾಯಿ **7088-2-2** ಬೊಂಬಾಯಿಯಲ್ಲೇ ಉದಾರಿಗಳಿಂದ ಧನ ಸಹಾಯ ದೊರಕಿದ್ದು ತುಂಬಾ ಸಂತೋಷದ ವಿಷಯವಾಗಿದೆ.

ಧನ ಸಹಾಯ ಮಾಡಿದ ಮಹನೀಯರಿಗೆ ದೇವಳದ ಕಡೆಯಿಂದ ಗ್ರಾಮ ಸಮಸ್ತರು ಧನ್ಯವಾದಗಳನ್ನು ಅರ್ಪಿಸಬೇಕೆಂದೂ, ನೂರು ರೂಪಾಯಿಗಳಿಗಿಂತ ಹೆಚ್ಚಿಗೆ ಧನ ಸಹಾಯ ಮಾಡಿದವರ ಹೆಸರುಗಳನ್ನು ದೇವಸ್ಥಾನದಲ್ಲಿ ಶಿಲಾ ಶಾಸನದ ಮೂಲಕ ಬರೆದಿಡಬೇಕೆಂದೂ ಸಭೆಯಲ್ಲಿ ನಿರ್ಣಯಿಸಲಾಯಿತು. ಕಟ್ಟೋಣದ ಕೆಲಸಗಳು ಭರದಿಂದ ಸಾಗುತ್ತಿವೆ.

ನೂರು ರೂಪಾಯಿಗಳಿಗಿಂತ ಜಾಸ್ತಿ ವಸೂಲು ಕೊಟ್ಟವರ ಹೆಸರುಗಳು.

1. ಮುಂಡ್ಕೂರು ರೆಂಜಗುತ್ತು ರಾಮಣ್ಣ ಶೆಟ್ರು 1025-0-0. 2. ಪದ್ರಿಯವರ ಪತ್ನಿ ಸೀತೆ ಮೀನಾಕ್ಷಿ ಹೆಗಡ್ತಿಯವರು 104-0-0. 3. ಮುಂಡ್ಕೂರು ರೆಂಜಗುತ್ತು ರಾಮರಾಯ ಶೆಟ್ರ ಪತ್ನಿ ದಿವಂಗತ ಕಲ್ಯಾಣಿ ಶೆಟ್ತಿಯರ ಹೆಸರಲ್ಲಿ ರಾಮರಾಯ ಶೆಟ್ರು 103-0-0. 4. ಮುಂಡ್ಕೂರು ರೆಂಜಗುತ್ತು ಮುತ್ತಪ್ಪ ಶೆಟ್ರ ಪತ್ನಿ ಅಕ್ಕಣಿ ಶೆಟ್ತಿಯರು 103-0-0. 5. ಮುಂಡ್ಕೂರು ಉಜ್ಜಣ್ಣ ಶೆಟ್ರ ಪತ್ನಿ ಸರಸ್ವತಿ ಶೆಟ್ತಿರ ಬಗ್ಗೆ ಉಜ್ಜಣ್ಣ ಶೆಟ್ರು 165-0-0. 6. ನಂದಳಿಕೆ ನಡುಮನೆ ಗುತ್ತು ನಾರಾಯಣ ಶೆಟ್ರು 555-0-0. 7. ಪದ್ರಿಯವರ ಪತ್ನಿ ಗಿರಿಜ ಶೆಟ್ತಿರು 100-0-0. 8. ಇನ್ನ ಬಗ್ಗರ ಗುತ್ತು ಸೇಸು ಶೆಟ್ರು 505-0-0. 9. ಪದ್ರಿಯವರ ಪತ್ನಿ ಪಾರ್ವತಿ ಶೆಟ್ತಿರು 146-0-0. 10. ಸಿದ್ಧಾರು ಬೀಡು ಬಾಬ ಶೆಟ್ರು 127-0-0. 11. ಸೂಡ ಕಲ್ಲೊಟ್ಟು ಗುತ್ತು ವೀರಪ್ಪ ಶೆಟ್ರ ಪತ್ನಿ ಭವಾನಿ ಶೆಟ್ತಿರ ಬಗ್ಗೆ ವೀರಪ್ಪ ಶೆಟ್ರು 125-0-0. 12. ಪುತ್ತೂರು ನಾಲದೆ ಬಾಳು ಶೆಟ್ರ ಪತ್ನಿ ಸೀತ ಶೆಟ್ತಿರು 101-0-0. 13. ಬೇಲಾಡಿ ಕುಕ್ಕಿಮಾರು ರಾಮ ಶೆಟ್ರು 111-0-0 14. ಶಿರ್ವ ಶಾನುಭಾಗರ ಮನೆ ಅಣ್ಣು ಶೆಟ್ರು 101-0-0. 15. ಬೆಳ್ಮಣ್ಣು ಮುತ್ತಯ ಶೆಟ್ರು 105-0-0. 16. ಬೋಳ ಕುಕ್ಕರ ಪದವು ತಿಮ್ಮಪ್ಪ ಶೆಟ್ರು 100-0-0. 17. ಮೂಲ್ಕಿ ಮಾನಂಪಾಡಿ ಬಾಬ ಶೆಟ್ರು 111-0-0. 18. ಕುತ್ಯಾರು ಪಟ್ಟಾಡಿ ಮೈಂದ ಪೂಜಾರಿರು 100-9-9. 19. ಮುಲ್ಲಡ್ಕ ಅರ್ಬಿ ರುಕ್ಕ ಶೆಟ್ರು 102-2-3 20. ಇನ್ನ ಮೂಡು ಸಾಲುಮಾನ, ಕೃಷ್ಣ ಶೆಟ್ರು, ಸೇಸ ಶೆಟ್ರು, ಗಿರಿಯ ಶೆಟ್ರು ವಗೈರೆರು 107-5-9. 21. ಉಡ್ಪಿ ತಾಲೂಕು ಪಡುಬಿದ್ರಿ ಗ್ರಾಮದ ವಿಠಲ ಶೆಟ್ರು 115-0-0. 22. ಸಂಡೂರು ಚಿತ್ರಬೈಲು ನಡಿಮನೆ ಸಂಜೀವ ಶೆಟ್ರು 120-0-0. 23. ಶಿರ್ವ ಭೂತಬೆಟ್ಟು ನಾಗಪ್ಪ ಶೆಟ್ರು 101-0-0. 24. ಕಾಪು ಪಡುಕರೆ ಕೋಚ್ಚ ಪೂಜಾರಿರು 100-3-5 25. ಕುಡೆತ್ತೂರು ಮೂಡು ದೇವಣ್ಣ ಬೊಮ್ಮಯ ಶೆಟ್ರು 100-4-5. 26. ಮೂಲ್ಕಿ ಅಧಿಕಾರಿ ಬೆಟ್ಟು ಕೋಣಪ್ಪ ಶೆಟ್ರು 101-5-5. 27. ಹೆಜಮಾಡಿ ರಾಮಚಂದ್ರ ಶೇಟರು 101-15-5. 28. ಬಳಕುಂಜೆ ಕೋಟಿನಾಯ ಗುತ್ತು ಗೋಪಾಲ ಶೆಟ್ರು 100-15-11. 29. ಸೂಡ ಅಂಗಡಿ ಶೆಟ್ರು 110-14-7. 30. ಮಂಗಳೂರು ಕೊಡಿಯಾಲ ಬೈಲು ದೊಡ್ಡಯ ಶೆಟ್ರು 100-13-7. 31. ಪಯ್ಯಾರು ಹೊಸಮನೆ ಮುದ್ದು ಶೆಟ್ರು 100-0-0. 32. ಮುಂಡ್ಕೂರು ಸಟ್ಟೆಲ್ ಸೋಮಯ ಶೆಟ್ರು 105-0-0. 33. ಪುತ್ತೂರು ತಾಲೂಕು ಪಾಣಾಜೆ ಸುಬ್ಬಣ್ಣ ಶೆಟ್ರು 101-0-0. 34. ಮೂಲ್ಕಿ ಕಕ್ವ ರಾಮರಾಯ ಕಮ್ತಿರು 105-5-5. 35. ಮುಂಡ್ಕೂರು ಮುತ್ತಯ ಶೇರಿಗಾರ (ಟೈಲರ್) 125-4-6. 36. ಉಳಿಪಾಡಿ ನಡಿಮನೆ ಕರಿಯಣ್ಣ ಶೆಟ್ರು 100-5-5. 37. ಪಡುಬಿದ್ರೆ ಕೃಷ್ಣರಾವ್ (ಪಡುಬಿದ್ರೆ ಬ್ರದರ್ಸ್) 101-0-0. 38. ಇನ್ನ ಮದ್ಮಲ ಕೋಟಿ ಪೇಡು ಶೆಟ್ರು 101-15-5. 39 ಮುಂಡ್ಕೂರು ಜೈನಪೇಟೆ ವಿಠಲರಾಯ ಕಮ್ತಿರು 101-5-5. 40. ಮುಂಡ್ಕೂರು ಅಂಗಡಿಗುತ್ತು ಮೋನು ಶೆಟ್ರು 101-0-0. ಜುಮ್ಲಾ ರೂಪಾಯಿ 6081-14-7. ಚಿಲ್ಲರೆ ಉದಾರಿಗಳಿಂದ ಜಮಾ ರೂ. 1006-3-7. ಒಟ್ಟು ಜಮಾ **7088-2-2.**

ಆಡಳ್ತೆದಾರ: ನಡಿಗುತ್ತು ರಾಜು ಶೆಟ್ಟಿ.

Your anxiety in finding a sound and progressive Life Office both to insure or to represent will end on consultation with:

Branch Secretary,
The New Guardian of India Life Ins. Co. Ltd., Madras.
MANGALORE Branch.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಜೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.

(Incorporated in British India)

ಉಡುಪಿ, ಗುರುವಾರ ತಾ. ೧೪-೧೨-೩೯

ದೇಶದ ದುರ್ದೈವ

ಇಂದೀಗ ಹಿಂದೂದೇಶದ ಸ್ವಾತಂತ್ರ್ಯಕ್ಕೆ ತೊಡಕಾಗಿರುವ ಒಂದೇ ಒಂದು ವಿಷಯವೆಂದರೆ ಹಿಂದೂ ಮುಸಲ್ಮಾನ ಪ್ರಶ್ನೆ. ಅದನ್ನು ಇತ್ಯರ್ಥಗೊಳಿಸಿದ ಪಕ್ಷದಲ್ಲಿ ತಾವು ಸ್ವಾತಂತ್ರ್ಯವೀಯಲು ಸಿದ್ಧರಿರುವೆವೆಂದು ಬ್ರಿಟಿಷ್ ಸರಕಾರವು ಸದಾ ಹೇಳುವುದು. ಹಿಂದೂ ಮುಸಲ್ಮಾನ ಪ್ರಶ್ನೆಯು ಅದೊಂದು ಬೇತಾಳ ಸಮಸ್ಯೆ. ಮಿ. ಜಿನ್ನರಂತಹ ಕಾಂಗ್ರೆಸಿನ ಬದ್ಧ ದ್ವೇಷಿಯು ಮುಸಲ್ಮಾನ ನಾಯಕರಾಗಿರುವನಕ ಈ ಸಮಸ್ಯೆಯು ಇತ್ಯರ್ಥವಾಗುವ ಹಾಗಿಲ್ಲೆಂದು ಖಚಿತವಾಗಿ ಸರಕಾರವು ತಿಳಿದುಕೊಂಡಿರುವಂತಿದೆ. ಕಳೆದ ರೌಂಡ್‌ಟೇಬಲ್ ಪರಿಷತ್ತಿನ ಸಂದರ್ಭದಲ್ಲೂ ಇದೇ ರೀತಿಯ ಪರಿಸ್ಥಿತಿಯು ಉಂಟಾಗಿತ್ತು. ದೇಶದ ಸ್ವಾತಂತ್ರ್ಯ ಸಾಧನೆಗಾಗಿ, ಆದಷ್ಟು ಹೆಚ್ಚಿನ ರಾಜಕೀಯ ಹಕ್ಕುಬಾಧ್ಯತೆಗಳನ್ನು ಬ್ರಿಟಿಷರಿಂದ ಕಿತ್ತುಕೊಳ್ಳುವುದಕ್ಕಾಗಿ ಮಹಾತ್ಮ ಗಾಂಧಿಯವರು ಪ್ರಯತ್ನಿಸಿದಾಗ, ಹಿಂದೀ ಪ್ರತಿನಿಧಿಗಳು, ರೊಟ್ಟಿಚೂರಿಗಾಗಿ ಕಚ್ಚಾಡುವ ನಾಯಿಗಳಂತೆ ತಮ್ಮೊಳಗೆ ಜಗಳವಾಡಿಕೊಂಡು ಕಟ್ಟಕಡೆಗೆ ತಮ್ಮ ಕಲಹವನ್ನೇ ಇತ್ಯರ್ಥಪಡಿಸಲು ಬ್ರಿಟಿಷ್ ಪ್ರಧಾನಮಂತ್ರಿಗಳ ಮಧ್ಯಸ್ಥಿಕೆಯನ್ನಾಶಿಸಿ ದೇಶಘಾತುಕ ಜಾತೀಯ ಎವಾರ್ಡನ್ನು ಪಡೆದರು. ದೇಶದಲ್ಲಿ ಈಗಣ ವಿದ್ಯಮಾನಗಳನ್ನು ಕಂಡರೆ ರೌಂಡ್‌ಟೇಬಲ್ ಪರಿಷತ್ತಿನಂತೆಯೇ ಆಗುವುದೋ ಎಂಬ ಭೀತಿಗೆಡೆಯಾಗುತ್ತದೆ. ಕಾಂಗ್ರೆಸು ದೇಶದ ಸಂಪೂರ್ಣ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದೊತ್ತಿ ಇಡೀ ಲೋಕದ ಸಹಾನುಭೂತಿ ಪಡೆದು, ಬ್ರಿಟಿಷರಿಗೂ ಅದನ್ನು ಹಿಂದಿನಂತೆ ಮೂಲೆಗೊತ್ತಲು ಅಥವಾ ಮುಂದೆ ಹಾಕಲು ಅಸಾಧ್ಯವೆಂಬಂತಹ ಪರಿಸ್ಥಿತಿಯುಂಟಾಗಿರುವಾಗ ಮಿ. ಜಿನ್ನರು ಇದೇ ಸಂದರ್ಭದಲ್ಲಿ ಹಿಂದೂಮುಸಲ್ಮಾನ ಪ್ರಶ್ನೆಯ ಪ್ರೇತವನ್ನೆಬ್ಬಿಸಿ, ಕಾಂಗ್ರೆಸಿನ ಮೇಲೆ ದ್ವೇಷಸಾಧಿಸುವುದನ್ನೇ ತನ್ನ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಂಡು ಹಿಂದೀಯರೊಳಗೇನೇ ದೊಡ್ಡ ಒಡಕನ್ನುಂಟುಮಾಡುವುದು ದೇಶದ ಅತಿ ದೊಡ್ಡ ದುರ್ದೈವ. ಕಾಂಗ್ರೆಸು ಮುಸ್ಲಿಮ್ ಲೀಗನ್ನು ವಿಶೇಷವಾಗಿ ಮಿ. ಜಿನ್ನರನ್ನು ತೃಪ್ತಿಪಡಿಸಲು ಬಹಳ ಪ್ರಯತ್ನಮಾಡಿದೆ. ಪಂಡಿತ ನೆಹರುಗಳು ಇದೇ ತಾ. 14ರಲ್ಲು ಅದಕ್ಕಾಗಿ ಮಿ. ಜಿನ್ನರನ್ನು ಬೊಂಬಾಯಿಯಲ್ಲಿ ಕಂಡು ಮಾತಾಡುವವರಿದ್ದಾರೆ. ಹಿಂದೂಮುಸಲ್ಮಾನ ಪ್ರಶ್ನೆಯು ರಾಜಿಯಿಂದ ಈ ಸಲ ತೀರ್ಮಾನವಾಗಿ ಬ್ರಿಟಿಷ್ ಸರಕಾರದ ಪರೀಕ್ಷೆಯ ಕಾಲವು ಸನ್ನಿಹಿತವಾಗಿರುವುದೆಂಬ ಆಶೋದಯವುಂಟಾಗಿದೆ. ಮಿ. ಜಿನ್ನರೇ ಆ ಕುರಿತು ವಿಶ್ವಾಸ ಸೂಚಿಸಿರುತ್ತಾರೆ. ಇಂತಹ ಸಂದರ್ಭದಲ್ಲಿ ಮಿ. ಜಿನ್ನರು, ಕಾಂಗ್ರೆಸ್ ಮಂತ್ರಿಗಳು ತಾವಾಗಿ ರಾಜಿನಾಮೆಕೊಟ್ಟು ಹೊರ ಬಂದುದನ್ನು ಸ್ವಾಗತೀಕರಿಸಿ ಅವರನ್ನು ಅಭಿನಂದಿಸುವ ಬದಲಿಗೆ, ಅವರಿಂದ ಮುಸಲ್ಮಾನರ ಮಹತ್ತಾದ ಪೀಡೆಯೊಂದು ದೂರವಾಗಿರುವುದೆಂದು ಭಾವಿಸಿ, ಅದರ ಸಂತೋಷಾರ್ಥವಾಗಿ ಇದೇ ತಾ. 22ರನ್ನು ಮುಸಲ್ಮಾನರ ಬಿಡುಗಡೆಯ ದಿನವಾಗಿ ಆಚರಿಸಬೇಕೆಂದು ವಿನಂತಿಹೊರಡಿಸಿರುವುದು ಅವಿವೇಕದ ಪರಮಾವಧಿಯಾಗಿದೆ. ಅವರು ಹಿಂದೂದೇಶದ ಗುಲಾಮಗಿರಿಯನ್ನು ಸ್ಥಿರವಾಗಿರಿಸಲೆಳಸುವ ಬ್ರಿಟಿಷ್ ಸರಕಾರದ ಕಪಟ ನಾಟಕ ಗೊಂಬೆಯಾಗಿ ಅವರಿಗೆ ನೆರವಾಗಿರುತ್ತಾರೆ. ಒಕ್ಕಟ್ಟಿನ ಬದಲಿಗೆ ಇಕ್ಕಟ್ಟಿನ ಬೀಜವನ್ನೇ ಬಿತ್ತಿ ದೇಶದ ವಾತಾವರಣವನ್ನೇ ಕೆಡಿಸಿರುತ್ತಾರೆ.

ಮಿ. ಜಿನ್ನರ ಉದ್ದೇಶವೇನು?

ಕೇವಲ ಆರೋಪಗಳ ಪಲ್ಲವಿಯನ್ನು ಎಡೆಬಿಡದೆ ಹಾಡುತ್ತಿರುವುದೇ ರುಜುವಾತಾದರೆ ಕಾಂಗ್ರೆಸ್ ಮಂತ್ರಿಗಳು ಮುಸಲ್ಮಾನರಿಗೆ ಹೆಚ್ಚಿನ ಅನ್ಯಾಯ ಮಾಡಿರುವರೆಂದು ಹೇಳಬಹುದು. ಮಿ. ಜಿನ್ನ ಮಿ. ಹಕ್ಕರೇ ಮೊದಲಾದ ಮುಸ್ಲಿಮ್ ಲೀಗ್ ಮುಖಂಡರು ಕಾಂಗ್ರೆಸ್ ಮಂತ್ರಿಗಳ ಆಡಳಿತದಿಂದ ಮುಸಲ್ಮಾನರಿಗೆ ಬಹಳ ಅನ್ಯಾಯವಾಗಿದೆ, ಹಾಗಾಗಿದೆ ಹೀಗಾಗಿದೆಯೆಂದು ಕೂಗೆಬ್ಬಿಸಿರುವರೇ ಹೊರತು ಅವುಗಳನ್ನು ಈ ವರೆಗೂ ರುಜುಪಡಿಸುವ ಗೊಡವೆಗೇ ಹೋಗಿಲ್ಲ. ಕಾಂಗ್ರೆಸ್ ಮಂತ್ರಿಗಳ ಮೇಲೆ ಕೆಲವು ನಿಶ್ಚಿತ ಆರೋಪಗಳನ್ನು ಹಾಕಿ ತಯಾರಾದ ಪೀರ್‌ಪುರ್ ಕಮಿಟಿಯವರು ತಯಾರಿಸಿರುವ ವರದಿಯಲ್ಲಿ ಹುರುಳಿಲ್ಲೆಂಬುದು ಸಿದ್ಧವಾಗಿದೆ. ಕಾಂಗ್ರೆಸ್ ಪ್ರೆಸಿಡೆಂಟರಾದ ಬಾಬು ರಾಜೇಂದ್ರಪ್ರಸಾದರು ಕಾಂಗ್ರೆಸ್ ಮಂತ್ರಿಗಳ ಮೇಲಿನ ಆರೋಪವೇನೆಂದು ತಿಳಿಸಬೇಕೆಂದು ಮಿ. ಜಿನ್ನರೊಡನೆ ಕೇಳಿದಾಗ ಅವನ್ನೆಲ್ಲಾ ತಾನು ವೈಸರಾಯರಿಗೆ ತಿಳಿಸಿರುವೆನೆಂಬ ಉತ್ತರ ದೊರೆಯಿತು. ಮಹಾತ್ಮಾ ಗಾಂಧಿಯವರು ಈ ಆರೋಪಗಳನ್ನು ತಿಳಿಯಲು ಬಹಳವಾಗಿ ಪ್ರಯತ್ನಪಟ್ಟರೂ ಯಾರೂ ಅವರಿಗೆ ತಿಳಿಸಿದವರಿಲ್ಲ. ಸಂಯುಕ್ತ ಪ್ರಾಂತದಲ್ಲಿ ಬಹಳ ಅನ್ಯಾಯವಾಗಿದೆಯೆಂದು ಮಿ. ಫಜ್ಲುಲ್ ಹಕ್ಕರು ಬೊಬ್ಬೆ ಹಾಕಿದಾಗ ಆ ಅನ್ಯಾಯಗಳೇನೆಂದು ತನಗೆ ತಿಳಿಸಬೇಕೆಂದು ಪಂಡಿತ ಜವಾಹರಲಾಲರು ಅವರನ್ನು ಆಹ್ವಾನಿಸಿ ಸುಮ್ಮನಾಗುವಂತೆ ಮಾಡಿರುವರು. ಅಂದ ಮೇಲೆ, ಕಾಂಗ್ರೆಸಿನವರು ತಮ್ಮ ಪಕ್ಷದವರನ್ನು ಮಂತ್ರಿಗಳನ್ನಾಗಿ ಸೇರಿಸಿಕೊಳ್ಳಲಿಲ್ಲೆಂಬ ಒಂದೇ ಕಾರಣದಿಂದ ಮಿ. ಜಿನ್ನರೇ ಮೊದಲಾದವರು ಕಾಂಗ್ರೆಸ್ ಮಂತ್ರಿಗಳ ಕುರಿತು ಅಪಪ್ರಚಾರಮಾಡಿ ಅವರ ಆಡಳಿತದಿಂದ ಮುಸಲ್ಮಾನರಿಗೆ ದೊಡ್ಡ ಅನ್ಯಾಯವಾಗಿದೆಯೆಂಬ ಸುಳ್ಳು ಕೂಗೆಬ್ಬಿಸಿ ತಮ್ಮ ಬೇಳೆ ಬೇಯಿಸುವ ದುರುದ್ದೇಶ ಪ್ರೇರಿತರಾಗಿರುವರೆಂಬುದು ಸ್ಪಷ್ಟವಿದೆ.

ಸರ್ದಾರ್ ವಲ್ಲಭಾಯಿಯವರ ಸ್ಪಷ್ಟೋಕ್ತಿ

ಮಿ. ಜಿನ್ನರ ಘೋಷಣೆಯು ಅರ್ಥರಹಿತವಾದುದು ಮತ್ತು ಕಾಂಗ್ರೆಸ್ ಮಂತ್ರಿಗಳ ಮೇಲೆ ಅವರು ಮಾಡಿರುವ ಆರೋಪಗಳು ಸಂಪೂರ್ಣವಾಗಿ ಆಧಾರವಿರಹಿತವಾದುವೆಂಬುದನ್ನು ಸರ್ದಾರ ವಲ್ಲಭಾಯಿಯವರು ಸ್ಪಷ್ಟೀಕರಿಸಿ ಹೇಳಿಕೆಯೊಂದನ್ನು ಹೊರಡಿಸಿರುವರು. ಕಾಂಗ್ರೆಸ್ ಮಂತ್ರಿಗಳ ಆಡಳಿತ ದೋಷಗಳನ್ನು ಕಾಂಗ್ರೆಸ್ ಹೈಕಮಾಂಡಿನ ತಲೆಯ ಮೇಲೆ ಹಾಕಿದ್ದಾರೆ. ಜಿನ್ನಾ ಸಾಹೇಬರು ಇದರಿಂದ ಅವರ ಉದ್ದೇಶವು ಕೇವಲ ದ್ವೇಷಸಾಧನೆಯೆಂದು ಮತ್ತಷ್ಟು ಸಿದ್ಧವಾಗುವುದು. ಯಾಕೆಂದರೆ ಮಂತ್ರಿಗಳ ಆಡಳಿತ ವಿಷಯದಲ್ಲಿ ಹೈಕಮಾಂಡಿನವರು ಕೈಹಾಕಲೇ ಇಲ್ಲ. ಮಿ. ಜಿನ್ನರ ಅಸ್ಪಷ್ಟವಲ್ಲದ ಆರೋಪಗಳನ್ನು ಪ್ರತಿಭಟಿಸುವುದು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಸರ್ದಾರ್ ವಲ್ಲಭಾಯಿಯವರ ಕರ್ತವ್ಯವಿದೆ. ಮುಸ್ಲಿಮ್ ಲೀಗಿನವರು ಪೀರ್‌ಪುರ್ ಕಮಿಟಿಯ ವರದಿಯಲ್ಲಿ ಕಾಂಗ್ರೆಸ್ ಮಂತ್ರಿಗಳ ಮೇಲೆ ಕೆಲವು ಆರೋಪಗಳನ್ನು ಹೊರಿಸಿದ ಕೂಡಲೆ ಸರ್ದಾರ್ ವಲ್ಲಭಾಯಿಯವರು ಆ ಕುರಿತು ವಿಚಾರಿಸಿ, ಅವುಗಳು ನಿರಾಧಾರವಾದುವೆಂಬುದನ್ನು ವ್ಯಕ್ತಗೊಳಿಸಿದರು. ಪ್ರತಿ ಪ್ರಾಂತಗಳ ಮಂತ್ರಿಗಳೂ ಈ ಆರೋಪಗಳು ಆಧಾರರಹಿತವಾದುವೆಂಬುದನ್ನು ಜಾಹೀರಾಗಿ ಸಿದ್ಧಪಡಿಸಿರುವರು. ಆ ಮೇಲೆ ಬ್ರಿಟಿಷ್ ಸರಕಾರವು ತನ್ನ ಯುದ್ಧದ ಉದ್ದೇಶವನ್ನು ವ್ಯಕ್ತಪಡಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕೇಳಿಕೊಂಡಾಗ ಮಿ. ಜಿನ್ನರು ಪುನಃ ಕಾಂಗ್ರೆಸ್ ಮಂತ್ರಿಗಳ ಮೇಲೆ ಆರೋಪ ಹಾಕಿದರು. ಆಗ ಬಾಬು ರಾಜೇಂದ್ರಪ್ರಸಾದರು ಆ ಕುರಿತು ನಿಷ್ಪಕ್ಷಪಾತಿಗಳಿಂದ ವಿಚಾರಣೆ ನಡಿಸುವ ಸೂಚನೆ ಮಾಡಿದರು. ಮಿ. ಜಿನ್ನರು ಅದಕ್ಕೊಪ್ಪದೆ ತನ್ನ ಆರೋಪಗಳನ್ನೆಲ್ಲಾ ವೈಸರಾಯರ ಮುಂದಿಟ್ಟಿರುವೆನೆಂದರು. ಅನಂತರ ಈಗ ವೈಸರಾಯರ ತೀರ್ಮಾನವನ್ನೂ ತಿಳಿದುಕೊಳ್ಳುವ ತಾಳ್ಮೆಯಿಲ್ಲದೆ ಕಾಂಗ್ರೆಸ್ ಮಂತ್ರಿಗಳ ನಿಷೇಧ ದಿನಾಚರಣೆಗಾಗಿ ವಿನಂತಿ ಹೊರಡಿಸಿರುವರು. ಮಿ. ಜಿನ್ನರ ಆರೋಪಗಳನ್ನು ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಯವರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಚೆನ್ನಾಗಿ ಪರಿಶೀಲಿಸಿರುವರು. ಮತ್ತು ಅಲ್ಪಸಂಖ್ಯಾಕರಿಗೇನಾದರೂ ಅನ್ಯಾಯವಾಗುವಂತಿದ್ದರೆ ಅದನ್ನು ತಮಗೆ ನಿರ್ದಾಕ್ಷಿಣ್ಯವಾಗಿ ತಿಳಿಸಬೇಕೆಂದು ಪ್ರತಿ ಪ್ರಾಂತದ ಕಾಂಗ್ರೆಸ್ ಪ್ರಧಾನಮಂತ್ರಿಗಳು ಗವರ್ನರರೊಡನೆ ಕೇಳಿಕೊಳ್ಳಬೇಕೆಂದು ಸರ್ದಾರ್ ಪಟೇಲರೇ ತಿಳಿಸಿದ್ದರು. ಇದು ಹೊರತು ಮಿ. ಜಿನ್ನರ ಆರೋಪಗಳು ನ್ಯಾಯವಾದುವುಗಳೋ ಎಂದು ಇತ್ತಲಾಗಿ ಪುನಃ ಕಾಂಗ್ರೆಸ್ ಪ್ರಧಾನ ಸಚಿವರು ಗವರ್ನರರುಗಳೊಡನೆ ಕೇಳಿ, ಅವುಗಳಿಗೇನೂ ಆಧಾರವಿಲ್ಲೆಂಬ ಆಶ್ವಾಸನೆಯನ್ನು ಅವರಿಂದ ಪಡೆದಿದ್ದರು. ಪ್ರತಿ ಪ್ರಾಂತದ ಗವರ್ನರರೂ, ವೈಸರಾಯರೂ ಇಂಡಿಯಾ ಸಕ್ರೆಟರಿಗಳೇ ಮೊದಲಾದವರೂ, ಕಾಂಗ್ರೆಸು ಮಂತ್ರಿಗಳ ಆಡಳಿತವನ್ನು ಪ್ರಶಂಸಿಸಿರುವರು. ಅಲ್ಪಸಂಖ್ಯಾಕರ ಹಿತರಕ್ಷಣೆಯ ಸಂಬಂಧವಾದ ವಿಶೇಷಾಧಿಕಾರಗಳನ್ನು ಗವರ್ನರರು ಉಪಯೋಗಿಸಬಾರದೆಂದೇನೂ ಕಾಂಗ್ರೆಸು ಸರಕಾರದಿಂದ ಆಶ್ವಾಸನೆ ಪಡೆದಿರಲಿಲ್ಲ. ಬದಲಿಗೆ ಆ ಅಧಿಕಾರವನ್ನು ಅಗತ್ಯಬಂದಲ್ಲಿ ಉಪಯೋಗಿಸಲಾಗುವುದೆಂದು ವೈಸರಾಯರೇ ಸ್ಪಷ್ಟವಾಗಿ ತಿಳಿಸಿದ್ದರು. ಅಂದ ಮೇಲೆ ಮಿ. ಜಿನ್ನರೇ ಮೊದಲಾದವರು ಕಾಂಗ್ರೆಸ್ ಮಂತ್ರಿಗಳ ಮೇಲೆ ಹೊರಿಸಿರುವ ಆರೋಪಗಳು ಆಧಾರ ಹಾಗೂ ಅರ್ಥರಹಿತವಿದ್ದು ಜಾತೀಯ ಕಲಹದ ಗಂಡಾಂತರವನ್ನೆಬ್ಬಿಸುವಂತಹವಿವೆ. ಮಿ.

ಮೈಸೂರು

ಸ. ಬಾ. ತಾ. 11-12-'39

ವಕೀಲರುಗಳ ಸನ್ನದ್ದನ್ನು ವಾಪಸ್ ತೆಗೆದುಕೊಳ್ಳುವುದು—"ಕಾಂಗ್ರೆಸ್ ಚಳುವಳಿಯಲ್ಲಿ ಸೇರಿ, ತಮ್ಮ ಹುದ್ದೆಗೆ ಅಡಚಣೆ ತಂದುಕೊಳ್ಳುತ್ತಿರುವಿರಿ, ಆದ್ದರಿಂದ ನಿಮ್ಮ ವಕೀಲ್ ಸನ್ನದ್ದನ್ನು ಹಿಂದಕ್ಕೆ ತೆಗೆದುಕೊಳ್ಳಲು ನೀವೇಕೆ ಕಾರಣ ತೋರಿಸಬಾರದು?" ಎಂಬುದಾಗಿ ಕೋಲಾರ ಜಿಲ್ಲಾ ನ್ಯಾಯಾಧೀಶರು ಹೊರಡಿಸಿದಾಜ್ಞೆಯನ್ನು, ಮೈಸೂರು ಕಾಂಗ್ರೆಸ್ ಅಧ್ಯಕ್ಷ ಮತ್ತು ಇನ್ನಿತರ ಹತ್ತು ಮಂದಿ ವಕೀಲರ ಮೇಲೆ, ಅವರುಗಳನ್ನು ಕಳೆದ ತಿಂಗಳು ಜೈಲಿನಿಂದ ಬಿಡುಗಡೆ ಮಾಡಿದಾಗ ಜಾರಿಮಾಡಿದ ವಿಚಾರವನ್ನು ಹಿಂದೆ ತಿಳಿಸಲಾಗಿತ್ತಷ್ಟೆ. ಇದರ ಪ್ರಕಾರ ಈ ವಕೀಲರುಗಳು, ಇದೇ ಮಾಹೆ ತಾ 4ರಲ್ಲು ಕೋರ್ಟಿಗೆ ಸ್ವತಃ ಹಾಜರಾಗದೆ, ಒಂದು ಪತ್ರವನ್ನು ಮಾತ್ರ ಬರೆದು, ನಿಮ್ಮ ಆಜ್ಞೆಯನ್ನು ನಮ್ಮ ಮೇಲೆ ಜಾರಿ ಮಾಡಲು ನಿಮಗೆ ಅಧಿಕಾರ ಮತ್ತು ಹಕ್ಕಿಲ್ಲ, ನ್ಯಾಯದ ಕಲಂನಲ್ಲಿ ಹತ್ತನೇ ಸೆಕ್ಷನ್ ಮಾತ್ರ ನಮಗೆ ಅನ್ವಯಿಸುವುದಲ್ಲದೆ ಮತ್ತೊಂದು ಸೆಕ್ಷನ್ ಅನ್ವಯಿಸುವದಿಲ್ಲ' ವೆಂದು ತಿಳಿಸಿದರು. ಶ್ರೀ ಬೆಂಗಳೂರಿನ ರೆಡ್ಡಿಗಳು ವಕೀಲ್ ವೃತ್ತಿ ಮಾಡದೆ ಸುಮ್ಮನಿರುವುದರಿಂದ ಅವರ ಮೇಲೆ ಹೊರಡಿಸಿದ್ದ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡರು. ವಕೀಲರುಗಳು ಮೇಲ್ಕಂಡ ರೀತಿ ಪತ್ರ ಬರೆದುದರಿಂದಲೂ, ಸ್ವತಃ ಹಾಜರಾಗಲಿಲ್ಲವಾಗಿ ಸರ್ಕಾರದ ಪರ ಗೌರ್ನಮೆಂಟ್ ಅಡ್ವೊಕೇಟರು ವಾದಿಸಿ ಇವರುಗಳ ಮೇಲೆ ಮುಕದ್ದಮೆ ನಡೆಸುತ್ತಿದ್ದಾರೆ.

ಕಳೆದ ವಾರದಲ್ಲೇನು—ಮೈಸೂರು ಸಂಸ್ಥಾನದಲ್ಲಿ ಕಳೆದ ವಾರಾಂತ್ಯದಲ್ಲಿ ಅನೇಕ ಮುಖ್ಯ ಸಂಗತಿಗಳು ನಡೆದವು. ಬೆಂಗಳೂರು

ಜಿನ್ನರು ... ರುಜು... ಯನ್ನು ... ರೊಡನೆ ... ರಾಜೇಂದ್ರಪ್ರಸಾ... ಸರ್ದಾರ್ ... ಪಡಿಸಿರುವ...

ಮಿ.

ಪ್ರತ್ಯೇಕ... ಮತ್ತು ವೈಸ... ಮುದ್ರೆಯನ್ನು... ಹೇಳಿಕೆ ಹೊ... ಸಾಧ್ಯವಿಲ್ಲ... ದುರುಪಯೋ... ಮೊದಲಾದ... ಳನ್ನು ... ಬಹುದು. ಮಿ... ಕಪರ ಹಾ... ವಿನಂತಿಯನ್ನು... ಯಾವ ... ಸಾಧ್ಯವಿಲ್ಲ... ಅವರಿಗೆ ... ನೆಂಬಲಾಗಿದೆ... ಮಿ. ಜಿನ್ನರ... ರುತ್ತದೆ. ... ಅಲ್ಪ ಸಂಖ್ಯಾ... ಬಿಟ್ಟು ತಮ್ಮ... ಈ ಸಂದರ್ಭ... ಯನ್ನು ... ಕಾಂಗ್ರೆಸಿನ... ತುಕತೆಯ ... ದರೂ, ... ದಿನಾಚರಣೆ... ಅವರ ಸ್ಪಷ್ಟ...

ಪತ್ರಿಕೊ... ಸೂರು ... ವಿಚಾರ... ರು ... ನಡೆಯುವ ... ರಂಭೋತ್ಸವ... ದಿವಾನ... ಮುದ್ರಾ... ಯ ಪ್ರ... ಮೈಸೂರು ... ದಲ್ಲಿ ... ನಿಲಯ ... ಭೋತ್ಸವ... ಚೆಲ್ಲ... ಲಿಯಾ... ವಸ್ತು ಪ್ರದರ್ಶ... ವಿಶ್ವವಿದ್ಯಾ... ಮೈಸೂರು ... ನಲ್ಲಿ ... ಶ್ರೀ ಎ. ಆರ್... ಕನ್ನಡಕ್ಕೆ ... ವಿಚಾರವಾಗಿ

ಸು... ಗಳು ... ವಾಗಿ ... ಸಭೆ... ಕಾರ್ಯ... ಮಿಟೀ... ಸಮಿತಿ... ರೆಸ್... ಪ್ರಯತ್ನ... ಳೊಳ್ಳಿ...

ಹಿಂದೀ ಪ್ರಶ್ನೆಯ ಇತ್ಯರ್ಥದ ಕುರಿತು ಆಶಾವಾದ

ಸೋವಿಯೆಟ್ ಸೇನೆಯ ಪ್ರತಿಷ್ಠೆಗೆ ಕಳಂಕ.

ಫಿನ್ನರ ಪ್ರಬಲ ವಿರೋಧ ಮತ್ತು ಸೋವಿಯೆಟ್ ಸೇನೆಯ ಮುನ್ನಡೆಯ ವಿಳಂಬದ ಕುರಿತು ಸೋವಿಯೆಟ್ ಸರಕಾರವು ಚಿಂತೆಗೊಂಡಿದೆ. ಒಂದು ವಾರದೊಳಗೆ ಫಿನ್ನರನ್ನು ಸದೆಬಡಿಯಬಹುದೆಂದು ಸೋವಿಯೆಟ್ ಸರಕಾರವು ಬಗೆದಿದ್ದಿತು. ಈಗ ಎರಡು ವಾರವಾಗುತ್ತಾ ಬಂದರೂ ಫಿನ್ನರ ವಿರೋಧವೇನೂ ಕಡಿಮೆಯಾಗಿರುವುದಿಲ್ಲ. ಸೋವಿಯೆಟ್ ಸೇನೆಯು ದೊಡ್ಡ ವಿಜಯವನ್ನೇನೂ ಪಡೆದಿಲ್ಲ. ಇದರಿಂದ ಸೋವಿಯೆಟ್ ಸೇನೆಯ ಪ್ರತಿಷ್ಠೆಗೆ ದೊಡ್ಡ ಕುಂದುಂಟಾಗಿದೆ. ಮುಂದೆ ತೀವ್ರ ಚಳಿಗಾಲವುಂಟಾಗಿ ಸೋವಿಯೆಟ್ ಸೇನೆಗೆ ದೊಡ್ಡ ತೊಡಕಾಗಿ ಪರಿಣಮಿಸಲಿದೆ. ಆ ಮೊದಲು ಫಿನ್ನರನ್ನು ಗೆದ್ದು ಬಿಡಬೇಕೆಂದೇ ರಶ್ಯದ ಅವಸರ. ಆದುದರಿಂದ ಅದು ಫಿನ್ಲೆಂಡಿನ ಮೇಲೆ ಪ್ರಚಂಡ ಧಾಳಿ ನಡಿಸಲು ಪ್ರಬಲ ಸೇನೆಯನ್ನು ಸಿದ್ಧಗೊಳಿಸಿದೆ. ಈ ವಾರ ಕರೇಲಿಯನ್ ಭೂಕಂಠದಲ್ಲಿ ದೊಡ್ಡ ಹೋರಾಟ ನಡೆಯಲಿದೆ. ಫಿನ್ಲೆಂಡಿನ ಸುಭದ್ರ ಕೋಟೆಯಾದ ಮೆನ್ನರ್ ಹೈಮ್ ಲೈನನ್ನು ಭೇದಿಸಲು ಸೋವಿಯೆಟ್ ಸೇನೆಯು ಭರದಿಂದ ಪ್ರಯತ್ನಿಸುತ್ತಿದೆ. ಫಿನ್ನರು ವೀರಾವೇಶದಿಂದ ಅವರನ್ನು ವಿರೋಧಿಸಿ ಕೆಲವೆಡೆ ಹಿಂದಕ್ಕಟ್ಟುತ್ತಾರೆ.

ಪೆಟ್ಸಾಮೋ ಬಂದರವು ಇನ್ನೂ ರಶ್ಯಾನರ ಅಧೀನವಾಗಿರುವಂತಿಲ್ಲ. ಸೋವಿಯೆಟ್ ಯುದ್ಧ ಹಡಗುಗಳು ಹೆಚ್ಚೆಚ್ಚಾಗಿ ಆ ಭಾಗಕ್ಕೆ ಸೇನೆಯನ್ನೊಯ್ಯುತ್ತಿವೆ.

ಹಿಟ್ಲರರ ಸಂಧಿಯ ಹೊಸ ಸೂಚನೆಗಳು

ಉತ್ತರ ಫಿನ್ಲೆಂಡಿನಲ್ಲಿ ಫಿನ್ನಿಶ್ ಸೈನಿಕರು ಥಟ್ಟನೆ ಹಿಮಗಡ್ಡೆಯ ಮೇಲಿಂದ ಹಾರಿಬಂದು ಸೋವಿಯೆಟ್ ಸೇನೆಯ ಮೇಲೆ ಬಿದ್ದು ಹಾವಳಿಮಾಡುತ್ತಾರೆ. ಇದರಿಂದ ಸೋವಿಯೆಟ್ ಸೈನಿಕರು ವಿಸ್ಮಯಗೊಳ್ಳುವಂತಾಗಿದೆ. ಪೆಟ್ಸಾಮೋ ಬಂದರವು ತಮ್ಮ ವಶವಾಗಿ ಅದರ ದಕ್ಷಿಣದಿಂದ ಸೋವಿಯೆಟ್ ಸೇನೆಯು 39 ಮೈಲು ಮುಂದುವರಿದಿದೆ. ಉಕ್ರಾ ಪ್ರದೇಶದಲ್ಲಿ ರಶ್ಯಾನರು 50 ಮೈಲುಗಳವರೆಗೆ ಮುನ್ನಡೆದಿರುತ್ತಾರೆ. ಕರೇಲಿಯನ್ ಭೂಕಂಠದಲ್ಲಿ ಸೋವಿಯೆಟ್ ಸೈನಿಕರು ಫಿನ್ನರ ಮುಖ್ಯ ಕೋಟೆಯನ್ನೊಡೆದು ಮುಂದೊತ್ತಿರುತ್ತಾರೆಂದು ಮೊಸ್ಕೋ ರೇಡಿಯೋದ ಸುದ್ದಿ. ಹೊಗ್ಲೆಂಡ್ ಎಂಬ ಬಂದರವನ್ನು ರಶ್ಯಾನರು ವಶಪಡಿಸಿರುತ್ತಾರೆಂದು ಫಿನ್ನರೇ ಒಪ್ಪುತ್ತಾರೆ. ಇಲ್ಲಿ ಫಿನ್ನಿಶ್ ಸೇನೆಯೇ ಇರಲಿಲ್ಲವಂತೆ.

ನಾಝಿಗಳ ಪ್ರಚಂಡ ಯುದ್ಧದ ಪ್ಲೇನು

ನವಂಬರ ತಾ. 11ರಲ್ಲಿ ಜರ್ಮನ್ ಸೇನೆಯು ಹೊಲೆಂಡ್, ಫ್ರಾನ್ಸ್ ಮತ್ತು ಇಂಗ್ಲೆಂಡಿನ ಮೇಲೆ ಪ್ರಚಂಡ ಧಾಳಿ ನಡಿಸಬೇಕೆಂದು ಹಿಟ್ಲರರ ಪ್ಲೇನಾಗಿದ್ದಿತು. ಆದರೆ ಸೈನ್ಯಾಧಿಕಾರಿಗಳ ಒತ್ತಾಯದಿಂದ ಅದನ್ನು ಪ್ರಕೃತದಲ್ಲಿ ನಿಲ್ಲಿಸಲಾಗಿದೆ. ಈ ಪ್ಲೇನಿನ ಪ್ರಕಾರ ಮೊದಲು, ಫ್ರೆಂಚ್ ಮೆಗಿನಟ್ ಕೋಟೆಗಳ ಮೇಲೆ ಜರ್ಮನ್ ಸೇನೆಯು ಪ್ರಚಂಡ ಧಾಳಿ ನಡಿಸಿ ಫ್ರೆಂಚ್ ಮತ್ತು ಇಂಗ್ಲಿಷ್ ಸೇನೆಯನ್ನು ಆಕಡೆ ಆಕರ್ಷಿಸಿ, ಅದೇ ಕಾಲದಲ್ಲಿ ಹೊಲೆಂಡಿನ ಮೇಲೆ ಧಾಳಿ ಮತ್ತು ಇಂಗ್ಲೆಂಡಿನ ಮೇಲೆ 5000 ಜರ್ಮನ್ ವಿಮಾನಗಳಿಂದ ಹೋಗಿ ಪ್ರಚಂಡ ಧಾಳಿ ನಡಿಸುವುದೆಂದು ಹಂಚಿಕೆ ನಡೆದಿತ್ತು. ಈ ವಿಮಾನ ಧಾಳಿಯಿಂದ ಇಂಗ್ಲೆಂಡಿಗೆ ಸೇನೆಯನ್ನಿಳಿಸಲು ದಾರಿಮಾಡಿ ಆಮೇಲೆ ಜರ್ಮನ್ ಸೇನೆಯನ್ನಿಳಿಸುವ ಆಲೋಚನೆ ಮಾಡಲಾಗಿತ್ತು. ಬ್ರಿಟನ್ ಮತ್ತು ಹೊಲೆಂಡುಗಳೊಳಗೆ ಯಾವ ಸಂಬಂಧವೂ ಇಲ್ಲದ ಹಾಗೆ ಮಾಡಲು ಸಮುದ್ರ ಪ್ರದೇಶದಲ್ಲೆಲ್ಲಾ ಜಲತೋಟೆಗಳನ್ನಿಡುವ ಏರ್ಪಾಡಾಗಿತ್ತು. ಹೊಲೆಂಡನ್ನು ಗೆದ್ದು ಫ್ರಾನ್ಸಿನ ಮೇಲೇರಿ ಹೋಗುವುದೆಂದಾಗಿತ್ತು.

ಹಿಂದೀ ಪ್ರಶ್ನೆಯ ಇತ್ಯರ್ಥದ ಕುರಿತು ಆಶಾವಾದ

ಇದೇ ತಾ 11ರಲ್ಲಿ ಸರ್. ಸ್ಟೆಫೋರ್ಡ್ ಕ್ರಿಪ್ಸರು ಅಲಹಾಬಾದಿನಿಂದ ದಿಲ್ಲಿಗೆ ಬಂದಿರುವರು. ಅವರು ಇಲ್ಲಿಂದ ಲಾಹೋರಿಗೆ ಹೋಗಲಿರುವರು. ಹಿಂದೀ ಪ್ರಶ್ನೆಯು ರಾಜಿಯಿಂದ ಇತ್ಯರ್ಥವಾಗುವುದೆಂಬ ಆಶೆಯು ಸರ್. ಸ್ಟೆಫೋರ್ಡರಲ್ಲಿರುವುದು. ಇಂಗ್ಲೆಂಡಿನ ಮೆಂಚೆಸ್ಟರ್ ಗಾರ್ಡಿಯನ್, ನ್ಯೂಸ್ ಕ್ರೋನಿಕಲ್ ಮತ್ತು ಡೈಲಿ ಹೆರಾಲ್ಡ್ ಪತ್ರಿಕೆಗಳು ಹಿಂದೀ ಪ್ರಶ್ನೆಯ ಕುರಿತು ಸಹಾನುಭೂತಿಯುಳ್ಳವುಗಳಾಗಿವೆ. ಟೈಮ್ಸ್ ಪತ್ರಿಕೆ ಕೂಡಾ ಈಗ ತನ್ನ ಧೋರಣೆಯನ್ನು ಮಾರ್ಪಡಿಸಿದೆ. ಲೋರ್ಡ್ ಜೆಟ್ಲೆಂಡರು ಯುದ್ಧ ಮಂತ್ರಿಮಂಡಲದಲ್ಲೇನೂ ಇಲ್ಲ. ಈ ಮಂತ್ರಿಮಂಡಲದಲ್ಲಿರುವ ಲೋರ್ಡ್ ಹೆಲಿಫೆಕ್ಸ್ ಮತ್ತು ಸರ್. ಸಾಮುವೇಲರು ಹಿಂದೀ ಪ್ರಶ್ನೆಯ ಕುರಿತು ಉದಾರ ಧೋರಣೆಯುಳ್ಳವರಿರುವರು. ಹೆಚ್ಚಿನ ಕನ್ಸರ್ವೇಟಿವ್ ಪಕ್ಷದ ಮೆಂಬರರು ಕೂಡಾ ಈಗ ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಅಭಿಪ್ರಾಯಕ್ಕನುಕೂಲರಾಗಿರುತ್ತಾರೆ. ಪ್ರಾಯಬಂದವರಿಗೆಲ್ಲಾ ಮತವೀಯುವುದು ಒಂದು ವೇಳೆ ಅಸಾಧ್ಯವಾದರೂ ಪ್ರಜಾಸತ್ತಾತ್ಮಕವಾದ ಇನ್ನೇನಾದರೂ ವಿಧಾನವನ್ನು ಅನುಸರಿಸಬಹುದು. ಅಲ್ಪಸಂಖ್ಯಾಕರು ಹಿಂದೀ ಸ್ವಾತಂತ್ರ್ಯಕ್ಕೆ ತಡೆಮಾಡುವಷ್ಟು ಅವಿವೇಕಿಗಳಾಗಿರಲಾರರು.

ಸರಕಾರವು ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆದರೆ ಅದಕ್ಕವರು ತಡೆಮಾಡಲಾರರು. ಹಿಂದೀ ರಾಜರುಗಳ ಪ್ರಶ್ನೆಯನ್ನು ಕೂಡಾ ಬಿಡಿಸಲು ಅಸಾಧ್ಯವೇನೂ ಅಲ್ಲ. ಬ್ರಿಟಿಷ್ ಪ್ರಾಂತಗಳು ಸ್ವತಂತ್ರವಾಗಿ ಬ್ರಿಟಿಷ್ ಅಧಿಕಾರದಿಂದ ವಿಮುಕ್ತವಾಗುವಾಗ ದೇಶೀಯ ಸಂಸ್ಥಾನಗಳಲ್ಲಿ ಬ್ರಿಟಿಷ್ ಪ್ರಭುತ್ವವಿರಲು ಸಾಧ್ಯವಿಲ್ಲ. ಅದೊಂದು ನಿಯಮಿತ ಅವಧಿಯಿತ್ತು ಅದರೊಳಗೆ ದೇಶೀಯ ಸಂಸ್ಥಾನಗಳಲ್ಲಿ ಪ್ರಜಾಜವಾಬ್ದಾರಿ ರಾಜ್ಯಭಾರಗಳು ಸ್ಥಾಪಿತವಾಗುವಂತೆ ಮಾಡಿ ಆಮೇಲೆ ಬ್ರಿಟಿಷ್ ಸರಕಾರವು ತನ್ನ ಮೇಲಧಿಕಾರವನ್ನು ಬಿಟ್ಟುಕೊಡಬಹುದು. ಕರಾರು ಒಪ್ಪಂದಗಳು ಪವಿತ್ರವೇನೂ ಅಲ್ಲ. ಕಾಲಕ್ರಮೇಣ ಅವು ರದ್ದಾಗಲೇಬೇಕೆಂದೇ ಸರ್. ಸ್ಟೆಫೋರ್ಡರ ಅಭಿಮತ.

ತಾ. 10ರಲ್ಲಿ ಅಲಹಾಬಾದಿನಲ್ಲಿ ಆನಂದಭವನದಲ್ಲಿ ಕಾಂಗ್ರೆಸ್ ಮುಂದಾಳುಗಳ ಸಭೆಯೊಂದು ನಡೆದು ಸರ್. ಸ್ಟೆಫೋರ್ಡರು ಅವರೊಡನೆ ಅಭಿಪ್ರಾಯ ವಿನಿಮಯಮಾಡಿದರು. ಇದರಿಂದ ಅವರ ಮೇಲೆ ಒಳ್ಳೇ ಪರಿಣಾಮವಾಗಿದೆ. ಹತ್ತಿರದ ಕೆಲವು ಹಳ್ಳಿಗಳ ಬಡತನವನ್ನು ಕಂಡು ಸರ್. ಸ್ಟೆಫೋರ್ಡರು ಆಶ್ಚರ್ಯಗೊಂಡಿರುತ್ತಾರೆ.

ಬ್ರಿಟಿಷ್ ಲೇಬರ್ ಪಕ್ಷವು ಸಂಪೂರ್ಣವಾಗಿ ಕಾಂಗ್ರೆಸಿನ ಕೇಳಿಕೆಯನ್ನು ಸಮರ್ಥಿಸುತ್ತಿದೆ. ಬ್ರಿಟಿಷ್ ಸರಕಾರದಲ್ಲಿಯೂ ಉದಾರ ಮನೋವೃತ್ತಿಯು ತೋರಿಬರುತ್ತದೆ. ಆದುದರಿಂದ ಹಿಂದೀ ಪ್ರಶ್ನೆಯು ರಾಜಿಯಿಂದ ಇತ್ಯರ್ಥವಾಗುವ ಆಶೆಯು ತನಗಿದೆಯೆಂದೇ ಸರ್. ಸ್ಟೆಫೋರ್ಡರ ಅಭಿಮತ. ಅವರು ಕಲ್ಕತ್ತದಲ್ಲಿ ವೈಸರಾಯರನ್ನು ಕಾಣಲಿರುವರು. ಆ ಮೊದಲು ಪಂಜಾಬು, ಬೊಂಬಾಯಿ ಪ್ರಾಂತ ಮತ್ತು ಬರೋಡ ಹೈದರಾಬಾದ್ ಮೊದಲಾದ ಸಂಸ್ಥಾನಗಳನ್ನು ಸಂದರ್ಶಿಸಲಿರುವರು. ಆಮೇಲೆ ಬರ್ಮದ ಮಾರ್ಗವಾಗಿ ಚೈನಕ್ಕೆ ಹೋಗಲಿರುವರು. ಬರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯ ಸಂದರ್ಭದಲ್ಲಿ ವಾರ್ಧಕ್ಕೆ ಹೋಗಿ ಕಾಂಗ್ರೆಸ್ ಮುಖಂಡರೊಡನೆ ಮಾತಾಡಲಿರುವರು.

ಹಿಟ್ಲರರ ಸಂಧಿಯ ಶರ್ತಗಳು

ಪೆರಿಸಿನ ಲಿ ಜರ್ನಲ್ ಎಂಬ ಪತ್ರಿಕೆಯು, ಜಿನೇವದಲ್ಲಿ ಲೀಗ್ ಎಸೆಂಬ್ಲಿ ಸಭೆ ಜರಗುವ ಸಂದರ್ಭದಲ್ಲಿ, ಹಿಟ್ಲರರ ರಾಜಿಯ ಹೊಸ ಶರ್ತಗಳು ಅದರ ಮುಂದಿಡಲಾಗುವುದೆಂದು ಪ್ರಕಟಿಸಿರುತ್ತದೆ. ತಟಸ್ಥರಾದ ಹೊಲೆಂಡ್, ಸ್ವೀಡನ್, ಡೆನ್ಮಾರ್ಕ್, ನೋರ್ವೆ ಮೊದಲಾದ ಚಿಕ್ಕ ರಾಷ್ಟ್ರಗಳು ಸಂಧಿಯ ಪ್ರಯತ್ನ ನಡಿಸಬಹುದಾಗಿ ನಂಬಲಾಗಿದೆ. ಈ ಕೆಳಗಣವು ಹಿಟ್ಲರರ ಸಂಧಿಯ ಹೊಸ ಶರ್ತಗಳಾಗಿರುತ್ತವೆ (1) ಸುಡೆಟನ್‌ಲೇಂಡನ್ನು ಬಿಟ್ಟು ಉಳಿದ ಜೆಕೊಸ್ಲೊವೇಕಿಯವನ್ನು ಪುನರ್ಘಟಿಸುವುದು. (2) ಪೋಲೆಂಡಿನ ಮಧ್ಯಭಾಗದಲ್ಲಿ ಸ್ವತಂತ್ರ ಪೋಲಿಶ್ ರಾಜ್ಯವನ್ನು ಸ್ಥಾಪಿಸುವುದು. ಡಾನ್ಸಿಂಗ್ ಮತ್ತು ಆ ಮೂಲೆಯ ಪ್ರದೇಶವು ಜರ್ಮನರ ಅಧೀನವೇ ಇರತಕ್ಕದ್ದು. (3) ಲಿತೇನಿಯ ಮತ್ತು ಗೆಲೀಶಿಯಗಳು ಸ್ವತಂತ್ರರಾಜ್ಯಗಳಾಗಿರಬೇಕು. (4) ಅಂತರರಾಷ್ಟ್ರೀಯ ಕಮಿಶನಿನ ಮೇಲ್ವಿಚಾರದಲ್ಲಿ ಆಸ್ಟ್ರಿಯದಲ್ಲಿ ಜನಮತ ತೆಗೆಯುವುದು. (5) ಯುರೋಪಿನಲ್ಲಿ ಬೊಲ್ಶೆವಿಕ್ ಆಳ್ವಿಕೆಯ ಪ್ರಭಾವವನ್ನು ತಡೆಗಟ್ಟುವ ಯತ್ನದಲ್ಲಿ ಹಿಟ್ಲರರೊಂದಿಗೆ ಬ್ರಿಟನ್ ಮತ್ತು ಫ್ರಾನ್ಸ್‌ಗಳು ಸಹಕರಿಸುವುದು.

ರಾಜವೊಡೆಯರು ಭಾಷಣ ಮಾಡಿದರು. 5 ಕಿಲೋವಾಟ್ಸಿನ ರೇಡಿಯೋ ಸ್ಟೇಶನ್ ಒಂದನ್ನು ಮೈಸೂರು ನಗರದಲ್ಲಿ ಸ್ಥಾಪಿಸಲು ಸರ್ಕಾರದವರು ಒಂದು ಸಮಿತಿ ನೇಮಿಸಿ ಅಪ್ಪಣೆ ಮತ್ತು ಹಣ ಮಂಜೂರುಮಾಡಿರುತ್ತಾರೆ. ಅಖಿಲಭಾರತ ಆರ್ಥಿಕ ಸಮ್ಮೇಳನದ ಮುಂದಿನಧಿವೇಶನವನ್ನು ಮೈಸೂರಲ್ಲಿ ನಡೆಸಲು ಏರ್ಪಾಡು ಮಾಡಲಾಗುತ್ತದೆಂದು ಹೇಳಲಾಗಿದೆ. ದಿವಂಗತ ಶ್ರೀ. ಎಂ. ಶಿವಮೊಗ್ಗಾಯರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ ಮಂದಿರದಲ್ಲಿ ಶ್ರೀ. ಪೂರ್ಣ ರಾಘವೇಂದ್ರ ರಾಯರು ನೆರವೇರಿಸಿದರು. ಶ್ರೀ. ಎ. ವಿ. ರಾಮನಾಥನ್ ರವರನ್ನು ಎಕ್ಸೈಸ್ ಕಮೀಷನರನ್ನಾಗಿ ನೇಮಕ ಮಾಡಲಾಗಿದೆ. ಶ್ರೀ ಸತ್ಯನ್ ಮತ್ತು ಶ್ರೀ. ರಾಜರತ್ನಂರವರನ್ನು ಸರ್ಕಾರದ ಅಸಿಸ್ಟೆಂಟ್ ಪ್ರಕಟಣಾ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಮೈಸೂರು ಸಂಸ್ಥಾನದಲ್ಲಿ ಸೂಗಸಾದ ವಿಮಾನ ದೊರೆಯುವುದರಿಂದ ಅವುಗಳಿಗೆ ಉತ್ತೇಜನ ಮತ್ತು ಪ್ರೋತ್ಸಾಹ ಕೊಡುವ ಸಲುವಾಗಿ ಮದ್ರಾಸ್ ನಿಕ್ಸೋರಿಯಂನಲ್ಲಿ ಹೆಚ್ಚು ಶಿಕ್ಷಣ ಪಡೆದು ಬರುವ ಸಲುವಾಗಿ ಶ್ರೀ. ಬಿ. ಯಸ್. ಭೀಮಾಚಾರ್ಯರನ್ನು ಸರ್ಕಾರದವರು ಮದ್ರಾಸ್‌ಗೆ ಕಳುಹಿಸಿದ್ದಾರೆ.

ಅಖಿಲಭಾರತ ಕೈಗಾರಿಕೆ ಸಮ್ಮೇಳನ ಮೈಸೂರು ನಗರದಲ್ಲಿ ನಡೆಯುತ್ತೆ

ಅಖಿಲಭಾರತ ಕೈಗಾರಿಕೆ ಸಮ್ಮೇಳನವು ಇದೇ ಮಾಹೆ ತಾ. 15ರಿಂದ 19ರ ವರೆಗೆ ಬೆಂಗಳೂರಲ್ಲಿ ನಡೆಯಬೇಕಾಗಿದ್ದನ್ನು ಮೈಸೂರು ನಗರದಲ್ಲೇ ಅದೇ ತಾ. ಗಳಲ್ಲಿ ನಡೆಸುವಂತೆ ಏರ್ಪಾಡುಮಾಡಲಾಗಿದೆ.

ಆಭಾರಮನ್ನಣೆ

ನವಯುಗ ಎಂಟರ್ ಪ್ರೈಸಾ ಲಿಮಿಟೆಡಿನ ಷೇರು ಸಂಗ್ರಹಾರ್ಥವಾಗಿ ಮೈಸೂರು ಪ್ರಾಂತ್ಯದ ತೀರ್ಥಹಳ್ಳಿ, ಶಿವಮೊಗ್ಗಾ, ಭದ್ರಾವತಿ, ಬಾಳೆಹೊನ್ನೂರು, ಜೈಪುರ, ಕೊಪ್ಪ, ಸಂಗಮೇಶ್ವರ, ಮೂಡಿಗೆರೆ, ಅರೆಹಳ್ಳಿ, ಬೇಲೂರು, ಬೆಳಗೋಡು, ಬಿಕ್ಕೋಡು, ಸಕಲೇಶಪುರ ಮೊದಲಾದ ಕೆಲವು ಭಾಗಗಳಲ್ಲಿ ತಾ. 30-11-39ರಿಂದ ತಾ. 6-12-39ರ ತನಕ ಸಂಚರಿಸಿದಾಗ ತನಗೆ ಪ್ರತಿ ಕಡೆಗಳಲ್ಲೂ ಸಹಾನುಭೂತಿಪರ ಸತ್ಕಾರ, ಪ್ರೋತ್ಸಾಹಗಳನ್ನಿತ್ತ ಪ್ರತಿಯೊಬ್ಬರಿಗೂ ಈ ಮೂಲಕ ಕೃತಜ್ಞತೆಯನ್ನರ್ಪಿಸಲಾಗುತ್ತದೆಂದೂ ಮುಖ್ಯವಾಗಿ ಪ್ರತಿಯೊಂದು ವಿಷಯದಲ್ಲೂ ತುಂಬಾ ನೆರವಾದ ಶ್ರೀಗಳಾದ ಪಿ. ಶೀನಪ್ಪಶೆಟ್ಟಿ (ತೀರ್ಥಹಳ್ಳಿ) ಎ. ಎನ್. ಶ್ರೀನಿವಾಸ ರಾವ್ (ಶಿವಮೊಗ್ಗಾ) ಕೆ. ಬಿ. ತಿಮ್ಮಪ್ಪ ಗೌಡ (ಶಿವಮೊಗ್ಗಾ) ವಿ. ಕೆ. ಅನಂತಯ್ಯ (ಶಿವಮೊಗ್ಗಾ) ಕೆ. ಸಿ. ಶೀನಪ್ಪ ಶೆಟ್ಟಿ (ವಿಠಪ್ಪಲು ಎಸ್ಟೇಟ್) ವಿ. ಅಣ್ಣಪ್ಪ ಶೆಟ್ಟಿ (ಕೊಪ್ಪ) ಶಿನಪ್ಪ ಶೆಟ್ಟಿ (ಕೊಪ್ಪ) ಕೆ. ಸೋಮಯ್ಯ ಶೆಟ್ಟಿ (ಬಾಳೆಕಾನ ಎಸ್ಟೇಟ್) ಎಸ್. ಇ. ವಿ. ನೇಲಸ್ (ಹಾವಿನ ಹಕ್ಲು ಎಸ್ಟೇಟ್) ಕೆ. ರಾಮ ಶೆಟ್ಟಿ (ಅರೆಹಳ್ಳಿ) ಡಾಕ್ಟರ್ ಇನೋಗಲ್ ಪುಪ್ಪನ (ಸಂಗಮೇಶ್ವರ) ಕೆ. ಮರ್ತಪ್ಪ ಶೆಟ್ಟಿ (ಪೊನ್ನಿಗುಪ್ಪೆ ಎಸ್ಟೇಟ್) ಎಂ. ಅಣ್ಣಪ್ಪ ಶೆಟ್ಟಿ (ಬಿಕ್ಕೋಡು ಎಸ್ಟೇಟ್) ಕೆ. ಗಣಪಯ್ಯ ಶೆಟ್ಟಿ (ವಟ್ಟಿಗನ ಎಸ್ಟೇಟ್) ಇವರೇ ಮೊದಲಾದವರಿಗೆ ತುಂಬಾ ಆಭಾರಿಗಳಾಗಿರುವೆನೆಂದೂ, ಮುಂದೆ ಇವಕ್ಕಿಂತಲೂ ಹೆಚ್ಚಿನ ಪ್ರೋತ್ಸಾಹವನ್ನು ಪ್ರತಿಯೊಬ್ಬರೂ ಕೊಡಬೇಕಾಗಿ ವಿನಂತಿಯಿಂದಲೂ ಶ್ರೀಗಳಾದ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಗಡೆ ಸರ್ವೋತ್ತಮ ಶೆಟ್ಟಿ, ಕೆ. ಹೊನ್ನಯ್ಯ ಶೆಟ್ಟಿ ಇವರು ತಿಳಿಸುತ್ತಾರೆ.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 10-12-39

"ಬಲ್ಲಾಳ ಮಹಲ್"—ಕಳೆದ ತಾ.3ನೇ ಭಾನುವಾರ ಸಾಯಂಕಾಲ 5-30ಕ್ಕೆ ಸರಿಯಾಗಿ ಶ್ರೀ. ಕೆ. ಆರ್. ಬಲ್ಲಾಳರು ಮಂಗಳೂರು ಪಂಪನ ಕಟ್ಟೆಯಲ್ಲಿ ನೂತನವಾಗಿ ಕಟ್ಟಿಸಿದ 'ಬಲ್ಲಾಳ ಮಹಲ್" ಎಂಬ ಕಟ್ಟಡದ ಉಬ್ಘಾಟನಾ ಸಮಾರಂಭವು ಜಿ. ಬೋರ್ಡು ಅಧ್ಯಕ್ಷರಾದ ಮಾನ್ಯ ಡಾ. ಕೆ. ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಟೀಪಾರ್ಟಿ ಸಂಗೀತಗಳಾದ ಬಳಿಕ ಮಹಾಸಭೆಯು ಸೇರಿತು. ಶ್ರೀ. ಎಸ್. ನಾಗರಾಜಯ್ಯನವರು ಶ್ರೀ. ಬಲ್ಲಾಳರ ಮತ್ತು ಅವರ ಮನೆತನದ ಪರಿಚಯ ಮಾಡಿಕೊಟ್ಟದಲ್ಲದೆ ಶ್ರೀ. ಕೆ. ಆರ್. ಬಲ್ಲಾಳರ ಅನೇಕ ಧರ್ಮಕೆಲಸಗಳನ್ನು ನಿರೂಪಿಸಿದರು. ಪಂಡಿತ ನಿಡ್ಡೋಡಿ ಅನಂತ ಉಪಾಧ್ಯಾಯರು ಶ್ರೀ. ಬಲ್ಲಾಳರ ಸೌಜನ್ಯ, ನಿಗರ್ವ ಮೊದಲಾದ ಸದ್ಗುಣಗಳನ್ನು ಪ್ರಶಂಸಿಸಿ ಅವರು ಮಂಗಳೂರಿನ ಗುಳಿಗ ಹಿತ್ಲನ್ನು ಇಂದ್ರಭವನದಂತೆ ಮಾರ್ಪಡಿಸಿದರೆಂದು ಹೇಳಿ ಶ್ರೀ. ಬಲ್ಲಾಳರಿಗೆ ಭಗವಂತನು ಚಿರಾಯು ರಾರೋಗ್ಯಗಳನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರು ಪೂರ್ವೋಕ್ತ ಮಹನೀಯರ ಅಭಿಪ್ರಾಯಗಳನ್ನು ಪುಷ್ಟೀಕರಿಸಿ ಮಾತಾಡಿದರು. ಕಟ್ಟಡವನ್ನು ಕಟ್ಟಿಸಿದ ಮೇಸ್ತ್ರಿಗಳಿಗೆ ಭಂಗಾರದ ಪದಕಗಳನ್ನೂ, ಇಲೆಕ್ಟ್ರಿಕ್ ದೀಪಗಳನ್ನು ಹಾಕಿದವರಿಗೆ ಬೆಳ್ಳಿಯ ಬಟ್ಟಲು, ಯೋಗ್ಯತಾ ಪತ್ರಗಳನ್ನೂ ಅಧ್ಯಕ್ಷರು ದಯಪಾಲಿಸಿದರು. ಶ್ರೀ. ಕೆ. ಶ್ರೀನಿವಾಸ ಬಲ್ಲಾಳರು ಅತಿಥಿಗಳಿಗೆ ಧನ್ಯವಾದಗಳನ್ನರ್ಪಿಸಿದ ತರುವಾಯ ಸಭಾಂತ್ಯವಾಯಿತು.

ರೈತವಾರಿ ಪದ್ಧತಿಯಿರುವಲ್ಲಿ ಒಕ್ಕಲುತನದ ಮಸೂದೆಯ ಆವಶ್ಯಕತೆ- ಈ ವಿಷಯವಾಗಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಶ್ರೀ. ಕೆ. ಜಿ. ಶಿವಸ್ವಾಮಿಯವರು ಕಳೆದ ತಾ. 4ನೇ ಸಾಯಂಕಾಲ ಥಿಯಸಾಫಿಕಲ್ ಲಾಜನಲ್ಲಿ ಉಪನ್ಯಾಸಮಾಡಿದರು. ಜಮೀನ್ದಾರಿ ಪದ್ಧತಿಯಲ್ಲಿರುವ ಒಕ್ಕಲುಗಳ ಸ್ಥಿತಿಯನ್ನು ಹೋಲಿಸಿದರು. ರೈತವಾರಿ ಪದ್ಧತಿಯಿರುವಲ್ಲಿ ಒಕ್ಕಲುಗಳ ಸ್ಥಿತಿ ಬಹಳ ಕಷ್ಟದಲ್ಲೆಂದೂ ಅವರ ರಕ್ಷಣೆ ಬಗ್ಗೆ ಶಾಸನವಾಗಬೇಕೆಂದೂ, ಆದರೆ ಶಾಸನವಾಗುವಾಗ ಒಕ್ಕಲಿಗೆ ವ್ಯವಸಾಯದ ವೆಚ್ಚ ಕಳೆದು ಬರುವ ಉತ್ಪತ್ತಿಯಲ್ಲಿ ನೂರಕ್ಕೆ 50ರಷ್ಟು ಸಿಕ್ಕುವಂತೆಯೂ ಭೂಮಾಲಿಕರು ತನ್ನ ಸ್ವಂತದ ಉಪಯೋಗಕ್ಕೆಂದು ಒಕ್ಕಲಿಂದ ಸ್ಥಳವನ್ನು ಪಡೆಯುವ ಹಾಗೆ ನಿಯಮ ಮಾಡಬೇಕೆಂದೂ ಹೇಳಿದರು. ಅನಂತರ ಈ ವಿಷಯದ ಮೇಲೆ ಚರ್ಚೆ ನಡೆಯಿತು. ಶ್ರೀಗಳಾದ ಕೆ. ಆರ್. ಕಾರಂತರೂ, ಕೆ. ಬಿ. ಜಿನರಾಜ ಹೆಗ್ಗಡೆಯವರೂ ಚರ್ಚೆಯಲ್ಲಿ ಭಾಗವಹಿಸಿ ನಮ್ಮ ಜಿಲ್ಲೆಯ ಸ್ಥಿತಿಯನ್ನು ಉಪನ್ಯಾಸಕರಿಗೆ ತಿಳಿಸಿದರು. ಶ್ರೀ. ಎಸ್. ಮುಕುಂದಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಪಂಚಾಯಿತಿಕೆದಾರರ ತೀರ್ಮಾನ—ಮೊನ್ನೆ ತಾನೆ ನಡೆದ ಬೀಡಿ ಕೆಲಸಗಾರರ ಮುಷ್ಕರದ ವಿಷಯವಾಗಿ ವಿಚಾರಿಸಿ ತೀರ್ಪು ಕೊಡಲು ಶ್ರೀ. ಬಿ. ವೈಕುಂಠ ಬಾಳಿಗರು ಪಂಚಾಯಿತಿಕೆದಾರರಾಗಿ ನೇಮಕ ಹೊಂದಿದ್ದರು. ಅವರ ಮಧ್ಯಸ್ಥಿಕೆಯಿಂದ ಕೆಲಸದಿಂದ ಹೊರಹಾಕಲ್ಪಟ್ಟಿದ್ದ ಕೆಲಸಗಾರರು ಪುನಃ ಕೆಲಸಕ್ಕೆ ಸೇರುವಂತಾಯಿತು.

ಮನೆಯೊಳಕ್ಕೆ ಹುಲಿಯ ಪ್ರವೇಶ- ಸಾಹಸದ ಬೇಟೆ—ನಿನ್ನೆಯ ದಿನ ಬೆಳಗ್ಗೆ ಒಂದು ಚಿರತೆ ಹುಲಿಯು ಕದ್ರಿಯಲ್ಲಿ ವಿ. ಬ್ಯಾಪ್ಟಿಸ್ಟರ ಮನೆಯ ಹಿಂಬದಿಯಿಂದ ಮನೆಯನ್ನು ಪ್ರವೇಶಿಸಿ ಅಟ್ಟದ ಮೇಲೇರಿ ಅವಿತುಕೊಂಡಿತು. ಹುಲಿಯನ್ನು ನೋಡಿದ ಮನೆಯವರು ಗಾಬರಿಯಿಂದ ಹೊರಗೋಡಿ, ಮನೆಯ ಬಾಗಿಲನ್ನು ಹಾಕಿಕೊಂಡರು. ಶ್ರೀ. ವಿ. ಸದಾಶಿವ ರಾವ್ ಇವರು ಸಾಹಸದಿಂದ ಮನೆಯ ಮಾಡಿನ ಮೇಲಕ್ಕೆ ಹತ್ತಿ ಹಂಚುತೆಗೆದು ಹುಲಿಗೆ ಗುಂಡುಹೊಡೆದು ಕೊಂದರು. ಹುಲಿಯು 2¼ ಅಡಿ ಎತ್ತರವಾಗಿಯೂ 6½ ಅಡಿ ಉದ್ದವಾಗಿಯೂ ಇತ್ತು. ಶ್ರೀ. ಸದಾಶಿವ ರಾಯರು ಅನೇಕರನ್ನು ಹಿಂಸಿಸಲಿದ್ದ ಹುಲಿಯನ್ನು ಕೊಂದು ಸಮಾಜಕ್ಕೆ ಮಹದುಪಕಾರ ಮಾಡಿದ್ದಾರೆ. ಇವರಿಗೆ ತಕ್ಕುದಾದ ಪುರಸ್ಕಾರವು ದೊರೆಯುವುದು ಅಗತ್ಯವಿದೆ.

ಉಡುಪಿ

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್—ಸ್ಥಳೀಯ ನ್ಯೂ ಈರಾ ಟೆಕ್ನಿಕಲ್ ಸ್ಕೂಲಿನಲ್ಲಿ ತಾ. 23-12-39ನೇ ಶನಿವಾರ ಸಂಜೆ ಐದು ತಾಸಿಗೆ ಟೈಪ್‌ರೈಟಿಂಗ್, ಬುಕ್ ಕೀಪಿಂಗ್, ಬ್ಯಾಂಕಿಂಗ್, ಜನರಲ್ ಇಂಗ್ಲಿಷ್ ಈ ವಿಷಯಗಳಲ್ಲಿ ಸ್ಪರ್ಧೆ (Open (Competition) ಜರಗಲಿರುವುದು. ಉಮೇದ್ವಾರರು ನಾಲ್ಕಾಣೆ ಪ್ರವೇಶಧನವನ್ನಿತ್ತು ನಿಯಮಿತ ಫಾರ್ಮಿನಲ್ಲಿ ಬರಾಯಿಸಿ ತಮ್ಮ ಉಮೇದ್ವಾರಿಕೆಯನ್ನು ಸಾಕಷ್ಟು ಮುಂಚಿತವಾಗಿ ಶಾಲಾ ಹೆಡ್ಮಾಸ್ತರರಿಗೆ ಕಳುಹಿಸತಕ್ಕದ್ದು. ಬೆಳ್ಳಿಯ ಪದಕಗಳೂ ಸರ್ಟಿಫಿಕೇಟುಗಳೂ ಜಯಶೀಲರಾದವರಿಗೆ ಕೊಡೋಣಾಗುವುದು. ಟೈಪ್ ರೈಟಿಂಗ್ ಮಶೀನುಗಳನ್ನು ಆಯಾಯ ಉಮೇದ್ವಾರರೇ ತರತಕ್ಕದ್ದು. ಹೆಚ್ಚಿನ ಮಾಹಿತಿಯನ್ನಪೇಕ್ಷಿಸುವವರು ಪ್ರಿ. ಡಬ್ಲ್ಯು. ಸುಚೇತ, ಕನ್ವೀನರ್, ಇವರಿಗೆ ಬರೆದು ಕೇಳಬಹುದು. ಮೇಲಿನ ವಿಷಯಗಳಲ್ಲಿ ಅಭಿರುಚಿಯುಳ್ಳವರು ಈ ನವೀನ ಸ್ಪರ್ಧೆಯಲ್ಲಿ ಭಾಗವಹಿಸಿ, ಅದನ್ನು ಜಯಗೊಳಿಸುವರೆಂದು ನಿರೀಕ್ಷಿಸಲಾಗಿದೆ.

ಜಿಲ್ಲಾ ವಿದ್ಯಾ ವಸ್ತುಪ್ರದರ್ಶನ—ಜನವರಿ ತಾ. 14ರಿಂದ 18ನೇ ತಾರೀಕಿನ ವರೆಗೆ ಉಡುಪಿ ಬೋರ್ಡು ಹೈಸ್ಕೂಲಿನಲ್ಲಿ ಜರಗಲಿರುವುದು. ಪ್ರಾಥಮಿಕ ಶಾಲಾ ಮಾಸ್ತರುಗಳ ಪ್ರಯೋಜನಾರ್ಥವಾಗಿ ರಿಫ್ರೆಶರ್ ಕೋರ್ಸು ಭಾಷಣಗಳ ಏರ್ಪಾಡುಮಾಡಲಾಗಿಯದೆ. ವಸ್ತುಪ್ರದರ್ಶನ ಪ್ರವೇಶ ದರದಲ್ಲಿ ಸೇಕಡಾ 50ರಷ್ಟು ರಿಯಾಯಿತಿಯನ್ನು ಶಾಲಾ ಉಪಾಧ್ಯಾಯರಿಗೂ ವಿದ್ಯಾರ್ಥಿ ವೃಂದಕ್ಕೂ ತೋರಿಸಲಾಗಿಯದೆ. ಜಿಲ್ಲೆಯ ಉಪಾಧ್ಯಾಯವರ್ಗ ಪೂವಿದ್ಯಾಭಿಮಾನಿಗಳೂ ಈಪ್ರದರ್ಶನದಲ್ಲಿಭಾಗವಹಿಸಿ ಅದನ್ನು ಯಶಸ್ವಿಗೊಳಿಸುವರೆಂದು ನಿರೀಕ್ಷಿಸಲಾಗಿದೆ.

ಉಪಾಧ್ಯಾಯರ ಸಭೆ—ಉಡುಪಿ ತಾಲೂಕು ಎಯಿಡೆಡ್ ಎಲಿಮೆಂಟರಿ ಶಾಲಾ ಮಾಸ್ತರರ ಯೂನಿಯನ್ನಿನ ಕಾರ್ಯಕಾರೀ ಮಂಡಳಿಯ ಸಭೆಯಲ್ಲಿ 'ಶಾಲಾ ಮಾಸ್ತರರು ಚುನಾವಣೆಗಳಲ್ಲಿ ಭಾಗವಹಿಸಕೂಡದು. ಮಾಸ್ತರುಗಳು 55ನೇ ವಯಸ್ಸಿನಲ್ಲಿ ರಿಟಾಯರ್ ಆಗಬೇಕು. ಶಾಲಾ ದಿನಗಳು ವರ್ಷದಲ್ಲಿ 220 ಆಗತಕ್ಕದು' ಇತ್ಯಾದಿ ಸರಕಾರದ ಯೋಜನೆಗಳನ್ನು ನಿಷೇಧಿಸಲಾಯಿತು. ಈ ತೆರನಾದ ಹೊಸ ಯೋಜನೆಗಳನ್ನು ಕೂಡಿ ಬಡ ಉಪಾಧ್ಯಾಯರ ಪಾಡನ್ನು ಇನ್ನಷ್ಟು ನಿಕೃಷ್ಟ ಸ್ಥಿತಿಗೆ ತರಬಾರದಾಗಿ ಮಾನ್ಯ ಸರಕಾರವನ್ನು ವಿನಂತಿಸಲಾಯಿತು.

ರಬ್ಬರ್ ಬಾಲ್ ಟೂರ್ನ್‌ಮೆಂಟ್ ಕಮಿಟಿ—ಫೈನಲ್ ಪಂದ್ಯಾಟದಲ್ಲಿ ಜಯಶೀಲರಾದ ಸೋಸಿಯಲ್ ಟೀಮಿನವರಿಗೆ ಮೆಡಲು ಹಂಚುವ ಸಮಾರಂಭವು ತಾ. 5-12-39ರಲ್ಲಿ ಡಾ. ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮೊದಲು ಸೆಕ್ರಿಟರಿಗಳು ಕಮಿಟಿಯ ರಿಪೋರ್ಟನ್ನು ಓದಿ ಹೇಳಿ ಪಂದ್ಯಾಟದಲ್ಲಿ ಭಾಗವಹಿಸಿದ ಎಲ್ಲಾ ಟೀಮುಗಳಿಗೂ ಆಭಾರ ಸೂಚಿಸಿದರು. ಆಮೇಲೆ ಮೆಡಲುಗಳು ಗೆದ್ದವರಿಗೆ ಹಂಚಲ್ಪಟ್ಟವು. ಮತ್ತು ಬೇರೆ ಬೇರೆ ಟೀಮುಗಳ ಚತುರ ಆಟಗಾರರಿಗೆ ಸರ್ಟಿಫಿಕೇಟುಗಳು ಕೊಡಲ್ಪಟ್ಟವು. ಬಳಿಕ ನರಸಿಂಹ ಪೈಗಳು ಕ್ರಿಕೆಟಿನ ವಿಷಯವಾಗಿ ಚಿಕ್ಕ ಭಾಷಣವನ್ನು ಕೊಟ್ಟರು. ಅಧ್ಯಕ್ಷರು ಕ್ರಿಕೆಟ್‌ನ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿದ ಬಳಿಕ, ಫೋಟೋ ಉಪಹಾರ ಇತ್ಯಾದಿಗಳಿಂದ ಸಭಾಂತ್ಯವಾಯಿತು.

"ದೀನಬಂಧು ಅನಾಥಾಶ್ರಮ" ಮಂಗಳೂರು—ಇದರ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಗಳಾದ 1. ಯು. ಮಂಜಪ್ಪ, 2. ಡಿ. ಪುಟ್ಟಸ್ವಾಮಿ, 3. ಕೆ. ಆರ್. ಆಚಾರ್, 4. ಕೆ. ಕೃಷ್ಣರಾವ್ ಇವರು ತಮ್ಮ ಸ್ಥಾನಗಳಿಗೆ ರಾಜಿ ಕೊಟ್ಟಿರುವರೆಂದು ತಿಳಿದುಬರುತ್ತದೆ.

ದುಃಖಸೂಚಕ ಸಭೆ— ಬಂಟರಯಾನೆ ನಾಡವರ ಸಂಘ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ಆಡಳಿತ ಸಮಿತಿ ಮತ್ತು ವಿದ್ಯಾರ್ಥಿಸಂಘಗಳ ಆಶ್ರಯದಲ್ಲಿ ಸೇರಿದ ಮಂಗಳೂರಿನ ಬಂಟಸಮಾಜದ ಈ ಸಭೆಯಲ್ಲಿ ಶ್ರೀ. ಟಿ. ನಾರಾಯಣ ಭಂಡಾರಿಗಳ ಮತ್ತು ಅವರ ಪತ್ನಿ ಪದ್ಮಾವತಿಯಮ್ಮನವರ ಅಕಾಲ ನಿಧನಕ್ಕಾಗಿ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸುವದಲ್ಲದೆ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಬೇಂದು ಪರಮಾತ್ಮನನ್ನು ಪ್ರಾರ್ಥಿಸಲಾಯಿತು. ಈ ನಿರ್ಣಯಗಳನ್ನು ಶ್ರೀ. ಲಿಂಗಪ್ಪ ಭಂಡಾರಿಗಳಿಗೂ ಶ್ರೀ. ಬಡಗಬೆಟ್ಟು ಕೃಷ್ಣ ಹೆಗ್ಗಡೇರಿಗೂ ತಿಳಿಸಬೇಕಾಗಿ ನಿರ್ಣಯಿಸಲಾಯಿತು.

ಅಜೆಕಾರು—ಆರೋಗ್ಯ ಸಪ್ತಾಹವು ಕಳೆದ ವಾರ ಶಾಲಾ ವಠಾರದಲ್ಲಿ ಶ್ರೀ. ಎಮ್. ಧರ್ಮರಾಜ ಅಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಸ್ಥಳೀಯ ಪಂಚಾಯತ ಬೋರ್ಡಿನ ಪ್ರೋತ್ಸಾಹವೂ ಶಾಲಾ ಅಧ್ಯಾಪಕರ ಪ್ರಯತ್ನವೂ ಶ್ಲಾಘನೀಯ.

ಎಣ್ಣೆಹೊಳೆಯ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗತಕ್ಕ ಭಜನೆಮಂಗಳೋತ್ಸವವು ತಾ. 9-12-39ರಲ್ಲಿ ವಿಜೃಂಭಣೆಯಿಂದ ಜರಗಿತು. ಈ ಸಂದರ್ಭದಲ್ಲಿ ಶ್ರೀ. ನಾರಾಯಣ ಕಿಣ್ಣಿಯವರ ಅಧ್ಯಕ್ಷತೆಯಲ್ಲಿ ರಾಜಾಪುರ ಸಮಾಜದಲ್ಲಿ ವಿಧವಾ ವಿವಾಹದ ಸಾಧಕಬಾಧಕಗಳ ವಿಷಯ, ಹೆಬ್ರಿ ರೇಂಜ್ ಎಕ್ಸೈಜ್ ಸಬ್ ಇನ್ಸ್‌ಪೆಕ್ಟರರಾದ ಶ್ರೀ. ಎಚ್. ಶೇಷಗಿರಿರಾಯರೇ ಮೊದಲಾದವರು ಕಾಲೋಚಿತ ಭಾಷಣಗಳನ್ನಿತ್ತರು. ದೇವಸ್ಥಾನದ ಮೊಕ್ತೇಸರರೂ ಈ ವಿಷಯದಲ್ಲಿ ತುಂಬಾ ಸಹಾನುಭೂತಿ ತೋರಿಸಿದ್ದು ಸ್ತುತ್ಯ.

ಕುಂಜಾಲು—ಇ ವಾರ ದ ಸಹೋದರರ ಮುಂದಾಳುತನದಲ್ಲಿ ಕುಂಜಾಲು ಪಟ್ಟಣಿಗರ ಹಾಗೂ ಆರೂರು ಚೇರ್ಕಾಡಿ ಗ್ರಾಮಸ್ಥರ ಭಗೀರಥ ಪ್ರಯತ್ನದಿಂದ ಇದೇ ಕಳೆದ ನವಂಬರ ತಿಂಗಳ ತಾರೀಖು 29ನೇ ಬುಧವಾರ ಗ್ರಾಮೋದ್ಧಾರ ಕಾರ್ಯದ ಪ್ರಥಮ ಸೋಪಾನದಂತಿರುವ, ಒಂದು ಎಕ್ಸ್‌ಪೆರಿಮೆಂಟಲ್ ಪೋಸ್ಟ್ ಆಫೀಸು ತೆರೆಯಲ್ಪಟ್ಟದ್ದು ಸ್ತುತ್ಯ. ಶ್ರೀ. ಆರೂರು ಸುಬ್ಬರಾಯರು ಪ್ರಕೃತ ಸದ್ರಿ ಪೋಸ್ಟ್ ಆಫೀಸಿನ ಬ್ರಾಂಚ್ ಪೋಸ್ಟ್ ಮಾಸ್ಟರರಾಗಿ ನೇಮಿಸಲ್ಪಟ್ಟಿರುವರು. ಸದ್ರಿ ಪೋಸ್ಟ್ ಆಫೀಸು ಇಲ್ಲಿ ಶಾಶ್ವತವಾಗಿ ಇರಗೊಡಿಸುವಂತೆ ಸುತ್ತಮುತ್ತಲಿನ ಗ್ರಾಮಸ್ಥರೂ ಹಾಗೂ ಇತರ ಮಹನೀಯರೂ ಸಹಕರಿಸುವರೆಂದು ನಿರೀಕ್ಷಿಸಲಾಗಿದೆ.

ಶಿರ್ವ—ಇಲ್ಲಿಯ ಆಸ್ಪತ್ರೆಗೊಂದು ಹೆಂಗಸರ ವಾರ್ಡು ಅಗತ್ಯವೆಂಬುದು ಹೆಚ್ಚು ಸಮಯದಿಂದ ಮನಗಂಡ ವಿಷಯ. ಒಂದು ವರ್ಷದಿಂದ ಇಲ್ಲಿಯ ಡಿ. ಬೋ. ಮೆಂಬರ್ ಮಹಾಶಯರೊಬ್ಬರು ತತ್ಸಂಬಂಧ ಐವೇಜು ಸಂಗ್ರಹಿಸುತ್ತಿರುವರಾಗಿಯೂ ವಾರ್ತೆ! ಜನಪ್ರೀತರಾಗಿದ್ದ ಡಾ. ಎ. ರಾಮರಾಯರು ಊರವರಿಗೆ ಪ್ರೋತ್ಸಾಹಿಸಿ ಆಸ್ಪತ್ರೆ ಕಟ್ಟಡ ಕಟ್ಟಿಸಿರುವಂತೆ, ಈಗಿನ ಡಾ. ಯು. ಯಸ್. ನಾಯಕರು ಆ ಮಹಾಶಯರಿಗೆ ನೆರವಾಗಿ ಊರವರಿಗೆ ಪ್ರೋತ್ಸಾಹಿಸಿ ಸದ್ರಿ ವಾರ್ಡ ಕಟ್ಟಿಸಿದ ಕೀರ್ತಿಗೆ ವ ಜನರ ಪ್ರೀತಿಗೆ ಪಾತ್ರರಾಗುವರೇ! ನೋಡಲಿಕ್ಕಿದೆ.

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮುಕ್ತ ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ.

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತ್ತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮಸಿ,
ನಲ್ ಬಜಾರ್, ಡಂಕನ್ ರೋಡ್,
ಮುಂಬಾಯಿ. 4

Sorath Pharmacy,
Null Bazzar, Duncan Road,
BOMBAY 4.

ಶ್ರೀ ಅನಂತ ಪದ್ಮನಾಭ ಭಟ್ಟರಿಗೆ ಪುನಃ ಪಟೇಲತನ ದೊರೆಯಿತು—ಉಡುಪಿ ತಾಲೂಕಿನ ಅತ್ಯಂತ ನಿಷ್ಠಾವಂತ ಕಾಂಗ್ರೆಸ್ ಅನುಯಾಯಿಯಾಗಿದ್ದು 1921ರಿಂದ ಎಡೆಬಿಡದೆ ಕಾಂಗ್ರೆಸ್ ಕೆಲಸ ಮಾಡುತ್ತಬಂದು, 1921ರಲ್ಲಿ ತನ್ನ ಪಟೇಲತನವನ್ನು ಕೂಡಾ ಕಳಕೊಂಡಿದ್ದ ಶ್ರೀ. ಸಾಂತ್ಯಾರು ಅನಂತಪದ್ಮನಾಭ ಭಟ್ರು ಪುನಃ ಪಟೇಲರಾಗಿ ನೇಮಿಸಲ್ಪಟ್ಟಿರುವುದು ಸಂತೋಷಕರ ಸಂಗತಿಯಿದೆ. ಇವರು ಬೈರಂಪಳ್ಳಿ ಮತ್ತು ಬೆಲ್ಲ ಪಾಡಿ ಹಳ್ಳಿಗಳ ಪಟೇಲರಾಗಿದ್ದು 1921ರ ಅಸಹಕಾರ ಚಳವಳಿ ಸಂದರ್ಭದಲ್ಲಿ ತಿಲಕಸ್ವರಾಜ್ಯ ಫಂಡಿಗೆ ಹಣ ಶೇಖರಿಸಿದರು, ಮತ್ತು ರಾಷ್ಟ್ರೀಯ ಶಾಲೆಗಳನ್ನು ನಡೆಸಿದರೆಂಬ ಕಾರಣಗಳಿಂದ ಸರಕಾರದವರು ಅವರ ಪಟೇಲತನವನ್ನು ರದ್ದುಪಡಿಸಿದ್ದರು. ಸರಕಾರವು ಉಪಾಹರಣೆ ಕೇಳಿದಾಗ ತಾನು ತನ್ನ ಮನಸ್ಸಾಕ್ಷಿ ಪ್ರಕಾರ ನಡೆದಿರುವೆನೆಂದೇ ಶ್ರೀ ಭಟ್ಟರು ಉತ್ತರವಿತ್ತಿದ್ದರು. ಅಂದಿನಿಂದ ಎರಡು ರಾಷ್ಟ್ರೀಯ ಶಾಲೆಗಳನ್ನು ತನ್ನ ಸ್ವಂತ ಖರ್ಚಿನಿಂದ ನಡಿಸಿ, ನೂಲುವುದು, ನೇಯುವುದು, ಖಾದಿಪ್ರಚಾರ ಮತ್ತು ಹರಿಜನೋದ್ಧಾರಾದಿ ವಿಧಾಯಕ ಕಾರ್ಯಗಳನ್ನು ಅತ್ಯಂತ ನಿಷ್ಠೆಯಿಂದ ನಡಿಸುತ್ತಾ ಬಂದಿರುವರು. ತಾನೇ ಹತ್ತಿ ಬೆಳೆಸಿ ನೂಲು ಖಾದಿ ತಯಾರಿಸುತ್ತಿದ್ದವರು. ತನ್ನ ಹಳ್ಳಿಗಳನ್ನು ಇದೇ ರೀತಿ ಸುಧಾರಿಸುವ ದೃಢ ನಿರ್ಧಾರವುಳ್ಳ ಶ್ರೀ. ಭಟ್ಟರು ಆ ದೃಷ್ಟಿಯಿಂದಲೇ ಪುನಃ ಪಟೇಲಿಕೆಯನ್ನು ಪಡೆದೊಂಡು ಗ್ರಾಮಸಂಘಟನಾ ಕಾರ್ಯವನ್ನು ಮುಂದುವರಿಸಲಿರುವರು. ಎರಡು ರಾಷ್ಟ್ರೀಯ ಶಾಲೆಗಳನ್ನು ಇವರು ಯಥಾಪ್ರಕಾರ ಈಗಲೂ ನಡೆಸುತ್ತಿರುವರು. ಇದೇ ರೀತಿ ಪಟೇಲರೇ ಮೊದಲಾದ ಗ್ರಾಮ ಉದ್ಯೋಗಸ್ಥರುಗಳು ಗ್ರಾಮೋದ್ಧಾರ ಮತ್ತು ಗ್ರಾಮಸಂಘಟನೆಯ ವಿಧಾಯಕ ಕೆಲಸಕ್ಕೆ ಲಕ್ಷ್ಯ ಹರಿಸಿದ ಪಕ್ಷದಲ್ಲಿ ಗ್ರಾಮಗಳ ಉದ್ಧಾರವೇನೂ ಅತಿ ದೂರದ ಕನಸಾಗಲಾರದು.

ಸಂಘಸಮ್ಮೇಲನದ ಪ್ರಕಟನೆ ನಂ. ೧.

ಬೆಳಗಾಂವಿಯಲ್ಲಿ ಕೂಡಲಿರುವ ಕನ್ನಡ ಸಾಹಿತ್ಯ ಸಮ್ಮೇಲನದ ಜೊತೆಯಲ್ಲಿ ಕನ್ನಡಸಂಘಗಳ ಸಮ್ಮೇಲನವನ್ನಾದರೂ ತಲೆದೋರುವದು ಗೊತ್ತಾಗಿರುವದು. ಈ ಸಮ್ಮೇಲನಕ್ಕೆ ರಾಜಸೇವಾಸಕ್ತ ಬಿ. ಎಮ್. ಶ್ರೀಕಂಠಯ್ಯನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಒಪ್ಪಿರುವರು. ಕರ್ನಾಟಕದಲ್ಲಿಯ ಮತ್ತು ಹೊರಗಿನ ಕನ್ನಡಸಂಘದವರು ತಮ್ಮ ತಮ್ಮ ವಿಳಾಸಗಳನ್ನು ಮತ್ತು ಇತರ ಮಾಹಿತಿಯನ್ನು ಕಳಿಸಿ ಸಂಘದ ಪರವಾಗಿ ತಮ್ಮ ಪ್ರತಿನಿಧಿಯನ್ನು ಕಳಿಸಬೇಕಾಗಿ ಅತ್ಯಂತ ನಮ್ರ ವಿನಂತಿ.

ತಮ್ಮ ವಿಧೇಯ

ಡಾ. ತೆರಗುಂಡಿ ಮತ್ತು ಅಡ್ಡಣಗಿ.

ಗೌ. ಕಾರ್ಯದರ್ಶಿಗಳು.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಲೆಕ್ಕಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕ್ರಮವಾದ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಅದರಿಂದ ತಯಾರಿಸಿದ ಸಾರಾಂಶದ ನಿಪತ್ರವು ಕೆಲವೇ ನಿಮಿಷಗಳಲ್ಲಿ ತನ್ನಿಯ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ಕರದ ವಿನಾಯಿತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೆಳಗೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ಕಡವಾಗಲಿಲ್ಲ. ಲೆಕ್ಕ ಹಾಜರುಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

(೬ನೇ ಪುಟದಿಂದ ಮುಂದರಿಸಿದ್ದು.)

ರದಲ್ಲಿ ಸಂಪೂರ್ಣ ಸಹಾನುಭೂತಿ ತೋರಿಸುವ ಸಂದೇಶ ಕಳುಹಿಸಿರುವರು. "ಫಿನ್ನರು ಯುದ್ಧವನ್ನು ಹಾರೈಸುತ್ತಿರುವರೆಂದು ನಿಮ್ಮನ್ನು ನಂಬುವಂತೆ ಮಾಡುವ ನಿಮ್ಮ ಮುಖಂಡರ ಮೇಲೆ ವಿಶ್ವಾಸವಿಡಬೇಡಿರಿ. ಫಿನ್ನರು ಶಾಂತಿ ಪ್ರಿಯರು. ತಮ್ಮ ನೆರೆಯವರೊಡನೆ ಶಾಂತಿಯಿಂದ ಜೀವಿಸಲೆಳಸುವವರು. ಯುದ್ಧವು ನಿಮಗೆ ಸಂತೋಷವನ್ನಾಗಲಿ, ಸುಲಭ ವಿಜಯವನ್ನಾಗಲಿ ತರಲಾರದು. ತಮ್ಮ ರಕ್ತದ ಕೊನೆಯ ಬಿಂದುವಿನ ವರೆಗೂ ಫಿನ್ನರು ಹೋರಾಡುವರು" ಎಂಬ ವಿನಂತಿಯನ್ನು ಫಿನ್ನರು ರೇಡಿಯೋ ಮೂಲಕ ರಷ್ಯದ ಜನತೆಯೊಡನೆ ಮಾಡಿಕೊಂಡಿರುವರು.

ಜರ್ಮನಿಯ ಪ್ರಚಾರ.

ಸೋವಿಯೆಟ್ ರಷ್ಯವು ರುಮೇನಿಯ ಮತ್ತು ಟರ್ಕಿಗಳನ್ನು ಬಗ್ಗುಬಡಿದು ಆ ಮೇಲೆ ಮಧ್ಯ ಏಸ್ಯಾ ಮತ್ತು ಹಿಂದೂ ದೇಶಕ್ಕೂ ಧಾಳಿ ಇಡಬಹುದೆಂದು ಜರ್ಮನಿಯು ಪ್ರಚಾರ ಮಾಡತೊಡಗಿರುವುದು. ಕಮ್ಯೂನಿಸ್ಟ್ ಇಂಟರ್ನೇಶನಲ್ ಸಂಘದ ಪತ್ರಿಕೆಯು, ರುಮೇನಿಯ ಮತ್ತು ಟರ್ಕಿಗಳನ್ನು ಎಚ್ಚರಿಸುವ ಲೇಖವೊಂದು ಬರೆದಿರುವುದು. ಆದರೆ ಇದಕ್ಕೂ ಸೋವಿಯೆಟ್ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲೆಂದು ರಷ್ಯವು ಅಲ್ಲಗಳೆದಿರುವುದು.

೩ ಮಿಲ್ಯ ಫಿನ್ನಿಶ್ ಸೇನೆ.

ಒಟ್ಟು ಫಿನ್ನಿಶ್ ಸೇನೆಯು ಅರ್ಧ ಮಿಲ್ಯದಷ್ಟಿದೆ. ಸ್ವೀಡನ್ ಸರಕಾರವು ಫಿನ್ನರಿಗೆ 25 ವಿಮಾನಭೇದಕ ತೋಪುಗಳನ್ನು ಒದಗಿಸಿದೆ. ಜೆಕೊಸ್ಲೊವೇಕಿಯ ಮತ್ತು ಜರ್ಮನಿಯಿಂದ ಬಂದೂಕುಗಳೂ 60ರ ವರೆಗೆ ಇಟೆಲಿಯಾನ ವಿಮಾನಗಳೂ ಫಿನ್ಲೆಂಡಿಗೆ ಕಳುಹಿಸಲ್ಪಟ್ಟಿವೆ. ಇಂಗ್ಲೆಂಡು, ಹಂಗೇರಿ ಮತ್ತು ಯುಗೋಸ್ಲಾವಿಯಗಳು ಕೂಡಾ ಫಿನ್ಲೆಂಡಿಗೆ ಯುದ್ಧ ಸಾಮಗ್ರಿಗಳನ್ನು ಕಳುಹಿಸುತ್ತಿವೆ. ಬ್ರಿಟನಿನಿಂದ ಫಿನ್ಲೆಂಡು 30 ಯುದ್ಧ ವಿಮಾನ ಮತ್ತು ಇತರ ಯುದ್ಧ ಸಾಮಗ್ರಿಗಳನ್ನು ತೆಗೆದುಕೊಳ್ಳಲಿದೆ. ಕರೇಲಿಯನ್ ಭೂಕಂಠ ಮತ್ತು ಲಡೋಗ ಸರೋವರದ ಬಳಿಯ ರಣರಂಗಗಳಿಗೆ ರಷ್ಯವು ತನ್ನ ಉತ್ತಮ 7ನೇ ಸೈನಿಕ ದಳವನ್ನು ಕಳುಹಿಸಿರುತ್ತದೆ.

ಫಿನ್ನರ ಆಗ್ರಹದ ವಿನಂತಿ.

ಫಿನ್ಲೆಂಡಿನ ಕುರಿತು ಲೋಕವು ಏನು ಮಾಡಲಿರುವುದೆಂದು ಪ್ರತಿಯೊಬ್ಬ ಫಿನ್ನನ ಬಾಯಿಯಲ್ಲಿರುವ ಪ್ರಶ್ನೆ. ಸಹಾನುಭೂತಿಯು ಎಲ್ಲಾ ಕಡೆಗಳಿಂದಲೂ ಬರುತ್ತದೆ. ಆದರೆ ಫಿನ್ಲೆಂಡಿಗೆ ಸಹಾನುಭೂತಿ ಮಾತ್ರ ಸಾಲದು. ಸಹಾಯಬೇಕು. 3 ಮಿಲ್ಯ ಜನಸಂಖ್ಯೆಯ ಚಿಕ್ಕ ರಾಜ್ಯಕ್ಕೆ 180 ಮಿಲ್ಯ ಜನತೆಯ ರಷ್ಯವನ್ನು ಎಂದೆಂದಿಗೂ ಎದುರಿಸಲು ಸಾಧ್ಯವಾಗಲಾರದು. ಯಾರಾದರೂ ಫಿನ್ಲೆಂಡಿನ ಸಹಾಯಕ್ಕೀಗ ಬಾರದಿದ್ದರೆ ಅದು ನಾಶ ಹೊಂದಿ ಪೋಲೆಂಡಿಗಿಂತಲೂ ಕೆಟ್ಟ ಸ್ಥಿತಿಗೀಡಾಗುವುದು. ಸ್ವೀಡನ್, ನೋರ್ವೆ ಮತ್ತು ಡೆನ್ಮಾರ್ಕುಗಳ ಕೇವಲ ಬಾಯಿ ಸಹಾನುಭೂತಿಯಿಂದ ಫಲವಿಲ್ಲ. ಶಸ್ತ್ರ ಮತ್ತು ಸೇನಾ ಸಹಾಯವೀಯಬೇಕು. ಒಡನೆಯೇ ಕೊಡಬೇಕು. ಫಿನ್ಲೆಂಡಿನ ಅಪಜಯದಿಂದ ಪೋಲೆಂಡಿನ ಪರಾಜಯಕ್ಕಿಂತಲೂ ಹೆಚ್ಚಿನ ಹಾನಿಯು ಬ್ರಿಟನ್ ಫ್ರಾನ್ಸ್ ಮತ್ತು ಲೋಕಕ್ಕುಂಟಾಗುವುದು. ಎಂದು ಫಿನ್ನಿಶ್ ಸರಕಾರದ ಅಧಿಕಾರಿಯೊಬ್ಬರು ವಿನಂತಿ ಮಾಡಿಕೊಂಡಿರುವರು. ಸೋವಿಯೆಟ್ ಸೈನಿಕರು ವಿಷವಾಯುವನ್ನುಪಯೋಗಿಸುತ್ತಿರುವರೆಂದೂ ಅದರಿಂದ 11 ಮಂದಿ ಫಿನ್ನಿಶ್ ಸೈನಿಕರು ಉಸಿರುಕಟ್ಟಿ ಸತ್ತಿರುವರೆಂದೂ ಹೆಲ್ಸಿಂಕಿಯ ಸುದ್ದಿ. ಇಷ್ಟರ ವರೆಗೆ ಒಟ್ಟು ಸುಮಾರು 1000 ಮಂದಿ ಫಿನ್ನಿಶ್ ಸೈನಿಕರು ಕೊಲ್ಲಲ್ಪಟ್ಟಿರುವಂತೆ.

ಫಿನ್ಲೆಂಡಿನ ಮೇಲೆ ನೌಕಾ ಮುತ್ತಿಗೆ

ರಷ್ಯವು ಫಿನ್ಲೆಂಡಿನ ಸಮುದ್ರ ಕರಾವಳಿಯ ಮೇಲೆ ನೌಕಾ ಮುತ್ತಿಗೆ ಹಾಕಿ ಇದೇ ತಾ. 9ನೇ ಮಧ್ಯಾಹ್ನದೊಳಗೆ ಫಿನ್ನಿಶ್ ಬಂದರುಗಳಲ್ಲಿರುವ ಪರರಾಷ್ಟ್ರಗಳ ಹಡಗುಗಳೆಲ್ಲಾ ಬಿಟ್ಟುಹೋಗಬೇಕೆಂದು ಎಚ್ಚರಿಸಿರುವದು. ಸೋವಿಯೆಟ್ ಸೇನೆಯು ಫಿನ್ಲೆಂಡಿನ ಮೆನ್ನರ್ ಹೈಮ್ ಕೋಟೆಗಳ ಸಾಲನ್ನು ಸಮೀಪಿಸಿರುವುದು. ಫಿನ್ಲೆಂಡಿನ ಮೇಲೆ ನೌಕಾ ಮುತ್ತಿಗೆ ಹಾಕಿ, ಮೆನ್ನಾರ್ ಹೈಮ್ ಕೋಟೆಗಳ ಹಿಂಬದಿಗೆ ಬೊತ್ನಿಯ ಕೊಲ್ಲಿಯ ಮೂಲಕ ವೈಮಾನಿಕ ಬಂದರಿನ ಮಾರ್ಗವಾಗಿ ಸೇನೆಯನ್ನು ಕಳುಹಿಸುವುದೇ ರಷ್ಯದ ಹಂಚಿಕೆಯಾಗಿದೆ. ಆದರೆ 1200 ಮೈಲು ಸಮುದ್ರ ಕರಾವಳಿ ಇರುವ ಫಿನ್ಲೆಂಡಿನ ಮೇಲೆ ನೌಕಾ ಮುತ್ತಿಗೆ ಹಾಕಲು ಎಷ್ಟರ ಮಟ್ಟಿಗೆ ಸಾಧ್ಯವೆಂದು ಹೇಳಬರುವುದಿಲ್ಲ. ಫಿನ್ಲೆಂಡು ತನ್ನ ಕರಾವಳಿಯ ಪ್ರಾಮುಖ್ಯ ಸ್ಥಳಗಳಲ್ಲೆಲ್ಲಾ ಜಲಕೋಟೆಗಳನ್ನಿಟ್ಟಿರುವುದರಿಂದ ನಾವೆಗಳ ಮೂಲಕ ಸೇನೆಯನ್ನಿಳಿಸುವುದು ಸುಲಭವೇನೂ ಅಲ್ಲ.

ಈಗಿನದಕ್ಕಿಂತ ಹೆಚ್ಚಿನ ಗಂಡಾಂತರ ಒದಗಿದರೆ ಪಾರಾಗುವ ಬಗೆ ಹೇಗೆ?

ಬೊಂಬ್ಳಾಯಿಂದ ಮಂಗಳೂರು ವರೆಗೆ ಇರುವ ಕರಾವಳಿಯ ಬಂದರುಗಳಿಂದ ಪ್ರಯಾಣಿಕರನ್ನು ಸರಕುಗಳನ್ನೂ ಒಯ್ಯುತ್ತಿದ್ದ ಬೊಂಬ್ಳೆ ಸ್ಟೀಮ್ ನೇವಿಗೇಶನ್ ಕಂಪೆನಿಯ ಹಡಗುಗಳು ಈ ಸಂ 1939ನೇ ಸಪ್ಟಂಬರ ತಿಂಗಳಿಂದ 2-3 ಸಲ (ವಾರಕ್ಕೊಂದರಂತೆ) ಸಂಚಾರಗೈದು ನಂತರ ನಿಲ್ಲಿಸಲ್ಪಟ್ಟಿವೆ. ಹಡಗು ಸಂಚಾರವು ನಿಲ್ಲಿಸಲ್ಪಟ್ಟಿರುವುದರಿಂದ ಕರಾವಳಿಯ ಜನರು ರೈಲುಮಾರ್ಗವಾಗಿ ಪ್ರಯಾಣ ಬೆಳೆಸುತ್ತಾರೆ.

ಬೊಂಬ್ಳಾಯಿಂದ ಅರಕೋಣಂ ಅಥವಾ ಮದ್ರಾಸಿನ ಮಂಗಳೂರಿಗೆ (ಭೂಪ್ರದಕ್ಷಿಣದಂತೆ) ಇರುವ ರೈಲುಮಾರ್ಗವು ಅಧಿಕ ವೆಚ್ಚ ಮತ್ತು 3 ದಿವಸಗಳ ಪ್ರಯಾಣದ್ದಾಗಿರುವುದರಿಂದ ಜನರು ಹೆಚ್ಚಾಗಿ ಮೈಸೂರು ಸ್ಟೇಟ್ ಸರಕಾರಕ್ಕೊಳಪಟ್ಟಿರುವ ಹರಿಹರ ಮತ್ತು ಕಡೂರು ಸ್ಟೇಶನಿಗೆ ಟಿಕೇಟು ಪಡೆಯುತ್ತಾರೆ. ಈ ಸ್ಟೇಶನುಗಳು ಪಶ್ಚಿಮ ಕರಾವಳಿಗೆ (ಅನುಕ್ರಮವಾಗಿ) ಸುಮಾರು 180 ಮತ್ತು 130 ಮೈಲುಗಳ ಅಂತರವಲ್ಲಿದ್ದು, ಆಗುಂಬೆ ಮತ್ತು ಚಾರ್ಮಾಡಿ ಘಾಟಿಯನ್ನು ಇಳಿಯಬೇಕಾಗುತ್ತದೆ. ಎತ್ತಿನ ಗಾಡಿಯಿಂದ ಅಥವಾ ಕಾಲ್ನಡಿಗೆಯಿಂದ ಅಕ್ರಮಿಸುವುದಾದರೆ 5 ಮತ್ತು 3 ದಿವಸಗಳು ಹಿಡಿಯುತ್ತಿದ್ದು ಈ ದಾರಿಯನ್ನು ಆಧುನಿಕ ಉಪಕರಣವಾದ ಮೋಟರ್ ಬಸ್ಸುಗಳು ಸುಮಾರು 11 ಮತ್ತು 9 ತಾಸುಗಳಲ್ಲಿ ಪಾರುಗೊಳಿಸುತ್ತವೆ. ಬಸ್ಸುಗಳ ಅನುಕೂಲತೆಗಿಂತ ಹೆಚ್ಚಿನ ಪ್ರಯಾಣಿಕರಿದ್ದರೆ ಕಷ್ಟಪ್ರಯಾಸದಿಂದ ಮಧ್ಯಮಾರ್ಗದಲ್ಲೇ ಉಳಿಯುವ ಅಪಾಯಕ್ಕೊಳಗಾಗುವ ಸಂಭವವೂ ತಪ್ಪಲಾರದೆಂದು ಭಾವಿಸಬೇಕಾಗುತ್ತದೆ.

ಇಂತಹ ದುರ್ಘಟನೆಯ ಕಾಲದಲ್ಲಿ ಹರಿಹರದಿಂದ ಉಡುಪಿಗಾಗಿ ಕರಾವಳಿಯಲ್ಲಿ ಮಂಗಳೂರು ವರೆಗೆ ರೈಲುಮಾರ್ಗ ಇರುತ್ತಿದ್ದರೆ ಪರಪ್ರಾಂತದಲ್ಲಿ ದುಡಿಯುತ್ತಿರುವ ಜನರ ಪ್ರಯಾಣಕ್ಕೂ, ಸರಕು ಸಾಮಾನುಗಳನ್ನು ಸಾಗಿಸುವ ವಾಣಿಜ್ಯ ಜನರಿಗೂ ಯಾತ್ರಾರ್ಥಿಗಳಿಗೂ ಅತ್ಯಧಿಕ ಪ್ರಯೋಜನವೂ, ಲಾಭದಾಯಕವೂ ಆಗುತ್ತಿತ್ತು. ಕರ್ನಾಟಕ ದೇಶದ ಸಂಘಟನೆಗೆ (ಏಕೀಕರಣಕ್ಕೆ) ತಳಹದಿಯಾಗುತ್ತಿತ್ತು; ಹೊರತು ಅಖಿಲ ಕರ್ನಾಟಕದಲ್ಲಿ ಬಂಧುಭಾವನೆಯನ್ನೂ, ವ್ಯಾಪಾರವಹಿವಾಟನ್ನೂ ಅಭಿವೃದ್ಧಿಗೊಳಿಸುವದೆ ಸಹಕಾರವಾಗುತ್ತಿತ್ತು. ಅಂತಹ ವ್ಯವಸ್ಥೆಗಳಿಲ್ಲದಿರುವುದರಿಂದ ಬೊಂಬ್ಳೆ ಪಟ್ಟಣ ಬಂದರದಲ್ಲೇ ವಾಸಮಾಡುತ್ತಿರುವ ಮಲಬಾರು ಮತ್ತು ದಕ್ಷಿಣೋತ್ತರ ಕನ್ನಡನಾಡುಗಳ ಕರಾವಳಿಯ ಸುಮಾರು ಅರ್ಧಲಕ್ಷಕ್ಕೆ ಮಿಕ್ಕಿದ ಜನರು ಈಗಿನದಕ್ಕಿಂತ ಹೆಚ್ಚಿನ ಗಂಡಾಂತರ ಒದಗಿದರೆ ಪಾರಾಗುವ ಬಗೆ ಹೇಗೆ ಎಂಬುದನ್ನರಿಯದೆ ದಿಗಿಲುಪಡಬೇಕಾದ ಕಾಲವಾಗಿದೆ ಇದು. ಈ ಸಂಬಂಧ ಮೈಸೂರು ಸ್ಟೇಟ್, ಮದ್ರಾಸು, ಹಾಗೂ ಇಂಡಿಯಾ ಸರಕಾರದವರು ವಿಚಾರಪೂರ್ವಕದಿಂದ ಉದಾತ್ತ ಭಾವನೆಯ ವ್ಯಾಪಕದೃಷ್ಟಿಯಿಂದ ಅಭಿಪ್ರಾಯಗೈದು ತಕ್ಕ ಸಂಯೋಜನೆಮಾಡುತ್ತ ಕಂಗೆಟ್ಟವರಾದ ಪ್ರಜಾಕೋಟಿಗೆ ಹಿತವನ್ನುಂಟು ಮಾಡುವಂತಾಗಬೇಕು.

Y. K. A. Puthran.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ ಈಗಾಗಲೇ ಸಂಚರಿಸತೊಡಗಿರುವರೆಂದು ತಿಳಿದುಬರುತ್ತದೆ. ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸಬೇಕೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ. ಪ್ರವೇಶ ಹಾಸಲು ರೂ. 1. (ಜುಮ್ಲಾ ರೂ. 11.) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ. ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಮಾಹಿತಿಯನ್ನು ಪಡೆಯಲಪೇಕ್ಷಿಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ. ಈ ವಿಳಾಸಕ್ಕೆ ಬರೆಯಬಹುದು.

ನಿಮ್ಮ ಜಾಹೀರಾತನ್ನು
'ನವಯುಗ'ದ
ಪರ್ಯಾಯ ಸಂಚಿಕೆಯಲ್ಲಿ
ಕೊಟ್ಟು ನಿಮ್ಮ ವಹಿವಾಟನ್ನು
ಪ್ರಬಲಪಡಿಸಿರಿ!

ಜಾಹೀರಾತುಗಳಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜ್ಯಾನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಯಾನ್ ಬೋರ್ಡ್ ಪೈಂಟಿಂಗ್ ವಗೈರೆ ಕೆಲಸಗಳನ್ನು ಕೈಕೊಳ್ಳಲಾಗುವುದು.

ಅನ್ನಪೂರ್ಣ ಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್, ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

"ಗೊನೊಕಿಲರ್" (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER ORIGINAL

ಇಂದಿನ ಅಪ್ರತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಸನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಸುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೬೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. 3. ವಿ. ಪಿ. ಖರ್ಚು 0-8-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೊ ಹೋಮ್ಯೊಪತಿ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

ಮಿ. ಜಿನ್ನರ ರಾಷ್ಟ್ರಘಾತುಕ ಧೋರಣೆ.

ಕಾಂಗ್ರೆಸ್ ಮಂತ್ರಿಗಳ ಮಂತ್ರಿಪದವಿ ತ್ಯಾಗದಿಂದ ಮುಸಲ್ಮಾನರ ಮೇಲಿನ ಅನ್ಯಾಯದ ಆಳ್ವಿಕೆಯು ಕೊನೆಗೊಂಡಾಯಿತು!

ಮುಸಲ್ಮಾನರ ವಿಮೋಚನಾ ದಿನಾಚರಣೆ

ಕಾಂಗ್ರೆಸ್ ಸರಕಾರಗಳು ಕಟ್ಟಕಡೆಗೆ ಹೇಗಾದರೂ ಕೊನೆಗೊಂಡುದರ ಸಂತೋಷಾರ್ಥವಾಗಿ ದಶಂಬರ ತಾ. ೨೨ನೇ ದಿನವನ್ನು ಮುಸಲ್ಮಾನ ವಿಮೋಚನಾ ದಿನವಾಗಿ ಆಚರಿಸಬೇಕೆಂದು ಮಿ. ಜಿನ್ನಾರವರು ಹಿಂದೂದೇಶದ ಮುಸಲ್ಮಾನರೊಡನೆಲ್ಲಾ ವಿನಂತಿಮಾಡಿಕೊಂಡಿರುವರು. ಈ ಸಂದರ್ಭದಲ್ಲಿ ಮುಸ್ಲಿಮ್ ಲೀಗಿನ ಜಿಲ್ಲಾ ಮತ್ತು ತಾಲೋಕು ಸಂಘಗಳು ಸಾರ್ವಜನಿಕ ಸಭೆ ನಡಿಸಿ ಮುಂಜೂರುಮಾಡಬೇಕಾದ ಠರಾವನ್ನು ಕೂಡಾ ಅವರೇ ಪ್ರಕಟಗೊಳಿಸಿರುವರು. ಕಾಂಗ್ರೆಸ್ ಮಂತ್ರಿಗಳು ತಮ್ಮ ಮುಸಲ್ಮಾನ ವಿರೋಧ ಧೋರಣೆಯಿಂದ, ಕಾಂಗ್ರೆಸು ಎಲ್ಲಾ ಜಾತಿ ಮತ್ತು ವರ್ಗದ ಪ್ರತಿನಿಧಿ ಸಂಸ್ಥೆಯೆಂಬುದರ ಅಸತ್ಯತೆಯನ್ನು ಸಿದ್ಧಗೊಳಿಸಿರುವರು. ಮುಸಲ್ಮಾನರ ಮತ್ತು ಇತರ ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳು ಕಾಂಗ್ರೆಸ್ ಮಂತ್ರಿಗಳ ಕೈಯಲ್ಲಿ ಸುರಕ್ಷಿತವಾಗಿರುವುದಿಲ್ಲ. ಕಾಂಗ್ರೆಸ್ ಮಂತ್ರಿಗಳು ಮುಸಲ್ಮಾನ ಜನಮತವನ್ನು ಮೂಲೆಗೊತ್ತಿ ಮುಸಲ್ಮಾನ ಸಂಸ್ಕೃತಿಯನ್ನು ನಾಶಮಾಡಿ, ಅವರ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಕೈಹಾಕಿ ರಾಜಕೀಯ ಮತ್ತು ಸಾಂಪತ್ತಿಕ ಹಕ್ಕುಗಳನ್ನು ತುಳಿದು ನಡೆದಿರುವರು. ಮುಸಲ್ಮಾನರ ಹಿತವನ್ನು ಕಡೆಗಣಿಸಿ ಹಿಂದುಗಳ ಹಿತಸಾಧಿಸಿರುವರು. ಮುಸಲ್ಮಾನರ ಹಿತವಿಘಾತುಕವಾಗಿ ಜಿಲ್ಲಾ ಅಧಿಕಾರಿಗಳ ಆಡಳಿತದಲ್ಲಿ ಕೈಹಾಕಿ ಹಿಂದೂ ರಾಜ್ಯವು ಸ್ಥಾಪಿತವಾಗಿರುವುದೆಂಬ ವಾತಾವರಣವನ್ನುಂಟುಮಾಡಿರುವರು. ಈಗ ಕಾಂಗ್ರೆಸ್ ಆಳ್ವಿಕೆಯು ಕೊನೆಗೊಂಡುದರಿಂದ ಮುಸಲ್ಮಾನರೆಲ್ಲರೂ ಅತ್ಯಾನಂದಗೊಂಡು ಈ ದಿನವನ್ನು ಪೀಡೆ, ಅನ್ಯಾಯ ಮತ್ತು ದಬ್ಬಾಳಿಕೆಯಿಂದ ತಮ್ಮ ಬಿಡುಗಡೆಯ ದಿನವಾಗಿ ಆಚರಿಸುವರು. ಮತ್ತು ಅಂತಹ ಮಂತ್ರಿಮಂಡಲವು ಪುನಃ ಅಧಿಕಾರಕ್ಕೆ ಬಾರದಂತೆಮಾಡಲು ಹಿಂದೀ ಮುಸಲ್ಮಾನರಿಗೆ ಬಲ, ಸಂಘಟನೆ ಮತ್ತು ಶಿಸ್ತನ್ನು ದೇವರು ದಯಪಾಲಿಸಲೆಂದು ಪ್ರಾರ್ಥಿಸುವರು. ಕಾಂಗ್ರೆಸ್ ಮಂತ್ರಿಗಳು ಮುಸಲ್ಮಾನರಿಗೆ ಮಾಡಿರುವ ಅನ್ಯಾಯವನ್ನು ಪ್ರತಿಪ್ರಾಂತದ ಗವರ್ನರರು ನಿವಾರಿಸಬೇಕೆಂದು ಈ ಪರಿಷತ್ತು ಕೇಳಿಕೊಳ್ಳುತ್ತದೆಂಬುದೇ ನಿರ್ಣಯದ ಸಾರಾಂಶ. ಮಿ. ಜಿನ್ನರ ಇಡ್ ಸಂದೇಶವನ್ನು ಇದರೊಂದಿಗೆ ಸರಿ ಹೋಲಿಸಿದರೆ ಅವರ ಮನಸ್ಸಿನ ಮೇಲೆ ಮುಪ್ಪಿನ ಪರಿಣಾಮವು ಚೆನ್ನಾಗಿ ಆಗಿರುವದೆನ್ನಬಹುದು. ಕಾಂಗ್ರೆಸಿನ ಕುರಿತು ಈ ರೀತಿ ದ್ವೇಷಸಾಧನೆ ಮಾಡುವಂತಹ ಮುಂದಾಳುವಿನೊಡನೆಯಾವ ರೀತಿಯ ಸಂಧಿಯಾದರೂ ಹೇಗೆ ಸಾಧ್ಯವೋ ತಿಳಿಯದು. ಕಾಂಗ್ರೆಸ್ ಮಂತ್ರಿಗಳು ಮಾಡಿರುವ ಅನ್ಯಾಯ ಇಂತಹದೆಂಬುದನ್ನು ಸ್ಪಷ್ಟವಾಗಿ ಯಾರೂ ಹೇಳಿದವರಿಲ್ಲ. ದೇಶದ ಬೆಂಬಲ ಪಡೆದು ಇಡೀ ಲೋಕದಲ್ಲಿ ತನ್ನ ವರ್ಚಸ್ಸನ್ನು ಹಬ್ಬಿಸಿರುವ ಕಾಂಗ್ರೆಸಿನ ಮೇಲಿನ ಅಸೂಯೆಯಿಂದ ಮಿ. ಜಿನ್ನರು ಸಂದರ್ಭ ನೋಡಿ ಪ್ರತೀಕಾರ ಮಾಡುವ ಹಠ ಸಾಧನೆಯ ಮನೋವೃತ್ತಿಯುಳ್ಳವರಿರುತ್ತಾರೆ. ಈ ಸಂದರ್ಭದಲ್ಲಿ ಮುಸಲ್ಮಾನರಿಗೆ ಮಿ. ಜಿನ್ನರ ನಾಯಕತ್ವವು ಸಂಘಟಿತವಾದುದು ಅದೊಂದು ದೇಶದ ದೊಡ್ಡ ದುರ್ದೈವವೇ ಸರಿ.

ಮುಸಲ್ಮಾನ ವಿಮೋಚನಾ ದಿನಾಚರಣೆಗಾಗಿ ವಿನಂತಿ.

ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಗೆ ವಿರೋಧ.

ಹಿಂದಿನ ಕಾಂಗ್ರೆಸ್‌ವಾದಿಗಳೇ ಇಂದಿನ ಕಾಂಗ್ರೆಸಿನ ಬದ್ಧ ವಿರೋಧಿಗಳು.

ಕಾಂಗ್ರೆಸಿಗೆ ಹಿಂದೂ ಮಹಾಸಭೆ, ಜಸ್ಟಿಸ್ ಪಾರ್ಟಿ ಮತ್ತು ಸನಾತನಿಗಳ ವಿರೋಧ.

●

ಮಿ. ಜಿನ್ನರಿಗೆ ಮುಸಲ್ಮಾನರ ವಿರೋಧ.

ಮುಸ್ಲಿಮ್ ಲೀಗಿನ ಎಗ್ಸಿಕ್ಯೂಟಿವ್ ಕೌನ್ಸಿಲಿನ ಪ್ರಮುಖ ಮೆಂಬರರಲ್ಲೊಬ್ಬರಾದ ಬಂಗಾಳದ ಮಿ. ಅಬ್ದುಲ್ ರಹಿಮಾನ್ ಸಿದ್ದೀಕರವರು, ಮಿ ಜಿನ್ನರು ಹೊರಡಿಸಿರುವ ವಿನಂತಿಯನ್ನು ವಿರೋಧಿಸಿ ಅವರಿಗೆ ಮುದಿ ಭ್ರಾಂತು ಹಿಡಿದಿರುವುದೆಂದೂ, ಸರಕಾರಿ ನೌಕರರಂತೆ ರಾಜಕೀಯ ಮುಖಂಡರೂ ಇದೊಂದು ನಿಶ್ಚಿತ ಪ್ರಾಯದಲ್ಲಿ ನಿವೃತ್ತರಾಗುವಂತಾಗಬೇಕೆಂದೂ ಸೂಚಿಸಿರುವರು. ಮಿ. ಸಿದ್ದೀಕರರು ಕಾಂಗ್ರೆಸ್ ಮಂತ್ರಿಗಳ ಆಡಳಿತದ ಕುರಿತು ತೀವ್ರ ಅತೃಪ್ತಿಯುಳ್ಳವರಾಗಿರುವರು. ಆದರೆ ಆ ಕುರಿತು ವೈಸರಾಯರು ಮತ್ತು ಗವರ್ನರರು ಗಮನವಿತ್ತು ಮುಸ್ಲಿಮ್ ಲೀಗಿನ ಹಿತರಕ್ಷಣೆ ಮಾಡಬೇಕೇ ಹೊರತು, ಕಾಂಗ್ರೆಸ್ ಮಂತ್ರಿಗಳನ್ನು ಜಾಹೀರಾಗಿ ನಿಷೇಧಿಸುವುದರಲ್ಲಿ ಅರ್ಥವಿಲ್ಲೆಂದೇ ಮಿ. ಸಿದ್ದೀಕರರ ಅಭಿಮತ. ಬಂಗಾಳ ಎಸೆಂಬ್ಲಿ ಮತ್ತು ಕೌನ್ಸಿಲಿನ 16 ಮಂದಿ ಮುಸಲ್ಮಾನ ಮೆಂಬರರು ಮಿ. ಜಿನ್ನರ ಧೋರಣೆಯನ್ನು ಕಠಿಣವಾಗಿ ಟೀಕಿಸಿ, ಅವರು ಅಪ್ರಾಗತಿಕ ಸಾಮ್ರಾಜ್ಯಶಾಹಿಯ ಕೈಗೊಂಬೆಯಾಗಿ ದೇಶದ ಐಕ್ಯಕ್ಕೆ ವಿಘಾತುಕವನ್ನುಂಟುಮಾಡಿ, ಮಿಲ್ಯಾಂತರ ಮುಸಲ್ಮಾನರು ಗುಲಾಮಗಿರಿಯಲ್ಲಿರುವ ಆತ್ಮಘಾತುಕ ಹಾಗೂ ಅವಿವೇಕದ ಹಾದಿ ಹಿಡಿದಿರುವರು. ಮುಸ್ಲಿಮ್ ಲೀಗೆಂಬುದು ತನ್ನ ಕಿಸೆಯೊಳಗಿರುವುದೆಂಬಂತೆ ಇಚ್ಛಾನುಸಾರ ವರ್ತಿಸುತ್ತಿರುವರು. ಮೇಲ್ತರಗತಿಯ ಕೆಲಮಂದಿ ಮುಸಲ್ಮಾನರ ಸ್ವಪ್ರತಿಷ್ಠೆ ಮತ್ತು ಸ್ವಾರ್ಥಕ್ಕಾಗಿ ದೇವರ ಹೆಸರನ್ನೆತ್ತಿ ಜನತೆಯ ಕಣ್ಣಿಗೆ ಮಣ್ಣು ಹಾಕಲೆತ್ನಿಸಿರುವರು. ಮಿ. ಜಿನ್ನರ ಕೇಳಿಕೆಗಳಿಗೆ ಕಾಂಗ್ರೆಸು ಒಪ್ಪದುದರಿಂದ ಅವರು ಕಾಂಗ್ರೆಸನ್ನು ದ್ವೇಷಿಸಹತ್ತಿರುವರು. ಕಾಂಗ್ರೆಸ್ ಮಂತ್ರಿಗಳು ಮಾಡಿರುವರೆಂದಿರುವ ಅನ್ಯಾಯಗಳನ್ನು ನಿವಾರಿಸಬೇಕೆಂದು ಮಿ. ಜಿನ್ನರು ಗವರ್ನರರಿಗೆ ವಿನಂತಿ ಮಾಡಿಕೊಂಡಿರುವುದು ಅತ್ಯಂತ ಅಪಮಾನಕರವಿದೆಯೆಂವೇ ಇವರ ಅಭಿಮತ. ಪಂಜಾಬ್ ಮತ್ತು ಮದ್ರಾಸಿನ ನೇಶನಲಿಸ್ಟ್ ಮುಸಲ್ಮಾನರು ಕೂಡಾ ಮಿ. ಜಿನ್ನರ ವರ್ತನೆಯನ್ನು ನಿಷೇಧಿಸಿರುವರು.

THULUNAD BANK

OF SUPPLY AGENCY LIMITED,

ESTD.] UDIPI. [1933.

INTEREST ON CURRENT ACCOUNT ALLOWED

at 3% p. a.

All kinds of Banking business transacted

Write for particulars to:—

The Managing Director.

ಗಾಂಧಿಜಿಯವರ ವಿನಂತಿ

"ಮಿ. ಜಿನ್ನಾರವರು ಮಾಡಿಕೊಂಡಿರುವ ವಿನಂತಿಯನ್ನವರು ಹಿಂತೆಗೆದು ಮುಸಲ್ಮಾನರು ದಶಂಬರ ತಾ, ೨೨ನೇ ದಿನವನ್ನು ತಮ್ಮ ಬಿಡುಗಡೆಯ ದಿನವಾಗಿ ಆಚರಿಸಬಾರದೆಂದೇ ನನ್ನ ವಿನಂತಿ. ತಾನೇ ಆರೋಪಹೊರಿಸಿ, ಅದನ್ನು ತೀರ್ಮಾನಿಸುವವನೂ ತಾನೇ ಆಗುವ ಪ್ರಚಂಡ ಜವಾಬ್ದಾರಿಯನ್ನು ಮಿ. ಜಿನ್ನರು ಹೊತ್ತಿರುವರು. ಕೇವಲ ಅಪಾದನೆಗಳನ್ನು, ಸಿದ್ಧಗೊಳಿಸಲ್ಪಟ್ಟ ಸಂಗತಿಗಳೆಂದು ಮಿ. ಜಿನ್ನರು ಮುಸಲ್ಮಾನರಿಗೆ ತಿಳಿಸಬಾರದಿತ್ತು. ಹಿಂದೂ ಮುಸಲ್ಮಾನರ ಹಾಗೂ ಇಸ್ಲಾಮಿನ ಮಿತ್ರನೂ ಸೇವಕನೂ ಆಗಿರುವನೊಬ್ಬನ ಕೇಳಿಕೆಯನ್ನು. ಮಿ. ಜಿನ್ನರೂ ಮುಸಲ್ಮಾನರೂ ಮನ್ನಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಮುಸಲ್ಮಾನರಿಗೆ ಕಾಂಗ್ರೆಸ್ ಮಂತ್ರಿಗಳು ಮಾಡಿರುವ ಅನ್ಯಾಯವನ್ನು ಗವರ್ನರರು ವಿಚಾರಿಸಿ ತಮ್ಮ ಅಭಿಪ್ರಾಯವೀಯಬೇಕೆಂಬ ಮಿ. ಜಿನ್ನರ ಕೇಳಿಕೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ತನ್ನ ಆರೋಪಗಳನ್ನು ವೈಸರಾಯರ ಮುಂದಿರಿಸುವನೆಂದು ಮಿ. ಜಿನ್ನರು ಬಾಬುರಾಜೇಂದ್ರಪ್ರಸಾದರಿಗೆ ತಿಳಿಸಿದ್ದರು. ಆ ಕುರಿತು ವೈಸರಾಯರು ತನ್ನ ತೀರ್ಮಾನವೀಯುವರೆಂದು ನನ್ನ ಆಶೆ. ಈ ಆರೋಪಗಳನ್ನು ಅನುಮೋದಿಸಿ ಕಾಂಗ್ರೆಸನ್ನು ನಿಷೇಧಿಸಲು ಮುಸಲ್ಮಾನ ಜನತೆಯನ್ನು ಕೇಳಿಕೊಳ್ಳುವ ಮೊದಲು, ಆ ಕುರಿತು ವೈಸರಾಯರ ಮತ್ತು ಗವರ್ನರರ ತೀರ್ಮಾನವನ್ನು ಪಡಕೊಳ್ಳುವುದುಚಿತವಾದುದರಿಂದ ಆ ವರೆಗೆ ಮಿ. ಜಿನ್ನರು ತಡೆಯುವರೆಂದು ನನ್ನ

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ,

R. E. P. 691/1939 O. S. 75/1933

ಕುಪ್ಪಯ್ಯ ಕಾರಂತ—

ಅಮಲ್ಜಾರಿ ಅರ್ಜಿದಾರ.

ಮತ್ತು

ವೆಂಕಪ್ಪ ಕಾರಂತ ಕೂಡಾ—

ಪ್ರತಿವಾದಿರು ಎದ್ರಿರು.

ಅಸ್ಲುವಾದಿ-ಕೇಶವರಾವ-ವೆಂಕಟಕೃಷ್ಣ ಕುಕ್ಕಿಲ್ಲಾಯರ ಮಗ, ಉಡ್ಪಿಯಲ್ಲಿರುವವರು.

2ನೇ ಪ್ರತಿವಾದಿ-ಕೇಶವ ಐತಾಳ
3ನೇ ಡಿ-ವಿಷ್ಣುಮೂರ್ತಿ ಐತಾಳ } ಪುಟ್ಟ ಐತಾಳರ ಮಕ್ಕಳು
4ನೇ ಡಿ-ಶಂಕರನಾರಾಯಣ ಐತಾಳ

ಕುಂದಾಪುರ ತಾಲೂಕು ಶಿರಿಮಂಜೇಶ್ವರ ಗ್ರಾಮ.

ಅಮಲ್ಜಾರಿ ಅರ್ಜದಾರನು ತನ್ನ ಸಹೋದರ ಇತ್ತಲಾಗೆ ಮೃತಪಟ್ಟು ಅನಂತ ಕಾರಂತರಿಗೆ ಅಸ್ಲುವಾದಿಯು 9-3-36ರಲ್ಲಿ ರಿಜಿಸ್ತ್ರಿ ಬರಕೊಟ್ಟ ಡಿಕ್ರಿ ಹಕ್ಕಿನ ಟ್ರೇನ್ಸ್‌ಫರನ್ನು ಮುಂಜೂರುಮಾಡಿ ಮುಂದಿನ ಅಮಲ್ಜಾರಿ ನಡಿಸಲಿಕ್ಕೆ ಕೊಡ್ಬೇಕೆಂಬ ಕಾಣಿಸಿದ ಅಮಲ್ಜಾರಿಯು ತಾ. 21-12-1939ಕ್ಕೆ ವಿಚಾರಣೆಗೆ ಇಟ್ಟದೆ ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

G. Sanjiva Rau, B. A. LL. B.

Vakeil for Petitioner.

ಕುಂದಾಪುರ, ತಾ, 7-12-1919.

ಆಶೆಯೆಂದು ಮಹಾತ್ಮ ಗಾಂಧಿಯವರು ಹೇಳಿಕೊಂಡಿರುವರು.

ಕನ್ಸ್ಟಿಟ್ಯುವೆಂಟ್ ಎಸೆಂಬ್ಲಿಗೆ ವಿರೋಧ

ಮಿ. ಜಿನ್ನರು ಕನ್ಸ್ಟಿಟ್ಯುವೆಂಟ್ ಎಸೆಂಬ್ಲಿಗೆ ಕೂಡಾ ತನ್ನ ವಿರೋಧವನ್ನು ಸೂಚಿಸಿ ಅದು ಕೇವಲ ಕಾಂಗ್ರೆಸ್ಸಿನ ದೊಡ್ಡ ಸ್ವರೂಪವಾಗುವುದೆಂದು ಟೀಕಿಸಿರುವರು. ಹಿಂದೂದೇಶದ ನಿಜವಾದ ಪ್ರತಿನಿಧಿಸಂಸ್ಥೆ ಕಾಂಗ್ರೆಸೊಂದೇ ಎಂಬ ಗಾಂಧಿಯವರ ಹೇಳಿಕೆ, ಮತ್ತು ಲೇಖನಗಳಿಂದ ಮಿ. ಜಿನ್ನರು ಕ್ರೋಧಗೊಂಡು ಗಾಂಧಿಯವರನ್ನು ಕಠಿಣವಾಗಿ ಟೀಕಿಸಿರುವರು. ಪ್ರಾಯಸ್ಥರಿಗೆಲ್ಲಾ ಓಟುಕೊಟ್ಟು ಚುನಾವಣೆ ನಡಿಸಿ ಪ್ರತಿನಿಧಿಗಳನ್ನು ಆರಿಸಿ ಕನ್ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ರಚಿಸಿ ಹಿಂದೀ ರಾಜಕೀಯ ಘಟನೆಯನ್ನು ತಯಾರಿಸುವ ಕುರಿತು ಗಾಂಧಿಯವರಿಗೀಗ ಥಕ್ಕನೆ ಬಹಳ ಆಸಕ್ತಿಯುಂಟಾಗಿದೆ. ಈ ವಿಧಾನದಿಂದ ನಿಜವಾದ ಜನಮತವನ್ನು ಪಡೆಯಲು ಸಾಧ್ಯವಿಲ್ಲ. ಆದರಿಂದ ಕಾಂಗ್ರೆಸ್ಸಿನ ಆಟವೇ ನಡೆಯುವಂತಾಗುವುದು. ಗಾಂಧಿಯವರು ದಿನದಿನ, ವಾರ ವಾರವೆಂಬಂತೆ ಅಭಿಪ್ರಾಯ ಬದಲಾವಣೆಮಾಡಿ ಅಸಂಬದ್ಧ ಸೂಚನೆಗಳನ್ನು ಮಾಡುತ್ತಿರುವರು. ಹಿಂದೀಯ ರಾಜಕೀಯ ಘಟನೆಯ ಪ್ರಶ್ನೆಯನ್ನವರು ಆದರಷ್ಟಕ್ಕೇನೇ ಬಿಟ್ಟು ಮೊದಲು ಹಿಂದೂ—ಮುಸಲ್ಮಾನ ಪ್ರಶ್ನೆಯನ್ನು ಇತ್ಯರ್ಥಿಸಲೆತ್ನಿಸಿದರೆ ತಾನು ಮುಸಲ್ಮಾನರ ಪರವಾಗಿ ಸಾಧ್ಯವಾದ ಸಹಾಯಮಾಡಲಿರುವೆನು. ಕನ್ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆಯಬೇಕೆಂದು ಬ್ರಿಟಿಷ್ ಸರಕಾರವನ್ನು ಕೇಳಿಕೊಳ್ಳುವುದು ನಿಷ್ಪ್ರಯೋಜನ. ಯಾಕೆಂದರೆ ಬ್ರಿಟನು ತನ್ನ ಮರಣ ವಾರಂಟಿಗೆ ತಾನೇ ಸಹಿಹಾಕಲಾರದೆಂಬೇ ಮಿ. ಜಿನ್ನರ ಅಭಿಮತ.

ಮಿ. ಜಿನ್ನರು ಮೊದಲೊಮ್ಮೆ ಉಜ್ವಲ ಕಾಂಗ್ರೆಸ್ ಭಕ್ತರಾಗಿ ಕಾಂಗ್ರೆಸ್ ಪ್ರೆಸಿಡೆಂಟರು ಕೂಡಾ ಆಗಿದ್ದವರು. ಇಂದೀಗ ಅವರು ಕಾಂಗ್ರೆಸೆಂದರೆ ಉರಿದುಬೀಳುವರು. ಆಗಾಖಾನ, ಸರ್. ಸಿಕಂದರರೇ ಮೊದಲಾದ ಮುಸಲ್ಮಾನ ಮುಖಂಡರು ಇವರಿಗಿಂತ ಎಷ್ಟೋ ಉದಾರ ಮನೋವೃತ್ತಿಯವರಿದ್ದು ಕಾಂಗ್ರೆಸ್ಸಿಗೆ ಇವರಿಗಿಂತ ಹೆಚ್ಚಿನ ಮಾನ್ಯತೆ ಕೊಡುವವರಿರುವರು. ಕಾಂಗ್ರೆಸೆಂದರೆ ಸರ್ಪದಂತೆ ಹೆಡೆ ಎತ್ತಿ ಬುಸುಗುಟ್ಟುವ ಬಂಗಾಳದ ಪ್ರಧಾನ ಮಂತ್ರಿ ಮಿ. ಫಜ್ಲುಲ್ ಹಕ್ಕರು ಒಮ್ಮೆ ಕಾಂಗ್ರೆಸಿನ ಅಭಿಮಾನಿಯಾಗಿದ್ದವರು. ಈಗ ಹಿಂದೂ ಮಹಾಸಭೆಯ ಮುಖಂಡರಾಗಿ ಕಾಂಗ್ರೆಸಿನ ಪ್ರತಿನಿಧಿತ್ವವನ್ನು ಅಲ್ಲಗಳೆಯುವ ಶ್ರೀ| ಸಾವರ್ಕರ ಮತ್ತು ಡಾ| ಮೂಂಜೆಯವರು ಒಂದೊಮ್ಮೆ ಕಾಂಗ್ರೆಸಿನ ಮುಂದಾಳುಗಳಾಗಿ ಹೆಚ್ಚಿನ ತ್ಯಾಗ ಮಾಡಿರುವರು. ಈಗ ಜಸ್ಟಿಸ್ ಪಕ್ಷದ ನಾಯಕರಾಗಿ, ಕಾಂಗ್ರೆಸನ್ನು ತೀವ್ರವಾಗಿ ದ್ವೇಷಿಸಿ ಬ್ರಿಟಿಷ್ ಸರಕಾರದ ಆಶ್ರಯವು ಹಿಂದೂದೇಶಕ್ಕೆ ನಿರಂತರವಾಗಿ ಇರಬೇಕೆಂದು ಸಾರುತ್ತಿರುವ ಶ್ರೀ ರಾಮಸ್ವಾಮಿ ನಾಯಕರು ಹಿಂದೆ ಕಾಂಗ್ರೆಸಿನ ನಾಯಕರಾಗಿ ಕಾರಾಗೃಹಕ್ಕೆ ಕೂಡಾ ಹೋದವರು. ಈಗ ಮಧುರೆಯಲ್ಲಿ ಪರಿಷತ್ತು ನಡಿಸಿ ಕಾಂಗ್ರೆಸನ್ನು ನಿಷೇಧಿಸಿ ಬ್ರಿಟಿಷ್ ಸರಕಾರಕ್ಕೆ ಬೆಂಬಲವಿತ್ತು, ಆದರ ಆಶ್ರಯಪಡೆಯಲು ಮುಂದಾಗಿರುವ ಸನಾತನಿಗಳು, ಕಾಂಗ್ರೆಸಿನ ಹರಿಜನೋದ್ಧಾರ ಮತ್ತು ದೇವಸ್ಥಾನ ಪ್ರವೇಶ ಚಳವಳದ ಮೊದಲು ಕಾಂಗ್ರೆಸಿನ ಅಭಿಮಾನಿಗಳಾಗಿದ್ದರು. ಹೀಗೆ ಹಿಂದಿನ ಕಾಂಗ್ರೆಸಿನ ಅಭಿಮಾನಿಗಳೇ ಈಗಣ ಕಾಂಗ್ರೆಸಿನ ಬದ್ಧವಿರೋಧಿಗಳಾಗಿ ಮುಂದೆಬಂದಿದ್ದಾರೆ.

ಸಮಿತಿಯ ಸದಸ್ಯರಾಗುವವರಿಗೆ ಮಾತ್ರ
ಈಗಲೇ ರೂ. 3 ಬೆಲೆಯ ಪುಸ್ತಕಗಳು

ಉಚಿತ

(ಸದಸ್ಯತನದ ಚಂದಾ:—ಒಂದೇ ರೂಪಾಯಿ)

1	ದೇವಪೂಜಾ ವಿಧಿ	0-3-0
2	ವಿಷ್ಣುಸಹಸ್ರನಾಮ ಸ್ತೋತ್ರ	0-2-0
3	ವಾಯುಸ್ತುತಿ	0-2-0
4	ದ್ವಾದಶಸ್ತೋತ್ರ	0-2-0
5	ಆದಿತ್ಯಹೃದಯ	0-1-0
6	ಶ್ರೀಸೂಕ್ತ ಪುರುಷಸೂಕ್ತ (ದ)	0-1-6
7	ಶ್ರೀಸೂಕ್ತ ಪುರುಷಸೂಕ್ತ (ಯ)	0-1-6
8	ಹರಿಕಥಾಮೃತಸಾರಸಾರೋದ್ಧಾರ	1-0-0
9	ಪುರಂದರದಾಸರ ಕೀರ್ತನೆ ಭಾಗ ೧	0-4-0
10	,, ,, ,, ೨	0-4-0
11	,, ,, ,, ೩	0-4-0
12	ಸುಂದರಕಾಂಡರಾಮಾಯಣಮೂಲ	0-2-0

ಟಪ್ಪಾಲು ಖರ್ಚು ಬೇರೆ. ಒಟ್ಟು ರೂ. 3-0-0

ಮಾಧ್ವಗ್ರಂಥ ಪ್ರಕಾಶನ ಸಮಿತಿ,
45, A. S. ಸ್ಟ್ರೀಟ್, ಬೆಂಗಳೂರು ಸಿಟಿ.

NAVAYUGA
Advertisement Tariff
1 Page Rs. 25/- per insertion
½ ,, Rs. 15/- ,, ,,
¼ ,, Rs. 8/- ,, ,,
⅛ ,, Rs. 5/- ,, ,,
Per Single inch col. Re. 1 ,,
Contract rates on application
Manager-Navayuga UDIPI.

ಅದ್ವಿತೀಯ ಗುಣಕಾರಿ

ವಾಯುಮಾತ್ರೆಗಳೆಂಬ ಕಸ್ತೂರಿಯುಕ್ತ

ಧಾನ್ವಂತರಿ ಗುಟಿ

ಆಯುರ್ವೇದ ರೂಪೀಮಂದಿರದ ಆಧಾರಸ್ತಂಭದಂತಿರುವ ಭಗವಾನ್ ಧಾನ್ವಂತರಿಯು ಲೋಕಕಲ್ಯಾಣಕ್ಕಾಗಿ ಅನುಗ್ರಹಿಸಿದ ಈ ಮಾತ್ರೆಗಳನ್ನು ಸೇವಿಸಿ ನಿಮ್ಮ ದಿನನಿತ್ಯದ ಕೆಲಸಗಳನ್ನು ಸುಖದಿಂದ ಮಾಡಿರಿ.

ಕಸ್ತೂರಿಯೇ ಮೊದಲಾದ ಮೌಲ್ಯವಾನ್ ದ್ರವ್ಯ ಯಾ ಇನ್ನಿತರ ಅನುಭವಯುಕ್ತ ವನಸ್ಪತಿಗಳ ಸಮ್ಮಿಶ್ರಣಗಳಿಂದ ಪ್ರಸ್ತುತವಾದ ಈ ಗುಟಿಗಳನ್ನು ಸೇವಿಸಿದರೆ ಅಜೀರ್ಣ, ಅಗ್ನಿಮಾಂದ್ಯ, ಅತಿಸಾರ, ಹೊಟ್ಟೆಯುಬ್ಬರ, ಶೂಲೆ, ಚುಚ್ಚುವ ಯಾ ಎಳೆಯುವ ಸರ್ವತರದ ದೋಷಗಳನ್ನು ನಿವೃತ್ತಿಪಡಿಸುವವು, ಹಾಗೂ ಆಲಸ್ಯ ಯಾ ವಾಯು ಎಂಬ ದಿನನಿತ್ಯದ ಉಪದ್ರವಗಳೇ ಮೊದಲಾದ ರೋಗಗಳಲ್ಲಿ ಅದ್ವಿತೀಯ ಗುಣಕಾರಿಯಾಗಿದೆ.

ಕ್ರಯ—12ಮಾತ್ರೆ, 0-4-0, 25, 0-7-0, 50, 0-13-0, 100, 1-5-0, 500, 5-0-0, 1000, 9-0-0.

೨ಆಣೆ ಸ್ಟಾಂಪು ಕಳುಹಿಸಿದರೆ 12ಮಾತ್ರೆ (ಗುಟಿ)ಗಳನ್ನು ಕಳುಹಿಸುತ್ತೇವೆ.

ಸ್ವದೇಶೀ ಔಷಧಿ ಭಂಡಾರ,
(ರಿಜಿಸ್ಟರ್ಡ್) ಕೆಂಜಾಲು,
ಪೋಸ್ಟ್—ಬ್ರಹ್ಮಾವರ, ದ. ಕ.

Degrees: Books: Medicines.

Free H. L. M S., H. M. B, H. M. D. etc Free Homeo-Ayur-Unani-Naturo degrees. by post also—Practioners also get soons Homeo Materiamedica, Rs. 5. Homeo-Practice book Rs. 4. Insanity Cure Pills Rs. 10 Enclose 2 annas stamp:—

Principal, Indian Homeopathic Institute and Society (Govt Regd.)
P. O. MAHUVA, (Kathiawar Dt, India.

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S India.)

Everyday the Membership increases

The Company issues all the well-known plans of Assurance

Female lives accepted.

JOIN ITS EVER INCREASING MEMBERSHIP.

ಈ ವಾರದ ಭವಿಷ್ಯ

ತಾ. 14-12-1939ರಿಂದ — — — ತಾ. 21-12-1939ರ ವರೆಗೆ

ಮೇಷ—"ಉಸ್ಥಾನಪ ಪುಷ್ಪವಂತೌ ವಿಪತ್ತಿಂ ಪ್ರತಿಪದ್ಯೇತೇ" ಎಂಬ ಲೋಕೋಕ್ತಿಯಂತೆ ಆಕಾಶದಲ್ಲಿದ್ದು ಗ್ರಹಮಂಡಲದಲ್ಲಿ ಸೇರಿರತಕ್ಕ ಸೂರ್ಯಚಂದ್ರರಿಗೂ ಆಗಾಗ ರಾಹುಕೇತುಗಳಿಂದ ವಿಪತ್ತು ಸಂಭವಿಸುತ್ತಿರುವುದು. ಅಂದಮೇಲೆ ಭೂಮಂಡಲದಲ್ಲಿರುವ ನರರಿಗಾದರೂ ವಿಪತ್ತು ಅನಿವಾರ್ಯವೇ ಸರಿ. ಸದ್ಯ ನಿಮಗೆ ಜನ್ಮಕೃತಿಯ ಪತಿಗಳಾಗಿರತಕ್ಕ ಕುಜಬುಧರು ಅನುಕೂಲರಾಗಿರುವುದರಿಂದ ಕೈಗೊಂಡ ಕಾರ್ಯದಲ್ಲಿ ಜಯ, ಆರ್ಥಿಕ ಸುಧಾರಣೆ ಜನಮಾನ್ಯತೆಯು ದೊರಕುವುದು. ಇತರ ಪ್ರತಿಕೂಲ ಗ್ರಹರು ಹೆಚ್ಚಿರುವುದರಿಂದ ದೇಹಾಲಸ್ಯ ಮನೋವ್ಯಥೆಗಳೂ ಮಿತಭಾಷಿಯಾಗಿದ್ದರೂ ಕೆಲ ಅಪಮಾನಗಳೂ ವ್ಯರ್ಥ ಧನವ್ಯಯವೂ ಸಂಭವಿಸುವುದು. ತಾ. 19, 20, ಕಷ್ಟಕರ.

ವೃಷಭ—ಸದ್ಧರ್ಮ ಕಾರ್ಯಗಳಲ್ಲಿ ಹೆಚ್ಚಿನ ಕಾಲವನ್ನೂ ಧನವನ್ನೂ ವ್ಯಯಿಸುವಿರಿ. ವೈವಾಹಿಕರಿಗೆ ಗೃಹಸುಖವು ತೃಪ್ತಿಕರವಾಗಿರುವುದು. ಸಾಂಪತ್ತಿಕ ಭಾಗವು ಉತ್ತಮ ತೆರನಾಗಿರುವುದು. ಆರೋಗ್ಯಭಾಗ್ಯದಿಂದ ಮುಕ್ತರಾಗಿರತಕ್ಕ ನಿಮಗೆ ಸದಾ ಕಾಹಿಲೆಯು ತಪ್ಪದು. ಅತ್ಯಲ್ಪವಾಗಿ ಧನವ್ಯಯವೂ ಆಗುವುದು. ದಂಪತಿಗಳಲ್ಲಿ ಆಗಾಗ ಮನೋವೈಷಮ್ಯದಿಂದ ಕಲಹವಾದೀತು. ಅನಿರೀಕ್ಷಿತವಾಗಿ ಕೆಲವೊಂದು ದುರ್ಘಟನೆಗಳು ಪ್ರಾಪ್ತವಾಗಿ ಕೈಯಲ್ಲಿನ ಹಣವು ನಷ್ಟವಾಗುವುದು. ಆದರೂ ತಾ. 16ರಿಂದ 20ರವರೆಗೆ ಕಾಲವು ಹೆಚ್ಚಿನಂಶ ಅನುಕೂಲವಾಗಿಯೇ ಇರುವುದು.

ಮಿಥುನ—ನೌಕರಿಗಳಿಗೂ ವ್ಯಾಪಾರಿಗಳಿಗೂ ವಿದ್ಯಾರ್ಥಿಗಳಿಗೂ ಕಾಲವು ಸಹಿತಕರವಾಗಿರುವುದು. ಸ್ವವೃತ್ತಿಯಲ್ಲಿ ಇಷ್ಟವು ಸಿದ್ಧಿಸುವುದು. ಉನ್ನತಸ್ಥಾನವನ್ನು ಹೊಂದಲಿರುವಿರಿ. ಇತರ ಸ್ತ್ರೀಮೂಲಕವಾಗಿಯೂ ನಿಮ್ಮ ಆರ್ಥಿಕ ಭಾಗವು ವೃದ್ಧಿ ಹೊಂದಲಿದೆ. ಪ್ರತಿಸ್ಪರ್ಧಿಗಳ ತೀಕ್ಷ್ಣ ದೃಷ್ಟಿಯು ನಿಮ್ಮ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡುವುದು. ಪ್ರವಾಸನಿಮಿತ್ತವಾಗಿಯೂ ಅಜೀರ್ಣವ್ಯಾಧಿ ಅಶಕ್ತಿ ಇವುಗಳ ನಿವೃತ್ತಿಯ ಸಲುವಾಗಿಯೂ ಖರ್ಚುಮಾಡುವಿರಿ. ತಾ. 14ರಿಂದ 18ರವರೆಗೆ ರಾಜಭೀತಿ ದೇಹಾಲಸ್ಯವೂ ಕಡಿಮೆಯಾಗದು.

ಕರ್ಕಾಟಕ—ನಾರೀ ಪ್ರತ್ಯಕ್ಷ ರಾಕ್ಷಸೀ ಎಂಬ ಹಿರಿಯರ ವಚನವು ಈ ವಾರದಲ್ಲಿ ನಿಮಗೆ ಪದೇ ಪದೇ ಸ್ಮೃತಿಪಥಕ್ಕೆ ಬರಲಿರುವುದು. ಇವರಿಂದ ಪ್ರಾಪ್ತವಾಗತಕ್ಕ ಕಲಹ ಅನಿಷ್ಟ ಅಪವಾದಗಳು ಅನಿವಾರ್ಯಗಳಾಗಿರುವುವು. ಹಗೆಯವರು ನಿಮ್ಮ ಮಾನಹಾನಿಗೂ ಧನಾಪಹಾರಕ್ಕೂ ಬಹುವಾಗಿ ಪ್ರಯತ್ನಿಸಿದರೂ ನಿಮ್ಮ ಸದ್ದೈವದಿಂದಲೂ ನೈಪುಣ್ಯದಿಂದಲೂ ಅದರಿಂದ ಮುಕ್ತರಾಗುವಿರಿ. ಆರೋಗ್ಯವೂ ಕಿಂಚಿನ್ಮಾತ್ರ ಸುಸ್ಥಿತಿಗೆ ಬರುವುದು. ಆರ್ಥಿಕ ಅಡಚಣೆಯು ಸಂಭವಿಸಲಾರದು. ತಾ. 14, 15, 21 ಅನುಕೂಲವಿದೆ.

ಸಿಂಹ—"ದೈವೇ ದುರ್ಬಲತಾಂ ಗತೇ ತೃಣಮಪಿ ಪ್ರಾಯೇಣ ವಜ್ರಾಯತೇ" ಎಂಬ ಶಾಸ್ತ್ರರೀತ್ಯಾ ದೈವಬಲವು ಕಡಿಮೆಯಾಗಲು ಹುಲ್ಲು ಕಡ್ಡಿಯೂ ಕೂಡ ವಜ್ರದಂತೆ ಗಟ್ಟಿಯಾದ ಪದಾರ್ಥವಾಗಿ ಪರಿಣಮಿಸುವದು. ಸದ್ಯ ನಿಮಗೆ ರಾಹುಬುಧರನ್ನುಳಿದು ಇತರ ಗ್ರಹರೆಲ್ಲರೂ ಪ್ರತಿಕೂಲರಾಗಿರುವುದರಿಂದ ಅದೃಷ್ಟವು ಅತ್ಯಂತ ದುರ್ಬಲವಾಗಿರುವುದು. ನೌಕರಿ ಭಾಗದಲ್ಲಿ ಪರಿಶ್ರಮಕ್ಕೆ ತಕ್ಕುದಲ್ಲವಾದರೂ ಅಲ್ಪ ಸ್ವಲ್ಪ ಧನಸಿಕ್ಕೀತು. ಸಂಸಾರದಲ್ಲಿ ಅತೃಪ್ತಿ, ರಾಜಕೀಯದಲ್ಲಿ ಶತ್ರುಗಳ ಕಾಟ, ದೇಹಾಲಸ್ಯ, ವ್ಯಾಪಾರದಲ್ಲಿ ನಷ್ಟ, ಇತ್ಯಾದಿಗಳು ಹೆಚ್ಚುವವು. ತಾ. 19, 20, 21ರಲ್ಲಿ ವಿಶೇಷ ಜಾಗರೂಕರಾಗಿರುವುದೊಳ್ಳಿತು.

ಕನ್ಯಾ—ಆರಕ್ಕೆ ಹೆಚ್ಚದು ಮೂರಕ್ಕೆ ಕುಂದದು ಎಂಬಂತೆ ನಿಮ್ಮ ಪರಿಸ್ಥಿತಿಯು ನಿಲ್ಲುವುದು. ಸ್ವಪಾಂಡಿತ್ಯದಿಂದ ಬಹು ಜನ ಮಿತ್ರರನ್ನು ಸಂಪಾದಿಸುವಿರಿ. ದೀರ್ಘ ದ್ವೇಷದಿಂದ ಮುಕ್ತರಾಗುವಿರಿ. ಖರ್ಚಿಗೆ ಬೇಕಾದಷ್ಟು ಹಣವನ್ನು ದುಡಿಯುವಿರಿ. ರಾಜಕೀಯ ಭಾಗದಲ್ಲೂ ಆಟದ ಸಲುವಾಗಿಯೂ ವ್ಯರ್ಥ ಧನವ್ಯಯವಾಗಲಿದೆ. ನೌಕರಿಗಳು ಮೇಲಧಿಕಾರಿಗಳ ವಕ್ರದೃಷ್ಟಿಗೆ ಬೀಳಲಿರುವರು. 16ರಿಂದ 20ರವರೆಗೆ ಧನಪ್ರಾಪ್ತಿ ಸ್ತ್ರೀಸುಖಗಳು ಚೆನ್ನಾಗಿವೆ.

ತುಲಾ—ದಿನೇ ದಿನೇ ನಿಮ್ಮ ಅದೃಷ್ಟವು ಉತ್ತಮ ಸ್ಥಿತಿಗೆ ಬರುತ್ತಿದೆ. ಈಗ ನಿಮ್ಮ ಜೀವನದಲ್ಲಿ ಸುಖ ಕಷ್ಟಗಳು ಸಮ್ಮಿಶ್ರವಾಗಿ ಯಾವುದಕ್ಕೂ ಆಧಿಕ್ಯ ತೋರದು. ದೇಹಾಲಸ್ಯದಿಂದ ಜಡರಂತೆ ನಿರುದ್ಯೋಗದಿಂದ ಕಾಲಕಳೆಯುತ್ತಿದ್ದ ನಿಮಗೆ ಈಗೀಗ ಕಾರ್ಯಾಸಕ್ತಿಯುಂಟಾಗಿದೆ. ತನ್ಮೂಲಕ ಹಣದ ಅಡಚಣೆಯನ್ನು ಪರಿಹರಿಸುವಿರಿ. ಶತ್ರು ಜನರಿಂದ ಹೆಚ್ಚಿನ ಉಪದ್ರವ ಸಂಭವಿಸಬಹುದು. ಮನೋವ್ಯಥೆಯೂ ತಪ್ಪಲಿದೆ. ಗೃಹ ಕೃತ್ಯದಲ್ಲಿ ಒಬ್ಬರಿಬ್ಬರಿಗೆ ಅನಾರೋಗ್ಯವು ಕಾಡಿಸುವುದಾದರೂ ವಾರಾಂತ್ಯದ 3 ದಿನಗಳು ಉತ್ತಮವಾಗಿವೆ.

ವೃಶ್ಚಿಕ—"ತ್ರಿದಶೈಃ ಪೂಜಿತಾ ವಹ್ನೇರಯಸಾ ಸಹ ಪೀಡ್ಯತೇ" ಅಗ್ನಿಯು ದೇವತೆಗಳಿಂದ ಪೂಜಿಸಲ್ಪಡುತ್ತಿರುವುದಾದರೂ ಕಬ್ಬಿಣದ ಸಂಯೋಗದಿಂದ ಸುತ್ತಿಗೆಯ ಪೆಟ್ಟನ್ನು ತಿನ್ನುವುದಿಲ್ಲವೇ, ತದ್ವತ್ ನೀವೂ ಕೂಡ ಉತ್ತಮ ಚರಿತರಾದರೂ ಸಂಸರ್ಗ ದೋಷದಿಂದ ದೋಷಾಪವಾದಗಳಿಗೆ ಗುರಿಯಾಗುವಿರಿ. ವಾಗ್ದೋಷದಿಂದ ಕೆಲವರಲ್ಲಿ ಕಲಹ ತಿರಸ್ಕಾರವನ್ನೂ ಹೊಂದುವಿರಿ. ಸಾಂಸಾರಿಕ ತಾಪತ್ರಯಗಳಿಂದಲೂ ಆರ್ಥಿಕ ಬಿಕ್ಕಟ್ಟಿನಿಂದಲೂ ಬೇಗ ಮುಕ್ತರಾಗುವಿರಿ. ವನಿತಾ ಸುಖವು ತೃಪ್ತಿಕರವಾಗಿದ್ದೀತು. ಆರೋಗ್ಯವೂ ಚೆನ್ನಾಗಿರುವುದು. ತಾ. 17ರಿಂದ 20ರ ವರೆಗಿನ ದಿನಗಳು ಪ್ರತಿಕೂಲ.

ಧನು—ಯಾವ ಗೊಡವೆಗೂ ಹೋಗದೆ ನಿಮ್ಮಷ್ಟಕ್ಕೆ ನೀವು ದಿನಗಳೆಯುವವೆಂದಿದ್ದರೂ ಕೂಡಾ ನಿಮ್ಮ ಶತ್ರುವು ಹಿತಕಾರಿಗಳೆಂದೆನಿಸಿದವರು ತಾವಾಗಿಯೇ ನಿಮ್ಮಲ್ಲಿಗೆ ಬಂದು ಇಲ್ಲದಸಲ್ಲದ ಉಪದ್ರವಗಳನ್ನು ಕೊಡುವರು. ಇದಿರುಗಡೆ ನಿರಾಪರಾಧಿಗಳೆಂದು ರುಜುಪಡಿಸಲೂ ಸಿದ್ಧರೇ ಅವರು. ಡಾಕ್ಟರ್, ವಕೀಲ್, ನೌಕರಿ ಇವರುಗಳಿಗೆ ಹೆಚ್ಚಿನಂಶ ನಷ್ಟವುಂಟಾಗುವುದು. ವಿದ್ಯಾರ್ಥಿಗಳಿಗೆ ವಿಶೇಷ ತೊಂದರೆಯಾಗುವುದು. ದೇಹ ದಂಡನೆ ಮೂಲಕವಾಗಿ ಧನಗಳಿಸುವಿರಿ. ಪುತ್ರರಿಂದ ಧನ ಲಾಭವಿದೆ. ಕಳೆದು ಹೋದ ವಸ್ತುವೂ ದೊರಕೀತು. ಆರೋಗ್ಯದ ಮಟ್ಟಿಗೆ ಅಷ್ಟಕ್ಕಷ್ಟೇ ಎಂದು ಹೇಳಬೇಕು. ತಾ. 14-15 19. 20. ಈ ದಿನಗಳು ಅನಿಷ್ಟಕಾರಿಗಳಾಗಿವೆ.

ಮಕರ—ಈ ವಾರದಲ್ಲಿ ನಿಮ್ಮ ಆದಾಯವು ಸ್ವಲ್ಪಾಂಶ ಕಡಿಮೆಯಾಗಿರುವುದು. ಖರ್ಚಿಗೂ ಸಾಕಷ್ಟು ದೊರೆಯುವ ಚಿಹ್ನೆಗಳು ಕಾಣುವಂತಿಲ್ಲ. ವ್ಯಾಪಾರ ಉದ್ಯೋಗ ಇವುಗಳಲ್ಲಿ ಕಿಂಚಿಲ್ಲಾಭವಿರುವುದಾದರೂ ಹಗೆಯವರ ಪ್ರತೀಕಾರದ ಸಲುವಾಗಿ, ಕೈಕೊಂಡ ಕಾರ್ಯವನ್ನು ಮುಂದರಿಸಲೂ ಆತ್ಮೀಯ ಆರೋಗ್ಯದ ಬಗ್ಗೂ ಬಹುವಾಗಿ ಧನ ವ್ಯಯಿಸಬೇಕಾಗುತ್ತದೆ. ರಾಜಕೀಯ ಭಾಗದಲ್ಲಿ ಪ್ರಖ್ಯಾತ ಇಷ್ಟಸಿದ್ಧಿಯಾಗಲಾರದು. ನಿಮ್ಮಂತರಂಗವು ಬಹು ದೂಷಿತವಾಗಿರುವುದರಿಂದ ತಾ. 16-17-18-21 ಈ ದಿನಗಳಲ್ಲಿ ಮಿತ್ರರಲ್ಲೂ ಕಲಹ, ಮಾನಹಾನಿ, ಕಾರ್ಯ ವಿಘ್ನಗಳು ಸಂಭವಿಸಲಿದೆ.

ಕುಂಭ—ಸದ್ಯದ ಗ್ರಹಮಾನ ರೀತ್ಯಾ ನಿಮ್ಮ ಅದೃಷ್ಟವು ಬಹು ಉತ್ತಮತರನಾಗಿದೆ. ಆದರೆ, 'ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ' ಹಸಿದ ಸಿಂಹವು ನಿದ್ರಿಸುತ್ತಿದ್ದರೆ ಅದರ ಬಾಯೊಳಗೆ ಯಾವ ಮೃಗಗಳೂ ಹೋಗಿ ಹೇಗೆ ಬೀಳಲಾರವೋ, ಅಂತೆಯೇ ನಿಮ್ಮ ಅದೃಷ್ಟ ಚೆನ್ನಾಗಿದೆ ಎಂದು ಆಲಸ್ಯದಿಂದ ಕಾಲಕಳೆದರೆ ಇದ್ದದ್ದೂ ಕೂಡ ನಷ್ಟವಾದೀತು. ಆದಕಾರಣ ಮನೆ ಬಾಗಿಲಿಗೆ ಬಂದ ಗಂಗೆಯನ್ನು ಸ್ನಾನಮಾಡದೆ ವ್ಯರ್ಥ ಬಿಡುವುದು ಬುದ್ಧಿವಂತರ ಲಕ್ಷಣವಲ್ಲ. ತಾ 16-17-18-21 ಬಹಳ ಅನುಕೂಲ.

ಮೀನ—ಬಹು ದಿನಗಳಿಂದ ಅನಿಷ್ಟಕರಗಳಿಂದ ಪೀಡಿತರಾಗಿದ್ದ ನಿಮಗೆ ಈ ವಾರದಲ್ಲಿ ಕಿಂಚಿತ್ ಉತ್ತೇಜನಕರವಾದ ಪರಿಸ್ಥಿತಿಗಳು ಕಂಡುಬರುತ್ತವೆ. ಶ್ರದ್ಧೆಯಿಂದ ಮಾಡಿದ ಕಾರ್ಯವು ಸಿದ್ಧಿಸುವ ಯೋಗವಿದೆ. ಮಿತ್ರ ಜನರು ನಿಮಗೆ ತನುಮನಧನಗಳಿಂದ ಸಹಾಯಮಾಡುವರು. ಆದರೂ ನಿಮ್ಮ ಅಡಚಣೆಯು ಒಮ್ಮೆಗೆ ನಿವೃತ್ತಿಯಾಗಲಾರದು. ದೇಹಾಲಸ್ಯದಿಂದ ದೌರ್ಬಲ್ಯ ಹೆಚ್ಚುವುದು. ಸ್ತ್ರೀಯರೊಡನೆ ಕಲಹವಾಗುವ ಸಂಭವವಿದೆ. ಆದ್ದರಿಂದ ವ್ಯವಹಾರದಲ್ಲಿ ಜಾಗರೂಕರಾಗಿರಿ. ತಾ. 16-17-18-21 ಈ ದಿನಗಳಲ್ಲಿ ಕಾರ್ಯವಿಘ್ನ, ಧನವ್ಯಯ, ಮಾನಕ್ಕೆ ಹಾನಿಗಳೂ ಸಂಭವಿಸಬಹುದು.

ಎಳೆಪ್ರಾಯದಲ್ಲೇ ಮಿತವ್ಯಯದ ಅಭ್ಯಾಸವನ್ನು ಪ್ರೋತ್ಸಾಹಿಸಿ ನಿಮ್ಮ ಹುಡುಗನ ಜೀವನಕ್ಕೆ ತಕ್ಕ ಏರ್ಪಾಡುಮಾಡಿರಿ

ಮಕ್ಕಳಿಗಾಗಿ ಮುಂದುವರಿಸಲ್ಪಡುವ ವಿಮೆಯ ಪಾಲಿಸಿಯೊಂದನ್ನು
ಸುಭದ್ರವೂ ಅತ್ಯಂತ ಜನಪ್ರಿಯವೂ ಆದ ಭಾರತೀಯ ಜೀವ ವಿಮಾಸಂಸ್ಥೆ

ಓರಿಯಂಟಲ್‌ನಲ್ಲಿ ಪಡೆಯಿರಿ.

--- ಮಕ್ಕಳ ಮುಂದುವರಿಸಲ್ಪಡುವ ವಿಮೆಯು ---

ನವೀನವಾದ ವಿಮಾಯೋಜನೆಯು. ಈ ಪ್ರಕಾರ ಬಹಳ ಕಡಿಮೆ ಪ್ರೀಮಿಯಮ್ ಪಾವತಿಯಿಂದ ಹೆತ್ತವರು ತಮ್ಮ ಮಕ್ಕಳ ಪೋಷಣೆಗೆ ಇಡೀ ಜೀವಮಾನದ ಯಾ ಉಂಬಳಿ ವಿಮೆಯ ಪಾಲಿಸಿಯನ್ನು ಸಂಗ್ರಹಿಸಲು ಅನುಕೂಲವಾಗುವಂತೆ ತಯಾರಿಸಿದೆ ಇದರಲ್ಲಿ 22ನೇ ವರ್ಷಕ್ಕಿಂತ ಮುಂಚಿತವಾಗಿ ಒಂದು ನಿಶ್ಚಿತ ಪ್ರಾಯದಲ್ಲಿ "ರಿಸ್ಕ್" ಆರಂಭವಾಗುವುದು.

ಹೆಚ್ಚಿನ ಮಾಹಿತಿಗೆ ಇವರಿಗೆ ಬರೆಯಿರಿ:—

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲಾಫ್
ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ.

ಅಥವಾ ದಿ ಬ್ರಾಂಚ್ ಸೆಕ್ರಿಟರಿ,
ಓರಿಯಂಟಲ್ ಲೈಫ್ ಆಫೀಸು, ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್‌ಪೆರೇಡ್ ಬೆಂಗಳೂರು.

—ORIENTAL—
GOVERNMENT SECURITY LIFE ASSURANCE CO., LTD.

ಸ್ಥಾಪನೆ] ಕೆನರಾ ಛಾಪಖಾನೆ [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ನಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಕೋಲ್ಸ್ಪ್ರಾನದ ಬಿಳೀ ಟೂಥಪೇಸ್ಟು ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡುತ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತು ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೋಲ್ಸ್ಪ್ರಾನ್ ಕೆಮಿಕಲ್ ಕಂ. (ಮಾಲಕರ —ಮಾಗನಬ್ರಾಯಿ ಆಬೀನ್ ಅಂಡ್ ಕಂಪೆನಿ ಮುಂಬಯಿ)

ಕೊಪರನ್ ಲಾರ್ಜ್ ಸೈಜು 0-13 0, ಕೊಪರನ್ ಸ್ಟ್ಯಾಂಡರ್ಡ್ ಸೈಜು 0-8 0, ಟೆಂಡರ್‌ಗಮ್ ಸ್ಟ್ಯಾಂಡರ್ಡ್ ಸೈಜು 0 8 0.

THE MOOLKY BANK, LTD.,
MOOLKY.
ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರದ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯೆ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆತೆಬಟ್ಟಿರುವ ನಿಮ್ಮ ಮಕ್ಕಳು ತಿರುಗಿ ನಿಮ್ಮ ಕೈಗೆ ಸೇರುವುದು
ಸೀಸೆ 1ಕ್ಕೆ 12 ಆಣೆ, ಟ ಖ ೯ ಆಣೆ

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ.** ಸುಖಸೇವನದಿಂದ ಮಧುರಮನೋಹರವಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುತ್ತವೆ. ಕ್ರಯ ಬಾಟ್ಲಿ 1ಕ್ಕೆ ರೂ2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! ವಜ್ರಗಳು BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇವರ ಶಾಖೆಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನ್‌ಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ· ಕ್ರೌನ್ ರಬ್ಬರ ಸ್ಟಾಂಪ್ ಕಂಪನಿ 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಜವಾನರ ಬೇಜು, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co, 18 Balmat Road, MANGALORE.
Approved firm by the Govt. of Mysore. Certified by the Agent of the Govt. of India in Ceylon

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಆಪ್ಪರ ವರ್ಗದ ನಮ್ಮ
ವಿಲಿಯಮ್ ಎಂಡ್ ಕೋ ರವರ
ನಾಮ ಮತ್ತು ದಾಯ ಟ್ರೇಡ್‌ಮಾರ್ಕುಗಳು, ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ಕಾರ್ಖಾನೆಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ

SALE! SALE! SALE!



ಮೊದಲಿನ ಕ್ರಯ ರೂ. 10,
ಈಗಿನ ಕ್ರಯ ರೂ. 3 12 0.

Swiss Lever Wrist Watch

ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನವನವೀನ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವುದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವುದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವುದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಮಾರಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಜಮೀನ್ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತರಿಸಲಿಕ್ಕೆ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 Bell SOWCARPET G. T. MADRAS,
ರಾಯಲ್ ಕಂಪೆನಿ, ೧೯ ಬೆಲ್ ಸಾಹುಕಾರ ಪೇಟೆ, ಜಿ. ಟಿ. ಮದರಾಸು

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದ ನಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ

– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು ಪಾರ್ಶ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುಸೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾದುವಕ್ಕೆ ನೂರಾರು ಸಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರ್‍ಹೊಯ್ಡ್ – ಒಯಿಂಟ್‌ಮೆಂಟ್

ಸರ್ವ ವಿಧವಾಗ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹಂದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳೆದ್ದು ಬಹು ನೋವಿದ್ದರೆ, ಕರಳುಗಳಲ್ಲಿ ಹುಣ್ಣುಗಳಾಗಿ ಕೀವು ಬರವುದಾದರೆ, "ಹೆವನನ್" ಎಂಬ ಹೆಮೊರ್‍ಹೊಯ್ಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಶೀಘ್ರಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು ಸೀಸೆ 1ಕ್ಕೆ ರೂ. 1-4-0 ವಿ ಪಿ ಬೇರೆ.

ಲಕ್ಸೇಟಿವ್ ವಾನಿಂಗಾ ಗುಳಿಗೆಗಳು

ಮಲಬದ್ಧತೆಯ ಸ್ವಭಾವವುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸಿ ನಿವನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳಿದ್ದವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ, ಒಂದು ಪೆಟ್ಟಿಗೆಯಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ ಬೇರೆ.

ಹಿಂದುಸ್ಥಾನದ ಪ್ರಮುಖ ಏಜಂಟರ,

The Eclipse Distributing Agency,

Dahanu Road, B. B & C. I. Ry BOMBAY PRESIDENCY.

ದಯವಿಟ್ಟು ಪತ್ರ ಇಂಗ್ಲಿಷಿನಲ್ಲಿಯೇ ಬರೆಯಿರಿ.

PRINTED BY S S KARANTH AT THE [illegible] PRESS UDIPI, AND PUBLISHED BY K H SHETTY AT NAVAYUGA OFFICE, UDIPI S INDIA

...stered No M 3618 21-12-1939

ನವಯುಗ

NAVAYUGA

THE PAPER OF THE PEOPLE!

In Karnatak which includes progressive Mysore, the NAVAYUGA is the Paper of the PEOPLE.

It is read by the Commercial Magnate and the professional man, the farmer and the artisan It is the paper that has won its way to their hearts THE PAPER THAT GOES INTO THEIR HOMES.

The NAVAYUGA not only commands a dense circulation in and around the great industrial centres, it penetrates also into the most remote regions of the Province.

Space wisely used in the

NAVAYUGA ANNUAL NUMBER 1940

is obviously the most important factor in the success of a Karnataka advertising campaign.

RATES OF ADVERTISEMENTS:

1 PAGE	....	....	Rs. 25/-
½ PAGE	....	....	Rs. 15/-
¼ PAGE	....	....	Rs. 8/-
⅛ PAGE	....	....	Rs. 5/-

Send your advt. immediately.

Advt. Manager,

NAVAYUGA

UDIPI, S. India.

SAVINGS & SPENDING

Every Rupee that you save adds materially to your present wealth for the satisfaction of a future want; while every Rupee that is spent leaves you poorer to that extent. Life's stormy voyage is a smooth sailing only for those who know this difference between **SAVING & SPENDING** and who have, by sheer force of will, built up a bulky Savings Bank Account.

The Canara Industrial & Banking Syndicate Ltd.

Estd.] (Incorporated in British India) [1925.

Head Office:—UDIPI, (S India).

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,800/-. Paid up Capital: Rs. 1,82,100/-.

PRINCIPAL OFFICE: COURT ROAD, UDIPI.

OTHER OFFICES:

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively; Interest being payable on the 1st January & 1st July of every year.

For further particulars please address or call at any of our offices.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಹಾರಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆರಂಭಿಸಿ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಶ್ರೇಷ್ಠ ವರ್ಗದ ಬ್ರಾಹ್ಮಣರ ಆತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ಸ್ ಹೋಟೆಲ್

ಫೋನ್ 405

ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ



ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳಲ್ಲೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು

ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES ------ MANGALORE

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಮಿಲ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ.

THE ASIAN ASSURANCE COMPANY, LIMITED.

ASIAN BUILDINGS - - - - BOMBAY



THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,08,418	18,39,296	42,98,820
1938	3,61,56,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri. B. Narayan Shetty, Organizer, Brahmavar

„ **M. Shivarama Rao,** Organizer, Puttur.

Or

Sri. J. A. PUTRAN. Branch Manager, MANGALORE.

ESTD 1921 ಸ್ಥಾಪನೆ

FOUNDER:
SRI. A. B. SHETTY, M. L. A.,
ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿರು, ಎಂ. ಎಲ್. ಎ.

ಸಂಪಾದಕ:
ಕೆ. ಕೆ. ಶೆಟ್ಟಿ.

NAVAYUGA ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ. 3—4—0
6 ತಿಂಗಳಿಗೆ - ರೂ. 1-12—0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು.

ಸಹಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೬

ಉಡುಪಿ, ಗುರುವಾರ, ೨೧—೧೨—೧೯೩೯.
UDIPI, THURSDAY, 21-12-1939.

VOL. 19
No. 16

ಸಮಾಚಾರ ಸಂಗ್ರಹ

ಪೋಲಿಶ್ ಸಹಾಯಕ ಸಮಿತಿ

ಬೊಂಬಾಯಿ ಆರ್ಚ್ ಬಿಶೋಪರು ಅಧ್ಯಕ್ಷರಾಗಿ ಪೋಲಿಶ್ ಸಹಾಯಕ ಸಮಿತಿಯೊಂದು ಸ್ಥಾಪಿತವಾಗಿ ಹಣ ಸಂಗ್ರಹದ ಕೆಲಸ ನಡೆಯುತ್ತಿರುವುದು. ನಿರಾಶ್ರಿತ ಪೋಲರಿಗೆ ಸಾಧ್ಯವಾದ ಸಹಾಯ ಮಾಡುವುದೇ ಇದರ ಉದ್ದೇಶ. ಇದಕ್ಕೆ ವೈಸರಾಯರು, ಯುದ್ಧ ಫಂಡಿನಿಂದ ರೂ. 50,000 ಸಹಾಯ ಮಾಡಿರುವರು.

ಮಿ. ಜಿನ್ನರ ಡಿಕ್ಟೇಟರರ ಮಾದರಿ

ಮಿ. ಜಿನ್ನರು ಕಾಂಗ್ರೆಸ್ ಮಂತ್ರಿಗಳ ಮೇಲೆ ಆಧಾರವಿಲ್ಲದ ಮತ್ತು ಅರ್ಥರಹಿತ ಆರೋಪಗಳನ್ನು ಮಾಡಿ ಯುರೋಪಿನ ಡಿಕ್ಟೇಟರರ ರೀತಿ ನೀತಿಗಳನ್ನನುಸರಿಸುತ್ತಿರುವರು. ಮಿ. ಜಿನ್ನರು ತಮ್ಮ ಸಮಾಜಕ್ಕೆ ಈಗಣಕ್ಕಿಂತ ಹೆಚ್ಚಿನ ಹಕ್ಕು ಬಾಧ್ಯತೆಗಳನ್ನಪೇಕ್ಷಿಸುವರಾದರೆ ಹಾಗೆ ಸ್ಪಷ್ಟವಾಗಿ ಹೇಳುವುದು ಉಚಿತವಲ್ಲದೆ ಬೇರೊಂದು ಸಮಾಜದ ಮೇಲೆ ಸುಳ್ಳುಆರೋಪ ಹೊರಿಸುವುದರಲ್ಲಿ ಅರ್ಥವಿಲ್ಲ. ಬಹುಸಂಖ್ಯಾಕರಾದ ಹಿಂದುಗಳು ಬಲಶಾಲಿಗಳೇ ಆಗಿರಬೇಕು. ಯಾವ ಲೆಕ್ಕದ ನೇರೆಗಾದರೂ ಬಹುಸಂಖ್ಯಾಕರ ಬಲವನ್ನು ಕಡಿಮೆಮಾಡಲಾಗುವುದಿಲ್ಲ. ಅಲ್ಪಸಂಖ್ಯಾಕರು ಬಹುಸಂಖ್ಯಾಕರೊಡನೆ ಬೆರತು ಒಂದುಗೂಡಿ ನಡೆಯಬೇಕು. ಪ್ರತ್ಯೇಕ ಪ್ರಾತಿನಿಧ್ಯವು ದೇಶಕ್ಕೆ ಹಾನಿಕರ. ಸಂಯುಕ್ತ ಮತದಾನದಿಂದ ಎಲ್ಲ ಸಮಾಜಗಳೂ ಒಂದಾಗಿ ನಡೆಯಲನುಕೂಲವಾಗುವುದು. ಹಿಂದೂ ದೇಶದಲ್ಲಿ ಪ್ರಕೃತ ಒಂದು ಸಮಾಜವು ಇನ್ನೊಂದು ಸಮಾಜವನ್ನು ದಬಾಯಿಸಿ ಪೀಡಿಸುವುದು ಸಾಧ್ಯವಿಲ್ಲೆಂದು ಶ್ರೀ. ರಾಜಗೋಪಾಲಾಚಾರ್ಯರು ಇದೇ ತಾ. 12ರಲ್ಲಿ ಡಿಲ್ಲಿಯ ದಕ್ಷಿಣಭಾರತ ಸಂಘದವರು ಅವರನ್ನು ಸನ್ಮಾನಿಸಲು ನಡಿಸಿದ ಕೂಟದಲ್ಲಿ ಭಾಷಣವೀಯುವಾಗ ಹೇಳಿರುವರು.

ರಶ್ಯವು ಲೀಗಿನಿಂದ ಹೊರಹಾಕಲ್ಪಟ್ಟಿತು

ಫಿನ್ಲೆಂಡ್ ಮತ್ತು ಸೋವಿಯೆಟ್ ರಶ್ಯದ ಪ್ರಶ್ನೆಯನ್ನು ವಿಚಾರಿಸಲು ಲೀಗ್ ಕೌನ್ಸಿಲಿನವರು ನೇಮಿಸಿದ 14 ಮಂದಿ ಮೆಂಬರರ ಕಮಿಟಿಯವರು, 24ಘಂಟೆಗಳೊಳಗೆ ಇತ್ತಂಡದವರೂ ಹೋರಾಟ ನಿಲ್ಲಿಸಬೇಕೆಂದೂ, ಆಮೇಲೆ ಲೀಗು ಮಧ್ಯಸ್ಥಿಕೆಮಾಡಲಿರುವುದೆಂದೂ ರಶ್ಯಕ್ಕೂ, ಫಿನ್ಲೆಂಡಿಗೂ ತಿಳಿಸಿದರು. ಇದಕ್ಕೆ ಫಿನ್ಲೆಂಡು ಒಡನೆಯೇ ಒಪ್ಪಿತು. ಆದರೆ ರಶ್ಯವು ಇದಕ್ಕೊಪ್ಪಲಿಲ್ಲ. ಲೀಗ್ ಕೌನ್ಸಿಲ್ ಮತ್ತು ಎಸೆಂಬ್ಲಿ ಸಭೆಗಳಲ್ಲಿಯೂ ಭಾಗವಹಿಸಲಿಲ್ಲ.

ಇದೇ ತಾ 14ರಲ್ಲು ಲೀಗ್ ಕೌನ್ಸಿಲಿನ ಸಭೆ ನಡೆದು, ರಶ್ಯವನ್ನು ಲೀಗಿನಿಂದ ಹೊರಹಾಕಲಾಗಿದೆ. ಮತ್ತು ಲೋಕದ ರಾಷ್ಟ್ರಗಳೆಲ್ಲಾ ಫಿನ್ಲೆಂಡಿಗೆ ಸಾಧ್ಯವಾದ ಸಹಾಯಮಾಡಿ ಸೋವಿಯೆಟ್ ರಶ್ಯಕ್ಕೆ ಯಾವ ರೀತಿಯಲ್ಲಿಯೂ ನೆರವಾಗಬಾರದೆಂದು ವಿನಂತಿಮಾಡಿಕೊಳ್ಳಲಾಗಿದೆ.

ಮಿ. ಜಿನ್ನರಿಗೆ ಮೌಲಾನ ಅಜದರ ಆಹ್ವಾನ

ಇದೇ ತಾ. 12ರಲ್ಲು ಮೌಲಾನ ಅಬ್ದುಲ್ ಕಲಮ್ ಅಜದರು ಹೇಳಿಕೆಯೊಂದನ್ನು ಹೊರಡಿಸಿ, ಕಳೆದ 2ವರ್ಷಗಳಿಂದ ತಾನು ಹಿಂದೂಮುಸಲ್ಮಾನ ಬಾಂಧವ್ಯ ಸ್ಥಾಪಿಸಲು ಎಡೆಬಿಡದೆ ಪ್ರಯತ್ನಿಸುತ್ತಾ ಬಂದಿರುವೆನು. ಆದರೆ ಯಾವಾಗಲೂ ಅದಕ್ಕೆ ಮಿ. ಜಿನ್ನರ ಗುಪ್ತ ಹಸ್ತವು ಅಡ್ಡವಾಗಿ ಬಂದಿರುವುದು. ಮಿ. ಜಿನ್ನರು ಕಾಂಗ್ರೆಸ್ ಮಂತ್ರಿಗಳ ಮೇಲೆ ತಂದಿರುವ ಆರೋಪಗಳೆಲ್ಲಾ ಕೇವಲ ಕಾಲ್ಪನಿಕ ಹಾಗೂ ದ್ವೇಷಸಾಧಕವಿವೆ. ಕಾಂಗ್ರೆಸ್ ಮಂತ್ರಿಗಳು ಮುಸಲ್ಮಾನರಿಗೆ ಅಂತಹ ಘೋರ ಅನ್ಯಾಯಮಾಡಿರುವರಾದರೆ ಆ ಕುರಿತು ಈಗ 30ತಿಂಗಳುಗಳಲ್ಲಿ 80ಮಿಲ್ಯ ಮುಸಲ್ಮಾನರು ಏನು ಮಾಡಿರುತ್ತಾರೆ. ಈಗ ಥಕ್ಕನೆ ಮಿ. ಜಿನ್ನರು ಕಾಂಗ್ರೆಸ್ ಮಂತ್ರಿಗಳನ್ನು ನಿಷೇಧಿಸಲು ಪ್ರದರ್ಶನ ನಡಿಸಲು ಕಾರಣವೇನು.? ಕಾಂಗ್ರೆಸ್ ಮಂತ್ರಿಗಳ ಮೇಲಿನ ಆರೋಪಗಳು ಸುಳ್ಳಿನ ಪರ್ವತವೇ ಆಗಿದೆ. ಅವನ್ನು ಜಿನ್ನರು ರುಜುಪಡಿಸಬೇಕೆಂದೇ ನಾನು ಅವರಿಗೆ ಸಂಪೂರ್ಣ ಜವಾಬ್ದಾರಿಯುಳ್ಳ ಆಹ್ವಾನ ವೀಯುತ್ತೇನೆಂದು ಸೂಚಿಸಿರುವರು.

ಕನ್ಸ್ಟಿಟ್ಯುಯೆಂಟ್ ಎಸೆಂಬ್ಲಿಯೊಂದೇ ಉಪಾಯ

ನವೀನ ಸ್ವತಂತ್ರವೂ ಮತ್ತು ಪ್ರಜಾಸತ್ತಾತ್ಮಕ ಹಿಂದೂಸ್ಥಾನದ ರಚನೆಯು ಹಿಂದೀಯರ ಮತ್ತು ಬ್ರಿಟಿಷರ ಉದ್ದೇಶವಾದರೆ ಅದು ಕನ್ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಮೂಲಕ ಮಾತ್ರ ಸಾಧ್ಯ ಮತ್ತು ವ್ಯವಹಾರ್ಯ. ಕೆನಡಾ ಮತ್ತು ಆಸ್ಟ್ರೇಲಿಯಾಗಳ ರಾಜಕೀಯ ಘಟನೆಗಳು ಕೂಡಾ ಅದೇ ರೀತಿ ರಚಿಸಲ್ಪಟ್ಟಿತು. ಈಗ ಹಿಂದೂಸ್ಥಾನದಲ್ಲಿ ಸಂಚರಿಸುತ್ತಿರುವ ಸರ್. ಸ್ಟ್ಯಾಫೋರ್ಡ್‌ಕ್ರಿಪ್ಸರು ಇದೇ ತಾ. 13ರಲ್ಲು ಲಾಹೋರಿನಿಂದ ಡಿಲ್ಲಿಗೆ ಹೊರಟು ಹೋಗಿ ಅಲ್ಲಿಂದ ಬೊಂಬಾಯಿಗೆ ಬಂದಿರುವರು. ಬೊಂಬ್ಯಾಂದ ಹೈದರಾಬಾದಿಗೆ ವಿಮಾನ ಮೂಲಕ ಹೋಗಿ ವಾರ್ಧಕ್ಕೆ ತೆರಳುವರು.

ಜರ್ಮನಿಯಲ್ಲಿ ಅನೇಕರ ದಸ್ತಗಿರಿ

ಗೆಸ್ಟೇಪೋ ಪೋಲೀಸರು ಜರ್ಮನಿಯಲ್ಲೀಗ ಅನೇಕರನ್ನು ಕೈದು ಮಾಡಿರುವರು. ಮೊದಲಿನ ನಾಝಿ ವಿರೋಧಿ ಪಕ್ಷಗಳಿಗೆ ಸೇರಿದವರೆಲ್ಲಾ ನೂರುಗಟ್ಟಲೆಯಲ್ಲಿ ಹಿಡಿದು ಬಂಧಿಸಲ್ಪಡುತ್ತಿದ್ದಾರೆ. ಬರ್ಲಿನ್ ಒಂದೇ ಪಟ್ಟಣದಲ್ಲಿ 4000 ಮಂದಿ ಕೈದು ಮಾಡಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಇನ್ನು ಲೈಪ್ಸಿಗ್, ಡ್ರೆಸ್‌ಡೆನ್ ಹೆನೋವರ್ ಮೊದಲಾದ ಪಟ್ಟಣಗಳಲ್ಲಿ ಹಲವರು ಕೈದು ಮಾಡಲ್ಪಟ್ಟಿರುತ್ತಾರೆ. ಹೀಗೆ ದಸ್ತಗಿರಿ ಮಾಡಲ್ಪಟ್ಟವರನ್ನು ಇರಿಸಲು ಸ್ಥಾನ ಬದ್ಧ ಶಿಬಿರಗಳಲ್ಲಿಯೂ ಜಾಗವಿಲ್ಲದಾಗಿದೆ. ಕೆಲಮಂದಿ ಪೋಲೀಸ್ ಮತ್ತು ಸೈನ್ಯಾಧಿಕಾರಿಗಳು, ಹಳೆಯ ಸ್ಟೋರ್ಮ್ ಟ್ರೂಪ್ ದಳದವರೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಪೋಲಂಡಿನಲ್ಲಿ ಜರ್ಮನರ ಪಾಶವಿಕ ವರ್ತನೆ

ಪೋಲಂಡಿನ ಹಳೆಯ ಸರಕಾರದ ಅಧಿಕಾರಿಗಳನ್ನೆಲ್ಲಾ ಜರ್ಮನರು ಪಾಶವಿಕವಾಗಿ ಕೊಂದು ಹಾಕುತ್ತಿದ್ದಾರೆ. ಪೋಮರ್ ಪ್ರಾಂತದಲ್ಲಿ ಸಾಮುದಾಯಿಕವಾಗಿ ಜನರನ್ನು ತಲೆ ಕಡಿಯುವ ಅತ್ಯಾಚಾರ ನಡೆದಿದೆ. ಪೋಜ್ನನ್ ಜಿಲ್ಲೆಯಲ್ಲೇ 5000 ಮಂದಿಯ ತಲೆ ಕಡಿಯಲಾಗಿದೆ. ಪೋಜ್ನನ್ ನಗರಾಧ್ಯಕ್ಷರಿಗೆ ವೃದ್ಧಾಪ್ಯದ ನಿಮಿತ್ತ ನಡೆಯಲಾಗಲಿಲ್ಲ. ಅವರನ್ನು ಶವ ತುಂಬಿದ ಲೋರಿಯೊಂದರಲ್ಲಿ ಹಾಕಿಕೊಂಡೊಯ್ದು ಗುಂಡಿಕ್ಕಿ ಕೊಲ್ಲಲಾಯಿತು.

ಡಿಸ್ಟ್ರಿಕ್ಟ್ ಜಡ್ಜರು ಕಸಗುಡಿಸಿದರು

ಮುಸಲಿಪಟಾಮ್ ಪಟ್ಟಣವನ್ನು ಶುಚಿಗೊಳಿಸುವ ಚಳವಳವನ್ನು ಪಟ್ಟಣ

NATURAL CAUSE *May deprive your family*

YOU MEANT TO TAKE OUT A POLICY. YOU HAD DISCUSSED ONE WHICH WOULD HAVE BROUGHT YOU SUFFICIENT INCOME!
BUT WRITING WAS TOO MUCH TROUBLE FOR YOU.
THEN AN ACCIDENT HAPPENED.... NOW YOUR FAMILY IS LEFT . PENNILESS. A SAD STORY ....BUT, ALAS HOW COMMON! YOU ARE IN DANGER AT EVERY MOMENT. SAFEGUARD TO-DAY. INSURE WITH TROPICAL.
WOULD YOU NOT FIND PLEASURE IN PROVIDING PROTECTION FOR YOUR FAMILY? WOULD YOU NOT FEEL SATISFACTION IN KNOWING THAT YOUR FAMILY WILL NEVER BE COMMITTED TO A LOWER STANDARD OF LIFE?

Quotations for all ages and amounts to suit all circumstances.

TROPICAL INSURANCE COY. LTD. NEW DELHI

ಟ್ರೋಪಿಕಲ್
ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ನ್ಯೂ-ಡೆಲ್ಲಿ.

ಪ್ರಗತಿಪರವಾದ ಈ ದೇಶೀಯ ವಿಮಾ ಸಂಸ್ಥೆಯ ಪ್ರತಿನಿಧಿಗಳಾಗ ಬಯಸುವವರು ಬರೆಯಿರಿ.

ಎಂ. ಸುಂದರರಾಮ ಶೆಟ್ಟಿ,	ಅ	ಕೆ. ರಾಮಮೂರ್ತಿ, ಎಂ. ಎ.,
ಬ್ರಾಂಚ್ ಮೆನೇಜರ್,	ಥ	ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟೆ—ಮಂಗಳೂರು.	ವಾ	160 ಮೌಂಟ್‌ರೋಡ್, ಮದ್ರಾಸು.

ದ ಆರೋಗ್ಯ ರಕ್ಷಣಾ ಕಮಿಟಿಯವರು ಹೂಡಿರುವರು. ಈ ಚಳವಳದ ಆರಂಭದ ದಿನವಾದ ಇದೇ ತಾ. 11ರಲ್ಲಿ ಪಟ್ಟಣವನ್ನು ಗುಡಿಸುವ ದೊಡ್ಡ ಪ್ರದರ್ಶನ ನಡೆಯಿತು. ಇದರಲ್ಲಿ ಆರೋಗ್ಯ ರಕ್ಷಣಾ ಸಮಿತಿಯ ಪ್ರಮುಖ ಮೆಂಬರರಲ್ಲದೆ ಜಿಲ್ಲಾ ಅಧ್ಯಕ್ಷರಾದ ಶ್ರೀ. ಟಿ. ಎಸ್. ರಾಮಚಂದ್ರನ್ ಐ. ಸಿ. ಎಸ್., ಜಿಲ್ಲಾ ಮೆಡಿಕಲ್ ಆಫೀಸರರಾದ ಲೆಫ್ಟನೆಂಟ್ ಕರ್ನಲ್, ಟಿ. ಎಸ್. ಶಾಸ್ತ್ರಿ, ಐ. ಎಮ್. ಎಸ್ ಇವರು ಅಗ್ರಭಾಗ ವಹಿಸಿ ಅರ್ಧ ಗಂಟೆಯ ರಸ್ತೆ ಗುಡಿಸಿ, ರಸ್ತೆಗಳನ್ನು ಯಾವ ರೀತಿ ಚೊಕ್ಕಟವಿರಿಸಬೇಕೆಂಬುದನ್ನು ಜನತೆಗೆ ತೋರಿಸಿಕೊಟ್ಟರು.

ಮಿ. ಜಿನ್ನರ ಹೇಳಿಕೆ

ಮಿ. ಜಿನ್ನರು ಇದೇ ತಾ. 13ರಲ್ಲಿ ದೀರ್ಘ ಹೇಳಿಕೆಯೊಂದನ್ನು ಹೊರಡಿಸಿ, ದಸೆಂಬರ ತಾ. 22ನೇ ದಿನಾಚರಣೆ ವಿನಂತಿಯನ್ನು ತಾನು ಹಿಂತೆಗೆಯುವದಾಗಿಲ್ಲ. ಮುಸಲ್ಮಾನರಿಗೆ ಕಾಂಗ್ರೆಸ್ ಮಂತ್ರಿಗಳಿಂದುಂಟಾಗಿರುವ ಅನ್ಯಾಯದ ಕುರಿತು ವಿಚಾರಿಸಲು ರೋಯಲ್ ಕಮಿಶನೊಂದು ನೇಮಿಸಲ್ಪಡಬೇಕು. ತಾನು ಮಾತುಕೊಟ್ಟ ಪ್ರಕಾರ ಪಂಡಿತ ಜವಾಹರಲಾಲರನ್ನು ಕಂಡು ಮಾತನಾಡಲು ಸಿದ್ಧನಾಗಿಯೇ ಇರುವೆನು. 1937ರಲ್ಲಿಯೇ ಖಡ್ಡಾಯವಾಗಿ ವಂದೇ ಮಾತರಂ ಹಾಡುವಿಕೆ, ರಾಷ್ಟ್ರೀಯ ಧ್ವಜಾರೋಹಣಮಾಡುವಿಕೆ ಮತ್ತು ಹಿಂದೀ ಕಲಿಸುವ ಕುರಿತು ಆಕ್ಷೇಪಿಸಿ ಆ ಕುರಿತು ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಪ್ರಯೋಗಿಸಬೇಕೆಂದು ಕೇಳಿಕೊಂಡಿದ್ದೆನು. ಅಂದಿನಿಂದ ಬಿಹಾರ್, ಮಧ್ಯಪ್ರಾಂತ ಮತ್ತು ಸಂಯುಕ್ತ ಪ್ರಾಂತದಲ್ಲಿ ಮುಸಲ್ಮಾನರ ಹಿತವು ತುಳಿಯಲ್ಪಟ್ಟಿದೆ. ಹಕ್ಕುಬಾಧ್ಯತೆಗಳು ನಿರಾಕರಿಸಲ್ಪಟ್ಟಿವೆ. ಆದರೂ ಮುಸ್ಲಿಮ್ ಲೀಗಿನವರು ಉಗ್ರ ಕಾರ್ಯಕ್ರಮವನ್ನೇನೂ ಕೈಕೊಳ್ಳಲಿಲ್ಲ. ಅನಂತರ ಮುಸಲ್ಮಾನರಿಗುಂಟಾಗಿರುವ ಅನ್ಯಾಯಗಳನ್ನು ತಾನು ವೈಸರಾಯರ ಅವಗಾಹನೆಗೆ ತಂದೆನು. ಆ ಮೇಲೆ ಮುಸ್ಲಿಮ್ ಲೀಗಿನ ಕುರಿತು ವಿರುದ್ಧ ಪ್ರಚಾರವು ಎಡೆಬಿಡದೆ ನಡೆದಿರುವುದು. ಮಹಾತ್ಮ ಗಾಂಧಿಯವರೇ ಲೀಗನ್ನು ಕಠಿಣವಾಗಿ ಟೀಕಿಸಿರುವರು. ಇಂತಹ ಪರಿಸ್ಥಿತಿಯಲ್ಲಿ ತನಗೆ ಸುಮ್ಮನಿರಲಾಗಲಿಲ್ಲ. ಮುಸಲ್ಮಾನರ ಬಿಡುಗಡೆಯ ದಿನಾಚರಣೆಯನ್ನು ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಟ್ಟೊಡನೆಯೇ ಆಚರಿಸುವ ಆಲೋಚನೆ ಮಾಡಿದ್ದೆ. ಆದರೆ ಅಸ್ಸಾಮ್ ಮಂತ್ರಿಮಂಡಲದ ರಾಜಿನಾಮೆ ಮತ್ತು ಹೊಸ ಮಂತ್ರಿಮಂಡಲದ ರಚನೆಗಾಗಿ ಕಾಯಬೇಕಾಯಿತು. ಈ ದಿನಾಚರಣೆಗೂ ಪಂಡಿತ ಜವಾಹರಲಾಲರೊಡನೆ ತಾನು ನಡಿಸುವ ಮಾತುಕತೆಗೂ ಯಾವ ಸಂಬಂಧವೂ ಇಲ್ಲೆಂದೇ ಮಿ. ಜಿನ್ನರ ಹೇಳಿಕೆಯ ಮುಖ್ಯಾಂಶ.

ಪಂಡಿತ ಜವಾಹರಲಾಲ ನೆಹರುಗಳು

ಇದೇ ತಾ. 14ನೇ ಬೆಳಗ್ಗೆ ಬೊಂಬಾಯಿಗೆ ಹೋಗಿ ಸರ್ದಾರ್ ವಲ್ಲಭಾಯಿ ಪಟೇಲರೇ ಮೊದಲಾದವರೊಡನೆ ಮಾತಾಡಿದರು. ಸಂಯುಕ್ತ ಪ್ರಾಂತದಲ್ಲಿ ಮುಸಲ್ಮಾನರಿಗಾಗಿರುವ ಅನ್ಯಾಯಗಳ ಕುರಿತು ಮಿ. ಹಕ್ಕರು ಸೂಚಿಸಿರುವ ವಿಚಾರಣೆಗೆ ಪಂಡಿತ ಜವಾಹರಲಾಲರು ಸಿದ್ಧರಿರುವುದಿಲ್ಲೆಂದು ಸರ್, ಅಬ್ದುಲ್ಲಾ ಹರೂನರು ಪ್ರಕಟಿಸಿದುದು ತೀರಾ ಸುಳ್ಳೆಂದು ಪಂಡಿತರು ನಿರಾಕರಿಸಿ, ಕೂಡಲೇ ವಿಚಾರಣೆ ನಡಿಸಬೇಕೆಂದು ತಾನು ಹಕ್ಕರನ್ನು ಒತ್ತಾಯ ಪಡಿಸುತ್ತಿರುವೆನು. ಈ ಸಂಬಂಧವಾಗಿ ವಿಳಂಬಕ್ಕೆ ಕಾರಣರು ಹಕ್ಕರಲ್ಲದೆ ತಾನಲ್ಲವೆಂಬುದನ್ನು ಸ್ಪಷ್ಟಪಡಿಸಿರುವರು. ಪಂಡಿತರು ಬೊಂಬಾಯಿಯಲ್ಲಿ 3 ದಿನವಿದ್ದು ಪ್ಲೇನಿಂಗ್ ಕಮಿಟಿ ಮತ್ತು ಕಮಲಾ ನೆಹರು ಆಸ್ಪತ್ರೆಯ ಸಂಬಂಧವಾಗಿ ಕೆಲಸಮಾಡಲಿರುವರು. ಆ ಮೇಲೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯಲ್ಲಿ ಭಾಗವಹಿಸಲು ವಾರ್ಧಕ್ಕೆ ಹೋಗುವರು. ಹಿಂದು ಮುಸಲ್ಮಾನ ಪ್ರಶ್ನೆಯ ಕುರಿತು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು, ಈಗುಂಟಾಗಿರುವ ಪರಿಸ್ಥಿತಿಯನ್ನು ಪರಿಶೀಲಿಸಿ ಮುಂದಿನ ಧೋರಣೆಯನ್ನು ನಿರ್ಣಯಿಸಲಿರುವರು.

ವೀರ ಫಿನ್ನರ ಸ್ವಾತಂತ್ರ್ಯ ಯುದ್ಧ

ಫಿನ್ಲೆಂಡಿನ ಪೂರ್ವದ ಎಲ್ಲೆಯಲ್ಲಿ ಒಂದು ವಾರದ ತೀವ್ರ ಹೋರಾಟದ ಪರಿಣಾಮವಾಗಿ ರಷ್ಯನರೇನೂ ಮುಂದೊತ್ತಿರುವುದಿಲ್ಲ. ಉತ್ತರದ ಹೊರತು ಇತರ ಎಲ್ಲಾ ಕಡೆಗಳಲ್ಲಿಯೂ ಫಿನ್ನರು ವೈರಿಯನ್ನು ತಡೆಗಟ್ಟಿರುತ್ತಾರೆ. ಕೆಲವೆಡೆ ಹಿಂದಕ್ಕಟ್ಟಿರುತ್ತಾರೆ. ಸೋವಿಯೆಟ್ ಸೇನೆಯು ಫಿನ್ಲೆಂಡನ್ನು ವಿಭಾಗಿಸುವ ಗಂಡಾಂತರವು ಪ್ರಕೃತ ದೂರೀಕರಿಸಲ್ಪಟ್ಟಿವೆ. ಮಧ್ಯ ಫಿನ್ಲೆಂಡಿನಲ್ಲಿ 600ರಿಂದ 750 ಸಾವಿರ ಸೋವಿಯೆಟ್ ಸೇನೆಯು ಹೋರಾಡುತ್ತಿದೆ. ಲಡೋಗ ಸರೋವರ ಪ್ರದೇಶದಲ್ಲಿ ಟೊಲ್ವಿ ಜ್ಯೆರಿ ಎಂಬಲ್ಲಿ ನಡೆದ 4 ದಿನಗಳ ತುಮುಲ ಕದನದಲ್ಲಿ ಫಿನ್ನರು ಪ್ರಬಲ ವಿಜಯ ಹೊಂದಿರುತ್ತಾರೆ. 6000 ಸೈನಿಕರುಳ್ಳ ಇಡೀ ಎರಡು ಸೋವಿಯೆಟ್ ದಳವು ಸಂಪೂರ್ಣ ನಾಶಗೊಳಿಸಲ್ಪಟ್ಟಿದೆ. ಹಲವು ಮಂದಿ ಸೋವಿಯೆಟ್ ಸೈನಿಕರು ಹಿಮದಲ್ಲಿ ಮರಗಟ್ಟಿ ಸತ್ತಿರುತ್ತಾರೆ. ಅವರಿಗೆ ವಾಸಿಸಲು ಸರಿಯಾದ ಡೇರೆ ಮತ್ತು ಸಾಕಷ್ಟು ಬೆಚ್ಚಗಿನ ಪೋಷಾಕಿಲ್ಲದುದರಿಂದ ರಾತ್ರಿ ಪಹರೆ ಮಾಡಲು ನಿಂತ ಸೈನಿಕರೇ ಮರಗಟ್ಟಿ ಹೋಗಿರುತ್ತಾರೆ. ರಷ್ಯವು ಈಗ ತನ್ನ ಉತ್ಕೃಷ್ಟ ಸೇನೆಯನ್ನು ರಣರಂಗಕ್ಕೆ ತಂದಿದೆ. ಫಿನ್ನರ ಧೈರ್ಯ ಮತ್ತು ಸ್ಥೈರ್ಯದಿಂದ ರಷ್ಯನರು ವಿಸ್ಮಯಗೊಂಡಿರುತ್ತಾರೆ.

ಕರೇಲಿಯನ್ ಭೂಕಂಠ ಪ್ರದೇಶದಲ್ಲಿ ಹೆಚ್ಚಿನ ಸೋವಿಯೆಟ್ ಸೇನೆಯು ಪ್ರಬಲ ಹೋರಾಟ ನಡಿಸುತ್ತಿರುವುದಾದರೂ ಪರಿಸ್ಥಿತಿಯೇನೂ ಬದಲಾಗಿರುವುದಿಲ್ಲ. ಫಿನ್ನರ ಮೆನ್ನರ್‌ಹೈಮ್ ಕೋಟೆಯನ್ನು ರಷ್ಯನರು ಭೇದಿಸಿರುವುದೆಂಬ ಮೋಸ್ಕೋ ಪಟ್ಟಣದ ರೇಡಿಯೋ ವಾರ್ತೆ ಸುಳ್ಳೆಂದು ಫಿನ್ನರು ಅಲ್ಲಗಳೆದಿರುತ್ತಾರೆ.

ಇದೇ ತಾ. 13ರಲ್ಲಿ ಕರೇಲಿಯ ಭೂಕಂಠ ಪ್ರದೇಶದಲ್ಲಿ ಟೈಪಾಲ್ ನದಿಯ ಮಾರ್ಗವಾಗಿ ರಷ್ಯನರು ದೊಡ್ಡ ಧಾಳಿ ನಡಿಸಿ ಹೆಚ್ಚಿನ ನಷ್ಟಹೊಂದಿ ಹಿಂದಕ್ಕಟ್ಟಲ್ಪಟ್ಟಿರುವರು. 14 ಸೋವಿಯೆಟ್ ಟಾಂಕಿಗಳು ನಾಶಮಾಡಲ್ಪಟ್ಟಿವೆ. 4 ಶರಣಾಗತವಾಗಿವೆ. ಉತ್ತರದ ಪೆಟ್ಸಾಮೋ ಜಿಲ್ಲೆಯ ಹೊರತು ಇತರ ಕಡೆಗಳಲ್ಲೆಲ್ಲಾ ಸೋವಿಯೆಟ್ ಸೇನೆಯ ಧಾಳಿಯನ್ನು ತಡೆಗಟ್ಟಲಾಗಿದೆ. ಪೆಟ್ಸಾಮೋ ಜಿಲ್ಲೆಯಲ್ಲಿ ಇದೇ ತಾ. 15ರಲ್ಲಿ ಭೀಷಣ ಕದನ ನಡೆಯಿತು. ಸೋವಿಯೆಟ್ ವಿಮಾನಗಳು ಬೋಂಬೆಸೆದು ಹೆಚ್ಚಿನ ಹಾವಳಿಮಾಡಿದುವು. ಫಿನ್ನರು ದಕ್ಷಿಣಕ್ಕೆ ಹಿಂದೆ ಸರಿದು ಸೋವಿಯೆಟ್ ಸೇನೆಯನ್ನು ತಡೆಗಟ್ಟುವ ನಿರ್ಧಾರ ಮಾಡಿರುವರು. ಹಿಂದೆ ಸರಿಯುವಾಗ ಎಲ್ಲಾ ಮನೆಗಳನ್ನೂ ಸೇತುವೆಗಳನ್ನೂ ಸುಟ್ಟುಹಾಕುತ್ತಿರುವರು.

ಫಿನ್ನಿಶ್ ಕರಾವಳಿ ಫಿರಂಗಿಗಳು ಸೋವಿಯೆಟ್ ಯುದ್ಧ ಹಡಗವೊಂದನ್ನು ಮುಳುಗಿಸಿರುವವೆಂದು ತಿಳಿದು ಬರುತ್ತದೆ. ರಷ್ಯನರು ಇಷ್ಟರ ವರೆಗೆ ಸಾಂಪತ್ತಿಕ ದೃಷ್ಟಿಯಿಂದ ಯಾವ ಪ್ರಾಮುಖ್ಯ ಸ್ಥಳವನ್ನಾದರೂ ವಶಪಡಿಸಿಕೊಂಡಿಲ್ಲ. ಲಡೋಗ ಸರೋವರದ ಈಶಾನ್ಯದಲ್ಲಿ ದೊಡ್ಡ ಸೆಲ್ಯುಲೋಸ್ ಕಾರ್ಖಾನೆ ಇರುವ ಪಿಟ್ಲರಂಟ ವೊಂದು ಮಾತ್ರ ಅವರ ಕೈವಶವಾಗಿದೆ. ಸಮುದ್ರ ಕರಾವಳಿಯಲ್ಲಿ ಸೋವಿಯೆಟ್ ಯುದ್ಧ ಹಡಗಗಳು ಧಾಳಿನಡಿಸಬೆಕ್ಕೆಸುತ್ತಿರುವವಾದರೂ ಈ ವರೆಗೆ ಯಾವ ಪ್ರಾಮುಖ್ಯ ಸ್ಥಳವನ್ನಾದರೂ ವಶಪಡಿಸಿಕೊಳ್ಳುವುದರಲ್ಲಿ ಜಯಶೀಲವಾಗಿಲ್ಲ. "ಸೋವಿಯೆಟ್ ಸರಕಾರದೊಡನೆ ಯುದ್ಧ ಹೂಡಿ ಅನಾಹುತವನ್ನುಂಟುಮಾಡಿರುವ ಜನವಿರೋಧಿ ಫಿನ್ನಿಶ್ ಸರಕಾರವನ್ನು ತುಳಿದು ಹೊರಗೆ ಹಾಕಿರಿ" ಎಂದು ಕೇಳಿಕೊಳ್ಳುವ ಕರಪತ್ರಗಳನ್ನೊಳಗೊಂಡ ದೊಡ್ಡ ಗುಂಡುಗಳನ್ನು ರಷ್ಯನರು ಫಿನ್ನಿಶ್ ಸೇನೆಯ ಮೇಲೆ ಎಸೆಯುತ್ತಿದ್ದಾರೆ. ಈ ಗುಂಡುಗಳೊಡೆದೊಡನೆಯೇ ಕರಪತ್ರಗಳು ಹೊರಬೀಳುತ್ತವೆ. ಫಿನ್ನರ ಪರವಾಗಿ ಕಾದಾಡಲು ಫಿನ್ಲೆಂಡಿನಲ್ಲಿರುವ ಆಂಗ್ಲೇಯರೊಂದು ಸೈನಿಕ ದಳವನ್ನೇರ್ಪಡಿಸುತ್ತಿದ್ದಾರೆಂದು ಹೆಲ್ಸಿಂಕಿಯ ವಾರ್ತೆ.

ಮೋಸ್ಕೋ ಪಟ್ಟಣದ ರೇಡಿಯೋ ವಾರ್ತೆಯ ಮೇರೆಗೆ ಉತ್ತರದಲ್ಲಿ ಸೋವಿಯೆಟ್ ಸೇನೆಯು ಪೆಟ್ಸಾಮೋ ಬಂದರಿನ ದಕ್ಷಿಣದಲ್ಲಿ 60 ಕಿಲೋಮೀಟರ್ ಮುಂದುವರಿದಿದೆ. ಇದರಿಂದ ಫಿನ್ಲೆಂಡಿನ ಮಧ್ಯದಲ್ಲಿ 138 ಕಿಲೋಮೀಟರ್ಸ್ ಪ್ರದೇಶವನ್ನು ವಶಪಡಿಸಿಕೊಂಡಂತಾಗಿದೆ. ಕರೇಲಿಯನ್ ಭೂಕಂಠದಲ್ಲಿಯೂ ರಷ್ಯನರು ಮುಂದೊತ್ತಿರುತ್ತಾರೆ. ಹವಾಗುಣದ ಅನಾನುಕೂಲತೆಯಿಂದ ವಿಮಾನಧಾಳಿ ನಡೆಸಲು ಅಸಾಧ್ಯವಾಗಿದೆ.

ಸಂಧಿಗಾಗಿ ಪುನಃ ಫಿನ್ಲೆಂಡಿನ ಕೇಳಿಕೆ

ಇದೇ ತಾ 15ರಲ್ಲಿ ಫಿನ್ಲೆಂಡಿನ ವಿದೇಶ ಮಂತ್ರಿಗಳಾದ ಎಮ್. ಟಾನ್ನರರು ಫಿನ್ನಿಶ್ ರೇಡಿಯೋದಲ್ಲಿ ರಷ್ಯನ ಭಾಷೆಯಲ್ಲಿ ಮಾತಾಡುತ್ತಾ, "ರಷ್ಯ ಮತ್ತು ಫಿನ್ಲೆಂಡುಗಳೊಳಗಣ ಕಲಹವನ್ನು ರಾಜಿಯಿಂದ ಇತ್ಯರ್ಥಪಡಿಸಿಕೊಳ್ಳಲು ಫಿನ್ಲೆಂಡು ಇನ್ನಾದರೂ ಸಿದ್ಧವಿದೆ. ಫಿನ್ನರು ಮೊದಲಿಗಿಂತಲೂ ಹೆಚ್ಚಿನ ರಿಯಾಯಿತಿ ತೋರಿಸಲು ಸಿದ್ಧರಿರುವರು. ಲೆನಿನ್ ಗ್ರಾಡನ್ನು ಭದ್ರಗೊಳಿಸುವುದು ಮಾತ್ರ ಸೋವಿಯೆಟ್ ರಷ್ಯದ ಉದ್ದೇಶವಾದರೆ ಎಮ್. ಮೊಲೊಟೊರವರು ಈ ಸೂಚನೆಗೆ ಉತ್ತರವೀಯಬೇಕು. ಆದರೆ ಫಿನ್ಲೆಂಡು ತನ್ನ ಸ್ವಾತಂತ್ರ್ಯವನ್ನು ಕಳಕೊಳ್ಳಲು ಸಿದ್ಧವಿರುವುದಿಲ್ಲ. ರಷ್ಯದ ಉದ್ದೇಶವು ಫಿನ್ಲೆಂಡನ್ನು ಸಂಪೂರ್ಣವಾಗಿ ಗೆದ್ದು ಅಧೀನಪಡಿಸಿಕೊಳ್ಳುವುದೆಂಬಂತೆ ತೋರುತ್ತದೆ. ರಷ್ಯವು ಫಿನ್ಲೆಂಡಿನ ಈ ಸಂಧಿಸೂಚನೆಗೆ ಉತ್ತರವೀಯದಿದ್ದಲ್ಲಿ ಅದರ ತತ್ವ ಮತ್ತು ವಾಗ್ದಾನಗಳಿಗೆಂತಹ ಬೆಲೆಯೆಂಬುದನ್ನು ಲೋಕವು ಪರೀಕ್ಷಿಸುವಂತಾಗುವುದು" ಎಂದಿರುವರು. ಈ ಸಂಧಿಸೂಚನೆಯ ಸಂಗತಿಯೇ ತನಗೆ ಗೊತ್ತಿಲ್ಲೆಂದು ರಷ್ಯದ ವಿದೇಶಮಂತ್ರಿ ಎಮ್. ಮೊಲೊಟೊರವರಂದಿರುವರು. ಸೋವಿಯೆಟ್ ಸರಕಾರವು ಫಿನ್ಲೆಂಡಿನ ಈ ಸಂಧಿಪ್ರಸ್ತಾಪವನ್ನು ಕಡೆಗಣಿಸುವುದೆಂದು ನಂಬಲಾಗಿದೆ.

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೦—೧೦—೦ ಚಿಕ್ಕದು ೦—೫—೦

" ಮುಚ್ಚಳದ್ದು ೦—೧೨—೦ " ಮುಚ್ಚಳದ್ದು ೦—೬—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

GENERAL SUPPLIES LIMITED

UDIPI - - - - - S. INDIA

ನಿಮ್ಮ ಜಾಹಿರಾತನ್ನು ನವಯುಗದಲ್ಲೇ ಕೊಡಿರಿ!

. - ನವಯುಗ ಎಂಟರ್‌ಪ್ರೈಸ್ ಲಿಮಿಟೆಡಿನ ಪಾಲುಗಳನ್ನು ಪಡಕೊಂಡು ಪ್ರೋತ್ಸಾಹಿಸಿರಿ . -

∴ ನಾಝಿಗಳ ಅಮಾನುಷ ಅತ್ಯಾಚಾರ ∴

ಬುಚೆನ್‌ವಾಲ್ಡ್ ಸ್ಥಾನಬದ್ಧ ಶಿಬಿರವೆಂದರೆ ಅದೊಂದು ರೌರವ ನರಕ.

ಯೆಹೂದ್ಯ ಕೈದಿಗಳ ಕರುಣ ಕತೆ

ಈ ಕೈದಿಗಳ ಹೆಸರನ್ನಿಲ್ಲಿ ಕೊಟ್ಟಿಲ್ಲ ಬೇರೆ ಬೇರೆ ಅಕ್ಷರಗಳ ಸಂಕೇತದಿಂದ ಅವರನ್ನು ಕರೆಯಲಾಗಿದೆ. ಹರ್ ಎಕ್ಸರು ಶ್ರೀಮಂತ ವ್ಯಾಪಾರಿಯೊಬ್ಬರು. ಯೆಹೂದ್ಯರ ಮೇಲೆ ನಾಝಿಗಳು ಹೊರಿಸುವ ಆರೋಪಗಳೆಂದರೆ ತೋಳ ಕುರಿಮರಿಯ ಕತೆಯಂತೆ. 30-40 ವರ್ಷಗಳ ಹಿಂದಿನ ಪೋಲೀಸ್ ರಿಕಾರ್ಡುಗಳ ಶೋಧನೆ ಮಾಡಿ ಏನಾದರೂ ಕ್ಷುಲ್ಲಕ ತಪ್ಪಿದ್ದ ಪಕ್ಷದಲ್ಲಿ ಅವರನ್ನು ಹಿಡಿದು ಬಂಧನದಲ್ಲಿಡಲಾಗುವುದು.

ಬುಚೆನ್‌ವಾಲ್ಡ್ ಶಿಬಿರದಲ್ಲಿ ದಿನಕ್ಕೆ 16 ಘಂಟೆ ದುಡಿಯಬೇಕು. ಆದಿತ್ಯವಾರ ಯಾ ವಾರದ ಇತರ ಯಾವ ದಿನದಲ್ಲಿಯೂ ಬಿಡುವೆಂಬುದಿಲ್ಲ. ಹೀಗೆ 16ಘಂಟೆ ದುಡಿಯುವಾಗ ಒಂದಿಷ್ಟು ನೀರು ಕೂಡಾ ಕುಡಿಯಕೂಡದು. ಅತ್ಯಂತ ಸೆಕೆಯಲ್ಲೂ ಒಂದು ಗುಟುಕು ನೀರು ಕುಡಿದ ಬಿಟ್ಟರೆ ಮಹಾಪರಾಧ! ಅರ್ಧ ಹೊಟ್ಟೆ ಆಹಾರ. ಕೆಲಸವೆಂದರೆ ದೊಡ್ಡ ದೊಡ್ಡ ಕಲ್ಲುಗಳನ್ನೊಯ್ದು ರಸ್ತೆ ಕಟ್ಟುವುದು. ಸರ್ವಸಾಮಾನ್ಯ ಸರಿಯಾಗಿ ಉಂಡುತಿಂದಿರುವವರಿಗೂ ಪ್ರಯಾಸದ ಕೆಲಸ. ಐಗುಪ್ತದಲ್ಲಿ ಯೆಹೂದ್ಯ ಹಿರಿಯರು ಪಡೆದ ದಂಡನೆಯನ್ನೇ ಅವರೀಗ ಪಡೆಯುತ್ತಿದ್ದಾರೆಂದು ನಾಝಿಗಳ ತುಚ್ಛೀಕಾರ. ಐಗುಪ್ತದ ಅರಸ ಫರೋವನು ನಾಝಿಗಳ ಅರಿವಾಸಿಯಾಗಿದ್ದಾದರೂ ಮುಂದುವರಿದಿದ್ದನೋ ಎಂಬುದು ಸಂದೇಹಕರ.

ಬುಚೆನ್‌ವಾಲ್ಡ್ ಶಿಬಿರದ ಕೈದಿಗಳು ಕೆಲವು ಘಂಟೆಗಳ ವರೆಗೆ ಶಿಸ್ತಾಗಿ ಗೊಂಬೆಗಳಂತೆ ನಿಂತುಕೊಳ್ಳಬೇಕು. ಒಂದಿಷ್ಟು ಅತ್ತಿತ್ತ ದೃಷ್ಟಿ ಹಾಯಿಸಿದರೆ ಬೀಳುವುದು ಕೊರಡೆ ಏಟು. ಕೆಲಸಮಾಡುವ ಸಮಯದಲ್ಲಿ ಬಾಯಾರಿ ಗಂಟಲೊಣಗಿ ಒಂದು ಗುಟುಕು ನೀರು ಕುಡಿದ ಕ್ಷುಲ್ಲಕ ಅಪರಾಧಕ್ಕೂ ಕೊರಡೆ ಪೆಟ್ಟು. ಇಬ್ಬರು ಪಹರೆಗಾರರು ಅನುಕ್ರಮವಾಗಿ 25 ಚಡಿ ಹೊಡೆಯುವುದೇ ಸರ್ವಸಾಮಾನ್ಯ ದಂಡನೆ. ಇಷ್ಟರೊಳಗೇನೇ ಕೈದಿಗಳು ಬೋಧ ತಪ್ಪಿ ಬೀಳುವರು. ಆದರೆ ಯೆಹೂದ್ಯರಿಗೆ 60ರ ವರೆಗೆ ಚಡಿಗಳನ್ನು ಕೊಡಬಹುದೆಂದು ಘುಂಟರರ ಅನುಜ್ಞೆಯಿದೆಯಂತೆ.

ಹರ್ ಎಕ್ಸರು 480 ಮಂದಿಯ ತಂಡಕ್ಕೆ ಸೇರಿದ್ದರು. ಇಷ್ಟು ಮಂದಿ ಎದ್ದು ಕಾಲು ಘಂಟೆಯೊಳಗೆ ಮುಖ ತೊಳೆಯಲು ಮತ್ತು ನೀರು ಕುಡಿಯಲು ಇದ್ದುದು ಒಂದೇ ನಳ. ಕಡೆಗೆ ಇದನ್ನೂ ನಿಲ್ಲಿಸಲಾಗಿತ್ತು. ಹರ್ ಎಕ್ಸರು ಬುಚೆನ್‌ವಾಲ್ಡ್ ಶಿಬಿರದಲ್ಲಿದ್ದ 6 ವಾರಗಳಲ್ಲಿ ಸಾಬೂನನ್ನಾಗಲೀ ಹಲ್ಲುಜ್ಜುವ ಬ್ರಶ್ಶನ್ನಾಗಲಿ ಕಂಡವರಲ್ಲ. ಅವರಿದ್ದಾಗ ಈ ಶಿಬಿರದಲ್ಲಿ ಸುಮಾರು 8000 ಮಂದಿ ಕೈದಿಗಳಿದ್ದರು. ಸ್ವಲ್ಪ ಸಮಯದಲ್ಲೇ ಈ ಸಂಖ್ಯೆಯು 20,000 ಕ್ಕೇರಿಸಲ್ಪಟ್ಟಿತು. ಪ್ರತಿದಿನವೂ ಮರಣಗಳುಂಟಾಗುತ್ತಲೇ ಇದ್ದುವು. ಮೃತರ ಸಂಬಂಧಿಕರಿಗೆ ಈ

(ಸಾಮ್ರಾಜ್ಯ ಕಟ್ಟುವಾಗ ಮಾತ್ರವಲ್ಲದೆ ಅದನ್ನು ಸ್ಥಿರವಾಗಿರಿಸಿಕೊಳ್ಳುವುದಕ್ಕಾಗಿ ಕೂಡಾ ಬ್ರಿಟಿಷರು ಹಲವು ಅತ್ಯಾಚಾರಗಳನ್ನು ನಡಿಸಿರುತ್ತಾರೆ. ಅವನ್ನೀಗ ಜರ್ಮನಿಯು ರೇಡಿಯೋ ಮೂಲಕ ಪ್ರಕಟಿಸಿ ಪ್ರಚಾರ ಮಾಡುತ್ತಿದೆ. ಆಫ್ರಿಕದ ಬೋಯರ್ ಯುದ್ಧದಲ್ಲಿ ಸ್ಥಾನಬದ್ಧ ಶಿಬಿರಗಳಲ್ಲಿ ಬೋಯರರ ಮಕ್ಕಳಿಗೆ, ಗಾಜಿನಪುಡಿ ಮಿಶ್ರವಾದ ಆಹಾರವನ್ನೀಯಲಾಗಿತ್ತೆಂದು ಜರ್ಮನರ ಆರೋಪ. ಅಮೃತಸರದ ಕೊಲೆ ಮತ್ತು ಅನಂತರ ನಡೆದ ಘೋರ ಅತ್ಯಾಚಾರಗಳಿಂದ ಬ್ರಿಟಿಷರ ಆಳ್ವಿಕೆಯ ಕುರಿತು ಹಿಂದೀಯರಲ್ಲಿ ಸಂಪೂರ್ಣ ಜುಗುಪ್ಸೆಯುಂಟಾಗುವಂತಾಯಿತು. ಇಂತಹ ಕೃತ್ಯಗಳು ಅನಂತರವೂ ನಡೆದಿರುವವು. ಆದರೆ ಜರ್ಮನರು ಬುಚೆನ್‌ವಾಲ್ಡ್ ಶಿಬಿರದಲ್ಲಿ ನಡೆಸಲ್ಪಡುವ ಹಿಂಸೆ ಮತ್ತು ಅತ್ಯಾಚಾರಗಳು ಬರ್ಬರ ಹಾಗೂ ಪೈಶಾಚಿಕವಿವೆ. ನಾವು ಹಿಂದಿನ ಇತಿಹಾಸದಲ್ಲಿ ಕೇವಲ ಓದಿ ವಿಸ್ಮಯಪಡುವ ಅಮಾನುಷ ಕೃತ್ಯಗಳಿಂದು ಜರ್ಮನಿಯಲ್ಲಿ ನಡೆಯುತ್ತಿವೆ. ಇದನ್ನು ಬ್ರಿಟಿಷ್ ಸರಕಾರದ ಶ್ವೇತಪತ್ರಿಕೆಯಾಗಿ ಪ್ರಕಟಿಸಿದೆ. ಅದರ ಕೆಲವಂಶಗಳನ್ನೆತ್ತಿ ಕೊಡುತ್ತೇವೆ. ಸಂ ನ.)

ವಿಷಯ ಪ್ರಥಮವಾಗಿ ತಿಳಿಯುವುದೆಂದರೆ ಅವರು ಸುಟ್ಟು ಬೂದಿಯಾದ ಮೇಲೆ ಬೂದಿ ಬೇಕಾದರೆ 3 ಮಾರ್ಕ್ಸುಗಳನ್ನಿತ್ತು ಒಯ್ಯಬಹುದೆಂದು ತಿಳಿಸಲಾಗುವುದು. ಜರ್ಮನಿಯನ್ನು ಕೂಡಲೆ ಬಿಟ್ಟುಹೋಗಲು ಶಕ್ತರಾದವರನ್ನು ಆ ಶರ್ತದಿಂದ ಬಿಟ್ಟುಬಿಡಲಾಗುವುದು. ಆದರೆ ಕೈದಿಗಳು ಈ ಶಿಬಿರದಿಂದ ಹೊರಬರುವಾಗ ಜೀವನ್ಮೃತಾವಸ್ಥೆಯಲ್ಲಿರುತ್ತಾರೆ. ಹರ್ ಎಕ್ಸರು ಬಿಡುಗಡೆಯಾದ ಮೇಲೆ 3 ವಾರಗಳ ಕಾಲ ಹಾಸಿಗೆ ಹಿಡಿದಿದ್ದರು. ಇನ್ನೊಬ್ಬನು ಬದುಕಲಾರದಷ್ಟು ತೀವ್ರ ಜ್ವರಪೀಡಿತನಾಗಿ ಆಸ್ಪತ್ರೆಗೊಯ್ಯಲ್ಪಟ್ಟನು. ಮತ್ತೊಬ್ಬನು ಎಷ್ಟೊಂದು ಅಶಕ್ತನಿದ್ದನೆಂದರೆ ಅವನಿಗೆ ರಸ್ತೆದಾಟಲು ಕೂಡಾ ಸಾಧ್ಯವಾಗುತ್ತಿದ್ದಿಲ್ಲ.

ಇನ್ನೊಬ್ಬ ಕ್ರೈಸ್ತ ಯೆಹೂದ್ಯನ ಹೃದ್ರಾವಕ ವೃತ್ತಾಂತ

ಹರ್ ಜಡ್ಡರಿಗೆ ಜರ್ಮನಿಯಲ್ಲೊಂದು ಸಣ್ಣ ವ್ಯಾಪಾರವಿತ್ತು. 1938ನೇ ಇಸ್ವಿ ಜೂನ್ ತಿಂಗಳಲ್ಲಿ ನಡೆದ ಸಾಮುದಾಯಿಕ ಯೆಹೂದ್ಯ ಬಂಧನದಲ್ಲವರು ಯಾವ ತಪ್ಪೂ ಇಲ್ಲದೆ ಕೈದು ಮಾಡಲ್ಪಟ್ಟರು. ಅವರ ಮೇಲೆ ವಾರಂಟೇನೂ ಇರಲಿಲ್ಲ. ಮೊದಲಾಗಿ ಇವರನ್ನು ಅಲೆಗ್ಸಾಂಡರ್ ಸೆರೆಮನೆಗೊಯ್ದು ಒಂದು ಚಿಕ್ಕ ಕೋಟೆಯಲ್ಲಿ ಹಾಕಲ್ಪಟ್ಟಿತು. ಅದರೊಳಗೆ 22 ಮಂದಿ ಇದ್ದರು. ಎಲ್ಲರು ಕೂತುಕೊಳ್ಳುವಷ್ಟು ಸ್ಥಳ ಕೂಡಾ ಇರಲಿಲ್ಲ. ಸರ್ತಿ ಪ್ರಕಾರ ಕೂತು ರಾತ್ರಿ ದೂಡಿದರು. ಎಲ್ಲರಿಗೂ ಮೂತ್ರಮಾಡಲು ಒಂದೇ ಬಾಲ್ದಿ ಕೊಟ್ಟಿದ್ದರು. ಎರಡು ದಿನ ಇಲ್ಲಿಯೇ ಕಳೆಯಬೇಕಾಯಿತು. ಅನಂತರ 3000 ಮಂದಿಯನ್ನು ಜಾನುವಾರುಗಳಂತೆ ರೈಲು ಬಂಡಿಯೊಳಗೆ ಹಾಕಿ ಬುಚೆನ್‌ವಾಲ್ಡಿಗೊಯ್ಯಲಾಯಿತು. ಈ ಕೈದಿಗಳು ಒಬ್ಬರೊಡನೊಬ್ಬರು ಮಾತಾಡಲಿಕ್ಕಿಲ್ಲ. ಬುಚೆನ್‌ವಾಲ್ಡಿಗೆ ಮುಟ್ಟಿದೊಡನೆಯೇ "ಯೆಹೂದ್ಯ ನಾಯಿಗಳು! ಖಟಿಂಗರು! ಈಗ ಸಿಕ್ಕಿರಿ ನೀವು ನಮ್ಮ ಕೈಗೆ" ಎಂಬ ಬೈಗಳ ಸುರಿಮಳೆಯಿಂದ ನಾಝಿ ಪೋಲೀಸರ ಸ್ವಾಗತ ದೊರೆಯಿತು.

ಬುಚೆನ್‌ವಾಲ್ಡ್ ಶಿಬಿರದ ಪರಿಸ್ಥಿತಿ ಭಯಂಕರ ಮೊಣಕಾಲ ವರೆಗೆ ಕೆಸರು ಕೆಲವು ಕಡೆಗಳಲ್ಲಿ. ಹಲವು ಮರಗಳನ್ನು ಕಡಿದು ಬುಡಗಳನ್ನು ಬಿಟ್ಟುಬಿಡಲಾಗಿದೆ. ನಡೆಯುವುದೇ ಅಸಾಧ್ಯ ಕೆಲವೆಡೆ. ಹೃದ್ರೋಗವಿದ್ದು ನಡೆಯಲಾಗದವನೊಬ್ಬನನ್ನು ಇತರ ಕೈದಿಗಳು ಕಾಲು ಹಿಡಿದೆಳೆದೊಯ್ದರು. ನಾಝಿ ಪೋಲೀಸರು ಯೆಹೂದ್ಯರನ್ನು ಮುಟ್ಟುವುದು ಕೂಡಾ ಇಲ್ಲ. ಈ ಕೈದಿಯ ಮುಖದಿಂದ ಮಾಂಸವು ಕಿತ್ತು ಹೋಯಿತು. ಗುರುತಿಸಲಾರದಷ್ಟು ವಿಕಾರವಾಗಿದ್ದನವನು. ಇದೇ ಶಿಬಿರದಲ್ಲಿ ಸುಮಾರು 10,000 ಕೈದಿಗಳಿದ್ದರು. ಇವರಿಗೆ ಮಲಗಲು ಹುಲ್ಲಿನಿಂದ ತುಂಬಿದ 100 ಚೀಲಗಳಿದ್ದುವು. ಪ್ರತಿಯೊಂದು ಚೀಲದ ಮೇಲೆ ನಾಲ್ಕು ಸಾಲುಗಳಲ್ಲಿ ಮೂರು ಮೂರು ಮಂದಿ ಮಲಗಬೇಕು. ಹೇಗಾದರೂ ಮಗ್ಗುಲಿಕ್ಕಿ ಮಲಗಿ ಸ್ಥಳ ಮಾಡಿಕೊಳ್ಳಬೇಕು ಭೂತಾಯಿ

THULUNAD BANK
OF SUPPLY AGENCY LIMITED,

ESTD.] UDIPI. [1933.

INTEREST ON CURRENT ACCOUNT ALLOWED at 3% p. a.

All kinds of Banking business transacted

Write for particulars to:—

The Managing Director.

ಮಾಸುಗಳಂತೆ ನಮ್ಮನ್ನು ಕೋಣೆಗಳಲ್ಲಿ ತುಂಬಿಸಿಡಲಾಗಿತ್ತು. ಅಂಗಾತನೆ ಮಲಗಕೂಡದು. ಮಲಗಿದರೆ ದೊಣ್ಣೆ ಪೆಟ್ಟು. ಹಳೆಯ ಕೈದಿಗಳು ನಮ್ಮ ಮೇಲ್ವಿಚಾರಕರಾಗಿ ನಮ್ಮೊಂದಿಗೆ ಮಲಗುವರು. ಅವರ ಮಾತು ಕಟ್ಟಪ್ಪಣೆ.

ಬೆಳಗ್ಗೆ ಹಾಜರಿ ಕರೆಯಲಿಕ್ಕೇನೇ ಹಲವು ಘಂಟೆ ನೆಟ್ಟಗೆ ನಿಂತುಕೊಳ್ಳಬೇಕು. ಯಾರಾದರೂ ತಪ್ಪಿಸಲೆತ್ನಿಸಿದರೆ, ಕ್ರಮ ತಪ್ಪಿ ಅತ್ತಿತ್ತ ಚಲಿಸಿದರೆ 1000 ವೋಲ್ಟ್ ಶಕ್ತಿಯ ವಿದ್ಯುತ್ ಸರಿಗೆಯಿಂದ ತಡೆಗಟ್ಟಲ್ಪಡುವರು. ಪ್ರತಿಯೊಬ್ಬ ಪಹರೆಗಾರನೂ ಅತ್ತಿತ್ತ ಹೋಗುವ ಕೈದಿಯ ಮೇಲೆ, ಎಚ್ಚರ ಕೂಡಾ ಕೊಡದೆ ತನ್ನ ಬಂದೂಕನ್ನು ಉಪಯೋಗಿಸ ಬಹುದು. ಒಬ್ಬ ಪಹರೆಯವನ ಬೆಲೆಯೆಂದರೆ ಒಂದು ಕೋವಿ ಗುಂಡಿನಷ್ಟು. 'ಯೆಹೂದ್ಯ ಹಂದಿಗಳು! ದೇವರ ಜನರು! ಆಕಾಶದಿಂದ ಇಳಿಸಲ್ಪಟ್ಟ ಪವಿತ್ರ ಜನಾಂಗ! ಯೆಹೂದ್ಯ ಕ್ರಿಮಿಗಳು! ಕೊಳಕು ಹಂದಿಗಳು" ಎಂದೆಲ್ಲಾ ಸಹಸ್ರನಾಮ ಮತ್ತೆ!

ಬುಚೆನ್‌ವಾಲ್ಡ್ ಶಿಬಿರವು ಉನ್ನತ ಪ್ರದೇಶದಲ್ಲಿದ್ದೆ ಚಳಿ ಬಹಳ. ನಾವು ಒಂದು ಜಾವ ರಾತ್ರಿಯು ಮೊದಲೇ ಏಳಬೇಕು. ಮಧ್ಯರಾತ್ರಿ ನಂತರ ಘಂಟೆ 3-30ಕ್ಕೆ ಎದ್ದರೆ ರಾತ್ರಿ 10 ಘಂಟೆಗೆ ಮಲಗಬೇಕು. ಬಹಳ ಕೆಟ್ಟ ಗಾಳಿ, ದುರ್ವಾಸನೆ. ಕೋಣೆಯ ಚಿಕ್ಕ ಕಿಂಡಿಗಳಿಂದ ನೀರು ಸೋರುತ್ತದೆ. ಘಾಸಿ ಮತ್ತು ಕೊರಡೆ ಕಂಬಗಳಿರುವ ಮೈದಾನಿನಲ್ಲೇ ಬೆಳಗ್ಗೆ ಘಂಟೆ 4-45ಕ್ಕೆ ಸಾಲುಗಟ್ಟಿ ನಿಲ್ಲಿಸಿ ಕಾಫಿ ಹಂಚಲಾಗುವುದು. ಜರ್ಮನ್ ಪೋಲೀಸನೊಬ್ಬನನ್ನು ಕೊಂದವನ ಶವವೊಂದು ಘಾಸಿಗಂಬದಲ್ಲಿ ಜೋತಾಡುತ್ತಿರುವದು. ಘಂಟೆ 6-30ಕ್ಕೆ ಹಾಜರಿ ಕರೆಯಲಾಗುವುದು, ಆ ವರೆಗೆ ಚಳಿಯಲ್ಲಿ ನಡುಗಿ ನೆಟ್ಟಗೆ ನಿಂತುಕೊಳ್ಳಬೇಕು. ಅಸ್ವಸ್ಥರಾಗಿರುವವರನ್ನು ಈಗ ಪರೀಕ್ಷಿಸಲಾಗುವುದು, ಅವರು ಸಾಲು ಬಿಟ್ಟು ಮುಂದೆ ಬಂದು ನಿಲ್ಲಬೇಕು. ಆಗ ಜೈಲಾಧಿಕಾರಿಯೊಬ್ಬನು ತನ್ನ ಕುದುರೆ ಚಬುಕಿನಿಂದ, ಎಲ್ಲರೆದುರಲ್ಲೇ ಅವರ ಮುಖಕ್ಕೆ ಹೊಡೆಯುವನು. ಕಾಯಿಲೆ ಇದೆಯೋ ಇಲ್ಲವೋ ಎಂದು ಪರೀಕ್ಷಿಸುವ ರೀತಿ ಇದು! ಯೆಹೂದ್ಯರು ಕಾಯಿಲೆಯಲ್ಲಿ ಬೀಳುವದಿಲ್ಲೆಂಬುದೇ ನಿಯಮ. ಜೈಲಾಧಿಕಾರಿಯು ಈ ರೀತಿ ಪರೀಕ್ಷಿಸಿ ಯಾರನ್ನು ಆಸ್ಪತ್ರೆಗೆ ಕಳುಹಿಸಬೇಕೆಂದು ನಿಶ್ಚೈಸುವನು. ರೋಗಗ್ರಸ್ತರೆಂಬವರಲ್ಲಿ ಹೀಗೆ ನಿಶ್ಚೈಸಲ್ಪಡುವವರೇ ಕೇವಲ ಸೀಮಿತ ಅರೇಳು ಮಂದಿ. ಉಳಿದವರೆಲ್ಲರೂ ಯಥಾಪ್ರಕಾರ ಹೋಗಿ ಕೆಲಸಮಾಡಬೇಕು. ಇವರಿಗೆ ಯಾವ ರಿಯಾಯಿತಿಯೂ ತೋರಿಸಲ್ಪಡುವುದಿಲ್ಲ. ಜೈಲಾಧಿಕಾರಿಯ ಪರೀಕ್ಷೆಯಾದ ಮೇಲೆ ಡಾಕ್ಟರು ಯಾರು ರೋಗಗ್ರಸ್ತರೆಂದು ಪುನಃ ಪರೀಕ್ಷಿಸುವರು ಡಾಕ್ಟರು ನೆಟ್ಟಗಿರುವರೆಂದು ಹಿಂದೆ ಕಳುಹಿಸಿದವರಿಗೆ, ಸುಳ್ಳು ಹೇಳಿದುದಕ್ಕಾಗಿ ಕಠಿಣ ಶಿಕ್ಷೆ

(೧೪ನೇ ಪುಟಕ್ಕೆ ಮುಂದರಿಯುವದು)

—•‖ ಒಂದು ವಾರದ ಯುದ್ಧ ವಾರ್ತೆ ‖•—

ಜರ್ಮನ್ ಪ್ರೊಕೆಟ್ ಯುದ್ಧ ಹಡಗ ಮತ್ತು ಬ್ರಿಟಿಷ್ ಹಡಗಗಳೊಳಗೆ ಯುದ್ಧ.

7 ಹಡಗಗಳು ಮುಳುಗಿಸಲ್ಪಟ್ಟಿವೆ.

ದಶಂಬರ ತಾ. 9ಕ್ಕೆ ಅಂತ್ಯವಾಗುವ ಒಂದು ಹಪ್ತೆಯಲ್ಲಿ 7 ಬ್ರಿಟಿಷ್ ಮತ್ತು 8 ತಟಸ್ಥ ರಾಷ್ಟ್ರಗಳ ಹಡಗಗಳು ಮುಳುಗಿಸಲ್ಪಟ್ಟಿವೆ. ಕಳೆದ ಸೆಪ್ಟಂಬರ್, ಅಕ್ಟೋಬರ್, ಮತ್ತು ನವಂಬರ ತಿಂಗಳುಗಳಲ್ಲಿ ಒಟ್ಟು ೬೭ ಬ್ರಿಟಿಷ್ ವ್ಯಾಪಾರಿ ಹಡಗಗಳು ಮುಳುಗಿಸಲ್ಪಟ್ಟಿವೆ. 4 ಬ್ರಿಟಿಷ್ ವ್ಯಾಪಾರಿಹಡಗಗಳು ಬಹಳ ಸಮಯವಾದರೂ ಎಲ್ಲಿರುವವೆಂದು ತಿಳಿದುಬಾರದುದರಿಂದ ಅವುಗಳು ಕೂಡಾ ಮುಳುಗಿಸಲ್ಪಟ್ಟಿವೆಯೆಂದು ನಂಬಲಾಗಿದೆ. ಇದೇ ತಾ. 10ರಲ್ಲು ರೇ ಆಫ್ ಹೋಪ್ ಎಂಬ ಬ್ರಿಟಿಷ್ ಹಡಗವೂ ಗರುಪ್ರೋಲಿಯ ಎಂಬಗ್ರೀಕ್ ಹಡಗವೂ ಮುಳುಗಿಸಲ್ಪಟ್ಟಿವೆ

ಪಶ್ಚಿಮ ರಣರಂಗದ ಲಕ್ಸೆಂಬರ್ಗ ಪ್ರದೇಶದಲ್ಲಿ ಹೆಚ್ಚಿನ ಜರ್ಮನ್ ಸೇನೆಯು ಸಂಗ್ರಹವಾಗಿದೆ. ಇಲ್ಲಿ ವಾಸಿಸುತ್ತಿರುವ ಜರ್ಮನರೆಲ್ಲಾ ಬಿಟ್ಟುಹೋಗಬೇಕೆಂದು ಅನುಜ್ಞೆ ಕೊಡಲಾಗಿದೆ. ತಾ. 11ರಲ್ಲು ಚಿಕ್ಕ ಬ್ರಿಟಿಷ್ ಮತ್ತು ಜರ್ಮನ್ ಸೈನಿಕ ಗುಂಪುಗಳೊಳಗೆ ಕದನವಾಗಿ ಜರ್ಮನರು ಸೋಲಿಸಲ್ಪಟ್ಟಿರುವರು. ತಾ. 12ರಲ್ಲಿ ಒಂದು ಸ್ವೀಡಿಶ್, ಮತ್ತು ಒಂದು ಬ್ರಿಟಿಷ್ ಹಡಗ ಮುಳುಗಿಸಲ್ಪಟ್ಟಿವೆ. ರುಮೇನಿಯದಿಂದ ಹೆಚ್ಚಿನ ಪೆಟ್ರೋಲನ್ನು ಪಡಕೊಳ್ಳುವ ಜರ್ಮನಿಯ ಪ್ರಯತ್ನವು ಜಯಶೀಲವಾಗಿಲ್ಲ. ಬಾಲ್ಟಿಕ್ ರಾಜ್ಯಗಳೊಡನೆ ತನ್ನ ವ್ಯಾಪಾರವನ್ನು ಹೆಚ್ಚಿಸಲು ಜರ್ಮನಿಯು ಬಹಳ ಪ್ರಯತ್ನ ನಡಿಸುತ್ತಿದೆ,

ಪ್ರಥಮ ಜಲಯುದ್ಧ

ಇದೇ ತಾ. 13ರಲ್ಲು ಎಕ್ಸಿಟರ್, ಅಜಕ್ಸ್ ಮತ್ತು ಅಖಿಲ್ಲಿಸ್ ಎಂಬ ಬ್ರಿಟಿಷ್ ಯುದ್ಧ ಹಡಗಗಳು, ಗ್ರಾಫ್ ಸ್ಪೀ ಎಂಬ ಜರ್ಮನ್ ಪ್ರೊಕೆಟ್ ಯುದ್ಧ ಹಡಗವನ್ನು ಸಂಧಿಸಿ ಅವುಗಳೊಡನೆ ಪ್ರಥಮ ಪ್ರಬಲ ಜಲಯುದ್ಧ ನಡೆದು, ಜರ್ಮನ್ ಯುದ್ಧ ಹಡಗವು ಜಖಮ್ ಹೊಂದಿ, ಪಲಾಯನಮಾಡಿತೆಂದೂ, ಬ್ರಿಟಿಷ್ ಹಡಗಗಳು ಅದನ್ನು ಬೆನ್ನಟ್ಟಿದುವೆಂದೂ, ಆಮೇಲೆ ಜರ್ಮನ್ ಹಡಗವು ದಕ್ಷಿಣ ಅಮೇರಿಕದ ಉರಗುವೆ ರಾಜ್ಯದ ಮೊಂಟವಿಡಿಯೋ ಬಂದರದೊಳಕ್ಕೆ ಹೊಕ್ಕು ಆಶ್ರಯಪಡೆಯಿತೆಂದೂ ತಿಳಿದುಬರುತ್ತದೆ.

ಬ್ರಿಟಿಷ್ ಮತ್ತು ಜರ್ಮನ್ ವಿಮಾನಗಳೊಳಗೆ ಹೋರಾಟ

ಇದೇ ತಾ. 13ನೇ ರಾತ್ರಿ ಜರ್ಮನ್ ಯುದ್ಧ ಹಡಗ ಗ್ರಾಫ್‌ಸ್ಪೀಯು, ಆಹಾರವಿಲ್ಲದೆ, ಹಲವು ಹೆಣ ಮತ್ತು ಗಾಯಗೊಂಡವರನ್ನೊಳಗೊಂಡು, ಗೊಂದಲದಿಂದ ಮೊಂಟವಿಡಿಯೋ ಬಂದರಕ್ಕೆ ಪ್ರವೇಶಿಸಿತು ಇದನ್ನು ಕಾದು ಹತ್ತಿರದಲ್ಲೇ ಬ್ರಿಟಿಷ್ ಯುದ್ಧ ಹಡಗಗಳು ನಿಂತಿದ್ದುವು. ಬ್ರಿಟಿಷ್ ಹಡಗಗಳ ಗುಂಡುಗಳಿಂದ ಜರ್ಮನ್ ಹಡಗವು ಹಲವು ಕಡೆ ತೂತಾಗಿದ್ದಿತು. ಅದರ ಮೇಲ್ಭಾಗವೆಲ್ಲಾ ಮುರಿದುಹೋಗಿತ್ತು. ಜರ್ಮನ್ ಯುದ್ಧ ಹಡಗದಲ್ಲಿ 11 ಇಂಚು ವ್ಯಾಸದ ದೊಡ್ಡ ತೋಪುಗಳಿದ್ದು ಹೋರಾಡಲು ಅದು ಹೆಚ್ಚಿನ ಸಿದ್ಧತೆಯುಳ್ಳದಾಗಿದ್ದಿತು. ಬ್ರಿಟಿಷ್ ಯುದ್ಧ ಹಡಗಗಳಲ್ಲಿದ್ದುದು ಕೇವಲ 7 ಇಂಚು ವ್ಯಾಸದ ತೋಪುಗಳು. ಆದರೂ ಬ್ರಿಟಿಷ್ ನಾವಿಕರು ಅತ್ಯಂತ ಚಾತುರ್ಯ ಮತ್ತು ಸಾಹಸದಿಂದ ಜರ್ಮನ್ ಯುದ್ಧ ಹಡಗದೊಡನೆ ಹೋರಾಡಿ ಅದನ್ನು ಸೋಲಿಸಿರುವರು. ಅದರ ನಾವಿಕರ ಪೈಕಿ 36 ಮಂದಿ ಕೊಲ್ಲಲ್ಪಟ್ಟು 60 ಮಂದಿ ಗಾಯಗೊಂಡಿರುವರು.

ಗ್ರಾಫ್‌ಸ್ಪೀ ಹಡಗವು 9 ಬ್ರಿಟಿಷ್ ವ್ಯಾಪಾರಿ ಹಡಗಗಳನ್ನು ಮುಳುಗಿಸಿದ್ದಿತು. ಈ ಹಡಗಗಳ ನಾವಿಕರು ಕೆಲವರು ಗ್ರಾಫ್‌ಸ್ಪೀಯಲ್ಲಿ ಕೈದಿಗಳಾಗಿದ್ದರು. ಅವರನ್ನು ಮೊಂಟವಿಡಿಯೊದಲ್ಲಿ ಬಿಟ್ಟುಬಿಡಲಾಯಿತು. ಮೂರು ಕಡೆಗಳಿಂದ ಬ್ರಿಟಿಷ್ ಯುದ್ಧ ಹಡಗಗಳು ಗ್ರಾಫ್‌ಸ್ಪೀಯನ್ನು ಆವರಿಸಿರುವುದರಿಂದ ಜರ್ಮನರಿಗೆ ಬಹಳ ತೊಂದರೆಯಾಯಿತು. ಎಕ್ಸಿಟರ್ ಯುದ್ಧಹಡಗವನ್ನು ಮುರಿದುಹಾಕಿದ ಮೇಲೂ ಅಜಕ್ಸ್ ಮತ್ತು ಅಖಿಲ್ಲಿಸ್ ಹಡಗಗಳು ಅಸಾಧಾರಣ ಸಾಹಸದಿಂದ ಗ್ರಾಫ್‌ಸ್ಪೀಯನ್ನು ಸಮೀಪಿಸಿ ಸರಿಯಾಗಿ ಗುರಿಯಿಟ್ಟು ಗುಂಡು ಹಾರಿಸಿದುವು. ಇದರಿಂದ ಹೆಚ್ಚಿನ ಜರ್ಮನ್ ನಾವಿಕರು ಗಾಯಗೊಂಡರು. ಕೆಲವರು ಕೊಲ್ಲಲ್ಪಟ್ಟರು. ಬ್ರಿಟಿಷ್ ನಾವಿಕರು ವಿಷ ವಾಯು ತುಂಬಿದ ಗುಂಡುಗಳನ್ನೆಸೆದಿರುವರೆಂದು ಜರ್ಮನರ ಆರೋಪ.

ಗ್ರಾಫ್ ಸ್ಪೀಯು 72 ಘಂಟೆಗಳೊಳಗೆ ಮೊಂಟವಿಡಿಯೋ ಬಂದರನ್ನು ಬಿಟ್ಟು ಹೋಗಬೇಕೆಂದು ಉರಗುವೆ ಸರಕಾರವು ತಿಳಿಸಿರುವುದು. ಈ ನಡುವೆ ಗ್ರಾಫ್ ಸ್ಪೀಯ ರಿಪೇರ್ ಕೆಲಸ ನಡೆದಿರುತ್ತದೆ. ಅದು ಯಾವಾಗ ಬಂದರು ಬಿಟ್ಟು ಹೊರಹೋಗುವದೆಂದು ಬ್ರಿಟಿಷ್ ನೌಕಾಪಡೆಯೊಂದು ಬಂದರಿನ ದ್ವಾರದಲ್ಲಿ ಕಾದು ನಿಂತಿದೆ. ಎಡ್ಮಿರಲ್ ಸ್ಪೀಯರ್ ಮತ್ತು ಇತರ ಜರ್ಮನ್ ಸಬ್ ಮೆರೀನ್‌ಗಳು ಕೂಡಾ ಮೊಂಟವಿಡಿಯೋ ಬಂದರದ ಬಳಿಯ ಸಮುದ್ರ ಪ್ರದೇಶಕ್ಕೆ ಕಳುಹಿಸಲ್ಪಟ್ಟಿವೆಯೆಂದು ತಿಳಿದು ಬರುತ್ತದೆ. ಗ್ರಾಫ್ ಸ್ಪೀಯು ನಿಯಮಿತ ಅವಧಿಯೊಳಗೆ ಬಂದರು ಬಿಟ್ಟು ಹೋಗದಿದ್ದ ಪಕ್ಷದಲ್ಲಿ ಉರಗುವೆ ಸರಕಾರವು ಅದನ್ನು ಯುದ್ಧ ಮುಗಿಯುವನಕ ಬಂಧನದಲ್ಲಿರಿಸುವುದೆಂದು ತಿಳಿದುಬಂದಿದೆ. ಈ ಯುದ್ಧವು ಬ್ರಿಟನಿಗೆ ಸ್ಪಷ್ಟವಾದವಿಜಯವಾದರೂ ಜರ್ಮನಿಯು ತಮಗೆ ವಿಜಯವಾಗಿರುವುದೆಂದು ಪ್ರಕಟಿಸಿರುವುದು. ಬ್ರಿಟಿಷ್ ನಾವಿಕರ ಚಾತುರ್ಯ ಮತ್ತು ಸಾಹಸದಿಂದ ಬ್ರಿಟನು ಮತ್ತು ಫ್ರಾನ್ಸುಗಳು ಬಹಳ ಸಂತೋಷಗೊಂಡಿರುವವು. ಇಟೆಲಿ, ಅಮೇರಿಕ ಮೊದಲಾದ ರಾಷ್ಟ್ರಗಳೂ ಆ ಕುರಿತು ಮೆಚ್ಚಿಗೆ ಸೂಚಿಸಿರುತ್ತವೆ.

ಪಶ್ಚಿಮ ರಣರಂಗದಲ್ಲಿ ಯುದ್ಧವೇನೂ ನಡೆಯುವುದಿಲ್ಲೆಂದಲ್ಲ. ಪ್ರತಿದಿನವೂ ಜರ್ಮನ್ ಮತ್ತು ಮಿತ್ರರಾಷ್ಟ್ರಗಳ ಅಗ್ರಗಾಮಿ ಸೈನಿಕರೊಳಗೆ ಚಿಕ್ಕಪುಟ್ಟ ಕದನಗಳು ನಡೆದು ಉಭಯತರೂ ಬಲಪರೀಕ್ಷೆ ಮಾಡುತ್ತಿರುವರು. ಜರ್ಮನ್ ಸೈನಿಕರು ಕೆಲವೆಡೆ ಸ್ವಲ್ಪ ದೊಡ್ಡ ಧಾಳಿನಡಿಸಿ ಪರಾಜಯಹೊಂದುತ್ತಿರುವರು. ಸೆಪ್ಟಂಬರ ತಾ. 1ರಿಂದ ನವಂಬರ ತಾ. 30ರ ವರೆಗೆ 2100 ಮಂದಿ ಬ್ರಿಟಿಷ್ ಸೈನ್ಯಾಧಿಕಾರಿಗಳು ಮತ್ತು ಸೈನಿಕರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬಂದಿದೆ. 1914ರಲ್ಲಿ ಅಗೋಸ್ತಿನಿಂದ ಸೆಪ್ಟಂಬರದ ವರೆಗೆ 12,500 ಮಂದಿ ಬ್ರಿಟಿಷ್ ಸೈನಿಕರು ಮೃತರಾಗಿದ್ದರು.

ಇದೇ ತಾ. 14ರಲ್ಲು ಬ್ರಿಟಿಷ್ ವಿಮಾನ ಗುಂಪೊಂದು ಜರ್ಮನಿಯ ವಾಯುವ್ಯದ ಹಲಿಗೋಲೇಂಡ್ ಬೈಟ್

(೧೧ನೇ ಪುಟಕ್ಕೆ ಮುಂದರಿಸಿದೆ)

THE

BOMBAY LIFE ASSURANCE

Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live—today—a few years, more—when you are old?
If you die—to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult

KOCHIKAR BROTHERS LTD.,

RAMDAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	CALICUT, Puthiyara,	Central Station Road, TRIVANDRUM

ಸ್ಕೂಲ್, ಲೈಬ್ರೆರಿ ಮತ್ತು ಗ್ರಾಮಪಂಚಾಯಿತಿಗಳಿಗೆ

ಬೇಕಾದ ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ-

ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಇದೆ.

ಪಿ. ಎ. ಉಪಾಧ್ಯಾಯ,

ಬುಕ್ ಸೆಲರ್ ಅಂಡ್ ಪಬ್ಲಿಷರ್,
೪೫ ಎ.ಎಸ್.ಸ್ಟ್ರೀಟ್ ಬೆಂಗಳೂರು ಸಿಟಿ

೧ ರೂ.ಕೊಡುವ ಚಂದಾರರಿಗೆ ಮಾತ್ರ

ರೂ. ೩ರ ಪುಸ್ತಕಗಳು

ಕೂಗಲಿ] **ಉಚಿತ** [ಈ ದಿನವೇ

ಪುಸ್ತಕಗಳ ಕೆಟಲೋಗುಪಟ್ಟಿಗೆ ಬರೆಯಿರಿ

ವ್ಯವಸ್ಥಾಪಕ:-ಪಿ. ಎ. ಉಪಾಧ್ಯಾಯ

ಮಾಧ್ವಗ್ರಂಥ ಪ್ರಕಾಶನ ಸಮಿತಿ,
೪೫ ಎ ಎಸ್.ಸ್ಟ್ರೀಟ್, ಬೆಂಗಳೂರು ಸಿಟಿ

BIL ಬಿಲ್ಲವ LAVA

ಕಣ್ಸೆಳೆವ ಬಹಿರ್ರಂಗ!
ಮನಸೆಳೆವ ಅಂತರಂಗ!!

ಬೊಂಬಾಯಿಯ ಬಾರ್ಕೂರು ಬಿಲ್ಲವ ಚಾರಿಟ ಸಂಘದವರು ತಮ್ಮ 22ನೇ ವಾರ್ಷಿಕೋತ್ಸವದ ಸ್ಮರಣಾರ್ಥವಾಗಿ ಪ್ರಕಟಿಸಿದ ಪುಸ್ತಕ. ಬಿಲ್ಲವ ಸಮಾಜದ ಕುಂದು ಕೊರತೆಗಳನ್ನು ಅವುಗಳನ್ನು ತೊಲಗಿಸುವ ಮಾರ್ಗವನ್ನೂ ವಿವರಿಸಿ ಸಮಾಜದ ಒಗ್ಗಟ್ಟನ್ನು ನೆಲೆಗೊಳಿಸುವುದೇ ಈ ಪುಸ್ತಕದ ಧ್ಯೇಯ. ಇದರಲ್ಲಿ ಬಿಲ್ಲವ ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಿರುವ ಕೆಲ ಮಹನೀಯರಿಂದ ಬರೆಯಲ್ಪಟ್ಟ ವ್ಯಾಖ್ಯಾನಗಳಿವೆ. ಬಿಲ್ಲವ ಸಮಾಜದ ಪ್ರತಿ ಬಂಧುಭಗಿನಿಯರು ಇದನ್ನೋದಿ ಸಮಾಜದ ಮೇಲ್ಮೆಯನ್ನು ಬಯಸಬೇಕಾಗಿ ವಿನಂತಿ.

ಈ ಪುಸ್ತಕದ ಲಾಭಾಂಶವನ್ನು ಸಂಘದ ವಿದ್ಯಾರ್ಥಿವೇತನದ ಫಂಡಿಗೆ ಕೊಡಲಾಗುವುದಾದ್ದರಿಂದ ವಿದ್ಯಾಭಿಲಾಷಿಗಳಾದ ಪ್ರತಿಯೊಬ್ಬರೂ ಇದನ್ನು ಕೊಂಡುಕೊಂಡು ಪ್ರೋತ್ಸಾಹಿಸಬೇಕಾಗಿಯೂ ಅಪೇಕ್ಷಿಸುತ್ತೇನೆ.

ವೈ ಸುಬ್ಬ, ಗೌ. ಕಾರ್ಯದರ್ಶಿ,

ಬಾರ್ಕೂರು ಬಿಲ್ಲವ ಚಾರಿಟ ಸಂಘ, 50
ಪೊಮ್ಮಂಚಿ ಲೇನ್, ಟೋಪ್ ಫ್ಲೋರ್,
ಫೋರ್ಟ ಬೊಂಬಾಯಿ.

ಪತ್ರ ವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ.]

ಬೊಂಬಾಯಿಯ ಬೇರೆ ಬೇರೆ ಬಿಲ್ಲವ ಸಂಘಗಳ ಸದಸ್ಯರಿಗೆ ದೃಷ್ಟಿ ಇದೆಯೇ?

ಬೊಂಭಾಯಿಯ ಬೇರೆಬೇರೆ ಬಿಲ್ಲವ ಸಂಘಗಳ ಸದಸ್ಯರೊಬ್ಬರು ನವಯುಗದಲ್ಲಿ 'ಬಿಲ್ಲವರ ಅವಗಾಹನೆಗೆ'ಎಂಬ ಶಿರೋನಾಮೆಯಿಂದ ಪ್ರಕಟಿಸಿರುವ ಬಾತ್ಮಿಯನ್ನು ನೋಡಿದರೆ ಬಹಳ ಚೋದ್ಯವಾಗುತ್ತದೆ. ಈ ಲೇಖಕರು ತಾನು ಬೇರೆ ಬೇರೆ ಬಿಲ್ಲವ ಸಂಸ್ಥೆಗಳ ಸದಸ್ಯನಿದ್ದೇನೆಂಬ ಮಮಕಾರದಿಂದ ಈ ಪ್ರಕಾರದ ಬಾತ್ಮಿಯನ್ನು ಕೊಡಬೇಕಲ್ಲದೆ ಸಂಘಗಳ ಕ್ರಮ ನಿಬಂಧನೆ, ಸಮಾಜ ಸೇವೆ ಏನೆಂಬುದನ್ನು ತಿಳಿದು ಕೊಟ್ಟಿದ್ದಾರೆಂತ ಹೇಳಲಿಕ್ಕೆ ಬರುವುದಿಲ್ಲ.

ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಲ್ಲೊಬ್ಬರು ನಿವೃತ್ತಿ ಹೊಂದಿದರೆ ಸಂಘದ ಕ್ರಮ ನಿಬಂಧನೆಗನುಸಾರವಾಗಿ ಕಾರ್ಯನಿರ್ವಾಹಕ ಮಂಡಳಿಯ ಒಪ್ಪಿಗೆ ಮೇರೆಗೆ ಬೇರೊಬ್ಬ ಸದಸ್ಯನನ್ನು ಸೇರಿಸಿಕೊಳ್ಳುವುದು ನ್ಯಾಯವೋ ಅನ್ಯಾಯವೋ? ಸಂಘದ ವಾರ್ಷಿಕೋತ್ಸವದಲ್ಲಿ ಯಾ ಇನ್ನಿತರ ಸಭೆಗಳಲ್ಲಿ ಯಾರಿಗಾದರೂ ಮಾತಾಡಲು ಎಡೆಕೊಟ್ಟರೆ ಅಂಥವರು ತಾವೇ ಪೂರ್ವದಲ್ಲಿ ತಮ್ಮ ಮಾತನ್ನು ಕೇಳಲಿಲ್ಲವೆಂಬ ಸ್ವಾಭಿಮಾನದಿಂದ ಒಂದು ಸಂಘವನ್ನು ಬಿಟ್ಟುಹೋಗಿ ಇನ್ನೊಂದು ಹೊಸ ಸಂಘವನ್ನು ಸ್ಥಾಪಿಸಿದ ತಮ್ಮ ತಪ್ಪನ್ನು ತಿಳಿದುಕೊಳ್ಳದೆ ಬಿಲ್ಲವ ಸಮಾಜದ ಎಲ್ಲಾ ಸಂಘಗಳನ್ನು ಕುರಿತು ಗುಬ್ಬೋಕ್ತಿಯ ಮಾತುಗಳಿಂದ ಸಂಘಗಳೊಳಗೆ ಮತ್ಸರದ ಬೀಜವನ್ನು ಬಿತ್ತುವ ಒಡಂಬಡಿಕೆಗಳನ್ನು ಮಾಡಿ, ಸುದಿನದ ಕಾರ್ಯಗಳಿಗೆಲ್ಲಾ ತೊಡರು ತರುವಂತೆ ಆಲೋಚಿಸಿದರೆ ಅಂಥವರಿಗೆ ಹೆಚ್ಚಿಗೆ ಮಾತನಾಡುವರೆ ಆಸ್ಪದ ಕೊಡದಿರುವುದು ನ್ಯಾಯವೇ! ಸರಿ.

'ಬಿಲ್ಲವರೆಲ್ಲರೂ ಒಂದೇಸಮಾಜದವರಾದರೂ ಅವರೊಳಗೆ ಬಾರ್ಕೂರು ಮತ್ತು ಮಂಗಳೂರು ಹೋಬಳಿ ಎಂಬ ಭೇದಕ್ಕೆ ಅರ್ಥವಿದೆಯೇ!' ಎಂತ ಕೇಳುತ್ತೀರಿ. ಅಯ್ಯಾ ಹೆಸರಿಲ್ಲದ ಅಖಿಲ ಸಂಘ ಸದಸ್ಯರೇ ಈ 'ಹೋಬಳಿ' ಎನ್ನತಕ್ಕಂಥಾ ಮಂಗಳೂರು ಮತ್ತು ಬಾರ್ಕೂರು ಬಿಲ್ಲವರನ್ನು ಪ್ರತ್ಯೇಕಿಸುವ ಶಬ್ದವನ್ನು ನಿಮಗೆ ಯಾರು ಕೊಟ್ಟರು? ಅಯ್ಯಾ ಲೇಖಕರೇ ಬಾರ್ಕೂರು ಮತ್ತು ಮಂಗಳೂರಿಗೆ ಭೇದ ಯಾವದರಲ್ಲಿ ಎಂಬುದನ್ನು ನೀವೇ ಯೋಚಿಸಿರಿ. ನೀವು ಹೇಳತಕ್ಕಂಥಾ ಭೇದಕ್ಕೆ ಯಾರು ಕಾರಣರೆಂತ ನಿಮಗೆ ಇನ್ನೂ ತಿಳಿದಿಲ್ಲವೆಂತ ಕಾಣುತ್ತದೆ. ಬಹುಶಃ ನೀವು ಸಂಘಕ್ಕೆ ಸೇರಿದ್ದು ಇತ್ತೀಚೆಗೆ ತಾನೇ ಆಗಿರಬೇಕು. ಇಲ್ಲವೆ ಹೇಳಿದವರ ಮಾತಿಗೆ ಮರುಳಾಗಿ ಹೀಗೆ ಬರೆದಿರಬೇಕೆಂತ ನಂಬುತ್ತೇನೆ. ಬಿಲ್ಲವ ಸಮಾಜದ ಸಂಸ್ಥೆಗಳೆಲ್ಲವೂ ಒಟ್ಟಾಗಬೇಕೆಂತ ಕೇಳಿಕೊಳ್ಳುವ ಈ ಶ್ಲಾಘನೀಯವಾದ ಕಾರ್ಯಕ್ಕೆ ವಿಘ್ನ ತಂದವರಾರು?

ಬರೇ ಮಾತಿಗೆ ಮರುಳಾಗದೆ ಎಲ್ಲಾ ಸಂಘಗಳ ಉದ್ದೇಶವನ್ನೂ ಕಾರ್ಯತತ್ಪರತೆಯನ್ನೂ ನೋಡಿ ಆ ಮೇಲೆ ಯಾವುದಾದರೂ ಒಂದು ಸಂಘದ ಕುಂದುಕೊರತೆಯನ್ನು ಹೇಳಬೇಕಲ್ಲದೆ ಅದರಮೊದಲು ಬರೆಯುವುದು ಉತ್ತಮವಲ್ಲ. ಈ ಲೇಖನವನ್ನು ಬರೆದವರು ಒಂದು ಸಂಸ್ಥೆಯ ಉತ್ತಮ ಕೆಲಸವನ್ನು ನೋಡಿ ಸಹಿಸಲಾರದೆ ತನ್ನ ಮಾತ್ಸರ್ಯವನ್ನು ಈ ಮೂಲಕ ತೋರಿಸಿದಂತೆ ಕಾಣುತ್ತದೆ. ಯಾವನೋ ಒಬ್ಬ ತನ್ನ ತಲೆಯನ್ನು ತಾನೇ ತರಿದು ತನ್ನ ಕೈಯಲ್ಲಿ ಹಿಡಿದು ಕೊಂಡದನ್ನು ಯಾವದೋ ಒಂದು ಕನಸಿನಲ್ಲಿ ನೋಡಿದಂತೆ ಈ ಅಖಿಲ ಸಂಘದ ಸದಸ್ಯ ಮಹಾಶಯರು ತನ್ನ ಲೇಖನದ ಚಮತ್ಕಾರವನ್ನು ತೋರಿಸುವರು. 'ಬಿಲ್ಲವನು ಒಂದು ಸಂಘದ ಸದಸ್ಯರಿದ್ದು ಇನ್ನೊಂದು ಸಂಘದ ಸದಸ್ಯರಾಗದಂತಾಗಬೇಕು.' ಎಂದು ಉಲ್ಲೇಖಿಸಿ ಬರೆದಿದ್ದಾರೆ. ಈ ಲೇಖಕರನ್ನು ಹೊಗಳ ತೀರದು. ತಾನೇ ಬೇರೆಬೇರೆ ಸಂಘಗಳಲ್ಲಿ ಸದಸ್ಯನಿದ್ದು ಈ ಮೇಲಿನ ಮಾತನ್ನು ನಿರೂಪಿಸಿದ್ದಾರೆ. ತನ್ನನ್ನು ತಾನು ತಿಳಿಯದವರು ಮತ್ತೊಬ್ಬರನ್ನು ತಿಳಿಯುವ ಬಗೆಯಾದರೂ ಹೇಗೆ? ಯಾವುದಾದರೂ ಒಂದು ಮರದ ಬೇರನ್ನು ತಂದು ಯಾವುದಾದರೂ ಒಂದು ಕಲ್ಲಿನಲ್ಲಿ ಅರೆದು ಯಾರಿಗಾದರೂ ಕೊಟ್ಟರೆ ಏನಾದರೊಂದು ಆಗುತ್ತದೆಂಬ ತಾತ್ಪರ್ಯದಿಂದ ತನ್ನ ದೀರ್ಘ ಲೇಖನವನ್ನು ಬರೆದಿದ್ದಾರೆಂದು ತಿಳಿಯುತ್ತೇನೆ.

ಬಿಲ್ಲವ ಸಮಾಜಸೇವಕರಲ್ಲೊಬ್ಬ.

ಬಿಲ್ಲವ ಸದಸ್ಯರೊಬ್ಬರ ಅರಣ್ಯರೋದನ—ಭಾರತೀಯರ ಅದರಲ್ಲೂ ದುರ್ದೆಶೆಗೀಡಾದ ಬಿಲ್ಲವರ ಧಾರ್ಮಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಅಹೋರಾತ್ರಿಯೆನ್ನದೆ ದುಡಿಯುತ್ತಿರುವ ಸಂಸ್ಥೆಯ ಹಲಕೆಲವು ಕುಂದುಕೊರತೆಗಳ ಪರಿಣಾಮಕ್ಕಾಗಿ ನಮ್ಮ ಸಮಾಜದ ಶ್ರೀಯುತರೊಬ್ಬರು 'ನವಯುಗ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಮುಂಬಾಯಿಯಲ್ಲಿ ಹಲವು ಸಂಸ್ಥೆಗಳು ಹೆಚ್ಚುತ್ತಿದ್ದರೂ ಅದು ಜನತಾಸೇವೆಯ ಬದಲಿಗೆ ಮಂಡಕೆಮನೋವೃತ್ತಿಯಲ್ಲಿಯೇ ಕಾಲ ಕಳೆಯುತ್ತದೆಂದು ಲೇಖಕರ ವಾದ. ಇದರ ಅರ್ಥ ನೋಡುವುದಾದರೆ ಇವರ ಕಪೋಲ ಕಲ್ಪನೆ ಮಾತ್ರ ಸುಳ್ಳು ಡೋಲಿನ ಪೊಳ್ಳು ಬಿಲ್ಲವ ಸಮಾಜಕ್ಕೆ ಬಾರದಂತೆಯೂ ಇವರಲ್ಲಿ ಬೇರೂರಿರುವ ವಂಚಕ ಅಭಿಪ್ರಾಯಗಳು ಒಂದಿಷ್ಟು ದೂರವಾಗಲೆಂದೂ ಈ ಲೇಖನವನ್ನು ಕೈಗೊಂಡೆನು. ಇರಲಿ ಮೊದಲಾಗಿ ಯಾವುದಾದರೂ ಒಂದು ಕಾರ್ಯವಾಗಬೇಕಾದರೆ ಮೆಂಬರರೊಡನೆ ಕೇಳದೆ ಕಾರ್ಯಕಾರಿ ಮಂಡಳಿಯೇ ಮುಂದುವರಿಯುತ್ತದೆಂದು ನಿಮ್ಮ ಆರ್ತನಾದ! ಹೌದು, ಮೆಂಬರರ ಅನುಮತಿ ನಡೆಯಬೇಕು. ಆದರೆ ಮೆಂಬರರನ್ನು ಕರೆದರೆ ಅವರು ಬಾರದಿರುವುದರಿಂದಲೂ ಬಂದವನು ಅವನು ಸಭೆಯಲ್ಲಿ ಮಾತನಾಡಬೇಕೆಂದು ಕೆಲವರ ಅಂದೋಲನ, ಕೆಲವರನ್ನು ಬಾರದಂತೆ ನಿಮ್ಮಂತಹ ಕುಹಕರೇ ಅಡ್ಡಮಾಡುತ್ತಾರೆ. ಅಂದ ಬಳಿಕ ಮಾಡುವುದಾದರೂ ಏನು? ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಹಣ ಸಂಗ್ರಹಿಸುತ್ತಾರೆಂತಲೂ ಇದರ ಕಡೆಗೆ ಮೆಂಬರರು ಗಮನ ಕೊಡುವುದಿಲ್ಲವೆಂತಲೂ ಕೂಗುತ್ತಿದ್ದೀರಿ. ಇದಕ್ಕೆ ತಕ್ಕ ಉತ್ತರ ಕೊಡಲಿ, ಮೇಲೆ ಉಗುಳಿದರೆ ಯಾರ ಮುಖಕ್ಕೆ ಬೀಳುವುದೆಂದು ಬಲ್ಲಿರಾ? ಬೇಡ ನಿಮ್ಮ ಮಾತಿಗೆ ಬೆಲೆಯೇ ಕೊಡುವುದಿಲ್ಲ. ತಾವು ಒಬ್ಬ ಸಮಾಜ ಪ್ರೇಮಿಯಾಗಿ ಸತ್ಯವನ್ನೇ ಹೇಳುತ್ತಿದ್ದೇನೆಂದು ಡಂಭಕೊಳ್ಳುವ ಸದಸ್ಯರೇ! ಇದು ನೀವು ಅರಿಯದೆ ಮಾಡುವ ದೌರ್ಬಲ್ಯವಲ್ಲವೇ? ಬಿಲ್ಲವ ಸಮಾಜದ ಮೇಲೆ ಶ್ರೀಯುತರಿಗೆ ಅಷ್ಟೊಂದು ಪ್ರೀತಿ ಇದ್ದು ಎಲ್ಲಾ ಸಂಸ್ಥೆಗಳು ಒಂದಾಗಬೇಕೆಂಬ ಆಶೆ ಇದ್ದರೆ ಬೇರೆಬೇರೆ ಸಂಸ್ಥೆಗಳಿಗೆ ಯಾಕೆ ಸದಸ್ಯರಾದಿರು? ಬಿಲ್ಲವರೆಲ್ಲರೂ ಒಂದೇ ಸಮಾಜದವರಲ್ಲಿ ಅವರೊಳಗೇನೇ 'ಬಾರ್ಕೂರು' ಮತ್ತು 'ಮಂಗಳೂರು' ಎಂಬ ಭೇದವು ಅವರಲ್ಲಿ ಒಳಗೊಳಗೆ ಇದೆ ಎಂದು ನಮ್ಮದೊಂದು ಸಂಶಲಿನಲ್ಲಿ ಅರ್ಥವಾಗುತ್ತದೆ. ಈ ಭೇದಭಾವನೆ ನಿಮ್ಮಲ್ಲೇ ಇದ್ದು ಈಗ ಅದನ್ನು ಹೊರದೂಡುವಿರಾ? ಅಥವಾ ದ್ವೇಷಾಸೂಯೆಯ ಮಾತೆತ್ತಿದವರಾರೆಂದು ಅರಿತಿರುವಿರೇ? ಯಾ ನಿಮಗೆ ಪಿತ್ಥದಿಂದ ಉಂಟಾದ ಸ್ವಪ್ನವೋ ಸಮಾಜದ ಹಣವನ್ನು ಅದರ ಹಿತಕ್ಕಾಗಿ ಉಪಯೋಗಿಸುವುದು ಬಿಟ್ಟು ತಮ್ಮ ಇಷ್ಟ ಪ್ರಕಾರ ವ್ಯಯ ಮಾಡುತ್ತಿದ್ದಾರೆಂದು ಬರೆದಿದ್ದೀರಲ್ಲಾ ಇದಕ್ಕೇನೆನ್ನಬೇಕು? ಉಂಡಿಯೋ ಗುಂಡು ಬಿಟ್ಟ ಎಂದರೆ ಮುಂಡಾಸು ಮೂವತ್ತು ಮೊಳ ಎಂದು ಹೇಳುವ ಉಂಡಾಡಿ. ಬಿಟ್ಟ ಸಂಗ ವಿಷಯಾಂತರಕ್ಕೆ ಪ್ರವೇಶಿಸಿ ಮಾಮೂಲಿನಂತೆ ಮನಸ್ಸೇ ನಿಂದಿಸುವ ಪ್ರಯೋಜನವಾದರೂ ಏನು? ಬಿಲ್ಲವ ಸಮಾಜದ ಅಬಲೆಯರ ಮತ್ತು ಅನಾಥ ಬಾಲಕರ ಉದ್ಧಾರಕ್ಕಾಗಿ ತನ್ನ ಪ್ರಾಣವನ್ನಾದರೂ ಕೊಡುವ ಬಿಲ್ಲವ ಸಮಾಜದ ಕುರಿತು ಹೇಳುವ ಪ್ರಕಟಣೆ, ಬರೇ ಅರಣ್ಯರೋದನವೇ ಸರಿ. ಬಿಲ್ಲವರನ್ನು ಒಟ್ಟು ಕೆಡಿಸುವ ನಟನೆ ಇನ್ನೊಂದೆಡೆ ಕ್ಷುದ್ರ ಪ್ರಾಂತಭೇದದ ಸಂಕುಚಿತ ಮನೋವೃತ್ತಿಯಿಂದ ಸಮಾಜಕ್ಕೆ ಹಾನಿಯೇ ಹೊರತು ಶ್ರೇಯಸ್ಸಲ್ಲವೆನ್ನುತ್ತಿದ್ದೀರಿ. ಈ ಬಿಡಾಯಿ ಮಾತಿಗೆ ಸಮಾಜದ ನಿಮ್ಮ ಬೆದರಿಕೆಗೆ ಸೊಪ್ಪು ಹಾಕುವರೆಂದು ಬಲ್ಲಿರಾ? ಇನ್ನಾದರೋ ನೀವು ನಿಮ್ಮ ಕರಾಳ ಲೇಖನದಲ್ಲಿ ಬಿಲ್ಲವ ಸಮಾಜಕ್ಕೆ ಸುಳ್ಳು ಶಂಕೆಗಳನ್ನು ಹೊರಿಸಬೇಡಿ. ಬಿಲ್ಲವರನ್ನು ಮುಂದೊತ್ತಲು ಯಾರು ಅಡ್ಡ ಇದ್ದಾರೆಯೋ ಅವರ ಮೇಲೆ ರೇಗಿರಿ. ವಂಚಕ ವೃತ್ತಿಯ ಸಂಸ್ಥೆ ಎಂದು ಹೇಳುವ ಮಂದಭಾಗ್ಯರೇ ಹಾಗ ಲೇಖನ ಬರೆದರೇನು? ಶಕುನಿಯಂತೆ ನಿಮ್ಮ ನಾಮವನ್ನು ಬಯಲಿಗೆಳೆಯದೆ ಇದ್ದುದು ನಿಮಗೆ ನ್ಯಾಯವಾದರೂ ನನಗೆ ಸಮ್ಮತವಾಗುವುದಿಲ್ಲ. ಇನ್ನಾದರೂ ನಿಮ್ಮ ನಾಮವನ್ನು ಗುಪ್ತವಾಗಿಡದೆ ಬಯಲಿಗೆಳೆಯುವಿರೋ? ಯಾ ಶಕುನಿಯಂತೆ ಮಾಯವಾಗಿರುವಿರೋ? ಯಾವಾಗಲೂ ಒಂದು ದಿನ ಬಯಲಿಗೆ ಬೀಳದಿರಲಿಕ್ಕಿಲ್ಲ.

ಬಿಲ್ಲವ ಸೂನು.

1940

ನೇ ಇಸವಿಯ

ಪಾಕೆಟ್ ಡೈರಿ

ದೊರೆಯುತ್ತದೆ.

ನವಭಾರತ ಪುಸ್ತಕ ಭಂಡಾರ

ಉಡುಪಿ.

ಬೊಂಬಾಯಿ

ತಾ. 15-12-39

ಕೋಂಗ್ರೆಸ್ ಕಮಿಟಿಗಳು ನಿದ್ದೆ ಮಾಡುತ್ತಿವೆ—ಮುಂಬಾಯಿಯ ಕೋಂಗ್ರೆಸ್ ಸಂಗಡದಲ್ಲಿ ಯಾವೊಂದು ಚಳವಳವೂ ಕಂಡುಬರುವದಿಲ್ಲ. ಉಗ್ರವಾದಿಗಳಿಂದ ತುಂಬಿರುವ ಕಮಿಟಿಗಳೂ ಕೂಡ ಹೆಚ್ಚಿನ ಗೊಡವೆಗೆ ಕೈಹಾಕದೆ, ತಮ್ಮ ಶಿರವನ್ನು ಮಾತ್ರ ತುಸು ಎತ್ತಿರುವವು. ಪರೇಲ್ ಮತ್ತು ದಾದರ ಕಮಿಟಿಗಳು, 'ಕೋನ್ಸ್ಟಿಟ್ಯುವೆಂಟ್ ವೀಕ್' ಎಂದು ಒಂದು ಹಪ್ತೆಯಲ್ಲಿ ಕೋಂಗ್ರೆಸ್ ಪ್ರಚಾರ ಮಾಡಿಸುವರು. ಬುದ್ಧಿವಂತರ ಸೆಳೆಯಾಗಿ ಇಂದಿನ ವರೆಗೂ ಅಂತಃಕಲಹದಲ್ಲಿ ಮೊದಲನೆಯ ಸ್ಥಾನವನ್ನು ತನ್ನ ಬಾಧ್ಯಹಕ್ಕನ್ನಾಗಿಟ್ಟುಕೊಂಡು ತನ್ನ ಅಧಿಕಾರಗಳನ್ನೆಲ್ಲ ತನ್ನಡಿಗರ ಹಸ್ತಗತ ಮಾಡಿರುವ ಗಿರ್ಗಾಂ ವಾರ್ಡ 'ತಾನು ಜೀವಂತದಲ್ಲಿದ್ದೇನೆ'ಎಂಬುದನ್ನು ಕೂಡ ತೋರ್ಪಡಿಸುವುದಿಲ್ಲ. ಲಕ್ಷ್ಮಿಯು ನೆಲೆನಿಂತಿರುವುದು ಈ ವಾರ್ಡ ಕಮಿಟಿಯಲ್ಲಿ ಉಗ್ರವಾದಿಗಳಿಂದ್ಲೆ ತುಂಬಿದೆ, ಆದರೂ ಒಂದೇ ಒಂದು ಯುದ್ಧ ವಿರುದ್ಧ ಚಳವಳ ನಡೆಯುವುದಿಲ್ಲ. ಇಂಥವರು ವಾರ್ಡ ಕಮಿಟಿಗಳಲ್ಲಿದ್ದಲ್ಲಿ ನಮಗೆ ಸ್ವರಾಜ್ಯವೆಂದು ದೊರೆಯುವದೋ?

ಹತ್ತಿಯ ಬೆಲೆ—ಹತ್ತಿಯ ಬೆಲೆಯು ವಿಪರೀತವೇರುತ್ತಿದೆ, ಜನರು ಕಳವಳಗೊಂಡಿರುವರು. ಗವರ್ನರರು ಹೀಗೆ ಮಿತವಿಲ್ಲದೆ ಕ್ರಯವನ್ನೇರಿಸ ಕೂಡದೆಂದು ಆಜ್ಞೆಯಿತ್ತಿರುವರು.

ಸ್ತ್ರೀಯರಲ್ಲಿ ವಿದ್ಯಾಭ್ಯಾಸ—ಸೋಶಿಯಲ್ ಸರ್ವಿಸ್ ಲೀಗಿನವರು ಸ್ತ್ರೀಯರಲ್ಲಿ ವಿದ್ಯಾಭ್ಯಾಸವನ್ನು ಹೆಚ್ಚಿಸಬೇಕೆಂಬ ಅಭಿಪ್ರಾಯದಿಂದ ದಶಂಬರ ಒಂದರಿಂದ 50 ಸಾಕ್ಷರತಾ ಕ್ಲಾಸುಗಳನ್ನು ಪ್ರಾರಂಭಿಸಿರುವರು. ಕಳೆದ ಸಾಕ್ಷರತಾ ಪ್ರಚಾರದಲ್ಲಿ ಉತ್ತಮ ರೀತಿಯಲ್ಲಿ ಕೆಲಸ ಮಾಡಿದ್ದ ಶ್ರೀ. ಎಸ್. ಕೆ. ಉಪಾಧ್ಯಾಯರವರನ್ನು ಲೀಗಿನವರು ತೆರೆದು ಕನ್ನಡದಲ್ಲಿಯೂ ಹಲವು ಕ್ಲಾಸುಗಳನ್ನು ಪ್ರಾರಂಭಿಸಬೇಕೆಂದು ಹೇಳಲು ಇವರು ವರ್ಲಿಯ ಕಾರ್ಪೊರೇಶನ್ ಚಾಲುಗಳಲ್ಲಿ ಮೂರು ಕ್ಲಾಸುಗಳನ್ನೂ ಪರೇಲಿನಲ್ಲಿ ಒಂದು ಕ್ಲಾಸನ್ನೂ ಪ್ರಾರಂಭಿಸಿರುವುದು ಪ್ರಶಂಸನೀಯವು, ಹೀಗೆ ಪ್ರತಿಯೊಬ್ಬ ಕನ್ನಡಿಗನೂ ಮುಂದೆ ಬಂದು ಮುಂಬಯಿಯಲ್ಲಿರುವ ಕನ್ನಡ ಬಂಧುಗಳನ್ನು ಸಾಕ್ಷರಿಗಳನ್ನಾಗಿ ಮಾಡಲು ಪ್ರಯತ್ನಿಸಬೇಕು.

ಕೆನರಾ ವಿದ್ಯಾದಾಯಿನಿ ಧರ್ಮಾರ್ಥ ರಾತ್ರಿಶಾಲೆ ಮುಂಬಾಯಿ— ಫ್ರೆಂಚ್ ಬ್ರಿಜ್ ಹತ್ತಿರ ರಸ್ತೆಯಲ್ಲಿ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮುಂಬಯಿ ನಗರದಲ್ಲಿ ಪ್ರಾಮುಖ್ಯ ಮತ್ತು ಮನೋಹರವಾದ ದೃಶ್ಯಗಳನ್ನು ತೋರಿಸುವರೇ ಕೆನರಾ ವಿದ್ಯಾದಾಯಿನಿ ಶಾಲೆಯ ಉಪಾಧ್ಯಾಯರುಗಳು ಶಾಲಾ ಮಕ್ಕಳನ್ನು ಕೂಡಿಕೊಂಡು 24-12-39 ಕ್ಕೆ ಘಂಟೆ 8ಕ್ಕೆ ಸರಿಯಾಗಿ Trip ಜೋಗೇಶ್ವರಿ ಗೆಯ ಕಡೆಗೆ ಪ್ರಯಾಣ ಮಾಡುವರೆಂದು ತಿಳಿದು ಬಂದಿದೆ.

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಜಿಸ್ಟರ್ಡ)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ. ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ ಗೊನೊಕಿಲರ್" ಹೆಸರನ್ನೂ ಗಮನಿಸಿರಿ.

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೆ ಇನ್‌ಜೆಕ್ಸನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ. ಬೆಲೆ ೩೦ ಮಾತ್ರೆಗಳ ಬುದ್ದಿಯೊಂದಕ್ಕೆ ರೂ. ೨. ವಿ. ಪಿ. ಖರ್ಚು 0-3-0 ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ 'ಇಲೆಕ್ಟ್ರೊ ಹೋಮ್ಯೊಪತ್ ಡಿಸ್‌ಪೆನ್ಸರಿ.

Sole Manufacturer DR. D. N. JASANI, Vitalbhai Patel Road, BOMBAY 4

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)

ಉಡುಪಿ, ಗುರುವಾರ ತಾ. ೨೧-೧೨-೩೯

ಹಾಡಿದ್ದೇ ಹಾಡು

ಇದೇ ತಾ. 18ರಲ್ಲಿ ವೈಸರಾಯರು ಕಲ್ಕತ್ತದ ಎಸೋಸಿಯೇಟೆಡ್ ಚೇಂಬರ್ಸಿನ ವಾರ್ಷಿಕ ಮಹಾಸಭೆಯನ್ನಾರಂಭಿಸುವಾಗ ಕೊಟ್ಟ ಭಾಷಣದಲ್ಲಿ ಪ್ರಕೃತದ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಬಿಕ್ಕಟ್ಟನ್ನು ಮೇಲಿಂದ ಮೇಲೆ ಪರಿಶೀಲಿಸಿರುವರು. ಈಗಣ ಯುದ್ಧವು, ಹಿಟ್ಲರ್ ಶಾಹಿಯನ್ನು ವಿನಾಶಗೊಳಿಸಲು ಹೂಡಲ್ಪಟ್ಟದೆಂದು ಹೇಳಿರುವರೇ ಹೊರತು, ಅದರಲ್ಲಿ ಹಿಂದೂದೇಶದಂತಹ ರಾಷ್ಟ್ರವು ಏಕೆ ಭಾಗವಹಿಸಬೇಕೆಂಬುದನ್ನೇನೂ ಅವರು ಸೂಚಿಸಲಿಲ್ಲ. ಬ್ರಿಟಿಷ್ ಸರಕಾರವು ಈ ಯುದ್ಧ ಹೂಡಿರುವ ಉದ್ದೇಶ, ಮತ್ತು ಹಿಂದೀ ಸ್ವಾತಂತ್ರ್ಯದ ಕುರಿತು ಅವರ ಧೋರಣೆಯು ಅನೇಕ ತಡವೆ ಸ್ಪಷ್ಟಗೊಳಿಸಲ್ಪಟ್ಟರೂ, ಬ್ರಿಟಿಷರು ಸಾಮ್ರಾಜ್ಯ ಸ್ವಾರ್ಥಪ್ರೇರಿತರಾಗಿರುವುದಿಲ್ಲೆಂಬ ಆಶ್ವಾಸನೆ ಕೊಡಲ್ಪಟ್ಟರೂ ಹಿಂದೂದೇಶದ ಮೇಲೇನೂ ಅದರಿಂದ ಪರಿಣಾಮವಾಗದೆ ಹಿಂದೀ ರಾಜಕೀಯ ಬಿಕ್ಕಟ್ಟು ನಿರಸನ ಹೊಂದದುದು ಶೋಚನೀಯವೆಂದೇ ವೈಸರಾಯರ ಅಭಿಮತ. ಅವರು ಕಾಂಗ್ರೆಸಿನ ಹೆಸರೆತ್ತಿ ಹೇಳಲಿಲ್ಲವಾದರೂ ವಿಷಾದ ಸೂಚಿಸಿರುವುದು ಅದರ ಧೋರಣೆಯ ವಿಷಯದಲ್ಲಿಯೇ. ಬ್ರಿಟಿಷ್ ಸರಕಾರವು ತನ್ನ ಸಾಮ್ರಾಜ್ಯ ಸ್ವಾರ್ಥವನ್ನು ಒಂದಷ್ಟಾದರೂ ಬಿಟ್ಟಿಲ್ಲೆಂಬುದಕ್ಕೆ ಹಿಂದೀ ಪ್ರಶ್ನೆಯೇ ನಿದರ್ಶನ. ಬಾಯಿಯಲ್ಲಿ ವೇದ ಮಂತ್ರ, ಕಾರ್ಯದಲ್ಲಿ ಕುತಂತ್ರವೆಂಬಂತಿದೆ ಬ್ರಿಟಿಷರ ಧೋರಣೆ. ಡಿಕ್ಟೇಟರುಗಳ ನಿರಂಕುಶತೆಯನ್ನು ಕೊನೆಗೊಳಿಸಿ ಲೋಕದಲ್ಲಿ ಪ್ರಜಾಸತ್ತೆ ಮತ್ತು ಪ್ರಜಾ ಸ್ವಾತಂತ್ರ್ಯವನ್ನು ನೆಲೆಗೊಳಿಸಲು ಭೀಕರ ಮಾನವ ಮಾರಣಕ್ಕೆ ಕಾರಣವಾದ ಯುದ್ಧವು ಹೂಡಲ್ಪಟ್ಟಿರುವ ಈ ಸಂದರ್ಭದಲ್ಲಿ ತಮ್ಮ ಅಧೀನವಿರುವ ರಾಷ್ಟ್ರಗಳಿಗೆ ವಿಶೇಷವಾಗಿ ಹಿಂದೂದೇಶಕ್ಕೆ ಈ ತತ್ವಗಳು ಯಾವ ರೀತಿಯಲ್ಲಿ ಅನ್ವಯಿಸುವವೆಂಬುದನ್ನು ಸ್ಪಷ್ಟಪಡಿಸುವುದು ಬ್ರಿಟಿಷರ ಕರ್ತವ್ಯವಿರುವುದು, ಕಾಂಗ್ರೆಸಿನವರು ಕೇಳಿರುವಂತೆ ಯುದ್ಧ ಮುಗಿದೊಡನೆಯೇ ನಿರ್ಮಿಸಲ್ಪಡುವ ಲೋಕದ ನವವ್ಯವಸ್ಥೆಯಲ್ಲಿ, ಸ್ವತಂತ್ರ ಹಿಂದೂಸ್ಥಾನವು ಜನ್ಮಕ್ಕೆ ಬಂದು ಗಣನೀಯ ಸ್ಥಾನ ಪಡೆಯಲಿರುವುದೆಂಬ ಭರವಸೆಯನ್ನು ಬ್ರಿಟಿಷರು ಕೊಟ್ಟು ಆ ಪ್ರಕಾರ ಈಗಲೇ ನಡೆಯ ತೊಡಗುವುದರಿಂದ ಅವರ ಪರೀಕ್ಷೆಯಾಗಲಿದೆ. ಈ ಒರೆಗಲ್ಲಿಗೆ ಒರೆದು ನೋಡಿದ ಪಕ್ಷದಲ್ಲಿ ವೈಸರಾಯರಂತಹ ಬ್ರಿಟಿಷ್ ಸರಕಾರದ ಮುತ್ಸದ್ದಿಗಳ ಮಾತಿನಲ್ಲಿ ಹುರುಳಿರುವಂತೆ ತೋರುವುದಿಲ್ಲ. ಮಾತ್ರವಲ್ಲದೆ ಅವರು ತಮ್ಮ ಸಾಮ್ರಾಜ್ಯ ಸ್ವಾರ್ಥದ ಆಟವನ್ನು ಯಥಾ ಪ್ರಕಾರ ಸಾಗಿಸುತ್ತಿರುವರೆಂಬುದನ್ನು ಕಾಂಗ್ರೆಸು ಲೋಕಕ್ಕೆಲ್ಲಾ ಪ್ರಕಟಗೊಳಿಸುವಂತಾಗಿದೆ.

'ಕೆಲವು ವೇಳೆ ರಾಜಕೀಯ ಪ್ರಗತಿಯ ಕುರಿತು ಮಾತಿಗಿಂತಲೂ ಮೌನ ಲೇಸೆನಿಸುವುದು. ಇದೀಗ ಅಂತಹದೊಂದು ಸಂದರ್ಭ' ಎಂದು ವೈಸರಾಯರೇ ಅಂದಂತೆ ಹಿಂದೂದೇಶದ ಬಿಕ್ಕಟ್ಟಿನ ಕುರಿತು ಈ ಸಂದರ್ಭದಲ್ಲವರು ಪ್ರಸ್ತಾಪಿಸುವುದಕ್ಕಿಂತ ಮೌನವಾಗಿರುವುದು ವಿವೇಕವಿತ್ತು. ಅವರು ಮಾತಾಡುವುದಿಲ್ಲೆಂದರೂ ತನ್ನ ಮನೋವೃತ್ತಿಯು ಯಾವ ಮಾರ್ಗ ಹಿಡಿದು ಹೋಗುತ್ತಿದೆಯೆಂಬುದರ ದಿಗ್ದರ್ಶನವಾಗುವಷ್ಟು ಮಾತಾಡಿರುವರು. ಅದರಿಂದ ಪ್ರಕೃತದ ಬಿಕ್ಕಟ್ಟೆಂಬುದು ಅದೊಂದು ದೀರ್ಘ ರಾಹಿಲೆಯಾಗಿ ಉಳಿಯುವುದೆಂಬ ಅಭಿಪ್ರಾಯವುಂಟಾಗುವುದೇ ಹೊರತು ಈ ರೋಗದ ಶೀಘ್ರವಾದ ಪರಿಹಾರೋಪಾಯವನ್ನು ವೈಸರಾಯರಾಗಲಿ ಬ್ರಿಟಿಷ್ ಸರಕಾರವಾಗಲಿ ಹುಡುಕುತ್ತಿದೆಯೆಂದೆಣಿಸಬರುವುದಿಲ್ಲ. ವೈಸರಾಯರು ಮತ್ತೂ ಮತ್ತೂ ಹಿಂದೀಯರೊಳಗಣ ವೈಷಮ್ಯದ ಹಾಡನ್ನೇ ಹಾಡುತ್ತಿದ್ದಾರೆ. ಫೆಡರೇಶನು ಹಿಂದೆ ಹಾಕಲ್ಪಟ್ಟದಕ್ಕಾಗಿ ವಿಷಾದ ಸೂಚಿಸಿರುತ್ತಾರೆ. ಆದರೆ ಕಾಂಗ್ರೆಸಿನವರು ಸೂಚಿಸಿರುವ ಕನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಕುರಿತು ಒಟ್ಟೆಂದು ಮಾತಾಡಲಿಲ್ಲ.

ಯಾರಿಗೂ ಬೇಡವಾದ ಫೆಡರೇಶನನ್ನು ಜ್ಯಾರಿಗೆ ತರಲು ವೈಸರಾಯರು ಬಹಳ ಆತುರಗೊಂಡಿದ್ದರು. ಯುದ್ಧವುಂಟಾಗುವ ಮೊದಲು ಅದಕ್ಕಾಗಿ ಶೀಘ್ರ ಸಿದ್ಧತೆ ನಡಿಸುತ್ತಿದ್ದರು. ಆದರಿಂದಲೇ ದೇಶದಲ್ಲಿ ಐಕ್ಯವುಂಟಾಗಿ ಬ್ರಿಟಿಷ್ ಮತ್ತು ದೇಶೀಯ ಹಿಂದೂಸ್ಥಾನಗಳೊಳಗೆ ಸಹಕಾರವು ಬೆಳೆದು ಎಲ್ಲಾ ಜಾತಿ ಮತ್ತು ಪಕ್ಷಗಳು ಒಟ್ಟುಗೂಡಿ ನಡೆಯುವಂತಾಗುತ್ತಿತ್ತೆಂದೇ ವೈಸರಾಯರ ಕಲ್ಪನೆ. ಇವಕ್ಕೆ ಒಂದಿಷ್ಟಾದರೂ ಆಧಾರವಿರುವಂತೆ ತೋರುವುದಿಲ್ಲ. ಕಾಂಗ್ರೆಸಿನವರು ಮಾತ್ರವಲ್ಲದೆ ಮುಸ್ಲಿಮ್ ಲೀಗೂ ಫೆಡರೇಶನಿಗೆ ಬದ್ಧ ವಿರೋಧಿಯಾಗಿರುವುದು. ಅಂದವೇಳೆ ಅದನ್ನು ಜ್ಯಾರಿಗೆ ತಂದಲ್ಲಿ ಹಿಂದೀಯರೆಲ್ಲರೂ ಬಹುಶೀಘ ಒಕ್ಕಟ್ಟಾಗಿ ಅದನ್ನು ವಿರೋಧಿಸಲು ಚಳವಳ ಹೂಡುತ್ತಿದ್ದರೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟನಿದೆ. ಆದರೂ ವೈಸರಾಯರದನ್ನು ಜ್ಯಾರಿಗೆ ತರಲು ಹಾತೊರೆಯುತ್ತಿರುವರು. ಅದಕ್ಕೆ ಅವರಿಗೆ ಹಿಂದೀಯರ ಜಾತೀಯ ಪ್ರಶ್ನೆಯ ಇತ್ಯರ್ಥವು ಬೇಕಾಗಿಲ್ಲ ಮೊದಲಾಗಿ. ಕಾಂಗ್ರೆಸಿನ ಕೇಳಿಕೆಯನ್ನು ಪುರೈಸುವುದಕ್ಕೆ ಮಾತ್ರ ಜಾತೀಯ ಪ್ರಶ್ನೆಯು ದೊಡ್ಡ ತೊಡಕಾಗಿ ನಿಂತಿದೆ.

ದೇಶದ ಇಂದಿನ ಬಿಕ್ಕಟ್ಟು ಬೇಗನೆ ಪರಿಹರಿಸಲ್ಪಡುವ ಹಾಗಿಲ್ಲ 'ಹುಚ್ಚು ಬಿಡದೆ ಮದುವೆಯಾಗದು, ಮದುವೆಯಾಗದೆ ಹುಚ್ಚುಬಿಡದೆಂಬ' ದೇಶದ ಈಗಣ ಪರಿಸ್ಥಿತಿಯೇ ಬ್ರಿಟಿಷರಿಗೆ ಅನುಕೂಲವಾಗಿದೆ. ಹಿಂದೂ ಮುಸಲ್ಮಾನ ಪ್ರಶ್ನೆಯು ಇತ್ಯರ್ಥವಾಗುವ ಹಾಗಿಲ್ಲ. ಅದು ಇತ್ಯರ್ಥವಾಗುವನಕ ಬ್ರಿಟಿಷರು ಅದನ್ನೇ ನೆವನವಾಗಿ ಮಾಡಿಕೊಂಡು ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯುವ ಕುರಿತು ಮುಂದುವರಿಯುವಹಾಗಿಲ್ಲ. ಹಿಂದೂ ಮುಸಲ್ಮಾನ ವೈಷಮ್ಯವನ್ನು ನಿವಾರಿಸಲು ತಾನು ಸಾಧ್ಯವಾದ ಪ್ರಯತ್ನ ಮಾಡಿದೆ. ಜಯಶೀಲವಾಗಲಿಲ್ಲ. ಇನ್ನಾದರೂ ತಾನು ನಿರಾಶಾವಾದಿಯಾಗಿಲ್ಲ. ಯಾರಾದರೂ ಆ ಕುರಿತು ಪ್ರಯತ್ನ ನಡಿಸುವುದಾದರೆ ತನ್ನ ಮತ್ತು ಬ್ರಿಟಿಷ್ ಸರಕಾರದ ಸೌಹಾರ್ದವು ಅವರಿಗೆ ಸದಾ ಇದ್ದೇ ಇದೆ. ಹಿಂದೀಯರೊಳಗೆ ಬಿಕ್ಕಟ್ಟುಂಟಾಗುವ ತನಕ, ಅವರಲ್ಲಿ ಎಲ್ಲರಿಗೂ ನ್ಯಾಯದೊರೆವಂತಾಗಿ ಎಲ್ಲರೂ ಒಮ್ಮತದಿಂದ ಸಹಕರಿಸುವನಕ ಮುಂದಿನ ರಾಜಕೀಯ ಪ್ರಗತಿಯ ಕುರಿತು ಯಾವ ಕೆಲಸವನ್ನೂ ಮಾಡಲಾಗುವುದಿಲ್ಲೆಂದು ವೈಸರಾಯರು ಸ್ಪಷ್ಟವಾಗಿ ಹೇಳಿರುತ್ತಾರೆ. ಇದರಿಂದ ಕಾಂಗ್ರೆಸಿನ ಕನ್ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಸೂಚನೆಗೆ ಸರಕಾರವು ಗಮನವನ್ನೇ ಕೊಡುವಹಾಗಿಲ್ಲೆಂಬುದು ಸಿದ್ಧವಾಗುವುದು. ಇದು ಹೊರತು, ಡೊಮಿನಿಯನ್ ಸ್ಟೇಟಸು ಕೂಡಾ ದೂರದ ಗುರಿಯಲ್ಲದೆ ಶೀಘ್ರವಾದ ಮುಂದಿನ ಹೆಜ್ಜೆಯಲ್ಲೆಂಬುದು ಕೂಡಾ ವೈಸರಾಯರ ಭಾಷಣದಿಂದ ವಿದಿತವಾಗುತ್ತದೆ. ಫೆಡರೇಶನು ಡೊಮಿನಿಯನ್ ಸ್ಟೇಟಸಿಗೆ ಮೊದಲಿನ ಹೆಜ್ಜೆಯಾಗುತ್ತಿತ್ತು. ಒಮ್ಮೆಯೇ ಡೊಮಿನಿಯನ್ ಸ್ಟೇಟಸನ್ನು ಸ್ಥಾಪಿಸಿಬಿಡಲು ಸಾಧ್ಯವಿಲ್ಲೆಂದವರು ಸೂಚಿಸಿರುವರು. ಅಂದಮೇಲೆ ಕಾಂಗ್ರೆಸಿಗೂ ಸರಕಾರಕ್ಕೂ ರಾಜಿಯಾಗುವ ಆಶೆಯು ಬರಿಯ 'ಭ್ರಾಂತಿಯೆಂದೇ ಹೇಳಬೇಕಾಗುತ್ತದೆ.

ಕಾಂಗ್ರೆಸನ್ನು ವಿರೋಧಿಸುವುದೊಂದೇ ಉದ್ದೇಶವಾಗಿರುವಂತಿರುವ ಮುಸ್ಲಿಮ್ ಲೀಗಿನ ಬೆನ್ನು ತಟ್ಟುವ ಮಾತುಗಳು ವೈಸರಾಯರ ಭಾಷಣದಲ್ಲಿ ಬೇಕಾದಷ್ಟಿದೆ. ಇಂಡಿಯಾ ಆಕ್ಟಿನ ಪ್ರಾಂತಿಕ ಸ್ವಾತಂತ್ರ್ಯದ ಭಾಗವು ತೃಪ್ತಿಕರವಾಗಿ ಜ್ಯಾರಿಗೆ ಬಂದಿದೆಯೆಂದು ವೈಸರಾಯರು ಸೂಚಿಸುವಾಗ ಕಾಂಗ್ರೆಸ್ ಮಂತ್ರಿಗಳ ಆಡಳಿತವನ್ನು ಪ್ರಶಂಸಿಸಿ ಒಂದು ಮಾತನ್ನು ಕೂಡಾ ಹೇಳಿರುವುದಿಲ್ಲ. ಆದರೆ ಪಂಜಾಬು ಮತ್ತು ಬಂಗಾಳದ ಮಂತ್ರಿಮಂಡಲವನ್ನು ಬಹಳವಾಗಿ ಪ್ರಶಂಸಿಸಿರುತ್ತಾರೆ. ಮಾತ್ರವಲ್ಲದೆ ಇನ್ನೂ ಎಸೆಂಬ್ಲಿಯನ್ನು ರಿದಿಸದ ಅಸ್ಸಾಮಿನಲ್ಲಿ ಸ್ಥಾಪಿತವಾಗಿರುವ ಅಲ್ಪಸಂಖ್ಯಾಕ ಮಂತ್ರಿಮಂಡಲದ ಕುರಿತು ಸಂತೋಷ ಸೂಚಿಸಿರುತ್ತಾರೆ.

ಕಾಂಗ್ರೆಸ್ ಮಂತ್ರಿಗಳಿಂದ ಮುಸಲ್ಮಾನರಿಗೆ ಭಾರಿ ಅನ್ಯಾಯವಾಗಿದೆ. ಅವರ ಮೇಲೆ ಅತ್ಯಾಚಾರ ನಡೆದಿದೆ. ಅವರ ಹಕ್ಕು ಬಾಧ್ಯತೆಗಳು ಇಚ್ಛಾನುಸಾರ ತುಳಿಯಲ್ಪಟ್ಟಿವೆಯೆಂಬ ಅರ್ಥರಹಿತ ಸುಳ್ಳು ಕೂಗನ್ನು ಮಿ. ಜಿನ್ನರೆಬ್ಬಿಸಿ ದೇಶದ ವಾತಾವರಣವನ್ನೇ ಕೆಡಿಸಿ ಬಿಟ್ಟಿರುವಾಗ, ಬಂಗಾಲ ಮತ್ತು ಪಂಜಾಬಿನ ಮಂತ್ರಿಮಂಡಲಗಳನ್ನು ಬಹಳವಾಗಿ ಹೊಗಳಲು ಮುಂದಾದ ವೈಸರಾಯರು ಕಾಂಗ್ರೆಸ್ ಮಂತ್ರಿಗಳ ಆಡಳಿತ ವಿಷಯದಲ್ಲಿ ಒಂದೇ ಒಂದು ಮಾತನ್ನಾದರೂ ಆಡದಿರುವ ಉದ್ದೇಶವು ಸ್ಪಷ್ಟವೇ ಇದೆ. ಅಂದಮೇಲೆ, ದೇಶದ ಈಗಣ ವಿಷಮ ಪರಿಸ್ಥಿತಿ ಮತ್ತು ಗವರ್ನರರ ವಿಶೇಷಾಧಿಕಾರ ಚಾಲನೆಯು ಕೊನೆಗೊಂಡು ಮೊದಲಿನಂತೆಯೇ ಪ್ರಜಾ ಜವಾಬ್ದಾರಿ ಮಂತ್ರಿಮಂಡಲವು ಸ್ಥಾಪಿತವಾಗುವಂತೆ ತಾನು ಪ್ರಯತ್ನಿಸುವೆನೆಂಬ ವೈಸರಾಯರ ಆಶ್ವಾಸನೆಯು ಎಷ್ಟೊಂದು ಯಥಾರ್ಥವಾದುದೆಂದು ಹೇಳಬರುವುದಿಲ್ಲ. ಮತ್ತು ವಿದ್ಯಮಾನಗಳು ಇದೇ ರೀತಿ ನಡೆದಲ್ಲಿ ಬ್ರಿಟಿಷ್ ಸರಕಾರಕ್ಕೂ ಕಾಂಗ್ರೆಸಿಗೂ ಘರ್ಷಣವು ತಪ್ಪಿದ್ದಲ್ಲೆಂಬುದು ಸ್ಪಷ್ಟವೇ ಇದೆ. ಅದನ್ನು ಆದಷ್ಟು ಮುಂದೆ ಹಾಕುವುದರಲ್ಲಿ ವೈಸರಾಯರು ಜಯಶೀಲರಾಗಬಹುದು. ಆದರೆ ಅದನ್ನು ತಪ್ಪಿಸಲು ಅವರಿಂದ ಸಾಧ್ಯವಾಗುವುದೆಂದು ಹೇಳಬರುವುದಿಲ್ಲ. ಒಳಗೊಳಗೆ ಹೊಗೆಯಾಡುತ್ತಿರುವ ಅದು ಥಕ್ಕನೆ ಒಮ್ಮೆಯೇ ಸ್ಫೋಟವಾದರೆ ನಾವು ಆಶ್ಚರ್ಯ ಪಡುವಹಾಗಿಲ್ಲ.

ಶ್ರೀ. ಹೊಸಕೊಪ್ಪ ಕೃಷ್ಣರಾಯರ ನಿಧನ.

ಉಜ್ವಲ ಕಾಂಗ್ರೆಸ್ ಅಭಿಮಾನಿಗಳೂ ಜನಸೇವಾ ತತ್ಪರರೂ ಮೈಸೂರಿನ ಗಣನೀಯ ರಾಜಕೀಯ ಮುಖಂಡರೂ ಆಗಿದ್ದ ಶ್ರೀ. ಹೊಸಕೊಪ್ಪ ಕೃಷ್ಣರಾಯರು ದೀರ್ಘ ಸಮಯದಿಂದ ರೋಗಪೀಡಿತರಾಗಿದ್ದು ಇದೇ ಕಳೆದ ತಾ. 13ನೇ ಬುಧವಾರ ರಾತ್ರಿ ಉಡುಪಿಯಲ್ಲಿ ಮೃತರಾಗಿರುವುದು ವಿಷಾದಕರವಿದೆ. ಶ್ರೀ. ಪಲಿಮಾರು ಮಠದ ಶ್ರೀಪಾದಂಗಳವರ ಸಹಾಯದಿಂದ ಇವರ ಶವ ಸಂಸ್ಕಾರ ಕೂಡಾ ಅದೇ ರಾತ್ರಿ ಉಡುಪಿಯಲ್ಲಿ ನಡೆಯಿತು. ಶ್ರೀ. ಹೊಸಕೊಪ್ಪ ಕೃಷ್ಣರಾಯರವರು ಒಂದು ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ರಾಜಕೀಯದಲ್ಲಿಯೂ ಪ್ರಮುಖ ಭಾಗ ವಹಿಸಿದ್ದರು. ಖಾದಿ ಭಕ್ತರಾಗಿದ್ದರು. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಜನಹಿತ ಸಾಧನೆಬಗ್ಗೆ ಹೆಚ್ಚಿನ ಕೆಲಸಮಾಡಿ ಜನಪ್ರಿಯರಾಗಿದ್ದರು. ಮೃತರ ಬಂಧುಬಳಗದವರ ತೀವ್ರ ಶೋಕದಲ್ಲಿ ನಾವು ಸಹಭಾಗಿಗಳಾಗಿದ್ದೇವೆ.

ಸರ್ವಾಂಗ ಭದ್ರತೆಯ ಹಾಗೂ ಅಭಿವೃದ್ಧಿಯ ಮೇಲ್ಮೆಯಲ್ಲಿರುವ ಜೀವ ವಿಮಾ ಸಂಘೆಯಾವುದೆಂದು ಸರ್ವದಾ ಚಿಂತಿಸುತ್ತಿರುವ ಜೀವವಿಮಾದಾರರಿಗೂ ಪ್ರಾತಿನಿಧ್ಯ ಪಡೆಯಲಪೇಕ್ಷಿಸುವ ಗೃಹಸ್ಥ ಗೃಹಿಣಿಯರಿಗೂ ಕ್ಷಿಪ್ರದಲ್ಲೇ ಇಷ್ಟಾರ್ಥ ಸಿದ್ಧಿಯಾಗಬೇಕೆಂದಿದ್ದರೆ ಕೂಡಲೇ ನಮ್ಮೊಡನೆ ವಿಚಾರಿಸಿರಿ:—

ದಿ ನ್ಯೂ ಗಾ...
ಲೈಫ್ ಇನ್ಶ್ಯೂರೆನ್ಸ್ ಕೊ.

್ ವರ್ಕಿಂಗ್ ಕಮಿಟಿಯ ಮಹತ್ವದ ಸಭೆ

್ ಯುದ್ಧ ಹಡಗವು ತಾನೆ ಸುಟ್ಟು ಮುಳುಗಿತು.

ನಿಯರು
ಅಮೆರಿಕದ
ಹೋಗಿ ಭಾರ
ರಿಂದ ಸ್ವಾಗ
ಪತ್ರಿಕಾಸ್ರ
ದೇಶದ ಪರಿ
ಶ್ರೀಮತಿ
ಳವು ಸತ್ಕಾರ
ಅನೇಕ ಸಂಸ್ಥೆ
ವಣಕೊಡಲು
ಎಂಬ ಪತ್ರಿ
ರಿಚಾರ್ಡ್
ಸತ್ಕಾರ
ಕಮಲಾ
ನ್ಯೂಯೋ
ಹೋಲಿನಲ್ಲಿ
ದು ದೊಡ್ಡ
ನವಂಬರ
ಂಡಿಯಾ
ನ್ನು ಸನ್ಮಾನಿ
ಲ್ಲು ಶ್ರೀಮ
ರೋಸ್‌ವೆಲ್ಟರ
ಮಾಡಿದರು.
ಸಿಯೇಶನಿನ
ಮುಸಲ್ಮಾನ
ಸುವರನ್ನು
ರು, ಹಂ
ಕೋಲೇಜ್,
ಸಾಂಪ್ರ ಕೋ
ಟ್ ಆಫ್
ನ್ ಇನ್‌ಸ್ಟಿ
ಕ್ಲೇರ್ ಲೀಗ್
ಸಂಸ್ಥೆಗಳವ
ವಣಕೊಡಲು
ಸುವರು ಈ
ಲ್ಲಿ ಹಿಂದೀ
ಸ್ಥಿತಿಯನ್ನು
ಸಂದನೀಯ

ಗೊಂಡು

ಖ್ಯಾತ ಜರ್ಮ
ಫ್‌ಸ್ಪೀಯು
ನ್ನು ನಾವ
ಜರ್ಮನ್
ಸಿಡಿಮದ್ದಿ

ಇಂಡಿಯಾ
ಮದ್ರಾಸು.
ಬ್ರಾಂಚ್.

ಟ್ಟು ತನ್ನನ್ನು ತಾನೇ ಸ್ಫೋಟಗೊಳಿಸಿ ಉರಿದು ಮುಳುಗಿ ಸ್ವಘಾತ ಮಾಡಿಕೊಂಡಿರುವುದು. ಗ್ರಾಫ್ ಸ್ಪೀಯು ಮೊಂಟವಿಡಿಯೋ ಬಂದರು ಬಿಟ್ಟು ಹೋಗುವ ಸಮಯ ಬಂದಾಗ ಅದೇನು ಮಾಡುವುದೆಂದು ನೋಡಲು ಸಾವಿರಾರು ಮಂದಿ ನೆರೆದಿದ್ದರು ಗ್ರಾಫ್ ಸ್ಪೀಯು ಮೊಂಟವಿಡಿಯೋ ಬಂದರಿನ ಆಳಿವೆ ದಾಟಿದ ಮೇಲೆ ತನ್ನ ವೇಗವನ್ನು ಹೆಚ್ಚಿಸಿ ದಕ್ಷಿಣಕ್ಕೆ ಸರಿಯಿತು. ಆ ಮೇಲೆ ಅದು ನಿಂತು ಅದರಲ್ಲಿ ಬೆಂಕಿಯೆದ್ದು ಸಮುದ್ರ ಭಾಗವೆಲ್ಲಾ ಪ್ರಜ್ವಲಿತವಾಯಿತು ಆಗಾಗ ದೊಡ್ಡ ಸ್ಫೋಟಗಳು ಕೇಳಬಂದುವು. ಆರಂಭದ ಸ್ಫೋಟಗಳಾಗಿ 3 ಮಿನಿಟುಗಳ ವರೆಗೆ ಗ್ರಾಫ್ ಸ್ಪೀ ಯುದ್ಧ ಹಡಗವು ನೀರಮೇಲಿತ್ತು. ಆಮೇಲೆ ಹೊಗೆಯ ಕಾರ್ಮೋಡವನ್ನೆಬ್ಬಿಸಿ ಮುಳುಗಿ ಹೋಯಿತು. ಗ್ರಾಫ್ ಸ್ಪೀಯ ಕಮಾಂಡರರಾದ ಕೆಪ್ಟನ್ ಲೆಂಗ್ಸ್ ಡರ್ಫರು ತಾನೇನು ಮಾಡಬೇಕೆಂದು ಹಿಟ್ಲರರೊಡನೆ ಟೆಲಿಫೋನು ಮೂಲಕ ಕೇಳಿದಾಗ 'ನೀವೇ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲವರು, ನಿಮ್ಮಿಚ್ಛೆಯಂತೆ ಮಾಡಬಹುದೆಂದು ಅವರು ತಿಳಿಸಿದರೆಂದೂ, ಆಗ ಕೆಪ್ಟನರು ಹಡಗವನ್ನು ಸ್ಫೋಟಗೊಳಿಸುವ ನಿರ್ಧಾರ ಮಾಡಿದರೆಂದೂ ತಿಳಿದು ಬಂದಿದೆ.

72 ಘಂಟೆಗಳಲ್ಲಿ ತನ್ನ ಹಡಗವನ್ನು ಹೋರಾಟಕ್ಕಿಂತಿರಲಿ, ಸರಿಯಾಗಿ ಚಾಲು ಮಾಡುವಷ್ಟರ ರಿಪೇರಿ ಕೂಡಾ ಮಾಡಲು ಸಾಧ್ಯವಿಲ್ಲ. ಇಷ್ಟೊಂದು ಅಲ್ಪ ಸಮಯ ಕೊಟ್ಟದು ದೊಡ್ಡ ಅನ್ಯಾಯ. ಇಂತಹ ಅನ್ಯಾಯದ ನಿಷೇಧಾರ್ಥವಾಗಿ ಹಡಗವನ್ನು ಮೊಂಟವಿಡಿಯೋ ಬಂದರದ ಬಳಿಯೇ ಮುಳುಗಿಸಬೇಕಾಗಿದೆಯೆಂದು ಉರುಗುವೆ ಸರಕಾರವನ್ನು ದೂರಿ ಕೆಪ್ಟನ್ ಲೆಂಗ್ಸ್ ಡರ್ಫರು ಅಲ್ಲಿರುವ ಜರ್ಮನ್ ಮಂತ್ರಿಗಳಿಗೆ ಪತ್ರ ಬರೆದಿರುವರು.

ಈ ಜಲಯುದ್ಧದಲ್ಲಿ 36 ಮಂದಿ ಜರ್ಮನರು ಕೊಲ್ಲಲ್ಪಟ್ಟಿರುವರು. 58 ಮಂದಿ ಗಾಯಗೊಂಡಿರುವರು, ಇಂಗ್ಲೆಂಡಿನ ಎಕ್ಸಿಟರ್ ಹಡಗದ 5 ಮಂದಿ ನೌಕಾಧಿಕಾರಿಗಳು ಕೊಲ್ಲಲ್ಪಟ್ಟು 3 ಮಂದಿ ಗಾಯಗೊಂಡಿರುವರು, 55 ಮಂದಿ ಸಾಮಾನ್ಯ ನಾವಿಕರು ಕೊಲ್ಲಲ್ಪಟ್ಟು 30 ಮಂದಿ ಗಾಯಗೊಂಡಿರುವರು. ಲೆಫ್ಟಿನೆಂಟ್ ಕಮಾಂಡರ್ ಬೊಮನರೆಂಬವರು ಕೊಲ್ಲಲ್ಪಟ್ಟವರಲ್ಲೊಬ್ಬರು. ಅಜಕ್ಸ್ ಯುದ್ಧ ಹಡಗದಲ್ಲಿ 7 ಮಂದಿ ನಾವಿಕರು ಕೊಲ್ಲಲ್ಪಟ್ಟು 5 ಮಂದಿ ಗಾಯಗೊಂಡಿರುವರು.

ಗ್ರಾಫ್‌ಸ್ಪೀಯು 1936ರಲ್ಲಿ ಜರ್ಮನಿಯು ತಯಾರಿಸಿದ 10,000 ಟನ್ನು ತೂಕದ 3 ನೂತನ ಪೋಕೆಟ್ ಯುದ್ಧ ಹಡಗಗಳಲ್ಲೊಂದು. ಇದರಲ್ಲಿ 11 ಇಂಚು ವ್ಯಾಸದ 6 ತುಪಾಕಿಗಳಿದ್ದುವು. 33,000 ಗಜ ದೂರದಿಂದ 670 ಸೇರ್ ಗುಂಡು ಹಾರಿಸಬಲ್ಲುದಾಗಿತ್ತು. ಇದು ಹೊರತು ಇತರ ಚಿಕ್ಕ ತೋಪುಗಳೂ, ಯುದ್ಧ ವಿಮಾನಗಳೂ ಇದರಲ್ಲಿದ್ದುವು.

ಕೆಪ್ಟನ್ ಲೆಂಗ್ಸ್ ಡರ್ಫರು ಮತ್ತು ಇತರ ಅಧಿಕಾರಿಗಳು ಲೋಂಚೊಂದರಲ್ಲಿ ನಿಂತು ಹಡಗವನ್ನೊಂದಿಸಿ, ಇಲೆಕ್ಟ್ರಿಕ್ ಗುಬ್ಬಿಯೊಂದನ್ನೊತ್ತಿ ಹಡಗವನ್ನು ಸ್ಫೋಟಗೊಳಿಸಿದರು. ಈ ಗುಂಡಿಯಿಂದ ಸರಿಗೆಯೊಂದು ಹಡಗದಡಿಯ ಜಲಕೋಟೆಗೆ ಜೋಡಿಸಲ್ಪಟ್ಟಿತ್ತು. 10 ನಿಮಿಷಗಳಲ್ಲಿ ಹಡಗದಲ್ಲೆಲ್ಲಾ ಬೆಂಕಿ ಜ್ವಾಲೆ ಎದ್ದಿತು. 80 ನಿಮಿಷಗಳ ವರೆಗೆ ಇಡೀ ಹಡಗ ಉರಿಯಿತು. ಗ್ರಾಫ್‌ಸ್ಪೀಯ ನಾವಿಕರೂ ಅಧಿಕಾರಿಗಳೂ ಲೋಂಚುಗಳ ಮೂಲಕ ಬ್ಯೂನೊಸ್ ಏರಿಸಿಗೆ ಹೋಗಿರುವರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು

ಇದೇ ತಾ. 18ನೇ ಅಪರಾಹ್ಣ ವಾರ್ಧದಲ್ಲಿ ಆರಂಭವಾಯಿತು. ಕಾಂಗ್ರೆಸ್ ಕಮಿಟಿ ಮೆಂಬರರಲ್ಲದೆ ಮಹಾತ್ಮಾ ಗಾಂಧಿಯವರು ಮತ್ತು ಶ್ರೀ. ರಾಜಗೋಪಾಲಾಚಾರ್ಯರು ಹಾಜರಿದ್ದರು, ಖಾನ್ ಅಬ್ದುಲ್ ಗಫರ್ ಖಾನ್ ಮತ್ತು ಸೇಟ್ ಜಮುನಾಲಾಲ್ ಬಜಜರ ಹೊರತು ಇತರ ವರ್ಕಿಂಗ್ ಕಮಿಟಿ ಮೆಂಬರರೆಲ್ಲಾ ಹಾಜರಿದ್ದರು. ಗಾಂಧಿಜಿಯವರು ಕಳೆದ ಸ್ವಲ್ಪ ದಿನಗಳಿಂದ ಗಂಭೀರ ವಿಚಾರಮಗ್ನರಾಗಿದ್ದು ಮಾತಾಡುವುದನ್ನು ಸ್ವಲ್ಪ ಕಡಿಮೆಮಾಡಿರುತ್ತಾರೆ. ಅವರು ವರ್ಕಿಂಗ್ ಕಮಿಟಿಯ ಚರ್ಚೆಗಳಲ್ಲಿ ಪ್ರಮುಖ ಭಾಗವಹಿಸಲಿರುವರೆಂದು ತಿಳಿದುಬರುತ್ತದೆ. ಮಿ. ಜಿನ್ನರು ಮುಸಲ್ಮಾನ ವಿಮೋಚನಾ ದಿನಾಚರಣೆಗಾಗಿ ಮಾಡಿಕೊಂಡಿರುವ ವಿನಂತಿ, ಮುಸಲ್ಮಾನರಿಗೆ ಕಾಂಗ್ರೆಸ್ ಮಂತ್ರಿಗಳು ಮಾಡಿರುವ ಅನ್ಯಾಯಗಳ ಕುರಿತು ವಿಚಾರಿಸಲು ರೋಯಲ್ ಕಮಿಶನನ್ನು ನೇಮಿಸಬೇಕೆಂದು ಮಾಡಿದ ಸೂಚನೆ, ಮಿ. ಜಿನ್ನರೊಡನೆ ಪಂಡಿತ ನೆಹರೂಗಳು ನಡೆಸಬೇಕಾಗಿದ್ದ ಮಾತುಕತೆಯನ್ನು ನಿಲ್ಲಿಸಿದ ವಿಷಯಗಳನ್ನು ಪ್ರಾಮುಖ್ಯವಾಗಿ ವಿಚಾರಿಸಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಿಶ್ಚಿತ ಧೋರಣೆಯನ್ನು ಕೈಕೊಳ್ಳಲಿರುವರೆಂದು ನಂಬಲಾಗಿದೆ, ಮಿ. ಜಿನ್ನರೊಡನೆ ರಾಜಿ ಪ್ರಸ್ತಾವ ನಡಿಸುವುದು ಅನುಚಿತವೆಂದು ಎಲ್ಲರೂ ಅಭಿಪ್ರಾಯಪಟ್ಟವರಿದ್ದಾರೆ. ಜಾತೀಯ ಮತ್ತು ಇತರ ಅಲ್ಪಸಂಖ್ಯಾಕ ಪ್ರಶ್ನೆಯ ಸಂಬಂಧವಾಗಿಯೂ ಕಾಂಗ್ರೆಸಿನ ಧೋರಣೆಯನ್ನು ವರ್ಕಿಂಗ್ ಕಮಿಟಿಯವರು ಸ್ಪಷ್ಟೀಕರಿಸಿ ಹೇಳಿಕೆ ಹೊರಡಿಸಲಿರುವರೆಂದು ನಂಬಲಾಗಿದೆ. ಕಾಂಗ್ರೆಸ್ ಮಂತ್ರಿಗಳ ಮೇಲೆ ಮಿ. ಜಿನ್ನರ ಆರೋಪಗಳ ಕುರಿತು ನಿಷ್ಪಕ್ಷಪಾತ ವಿಚಾರಣಾ ಕಮಿಟಿಯೊಂದರ ವಿಚಾರಣೆಯ ಸೂಚನೆಯನ್ನು ಸ್ಪಷ್ಟವಾಗಿ ಮಾಡಲ್ಪಡುವುದು. ಇಲ್ಲವೆ ಮಿ. ಜಿನ್ನರು ಮಾಡಿರುವ ಆರೋಪಗಳೇನೆಂದು ವೈಸರಾಯರಿಂದ ತಿಳಿದುಕೊಳ್ಳುವ ಪ್ರಯತ್ನ ನಡಿಸಲಾಗುವುದೆಂದು ತಿಳಿದು ಬಂದಿದೆ. ಮಿ. ಜಿನ್ನರೊಡನೆ ಇನ್ನು ಮುಂದೆ ಕಾಂಗ್ರೆಸು ತಾನಾಗಿ ಮಾತುಕತೆ ನಡಿಸಲು ಮುಂದೆ ಹೋಗುವಹಾಗಿಲ್ಲ ಆದರೆ ಅದು ರಾಜಿಯ ದ್ವಾರವನ್ನು ಮುಚ್ಚಿ ಬಿಡುವಹಾಗಿಲ್ಲ.

ದೇಶದ ರಾಜಕೀಯ ಪರಿಸ್ಥಿತಿ, ಲೋರ್ಡ್ ಜೆಟ್ಲೆಂಡರ ಮತ್ತು ವೈಸರಾಯರ ಕಲ್ಕತ್ತದ ಭಾಷಣಗಳನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಪರಿಶೀಲಿಸಲಿರುವರು. ಆದರೆ ಆ ಕುರಿತು ನಿಶ್ಚಿತ ನಿರ್ಣಯವನ್ನೇನೂ ಈ ಸಲ ಮಾಡುವ ಸಂಭವ ತೋರುವುದಿಲ್ಲ. ಇದೇ ತಾ 19ರಲ್ಲು ಸರ್. ಸ್ಟಾಫೋರ್ಡ್ ಕ್ರಿಪ್ಸರು ವಾರ್ಧಕ್ಕೆ ಹೋಗಿ ಮಹಾತ್ಮಾ ಗಾಂಧಿ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರೊಡನೆ ಮಾತಾಡಲಿರುವರು.

ಚೀನೀಯರ ವಿಜಯ

ಮಧ್ಯ ಚೈನದಲ್ಲಿ ಹುಪೇ ಪಟ್ಟಣದ ದಕ್ಷಿಣದಲ್ಲಿ ಚೀನೀಯರು ಜಾಪಾನರ ಮೇಲೇರಿ ಹೋಗಿ ತೀವ್ರ ಹೋರಾಟ ನಡೆದು ಹಲವು ಸಹಸ್ರ ಮುಸಲ್ಮಾನರು ಕೊಲ್ಲಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಜರ್ಮನ್ ಯುದ್ಧ ಹಡಗ ಮುಳುಗಿಸಲ್ಪಟ್ಟಿತು

ಉರ್ಸೂಲ ಎಂಬ ಬ್ರಿಟಿಷ್ ಸಬ್‌ಮೆರೀನ್, ಕೊಯಿಲ್ನ್ ಎಂಬ ದೊಡ್ಡದಾದೊಂದು ಜರ್ಮನ್ ಯುದ್ಧ ಹಡಗವನ್ನು ಮುಳುಗಿಸಿರುವುದೆಂದು ಬ್ರಿಟಿಷ್ ನೌಕಾಖಾತೆಯು ಪ್ರಕಟಿಸಿರುವುದು. ಈ ಜರ್ಮನ್ ಹಡಗದ ತೂಕ 6000 ಟನ್ನು.

ಕಿವುಡರೂ ಸಂಪೂರ್ಣವಾಗಿ ಕೇಳಬಹುದು.

ಬದಿರತಾ ಹರಣ

ವಿಜ್ಞಾನದ ನವೀನ ಮತ್ತು ವಿಚಿತ್ರ ಶೋಧ

ಕಿವಿಸೋರುವುದು, ನೋವು, ಉರಿಯುವುದು, ಶಬ್ದ ಕೇಳುವುದು, ತುರಿಸುವುದು, ಕೀವು ಅಥವಾ ಮೊರಡೆಗಳು, ಕರ್ಣರೋಗದ ದೋಷ, ಶೀತ ಅಥವಾ ಜ್ವರದ ನಿಮಿತ್ತ ಕ್ವಿನೀನು ತೆಗೆದುಕೊಂಡ ಪರಿಣಾಮವಾಗಿ ಉಂಟಾದ ಅರ್ಧ ಯಾ ಸಂಪೂರ್ಣ ಕಿವುಡತನವೇ ಮೊದಲಾದ ಎಂತಹ ಕರ್ಣರೋಗವಾಗಲಿ, ಅತ್ಯಂತ ಕಠಿಣ ಕಿವುಡುತನವಾಗಲಿ ನಮ್ಮ ವಿಚಿತ್ರ 'ಬದಿರತಾಹರಣ' ಎಣ್ಣೆಯನ್ನು ಉಪಯೋಗಿಸುವುದರಿಂದ ಖಾತ್ರಿಗುಣವಾಗುವುದು. ಈ ಸಿದ್ಧೌಷಧಿಯಿಂದ ನೂರಾರು ಮಂದಿ ಕಿವುಡರು ಚೆನ್ನಾಗಿ ಶ್ರವಣಶಕ್ತಿಯನ್ನು ಪಡೆದಿರುತ್ತಾರೆ, ಫಲಕಾರಿಯಾಗದಿದ್ದರೆ ಬೆಲೆಯನ್ನು ವಾಪಸು ಕೊಡಲಾಗುವುದು.
ಬಾಟ್ಲಿ 1ರ ಬೆಲೆ ರೂ. 2, 3 ಬಾಟ್ಲಿಗಳಿಗೆ ರೂ. 5, ಟಪ್ಪಾಲು ಖರ್ಚು ಪ್ರತ್ಯೇಕ.

ವಿಳಾಸ:—ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರ ಹಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ

ಇವುಗಳಿಂದ ಕೀರ್ತಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಸರ್, ಕೆ. ಆರ್. ಕೆ. ಕೇಟ್ ಬಿಲ್ಡಿಂಗ್, ಮಿಶನ್ ಹೈಸ್ಕೂಲ್ ರೋಡು, ಮಂಗಳೂರು,

ಅಥವಾ

ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
R. I. A. No. 1999/39
O. S. No. [illegible]

ಕೆ. ಪದ್ಮನಾಭ ಹೆಬ್ಬಾರ್. —ಅರ್ಜಿದಾರ,

ಪ್ರತಿವಾದಿಗಳು—1. ಸುಬ್ಬಣ್ಣ ಹೆಬ್ಬಾರ, 2. ಶ್ರೀನಿವಾಸ ಹೆಬ್ಬಾರ, 3. ಸರ್ವೋತ್ತಮ ಹೆಬ್ಬಾರ, 4. ಕೃಷ್ಣ ಹೆಬ್ಬಾರ. —ಎದ್ರಿಗಳು,

1ನೇ ಎದ್ರಿ, ಸುಬ್ಬಣ್ಣ ಹೆಬ್ಬಾರ, 3ನೇ ಎದ್ರಿ ಸರ್ವೋತ್ತಮ ಹೆಬ್ಬಾರ, ದಿವಂಗತ ನಾರ್ಣ ಹೆಬ್ಬಾರರ ಮಕ್ಕಳು, ಉಡುಪಿ ತಾಲೂಕು ಮಣೂರು ಗ್ರಾಮ, ಎದ್ರಿಗಳು,

ಸದ್ರಿ 1, 3ನೇ ಎದ್ರಿಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಮೇಲ್ಕಂಡ ಕ್ರಮ ನಂಬ್ರ 444/38ನೇ ಪ್ರಿಲಿಮಿನರಿ ಡಿಕ್ರಿಯ ವಿಧಿಯಂತೆ ಎದ್ರಿಗಳು ಎಷ್ಟನ್ನಾದರೂ ಹಣವು ವಸೂಲು ಕೊಡದೆ ಇರುವುದರಿಂದ ಸದ್ರಿ ಡಿಕ್ರಿಯನ್ನು ಸ್ಥಿರಪಡಿಸಿ ಆದರಂತಲೇ ಫೈನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ದಾಖಲುಮಾಡಿದ ಅರ್ಜಿಯು ತಾರೀಖು 21-12-39ಕ್ಕೆ ಕಡ್ಡಿಗೆ ಇಟ್ಟಿರುವದರಿಂದ ಆ ಕುರಿತು ನಿಮ್ಮಗಳ ಆಕ್ಷೇಪಣೆಗಳೇನಾದರೂ ಇದ್ದರೆ ಅದನ್ನು ತಾ. 21-12-39ನೇ ದಿನ್ನ ಹಗಲು ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

ತಾ 5-12-39, ಕುಂದಾಪುರ. } K. Padmanabha Hebbar, ಅರ್ಜಿದಾರ.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 18-12-39

ಎಡಿಶನಲ್ ಸಬ್ ಕೋರ್ಟಿಗೆ ಜೀವದಾನ—ಇದೇ 12-12-39ರಿಂದ 1940 ನೇ ಇಸವಿ ಕೋರ್ಟು ರಜೆಗೆ ಮುಚ್ಚುವ ವರೆಗೆ ಮಂಗಳೂರಿನ ಎಡಿಶನಲ್ ಸಬ್ ಕೋರ್ಟಿಗೆ ಜೀವದಾನ ದೊರಕಿರುತ್ತದೆ. ಆದರೆ ಕಾರ್ಕಳದ ಎಡಿಶನಲ್ ಮುನ್ಸಿಫ್ ಕೋರ್ಟು ಇದೇ ತಾ 12-12-39ರಿಂದ ಮುಚ್ಚಲ್ಪಡುವುದು.

ವಿದ್ಯಾರ್ಥಿಗಳ ಸಮ್ಮೇಳನ—ಜಿಲ್ಲಾ ವಿದ್ಯಾರ್ಥಿಗಳ ಸಮ್ಮೇಳನವು ಜನವರಿ ತಿಂಗಳ ಕೊನೆಯ ವಾರದಲ್ಲಿ ಜರಗಿಸಬೇಕೆಂಬ ಅಭಿಪ್ರಾಯವಿರುವುದಾಗಿಯೂ, ಮುಂಬಯಿಯ ಪ್ರಸಿದ್ಧ ದೇಶಭಕ್ತರಾದ ವೀರ ನರಿಮೋನರು ಅಧ್ಯಕ್ಷಸ್ಥಾನವನ್ನಲಂಕರಿಸಲು ಪ್ರಾರ್ಥಿಸಲ್ಪಡುವರಾಗಿಯೂ ವಿಶ್ವಸನೀಯ ವಾರ್ತೆಯಿದೆ.

ಹೊಸ ಅಧಿಕಾರಿಗಳು—ಸಬ್ ಜಡ್ಜರ ಕೋರ್ಟಿನ ಶಿರಸ್ತೇದಾರರಾಗಿದ್ದ ಶ್ರೀ ಎನ್. ಸುಬ್ಬರಾಯರು ನಿವೃತ್ತರಾದರಷ್ಟೆ. ಅವರ ಸ್ಥಾನಕ್ಕೆ ಸೆಂಟ್ರಲ್ ನಾಜರರಾಗಿದ್ದ ಮಿ| ಪಿ. ಎಫ್. ರೇಗೋರವರು ನೇಮಕ ಹೊಂದಿರುವರು. ಮಿ| ಪಿ. ಎಫ್. ರೇಗೋರವರ ಸ್ಥಾನದಲ್ಲಿ ಕೋಪಿಯಿಸ್ಟ್ ಸುಪರಿಟೆಂಡೆಂಟರಾದ ಶ್ರೀ| ಯಂ. ಚನ್ನಯ್ಯನವರು ನೇಮಕ ಹೊಂದಿರುವರು.

ಆಗಮನ—ಹಿಂದೆ ಮಂಗಳೂರಲ್ಲಿ ಜಿಲ್ಲಾ ಮತ್ತು ಸೆಶ್ಶನ್ಸ ಜಡ್ಜರಾಗಿದ್ದ ಶ್ರೀ| ಎನ್. ಚಂದ್ರಶೇಖರ ಅಯ್ಯರ್‌ರವರು ತಮ್ಮ ಕುಟುಂಬ ಸಮೇತವಾಗಿ ಕಳೆದ ತಾ. 15ನೇ ಸಾಯಂಕಾಲ ಮಂಗಳೂರಿಗೆ ಚಿತ್ತೈಸಿದರು. ಅವರು ನಮ್ಮ ಜಿಲ್ಲೆಯಲ್ಲಿರುವ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಲಿರುವರೆಂದು ತಿಳಿದು ಬರುತ್ತದೆ.

ಬೀಡಿ ಕೆಲಸಗಾರರ ಮುಷ್ಕರದ ಪರಿಣಾಮ—ಕಳೆದ ಬೀಡಿ ಕೆಲಸಗಾರರ ಮುಷ್ಕರದ ದಿವಸ ಕೆಲ ಕೆಲಸಗಾರರನ್ನು ಬಂಧಿಸಿ ಬಿಟ್ಟಿದ್ದರಷ್ಟೆ. ಬಂಧಿಸಲು ಕಾರಣ, ಅವರುಗಳು ಮಾರ್ಗದಲ್ಲಿ ಸಂಚಾರಕ್ಕೆ ತೊಂದರೆಯನ್ನುಂಟುಮಾಡಿದರೆಂಬ ಆರೋಪಣೆಯ ಮೇಲೆ (ಆಬ್‌ಸ್ಟ್ರಕ್ಷನ್ ಟು ಟ್ರಾಫಿಕ್) ಬಂಧಿಸಲ್ಪಟ್ಟಿದ್ದರು. ಇವರಿಗೆ ಮಾಜಿಸ್ಟ್ರೇಟರು ತಲಾ ನಾಲ್ಕಾಣೆ ದಂಡನೆ ವಿಧಿಸಿ ಕೊಡದೆ ಹೋದವರಿಗೆ 2 ದಿವಸಗಳ ವರೆಗೆ ಜೈಲು ದಂಡನೆ ವಿಧಿಸಿದರು. ದಂಡ ತೆರದವರಿಗೆ ಜೈಲು ವಾಸ ದೊರೆಯಿತು. ಕಳೆದ ತಾ. 15ರಲ್ಲಿ ಬೀಡಿ ಕೆಲಸಗಾರರ ಒಂದು ಪ್ರಿವಾಟ್ ಸಭೆಯು ಮೈದಾನದಲ್ಲಿ ಸೇರಿತು. ಅದರಲ್ಲಿ ಬೀಡಿ ಕೆಲಸಗಾರರಿಗೆ ಇರುವ ಕಷ್ಟಗಳ ಗುರುತಾಗಿಯೂ, ದಂಡನೆ ಶಿಕ್ಷೆಗೊಳಗಾದುದಕ್ಕೆ ಖಂಡನೆ ಸೂಚಿಸಿಯೂ ಭಾಷಣಗಳಾದುವು. ಶ್ರೀಮಾನ್ ಪೊಳ್ಯರೇ ಮೊದಲಾದ ನಾಡಿನ ಮುಂದಾಳುಗಳು ಭಾಗವಹಿಸಿದ್ದರು. ಅಂದು ಒಂದು ಮೆರವಣಿಗೆಯೂ ಇತ್ತು.

ಕನ್ನಡ ಸಾಹಿತ್ಯ—ಈ ವಿಷಯವಾಗಿ ಬೆಳಗಾವಿಯ ಪ್ರಸಿದ್ಧ ಸಾಹಿತಿಗಳಾದ ಶ್ರೀ|ಮಂಜಪ್ಪ ಹರ್ಡೇಕರರು ಥಿಯಲಾಜಿಕಲ್ ಲಾಜಿನಲ್ಲಿ ಕಳೆದ ತಾ. 12ರಲ್ಲಿ ಭಾಷಣ ಮಾಡಿದರು. ಶ್ರೀ| ಜಿನರಾಜ ಹೆಗ್ಗಡೆಯವರು ಅಧ್ಯಕ್ಷರಾಗಿದ್ದರು. ಶ್ರೀ ಮಂಜಪ್ಪನವರು ತಮ್ಮ ಭಾಷಣದಲ್ಲಿ, ಕನ್ನಡ ಲೇಖಕರು ಸಾಮಾನ್ಯ ಜನರಿಗೆ ತಿಳಿಯುವ ರೀತಿಯಲ್ಲಿ ಗ್ರಂಥಗಳನ್ನು ಬರೆಯಬೇಕೆಂದೂ, ಹಿಂದೆ ವೀರಶೈವರು ವಚನಸಾಹಿತ್ಯದ ಮೂಲಕ ಸಾಮಾನ್ಯರಿಗೆ ತಿಳುವಳಿಕೆಯನ್ನು ಕೊಟ್ಟರೆಂದೂ ಹೇಳಿದರು. ಅಧ್ಯಕ್ಷರ ಸನುಯೋಚಿತ ಭಾಷಣವಾಗಿ ಶ್ರೀ| ಎಸ್. ಮು

ಉಡುಪಿ

ಉಡುಪಿ ಕಾಡಬೆಟ್ಟಿನ ಶ್ರೀ ದತ್ತಾತ್ರೇಯ ಮಂದಿರದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ. ದತ್ತಜಯಂತಿಯ ಸಪ್ತಾಹವು ತಾ. 19-12-39ರಿಂದ ತಾ. 26-12-39ರ ತನಕ ಗುರುಚರಿತ್ರೆ, ವಾಚನ, ದತ್ತಪರ ಭಜನೆ, ಹರಿಕೀರ್ತನೆ ಮೊದಲಾದ ಕಾರ್ಯಕ್ರಮಗಳಿಂದ ಜರಗುವುದೆಂದೂ ಸಕಲರಿಗೂ ಸ್ವಾಗತವಿದೆಯೆಂದೂ ವ್ಯವಸ್ಥಾಪಕರಾದ ಶ್ರೀ. ಕೆ. ಶ್ರೀನಿವಾಸ ಕುಡುವರು ತಿಳಿಸುತ್ತಾರೆ.

ಬಾಲಿಕೆಯ ಮೇಲೆ ಅತ್ಯಾಚಾರ—ಕೊಡವೂರು ಗ್ರಾಮದಲ್ಲಿದ್ದ ಓರ್ವ 14ವರ್ಷ ವಯಸ್ಸಿನ ಬಾಲಿಕೆಯ ಮೇಲೆ ಅತ್ಯಾಚಾರಮಾಡಲು ಮೂವರು ಕೈಮಾಡಿದರೆಂಬ ಆರೋಪಣೆಗಾಗಿ ಅವರ ಮೇಲೆ 366 ಐ. ಪಿ. ಸಿ. ಪ್ರಕರಣದಂತೆ ತನಿಖೆ ನಡೆಯುತ್ತಲಿದೆ.

ಜುಗಾರಿ—ತಾ. 11ನೇ ರಾತ್ರಿ ಕೊರಂಗ್ರಪಾಡಿ ಗ್ರಾಮದ ಕೋಳಿಯಂಕದ ಸಮಯ ಕೆಲವರು ಜುಗಾರಾಟವಾಡುತ್ತಿದ್ದ ವೇಳೆಯಲ್ಲಿ ಪೋಲೀಸಿನವರು ಆಟಗಾರರನ್ನು ಕೈದುಮಾಡಿರುವರು.

ಕಂದ ರಾಯರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ದ. ಕ. ಜಿಲ್ಲಾ ಬೋರ್ಡು ಎಲಿಮೆಂಟರಿ ಶಾಲಾ ಅಧ್ಯಾಪಕರ ಸಂಘ

ಜಿಲ್ಲಾ ಬೋರ್ಡಿನ ಎಲ್ಲಾ ಉಪಾಧ್ಯಾಯ, ಉಪಾಧ್ಯಾಯಿನಿಯರ ಅವಗಾಹನೆ ಬಗ್ಗೆ

ಬಂಧುಗಳೇ,

ಈ ಸಂಘದ ಸುಸಂಘಟನೆಯ ಬಗ್ಗೆ ಹಾಗೂ ಆಡಳಿತೆ ಮಂಡಳಿ ಚುನಾವಣೆಯ ಬಗ್ಗೆ ಇದೇ ಬರುವ 1940ನೇ ಇಸವಿ ಜನವರಿ ತಿಂಗಳ 3ನೇ ಯಾ 4ನೇ ವಾರದಲ್ಲಿ ಮಹಾಸಭೆಯನ್ನು ಜರಗಿಸುವುದಾಗಿ ನಿಶ್ಚಯಿಸಿರುತ್ತದೆ. ಸರಿಯಾದ ತಾರೀಕನ್ನು ಹಿಂದಿನಿಂದ ಪ್ರಚುರ ಪಡಿಸಲಾಗುವುದು

ಆದ್ದರಿಂದ ಈ ಜಿಲ್ಲೆಯಲ್ಲಿ ತಾಲೂಕು ಸಂಘಗಳು ಇರುವಲ್ಲಿ ಅಂತಹ ಸಂಘದಿಂದ ಕನಿಷ್ಟ ಪಕ್ಷ 10 ಮಂದಿ ಪ್ರತಿನಿಧಿಗಳನ್ನು, ತಾಲೂಕು ಸಂಘ ಇಲ್ಲದಿದ್ದಲ್ಲಿ ಪ್ರತಿ ಒಂದು ಸೆಂಟರ್ ಸಂಘದಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸಿ ಕಳುಹಿಸಿ ಕೊಡಬೇಕಾಗಿ ಅಪೇಕ್ಷಿಸಲಾಗುತ್ತದೆ.

ಈ ವರೆಗೆ ಸಂಘದ ಮೆಂಬರರಾಗಿ ಸೇರದಿದ್ದವರು ಆದಷ್ಟು ಬೇಗನೇ ಸೇರಿ ಸಂಘದ ಪುರೋಭಿವೃದ್ಧಿಯಲ್ಲಿ ಕೈಗೊಟ್ಟು ನಡಿಸಬೇಕಾಗಿ ಸವಿನಯ ವಿನಂತಿ.

ಬಿ. ಭೋಜರಾಜ್,
ಅಧ್ಯಕ್ಷ,
ಮೂಲ್ಕಿ—ಮೂಲ್ಕಿ, ದ. ಕ.
ತಾ. 11-12-1939

ಪೋಲೀಸರ ಮೇಲೆ ಕೈ—ತಾ. 8ರಲ್ಲು ಉಪ್ಪೂರು ದೇವಸ್ಥಾನದ ಲಕ್ಷದೀಪೋತ್ಸವದ ಸಮಯ ಬಂದೋಬಸ್ತಿಗಾಗಿ ಬ್ರಹ್ಮಾವರದಿಂದ ಬಂದ ಪೋಲೀಸರಿಬ್ಬರ ಮೇಲೆ ಕೆಲವು ಪುಂಡರು ಕೈಮಾಡಿ ಹೊಡೆದು ಜಖಂಗೊಳಿಸಿರುವರು. ಪೋಲೀಸಿನವರಿಬ್ಬರೂ ಸ್ಥಳೀಕ ಆಸ್ಪತ್ರೆಯಲ್ಲಿ ಗುಣಹೊಂದುತ್ತಿದ್ದಾರೆ.

ಆರೋಗ್ಯ ವ್ಯವಸ್ಥೆ—ಉಡುಪಿ ಅದಮಾರು ಮಠದ ಪರ್ಯಾಯ ಮಹೋತ್ಸವದ ಸಮಯ ಆರೋಗ್ಯವ್ಯವಸ್ಥೆಗಾಗಿ ಉಡುಪಿ ನಗರಸಭೆಯವರು ರೂ. 820ನ್ನು ಮಂಜೂರುಮಾಡಿರುವರು.

ಸತ್ಕಾರ ಕೂಟ—ಉಡುಪಿಯಲ್ಲಿ ಕೆಲವು ಸಮಯದಿಂದ ಸೀನಿಯರ್ ಶಾಲಾ ಇನ್ಸ್‌ಪೆಕ್ಟರರಾಗಿದ್ದ ಶ್ರೀ. ಸಂಜೀವರಾಯರು ಮಂಗಳೂರು ಟ್ರೈನಿಂಗ್ ಶಾಲೆಗೆ ವರ್ಗಾಯಿಸಲ್ಪಟ್ಟಿದ್ದರಿಂದ ಅವರಿಗೆ ಸ್ಥಳೀಕ ಎಲಿಮೆಂಟರಿ ಶಾಲಾಧ್ಯಾಪಕರು ಚಿಟ್ಪಾಡಿ ಶಾಲೆಯಲ್ಲಿ ಟೀಪಾರ್ಟಿ ಕೊಟ್ಟು ಸತ್ಕರಿಸಿದರು.

ತೋಟಿಗಳ ಮುಷ್ಕರ—ಉಡುಪಿ ನಗರದ ತೋಟಿಗಳು ಮತ್ತು ಜಾಡಮಾಲಿಗಳು ಕೆಲವೊಂದು ಕಾರಣದಿಂದಾಗಿ ತಾ. 17ರಿಂದ ಮುಷ್ಕರವನ್ನಾರಂಭಿಸಿರುವರು. ಮೂರು ದಿನಗಳ ನಂತರ ಉಡುಪಿ ಮುನ್ಸಿಪಲ್ ಅಧಿಕಾರಿಗಳು ಪರಊರಿನಿಂದ ತೋಟಿಗಳನ್ನು ತರಲು ಪ್ರಯತ್ನಿಸಿದ ಫಲವಾಗಿ ಮಂಗಳೂರಿನಿಂದ 9 ಜನರು ಮತ್ತು ಕಾರ್ಕಳದಿಂದ 11 ಜನರು ಒಟ್ಟಿಗೆ 20 ಜನರು ತರಲ್ಪಟ್ಟು ಕೆಲಸವನ್ನಾರಂಭಿಸಿರುವರು.

ಕಾರ್ಕಳ—ಈ ವರ್ಷದ ರಾಷ್ಟ್ರೀಯ ಆರೋಗ್ಯ ಮತ್ತು ಶಿಶುಸಪ್ತಾಹವು ಇಲ್ಲಿ ಈ ತಿಂಗಳ 4ನೇ ತಾರೀಕಿನಿಂದ ಆರಂಭವಾಗಿ ಏಳು ದಿನಗಳ ತನಕ ಸಂದರ್ಭೋಚಿತ ಭಾಷಣ, ಪ್ರದರ್ಶನ ಇತ್ಯಾದಿ ಮನೋರಂಜಕ ಮತ್ತು ಬೋಧಪ್ರದ ಕಾರ್ಯಕ್ರಮದಿಂದ ಕೂಡಿ ವಿಜೃಂಭಣೆಯಿಂದ ನಡೆಯಿತು. ತಾ. 10-12-'39ರ ದಿನ ಸ್ಥಳೀಯ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ. ವಿ. ಪೋಲಾ ರೆಡ್ಡಿ ಬಿ. ಎ. ಬಿ. ಯಲ್.ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಕೂಡಿ ಪುರಸ್ಕಾರ ವಿತರಣ ಇತ್ಯಾದಿಗಳಾದುವು. ಸಪ್ತಾಹದ ಸಫಲತೆಗೆ ಬಹಳ ಪ್ರಯತ್ನಪಟ್ಟ ಜತೆ ಕಾರ್ಯದರ್ಶಿ ಶ್ರೀ. ಎ. ಪಿ. ಶೆಣೈ, ಬಿ. ಪಿ. ರಾವ್ ಮತ್ತು ಅವರ ಸಹಕಾರಿಗಳ ಸಾಹಸವು ಸ್ತುತ್ಯವಾಗಿದೆ.

ಇಲ್ಲಿ ಸ್ಥಾಪಿತವಾದ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಅವಧಿಯು ಕಳೆದು ಅದನ್ನು ಪೇರಿ ಕಡೆಗೆ ವರ್ಗಾಯಿಸಿರುವುದರಿಂದ ಅದರ ಮುನ್ಸಿಫರಾಗಿದ್ದ ಶ್ರೀ. ವೆಂಕಟಪ್ಪ ಬಿ. ಎ. ಬಿ. ಯಲ್.ರವರನ್ನು ಬೀಳ್ಕೊಡುವ ಸ್ಥಳೀಯ ವಕೀಲರ ಒಂದು ಸತ್ಕಾರ ಕೂಟವು ಸಂದರ್ಭೋಚಿತ ಭಾಷಣ ಉಪಚಾರ ಇತ್ಯಾದಿಯಿಂದ ನಡೆಯಿತು.

ನವಯುಗದ ಪರ್ಯಾಯ ಸಂಚಿಕೆ

(1940ನೇ ಜನವರಿ 11ಕ್ಕೆ ಪ್ರಕಟವಾಗುವುದು.)

ಕಳೆದ ವರ್ಷದ ಮಕರ ಸಂಕ್ರಾಂತಿ ಸಂಚಿಕೆಯಂತೆ ಪುಸ್ತಕಾಕಾರದಲ್ಲಿ ಸರ್ವಾಂಗ ಸುಂದರವಾಗಿ ಹೊರಡಿಸುವ ವ್ಯವಸ್ಥೆ ಮಾಡಲಾಗಿದೆ.

ಬೆಲೆ: 0—4—0

ಪ್ರತಿಗಳು ಬೇಕಾದವರು 0-4-0ರ ಸ್ಟ್ಯಾಂಪನ್ನು ಮೊದಲೇ ಕಳಿಸಬೇಕು

ಜಾಹೀರಾತುದಾರರಿಗೆ ಸುವರ್ಣಸಂಧಿ!

ಕೆಲವೇ ಪುಟಗಳನ್ನು ಜಾಹೀರಾತಿಗೆ ಮೀಸಲಾಗಿರಿಸಿದೆ.

ಜಾಹೀರಾತು ಕೊಡಲಿಚ್ಛಿಸುವವರು ಕೂಡಲೇ ಬರೆಯಬೇಕು.

ದರಗಳು:—1 ಪುಟ ರೂ. 25/- ½ ಪುಟ ರೂ. 15/- ¼ ಪುಟ ರೂ. 8/- ⅛ ಪುಟ ರೂ. 5/-

ಈ ಬಾರಿ—

ಚಿಕ್ಕ ಜಾಹೀರಾತುಗಳಿಗಾಗಿ ಕೆಲವು ಪುಟಗಳನ್ನು ರಿಸರ್ವ್ ಮಾಡಲಾಗಿದೆ. ಇದರಲ್ಲಿ ಹೆಸರು ವಿಳಾಸಗಳನ್ನು 3 ಯಾ 4 ಲೈನುಗಳನ್ನು ಕೊಡಲಾಗುವುದು. ಇದಕ್ಕೆ ರೂ. 1/- ಚಾರ್ಜು ಮಾಡಲಾಗುವುದು. ಸಂಚಿಕೆಯೊಂದನ್ನು ಮುಫತ್ತಾಗಿ ಕೊಡಲಾಗುವುದು. ಹಣವನ್ನು ಮುಂಗಡ ಕಳಿಸಬೇಕು. ಚಿಕ್ಕ ಜಾಹೀರಾತುಗಳನ್ನು ತಾ. 5-1-40ರ ತನಕ ಸ್ವೀಕರಿಸಲಾಗುವುದು.

ಚಿಕ್ಕ ಜಾಹೀರಾತು ಒಂದನ್ನು ಮಾದರಿಗಾಗಿ ಕೆಳಗೆ ಕೊಡಲಾಗಿದೆ.

ನವಭಾರತ ಪುಸ್ತಕ ಭಂಡಾರ
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು,
ಚರ್ಚ್‌ರೋಡ್, ಉಡುಪಿ.

ಜಾಹೀರಾತುದಾರರೇ ತ್ವರೆಮಾಡಿರಿ.

ಮೆನೇಜರ್, ನ ವ ಯು ಗ, ಉಡುಪಿ.

ಶಿರ್ವ—ತಾ. 9—12—39ನೇ ತನವಾರ ಸೆಂಟರ್ ಶಾಲೆಯಲ್ಲಿ ದಿ ಜನರಲ್ ಟೀಚರ್ಸ್ ಎಸೋಸಿಯೇಶನಿನ ಮಹಾಸಭೆಯು ಶ್ರೀ ಎ. ಜಿ. ಸೋನ್ಸರ ಅಧ್ಯಕ್ಷತೆಯಲ್ಲಿ ನೆರೆದು, ಸಭಾವರದಿ, ಮುಂಗಡಪತ್ರ, ಠರಾವುಗಳು, ಪಂಚಾಯತರ ಚುನಾವಣೆ, ಕಾಫಿಟಿಫಿನ್, ರಾಷ್ಟ್ರಗೀತೆ ವಗೈರೆ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಕೊನೆಗೊಂಡಿತು.

ಶಿಶುಸಪ್ತಾಹ—ಶಿರ್ವ ಪಂಚಾಯತ ಬೋರ್ಡಿನ ಪ್ರಕಟಿತ ನಿರ್ಣಯಕ್ಕನುಸಾರವಾಗಿ ಶ್ರೀ. ಡಾ. ರಾಘವೇಂದ್ರ ಪೈಗಳವರ ಅಧ್ಯಕ್ಷತೆಯಲ್ಲಿ ಇದೇ ತಾ. 10-12-39ನೇ ಆದಿತ್ಯವಾರ 4ಘಂಟೆಗೆ ಯೋಗ್ಯ ಕಾರ್ಯಕ್ರಮಗಳ ಮೇರೆಗೆ ಜರುಗಿತು. ನೂನ್ನೂರಕ್ಕೆ ಮಿಕ್ಕಿದ ಬಾಲಕ ಬಾಲಕಿಯರಿಗೆ ತಿಂಡಿಯನ್ನಿತ್ತು, ಶಿಶುಗೀತೆಯ ಮೆರವಣಿಗೆಯಾಯ್ತು. ಸಭೆಕಡಲ್ಲಿ, ಸ್ಥಳೀಯ ಇಬ್ಬರು ಡಾಕ್ಟರರುಗಳೂ ಕಂಪೌಂಡರರೂ, ಶಾಲಾಧ್ಯಾಪಕರುಗಳೂ, ಪಂಚಾಯತ ಬೋರ್ಡಿನವರೂ, ಆರೋಗ್ಯದ ಕೆಲವು ವಿಷಯಗಳನ್ನೆತ್ತಿ ಮಾತನಾಡಿ ಮಂಡಿಸಿದರು.

ಮೂಲ್ಕಿ—ಸ್ಥಳೀಕ ಬೋರ್ಡು ಹೈಸ್ಕೂಲಿನ ವರ್ಷಾವಧಿ ಪರೀಕ್ಷೆಯು ಇದೇ ಕಳೆದ ತಾರೀಕು 4-12-39ರವರೆಗೆ ನಮ್ಮ ಜಿಲ್ಲಾ ವಿದ್ಯಾಧಿಕಾರಿಗಳಿಂದ ಜರಗಿಸಲ್ಪಟ್ಟಿತು. ತಾ. 6ನೇ ರಾತ್ರಿ ಸ್ಕೌಟ್ ಕ್ಯಾಂಪ್ ಫಯರ್ ನಡೆದು ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟವು.

ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಯು. ಕಣ್ಣಪ್ಪ, ಯಂ. ಎ. ಯಲ್. ಟಿ.ರವರು ತಾ. 5-12-39ನೇ ಪೂರ್ವಾಹ್ನ ಸ್ಥಳೀಕ "ಶ್ರೀ ದುರ್ಗಾ ಸ್ಕೂಲ್ ಓಫ್ ಕಮ್ಮರ್ಸ್" ಇದನ್ನು ಸಂದರ್ಶಿಸಿ ಒಳ್ಳೇ ಅಭಿಪ್ರಾಯವನ್ನು ಸೂಚಿಸಿದರು, ಎಂದು ಕೇಳುತ್ತೇವೆ.

ಇಲ್ಲಿಯ ಬಂಗ್ಲೆ ನಾಚರ್ ಕೊರಗಸೆಟ್ರು ತಮ್ಮ ವೃದ್ಧಾಪ್ಯದಶೆಯಿಂದ ಕಾಲವಾದರು. ಮರಣಕಾಲದಲ್ಲಿ ಇವರ ಪ್ರಾಯ ಸುಮಾರು 105 ಎಂದು ಹೇಳುತ್ತಾರೆ.

ಸ್ಥಳೀಕ ಹೈಸ್ಕೂಲಿನ S.S.L.C. Selection ಪರೀಕ್ಷೆಯು ತಾ. 11—12—'39ರಿಂದ ಪ್ರಾರಂಭವಾಗಿದೆ. ಹೈಸ್ಕೂಲಿನ ಹೊಸ ಕಟ್ಟಡದ ಕೆಲಸವು ಭರದಿಂದ ಸಾಗುತ್ತಿದೆ.

ಕಟಪಾಡಿ—ತಾ. 15-12-39ನೇ ಭೃಗುವಾರ ತನ್ನ ಜನ್ಮದಿನದ ಸ್ಮಾರಕವಾಗಿ ವೇದಮೂರ್ತಿ ಅಚ್ಚಡ ಲಕ್ಷ್ಮೀನಾರಾಯಣ ಪುರಾಣಿಕರು ಅಚ್ಚಡ ಬೋರ್ಡು ಹುಡುಗಿಯರ ಶಾಲಾಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಕೊಟ್ಟು ಸತ್ಕರಿಸಿದ್ದು ಶ್ಲಾಘನೀಯ.

ಕೋಟ—ತಾ. 22-12-39ಕ್ಕೆ ವೈಕುಂಠ ಏಕಾದಶಿ ದಿನಾಚರಣೆಯೂ ಕೋಟ ಕೇಂದ್ರದ ಹರಿಜನ ಮಹಾಸಭೆಯೂ ಜರಗಲಿರುವುದು. ಹರಿಜನ ಮಹಾಸಭೆಗೆ ಶ್ರೀಮಾನ್ ಎನ್. ಎಸ್. ಕಿಲ್ಲೆಯವರನ್ನು ಅಧ್ಯಕ್ಷರಾಗುವಂತೆಯೂ ಶ್ರೀಮಾನ್ ಎಸ್. ಗೋಪಾಲ ಸಾಲೆಣ್ಣರನ್ನು ಹರಿಜನ ಲೀಗ್ ಸಭೆಯ ತೆರೆಯೋಣ ಸಮಾರಂಭವನ್ನು ಜರಗಿಸುವಂತೆಯೂ ಕೇಳಿಕೊಳ್ಳಲಾಗಿದೆ

ಕರ್ನಾಟಕ ಆಯುರ್ವೇದ ಪರಿಷತ್ತು

ಈ ಮೊದಲೇ ಪ್ರಸಿದ್ಧಿಸಿದ ಪ್ರಕಾರ ೧೧ನೇ ನಿಖಿಲ ಕರ್ನಾಟಕ ಆಯುರ್ವೇದ ಪರಿಷತ್ತು ಸಿರ್ಸಿಯಲ್ಲಿ ಈ ಡಿಸೆಂಬರ ತಿಂಗಳಲ್ಲೇ ಜರುಗುವುದು. ಅದರ ಕಾರ್ಯಕ್ರಮವು ೨೮ನೇ ತಾರೀಕಿಗೆ ಸುರುವಾಗಿ ೩೦, ೩೧ನೇ ತಾರೀಕಿನ ಪರ್ಯಂತರ ಅಂದರೆ ಮೂರುದಿವಸ ನಡೆಯುವದು.

ಶ್ರೀ| ಎಚ್. ಸುಬ್ಬರಾಯರ ನಿಧನ

ಡಿಸ್ಟ್ರಿಕ್ಟ್‌ಬೋರ್ಡಿನ ನಿವೃತ್ತ ಹೆಡ್‌ಕ್ಲಾರ್ಕರಾಗಿದ್ದ ಎಚ್. ಸುಬ್ಬರಾಯರು ತನ್ನ 75ನೇ ವಯಸ್ಸಿನಲ್ಲಿ ತಾ. 12-12-39ರಲ್ಲಿ ಕಾರ್ಕಳದಲ್ಲಿ ದಿವಂಗತರಾದರೆಂಬ ವಾರ್ತೆಯು ವಿಷಾದಕರವಿದೆ. ಇವರು ತಮ್ಮ ಸರಳ ಸ್ವಭಾವ, ವಿನಯಾದಿಗಳಿಂದ ಜನಪ್ರೀತರಾಗಿದ್ದರು. ಮೃತರ ಬಂಧು-ಬಳಗದವರ ದುಃಖದೊಂದಿಗೆ ನಾವೂ ಸಹಭಾಗಿಗಳಾಗಿದ್ದೇವೆ.

ಮೃತರ ಪುತ್ರರಾದ ಶ್ರೀ| ಎಚ್. ದೇವರಾಯರು "ನನ್ನ ತಂದೆಯವರ ನಿಧನದ ಕುರಿತು ಸಂಬಂಧಿಕರಿಂದಲೂ, ಸ್ನೇಹಿತರಿಂದಲೂ ದುಃಖಸೂಚಕ ಪತ್ರಗಳು ದಿನಂಪ್ರತಿ ಬರುತ್ತಿವೆ. ಅವಕ್ಕೆಲ್ಲಾ ಪ್ರತ್ಯೇಕ ಪ್ರತ್ಯೇಕ ಉತ್ತರವೀಯುವುದು ಅಸಾಧ್ಯವಾಗಿದೆ. ಹೀಗೆ ಪತ್ರಬರೆದವರಿಗೆಲ್ಲಾ ನಾನು ಚಿರಋಣಿಯಾಗಿದ್ದೇನೆ" ಎಂದು ತಿಳಿಸುತ್ತಾರೆ.

ಮಿ. ಜಿನ್ನರ ನೂತನ ಶೋಧ

ಜಿನ್ನಾ ಸಾಹೇಬರು ಎಲ್ಲವನ್ನೂ ಬಿಟ್ಟು ಮುಸಲ್ಮಾನರ ಮೇಲೆ ಕಾಂಗ್ರೆಸ್ ಮಂತ್ರಿಗಳು ಅತ್ಯಾಚಾರ ನಡಿಸಿರುವರೆಂಬ ಮುಸ್ಲಿಮ್ ಲೀಗಿನ ಆರೋಪಗಳ ಕುರಿತು ವಿಚಾರಿಸಲಿಕ್ಕಾಗಿ ರೋಯಲ್ ಕಮಿಶನೊಂದನ್ನು ನೇಮಿಸಬೇಕೆಂಬ ನೂತನ ಶೋಧವೊಂದನ್ನು ಮಾಡಿರುವರು. ಹಿಂದೂದೇಶದಲ್ಲಿರುವ ಯಾರ ನಿಷ್ಪಕ್ಷಪಾತತೆಯ ಕುರಿತಾದರೂ ಅವರಿಗೆ ವಿಶ್ವಾಸವಿಲ್ಲ. ನೆಟ್ಟಗೆ ಲಂಡನ್ನಿನಿಂದಲೇ ರೋಯಲ್ ಕಮಿಶನು ಬರಬೇಕು. ಸರ್ದಾರ್ ವಲ್ಲಭಾಯಿಯವರೆಂದಿರುವಂತೆ ಇದು ಆಗುವುದು ಹೋಗುವುದಲ್ಲ. ಮಿ. ಜಿನ್ನರಿಗೂ ಅದೇ ಬೇಕಾದುದು. ಕಾಂಗ್ರೆಸ್ಸಿನ ಮಾರ್ಗದಲ್ಲಿ ತನ್ನಿಂದ ಸಾಧ್ಯವಾದ ತೊಡಕುಗಳನ್ನೆಲ್ಲಾ ತಂದೊಡ್ಡಿ ಅದರ ಹೆಸರನ್ನು ಕೆಡಿಸಲೆತ್ನಿಸುವ ಪ್ರತೀಕಾರಬುದ್ಧಿಯಿಂದ ಅಭಿಭೂತರಾಗಿದ್ದಾರೆ ಜಿನ್ನಾ ಸಾಹೇಬರು. ತನ್ನ ಪ್ರತಿಷ್ಠೆ, ಹಠಸಾಧನೆಯೇ ಸರ್ವಸ್ವ ಅವರಿಗೆ. ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರೇ ಕೇಳಿಕೊಂಡರೂ ಅವರು ತನ್ನ ಛಲ ಬಿಡುವ ಹಾಗಿಲ್ಲ. ಇದೇ ಬರುವ ತಾ. 22ನ್ನು ಮುಸಲ್ಮಾನ ವಿಮೋಚನಾ ದಿನವಾಗಿ ಆಚರಿಸುವ ನಿರ್ಧಾರವನ್ನು ಅವರು ಬದಲಾಯಿಸಲು ಸಿದ್ಧರಿಲ್ಲ. ಇಂಥವರೊಡನೆ ಕಾಂಗ್ರೆಸು ರಾಜಿಪ್ರಸ್ತಾಪ ನಡಿಸುವುದೆಂದರೆ ಅವರ ಅಹಂಭಾವವನ್ನು ಮತ್ತಷ್ಟು ಬೆಳೆಸಿದಂತಾಗುವುದು. ಆದುದರಿಂದ ಪಂಡಿತ ಜವಾಹರಲಾಲರು ಪ್ರಕೃತ ಹಿಂದೂ ಮುಸಲ್ಮಾನ ಪ್ರಶ್ನೆಯ ಕುರಿತು ರಾಜಿಪ್ರಸ್ತಾಪವನ್ನೇ ನಿಲ್ಲಿಸಿಬಿಟ್ಟಿರುವರು. ಯಾಕೆಂದರೆ ಅದರಿಂದ ಯಾವ ಫಲವೂ ದೊರೆಯುವ ಹಾಗಿಲ್ಲ. ಮಿ. ಜಿನ್ನರು ಹಿಂದೂ–ಮುಸಲ್ಮಾನ ಬಾಂಧವ್ಯದ ಬದಲಿಗೆ ವೈಷಮ್ಯವನ್ನೇ ಹೆಚ್ಚಿಸಲು ಸೊಂಟಕಟ್ಟಿರುವಂತಿದೆ.

ಬಾಬು ರಾಜೇಂದ್ರರ ಹೇಳಿಕೆ

ಬಾಬು ರಾಜೇಂದ್ರ ಪ್ರಸಾದರು ಮಿ. ಜಿನ್ನರ ರೋಯಲ್ ಕಮಿಶನಿನ ಸೂಚನೆಯು ಅರ್ಥರಹಿತವಾದುದೆಂಬುದನ್ನು ಸಿದ್ಧಗೊಳಿಸಿರುವರು. ಕಾಂಗ್ರೆಸು ನಿಷ್ಪಕ್ಷಪಾತಿಗಳ ವಿಚಾರಣೆಗೆ ಯಾವಾಗಲೂ ಸಿದ್ಧವೇ ಇದೆ. ಆದರೆ ಅದಕ್ಕಾಗಿ ಬಂದು ರೋಯಲ್ ಕಮಿಶನನ್ನು ನೇಮಿಸುವುದೆಂದರೆ ವ್ಯಥಾ ಕಾಲವಿಳಂಬ. ಮತ್ತದು ವ್ಯವಹಾರ್ಯ ಸೂಚನೆಯೂ ಅಲ್ಲ. ಸುಪ್ರೀಮ್ ಕೋರ್ಟಿನ ಚೀಫ್ ಜಸ್ಟೀಸರ ಮೂಲಕ ವಿಚಾರಣೆ ನಡಿಸುವ ಸೂಚನೆಯನ್ನು ಕಾಂಗ್ರೆಸ್ ಪ್ರೆಸಿಡೆಂಟರು ಮೊದಲೇ ಮಿ. ಜಿನ್ನರಿಗೆ ಮಾಡಿದ್ದರು. ಆಂಗ್ಲೇಯರೇ ಆದ ಇವರ ವಿಚಾರಣೆಗೂ, ಇಂಗ್ಲೆಂಡಿನ ಪ್ರಿವಿಕೌನ್ಸಿಲಿನ ನ್ಯಾಯಾಧೀಶರಾದ ಲೋರ್ಡರ ವಿಚಾರಣೆಗೂ ಅಭ್ಯಂತರವೇನೂ ಇರಲಾರದು. ಮಿ. ಜಿನ್ನರ ರೋಯಲ್ ಕಮಿಶನಿನ ವಿಚಾರಣೆಯ ಸೂಚನೆಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಪರ್ಯಾಲೋಚಿಸಲಿರುವರು. ಇಂದಿನ ಪರಿಸ್ಥಿತಿಯಲ್ಲಿ ಹಿಂದೂಮುಸಲ್ಮಾನ ಪ್ರಶ್ನೆಯನ್ನು ಮೊದಲಾಗಿ ಇತ್ಯರ್ಥಪಡಿಸಲೆತ್ನಿಸದೆ ನಿರ್ವಾಹವೇ ಇಲ್ಲ. ಇಲ್ಲವಾದರೆ ಅದನ್ನು ಬಗೆಹರಿಸುವುದೇ ಸಾಧ್ಯವಿಲ್ಲೆಂದು ಬಿಟ್ಟುಬಿಡಬೇಕೆಂದೇ ಬಾಬು ರಾಜೇಂದ್ರ ಪ್ರಸಾದರ ಅಭಿಮತ. ಸರ್ದಾರ್ ವಲ್ಲಭಾಯಿಯವರು ಆಗ್ರಹದಿಂದ ಕೇಳಿಕೊಂಡಿರುವಂತೆ, ಇಂದೀಗ ಕಾಂಗ್ರೆಸ್ ಮಂತ್ರಿಗಳು ಆಡಳಿತ ನಡಿಸಿರುವ ಪ್ರಾಂತಗಳ ಗವರ್ನರರುಗಳು ಮತ್ತು ವೈಸರಾಯರು ತಮ್ಮ ಅಭಿಮತವನ್ನು ಕೊಡುವುದು ಅವರ ಕರ್ತವ್ಯವಿರುವುದು. ಯಾಕೆಂದರೆ ಇಂಡಿಯಾ ಏಕ್ಟಿನ ಮೇರೆಗೆ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳ ರಕ್ಷಣೆಯ ಕುರಿತು ಜಾಗರೂಕರಾಗಿರುವ ಜವಾಬ್ದಾರಿ ಅವರದು. ಅವರೇ ತಮ್ಮ ಕರ್ತವ್ಯ ಬಾಹಿರರಾಗಿರುವರೆಂದು ಮಿ. ಜಿನ್ನರ ಆರೋಪ. ಅಂದಮೇಲೆ ಅವರು ಮೌನ ವಹಿಸುವುದರಲ್ಲಿ ಅರ್ಥವಿಲ್ಲ. ಆದರೆ ಪ್ರಕೃತದ ಪರಿಸ್ಥಿತಿಯಲ್ಲಿ ಅವರು ಬಾಯಿಬಿಡಲಾರರು. ಮಿ. ಜಿನ್ನರ ಸೂಚನೆಯಂತೆ ರೋಯಲ್ ಕಮಿಶನಿನ ನೇಮಕಕ್ಕೆ ಸರಕಾರವು ಒಪ್ಪಲಾರದು. ಯಾಕೆಂದರೆ ಮುಸ್ಲಿಮ್ ಲೀಗಿನ ಆರೋಪಗಳಲ್ಲಿ ಹುರುಳಿಲ್ಲೆಂಬುದನ್ನು ಗವರ್ನರರು ಮತ್ತು ವೈಸರಾಯರು ಚೆನ್ನಾಗಿ ಬಲ್ಲರು. ಇದು ಹೊರತು ಅವರು ತಮ್ಮ ಕರ್ತವ್ಯ ಬಾಹಿರರಾಗಿರುವರೆಂಬ ಆರೋಪಗಳ ಕುರಿತು ರೋಯಲ್ ಕಮಿಶನಿನ ವಿಚಾರಣೆಯೆಂದರೆ ಅದಕ್ಕೊಂದು ಅರ್ಥವಿದೆಯೇ? ದೇಶದ ಸ್ವಾತಂತ್ರ್ಯಸಾಧನೆಗಾಗಿ ಹಿಂದೀಯರೆಲ್ಲರೂ ತಮ್ಮ ಭಿನ್ನಭೇದಗಳನ್ನು ಮೂಲೆಗೊತ್ತಿ ಒಕ್ಕಟ್ಟಿನಿಂದ ಪ್ರಯತ್ನಿಸಬೇಕಾಗಿರುವಾಗ ಅಂತಃಕಲಹದ ಪ್ರಶ್ನೆಗೆ ಲಕ್ಷ್ಯಕೊಡಿಸಿ ಆ ಕುರಿತು ರೋಯಲ್ ಕಮಿಶನಿನ ತೀರ್ಮಾನಕ್ಕೊಳಗಾಗುವ ಪರ್ವತ ಪ್ರಸವದಂತಹ ಕೆಲಸದಲ್ಲಿ ವ್ಯಥಾ ಕಾಲಯಾಪನೆ ಮಾಡುವುದಕ್ಕಾಗಿ ಕಾಂಗ್ರೆಸ್ ಹಿಂಜರಿಯಬೇಕೇ ಹೊರತು ಇಲ್ಲವಾದರೆ ಅದಕ್ಕೇನೂ ಆಕ್ಷೇಪವಿರಲಾರದು.

ವಾರದ ವಿಮರ್ಶೆ

ಲೋರ್ಡ್ ಜೆಟ್ಲೆಂಡರ ಇನ್ನೊಂದು ಭಾಷಣ

ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರು ಭಾಷಣ ಮಾಡುವುದಕ್ಕಿಂತಲೂ ಮೌನ ಧಾರಣೆಮಾಡುವುದರಿಂದ ಬ್ರಿಟಿಷರಿಗೆ ಪ್ರಯೋಜನವಿದೆ. ಅವರ ಭಾಷಣಗಳಿಂದ ಹಿಂದೀ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಅವುಗಳಿಂದ ಸಾಧಕವಾಗುವ ಬದಲಿಗೆ ಬಾಧಕವೇ ಆಗುವುದು. ಅವರು ಇದೇ ತಾ. 14ರಲ್ಲಿ ಲೋರ್ಡ್ಸ ಸಭೆಯಲ್ಲೊಂದು ಭಾಷಣವಿತ್ತು ಹಿಂದೀಯರು ತಮ್ಮೊಳಗಿನ ವೈಷಮ್ಯವನ್ನು, ವಿಶೇಷವಾಗಿ ಹಿಂದೂ ಮುಸಲ್ಮಾನ ಪ್ರಶ್ನೆಯನ್ನು ಮೊದಲಾಗಿ ಇತ್ಯರ್ಥಮಾಡಿಕೊಳ್ಳದೆ ಹಿಂದೀ ರಾಜಕೀಯ ಪ್ರಶ್ನೆಯನ್ನು ಬಿಡಿಸಲು ಸಾಧ್ಯವಿಲ್ಲ. ಆದುದರಿಂದ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗಿನವರು ಸಂಧಿಮಾಡಿಕೊಳ್ಳಬೇಕೆಂದು ಆಗ್ರಹದಿಂದ ವಿನಂತಿ ಮಾಡಿಕೊಂಡಿರುವರು. ಆದರೆ ಅದೇ ಭಾಷಣದಲ್ಲಿ ಮುಸಲ್ಮಾನರ ಮತ್ತು ಮುಸ್ಲಿಮ್ ಲೀಗಿನ ಬೆನ್ನು ಚಪ್ಪರಿಸಿ, ಅವರು ವಹಿಸಿರುವ ಧೋರಣೆಯು ಸರಿಯಾದುದೆನ್ನುವಂತೆ ಕೂಡಾ ಮಾತಾಡಿರುವರು. ಮತ್ತೊಂದೆಡೆ ಜಾತಿಯ ಪ್ರತಿನಿಧ್ಯ ಮತ್ತು ಜಾತಿವಾರು ಪಕ್ಷ ಸ್ಥಾಪನೆಯಿಂದ ಪ್ರಜಾಸತ್ತಾತ್ಮಕ ರಾಜ್ಯಭಾರದ ಬೆಳವಣಿಗೆಗೆ ಹಾನಿ. ಆದುದರಿಂದ ಪ್ರತಿಯೊಬ್ಬ ಹಿಂದೀಯನೂ ತಾನು ಮೊದಲಾಗಿ ಭಾರತೀಯನು ಅನಂತರ ಹಿಂದೂ-ಮುಸಲ್ಮಾನನೆಂದೆಲ್ಲಾ ಪರಿಗಣಿಸಬೇಕೆಂಬ ಉದಾತ್ತ ಬೋಧನೆಯಿತ್ತಿರುವರು. ಪ್ರಾಂತಿಕ ಎಸೆಂಬ್ಲಿಗಳ ಚುನಾವಣೆಗಳಲ್ಲಿ 482 ಮಂದಿ ಚುನಾಯಿತ ಮುಸಲ್ಮಾನ ಮೆಂಬರರ ಪೈಕಿ 32 ಮಂದಿ ಮಾತ್ರ ಕಾಂಗ್ರೆಸ್ ಪರವಾಗಿ ನಿಂತವರೆಂದು ಸೂಚಿಸಿದ ಲೋರ್ಡ್ ಜೆಟ್ಲೆಂಡರ ಉದ್ದೇಶವಂತೂ ಸ್ಪಷ್ಟವಿದೆ. ಎಷ್ಟು ಮಂದಿ ಆರಂಭದಲ್ಲೇ ಮುಸ್ಲಿಮ್ ಲೀಗಿನ ಪರವಾಗಿ ನಿಂತವರೆಂದು ತಿಳಿಸುವ ಗೊಡವೆಗೆ ಅವರು ಹೋಗಲಿಲ್ಲ. ಮಿ. ಜಿನ್ನರಂತಹ ಮುಸಲ್ಮಾನ ಮುಖಂಡರ ವಿವೇಕರಹಿತ ಧೋರಣೆಯಿಂದ, ಬ್ರಿಟಿಷರು ಹಿಂದೀಯರಿಗೆ ಈ ಸಂದರ್ಭದಲ್ಲಿ ನೀತಿಬೋಧನೆಮಾಡುವಂತಾಗಿದೆ. ಹಿಂದೀಯರಲ್ಲಿ ಒಕ್ಕಟ್ಟಿದ್ದರೆ ಈ ನೀತಿಬೋಧೆಯ ಹುರುಳನ್ನು ಪರೀಕ್ಷಿಸಬಹುದಿತ್ತು. ಒಂದು ವೇಳೆ ಹಿಂದೂಮುಸಲ್ಮಾನ ಪ್ರಶ್ನೆಯು ಎಲ್ಲಿಯಾದರೂ ರಾಜಿಯಲ್ಲಿ ತೀರ್ಮಾನವಾದರೆ ತೊಂದರೆಯಾಗಬಾರದೆಂದು ಮತ್ತೂ ಕೆಲಕೆಲವು ತೊಡಕುಗಳನ್ನು ಲೋರ್ಡ್ ಜೆಟ್ಲೆಂಡರು ಮುಂದೊಡ್ಡಿದ್ದಾರೆ. ಹಿಂದೀ ರಾಜರುಗಳಿಗೆ ಬ್ರಿಟಿಷ್ ಸರಕಾರವು ಕೊಟ್ಟಿರುವ ವಚನ, ಹಿಂದೂದೇಶದ ರಕ್ಷಣೆ ಮತ್ತು ಆಂಗ್ಲೇಯರ ಹಿತರಕ್ಷಣೆಯ ಪ್ರಶ್ನೆಗಳು ಕೂಡಾ ಸಮಾಧಾನಕರವಾಗಿ ಇತ್ಯರ್ಥವಾಗದೆ ಹಿಂದೀ ಸ್ವಾತಂತ್ರ್ಯವು ಸಾಧ್ಯವಿಲ್ಲೆಂದವರು ಸ್ಪಷ್ಟವಾಗಿ ಸೂಚಿಸಿರುತ್ತಾರೆ.

(೬ನೇ ಪುಟದಿಂದ ಮುಂದುವರಿಸಲ್ಪಟ್ಟಿದೆ.)

ಎಂಬ ದ್ವೀಪದ ಬಳಿ ಜರ್ಮನ್ ವಿಮಾನಗಳನ್ನೆದುರಿಸಿ ತೀವ್ರ ಹೋರಾಟ ನಡೆಸಿ 4 ಜರ್ಮನ್ ಮತ್ತು 3 ಬ್ರಿಟಿಷ್ ವಿಮಾನಗಳು ನಾಶಹೊಂದಿರುವವು.

ಇದೇ ತಾ. 14ರಲ್ಲಿ ಒಂದು ಬೆಲ್ಜಿಯಮ್, ಒಂದು ನೋರ್ವೇಜಿಯನ್ ಮತ್ತು ಎರಡು ಬ್ರಿಟಿಷ್ ಹಡಗಗಳು ಮುಳುಗಿಸಲ್ಪಟ್ಟಿವೆ. ನೋರ್ವೆ ದೇಶದ ಬಳಿ ಒಂದು ಗ್ರೀಕ್ ಮತ್ತು ಎರಡು ಬ್ರಿಟಿಷ್ ಹಡಗಗಳು ಮುಳುಗಿಸಲ್ಪಟ್ಟಿವೆಯೆಂದು ತಿಳಿದುಬಂದಿದೆ. ಸ್ವಾನ್ ವುಡ್ ಮತ್ತು ಇನ್ವರ್ಲೇನ್ ಎಂಬ ಎರಡು ದೊಡ್ಡ ಬ್ರಿಟಿಷ್ ಹಡಗಗಳು ಮುಳುಗಿಸಲ್ಪಟ್ಟಿವೆ ಜರ್ಮನಿಯು ಎರಡು ಸ್ವೀಡಿಶ್ ಹಡಗಗಳನ್ನು ಹಿಡಿದು ವಶಪಡಿಸಿಕೊಂಡಿದೆ. ಎಡೊಲ್ಫ್ ರಿಯಾನ್ ಹರ್ಫ್ ಎಂಬ ಜರ್ಮನ್ ಹಡಗವೊಂದನ್ನು ಬ್ರಿಟಿಷ್ ಹಡಗಗಳು ತಡೆದಾಗ ಅದು ತನ್ನನ್ನು ತಾನೇ ಮುಳುಗಿಸಿಕೊಂಡಿರುವುದು. ಡ್ರೆಪೆಲ್ ಡೋರ್ಫ್ ಎಂಬ ಜರ್ಮನ್ ಹಡಗವನ್ನು ಬ್ರಿಟಿಷ್ ಯುದ್ಧ ಹಡಗವೊಂದು ಮುಳುಗಿಸಿರುವುದು.

ಇದೇ ತಾ. 17ರಲ್ಲಿ ಮೊಸೆಲ್ ಪಟ್ಟಣದ ಪೂರ್ವದಲ್ಲಿ ಜರ್ಮನರು ಫ್ರೆಂಚ್ ಸೈನಿಕ ಪಂಗಡವೊಂದರ ಮೇಲೆ ಧಾಳಿ ನಡಿಸಿ ಕೈ ಕೈ ಹೋರಾಟ ನಡೆದು ಜರ್ಮನರು ಹಿಂದಕ್ಕಟ್ಟಲ್ಪಟ್ಟಿರುವರು. ತಾ. 16ರಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಗಳು ಪಶ್ಚಿಮರಣರಂಗವನ್ನು ಸಂದರ್ಶಿಸಿದರು.

ಗ್ರಾಫ್‌ಸ್ಪೀ ತಾನೇ ಮುಳುಗಿ ನಾಶವಾಯಿತು

ಹಿಟ್ಲರರ ಅನುಜ್ಞೆಯ ಮೇರೆಗೆ ಜರ್ಮನ್ ಗ್ರಾಫ್‌ಸ್ಪೀ ಹಡಗವು ಸಿಡಿಮದ್ದಿನಿಟ್ಟು ತನ್ನನ್ನು ತಾನೇ ಮುಳುಗಿಸಿಕೊಂಡು ನಾಶವಾಗಿರುವುದು. ಈ ಯುದ್ಧ ಹಡಗವನ್ನು ರಿಪೇರಿಮಾಡಲು 3 ದಿವಸಗಳೊಳಗೆ ಅಸಾಧ್ಯವಾದುದರಿಂದ ಅದನ್ನು ಮುಳುಗಿಸಲಾಯಿತೆಂದು ತಿಳಿದುಬರುತ್ತದೆ. ಗ್ರಾಫ್‌ಸ್ಪೀಯನ್ನು ಕಟ್ಟಲು ಸುಮಾರು 3250,000 ಪವನು ತಾಗಿರುವುದೆಂದೂ ಅದು ಸುಮಾರು 1¼ ಮಿಲ್ಯ ಪವನು ಬೆಲೆಯ 9 ಹಡಗಗಳನ್ನು ಮುಳುಗಿಸಿರುವುದೆಂದೂ ತಿಳಿದುಬಂದಿದೆ.

GANARA BANK LIMITED

HEAD OFFICE:—MANGALORE.

A NET WORK OF 37 BRANCHES.

ALLEPPEY	CALICUT	KARKALA
ARSIKERE	CANNANORE	KASARGODE
BADAGARA	CHERAI	KAYAMKULUM
BANGALORE	CHIKMAGALUR	KUMBLA
BANTWAL	COCHIN	MANGALORE-BUNDER
BELGAUM	COONDAPOOR	MANGALORE-CITY
BELTHANGADY	DAVANGERE	MANJESHWAR
BOMBAY-FORT	DHARWAR	MOOLKY
BOMBAY-MANDVI	DODDBALLAPUR	PAYYANNUR
BOMBAY-GIRGAUM	ERNAKULAM	PUTTUR
BOMBAY-KALBADEVI	GANGULLI	QUILON
BOMBAY-PAREL	HUBLI	UDIPI
	UPPINANGADY	

ಜಾಹೀರಾತುಗಳಿಗೆ ಬೇಕಾಗುವ ಚಿತ್ರಾಕರ್ಷಕ ನವೀನದ ಬ್ಲೋಕು, ಡಿಜ್ಯಾನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನ ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ವಾನ್ ಬೋರ್ಡ್ ಪೈಂಟಿಂಗ್ ವಗೈರ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮ್ಮುತಕಲಾ ಪ್ರೆಸ್,

ಆರ್ಟ್ ಪ್ರಿಂಟರ್ಸ್ ಡಿಜ್ಯಾನರ್ಸ್ & ಎನ್ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

ಈ ವಾರದ ಭವಿಷ್ಯ

ತಾ. 21-12-1939ರಿಂದ - - - ತಾ. 28-12-1939ರ ವರೆಗೆ

ಮೇಷ—ದಿನದಿಂದ ದಿವಕ್ಕೆ ನಿಮ್ಮ ಭಾಗ್ಯ ಚಕ್ರವು ದುರ್ದೈವದ ಕಡೆಗೆ ಸಾಗುತ್ತಿದೆ. ಕೈಯಲ್ಲಿ ಹಿಡಿದದ್ದೂ ಇಲ್ಲ, ಕಾಲಿನಲ್ಲಿ ಮೆಟ್ಟಿದ್ದೂ ಇಲ್ಲ ಎಂಬ ಗಾದೆಯಂತೆ ತ್ರಿಶಂಕುವಿನ ಅವಸ್ಥೆ ಬಂದೀತು. ಇದೇ ತಾ. 24ರಂದು ನಿಮ್ಮ ಗೃಹಪತಿಯಾದ ಕುಜನು ವ್ಯಯಕ್ಕೆ ಕಾಲಿಡುವನು. ಇಷ್ಟರವರೆಗಿನ ನಿಮ್ಮ ಆದಾಯದ ಮಾರ್ಗಗಳು ಈಗ ಖರ್ಚಿನ ಹೆದ್ದಾರಿಗಳಾಗಿ ಪರಿಣಮಿಸಲಿವೆ. ಆರೋಗ್ಯಕ್ಕೂ ಪಿತ್ತವಿಕಾರದಿಂದ ಹಾನಿಯಿದೆ. ವ್ಯಾಪಾರಾದಿಗಳಲ್ಲಿ ಆಯಕ್ಕಿಂತ ವ್ಯಯವೇ ಅಧಿಕ. ಮಾತು ಮಾತಿಗೆ ಕಲಹ. ಅಂತೂ ಮನೋರೋಗವು ವಿಶೇಷವಾಗುವದು. ಆದರೂ ಕೆಲವೊಂದು ಗ್ರಹಬಲದಿಂದ ತಾ. 21 22, 23, 26, 27, ಈ ದಿನಗಳಲ್ಲಿ ಇಷ್ಟವು ಸಿದ್ಧಿಸದಿದ್ದರೂ ಅನಿಷ್ಟವು ಬಾಧಿಸದು.

ವೃಷಭ—'ನ ಸಂತೋಷಾತ್ ಪರಂ ಸುಖಂ' ಸಂತೋಷಕ್ಕಿಂತ ಹೆಚ್ಚಿನ ಸುಖವಿನ್ನೊಂದಿಲ್ಲವೆಂಬ ಹಿರಿಯರ ಮಾತು ನಿಮ್ಮ ಅನುಭವಸಿದ್ಧವಾಗಲಿದೆ. ಇಷ್ಟಪ್ರಾಪ್ತಿಯು ಒಂದೊಂದೇ ಮೆಟ್ಟಲನ್ನೇರಿ ಇಂದೀಗ ನಿಮ್ಮ ಗಡಿಯನ್ನೂ ಆತಿಕ್ರಮಿಸುವುದು, ಅನರ್ಥಕಾರಿಯಾದ ನೀಚ ಶನಿಯಿಂದ ಬರಲಿರುವ ದೋಷಗಳು ಇಂದೀಗ ನಿವಾರಿಸಲ್ಪಡುವವು. ವ್ಯಾಪಾರದಲ್ಲೂ ಭೂಸಂಬಂಧವಾಗಿಯೂ ತುಂಬಾ ಲಾಭವಿದೆ. ಕಂಟಿದ್ದೇಹುಲಕ್ಕ, ನೌಕರಿಯಲ್ಲಿ ಸ್ವಲ್ಪ ತೊಂದರೆಕಂಡು ಬಂದೀತು. ತಾ. 24, 25, 28 ಈ ದಿನಗಳು ನಿಮಗನುಕೂಲವಾಗುವುದರಿಂದ ವಿಶೇಷ ಸಿದ್ಧಿ, ಸ್ತ್ರೀಸುಖ ಅಭಿಲಷಿತಾರ್ಥಗಳೂ ಸಿದ್ಧಿಸುವವು.

ಮಿಥುನ—ಪ್ರತಿಯೊಬ್ಬನಿಗೂ ತಾನು ಒಳ್ಳೆ ಕೀರ್ತಿ ಪಡೆಯಬೇಕು, ಮಾನಮರ್ಯಾದೆಗಳನ್ನು ಹೊಂದಬೇಕೆಂಬ ಅಭಿಲಾಷೆಯು ಇರುವುದು ಸ್ವಾಭಾವಿಕ. ಇದಾದರೂ 'ಅರ್ಥಂ ವಿನಾ ನೈವ ಯಶಶ್ಚ ಮಾನಂ' ಎಂಬ ಸಂಸ್ಕೃತೋಕ್ತಿಯಂತೆ ಹಣವಿಲ್ಲದಿದ್ದರೆ ಕೀರ್ತಿಗಳು ಮಾನವಿಲ್ಲವು. ಆದಕಾರಣ ಪ್ರತಿಯೊಬ್ಬನೂ ಧನಾರ್ಜನೆಯಲ್ಲಿ ತತ್ಪರನಾಗಲು ಕಾರಣ. ನೀವೂ ಕೂಡ ಕೀರ್ತಿಗಳಿಸುವ ಸಲುವಾಗಿ ಧನಾರ್ಜನೆಯಲ್ಲಿ ತತ್ಪರರಾಗಿರುವಿರೀ ಹೊರತು ಲೋಭದಿಂದಲ್ಲವೆನ್ನಬಹುದು, ನಿಮ್ಮ ಅಪೇಕ್ಷೆಯು ಸದ್ಯ ಪೂರ್ಣವಾಗಲಾರದು, ಆರ್ಜಿತ ಧನದ ಬಹ್ವಂಶ ಪ್ರವಾಸ ರೋಗಗಳ ಸಲುವಾಗಿ ವ್ಯಯವಾದೀತು. ತಾ. 24, 25, 28ರಲ್ಲಿ ಅಧಿಕ ವ್ಯಯ ಸಂಭವಿಸುವದು.

ಕರ್ಕಾಟಕ—ಶರದ ಮಾತಿಗೆ ಕಿವಿಗೊಡದೆ ನಿಮ್ಮ ಮನಸ್ಸಿಗೆ ಸಮಾಧಾನಕರವಾಗುವ ಕಾರ್ಯದಲ್ಲಿ ನೀವು ದುಡಿದರೆ ನಿಮ್ಮ ಇಷ್ಟಾರ್ಥವು ವ್ಯರ್ಥವಾಗಲಾರದು, ಆದರೆ ನಿಮ್ಮ ಸ್ವಭಾವವು ಮಾತ್ರ ಹಾಗಿಲ್ಲ. ಎಲ್ಲರ ಮಾತನ್ನೂ ನೀವು ಸ್ವೀಕರಿಸುವಿರಿ, ಕಟ್ಟಕಡೆಗೆ ಹೇಳಿಕೊಟ್ಟ ಮಾತು ಕಟ್ಟಿಕೊಟ್ಟ ಬುತ್ತಿ ಎಲ್ಲಿ ತನಕ ಬಂದೀತು ಎಂಬಂತೆ ಹಾರಿದ್ದೂ ಇಲ್ಲ ನಿಮ್ಮದ್ದೂ ಇಲ್ಲವೆಂದಾಗುವುದು. ಅದ್ದರಿಂದಲೇ ನಿಮಗೆ ಉದ್ಯೋಗದಲ್ಲೂ ವ್ಯಾಪಾರದಲ್ಲೂ ನಷ್ಟಪ್ರಾಪ್ತಿಯಾದೀತು. ಗೃಹಚ್ಛಿದ್ರದಿಂದ ಸಂಸಾರದಲ್ಲಿ ಸುಖವಿರದು, ಜನನಿಂದೆ, ಶತ್ರುಗಳ ಕಾಟವೂ ಅಧಿಕವಾಗುವುದು. ತಾ. 21ರಿಂದ 25ರ ವರೆಗೆ ನಿಮ್ಮ ಬುದ್ಧಿಬಲಗಿಂದ ಇಷ್ಟವನ್ನು ಪಡೆಯಲು ಶಕ್ತರಿರುವಿರಿ. ಮಿತ್ರರ ಕೊಡುಗೆಯಿಂದ ಸುಖಹೊಂದುವಿರಿ.

ಸಿಂಹ—ಹೆಚ್ಚಿನ ಗ್ರಹರ ಪ್ರತಿಕೂಲ ದೃಷ್ಟಿಗೆ ಪಾತ್ರರಾಗಿರತಕ್ಕ ನಿಮಗೆ ಕಷ್ಟನಷ್ಟಗಳು ವಿಶೇಷವಾಗಿ ಸಂಭವಿಸಲಿವೆ. ರಾಜಕೀಯ ಕಾರ್ಯಗಳಲ್ಲಿ ಪ್ರತಿಸ್ಪರ್ಧಿಗಳ ಕೈವಾಡದಿಂದ ನಷ್ಟ ಸಂಭವಿಸುವುದು, ಮಾನಕ್ಕೂ ಕೂಡ ಹಾನಿಯಿದೆ. ಆರೋಗ್ಯವು ಸಂಪೂರ್ಣ ಪ್ರತಿಕೂಲವಾಗಿರುವುದು. ಹಿಡಿದ ಕಾರ್ಯಗಳು ಜಯಶೀಲವಾಗುವ ಸಂಭವವಿಲ್ಲವು. ಜನರಿಂದ ಮಾನ್ಯರೊಡನೆ ಕಲಹವಾಗುವುದು. ಸ್ತ್ರೀಯರಿಗೂ ವ್ಯಾಪಾರಿಗಳಿಗೂ ನಟನಟಿಯರಿಗೂ ಕೂಡ ಹಾನಿಯಿದೆ. ತಾ. 24ರಿಂದ 4 ದಿನಗಳಲ್ಲಿ ನೌಕರಿ ಭಾಗದಲ್ಲಿರುವವರು ಆತ್ಮೀಯರ ಬಲದಿಂದ ಇಷ್ಟವನ್ನು ಹೊಂದಲು ಸಮರ್ಥರಾಗುವರು.

ಕನ್ಯಾ—ಶುಭಶೋಭನಕರವಾದ ನಿಮಗೆ ಈ ವಾರದಲ್ಲಿ ಸ್ವಲ್ಪ ಕಷ್ಟವನ್ನನುಭವಿಸಬೇಕಾಗುತ್ತದೆ. ಗುರು ಶುಕ್ರರ ದಯೆಯು ನಿಮ್ಮ ಮೇಲಿರುವುದಾದರೂ ಇತರ ಗ್ರಹರೆಲ್ಲರೂ ವಿಮುಖರಾಗಿರುವರು. ಅದ್ದರಿಂದ ಡಾಕ್ಟರ್, ಉಪಾಧ್ಯಾಯ, ವಕೀಲ್, ಕ್ಲಾರ್ಕ್ ಇತ್ಯಾದಿ ವರ್ಗದ ಉದ್ಯೋಗಿಗಳಿಗೂ ಕಷ್ಟಜೀವಿಗಳಾದ ತರುಣ ಜನಸ್ತೋಮಕ್ಕೂ ಆಯಾಧಿಕ ವ್ಯಯವಾಗುವುದು, ಆದರೂ ಸರ್ವಜನಪ್ರಿಯರಾದ ನಿಮಗೆ ಊಟೋಪಚಾರಗಳಿಗೇನೂ ಕೊರತೆಯಾಗದು. ಆರ್ಥಿಕ ದುರವಸ್ಥೆಗೆ ಅಳುಕಲಾರಿರಿ. ತಾ. 26ರಿಂದ 28ರ ವರೆಗೆ ಅನುಕೂಲ.

ತುಲಾ—ನಿಮ್ಮ ಭವಿಷ್ಯದಲ್ಲಿ ನವಜೀವನ ಪ್ರಾರಂಭವಾಗಿದೆ. ಕಷ್ಟಪರಂಪರೆಗಳನ್ನನುಭವಿಸಿ ಲೋಕದ ವಿದ್ಯಮಾನವನ್ನರಿತ ನಿಮಗೆ ಗ್ರಹಬಲವೂ ಸಾಕಷ್ಟು ದೊರೆತಿದೆ, ಪ್ರವೃತ್ತಿ ಪಥದಲ್ಲಿ ಮುನ್ನಡಿಯಿಟ್ಟು ಇಷ್ಟವನ್ನು ಹೊಂದಿರಿ. 'ಯಾಂತಿ ನ್ಯಾಯಪ್ರವೃತ್ತಸ್ಯ ತಿರ್ಯಂಚೋಽಪಿ ಸಹಾಯತಾಂ' ಎಂಬಂತೆ ನ್ಯಾಯಮಾರ್ಗಾನುಸರಿಗೆ ತಿರ್ಯಕ್ ಪ್ರಾಣಿಗಳೂ ಸಹಾಯಮಾಡುವವು. ನಿಮಗೀವಾರದಲ್ಲಿ ಧನ ಜನ ಬೆಂಬಲವು ಸಾಕಷ್ಟು ದೊರೆಯುವದು ಕಾರ್ಯಕರ್ತೃತ್ವ ಶಕ್ತಿಯು ವೃದ್ಧಿಯಾಗುವುದು. ಅಂತೆಯೇ ನಿಮ್ಮ ಸಂಪತ್ತುಗಳೂ ಅಭಿವೃದ್ಧಿ ಹೊಂದಲಿದೆ, ಆರೋಗ್ಯದ ಸಲುವಾಗಿ ಚಿಂತಿಸಬೇಕಾಗಿಲ್ಲ. ತಾ. 25ರಿಂದ 27ರ ವರೆಗೆ ದೂರದೇಶ ಪ್ರವಾಸಗಳು ಕಂಡಾವು.

ವೃಶ್ಚಿಕ—ಕೇವಲ ಸಿಹಿ ಪದಾರ್ಥವನ್ನು ಭುಂಜಿಸತಕ್ಕವರಿಗೆ ವೈದ್ಯವೇ ಭಾರವಾದ ಪದಾರ್ಥಗಳು ಹೇಗೆ ರುಚಿಸುವವೋ ಅಂತೆಯೇ ಸುಖಲೋಲುಪ್ತರಾಗಿರತಕ್ಕ ನಿಮಗೂ ಕೂಡ ಆಗಾಗ ಬರತಕ್ಕ ಕಷ್ಟನಷ್ಟಗಳು ದುಃಖದಾಯಕಗಳಾಗಲಾರವು. ಪಶುಭ್ಯಕಾದಿ ಹರಿವಸ ಪರಿವಾರದಿಂದ ಕೂಡಿರತಕ್ಕ ಸಂಸಾರದಲ್ಲಿ ಮಕ್ಕಳು ಪಶುಗಳಿಗೆ ಕಾಹಿಲೆಯುಂಟಾದೀತು, ಕಾರ್ಯದಲ್ಲಿ ಔದಾಸೀನ್ಯವಹೆಚ್ಚೀತು. ಮನಸ್ಸು ಸದಾ ಭಯವ್ಯಾಕುಲಿತವಾಗಿರುವುದು. ಇಷ್ಟಾದರೂ ಕೂಡ ನೀವು ನಿರ್ಲಿಪ್ತರಂತೆ ಕಾಣಿಸಿಕೊಳ್ಳುವಿರಿ. ತಾ 25, 27, 28ಈ ಮೂರುದಿನಗಳಲ್ಲಿ ಇಷ್ಟಾರ್ಥಕ್ಕೆ ಭಂಗವುಂಟಾದೀತು

ಧನು—ಕಾಲ ಜಾರಿ ಬಿದ್ದವನನ್ನು ಕೈ ಎತ್ತಿ ಹಿಡಿವೆತ್ತುವರಾಲವಿರದಲ್ಲ ಅವನ ತಲೆಮೇಲೆ ಕಲ್ಲಿಸೆಯುವ ಸಮಯವಿದು. ಆದಕಾರಣ ನೀವು ನಿಮ್ಮ ಮಿತ್ರರು ಬಂಧುಗಳು ಕಷ್ಟಕಾಲದಲ್ಲಿ ಸಹಾಯ ಮಾಡಲಿರುವರೆಂದು ತಿಳಿದು ಮೋಸಹೋಗಬೇಡಿರಿ, ಬದಲಾಗಿ ಅವರಿಂದಲೇ ನಾನಾ ತರದ ಪೀಡೆಗಳು ಬಾಲಿವೆ. ಇದಕ್ಕೆ ಸರಿಯಾಗಿ ನಿಮಗೆ ದೈವಬಲವೂ ಕಡಿಮೆಯಾಗಿದೆ. ಆದಕಾರಣ ಸ್ವಂತಶಕ್ತಿಯ ಸಹ ನೀವು ಸೂಕ್ಷ್ಮ ವಿಚಾರಮಾಡಿ ಮುಂದಿಡಬೇಕಾಗಿದೆ. ಅನಾರೋಗ್ಯ ಆರ್ಥಿಕ ಅಡಚಣೆ ಇತ್ಯಾದಿಗಳಿಂದ ಸದಾ ಪೀಡಿತರಾಗಿದ್ದ ನಿಮಗೆ ತಾ. 24ರಿಂದ 27ರ ವರೆಗೆ ವ್ಯಾಪಾರದ ಉದ್ಯಮದಲ್ಲಿ ಧನಲಾಭ ಸ್ತ್ರೀಮುಖದಿಂದ ಲಾಭವೂ ಇದೆ.

ಮಕರ—'ಆಲಸ್ಯಂ ಹಿ ಮನುಷ್ಯಾಣಾಂ ಶರೀರಸ್ಥೋ ಮಹಾನ್ ರಿಪುಃ' ನರರಿಗೆ ಆಲಸ್ಯವೆಂಬುದು ಶರೀರಗತವಾಗಿರುವ ದೊಡ್ಡ ಶತ್ರು. ಅದನ್ನು ನಿಗ್ರಹಿಸದಲ್ಲದೇ ಉದ್ಯೋಗದಲ್ಲಿ ಮುನ್ನಡೆಯಲು ಶಕ್ತನಾದಾನು. ಸದ್ಯ ನಿಮಗೆ ಕಾಲವು ಹೆಚ್ಚು ಸಂಕೆ ಅನುಕೂಲ್ಯತೆಗೆ ಬಂದಿರುವುದರಿಂದ ಉತ್ಸಾಹಭರಿತರಾಗಿ ಉದ್ಯೋಗಮಾಡಿರಿ, ತಾಪತ್ರಯಗಳಿಂದ ನಿವೃತ್ತರಾಗಿ ಇಷ್ಟಾರ್ಥವನ್ನು ಹೊಂದುವಿರಿ. ಆದರೆ ಚಂಚಲಚಿತ್ತರಾದ ನಿಮಗೆ ಹಿಡಿದಕಾರ್ಯವನ್ನು ಕೊನೆಯುವರೆಗೆ ಮುಟ್ಟಿಸುವ ಸ್ವಭಾವ ಕಡಿಮೆಯೆನ್ನಬೇಕಾಗಿದೆ. ಇದರಿಂದ ವ್ಯರ್ಥ ಧನವ್ಯಯಕ್ಕೆ ಗುರಿಯಾಗುವಿರಿ. ತಾ. 21ರಿಂದ 25ರ ವರೆಗೆ ಕಾಲವು ಪ್ರತಿಕೂಲವಿದೆ.

ಕುಂಭ—'ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತಿ' ಎಂದತೆ ಅನೇಕಗುಣ ಸಮೂಹದಲ್ಲಿ ಒಂದುದೋಷವಿದ್ದರೂ ಅದು ಕಾಣಿಸಿಕೊಳ್ಳದು, ಸದ್ಯ ಗ್ರಹಬಲಾಧಿಕನಾಗಿರತಕ್ಕ ನಿಮಗೆ ಒಂದೆರಡು ಪ್ರತಿಕೂಲ ಗ್ರಹರ ಸಂಬಂಧಿಗಳಾದ ಅವ ಅನಿಷ್ಟಗಳೂ ಬರಲಾರವೆನ್ನಬಹುದು, ವೃದ್ಧರೂ ಕೂಡ ವಿನತರುಣರಂತೆ ಉತ್ಸಾಹಿಗಳಾಗಿದ್ದು ನಿಮ್ಮ ಕಾಲವನ್ನು ಸುಖದಿಂದ ಕಳೆವರು. ಯಾರಿಗೂ ಯಾವವಿಧವಾದ ಚಿಂತೆಯೂ ಸಂಭವಿಸಲಾರದು, ಆರೋಗ್ಯದ ಸಲುವಾಗಿ ಪಿತ್ತವಸ್ತುಗಳನ್ನು ಬಿಟ್ಟು ಪದಾರ್ಥಗಳನ್ನೂ ಸೇವಿಸದಿರಿ, ತಾ. 24ರಿಂದ 27ರ ವರೆಗೆ ಎಚ್ಚರತಪ್ಪಿ ನಡೆಯದಿರಿ.

ಮೀನ—ಸರ್ವರಿಗೂ ಮುಖ್ಯವಾದ ಶರೀರದ ವಿಚಾರದಲ್ಲಿ ನೀವು ಬಹಳ ಜಾಗರೂಕರಾಗಿರತಕ್ಕದ್ದು ಈ ವಾರದಲ್ಲಿ ನಿಮ್ಮ ಜನ್ಮಸ್ಥಾನಕ್ಕೆ ಅಂಗಾರಕನು ಪ್ರವೇಶಿಸುವನು, ಆದಕಾರಣ ವೃಕ್ಷಾರೋಹಣ, ವಾಹನಯಾನಗಳನ್ನು ಆದಷ್ಟು ಕಡಿಮೆಮಾಡಿರಿ, ಧನ ದುಃಖದಿಂದಲೂ ಸುಖಾಭಾವದಿಂದಲೂ ನೀವು ಬಹಳ ವ್ಯಸನಾಕ್ರಾಂತರಾಗಿ ದುರ್ಬಲ ದೇಹಿಗಳಾಗಿರುವಿರಿ, ಹಗೆಯವರಿಂದ ವಿಘ್ನಗಳು ಬಂದರೂ ಹಾಂಗಮುಷ್ಟಿಯಂತೆ ಹಿಡಿದ ಕಾರ್ಯವನ್ನು ನೀವು ಬಿಡದೆ ಮುಂದೊತ್ತುವಿರಿ. ಕಾರ್ಯಕಾರ್ಯ ವಿಚಾರಮಾಡದೆ ಕೆಲವು ವಿಚಾರಗಳಲ್ಲಿ ವ್ಯರ್ಥ ಧನವ್ಯಯಿಸುವಿರಿ. ತಾ. 24, 25 ಮಾತ್ರ ಜಯ, ಲಾಭ, ಸ್ತ್ರೀಸುಖದಾಯಕವಾಗಿವೆ,

---

ನೋಟೀಸು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S $\frac{408}{39}$

ಮುಂಡಾಡಿ ಕೇಶವ ಪೈ—ವಾದಿ

ಮತ್ತು

ಶೇಷ ಪೂಜಾರಿ—ಬಾಬಣ್ಣ ಪೂಜಾರಿ ಅಳಿಯ, ಉಡುಪಿ ತಾಲೂಕು No. 76 ನೇ ಬಡಗುಬೆಟ್ಟು ಗ್ರಾಮ — ಬಿಲ್ಲವರ ಜಾತಿ, ಬೇಸಾಯ ಕೆಲಸ } ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ವಾದಿಯು ಮೂಲಿಹಕ್ಕಿನ No. 76ನೇ ಬಡಗುಬೆಟ್ಟು ಗ್ರಾಮದ್ದ ರೂಪ ಆಸ್ತಿಯನ್ನು 10-9-37ನೇ ತಾರೀಕಿನ ಮೂಲಗೇಣಿ ಚೀಟು ಪ್ರಕಾರ ಪ್ರತಿವಾದಿಯು ವಾದಿ ವಶಗೆ ಮೂಲಗೇಣಿ ಹಕ್ಕಿನಿಂದ ಅನುಭವಿಸಿ ಬರುತ್ತಾನೆ, ಆ ಬಾಬ್ತು 1938-39ನೇ ವರುಷಗಳಿಗೆ ಕೊಡತಕ್ಕ ಗೇಣಿ ಕೊಡಲಿಲ್ಲವಾದ್ದರಿಂದ ಮೂಲಗೇಣಿಯ ಶರ್ತ ಪ್ರಕಾರ ಆಸ್ತಿ ಸ್ವಾಧೀನತೆಗೂ, ಗೇಣಿ ಬಾಕಿಗೂ, ಹುಟ್ಟುವಳಿಗೂ ವಾದಿ ದಾಖಲು ಮಾಡಿದ ಸದ್ರಿ ವ್ಯಾಜ್ಯ ತಾರೀಕು 10-1-40 ಕ್ಕೆ ಈ ಕೋರ್ಟಿನಲ್ಲಿ ತನಿಖೆಗೆ ಇಡೋಣವಾಗಿಯದೆ, ಆಕ್ಷೇಪವಿದ್ದರೆ ಪ್ರತಿವಾದಿಯು ಆ ದಿವಸ ಹಗಲು 10ಘಂಟೆಗೆ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಪ್ರತಿವಾದಿಯ ಗೈರಹಾಜ್ರಿಯಲ್ಲಿ ಸದ್ರಿ ವ್ಯಾಜ್ಯ ತೀರ್ಮಾನಿಸಲಾದೀತು. ಎಂಬ ಸಂಗ್ತಿ ಈ ಮೂಲಕ ಪ್ರಕಟಿಸಲಾಗಿಯದೆ.—

16-12-1939 } By order of the Court
Udipi } **M. Vittal Kamath**
B. A. B. L.
Pleader for Plaintiff.

No WAR SCARE RISE IN PRICE

X'Mas Grand Reduction Sale.

Strong & Durable
Accurate
Time Keepers

All Swiss Made
GUARANTEED
Lever WATCHES.



No. 416 Chromium Case Rs 8—10
No. 417 Golden Case Rs. 6— 6
No 417 R Rolledgold 10yrs.
Jewelled Mov. Rs. 12—8



ROUND OR CUSHION

No. 401 Chromium Case Rs. 3—12
No. 402 Golden Case Rs. 4— 8



No. 424 Chromium Case Rs. 7—8
No 425 Golden Case Rs. 8—4
No. 425 R Rolledgold 10yrs. 13—6

As. 9/- Extra for Postage.

For further particulars send for our new cat.

(Correspondance in English)

EAPALAL & CO.
101 Abdul Rehman Street,
BOMBAY, 3.

LADIES MINIATURES.



No. 435 Chromium Cas. Rs. 12—0
No. 436 Rolledgold 10yrs Rs. 16—8



Geneva Movement.
No. 460 Chromium Case Rs. 10—8
No. 461 Golden Case Rs. 12—0
No. 462 Rolledgold 10yrs. Rs 15—0

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ಸಸೋನಿ ಶರೀರದೌರ್ಬಲ್ಯ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿರ್ಮೂಲಿಸುತ್ತದೆ.

"ಸೆಮಿನಾ ಟೊನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೋರತ್ ಫಾರ್ಮಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಯಿ 4

Sorath Pharmacy,
Null Bazzar, Duncan Road,
BOMBAY 4.

ರಾಜಿಯ ಮಾತುಕತೆ ನಡಿಸಲು ಸಾಧ್ಯವಿಲ್ಲ!

"ಮಿ. ಜಿನ್ನರೊಡನೆ ನಾನೀಗ ಮಾತುಕತೆ ನಡಿಸುವುದಾದರೆ, ನನ್ನ ಹಿಂದಿನ ಜೀವನವೆಲ್ಲವನ್ನೂ, ನನ್ನ ರಾಷ್ಟ್ರೀಯತೆಯನ್ನೂ, ನನ್ನ ಸ್ವಾಭಿಮಾನವನ್ನೂ ನಿರಾಕರಿಸಿ ಬಿಡಬೇಕಾಗುವುದೆಂದೇ ಪಂಡಿತ ಜವಾಹರಲಾಲರ ಉದ್ಗಾರ.

ಬೊಂಬಾಯಿಯಲ್ಲಿ ಪಂಡಿತರ ಆವೇಶಪೂರ್ಣ ಭಾಷಣ.

ಇದೇ ತಾ. 14ರಲ್ಲಿ ಬೊಂಬಾಯಿಯ ಚೌಪಾಟಿಯಲ್ಲಿ ಪ್ರಚಂಡ ಸಾರ್ವಜನಿಕ ಸಭೆ ನಡೆದಾಗ ಪಂಡಿತ ಜವಾಹರಲಾಲರು ಕೊಟ್ಟ ಭಾಷಣದ ಸಾರಾಂಶವು ಈ ರೀತಿ ಇರುತ್ತದೆ. "ಕಾಂಗ್ರೆಸ್ ಮಂತ್ರಿಗಳು ರಾಜಿ ಕೊಟ್ಟದ್ದು ರಾಜಕೀಯ ಪ್ರಶ್ನೆಗಾಗಿಯಲ್ಲದೆ ಜಾತಿಯ ಕಾರಣಗಳಿಗಾಗಿಯಲ್ಲ. ವೈಸರಾಯರು, ಗಾಂಧಿಜಿ ಮತ್ತು ಮಿ. ಜಿನ್ನರನ್ನು ಡಿಲ್ಲಿಗೆ ಕರೆದು, ಪ್ರಾಂತಿಕ ಆಡಳಿತದ ಕುರಿತು ಮಿ. ಜಿನ್ನರೊಡನೆ ಏನಾದರೊಂದು ರಾಜಿಮಾಡಿಕೊಳ್ಳುವುದುಚಿತವೆಂದು ಹೇಳಿದರು. ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ಕರೆದು, ಹಿಂದೀ ರಾಜಕೀಯ ಘಟನೆಯನ್ನು ತಯಾರಿಸುವ ಹಕ್ಕನ್ನು ಹಿಂದೀಯರಿಗಿತ್ತಲ್ಲಿ ಈಗಣ ವೈಷಮ್ಯಗಳು ತನ್ನಂತೆಯೇ ದೂರವಾಗುವವೆಂಬ ಕಾಂಗ್ರೆಸಿನ ಅಭಿಮತವನ್ನು ವೈಸರಾಯರಿಗೆ ತಿಳಿಸಲಾಯಿತು."

ಕಾಂಗ್ರೆಸಿನ ಗುರಿಯು ಸಂಪೂರ್ಣ ಸ್ವರಾಜ್ಯ ಸಾಧನೆಯಿರುವುದರಿಂದ, ಮುಸ್ಲಿಮ್‌ಲೀಗ್ ಕೂಡಾ ಅದೇ ನಿರ್ಣಯ ಮಾಡಿರುವುದರಿಂದ ಹಿಂದೂ ದೇಶದ ರಾಜಕೀಯ ಗುರಿಯ ಕುರಿತು ಲೀಗ್ ಮತ್ತು ಕಾಂಗ್ರೆಸು ಜತೆಗೂಡಿ ವೈಸರಾಯರಿಗುತ್ತರವೀಯುವುದೊಳ್ಳೇದೆಂದು ನಾನು ಮಿ. ಜಿನ್ನರಿಗೆ ಸೂಚಿಸಿದಾಗ ಅವರದಕ್ಕೊಪ್ಪಲಿಲ್ಲ. ಆಮೇಲೆ ಹಿಂದೂ ಮುಸಲ್ಮಾನ ಪ್ರಶ್ನೆಯ ಕುರಿತು ಮಿ. ಜಿನ್ನರೊಡನೆ ನಾನು ಮಾತಾಡಲಪೇಕ್ಷಿಸಿದೆನು. ಆಗ ತನ್ನ ದೇಹಸ್ಥಿತಿಯು ನೆಟ್ಟಗಿಲ್ಲೆಂದು ಹೇಳಿ ಬೊಂಬಾಯಿಗೆ ಹೋದ ಬಳಿಕ ಮಾತಾಡಬಹುದೆಂದರು ಮಿ. ಜಿನ್ನರು. ಅವರಿಂದ ಕರೆ ಬರುವುದೋ ಎಂದು ನಾನು 3 ವಾರ ಕಾದು ಕೂತೆ. ಅವರಿಂದೇನೂ ಕಾಗದ ಬಾರದುದರಿಂದ ನಾನೇ ಅವರಿಗೆ ನೆನಪು ಮಾಡಿ ಅವರನ್ನು ಯಾವಾಗ ಕಾಣಬಹುದೆಂದು ತಿಳಿಸಿದೆ. ತಾನು ಬೊಂಬಾಯಿಯಲ್ಲಿ 3 ವಾರ ಇರುವೆನು. ಆ ಮೂರು ವಾರಗಳಲ್ಲಿ ನನಗನುಕೂಲವಾದ ಯಾವ ದಿನದಲ್ಲಾದರೂ ನಾನವರನ್ನು ಕಾಣಲು ಸಂತೋಷಪಡುವೆನೆಂದವರು ಉತ್ತರವಿತ್ತರು. ನಾನು ತಾ. 14ಕ್ಕೆ ಬೊಂಬಾಯಿಗೆ ಬರುವೆನೆಂದೂ ಬಂದಕೂಡಲೇ ಫೋನುಮಾಡುವೆನೆಂದೂ ತಿಳಿಸಿದೆನು. ಮರುದಿನವೇ ಮಿ. ಜಿನ್ನರು ಮುಸಲ್ಮಾನ ವಿಮೋಚನಾದಿನಾಚರಣೆಯ ವಿನಂತಿ ಹೊರಡಿಸಿದರು. ಅದನ್ನೋದಿ ನಾನು ಖೇದಗೊಂಡೆ. ನಿರಾಧಾರವಾದ ಮತ್ತು ರುಜುಗೊಳಿಸಲ್ಪಡದ ಆರೋಪಗಳನ್ನು ಸಮರ್ಥಿಸಲು ಪ್ರದರ್ಶನಗಳನ್ನೇ ನಡಿಸುವುದು ಅಪಾಯಕರ. ಪದೇ ಪದೇ ಕೇಳಿಕೊಂಡರೂ ಈ ಆರೋಪಗಳು ಇಂತಹವೇ ಎಂದು ಹೇಳಿದವರಿಲ್ಲ. ಮೊದಲಾಗಿ ಆರೋಪಗಳನ್ನು ಮಾಡಿ ಆಮೇಲೆ ಅವುಗಳನ್ನು ಸಮರ್ಥಿಸಲು ಮುಸ್ಲಿಮ್ ಲೀಗಿನವರು ಪಿರ್‌ಪುರ್ ಕಮಿಟಿಯನ್ನು ನೇಮಿಸಿದರು. ಈ ಕಮಿಟಿಯವರು ಸಿಕ್ಕಸಿಕ್ಕವರೊಡನೆಲ್ಲಾ ದೂರುಗಳನ್ನು ಸಂಗ್ರಹಿಸಿದರು. ಈ ದೂರುಗಳು ಎಷ್ಟರಮಟ್ಟಿಗೆ ನಿಜವಾದುದೆಂಬುದರ ಗೊಡವೆಗನೇ ಹೋಗದೆ ಅವನ್ನೆಲ್ಲಾ ಒಟ್ಟುಗೂಡಿಸಿ, ಕಾಂಗ್ರೆಸ್ ಮಂತ್ರಿಗಳ ಅತ್ಯಾಚಾರವೆಂದವನ್ನು ಪ್ರಕಟಿಸಲಾಯಿತು. ಈ ಕಮಿಟಿಯ ವರದಿಯು ಜಾಹೀರುಗೊಳಿಸಲ್ಪಟ್ಟಿಲ್ಲ. ಅದರಲ್ಲಿ ವಿಸ್ಮಯಕರ ಹೇಳಿಕೆಗಳಿದ್ದುವು. ಉದಾಹರಣೆಗಾಗಿ ಗೋರಕಪುರದಲ್ಲಿ ಮುಸಲ್ಮಾನರ ಕೊಲೆಯ ಹತ್ಯಾಖಂಡ ನಡೆಯಿತೆಂದು ಅದರಲ್ಲಿ ಉಕ್ತವಾಗಿದೆ. ಈ ಕೊಲೆ ನಡೆದುದು ಯಾವಾಗ, ಹೇಗೆ, ಕೊಲ್ಲಲ್ಪಟ್ಟವರ ಸಂಖ್ಯೆ ಎಷ್ಟು, ಅವರ ಹೆಸರೇನೆಂಬ ಯಾವ ವಿವರವೂ ಕೊಡಲ್ಪಡಲಿಲ್ಲ. ಈ ಆರೋಪಗಳ ಕುರಿತು ಲೇಶಮಾತ್ರವಾದ ಪುರಾವೆಯೂ ಇರುವುದಿಲ್ಲ.

ಮುಸಲ್ಮಾನ ವಿಮೋಚನಾ ದಿನಾಚರಣೆಯು ಅಪಾಯಕರ! ಹಿಂದೀ ಪ್ರಶ್ನೆಯು ರಾಜಕೀಯವಾದುದೇ ಹೊರತು ಜಾತೀಯವಾದುದಲ್ಲ. ಬಂಗಾಳ ಮತ್ತು ಪಂಜಾಬು ಮಂತ್ರಿಗಳ ಡಾಂಬಿಕ ಆರೋಪ. ಗಾಂಧಿಜಿಯವರ ಕರೆ ಬಂದಾಗ ದೇಶವು ಹೋರಾಟಕ್ಕೆ ಸಿದ್ಧವಾಗಬೇಕು.

ಸರ್. ಸಿಕಂದರ್ ಹಾಯತ್ ಖಾನರೂ ಮಿ. ಫಜ್ಲುಲ್ ಹಕ್ಕರೂ ಕಾಂಗ್ರೆಸ್ ಮಂತ್ರಿಗಳ ಕುರಿತು ಆರೋಪಗಳನ್ನು ಮಾಡಿರುವರು. ಅವನ್ನು ರುಜುಪಡಿಸಲು ಆಹ್ವಾನಿಸಲ್ಪಟ್ಟಾಗ, ತನ್ನ ಸಾರ್ವಜನಿಕ ಹೇಳಿಕೆಗಳಿಗಷ್ಟೇನೂ ಪ್ರಾಮುಖ್ಯತೆ ಕೊಡಬಾರದೆಂದು ಪಂಜಾಬಿನ ಪ್ರಧಾನ ಮಂತ್ರಿಗಳು ಬರೆದರು. ತನ್ನ ಹೃದಯವು ಶುದ್ಧವಾಗಿದೆ. ತನ್ನ ಸಾರ್ವಜನಿಕ ಭಾಷಣಗಳಿಗೆ ಮಹತ್ವವೇನೂ ಕೊಡಬೇಕಾಗಿಲ್ಲೆಂದರು ಬಂಗಾಳದ ಪ್ರಧಾನ ಸಚಿವರು. ಆದರೆ ಮಿ. ಹಕ್ಕರು ಪುನಃ ಕಾಂಗ್ರೆಸ್ ಮಂತ್ರಿಗಳ ಮೇಲೆ ಆರೋಪ ಹೊರಿಸಿದರು. ಬೊಂಬಾಯಿ ಮಂತ್ರಿಗಳು ಕೆಲವು ಅತ್ಯಾಚಾರ ಮಾಡಿರುವರೆಂದು ಹೇಳಿದರು ಮೊದಲಾಗಿ. ಬೊಂಬಾಯಿ ಮಂತ್ರಿಗಳು ಅವನ್ನು ಅಲ್ಲಗಳೆದಾಗ, ತಾನು ಸಂಯುಕ್ತ ಪ್ರಾಂತದ ಮಂತ್ರಿಗಳನ್ನುದ್ದೇಶಿಸಿ ಮಾತಾಡಿದುದೆಂದರು. ಸಂಯುಕ್ತ ಪ್ರಾಂತದ ಪ್ರಧಾನ ಮಂತ್ರಿಗಳು ಅವನ್ನು ಸಿದ್ಧಗೊಳಿಸಬೇಕೆಂದು ಆಹ್ವಾನಿಸಿದಾಗ, ಬಿಹಾರ್ ಪ್ರಾಂತದ ಕೆಲವು ಸ್ಥಳಗಳ ಹೆಸರುಗಳನ್ನು ಸೂಚಿಸಿ ಪುರಾವೆಗಳು ತನ್ನಲ್ಲಿ ತಯಾರಿರುವವೆಂದರು. ಅದನ್ನು ತಿಳಿಸಬೇಕೆಂದು ನಾನು ಹಕ್ಕರಿಗೆ ಬರೆದಾಗ, ಅವುಗಳನ್ನು ತಾನು ಇನ್ನೂ ಸಿದ್ಧಗೊಳಿಸುತ್ತಿರುವೆನೆಂದರು. (ಈಗ ಮಿ. ಜಿನ್ನರು, ಕಾಂಗ್ರೆಸ್ ಮಂತ್ರಿಗಳ ಮೇಲಿನ ಆರೋಪಗಳನ್ನು ವಿಚಾರಿಸಲು ರೋಯಲ್ ಕಮಿಶನಿನ ನೇಮಕವಾಗಬೇಕೆಂದು ಸೂಚಿಸಿದ ವೇಳೆ, ಮಿ. ಹಕ್ಕರೂ ತನ್ನ ಪುರಾವೆಗಳನ್ನು ಈ ರೋಯಲ್ ಕಮಿಶನಿಗಲ್ಲದೆ ಪಂಡಿತ ಜವಾಹರಲಾಲರಿಗೊಪ್ಪಿಸುವ ಹಾಗಿಲ್ಲೆಂದು ಹೇಳಿರುವರು.)

ಕಾಂಗ್ರೆಸ್ ಮಂತ್ರಿಗಳ ಕುರಿತು ಮಾಡಲ್ಪಟ್ಟಿರುವ ಆರೋಪಗಳು ನಿರಾಧಾರವಾದುವೆಂದು ನಾನು ಸಂಪೂರ್ಣ ಜವಾಬ್ದಾರಿಯಿಂದ ದೃಢೀಕರಿಸುತ್ತೇನೆ. ಕೇವಲ ದ್ವೇಷಸಾಧಕ ಅಪಪ್ರಚಾರವದು. ವಿಮೋಚನಾದಿನವನ್ನಾಚರಿಸಿ ಈ ಆಧಾರರಹಿತ ಆರೋಪಗಳನ್ನು ಅನುಮೋದಿಸುವುದರಿಂದ ಜಾತೀಯ ಐಕ್ಯದ ಬದಲಿಗೆ ವೈಷಮ್ಯವೇ ಹೆಚ್ಚುವಂತಾಗುವುದು. ಇದನ್ನೆಲ್ಲಾ ನುಂಗಿಕೊಂಡು ಮಿ. ಜಿನ್ನರೊಡನೆ ಸಂಧಿಪ್ರಸ್ತಾಪಮಾಡುವುದಂತೂ ಸಾಧ್ಯವೇ ಇಲ್ಲ. ಮಿ. ಜಿನ್ನರು ಆಧಾರರಹಿತ ಆರೋಪಗಳನ್ನು ಹಠತೊಟ್ಟು ಮಾಡುತ್ತಿರುವಾಗ ಅವರೊಡನೆ ರಾಜಿಯ ಮಾತುಕತೆಯನ್ನು ನಾನು ಆರಂಭಿಸುವುದಾದರೆ ನನ್ನ ಮುಂದೆ ಮೂರು ದಾರಿಗಳು ತೆರೆದಿವೆ. ಒಂದೋ ನಾನು ರಾಜಕೀಯದಿಂದಲೇ ನಿವೃತ್ತನಾಗಿ ಹಿಮಾಲಯಕ್ಕೆ ಹೋಗಿ ಸನ್ಯಾಸಿಯಾಗಬೇಕು, ಇಲ್ಲವೆ ಹಿಂದೂ ದೇಶವನ್ನೇ ನಿರಂತರ



ವಾಗಿ ತ್ಯಜಿಸಿಬಿಟ್ಟು ಹೊರದೇಶಕ್ಕೆಲ್ಲಿಯಾದರೂ ಹೋಗಿ ವಾಸಿಸಬೇಕು. ಇಲ್ಲವಾದರೆ ಆತ್ಮಹತ್ಯೆಮಾಡಿಕೊಳ್ಳಬೇಕು. ಮಹಾತ್ಮಗಾಂಧಿಯವರು ಅನುಜ್ಞೆ ಕೊಟ್ಟರೂ ನಾನು ಇವಾವುವನ್ನೂ ಮಾಡಲಾರೆ. ಸೌಹಾರ್ದದಿಂದ ಜಾತೀಯ ಪ್ರಶ್ನೆಯು ಇತ್ಯರ್ಥಕ್ಕಾಗಿ ಮಾತುಕತೆ ನಡೆಸುವಂತಾಗುವ ದಿನಕ್ಕಾಗಿ ದೇಶವು ಕಾಯಬೇಕು.

ಹಿಂದೂದೇಶದ ಎಲ್ಲಾ ಸಮಾಜಗಳವರ ವಿಶ್ವಾಸವನ್ನೂ ಕಾಂಗ್ರೆಸು ಪಡೆದಿದೆ. ಗಾಂಧಿಜಿಯವರ ಸ್ಫೂರ್ತಿಯುಕ್ತ ನಾಯಕತ್ವದಲ್ಲಿ ಕಾಂಗ್ರೆಸು ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ವಿರೋಧಿಸಿ ಹೋರಾಡಿದೆ. ಕಾಂಗ್ರೆಸು ಅಧಿಕಾರ ಸ್ವೀಕರಿಸಿದೊಡನೆಯೇ ಸಾಮ್ರಾಜ್ಯಶಾಹಿ ವಿರೋಧವಾದ ಯುದ್ಧವೇನೂ ಕೊನೆಹೊಂದಲಿಲ್ಲ. ಕಾಂಗ್ರೆಸು ಎಲ್ಲಾ ಸಮಾಜಗಳ ಪ್ರತಿನಿಧಿ ಸಂಸ್ಥೆಯಾಗಿರುವುದರಿಂದ ಮತ್ತು ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಕಾರ್ಯಕ್ರಮಕ್ಕೆ ಮುಸ್ಲಿಮ್ ಲೀಗು ಒಪ್ಪದುದರಿಂದ ಮುಸ್ಲಿಮ್ ಲೀಗ್ ಮೊದಲಾದ ಪಕ್ಷಗಳೊಂದೊಡಗೂಡಿದ ಸಂಯುಕ್ತ ಮಂತ್ರಿಮಂಡಲವು ಸಾಧ್ಯವಾಗಲಿಲ್ಲ. ಈಗ ದೇಶವು ಎದುರಿಸಬೇಕಾದುದು ಸಾಮ್ರಾಜ್ಯಶಾಹಿಯನ್ನಲ್ಲದೆ ಜಾತೀಯ ಪ್ರಶ್ನೆಯನ್ನಲ್ಲ. ಕನ್ಸ್ಟಿಟ್ಯುವೆಂಟ್ ಎಸೆಂಬ್ಲಿಯು ಎಲ್ಲಾ ಪಕ್ಷ ಮತ್ತು ಸಮಾಜಗಳ ಪ್ರತಿನಿಧಿಗಳನ್ನೊಳಗೊಳ್ಳುವುದು. ಅಲ್ಪಸಂಖ್ಯಾಕರ ಒಪ್ಪಿಗೆಯಿಂದ ಮಾತ್ರ ದೇಶದ ರಾಜ್ಯಾಂಗರಚನೆಯಾಗುವುದು. ಅದರಲ್ಲಿ ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳೆಲ್ಲಾ ರಕ್ಷಿಸಲ್ಪಡುವವು. ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಯ ರಕ್ಷಣೆಯ ಕುರಿತು ಒಡಂಬಡಿಕೆಯು ಅಸಾಧ್ಯವಾದ ಪಕ್ಷದಲ್ಲಿ ಆ ಪ್ರಶ್ನೆಯನ್ನು ಅಂತರರಾಷ್ಟ್ರೀಯ ಕಮಿಶನೊಂದರ ಮಧ್ಯಸ್ತಿಕೆಗೊಪ್ಪಿಸಿ ತೀರ್ಮಾನಿಸಬಹುದು. ಕಾಂಗ್ರೆಸು ಹೋರಾಡುವುದು ಸ್ವರಾಜ್ಯಕ್ಕಾಗಿ. ಅದು ದೊರೆತೊಡನೆಯೇ ಕಾಂಗ್ರೆಸ್ ಸಂಸ್ಥೆಯನ್ನೇ ಕೊನೆಗೊಳಿಸಬಹುದು.

ಇಂದಿನ ಚೇಂಬರ್ಲೇನ್ ಮಂತ್ರಿಮಂಡಲವು ವಿವೇಕಶೂನ್ಯವಾದುದು. ಲೋರ್ಡ್ ನೋರ್ತ್‌ರ ನಂತರ ಇಷ್ಟೊಂದು ದೂರದೃಷ್ಟಿ ಹೀನ ಮಂತ್ರಿ ಮಂಡಲವೇ ಇಂಗ್ಲೆಂಡಿನಲ್ಲಿರಲಿಲ್ಲ. ಹಿಂದೀ ರಾಜಕೀಯ ಪ್ರಶ್ನೆಯನ್ನು ರಾಜಿಯಿಂದ ತೀರ್ಮಾನಿಸುವ ಎಲ್ಲಾ ಪ್ರಯತ್ನಗಳೂ ನಿಷ್ಫಲವಾಗಿ ಗಾಂಧಿಜಿಯವರು ಸತ್ಯಾಗ್ರಹ ಮಾಡುವಂತಾಗುವಾಗ ಎಲ್ಲಾ ಪ್ರಾಂತದವರೂ ಅದರಲ್ಲಿ ಉತ್ಸಾಹದಿಂದ ಭಾಗವಹಿಸಲು ಈಗಲೇ ಸಿದ್ಧತೆ ಮಾಡಬೇಕು. ನನ್ನ ಪ್ರಾಂತವು ಈಗಲೇ ಸಿದ್ಧವಾಗಿದೆ. ಗಾಂಧಿಜಿಯವರು ಆಜ್ಞೆ ಕೊಟ್ಟೊಡನೆಯೇ ಅಗ್ರಗಾಮಿಯಾಗಿ ಅದು ಮುನ್ನಡೆಯಲಿದೆ. ಇತರ ಪ್ರಾಂತಗಳೂ ಗಾಂಧಿಯವರ ಪಂಕ್ತಿಯಲ್ಲಿ ತೇರ್ಗಡೆ ಹೊಂದಲೆತ್ನಿಸುವವೆಂದು ನಿರೀಕ್ಷಿಸುತ್ತೇನೆ.

NAVAYUGA
Advertisement Tariff
1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-Navayuga UDIPI.

(೫ನೇ ಪುಟದಿಂದ ಮುಂದುವರಿಸಿದ್ದು)

ಕೊಡಲಾಗುವುದು. ಯಾರಾದರೂ ರೋಗಗ್ರಸ್ತರೆಂದು ತಿಳಿದುಕೊಳ್ಳಲ್ಪಡುವುದಿಲ್ಲ. ಅವರು ಒಂದೋ ನೆಟ್ಟಗಿರಬೇಕು ಇಲ್ಲವೇ ಸಾಯಬೇಕು. ನಡುವಿನ ಕಾಯಿಲೆಯ ಅವಸ್ಥೆಯೇ ಅವರಿಗಿಲ್ಲ.

ಹಾಜರು ಕರೆಯುವಾಗ ಅನೇಕರಿಗೆ ನೆಟ್ಟಗೆ ನಿಂತುಕೊಳ್ಳುವಷ್ಟರ ಶಕ್ತಿ ಇರುವುದಿಲ್ಲ. ಅವರ ಸಂಗಾತಿಗಳವರನ್ನು ಎತ್ತಿ ಹಿಡಿಯಬೇಕು. ಕೆಳಗೆ ಬಿದ್ದವರನ್ನಾದರೂ ಎತ್ತಿ ಹಿಡಿದು ಮುಖನೋಡಿ ಹಾಕುವ ಹಾಜರು ಭರ್ತಿಮಾಡಬೇಕು. ರಸ್ತೆ ಬದಿಯಿಂದ ¼ ಘಂಟೆ ದಾರಿ ದೂರವಿರುವ ಸ್ಥಳದಲ್ಲಿ ಕಲ್ಲೊಡೆದು ತಂದು ರಸ್ತೆ ಕಟ್ಟುವುದೇ ಕೈದಿಗಳು ಮಾಡತಕ್ಕ ಕೆಲಸ. ಈ ಕೆಲಸದ ಸ್ಥಳ ಶಿಬಿರದ ಹೊರಗೆ. ಆದರೆ ವಿದ್ಯುತ್ ಸರಿಗೆಗಳ ಬೇಲಿಯೊಳಗೆ. ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುವವರಿದ್ದಾರೆ. ಆದರೆ ಎಲ್ಲವರೂ ಗುಂಡುಹೊಡೆದು ಕೊಲ್ಲಲ್ಪಡುತ್ತಾರೆ. ತಮ್ಮ ಅಸಹನೀಯ ಪೀಡೆಯನ್ನು ತಾಳಿಕೊಳ್ಳಲಾರದೆ ಕೆಲವರು ತಲೆ ತಪ್ಪಿಸಿಕೊಳ್ಳುವಂತೆ ನಟಿಸಿ ಗುಂಡಿಗೆ ಬಲಿಬಿದ್ದು ಕೊಲ್ಲಲ್ಪಡುತ್ತಾರೆ.

(ನಾಝಿಗಳ ಪೈಶಾಚಿಕ ಶಿಕ್ಷೆಯ ಬೇರೆಬೇರೆ ವಿಧಾನಗಳಿಗಾಗಿ ಬರುವ ಸಂಚಿಕೆಯನ್ನು ನಿರೀಕ್ಷಿಸಿರಿ.)

GET RICH
AND
PROSPEROUS
through Simple
Means upheld and
pursued by
Millions.........!
WRITE NOW WITH
STAMP.—
K. S. Row,
Worli, BOMBAY.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪಿನ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ. ಕೇವಲ ಜಮಾ ಖರ್ಚಿನ ಲೆಕ್ಕವಿದ್ದರೂ ಸಾಲದು. ಆದರಿಂದ ತಯಾರಿಸಿದ ಸಾರಾಂಶದ ನಿಬಂಧನೆ ಕೆಲವೇ ದಿವಸಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು. ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಕೂಡಲೆ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಪರಿಣಾಮವಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು. ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು. "ರಿಟರ್ನ್" ಕಳ್ಸಿಯಾಗಿ ಹೋಗಿದ್ದರೂ ಕೆಡವಾಗಲಿಲ್ಲ. ಲೆಕ್ಕ ಹಾಜರ ಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡೆಸಿರಿ.

ಎಸ್. ಎಸ್. ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

ಮೈಸೂರು

(ಸ್ವಂತ ಬಾತ್ಮೀದಾರರಿಂದ)

ತಾ. 18-12-39.

ಶ್ರೀ. ಮಹದೇವ ದೇಸಾಯಿಗಳ ಆಗಮನ— ಮೈಸೂರು ಕಾಂಗ್ರೆಸಿಗೂ, ಸರ್ಕಾರದವರಿಗೂ ಸೌಹಾರ್ದವೇರ್ಪಡಿಸುವ ಸಲುವಾಗಿ ಮಹಾತ್ಮ ಗಾಂಧಿಯವರ ಆಪ್ತ ಕಾರ್ಯದರ್ಶಿಗಳಾದ ಶ್ರೀ ಮಹದೇವ ದೇಸಾಯಿಗಳು ತಮ್ಮ ಪುತ್ರರೊಂದಿಗೆ ಆಗಮಿಸಿ, ಸರ್ಕಾರದ ಅತಿಥಿಗಳಾಗಿ 'ರೇಸ್ವ್ಯೂ' ಕಟ್ಟೋಣದಲ್ಲಿ ಬಿಡಾರವಾಡಿದ್ದರು. ಶ್ರೀಯುತರು ವಾರ್ಧಾದಿಂದ ಮದ್ರಾಸ್ ಮೂಲಕ ಬೆಂಗಳೂರಿಗೆ ಬಂದಾಗ ದಿವಾನರ ಪುತ್ರರೂ ಕಾರ್ಯದರ್ಶಿಗಳೂ ಮತ್ತು ಕಾಂಗ್ರೆಸ್ ಪರವಾಗಿ ಕಾಂಗ್ರೆಸ್ ಅಧ್ಯಕ್ಷರೂ, ಇತರರೂ ಸ್ವಾಗತವಿತ್ತು ಪುಷ್ಪಹಾರಗಳನ್ನರ್ಪಿಸಿದರು. ನಂತರ ಶ್ರೀಯುತರು ಬ್ರಿಟಿಷ್ ರೆಸಿಡೆಂಟರೊಂದಿಗೂ, ದಿವಾನರೊಂದಿಗೂ, ಇತರರೊಂದಿಗೂ, ಮೈಸೂರು ದೇಶದಲ್ಲಿ ಈಗ ಉಂಟಾಗಿರುವ ಪರಿಸ್ಥಿತಿಯ ವಿಚಾರವಾಗಿ ದೀರ್ಘಕಾಲ ಚರ್ಚೆ ನಡೆಸಿ ಸರ್ಕಾರದವರು ಪ್ರಜೆಗಳಿಗೆ ಕಲ್ಪಿಸಿಕೊಡುತ್ತಿರುವ ಸೌಕರ್ಯಗಳನ್ನು ತಿಳಿದರು.

ನಂತರ ಶ್ರೀ. ದೇಸಾಯಿಗಳು ಕಾಂಗ್ರೆಸ್ ಅಧ್ಯಕ್ಷ, ವರ್ಕಿಂಗ್ ಸಮಿತಿ ಸದಸ್ಯರುಗಳೊಂದಿಗೆ ಅವರ ಮಾಡುತ್ತಿರುವ ಕಾರ್ಯಗಳನ್ನು ಸಾವಧಾನವಾಗಿ ಚರ್ಚಿಸಿದ ಮೇಲೆ ಜೈಲಿನಲ್ಲಿರುವ ಅನೇಕ ರಾಜಕೀಯ ಕೈದಿಗಳಿಗೆ ಪೋಲೀಸರು ಕೊಡುತ್ತಿರುವ ಹಿಂಸೆಗಳ ಆಪಾದನೆ ದೂರು ಬರಲು ಕೆಲವು ಕೈದಿಗಳನ್ನು ಶ್ರೀ. ದೇಸಾಯಿಗಳು ಸ್ವತಃ ನೋಡಿ ದಿವಾನರ ಬಳಿಗೆ ಅವರನ್ನು ಕರೆದುಕೊಂಡು ಹೋಗಿ ಎಲ್ಲವನ್ನೂ ದಿವಾನರಿಗೆ ತಿಳಿಸಿದರೆಂದೂ ಹೇಳಲಾಗಿದೆ.

ಶ್ರೀ. ದೇಸಾಯಿಗಳು, ಮೈಸೂರು ಕಾಂಗ್ರೆಸಿನವರು ಮಾಡುತ್ತಿರುವ ಕಾರ್ಯಗಳನ್ನು ನೋಡುವ ಸಲುವಾಗಿ ಅನೇಕ ಕಾಂಗ್ರೆಸ್ ಕಚೇರಿಗೆ ಭೇಟಿ ಕೊಟ್ಟರು. ಮತ್ತು ಅನೇಕ ಜೈಲುಗಳಿಗೆ ಹೋಗಿ ರಾಜಕೀಯ ಕೈದಿಗಳನ್ನು ನೋಡಿದರು. ಸಂಸ್ಥಾನದ ಕೆಲವು ಮುಖ್ಯ ಭಾಗಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರೊಡಗೂಡಿ ಪ್ರವಾಸಮಾಡಿ ಹಳ್ಳಿಗಳ ಬಡ ಸ್ಥಿತಿಯನ್ನು ಸ್ವತಃ ನೋಡಿದರು. ಶ್ರೀಯುತರು ದಿವಾನರೊಂದಿಗೆ ಒಂದು ದಿನ ಮೈಸೂರಿಗೆ ಬಂದಿದ್ದರು.

ಶ್ರೀಯುತರು ಮೈಸೂರು ಸಂಸ್ಥಾನದ ಸ್ಥಿತಿಗತಿಗಳನ್ನೂ ಕಾಂಗ್ರೆಸಿನವರು ಏನು ಬೇಕೆಂದು ಅಪೇಕ್ಷಿಸುತ್ತಿರುವರೋ ಅವೆಲ್ಲವನ್ನೂ ತಿಳಿದು ಮತ್ತು ಕೇಳಿಕೊಂಡಿರುವುದಲ್ಲದೆ, ಸರ್ಕಾರದವರು ಹೇಳುವುದನ್ನೂ ಕೇಳಿಕೊಂಡು ತಿಳಿದುಕೊಂಡಿದ್ದಾರೆ. ಶ್ರೀಯುತರು ಬೆಂಗಳೂರಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು.

ಶ್ರೀ. ದೇಸಾಯಿಗಳು ಬೆಂಗಳೂರಿಂದ ಮದ್ರಾಸ್ ಮೂಲಕ ವಾರ್ಧಾಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಮಹಾತ್ಮರನ್ನು ಕಂಡು ಮೈಸೂರು ವಿಚಾರ ತಿಳಿಸಿದ ಮೈ. ಕಾಂ. ಗೂ, ಸರ್ಕಾರಕ್ಕೂ ಏನು ನಡೆಯಬೇಕೆಂಬುದನ್ನು ತಿಳಿಸುವರೆಂದು ಗೊತ್ತಾಗಿದೆ.

ಅಖಿಲಭಾರತ ರೇಶ್ಮೆ ಸಮ್ಮೇಳನ— ಮೊಟ್ಟಮೊದಲನೆ ಅಖಿಲಭಾರತ ರೇಶ್ಮೆ ಸಮ್ಮೇಳನವು ಬೆಂಗಳೂರಲ್ಲಿರುವ ನ್ಯಾಯವಿಧಾಯಕ ಸಭಾಮಂದಿರದಲ್ಲಿ ಕಳೆದ ಗುರುವಾರ ನಡೆಯಿತು. ಮೈಸೂರು ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಡೈರೆಕ್ಟರರವರು ಅಧ್ಯಕ್ಷತೆ ವಹಿಸಿದ್ದರಲ್ಲದೆ ಸ್ವಾಗತ ಭಾಷಣಮಾಡಿದರು. ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಶ್ರೀ. ಎನ್. ಮಾಧವ ರಾಯರು ಸಮ್ಮೇಳನಾರಂಭೋತ್ಸವ ನಡೆಸಿ ಭಾಷಣ ಮಾಡಿದರು. ಈ ಸಮ್ಮೇಳನಕ್ಕೆ ಭಾರತವಾದ್ಯಂತದಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು. ಭರತ ಖಂಡದ ರೇಶ್ಮೆ ಉತ್ತೇಜನ ಮತ್ತು ಇತರ ವಿಷಯಗಳನ್ನು ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳು ಅನೇಕ ಪ್ರೇಕ್ಷಣೀಯ ಮತ್ತು ರೇಶ್ಮೆ ಕೈಗಾರಿಕೆ ಪ್ರದೇಶಗಳಿಗೆ ಭೇಟಿಯಿತ್ತರು.

ಸೊಬಗಿನ ರಾಣಿ ನಸೀಮ್ ಮತ್ತು ಶೀಲಾ— ಬೊಂಬಾಯಿ "ಮಿನರ್ವಾ" ಕಂಪೆನಿಯವರು ತಯಾರಿಸಿರುವ 'ಪುಕಾರ್' ಚಿತ್ರದಲ್ಲಿ ಪಾತ್ರ ವಹಿಸಿರುವ ಮಿಸ್. ನಸೀಮ್ ಮಿಸ್. ಶೀಲ, ಮಿ. ಸೊಹ್ರಾಬ್ ಮೋದಿ, ಚಂದ್ರಮೋಹನ್ ಮುಂತಾದ ಸಿನೆಮಾ ನಟನಟಿಯರುಗಳು ಮೈಸೂರಿಗೆ ಬಂದಿದ್ದರು. ಇವರುಗಳು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿಕೊಟ್ಟರು. ಮಿ. ಸೊಹ್ರಾಬ್ ಮೋದಿಗಳು "ಭಾರತೀಯ ಸಿನೆಮಾ ಕೈಗಾರಿಕೆ" ವಿಚಾರವಾಗಿ ಪುಟ್ಟ ಭಾಷಣಮಾಡಿದರು. ಮಿಸ್. ನಸೀಮಳು ತೆಳುವಾದ ಜಾರ್ಜೆಟ್ ಸೀರೆ, ತೋಳಿಲ್ಲದ ಕುಪ್ಪಸ, ಕಾಲಿಗೆ ಮೆಟ್ಟು ಮತ್ತು ತಲೆಬಾಚದೆ ಕಿವಿಗೆ ಲೋಲಕ್ ಧರಿಸಿ, ಥಳಕು ಮಿಣುಕಿನಿಂದ ಇದ್ದಳು. ಮಿಸ್. ಶೀಲಳು ತುಟಿಗೆ ಬಣ್ಣ ಬಳಿದಿದ್ದಳು. ಇವರುಗಳು ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತ ಮೇಲೆ ಬೆಂಗಳೂರು ಮೂಲಕ ಬೊಂಬಾಯಿಗೆ ಪ್ರಯಾಣ ಬೆಳೆಸಿದರು.

ಅಖಿಲಭಾರತ ಕೈಗಾರಿಕೆ ಸಮ್ಮೇಳನೆ— ಅಖಿಲಭಾರತ ಕೈಗಾರಿಕೆಯು ೧೧ನೇ ಅಧಿವೇಶನವು ಮೈಸೂರಲ್ಲಿ ಲಲಿತಮಹಲಿನಲ್ಲಿ ಮೊನ್ನೆ ನಡೆಯಿತು. ಇಂಡಿಯಾ ಸರ್ಕಾರದ ವಾಣಿಜ್ಯ ಸಚಿವರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‍ರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ದಿವಾನರಾದ ಸರ್. ಮಿರ್ಜಾರವರು ಪ್ರತಿನಿಧಿಗಳನ್ನು ಸ್ವಾಗತಿಸಿ ಭಾಷಣಮಾಡಿದರು. ಸಭೆಗೆ ಶ್ರೀ. ಪ್ರಿನ್ಸ್ ಯುವರಾಜರು ಒಡೆಯರು ಬಂದಿದ್ದರು. ದಿವಾನರ ಸ್ವಾಗತ ಭಾಷಣವು ಶ್ರೀಮನ್ಮಹಾರಾಜರ ಸಂದೇಶದೊಡನೆ ಕೂಡಿತ್ತು. ಅಧ್ಯಕ್ಷರ ಭಾಷಣವು ಸ್ವಾರಸ್ಯವಾಗಿತ್ತಲ್ಲದೆ ಭಾರತದ ಕೈಗಾರಿಕೆ ಅಭಿವೃದ್ಧಿ ಮತ್ತು ಭಾರತದಲ್ಲಿ ತಯಾರಾಗುವ ಔಷಧಿ ಸಾಮಗ್ರಿಗಳು ಅಭಿವೃದ್ಧಿಗೆ ಬಂದಿದೆಯೆಂದೂ ಇದರ ಸಲುವಾಗಿ ಒಂದು ಸಮಿತಿ ನೇಮಿಸಲಾಗಿದೆಯೆಂದೂ ತಿಳಿಸಿದರು.

ಈ ಸಮ್ಮೇಳನಕ್ಕೆ ಇಡೀ ಭರತಖಂಡದಿಂದ ಸುಮಾರು ಐವತ್ತು ಮಂದಿ ಪ್ರತಿನಿಧಿಗಳಾಗಿ ಬಂದಿದ್ದರು. ಇವರು 3ದಿನ ಸಭೆಸೇರಿ ಭಾರತದ ಕೈಗಾರಿಕೆಗಳ ಕುರಿತು ಚರ್ಚಿಸಿದರು.

ಕಲಾ ವಸ್ತು ಪ್ರದರ್ಶನ ಸರ್. ರಾಮಸ್ವಾಮಿ ಮೊದಲಿಯಾರರು ಪ್ರಾರಂಭೋತ್ಸವ ನಡೆಸಿದರು— ಮೈಸೂರು ವಿಶ್ವವಿದ್ಯಾನಿಲಯ ಸಂಘದಾಶ್ರಯದಲ್ಲಿ ಏರ್ಪಾಡಾದ ಅಖಿಲ ಭಾರತ ವಿಶ್ವವಿದ್ಯಾನಿಲಯ ಕಲಾವಸ್ತು ಪ್ರದರ್ಶನದ ಪ್ರಾರಂಭೋತ್ಸವವನ್ನು ಅ. ಭಾ. ಕೈಗಾರಿಕೆ ಸಮ್ಮೇಳನ ಅಧ್ಯಕ್ಷತೆ ವಹಿಸಲು ಇಲ್ಲಿಗೆ ಬಂದಿದ್ದ ಸರ್. ರಾಮಸ್ವಾಮಿ ಮೊದಲಿಯಾರರು ಈ ಬೆಳಿಗ್ಗೆ ನಡೆಸಿ ಅಮೋಘ ಭಾಷಣ ಮಾಡಿದರು. ವಸ್ತು ಪ್ರದರ್ಶನವನ್ನು ಕಾಲೇಜಿನ ಯೂನಿಯನ್ ಹಾಲಿನಲ್ಲಿ ಏರ್ಪಡಿಸಲಾಗಿತ್ತು. ಭಾರತದಾದ್ಯಂತದೆಲ್ಲೂ ಇರುವ ವಿಶ್ವವಿದ್ಯಾನಿಲಯಗಳಿಂದ ಅನೇಕ ಸೊಗಸಾದ ವಸ್ತುಗಳು ಪ್ರದರ್ಶನಕ್ಕೆ ಬಂದಿರುವುದನ್ನು ಪ್ರದರ್ಶಿಸಲಾಗಿತ್ತು. ಈ ಪ್ರದರ್ಶನದ ಅಂಗವಾಗಿ ಪ್ರತಿಸಂಜೆಯೂ ನಾಟಕ, ಸಂಗೀತ ಮತ್ತು ದೇಹ ಪ್ರದರ್ಶನ ನಡೆದು ಬಹುಮಾನ ಹಂಚಿದ ಮೇಲೆ ಪ್ರದರ್ಶನ ಮುಗಿಯಿತು.

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—
ಮದನಮಂಜರಿ
ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.
ಕ್ರಯ:- 40 ಮಾತ್ರೆಗಳ ಡಬ್ಬಿ 1ರ ರೂ. 1—0—0.
ಮದನಮಂಜರಿ ಫಾರ್ಮಸಿ, 184 ಜೈನಾಬಜಾರ್ ಮದ್ರಾಸ್.
ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ಸಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ತೀರಾ ಕಡಿಮೆ ಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE**.

ಕೊಪರನ್ ಲಾರ್ಜ್ ಸೈಜು 0-13-0, ಕೊಪರನ್ ಸ್ಟ್ಯಾಂಡರ್ಡ್ ಸೈಜು 0-8-0, ಟಿಂಡರ್ಗವರ ಸ್ಟ್ಯಾಂಡರ್ಡ್ ಸೈಜು 0-8-0.

THE **MOOLKY BANK, LTD.,**
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ.
ಭಂಗಾರ ವ ಸರಕಿನ ಈಡಿನ ಮೇಲೆ ನೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.
ನಿರಖು ಠೇವಣಾತಿ ನೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ನೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.
ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ ಆಕಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿಸಿ ಮತ್ತೆ ಕೈಗಸೇರುವುದು. ಸೀಸೆ1ಕ್ಕೆ12ಆಣೆ, ಟಪಾಲಖರ್ಚು ಆಣೆ.



ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ.
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸಂಚಿತವಾದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವರು. **ಸುಖಸೇವನ:** ಸುಖಸೇವನದಿಂದ ಮಧುರವೂ ಮನೋಹರವಾದ ಈ ರಸಾಯನವು ಬಾಣಂತಿಯ ರಕ್ತರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ.2-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಮಹಾಬಲ ಹೆಬ್ಬಾರ್, ತೀರ್ಥಹಳ್ಳಿ.

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಸ್ಸ್ ದವಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ: **ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ** 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸೈನ್ ಬೋರ್ಡು, ಪಿತ್ತಾಳೆ ಬಿಲ್ಲೆ, ಮೊನೊಗ್ರಾಮ್ ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.
Approved firm by the Govt. of Mysore. Certified by the Agent of the Govt. of India in Ceylon

SALE ! SALE ! SALE !

ಮುಂಚಿನ ಕ್ರಯ ರೂ. 10,
ಈಗಿನ ಕ್ರಯ ರೂ. 3-12-0.

Swiss Lever Wrist Watch
ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನಮೂನೆ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವದರಿಂದ ಸುಲಭ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಖರ್ಚಾಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷದಷ್ಟೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಜವಾನ್ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತರಿಸಲಿಕ್ಕೆ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ **3-12-0**

ROYAL CO. 19 Bat^ OWCARPET G. T. MADRAS.
ರಾಯಲ್ ಕಂಪೆನಿ, ೧೯ ಬೆಟ್ ಸಾವ ಕಾರ ಪೇಟೆ, ಜಿ. ಟಿ. ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ಮರ್ಕ ಮುಲಾಮು —
ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ಮಾರ್ಕ
ಮುಲಾಮಿನ ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.
ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟದಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಯಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಆವಶ್ಯಕವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಶ್ರೀಮಂತರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತ ಜ್ವರ ಮತ್ತು ಮಲೇರಿಯಾ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ ಬಹುಮೂತ್ರ ಸೀಮೂತ್ರ ಅನ್ನಕೋಶ ಕಲಿಜದ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ನಿಶ್ಚಯಾತ್ಮಕವಾಗಿ ಪ್ರವರ್ತಿಸಿ ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಮೈಶ್ವಾಸಾಯಿ ವಾತರೋಗ, ಪಕ್ಷವಾತ, ಗೂರಲು ಕ್ಷಯ, ಸ್ನೇಹವ್ಯಾಧಿ, ಅಜೀರ್ಣತ್ವ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಹಿಂಡುವ ಚಿಕ್ಕ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ಸೀಘ್ರವಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿವಾರಣೆಯಾಗುವದಕ್ಕೆ ನೂರಾರು ಪ್ರಮಾಣ ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಕಿವಿನೋವು ನೆಗಡಿಯಿಂದಲೇ ಆಗಲಿ ಜ್ವರದಿಂದಲೇ ಅಥವಾ ನರಗಳ ದುರ್ಬಲತೆಯಿಂದಲೇ ಆಗಲಿ ಬರುವ ಕಿವುಡು ವಾನಿಂಗ್ ಟಿಲ್ಲಿ ತೈಲದಿಂದ ಖಂಡಿತ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗಸರ ಮುಟ್ಟಿನ ಕಾಲದ ಅಶಕ್ತತೆಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಏಟಿನ ಗಾಯಗಳು, ಹಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತಶುದ್ಧಿಗೆ ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್ ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸಿಕ್ಕುತ್ತದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ

ವಿಳಂಬ ಮಾಡಿದರೆ ದೊರೆಯುವುದು ಕಷ್ಟ



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರ್ರ್ಯೋಡ್ಸ್ ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ. ಮಲಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಯೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹೋಗುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರ್ರ್ಯೋಡ್ ಒಯಿಂಟ್‌ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಲ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1 4-0 ವಿ.ಪಿ. ಬೇರೆ

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯು ಪ್ರಸಿದ್ಧವಿರುವವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನ-ಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುಖವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ನಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು. ಮಲಬದ್ಧತೆಯು ಲಕ್ಷಣಗಳಿದವರು ಗುಳಿಗೆಗಳನ್ನು ಸದಾ ಸೇವಿಸತಕ್ಕದ್ದು. ಆಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಿವೆ. ಒಂದು ಡಬ್ಬಿಗೆಂದಲ್ಲಿ 40 ಮಾತ್ರೆಗಳಿವೆ. ಸೀಸೆ 1ಕ್ಕೆ ರೂ. 1 0 0 ವಿ. ಪಿ. ಬೇರೆ

ಹಿಂದುಸ್ಥಾನದ ಪ್ರಮುಖ ಏಜಂಟರ:

The Eclipse Distributing Agency,

Dahanu Road, B. B & C. I. Ry BOMBAY PRESIDENCY.

ದಹಣು ರೋಡ್, ಬಿ. ಬಿ. & ಸಿ. ಐ. ರೈಲ್ವೇ, ಮುಂಬಯಿ ಇಲಾಖೆ.

tered No. M 3618

28-12-1939

ನವಯುಗ

NAVAYUGA

ADVERTISE IN **Navayuga Annual 1940**

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಅದ್ಭುತ ಕ್ರಾಂತಿ?-

ನವಯುಗ ಪರ್ಯಾಯ ಸಂಚಿಕೆ.

* 1940ನೇ ಜನವರಿ 11ಕ್ಕೆ ಹೊರಡುವ ವಿಶೇಷ ಸಂಚಿಕೆ. *

ಹೊಸ ಹಾದಿ! ಹೊಸ ವಿಚಾರ! ಹೊಸ ಆಕರ್ಷಣ!

ಭೀಕರ ಯುದ್ಧವು ಲೋಕವನ್ನೇ ಕಂಗೆಡಿಸಿದ್ದರೂ
ನವಯುಗವು ಎಂದಿನಂತೆ ವಿಶೇಷ ಸಂಚಿಕೆಯನ್ನು
ಹೊರಡಿಸುವ ಸಾಹಸಕ್ಕೆ ಕೈಯಿಕ್ಕಿರುವುದು.

ಹೊಸ ವರ್ಷದ ಈ ಕಾಣಿಕೆಯಲ್ಲಿ

ವಿಚಾರ ಕ್ರಾಂತಿಯ ಲೇಖನಗಳು! ಹಲವಾರು ಚಿತ್ರಗಳು! ರಸಭರಿತ ಕತೆ, ಕವನಗಳು!

ಬರಲಿರುವವು.

ಕಣ್ಸೆಳೆವ ಬಾಹ್ಯಾಂಗ! ಮನಸೆಳೆವ ಅಂತರಂಗ!

ಅಂತೂ ಸರ್ವಾಂಗ ಸುಂದರ!

ಇಷ್ಟಿದ್ದರೂ ಬೆಲೆ ಬರೇ 0—4—0 ಮಾತ್ರ.

ತಾ. 5-1-1940ರ ಒಳಗೆ 0-4-0 ಸ್ಟಾಂಪು ಕಳಿಸುವವರಿಗೆ ಒಂದು ಪ್ರತಿ
ಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ಜಾಹೀರಾತುದಾರರಿಗೆ ಅತ್ಯಪೂರ್ವ ಸಂದರ್ಭ.

ತ್ವರೆ ಮಾಡಿರಿ.

ಮೆನೇಜರ್, ನವಯುಗ, ಉಡುಪಿ.

1913ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿ ಅಖಿಲ ಕರ್ನಾಟಕದ ಮೊದಲನೆಯ ಅಭಿವೃದ್ಧಿಯಲ್ಲಿರುವ ಸಂಸ್ಥೆ.

ದಿ ಏಷ್ಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕಮ್ಮಿ ದರದ ಕಂತುಗಳು, ಉದಾರವಾದ ಜೀವವಿಮೆಯ ನಿಯಮಗಳು ಮತ್ತು ಧಾರಾಳ ನಫೆ ಹಂಚುವಿಕೆ

ಇವುಗಳಿಂದ ಕೂಡಿ, ಭದ್ರತೆ, ಸೇವೆ, ಸ್ಥಿರತ್ವಗಳಿಂದ ಪ್ರಖ್ಯಾತಿಗೊಂಡ ಪ್ರಗತಿಪರ ವಿಮಾ ಸಂಸ್ಥೆಯಿದು.

● ಹಕ್ಕುಗಳನ್ನು ಬಹುಬೇಗನೆ ತೀರ್ಮಾನಿಸಿ ಹಣವನ್ನು ಹಕ್ಕುದಾರರ ಮನೆಗೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ಮಾಹಿತಿಗೂ ಪ್ರತಿನಿಧಿಗಳಾಗಲಿಕ್ಕೂ ಬರೆಯಿರಿ—

ಬಿ. ಕರುಣಾಕರ ಹೆಗ್ಡೆ ಆರ್ಗನೈಜರ್, ಕೆ. ಆರ್. ಕೆ ಶೆಟ್ಟಿ ಬಿಲ್ಡಿಂಗ್, ಮಿಶನ್‌ಹೈಸ್ಕೂಲ್ ರೋಡು, ಮಂಗಳೂರು.

ಅಥವಾ

ಎಚ್. ವೆಂಕಟರಾಮಯ್ಯ, ಡಿವಿಜನಲ್ ಸುಪರಿಂಟೆಂಡೆಂಟ್, ಏಷ್ಯಾಟಿಕ್ ಭವನ, ಬೆಂಗಳೂರು ಸಿಟಿ.

The Asiatic Govt. Security Assurance Co. Ltd.

The Pangal Nayak Bank Ltd.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(INCORPORATED 1920.)

Reserves: Rs. 2,02,600/-. Paid up Capital: Rs. 1,82,100/-.

PRINCIPAL OFFICE: COURT ROAD, UDIPI.

OTHER OFFICES:

UDIPI, MANGALORE, KATAPADI, & KANHANGAD.

Fixed Deposits are accepted at each of the above offices for a period of one, two and three years and interest allowed at the rates of 3½%, 4% and 4½% per annum respectively; Interest being payable on the 1st January & 1st July of every year.

For further particulars please address or call at any of our offices.

ಭದ್ರತೆ ಮತ್ತು ಅನುಕೂಲತೆ.

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಂಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯಬೇಕೆಂದು ಇಚ್ಛಿಸುವಿರಾದರೆ— ಸರಿ, ಬನ್ನಿ ನಮ್ಮಲ್ಲಿಗೆ.

ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವ್ಯವಾಟಗಳಲ್ಲಿ ಮಾತ್ರವೇ ನಾವು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಅವರವರ ಅನುಕೂಲತೆಗಳಿಗನುಸಾರವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರದ ಬೇಂಕು ವ್ಯವಹಾರಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್, ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮತ್ತು ಕಾಪು.

ಶ್ರೇಷ್ಠ ವರ್ಗದ ಬ್ರಾಹ್ಮಣರ ಅತ್ಯಾಧುನಿಕ ವಸತಿ ಗೃಹಗಳು.

ಗಾರ್ಡನ್ ಹೋಟೆಲ್

ಫೋನ್ 406

ಹಳೆ ಪೋಸ್ಟಾಫೀಸು ರೋಡು ಮೈಸೂರು.

ಅರಮನೆಯ ಎದುರು ಫೋನ್ ನಂಬ್ರ 347

ಉಡುಪಿ ಆನಂದಭವನ

ಬಸ್ ಟರ್ಮಿನಸ್ ರೆಸ್ಟೋರೆಂಟ್, ಮೈಸೂರು, ಕೃಷ್ಣರಾಜ ಸಾಗರ್ ರೆಸ್ಟೋರೆಂಟ್ ಕನ್ನಂಬಾಡಿ, ಮೈಸೂರು.

ಮದ್ರಾಸಿಗೆ ಬಂದಲ್ಲಿ

ಮೈಸೂರು ಕೇಫ್

ಬೋರ್ಡಿಂಗ್ ಮತ್ತು ಲೋಜಿಂಗ್

ಪ್ರೊಪ್ರೈಟರ್:- ಕೆ. ಗುರುರಾಜಾಚಾರ್ಯ.

ಚರ್ಮವನ್ನು ನಯವಾಗಿರಿಸುತ್ತದೆ

ನಿಮ್ಮ ಮೈ ಚರ್ಮವನ್ನು ನುಣುಪಾಗಿಯೂ ನಯವಾಗಿಯೂ ಇರಿಸುವ ಮತ್ತು ದೇಹ ಸೌಂದರ್ಯವನ್ನು ಬೆಳಗಿಸುವ ಸಾಬೂನುಗಳೆಲ್ಲಾ ಸರ್ವೋತ್ಕೃಷ್ಟವಾದುದು ಮೈಸೂರು ಸೇಂಡಲ್ ಸೋಪು. ಜನಮನರಂಜನೆಯ ಈ ಸಾಬೂನನ್ನು ಒಮ್ಮೆ ಉಪಯೋಗಿಸಿ ಪರೀಕ್ಷಿಸಿರಿ.

ಮೈಸೂರು ಸೇಂಡಲ್ ಸೋಪು

ಗವರ್ನಮೆಂಟು ಸೋಪ್ ಫೇಕ್ಟರಿ, ಬೆಂಗಳೂರು.

Transport & Car Owners



ARE SPECIALLY INVITED TO VISIT

OUR SHOW ROOM *for economical transport maintenance.*

CANARA AUTOMOBILES - - - - - MANGALORE

ಸೀರೆಗಳು

ಸ್ವದೇಶೀ ಗಿರಣಿಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆ ಬಗೆಯ ಬಣ್ಣದಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧ ಖಾದಿ ಮತ್ತು ಸಿಲ್ಕ್ ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

ಪಿ. ಎ. ಪೈ ಬ್ರದರ್ಸ್, ಆಸ್ಪತ್ರೆ ಎದುರು, ಉಡುಪಿ

THE ASIAN ASSURANCE COMPANY, LIMITED.

ASIAN BUILDINGS - - - - BOMBAY

THE PROGRESSIVE FIGURES WILL GIVE YOU AN IDEA

Year	Business in force	Total Income	Life Fund
1932	1,48,40,801	9,24,965	24,50,234
1935	2,52,06,418	18,39,296	42,98,820
1938	3,61,55,764	22,34,301	67,66,528

ದಿ ಏಶಿಯನ್ ಎಶೂರೆನ್ಸ್ ಕಂಪೆನಿ ಲಿಮಿಟೆಡ್

Apply for agency terms etc

Sri B. Narayan Shetty, Organizer, Brahmavar
" M. Shivarama Rao, Organizer, Puttur.

Or

Sri J. A. PUTRAN,
Branch Manager, MANGALORE.

ESTD 1921 ಸ್ಥಾಪನೆ

FOUNDER
SRI A B SHETTY, M L A,
ಸಂಸ್ಥಾಪಕರು
ಶ್ರೀ. ಎ. ಬಿ ಶೆಟ್ಟರು, ಎಂ ಎಲ್ ಎ

ಸಂಪಾದಕ
ಕೆ. ಕೆ ಶೆಟ್ಟಿ

NAVAYUGA

ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3—4—0
6 ತಿಂಗಳಿಗೆ - ರೂ. 1-12- 0

ಚಂದಾ ಹಣವನ್ನು ಮುಂಗಡ ಕಳುಹಿಸಬೇಕು

ಸಹಸಂಪಾದಕ
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೧೭

ಉಡುಪಿ, ಗುರುವಾರ, ೨೮—೧೨—೧೯೩೯.
UDIPI, THURSDAY, 28-12-1939.

VOL 19
No. 17

26 ಹೋಟೆಲುಗಳಿಗೆ ಪ್ರವೇಶವಿಲ್ಲ

ಬೊಂಬಾಯಿ ಫಿಲ್ಮ್ ಇಂಡಿಯಾ ಪತ್ರಿಕೆಯ ಸಂಪಾದಕರಾದ ಶ್ರೀ ಬಾಬುರಾವ್ ಪಟೇಲರು ಪಾಶ್ಚಾತ್ಯದೇಶಗಳನ್ನು ಮತ್ತು ಅಮೇರಿಕವನ್ನು ಸಂದರ್ಶಿಸಿ ಸ್ವದೇಶಕ್ಕೆ ಹಿಂತಿರುಗಿರುವರು. ಲಂಡನಿನಲ್ಲಿ ಅವರಿಗೆ 26 ಬ್ರಿಟಿಷ್ ಹೊಟೇಲುಗಳಿಗೆ ವರ್ಣಭೇದದ ನಿಮಿತ್ತ ಪ್ರವೇಶದೊರೆಯಲಿಲ್ಲ "ಆಂಗ್ಲೇಯರು ಎಂದಿನಂತೆಯೇ ವರ್ಣಿರಿದ್ದು ತಮ್ಮ ವರ್ಣಶ್ರೇಷ್ಠತೆಯನ್ನು ಪ್ರದರ್ಶಿಸುವ ಅಭಿಮಾನವುಳ್ಳವರಿರುತ್ತಾರೆ ಅವರ ಹೆಂಡತಿ ಮಕ್ಕಳಮೇಲೆ ಬೋಂಬೆಸೆವ ಜರ್ಮನರೂ ಯಾವ ಆಂಗ್ಲೇಯ ಹೊಟೇಲಗೂ ಹೋಗಿ ಆತಿಥ್ಯವನ್ನು ಪಡೆಯಬಹುದು, ಆದರೆ ಬ್ರಿಟಿಷ್ ಬಲ ಮತ್ತು ಪ್ರತಿಷ್ಠೆಯನ್ನು ಪೋಷಿಸಿ ಸ್ಥಿರವಾಗಿರಿಸುವ ಹಿಂದೀಯರು ಅಂತಹ ಮಾನವ ಸಹಜ ಆತಿಥ್ಯಕ್ಕೆ ಅರ್ಹರಲ್ಲ ಲೋಕವು ಇನ್ನೂ ಈ ವರ್ಣದ್ವೇಷದಿಂದ ಅಳಲ್ಪಡುತ್ತಿದೆ ಎಂದು ಒಪ್ಪಬೇಬೇಕೆ, ಎಂದು ಶ್ರೀಯುತ ಪಟೇಲರ ಅಭಿಪ್ರಾಯ.

ಬ್ರಿಟನು ಇತ್ಯರ್ಥಕ್ಕೆ ಹಾತೊರೆಯುತ್ತಿದೆ

ಬ್ರಿಟಿಷ್ ಸಾಮ್ರಾಜ್ಯದ ಬೇರೆ ಬೇರೆ ಸ್ವಾಮಂತ ರಾಷ್ಟ್ರಗಳ ಮಂತ್ರಿಗಳ ಪರಿಷತ್ತೊಂದು ಲಂಡನಿನಲ್ಲಿ ಇತ್ತಲಾಗಿ ನಡೆಯಿತಷ್ಟೆ ಅದಕ್ಕೆ ಹಿಂದೀ ಪ್ರತಿನಿಧಿಯಾಗಿ ಹೋಗಿದ್ದ ಸರ್ ಎಮ್. ಝಫರುಲ್ಲಾ ಖಾನರು ವಿಮಾನ ಮೂಲಕ ಇದೇ ತಾ. ೭೩ರಲ್ಲು ಕರಾಚಿಗೆ ಬಂದಿಳಿದಿರುವರು ನ್ಯಾಯವಾದ ರೀತಿಯಲ್ಲಿ ಹಿಂದೀ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಬ್ರಿಟನು ಬಹಳ ಆತುರಗೊಂಡಿದೆ. ಆದರೆ ಅದಕ್ಕೆ ತೊಡಕುಂಟಾಗಿರುವುದು ಹಿಂದೂದೇಶದಲ್ಲಿ ಅದರ ನಿವಾರಣೆಯೂ ಆಗಬೇಕಾದುದು ಇಲ್ಲಿಯ ಸಾಮ್ರಾಜ್ಯ ಮಂತ್ರಿಗಳ ಪರಿಷತ್ತು ಬಹಳ ಪ್ರಯೋಜನಕಾರಿಯಾಗಿದ್ದಿತು. ಜರ್ಮನಿಯ ವಿಮಾನ ಪಡೆಯು ಅತಿ ಪ್ರಬಲವಾದುದಾಗಿದೆ ಆದರೆ ಅದನ್ನೆದುರಿಸಲು ಬ್ರಿಟನು ಸಂಪೂರ್ಣ ಸಿದ್ಧತೆ ಮಾಡಿದೆ ಫ್ರೆಂಚರ ಮೆಗಿನೆಟ್ ಕೋಟೆಯು ಅಭೇದ್ಯವಾದುದೆಂದು ತನಗೆ ತೋರಿತು. ಈ ಕೋಟೆಗಳನ್ನೊಡೆಯಲು ಜನರನ್ನು ಬಲಿ ಕೊಡುವುದು ವ್ಯರ್ಥ. ಆದುದರಿಂದ ಜರ್ಮನರು ಮೆಗಿನೆಟ್ ಕೋಟೆಯನ್ನು ಭೇದಿಸಲು ತಮ್ಮ ಸಂಪೂರ್ಣ ಶಕ್ತಿಯನ್ನು ಪಯೋಗಿಸುವ ಹಾಗಿಲ್ಲ. ಯಾವುದಾದರೊಂದು ತಟಸ್ಥ ರಾಜ್ಯದ ಮೂಲಕ ಫ್ರಾನ್ಸಿನ ಮೇಲೇರಿ ಹೋಗುವುದೊಂದೇ ಉಪಾಯ ಜರ್ಮನಿಗೆಂದು ಸರ್ ಝಫರುಲ್ಲರ ಅಭಿಪ್ರಾಯ

ನಾವು ನಮ್ಮ ಚಂದಾದಾರರಿಗೂ, ಜಾಹೀರಾತುದಾರರಿಗೂ
ವಾಚಕರಿಗೂ, ಬರಹಗಾರರಿಗೂ, ಪ್ರತಿನಿಧಿಗಳಿಗೂ
ಏಜಂಟರಿಗೂ, ಪ್ರೋತ್ಸಾಹಕರಿಗೂ ಮತ್ತು
ಯಾವತ್ತೂ ಹಿತಚಿಂತಕರಿಗೂ
ಇದೀಗ ಬರುವ
ಹೊಸ ವರ್ಷವು
ಆನಂದ ಮತ್ತು ಶುಭದಾಯಕವಾಗಲೆಂದು
ಹಾರ್ದಿಕವಾಗಿ ಹಾರೈಸುತ್ತೇವೆ.

ಕೆ ಕೆ. ಸೆಟ್ಟಿ, ಸಂಪಾದಕ
ಕೆ ಎಚ್. ಸೆಟ್ಟಿ, ಮಾಲಕ

ನವಯುಗ - - - ಉಡುಪಿ.

NAVAYUGA UDIPI, S. I.

To
All our Subscribers, Advertisers
Readers, Writers, Representatives, Agents,
Well-wishers, Printers & Patrons
we wish
A Bright & Happy New Year
(1940)

K. K. SHETTY, EDITOR — K. H. SHETTY, PROPRIETOR.

ಸಮಾಚಾರ ಸಂಗ್ರಹ

ಕಾಂಗ್ರೆಸು ರಾಜಿಪ್ರಸಾಪಕ್ಕೆ ಸಿದ್ಧವಿದೆ

ಹಿಂದೀ ಪ್ರಶ್ನೆಯ ನ್ಯಾಯವಾದ ತೀರ್ಮಾನಕ್ಕೆ ಕಾಂಗ್ರೆಸ್ ಸಿದ್ಧವಿರುವುದು. ಆದರೆ ಬ್ರಿಟಿಷ್ ಸರಕಾರವೂ ಜನತೆಯೂ ಹಿಂದೀ ಪರಿಸ್ಥಿತಿಯನ್ನು ಪ್ರಕೃತ ಈಗಿದ್ದಂತೆಯೇ ಬಿಟ್ಟುಬಿಡುವ ಸಂಭವ ಹೆಚ್ಚೆಂದು ನಂಬಲು ಕಾರಣವಾಗಿದೆ ಸ್ವಹಿತರಕ್ಷಣೆಯ ದೃಷ್ಟಿಯಿಂದ ಕೂಡ ಹಿಂದೂದೇಶವು ಮೈತ್ರಿಯಿಂದಿರವಾಗಲೆ ರಾಜಿಮಾಡಿಕೊಳ್ಳುವುದು ವಿವೇಕಪರವಾದುದು. ಈ ಗಂಡಾಂತರದ ದಿನಗಳಲ್ಲಿ ಬ್ರಿಟನಿಗೆ ಹಿಂದೂದೇಶದ ಮತ್ತು ಹಿಂದೂದೇಶಕ್ಕೆ ಬ್ರಿಟನಿನ ಸಹಾಯವು ಅತ್ಯಾವಶ್ಯಕವಾಗಿದೆಯೆಂದು ಲಂಡನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಅಭಿಪ್ರಾಯ.

ವಾರ್ಧದಲ್ಲಿ ಸರ್. ಸ್ಟಾಫೋರ್ಡರು

ಇದೇ ತಾ. ೧೯ರಲ್ಲಿ ಸರ್. ಸ್ಟಾಫೋರ್ಡ ಕ್ರಿಪ್ಸರು ವಾರ್ಧಕ್ಕೆ ಹೋಗಿ ಪಂಡಿತ ಜವಾಹಿರಲಾಲ್ ಮತ್ತು ಸರ್ದಾರ ವಲ್ಲಭಭಾಯಿಯವರೊಂದಿಗೆ ಸೇವಾಗ್ರಾಮದಲ್ಲಿ ಮಹಾತ್ಮರನ್ನು ಕಂಡು ಸುಮಾರು 1 ಘಂಟೆಯ ವರೆಗೆ ಅವರೊಡನೆ ಮಾತಾಡಿದರು. ತಾ ೨೦ನೇ ಅಪರಾಹ್ನ ಪುನಃ ವಾರ್ಧದಲ್ಲಿ ಅರ್ಧ ಘಂಟೆಯವರೆಗೆ ಗಾಂಧಿಯವರೊಡನೆ ಮಾತುಕತೆ ನಡಿಸಿದರು. ಶ್ರೀ. ರಾಜಗೋಪಾಲಾಚಾರ್ಯರೇ ಮೊದಲಾದ ಕಾಂಗ್ರೆಸ್ ಮುಖಂಡರೊಡನೆ ಕೂಡಾ ಮಾತಾಡಿರುವರು ಸರ್ ಸ್ಟಾಫೋರ್ಡರು ತಾ. ೨೩ರಲ್ಲು ಕಲ್ಕತ್ತದಲ್ಲಿ ವೈಸರಾಯರನ್ನು ಕಂಡು ತನ್ನ ಅನುಭವದ ದೃಷ್ಟಿಯಿಂದ ಅವರೊಡನೆ ಅಭಿಪ್ರಾಯವಿನಿಮಯ ಮಾಡಲಿರುವರು. ಕಾಂಗ್ರೆಸ್ ಮುಖಂಡರೊಡನೆ ಮಾತ್ರವಲ್ಲದೆ ಸರ್ ಸ್ಟಾಫೋರ್ಡರು, ಜಿನ್ನಾ, ಡಾಕ್ಟರ್ ಅಂಬೇಡ್ಕರ್, ಬರೋಡದ ದಿವಾನರು ಮತ್ತು ಹೈದರಾಬಾದ್ ಸ್ಟೇಟ್ ಕೌನ್ಸಿಲಿನ ಅಧ್ಯಕ್ಷ ಸರ್. ಅಕ್ಬರ್ ಹೈದರಿಯವರೊಡನೆಯೂ ಮಾತಾಡಿರುವರು ಪ್ರಾಂತಗಳಲ್ಲಿ ಮುಸ್ಲಿಮ್ ಲೀಗ್ ಪ್ರತಿನಿಧಿಗಳೇ ಮೊದಲಾದ ಎಲ್ಲಾ ಪಕ್ಷಗಳಿಂದೊಡಗೂಡಿದ ಮಂತ್ರಿಮಂಡಲಿಯನ್ನು ಸ್ಥಾಪಿಸುವುದರಿಂದ ಹಿಂದೂಮುಸಲ್ಮಾನ ವೈಮನಸ್ಯವು ಕಡಿಮೆಯಾಗಬಹುದೆಂದೇ ಸರ್. ಸ್ಟಾಫೋರ್ಡರ ಅಭಿಮತ. ಕಾಂಗ್ರೆಸ್ ಮುಖಂಡರು ಅತ್ಯಂತ ಕಾರ್ಯದಕ್ಷ ಮತ್ತು ಸ್ವಾರ್ಥರಹಿತ ಜನರು, ದೇಶದ ಸ್ವಾತಂತ್ರ್ಯಸಾಧನೆಗಾಗಿ ಎಂತಹ ತ್ಯಾಗವಾದರೂ ದೊಡ್ಡದಲ್ಲವೆಂದು ಪರಿಗಣಿಸುವವರೆಂದು ಪ್ರಶಂಸಿಸಿರುವರು. ಹಿಂದೂ ಮುಸಲ್ಮಾನ ಕಲಹವು ಪರಂಪರಾಗತವಾದುದು ಹಿಂದೀ ಸ್ವಾತಂತ್ರ್ಯಕ್ಕೆ ಅದೇನೂ ತೊಡಕಾಗಿರುವುದಿಲ್ಲ ಹಿಂದೂದೇಶಕ್ಕೆ ಸ್ವಾತಂತ್ರ್ಯವೀಯುವ ನಿರ್ಧಾರವನ್ನೊಮ್ಮೆ ಇಂಗ್ಲೆಂಡು ಮಾಡಿದುದೇ ಆದರೆ ಹಿಂದೂದೇಶದ ಪ್ರಕೃತದ ಬಿಕ್ಕಟ್ಟನ್ನು ನಿವಾರಿಸುವುದೇನೂ ಕಷ್ಟವಾಗಲಾರದೆಂದು ಸರ್ ಸ್ಟಾಫೋರ್ಡರ ಅಭಿಪ್ರಾಯ.

ಜಿನ್ನರ ಆರೋಪಕ್ಕೆ ಆಧಾರವಿಲ್ಲ

ಕಾಂಗ್ರೆಸಿನ ಮೇಲೆ ಆರೋಪ ಹೊರಿಸಿ ಮಿ. ಜಿನ್ನರು ಇತ್ತಲಾಗಿ ಹೊರಡಿಸಿರುವ ಹೇಳಿಕೆಯೊಂದರಲ್ಲಿ ಬಿಹಾರ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು, ಗಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಜಯ ಪ್ರಕಾಶ ನಾರಾಯಣರಿಗೊಂದು ಗುಟ್ಟಿನ ಸರ್ಕ್ಯುಲರ್ ಕಳುಹಿಸಿ, ಮುಸಲ್ಮಾನರಲ್ಲಿ ಹೆಚ್ಚಿನ ಪ್ರಚಾರ ಕಾರ್ಯ ನಡಿಸಿ ಮುಸ್ಲಿಮ್ ಲೀಗಿನ ಆಟ ನಡೆಯದಂತೆ ಮಾಡಬೇಕೆಂದು ಸೂಚಿಸಿರುವರೆಂಬುದನ್ನು ಪ್ರಕಟಗೊಳಿಸಿರುವರು ಈ ಸರ್ಕ್ಯುಲರೆಂಬುದು ಕೇವಲ ಕಾಲ್ಪನಿಕವಾದುದು ಬಿಹಾರ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಂದ ಅಂತಹ ಸರ್ಕ್ಯುಲರು ತನಗೆ ಬಂದಿರುವುದೇ ಇಲ್ಲ ಈ ಆರೋಪವೇ ಆಧಾರರಹಿತವಾದುದು ಒಂದು ವೇಳೆ ಮಿ ಜಿನ್ನರ ಆ ಕಾಲ್ಪನಿಕ ಸರ್ಕ್ಯು

ಲರ್ ನಿಜವಾದುದಾದರೂ, ಬಿಹಾರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರೇನೂ ಅಪರಾಧ ಮಾಡಿದ ಹಾಗಾಗುವುದಿಲ್ಲ ಹಿಂದೂದೇಶದ ಸ್ವಾತಂತ್ರ್ಯದ ಮಾರ್ಗದಲ್ಲಿ ತೊಡರನ್ನೊಡ್ಡಿರುವ ಮುಸ್ಲಿಮ್ ಲೀಗಿನ ಎದುರಾಗಿ ಮುಸಲ್ಮಾನರಲ್ಲಿ ಪ್ರಚಾರ ಮಾಡುವುದು ನ್ಯಾಯವಾದುದೆಂದು ಶ್ರೀ ಜಯಪ್ರಕಾಶನಾರಾಯಣರು ವಿದಿತಗೊಳಿಸುತ್ತಾರೆ.

ಶ್ರೀ ಜಯಕರರ ಆಶಾವಾದ

ಪ್ರೀವಿ ಕೌನ್ಸಿಲ್ ಮೆಂಬರರಾದ ಶ್ರೀ. ಎಮ್. ಆರ್. ಜಯಕರರು, ಇದೇ ತಾ. 10ರಲ್ಲು ವಿಮಾನ ಮೂಲಕ ಹಿಂದೂದೇಶಕ್ಕೆ ಬಂದಿರುವರು. ಇವರು ಕ್ರಿಸ್‌ಮಸ್ ರಜಾ ಸಮಯದಲ್ಲಿ ಕೆಲವು ದಿನಗಳನ್ನು ಹಿಂದೂದೇಶದಲ್ಲಿ ಕಳೆದು ಇಲ್ಲಿಯ ರಾಜಕೀಯ ಪರಿಸ್ಥಿತಿಯನ್ನು ಪರಾಮರ್ಶಿಸಲಿರುವರು. ಹಿಂದೂದೇಶದ ಬಿಕ್ಕಟ್ಟನ್ನು ನಿವಾರಿಸುವ ಪ್ರಯತ್ನವು ಅನಾವಶ್ಯಕವಾದ ವಿಳಂಬವಿಲ್ಲದೆ ನಡೆಯಬಹುದೆಂದು ಶ್ರೀ ಜಯಕರರ ಆಶಾವಾದ. ಶ್ರೀ ಜಯಕರರು, ಇತ್ತಲಾಗಿ ಇಂಡಿಯಾ ಸೆಕ್ರೆಟರಿಗಳಾದ ಲೋರ್ಡ್ ಜೆಟ್ಲೆಂಡರರೊಡನೆ ಮಾತಾಡಿದ್ದರು. ಶ್ರೀ ಜಯಕರರಂಥವರು ಪ್ರಯತ್ನಿಸಿದ ಪಕ್ಷದಲ್ಲಿ ಎಲ್ಲಾ ಪಕ್ಷಗಳಿಗೂ ತೃಪ್ತಿಕರವಾಗುವಂತೆ ಹಿಂದೀ ಪ್ರಶ್ನೆಯು ಇತ್ಯರ್ಥ ಹೊಂದಬಹುದೆಂದು ನಂಬಲಾಗಿದೆ. ಸಂದರ್ಭ ಬಂದರೆ ಶ್ರೀ. ಜಯಕರರು ಗಾಂಧಿಜೀಯವರನ್ನು ಕಂಡು ಮಾತಾಡಬಹುದೆಂದು ನಂಬಲಾಗಿದೆ.

ಅಲ್ಪ ಸಂಖ್ಯಾಕ ಪ್ರಶ್ನೆಯ ಇತ್ಯರ್ಥದ ಯತ್ನ

ಇದೇ ತಾ. 31ರಲ್ಲು ಪಂಜಾಬಿನ ಪ್ರಧಾನಮಂತ್ರಿಗಳಾದ ಸರ್. ಸಿಕಂದರ ಹಾಯತ್ ಖಾನರು ಬೊಂಬಾಯಿಗೆ ಬಂದಿರುವರು. ಹಿಂದೂ ಮುಸಲ್ಮಾನ ಮಾತುಕತೆಯ ಕುರಿತು ಮಿ. ಜಿನ್ನರ ಧೋರಣೆಯಿಂದ ಸರ್. ಸಿಕಂದರರು ಅತೃಪ್ತಿಗೊಂಡಂತಿದೆ. ಮುಸಲ್ಮಾನ ವಿಮೋಚನಾ ದಿನಾಚರಣೆಯು ಮಿ. ಜಿನ್ನರ ವಿನಂತಿಯನ್ನವರು ಸಮರ್ಥಿಸದುದೇ ಇದಕ್ಕೆ ಸಾಕ್ಷಿ. ಅಲ್ಪಸಂಖ್ಯಾಕ ಪ್ರಶ್ನೆಯನ್ನು 10 ಯಾ 15 ಮಂದಿ ಮುಖಂಡರ ತೀರ್ಮಾನಕ್ಕೊಪ್ಪಿಸಬೇಕೆಂದೇ ಸರ್. ಸಿಕಂದರರ ಸೂಚನೆ. ಮುಸಲ್ಮಾನರಿಗೆ ಕಾಂಗ್ರೆಸ್ ಮಂತ್ರಿಗಳ ಆಡಳಿತದಿಂದುಂಟಾಗಿರುವ ಅನ್ಯಾಯಗಳೆಂಬವುಗಳ ಕುರಿತು ವಿಚಾರಿಸಲು ರೋಯಲ್ ಕಮಿಶನಿನ ನೇಮಕದ ಅಭಿಪ್ರಾಯಕ್ಕೂ ಅವರ ಸಮ್ಮತಿಯಿಲ್ಲ. ಹಿಂದಿನದೆಲ್ಲಾ ಮರೆತು ಬಿಟ್ಟು ಮುಂದಿನ ವಿಚಾರ ಮಾಡಬೇಕೆಂದೇ ಅವರ ಸೂಚನೆ. ಪ್ರಕೃತದ ವಾತಾವರಣದಲ್ಲಿ ಮಿ. ಜಿನ್ನರೊಡನೆ ರಾಜಿ ಪ್ರಸ್ತಾಪ ನಡಿಸಲು ಸಾಧ್ಯವಿಲ್ಲೆಂಬ ಪಂಡಿತ ನೆಹರುಗಳ ಸೂಚನೆಯ ಕುರಿತು ವಿಚಾರಿಸಲು ಬೇಗನೆ ಮುಸ್ಲಿಮ್ ಲೀಗಿನ ಸಭೆ ನಡೆಯಲಿರುವುದು. ಮುಂದೆ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್‌ಗಳ ಸಂಬಂಧವು ಒಳ್ಳೇದಾಗಲಿರುವುದೆಂದೂ, ಹಿಂದುಗಳೂ ಮುಸಲ್ಮಾನರೂ, ಹಿಂದಿನ ವೈಷಮ್ಯಗಳನ್ನೆಲ್ಲಾ ಮರೆತು ಮುಂದೆ ಒಂದಾಗಿ ನಡೆದು ದೇಶದ ಅಭ್ಯುದಯಕ್ಕಾಗಿ ದುಡಿಯುವಂತಾಗಬೇಕೆಂದೂ ಸರ್. ಸಿಕಂದರರ ಆಶೆ. ಅವರು ಬೊಂಬಾಯಿಯಲ್ಲಿ ಕೆಲದಿನವಿದ್ದು ಮಿ. ಜಿನ್ನರನ್ನು ಕಂಡು ಮಾತಾಡಿ ಆ ಮೇಲೆ ಕಲ್ಕತ್ತಕ್ಕೆ ಹೋಗಿ ಕೆಲವು ದಿನ ಕಳೆಯಲಿರುವರು.

ಶ್ರೀ. ಎನ್. ಆರ್. ಸರ್ಕಾರರ ರಾಜಿನಾಮೆ

ಬಂಗಾಳ ಕೌನ್ಸಿಲ್ ಮತ್ತು ಎಸೆಂಬ್ಲಿಯಲ್ಲಿ ಕೊಯಿಲಿಶನ್ ಪಕ್ಷದವರು ತಂದು ಮಂಜೂರಾಗಿರುವ ಯುದ್ಧ ಸಂಬಂಧವಾದ ಠರಾವಿನ ಕುರಿತು ಭಿನ್ನಾಭಿಪ್ರಾಯವುಳ್ಳವರಾಗಿ, ಆ ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ ಪರಿಣಾಮವಾಗಿ ಬಂಗಾಳದ ಅರ್ಥ ಸಚಿವರಾದ ಶ್ರೀ. ಎನ್. ಆರ್. ಸರ್ಕಾರರು ತನ್ನ ಮಂತ್ರಿ ಪದವಿಗೆ ರಾಜಿನಾಮೆ ಕೊಡಬೇಕಾಗಿ ಬಂದಿರುವುದು. ಶ್ರೀ. ಸರ್ಕಾರರು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಮಿ. ಹಕ್ಕರ ಕೊಯಿಲಿಶನ್ ಪಕ್ಷಕ್ಕೆ ಸೇರಿ ಕಾಂಗ್ರೆಸಿನ ಶಿಸ್ತಿಗೊಳಗಾದವರು. ಈಗ ಕೊಯಿಲಿಶನ್ ಪಕ್ಷದ ಸಂಕುಚಿತ ಜಾತೀಯತೆಯಿಂದಾಗಿ ಮಂತ್ರಿ ಪದವಿಯನ್ನವರು ತೊರೆದುಬಿಡಬೇಕಾಗಿರುವುದು. ಅವರು ಇದೇ ತಾ. 19ರಲ್ಲು ತನ್ನ ಸ್ಥಾನಕ್ಕೆ ರಾಜಿಯಿತ್ತಿರುವರು. ಅಲ್ಪಸಂಖ್ಯಾಕರ ಸಮ್ಮತಿ ಮತ್ತು ಒಪ್ಪಿಗೆಯ ವಿನಹ ಮುಂದಿನ ಹಿಂದೀ ರಾಜ್ಯಾಂಗರಚನೆಯನ್ನು ಬ್ರಿಟಿಷ್ ಸರಕಾರವು ಮಾಡಬಾರದೆಂಬ ವಿಷಯಕ್ಕೆ ಮಾತ್ರ ಶ್ರೀ. ಸರ್ಕಾರರು ವಿರೋಧವಿದ್ದು ಅದರಿಂದ ಹಿಂದೀ ಬಹು ಸಂಖ್ಯಾಕರ ಮೇಲೆ ಅಲ್ಪ ಸಂಖ್ಯಾಕರು ಸವಾರಿಮಾಡುವಂತಾಗುವುದೆಂದು ಆಕ್ಷೇಪಿಸಿರುವರು. ಇದು ಹೊರತು ಇತ್ತಲಾಗಿ ಕೆಲವು ತಿಂಗಳುಗಳಿಂದ ಬಂಗಾಳ ಮಂತ್ರಿಮಂಡಲದ ಮೇಲೆ ಜಾತೀಯ ಭಾವನೆಯಿಂದ ಪ್ರೇರಿತರಾದ ಕೊಯಿಲಿಶನ್ ಪಕ್ಷೀಯರ ಪ್ರಭಾವವು ಹೆಚ್ಚಿ, ಮಂತ್ರಿಗಳೂ ತಮ್ಮ ಸ್ವಾತಂತ್ರ್ಯವನ್ನು ಕಳಕೊಳ್ಳುವಂತಾಗಿದೆಯೆಂದು ಶ್ರೀ. ಸರ್ಕಾರರ ಅಭಿಮತ.

ಸಿಂಧಿನ ಪ್ರಧಾನ ಮಂತ್ರಿಗಳ ಎಚ್ಚರಿಕೆ

ಸಿಂಧ್ ಪ್ರಾಂತದ ಸುಕೂರು ಮತ್ತು ಅದರ ಹತ್ತಿರದ ಹಳ್ಳಿಗಳಲ್ಲಿ ಹಿಂದೂ ಮುಸಲ್ಮಾನ ಗಲಾಟೆಯೆದ್ದು ಅನೇಕ ಮಂದಿ ಹಿಂದುಗಳು ಕೊಲ್ಲಲ್ಪಟ್ಟಿರುವರು. ಈ ಭಾಗದ ಹಳ್ಳಿಗಳಲ್ಲಿ ಹಿಂದುಗಳು ಸುರಕ್ಷಿತವಾಗಿ ವಾಸಿಸುವುದೇ ಅಸಾಧ್ಯವೆಂಬಂತಹ ಪರಿಸ್ಥಿತಿಯುಂಟಾಗಿರುವುದು. ಈ ಭಾಗದ ಹಿಂದುಗಳು ಚಿಕ್ಕ ಚಿಕ್ಕ ಹಳ್ಳಿಗಳನ್ನು ಬಿಟ್ಟು ಪೋಲೀಸರ ಆಶ್ರಯ ಮತ್ತು ಸಹಾಯವು ಬೇಗನೆ ಸಿಗಬಹುದಾದ ದೊಡ್ಡ ಹಳ್ಳಿಗಳಿಗೆ ಹೋಗಿ ವಾಸಿಸುವುದೊಳ್ಳೇದೆಂದು ಸಿಂಧಿನ ಪ್ರಧಾನ ಮಂತ್ರಿ ಖಾನ್ ಬಹದೂರು ಅಲ್ಲಾಭಕ್ಷರೇ ಸೂಚಿಸಿರುವರು. ಹಿಂದೂ–ಮುಸಲ್ಮಾನ ಗಲಾಟೆಯನ್ನು ಕಠಿಣವಾಗಿ ಅಡಗಿಸದ ಅಲ್ಲಾಬಕ್ಷ್ ಮಂತ್ರಿಮಂಡಲದ ಧೋರಣೆಯ ಕುರಿತು ಸಿಂಧಿನ ಹಿಂದೂಗಳಲ್ಲೂ, ಕಾಂಗ್ರೆಸ್ ಪಕ್ಷೀಯರಲ್ಲೂ ಅತೃಪ್ತಿಯುಂಟಾಗಿದೆ. ಕಾಂಗ್ರೆಸ್ ಹೈಕಮಾಂಡಿನವರು ಅಪೇಕ್ಷೆಪಟ್ಟಲ್ಲಿ ತಾನು ಮಂತ್ರಿಮಂಡಲದಲ್ಲಿ ಬೇಕಾದ ಬದಲಾವಣೆ ಮಾಡಲು ಸಿದ್ಧನಿರುವೆನು. ಕಾಂಗ್ರೆಸ್ ಪಕ್ಷದವರ ಸಹಕಾರದ ಬಲದಿಂದ ತಾನು ಮಂತ್ರಿಮಂಡಲವನ್ನೇರ್ಪಡಿಸಿದುದು. ಅವರು 6 ತಿಂಗಳ ವರೆಗೆ ತನಗೆ ಬೆಂಬಲವಿತ್ತು ಈಗ ಕೈಬಿಟ್ಟಿದ್ದಾರೆ. ತನ್ನ ಮಂತ್ರಿಮಂಡಲವು ರಾಜಿನಾಮೆಕೊಟ್ಟರೆ ಮುಸ್ಲಿಮ್ ಲೀಗ್ ಮಂತ್ರಿಮಂಡಲವು ಅಧಿಕಾರಕ್ಕೆ ಬರುವ ಅಪಾಯವಿದೆ. ಅದರಿಂದ ಇಡೀ ಪ್ರಾಂತಕ್ಕೆ ಮಾತ್ರವಲ್ಲದೆ ದೇಶಕ್ಕೇನೇ ಹಾನಿಕರವಿದೆಯೆಂದು ಖಾನ್‌ಬಹದೂರು ಅಲ್ಲಾಭಕ್ಷರು ಸುಕೂರಿನ ಹಿಂದುಗಳು ತನ್ನನ್ನು ಕಂಡಾಗ ಹೇಳಿರುವರು.

THE

BOMBAY LIFE ASSURANCE Company Limited.

[ESTD. 1908]

COMPARE

Your Life Assurance with any other property you possess what is its guarranteed value

If you live–today–a few years more–when you are old?
If you die–to your family and dependants?

REMEMBER THAT If you live, Life Insurance takes the place of your professional income during your old age.
If you die, it provides your family with enough income for their maintenance and the education of your children.

"BOMBAY LIFE" offers all that is best in Life Assurance.

1938 Record.

Completed Business	Rs.	1,44,91,000
Life Assurance Fund	Rs.	1,17,69,748
Total Assets	Rs.	1,31,28,998

To Insure or to represent it pays you to consult

KOCHIKAR BROTHERS LTD.,

RAMDAS BRANCH SECRETARIES,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Post Box No. 337, Mount Road, MADRAS.	Visweswarapuram Circle BANGALORE CITY.	Charni Road, Girgaum, BOMBAY No. 4.
Car Street, MANGALORE.	CALICUT. Puthiyara,	Central Station Road, TRIVANDRUM.

ಜಾಹೀರುದಾರರಿಗೆ ಬೇಕಾಗುವ ಚಿತ್ತಾಕರ್ಷಕ ನಮೂನೆಯ ಬ್ಲೋಕು, ಡಿಜ್ಯಾನು, ವ್ಯಂಗ್ಯ ಚಿತ್ರಗಳು ಮುಂತಾದ ಕೆಲಸಗಳನ್ನು ಅತ್ಯಾಧುನಿಕ ರೀತಿಯಿಂದ ಸುಲಭ ದರದಲ್ಲಿ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ತರದ ಪ್ರಿಂಟಿಂಗ್ ಸ್ಕ್ಯಾನ್ ಬೋರ್ಡ್ ಪೈಂಟಿಂಗ್ ವಗೈರ ಕೆಲಸಗಳನ್ನೂ ಕೈಕೊಳ್ಳಲಾಗುವುದು.

ಅಮ್ಮಕಲಾ ಪ್ರೆಸ್,
ಆರ್ಟ್ ಪ್ರಿಂಟರ್ಸ್ ಡಿಜೈನರ್ಸ್ & ಎನ್‌ಗ್ರೇವರ್ಸ್, ಹೊಸ್ಪಿಟಲ್ ರೋಡ್, ಉಡುಪಿ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯ.

ರಾಜಿಯಲ್ಲಿ ಯಾವ ಇತ್ಯರ್ಥವೂ ಆಗದಿದ್ದರೆ ಕಾಯಿದೆ ಭಂಗ!

ತಾ. ೧೮ರಿಂದ ೨೨ರ ವರೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸಭೆಯು ವಾರ್ಧದಲ್ಲಿ ಸೇರಿ ದೀರ್ಘ ಚರ್ಚೆ ನಡೆದು ಈ ಕೆಳಗಣ ನಿರ್ಣಯವನ್ನು ಮಂಜೂರುಮಾಡಿರುವುದು. "ಇಂಡಿಯಾ ಸೆಕ್ರಿಟರಿಗಳ ಇತ್ತಲಾಗಿನ ಹೇಳಿಕೆಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವಿಷಾದಪೂರ್ವಕವಾಗಿ ಪರಿಶೀಲಿಸಿದೆ. ಅವರ ಜಾತೀಯ ಪ್ರಶ್ನೆಯ ಪ್ರಸ್ತಾಪವು, ಮುಖ್ಯ ಪ್ರಶ್ನೆಯನ್ನೇ ಜನರ ದೃಷ್ಟಿಯಿಂದ ಮರೆಮಾಜಿಸುತ್ತದೆ. ವಿಶೇಷವಾಗಿ ಹಿಂದೂದೇಶದ ಸ್ವಾತಂತ್ರ್ಯ ಸಂಬಂಧವಾಗಿ ಬ್ರಿಟಿಷರು ಯುದ್ಧೋದ್ದೇಶವನ್ನು ನಿರೂಪಿಸಿರುವುದಿಲ್ಲ. ಹಿಂದೂದೇಶದ ಬೇರೆಬೇರೆ ಅಲ್ಪಸಂಖ್ಯಾಕರು ಮೂರನೇ ಪಕ್ಷವೊಂದರ ಆಶ್ರಯ ಪಡೆದು ರಾಷ್ಟ್ರ ವಿಘಾತುಕವಾಗಿಯಾದರೂ ತಾವು ವಿಶೇಷವಾದ ಪ್ರಯೋಜನ ಸಂಪಾದಿಸಿಕೊಳ್ಳುವಂತಿರುವನಕ ಜಾತೀಯ ಪ್ರಶ್ನೆಯು ತೃಪ್ತಿಕರವಾಗಿ ಇತ್ಯರ್ಥವಾಗುವ ಹಾಗಿಲ್ಲೆಂದು ವರ್ಕಿಂಗ್ ಕಮಿಟಿಯ ಅಭಿಮತ.

ಇಂಗ್ಲೆಂಡಿಗೆ ಅಧಿಕಾರ ಬಿಟ್ಟುಕೊಡಲು ಮನಸ್ಸಿಲ್ಲ

ಒಂದು ಜನಾಂಗದ ಮೇಲೆ ವಿದೇಶೀರಾಜ್ಯಭಾರವಿರುವನಕ ಅದರ ಬೇರೆಬೇರೆ ಅಂಗಗಳೊಳಗೆ ಇಬ್ಬಣವು ಇದ್ದದ್ದೇ. ಈ ವಿಭಾಗಗಳನ್ನೊಂದುಗೂಡಿಸುವ ಪ್ರಯತ್ನವನ್ನು ಕಾಂಗ್ರೆಸು ನಿರಂತರವೂ ನಡಿಸಿರುತ್ತದೆ. ತನ್ನ ರಾಷ್ಟ್ರೀಯತೆಯನ್ನೆತ್ತಿ ಹಿಡಿಯುವುದಕ್ಕಾಗಿ ಹಿಂದೀಯರಲ್ಲೆಲ್ಲಾ ಒಕ್ಕಟ್ಟನ್ನುಂಟುಮಾಡಲು ಪ್ರಯತ್ನ ಮಾಡಿಕೊಂಡುಬಂದಿರುವ ಒಂದೇ ಒಂದು ಸಂಸ್ಥೆಯೆಂದರೆ ಕಾಂಗ್ರೆಸು. ವಿದೇಶೀಯ ಅಳ್ವಿಕೆಯು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲ್ಪಟ್ಟಾಗ ಹಿಂದೂದೇಶದಲ್ಲಿ ಶಾಶ್ವತವಾದ ಐಕ್ಯವು ಸಾಧ್ಯವಿದೆಯೆಂದು ವರ್ಕಿಂಗ್ ಕಮಿಟಿಯ ಮನೋನಿರ್ಧಾರ. ದೇಶದೊಳಗೆ ಪರಸ್ಪರ ಹೋರಾಡಿಕೊಳ್ಳುವ ಪಕ್ಷಗಳಿರುವನಕ ಹಿಂದೂದೇಶದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲೆಂಬುದನ್ನು ವರ್ಕಿಂಗ್ ಕಮಿಟಿಯವರು ಬಲ್ಲರು. ಆದುದರಿಂದ ಅಧಿಕಾರವನ್ನು ಬಿಟ್ಟು ಕೊಡುವ ಮನಸ್ಸಿಲ್ಲದೇನೇ ಬ್ರಿಟಿಷ್ ಸರಕಾರವು ಈ ಸಂದರ್ಭದಲ್ಲಿ ಜಾತೀಯ ಪ್ರಶ್ನೆಯನ್ನು ಮುಂದೊತ್ತಿರುವುದೆಂದು ವರ್ಕಿಂಗ್ ಕಮಿಟಿಯವರು ತಿಳಿದುಕೊಳ್ಳುವಂತಾಗಿದೆ

ಅಲ್ಪಸಂಖ್ಯಾಕರಿಗೆ ಆಶ್ವಾಸನೆ

ಕಾಂಗ್ರೆಸು ಸೂಚಿಸಿರುವ ಕಾನ್ಸ್ಟಿಟ್ಯುವೆಂಟ್ ಎಸೆಂಬ್ಲಿಯ ಮೂಲಕ ಮಾತ್ರ ಅಲ್ಪಸಂಖ್ಯಾಕ ಪ್ರಶ್ನೆಯ ಕೊನೆಯ ಇತ್ಯರ್ಥವು ಸಾಧ್ಯವಿದೆ. ಇದರಲ್ಲಿ ಅಲ್ಪಸಂಖ್ಯಾಕರಿಗೆ ಸಂಪೂರ್ಣ ಪ್ರಾತಿನಿಧ್ಯವೇ ಯಾಗುವುದು. ಮತ್ತು ಅಗತ್ಯವಿದ್ದಲ್ಲಿ ಪ್ರತ್ಯೇಕ ಪ್ರಾತಿನಿಧ್ಯವೂ ಕೊಡಲ್ಪಡುವುದು. ಸಂಬಂಧಪಟ್ಟ ಅಲ್ಪಸಂಖ್ಯಾಕರಿಗೆ ತೃಪ್ತಿಯಾಗುವಂತೆ ಅವರ ಹಕ್ಕು ಬಾಧ್ಯತೆಗಳ ಪ್ರಶ್ನೆಯನ್ನು ಇತ್ಯರ್ಥಪಡಿಲಾಗುವುದೆಂದು ಕಾಂಗ್ರೆಸು ಮೊದಲೇ ಸ್ಪಷ್ಟಪಡಿಸಿದೆ. ಈ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾದಲ್ಲಿ ನಿಷ್ಪಕ್ಷಪಾತಿಗಳ ಮಧ್ಯಸ್ಥಿಕೆಗದನ್ನು ಒಪ್ಪಿಸಿಕೊಡಲಾಗುವುದು.

ಕರೆ ಬಂದಾಗ ಸಿದ್ಧವಾಗಿರಬೇಕು

ಬಹಳವಾಗಿ ಪರಿಶ್ರಮಿಸದೆ ಸ್ವಾತಂತ್ರ್ಯವನ್ನು ಗಳಿಸಲು ಸಾಧ್ಯವಿಲ್ಲೆಂಬುದನ್ನು ಇಷ್ಟರಲ್ಲಿ ಕಾಂಗ್ರೆಸ್ ವಾದಿಗಳು ಮನಗಂಡಿರುವರು. ಕಾಂಗ್ರೆಸು ಅಹಿಂಸಾದೀಕ್ಷೆಯುಳ್ಳದ್ದಾಗಿರುವುದರಿಂದ ಅದರ ಕಟ್ಟಕಡೆಯ ಆಶಯವೆಂದರೆ ಕಾಯಿದೆ ಭಂಗ. ಕಾಯಿದೆ ಭಂಗವು ಸತ್ಯಾಗ್ರಹದ ಒಂದು ಅಂಗ. ಸತ್ಯಾಗ್ರಹವೆಂದರೆ ಎಲ್ಲರ, ವಿಶೇಷವಾಗಿ ವೈರಿಗಳ ಕುರಿತು ಸುಮನಸ್ಸು ಆದುದರಿಂದ ಸೌಹಾರ್ದವನ್ನುಂಟುಮಾಡಿ ಅದನ್ನು ಬೆಳೆಸಲೆತ್ನಿಸುವುದು ಪ್ರತಿಯೊಬ್ಬ ವೈಯಕ್ತಿಕ ಕಾಂಗ್ರೆಸ್‌ವಾದಿಯ ಕರ್ತವ್ಯ. ಅಹಿಂಸೆ, ಸಾಮರಸ್ಯ ಮತ್ತು ಸಾಂಪತ್ತಿಕ ಸ್ವಾವಲಂಬನೆಯ ಸಂಕೇತವಾದ ಖಾದಿ ಕಾರ್ಯಕ್ರಮದ ಒಯುಶೀಲತೆಯು ಅನಿವಾರ್ಯವಾದುದು. ಆದುದರಿಂದ ಎಲ್ಲಾ ಕಾಂಗ್ರೆಸ್ ಸಂಸ್ಥೆಗಳೂ ವಿಧಾಯಕ ಕಾರ್ಯಕ್ರಮವನ್ನು ಹೆಚ್ಚಾಗಿ ಮುಂದೊತ್ತಿ ಕರೆಯು ಬಂದಾಗ ಅವನ್ನು ಸ್ವೀಕರಿಸಲು ಬೇಕಾದ ಸಿದ್ಧತೆಯನ್ನು ಮಾಡುವರೆಂದು ವರ್ಕಿಂಗ್ ಕಮಿಟಿಯು ಆಶಿಸುತ್ತದೆ.

ಸ್ವತಂತ್ರ ದಿನಾಚರಣೆಗಾಗಿ ದೇಶದೊಡನೆ ವಿನಂತಿ.

ಕರೆ ಬಂದಾಗ ಹೋರಾಟಕ್ಕೆ ಸಿದ್ಧವಿರಬೇಕೆಂದು ಕಾಂಗ್ರೆಸ್‌ವಾದಿಗಳಿಗೆ ಆಹ್ವಾನ!

ಸ್ವಾತಂತ್ರ್ಯ ದಿನಾಚರಣೆ.

1940ನೇ ಜನವರಿ ತಾ.26ಕ್ಕೆ ದೇಶದಲ್ಲೆಲ್ಲಾ ಸ್ವತಂತ್ರ ದಿನವನ್ನಾಚರಿಸಿ ಕಾಂಗ್ರೆಸ್ ವಾದಿಗಳೆಲ್ಲಾ ಸಾರ್ವಜನಿಕ ಸಭೆಗಳಲ್ಲಿ ಜಾಹೀರಾಗಿ ಕೈಕೊಳ್ಳಬೇಕಾದ ಪ್ರತಿಜ್ಞೆಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ತಯಾರಿಸಿ ಪ್ರಕಟಿಸಿರುವರು. 1930ರಿಂದ ಈ ದಿನವು ಪ್ರತಿ ವರ್ಷವೂ ಕ್ರಮವಾಗಿ ಆಚರಿಸಲ್ಪಟ್ಟ ರಾಷ್ಟ್ರೀಯ ಹೋರಾಟದ ಇತಿಹಾಸದಲ್ಲಿ ಇದೊಂದು ಪ್ರಾಮುಖ್ಯ ಕೈಕಂಬವಾಗಿರುತ್ತದೆ. ಪ್ರಕೃತದ ಬಿಕ್ಕಟ್ಟಿನ ನಿಮಿತ್ತವೊದಲಿಗಿಂತಲೂ ತೀವ್ರವಾಗಿ ಪುನಃ ಹಿಂದೀ ಸ್ವಾತಂತ್ರ್ಯ ಸಮರವು ಹೂಡಲ್ಪಡುವ ಸಂದರ್ಭವಿರುವುದರಿಂದ ಈ ಸಲದ ಸ್ವತಂತ್ರ ದಿನಾಚರಣೆಗೆ ವಿಶೇಷ ಪ್ರಾಮುಖ್ಯತೆಯಿರುತ್ತದೆ. ಆದುದರಿಂದ ಬರುವ ಈ ದಿನಾಚರಣೆಯು ಸ್ವಾತಂತ್ರ್ಯ ಸಾಧನೆಯ ನಮ್ಮ ರಾಷ್ಟ್ರೀಯ ನಿರ್ಧಾರವನ್ನು ಮಾತ್ರವಲ್ಲದೆ, ಮುಂದಿನ ಹೋರಾಟದ ಸಿದ್ಧತೆ ಮತ್ತು ಶಿಸ್ತಿನಿಂದ ಕಾರ್ಯಸಾಧನೆಯ ನಿರ್ಧಾರವನ್ನು ವ್ಯಕ್ತಪಡಿಸತಕ್ಕದ್ದು. ಆದುದರಿಂದ ಕಾಂಗ್ರೆಸ್ ಕಮಿಟಿಗಳೂ, ವೈಯುಕ್ತಿಕ ಕಾಂಗ್ರೆಸ್ ವಾದಿಗಳೂ ಸಾರ್ವಜನಿಕವಾಗಿ ಈ ಕೆಳಗಣ ಪ್ರತಿಜ್ಞೆಯನ್ನು ಕೈಕೊಳ್ಳಬೇಕು. ಅಸ್ವಸ್ಥದ ನಿಮಿತ್ತ ಸಭೆಗೆ ಹೋಗಲಾರದವರು ತಮ್ಮ ಮನೆಯಲ್ಲಿ ಪ್ರತಿಜ್ಞಾಬದ್ಧರಾಗಬೇಕು. ಮತ್ತು ಅದನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ತಿಳಿಸಬೇಕು. ಈ ಕೆಳಗಣ ಪ್ರತಿಜ್ಞೆಗೆ ಸಮ್ಮತಿಯಿಲ್ಲದವರು ಕೂಡಾ ತಮ್ಮ ಆಕ್ಷೇಪವನ್ನು ವಿಳಾಸ ಸಮೇತ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ತಿಳಿಸಬೇಕು. ಮನಸ್ಸಿಲ್ಲದವರಿಗೆ ಪ್ರತಿಜ್ಞೆಯನ್ನು ಹೊರಿಸುವ ಇಚ್ಛೆ ಕಾಂಗ್ರೆಸ್ ಕಮಿಟಿಗಿರುವುದಿಲ್ಲ ಅಹಿಂಸಾತ್ಮಕ ಸಂಸ್ಥೆಯೊಂದರಲ್ಲಿ ನಿರ್ಬಂಧಕ್ಕೆ ಆಸ್ಪದವಿರಲಾರದು. ಕಾಯಿದೆ ಭಂಗ ಚಳವಳಹೂಡಲು ತಕ್ಕ ಸಿದ್ಧತೆ ಮತ್ತು ಶಿಸ್ತು ಅತ್ಯಾವಶ್ಯಕವಿರುತ್ತದೆ.

ಪ್ರತಿಜ್ಞೆಯ ನಕಲು

ಸ್ವಾತಂತ್ರ್ಯವುಳ್ಳವರಾಗಿ ತಮ್ಮ ಶ್ರಮದ ಫಲವನ್ನು ತಾವೇ ಅನುಭವಿಸಿ ತಮ್ಮ ಬೆಳವಣಿಗೆಗೆ ಸಂಪೂರ್ಣ ಸಂದರ್ಭಗಳೊದಗುವಂತೆ ಜೀವನದ ಆವಶ್ಯಕತೆಗಳನ್ನೆಲ್ಲಾ ಪಡೆಯುವುದು ಇತರ ಜನಾಂಗಗಳಂತೆಯೇ ಹಿಂದೀ ಜನಾಂಗದ ನಿರಂತರವಾದ ಹಕ್ಕಾಗಿರುತ್ತದೆ. ಯಾವನಾದರೊಂದು ಸರಕಾರವು ಈ ಹಕ್ಕುಗಳನ್ನು ಒಂದು ಜನಾಂಗದಿಂದ ಕಿತ್ತುಕೊಂಡು ಅದನ್ನು ಪೀಡಿಸಿದ ಪಕ್ಷದಲ್ಲಿ ಅಂತಹ ಸರಕಾರವನ್ನು ಬದಲಾಯಿಸುವ ಅಥವಾ ಕೆಗೆದು ಹಾಕುವ ಹಕ್ಕು ಕೂಡಾ ಅದಕ್ಕಿರುವುದು. ಬ್ರಿಟಿಷ್ ಸರಕಾರವು ಹಿಂದೀಯರನ್ನು ಸ್ವಾತಂತ್ರ್ಯ ವಿರಹಿತರನ್ನಾಗಿ ಮಾಡಿರುವುದು ಮಾತ್ರವಲ್ಲದೆ, ಜನತೆಯ ಸೂರೆಯ ಮೇಲೆಯೇ ತಾನು ಅವಲಂಬಿಸಿಕೊಂಡು ಹಿಂದೂದೇಶದ ಸಾಂಪತ್ತಿಕ, ರಾಜಕೀಯ, ಸಾಂಸ್ಕೃತಿಕ, ಮತ್ತು ಧಾರ್ಮಿಕ ವಿನಾಶಕ್ಕೆ ಕಾರಣವಾಗಿರುವುದು. ಆದುದರಿಂದ ಹಿಂದೂದೇಶವು ಬ್ರಿಟಿಷ್ ಸಂಬಂಧವನ್ನೇ ಕಡಿದು ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಬೇಕೆಂದೇ ನಮ್ಮ ನಂಬಿಕೆ.

ನಮ್ಮ ಸ್ವಾತಂತ್ರ್ಯವನ್ನು ಸಾಧಿಸುವ

1940 ಡೈರಿಗಳು

ಕರ್ನಾಟಕ ಡೈರಿ:

ದೊಡ್ಡದು ೦—೧೦—೦ ಚಿಕ್ಕದು ೦—೫—೦

„ ಮುಚ್ಚಳದ್ದು ೦—೧೨—೦ „ ಮುಚ್ಚಳದ್ದು ೦—೬—೦

ತುಳುನಾಡ್ ಡೈರಿ:

— ಬೆಲೆ: ಬರಿಯ ನಾಲ್ಕಾಣೆ —

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಕೊಡಲಾಗುವುದು.

GENERAL SUPPLIES LIMITED

UDIPI - - - S. INDIA

GANARA BANK LIMITED

HEAD OFFICE:—**MANGALORE.**

A NET WORK OF 37 BRANCHES.

ALLEPPEY	CALICUT	KARKALA
ARSIKERE	CANNANORE	KASARGODE
BADAGARA	CHERAI	KAYAMKULUM
BANGALORE	CHIKMAGALUR	KUMBLA
BANTWAL	COCHIN	MANGALORE-BUNDER
BELGAUM	COONDAPOOR	MANGALORE-CITY
BELTHANGADY	DAVANGERE	MANJESHWAR
BOMBAY-FORT	DHARWAR	MOOLKY
BOMBAY-MANDVI	DODDBALLAPUR	PAYYANNUR
BOMBAY-GIRGAUM	ERNAKULAM	PUTTUR
BOMBAY-KALBADEVI	GANGULLI	QUILON
BOMBAY-PAREL	HUBLI	UDIPI
	UPPINANGADY	

ಅತ್ಯಂತ ಫಲದಾಯಕದಾರಿಯು ಹಿಂಸೆಯ ಮೂಲಕವಲ್ಲೆಂಬುದನ್ನು ನಾವು ಒಪ್ಪುತ್ತೇವೆ. ಹಿಂದೂದೇಶವು ಶಾಂತಪರ, ನ್ಯಾಯಪರ ಮಾರ್ಗವನ್ನವಲಂಬಿಸಿ ಬಲ ಮತ್ತು ಸ್ವಾವಲಂಬನೆಯನ್ನು ಪಡೆದು ಸ್ವರಾಜ್ಯ ಸಾಧನೆಯ ಮಾರ್ಗದಲ್ಲಿ ಬಹಳ ದೂರ ಮುನ್ನಡೆದಿರುವುದು. ಮತ್ತು ಈ ವಿಧಾನಗಳನ್ನನುಸರಿಸಿಯೇ ನಮ್ಮ ದೇಶವು ಸ್ವಾತಂತ್ರ್ಯವನ್ನು ಸಾಧಿಸುವುದು. ಹಿಂದೂ ದೇಶದ ಸ್ವಾತಂತ್ರ್ಯಸಾಧನಾ ಪ್ರತಿಜ್ಞೆಯನ್ನು ನಾವು ನವೀಕರಿಸಿ ಪೂರ್ಣ ಸ್ವರಾಜ್ಯವು ಸಾಧಿಸಲ್ಪಡುವವರೆ ಸ್ವಾತಂತ್ರ್ಯ ಸಮರವನ್ನು ಅಹಿಂಸಾತ್ಮಕವಾಗಿ ಮುನ್ನಡೆಯುವ ಗಂಭೀರನಿರ್ಧಾರಮಾಡುವೆವು.

ಸಾಮಾನ್ಯತಃ ಅಹಿಂಸಾತ್ಮಕ ಚಳವಳಕ್ಕೆ, ವಿಶೇಷವಾಗಿ ಅಹಿಂಸಾತ್ಮಕ ಪ್ರತ್ಯಕ್ಷ ವಿರೋಧದ ಸಿದ್ಧತೆಗೆ, ಖಾದಿ, ಜಾತೀಯ ಸೌಹಾರ್ದತೆ, ಮತ್ತು ಅಸ್ಪೃಶ್ಯತಾ ನಿವಾರಣೆಯ ವಿಧಾಯಕ ಕಾರ್ಯಕ್ರಮವನ್ನು ಜಯಶೀಲವಾಗಿ ಕೈಕೊಳ್ಳುವುದು ಅವಶ್ಯವೆಂದು ನಾವು ನಂಬುತ್ತೇವೆ. ಜಾತಿ ಮತ ಭೇದವಿಲ್ಲದೆ ನಮ್ಮ ಬಂಧುಗಳೊಳಗೆಲ್ಲಾ ಸೌಹಾರ್ದವನ್ನು ಬೆಳೆಸಲು ನಾವು ಪ್ರತಿಯೊಂದು ಸಂದರ್ಭವನ್ನು ವಿನಿಯೋಗಿಸುವೆವು. ತಿರಸ್ಕೃತರಾದ ದೀನ ದುಃಖಿತರನ್ನು ಅಜ್ಞಾನ ಮತ್ತು ಬಡತನದಿಂದ ಉದ್ಧರಿಸಲೆತ್ನಿಸುವೆವು. ಹಿಂದುಳಿದವರು ಮತ್ತು ದಳಿತರೆಂದು ಪರಿಗಣಿಸಲ್ಪಡುವವರ ಹಿತವನ್ನು ಪ್ರತಿಯೊಂದು ರೀತಿಯಲ್ಲಿಯೂ ಮುಂದುವರಿಸುವೆವು. ಸಾಮ್ರಾಜ್ಯ ಶಾಹಿಯನ್ನು ನಾಶ ಮಾಡಲು ನಾವು ಸೊಂಟ ಕಟ್ಟಿ ಹೊರಟಿರುವೆವಾದರೂ, ನಮಗೂ ಅಧಿಕಾರಿ ಯಾ ಅನಧಿಕಾರಿ ಆಂಗ್ಲೇಯರಿಗೂ ಯಾವ ವೈಯಕ್ತಿಕ ಕಲಹವೂ ಇರುವುದಿಲ್ಲ. ಸವರ್ಣೀಯ ಹಿಂದು ಮತ್ತು ಹರಿಜನರೊಳಗಣ ಭಿನ್ನ ಭೇದಗಳು ನಿವಾರಿಸಲ್ಪಟ್ಟು ಹಿಂದುಗಳು ಅವನ್ನು ತಮ್ಮ ಅಸಾನಿತ್ಯದ ನಡತೆಯಲ್ಲಿ ಮರೆತು ಬಿಡಬೇಕೆಂಬುವನ್ನು ನಾವು ಬಲ್ಲೆವು. ನಮ್ಮ ಧಾರ್ಮಿಕ ನಂಬಿಗೆಗಳು ಭಿನ್ನವಾದರೂ ನಮ್ಮ ಪರಸ್ಪರ ಸಂಬಂಧದಲ್ಲಿ, ಸಮಾನ ರಾಷ್ಟ್ರೀಯ, ರಾಜಕೀಯ ಮತ್ತು ಸಾಂಪತ್ತಿಕ ಹಿತದ ಕಟ್ಟುಗಳಿಂದ ಒಂದುಗೂಡಿರುವ ಭಾರತ ಮಾತೆಯ ಮಕ್ಕಳಾಗಿ ನಡೆಯುವೆವು.

ಹಿಂದೂದೇಶದ 7 ಲಕ್ಷ ಹಳ್ಳಿಗಳ ಪುನರುಜ್ಜೀವನ ಮತ್ತು ಜನತೆಯನ್ನು ನುಚ್ಚುನೂರು ಮಾಡಿರುವ ಬಡತನದ ನಿವಾರಣೆಗಾಗಿ ಚರ್ಕ ಮತ್ತು ಖಾದಿಯು ವಿಧಾಯಕ ಕಾರ್ಯಕ್ರಮದ ಪ್ರಾಮುಖ್ಯಾಂಗಗಳಾಗಿವೆ. ಆದುದರಿಂದ ನಾವು ಕ್ರಮವಾಗಿ ನೂಲುವೆವು ಮತ್ತು, ವೈಯಕ್ತಿಕವಾಗಿ ಖಾದಿಯಲ್ಲದೆ ಮತ್ತಾವ ವಸ್ತ್ರವನ್ನೂ ಧರಿಸಲಾರೆವು ಮತ್ತು ಸಾಧ್ಯವಾದ ಮಟ್ಟಿಗೆ ಹಳ್ಳಿ ಕೈಗಾರಿಕೆಗಳ ಸಾಮಾನುಗಳನ್ನೇ ಉಪಯೋಗಿಸಿ ಇತರರೂ ಹಾಗೆ ಮಾಡುವಂತೆ ಪ್ರಯತ್ನಿಸುವವು.

ಕಾಂಗ್ರೆಸ್ ತತ್ವ ಮತ್ತು ಧೋರಣೆಗಳನ್ನು ಶಿಸ್ತಿನಿಂದ ಪಾಲಿಸುವ ಮತ್ತು ಹಿಂದೂದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮುನ್ನಡೆಸಲು ಕಾಂಗ್ರೆಸಿನ ಕರೆಯು ಯಾವಾಗ ಬರುತ್ತದೋ ಆಗ ಅದನ್ನನುಸರಿಸಿ ನಡೆಯಲು ಸಿದ್ಧವಾಗಿರುವ ದೀಕ್ಷೆಯುಳ್ಳವರಾಗುವೆವು.

ಕೋಪ್ರ್ಯಾನದ ಬಿಳೀ ಟೂಥಪೇಸ್ಟು ಅಲುಗಾಡುವ ಹಲ್ಲುಗಳನ್ನು ಗಟ್ಟಿಮಾಡ್ತದೆ



ಅಲುಗಾಡುವ ಹಲ್ಲುಗಳನ್ನು ಮತ್ತೆ ಗಟ್ಟಿಮಾಡಿ ರಕ್ತ ಬೀಳುವದನ್ನು ಬಂದು ಮಾಡಿ ವಸಡಿಯನ್ನು ಗಟ್ಟಿ ಮಾಡುವದು. ತಯಾರಿಸುವವರು— ಕೇಪ್ಟ್ಯಾನ್ ಕೆಮಿಕಲ್ ಕಂ. (ಮಾಲಕರು—ಮಗನಭಾಯಿ ಆವಿಜನ್ ಅಂಡ್ ಕಂಪನಿ ಮುಂಬಯಿ.

ಇನ್ಕಮ್ ಟೇಕ್ಸ್ ಮತ್ತು ಹೊಗೆಸೊಪ್ಪುವ ಇತರ ವಿಕ್ರಯ ಟೇಕ್ಸುಗಳು.

ಇನ್ಕಮ್ ಟೇಕ್ಸಿನ ಕಾಯಿದೆಯಲ್ಲಿ 1-4-39ರಿಂದ ಬಹಳ ವ್ಯತ್ಯಾಸಗಳಾಗಿವೆ. ಹೊಸತಾದ ವಿಕ್ರಯ ಟೇಕ್ಸಿನ ಆಕ್ಟುಗಳಲ್ಲಿಯೂ ವ್ಯಾಪಾರಸ್ಥರು ತಿಳಿದಿರಬೇಕಾದ ತೊಡಕಿನ ವಿಷಯಗಳು ಅನೇಕ ಇವೆ, ಕ್ರಮವಾದ ಜಮಾ ಖರ್ಚಿನ ಲೆಕ್ಕ ಇದ್ದರೂ ಸಾಲದು, ಅದರಿಂದ ತಯಾರಿಸಿದ ಸಾರಾಂಶದ ನಿಜಸ್ಥಿತಿ ಕೆಲವೇ ನಿಮಿಷಗಳಲ್ಲಿ ಟೇಕ್ಸಿನ ಆಫೀಸರರಿಗೆ ಒಪ್ಪಿಗೆಯಾಗಬೇಕು. ಅಂಥಾ ಭೇಟಿಗಳ ಸಮಯದಲ್ಲಿಯೇ ಎಲ್ಲಾ ತರದ ವಿನಾಯತಿಗಳನ್ನು ಹೊಂದಿಕೊಳ್ಳಬೇಕು, ಮೇಲಿನ ಟೇಕ್ಸುಗಳನ್ನು ಕೊಡಬೇಕಾಗುವವರು ಶೀಘ್ರ ಕಾಣಿಸಿದವರಿಂದ ಅನುಭವಪಡೆದು ಆಫೀಸರರಿಗೆ ನಿಜಸ್ಥಿತಿಯನ್ನು ಸಮಾಧಾನಪಡಿಸಿ ಕಾಯಿದೆಯಂತೆ ಸಿಗಬೇಕಾದ ಎಲ್ಲಾ ತರದ ಸವಲತ್ತುಗಳ ಪ್ರಯೋಜನ ಹೊಂದಬಹುದು. ಸರಿಯಾಗಿ ನಿಮ್ಮಿಂದ ವಸೂಲಾಗುವ ಟೇಕ್ಸು ಕಮ್ಮಿಯಾಗುವುದು ಸಂದರ್ಭಾನುಸಾರ ಟೇಕ್ಸು ಕೊಡಬೇಕಿಲ್ಲವೆಂದೂ ತೀರ್ಮಾನವಾಗಬಹುದು, "ರಿಟರ್ನ್" ಕಳ್ಳಿಯಾಗಿ ಹೋಗಿದ್ದರೂ ತಡವಾಗಲಿಲ್ಲ. ಲೆಕ್ಕ ಹಾಜರುಮಾಡುವ 15 ದಿವಸಗಳ ಮುಂಚೆಯಾದರೂ ಕೆಳಗೆ ವಿಳಾಸ ಕಾಣಿಸಿದವರೊಡನೆ ಪತ್ರವ್ಯವಹಾರ ನಡಿಸಿರಿ,

ಎಸ್. ಎಸ್. ಪುರಾಣಿಕ,
ಇನ್ಕಮ್‌ಟೇಕ್ಸ್ ಪ್ರಾಕ್ಟೀಶನರ್,
ಕುಂದಾಪುರ ಪೋಸ್ಟ್.

NAVAYUGA
Advertisement Tariff

1 Page Rs. 25/- per insertion
½ „ Rs. 15/- „ „
¼ „ Rs. 8/- „ „
⅛ „ Rs. 5/- „ „
Per Single inch col. Re. 1 „
Contract rates on application
Manager-**Navayuga UDIPI.**

ಓ ರಿ ಯ ಂ ಟ ಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್

ಸ್ಥಾಪನೆ ವರ್ಷ 1874] ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ [ಪ್ರಧಾನ ಕಾರ್ಯಾಲಯ—ಮುಂಬಯಿ.

ನಿಮ್ಮನ್ನು ಆಶ್ರಯಿಸಿಕೊಂಡಿರುವವರಿಗೆ, ಮುಪ್ಪಿನಲ್ಲಿ ನಿಮಗೆ ಮತ್ತು ನಿಮ್ಮನ್ನು ಹೊಂದಿಕೊಂಡಿರುವವರಿಗೆ ದುಡ್ಡಿಗಾಗಿ ಪರಾವಲಂಬಿಗಳಾಗದೆ ತಕ್ಕಷ್ಟು ಆರ್ಥಿಕ ಸ್ವಾತಂತ್ರ್ಯವು ನಿಸ್ಸಂದೇಹವಾಗಿ ದೊರಕುವಂತಹ ನಿಧಿಯು ಕ್ಲಪ್ತ ಅವಧಿಗಳ ಚಿಕ್ಕಪಾವತಿಗಳಿಂದ ನಿಶ್ಚಯವಾಗಿ ಬೆಳೆದು ಬರುವಂತೆ ಮಾಡುವ ಏಕಮಾತ್ರ ಸಾಧನವೆಂದರೆ **ಜೀವವಿಮೆ ಮಾಡುವುದೇ.**

ಯೋಗ್ಯಾಯೋಗ್ಯತೆಯನ್ನು ಪರಿಶೀಲಿಸಬಲ್ಲ ಸಾವಿರಾರುಮಂದಿ ಪ್ರತಿ ವರ್ಷವೂ "ಓರಿಯಂಟಲ್" ನಲ್ಲೇ ತಮ್ಮ ಜೀವವಿಮೆಮಾಡಿ ತಮ್ಮನ್ನು ಅವಲಂಬಿಸಿಕೊಂಡಿರುವವರಿಗೂ ವೃದ್ಧಾಪ್ಯದಲ್ಲಿ ತಮಗೂ ತಮ್ಮ ಆಶ್ರಿತರಿಗೂ ಆರ್ಥಿಕ ಸ್ವಾತಂತ್ರ್ಯದ ತಳಹದಿ ಹಾಕುತಿದ್ದಾರೆ.

ನೀವೇಕೆ ಕಾಲಹರಣ ಮಾಡುವಿರಿ?

ಇಂದೇ ಓರಿಯಂಟಲಿನ ಒಂದು ವಿಮಾಪತ್ರ ಹೊಂದಿರಿ!

ವಿಷಯ ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ

ದಿ ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸು,
ಮೈನ್‌ರೋಡ್, ಮಡಿಕೇರಿ, (ಕೊಡಗು.)

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸು,
ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್, ಬೆಂಗಳೂರು.

ORIENTAL

GOVERNMENT SECURITY LIFE ASSURANCE CO., LTD.

ಮೈಸೂರು

(ನವಯುಗದ ಬಾತ್ಮೀದಾರರಿಂದ) 26 12 39

ಮೈಸೂರು ದಿವಾನರು ಇದೇ ಮಾಹೆ ತಾ॥ 22 ರಲ್ಲಿ ಮದ್ರಾಸಿನಲ್ಲಿ ನಡೆದ ಅ॥ಭಾ॥ ಖಾದಿ ಮತ್ತು ಕೈಗಾರಿಕೆ ವಸ್ತು ಪ್ರದರ್ಶನ ಪ್ರಾರಂಭೋತ್ಸವ ನಡೆಸಿ ಭಾಷಣಮಾಡಿದ್ದು ಇದೀ ಭಾರತವೇ ಮೆಚ್ಚಿದೆ. ಶ್ರೀಯುತರನ್ನು ಮದ್ರಾಸಿನಲ್ಲಿ ಶ್ರೀ ಮಹದೇವ ದೇಸಾಯಿಗಳು ಭೇಟಿ ಮಾಡಿ, ಮೈಸೂರು ವಿಚಾರ ದೀರ್ಘಕಾಲ ಚರ್ಚಿಸಿದರೆಂದೂ, ಆ ಕಾಲದಲ್ಲಿ ಶ್ರೀ. ಚೆಂಗಲರಾಯ ರೆಡ್ಡಿಗಳು ಕಾಂಗ್ರೆಸ್ ಪರ ಹಾಜರಿದ್ದರೆಂದೂ ಹೇಳಲಾಗಿದೆ.

ಶ್ರೀ ಓ. ಶಿವಶಂಕರ್‌ರವರನ್ನು, 1940ನೇ ಸಾಲಿಗೆ ಬೆಂಗಳೂರು ಪೌರ ಸಭೆ ಪ್ರೆಸಿಡೆಂಟರನ್ನಾಗಿ ಚುನಾಯಿಸಲಾಯಿತು.. ಪತ್ತು ಬೆಂಗಳೂರು ಜನಗಳಿಗೆ ನೀರಿನ ತೊಂದರೆ ಬಂದಿರುವುದರಿಂದ, ಮೊದಲಿದ್ದಂತೆ ಸರ್ಬರಾಯಿ ಮಾಡುವ ಮನೆಗಳಿಗೆ ಮೂರು ಸಾವಿರ ಗ್ಯಾಲನ್ ನೀರಿನ ಬದಲು ನಾಲ್ಕು ಸಾವಿರ ಗ್ಯಾಲನ್ ನೀರು ಒದಗಿಸಬೇಕೆಂದು ಪೌರ ಸಭೆಯವರು ತೀರ್ಮಾನಿಸಿದರು.

ಶ್ರವಣಬೆಳಗೊಳ ಗೋಮಟೇಶ್ವರ ವಿಗ್ರಹ ಮಹಾಮಸ್ತಕಾಭಿಷೇಕವು ಮುಂದಿನ (1940) ಫೆಬ್ರವರಿ ತಾ 11ರಿಂದ 26ರ ತನಕ ನಡೆಯುತ್ತೆ. ಇದಕ್ಕೆ ಬರುವ ಯಾತ್ರಿಕರಿಗೆ ಸೌಕರ್ಯ ಒದಗಿಸಲು ಏರ್ಪಾಡುಗಳು ನಡೆಯುತ್ತಿವೆ.

ಅಡಕೆ ಶಿಲ್ಪ ಪಡೆವ ಸಲುವಾಗಿ ಶ್ರೀ ಪ್ರಿನ್ಸ್ ಜಯಚಾಮರಾಜ ಒಡೆಯರು, ಬೆಂಗಳೂರಲ್ಲಿ ಅನೇಕ ಕಛೇರಿಗಳಿಗೆ ಭೇಟಿಯಾಗುತ್ತಿದ್ದಾರೆ.

ಚಿಕ್ಕಮಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ 'ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್' ಪ್ರಾರಂಭೋತ್ಸವವನ್ನು ಶೃಂಗೇರಿ ಸಚಿವ ಶ್ರೀ ನ್ಯಾಪತಿ ನಾಥನ ರಾಯರು ನೆರವೇರಿಸಿದರು.

ಹೈದ್ರಾಬಾದಿನಲ್ಲಿ ಈ ಬಾರಿ ನಡೆದ ಅ. ಭಾ. ತತ್ವ ಶಾಸ್ತ್ರ ಸಮ್ಮೇಳನದ ಅಧ್ಯಕ್ಷತೆಯನ್ನು, ಮೈಸೂರಿನ ನಿವೃತ್ತ ಪ್ರೊ॥ ತತ್ವಜ್ಞಾನಿ ಶ್ರೀ. ಎಂ. ಹಿರಿಯಣ್ಣನವರು ವಹಿಸಿ ಭಾಷಣ ಮಾಡಿದ್ದು ಮೈಸೂರಿಗೊಂದು ಹೆಮ್ಮೆ.

ದಿವಾನರ ಪ್ರೈವೇಟ್ ಸೆಕ್ರೆಟರಿ, ಮಿ॥ ಚಾರಲ್ಸ್ ಸರೋನ್ಸರು, ಡೆವಲಪ್‌ಮೆಂಟ್ ಕಮಿಶನರ್ ಕಾರ್ಯಭಾರಿಗಳಾದ್ದರಿಂದ, ಮಿ। ಡಿ. ಶಾಸ್ತ್ರಿಯು ಅವರ ಸ್ಥಳದಲ್ಲಿ ನೇಮಿಸಲಾಗಿದೆ.

ಮಿ॥ ಮಹಮ್ಮದಾಲಿ ಜಿನ್ನಾರವರ ಜಯಂತಿ ಬೆಂಗಳೂರು ಮಹಮ್ಮದೀಯರು, ಇದೇ ಮಾಹೆ ತಾ 22ರಲ್ಲಿ 'ಬಂಧ ವಿಮೋಚನಾ' ದಿನಾಚರಣೆ ಆಚರಿಸಿದರು.

ಚಿತ್ರದುರ್ಗದ ಬಳಿ, ಕೆಲ್ಲೋಡು ಹತ್ತಿರ ವೇದಾವತಿ ನದಿಗೆ ಅಡ್ಡವಾಗಿ ಹೊಸದಾಗಿ ಕಟ್ಟಲಾಗುವ ಸೇತುವೆ ಪ್ರಾರಂಭೋತ್ಸವವನ್ನು, ಮುಂದಿನ ತಿಂಗಳು ಮೈಸೂರು ಶ್ರೀಮನ್ ಮಹಾರಾಜರವರು ನೆರವೇರಿಸುತ್ತಾರೆಂದು ತಿಳಿದು ಬಂದಿದೆ.

"ನಾಮರ್ದಾಯಿ"

ನಪುಂಸಕತ್ವವನ್ನು ಹೋಗಲಾಡಿಸುತ್ತದೆ. ಧಾತು ಕ್ಷೀಣತೆ, ನಸೋನಿ ಕಮಜೋರಿ ಮೊದಲಾದ ಅನೇಕ ಕೆಟ್ಟ ಮತ್ತು ದುಷ್ಟರೋಗಗಳನ್ನು ಒಮ್ಮೆಯ ಸೇವನೆಯಿಂದಲೇ ನಿಲ್ಲಿಸುತ್ತದೆ

"ಸೆಮಿನಾ ಟೋನಿಕ್ ಪಿಲ್ಸ್"

ಇದರ ಸೇವನೆಯಿಂದ ನವಚೇತನವುಂಟಾಗುತ್ತದೆ.

ಈ ಔಷಧಗಳು ಸರ್ವಪ್ರಕಾರದ ದೇಶಿ, ವಿಲಾಯತಿ, ಯುನಾನಿ ಪೇಟೆಂಟ್ ವನಸ್ಪತಿ ಮತ್ತು ರಸಾಯನ ಅನುಭವಿಕ.

ಕಿಮ್ಮತು ರೂ. 3-0-0 ಡಬ್ಬಿ 0-8-0

ಸೊರತ್ ಫಾರ್ಮೆಸಿ,
ನಳ್ ಬಜಾರ್, ಡಂಕನ್ ರೋಡ್,
ಮುಂಬಾಯಿ 4

Sorath Pharmacy,
Null Bazaar Duncan Road,
BOMBAY 4.

ಶ್ರೀ ಮುದವೀಡು ಕೃಷ್ಣರಾಯರ ಭಾಷಣ.

ಕನ್ನಡ ಸಾಹಿತ್ಯ ಸಮ್ಮೇಳನದ 24ನೇ ಅಧಿವೇಶನವು ಇದೇ ತಾ. 25, 26, 27 ರಲ್ಲಿ ಬೆಳ್ಗಾವಿಯಲ್ಲಿ ಶ್ರೀ. ಮುದವೀಡು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ನಡೆಯಿತು. ಶ್ರೀ. ಮುದವೀಡ್ಕರರೆಂದರೆ ಕರ್ನಾಟಕಾಭಿಮಾನದ ಪ್ರತಿಮೂರ್ತಿಯು. ಅವರ ಪ್ರತಿಯೊಂದು ರೋಮಕೂಪದಲ್ಲಿಯೂ ಕನ್ನಡನಾಡು, ನುಡಿ, ಮತ್ತು ಸಂಸ್ಕೃತಿಯ ಪ್ರೇಮವೇ ತುಂಬಿರುವುದು. ಕರ್ನಾಟಕ ಏಕೀಕರಣ, ಪ್ರಾಂತರಚನೆ ಮತ್ತು ಕನ್ನಡಿಗರ ಅಭ್ಯುದಯ ಸಾಧನೆಯ ಹುರುಪು ಹುಮ್ಮಸಿನಿಂದ ಅವರ ನರನಾಡಿಗಳು ಉತ್ತೇಜಿತವಾಗಿ, ಪ್ರಾಯ ಸಂದವರಾದರೂ ಅವರು ನಡುಹರೆಯದ ಕನ್ನಡತರುಣರನ್ನು ನಾಚಿಸುವ ಉತ್ಸಾಹವುಳ್ಳವರಿರುವರು. ಕರ್ನಾಟಕದ ವೈಭವದ ಬಾವುಟವನ್ನೆತ್ತಿ ಹಿಡಿದು ಕನ್ನಡಾಭಿಮಾನದ ಬೀಜ ಮಂತ್ರೋಪದೇಶಮಾಡಿ ಕನ್ನಡಿಗರನ್ನೆಲ್ಲಾ ನವಜಾಗ್ರತಿಯ ನವಸ್ಫೂರ್ತಿಯಿಂದ ತುಂಬಿದ ಕರ್ನಾಟಕ ಮಾತೆಯ ನಿಷ್ಠಾವಂತ ಭಕ್ತರವರು ಎಂತೆಯೇ ಅವರ ಭಾಷಣದ ಪ್ರತಿಯೊಂದು ಶಬ್ದವೂ ಅವರ ಅಂತಃಕರಣದ ಉಜ್ವಲ ಪ್ರೇಮವನ್ನೂ, ಆ ದಾಹವನ್ನೂ ಹೊರಸೂಸುತ್ತದೆ. ಅದನ್ನೋದಿದ ಎಂತಹ ಅಭಿಮಾನ ಹೀನ ಕನ್ನಡಿಗನಾದರೂ ಒಂದೊಮ್ಮೆ ರೋಮಾಂಚನಗೊಳ್ಳದಿರಲಾರನು.

ಕನ್ನಡಮ್ಮನ ಊಳಿಗವನ್ನು ಕೈಕೊಂಡು ಬಾಳಿದ, ಬಾಳುವ ಆಳು ಮಾತ್ರ ನಾನೆಂದು ಶ್ರೀ. ಮುದವೀಡ್ಕರರು ಆರಂಭದಲ್ಲೇ ತನ್ನ ಕುರಿತು ಹೇಳಿಕೊಂಡಿದ್ದಾರೆ. ಕನ್ನಡಮ್ಮನ ಊಳಿಗದಲ್ಲೇ ತಲೆ ನರೆತ ವೈಮಾಟಿಕ ಶ್ರೀ ಮುದವೀಡ್ಕರರಂತಹ ಆಳುಗಳಾದರೂ ಕರ್ನಾಟಕದಲ್ಲಿ ಎಷ್ಟು ಮಂದಿ ಇದ್ದಾರೆ. ಅವರೊಬ್ಬರೇ ಎನ್ನಬಹುದು. ಕನ್ನಡ ಸಾಹಿತ್ಯ ಪರಿಷತ್ತಿನವರು ವೈಯಕ್ತಿಕ ಸ್ಥಾನಮಾನಗಳ ದೃಷ್ಟಿಯನ್ನು ಮೂಲೆಗೊತ್ತಿ, ಕೇವಲ ಸೇವಾದೀಕ್ಷೆಯುಳ್ಳ ಆಳೊಬ್ಬರಿಗೆ ಅಧ್ಯಕ್ಷ ಪದವಿಯ ಅತ್ಯುಚ್ಚ ಗೌರವವನ್ನು ಇಷ್ಟೊಂದು ವಿಳಂಬವಾಗಿಯಾದರೂ ಕೊಡುವಂತಹ ಪ್ರಜಾಸತ್ತಾತ್ಮಕ ಭಾವನೆಯುಳ್ಳವರಾದುದು ಸಂತೋಷಕರವಿದೆ.

ದ್ರಾವಿಡ ಸಂಸ್ಕೃತಿಗೆ ಕನ್ನಡವೇ ಮೂಲವೆಂದೂ, ಕ್ರಿಸ್ತಶಕ ಪೂರ್ವದಲ್ಲೇ ಕರ್ನಾಟಕವು ವೈಭವದ ಶಿಖರಕ್ಕೇರಿದ್ದಿತೆಂದೂ, ಕನ್ನಡ ನಾಡು ನರ್ಮದಾ ನದಿಯವರೆಗೂ ಹಬ್ಬಿದ್ದು, ಶ್ರೀಕೃಷ್ಣನು ಕೂಡಾ ಕನ್ನಡ ಕುಲದವನೇ ಆಗಿದ್ದನೆಂದೂ ಶ್ರೀ. ಮುದವೀಡ್ಕರರು ಕಲ್ಪಿಸಿರುವ ಕರ್ನಾಟಕದ ಗತವೈಭವ ಮತ್ತು ಪ್ರಾಚೀನತೆಯ ಚಿತ್ರದಲ್ಲಿ ಅತಿಶಯೋಕ್ತಿ ಇರಬಹುದು. ಇಡೀ ವಿಶ್ವವನ್ನೇ ಕನ್ನಡ ಮಯವಾಗಿ ಕಾಣುವವರವರು. ಅವರ ಶ್ರದ್ಧೆ, ಅಭಿಮಾನ ಮತ್ತು ಸ್ಫೂರ್ತಿಯು ಎಂತಹ ಗಗನ ಗೋಪುರವನ್ನಾದರೂ ಕಲ್ಪಿಸಿಕೊಳ್ಳಬಹುದು. ಕಳೆದುಹೋದ ಕರ್ನಾಟಕದ ವೈಭವದ ಕುರಿತು ಅವರು ಎಷ್ಟೊಂದು ಹೆಮ್ಮೆಪಡುವರೋ ಅಷ್ಟೇ ಸಂತಾಪಪಡುತ್ತಾರೆ. ಕನ್ನಡದ ಇಳಿಗಾಲ ಅಳಿಗಾಲಗಳಿಗಾಗಿ ವಿಚ್ಛಿನ್ನ ಕರ್ನಾಟಕದ ವಿವಿಧ ವಿಚಿತ್ರ ಪರಿಸ್ಥಿತಿಯು ಕನ್ನಡಿಗರ ಅಧೋಗತಿಯ ಕರುಣ ಚಿತ್ರವು ಕನ್ನಡಿಗರ ಹೃದಯವನ್ನು ಕರಗಿಸಿಬಿಡುತ್ತದೆ. ಕನ್ನಡಿಗರಲ್ಲಿ ನವಜಾಗ್ರತಿಯುಂಟಾದ ಮೇಲೆ, ಕನ್ನಡ ನಾಡು ಮತ್ತು ನುಡಿಗಳಲ್ಲಿ ಅವರು ಅಭಿಮಾನತಾಳಿದ ಮೇಲೆ ಕರ್ನಾಟಕದ ಉನ್ನತಿಗಾಗಿ ಅವರು ಮಾಡಿರುವ ಕಾರ್ಯಕಲಾಪಗಳನ್ನೆಲ್ಲಾ ಶ್ರೀ ಮುದವೀಡ್ಕರರು ತನ್ನ ಭಾಷಣದಲ್ಲಿ ಪರಿಶೀಲಿಸಿ ಕನ್ನಡ ಜನಾಂಗದ ಎರಡೇ ದಶಕಗಳ ಅದ್ಭುತ ಕ್ರಾಂತಿಯಿಂದ ಹಿರಿಹಿರಿ ಹಿಗ್ಗಿದ್ದಾರೆ. ಅನಂತರ ಅಧ್ಯಕ್ಷರು ವಿಭಕ್ತವಾದ, ವಿಸಂಘಟಿತವಾದ, ವಿಸ್ಖಲಿತವಾದ ಕನ್ನಡ ಜನಾಂಗವು ಸುಸಂಘಟಿತವಾಗುವಂತೆ ಅವ್ಯಾಹತವಾಗಿ ಪ್ರಯತ್ನಪಟ್ಟು ಬಲುಮಟ್ಟಿಗೆ ಶ್ರೇಯಸ್ಸು ಪಡೆದಿರುವ ಇಡೀ ಕನ್ನಡ ನಾಡಿನ ಪ್ರಾಮುಖ್ಯ ಸಂಸ್ಥೆಗಳಾದ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ, ಕರ್ನಾಟಕ ಏಕೀಕರಣ ಸಂಘ ಮೊದಲಾದುವುಗಳು ಮಾಡಿರುವ ಕೆಲಸದ ಕುರಿತು ಪ್ರಸ್ತಾಪಿಸಿ ಪ್ರಶಂಸಿಸಿರುತ್ತಾರೆ.

ಕನ್ನಡ ಗ್ರಂಥ ನಿರ್ಮಾಣ, ಕನ್ನಡ ನಾಡಿನ ನಿರಕ್ಷರತಾ ನಿವಾರಣಾ ಯತ್ನ, ಮರಾಠಿ, ತೆಲುಗುಗಳಿಂದ ಕನ್ನಡಕ್ಕಾಗಿರುವ ಹಾನಿಯ ವಿಷಯಗಳನ್ನೆಲ್ಲಾ ಅಧ್ಯಕ್ಷರು ಹೇಳಿ ರಾಷ್ಟ್ರಭಾಷೆಯಾದ ಹಿಂದಿಯು ಹಿಂದೀಯರಿಗೆಲ್ಲಾ ಅತ್ಯಾವಶ್ಯಕವಾದರೂ ಅದರ ಪ್ರಚಾರದ ಕುರಿತು ಅತಿರೇಕ ಉತ್ಸಾಹ ತೋರಿಸಬಾರದು. ಅದನ್ನು ಬಲಾತ್ಕಾರದಿಂದೆಂಬಂತೆ ಜನತೆಯ ಮೇಲೆ ಹೊರಿಸಬಾರದು. ಹಿಂದಿಯನ್ನು ಕಲಿಯಲು ಬೇಕಾದ ಅನುಕೂಲತೆಯನ್ನೊದಗಿಸಿಕೊಡಬೇಕು, ಆದರೆ ಅದು ಕನ್ನಡಕ್ಕಿಂತಲೂ ಪ್ರಧಾನ ಸ್ಥಾನ ಪಡೆದು ಕನ್ನಡ ಶಕ್ತಿಗೆ ಕುತ್ತಾಗಬಾರದೆಂದು ಎಚ್ಚರಿಸಿರುವರು. ಕನ್ನಡಕ್ಕೆ ಈಗ ಉಂಟಾಗಿರುವ ಮತ್ತು ಮುಂದೆ ಬರಲಿರುವ ಗಂಡಾಂತರಗಳನ್ನು ದಿಗ್ದರ್ಶನ ಮಾಡಿಕೊಟ್ಟು, ಕನ್ನಡದ ಒಗ್ಗಟ್ಟಿಗೆ ವಿರೋಧವಾದ ಅಪ್ರಗಳನ್ನೆಲ್ಲಾ ಹೊಡೆದೋಡಿಸಿ ಹಿಂದೊಮ್ಮೆ ಎಲ್ಲ

(ಆನೇ ಪುಟಕ್ಕೆ ಮುಂದುವರಿಸಿದೆ)

ತಾಳದೆ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧ.

ಡಾ. ಜಸಾನಿಯವರ

"ಗೊನೊಕಿಲರ್" (ರಿಜಿಸ್ಟರ್ಡ್)

ಜಗತ್ಪ್ರಸಿದ್ಧ

ನಕಲಿ ಮದ್ದುಗಳಿಗೆ ಮರುಳಾಗಬೇಡಿ ಪಡಕೊಳ್ಳುವ ಮೊದಲು ಕೋಳಿ ಗುರುತಿನ ಸರಿಯಾದ ಗುರುತನ್ನೂ "ಗೊನೊಕಿಲರ್" ಹೆಸರನ್ನೂ ಗಮನಿಸಿರಿ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ಟುಡೇಟ್ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕಡೆಗೆ, ಒಂದಾವರ್ತಿಯಾದರೂ ಈ ನವ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ ಬೆಲೆ ೩೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩ ವಿ ಪಿ ಖರ್ಚು ೦ ೬ ೦ ಪ್ರತ್ಯೇಕ. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ**, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ ೪

ಮಂಗಳೂರಲ್ಲಿ ಸ್ಟಾಕಿಸ್ಟರು:—ಮೆಸರ್ಸ್ ಇಲೆಕ್ಟ್ರೋ ಹೋಮಿಯೋಪತ್ ಡಿಸ್‌ಪೆನ್ಸರಿ

Sole Manufacturer DR. D. N. JASANI, Vitalbhai Patel Road, BOMBAY 4

Our Greetings & Good Wishes
to
All our Constituents, Depositors, Shareholders & Well-wishers
for
A Happy & Prosperous New Year

The Canara Banking Corporation Limited.
(Incorporated in British India)
Estd: 1906.

ನವಯುಗ

ಉಡುಪಿ, ಗುರುವಾರ ತಾ. ೨೮-೧೨-೩೯

ಕಾಯಿದೆಭಂಗ ನಿಶ್ಚಯವೇ?

ಕಾಂಗ್ರೆಸ್ ಮುಖಂಡರಲ್ಲಿ ಸಂಧಿಯ ಆಶೆಯು ದೂರವಾಗುತ್ತಿರುವುದೆಂಬುದನ್ನು ಈ ಸಲದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವು ಸೂಚಿಸುತ್ತದೆ. ಒಂದು ಹೆಜ್ಜೆಯಿಂದ ಇನ್ನೊಂದು ಹೆಜ್ಜೆಗೆಂಬಂತೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೂ ಗಾಂಧಿಜಿಯವರೂ ಮುಂಗೊತ್ತುತ್ತಿದ್ದಾರೆ. ಅವಸರದಿಂದ ಯಾವ ಕೆಲಸವನ್ನಾದರೂ ಮಾಡಲವರು ಸಿದ್ಧರಿಲ್ಲ. ಆದರೆ ಸರಕಾರವು ಜಾತೀಯ ಪ್ರಶ್ನೆಯ ತೊಡಕಿನ ನೆವನವನ್ನು ಮುಂದೊಡ್ಡಿ ಕಾಲಯಾಪನೆಮಾಡಿದ ಪಕ್ಷದಲ್ಲಿ ಕಾಂಗ್ರೆಸು ಅದನ್ನು ತಾಳಿಕೊಂಡು, ಸರಕಾರದ ಕಡೆಗೇನೇ ಕತ್ತುನೀಡಿ ಸುಮ್ಮನಿರಲು ಸಾಧ್ಯವಿಲ್ಲ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಧಾರವು ಅದರ ಉದ್ದೇಶ ಮತ್ತು ಧೋರಣೆಯನ್ನು ಮತ್ತಷ್ಟು ಸ್ಪಷ್ಟಪಡಿಸುವುದು ಮಾತ್ರವಲ್ಲದೆ, ಇನ್ನು ಮುಂದೆ ಇದೇ ರೀತಿ ಸುಮ್ಮನಿರಲು ಸಾಧ್ಯವಿಲ್ಲೆಂಬ ಎಚ್ಚರವನ್ನು ಕೂಡಾ ಒಳಗೊಂಡಿರುವುದು. ಕಾಂಗ್ರೆಸ್ಸಿನ ಕೇಳಿಕೆಯಾದ ಹಿಂದೀ ಸ್ವಾತಂತ್ರ್ಯದ ಪ್ರಶ್ನೆಯನ್ನೇ ಮೂಲೆಗೊತ್ತಿ ವೈಸರಾಯರೂ ಲೋರ್ಡ್ ಜೆಟ್ಲೆಂಡರೂ, ಅಪ್ರಾಮುಖ್ಯವೂ ಅಸಂಗತವೂ ಆದ ಜಾತೀಯ ಪ್ರಶ್ನೆಯ ಪಲ್ಲವಿಯನ್ನೇ ಹಾಡುತ್ತಿರುವುದರಿಂದ ಕಾಂಗ್ರೆಸ್ ಮುಖಂಡರು ನಿರಾಶೆಗೊಂಡಿರುತ್ತಾರೆ. ಕನ್‌ಸ್ಟಿಟ್ಯುವೆಂಟ್ ಎಸೆಂಬ್ಲಿಯ ಮೂಲಕ ಹಿಂದೂ–ಮುಸಲ್ಮಾನ ಮತ್ತು ಇತರ ಅಲ್ಪಸಂಖ್ಯಾಕ ಪ್ರಶ್ನೆಯನ್ನು ಅವಶ್ಯಬಿದ್ದಲ್ಲಿ ಪ್ರತ್ಯೇಕ ಮತದಾನ ಕ್ರಮದಿಂದ ಆರಿಸಲ್ಪಡುವ ಅಲ್ಪಸಂಖ್ಯಾಕ ಪ್ರತಿನಿಧಿ ಒಪ್ಪಿಗೆಯಿಂದಲೇ ಇತ್ಯರ್ಥಮಾಡುವ ಆಶ್ವಾಸನೆಯನ್ನು ಕಾಂಗ್ರೆಸು ಸ್ಪಷ್ಟವಾಗಿ ಕೊಟ್ಟಿರುತ್ತದೆ. ಒಂದುವೇಳೆ ಇತ್ಯರ್ಥವು ಅಸಾಧ್ಯವಾದ ಪಕ್ಷದಲ್ಲಿ ಅಲ್ಪಸಂಖ್ಯಾಕ ಪ್ರಶ್ನೆಯನ್ನು ನಿಷ್ಪಕ್ಷಪಾತಿಗಳ ಮಧ್ಯಸ್ಥಿಕೆಗೊಪ್ಪಿಸಲದು ಸಿದ್ಧವಿರುತ್ತದೆ. ಅಂದಮೇಲೆ ಮತ್ತೂ ಮತ್ತೂ ಬ್ರಿಟಿಷ್ ಸರಕಾರವು ಹಿಂದೀ ಸ್ವಾತಂತ್ರ್ಯದ ಕುರಿತು ತನ್ನ ಧೋರಣೆಯನ್ನು ಸ್ಪಷ್ಟಪಡಿಸುವ ನಿರೂಪಣೆಯನ್ನು ಹೊರಡಿಸದೆ ಅದಕ್ಕೆ ಹಿಂದೀಯರೊಳಗಣ ಕಲಹವು ತೊಡಕಾಗಿರುವುದೆಂದು ಸಾರುತ್ತಿರುವುದೆಂದರೆ ಅವರು ಇನ್ನಾದರೂ ಅಧಿಕಾರವನ್ನು ಬಿಟ್ಟುಕೊಡಲು ತಯಾರಿಲ್ಲೆಂಬುದು ಸಿದ್ಧವಾಗುತ್ತದೆ.

1940ನೇ ಜನವರಿ ತಾ. 26ನ್ನು ಸಂಪೂರ್ಣ ಸ್ವಾತಂತ್ರ್ಯ ದಿನಾಚರಣೆಯನ್ನು ಎಂದಿಗಿಂತಲೂ ಹೆಚ್ಚಿನ ನಿಷ್ಠೆಯಿಂದ ಆಚರಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಹೊರಡಿಸಿರುವ ವಿನಂತಿ ಮತ್ತು ಹೊಸತಾಗಿ ತಯಾರಿಸಿರುವ ಪ್ರತಿಜ್ಞೆಯು ಅವರ ಉದ್ದೇಶವನ್ನು ಸೂರ್ಯಪ್ರಕಾಶದಷ್ಟು ಸ್ಪಷ್ಟ ಪಡಿಸುತ್ತದೆ. ಎಂದಿಗಿಂತಲೂ ತೀವ್ರವಾದ ಹೋರಾಟವು ಮುಂದೆ ನಡೆಯುವುದಿದೆ. ಅದನ್ನು ಶಿಸ್ತಿನಿಂದ ಮತ್ತು ಸಂಘಟನೆಯಿಂದ ನಡೆಸಲು ಈಗಲೇ ಸಿದ್ಧತೆ ನಡೆಯಬೇಕಾಗಿದೆ. ಆದುದರಿಂದ ಕಾಂಗ್ರೆಸ್ ವಾದಿಗಳೆಲ್ಲರೂ, ವರ್ಕಿಂಗ್ ಕಮಿಟಿಯವರು ತಯಾರಿಸಿರುವ ನವೀನ ಪ್ರತಿಜ್ಞಾಬದ್ಧರಾಗಿ, ಮಹಾತ್ಮಾ ಗಾಂಧಿಯವರಿಂದ ಕರೆ ಬಂದಾಗ ಸ್ವಾತಂತ್ರ್ಯ ಸಮರದಲ್ಲಿ ಭಾಗ ವಹಿಸಲು ತಯಾರಾಗಬೇಕೆಂದೇ ಕಮಿಟಿಯ ಆಜ್ಞೆ ಇರುತ್ತದೆ.

ನವೀನವಾದ ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆಯು ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಅದರಿಂದ ಸರ್ವ ಬಗೆಯಿಂದಲೂ ಹಿಂದೂದೇಶದ ಹಾನಿಯಾಗಿದೆ. ಅದು ಅಧಿಕಾರ ನಡಿಸಿಕೊಂಡಿರುವನಕ ಹಿಂದು ದೇಶದ ಯಾವ ರೀತಿಯ ಉನ್ನತಿಯೂ ಸಾಧ್ಯವಿಲ್ಲ. ಹಿಂದೀಯರೊಳಗಣ ಭಿನ್ನಭೇದಗಳು ಕೊನೆಗೊಳ್ಳುವಹಾಗಿಲ್ಲ. ಆದುದರಿಂದ ಮೊದಲಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ನಿರ್ನಾಮಗೊಳಿಸಿ ಅದರೊಂದಿಗೆ ಹಿಂದೂದೇಶದ ಸಂಬಂಧವು ಸಂಪೂರ್ಣವಾಗಿ ಕಡಿದೊಗೆಯುವುದೇ ಪ್ರತಿಯೊಬ್ಬ ಕಾಂಗ್ರೆಸ್ ವಾದಿಯ ಆದ್ಯ ಕರ್ತವ್ಯವೆಂದು ನಿರೂಪಿಸಲ್ಪಟ್ಟಿದೆ. ಅಹಿಂಸಾ ಮಾರ್ಗದಲ್ಲಿ ಕಾಂಗ್ರೆಸು ಕಳೆದ ಸುಮಾರು ೨೦ ವರ್ಷಗಳಿಂದ ಬಹು ದೂರ ಮುಂದುವರಿದಿದೆ. ಇನ್ನಾದರೂ ಆ ಮೂಲಕವೇ ಸಂಪೂರ್ಣ ಸ್ವರಾಜ್ಯವನ್ನು ಸಾಧಿಸುವ ಒಂದೇ ಒಂದು ಉಪಾಯವು ಅದರ ಮುಂದಿದೆ. ಆದುದರಿಂದ ಕಾಂಗ್ರೆಸ್ ವಾದಿಗಳೆಲ್ಲರೂ ಅಹಿಂಸೆ ಮತ್ತು ಸತ್ಯಾಗ್ರಹದಲ್ಲಿ ಜೀವಂತ ವಿಶ್ವಾಸವುಳ್ಳವರಿರಬೇಕು. ಅದಕ್ಕೆ ಪೂರ್ವ ಸಿದ್ಧತೆಯಾಗಿ ಖಾದಿ ಪ್ರಚಾರ, ಜಾತಿಮತಗಳೆನ್ನದೆ ಪ್ರತಿಯೊಬ್ಬ ಭಾರತೀಯನಲ್ಲಿಯೂ ಸಹೋದರ ಪ್ರೇಮ ಪ್ರಸಾರ ಮತ್ತು ಹರಿಜನೋದ್ಧಾರ ಕಾರ್ಯವನ್ನು ಆಸ್ಥೆಯಿಂದ ಕೈಕೊಂಡು ಮುನ್ನಡೆಸಬೇಕೆಂದು ಕೇಳಿಕೊಳ್ಳಲಾಗಿದೆ.

ಇದು ಎಲ್ಲರೂ ಮಾಡತಕ್ಕ ಕೆಲಸ ಮತ್ತು ವ್ಯವಹಾರ್ಯವೆಂದೂ ಹೇಳಬಹುದು. ಆದರೆ ಎಲ್ಲರೂ ಚರ್ಕ ಹಿಡಿದು ನೂಲಬೇಕೆಂಬ ಪ್ರತಿಜ್ಞೆ ಮಾಡುವುದು ಮಾತ್ರ ಎಷ್ಟರ ಮಟ್ಟಿಗೆ ವ್ಯವಹಾರ್ಯವೆಂದು ಹೇಳ ಬರುವುದಿಲ್ಲ. ಖಾದಿ ಪ್ರಚಾರ, ಹರಿಜನೋದ್ಧಾರವೇ ಮೊದಲಾದ ವಿಧಾಯಕ ಕಾರ್ಯಕ್ರಮವನ್ನು ಸಂಪೂರ್ಣ ಸ್ವಾತಂತ್ರ್ಯದ ಪ್ರತಿಜ್ಞೆಯಲ್ಲಿ ಸೇರಿಸಿರುವುದೇ ಉಚಿತವೆಂದು ನಮಗನಿಸುವುದಿಲ್ಲ. ಆ ಕುರಿತು ಪ್ರತ್ಯೇಕವಾದ ವಿನಂತಿ ಹೊರಡಿಸಬಹುದಿತ್ತು. ಪ್ರತಿಯೊಬ್ಬನೂ ನೂಲಬೇಕೆಂದು ಪ್ರತಿಜ್ಞಾಬದ್ಧನಾಗುವುದೆಂದರೆ ಹೆಚ್ಚಿನವರು ಆತ್ಮವಂಚಕರಾಗಿ ನಡೆಯಲು ಆಸ್ಪದವಿತ್ತಂತಾಗಿರುವುದು.

ಮುದವೀಡು ಕೃಷ್ಣರಾಯರ ಭಾಷಣ.

(೭ನೇ ಪುಟದಿಂದ ಮುಂದುವರಿಸಿದ್ದು.)

ರ ಮುಂದಾಳಾಗಿದ್ದ ಕನ್ನಡ ತಾಯಿಗೆ ಅವರ ಪೂರ್ವ ವೈಭವವನ್ನಿತ್ತು ಮತ್ತೆ ದೊರಕಿಸಿಕೊಡಲು ಅವಳನ್ನು ಅಭೇದ್ಯವಾದ ಅರಸುತನದ ಗದ್ದುಗೆಯಲ್ಲಿಟ್ಟು ಅವಳಿಂದ ಚಿರಂತನವಾದ ಶಾಶ್ವತವಾದ ಉತ್ಕರ್ಷದ ಹರಕೆಗಳನ್ನು ಪಡೆಯಲು ಕನ್ನಡಿಗರೆಲ್ಲರೂ ನುಡಿಯಬೇಕು. ಆ ಮಹಾತಾಯಿಯ ವಿಶ್ವರೂಪವನ್ನು ಯಾವಾಗಲೂ ಕಣ್ಣಮುಂದೆ ಕಟ್ಟಿಕೊಂಡು ಅವಳ ಉದ್ಧಾರಕ್ಕಾಗಿ ತಮ್ಮ ಸರ್ವಸ್ವವನ್ನೂ ಸೂರೆಗೈದು ಆತ್ಮ ಸಮರ್ಪಣೆಗೆ ಸಿದ್ಧರಾಗಿ ಕನ್ನಡಿಗರೆಲ್ಲರೂ ಒಂದಾಗಿ ಹೋರಾಡಲು ಎದ್ದೇಳಬೇಕೆಂದು ಋಗ್ವೇದ ಸಂಹಿತೆ ಸಮಾರೋಪ ಮಂತ್ರದ ಈ ಕೆಳಗಣ ಉದ್ಬೋಧಕ ಕನ್ನಡ ಅನುವಾದವನ್ನಿತ್ತು ಶ್ರೀ ಮುದವೀಡು ಕೆರರು ತನ್ನ ಅತ್ಯಂತ ಸ್ಫೂರ್ತಿಪರ ಮತ್ತು ಕನ್ನಡಿಗರೆಲ್ಲರೂ ಕೈಪಿಡಿಯಾಗಿ ಹಿಡಕೊಂಡು ಆಗಾಗ ಓದಿ ಉತ್ಸಾಹಗೊಳ್ಳತಕ್ಕ ಭಾಷಣವನ್ನು ಮುಕ್ತಾಯಗೊಳಿಸಿರುವರು

ಕೂಗುವೊಂದಾಗಿ ಕರುಳೊಂದಾಗಿ ಹೃದಯದನು|
ರಾಗವೊಂದಾಗಿ ಸಂಘಟಿತ ಬಲಯುತರಾಗಿ|
ರಾಗ ವಿದ್ವೇಷ ವತ್ಸರ ಮದಂಗಳ ನೀಗಿ|
ಸಾಗಬನುವಾಗಿರೈ ಭೋಗ ಬಿಟ್ಟೇಳಿರೈ|
ಕನ್ನಡಮ್ಮನ ಕುವರರೆ|

ಜಿನ್ನರು

ಸಂಪೂರ್ಣ ನಿರಾಶೆ

ಮಿ. ಜಿನ್ನರ ವಿನಂತಿಯಂತೆ ಇದೇ ಕಳೆದ ತಾ. ೨೨ನೇ ಶುಕ್ರವಾರ ಮುಸಲ್ಮಾನ ವಿಮೋಚನಾ ದಿನಾಚರಣೆಯು ದೇಶದ ಹಲವು ಕಡೆಗಳಲ್ಲಿ ಶಾಂತವಾಗಿ ಆಚರಿಸಲ್ಪಟ್ಟಿತು. ಹೆಚ್ಚಿನ ಕಡೆಗಳಲ್ಲಿ ಮಸೀದಿಗಳೊಳಗೆ ಶುಕ್ರವಾರದ ಪ್ರಾರ್ಥನಾ ಸಂದರ್ಭದಲ್ಲೇ ಈ ಸಂಬಂಧವಾಗಿ ಭಾಷಣಗಳು ನಡೆದಿರುತ್ತವೆ. ಡಾಕ್ಟರ್ ಅಂಬೇಡ್ಕರರೇ ಮೊದಲಾದ ಹರಿಜನ ಮುಖಂಡರೂ ಕೆಲವುಂದಿ ಸನಾತನಿಗಳೂ ಮಿ. ಜಿನ್ನರೊಡನೆ ಸಹಕರಿಸಿದ್ದರು. ಪೂನ ಮತ್ತು ನಾಗಪುರಗಳಲ್ಲಿ ಡಾಕ್ಟರ್ ಮೂಂಜೆಯವರೇ ಮುಖ್ಯರಾದ ಹಿಂದೂ ಮಹಾಸಭೆಯ ಪ್ರಮುಖರು ಇದೇ ದಿನ ಹಿಂದೂ ವಿಮೋಚನಾ ದಿನಾಚರಿಸಿ ಕಾಂಗ್ರೆಸು ಮುಸಲ್ಮಾನ ಪಕ್ಷಪಾತಿಯಾಗಿ ಹಿಂದುಗಳಿಗೆ ಅನ್ಯಾಯಮಾಡಿರುವುದೆಂದು ಟೀಕಿಸಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಇಂತಹ ಪ್ರದರ್ಶನಗಳನ್ನು ಗಣಿಸದೆ ಮೂಲೆಗೊತ್ತಿ ಆ ಕುರಿತು ಮೌನಧಾರಣೆ ಮಾಡಿರುವುದು ಅತಿ ವಿವೇಕಪರವಾದುದಾಗಿದೆ. ಎಷ್ಟು ಒಲಿಸಿಕೊಂಡರೂ ಮತ್ತಷ್ಟು ಹರಕೆಗಳನ್ನ ಕೇಳುವ ಭೂತಚೇಷ್ಟೆಯಂತಾಗಿದೆ ಈ ಜಾತೀಯ ವಾದಿಗಳ ಪರಿ. ಅನುಕೂಲವಾತಾವರಣವುಂಟಾದಾಗ ಮುಂದೆ ಹಿಂದೂ ಮುಸಲ್ಮಾನ ಪ್ರಶ್ನೆಯ ಇತ್ಯರ್ಥದ ಕುರಿತು ಮಾತುಕತೆ ನಡಿಸಿದರಾಯಿತೆಂದು ಜಿನ್ನಾ ನೆಹರು ಮಾತುಕತೆಯು ಮುಂದೆ ಹಾಕುವುದೊಂದೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರಿಗೆ ಸ್ವಾಭಿಮಾನದ ದಾರಿಯಾಗಿದ್ದಿತು. ಅಂತೆಯೇ ಅವರು ಮಾಡಿರುವರು ಈ ಜಾತೀಯ ಭೂತದ ಕಾಟವನ್ನು ಬ್ರಿಟಿಷ್ ಸರಕಾರವು ಮತ್ತೂ ಎಬ್ಬಿಸಿ ಪ್ರೋತ್ಸಾಹಿಸಿ, ಕಾಂಗ್ರೆಸಿನ ಮಾರ್ಗದಲ್ಲಿ ಅಡ್ಡವಾಗಿ ಒಡ್ಡಿದರೆ ಕಾಂಗ್ರೇಸೇನೂ ಸುಮ್ಮನೆ ಕೂತುಕೊಳ್ಳುವಹಾಗಿಲ್ಲ. ಅದು ಯಥಾಪ್ರಕಾರವಾಗಿ ತನ್ನ ದಾರಿ ಹಿಡಿಯುವುದು ಮುಂದುವರಿಯುವುದು. ಈ ಸಂಧಿಕಾಲದಲ್ಲಿ ಹಿಂದೂ ಮುಸಲ್ಮಾನರು ಒಂದಾಗಿ ನಡೆಯುತ್ತಿದ್ದರೆ ದೇಶದ ಸ್ವಾತಂತ್ರ್ಯ ಮಾರ್ಗದ ಅತಿದೊಡ್ಡ ತೊಡಕೊಂದು ನಿವಾರಿತವಾಗಿ, ಬ್ರಿಟಿಷರ ಕಣ್ಣುಕಟ್ಟಿನ ಮುಸುಕನ್ನು ಹರಿದೊಗೆಯಲು ಸಂದರ್ಭ ದೊರೆಯುತ್ತಿತ್ತು. ಹಿಂದೀ ಸ್ವಾತಂತ್ರ್ಯದ ಕುರಿತು ಅವರಲ್ಲೆಷ್ಟು ಯಥಾರ್ಥತೆ ಇರುವುದೆಂಬುದನ್ನು ಲೋಕ ವಿಖ್ಯಾತವಾಗಿ ಒರೆಗೆ ಹಚ್ಚಬಹುದಿತ್ತು.

ರಸ… ಒಂದ…

ಫಿನ್ನರು ಮ…

ಕರೇಲಿಯ… ಸೇನೆಯು ರಷ್ಯ… ಕಡೆಗಟ್ಟಿದೆ, ಫಿನ್ನರು … ತಾ. 24ರಲ್ಲಿ … ನಡೆದು … ವಿಯೆಟ್ … ರುವರೆಂದು … ರಲ್ಲಿ ಹೆಲ್ಸಿಂಕಿ … ನಡಿಸಿ ಅದನ್ನು … ವುದೆಂದು ಸೋ… ವಿಮಾನ ಧಾ…

ಇಂದೀಗ … ದ್ಧವು ರಷ್ಯಾ… ಟಮಾಡಿದ … ಸೋವಿಯೆಟ್ … ವಶಪಡಿಸಿಕೊ… ನಗಳನ್ನು ನಾಶ… ತುಪಾಕಿ ವಿ… ವಾಗಿವೆ. ವಿಶೇ… ಕೋಟೆಯು … ಯದ ಭೂಕಂ… ಸೇನೆಯು ಹಿಂ… ಭೀಕರ ಕದನ… ಗಜ ಸ್ಥಳವನ್ನು…

ಮಿ. ಜಿನ್ನರ … ದೈವವು ಹಿಂದಿ… ರಾಶಾಮಯ … ಸಿಕಂದರರೊಬ್ಬ… ಗಳಾಗಿ, ಮುಸ್ಲಿ… ಗ್ರೆಸುಗಳೊಳಗೆ … ಟ್ಟುಂಟಾಗುವ… ಸಂಗತಿಗಳನ್ನೆ… ಷ್ಟು ಹಿತದ … ಲ್ಮಾನರು ಈಗ … ದರ್ಭವನ್ನವ… ಬೇಗನೆ ಇಂತಹ… ಲಾರದು. ತಮ್ಮ… ಕಾಂಗ್ರೆಸಿನೊಂ… ಕೆಂಬ ಅಭಿಪ್ರಾ… ದರೆ ಮಿ. ಜಿನ್ನ… ಲೆ ಅವರ ಲಾ… ವಂತೆ ತೋರುತ್ತ… ರ ಬಲಿಯೊಳಗೆ … ಅಂದ ಮೇಲೆ ಸ… ರ್ಮಾರ್ಗಗಳೇ … ಣವನ್ನು ಕಲಿ…

50 ವರ್ಷಗಳಿಂದ ಜಗತ್ಪ್ರಸಿದ್ಧವಾದ ಶಕ್ತಿವರ್ಧಕ:—

ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನಸ್ಖಲನ, ಧಾತುವಿಕಾರ ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ವಿಪುಲವಾಗಿ ವೃದ್ಧಿಗೊಳಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುವವು.

ಕ್ರಯ:– 40 ಮಾತ್ರೆಗಳ ಡಬ್ಬಿ 1ರ ರೂ. 1—0—0.

ಮದನಮಂಜರಿ ಫಾರ್ಮಸಿ, 184 ಜೈನಾಬಜಾರ್ ಮದ್ರಾಸ್.

ನಿಮ್ಮ ಊರಿನ ಔಷಧ ವ್ಯಾಪಾರಿಗಳಲ್ಲಿ ನಮ್ಮ ಔಷಧಿಗಳನ್ನು ಕೇಳಿರಿ.

...ಂದು ವರಿಯುತ್ತಿದ್ದಾರೆ

...ರಿಗೆ ಅಪಾರ ನಷ್ಟ.

—●—

...ಮಿಲ್ಯ ಪೋಲಿಶ್ ಸ್ತ್ರೀಯರು
...ಳು ನಿರ್ಗತಿಕರಾಗಿದ್ದಾರೆ.

ಯುತ್ತಿದ್ದಾರೆ
...ಪಲ್ಲಿ ಫಿನ್ನಿಶ್
...ಜಯಶೀಲವಾಗಿ
...ರಣರಂಗದಲ್ಲಿ
...ದ್ದಾರೆ. ಇದೇ
...ಮಾನ ಯುದ್ಧ
...ನಿಕರು 14ನೋ
...ನಾಶಗೊಳಿಸಿ
...ದೆ. ತಾ. 25
...ವಿಮಾನಧಾಳಿ
...ಮಾಡಲಾಗು
...ಎಚ್ಚರಿಸಿದ್ದರೂ
...ನಡೆಸಲ್ಪಡಲಿಲ್ಲ.
...ಫಿನ್ನಿಶ್ ಯು
...ರ ನಷ್ಟವನ್ನುಂ
...ಲೂ ಮಿಕ್ಕಿದ
...ನ್ನು ಫಿನ್ನರು
...ಹಲವು ವಿಮಾ
...ದ್ದಾರೆ. ಅನೇಕ
...ಗಳು ಅವರ ವಶ
...ನ್ನರ್ ಹೈಮ್
...ಮೂ, ಕರೇಲಿ
... ಸೋವಿಯೆಟ್
...ದಾಳಿಯೊಂದಿದೆ.
...ಪ್ರತಿಯೊಂದು
...ಸಿಕೊಳ್ಳಬೇಕಾ

...ವಾಗಿ ಆ ಸು
...ಗಿದೆ. ಈ ನಿ
...ನದಲ್ಲಿ ಸರ್.
...ತ್ರ ಆತಾವಾದಿ
... ಮತ್ತು ಕಾಂ
...ಘದಲ್ಲಿ ಒಕ್ಕ
...ಸ್ಯರ ಹಿಂದಿನ
... ವಿಶಾಲ ರಾ
...ಮೂ ಮುಸ
...ಸು. ಈ ಸಂ
...ನಲ್ಲಿ ಮುಂದೆ
...ತ ದೊರೆಯು
...ಸ್ಥೆಯಿಂದಲೇ
...ಡಿಕೊಳ್ಳಬೇ
...ಗಿದ್ದಾರೆ. ಆ
...ತಾಡಿದ ಮೇ
... ಹೋಗಿರು
... ಮಿ. ಜಿನ್ನ
...ಕೋರುತ್ತದೆ.
...ನಾಡಿಯ ಕಾ
... ವಾತಾವರ

ಗಿದೆ. ಫಿನ್ನಿಶ್ ಸೇನೆಯನ್ನು ಭೇದಿಸುವ ರಸ್ಯಾನರ ಪ್ರಯತ್ನವು ನಿರರ್ಥಕವಾಗಿದೆ. ಲಡೋಗಾ ಸರೋವರದ ಪ್ರದೇಶದಲ್ಲಿ ರಸ್ಯಾನರ ಒತ್ತಾಟವು ಅತ್ಯಂತ ಪ್ರಬಲವಾಗಿತ್ತು. ರಸ್ಯಾನರು ಸರ್ವಸಾಮಾನ್ಯ ಪ್ರಜೆಗಳ ಮೇಲೆ ವಿಮಾನಧಾಳಿಮಾಡಿ ನಡಿಸಿದ ಅತ್ಯಾಚಾರಗಳಿಂದ ಜನರ ನಿರ್ಧಾರವು ಮತ್ತಷ್ಟು ಬಲಗೊಳ್ಳುವಂತಾಗಿದೆಯೆಂದು ಹೆಲ್ಸಿಂಕಿಯ ಸುದ್ದಿ.

ಇದೇ ತಾ. 25ರಲ್ಲು ಸೋವಿಯೆಟ್ ಸರಕಾರವು ಹೊರಡಿಸಿದ ಪ್ರಕಟಣೆಯ ಮೇರೆಗೆ, ತಾ. 24ರಲ್ಲು ಕರೇಲಿಯನ್ ಭೂಕಂಠದಲ್ಲಿ 979ಮಂದಿ ಫಿನ್ನಿಶ್ ಸೈನಿಕರು ಕೊಲ್ಲಲ್ಪಟ್ಟು 35ಮಂದಿ ಸೆರೆಹಿಡಿಯಲ್ಪಟ್ಟಿರುವರೆಂದೂ, ಬೇರೆ ಕಡೆಗಳಲ್ಲೇನೂ ವಿಶೇಷ ನಡೆದಿಲ್ಲೆಂದೂ ತಿಳಿದು ಬರುತ್ತದೆ.

ಪೋಲರ ಹೃದಯದ್ರಾವಕ ಅವಸ್ಥೆ

ಶೀಘ್ರವಾಗಿ ಏನಾದರೂ ಸಹಾಯ ಮಾಡದಿದ್ದ ಪಕ್ಷದಲ್ಲಿ ಪೋಲಂಡಿನಲ್ಲಿ ಒಂದುವರೆ ಮಿಲ್ಯ ಸ್ತ್ರೀಯರು ಮತ್ತು ಮಕ್ಕಳು ನಿರ್ಗತಿಕರಾಗಿ ನಿರಾಶ್ರಿತರಾಗಿ ಸಾಯುವಂತಾಗುವುದೆಂದು ಬೊಂಬಾಯಿಯ ಪೋಲಿಶ್ ರಾಯಭಾರಿಯ ಪತ್ನಿ ಮೆಡಮ್ ಬನಸಿನ್ ಸ್ಕಾರವರು ಸಹಾಯಕ್ಕಾಗಿ ವಿನಂತಿಮಾಡಿಕೊಂಡಿರುವರು. ಯುದ್ಧದಲ್ಲಿ ಲಕ್ಷಾಂತರ ಪೋಲರ ಮನೆಮಾರುಗಳು ನಾಶವಾಗಿ ಅವರು ನಿವಾಸ ಮತ್ತು ಅನ್ನ-ವಸ್ತ್ರವಿಲ್ಲದೆ ಬೀದಿಭಿಕಾರಿಗಳಂತಾಗಿದ್ದಾರೆ. ಪೋಲಂಡಿನಲ್ಲಿ ವಿಪರೀತ ಚಳಿಯ ತಿಂಗಳುಗಳಿವು ಈಗ ಪೋಲರ ಸಂಕಷ್ಟಗಳು ವಿವರಣಾತೀತವಿದೆ. ಜನತೆಯ ಆವಶ್ಯಕತೆಯನ್ನೇನೂ ಗಣಿಸದೆ ಜರ್ಮನರು ಮತ್ತು ರಸ್ಯಾನರು ತಮ್ಮಾಧೀನದ ಪ್ರದೇಶಗಳ ದವಸಧಾನ್ಯಗಳನ್ನೊಯ್ಯುತ್ತಿದ್ದಾರೆ. ಜರ್ಮನಿಯು ಆಕ್ರಮಿಸಿರುವ ಪ್ರದೇಶದಲ್ಲಿ ಜನತೆಯ ಸಂಕಷ್ಟ ಮತ್ತು ಪೀಡೆಯು ದಿನೇದಿನೇ ಅಧಿಕವಾಗುತ್ತದೆ. ಯೆಹೂದ್ಯರ ಬಾಳಂತೂ ನಾಯಿ ನರಿಗಳಿಗಿಂತ ಕಳಕಳಾಗಿದೆ.

Your anxiety in finding a sound and progressive Life Office both to insure or to represent will end on consultation with:

Branch Secretary,
The New Guardian of India Life Ins. Co. Ltd., Madras.
MANGALORE Branch.

ಇದು ಹೊರತು ಡಾನ್ಜಿಗ್ ಮತ್ತು ಅದರ ಸಮೀಪದ ಪ್ರದೇಶಗಳಲ್ಲಿರುವ ಪೋಲರನ್ನು ಹೊರತಳ್ಳಿ ಅಲ್ಲಿಗೆ ಜರ್ಮನರು ಬಂದು ವಾಸಮಾಡುತ್ತಿದ್ದಾರೆ. ಆದುದರಿಂದ ಹಿಂದೀಯರು ತಮ್ಮಿಂದ ಸಾಧ್ಯವಾದ ಸಹಾಯಮಾಡಬೇಕೆಂದು ಮೆಡಮ್ ಬನಸಿನ್ ಸ್ಕಾರವರು ಅಗ್ರಹದಿಂದ ವಿನಂತಿಮಾಡಿಕೊಂಡಿರುವರು.

ಚೀನೀಯರ ವಿಜಯ

ಒಂದು ವಾರದ ಪ್ರಬಲ ಹೋರಾಟದ ನಂತರ ಚೀನೀ ಸೈನಿಕರು ನಾನ್ಕಿಂಗ್ ಎಂಬ ಪ್ರಾಮುಖ್ಯ ಪಟ್ಟಣದ ಹೊರವಳಯಕ್ಕೆ ನುಗ್ಗಿರುತ್ತಾರೆ.

ಜರ್ಮನಿ ಮತ್ತು ರಷ್ಯಗಳ ಬಂಧುತ್ವ

ಜರ್ಮನಿ ಮತ್ತು ರಷ್ಯಗಳೊಳಗಣ ಬಂಧುತ್ವವು ಕೇವಲ ಕೃತಕವಾದುದು. ಅದು ಹೆಚ್ಚು ಕಾಲದ ಬದುಕುವದಾಗಿಲ್ಲ. ಈಗಲೂ ಹಿಟ್ಲರ್ ಸ್ಟಾಲಿನರೊಳಗೆ ಸ್ನೇಹಭಾವವಿಲ್ಲ. ಜರ್ಮನಿಯ ಹಳೆಯ ಸೈನ್ಯಾಧಿಕಾರಿಗಳೂ, ಕೆಲವಂದಿ ನಾಝಿ ಮುಂದಾಳುಗಳೂ ರಸ್ಯದ ಸ್ನೇಹಾಚಾರದ ಕುರಿತು ತೀವ್ರ ವಿರೋಧವಿದ್ದಾರೆ. ಈ ನವ ಬಾಂಧವ್ಯಕ್ಕೆ ಕಾರಣರಾದ ಹರ್. ವಾನ್ ರಿಬಂಟ್ರಫರು, ಜರ್ಮನಿಯಲ್ಲಿ ತಿರಸ್ಕೃತರಾಗುತ್ತಾ ಬರುತ್ತಿದ್ದಾರೆಂದೆಲ್ಲಾ ಬ್ರಿಟಿಷ್ ಮತ್ತು ಫ್ರೆಂಚ್ ಪತ್ರಿಕೆಗಳಲ್ಲಿ ಬಹಳ ಪ್ರಚಾರ ನಡೆದಿರುವುದು. ಆದರೆ ಇದಕ್ಕೆ ಆಧಾರವಿರುವಂತೆ ತೋರುವುದಿಲ್ಲ.

ಸ್ಟಾಲಿನರ 60ನೇ ಜನ್ಮ ದಿನೋತ್ಸವದ ಸಂದರ್ಭದಲ್ಲಿ ಹರ್ ಹಿಟ್ಲರ್ ಹರ್ ವಾನ್ ರಿಬಂಟ್ರಫರೇ ಮೊದಲಾದವರು ಸ್ಟಾಲಿನರನ್ನು ಅಭಿನಂದಿಸಿ ಸಂದೇಶ ಕಳುಹಿಸಿರುವರು. ಈ ಸಂದೇಶಗಳಿಗೆ ಸ್ಟಾಲಿನರು ಕೊಟ್ಟಿರುವ ಉತ್ತರಗಳಿಂದ ಜರ್ಮನ್ ಸೋವಿಯೆಟ್ ಬಂಧುತ್ವವು ಸ್ಥಿರವಾದುದೆಂಬುದು ವ್ಯಕ್ತವಾಗುತ್ತದೆ. "ಜರ್ಮನಿ ಮತ್ತು ಸೋವಿಯೆಟ್ ಜನತೆಯ ಮೈತ್ರಿಯು ರಕ್ತದ ಗಟ್ಟಿನಿಂದ ಗಟ್ಟಿಯಾಗಿ ಮಾಡಲ್ಪಟ್ಟಿದ್ದು ಚಿರಕಾಲ ಬಾಳುವುದೆಂಬುದಕ್ಕೆ ಪ್ರತಿಯೊಂದು ಕಾರಣವೂ ಇದೆ" ಎಂದು ಸ್ಟಾಲಿನರು ಹರ್. ವಾನ್ ರಿಬಂಟ್ರಫರ ಸಂದೇಶಕ್ಕೆ ಉತ್ತರವಿತ್ತಿರುವದು "ನೀವು ಕಳುಹಿಸಿದ ಅಭಿನಂದನೆಗೆ ನಾನು ಆಭಾರಿ ಇರುವೆನು. ಸೋವಿಯೆಟ್ ರಸ್ಯದ ಜನತೆಯ ಕುರಿತು ನಿಮ್ಮ ಶುಭ ಚಿಂತನೆಗಾಗಿ ದಯಮಾಡಿ ನಮ್ಮ ಕೃತಜ್ಞತೆಯನ್ನು ಸ್ವೀಕರಿಸಿರಿ" ಎಂದು ಹಿಟ್ಲರರ ಸಂದೇಶಕ್ಕೆ ಉತ್ತರಕೊಟ್ಟಿರುವರು. ಫಿನ್ಲೆಂಡಿನಲ್ಲಿ ಸೋವಿಯೆಟ್ ಸರಕಾರವು ಸ್ಥಾಪಿಸಿರುವ ಜನತಾ ಸರಕಾರದ ಮುಖ್ಯಸ್ಥರಾದ ಎಸ್. ಕುಸಿನೆನರು ಕಳುಹಿಸಿದ ಸಂದೇಶಕ್ಕೆ ಉತ್ತರವೀಯುವಾಗ, ಮೇನ್ನರ್ ಹೈಮ್ ಜನ್ನರ್ ಕೂಟದ ಹಾವಳಿಯಿಂದ ಫಿನ್ನಿಶ್ ಜನರು ವಿಮುಕ್ತರಾಗಿ ಫಿನ್ಲೆಂಡಿನ ಜನತಾ ಸರಕಾರಕ್ಕೆ ಬೇಗನೆ ಸಂಪೂರ್ಣ ವಿಜಯವಾಗಲೆಂದು ಆಶಿಸುತ್ತೇನೆಂದು ಹಾರೈಸಿರುವರು. ಮಾರ್ಶಲ್ ಚ್ಯಾಂಗ್ ಕೈಶೆಕ್ಕರ ಸಂದೇಶಕ್ಕೆ 'ಚೈನದ ವೈರಿಗಳ ಮೇಲೆ ಚೈನವು ಸಂಪೂರ್ಣ ವಿಜಯಪಡಲೆಂದು ಕೋರಿ ತಂತಿ ಬಿಟ್ಟಿರುವರು.

ಪಶ್ಚಿಮ ರಣರಂಗದಲ್ಲಿ ಹರ್ ಹಿಟ್ಲರರು.

ಹರ್ ಹಿಟ್ಲರರು ಕ್ರಿಸ್‌ಮಸ್ ಹಬ್ಬವನ್ನು ಪಶ್ಚಿಮ ರಣರಂಗದಲ್ಲಿ ಜರ್ಮನ್ ಸೈನಿಕರೊಂದಿಗೇನೇ ಕಳೆಯುತ್ತಿರುವರು. ತಾ. 23ರಲ್ಲು ಬೇರೆ ಬೇರೆ ಸೈನಿಕ ಪಟ್ಟಾಮುಗಳನ್ನೂ ನೈಮಾನಿಕ ಪಡೆಯನ್ನೂ ಕಂಡು ವಿಧವಿಧದ ಕೋಟೆಗಳನ್ನು ಪರೀಕ್ಷಿಸಿದರು. ಇದೇ ತಾ. 34ರಲ್ಲಿ ಹರ್ ಹೆಸ್ಸರು ರೇಡಿಯೋ ಮೂಲಕ ಇಡೀ ಲೋಕಕ್ಕೆ ಕ್ರಿಸ್ ಮಸ್ ಸಂದೇಶವನ್ನೀಯುತ್ತಾ 'ಫುರಾರು ಜರ್ಮನಿಯ ಪ್ರಥಮ ಸೈನಿಕರು. ಅವರ ಕುರಿತು ಜರ್ಮನ್ ಜನತೆಯ ಪ್ರೇಮವು ಪ್ರಗಾಢವಾದುದು. ನಾವು ನಮ್ಮ ಫುರಾರ ಮೇಲೆ ಹೆಚ್ಚೆಚ್ಚು ಪ್ರೇಮವನ್ನು ತೋರಿಬದಂತೆ ನಮ್ಮ ಕುರಿತು ಇತರರ ದ್ವೇಷವೂ ಅಧಿಕವಾಗುವದು. ಯಾಕೆಂದರೆ ನಮ್ಮ ನಾಯಕರ ಕುರಿತಾದ ನಮ್ಮ ಪ್ರೇಮವು ರಾಷ್ಟ್ರದ ಬಲದ ಸಂಕೇತ. ಮಿತ್ರ ರಾಷ್ಟ್ರಗಳು ಉದ್ಯಮಶೀಲಿ ಜರ್ಮನಿಯ ಕುರಿತು ಮತ್ಸರವುಳ್ಳದ್ದಾಗಿದೆ. ಜರ್ಮನ್ ಜನಾಂಗದ ನಾಶವೇ ಅವುಗಳ ಯುದ್ಧದ ಉದ್ದೇಶವೆಂದು ಉದ್ಘೋಷಿಸಿರುವರು ಜರ್ಮನ್ ಸೇನಾನಾಯಕರಾದ ಜನರಲ್ ವನ್ ಬ್ರೊಟಿಚರೂ ಇದೇ ರೀತಿಯ ಕ್ರಿಸ್‌ಮಸ್ ಸಂದೇಶವನ್ನು ಪ್ರಕಟಿಸಿರುವರು.

THULUNAD BANK
OF SUPPLY AGENCY LIMITED,

ESTD.] UDIPI. [1933.

INTEREST ON CURRENT ACCOUNT ALLOWED at 3% p. a.

All kinds of Banking business transacted

Write for particulars to:—
The Managing Director.

11-1-1940ಕ್ಕೆ ಹೊರಡುವ ನವಯುಗ ಪರ್ಯಾಯ ವಿಶೇಷ ಸಂಚಿಕೆಯನ್ನು ಓದಲು ಮರೆಯಬೇಡಿರಿ.

ನವಯುಗ ಎಂಟರ್ ಪ್ರೈಸ್ ಲಿಮಿಟೆಡ್.

ಉಡುಪಿಯಲ್ಲಿ ಹೊಸತಾಗಿ ಸ್ಥಾಪನೆಯಾದ ಈ ಕಂಪೆನಿಗೆ ಪಾಲು ಭಂಡವಾಳವನ್ನು ಸಂಗ್ರಹಿಸಲು ಕಂಪೆನಿಯ ಕೆಲವು ಡೈರೆಕ್ಟರರೂ ಹಿತೈಷಿಗಳೂ ಸೇರಿ ಜಿಲ್ಲೆಯಲ್ಲೂ ಹೊರಪ್ರದೇಶದಲ್ಲೂ ಈಗಾಗಲೇ ಸಂಚರಿಸತೊಡಗಿರುವರೆಂದು ತಿಳಿದುಬರುತ್ತದೆ ಸಕಲರೂ ಹೆಚ್ಚುಹೆಚ್ಚಾಗಿ ಪಾಲುಗಳನ್ನು ತೆಗೆದುಕೊಂಡು ಪ್ರೋತ್ಸಾಹಿಸದಿರರೆಂದು ನಿರೀಕ್ಷಿಸಲಾಗಿದೆ.

ಪಾಲು ಒಂದಕ್ಕೆ ರೂಪಾಯಿ 10/- ಮಾತ್ರ. ಪ್ರವೇಶ ಹಾಸಲು ರೂ. 1. (ಜುಮ್ಲಾ ರೂ. 11.) ಪೂರ್ತಿ ಹಣವನ್ನು ಒಮ್ಮೆಯೇ ಕೊಡಬೇಕಾಗಿದೆ. ಟಪ್ಪಾಲು ಮೂಲಕ ಪಾಲುಗಳನ್ನು ಅಪೇಕ್ಷಿಸುವವರೂ, ಕಂಪೆನಿಯ ಕುರಿತು ಮಾಹಿತಿಯನ್ನು ಪಡೆಯಬಯಸುವವರೂ ಮೆನೇಜಿಂಗ್ ಡೈರೆಕ್ಟರ್, ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಚರ್ಚ್ ರೋಡು, ಉಡುಪಿ. ಈ ವಿಳಾಸಕ್ಕೆ ಬರೆಯಬಹುದು.

ದಕ್ಷಿಣ ಕನ್ನಡ

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು ತಾ. 24-12-39

200 ದಿವಸ ಶಾಲೆ—ಮಂಗಳೂರು ನಗರ ಸಭೆಯು ಕಳೆದ ಸೋಮವಾರ ದಿನ ಸಾಯಂಕಾಲ ನಗರ ಸಭಾ ಭವನದಲ್ಲಿ, ಶ್ರೀ. ಬಿ ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು. ಸರಕಾರಿ ಹುಕುಂಗಳನ್ನು ಓದಿ ಮಂಜೂರು ಮಾಡಿದ ತರುವಾಯ ಕೆಲವು ಬಿಚ್ಚುಗಳಿಗೆ ಹಣ ಮಂಜೂರು ಮಾಡಲಾಯಿತು. ವರ್ಷಕ್ಕೆ 220 ದಿನಗಳಷ್ಟು ಸಮಯ ಶಾಲೆಗಳನ್ನು ನಡೆಸಬೇಕೆಂಬ ಅಭಿಪ್ರಾಯವನ್ನು ವಿರೋಧಿಸಿದ್ದಲ್ಲದೆ ದಿನ ಒಂದರ ಸಂಖ್ಯೆವರೆ ತಾಸುಗಳಂತೆ ವರ್ಷ ಒಂದರ 200 ಶಾಲಾ ದಿನಗಳಿದ್ದರೆ ಸಾಕಾದೀತೆಂದು ಸಭೆಯವರು ಅಭಿಪ್ರಾಯ ಪಟ್ಟರು. ಬಜೆಟಿನ ವಿಷಯವಾಗಿ ಗಮನ ಕೊಡಲು ಒಂದು ಸಮಿತಿಯೂ ಏರ್ಪಟ್ಟಿತು.

ಹೊಸ ಉಗ್ರಾಣ—ಸ್ಥಳೀಯ ಸಹಕಾರೀ ಸಂಘದ ನೇತೃತ್ವದಲ್ಲಿ ಒಂದು ಹೊಸ ಉಗ್ರಾಣವು ಸ್ಥಾಪಿಸಲಾಯಿತು. ಇದರ ಉದ್ಘಾಟನಾ ಸಮಾರಂಭವನ್ನು ಜಿಲ್ಲಾ ಜಡ್ಜರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರು ಕಳೆದ ಭಾನುವಾರ ನೆರವೇರಿಸಿದರು.

ಆಪಾದಿತರ ಬಿಡುಗಡೆ—ಕಳೆದ ತಾ. 14 6 39ರಲ್ಲಿ ಕಾವಳ ಪಡೂರು ಗ್ರಾಮದ ಕೃಷ್ಣಯ್ಯ ಎಂಬವರು ತನ್ನ ಚಿಕ್ಕ ತಂದೆ ಮಗ, ವಾಸುದೇವ ಅಡಿಗರ ಸಂಗಡ ಬಂಟ್ವಾಳದಿಂದ ಹೋಗುತ್ತಿದ್ದಾಗ ಯಾರೋ ಮೂವರು ಕತ್ತಲೆಯಲ್ಲಿ ಬಂದು ಅವರ ಕೈಕಾಲುಗಳನ್ನೂ, ತಲೆಗಳನ್ನೂ ಕಡಿದು ಹಾಕಿ ಪಲಾಯನ ಮಾಡಿದರು. ಶ್ರೀ ಕೃಷ್ಣಯ್ಯನು ತಾ. 17 6-39ರಲ್ಲಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಕಡಿದ ಸ್ಥಳಕ್ಕೆ ಬಂದ ಜನರೊಡನೆ ತನ್ನನ್ನು ಕಡಿದವರ ಗುರುತು ತನಗಾಗಲಿಲ್ಲವೆಂದು ಅವರು ಹೇಳಿದ್ದರೂ ಡಿಪುಟಿ ಮ್ಯಾಜಿಸ್ಟ್ರೇಟರ ಮುಂದೆ 2ನೇ ಆಪಾದಿತನಾದ ರಾಮಪ್ಪಯ್ಯನು ಹೇಳಿದ ಮೇರೆಗೆ 1ನೇ ಆಪಾದಿತ ಕೋಟಿ ಮೂಲ್ಯನು ತನ್ನನ್ನು ಕಡಿದುದಾಗಿ ತಿಳಿಸಿದ್ದರು. ಆ ಪ್ರಕಾರ 1ನೇ ಮತ್ತು 2ನೇ ಆಪಾದಿತರನ್ನು ಸೆಶ್ಶನ್ಸಿಗೆ ಕಮಿಟು ಮಾಡಲಾಗಿತ್ತು. ಮೂರನೆ ಅಪರಾಧಿಯು ಯಾರೆಂದು ತನಗೆ ತಿಳಿದಿಲ್ಲವಾಗಿ ಅವರು ಹೇಳಿದ್ದರು. ಎಸೆಸರ ಪೈಕಿ ಮೂವರು, ಆಪಾದಿತರು ತಪ್ಪುಗಾರರೆಂದೂ, ಒಬ್ಬರು ಎಸೆಸರು ಆಪಾದಿತರು ತಪ್ಪುಗಾರರಲ್ಲವೆಂದೂ ಅಭಿಪ್ರಾಯ ಪಟ್ಟರು. ಸಂಶಯದ ಫಲವನ್ನು ಆಪಾದಿತರಿಗೆ ಕೊಟ್ಟು ಸೆಶ್ಶನ್ಸ್ ಜಡ್ಜರಾದ ಶ್ರೀ. ಪಿ. ರಾಜಗೋಪಾಲಾಚಾರ್ಯರು ಆಪಾದಿತರನ್ನು ಕಳೆದ ತಾ. 14ರಲ್ಲಿ ಬಿಡುಗಡೆ ಮಾಡಿದರು. ಆಪಾದಿತರ ಕಡೆಯಿಂದ ಶ್ರೀ. ಬಿ. ನರಸಿಂಗರಾಯರೂ, ಶ್ರೀ. ಕೆ. ಯೊಲಿಯಣ್ಣ ಪೂಜಾರಿಯವರೂ ವಕಾಲತು ನಡೆಸಿದ್ದರು.

ಉಡುಪಿ

ಹಿಂದೂ ಮಹಾಸಭೆ—ದಕ್ಷಿಣ ಕನ್ನಡ ಜಿಲ್ಲೆಯ ಹಿಂದೂ ಮಹಾಸಭೆಯ ಜನರಲ ಮಿಟಿಂಗು ತಾ. 22-12-39ರಲ್ಲಿ ಶ್ರೀ. ಬಿ ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕಾರೀ ಮಂಡಳಿಗೆ ಶ್ರೀಗಳಾದ ಬಿ. ಮಾಧವರಾವ್, ಶೇಷಪ್ಪಯ್ಯ, ರಂಗರಾವ್, ಆರ್. ಎಸ್. ಶೆಣೈ ಮೊದಲಾದವರು ಆರಿಸಲ್ಪಟ್ಟರು. ಹಳ್ಳಿಹಳ್ಳಿಗಳಲ್ಲಿಯೂ ಮಹಾಸಭೆಯ ಶಾಖೆಗಳನ್ನು ಸ್ಥಾಪಿಸಿ ಹಿಂದೂ ಸಂಘಟನ ಕಾರ್ಯವನ್ನು ಬಲಪಡಿಸಬೇಕೆಂದಾಯಿತು.

ಬೊಂಬೆ ಲ್ಯಾಬ್ ಕಟ್ಟಡದಲ್ಲಿ—ಗೀತಾಜಯಂತ್ಯುತ್ಸವವು ಕೊಟ್ಟಕಾರ್ ಬಂಧುಗಳ ನೇತೃತ್ವದಲ್ಲಿ ಕಳೆದ ಸಪ್ತಾಹ ಆಚರಿಸಲಾಯಿತು. ಮಂಗಳೂರಿನ ಶ್ರೀ. ಅಚ್ಯುತ ಬಾಳಿಗರು ಗೀತೆಯ ಕುರಿತು ಕೊಂಕಣಿ ಭಾಷೆಯಲ್ಲಿ ಚಲೋ ಭಾಷಣವಿತ್ತರು. ತಾ 25ರಲ್ಲಿ ಶ್ರೀ. ಬಾಳಿಗರು ಶ್ರೀ ರಾಮಕೃಷ್ಣ ಥಿಯೆಟರಿನಲ್ಲಿ ಯೇಸುಕ್ರಿಸ್ತನ ಜೀವನ ಚರಿತ್ರೆಯನ್ನಿತ್ತು ಚಲೋ ಭಾಷಣವಿತ್ತರು.

ಕೊರಾಡಿಯಲ್ಲಿ ಟೀಪಾರ್ಟಿ ಸತ್ಕಾರ—ಉಡುಪಿ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಸಂಜೀವರಾಯರಿಗೆ ಇದೇ ತಾ 24ರಲ್ಲು ಕೊರಾಡಿ ವೆಂಕಟೇಶನ ಹಾ ಎ ಶಾಲೆಯಲ್ಲಿ ಕಲ್ಯಾರ ಸಹೋದರರು ಟೀಪಾರ್ಟಿ ಸತ್ಕಾರವನ್ನಿತ್ತರು. ಈ ಸಮಾರಂಭಕ್ಕೆ ಉಡುಪಿಯ ಮತ್ತು ಮಂಗಳೂರಿನ ಮಹನೀಯರನೇಕರು ದಯಮಾಡಿಸಿದ್ದರು. ಶ್ರೀ. ಎ. ಲಕ್ಷ್ಮೀನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು. ಗಾಯನ, ಸಂಗೀತ, ಗ್ರೂಫ್ ಫೋಟೋ ಕಾರ್ಯಕ್ರಮಗಳಿಂದ ಸತ್ಕಾರಕೂಟ ಕೊನೆಗೊಂಡಿತು.

ಗೀತಾ ಜಯಂತಿ—ಕಳೆದ ತಾ. 22ನೇ ಶುಕ್ರವಾರ ಸಾಯಂಕಾಲ ಉಪ್ಪಳ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ಗೀತಾಜಯಂತ್ಯುತ್ಸವವು ನಡೆಯಿತು. ಶ್ರೀ ಸ್ವಾಮಿ ಸುವಿಚಾರಾನಂದಜೀಯವರು ಅಗ್ರಾಸನ ವಹಿಸಿದ್ದರು. ಡಾ। ಯಂ. ಶಿವರಾಯರೂ, ಡಾ। ಶ್ರೀನಿವಾಸ ರಾಯರೂ, ಶ್ರೀ। ಯಂ. ಸುಬ್ಬರಾಯರೂ, ಪಂಡಿತ ಸಿಡ್ಲೋಡಿ ಅನಂತ ಉಪಾಧ್ಯಾಯರೂ ಶ್ರೀ ಕೃಷ್ಣನ ಬೋಧನೆಯ ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಜೀವನ್ಮುಕ್ತರಾಗ ಬೇಕಾದರೆ ಗೀತದಲ್ಲಿ ನಿರೂಪಿಸಿದ ದಾರಿಯಲ್ಲಿ ಮುಂದರಿಯುವುದು ಆಗತ್ಯವೆಂದರು. ಪ್ರೊ. ರಾಮಚಂದ್ರಯ್ಯರು ಧನ್ಯವಾದಗಳನ್ನರ್ಪಿಸಿದರು. ಗೀತಾ ವಾಚಸ್ಪತಿ ಸದಾಶಿವ ಶಾಸ್ತ್ರಿ ಭಿಡೆ (ಗೀತಾ ಜಯಂತಿಯ ಆಚರಣೆಯನ್ನು ಪ್ರಚಾರಕ್ಕೆ ತಂದವರು) ಯವರ ನಿಧನಕ್ಕಾಗಿ ಸಂತಾಪ ಸೂಚಿಸಿ ಠರಾವು ಮಂಜೂರಾಯಿತು.

ವಿಮೋಚನಾ ದಿನಾಚರಣೆ—ಮಂಗಳೂರಿನ ಮುಸಲ್ಮಾನರೂ ಜಿನ್ನರ ಹೇಳಿಕೆಯ ಮೇರೆಗೆ ವಿಮೋಚನಾ ದಿನಾಚರಣೆ ಮಾಡಿದರೆಂದು ತಿಳಿದು ಬರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಶೇವಡಿಗರ ಸುಧಾರಕ ಸಂಘ—ದ ಮಹಾಸಭೆಯು ಇದೇ ದಶಂಬರ ತಿಂಗಳ 30 ಮತ್ತು 31ನೇ ಶನಿವಾರ, ಆದಿತ್ಯವಾರ ದಿವಸಗಳಲ್ಲಿ ಮಂಗಳೂರು ಕರಾವು ಪೆಂಡಲ್ತೆಂಡ್ ಕಟ್ಟಿಸುತ್ತಿರುವ ಸಂಘದ ಕಟ್ಟಡದಲ್ಲಿ ಜರಗುತ್ತದೆ. ಈ ಮಹಾಸಭೆಗೆ ಸ್ವಜಾತಿ ಅಭಿಮಾನಿಗಳಾದ ಸಕಲರೂ ಬಂದು ಸಭಾ ಕಾರ್ಯಗಳಲ್ಲಿ ಸಹಕರಿಸಬೇಕಾಗಿ ಚಳೆ ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ (ಆಡಳಿತ ಕಮಿಟಿಯ ಅನುಮತಿ ಮೇರೆಗೆ)

ಕಾರ್ಯಕ್ರಮ—ತಾ. 30-12-39ನೇ ಶನಿವಾರ ಸಾಯಂ 5-30ಕ್ಕೆ ಕಾರ್ಯನಿರ್ವಾಹಕ ಸಭೆ. ರಾತ್ರಿ 8-30ಕ್ಕೆ ಹರಿಕಥೆ ಮತ್ತು ಸಂಗೀತ ತಾ. 31 12 39ನೇ ಆದಿತ್ಯವಾರ ಬೆಳಿಗ್ಗೆ 8-30ಕ್ಕೆ ಸ್ತ್ರೀಸಮ್ಮೇಳನ. ಮಧ್ಯಾಹ್ನ 2ಕ್ಕೆ ಸಂಘದ ಮಹಾಸಭೆ

ವಿ ಸೂ—ಸ್ವಜಾತಿ ಪ್ರತಿನಿಧಿಗಳಿಗೆ ತಾ. 30 12-1939ನೇ ರಾತ್ರಿ ಮತ್ತು ಮರುದಿವಸ ಊಟದ ಮತ್ತು ವಸತಿಯ ಏರ್ಪಾಡನ್ನು ಮಾಡಲಾಗಿದೆ.

WANTED.

Applications are invited from duly qualified registered Medical Practitioners (Allopathic) for being appointed as a special Medical Officer for prevention and control of Leprosy in the South Kanara District. The candidate will be paid at Rs (50-0-0) fifty only plus a fixed allowance of Rs. (15-0-0) fifteen only per mensem The Applicants should state their qualifications, date of birth and caste or religion The applications should reach the President, District Board, South Kanara on or before 20—1—1940.

(Sd) *K Vittal Shetty,*
President, District Board,
South Kanara

ಬೈಂದೂರು—ಸ್ಥಳೀಯ ಮಾಧ್ಯಮಿಕ ಶಾಲೆಯ ವರ್ಧಂತಿಯ ತಾ. 14-1-1940ನೇ ಆದಿತ್ಯವಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಕೆ. ವಿಟ್ಠಲ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಲಿರುವುದಾಗಿ ತಿಳಿದು ಬರುತ್ತದೆ ಜಿಲ್ಲಾ ಬೋರ್ಡಿನ ಒಂದು ಸಾಮಾನ್ಯ ಸಭೆಯು ಜನವರಿ ತಾ. 15ಕ್ಕೆ ಸ್ಥಳೀಯ ಮಾಧ್ಯಮಿಕ ಶಾಲೆಯಲ್ಲಿ ಕೂಡಲಿರುವುದು.

ಹವಾಗುಣದ ಬದಲಾವಣೆಯಿಂದ ಅಲ್ಲಲ್ಲಿ (Influenza) ಗಾಂಡುಗುದಿಗೆ ಜ್ವರವು ವಿಶೇಷವಾಗಿ ಹರಡಿದೆ.

ತಾ. 19-12-39ರಲ್ಲಿ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾರ್ಥಿ ಮತ್ತು ಗ್ರಾಮಸ್ಥರ ಪ್ರಯೋಜನಾರ್ಥವಾಗಿ ಒಂದು ರೇಡಿಯೋ ಯಂತ್ರವನ್ನು ಇಡಲಾಗಿದೆ. ಇದಕ್ಕೆ ಕಾರಣರಾದ ಶ್ರೀ. ಬಿ. ಸುಬ್ಬಣ್ಣ ಶೆಟ್ಟರು ಸಹಾಯ ಮಾಡಿದ ಪ್ರತಿಯೊಬ್ಬರಿಗೂ ವಂದನೆಯನ್ನು ತಿಳಿಸುತ್ತಾರೆ.

ಶ್ರೀ. ಬಿ. ಸುಬ್ಬಣ್ಣ ಶೆಟ್ಟರ ಸಾಹಸದಿಂದ ಕಟ್ಟಲ್ಪಟ್ಟ 'ಮಟರ್ನಿಟಿ ವಾರ್ಡ್' ತಾ. 15-1-40ಕ್ಕೆ ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ. ರವರಿಂದ ತೆರೆಯಲ್ಪಡುವುದು. ಅತಿಥಿಗಳಿಗೆ ಊಟದ ವ್ಯವಸ್ಥೆಗಾಗಿ ಸ್ವಾಗತ ಕಮಿಟಿ ಸ್ಥಾಪಿತವಾಗಿದೆ.

ಪೈವಳಿಕೆ—15ನೇ ಆರೋಗ್ಯ ಸಪ್ತಾಹವು ಪೈವಳಿಕೆ ಬೋ। ಹಾ। ಎ। ಶಾಲೆಯಲ್ಲಿ ಇದೇ ತಾ. 14 ಮತ್ತು 15ರಲ್ಲು ಶಾಲಾ ಮಕ್ಕಳ ಮೆರವಣಿಗೆ ಪಂದ್ಯಾಟಗಳಿಂದೊಡಗೂಡಿ ಶ್ರೀ. ಎಂ. ಕೆ. ತ್ಯಾಂಭಟ್ಟ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಮಂಬದಕೋಣೆ— ಇಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟ ಪಂಚಾಯತ ಬೋರ್ಡಿನ ಅಧ್ಯಕ್ಷ ಮ ಉಪಾಧ್ಯಕ್ಷರ ಚುನಾವಣೆಯು ಸ್ಥಳೀಯ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ತಾ. 16-12 39ರಲ್ಲು ಜರಗಿ ಶ್ರೀ. ಕೃಷ್ಣಕಾರಂತರು ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು ಶ್ರೀ ಹಳಗೇರಿ ಮುದೂಜನವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ನಮ್ಮ ಜಿಲ್ಲೆಯ ಪಂಚಾಯತ ಬೋರ್ಡುಗಳಲ್ಲಿ ಇಂಥ ಗೌರವಸ್ಥಾನವನ್ನು ಹರಿಜನರು ಪಡೆದುದು ಇದೇ ಪ್ರಥಮವಾದುದರಿಂದ ಈ ಬಾಬಿನಲ್ಲಿ ಮಂಬದಕೋಣೆ ಗ್ರಾಮಸ್ಥರು ಹೆಮ್ಮೆ ಪಡುವಂತಿದೆ. ಚುನಾವಣಾ ಕಾಲದಲ್ಲಿ ಜಿಲ್ಲಾ ಪಂಚಾಯತ ಆಫೀಸರರೇ ಅಗ್ರಸ್ಥಾನವನ್ನು ವಹಿಸಿದ್ದರು.

ಕಂಡ್ಲೂರು— ಮುಸಲ್ಮಾನ ಬಂಧುಗಳ ಮಾಮೂಲ ಪ್ರಕಾರ ಜರಗುತ್ತಾ ಬಂದ ಕಲ್ಲಿಕೋಟೆ ಹಜರತ್ ಶೇಕ್ ಸೈಯ್ಯದ್ ಜಫ್ರಿಗಳವರ ದಿನಾಚರಣೆಯು ತಾ. 20ರಲ್ಲಿ ಮೌಲೂದ್ ಭೋಜನ ಮತ್ತು ದಾನಧರ್ಮಾದಿಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು.

ದಿವಂಗತ ಟಿ. ಯಂ ಉಚ್ಚಿಲ್

ತಾ 9-12-39ನೇ ಶನಿವಾರ ಜರಗಿದ ವಿದ್ಯಾದಾಯಿನಿ ಸ್ಪೋರ್ಟ್ಸ್ ಕ್ಲಬ್ಬಿನ ಕಾರ್ಯಕಾರಿ ಸಮಿತಿಯಲ್ಲಿ ಕ್ಲಬ್ಬಿನ ಅಧ್ಯಕ್ಷರಾಗಿ ಕ್ಲಬ್ಬನ್ನು ಅನೇಕ ರೀತಿಯಲ್ಲಿ ಉತ್ತೇಜಿಸಿ ಸ್ಥಿತಿಗೆ ತಂದು ಕ್ಲಬ್ಬಿನ ಚೈತನ್ಯವಾಗಿದ್ದ ಟಿ ಯಂ. ಉಚ್ಚಿಲ್‌ರವರು ತಾ 8 12-39ರಲ್ಲಿ ಅಕಾಲನಿಧನ ಹೊಂದಿದ್ದ ಬಗ್ಗೆ ದುಃಖಸೂಚಕ ಠರಾವನ್ನು ಮಾಡಲಾಯಿತು.

ಬೊಂಬಾಯಿ

ದಿ ಕೆನರಾ ಬೋಯ್ಸ್ ಯೂನಿಯನ್ ಸ್ಪೋರ್ಟ್ಸ್ ಕ್ಲಬ್—ಇದರ ಪ್ರಥಮ ವಾರ್ಷಿಕ ಮಹಾಸಭೆಯು ಶ್ರೀ. ಮುದ್ದಣ್ಣ ಕೆ. ಸಾಲ್ಯಾನ್‌ರವರ ಅಧ್ಯಕ್ಷತೆಯಲ್ಲಿ ತಾ. 10ರಲ್ಲು ಜರಗಿ ಕಾರ್ಯಕಾರಿ ಸಮಿತಿಯ ಮೆಂಬರರಾಗಿ ಶ್ರೀಗಳಾದ ಬಿ ಎ. ವೈ. ಸ ವರ್ದ ಅಧ್ಯಕ್ಷ, ಎಸ್. ಜಿ ಸೆಟ್ರು ಉಪಾಧ್ಯಕ್ಷ, ದೂಮಪ್ಪ ಟಿ ಕೋಟಿಯನ್‌ಕಾರ್ ಮತ್ತು ಯಂ. ಕೆ. ಸನಿಲ ಜೊತೆ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಬಂಟರ ಯಾನೆ ನಾಡವರ ಸಂಘ

ಮುಂಬಾಯಿ—ಹೆಚ್ಚು ಸಮಯ ಉದ್ಯೋಗವಿಲ್ಲದೆ ಕೆಲವು ಸಮಯ ಕಾಯಿಲೆಯಲ್ಲಿದ್ದು ಪೇಚಾಡುತ್ತಿದ್ದ ಶ್ರೀ. ತೆಂಕವಾನೆ ರಾಮಣ್ಣ ಸೆಟ್ರಿಗೆ ಸಮಿತಿಯವರ ಅರ್ಜಿ ಮೇರೆಗೆ ಈ ಸಂಘದಿಂದ ರೂಪಾಯಿ 16ನ್ನು ಕೊಟ್ಟು ಊರಿಗೆ ಕಳುಹಿಸಲಾಗಿದೆ.

X'Mas Grand Reduction Sale.

No WAR SCARE
No RISE IN PRICE



No 116 Chromium Case Rs 8—10
No 417 Golden Case Rs 6— 6
No 117 R Rolledgold 10yrs Jewelled Mov Rs 12—8



No 435 Chromium Cas. Rs 12—0
No 136 Rolledgold 10yrs Rs 16—8

Strong & Durable
Accurate
Time Keepers



ROUND OR CUSHION

No 101 Chromium Case Rs 3—12
No 402 Golden Case Rs. 4— 8

As.19/- Extra for Postage.

For further particulars send for our new cat.

(Correspondance in English)

BAPALAL & CO.
101 Abdul Rehman Street,
BOMBAY, 3.

All Swiss Made
GUARANTEED
Lever WATCHES.



No 121 Chromium Case Rs 7—8
No 425 Golden Case Rs 8—4
No 425 R Rolledgold 10yrs 13—8

LADIES MINIATURES

Geneva Movement.

No 160 Chromium Case Rs 10—8
No 161 Golden Case Rs 12—0
No 162 Rolledgold 10yrs Rs 18—0

ಒಂದು ವಾರದ ಯುದ್ಧ ವಾರ್ತೆ

ವಸಂತ ಋತುವಿನಲ್ಲಿ ನಾಝಿಗಳ ಪ್ರಬಲ ಧಾಳಿ.

ಬ್ರಿಟಿಷ್ ಸಬ್‌ಮೆರೀನುಗಳ ಸಾಹಸ

ಸಾಲ್ಮನ್ ಎಂಬ ಬ್ರಿಟಿಷ್ ಸಬ್‌ಮೆರೀನ್ ಬ್ರೆಮೆನ್ ಎಂಬ ಜರ್ಮನ್ ವ್ಯಾಪಾರಿ ಹಡಗನನ್ನು ಮುಳುಗಿಸದೆ ಹಾಗೆಯೇ ಬಿಟ್ಟಿರುವುದು. ಜರ್ಮನ್ ಯುದ್ಧದ ಹಡಗಗಳನ್ನು ಕಂಡು ಅವುಗಳ ಕಡೆಗೆ ಟೋರ್ಪೆಡೋಗಳನ್ನೆಸೆದು ಎರಡನ್ನು ಜಖಮುಗೊಳಿಸಿರುವುದು. ಇದೇ ತಾ.18ರಲ್ಲಿ ಉರ್ಸೂಲ ಎಂಬ ಬ್ರಿಟಿಷ್ ಸಬ್‌ಮೆರೀನು, ಜರ್ಮನ್ ಡಿಸ್ಟ್ರಾಯರ್ ಹಡಗಗಳಿಂದ ಆವರಿಸಲ್ಪಟ್ಟರೂ ಹಿಂಜರಿಯದೆ ಸಾಹಸದಿಂದ ಜರ್ಮನ್ ಯುದ್ಧ ಹಡಗವೊಂದನ್ನು ಮುಳುಗಿಸಿರುವುದು. ಜರ್ಮನ್ ವಿಮಾನಗಳು ಮತ್ತು ಯುದ್ಧ ಹಡಗಗಳು ಮೀನು ಹಿಡಿಯುವ ಮತ್ತು ವ್ಯಾಪಾರಿಹಡಗಗಳನ್ನು ಸಿಕ್ಕ ಸಿಕ್ಕಲ್ಲಿ ಮುಳುಗಿಸಹತ್ತಿವೆ. ತಾ. 17 ಮತ್ತು 18ರಲ್ಲಿ 14 ಹಡಗಗಳನ್ನು ಮುಳುಗಿಸಲೆತ್ನನಡೆದರೂ ಕೇವಲ 6ಮಾತ್ರ ಮುಳುಗಿಹೋಗಿವೆ.

ಅತಿದೊಡ್ಡ ಜರ್ಮನ್ ಸ್ಟೀಮರು ತಾನೇ ಮುಳುಗಿತು

ದಕ್ಷಿಣ ಅಮೆರಿಕದಿಂದ ಸಾಮಾನು ತರುತ್ತಿದ್ದ 32,581 ಟನ್ನು ತೂಕದ 'ಕೊಲಂಬಸ್' ಎಂಬ ಅತಿದೊಡ್ಡ ಜರ್ಮನ್ ವ್ಯಾಪಾರಿ ಹಡಗವು ಇದೇ ತಾ. 19ರಲ್ಲಿ ಜರ್ಸಿಡ ಬಂದರಿನಿಂದ 400 ಮೈಲು ಉತ್ತರದಲ್ಲಿ ಬ್ರಿಟಿಷ್ ಯುದ್ಧ ಹಡಗವೊಂದನ್ನು ಕಂಡು ಕೂಡಲೆ ಮುಳುಗಿ ಆತ್ಮಘಾತಮಾಡಿಕೊಂಡಿರುವುದು. ಟಸ್ಕಲೂಸವೆಂಬ ಯುನೈಟೆಡ್ ಸ್ಟೇಟ್ಸಿನ ಹಡಗವು ಕೊಲಂಬಸ್ ಹಡಗದ 519 ಮಂದಿ ನಾವಿಕರನ್ನು ರಕ್ಷಿಸಿರುವುದು.

ಪೋಲರು ಹೋರಾಡಲು ಸಿದ್ಧರಾಗಿದ್ದಾರೆ

ಪೋಲಿಶ್ ಸರಕಾರವು ಫ್ರಾನ್ಸಿನಲ್ಲಿ ಸ್ಥಾಪಿಸಲ್ಪಟ್ಟು ಕೆಲಸಮಾಡುತ್ತಿದೆ. ಪೋಲಿಶ್ ಸೇನೆ, ನೌಕೆ ಮತ್ತು ವಿಮಾನ ಪಡೆಯು ಈಗ ಸುಘಟಿತವಾಗಿದೆ. ಪೋಲಿಶ್ ನೌಕಾಪಡೆಯು ಬಾಲ್ಟಿಕ್ ಸಮುದ್ರದಲ್ಲಿ ಸಂಚರಿಸುವಂತಾಗುವ ದಿನವು ದೂರವಿರಲಾರದೆಂದು ನಂಬಲಾಗಿದೆ. ಯುನೈಟೆಡ್ ಸ್ಟೇಟ್ಸ್, ದಕ್ಷಿಣ ಅಮೆರಿಕ, ಕೆನಡಾ ಮೊದಲಾದ ದೇಶಗಳಿಂದ ಪೋಲರು ಹೋರಾಡಲು ಬಂದುಸೇರುತ್ತಿದ್ದಾರೆ. ಪೋಲಿಶ್ ವಿಮಾನಪಡೆಯು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟು ಒಂದು ದಳವು ಇಂಗ್ಲೆಂಡ್ ಮತ್ತು ಇನ್ನೊಂದು ಫ್ರಾನ್ಸಿನಲ್ಲಿದೆ.

ಗ್ರಾಫ್‌ಸ್ಟೀಯ ಕೆಪ್ಟನರ ಆತ್ಮಹತ್ಯೆ

ಇದೇ ತಾ. 20ರಲ್ಲಿ ಗ್ರಾಫ್‌ಸ್ಪೀಯ ಕೆಪ್ಟನರಾದ ಲೆಂಗ್ಸ್ ಡೊರ್ಫರು, ಬ್ಯೂನಸ್ ಏರಿಸಿನಲ್ಲಿ ತನಗೆ ತಾನೇ ಗುಂಡಿಟ್ಟು ಆತ್ಮಹತ್ಯೆಮಾಡಿಕೊಂಡಿರುವರು. ಗ್ರಾಫ್‌ಸ್ಪೀಯು ಮುಳುಗುವಾಗ ಅದರೊಂದಿಗೇ ಮುಳುಗಿ ಸಾಯಬೇಕೆಂದು ಕೆಪ್ಟನ್ ಲೆಂಗ್ಸ್ ಡರ್ಫರು ಆಲೋಚಿಸಿದ್ದರು. ಆದರೆ ಇತರ ನಾವಿಕರ ಪ್ರಾಣರಕ್ಷಣೆಗಾಗಿ ಅವರು ಹಾಗೆ ಮಾಡಲಿಲ್ಲ. ಕೆಪ್ಟನ್ ಲೆಂಗ್ಸ್ ಡರ್ಫರು ಜರ್ಮನ್ ಧ್ವಜವನ್ನು ತನ್ನ ಹಾಸಿಗೆಯ ಮೇಲೆ ಹರಡಿ ಅದರ ಮೇಲೆ ಮೃತರಾಗಿ ಬಿದ್ದಿದ್ದರು. ಅವರನ್ನು ಗೌರವಪೂರ್ವಕವಾಗಿ ಹೂಳಲಾಯಿತು. ಕೆಪ್ಟನ್ ಲೆಂಗ್ಸ್ ಡೂರ್ಫರು ಗ್ರಾಫ್‌ಸ್ಪೀಯನ್ನು ಮುಳುಗಿಸುವುದಕ್ಕೆ ವಿರೋಧವಿದ್ದರೆಂದೂ ನಾಝಿಗಳ ಧೋರಣೆಯ ಕುರಿತು ಅತೃಪ್ತಿಯುಳ್ಳವರಿದ್ದರೆಂದೂ ಅದುದರಿಂದಲೇ ನಿರಾಶೆಗೊಂಡು ಆತ್ಮಹತ್ಯೆಮಾಡಿಕೊಂಡಿರುವರೆಂದೂ ಬ್ರಿಟಿಷರ ಸುದ್ದಿ.

ದಶಂಬರ ೧೭ರಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮಿ ಚೇಂಬರ್ಲೇನರು ಪಶ್ಚಿಮ ರಣರಂಗವನ್ನು ಸಂದರ್ಶಿಸಿದಾಗ ತನ್ನ ಪ್ರಖ್ಯಾತಕೊಡೆಯನ್ನು ಕೊಂಡೊಯ್ದಿರಲಿಲ್ಲ. ಇದನ್ನು ತಿಳಿದ ಜರ್ಮನ್ ವೈಮಾನಿಕರು ಬ್ರಿಟಿಷ್ ಸೇನಾನಿಲಯದ ಮೇಲೆ ಬ್ರಿಟಿಷ್ ಕೊಡೆಯೊಂದನ್ನು ಬಿಸಾಡಿರುವರೆಂದು ತಿಳಿದು ಬರುತ್ತದೆ

ಪ್ರಬಲಧಾಳಿಯ ಸಿದ್ಧತೆ

ಬರುವ ವಸಂತ ಋತುವಿನಲ್ಲಿ ಪ್ರಬಲ ಧಾಳಿನಡಿಸುವ ಸಿದ್ಧತೆಯನ್ನು ನಾಝಿಗಳು ಮಾಡುತ್ತಿರುವರೆಂದು ತಿಳಿದು ಬರುತ್ತದೆ. ಈ ಧಾಳಿಯು ಯಾವರೀತಿಯಲ್ಲಿ ನಡೆಸಲ್ಪಡಬೇಕೆಂಬ ವಿವರಗಳನ್ನೆಲ್ಲಾ ಹಿಟ್ಲರರು ನಿಶ್ಚೈಸುವುದರಲ್ಲಿ ನಿರತರಾಗಿರುವರೆಂದು ತಿಳಿದು ಬರುತ್ತದೆ ಜರ್ಮನರೀಗ ವಿಪುಲವಾಗಿ ವಿಮಾನ, ಸಬ್‌ಮೆರೀನ್ ಮತ್ತು ಇತರ ಆಯುಧಗಳನ್ನು ಭರದಿಂದ ತಯಾರಿಸುತ್ತಿದ್ದಾರೆ. ಆದುದರಿಂದಲೇ ಪಶ್ಚಿಮ ರಣರಂಗವು ಈಗ ಬಹುತೇಕ ಶಾಂತವಾಗಿರುತ್ತದೆ. ಜರ್ಮನರು ಸಿಗ್‌ಫ್ರಿಡ್ ಕೋಟೆಯನ್ನು ರೈನ್ ನದಿಯ ಮಾರ್ಗವಾಗಿ ಪೂರ್ವಕ್ಕೆ ಕನ್‌ಸ್ಟೆನ್ಸ್ ಸರೋವರದವರೆಗೆ ಮುಂದುವರಿಸಿರುತ್ತಾರೆ. ಜರ್ಮನಿಯಲ್ಲಿ ಇತ್ತಲಾಗಿ ಹಲವು ರೈಲ್ವೇ ಅಪಘಾತಗಳಾಗಿರುತ್ತವೆ. ಇದೇ ತಾ. 22ರಲ್ಲಿ ಗೆಂತಿನ್ ಎಂಬಲ್ಲಿ ಎರಡು ಎಕ್ಸ್‌ಪ್ರೆಸ್ ಟ್ರೈನುಗಳು ಢಿಕ್ಕೆಬಡಿದು 132 ಮಂದಿ ಕೊಲ್ಲಲ್ಪಟ್ಟು 100 ಮಂದಿಗಾಯಗೊಂಡಿರುತ್ತಾರೆ.

ಸೋವಿಯಟ್ ಫಿನ್ಲೆಂಡ್ ಯುದ್ಧ.

ಇದೇ ತಾ. 19ರಲ್ಲಿ 18 ಸೋವಿಯಟ್ ವಿಮಾನಗಳು ಫಿನ್ಲೆಂಡಿನ ಮುಖ್ಯ ಪಟ್ಟಣವಾದ ಹೆಲ್ಸಿಂಕಿಯಮೇಲೆ ಬಾಂಬೆಸೆದುವು. ಆದರೆ ಹೆಚ್ಚಿನ ಹಾವಳಿಯೇನೂ ಆಗಿರುವುದಿಲ್ಲ. ಮೆನ್ನರ್‌ಹೈಮ್ ಕೋಟೆಯನ್ನೊಡೆಯಲು ರಶ್ಯನರು ಪುನಃ 2ಲಕ್ಷ ಸೇನೆಯನ್ನು ತರಿಸಿ ಪ್ರಬಲ ಪ್ರಯತ್ನ ನಡಿಸುತ್ತಿರುವರು. ರಶ್ಯನಸೇನೆಯಲ್ಲಿ ಸಿಡುಬು ರೋಗ ಹಬ್ಬಿರುವುದೆಂದು ತಿಳಿದು ಬಂದಿದೆ. ನೋರ್ಥ್ ಮತ್ತು ಫಿನ್ಲೆಂಡಿನ ಎಲ್ಲಿಯ ಪ್ರದೇಶದಲ್ಲಿ ಸೋವಿಯಟ್ ಸೇನೆಯು ಜಯಶೀಲವಾಗಿ ಮುಂದೊತ್ತಿರುವುದು. ಸೋವಿಯಟ್ ಸೇನೆಯು ಫಿನ್ನರಿಂದ ಜಯಶೀಲವಾಗಿ ತಡೆಗಟ್ಟಲ್ಪಟ್ಟು ಹಿಂದೆ ಬಿದ್ದಿರುವುದರಿಂದ ಸ್ಟೆಲಿನರಲ್ಲಿ ಅತೃಪ್ತಿಯುಂಟಾಗಿದೆ. ಅವರು ಇದೇ ತಾ. 19ರಲ್ಲಿ ಎಮ್. ಮೊಲೊಟೋವ್ ಮತ್ತು ಸೋವಿಯೆಟ್ ಸೈನ್ಯಾಧಿಕಾರಿಗಳೊಡನೆ ದೀರ್ಘ ಮಾತುಕತೆ ನಡಿಸಿರುವರು.

ಸೋವಿಯೆಟ್ ಸೇನೆಯ ಪ್ರಬಲ ಅಪಜಯ.

ಇದೇ ತಾ. 21ರಲ್ಲಿ ಸುಮುಸಲ್ಮಿ ಎಂಬಲ್ಲಿ ಸೋವಿಯೆಟ್ ಮತ್ತು ಫಿನ್ನಿಶ್ ಸೈನ್ಯಗಳೊಳಗೆ ಭೀಕರ ಕದನನಡೆದು ಸಹಸ್ರಗಟ್ಟಲೆಯಲ್ಲಿ ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಇದೇ ತಾ. 21ರಲ್ಲಿ 360 ವಿಮಾನಗಳು ಫಿನ್ಲೆಂಡಿನ ಮೇಲೆ ಧಾಳಿ ನಡಿಸಿದುವಾದರೂ ಹೆಚ್ಚಿನ ಹಾವಳಿಯೇನೂ ಆಗಿರುವುದಿಲ್ಲೆಂದು ತಿಳಿದು ಬರುತ್ತದೆ. ಇಷ್ಟರಲ್ಲಿವರೆಗಿನ

ಸ್ಕೂಲ್, ಲೈಬ್ರೆರಿ ಮತ್ತು ಗ್ರಾಮಪಂಚಾಯಿತಿಗಳಿಗೆ
ಬೇಕಾದ ಎಲ್ಲಾ ತರದ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ.
ವ್ಯಾಪಾರಿಗಳಿಗೆ ಹೆಚ್ಚು ಕಮಿಶನ್ ಇದೆ.
ಪಿ. ಎ. ಉಪಾಧ್ಯಾಯ,
ಬುಕ್ ಸೆಲರ್ ಅಂಡ್ ಪಬ್ಲಿಷರ್,
೪೫ ಎ.ಎಸ್. ಸ್ಟ್ರೀಟ್ ಬೆಂಗಳೂರು ಸಿಟಿ
೧ ರೂ. ಕೊಡುವ ಚಂದಾದರಿಗೆ ಮಾತ್ರ
ರೂ. ೩ರ ಪುಸ್ತಕಗಳು
ಈಗಲೇ] ಉಚಿತ [ಈ ದಿನವೇ
ಪುಸ್ತಕಗಳ ತಪಸೀಲುಪಟ್ಟಿಗೆ ಬರೆಯಿರಿ
ವ್ಯವಸ್ಥಾಪಕ:- ಪಿ. ಎ. ಉಪಾಧ್ಯಾಯ
ಮಾಧ್ವಗ್ರಂಥ ಪ್ರಕಾಶನ ಸಮಿತಿ,
೪೫ ಎ ಎಸ್. ಸ್ಟ್ರೀಟ್, ಬೆಂಗಳೂರು ಸಿಟಿ

ಜನರು
ಯಥಾರ್ಥವಾಗಿಯೂ
ಒಪ್ಪಿಕೊಳ್ಳುತ್ತಾರೆ:—
ಸ್ವಸ್ತಿಕ
ಪರ್ಫ್ಯೂಮ್ಡ್ ಕೆಸ್ಟರಾಯಿಲ್
ಗುಣದಲ್ಲೂ ಪರಿಮಳದಲ್ಲೂ ಸ್ವದೇಶ ಅಥವಾ ವಿದೇಶದ ಯಾವ ಕೂದಲೆಣ್ಣೆಯನ್ನಾದರೂ ಸೋಲಿಸುವ ಅತ್ಯುತ್ತಮವಾದಹೇರ್ ಆಯಿಲ್ ಎಂದು.
ಎಲ್ಲೆಲ್ಲೂ ವಿಕ್ರಯಿಸಲ್ಪಡುತ್ತದೆ.
83

ಯುದ್ಧದಲ್ಲಿ 25,000 ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟು 35,000 ಮಂದಿ ಗಾಯಗೊಂಡಿರುವರೆಂದು ಫಿನ್ಲೆಂಡಿನ ಸುದ್ದಿ ಆದರೆ ಮೋಸ್ಕೋ ಪಟ್ಟಣದ ವಾರ್ತೆಯ ಮೇರೆಗೆ ಈವರೆಗಣ ಯುದ್ಧದಲ್ಲಿ 2,200 ಮಂದಿ ಫಿನ್ನರು ಕೊಲ್ಲಲ್ಪಟ್ಟು 10,000 ಮಂದಿ ಗಾಯಗೊಂಡಿರುವರೆಂದೂ, 1400 ಮಂದಿ ಸೆರೆಹಿಡಿಯಲ್ಪಟ್ಟಿರುವರೆಂದೂ 1823 ಮಂದಿ ಸೋವಿಯೆಟ್ ಸೈನಿಕರು ಕೊಲ್ಲಲ್ಪಟ್ಟು 7,000 ಮಂದಿ ಗಾಯಗೊಂಡಿರುವೆಂದೂ ತಿಳಿದುಬರುತ್ತದೆ.

ಜರ್ಮನಿಯ ಸಹಾಯದ ಅಪೇಕ್ಷೆ

ಉತ್ತರ ಫಿನ್ಲೆಂಡಿನಲ್ಲಿ ರಸ್ಯಾನರು ಭೀಕರ ಹೋರಾಟನಡಿಸಿ ಇಷ್ಟರ ವರೆಗೆ ಗೆದ್ದ ಸ್ಥಳಗಳನ್ನೆಲ್ಲಾ ಬಿಟ್ಟು ಅವಸರದಿಂದ ಹಿಂದೆ ಸರಿಯುತ್ತಿರುವರು. ಸೋವಿಯೆಟ್ ವಿಮಾನಗಳು ಬೆನ್ನಟ್ಟುವ ಫಿನ್ನರನ್ನು ತಡೆಗಟ್ಟಲೆತ್ನಿಸಿದರೂ ಪ್ರಯೋಜನವಾಗಿರುವುದಿಲ್ಲ. ಸೋವಿಯೆಟ್ ಸೇನೆಯು ಟಾಂಕಿ, ಮಿಶನ್ ತೋಪುಗಳನ್ನೆಲ್ಲಾ ತ್ಯಜಿಸಿಬಿಟ್ಟು ಬಹಳ ಗೊಂದಲದಿಂದ ಹಿಂದಕ್ಕೋಡಿರುವುದು. ಹಿಮಾಚ್ಛಾದಿತ ಪ್ರದೇಶಗಳು ಗಾಯಗೊಂಡ ಸೋವಿಯೆಟ್ ಸೈನಿಕರ ರಕ್ತದ ಕಲೆಗಳಿಂದ ತುಂಬಿವೆ. ಫಿನ್ನರು ರಸ್ಯಾನರ ಮೇಲೆ ನಡಿಸಿದ ಯುದ್ಧದಿಂದ ಕಡಿಮೆಯೆಂದರೆ 5,000 ಮಂದಿ ಸೈನಿಕರು ಕೊಲ್ಲಲ್ಪಟ್ಟಿರುವರೆಂದು ನಂಬಲಾಗಿದೆ. ಸಲ್ಲಾ ರಣರಂಗದಲ್ಲಿಯೂ ರಸ್ಯಾನರು ಹೆಚ್ಚಿನ ಪ್ರಾಣಹಾನಿ ಪಡೆದು ಹಿಂದೆ ಸರಿದಿರುತ್ತಾರೆ.

ಸ್ಟೇಲಿನರು ಫಿನ್ಲೆಂಡಿನ ಮೇಲೆ ನೌಕಾಮುತ್ತಿಗೆ ಹಾಕಲು ಜರ್ಮನ್ ನಾವೆಯ ಸಹಾಯವನ್ನು ಹಿಟ್ಲರರಿಂದ ಕೇಳಿರುವರೆಂದೂ, ಆದರೆ ಹಿಟ್ಲರರು ಈ ಕುರಿತು ಜರ್ಮನ್ ನೌಕಾಖಾತೆಯೊಂದಿಗೆ ದೀರ್ಘವಾಗಿ ವಿಚಾರಿಸಿ ಸಹಾಯಕೊಡಲು ಸಾಧ್ಯವಿಲ್ಲೆಂದು ತಿಳಿಸಿರುವರೆಂದೂ ಹೊಲ್ಲೆಂಡಿನ ವಾರ್ತೆ. ಫಿನ್ಲೆಂಡಿನ ಯುದ್ಧದ ಕುರಿತು ರಸ್ಯದಲ್ಲಿ ಅತೃಪ್ತಿಯುಂಟಾಗಿರುವುದೆಂದು ಸುದ್ದಿಯುಂಟಾಗಿದೆ.

ಇಂಗ್ಲೆಂಡು ಮತ್ತು ಫ್ರಾನ್ಸುಗಳು ಫಿನ್ಲೆಂಡಿಗೆ ಸಾಧ್ಯವಾದ ಸಹಾಯವನ್ನೆಲ್ಲಾ ಮಾಡುತ್ತಿವೆ. ಫ್ರೆಂಚ್ ಪ್ರಧಾನ ಮಂತ್ರಿಗಳು, ಫಿನ್ಲೆಂಡಿನ ವಿಜಯದಿಂದ ಉಲ್ಲಾಸಗೊಂಡು ಫಿನ್ನರಿಗೆ ಹೆಚ್ಚಿನ ಸಹಾಯಮಾಡಬೇಕೆಂಬ ಅಭಿಪ್ರಾಯವುಳ್ಳವರಿರುವರು.

GET RICH
AND
PROSPEROUS
through Simple
Means upheld and
pursued by
Millions.........!
WRITE NOW WITH
STAMP.—
K. S. Row,
Worli, BOMBAY.

(೧೪ನೇ ಪುಟದಿಂದ)

ಲೀಸರೀಗ ತಮ್ಮ ವಶಪಡಿಸಲ್ಪಟ್ಟ ಕೈದಿಗಳನ್ನು ತಮಾಷೆ ಮಾಡಿ ವಿನೋದಿಸುತ್ತಿದ್ದರು. ಅವರನ್ನು ಮೊಣಕಾಲೂರಿಸಿ ಕೈಗಳೆರಡನ್ನೂ ಬೆನ್ನ ಹಿಂದೆ ಅಡ್ಡ ಬಾಗಿಸಿ, ಹಣೆ ಬಾಗಿಸಿ ನೆಲ ಮುಟ್ಟಿಸುತ್ತಿದ್ದರು. ಹೀಗೆ ಮಾಡಲಾರದವರನ್ನು ಪಹರೆಗಾರರು ಕುತ್ತಿಗೆ ಸಂದಿಗೆ ಒದೆದು ಮಾಡಿಸುತ್ತಿದ್ದರು. ಕೆಲವರನ್ನು ಇಡೀ ಕಟ್ಟಡವ ಸುತ್ತಲೂ ಓಡಾಡಿಸುತ್ತಿದ್ದರು ಕೆಲವರು ಅಸ್ವಸ್ಥರಾಗಿದ್ದರು. ಆದರೂ ಅವರು ಕೂಡಾ ಓಡಲೇ ಬೇಕಾಯಿತು. ಯಾರಾದರೂ ಕಾರಿದರೆ, ಅವರ ಕುತ್ತಿಗೆ ಹಿಂಬದಿಯಿಂದ ಎತ್ತಿ ಹಿಡಿದು ಮುಖ ಮತ್ತು ಕೂದಲಿಂದ ಅದನ್ನು ಒರಸಿ ತೆಗೆಯಲಾಗುತ್ತಿತ್ತು.

ಸಂಜೆ 5 ಘಂಟೆಗೆ ಮೋಟಾರ್ ಲೋರಿಗಳು ಬಂದುವು. ತುಳಿದು ಹೊಡೆದು ಜಾನುವಾರುಗಳಂತೆ ಕೈದಿಗಳನ್ನು ಅವುಗಳೊಳಗೆ ತುಂಬಿಸಲಾಯಿತು. ಅನಂತರ ಅವರೆಲ್ಲಾ ಪಟ್ಟಣದ ಹೊರವಳಯದ ರೈಲ್ವೆ ಸ್ಟೇಶನಿನೊಂದಕ್ಕೊಯ್ಯಲ್ಪಟ್ಟರು. ರೈಲ್ವೇ ನಿಲ್ದಾಣಕ್ಕೆ ಹೋಗಬೇಕಾದರೆ ಕೈದಿಗಳು ಕತ್ತಲಾಗಿರುವ ಮೆಟ್ಟಲುಗಳಿಂದ ಕೆಳಗಿಳಿದು ಹೋಗಬೇಕಾಗಿತ್ತು. ಇಲ್ಲಿ ಪಹರೆಗಾರರು ತಮ್ಮ ಕೈಗೆ ಸಿಕ್ಕವರ ಮೇಲೆಲ್ಲಾ ಗುದ್ದುಗಳ ಮಳೆಗರೆದರು. ಈ ಮೆಟ್ಟಲುಗಳ ಕೆಳಗಿನ ಸಂಕದ ಮೇಲೆ ಎಲ್ಲ ಕೈದಿಗಳೂ ಗೋಡೆಗೆ ಮುಖಮಾಡಿ ನಿಲ್ಲಿಸಲ್ಪಟ್ಟಾಗ ತಮ್ಮನ್ನು ಗುಂಡು ಹೊಡೆದು ಕೊಲ್ಲುವರೆಂದು ಕೆಲಮಂದಿ ಕೈದಿಗಳು ಉದ್ವೇಗಗೊಂಡು ಉನ್ಮತ್ತರಾದರು. ಪಹರೆಗಾರರೂ ಇನ್ನು ಕೆಲಮಂದಿ ಅಧಿಕಾರಿಗಳೂ ಅತ್ತಿತ್ತ ಸರಿಯುತ್ತಾ ಕೈದಿಗಳನ್ನು ಒದೆದು ಗುದ್ದುತ್ತಿದ್ದರು. ಕೆಲಸಮಯದ ಮೇಲೆ ಎಲ್ಲರೂ ಟ್ರೈನಿನ ಮೂಲಕ ಬುಚೆನ್‌ವಾಲ್ಡ್ ಶಿಬಿರಕ್ಕೊಯ್ಯಲ್ಪಟ್ಟರು. ರೈಲುಬಂಡಿಯಲ್ಲಿಯೂ ಪಹರೆಗಾರರು ಅತ್ತಿತ್ತ ಸರಿಯುತ್ತಾ ಅಲ್ಲೊಬ್ಬನ ಹಲ್ಲು ಮುರಿದು, ಇಲ್ಲೊಬ್ಬನ ತಲೆಹಿಡಿದು ಜಪ್ಪಿ ಮತ್ತೊಂಡೆಡೆ ಒಬ್ಬನ ಕಣ್ಣು ಕುಕ್ಕಿ ಪೀಡಿಸಿ ವಿನೋದಿಸುತ್ತಿದ್ದರು. ವೈಮಾರ್ ಎಂಬಲ್ಲಿ ಎಲ್ಲರೂ ಟ್ರೈನಿನಿಂದ ಹೊರ ಹಾಕಲ್ಪಟ್ಟು, ಒದೆ ಗುದ್ದುಗಳಿಂದ ಲೋರಿಗಳಲ್ಲಿ ಒಬ್ಬರ ಮೇಲೊಬ್ಬರು ತುಂಬಿಸಲ್ಪಟ್ಟರು. ಲೋರಿಗಳಲ್ಲಿ ಪ್ರಯಾಣ ಮಾಡುವಾಗ ಕೈದಿಗಳೆಲ್ಲಾ ತಮ್ಮ ಮೊಣಕಾಲುಗಳ ನಡುವೆ ತಲೆಬಗ್ಗಿಸಿಡಬೇಕು. ಸ್ವಲ್ಪ ಎತ್ತಿದರೆಂದರೆ ಒಡನೆಯೇ ದೊಣ್ಣೆಪೆಟ್ಟು ಬೀಳುವುದು.

(ಬುಚೆನ್‌ವಾಲ್ಡ್ ಶಿಬಿರದ ಇನ್ನೊಬ್ಬ ಯೆಹೂದ್ಯನ ಅನುಭವವನ್ನು ಬರುವ ಸಂಚಿಕೆಯಲ್ಲಿ ನಿರೀಕ್ಷಿಸಿರಿ.)

1940
ನೇ ಇಸವಿಯ
ಪಾಕೆಟ್ ಡೈರಿ
ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ
ಉಡುಪಿ.

ಪತ್ರವ್ಯವಹಾರ

(ಬಾತ್ಮೀದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಬಾತ್ಮಿಗಳು ಆದಷ್ಟು ಸಂಕ್ಷೇಪವುಳ್ಳ ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟ ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) [ಸಂ. ನ]

ಕಾರ್ಕಳ

(ರಾಜಾಪುರ ಸಾರಸ್ವತ ಬ್ರಾಹ್ಮಣರ ಕಡೆಯಿಂದ)

ಸಮಾಜ ಬಾಂಧವರಾದ ಮಹನೀಯರಿಗೆ ಈ ಮೂಲಕ ವಿನಂತಿ. ನಮ್ಮ ಎಣ್ಣೆಹೊಳೆಯ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗತಕ್ಕ ಭಜನೆ ಮಂಗಳೋತ್ಸವವು ತಾ. 9-12-39ನೇ ಶನಿವಾರ ರಾತ್ರಿ ನಮ್ಮ ಶಕ್ತ್ಯಾನುಸಾರ ಭಕ್ತಿಯಿಂದ ಜರಗಿತು. ಈ ಸಮಯದಲ್ಲಿ ನಮ್ಮ ಸಮಾಜ ಬಾಂಧವರಲ್ಲದೆ ಇತರ ಸಮಾಜ ಬಾಂಧವರೂ ನೆರೆದಿದ್ದರು. ಈ ಸಮಯದಲ್ಲಿ ಉಡುಪಿ ಕಡೆಯಿಂದ ಶ್ರೀ. ಕೆ. ನಾರಾಯಣ ಕಾಮತ್ ವಗೈರೆಯೂ ದೇವಸ್ಥಾನದ ಆಡಳಿತದಾರರ ಆಮಂತ್ರಣ ಮೇರೆಗೆ ಬಂದಿದ್ದರು. ಭಜನೆ ಮಂಗಳೋತ್ಸವ ಮೆರವಣಿಗೆ ವಗೈರೆ ಕೆಲಸವು ಮಧ್ಯ ರಾತ್ರಿಯಿಂದ ಸುಮಾರು 4 ಗಂಟೆಯ ತನಕ ನಡೆಯಿತು. ಅನಂತ್ರ ನೆರೆದಿದ್ದ ಸಭಿಕರ ಮುಂಗೆ ಶಿವಪುರ ಶಾಲಾ ಮಾಸ್ತರ್ ಶ್ರೀ. ನಾಗಪ್ಪ ಕಮ್ತಿಯವು ತನ್ನದೊಂದು ಹೊಸ ಸೂಚನೆಯನ್ನು ತಿಳಿಸುವ ಬಗ್ಗೆ ಸಭೆಯನ್ನು ವಿಸರ್ಜಿಸಬೇಕಾಗಿ ಕೇಳಿಕೊಂಡರು. ರಾತ್ರಿ ಬಹಳವಾದ್ದರಿಂದ ಸಭೆಯನ್ನು ಮರುದಿನಕ್ಕೆ ಇಡಬಹುದಾಗಿ ದೇವಸ್ಥಾನದ ಮೊಕ್ತೇಸರರೂ ನೆರೆದ ಸಭಿಕರೂ ತಿಳಿಸಿದರು. ಆದರೂ ನಾಗಪ್ಪ ಕಮ್ತಿಯವರ ಬಹಳ ಒತ್ತಾಯದ್ದೆಸೆಯಿಂದ ಕೆಲವರು ಮಾತ್ರ ಹಾಜರಿದ್ದರು. ಹಲವರು ತಮ್ಮತಮ್ಮ ಮನೆಗಳಿಗೆ ತೆರಳಿದ್ದರು, ಕ್ರಮವಾದ ಸಭೆಯು ಜರಗಲಿಲ್ಲ. ಕೆಲವರು ದೇವಸ್ಥಾನದ ಪೌಳಿಗಳಲ್ಲಿ ನಿದ್ರಿಸುತ್ತಿದ್ದರು. ನಿದ್ರಿತರನ್ನು ಶ್ರೀ. ನಾಗಪ್ಪ ಕಮ್ತಿಯವರು ಎಬ್ಬಿಸುತ್ತಿದ್ದರು. ಇಂತಾ ವೇಳೆಯಲ್ಲಿ ನಾಗಪ್ಪ ಕಮ್ತಿಯವರು ನಮ್ಮ ಸಮಾಜದಲ್ಲಿ ವಿಧವಾವಿವಾಹವನ್ನು ಇನ್ನು ಮುಂದೆ ಜಾರಿಗೆ ತರಬೇಕೆಂಬುದರ ಕುರಿತು ಪ್ರಸ್ತಾಪಿಸಿ ದೇವಸ್ಥಾನದ ಮೊಕ್ತೇಸರರ ಅನುಮತಿಕೊಡಬೇಕೆಂದು ಕೇಳಿಕೊಂಡರು.

ಈ ಕುರಿತು ದೇವಸ್ಥಾನದ ಮೊಕ್ತೇಸರರು ತಮ್ಮ ಅನುಮತಿಯನ್ನು ಈಗ ಕೊಡಲು ಸಾಧ್ಯವಿಲ್ಲವೆಂದು ಹೇಳಿದರು. ಕಟ್ಟಕಡೆಗೆ ಶ್ರೀ. ಕೆ. ನಾರಾಯಣ ಕಮ್ತಿಯರನ್ನು ಈ ಕುರಿತು ನೀವೇನು ಹೇಳುವಿರಿ ಎಂದು ಒತ್ತಾಯದಿಂದ ಕೇಳಿಕೊಳ್ಳಬೇಕಾಯ್ತು. ಕೆ. ನಾರಾಯಣ ಕಮ್ತಿಯರು ಹೇಳಿದ ವಿಷಯ ಇಷ್ಟೇ. ವಿಧವಾವಿವಾಹವೆಂದರೆ ಯಾವ ಕ್ರಮ? ಅದನ್ನು ಯಾವ ರೀತಿಯಲ್ಲಿ ಆಚರಿಸಬೇಕು? ಬ್ರಹ್ಮ ಕರ್ಮ ವಿಚಾರಕ್ಕೆ ಅದು ಸರಿಯೋ? ಅಲ್ಲದೆ ಸಮಾಜದಲ್ಲಿ ಆ ಬಗ್ಗೆ ಸಂತೋಷಪಡುವವರು ಎಷ್ಟು? ಆಕ್ಷೇಪಿಸುವವರು ಎಷ್ಟು ಎಂಬಿತ್ಯಾದಿ ಸರ್ವ ವಿಚಾರಗಳನ್ನು ತಿಳಿಯದೆ ಈ ಸಂಗ್ತಿಯಲ್ಲಿ ಕೈಹಾಕುವರೆ ಸಾಧ್ಯವಿಲ್ಲ. ಒಂದು ವೇಳೆ ಸಮಾಜದ ಮೇಲ್ಮೆಯನ್ನು ನೀವು ಬಯಸಿ ಬಂದಿರುವುದು ನಿಜವಾದ್ರೆ ಆ ಬಗ್ಗೆ ಇಡೀ ಕನ್ನಡ ಜಿಲ್ಲೆಯ ಒಂದು ದೊಡ್ಡ ಮಹಾಸಭೆಯನ್ನು ಕರೆದು ಸಭೆಯ ಬಹುಮತದಂತೆ ವರ್ತಿಸಬಹುದಾಗಿ ಖಂಡಿತ ಹೇಳಿರುವರು.

ಅಲ್ಲದೆ ಆ ದಿನ ಯಾವ ಠರಾವೂ ಮಂಜೂರಾಗಲಿಲ್ಲ. ಮೊಕ್ತೇಸರರು ವಗೈರೆ ತಮ್ಮ ಅನುಮತಿಯನ್ನು ಕೊಟ್ಟದ್ದೂ ಇಲ್ಲ. ಸಭೆಯನ್ನು ಆ ಬಗ್ಗೆ ಇನ್ನು ಮುಂದೆ ವಿಸರ್ಜಿಸುವ ಉದ್ದೇಶ ಮಾರರ, ದೇವಸ್ಥಾನದ ಮೊಕ್ತೇಸರರು ವ ನಾರಾಯಣ ಕಮ್ತಿಯರು ಅಲ್ಲ. ಅಂತೂ ಸರ್ವರಿಗೂ ಆ ಕುರಿತು ಸಂತೋಷವಿರುವದಾದ್ರೆ ಅವರಿಂದ ಆ ವಿಚಾರದಲ್ಲಿ ಯಾವ ತರದ ಅಡ್ಡಿಯೂ ಬರಲಾರದೆಂಬ ವಿಚಾರವನ್ನು ನಾವು ಸದ್ರಿಯವರಿಂದ ಖಂಡಿತ ತಿಳಿದು ಈ ಮೂಲಕ ಇಡೀ ಕನ್ನಡ ಜಿಲ್ಲೆಯ ಸ್ವಬಾಂಧವರಿಗೆ ಈ ಮೂಲಕ ವಿಜ್ಞಾಪಿಸುತ್ತೇವೆ.

ಇತಿ ಸಮಾಜ ಪ್ರೇಮಾಭಿಲಾಷಿಗಳು,

ಏಳಿರಿ! ಎಚ್ಚೆತ್ತು ನೋಡಿರಿ!! ತ್ವರೆಮಾಡಿರಿ ಮತ್ತು ಶಕ್ತಿ ಪ್ರಾಪ್ತಿಮಾಡಿರಿ!!!
ರಾಷ್ಟ್ರೀಯ ಪರಶುರಾಮ, ಹನುಮಂತ ಮತ್ತು ಭೀಮರಂಥ ವೀರ ಪುರುಷರ ಅಗತ್ಯವಿದೆ.
ಶಕ್ತಿಸುಧಾಕರ ಗೋಳಿಯ
ಕಿಶೋರೀ ಕಾಂತಿ ಗುಟಿಕಾ



ಸ್ತ್ರೀಯರಿಗೆ ಉಪಯುಕ್ತವಾದ ಔಷಧ:—
ಗರ್ಭಕೋಶದ ನಾನಾತರದ ರೋಗಗಳು ಇದರ ಸೇವನೆಯಿಂದ ರಾಮಬಾಣದಂತೆ ಗುಣಹೊಂದುತ್ತವೆ. ಅಜೀರ್ಣ, ಜ್ವರ, ಪ್ರಸರ ಇತ್ಯಾದಿ ಅನೇಕ ರೋಗಗಳು ಗುಣ ಹೊಂದುತ್ತವೆ, ಮತ್ತು ಒಳ್ಳೇ ಶಕ್ತಿ ಬರುತ್ತದೆ. ಸುಳ್ಳ ಜಾಹೀರು, ಮಹತ್ವದ ಕೆಲಸ, ಶಿಫಾರಸು ಪಡಕೊಂಡ ಔಷಧವನ್ನು ನಾವಾಗಿ ಹೊಗಳುವಂಥಾದ್ದು ಅಗತ್ಯವಿಲ್ಲ. ಒಂದು ಡಬ್ಬಿಯನ್ನು ಸೇವನೆಮಾಡಿ ಪರೀಕ್ಷಿಸಿ ನೋಡಿರಿ.
ಬೆಲೆ ಡಬ್ಬಿಗೆ ರೂಪಾಯಿ ೧—೦—೦ ಮಾತ್ರ.

Vaidya Shasthry Kalaynji Taker
365 Kalbadevi Road, (opp. Temple)
Hanuman Lane Corner, BOMBAY 2

ವೈದ್ಯಶಾಸ್ತ್ರಿ ಕಲ್ಯಾಣ್ಜಿ ಟಾಕರ್,
365 ಕಲ್ಬಾದೇವಿರಸ್ತೆ (ದೇವಾಲಯದ ಎದುರು)
ಹನುಮಾನ್ ಗಲ್ಲಿಯ ನಾಕೆ,
ಮುಂಬಾಯಿ ನಂ. 2

ಈ ವಾರದ ಭವಿಷ್ಯ

ಶ್ರೀ

ತಾ. **28-12-1939** ರಿಂದ – – – ತಾ. **4-1-1940** ರ ವರೆಗೆ

ಮೇಷ—"ಜನ್ಮಾಂತರಕೃತಂ ಪಾಪಂ ವ್ಯಾಧಿರೂಪೇಣ ಜಾಯತೇ। ತಚ್ಛಾಂತಿರೌಷಧೈರ್ದಾನೈಃ ಜಪಹೋಮಸುರಾರ್ಚನೈಃ" ಎಂಬ ಶಾಸ್ತ್ರವಚನ ರೀತ್ಯಾ ನರನು ತಾನು ಪೂರ್ವ ಜನ್ಮದಲ್ಲಿ ಮಾಡಿದ ದುಷ್ಕೃತದ ಫಲವನ್ನು ಇಹದಲ್ಲಿ ವ್ಯಾಧಿ ರೂಪದಿಂದ ಅನುಭವಿಸುವನು. ಅವುಗಳು ತಮ್ಮ ಅಧಿಕಾರವನ್ನು ದಶಾಭುಕ್ತಿಗಳ ಭೇದದಿಂದ ಗೋಚರ ಗ್ರಹರ ಗತಿಯನ್ನನುಸರಿಸಿ ತೋರಿಸುವವು. ಇದ್ಯ ನಿಮಗೆ ಗೋಚರ ಗ್ರಹರ ದೃಷ್ಟಿ ಕೆಟ್ಟಿರುವುದರಿಂದ ಆಧಿವ್ಯಾಧಿಗಳು ಬಹುವಾಗಿ ಪೀಡಿಸಲಿವೆ. ತನ್ನಿವಾರಣಾರ್ಥವಾಗಿ ಔಷಧೋಪಚಾರಗಳನ್ನೂ, ಗ್ರಹಶಾಂತಿಗಾಗಿ ಜಪ ಹೋಮ ದಾನಾದಿಗಳನ್ನೂ ಮಾಡತಕ್ಕದ್ದು. ಈ ವಾರದಲ್ಲಿ ಹಲವು ಬಗೆಯಿಂದ ಕಷ್ಟ ನಷ್ಟಗಳು ನಿಮಗೆ ಪ್ರಾಪ್ತವಾಗುವುದರಿಂದ ಪ್ರತಿಕ್ರಿಯೆಯನ್ನು ಯುಕ್ತ ರೀತಿಯಲ್ಲಿ ಮಾಡಿದರೆ ವಾರಾಂತ್ಯದ ನಾಲ್ಕು ದಿನಗಳಲ್ಲಿ ಒಂದಿಷ್ಟು ಸುಖ ದೊರೆತೀತು.

ವೃಷಭ—ಅಷ್ಟಮಸ್ಥ ರವಿಯೂ, ವ್ಯಯಸ್ಥ ಶನಿ ಕೇತುಗಳೂ ಗೃಹ ಕಲಹವನ್ನೂ ಧನವ್ಯಯಕಾರಿಗಳಾದ ಅನೇಕ ದುಃಖಪರಂಪರೆಗಳನ್ನೂ ತಂದೊಡ್ಡುವುದಾದರೂ ಇತರ ಹಲವು ಗ್ರಹರ ಕೃಪೆಯು ನಿಮಗಿರುವುದರಿಂದ ಈ ಅನಿಷ್ಟ ಸಮೂಹದಿಂದ ನೀವು ಮುಕ್ತರಾಗುವಿರಿ. ಮಾತ್ರವಲ್ಲ ಹಿಡಿದ ಕಾರ್ಯದಲ್ಲಿ ಕೀರ್ತಿಯನ್ನೂ ಜನರಿಂದ ಸತ್ಕಾರವನ್ನೂ ಹೊಂದುವಿರಿ. ಆರ್ಥಿಕ ಭಾಗದಲ್ಲಿ ಬಹಳ ಸುಧಾರಣೆ ಹೊಂದುವಿರಿ. ವಿದ್ಯಾರ್ಥಿಗಳೂ, ವ್ಯಾಪಾರಿಗಳೂ, ನೌಕರಿ ಜನರೂ ನಿಶ್ಚಿಂತೆಯಿಂದ ತಮ್ಮ ದಿನವನ್ನು ಕಳೆಯುವರು. ತಾ. 28-29-3-4 ಈ ದಿನಗಳು ಸರ್ವಾನುಕೂಲಗಳಾಗಿವೆ.

ಮಿಥುನ—ಎಲ್ಲ ರೀತಿಯಲ್ಲಿ ಉನ್ನತಿ ಪಥದಲ್ಲಿ ಮುನ್ನಡೆಯುತ್ತಿದ್ದ ನಿಮ್ಮ ಕಾಲುಗಳು ಸ್ವಲ್ಪ ಕುಂಠಿತವಾದಾವು ಈ ವಾರದಲ್ಲಿ. ನೌಕರಿಗಳ ಪರಿಸ್ಥಿತಿಯು ಸ್ವಲ್ಪ ಕಷ್ಟಕ್ಕೆ ಬರುವುದು. ಅಧ್ಯಯನ ಭಾಗದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಷ್ಟ ಕಾಣುವುದು. ಆರೋಗ್ಯವು ಅಷ್ಟೊಂದು ಉತ್ತಮವಾಗಿಲ್ಲದಿದ್ದರೂ ವ್ಯಾಪಾರ ಮೂಲಕವಾಗಿಯೂ ಕಷ್ಟದಿಂದಲೂ ಧನವನ್ನು ದುಡಿಯುವಿರಿ. ಧರ್ಮಾಸಕ್ತರಾದ ನಿಮಗೆ ಸ್ತ್ರೀಯರ ಮೂಲದಿಂದ ಧನಲಾಭವಾದೀತು. ತಾ. 30-31 ಈ ಎರಡು ದಿನಗಳಲ್ಲಿ ಧನಲಾಭ ಕಾರ್ಯ ಜಯ ಗೃಹ ಸುಖ ದೊರೆವುದು.

ಕರ್ಕಾಟಕ—"ಉಪಾಯೇನ ಹಿ ಯಚ್ಛಕ್ಯಂ ನ ತಚ್ಛಕ್ಯಂ ಪರಾಕ್ರಮೈಃ" ಪರಾಕ್ರಮದಿಂದಲೂ ಅಸಾಧ್ಯವಾದ ಕಾರ್ಯವನ್ನು ಉಪಾಯದಿಂದಲೂ ಸಾಧಿಸಬಹುದು. ಅಂತೆಯೇ ನೀವು ಈ ವಾರದಲ್ಲಿ ನಿಮ್ಮ ಹಲವಾರು ಕಾರ್ಯಗಳನ್ನು ಅನಾಯಾಸವಾಗಿ ಉಪಾಯದಿಂದ ಸಾಧಿಸಿಕೊಳ್ಳುವಿರಿ. ಆರ್ಥಿಕ ವಿಚಾರದಲ್ಲಿ ಬಹಳ ಸಂಕಟಕ್ಕೊಳಗಾಗಿದ್ದ ನೀವು ಪ್ರಕೃತ ಋಣ ಪರಿಹಾರಕ್ಕೂ ಶಕ್ತರಾಗುವಿರಿ. ರಾಜಕೀಯ ವಿಚಾರದಲ್ಲೂ ನೌಕರೀ ಭಾಗದಲ್ಲೂ ಒಳ್ಳೇ ಕೀರ್ತಿ ಪಡೆವಿರಿ. ಆರೋಗ್ಯವು ಸುಧಾರಿಸಿದಂತಿಲ್ಲ. ಶತ್ರುಜನರು ವಿಶೇಷತಃ ಸ್ತ್ರೀಯರು ಅಧಿಕವಾಗಿ ಪೀಡಿಸುವರಲ್ಲದೆ ನಿಮಗೆ ಅಪಕೀರ್ತಿಯನ್ನೂ ತಂದುಕೊಡಲು ಹವಣಿಸುವರು. ತಾ. 28-29-1-2 ಅನುಕೂಲ.

ಸಿಂಹ—ಸಾರಥಿ ರಥ ಶಸ್ತ್ರ ಇವೆಲ್ಲವುಗಳಿಂದಲೂ ಹೀನನಾದ ರಥಿಕನಂತಾಗಿರುವುದು ನಿಮ್ಮ ಈ ವಾರದಲ್ಲಿನ ಪರಿಸ್ಥಿತಿ. ನಿಮ್ಮ ದುರ್ದೈವವು ಪ್ರಬಲವಾಗಿ ಹಿಡಿಯುತ್ತಿದೆ. ದಿನಹೋದಂತೆ ಒಂದೊಂದು ಭಾಗದಲ್ಲಿ ಕಷ್ಟಗಳೇ ಅಧಿಕವಾಗುತ್ತಿವೆ. ಸಂಸಾರದಲ್ಲಿ ಅನುದಿನ ಕಲಹ ಪರಸ್ಪರ ಮತಭೇದಗಳುಂಟಾಗುತ್ತಿವೆ. ಶತ್ರುಜನರಿಂದ ವಿತ್ತಮಾನಗಳಿಗೆ ಹಾನಿ, ದೇಹಾಲಸ್ಯ, ನಾಸ್ತಿಕ ಬುದ್ಧಿ ಇವೆಲ್ಲವುಗಳೂ ಹೆಚ್ಚುವವು. ಆಕಸ್ಮಿಕ ಅಪಘಾತಗಳಿಗೂ ತುತ್ತಾಗುವ ಸಂಭವವಿದೆ. ಆದರೂ ಮುಂದಿನ ಸುವ್ಯವಸ್ಥೆಯಿಂದ ಇಂದು ತಾ. 28 29-1-2ರಲ್ಲಿ ಪ್ರಾಪ್ತವಾಗತಕ್ಕ ಕಷ್ಟಗಳನ್ನು ಅನುಭವಿಸಬೇಕಾಗಿದೆ.

ಕನ್ಯಾ—ವಿಸರ್ಗತಃ ಸಂಚರಿಸುವ ಬುಧ ಗುರು ಶುಕ್ರರ ಕೃಪಾಕಟಾಕ್ಷದಿಂದ ಯುಕ್ತರಾದ ನಿಮಗೆ ದುಗ್ರ್ರಹರಿಂದ ಬರತಕ್ಕ ಯಾವೊಂದು ಶಸ್ತ್ರಾಸ್ತ್ರಗಳ ಆಘಾತವೂ ನೋಂಕಲಾರದು. ಆದರೂ ನೇತ್ರೋದರ ರೋಗವೂ ಸ್ತ್ರೀಯಿಂದುಂಟಾಗತಕ್ಕ ಪರಾಭವವೂ ಅನಿವಾರ್ಯ. ಒಳ್ಳೇ ಚತುರರಾದ ನಿಮಗೂ ಕಲಹವು ತಪ್ಪದು. ತನ್ನಿಮಿತ್ತ ಸ್ವಲ್ಪಾಂಶ ಧನ ವ್ಯಯಿಸುವಿರಿ. ಕಳೆದ ವಾರಕ್ಕಿಂತ ಈ ವಾರವು ವಿಷ್ಟೋ ಉತ್ತಮವೆನಿಸುವದು. ತಾ. 30-31-3-4 ಈ ದಿನಗಳಲ್ಲಿ ಜಾಗ್ರತೆ.

ತುಲಾ—ಪ್ರಯತ್ನೇ ಬಹು ಕರ್ತವ್ಯಃ ಫಲಂ ಭಾಗ್ಯಾನುಸಾರತಃ। ಜನ್ಮಪ್ರಭೃತಿ ಗೌರೀಶಃ ಕ್ಷೀರಂ ಪಿಬತಿ ನಿತ್ಯಶಃ॥ ಎಂಬ ಲೋಕೋಕ್ತಿಯಂತೆ ಹುಟ್ಟಿದಂದಿನಿಂದ ದಿನದ ಮಾಡುವನ್ನು ಕೊಡ ನೋಡದ ಬೆಕ್ಕು ತನ್ನ ಕಾರ್ಯಸಾಹಸದಿಂದ ನಿತ್ಯವೂ ಹಾಲನ್ನು ಕುಡಿಯುವುದಿಲ್ಲವೇ? ಅಂತೆಯೇ ನೀವೂ ನಿರಲಸರಾಗಿ ಕೆಲಸಮಾಡಿರಿ. ಯೋಗ್ಯವಾದ ಫಲವು ಅದರ ಬತೆಗೇನೇ ಇರುವುದು. ಶತ್ರುಗಳನ್ನು ಮಿತ್ರರನ್ನಾಗಿ ಪರಿವರ್ತಿಸಿ ಕಾರ್ಯ ಸಾಧಿಸಿಕೊಳ್ಳುವ ಶಕ್ತಿ ಈಗ ನಿಮಗಿದೆ. ಇಷ್ಟಿದ್ದರೂ ಆಕಸ್ಮಿಕ ಪ್ರವಾಸ, ಅಧಿಕಾರಿಗಳ ಪ್ರಕೋಪ ಇತ್ಯಾದಿಗಳಿಂದ ಮನಸ್ಸಿಗೆ ಸುಖವಿರದು, ನೆಮ್ಮದಿಯಿರದು. ತಾ. 1-2 ವಿಶೇಷ ಧನಹಾನಿ, ಅನಾರೋಗ್ಯಕಾರಿಯೂ ಆಗಿದೆ.

ವೃಶ್ಚಿಕ—ಬಹ್ವಂಶ ನಿಮ್ಮ ಭವಿಷ್ಯವು ಉತ್ತಮವಾಗಿಯೇ ಇದೆ. ನೌಕರಿ, ವ್ಯಾಪಾರ, ಸೇವಕ ಇತ್ಯಾದಿ ವೃತ್ತಿಗಳಲ್ಲಿರತಕ್ಕವರು ತೃಪ್ತರಾಗಿರುವರು. ವಿದ್ಯಾರ್ಥಿಗಳೂ ವಿದ್ಯೋಪಜೀವಿಗಳೂ ಸುಖದಿಂದ ಕಾಲಯಾಪನೆಮಾಡುವರು. ಕೋರ್ಟು ಕಾರ್ಯಗಳ ಮಟ್ಟಿಗೆ ಹಿತಕೆ ವ್ಯಕ್ತಿಯುವಾಗಿರುವವು. ಏಕಸ್ಮಾಲಕವಾಗಿಯೂ ಘೋಸಂಬಂಧವಾಗಿಯೂ ಸ್ವಲ್ಪ ಹಣ ವ್ಯಯವಾಗುವುದು. ಸಂಸಾರ ಸುಖವು ಉತ್ತಮವಾಗಿದ್ದರೂ ಮಕ್ಕಳ ವಿಷಯಕ ಚಿಂತೆಯುಂಟಾಗುವುದು. ತಾ. 30ರಿಂದ 2ರ ವರೆಗೆ ಅತ್ಯನುಕೂಲ.

ಧನ—ರಾವಣನು ಸೀತೆಯನ್ನು ಹರಿಸಿದ ಫಲವಾಗಿ ಸಮುದ್ರಕ್ಕೆ ಸೇತುಬಂಧನವಾಯಿತಷ್ಟೆ. ಅಂತೂ ಒಬ್ಬನ ತಪ್ಪಿನ ಫಲವಾಗಿ ನಿರಪರಾಧಿಯೂ ಸಂಸರ್ಗದೋಷದಿಂದ ಶಿಕ್ಷೆಯನ್ನನುಭವಿಸಬೇಕಾಗುತ್ತದೆ. ಇಂತಹ ಪರಿಸ್ಥಿತಿಯು ನಿಮಗೂ ಕೂಡ ತಪ್ಪಿದ್ದಲ್ಲ. ಸಾಲದುದಕ್ಕೆ ಬಂಧುಗಳ ಪೀಡೆ, ಸಹೋದರರ ಕಾಟ ಇವುಗಳು ದಿನೇ ದಿನೇ ಹೆಚ್ಚುವವು. ನಿಶ್ಚಿತ ಭಾಷೆಗಳಾಗಿ ನೀವು ಹಲವರಲ್ಲಿ ಕಲಹ ಗೈವಿರಿ. ಜನರೆಲ್ಲರೂ ನಿಮ್ಮ ವಿಚಾರದಲ್ಲಿ ಛೀ ಧೀ ಎನ್ನುವಂತಹ ಪ್ರಸಂಗವೂ ಒದಗೀತು. ವಾರಾಂತ್ಯದ ನಾಲ್ಕು ದಿನಗಳಲ್ಲಿ ದೈವಬಲವಿರುವುದರಿಂದ ಹೆಚ್ಚಿನ ಕಷ್ಟ ಸಂಭವಿಸದು.

ಮಕರ—ಬೇಸಾಯಗಾರನು ಬೀಗ ನಾಯು ಎಂಬ ನಾಣ್ಣುಡಿಯಂತೆ ನಿಮಗೆ ವ್ಯವಸಾಯದಲ್ಲಿ ಹೆಚ್ಚಿನ ಅನುಕೂಲ್ಯವಿದೆ. ಯಾವ ಭಾಗದಲ್ಲೂ ನಿಮಗೆ ಕೊರತೆಯಾಗದು. ಪರರಿಗೆ ಕೊಟ್ಟು ನಷ್ಟವಾಯಿತೆಂದೆಣಿಸಿದ ಧನಾದಿ ವಸ್ತುಗಳೂ ಪುನಃ ಸಿಗುವವು. ಪುತ್ರರ ಮೂಲಕವಾಗಿ ಲಾಭವಾಗುವುದು. ಸ್ವಭೋಗಕ್ಕೆ ಏನೂ ಕಡಿಮೆಯಾಗದು. ನೀವು ಮನಬಂದಂತೆ ವರ್ತಿಸುವವರಾದ ಕಾರಣ ಮಿತ್ರ ಶತ್ರುಗಳಿಂದ ಅನೇಕ ಕಾರ್ಯಗಳಲ್ಲಿ ಅಪಜಯವೂ ಸಂಭವಿಸುವುದರಿಂದಲೂ ಅನಾರೋಗ್ಯದಿಂದಲೂ ದುಡಿದುದೆಲ್ಲವೂ ಖರ್ಚಾಗಿ ಹೋದೀತು. ತಾ. 28, 29, 3, 4 ಅನುಕೂಲ.

ಕುಂಭ—"ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ದೇವ" ಎಂಬ ದಾಸರ ಉಕ್ತಿಯಂತೆ ನಿಮ್ಮ ಕರ್ಮಫಲವು ಅತ್ಯುತ್ಕಟವಾಗಿರುವಾಗ ಇತರರಾರ ಬೆಂಬಲವೂ ನಿಮಗೆ ಬೇಕಿಲ್ಲವೆ. ಯಾವ ಕಾರ್ಯಕ್ಕೆ ನೀವು ಕೈಹಚ್ಚಿದರೂ ತಾನಾಗಿಯೇ ಅದು ಮುಂದರಿವುದು. ನಿಮ್ಮ ಸಹಕಾರವೂ ಉಪ್ಪುಮೂ ನಿಮಿತ್ತಮಾತ್ರಕ್ಕೆ ಇದ್ದರೆ ಸಾಕು. ಅಂತೂ ನೀವು ಸರ್ವತಂತ್ರ ಸ್ವತಂತ್ರರಾಗಿರುವಿರೆಂದರೆ ತಪ್ಪಾಗದು. ಆರೋಗ್ಯದಲ್ಲಿ ಎಚ್ಚರಿಕೆಯಿಂದಿರಿ. ತಾ. 28ರಿಂದ 31ರ ವರೆಗೆ ಅತ್ಯನುಕೂಲ.

ಮೀನ—ನಿಮ್ಮ ಜೀವನದಲ್ಲಿ ಕೊಳಲು ತ್ರಿದ್ದ ನಿಮ್ಮ ಆರಿಹಿಂತುವು ಬಲವಾಗಲಾರಂಭಿಸಿದೆ. ಸ ದಿನಗಳು ಸಮೀಪಿಸುತ್ತಿವೆ ಮರಳಿ ಯತ್ನವ ಮಾಡು ಎಂಬ ಹಿರಿಯರ ನುಡಿಯಂತೆ ಪುನಃಪುನಃ ಪ್ರಯತ್ನಿಸಿರಿ ಯಾವ ಕಾರ್ಯವೂ ಕಷ್ಟವಾಗಲಾರದು. ಮನೋರಥಗಳು ಕಾರ್ಯರೂಪಕ್ಕೆ ಬಂದಿವೆ. ಆಕಸ್ಮಿಕ ಪ್ರವಾಸ, ಅಪಘಾತ ವ್ಯರ್ಥ ನಿಷ್ಠುರ ಧನವಿಷಯವಾದ ಚಿಂತೆ ಇವುಗಳು ಪಕ್ಕನೆ ನಿಮ್ಮನ್ನು ಬಿಡಲೊಲ್ಲವು. ತಾ. 28, 29, 3, 4 ಈ ದಿನಗಳಲ್ಲಿ ಜಾಗರೂಕರಾಗಿ ವರ್ತಿಸಿರಿ.

Every Policyholder is a Member

IN

The Canara Mutual

ASSURANCE COMPANY, LTD.

(Head Office:- UDIPI, S India.)

Everyday the Membership increases.

The Company issues all the well-known plans of Assurance.

Female lives accepted.

JOIN ITS EVER INCREASING MEMBERSHIP.

❖ ನಾಝಿಗಳ ಅಮಾನುಷ ಅತ್ಯಾಚಾರ ❖

ಕೂಗಿದರೆ ಮತ್ತಷ್ಟು ಕೊರಡೆಪೆಟ್ಟು

ಅಪರಾಹ್ನದ ಹಾಜರಿಯಾದ ವೇಳೆ ಕೊರಡೆ ಪೆಟ್ಟಿನ ಶಿಕ್ಷೆಯಾಗುವುದು ಈ ಶಿಕ್ಷೆವಿಧಿಸಲ್ಪಟ್ಟವನು ಸಾಲು ಬಿಟ್ಟು ಮುಂದೆಬಂದು ನಿಲ್ಲಬೇಕು. ಅವನನ್ನು ಹಲಿಗೆಯೊಂದಕ್ಕೆ ಬಿಗಿದು ಎರಡು ಕಡೆಗಳಲ್ಲಿ ಇಬ್ಬರು ಪಹರೆಗಾರರು ನಿಂತು ಕುದುರೆ ಚಬುಕುಗಳಿಂದ ಚಡಿಹೊಡೆಯುವರು ಸರ್ವಸಾಧಾರಣವಾಗಿ ೨೫ ಏಟು ಕೊಡಲಾಗುವುದು ಕೈದಿಯು ಕೂಗಿದರೆ ಅದನ್ನು ಇಮ್ಮಡಿಸಲಾಗುವುದು ಈ ಪಹರೆಗಾರರು ಏಟುಕೊಡುವಾಗ ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸುವರು. ದಮ್ಮು ಕಟ್ಟಿ ಮೇಲಕ್ಕೆಹಾರಿ ಚಟಕ್ಕನೆ ಹೊಡೆಯುವರು ಕೊರಡೆ ಚಡಿಯ ದಂಡನೆ ಇಲ್ಲದ ದಿನವೇ ಇಲ್ಲ ದಿನವೊಂದರ 2 ರಿಂದ 10ಮಂದಿಯವರೆಗೆ ಈ ಶಿಕ್ಷೆ ಕೊಡಲ್ಪಡುತ್ತದೆ. ಈ ಕೊರಡೆ ಪೆಟ್ಟಿನ ನಂತರ ಕೈದಿಯು ಗೋಡೆಗೆ ಮುಖಮಾಡಿ ಬಹಳ ಹೊತ್ತಿನವರೆಗೆ ನೆಟ್ಟಗೆ ನಿಂತು ಹಾಜರಿ ಕೊಡಬೇಕು ಅಮೇಲೆ ಆರೋಗ್ಯಾಧಿಕಾರಿಯೊಬ್ಬನು ಬಂದು ಗಾಯಗಳಿಗೇನಾದರೂ ಅಂಜನ ಹಾಗಿಸುವನು

ಇತರ ಪೈಶಾಚಿಕ ಶಿಕ್ಷಾಕ್ರಮಗಳು

ರಟ್ಟೆಗಳನ್ನು ಹಿಂಬದಿಗಳೆದು ಕಟ್ಟಿ ಸುಮಾರು 3 ಗಜ ಎತ್ತರಕ್ಕೆ ತೂಗಹಾಕುವುದು ಇನ್ನೊಂದು ರೀತಿಯ ಶಿಕ್ಷೆ, ಈ ಶಿಕ್ಷೆಗೊಳಗಾದವನು 10ರಿಂದ 12 ಘಂಟೆಯವರೆಗೆ ಸರ್ವಜನರೆದುರಲ್ಲೇ ನೇತಾಡಿಕೊಂಡಿರಬೇಕು. ಇನ್ನೊಂದು ರೀತಿಯ ಶಿಕ್ಷೆಯೆಂದರೆ, ಕೋಳ ಹಾಕಿದ ಕೈರಟ್ಟೆಗಳನ್ನು ಮರದ ಕಾಂಡದ ಸುತ್ತ ಬಿಗಿದುಕಟ್ಟುವುದು ಕಾಲುಗಳು ನೆಲಕ್ಕೆ ಮುಟ್ಟಕೂಡದು. ಇದು ಲಘುಶಿಕ್ಷೆ, ಇದನ್ನು ಪಹರೆಗಾರರೇ ಸರ್ವಸಾಮಾನ್ಯ ಕೊಡಬಹುದು.

ಗೋಡೆಯ ಕಡೆ ಮುಖಮಾಡಿ ನೆಟ್ಟಗೆ ನಿಲ್ಲುವ ಶಿಕ್ಷೆಗೊಳಗಾದವನೊಬ್ಬನು ೩ ಘಂಟೆ ನಿಂತು ಸೋತು ತನ್ನನ್ಯಾರೂ ನೋಡುವುದಿಲ್ಲೆಂದು ಸ್ವಲ್ಪ ಬಗ್ಗಿದನು. ಪಹರೆಗಾರನೊಬ್ಬನು ಇದನ್ನು ಕಂಡನು. ಅವನು ಕೂಡಲೆ ಈ ಕೈದಿಯ ತಲೆ ಹಿಡಿದು ಕೊರಕಲು ಕಲ್ಲಿನ ಗೋಡೆಗೆ ಹಲವು ಸಲ ಸರಿ ಜಪ್ಪಿದನು. ತಲೆಯಿಂದ ರಕ್ತ ಹರಿದು ಗೋಡೆಯಿಂದ ಕೆಳಗಿಳಿಯಿತು. ಇದೂ ಆ ಕೈದಿಯ ತಪ್ಪೆಂಬಂತೆ ಪಹರೆಗಾರನು ಮತ್ತಷ್ಟು ಕೋಪಗೊಂಡು, "ಎಂತಹ ಹಂದಿ ನೀನು, ಗೋಡೆಯನ್ನೆಲ್ಲಾ ಕಲೆಮಾಡಿ ಕೆಡಿಸಿದೆ!" ಎಂದು ಗಜರಿ ಕೈದಿಗಳನ್ನು ನೆಲಕ್ಕಪ್ಪಳಿಸಿ ಒಂದಿಷ್ಟು ಕರುಣೆಯಿಲ್ಲದೆ ಚೆನ್ನಾಗಿ ಹೊಡೆದನು. ಕೈದಿಯು ಬದುಕುವ ಆಶೆಯೇ ಇರಲಿಲ್ಲ. ಕಡೆಗೆ ಹೇಗಾದರೂ ಪ್ರಾಣಾಪಾಯದಿಂದ ಪಾರಾದನು

ನಡುಪ್ರಾಯದವನೊಬ್ಬನಿಗೆ ತನ್ನ ಪತ್ನಿಯಿಂದೊಂದು ಪತ್ರ ಬಂತು ಅವನು ಶಿಕ್ಷಿತ ಮೃದು ಮನಸ್ಸಿನವ ತನ್ನ ಸಂತಾಪವನ್ನು ತಾಳಿಕೊಳ್ಳಲಾರದೆ ದುಃಖೋದ್ಗಾರವೆತ್ತಿ ಬಿಟ್ಟ. ಈ ತಪ್ಪಿಗಾಗಿ ಅವನು ಒಂದು ಮರಕ್ಕೆ ಬಿಗಿಯಲ್ಪಟ್ಟು 14 ಘಂಟೆಗಳವರೆಗೆ ಅಲ್ಲಿಯೇ ಇದ್ದ ಅವನಿಗೆ ಬೋಧ ತಪ್ಪಿಹೋಯಿತು. ಇಬ್ಬರು ಪಹರೆಗಾರರು ಆತನನ್ನು ಹಾದು ಹೋಗುವರು "ಓಹೋ ಇವನು ಸಂಪೂರ್ಣವಾಗಿ ಸತ್ತೇ ಬಿಟ್ಟಿದ್ದಾನೆ!" ಎಂದು ಕಟ್ಟುಗಳನ್ನು ಬಿಚ್ಚಿ ಅವನ ದೇಹವನ್ನು ನೆಲದ ಮೇಲೆ ಹಾಕಿ ಇಬ್ಬರೂ ಅದರ ಮೇಲೆ ಹಾರಿ ತಮ್ಮ ದಪ್ಪ ಬೂಟ್ಸುಗಳಿಂದ ತುಳಿಯುವರು ಅವನು ಸ್ವಲ್ಪ ಚಲಿಸುವನು "ಓಹೋ ಇವನು ಸಂಪೂರ್ಣ ಸತ್ತಿಲ್ಲ!" ಎಂದು ಪುನಃ ತುಳಿಯುವರು. ಮರುದಿನ ಆತನನ್ನು ನೋಡುವಾಗ ಅವನ ಮುಖ ಮತ್ತು ಎದೆಯೆಲ್ಲಾ ಗಟ್ಟಿ ಕಟ್ಟಿದ ರಕ್ತದಿಂದ ತುಂಬಿ ಹೋಗಿತ್ತು. ಅವನ ಕಣ್ಣುಗಳು ಉಬ್ಬಿ ಕೆಂಡದಂತಾಗಿದ್ದವು ಅವನ ಬುದ್ಧಿ ಭ್ರಂಶವಾಗಿತ್ತು. ಹಾಜರಿ ಕರೆಯುವಾಗ ಎರಡು ಬದಿಯಿಂದ ಇಬ್ಬರು ಅವನನ್ನು ಎತ್ತಿ ಹಿಡಿಯಬೇಕಿತ್ತು ಆದರೂ ಅವನ ತಲೆಯು ಎದುರು ಜೋತು ಬಿದ್ದಿತು. ಅವನು ಆಗಾಗ ಸಟೆದು ಬೀಳುತ್ತಿದ್ದನು. ರಾತ್ರಿ ಫಕ್ಕನೆ ಎದ್ದು ಗಟ್ಟಿಯಾಗಿ ಕೂಗಿ ಒಟ್ಟೊಟ್ಟಾಗಿ ಬಿದ್ದಿರುವ ಜನರನ್ನೆಲ್ಲಾ ಒದೆದು ಓಡಿಹೋಗಲೆತ್ನಿಸಿದನು ಅನಂತರ, ರಾತ್ರಿ ಅವನ ಬದಿಗಳಲ್ಲಿ ಮಲಗುವ ಇಬ್ಬರು ಅವನು ಶಾಂತವಾಗಿ ಮಲಗುವಂತೆ ಜವಾಬ್ದಾರರೆಂಬ ಅನುಜ್ಞೆ ಕೊಡಲ್ಪಟ್ಟಿತು ಅವನು ಇನ್ನೊಮ್ಮೆ ಹಾಗೆ ಕೂಗಿದರೆ ಅವನ ಬಳಿ ಮಲಗಿದವಗೆ ೨೫ ಚಡಿ ಕೊಡಲಾಗುವುದೆಂದಾಯಿತು.

ಬುಚೆನ್ ವಾಲ್ಡ್ ಶಿಬಿರವೆಂದರೆ ಪ್ರತ್ಯಕ್ಷ ನರಕ.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬುಚೆನ್‌ವಾಲ್ಡ್ ಶಿಬಿರದಲ್ಲಿ ಕೆಲಸ ಮಾಡುವ ಪಹರೆ ಪೋಲೀಸರು ಬಹಳ ಎಳೆಪ್ರಾಯದವರು 17ರಿಂದ 20 ವರ್ಷಗಳವರು. ಇವರು ಈ ಕೆಲಸಕ್ಕಾಗಿಯೇ ಪ್ರತ್ಯೇಕ ತರಬೇತಿ ಪಡೆಯುತ್ತಾರೆ ಈ ಎಳೆಕರುಣರು ಇಷ್ಟೊಂದು ಹೃದಯರಹಿತರಾಗಿ ಪಾಶವಿಕವಾಗಿ ವರ್ತಿಸುವುದೆಂದರೆ ಆಶ್ಚರ್ಯಕರವೇ ಸರಿ ಕ್ರೂರಪೀಡೆಯನ್ನೀಯುವುದರಲ್ಲಿ ಅವರು ಉತ್ಸಾಹಗೊಳ್ಳುವಂತೆ ತೋರುತ್ತದೆ ಉದಾಹರಣೆಗಾಗಿ ಅವರು ಹುಲ್ಲು ಕಡ್ಡಿಯನ್ನು ಕೈದಿಯ ಮುಖದ ಮೇಲೆ ಅಲ್ಲಾಡಿಸಿ ಅವನು ಮುಖ ಮುದುಡಿಸಿದಾಗ ಮುಖಕ್ಕೆ ಭಯಂಕರವಾಗಿ ಗುದ್ದುವರು. ಮುದಿಕ ಯೆಹೂದಿ ವಕೀಲನೊಬ್ಬನನ್ನು ಒಂದು ಗೋಡೆಯ ಮೇಲೆ ಪ್ರತಿಮೆಯಂತೆ ನಿರ್ವಾಣವಾಗಿ ಎಳೆಂಟು ಘಂಟೆ ನಿಲ್ಲಿಸಿ ವಿನೋದಿಸುತ್ತಿದ್ದರು ಹತ್ತಿರದಿಂದ ಹೋಗುವವರೆಲ್ಲ ಈ ತಮಾಷೆ ಕಂಡು ನಗತ್ತಿದ್ದರು. ಒಮ್ಮೆ ಪಹರೆಯವನೊಬ್ಬನು ಬಿಸಿಲ ಬೇಗೆಯಾಗುವುದೋ ಎಂದು ಈ ಯೆಹೂದ್ಯನೊಡನೆ ಕೇಳಿದನು. ಅವನು ಹೌದೆಂದಾಗ ಅವನ ತಲೆಯಮೇಲೆ 10 ಬಾಲ್ದಿನೀರು ಹೊಯ್ಯಲಾಯಿತು, ಅನುನಿತ್ಯ ಇಂತಹ ಯಮಯಾತನೆಗೊಳಗಾಗಿ ಬುಚೆನ್‌ವಾಲ್ಡ್ ನರಕದಲ್ಲಿ ನರಳಿಕೊಂಡಿರುವುದಕ್ಕಿಂತ ಒಡನೆಯೇ ಕೊಲೆಯಾಗಿ ಬಿಡುವುದು ಎಷ್ಟೋ ಮೇಲೆಂದು ಅನೇಕ ಮಂದಿ ಕೈದಿಗಳು ಅದನ್ನೇ ಆಶಿಸುತ್ತಾರೆ ಪ್ರತಿದಿನ ಶಿಬಿರದಲ್ಲಿ ಹಲವು ಮರಣಗಳಾಗುತ್ತವೆ. ಯಾವ ಸಂಗತಿಯನ್ನಾದರೂ ಬಯಲುಗೊಳಿಸದೆ ಕೂಡಲೇ ಜರ್ಮನಿಬಿಟ್ಟು ಹೋಗುವ ಶರ್ತದಿಂದ ಯೆಹೂದ್ಯರು ಬಿಡುಗಡೆ ಮಾಡಲ್ಪಡುತ್ತಾರೆ. ಅವರಿಗೆ ತಮ್ಮ ಸಾಮಾನುಗಳನ್ನು ಮಾರುವಷ್ಟರ ಸಮಯವನ್ನು ಕೂಡಾ ಕೊಡಲಾಗುವುದಿಲ್ಲ ಕೇವಲ ಟಿಕೇಟು ಮತ್ತು ಖರ್ಚಿಗೆ ಮಾತ್ರ ಬೇಕಷ್ಟು ಹಣವನ್ನು ಪಡೆದು ಅವರು ತಲಾಂತರಗಳಿಂದ ಜೀವಿಸಿಕೊಂಡು ಬಂದಿದ್ದ ಊರು ಮತ್ತು ಮನೆಮಾರು ಬಿಟ್ಟು ಹೋಗಬೇಕು

ಜರ್ಮನಿಯಲ್ಲಿ ಯೆಹೂದ್ಯರು ಕೇವಲ ಕ್ರಿಮಿಕೀಟಗಳಂತೆ ಕಾಣಲ್ಪಡುತ್ತಾರೆ ಅವರ ಮನೆಮಾರು, ಅಂಗಡಿ, ಆಫೀಸು ದೇವಾಲಯಗಳನ್ನೆಲ್ಲಾ ಜನರು ಇಚ್ಛಾನುಸಾರ ಲೂಟಿಮಾಡಿಸಿ ಸುಟ್ಟುಹಾಕಿರುತ್ತಾರೆ. ಪೋಲೀಸರ ಪ್ರೋತ್ಸಾಹದಿಂದೆಂಬಂತೆ ಈ ಅತ್ಯಾಚಾರಗಳು ನಡಿಸಲ್ಪಡುತ್ತವೆ ಜರ್ಮನ್ ತರುಣ ತರುಣಿಯರು ಅವುಗಳಲ್ಲಿ ವಿಕಟ ಸಂತೋಷ ಪಡುತ್ತಾರೆ. ಈ ಯೆಹೂದ್ಯರಲ್ಲಿ ಹಲವರು ಕಳೆದ ಮಹಾಯುದ್ಧದಲ್ಲಿ ಜರ್ಮನಿಗಾಗಿ ಹೋರಾಡಿದವರು ಕಳೆದಮಹಾಯುದ್ಧದಲ್ಲಿ ಹೋರಾಡಿದ್ದ ಸುಶಿಕ್ಷಿತ ಯೆಹೂದ್ಯರೊಬ್ಬರು ಒಳ್ಳೇ ವ್ಯಾಪಾರ ಮಾಡಿಕೊಂಡಿದ್ದರು.ಒಂದು ದಿನ ಅವರು ಮನೆಬಿಟ್ಟು ಹೋಗಬಾರದೆಂದು ಜರ್ಮನ್ ಗುಪ್ತ ಪೋಲೀಸರು ಟೆಲಿಫೋನು ಮೂಲಕ ಅನುಜ್ಞೆಯಿತ್ತರು ಮಧ್ಯರಾತ್ರಿಯ ನಂತರ 3 ಘಂಟೆಗೆ ಬಂದು ಅವರನ್ನು ಕರೆದೊಯ್ದರು. ಬೆಚ್ಚಗಿನ ಕೆಲವು ವಸ್ತ್ರಗಳನ್ನೂ ಹಿಡಿಕೊಳ್ಳಬಿಡಲಿಲ್ಲ ಸ್ವಲ್ಪ ಹಣ ಮಾತ್ರ ಹಿಡಕೊಳ್ಳಬಹುದೆಂದರು. ಅವರನ್ನು ಹತ್ತಿರದ ಪೋಲೀಸ್ ಸ್ಟೇಶನಿಗೊಯ್ದು, ಒಂದು ಲೋರಿ ತುಂಬ ಕೈದಿಗಳು ತರಲ್ಪಡುವನಕ ಅಲ್ಲಿಯೇ ಇರಿಸಲ್ಪಟ್ಟರು ಅನಂತರ ಇತರ ಕೈದಿಗಳೊಂದಿಗೆ ದೊಡ್ಡ ಹೋಲೊಂದಕ್ಕೊಯ್ಯಲ್ಪಟ್ಟರು. ಈ ಕಟ್ಟಡದ ಹೊರಗೆ ದೊಡ್ಡ ಜನಸ್ತೋಮವೊಂದು ನೆರೆದು, ಪ್ರತಿ ಲೋರಿಯಲ್ಲಿ ಯೆಹೂದ್ಯ ಕೈದಿಗಳು ತರಲ್ಪಟ್ಟಂತೆ ಅವರ ಮೇಲೆ ಬೈಗಳ ಮಳೆಗರೆಯುತ್ತಿತ್ತು ಇವರಲ್ಲಿ ಹೆಚ್ಚಿನವರು ತರುಣರು ಮತ್ತು ಸ್ತ್ರೀಯರು. ಬ್ರಿಟಿಷ್ ರಾಯಭಾರಿಗೆ ಈ ಸಂಗತಿಗಳನ್ನೆಲ್ಲಾ ತಿಳಿಸಿದ ಯೆಹೂದ್ಯರನ್ನು ಎಕ್ಸ್ ಎಂದು ಕರೆಯೋಣ. ಎಕ್ಸರ ಹತ್ತಿರವಿದ್ದ ಹಣವನ್ನೆಲ್ಲಾ ಕಸಕೊಂಡು ಅವರನ್ನು ಉಳಿದವರ ಸಾಲಿನಲ್ಲಿ ನಿಲ್ಲಿಸಲಾಯಿತು ಕೆಲವರು ಮುಂಚಿನ ರಾತ್ರಿ ಈ ಹೋಲಿಗೆ ತರಲ್ಪಟ್ಟು ಆಹಾರ, ಕುಡಿಯುವ ನೀರು ಮತ್ತು ನಿದ್ದೆಯಿಲ್ಲದೆ ಸಾಯುತ್ತಿದ್ದರು ಜರ್ಮನ್ ಪಹರೆ ಪೋ

(ಮುಂದಿನ ಪುಟ ನೋಡಿರಿ.)



ಸ್ಥಾಪನೆ] **ಕೆನರಾ ಛಾಪಖಾನೆ** [1920

(ಬಂಟರ ಯಾನೆ ನಾಡವರ ಸಂಘದ ಕೆಲವು ಮೆಂಬರರಿಂದ ಸ್ಥಾಪಿಸಲ್ಪಟ್ಟದ್ದು.)

ಹಂಪನಕಟ್ಟೆ, ಮಂಗಳೂರು.

ಇಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿಯಲ್ಲಿ
ಮುದ್ದಾದ ಮುದ್ರಣ ಕೆಲಸವನ್ನೂ ಎಲ್ಲಾ ತರದ ಸಾಜೂಕಾದ
ಬುಕ್ ಬೈಂಡಿಂಗ್ ಕೆಲಸವನ್ನೂ ಕೈಕೊಳ್ಳಲಾಗುತ್ತದೆ.

ಈಗ ದರವನ್ನು ಶೀರಾ ಕಡಿಮೆಮಾಡಲಾಗಿದೆ. ಒಮ್ಮೆ ಬಂದು ವಿಚಾರಿಸಿರಿ.

Kanara Printing Works,
Hampankatte, **MANGALORE.**

ಮೂಲವ್ಯಾಧಿ

ಸಾಧುವೊಬ್ಬನ ಸಿದ್ಧಿಯಾಗಿರುವ ವಿಚಿತ್ರ ಹಾಗೂ ಅಪೂರ್ವ ಔಷಧಿ.

ಅರ್ಶಮಾರಾ (ರಿಜಿಸ್ಟರ್ಡ್)

ರಕ್ತ ಸುರಿಯುವ ಅಥವಾ ಬಂದಾಗಿರುವ ಹಳೆಯ ಅಥವಾ ಹೊಸ ತಾದ ಒಳಗಿನ ಅಥವಾ ಹೊರಗಿನ ಯಾವತ್ತು ತರದ ಮೂಲ ವ್ಯಾಧಿಯು 'ಅರ್ಶಮಾರಾ'ವನ್ನು ಒಂದೊಬ್ಬ ಹಚ್ಚಿದ ಕೂಡಲೆ ಅದ್ಭುತ ವಾಗಿ ಗುಣಹೊಂದುತ್ತದೆ. ನೋವು ತುರಿಸಲು, ಉರಿಯುವಿಕೆ, ಶೀತ, ರಕ್ತಸ್ರಾವವಾಗುವುದನ್ನೆಲ್ಲಾ ಕೂಡಲೆ ನಿಲ್ಲಿಸಿಬಿಡುತ್ತದೆ. ಕೇವಲ 3 ದಿನ ಹಚ್ಚಿದರೆ ಯಾವ ತರದ ಒಪರೇಶನೂ ಇಲ್ಲದೆ ಮೂಲವ್ಯಾಧಿ ಅಥವಾ ಮೊಳೆಗಳನ್ನು ಗುಣಪಡಿ ಸುತ್ತದೆ. ಈ ಔಷಧಿಯಿಂದ ಸಾವಿರಾರು ರೋಗಿಗಳು ಗುಣಹೊಂದಿ ಇದರಿಗೆ ಅದನ್ನು ಶಿಫಾ ರಸು ಮಾಡುತ್ತಿದ್ದಾರೆ. ಗುಣವಾಗದಿದ್ದಲ್ಲಿ ಹಣ ವಾಪಸು. ಬೆಲೆ ರೂ. 2-0-0.

ಆರೋಗ್ಯಸದನ, ದುರ್ಗಾದೇವಿ ಸ್ಟ್ರೀಟ್, ಮುಂಬಾಯಿ 4

THE MOOLKY BANK, LTD.,
MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,
ಮೂಲ್ಕಿ.

ಗ್ರಾಮಸ್ಥರ ನಡುವೆ ಸ್ಥಾಪಿಸಲ್ಪಟ್ಟು ಅವರ ಹಿತಕ್ಕಾಗಿ ಯತ್ನಿಸುವ ಸಂಸ್ಥೆ. ಭಂಗಾರ ವ ಸರಕಿನ ಈಡಿನ ಮೇಲೆ ಸೇಕಡ7 ವ 8ರ ದರದಲ್ಲಿ ಸಾಲಕೊಡಲಾಗುವುದು.

ನಿರಖು ಠೇವಣಾತಿ ಸೇಕಡ 5½ಯ ವರೆಗಿನ ಬಡ್ಡಿಯಲ್ಲಿಯೂ, ಸೇವಿಂಗ್ಸ್ ಬ್ಯಾಂಕ್ ಸೇಕಡ 3½ ದರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವುದು.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟಗಳಿಗೆ ನಿಗಾ ಕೊಡುವುದಲ್ಲದೆ ಸಾಲಗಾರರ ಹಿತವು ಸದಾ ನಮ್ಮ ಚಿಂತನೆಯಾಗಿರುವುದು.

M. R. Punja, ಯಂ. ಆರ್. ಪೂಂಜ,
President & Manager, ಪ್ರೆಸಿಡೆಂಟ್ ಮತ್ತು ಮೆನೇಜರ್.

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧ.



ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ, ಹೆಚ್ಚುವುದು. ಇದು ಮಧುರವಾಗಿದೆ. ಆಶೆಬಿಟ್ಟಿರುವ ನಿಮ್ಮ ಮಕ್ಕಳು ತಿರುಗಿನಿಮ್ಮ ಕೈಗೆಸೇರುವುದು ಸೀಸೆ1ಕ್ಕೆ12ಆಣೆ, ಟ ಖ.೯ಆಣೆ.

ಎಸ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗಾ,
ಉಡುಪಿ ಸ್ಟಾಕಿಸ್ಟರು:- ನವಭಾರತ ಬುಕ್‌ಡಿಪೋ, ಉಡುಪಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು **ಚಿರಸ್ಮರಣೀಯಗಳಾಗಿವೆ. ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಸಂಕುಚಿತವಾಗಿ ಮಾಡುವದು. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆ ಬಗ್ಗೆಯೂ, ಪ್ರಸವವೇದನಾ ಬಗ್ಗೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇಮ್ಮಡಿಯಾಗಿ ತಿರುಗಿ ಹೊಂದುವಳು. **ಸುಖಸೇವನ:**ಸುಖಸೇವನದಿಂದಮಧುರಮನೋಹರವಾದಈರಸಾಯನವುಬಾಣಂತಿಯರಅರುಚಿ,ಅಗ್ನಿಮಾಂದ್ಯ,ನಿದ್ರಾನಾಶವೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುತ್ತದೆ. ಕ್ರಯ ಬಾಟ್ಲಿ 1ಕ್ಕೆ ರೂ.1-0-0.

ಎಸ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ ಮಂಗಳೂರು, ದ. ಕ.
ಮೈಸೂರು ಸ್ಟೇಟಿನ ಏಜಂಟರು:- ಶ್ರೀ. ಪಿ. ಸುಬ್ರಾಬಲ ಬೆಳ್ಳಾರ್, ತೀರ್ಥಹಳ್ಳಿ.

DAIMONDS! DAIMONDS!

K R. K. SHET

Opposite Govt. College, Hampankatte, MANGALORE
SHOW-ROOM & WORK SHOP.

SUPERFINE UP TO DATE CUTTING! **ವಜ್ರಗಳು** BEST BRILLIANCY !!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಸ್ಟ್ಸ್ ನಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸೆಂಟಿಗೆ ಕಡಿಮೆಯಾಗುವಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ನಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಗವರ್ನಮೆಂಟ್ ಕೊಲೇಜಿನ ಎದುರು,
ಹಂಪನಕಟ್ಟೆ, ಮಂಗಳೂರು.

ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅವಶ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ, ಸ್ಟೆನ್ಸಿಲ್ ಪ್ಲೇಟ್ಸ್ ಬಿಲ್ಲೆ, ಮೋನೋಗ್ರಾಮ್ ಸೀಲು ಇತ್ಯಾದಿಗಳು ತ್ವರಿತವಾಗಿ ಮಾಡಿಕೊಡಲ್ಪಡುವವು.

Crown Rubber Stamp Co., 18 Balmat Road, MANGALORE.
Approved firm by the Govt. of Mysore. Certified by the Agent of the Govt. of India in Ceylon

---

SALE! SALE! SALE!

ಮೊದಲಿನ ಕ್ರಯ ರೂ. 10,
ಈಗಿನ ಕ್ರಯ ರೂ. 3-12-0.

Swiss Lever Wrist Watch
ಭಂಗಾರದ ಲೀವರ್ ರಿಸ್ಟ್‌ವಾಚ್

ಈ ನವೀನ ಗಡಿಯಾರಗಳು ವಿಲಾಯತಿಯಲ್ಲಿ ಬಹು ಬಲಿಷ್ಠ ಸಾಮಾನುಗಳಿಂದ ತಯಾರಿಸಲ್ಪಟ್ಟು ನೋಡುವದಕ್ಕೂ ಸ್ತ್ರೀಪುರುಷರು ಕೈಯಲ್ಲಿ ಕಟ್ಟಿಕೊಳ್ಳುವದಕ್ಕೂ ಬಹು ಅಂದವಾಗಿವೆ. ಭಂಗಾರದ ಗಡಿಯಾರಗಳನ್ನು ನಾವು ಬಹಳ ತರಿಸುವದರಿಂದ ಜಲ್ದಿ ಕ್ರಯಕ್ಕೆ ಕೊಡುತ್ತೇವೆ. ಇಂಡಿಯಾದಲ್ಲಿ ಎಷ್ಟೋ ಗಡಿಯಾರಗಳು ಮಾರ್ಗಿ ಅನೇಕ ಯೋಗ್ಯತಾಪತ್ರಗಳು ಬಂದಿರುವವು. ಇವು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವವು. ರೈಲ್ವೆ ಉದ್ಯೋಗಸ್ಥರೂ, ದೊಡ್ಡ ಆಫೀಸರುಗಳೂ, ಜಮೀನ್ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಒಂದನ್ನು ತರಿಸಿ ನೋಡಿದರೆ ಪ್ರತಿಯೊಬ್ಬರೂ ತರಿಸಲಿಕ್ಕೆ ಪ್ರಯತ್ನಪಡುವರು.

ಗ್ಯಾರಂಟಿ 3 ವರ್ಷ, ಕ್ರಯ 1ಕ್ಕೆ 3-12-0

ROYAL CO, 19 Bat SOWCARPET G. T. MADRAS,
ರಾಯಲ್ ಕಂಪೆನಿ, ೧೯ ಬೀಟ್ ಸಾಹುಕಾರ ಪೇಟೆ, ಜಿ. ಟಿ. ಮದರಾಸು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಷ್ಟರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಗಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧ ತಯಾರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.



ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಕಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ
– – – ಸುಖಶಾಂತಿಗಳ ಮೂಲಕಾರಣವಾದ – – –

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್



ಎಂಬ "ಸಂಜೀವನ" ತೈಲವನ್ನು ಪ್ರತಿ ಒಂದು ಮನೆಯಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿರೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪರ್ವರ್ತಿಸಿ ಅವುಗಳ ಮೂಲಾನ್ನೇ ಕಿತ್ತುಬಿಡುವಂತೆ, ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ ದೇಶದ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ಥಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ, ಸೀಮೂತ್ರ ಅನ್ನಕೋಶ ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವದು. ವಾರ್ಧ್ವವಾಯು ವಾತರೋಗ, ಪಕ್ಷವಾತ, ಗೂರಲುಕ್ಷಯ, ಮೇಹವ್ಯಾಧಿ, ಅಜೀರ್ಣಕ್ಕೆ, ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಅಶ್ಮರಿ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರುನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೇ ನಿರ್ನಾಮವಾಗುದಕ್ಕೆ ನೂರಾರು ಶಿಫಾರಸು ಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನು "ದೇವಾನುಮೋದಿತ ಔಷಧಿ" ಎಂದು ಕರೆಯುವುದರಲ್ಲಿ ಸಂದೇಹವೇನಿದೆ. ಶಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ–ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿ ಗುಣವಾಗುವದು. ಹಲ್ಲುನೋವು, ಮಕ್ಕಳ ಹೊಟ್ಟೆನೋವು, ಕಿವಿಗಳ ಉಪದ್ರವ, ಹೆಂಗುಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇವರ ಬಾಹ್ಯಸೇವನೆಯೇ ಸಾಕಾಗಿದೆ. ರಕ್ತ ಶುದ್ಧಿಗೆ ನಮ್ಮ ವಾನಿಂಗ್‌ಟಿಲ್ಲಿ ಹಾರ್ಲೆಮ್ ಆಯಿಲ್"ನಂತಹ ಉತ್ತಮ ಔಷಧಿಯು ಬೇರೊಂದಿಲ್ಲ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ.

ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್‌ನ ಕೆಪ್ಸಲುಗಳ

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ಬೇಗನೇ ತರಿಸಿಕೊಳ್ಳಿರಿ.

ವಿಳಂಬ ಮಾಡಿದರೆ ದೊರೆಯುವುದು ಕಷ್ಟ.



ವಾನಿಂಗ್ ಟಿಲ್ಲಿ ಹಾರ್ಲೆಮ್ ಆಯಿಲ್

ಯುದ್ಧದ ದೆಸೆಯಿಂದ ಹೊಸ ಔಷಧಿಗಳನ್ನು ತರಿಸಿಕೊಳ್ಳುವ ಸಂದರ್ಭವಿಲ್ಲ!

ಕೆಲವು ಸೀಸೆಗಳು ಮಾತ್ರ ಉಳಿದಿವೆ.

ತ್ವರ್ಯ ತರಿಸಿಕೊಳ್ಳಿರಿ.

'ಹವನನ್' ಹೆಮೊರ್ರೊಯ್ಡ್ – ಒಯಿಂಟ್‌ಮೆಂಟ್

ಸರ್ವ ವಿಧವಾದ ಮೂಲವ್ಯಾಧಿ ರೋಗಗಳಿಗೆ ಇದಕ್ಕಿಂತ ಖಾತ್ರಿ ಒಯಿಂಟ್‌ಮೆಂಟ್ ಮತ್ತೊಂದಿಲ್ಲ ಮಲ ಶೋಧನೆ ಮಾಡುವಾಗ ಬರೇ ನೆತ್ತರು ಹರಿದರೆ, ಬೆನ್ನಿನ ಕೆಳಗಡೆ ನೋವಿದ್ದರೆ ಆಗಿಂದಾಗ್ಗೆ ಮಲಬದ್ಧತೆಯಾದರೆ, ಕಡುಕೆಂಪು ರಕ್ತ ಹರಿಯುವದಾದರೆ ಮಲಾಶಯದಲ್ಲಿ ಗುಳ್ಳೆಗಳಿದ್ದು ಬಹು ನೋವಿದ್ದರೆ, ಕರುಳುಗಳಲ್ಲಿ ಹುಣ್ಣುಗಳಾಗಿ ಕೀವು ಬರುವುದಾದರೆ, "ಹೆವನನ್" ಎಂಬ ಹೆಮೊರ್ರೊಯ್ಡ್ ಒಯಿಂಟ್ ಮೆಂಟಿನ ಟ್ಯೂಬನ್ನು ಗುದಸ್ಥಾನದಲ್ಲಿಟ್ಟು ಒತ್ತುವದರಿಂದ ತೈಲವು ಒಳಗೆ ಕೀಳ್ಕರುಳುಗಳಲ್ಲಿ ಸೇರಿಕೊಂಡು ಮೂಲವ್ಯಾಧಿ ರೋಗದ ಮೂಲವನ್ನೇ ಕಿತ್ತುಹಾಕುವದು. ಸೀಸೆ 1ಕ್ಕೆ ರೂ. 1-4-0 ವಿ.ಪಿ. ಬೇರೆ.

ಲಕ್ಸೇಟಿವ್ ವಾನಿಂಗ್ ಗುಳಿಗೆಗಳು

ಮಲಬದ್ಧತೆಯ ಪ್ರವಣತ್ವವುಳ್ಳವರು ಲಕ್ಸೇಟಿವ್ ವಾನಿಂಗ್ ಗುಳಿಗೆಗಳಲ್ಲಿ ದಿನಂಪ್ರತಿ ರಾತ್ರಿ ಮಲಗುವಾಗ 3-4ರಂತೆ ಸೇವಿಸಿದರೆ ಸುವಿರೇಚನೆಯಾಗುವದು. ಈ ಗುಳಿಗೆಗಳು ಕರುಳುಗಳಿಗೆ ಸಲೀಸಾಗಿ ಸಾಗಿಸ ನಮ್ಮನ್ನು ಸದಾ ಸುಖಜೀವಿಗಳನ್ನಾಗಿಸುವದು ಮಲಬದ್ಧತೆಯ ಲಕ್ಷಣಗಳುಳ್ಳವರು ಗುಳಿಗೆಗಳನ್ನು ಸದಾ ಸೇವಿಸುತ್ತಿರುವದು ಅಗತ್ಯವಾಗಿದೆ. ಇವುಗಳು ವನಸ್ಪತಿಯಿಂದಲೇ ತಯಾರಿಸಿದ ಗುಳಿಗೆಗಳಾಗಿವೆ. ಒಂದು ಪೆಟ್ಟಿಗೆಯಲ್ಲಿ 40 ಮಾತ್ರಗಳಿವೆ. ಸೀಸೆ 1ಕ್ಕೆ ರೂ. 1-0-0 ವಿ. ಪಿ. ಬೇರೆ

ಹಿಂದೂಸ್ಥಾನದ ಪ್ರಮುಖ ಏಜಂಟರು:

The Eclipse Distributing Agency,

Dahanu Road, B. B. & C. I. Ry. BOMBAY PRESIDENCY.

ದಯವಿಟ್ಟು ಪತ್ರಾಸ ಇಂಗ್ಲಿಷಿನಲ್ಲಿಯೇ ಬರೆಯಿರಿ.